ರಾಮಾವತಾರ

ವಾಲ್ಮೀಕಿ ರಾಮಾಯಣ ಕಥಾನುವಾದ

(ಭಾಗ – ೧)

★

ಸಿದ್ದವನಹಳ್ಳಿ ಕೃಷ್ಣಶರ್ಮ

ಗಾಂಧೀ ಸಾಹಿತ್ಯ ಸಂಘ
ಮಲ್ಲೇಶ್ವರ — ಬೆಂಗಳೂರು

ರಾಮಾವತಾರ

ವಾಲ್ಮೀಕಿ ರಾಮಾಯಣ ಕಥಾನುವಾದ

(ಭಾಗ – ೨)

★

ಸಿದ್ದವನಹಳ್ಳಿ ಕೃಷ್ಣಶರ್ಮ

ಗಾಂಧೀ ಸಾಹಿತ್ಯ ಸಂಘ

ಮಲ್ಲೇಶ್ವರ — ಬೆಂಗಳೂರು

RAMAVATARA - II

[PAGES: 552 + 8]

VALMIKI RETOLD IN KANNADA PROSE BY

Sri Siddavanahalli Krishna Sarma

Publisher : **Gandhi Sahitya Sangha**
Malleswara, Bangalore - 3

March, 1966

Price* : *Rs. 12-00

ಮೊದಲನೆಯ ಮುದ್ರಣ : ಮಾರ್ಚ್, ೧೯೬೬

ಬೆಲೆ : ರೂ. ೧೨

ಮುದ್ರಕರು :
ಶ್ರೀ ಎಂ. ಎಚ್. ಬೆಳಗಾಂವಕರ
ಸಂಯುಕ್ತ ಕರ್ನಾಟಕ ಪ್ರೆಸ್
ಬೆಂಗಳೂರು – ೨೫

ಪ್ರಕಾಶಕರು :
ಶ್ರೀ ಎಸ್. ಕೃಷ್ಣ
ಗಾಂಧಿ ಸಾಹಿತ್ಯ
ಬೆಂಗ [illegible] ೩

ಶ್ರೀ ಪೇಜಾವರ ಮಠ, ಉಡುಪಿ (ದ.ಕ.)

ಮಧ್ವಾಚಾರ್ಯ ಸಂಸ್ಥಾನ

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

ಅಧ್ಯಕ್ಷ:
...ಲ ಭಾರತ ಮಾಧ್ವ
ಮಹಾಮಂಡಲ
ಉಡುಪಿ

ಕುಲಪತಿ:
ಪೂರ್ಣಪ್ರಜ್ಞ ವಿದ್ಯಾಪೀಠ
ಪೂರ್ಣಪ್ರಜ್ಞನಗರ
ಬೆಂಗಳೂರು - ೪

ಅಧ್ಯಕ್ಷರು:
ಶ್ರೀಕೃಷ್ಣ ಸೇವಾಶ್ರಮ
ಬೆಂಗಳೂರು

ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರು ರಾಮಾಯಣವನ್ನು ಕನ್ನಡದಲ್ಲಿ ಮೂಡಿಸಲು ಆರಂಭಿಸಿರುವುದನ್ನು ತಿಳಿದು ನಮಗೆ ಬಹಳ ಆನಂದವಾಗಿದೆ. ರಾಮಾಯಣವು ನನಗೆ ಅತ್ಯಂತ ಪ್ರಿಯವಾದ ಕಾವ್ಯ. ರಾಮಾಯಣದಿಂದಲೇ ನಮಗೆ ಭಾರತೀಯ ಸಂಸ್ಕೃತಿಯ ನಿಜವಾದ ದರ್ಶನವಾಗಬಲ್ಲುದು. ಭಾರತೀಯ ಸುಸಂಸ್ಕೃತ ವ್ಯಕ್ತಿತ್ವದ ಪರಿಪೂರ್ಣ ಮಾದರಿಯನ್ನು ನಾವು ರಾಮಾಯಣದಲ್ಲಿ ಕಾಣಬಹುದು. ರಾಮಾಯಣವನ್ನು ಓದುತ್ತಿದ್ದಂತೆಯೇ ಒಮ್ಮೊಮ್ಮೆ ಮನಬಿಚ್ಚಿ ಅಳಬೇಕೆಂದನಿಸುತ್ತದೆ. ರಾಮಾಯಣ ಕಾವ್ಯವು ನಮ್ಮ ಹೃದಯದ ಕಶ್ಮಲಗಳನ್ನೆಲ್ಲಾ ತೊಳೆದು ನಮ್ಮ ಜೀವನವನ್ನು ಪುನೀತಗೊಳಿಸುವ ಅಮೃತ ತರಂಗಿಣಿಯೆನಿಸಿದೆ.

ಸಿದ್ದವನಹಳ್ಳಿಯವರಂತಹ ಸಿದ್ಧಹಸ್ತರು ಇದನ್ನು ಕನ್ನಡಿಸುವುದು ಕನ್ನಡಿಗರ ಭಾಗ್ಯೋದಯ ಎನ್ನಬಹುದು. ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ವಿಷಯಗಳನ್ನು ಸರಳವಾಗಿ ಆಕರ್ಷಕವಾಗಿಡುವುದರಲ್ಲಿ ಕೃಷ್ಣಶರ್ಮರು ಅಪ್ರತಿಮರು. ಈ ಸುಂದರ ಸಾಹಿತ್ಯವು ಕನ್ನಡಿಗರಿಗೆ ನಮ್ಮ ಸಂಸ್ಕೃತಿಯ ನಿಲುಗನ್ನಡಿಯಾಗಿ ಮನೆಮನೆಗಳಲ್ಲಿ ನಲಿಯಲಿ ಎಂದು ಆಶಿಸುವೆವು.

ಬಿನ್ನಹ

'ರಾಮಾವತಾರ'ದ ಎರಡನೆ ಸಂಪುಟವನ್ನು ಕನ್ನಡ ಜನತೆಯ ಮುಂದೆ ಇಡಲು ಸಂತೋಷ ಆಗುತ್ತದೆ. ಆದಷ್ಟು ಬೇಗ ಮೂರನೆ ಭಾಗವನ್ನೂ ಪ್ರಕಟಿಸಲು ಪ್ರಯತ್ನ ನಡೆದಿದೆ.

ಈ ಪ್ರಕಟನೆಗೆ ನೆರವಾದ ಇನ್ನೂ ಕೆಲವರು ಮಹನೀಯರ ಹೆಸರನ್ನು ಇದರಲ್ಲಿ ಕೊಟ್ಟಿದೆ. ಮೂರನೆಯದರಲ್ಲೂ ಈ ಪಟ್ಟಿ ಮುಂದುವರಿಯುತ್ತದೆ. ಹಲವು ಬಗೆಯಲ್ಲಿ ಅನೇಕರು ನೆರವಾಗಿದಾರೆ. ಎಲ್ಲರಿಗೂ ನನ್ನ ಕೃತಜ್ಞತೆಗಳು.

'ರಾಮಾವತಾರ'ದ ಪ್ರಥಮ ಭಾಗವನ್ನು ಸಿದ್ಧಗಂಗೆಯ ಶ್ರೀ ಶ್ರೀ ಶಿವಕುಮಾರಸ್ವಾಮಿಗಳು ಬೆಂಗಳೂರಿಗೆ ದಯೆಮಾಡಿಸಿ ಸಂಘದಲ್ಲಿ ಪ್ರಕಾಶನ ಮಾಡಿದರು. ಸಮಾರಂಭ ಬಹಳ ಹೃದ್ಯ ಆಗಿತ್ತು. ಶ್ರೀ ಸ್ವಾಮಿಗಳವರಿಗೆ ನಾನು ತುಂಬ ಕೃತಜ್ಞ.

ಸಿದ್ದವನಹಳ್ಳಿ ಕೃಷ್ಣಶರ್ಮ

ಗ್ರಂಥಪ್ರಕಾಶನಕ್ಕೆ ಸಹಾಯ ಮಾಡಿದ ಮಹನೀಯರು

ಶ್ರೀಮತಿ ಲಲಿತಾಂಬಾ ಮುನಿರಾಜ್, ಮದನಪಲ್ಲಿ.

ಶ್ರೀಮತಿ ಸಿಂಗಮ್ಮಾಳ್, ಎಂ.ಎ., ಮಲ್ಲೇಶ್ವರ.

ಶ್ರೀಮತಿ ಸುಧಾ ವೆಂಕಟಶಿವರೆಡ್ಡಿ, ಬೆಂಗಳೂರು.

ಸರ್ವಶ್ರೀ

ಧರ್ಮಪ್ರಕಾಶ ವೆಂಕಾಜಿರಾಯರು, ಬೆಂಗಳೂರು.

ರಾಮಕೃಷ್ಣ ಹೆಗ್ಗಡೆ, ಬೆಂಗಳೂರು.

ವೈಕುಂಠ ಬಾಳಿಗಾ, ಬೆಂಗಳೂರು.

ಯಾದಾಳಂ ಗಂಗಾಧರ್, ಬೆಂಗಳೂರು.

ಎ. ಆರ್. ಬದರೀನಾರಾಯಣ್, ಎಂ.ಎಲ್.ಎ., ಶಿವಮೊಗ್ಗ.

ಎಸ್. ವಿ. ರಾಘವಾಚಾರ್, ಅಡ್ವೊಕೇಟ್, ಬೆಂಗಳೂರು.

ಎಂ. ಕೃಷ್ಣಮೂರ್ತಿ, ಗಾಂಧೀನಗರ, ಬೆಂಗಳೂರು.

ಎಸ್. ಜಿ. ರಾಮಚಂದ್ರ, ಮಲ್ಲೇಶ್ವರ.

ಸಿ. ಶಂಕರ್ ಬ್ರದರ್ಸ್, ತ್ಯಾಮಗೊಂಡ್ಲು.

ಷರೀಫ್, ಜೆನಿತ್ ಸ್ಟೋರ್ಸ್, ಬೆಂಗಳೂರು.

ಬಿ. ಎಸ್. ಕೃಷ್ಣಮೂರ್ತಿ, ಬೆಂಗಳೂರು.

ಹೆಚ್. ಕಮಲಾನಾಥ್, ಮಲ್ಲೇಶ್ವರ.

ಜಿ. ರಾಮೇಗೌಡ, ಎಂ.ಎಲ್.ಎ., ಮಲ್ಲೇಶ್ವರ.

ವೆಂಕಟರಾಮ ಶೆಟ್ಟಿ, ಎಸ್.ಎಲ್.ವಿ. ಬುಕ್ ಡಿಪೋ, ಬೆಂಗಳೂರು.

ಎಸ್. ಸಿ. ವೆಂಕಟೇಶ್, ಮಲ್ಲೇಶ್ವರ.

ಎಂ. ಚಂದ್ರಶೇಖರ್, ಬೆಂಗಳೂರು.

ಜಿ. ಎ. ನರಸಿಂಹಮೂರ್ತಿ, ಬೆಂಗಳೂರು.

ವಿಠಲರಾವ್ ಲಿಂಗಸುಗೂರು, ಹೈದರಾಬಾದ್.

ಜಿ. ಶ್ರೀನಿವಾಸನ್, ಓರಿಯಂಟ್ ಪವರ್ ಪ್ರೆಸ್, ಬೆಂಗಳೂರು.

ಟಿ. ಆರ್. ಶಾಮಣ್ಣ, ಬೆಂಗಳೂರು.

ಡಿ. ವೆಂಕಟಪ್ಪ, ಬೆಂಗಳೂರು.

ಡಾ. ಬಿ. ಆರ್. ಶಾಮರಾವ್, ಶಿವಮೊಗ್ಗ.

ಜಿ. ಲಕ್ಷ್ಮೀಪತಯ್ಯ, ಮಲ್ಲೇಶ್ವರ.

ಗಣಪಯ್ಯ, ಮಲ್ಲೇಶ್ವರಂ ಟಿಫಿನ್ ರೂಮ್ಸ್, ಮಲ್ಲೇಶ್ವರ.

ಅಮರನಾಥ್, ಎಂ.ಎಸ್‌ಸಿ., ಬೆಂಗಳೂರು.

ಎನ್. ಎಸ್. ವೆಂಕೋಬರಾವ್, ಬೆಂಗಳೂರು.

ವಿ. ರಾಮಯ್ಯ, ಸತ್ಯನಾರಾಯಣ ಪ್ರೆಸ್, ಬೆಂಗಳೂರು.

ಗಣೇಶ ಜೋಶಿ, ಕೊಪ್ಪಳ.

ಡಿ. ಎ. ವಿ. ರತ್ನಂ, ಬೆಂಗಳೂರು.

ಜಿ. ಎ. ಆಚಾರ್ಯ, ಮಲ್ಲೇಶ್ವರ.

ಎಂ. ಆರ್ಯಮೂರ್ತಿ, ಬೆಂಗಳೂರು.

ಲಕ್ಷ್ಮೀಪತಿ, ಮಾರುತಿ ಕನ್‌ಸ್ಟ್ರಕ್ಷನ್ ಕಂ., ಬೆಂಗಳೂರು.

ಉಮೇಶ ರುದ್ರ, ಮಲ್ಲೇಶ್ವರ.

ಆರ್. ಎಸ್. ಆರಾಧ್ಯ, ತುಂಕೂರು.

ಜಿ. ವಿ. ಕೆ. ರಾವ್, ಗುಲ್ಬರ್ಗ.

ಕೆ. ವೆಂಕಟನರಸಿಂಹಾಚಾರ್ಯ, ಮಲ್ಲೇಶ್ವರ.

ಒಬ್ಬ ಹಿತೈಷಿಗಳು, ಗುಲ್ಬರ್ಗ.

ಟಿ. ಆರ್. ಶ್ರೀನಿವಾಸಯ್ಯಂಗಾರ್ಯರು, ಮಲ್ಲೇಶ್ವರ.

ಜಿ. ಹನುಮಯ್ಯ, ಬಿ.ಎಸ್‌ಸಿ., ಬಿ.ಇ., ಬೆಂಗಳೂರು.

ಜನತಾ ಪಬ್ಲಿಕೇಷನ್ಸ್, ಮಲ್ಲೇಶ್ವರ.

ವಿಜಯಲಕ್ಷ್ಮೀ ಟಾಕೀಸ್, ಬೆಂಗಳೂರು.

ಕೃಷ್ಣ ಭವನ ಬಂಧುಗಳು, ಬೆಂಗಳೂರು.

ಗಾಂಧೀ ಸ್ಮಾರಕ ನಿಧಿ, ಬೆಂಗಳೂರು.

ಕರ್ನಾಟಕ ಗ್ರಾಮಸೇವಾ ಸಂಘ, ರಾಯಚೂರು.

ರಾಮಾವತಾರ

ದ್ವಿತೀಯ ಸಂಪುಟ

ಪಂಚವಟಿ
ಸೀತಾಪಹರಣ
ಸುಗ್ರೀವಸಖ್ಯ
ಸೀತಾನ್ವೇಷಣ
ಸೀತಾಸಂದರ್ಶನ

ಮೊದಲನೆ ಖಂಡ

ಪ ಂ ಚ ವ ಟಿ

ರಾಮಾವತಾರ

(ಭಾಗ – ೨)

೧

ರಾಮು ದಂಡಕಾರಣ್ಯಕ್ಕೆ ಬಂದ. ಅದು ಬರೀ ಗೊಂಡಾರಣ್ಯ. ಆದರೆ ಯಾವುದಕ್ಕೂ ಅಂಜದವನು ರಾಮು. ಅವನನ್ನು ಇದಿರಿಸಬಲ್ಲವರು ಯಾರೂ ಇಲ್ಲ. ದಂಡಕಾರಣ್ಯಕ್ಕೆ ಬಂದ ಒಡನೆ ಅಲ್ಲಿ ಇದ್ದ ಋಷ್ಯಾಶ್ರಮಗಳ ಗುಂಪು ಕಣ್ಣಿಗೆ ಬಿತ್ತು.

ಮುಗಿಲಿನ ನಡುವೆ ಹೊಳೆಹೊಳೆವ ಸೂರ್ಯಮಂಡಲದಂತೆ ಪ್ರಕಾಶಿಸುತ್ತ ಇತ್ತು ಆ ಆಶ್ರಮಸಮೂಹ. ಅಲ್ಲಿ ಪ್ರಾಣಿಗಳಲ್ಲಿ ಪರಸ್ಪರ ವೈರ ಇರಲಿಲ್ಲ. ಎಲ್ಲ ಭೂತಗಳಿಗೂ ಆಶ್ರಯಸ್ಥಾನ ಅದು. ನಾನಾಬಗೆಯ ಪಕ್ಷಿ ಇವೆ, ಅನೇಕ ಮೃಗಜಾತಿ ಇವೆ ಅಲ್ಲಿ. ಆಶ್ರಮಗಳ ಮುಂದೆ ಅಂಗಳ ಸಾರಿಸಿ ರಂಗೋಲೆ ಇಟ್ಟಿದಾರೆ. ಅಂಗಳದಲ್ಲಿ ದರ್ಭೆಯ ಕಟ್ಟು ಕಾಣುತ್ತ ಇದೆ. ನಾರುಮಡಿಗಳನ್ನು ಬಿಸಿಲಿನಲ್ಲಿ ಒಣಗಹಾಕಿದಾರೆ. ಅಪ್ಸರೆಯರು ಬಂದು ನಾಟ್ಯಮಾಡಿ ನಲಿಯುವ ಸ್ಥಳ ಅದು.

ಆಶ್ರಮದ ಅಗ್ನಿಶಾಲೆಗಳು ವಿಸ್ತಾರ ಆಗಿ ಇವೆ. ಯಾಗೋಪಕರಣ ಪಾತ್ರೆಗಳು, ಕೃಷ್ಣಾಜಿನಗಳು, ದರ್ಭೆಸಮಿತ್ತು, ಜಲಕುಂಭಗಳು, ಫಲಮೂಲ ಗಳು ಸಮೃದ್ಧಿ. ಸುತ್ತಲೂ ರುಚಿ ರುಚಿ ಹಣ್ಣು ಬಿಡುವ ದೊಡ್ಡ ಮರಗಳ ದಟ್ಟ ಗುಂಪು. ಪಕ್ಕದಲ್ಲೆ ತಾವರೆ ಹೂ ತುಂಬಿದ ಕೊಳಗಳು. ಪೂಜೆಗೆ ಎಂದು ಅಲ್ಲಲ್ಲಿ ಹೂಗಳನ್ನು ತಂದು ಇಟ್ಟಿದ್ದರು.

ಸೂರ್ಯನ ಹಾಗೆ ಅಗ್ನಿಯ ಹಾಗೆ ತೇಜೋವಂತರು ಆದ ಮುದಿ ತಪಸ್ವಿ ಗಳು ಅಲ್ಲಿ ಇದಾರೆ. ಜಿತೇಂದ್ರಿಯರು ಅವರು. ಕೃಷ್ಣಾಜಿನ ನಾರುಮಡಿಗಳೇ ಅವರ ವಸ್ತ್ರ. ಕಂದಮೂಲಫಲಗಳೇ ಅವರ ಆಹಾರ. ಈ ಋಷಿಗಳಿಗೆ ಪೂಜನೀಯರು ಆದ ನಿಯತಾಹಾರಿಗಳು ಕೆಲವರು ಋಷಿಶ್ರೇಷ್ಠರೂ ಅಲ್ಲಿ ಇದ್ದರು.

ಆಶ್ರಮಸಮೂಹ ಬ್ರಹ್ಮಲೋಕಕ್ಕೆ ಸಮಾನ ಆಗಿ ಕಂಗೊಳಿಸುತ್ತ ಇದೆ. ಎಲ್ಲೆಲ್ಲೂ ಹೋಮದ ಹೊಗೆ. ಪರಿಶುದ್ಧ ಬ್ರಹ್ಮವೇತ್ತ ದ್ವಿಜೋತ್ತಮರ ವೇದ ಮಂತ್ರಘೋಷಗಳ ಪ್ರತಿಧ್ವನಿ.

ಇಂಥ ಪ್ರದೇಶಕ್ಕೆ ಕ್ಷತ್ರಿಯ ವೇಷ ಸಲ್ಲದು ಎಂದು ತನ್ನ ಬಿಲ್ಲಿನ ನಾರಿಯನ್ನು ಬಿಚ್ಚಿದ ರಾಮ. ವಿನಯದಿಂದ ಆಶ್ರಮವನ್ನು ಹೊಕ್ಕ. ರಾಮ ಬರುತ್ತ ಇದ್ದರೆ ಚಂದ್ರ ಹುಟ್ಟಿ ಬರುವಂತೆ ಇತ್ತು. ರಾಮನ ಹಿಂದೆ ಸೀತಾ ಲಕ್ಷ್ಮಣರು. ಇವರು ಬರುವ ವಿಷಯ ಆಶ್ರಮದ ಋಷಿಗಳಿಗೆ ಅವರ ದಿವ್ಯ ಜ್ಞಾನದಿಂದ ತಿಳಿಯಿತು. ಆ ಪರಮಧಾರ್ಮಿಕರು, ವ್ರತನಿಷ್ಠರು ಆದ ಆ ಮಹರ್ಷಿಗಳು ಅವರನ್ನು ಇದಿರುಗೊಳ್ಳಲು ಬಂದರು. ನೋಡಿದ ಕೂಡಲೆ ಮಂಗಳಾಶೀರ್ವಾದ ಮಾಡಿದರು.

ಹತ್ತಿರ ಬಂದು ಶ್ರೀರಾಮನನ್ನು ಕಣ್ಣುತುಂಬಾ ನೋಡಿದರು. ರಾಮನ ಆ ದಿವ್ಯಸುಂದರ ವಿಗ್ರಹ, ಅವನ ರೂಪ, ಅವನ ಸೌಂದರ್ಯ ಲಾವಣ್ಯ, ಅವನ ದೇಹಕಾಂತಿ, ಅವನ ಸೌಕುಮಾರ್ಯ ಎಲ್ಲವನ್ನೂ ನೋಡಿ ಬೆರಗು ಆದರು. ತೆರೆದ ಕಣ್ಣು ಮುಚ್ಚದಂತೆ ಸೀತಾರಾಮಲಕ್ಷ್ಮಣರ ಅಪೂರ್ವ ರೂಪಾತಿಶಯ ವನ್ನು ಮನದಣಿಯೆ ನೋಡುತ್ತ ನಿಂತರು ಸ್ವಲ್ಪ ಹೊತ್ತು. ಆಮೇಲೆ ಸರ್ವ ಜೀವಹಿತೇರತ ಆದ ರಾಮನನ್ನು ಅತಿಥಿ ಆಗಿ ತಮ್ಮ ಪರ್ಣಶಾಲೆಗೆ ಕರೆದು ಒಯ್ದರು. ಅಗ್ನಿಸಮಾನ ತೇಜಸ್ವಿಗಳು ಧರ್ಮಾತ್ಮರು ಆದ ಆ ಋಷಿಗಳು ರಾಮಲಕ್ಷ್ಮಣರಿಗೆ ಸ್ವಾಗತ ಬಯಸಿ ಅರ್ಘ್ಯಪಾದ್ಯಗಳನ್ನು ತಂದು ಇಟ್ಟರು. ಕಾಡಿನ ಕಂದಮೂಲಫಲಗಳನ್ನು ಮುಂದೆ ಇಟ್ಟರು. ಕುಶಲಪ್ರಶ್ನೆಗಳನ್ನು ಮಾಡಿದರು.

"ಮಹಾತ್ಮ, ಈ ಆಶ್ರಮ ನಿನ್ನದೇ. ಇಲ್ಲಿ ನಿನ್ನ ಇಷ್ಟಬಂದಂತೆ ನೀನು ಇರಬಹುದು. ನೀನು ಧರ್ಮಪಾಲ. ನಮಗೆ ಎಲ್ಲರಿಗೂ ನೀನೇ ದಿಕ್ಕು. ಲೋಕವಂದ್ಯ ನೀನು. ನೀನು ಅರಸ. ದುಷ್ಟನಿಗ್ರಹ ಶಿಷ್ಟರಕ್ಷಣೆ ನಿನ್ನ ಧರ್ಮ. ನೀನು ದಂಡಧರ. ಆದರಿಂದ ನಮಗೆ ಎಲ್ಲರಿಗೂ ತಂದೆ.

"ರಾಘವ, ರಾಜ ಆಗುವವನಿಗೆ ದೇವೇಂದ್ರನಲ್ಲಿ ಚತುರ್ಥಾಂಶ ಇರುತ್ತದೆ. ಆದರಿಂದ ಪ್ರಜೆಗಳನ್ನು ಪರಿಪಾಲಿಸುತ್ತಾನೆ. ಸಕಲ ಭೋಗ ಭಾಗ್ಯಗಳನ್ನು ಅನುಭವಿಸುತ್ತಾನೆ. ಪ್ರಜೆಗಳ ಪೂಜೆ ಸಲ್ಲುತ್ತದೆ ಅವನಿಗೆ.

ರಾಮ, ನಾವು ನಿನ್ನ ದೇಶದ ಜನ. ಕಾಡಿನಲ್ಲಿ ಇದ್ದರೂ ಪಟ್ಟಣದಲ್ಲಿ ಇದ್ದರೂ ನೀನೇ ನಮ್ಮ ದೊರೆ. ನೀನೇ ನಮ್ಮನ್ನು ರಕ್ಷಿಸಬೇಕು.

"ನಾವು ಜಿತೇಂದ್ರಿಯರು. ಕೋಪವನ್ನು ಗೆದ್ದವರು. ತಪಸ್ಸೇ ನಮ್ಮ ಐಶ್ವರ್ಯ. ಕೈಲಾಗದ ಮಕ್ಕಳ ಹಾಗೆ ನಾವು. ನೀನು ನಮ್ಮನ್ನು ಯಾನಾಗಲೂ ಕಾಯಬೇಕು."

ಹೀಗೆ ಹೇಳಿ ಋಷಿಗಳು ಸೀತಾರಾಮಲಕ್ಷ್ಮಣರಿಗೆ ಹಣ್ಣುಹಂಪಲನ್ನೂ ಗಡ್ಡೆಗೆಣಸನ್ನೂ ಇತರ ಆಹಾರವನ್ನೂ ತಂದುಕೊಟ್ಟರು. ನಾನಾಬಗೆಯ ಹೂಗಳನ್ನು ತಂದು ಇಟ್ಟರು. ಆ ಆಶ್ರಮಪ್ರಾಂತದಲ್ಲಿ ಇದ್ದ ಎಲ್ಲ ಋಷಿಗಳೂ ಬಂದರು. ಧರ್ಮಿಷ್ಠರೂ ತಪಸ್ಸಿದ್ಧರೂ ಮಹರ್ಷಿಗಳೂ ಬಂದು ಶಾಸ್ತ್ರೋಕ್ತ ಆಗಿ ರಾಮಲಕ್ಷ್ಮಣರನ್ನು ಸ್ತೋತ್ರಮಾಡಿ ಸತ್ಕರಿಸಿದರು.

೨

ಋಷಿಗಳ ಆತಿಥ್ಯವನ್ನು ಸ್ವೀಕರಿಸಿ ಸೀತಾರಾಮಲಕ್ಷ್ಮಣರು ಆ ರಾತ್ರಿ ಅಲ್ಲಿಯೆ ಇದ್ದರು. ಬೆಳಕು ಹರಿದಮೇಲೆ ಆಹ್ನಿಕಗಳನ್ನು ಮುಗಿಸಿ ಋಷಿಗಳನ್ನು ಬೀಳ್ಕೊಂಡರು. ಮುಂದೆ ಪಯಣಮಾಡಿ ದಂಡಕಾರಣ್ಯವನ್ನು ಹೊಕ್ಕರು.

ಘೋರ ಅರಣ್ಯ. ಹುಲಿ ಚಿರತೆ ತೋಳ ಇಂಥ ಕ್ರೂರಮೃಗಗಳು ತುಂಬಿ ಇವೆ. ನಾನಾಬಗೆಯ ಪಕ್ಷಿಗಳು. ಎಲ್ಲವೂ ಸದ್ದು ಇಲ್ಲದೆ ಅಡಗಿ ಇವೆ. ಗಿಡಮರ ಪೊದೆಬಳ್ಳಿ ಎಲ್ಲವೂ ಬಾಡಿ ಸೊಪ್ಪು ಆಗಿವೆ. ಯಾವ ಕೊಳವನ್ನು ನೋಡಿದರೂ ಮಲವು ನೀರು. ಕಾಡಿನಲ್ಲಿ ಎಲ್ಲಾ ಒಂದೇ ಶಬ್ದ. ಜೀರುಂಡೆಗಳ ಕೂಗು, ರೆಕ್ಕೆಹುಳುಗಳ ಗುಂಯ್ ಸದ್ದು. ಸೀತಾರಾಮಲಕ್ಷ್ಮಣರು ಘೋರ ಕಾನನದ ಮಧ್ಯಕ್ಕೇ ಬಂದರು.

ಪರ್ವತಶಿಖರದಂತೆ ಎತ್ತರ ಆದ ಘೋರ ಆಕಾರದ ರಾಕ್ಷಸ ಒಬ್ಬ ಇದಿರಿಗೆ ಬಂದ. ಗಟ್ಟಿ ಆಗಿ ಕೂಗುತ್ತ ಇದ್ದ ಆ ರಾಕ್ಷಸ. ತುಂಬಾ ವಿಕಾರಸ್ವರೂಪ. ಕಣ್ಣು ಆಳ ಆದ ಗುಳಿ, ಬಾಯಿ ಬಹಳ ಅಗಲ. ಹೊಟ್ಟೆ ತುಂಬಾ ದೊಡ್ಡದು, ತಗ್ಗುದಿಣ್ಣೆ ಅದರಲ್ಲಿ. ಮೈಯಲ್ಲಿ ಒಂದು ಅಂಗವೂ ಸಮ ಅಲ್ಲ. ಮೈಗೆ ರಕ್ತ ಮಾಂಸ ಮೆತ್ತಿಕೊಂಡು ಅಸಹ್ಯ, ದುರ್ಗಂಧಪೂರ್ಣ. ಮೈಮೇಲೆ ಒಂದು

ಹುಲಿಯ ಚರ್ಮ. ಅದಕ್ಕೆ ರಕ್ತ ಮಾಂಸ ಇನ್ನೂ ಅಂಟಿಕೊಂಡೇ ಇತ್ತು. ಕೈಯಲ್ಲಿ ಒಂದು ಶೂಲವನ್ನು ಹಿಡಿದು ಇದ್ದ. ಅದರ ಅಲಗಿಗೆ ಮೂರು ಸಿಂಹ, ನಾಲ್ಕು ಹುಲಿ, ಎರಡು ತೋಳ, ಹತ್ತು ಜಿಂಕೆ, ನೆತ್ತರಿನಲ್ಲಿ ನೆನೆದು ಮದರಸ ಸುರಿಯುವ ಎರಡು ದಂತಗಳ ಆನೆಯ ತಲೆ, ಇಷ್ಟು ಅದಕ್ಕೆ ಚುಚ್ಚಿ ಇತ್ತು. ಅವನನ್ನು ನೋಡಿದರೆ ಅಂಜಿಕೆ ಬರುತ್ತ ಇತ್ತು. ಬಾಯಿ ತೆರೆದುಕೊಂಡು ಅಬ್ಬರಿಸಿ ಕೂಗುತ್ತ ಕಾಲಯಮನ ಹಾಗೆ ಇವರ ಕಡೆಗೇ ಬಂದ.

ಸೀತಾರಾಮಲಕ್ಷ್ಮಣರು ಕಣ್ಣಿಗೆ ಬಿದ್ದ ಕೂಡಲೇ ಆ ರಾಕ್ಷಸನಿಗೆ ಕೋಪ ಮಿತಿಮೀರಿತು. ಪ್ರಳಯಕಾಲದ ಯಮನ ಹಾಗೆ ಭಯಂಕರ ಆಗಿ ಆರ್ಭಟಿಸಿದ. ಆ ಆರ್ಭಟಕ್ಕೆ ಭೂಮಿ ಎಲ್ಲವೂ ನಡುಗಿತು. ಇವರು ಮೂವರನ್ನೂ ಅಡ್ಡಗಟ್ಟಿ ನಿಂತ ಆ ರಾಕ್ಷಸ. ತಟ್ಟನೆ ಸೀತೆಯನ್ನು ಹಿಡಿದು ಎತ್ತಿಕೊಂಡು ನಡೆದ. ಸ್ವಲ್ಪ ದೂರ ಹೋಗಿ ನಿಂತು "ಯಾರೋ ನೀವು? ನಿಮಗೆ ಏಕೆ ಈ ನಾರು ಮಡಿ, ಜಡೆ? ಮುನಿವೇಷ ಹಾಕಿದೀರಿ. ಕೈಯಲ್ಲಿ ಕತ್ತಿ ಬಿಲ್ಲುಬಾಣ ಹಿಡಿದಿದೀರಿ. ಹೆಂಡತಿ ಒಬ್ಬಳನ್ನು ಕಟ್ಟಿಕೊಂಡು ಬಂದಿದೀರಿ. ಇದು ನನ್ನ ದಂಡಕಾರಣ್ಯ. ಇಲ್ಲಿಗೆ ಬಂದಿದೀರಿ. ಇನ್ನು ನಿಮ್ಮ ಆಯುಸ್ಸು ತೀರಿತು. ನೀವು ಕಪಟಿಗಳು. ಮುನಿಗಳೇ ಆದರೆ ನಿಮಗೆ ಬಿಲ್ಲುಬಾಣ ಏಕೆ? ಹೆಂಗಸು ಏಕೆ? ಪಾಪಿಗಳು ನೀವು, ಮುನಿದೂಷಕರು.

"ನಾನು ಯಾರು ಗೊತ್ತೋ? ನಾನು ವಿರಾಧ ರಾಕ್ಷಸ. ಕೈಯಲ್ಲಿ ಆಯುಧ ಹಿಡಿದು ಯಾವಾಗಲೂ ಈ ಕಾಡನ್ನು ಸುತ್ತುವುದೇ ನನ್ನ ಕೆಲಸ. ಕೈಗೆ ಸಿಕ್ಕ ಋಷಿಗಳನ್ನು ಕೊಂದು ಅವರ ಮಾಂಸ ತಿನ್ನುತ್ತೇನೆ. ನಿಮಗೆ ಏಕೋ ಈ ಚೆಲುವೆ? ಇವಳು ನನ್ನ ಹೆಂಡತಿ ಆಗಿ ಇರಲಿ. ನಿಮ್ಮನ್ನು ಇಬ್ಬರನ್ನೂ ಕೊಂದು ನಿಮ್ಮ ರಕ್ತ ಕುಡಿಯುತ್ತೇನೆ ಈಗ" ಎಂದ ಆ ರಾಕ್ಷಸ.

ವಿರಾಧನ ಈ ದುರ್ವಾಕ್ಯಗಳನ್ನು ಕೇಳಿ ಸೀತೆ ಬೆದರಿ ಬೆಂಡು ಆದಳು. ಬಿರುಗಾಳಿಗೆ ಬಾಳೆಯ ಗಿಡ ನಡುಗುವಂತೆ ನಡುಗಿದಳು. ಗಡಗಡ ನಡುಗುತ್ತ ಇದ್ದ ಸೀತೆಯನ್ನು ನೋಡಿ ರಾಮನ ಮುಖ ಬಾಡಿತು. ಲಕ್ಷ್ಮಣನಿಗೆ ಹೇಳಿದ: "ತಮ್ಮ, ಜನಕಚಕ್ರವರ್ತಿಯ ಮಗಳು, ನನ್ನ ಹೆಂಡತಿ, ಸದಾಚಾರ ಸಂಪನ್ನೆ, ಈ ಸೀತೆಗೆ ಬಂದ ದುರವಸ್ಥೆಯನ್ನು ನೋಡು. ನಮ್ಮನ್ನು ಕಾಡಿಗೆ ಅಟ್ಟಿದ ಕೈಕೇಯಿಯ ಕೋರಿಕೆ ಈಗ ಕೈಗೂಡುತ್ತ ಇದೆ. ದೂರದೃಷ್ಟಿ

ಅವಳದು. ಮಗನಿಗೆ ರಾಜ್ಯ ಕೊಡಿಸಿದರೆ ಸಾಲಲಿಲ್ಲ. ನನ್ನನ್ನು ಕಾಡಿಗೆ ಕಳಿಸಬೇಕು ಎಂದಳು. ಇವೊತ್ತು ಆಕೆಯ ಕೋರಿಕೆ ತೀರುತ್ತ ಇದೆ. ನನ್ನ ಕಣ್ಣ ಇದಿರಿಗೇ ಸೀತೆಯನ್ನು ಪರಪುರುಷ ಮುಟ್ಟಿದ. ನಾನು ಈ ದುಃಖವನ್ನು ಸೈರಿಸಲಾರೆ. ತಂದೆ ಹೋದಾಗಲೂ ನನಗೆ ಇಷ್ಟು ದುಃಖ ಆಗಲಿಲ್ಲ. ರಾಜ್ಯ ಹೋದಾಗಲೂ ಆಗಲಿಲ್ಲ."

ರಾಮನ ಕಣ್ಣಿನಲ್ಲಿ ನೀರು ತುಂಬಿತ್ತು. ನೋಡಿ ಲಕ್ಷ್ಮಣನಿಗೆ ರೇಗಿ ಹೋಯಿತು. ಮಂತ್ರ ಹಾಕಿ ತಡೆಗಟ್ಟಿದ ಮಹಾಸರ್ಪದಂತೆ ಬುಸುಗುಟ್ಟಿದ. "ಅಣ್ಣ, ರಾಮ, ನೀನೂ ದುಃಖಿಸುತ್ತೀಯಲ್ಲ. ನೀನು ದೇವೇಂದ್ರನಿಗೆ ಸಮ. ಸಮಸ್ತ ಪ್ರಾಣಿಗಳಿಗೂ ಪ್ರಭು. ನಿನ್ನ ಹಿಂದೆಯೆ ಇದೇನಲ್ಲ ನಾನು, ನಿನ್ನ ಪಾದಸೇವಕ. ಅನಾಥನ ಹಾಗೆ ನೀನು ಅಳಬೇಕೆ? ಬಾಣ ಬಿಟ್ಟು ಈ ರಾಕ್ಷಸನನ್ನು ಈಗಲೇ ಕೊಂದು ಕೆಡಹುತ್ತೇನೆ. ಭೂಮಿಗೆ ಕುಡಿಸುತ್ತೇನೆ ಇವನ ನೆತ್ತರು. ರಾಜ್ಯಕಾಮುಕ ಆ ಭರತನ ಮೇಲೆ ನನಗೆ ಬಂದಿತ್ತಲ್ಲ ಕೋಪ, ಅದನ್ನೆಲ್ಲ ಈಗ ಇವನ ಮೇಲೆ ತೀರಿಸುತ್ತೇನೆ. ಪರ್ವತಗಳ ಮೇಲೆ ವಜ್ರಾಯುಧವನ್ನು ಪ್ರಯೋಗಿಸಲಿಲ್ಲವೆ ಇಂದ್ರ? ಈ ರಾಕ್ಷಸನ ಎದೆಗೆ ನನ್ನ ಬಾಣ ಬಿಡುತ್ತೇನೆ. ಆ ಬಾಣ ಇವನ ಎದೆಯನ್ನು ಸೀಳುತ್ತದೆ. ಗಿರಗಿರ ತಿರುಗಿ ನೆಲದ ಮೇಲೆ ಬಿದ್ದು ಉರುಳುತ್ತಾನೆ ಇವನು" ಎಂದ ಲಕ್ಷ್ಮಣ.

೩

ವಿರಾಧನ ಕಡೆಗೆ ತಿರುಗಿದ ಲಕ್ಷ್ಮಣ. "ಯಾರೋ ನೀನು? ಈ ಕಾಡಿನಲ್ಲಿ ಹೀಗೆ ಸ್ವೇಚ್ಛೆ ಆಗಿ ತಿರುಗುತ್ತ ಇದೀಯೆ?" ಎಂದು ಕೇಳಿದ.

"ನೀವು ಯಾರು? ಎಲ್ಲಿಗೆ ಹೋಗುತ್ತ ಇದೀರಿ? ಮೊದಲು ನಾನು ಕೇಳಿದ್ದಕ್ಕೆ ಉತ್ತರ ಕೊಡಿ" ಎಂದ ವಿರಾಧ. ಆ ಧ್ವನಿ ಕಾಡಿನಲ್ಲಿ ಎಲ್ಲಾ ಮಾರ್ಮೊಳಗಿತು. ಅವನ ಮೋರೆ ಉರಿಯುತ್ತ ಇತ್ತು. ಮಹಾಪರಾಕ್ರಮ ಶಾಲಿ ರಾಮ ಅವನಿಗೆ ಹೇಳಿದ: "ಅಯ್ಯಾ, ನಾವು ಕ್ಷತ್ರಿಯರು. ಸದಾಚಾರ ಸಂಪನ್ನರು. ಕಾಲಕಣಾಂತರದಿಂದ ಕಾಡಿಗೆ ಬಂದು ಇದೇವೆ. ನೀನು ಯಾರು? ದಂಡಕಾರಣ್ಯದಲ್ಲಿ ಏಕೆ ತಿರುಗುತ್ತೀಯೆ?"

"ನನ್ನ ಪೂರ್ವೋತ್ತರವನ್ನು ಹೇಳುತ್ತೇನೆ ಕೇಳು. ನನ್ನ ತಂದೆ ಜಯ ಎಂಬ ಗಂಧರ್ವ. ನನ್ನ ತಾಯಿ ಶತಹ್ರದೆ. ರಾಕ್ಷಸರು ಎಲ್ಲರೂ ನನ್ನನ್ನು ವಿರಾಧ ಎಂದು ಕರೆಯುತ್ತಾರೆ. ಹಿಂದೆ ಮಹಾತಪಸ್ಸು ಮಾಡಿ ಬ್ರಹ್ಮನನ್ನು ಮೆಚ್ಚಿಸಿದೆ. ಯಾವ ಆಯುಧದಿಂದಲೂ ನನಗೆ ಸಾವು ಬಾರದಂತೆ ಆತ ವರ ಕೊಟ್ಟ. ನನ್ನನ್ನು ಯಾರೂ ಛೇದಿಸಲಾರರು, ಭೇದಿಸಲಾರರು. ನಿಮಗೆ ಏಕೆ ಈ ಹೆಂಗಸಿನ ಆಸೆ ಇನ್ನು? ಆಸೆ ಬಿಟ್ಟು ಬಂದ ದಾರಿ ಹಿಡಿದು ಹೋಗಿ. ಓಡಿಹೋಗಿ. ನಿಮ್ಮ ಮೇಲೆ ದಯೆ ತೋರಿ ಜೀವಸಹಿತ ಬಿಡುತ್ತೇನೆ" ಎಂದ ವಿರಾಧ.

ರಾಮನ ಕಣ್ಣು ಕೆಂಪು ಆಯಿತು. ವಿಕಾರರೂಪದ ಆ ದುರುಳ ರಕ್ಕಸನಿಗೆ ಹೇಳಿದ: "ನೀಚ, ಪಾಪಿ, ನಿನಗೆ ಏಕೆ ಈ ವಿಪರೀತ ಬುದ್ಧಿ? ಸಾವನ್ನು ಬಯಸುತ್ತ ಇದ್ದೀಯಲ್ಲ. ನಿನ್ನನ್ನು ಜೀವಸಹಿತ ಬಿಡುವುದಿಲ್ಲ ನಾನು. ಬಾ, ಯುದ್ಧಮಾಡು. ಕೊಂದುಹಾಕುತ್ತೇನೆ." ಹೀಗೆ ಎಂದವನೇ ರಾಮ ಬಿಲ್ಲಿಗೆ ಹೆದೆ ಏರಿಸಿದ. ಗರುಡನ ಹಾಗೆ ವಾಯುವಿನ ಹಾಗೆ ಅಮಿತ ವೇಗದಿಂದ ಹೋಗುವ ಏಳು ಬಾಣಗಳನ್ನು ಎಡೆಬಿಡದೆ ಪ್ರಯೋಗಿಸಿದ. ಆ ಬಾಣಗಳಿಗೆ ನವಿಲಿನ ರೆಕ್ಕೆ, ಚಿನ್ನದ ಪಿಡಿ. ಬೆಂಕಿಯ ಹಾಗೆ ಆ ಬಾಣಗಳು. ಅವು ವಿರಾಧನ ದೇಹವನ್ನು ತೂರಿಕೊಂಡು ಅವನ ನೆತ್ತರಿನಲ್ಲಿ ನೆನೆದು ನೆಲದ ಮೇಲೆ ಹೋಗಿ ಬಿದ್ದವು.

ಆ ಬಾಣಗಳ ಪೆಟ್ಟಿಗೆ ರಾಕ್ಷಸನಿಗೆ ಬಹಳ ಕೋಪ ಬಂತು. ಸೀತೆಯನ್ನು ಕೆಳಕ್ಕೆ ಇಳಿಸಿದ. ಇಂದ್ರಧ್ವಜಕ್ಕೆ ಸಾಟಿ ಆದ ತನ್ನ ಶೂಲವನ್ನು ಎತ್ತಿಕೊಂಡು ಭಯಂಕರ ಆಗಿ ಆರ್ಭಟಿಸುತ್ತ ರಾಮಲಕ್ಷ್ಮಣರ ಮೇಲೆ ಬೀಳಲು ಬಂದ. ದೊಡ್ಡದು ಆಗಿ ಬಾಯಿ ತೆರೆದುಕೊಂಡು ಎಲ್ಲರನ್ನೂ ನುಂಗುವ ಪ್ರಳಯ ಕಾಲದ ಯಮನ ಹಾಗೆ ಬಂದ. ರಾಮಲಕ್ಷ್ಮಣರು ಅವನ ಮೇಲೆ ಉರಿಯುವ ಬೆಂಕಿಯಂಥ ಬಾಣಗಳ ಸುರಿಮಳೆ ಕರೆದರು.

ಆ ರಾಕ್ಷಸ ಪಕಪಕ ನಕ್ಕ. ತನ್ನ ಮಾಯೆಯಿಂದ ದೇಹವನ್ನು ದೊಡ್ಡದು ಆಗಿ ಬೆಳೆಸಿದ. ಮೈಗೆ ನೆಟ್ಟು ಇದ್ದ ಬಾಣಗಳು ಎಲ್ಲವೂ ನೆಲಕ್ಕೆ ಬಿದ್ದವು. ಬ್ರಹ್ಮನ ವರ ಇತ್ತಲ್ಲ. ಅದರ ಮಹಿಮೆಯಿಂದ ತನ್ನ ಪ್ರಾಣಗಳನ್ನು ಹೃದಯದಲ್ಲಿ ಅಡಗಿಸಿಕೊಂಡ. ಶೂಲವನ್ನು ರಾಮಲಕ್ಷ್ಮಣರ ಮೇಲೆ ಎಸೆದ. ವಜ್ರಾ-

ಯುಧಕ್ಕೆ ಸಮಾನ ಆಗಿ ಮಿಂಚು ಸಿಡಿಲುಗಳನ್ನು ಉಗುಳುತ್ತ ಬರುತ್ತ ಇತ್ತು ಆ ಶೂಲ. ಶಸ್ತ್ರವಿದ್ಯಾನಿಪುಣ ರಾಮ. ಎರಡು ಬಾಣ ಬಿಟ್ಟು ಆ ಶೂಲವನ್ನು ಬರುತ್ತ ಇದ್ದ ಹಾಗೇ ಕತ್ತರಿಸಿದ. ವಜ್ರಾಯುಧದ ಪೆಟ್ಟಿಗೆ ಚೂರು ಚೂರು ಆಗಿ ಬಿದ್ದ ಮೇರುಪರ್ವತದ ಬಂಡೆಗಲ್ಲುಗಳ ಹಾಗೆ ತುಂಡು ತುಂಡು ಆಗಿ ಬಿತ್ತು ಆ ಶೂಲ.

ವಿರಾಧನಿಗೆ ಪೂರಾ ಸಿಟ್ಟು. ಮೇಲೆ ಬೀಳಲು ಓಡಿಬಂದ. ರಾಮ ಲಕ್ಷ್ಮಣರು ತೀಕ್ಷ್ಣ ಖಡ್ಗಗಳಿಂದ ಬಲವಾಗಿ ಹೊಡೆದರು. ಕರಿಯ ನಾಗರ ಹಾವಿನಂಥ ಕತ್ತಿ ಅವು. ಕತ್ತಿಯ ಏಟು ಬಿದ್ದ ಒಡನೆಯೆ ವಿರಾಧ ಸಿಟ್ಟಿಗೆ ಎದ್ದು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೆಗಲ ಮೇಲೆ ಏರಿಸಿಕೊಂಡು ಓಡಲು ಆರಂಭಿಸಿದ. ರಾಕ್ಷಸನ ಅಭಿಪ್ರಾಯ ರಾಮನಿಗೆ ಅರ್ಥ ಆಯಿತು. “ ಲಕ್ಷ್ಮಣ, ಒಳ್ಳೆಯದೇ ಆಯಿತು. ನಮಗೆ ನಡೆಯುವ ಕಷ್ಟವೇ ತಪ್ಪಿತು. ದಾರಿ ಸಾಗಿತು. ನಮ್ಮದೂ ಇದೇ ದಾರಿ ಅಲ್ಲವೇ ?” ಎಂದ ರಾಮ. ವಿರಾಧ ಅವರನ್ನು ಎಳೆಯ ಮಕ್ಕಳನ್ನೆತ್ತಿಕೊಳ್ಳುವಂತೆ ಎತ್ತಿ ಭುಜದ ಮೇಲೆ ಕೂಡಿಸಿಕೊಂಡು ಕಾಡಿನ ಒಳಕ್ಕೆ ಹೋಗುತ್ತ ಇದ್ದ. ಅವನ ಗರ್ಜನೆ ಭಯಂಕರ. ಆ ಕಾಡಿನಲ್ಲಿ ದಟ್ಟ ಆಗಿ ಬೆಳೆದು ನಿಂತ ಮಹಾವೃಕ್ಷಗಳು. ಮೋಡ ಮುಸುಕಿದ ಹಾಗೆ ಕಪ್ಪು ಆಗಿತ್ತು ಕಾಡು. ನಾನಾ ವಿಧ ಪಕ್ಷಿಸಮೂಹ. ನರಿ ತೋಳ ಮುಂತಾದ ಕ್ರೂರಮೃಗಗಳು. ಇಂಥ ಘೋರ ಅರಣ್ಯದ ಒಳಕ್ಕೆ ನಡೆದ ರಾಕ್ಷಸ.

೪

ವಿರಾಧ ರಾಮಲಕ್ಷ್ಮಣರನ್ನು ಇಬ್ಬರನ್ನೂ ಹೊತ್ತುಕೊಂಡು ಹೊರಟ. ಸೀತೆಗೋ ಬಹಳ ಭಯ. ಕೈ ಎತ್ತಿ ಅಯ್ಯೋ ಎಂದು ಅಳತೊಡಗಿದಳು. “ ಸತ್ಯವಂತ, ಶೀಲವಂತ, ಪರಿಶುದ್ಧ ಆದ ರಾಮನನ್ನೂ ಲಕ್ಷ್ಮಣನನ್ನೂ ಈ ಭೀಕರ ರಾಕ್ಷಸ ಎಲ್ಲಿಗೋ ಎತ್ತಿಕೊಂಡು ಹೋಗುತ್ತ ಇದಾನಲ್ಲ. ನನ್ನ ಗತಿ ಏನು ? ತೋಳ ಹುಲಿ ಚಿರತೆಗಳ ಪಾಲು ಆಗಬೇಕಾದ್ದೇ.... ರಾಕ್ಷಸೋತ್ತಮ, ನಿನಗೆ ಕೈಮುಗಿಯುತ್ತೇನೆ. ಅವರನ್ನು ಬಿಟ್ಟುಬಿಡು. ಅವರ ಬದಲು ನನ್ನನ್ನು ಎತ್ತಿಕೊಂಡು ಹೋಗು ” ಎಂದು ಅಂಗಲಾಚಿದಳು.

ಸೀತೆಯ ಪ್ರಲಾಪ ರಾಮಲಕ್ಷ್ಮಣರಿಗೆ ಕೇಳಿಸಿತು. ಆ ರಾಕ್ಷಸನನ್ನು ಕೂಡಲೆ ಕೊಲ್ಲಬೇಕು ಎನಿಸಿತು. ಲಕ್ಷ್ಮಣ ಅವನ ಎಡತೋಳನ್ನು ಕತ್ತರಿಸಿದ. ರಾಮ ಅವನ ಬಲತೋಳನ್ನು ಕತ್ತರಿಸಿದ. ಕೈಗಳು ಕಡಿದುಬಿದ್ದ ಕೂಡಲೇ ಮೇಘದಂಥ ಆ ರಾಕ್ಷಸ ಕೆಳಗೆ ಬಿದ್ದ. ವಜ್ರಾಯುಧದ ಪೆಟ್ಟಿಗೆ ಸಿಕ್ಕ ಬೆಟ್ಟದ ಹಾಗೆ ಬಿದ್ದ. ಕೆಳಗೆ ಬಿದ್ದ ರಾಕ್ಷಸನನ್ನು ರಾಮಲಕ್ಷ್ಮಣರು ಮೊಳಕೈ ಮೊಳಕಾಲುಗಳಿಂದ ತಿವಿದರು. ಮುಷ್ಟಿಗಳಿಂದ ಗುದ್ದಿದರು. ಎತ್ತಿ ಎತ್ತಿ ಕುಕ್ಕಿದರು. ಅವನ ಎಲುಬು ಮುರಿಯಿತು. ಮಾಂಸದ ಮುದ್ದೆ ಆದ ಅವನು. ಅರೆಜೀವ ಆಯಿತು. ಇಷ್ಟು ಮಾಡಿದರೂ ಆ ರಾಕ್ಷಸ ಸಾಯಲೂ ಇಲ್ಲ. ಕತ್ತಿ ಆಯಿತು, ಬಾಣ ಆಯಿತು. ಆದರೂ ನಿಷ್ಫಲ. ರಾಮ ಅವನನ್ನು ಸೂಕ್ಷ್ಮ ಆಗಿ ಪರೀಕ್ಷಿಸಿದ.

"ತಮ್ಮ, ಇವನು ತಪಸ್ಸುಮಾಡಿ ವರ ಪಡೆದವನು. ಇವನನ್ನು ಶಸ್ತ್ರ ಅಸ್ತ್ರಗಳಿಂದ ಕೊಲ್ಲಲು ಸಾಧ್ಯವಿಲ್ಲ. ದೊಡ್ಡ ಹಳ್ಳ ತೋಡಿ ಇವನನ್ನು ಹೂಳಿ ಬಿಡೋಣ" ಎಂದ ರಾಮ. ರಾಮನ ಮಾತನ್ನು ಕೇಳಿದ ವಿರಾಧ. ರಾಮನಿಗೆ ಹೇಳಿದ ಬಹಳ ವಿನಯದಿಂದ. "ಪುರುಷೋತ್ತಮ, ನೀನು ದೇವೇಂದ್ರನಿಗೆ ಸಮ. ನಾನು ಸತ್ತೆ. ನನ್ನ ಅವಿವೇಕ, ನೀನು ಪುರುಷೋತ್ತಮ ಎಂಬುದು ನನಗೆ ಮೊದಲು ತಿಳಿಯಲಿಲ್ಲ. ರಾಮ, ನೀನು ಕೌಸಲ್ಯಾದೇವಿಯ ಮಗ. ಈಗ ಅರ್ಥ ಆಯಿತು. ಈಕೆ ಮಹಾತ್ಮಳು ವೈದೇಹಿ. ಮಹಾಕೀರ್ತಿವಂತ ಲಕ್ಷ್ಮಣ ಈತ. ನಿಮ್ಮ ನಿಜಸ್ವರೂಪ ತಿಳಿಯಿತು.

"ಸ್ವಾಮಿ, ನಾನು ಹುಟ್ಟುರಾಕ್ಷಸ ಅಲ್ಲ. ನಾನು ಗಂಧರ್ವ. ತುಂಬುರ ಎಂದು ನನ್ನ ಹೆಸರು. ಕುಬೇರನ ಸೇವೆಯಲ್ಲಿ ಇದ್ದೆ. ರಂಭೆಯಲ್ಲಿ ಮೋಹ ಗೊಂಡು ಸ್ವಾಮಿಸೇವೆಯನ್ನು ಮಾಡದೆ ಕೈಬಿಟ್ಟೆ. ಆತ ಶಾಪ ಕೊಟ್ಟ. ಅದರಿಂದ ನನಗೆ ಈ ಘೋರ ರಾಕ್ಷಸರೂಪ ಬಂತು. ಕುಬೇರನನ್ನೇ ನಾನು ಮರೆಹೊಕ್ಕೆ. ಆತ ಪ್ರಸನ್ನ ಆಗಿ ದಶರಥರಾಜನ ಮಗ ರಾಮನ ಸಂಗಡ ಕಾದಿ ಸಾಯುತ್ತೀ. ಆಗ ನಿನಗೆ ಶಾಪವಿಮೋಚನೆ. ನಿಜರೂಪದಿಂದ ಆಗ ದೇವ-ಲೋಕಕ್ಕೆ ಬರುತ್ತೀ ಎಂದು ಅಪ್ಪಣೆ ಕೊಟ್ಟ. ಈಗ ನಿನ್ನ ಅನುಗ್ರಹದಿಂದ ನನಗೆ ಬಿಡುಗಡೆ. ಇನ್ನು ನನ್ನ ನಿಜಲೋಕಕ್ಕೆ ಹೋಗುತ್ತೇನೆ. ರಾಮ, ನಿನಗೆ ಮಂಗಳ ಆಗಲಿ.

"ತಂದೆ, ಸ್ವಲ್ಪ ದೂರದಲ್ಲಿಯೇ ಶರಭಂಗ ಮಹರ್ಷಿಯ ಆಶ್ರಮ ಇದೆ. ಆತ ಮಹಾಧರ್ಮಾತ್ಮ. ಮಹಾತಪಸ್ವಿ. ಆತನ ತೇಜಸ್ಸು ಸೂರ್ಯನಿಗೆ ಸಮ. ನೀನು ಆತನ ಬಳಿ ಹೋಗು. ಆ ಋಷಿ ನಿನಗೆ ಒಳ್ಳೆಯದನ್ನು ಮಾಡುತ್ತಾನೆ. ಹೋಗುವಾಗ ನನ್ನನ್ನು ಹೂತುಬಿಡು. ರಾಕ್ಷಸರಿಗೆ ಹೂಳುವುದೇ ಆಚಾರ. ಮೊದಲಿನಿಂದಲೂ ಹಾಗೇ. ಅದರಿಂದಲೇ ಅವರಿಗೆ ಪುಣ್ಯಲೋಕಪ್ರಾಪ್ತಿ."

ಆನೆಯ ಹಾಗೆ ದೊಡ್ಡ ಮೈಯ ಆ ಭಯಂಕರ ರೂಪದ ಕ್ರೂರಕರ್ಮಿ ರಾಕ್ಷಸನಿಗೆ ತಕ್ಕ ಹಾಗೆ ದೊಡ್ಡ ಗುಂಡಿಯನ್ನು ತೋಡಲು ಲಕ್ಷ್ಮಣನಿಗೆ ಹೇಳಿದ ರಾಮ. ರಾಕ್ಷಸನ ಮೈ ಅತ್ತ ಇತ್ತ ಕದಲದ ಹಾಗೆ ತಾನು ಅವನ ಕುತ್ತಿಗೆಯ ಮೇಲೆ ಕಾಲನ್ನು ಮೆಟ್ಟನಿಂತ. ಗುದ್ದಲಿಯನ್ನು ಹಿಡಿದು ಲಕ್ಷ್ಮಣ ಆ ರಾಕ್ಷಸದೇಹದ ಪಕ್ಕದಲ್ಲಿಯೆ ದೊಡ್ಡ ಗುಂಡಿಯನ್ನು ತೋಡಿದ. ರಾಮ ತನ್ನ ಕಾಲನ್ನು ತೆಗೆದ. ಕತ್ತೆಕಿವಿಯ ಆ ವಿರಾಧ ಯಾವಾಗಲೂ ಕೇಕೆ ಹಾಕುವಂತೆ ಆಗಲೂ ಹಾಕಿದ. ರಾಮಲಕ್ಷ್ಮಣರು ಮಹಾಪರಾಕ್ರಮಿಗಳು. ಯುದ್ಧದಲ್ಲಿ ಎಂದೂ ಹಿಂಜರಿದವರು ಅಲ್ಲ. ಕೊಂದರೂ ಸಾಯದೆ ಕೂಗಿ ಕೊಳ್ಳುವ ಆ ರಾಕ್ಷಸನ ದೇಹವನ್ನು ಗುಂಡಿಯ ಒಳಕ್ಕೆ ಎತ್ತಿ ಹಾಕಿದರು. ಬೇರೆ ಯಾವ ರೀತಿಯಲ್ಲೂ ಅವನು ಅವಧ್ಯ. ತನ್ನನ್ನು ಹೂತರೇನೇ ತನಗೆ ಸಾವು ಎಂದು ಅವನೇ ಹೇಳಿದ. ರಾಮನಿಂದಲೇ ತನಗೆ ಮರಣ ಎಂದೂ ಹೇಳಿದ್ದ.

ಅವನು ಹೇಳಿದ ಹಾಗೇ ಅಣ್ಣತಮ್ಮಂದಿರು ಇಬ್ಬರೂ ಸೇರಿ ರಾಕ್ಷಸನ ದೇಹವನ್ನು ಹುಗಿದರು. ಆ ರಾಕ್ಷಸ ಆ ಅಡವಿ ಎಲ್ಲಾ ಮಾರ್ಮೊಳಗುವಂತೆ ಕೂಗಿದ. ಭಯಂಕರ ಧ್ವನಿ. ಆ ರಾಕ್ಷಸ ಮತ್ತೆ ಏಳದಂತೆ ದೊಡ್ಡ ಬಂಡೆ ಒಂದನ್ನು ಆ ಗುಂಡಿಯ ಮೇಲೆ ಎಳೆದರು. ಆಗ ಅವರಿಗೆ ನಿರ್ಭಯದ ಆತ್ಮಾನಂದದ ರೋಮಾಂಚ ಆಯಿತು.

ಚಿನ್ನದ ಚಿತ್ರಗೆಲಸ ಮಾಡಿದ ಬಿಲ್ಲುಗಳನ್ನು ಹಿಡಿದು ರಾಮಲಕ್ಷ್ಮಣರು ಸೀತೆಯ ಒಡನೆ ಆ ಕಾಡಿನಲ್ಲಿ ಸುತ್ತುತ್ತ ಇದ್ದರು, ಆಕಾಶದಲ್ಲಿ ಸೂರ್ಯ ಚಂದ್ರರಂತೆ ಹೊಳೆಯುತ್ತ.

೫

ಸೀತೆ ಬಹಳ ಭಯಪಟ್ಟಿದ್ದಳಲ್ಲ. ವಿರಾಧನನ್ನು ಕೊಂದಮೇಲೆ ರಾಮ ಆಕೆಯ ಬಳಿಗೆ ಬಂದು ಆಕೆಯನ್ನು ಸಮಾಧಾನಪಡಿಸಿದ. ರಾಮ ಆಕೆಯನ್ನು ಅಪ್ಪಿಕೊಂಡ.

"ತಮ್ಮ, ಈ ಕಾಡು ಬಹಳ ಅಪಾಯಕರ ಇದ್ದಹಾಗೆ ಇದೆ. ನಮಗೆ ಇದು ಬಳಕೆ ಇಲ್ಲ. ಬಹಳ ದುರ್ಗಮ ಆಗಿ ಇದೆ. ನಾವು ಇಲ್ಲಿ ಇರುವುದು ತರ ಅಲ್ಲ. ಬೇಗ ಶರಭಂಗ ಮಹರ್ಷಿಯ ಆಶ್ರಮಕ್ಕೆ ಹೋಗೋಣ" ಎಂದು ಲಕ್ಷ್ಮಣನಿಗೆ ಹೇಳಿದ ರಾಮ.

ಶರಭಂಗಾಶ್ರಮಕ್ಕೆ ಹೊರಟರು. ಶರಭಂಗಋಷಿಗೆ ದೇವತೆಗಳಿಗೆ ಸಮ ಆದ ತಪೋಮಹಿಮೆ. ತಪೋಬಲದಿಂದ ಆತನಿಗೆ ಬ್ರಹ್ಮಸಾಕ್ಷಾತ್ಕಾರ ಆಗಿತ್ತು. ಆತನ ಆಶ್ರಮದ ಬಳಿ ರಾಮನಿಗೆ ಒಂದು ಅದ್ಭುತ ಕಾಣಿಸಿತು.

ದೇವೇಂದ್ರನೇ ಆಕಾಶದಿಂದ ಇಳಿದುಬಂದು ಶರಭಂಗಋಷಿಯ ಇದಿರಿಗೆ ನಿಂತು ಇದ್ದ. ಸೂರ್ಯ ಅಗ್ನಿಗಳಿಗೆ ಸಮ ಆದ ಜಾಜ್ವಲ್ಯಮಾನ ದೇಹಕಾಂತಿ. ಅವನ ಮೈಮೇಲಿನ ಆಭರಣಗಳು ಎಲ್ಲವೂ ಥಳ ಥಳ ಹೊಳೆಯುತ್ತ ಇದ್ದವು. ಅವನ ಉಡುಪು ಸ್ವಚ್ಛ, ಶುಭ್ರ. ಅವನ ಹಾಗೇ ಇದ್ದ ಅನೇಕರು ಅವನನ್ನು ಸುತ್ತುವರಿದು ಇದ್ದರು. ಇಬ್ಬರು ದೇವಸ್ತ್ರೀಯರು ಅವನಿಗೆ ಚಾಮರ ಬೀಸುತ್ತ ಇದ್ದರು. ಆ ಚಾಮರಗಳಿಗೆ ಬಂಗಾರದ ಪಿಡಿ. ಬಹಳ ಬೆಲೆಯವು. ಚಂದ್ರ ಬಿಂಬದಂಥ ಶ್ವೇತಛತ್ರ ಬಿಳಿಯ ಮೋಡದಂತೆ ಹೊಳೆಯುತ್ತ ಇತ್ತು. ಅದಕ್ಕೆ ಬಣ್ಣಬಣ್ಣದ ಹೂಮಾಲೆಗಳನ್ನು ಹಾಕಿದ್ದರು. ಹತ್ತಿರದಲ್ಲಿಯೇ ಹಸಿರು ಬಣ್ಣದ ಕುದುರೆಗಳನ್ನು ಕಟ್ಟಿ ಬಾಲಸೂರ್ಯನ ಹಾಗೆ ಹೊಳೆಯುವ ರಥ. ದೇವೇಂದ್ರ ಇಳಿದು ಬರುವಾಗ ದೇವತೆಗಳು ಸಿದ್ಧರು ಮಹರ್ಷಿಗಳು ವೇದವಾಕ್ಯಗಳಿಂದ ಅವನನ್ನು ಹೊಗಳುತ್ತ ಇದ್ದರು.

ದಿವ್ಯಪುರುಷ ದೇವೇಂದ್ರ ಶರಭಂಗಋಷಿಯ ಸಂಗಡ ಮಾತು ಆಡುತ್ತ ಇದ್ದ. ರಾಮ ಅದನ್ನು ನೋಡಿದ. ಲಕ್ಷ್ಮಣನಿಗೆ ಹೇಳಿದ: "ತಮ್ಮ, ಅಲ್ಲಿ ನೋಡು. ಮಧ್ಯಾಹ್ನದ ಸೂರ್ಯನಂತೆ ಕಣ್ಣು ಕುಕ್ಕುವ ಆ ರಥವನ್ನು ನೋಡು. ಅದರ ತೇಜಸ್ಸೋ ಕಾಂತಿಯೋ! ಹಸಿರು ಬಣ್ಣದ ಕುದುರೆಗಳನ್ನು ಕಟ್ಟಿದ್ದಾರೆ ಆ ರಥಕ್ಕೆ. ಇಂದ್ರನ ಕುದುರೆಗಳ ವಿಷಯವನ್ನು ಕೇಳಿದ್ದೆವಲ್ಲ.

ಇವೇ, ಸಂದೇಹ ಇಲ್ಲ. ರಥದ ಸುತ್ತ ಕತ್ತಿ ಹಿಡಿದು ನಿಂತ ದೇವತೆಗಳನ್ನು ನೋಡು. ಎಲ್ಲರೂ ಯುವಕರು. ಯಾರಿಗೂ ಇಪ್ಪತ್ತೈದಕ್ಕೆ ಮೀರಿ ಇಲ್ಲ ವಯಸ್ಸು. ದೀರ್ಘಬಾಹು, ವಿಶಾಲವಕ್ಷ. ಮೈಮೇಲೆ ಕೆಂಪುಬಟ್ಟೆ. ಕಿವಿಯಲ್ಲಿ ಕರ್ಣಕುಂಡಲಗಳು, ಎದೆಯ ಮೇಲೆ ಅಗ್ನಿಯಂತೆ ಬೆಳಗುವ ಮಣಿಹಾರ. ಒಬ್ಬೊಬ್ಬರೂ ಹುಲಿಯ ಹಾಗೆ ದುರಾಸದರು. ಎಲ್ಲರೂ ಪ್ರಿಯದರ್ಶನರು. ಲಕ್ಷ್ಮಣ, ನಾನು ಆಶ್ರಮದ ಒಳಕ್ಕೆ ಹೋಗಿ ಈ ತೇಜಸ್ವಿ ಯಾರೋ ನೋಡಿಕೊಂಡು ಬರುತ್ತೇನೆ. ಅಲ್ಲಿಯವರೆಗೆ ನೀನೂ ಸೀತೆಯೂ ಇಲ್ಲೇ ಇರಿ."

ಆಶ್ರಮಕ್ಕೆ ಬರುತ್ತ ಇದ್ದ ರಾಮನನ್ನು ನೋಡಿದ ದೇವೇಂದ್ರ. ಶರಭಂಗ ಮಹರ್ಷಿಗೆ ಹೇಳಿದ ಕಿವಿಯಲ್ಲಿ. "ಅದೋ, ರಾಮ ಬರುತ್ತ ಇದಾನೆ. ನಾನು ಹೊರಟು ಹೋಗಬೇಕು. ಆತ ಒಂದು ಮಹಾಕಾರ್ಯ ಮಾಡಲು ಇಲ್ಲಿಗೆ ಬಂದು ಇದಾನೆ. ಆ ಕೆಲಸ ಆಗುವ ಮೊದಲು ನಾನು ಕಾಣಿಸಿಕೊಳ್ಳಬಾರದು. ಆ ಕೆಲಸ ಮುಗಿದಮೇಲೆ ಆತನನ್ನು ನೋಡುತ್ತೇನೆ. ಈಗ ಕೂಡದು." ಹೀಗೆ ಹೇಳಿ ಶರಭಂಗ ಋಷಿಯನ್ನು ಸತ್ಕರಿಸಿ ತನ್ನ ರಥ ಏರಿ ಹೊರಟುಹೋದ ದೇವೇಂದ್ರ. ಇದನ್ನು ನೋಡಿ ರಾಮ ಹಿಂದಕ್ಕೆ ಬಂದ. ಸೀತೆಯನ್ನೂ ಲಕ್ಷ್ಮಣನನ್ನೂ ಕರೆದುಕೊಂಡು ಮತ್ತೆ ಆಶ್ರಮಕ್ಕೆ ಬಂದ.

ಶರಭಂಗಮಹರ್ಷಿ ಅಗ್ನಿಯ ಉಪಾಸನೆ ಮಾಡುತ್ತ ಇದ್ದರು. ರಾಮ ಆ ಋಷಿಗೆ ಪಾದ ಹಿಡಿದು ನಮಸ್ಕರಿಸಿದ. ಸೀತಾಲಕ್ಷ್ಮಣರೂ ಹಾಗೇ ಮಾಡಿದರು. ಅವರನ್ನು ಸತ್ಕರಿಸಿ ಕುಳಿತುಕೊಳ್ಳಲು ಹೇಳಿದ ಮಹರ್ಷಿ. "ಈಗತಾನೆ ದೇವೇಂದ್ರ ಬಂದಿದ್ದ ಇಲ್ಲಿಗೆ. ಅಲ್ಲವೆ? ಏಕೆ ಬಂದ?" ಎಂದು ರಾಮ ಕೇಳಿದ. "ರಾಮ, ತಪಸ್ಸಿದ್ಧರಲ್ಲದವರಿಗೆ ಸಿಗಲಾರದ ಬ್ರಹ್ಮಲೋಕ ನನ್ನ ತಪಸ್ಸಿನಿಂದ ನನಗೆ ಲಭಿಸಿದೆ. ಬ್ರಹ್ಮಲೋಕಕ್ಕೆ ನನ್ನನ್ನು ಕರೆದೊಯ್ಯಲು ಬಂದ ಇಂದ್ರ. ಅಷ್ಟರಲ್ಲಿ ನೀನು ಇಲ್ಲಿಗೆ ಬಂದದ್ದು ನನಗೆ ತಿಳಿಯಿತು. ಪ್ರಿಯ ಅತಿಥಿ ಆದ ನಿನ್ನನ್ನು ನೋಡಿ ಸತ್ಕರಿಸದೆ ಹೋಗುವುದು ಸರಿ ಅಲ್ಲ ಎಂದು ಇಂದ್ರನ ಜೊತೆಯಲ್ಲಿ ಹೋಗದೆ ನಿಂತೆ. ನೀನು ಪರಮಧಾರ್ಮಿಕ, ಮಹಾತ್ಮ. ನಿನ್ನನ್ನು ಕಂಡಮೇಲೇ ಬ್ರಹ್ಮಲೋಕಕ್ಕೆ ಹೋಗುವುದು ಎಂದುಕೊಂಡೆ. ನನ್ನ ತಪಸ್ಸಿನಿಂದ ಸ್ವರ್ಗಲೋಕ ಬ್ರಹ್ಮಲೋಕಗಳ ಅಕ್ಷಯ ಪುಣ್ಯವನ್ನು ಗಳಿಸಿದೆ. ಅದನ್ನು ಎಲ್ಲಾ ನಿನಗೆ ಕೊಡುತ್ತೇನೆ, ರಾಮ" ಎಂದ ಶರಭಂಗಋಷಿ.

ರಾಮ ಸರ್ವಶಾಸ್ತ್ರವಿಶಾರದ. "ಮಹರ್ಷಿ, ನನಗೆ ಈಗ ಬೇಕಾದ್ದು ಈ ಕಾಡಿನಲ್ಲಿ ನಿವಾಸಯೋಗ್ಯ ಸ್ಥಾನ. ಅದನ್ನು ನನಗೆ ತೋರಿಸಿಕೊಟ್ಟರೆ ಸಾಕು" ಎಂದ.

ರಾಮ ದೇವೇಂದ್ರನಿಗೆ ಸಮ ಎಂದು ಶರಭಂಗಋಷಿಗೆ ಗೊತ್ತು. ಆತ ಬಹಳ ಪ್ರಾಜ್ಞ. "ರಾಮ, ಇಲ್ಲಿಗೆ ಬಹಳ ದೂರ ಇಲ್ಲ. ಮಹರ್ಷಿ ಸುತೀಕ್ಷ್ಣ ಇದ್ದಾನೆ. ಆತ ಮಹಾತೇಜಸ್ವಿ, ಧರ್ಮನಿರತ, ಧರ್ಮಪ್ರವರ್ತಕ. ನಿನಗೆ ಆತ ಒಳ್ಳೆಯದನ್ನು ಮಾಡುತ್ತಾನೆ. ಆತನ ಬಳಿಗೆ ನೀನು ಹೋಗು. ಮನೋಹರ ನಿರ್ಮಲ ಸ್ಥಾನವನ್ನು ವಾಸಕ್ಕೆ ನಿನಗೆ ತೋರಿಸಿಕೊಡುತ್ತಾನೆ. ಇಲ್ಲಿ ಹರಿಯುವ ಮಂದಾಕಿನೀ ನದಿಗೆ ಇದಿರು ದಿಕ್ಕಿನಲ್ಲಿ ಪಶ್ಚಿಮದ ಕಡೆಗೆ ಹೋಗು. ನದಿಯಲ್ಲಿ ತೆಪ್ಪದಂತೆ ದಟ್ಟ ಆಗಿ ತೇಲುತ್ತ ಇವೆ ಹೂಗಳು. ಆ ದಾರಿಯಲ್ಲೇ ಹೋದರೆ ಸುತೀಕ್ಷ್ಣ ಆಶ್ರಮ ಸಿಗುತ್ತದೆ.

"ರಾಮ, ಒಂದು ಗಳಿಗೆ ನೀನು ಇಲ್ಲಿಯೇ ಇರು. ಹಾವು ಪೊರೆಯನ್ನು ಬಿಡುವಂತೆ ಈ ಜೀರ್ಣದೇಹವನ್ನು ನಾನು ಬಿಟ್ಟು ಹೋಗುತ್ತೇನೆ. ನೋಡು" ಎಂದು ಹೇಳಿದ.

ಆಮೇಲೆ ಆ ತೇಜೋವಂತ ಮಂತ್ರವೇತ್ತ ಶರಭಂಗಋಷಿ ಮಂತ್ರ ಉಚ್ಚಾರಣೆಮಾಡಿ ಅಗ್ನಿಯನ್ನು ಸಂಸ್ಕರಿಸಿದ. ಅದರಲ್ಲಿ ಆಜ್ಯವನ್ನು ಹೋಮ ಮಾಡಿದ. ತರುವಾಯ ತಾನೇ ಆ ಅಗ್ನಿಯಲ್ಲಿ ಪ್ರವೇಶಿಸಿದ. ಆ ಮಹಾತ್ಮನ ರೋಮ ಕೇಶಗಳನ್ನೂ ಜೀರ್ಣ ಆದ ಚರ್ಮ ಅಸ್ಥಿ ರಕ್ತಮಾಂಸಗಳನ್ನೂ ಅಗ್ನಿ ಬೂದಿಮಾಡಿತು. ಸೀತಾರಾಮಲಕ್ಷ್ಮಣರು ಮೂವರೂ ಅಚ್ಚರಿಗೊಂಡು ನೋಡುತ್ತ ನಿಂತರು. ಆಗ ಅಗ್ನಿಯಂತೆ ಹೊಳೆಹೊಳೆಯುತ್ತ ಮೂವತ್ತು ವರ್ಷದ ಯುವಕನ ಹಾಗೆ ಶರಭಂಗಋಷಿ ಅಗ್ನಿಯಿಂದ ಎದ್ದುಬಂದ. ಆ ದಿವ್ಯದೇಹದಿಂದ ಅಂತರಿಕ್ಷದ ಕಡೆ ಹೊರಟುಹೋದ.

ಆಹಿತಾಗ್ನಿಗಳ ಮಹಾತ್ಮರ ಋಷಿಗಳ ಲೋಕಗಳನ್ನು ದಾಟಿಹೋದ ಮಹರ್ಷಿ. ದೇವಲೋಕವನ್ನೂ ದಾಟಿ ಬ್ರಹ್ಮಲೋಕಕ್ಕೆ ಹೋದ. ಅಲ್ಲಿ ಸಪರಿವಾರ ಆದ ಬ್ರಹ್ಮದೇವನನ್ನು ಕಂಡ ಬ್ರಾಹ್ಮಣೋತ್ತಮ ಶರಭಂಗ. ಬ್ರಹ್ಮದೇವನಿಗೂ ಋಷಿಯನ್ನು ಕಂಡು ಸಂತೋಷ ಆಯಿತು.

೬

ಶರಭಂಗಋಷಿ ಬ್ರಹ್ಮಲೋಕಕ್ಕೆ ಹೋದಮೇಲೆ ಆ ಮಹಾರಣ್ಯದಲ್ಲಿ ಇದ್ದ ಋಷಿಗಳು ಎಲ್ಲರೂ ಗುಂಪು ಆಗಿ ತೇಜಸ್ವಿ ಆದ ರಾಮನ ಬಳಿಗೆ ಬಂದರು. ಎಲ್ಲರೂ ಒಂದೊಂದು ಕಠಿನ ವ್ರತವನ್ನು ಹಿಡಿದವರು. ವೈಖಾನಸರು ವಾಲಖಿಲ್ಯರು, ದೇಹದ ಒಳಭಾಗವನ್ನು ಶುದ್ಧಿಮಾಡುವವರು, ಕಿರಣಪಾನ ದಿಂದಲೇ ಬದುಕುವವರು, ಎಲೆಗಳನ್ನು ತಿಂದು ಬದುಕುವವರು, ಕೆಲವರು ಜಲಭಕ್ಷಕರು. ನೆಲವೇ ಕೆಲವರಿಗೆ ಹಾಸಿಗೆ. ಕೆಲವರಿಗೆ ಗಾಳಿಯೇ ಆಹಾರ. ಕೆಲವರು ನೀರಿನೊಳಗೆ ಮುಳುಗಿ ತಪಸ್ಸುಮಾಡುವವರು. ಕೆಲವರು ಪಂಚಾಗ್ನಿ ಮಧ್ಯೆ. ಕೆಲವರು ಯೋಗಬಲದಿಂದ ಅಂತರಾಳದಲ್ಲಿ ನಿಂತು ತಪಸ್ಸು ಮಾಡು ವವರು. ಕೆಲವರದು ನಿತ್ಯೋಪವಾಸ—ಹೀಗೆ ತೀಕ್ಷ್ಣ ತಪಸ್ಸು ಮಾಡುತ್ತ ಇದ್ದ ಬ್ರಹ್ಮತೇಜೋವಂತ ತಪಸ್ವಿಗಳು ಧರ್ಮಜ್ಞರು ಶರಭಂಗ ಆಶ್ರಮದಲ್ಲಿ ಸೇರಿದರು.

ಧರ್ಮಜ್ಞ, ಧರ್ಮಮೂರ್ತಿಗಳಲ್ಲಿ ಶ್ರೇಷ್ಠ ಆದ ರಾಮನನ್ನು ಎಲ್ಲರೂ ಕಂಡರು. "ದೇವೇಂದ್ರ ದೇವತೆಗಳಿಗೆ ಶ್ರೇಷ್ಠ. ರಾಮ, ನೀನು ಇಕ್ಷ್ವಾಕು ಕುಲಕ್ಕೇ ಶ್ರೇಷ್ಠ. ಭೂಲೋಕಕ್ಕೆ ಪ್ರಭು. ನಿನ್ನ ಕೀರ್ತಿ ಮೂರು ಲೋಕ ಗಳಲ್ಲೂ ಹಬ್ಬಿ ಇದೆ. ಮಹಾಪಿತೃಭಕ್ತ ನೀನು. ಸತ್ಯಸಂಧ, ಧರ್ಮಿಷ್ಠ. ಎಲ್ಲ ಧರ್ಮಗಳಿಗೂ ನೀನೇ ನೆಲೆ. ನೀನು ಆಶ್ರಿತವತ್ಸಲ. ನಿನ್ನಲ್ಲಿ ನಮ್ಮದು ಒಂದು ಪ್ರಾರ್ಥನೆ. ಅದನ್ನು ಮನ್ನಿಸಬೇಕು.

"ಲೋಕದಲ್ಲಿ ಉತ್ಪತ್ತಿಯಲ್ಲಿ ಷಷ್ಠಾಂಶವನ್ನು ಮಾತ್ರ ರಾಜ ತೆಗೆದು ಕೊಳ್ಳಬೇಕು. ಪ್ರಜೆಗಳನ್ನು ಮಕ್ಕಳ ಹಾಗೆ ಕಾಪಾಡಬೇಕು. ಇಲ್ಲದೆ ಇದ್ದರೆ ಅವನಿಗೆ ಅಧೋಗತಿ ತಪ್ಪದು. ಸದಾ ಎಚ್ಚರಿಕೆಯಿಂದ ಸಮಸ್ತ ಪ್ರಯತ್ನಗಳನ್ನೂ ಮಾಡಿ ದೇಶದ ಪ್ರಜೆಗಳು ಎಲ್ಲರ ಪ್ರಾಣಗಳನ್ನೂ ತನ್ನ ಪ್ರಾಣದ ಹಾಗೇ ಕಾಪಾಡುವ ದೊರೆ ಇಲ್ಲಿ ಶಾಶ್ವತ ಕೀರ್ತಿ ಪಡೆಯುತ್ತಾನೆ. ಸತ್ತಮೇಲೆ ಸ್ಥಿರ ಬ್ರಹ್ಮಲೋಕವನ್ನು ಪಡೆಯುತ್ತಾನೆ.

"ಫಲಮೂಲಾಹಾರಿಗಳು ಋಷಿಗಳು. ಅವರು ತೆರಿಗೆ ಕೊಡಲಾರರು. ಅವರು ಗಳಿಸಿದ ಪುಣ್ಯದಲ್ಲಿ ನಾಲ್ಕರಲ್ಲಿ ಒಂದು ಪಾಲು ಧರ್ಮಿಷ್ಠ ರಾಜನಿಗೆ

ಸಲ್ಲುತ್ತದೆ. ನಮ್ಮ ಗುಂಪಿನಲ್ಲಿ ಬ್ರಾಹ್ಮಣರೇ ಹೆಚ್ಚು. ಎಲ್ಲರೂ ವಾನಪ್ರಸ್ಥರು. ಎಲ್ಲರಿಗೂ ಪ್ರಭು ನೀನು ಇಲ್ಲಿಯೇ ಇದ್ದರೂ ದುಷ್ಟ ರಾಕ್ಷಸರ ಕೈಗೆ ಸಿಕ್ಕಿ ನಾವು ಸಾಯುತ್ತ ಇದೇವೆ. ಅನಾಥರು ಆಗಿದೇವೆ. ರಾಕ್ಷಸರ ಬಾಧೆಗೆ ತುತ್ತು ಆದ ಮುನಿಗಳ ದೇಹರಾಶಿಯನ್ನು ತೋರಿಸುತ್ತೇವೆ ಬಾ. ಮಂದಾಕಿನೀ ತೀರಕ್ಕೂ ಪಂಪಾತೀರಕ್ಕೂ ಚಿತ್ರಕೂಟ ಪ್ರಾಂತಕ್ಕೂ ಗುಂಪುಕಟ್ಟಿಕೊಂಡು ಬಂದು ರಾಕ್ಷಸರು ಇಲ್ಲಿ ಇರುವ ಋಷಿಗಳನ್ನು ಚಿತ್ರಹಿಂಸೆ ಮಾಡಿ ಕೊಲ್ಲುತ್ತ ಇದಾರೆ. ಈ ಉಪಟಳವನ್ನು ಸೈರಿಸುವುದು ನಮಗೆ ಸಾಧ್ಯ ಅಲ್ಲ.

"ನೀನು ಸರ್ವಲೋಕಶರಣ್ಯ. ನಿನ್ನನ್ನು ಮರೆಹೊಕ್ಕಿದೇವೆ. ನಮ್ಮನ್ನು ಕಾಪಾಡು. ನಿನ್ನ ಹೊರತು ಈ ಲೋಕದಲ್ಲಿ ನಮಗೆ ಬೇರೆ ದಿಕ್ಕು ಇಲ್ಲ. ಪ್ರಭು, ರಾಕ್ಷಸರ ಬಾಧೆಯಿಂದ ನಮ್ಮನ್ನು ಕಾಪಾಡು" ಎಂದು ಪ್ರಾರ್ಥಿಸಿದರು ಆ ಋಷಿಗಳು ಎಲ್ಲರೂ.

ತಪೋಧನರು ಆದ ಆ ಋಷಿಗಳು ಹೇಳಿದುದನ್ನು ಕೇಳಿದ ರಾಮ. "ಮಹಾತ್ಮರೆ, ನೀವು ನನಗೆ ಅಪ್ಪಣೆ ಮಾಡಬೇಕೇ ವಿನಾ ನನ್ನನ್ನು ಪ್ರಾರ್ಥಿಸಬಾರದು. ನಾನು ಕಾಡಿಗೆ ಬಂದದ್ದು ಸ್ವಕಾರ್ಯಕ್ಕಾಗಿ. ಪಿತೃವಾಕ್ಯ ಪರಿಪಾಲನೆಗೆ ಎಂದು ಬಂದೆ. ಇಲ್ಲಿ ನಿಮ್ಮ ಅಪ್ಪಣೆ ಆಯಿತು. ನಿಮ್ಮ ಇಷ್ಟದಂತೆ ದುಷ್ಟಶಿಕ್ಷಣ ಮಾಡುತ್ತೇನೆ. ನಿಮಗೆ ರಾಕ್ಷಸರ ಬಾಧೆ ತಪ್ಪಿಸಿದರೆ ನನಗೆ ಇನ್ನೊಂದು ಫಲವೂ ಸಿಗುತ್ತದೆ, ಸತ್ಫಲ. ಮಹಾತ್ಮರೆ, ತಪೋಧನರೆ, ನನ್ನ ವೀರ್ಯವನ್ನೂ ನನ್ನ ತಮ್ಮನ ಪರಾಕ್ರಮವನ್ನೂ ನೋಡಿ." ಹೀಗೆ ಅವರಿಗೆ ಅಭಯ ನೀಡಿದ ರಾಮ.

ಮುಂದೆ ಸೀತಾಲಕ್ಷ್ಮಣಸಮೇತ ಸುತೀಕ್ಷ್ಣ ಆಶ್ರಮಕ್ಕೆ ಹೊರಟ.

೭

ಸೀತಾಲಕ್ಷ್ಮಣರ ಸಂಗಡ ಸುತೀಕ್ಷ್ಣ ಆಶ್ರಮಕ್ಕೆ ಹೊರಟ. ವೈಖಾನಸಾದಿ ಬ್ರಾಹ್ಮಣರೂ ಬಂದರು. ಪಯಣ ದೂರ ಸಾಗಿತು. ಎಷ್ಟೋ ನದಿಗಳನ್ನು ದಾಟಿದರು. ಅಲ್ಲಿ ಒಂದು ಎತ್ತರ ಆದ ಪರ್ವತ. ಮಹಾಮೇಘದಂತೆ. ಅದರ ತಪ್ಪಲಿನಲ್ಲಿ ಫಲಪುಷ್ಪ ತುಂಬಿದ ಗಿಡಮರಗಳ ಗೊಂಡಾರಣ್ಯ. ಆದರಲ್ಲಿ

ಒಂದು ಏಕಾಂತಸ್ಥಳ. ಅಲ್ಲಿ ಒಂದು ಪುಣ್ಯಾಶ್ರಮ. ಅದರ ಮುಂಬೆ ಒಣಗ ಹಾಕಿದ ನಾರುಮಡಿಗಳ ಸಾಲು. ಅಲ್ಲಿಗೆ ಹೋದರು ಎಲ್ಲರೂ.

ಬಹುಕಾಲದಿಂದಲೂ ತಪಸ್ಸು ಮಾಡುತ್ತ, ಮೈ ಎಲ್ಲಾ ಕೊಳೆ ಆಗಿ ತಲೆ ಎಲ್ಲಾ ಜಡೆ ಆಗಿ, ಆಗಲೂ ತಪಸ್ಸಿನಲ್ಲಿಯೆ ಇದ್ದ ಸುತೀಕ್ಷ್ಣ ಮಹಾ ಮುನಿ ಆಶ್ರಮದಲ್ಲಿ ಕುಳಿತಿದ್ದ. "ಮಹಾತ್ಮ, ಸಮಸ್ತ ಧರ್ಮಗಳನ್ನೂ ತಿಳಿದ ಮಹರ್ಷಿ ನೀನು. ನಿನ್ನ ತಪೋಮಹಿಮೆ ಅದ್ಭುತ. ನಿನ್ನ ದರ್ಶನಕ್ಕೆ ಎಂದೇ ಇಲ್ಲಿಗೆ ಬಂದೆ ನಾನು. ನನ್ನ ಹೆಸರು ರಾಮ. ನನ್ನನ್ನು ಆಶೀರ್ವದಿಸ ಬೇಕು" ಎಂದ ರಾಮ.

ಒಡನೆಯೆ ಕಣ್ಣು ತೆರೆದ ಮಹರ್ಷಿ. ಮಹಾಶೂರ, ಪರಮಧರ್ಮಿಷ್ಠ ಆದ ರಾಮನನ್ನು ಬರಸೆಳೆದು ಬಿಗಿದು ಅಪ್ಪಿದ. "ರಾಮಾ, ನಿನಗೆ ಸ್ವಾಗತ. ನಿನಗೆ ಮಂಗಳ ಆಗಲಿ. ನಮ್ಮ ಆಶ್ರಮ ಇನ್ನು ಸನಾಥ ಆಯಿತು, ನೀನು ಬಂದದ್ದರಿಂದ. ಮಹಾಯಶ! ನಿನಗಾಗಿಯೆ ನಾನು ಕಾದು ಇದ್ದೆ. ಪರ-ಲೋಕ ಪ್ರಯಾಣಕ್ಕೆ ಸಿದ್ಧ ನಾನು. ನಿನ್ನನ್ನು ನೋಡದೆ ಈ ದೇಹವನ್ನು ಬಿಟ್ಟು ಹೋಗಬಾರದು ಎಂದು ತಡೆದು ನಿಂತೆ. ನೀನು ಚಿತ್ರಕೂಟಕ್ಕೆ ಬಂದ ಕೂಡಲೆ ನಿನ್ನ ರಾಜ್ಯಭ್ರಂಶ ವೃತ್ತಾಂತ ತಿಳಿಯಿತು. ಆಮೇಲೆ ನಡೆದುದು ಎಲ್ಲವೂ ಗೊತ್ತು. ದೇವೇಂದ್ರ ಇಲ್ಲಿಗೆ ಬಂದು ಹೋದ. ತಪೋಮಹಿಮೆ ಯಿಂದ ಸಮಸ್ತ ಪುಣ್ಯಲೋಕಗಳೂ ನನಗೆ ವಶ ಆಗಿವೆ ಎಂದು ಹೇಳಿದ. ಅವು ಎಲ್ಲವನ್ನೂ ನಿನಗೆ ಕೊಡುತ್ತೇನೆ. ಸೀತಾಲಕ್ಷ್ಮಣರ ಸಮೇತ ನೀನು ಅಲ್ಲಿ ವಿಹರಿಸು" ಎಂದ ಸುತೀಕ್ಷ್ಣ.

ಉಗ್ರತಪಸ್ವಿ ಸತ್ಯವಾದಿ ಆದ ಸುತೀಕ್ಷ್ಣನ ಮಾತನ್ನು ಕೇಳಿದ ರಾಮ ಬ್ರಹ್ಮದೇವನಿಗೆ ಕಾಶ್ಯಪ ಬಿನ್ನಯಿಸುವಂತೆ ವಿನಯದಿಂದ ಹೇಳಿದ: "ಮಹರ್ಷಿ, ನಾನೇ ಸ್ವಪ್ರಯತ್ನದಿಂದ ಆ ಲೋಕಗಳನ್ನು ಸಂಪಾದಿಸಿಕೊಳ್ಳುತ್ತೇನೆ. ಈ ಅರಣ್ಯದಲ್ಲಿ ನಾವು ವಾಸಮಾಡಲು ಒಂದು ಸ್ಥಾನವನ್ನು ತೋರಿಸಿದರೆ ಸಾಕು ನನಗೆ. ನಿಮ್ಮ ಮಹಾಸಾಮರ್ಥ್ಯ ಸರ್ವಭೂತದಯಾಪರತೆಗಳನ್ನು ಗೌತಮ ವಂಶದ ಶರಭಂಗಋಷಿ ನನಗೆ ಹೇಳಿದಾನೆ."

ಲೋಕವಿಖ್ಯಾತ ಸುತೀಕ್ಷ್ಣ ಮಹದಾನಂದದಿಂದ ಹೇಳಿದ: "ರಾಮ, ಈ ಆಶ್ರಮವೇ ನಿನ್ನ ವಾಸಕ್ಕೆ ಅತ್ಯುತ್ತಮ ಸ್ಥಾನ. ಇಲ್ಲಿ ಅನೇಕ ಋಷಿಗಳು

ಇದಾರೆ. ಹಣ್ಣುಹಂಪಲುಗಳು ಗಡ್ಡೆಗೆಣಸು ಯಥೇಷ್ಟ ಯಾವಾಗಲೂ. ಮಹಾಯಶಾ! ಇಲ್ಲಿಗೆ ನಾನಾ ಮೃಗಗಳು ಬಂದು ನಿರ್ಭಯದಿಂದ ತಿರುಗಾಡುತ್ತವೆ. ಇಲ್ಲಿ ಇರುವ ಋಷಿಗಳ ತಪೋಭಂಗ ಮಾಡುತ್ತವೆ. ಈ ಮೃಗಬಾಧೆ ಅಲ್ಲದೆ ಬೇರೆ ಯಾವ ತೊಂದರೆಯೂ ಇಲ್ಲಿ ಇಲ್ಲ."

ರಾಮ ಕೂಡಲೆ ಹೆದೆ ಏರಿಸಿದ. "ಮಹರ್ಷಿ, ಇಲ್ಲಿಗೆ ಬರುವ ದುಷ್ಟ ಮೃಗಗಳನ್ನು ಕೊಲ್ಲುತ್ತೇನೆ. ನನ್ನ ಬಾಣಗಳು ಮಹಾತೀಕ್ಷ್ಣ, ಸಿಡಿಲಿನಹಾಗೆ ಬೆಳಗುತ್ತವೆ. ಆದರೆ ಇಲ್ಲಿ ಅವನ್ನು ಕೊಂದರೆ ನಿನ್ನ ಮನಸ್ಸಿಗೆ ಕಷ್ಟ ಆಗಬಹುದು. ಇದಕ್ಕಿಂತಲೂ ಹೆಚ್ಚಿನ ದುಷ್ಟ ಕೆಲಸ ಏನು ಇದೆ? ಆದ್ದರಿಂದ ತಮ್ಮ ಆಶ್ರಮದಲ್ಲಿ ಬಹಳ ಕಾಲ ತಂಗಲು ನನಗೆ ಇಷ್ಟ ಇಲ್ಲ." ಋಷಿಯ ಅಪ್ಪಣೆ ಪಡೆದು ಸಾಯಂಸಂಧ್ಯೆ ಮಾಡಲು ಹೋದ ರಾಮ. ಆಶ್ರಮ ತುಂಬಾ ರಮಣೀಯ.

ಆ ರಾತ್ರಿ ಅಲ್ಲೇ ತಂಗಲು ನಿಶ್ಚಯಿಸಿದ. ಕತ್ತಲೆ ಆಗುವ ಮೊದಲೇ ಸುತೀಕ್ಷ್ಣ ಋಷಿ ತಾನೇ ಆಹಾರವನ್ನು ತಂದುಕೊಟ್ಟ ಸೀತಾರಾಮಲಕ್ಷ್ಮಣರಿಗೆ. ತಪಸ್ವಿಗಳ ಆಹಾರ-ಕಂದಮೂಲಫಲ.

೮

ಆಶ್ರಮದಲ್ಲಿ ರಾತ್ರಿಯನ್ನು ಕಳೆದರು ಸೀತಾರಾಮಲಕ್ಷ್ಮಣರು. ಬೆಳಗ್ಗೆ ಸಕಾಲದಲ್ಲಿ ಎದ್ದು ಸೀತೆಯ ಸಮೇತ ಸ್ನಾನ ಮಾಡಿದರು. ನೀರು ನಿರ್ಮಲ. ಕಮಲದ ಹೂಗಳ ವಾಸನೆ ಗಮಗಮಿಸುತ್ತ ಇತ್ತು. ಬೆಳಗಿನ ಅಗ್ನಿಕಾರ್ಯವೂ ಆಯಿತು. ಶಾಸ್ತ್ರೋಕ್ತ ದೇವತಾರಾಧನೆಯೂ ಮುಗಿಯಿತು. ಆಗ ಸೂರ್ಯ ಮೂಡಿಬಂದ. ಸುತೀಕ್ಷ್ಣನ ಬಳಿಗೆ ಹೋಗಿ ವಿನಯದಿಂದ ಅಪ್ಪಣೆ ಬೇಡಿದರು ಮುಂದಿನ ಪಯಣಕ್ಕೆ ರಾಮಲಕ್ಷ್ಮಣರು.

"ಮಹಾತ್ಮ, ನಿನ್ನ ಸತ್ಕಾರದಿಂದ ಸಂತೋಷ ಆಯಿತು. ರಾತ್ರಿ ಹಾಯಿ ಆಗಿ ಕಳೆಯಿತು. ನಿಮ್ಮನ್ನು ಬೀಳುಕೊಳ್ಳಲು ಬಂದೆವು. ನಮ್ಮ ಜೊತೆಯಲ್ಲಿ ಬಂದ ಋಷಿಗಳು ಬಹಳ ಒತ್ತಾಯ ಮಾಡಿದಾರೆ. ದಂಡಕಾರಣ್ಯದಲ್ಲಿ ಇರುವ ಎಲ್ಲಾ ಪುಣ್ಯಾಶ್ರಮಗಳನ್ನೂ ನೋಡಲು ಬಯಸಿದೇವೆ. ಪರಮ

ಧಾರ್ಮಿಕರೂ ತಪಸ್ವಿಗಳೂ ಜಿತೇಂದ್ರಿಯರೂ ಉರಿ ಇಲ್ಲದ ಕೆಂಡದಂತೆ ಹೊಳೆಯುವವರೂ ಆದ ಈ ಋಷಿಗಳೂ ಕೂಡ ನಿಮ್ಮ ಅಪ್ಪಣೆಗೆ ಕಾದು ಇದಾರೆ. ಸೂರ್ಯ ನೆತ್ತಿಗೆ ಏರಿದಮೇಲೆ ದುರ್ಮಾರ್ಗದಿಂದ ಹಣ ಬಂದವನ ಹಾಗೆ ತಾಪ ಕೊಡುತ್ತಾನೆ. ಅದಕ್ಕೆ ಮೊದಲೇ ಪ್ರಯಾಣ ಮಾಡಿದರೆ ಒಳ್ಳೆಯದು."

ಮೂವರೂ ಋಷಿಗೆ ನಮಸ್ಕಾರ ಮಾಡಿದರು. ಸ್ನೇಹಾತಿಶಯದಿಂದ ರಾಮಲಕ್ಷ್ಮಣರನ್ನು ಮೇಲೆ ಎತ್ತಿ ಸುತೀಕ್ಷ್ಣ ಋಷಿ ಅಪ್ಪಿಕೊಂಡ. "ರಾಮ, ನೆರಳಿನಂತೆ ನಿನ್ನನ್ನು ಹಿಂಬಾಲಿಸುತ್ತ ಇರುವ ಸೀತೆಯನ್ನೂ ಲಕ್ಷ್ಮಣನನ್ನೂ ಕರೆದೊಯ್. ನಿನ್ನ ದಾರಿ ನಿರುಪದ್ರವ ಆಗಲಿ. ಆತ್ಮಧ್ಯಾನಪರಾಯಣರು ಅನೇಕ ಋಷಿಗಳು ಇದಾರೆ ದಂಡಕಾರಣ್ಯದಲ್ಲಿ. ಅವರನ್ನು ನೋಡಿ ಬಾ. ಅವರ ಆಶ್ರಮಗಳು ಬಲು ಮನೋಹರ. ಅಲ್ಲಿ ಫಲಮೂಲಗಳು ಯಥೇಷ್ಟ. ಫಲಪುಷ್ಪಭರಿತ ವೃಕ್ಷಗಳು ಸಮೃದ್ಧಿ. ಗುಂಪು ಗುಂಪು ಮೃಗಗಳು. ಪರಸ್ಪರ ವೈರವಿಲ್ಲದ ಪಕ್ಷಿಗಣ. ಕೆರೆಗಳಲ್ಲಿ ಬಿರಿದು ಅರಳಿದ ಕಮಲಗಳು. ತಿಳಿನೀರು. ಗಿರಿನದಿಗಳು. ನೀರಿನಲ್ಲಿ ಆಡುವ ಕೋಳಿ. ಬನದಲ್ಲಿ ಕೂಗುವ ನವಿಲು. ಆ ಕಾಡು ಬಲು ರಮಣೀಯ. ಹೋಗಿ ಬನ್ನಿ, ರಾಮ. ನೀನೂ ಲಕ್ಷ್ಮಣ. ನೋಡಿ ಹಿಂದಿರುಗಿ ಮತ್ತೆ ಬನ್ನಿ ಇಲ್ಲಿಗೆ" ಎಂದ.

ಆಗಲಿ ಎಂದು ಒಪ್ಪಿ ಸೀತಾರಾಮಲಕ್ಷ್ಮಣರು ಮಹರ್ಷಿಗೆ ಪ್ರದಕ್ಷಿಣೆ ಮಾಡಿದರು. ಪಯಣಕ್ಕೆ ಸಿದ್ಧರು ಆದರು. ಆಗ ಬೊಗಸೆಗಣ್ಣಿನ ಸೀತೆ ಆ ಅಣ್ಣತಮ್ಮಂದಿರಿಗೆ ಬಿಲ್ಲುಬತ್ತಳಿಕೆ ಕತ್ತಿಗಳನ್ನು ತಂದುಕೊಟ್ಟಳು. ಹೆಗಲಿಗೆ ಬತ್ತಳಿಕೆಗಳನ್ನು ಏರಿಸಿ ಬಿಲ್ಲನ್ನು ಹಿಡಿದು ಟಂಕಾರಮಾಡುತ್ತ ಹೊರಟರು ರಾಮಲಕ್ಷ್ಮಣರು. ಅವರ ತೇಜಸ್ಸೋ ರೂಪಾತಿಶಯವೋ ಮೈಹೊಳಪೋ!

೬

ಸುತೀಕ್ಷ್ಣ ಮಹಾಮುನಿಯ ಅಪ್ಪಣೆ ಪಡೆದು ರಾಮ ಹೊರಟ. ಆಗ ಸೀತೆ ಸ್ನೇಹದಿಂದ ಹೃದಯಂಗಮ ಆಗಿ ರಾಮನನ್ನು ಕೇಳಿದಳು. "ಪ್ರಭು, ತಾವು ನಡೆಸುತ್ತ ಇರುವ ತಾಪಸಧರ್ಮ ಬಹಳ ಶ್ರೇಷ್ಠ. ಬಹಳ ಸೂಕ್ಷ್ಮ

ದೃಷ್ಟಿ ಬೇಕು ಇವಕ್ಕೆ. ಕಾಮದಿಂದ ಹುಟ್ಟುವ ವ್ಯಸನಗಳನ್ನು ತ್ಯಜಿಸಿದರೆ ಮಾತ್ರ ಈ ಧರ್ಮ ಸಾಧ್ಯ. ಲೋಕದಲ್ಲಿ ಮೂರು ಬಗೆಯವು ಈ ಕಾಮದಿಂದ ಹುಟ್ಟುವ ವ್ಯಸನ. ಮೂರರಲ್ಲಿ ದೊಡ್ಡದು ಮಿಥ್ಯಾಭಾಷಣ. ಅದಕ್ಕಿಂತ ದೊಡ್ಡದು ಪರಸ್ತ್ರೀಗಮನ. ವೈರವೇ ಇಲ್ಲದೆ ನಿಷ್ಕಾರಣ ಆಗಿ ಇತರರನ್ನು ಹಿಂಸಿಸುವುದು ಇನ್ನೂ ದೊಡ್ಡದು.

"ನಾಥ, ಹಿಂದೆ ಎಂದೂ ನೀವು ಸುಳ್ಳು ಆಡಲಿಲ್ಲ. ಮುಂದೆಯೂ ಆಡುವುದು ಇಲ್ಲ. ಧರ್ಮನಾಶ ಮಾಡುವ ಪರಸ್ತ್ರೀಗಮನದ ಆಸೆ ನಿಮಗೆ ಎಳ್ಳಷ್ಟೂ ಇಲ್ಲ. ಯಾವಾಗಲೂ ಇಲ್ಲ. ಅಂಥ ಬುದ್ಧಿಯೇ ನಿಮಗೆ ಹುಟ್ಟದು. ನೀವು ಯಾವಾಗಲೂ ಸ್ವಭಾರ್ಯಾನಿರತರು. ನೀವು ಧರ್ಮನಿಷ್ಠರು, ಸತ್ಯ ಸಂಧರು. ಆದ್ದರಿಂದಲೇ ನೀವು ತಂದೆಯ ಮಾತಿನಂತೆ ನಡೆದಿರಿ. ನೀವು ಶ್ರೀಮಂತರು, ಮಹಾತ್ಮರು. ವಯಸ್ಸಿನಲ್ಲಿ ಹೇಗೋ ವೈರಾಗ್ಯದಲ್ಲೂ ಹಾಗೇ ಲಕ್ಷ್ಮಣನಿಗಿಂತ ದೊಡ್ಡವರು ನೀವು. ಸತ್ಯ ಧರ್ಮ ಎರಡೂ ನಿಮ್ಮಲ್ಲಿ ನೆಲೆಸಿ ಬಿಟ್ಟವೆ. ಸಮಸ್ತ ಗುಣಗಳಿಗೂ ನೀವು ಆಶ್ರಯ. ನಿಮ್ಮಲ್ಲಿ ಇಲ್ಲದ ಗುಣವೇ ಇಲ್ಲ. ಜಿತೇಂದ್ರಿಯರಿಗೆ ಅಲ್ಲದೆ ಇತರರಿಗೆ ಇವು ಸಾಧ್ಯವೇ ಅಲ್ಲ. ನೀವು ಜಿತೇಂದ್ರಿಯರು. ನನಗೆ ಗೊತ್ತು. ನಿಮ್ಮ ರೂಪೇ ಅದಕ್ಕೆ ಸಾಕ್ಷಿ.

"ಸ್ವಾಮಿ, ವೈರವೇ ಇಲ್ಲದೆ ಪ್ರಾಣಿಹಿಂಸೆ ಮಾಡುವುದು ಮಹಾ ರೌದ್ರ ವ್ಯಸನ. ಪರಾಕ್ರಮದ ವ್ಯಾಮೋಹದಿಂದ ಇದು ನಡೆಯುತ್ತದೆ. ದಂಡಕಾರಣ್ಯ ವಾಸಿಗಳು ಆದ ಋಷಿಮುನಿಗಳನ್ನು ಕಾಪಾಡಲು ರಾಕ್ಷಸರನ್ನು ಸಂಹರಿಸುವ ಪ್ರತಿಜ್ಞೆ ಮಾಡಿದಿರಿ. ಅದಕ್ಕಾಗಿಯೇ ಬಿಲ್ಲುಬಾಣ ಹಿಡಿದು ನೀವೂ ನಿಮ್ಮ ತಮ್ಮನೂ ದಂಡಕಾರಣ್ಯಕ್ಕೆ ಹೋಗುತ್ತ ಇದೀರಿ. ನಿಮ್ಮ ಈ ಕೆಲಸವನ್ನೂ ನಿಮ್ಮ ಸತ್ಯಸಂಧತೆ ಪರದಾರವಿಮುಖತೆಯನ್ನೂ ಯೋಚಿಸಿ ನನಗೆ ಬಹಳ ದುಃಖ ಆಗುತ್ತ ಇದೆ. ನನ್ನ ಮನಸ್ಸು ನಿಮ್ಮ ಶ್ರೇಯಸ್ಸನ್ನೇ ಯಾವಾಗಲೂ ಕೋರುತ್ತದೆ. ಇದರಿಂದ ನನಗೆ ವ್ಯಥೆ ಆಗುತ್ತ ಇದೆ.

"ನೀವು ದಂಡಕಾರಣ್ಯಕ್ಕೆ ಹೋಗುವುದು ನನಗೆ ಸ್ವಲ್ಪವೂ ಇಷ್ಟ ಇಲ್ಲ. ಕಾರಣ ಹೇಳುತ್ತೇನೆ, ಕೇಳಿ. ನೀವೂ ನಿಮ್ಮ ತಮ್ಮನೂ ಬಿಲ್ಲು ಬಾಣ ಹಿಡಿದೇ ನಿಂತು ಇದೀರಿ. ರಾಕ್ಷಸರನ್ನು ಕಂಡರೆ ಬಾಣ ಬಿಡುತ್ತೀರಿ. ಹತ್ತಿರ ಸೌದೆ ಇದ್ದರೆ ಬೆಂಕಿಗೆ ಉರಿ ಹೆಚ್ಚು. ಕ್ಷತ್ರಿಯರ ಕೈಯಲ್ಲಿ ಬಿಲ್ಲುಬಾಣ ಇದ್ದರೆ

ಹುರುಷ ಬಹಳ. ಒಂದು ಹಳೆಯ ಕತೆ ಇದೆ. ಒಂದು ಮನೋಹರ ಪುಣ್ಯ ವನ. ಅಲ್ಲಿ ಮೃಗಪಕ್ಷಿಗಳು ಆನಂದದಿಂದ ವಿಹರಿಸುತ್ತ ಇದ್ದವು. ಅಲ್ಲಿ ಒಬ್ಬ ಋಷಿ ತಪಸ್ಸುಮಾಡುತ್ತ ಇದ್ದ. ಆತ ಮಹಾಸತ್ಯಸಂಧ, ಪರಿಶುದ್ಧ. ಆತನ ತಪಸ್ಸಿಗೆ ಅಡ್ಡಿತರಬೇಕು ಎಂದು ಮಹೇಂದ್ರ ಬಂದ. ಒಬ್ಬ ಭಟನ ಹಾಗೆ ಬಂದ. ಅವನ ಕೈಯಲ್ಲಿ ಒಂದು ಕತ್ತಿ. ಮಹೋಗ್ರ ತಪಸ್ಸಿನಲ್ಲಿ ಇದ್ದ ಆ ಋಷಿಯ ಕೈಗೆ ಆ ಕತ್ತಿಯನ್ನು ಕೊಟ್ಟ. ಇದನ್ನು ಬಚ್ಚಿಟ್ಟುಕೊಂಡು ತಾನು ಬಂದು ಕೇಳಿದಾಗ ಕೊಡುವಂತೆ ಪ್ರಾರ್ಥಿಸಿದ. ಋಷಿಯ ಬಳಿ ಆ ಕತ್ತಿ ನ್ಯಾಸ ಆಯಿತು. ನ್ಯಾಸ ವಸ್ತುವನ್ನು ಎಚ್ಚರಿಕೆಯಿಂದ ಕಾಪಾಡ ಬೇಕು ಎಂದು ಯಾವಾಗಲೂ ಆ ಋಷಿ ಕತ್ತಿಯನ್ನು ಸಂಗಡಲೇ ಇಟ್ಟು ಕೊಂಡು ಇದ್ದ. ಕಂದಮೂಲಫಲಗಳನ್ನು ತರಲು ಹೋದರೂ ಅದು ಜೊತೆ ಯಲ್ಲೇ. ಸದಾ ಕೈಯಲ್ಲಿ ಕತ್ತಿ ಇದ್ದುದರಿಂದ ಆ ಋಷಿಗೆ ಕ್ರಮೇಣ ತಪಸ್ಸಿ ನಲ್ಲಿ ರುಚಿ ತಗ್ಗಿತು, ರೌದ್ರ ಬುದ್ಧಿ ಮೆಲ್ಲಮೆಲ್ಲನೆ ಬಂತು. ಮೊದಲಿನ ಧರ್ಮಬುದ್ಧಿಯೇ ಹೋಯಿತು. ಮನಸಿಗೆ ಮದ ಏರಿತು. ಶಸ್ತ್ರಸಹವಾಸ ದಿಂದ ಅಧರ್ಮದಲ್ಲಿ ಆಸಕ್ತಿ ಹೆಚ್ಚಿ ಪ್ರಾಣಿಹಿಂಸೆ ಮಾಡತೊಡಗಿದ. ನರಕದ ಪಾಲು ಆದ. ಬೆಂಕಿಯ ಹಾಗೇ ಆಯುಧ. ವಿಕಾರಕ್ಕೆ ಕಾರಣ ಎನ್ನುತ್ತಾರೆ ಹಿರಿಯರು.

"ನಾಥ, ನಿಮಗೆ ತಿಳಿಯದುದು ಅಲ್ಲ ಇದು. ನಿಮಗೆ ಧರ್ಮ ಹೇಳುವ ಶಕ್ತಿ ಅಲ್ಲ ನನ್ನದು. ನಿಮ್ಮ ಮೇಲಿನ ಗೌರವ-ಪ್ರೀತಿ, ನೀವು ನನಗೆ ಕೊಟ್ಟ ಸಲಿಗೆ; ಅದರಿಂದ ನಿಮಗೆ ನೆನಪು ಕೊಡುತ್ತ ಇದೇನೆ. ಕೈಯಲ್ಲಿ ಬಿಲ್ಲು ಬಾಣ ಇವೆ ಎಂದು ನಿರಪರಾಧಿಗಳನ್ನು ಕೊಲ್ಲಬೇಡಿ. ಆ ಕ್ರೂರ ಬುದ್ಧಿ ಯನ್ನು ಬಿಡಿ. ಅಪರಾಧ ಮಾಡದವರನ್ನು ಕೊಲ್ಲುವುದು ನನಗೆ ಇಷ್ಟ ಇಲ್ಲ. ಋಷಿಗಳಿಗೆ ಯಾರಾದರೂ ಬಾಧೆ ಕೊಟ್ಟರೆ ಅವರನ್ನು ಕಾಪಾಡಲು ಬಿಲ್ಲು ಬಾಣ. ಸುಮ್ಮನೆ ಎಲ್ಲರನ್ನೂ ಕೊಲ್ಲಲು ಅಲ್ಲ.

"ಶಸ್ತ್ರ ಎಲ್ಲಿ, ಈ ಕಾಡು ಎಲ್ಲಿ? ಕ್ಷತ್ರಿಯ ಧರ್ಮಕ್ಕೂ ತಪಸ್ಸಿಗೂ ಏನು ಸಂಬಂಧ? ಇವು ಪರಸ್ಪರ ವಿರುದ್ಧ. ಕಾಲದೇಶಗಳಿಗೆ ತಕ್ಕದ್ದು ಧರ್ಮ. ವನವಾಸದಲ್ಲಿ ತಪಸ್ಸು ನಮ್ಮ ಧರ್ಮ. ಕೈಯಲ್ಲಿ ಆಯುಧ ಇದ್ದರೆ ರೌದ್ರಬುದ್ಧಿ ಹುಟ್ಟುತ್ತದೆ. ಅಯೋಧ್ಯೆಗೆ ಹಿಂದಿರುಗಿದಾಗ ನಮಗೆ ಕ್ಷತ್ರಿಯ

ಧರ್ಮ. ರಾಜ್ಯದ ಆಸೆ ಬಿಟ್ಟುಬಂದ ನಿಮಗೆ ತಪಸ್ಸೇ ಧರ್ಮ. ನಿರಂತರವೂ ತಪೋಧರ್ಮವನ್ನೇ ನಡಸಿದರೆ ಮಾವ ದಶರಥನಿಗೂ ಅತ್ತೆ ಕೈಕೇಯಿಗೂ ಬಹಳ ಸಂತೋಷ ಆಗುತ್ತದೆ.

"ಒಡೆಯ, ಧರ್ಮವೇ ಸಮಸ್ತ ಶ್ರೇಯಸ್ಸಿಗೂ ಮೂಲ. ಧರ್ಮದಿಂದಲೇ ಧನ. ಧರ್ಮದಿಂದಲೇ ಸುಖ. ಧರ್ಮವೇ ಜಗತ್ತಿನ ಸಾರ. ಧರ್ಮಮಾರ್ಗ ಸುಲಭ ಅಲ್ಲ. ಅನೇಕ ವ್ರತನಿಯಮಗಳಿಂದ ದೇಹದಂಡನೆ ಮಾಡಿ ಧರ್ಮವನ್ನು ಗಳಿಸುತ್ತಾರೆ. ಸುಖದಿಂದ ಸುಖ ಸಿಗದು. ಸೌಖ್ಯಮೂರ್ತಿ, ನಿಮಗೆ ತಿಳಿಯದುದು ಏನು ಇದೆ ಮೂರು ಲೋಕಗಳಲ್ಲಿ? ನಿಮ್ಮದು ನಿರ್ಮಲ ಮನಸ್ಸು. ಈ ತಪೋವನದಲ್ಲಿ ಧರ್ಮಾಚರಣೆ ಮಾಡಿ.

"ನಾಥ, ಹೆಂಗಸಿನ ಬುದ್ಧಿ ನನ್ನದು. ಏನೋ ಚಾಪಲ್ಯ. ನಿಮಗೆ ಧರ್ಮವನ್ನು ಹೇಳುವ ಸಾಮರ್ಥ್ಯ ಈ ಜಗತ್ತಿನಲ್ಲಿ ಯಾರಿಗೆ? ತಾವೂ ತಮ್ಮ ತಮ್ಮನೂ ಚೆನ್ನಾಗಿ ಯೋಚಿಸಿ. ನಿಮಗೆ ಧರ್ಮ ಎಂದು ತೋರಿದುದನ್ನು ಮಾಡಿ. ವಿಳಂಬ ಮಾಡಬೇಡಿ." ಹೀಗೆ ಹೇಳಿದಳು ಸೀತೆ.

೧೦

ಪತಿಭಕ್ತಿಯಿಂದ ಸೀತೆ ಹೇಳಿದುದು ಎಲ್ಲವನ್ನೂ ಧರ್ಮನಿರತ ರಾಮ ಕೇಳಿದ. ಸೀತೆಗೆ ಹೇಳಿದ.

"ದೇವಿ, ನಿನಗೆ ಎಲ್ಲ ಧರ್ಮಗಳೂ ಗೊತ್ತು. ಜನಕಮಹಾರಾಜನ ಮಗಳು ನೀನು. ನನ್ನ ಮೇಲಿನ ಪ್ರೀತಿಯಿಂದ ನಿನ್ನ ವಂಶಗೌರವಕ್ಕೆ ತಕ್ಕಂತೆ ಹಿತವಚನಗಳನ್ನು ಆಡಿದೆ. ಕೇಳು. ಲೋಕದಲ್ಲಿ ಯಾರೂ ದುಃಖಿಗಳು ಆಗಿ ಇರಬಾರದು. ಯಾರೂ ಆರ್ತರು ಆಗಬಾರದು. ಅದಕ್ಕಾಗಿಯೇ ಕ್ಷತ್ರಿಯನ ಬಿಲ್ಲುಬಾಣ. ನೀನೇ ಹೇಳಿದೆ. ದಂಡಕಾರಣ್ಯದಲ್ಲಿ ಇರುವ ಮುನಿಗಳು ಎಲ್ಲರೂ ತಪೋನಿರತರು. ಎಂದೆಂದೂ ಧರ್ಮಕ್ಕೆ ತಪ್ಪಿ ನಡೆಯುವವರು ಅಲ್ಲ. ಕಾಡಿನಲ್ಲಿ ವಾಸ. ಕಂದಮೂಲಫಲಗಳ ಆಹಾರ. ಇಂಥವರಿಗೆ ಕ್ರೂರಕರ್ಮಿಗಳು ದುಷ್ಟ ರಾಕ್ಷಸರು ಬಾಧೆ ಕೊಟ್ಟರೆ ಅವರಿಗೆ ನೆಮ್ಮದಿ ಇಲ್ಲ. ಅವರ ಪಾಡಿಗೆ ಅವರು ತಪಸ್ಸುಮಾಡುತ್ತ ಇದ್ದರೆ ರಾಕ್ಷಸರು ಬಂದು ಅವರನ್ನು ಕೊಂದು ಬಾಯಲ್ಲಿ ಹಾಕಿಕೊಳ್ಳುವುದೆ?

"ಇಷ್ಟು ಬಾಧೆಪಡುತ್ತ ಇರುವ ಆ ಮುನಿಗಳು ತಾವೇ ಬಂದು ದೈನ್ಯದಿಂದ ಬೇಡಿಕೊಂಡರಲ್ಲ ಕಾಪಾಡು ಎಂದು.

"ನನಗೆ ಬಹಳ ನಾಚಿಕೆ ಆಯಿತು ಅವರು ಬೇಡಿಕೊಂಡಾಗ. ನಾನು ಅವರ ಕಾಲಿಗೆ ಬಿದ್ದೆ. 'ಮಹಾತ್ಮರೆ, ನಾನೇ ನಿಮ್ಮ ಬಳಿಗೆ ಬಂದು ಸೇವೆ ಮಾಡಬೇಕು. ನೀವೇ ಬಂದು ನನ್ನನ್ನು ಬೇಡುವುದು ನನಗೆ ಅವಮಾನ. ಏನು ಮಾಡಬೇಕೋ ಅಪ್ಪಣೆ ಕೊಡಿ' ಎಂದೆ.

"ಎಲ್ಲರೂ ಒಂದೇ ಕೊರಳಿನಿಂದ ಹೇಳಿದರಲ್ಲ. ಈ ದಂಡಕಾರಣ್ಯದಲ್ಲಿ ಕಾಮರೂಪಿಗಳು ಆದ ಅನೇಕರು ರಾಕ್ಷಸರು ಬಂದು ನಮಗೆ ಹಿಂಸೆಕೊಡುತ್ತ ಇದ್ದಾರೆ. ನಮ್ಮನ್ನು ಕಾಪಾಡು. ಅವರನ್ನು ಇದಿರಿಸಲು ನಮಗೆ ಸಾಧ್ಯ ಇಲ್ಲ. ಅವರು ಮಾಂಸಾಹಾರಿಗಳು. ನಮ್ಮ ಹೋಮಕಾಲದಲ್ಲಿ ದರ್ಶಪೌರ್ಣಮಾಸಾದಿ ಪರ್ವಕಾಲಗಳಲ್ಲಿ ಬಂದು ನಮ್ಮ ವ್ರತಗಳನ್ನು ಕೆಡಿಸುತ್ತಾರೆ. ಅವರು ಮಾಡುವ ಹಿಂಸೆ ಅಪರಿಮಿತ. ನಮಗೆ ಯಾರೂ ದಿಕ್ಕು ಇಲ್ಲ. ನೀನೇ ನಮಗೆ ಪರಮಗತಿ. ನಿನ್ನನ್ನು ಮರೆಹೊಕ್ಕಿದೇವೆ.

"ನಮ್ಮ ತಪಸ್ಸಿನ ಪ್ರಭಾವದಿಂದ ಅವರನ್ನು ಕೊಲ್ಲಬಹುದು. ಅದರಿಂದ ನಮ್ಮ ತಪಸ್ಸು ಎಲ್ಲವೂ ಹಾಳು ಆಗುತ್ತದೆ. ತಪಸ್ಸು ಬಹಳ ಕಷ್ಟದ ಕೆಲಸ. ಅದಕ್ಕೆ ನಾನಾ ವಿಘ್ನ. ತಪಸ್ಸಿದ್ಧಿ ಸುಲಭ ಅಲ್ಲ. ಇಷ್ಟು ಕಷ್ಟ ಪಟ್ಟು ಗಳಿಸಿದ ತಪೋಬಲವನ್ನು ಕಳೆದುಕೊಳ್ಳಲು ನಮಗೆ ಇಷ್ಟ ಇಲ್ಲ. ಆದ್ದರಿಂದಲೇ ಸಿಟ್ಟನ್ನು ಬಿಟ್ಟು ಶಾಪವನ್ನು ಕೊಡದೆ ಸುಮ್ಮನೆ ಇದೇವೆ. ಶ್ರೀರಾಮ, ಲಕ್ಷ್ಮಣ ಸಮೇತ ನಮಗೆ ಈ ರಾಕ್ಷಸಬಾಧೆಯನ್ನು ನೀನು ತಪ್ಪಿಸಬೇಕು. ಈ ಕಾಡಿನಲ್ಲಿ ನೀನು ಅಲ್ಲದೆ ಬೇರೆ ದಿಕ್ಕು ನಮಗೆ ಇಲ್ಲ ಎಂದರಲ್ಲ.

"ಜಾನಕಿ, ಹೀಗೆ ಅಂಗಲಾಚಿ ಬೇಡಿದ ಋಷಿಗಳನ್ನು ನೋಡಿ ನನ್ನ ಮನಸ್ಸು ಕರಗಿತು. ಅವರು ಎಲ್ಲರನ್ನೂ ಕಾಪಾಡಲು ಪ್ರತಿಜ್ಞೆ ಮಾಡಿದೆ. ಪ್ರಾಣ ಇರುವವರೆಗೆ ಮಾಡಿದ ಶಪಥಕ್ಕೆ ತಪ್ಪುವವನು ಅಲ್ಲ ನಾನು. ನಾನು ಆಡಿದ ಮಾತಿಗೆ ತಪ್ಪುವುದು ಇಲ್ಲ ಎಂದು ನೀನು ಬಲ್ಲೆ, ಸೀತೆ. ಪ್ರಾಣಕ್ಕಿಂತಲೂ ಹೆಚ್ಚು ಆದ ನಿನ್ನನ್ನೂ ಬಿಟ್ಟೇನು, ಲಕ್ಷ್ಮಣನನ್ನೂ ಬಿಟ್ಟೇನು; ಸತ್ಯವನ್ನು ಮಾತ್ರ ಎಂದಿಗೂ ಬಿಡಲಾರೆ. ಅದರಲ್ಲೂ ಬ್ರಾಹ್ಮಣರಿಗೆ ಕೊಟ್ಟ ಮಾತಿಗೆ ತಪ್ಪಲಾರೆ, ಖಂಡಿತ. ಅವರು ನನ್ನನ್ನು ಕೇಳಬೇಕಾದ್ದೇ ಇರಲಿಲ್ಲ.

ನಾನೇ ಅವರನ್ನು ಕಾಪಾಡಬೇಕಾಗಿತ್ತು. ಅದು ನನ್ನ ಧರ್ಮ. ಅಂಥದರಲ್ಲಿ ಅವರೇ ಬಂದು ಕೇಳಿ ನಾನು ಭಾಷೆ ಕೊಟ್ಟೆ. ಇನ್ನು ಏನು ಹೇಳಲಿ?

"ದೇವಿ, ನಿನಗೆ ನನ್ನಲ್ಲಿ ಸ್ನೇಹ, ಪ್ರೀತಿ. ಅದಕ್ಕೆ ತಕ್ಕ ಮಾತನ್ನು ಹೇಳಿದೆ. ಬೇಕು ಆದವರಿಗೇ ಹಿತವನ್ನು ಹೇಳುತ್ತಾರೆ ಲೋಕದಲ್ಲಿ. ಇಷ್ಟ ಇಲ್ಲದವರಿಗೆ ಯಾರೂ ಹೇಳರು. ನೀ ಹೇಳಿದುದು ನಿನ್ನ ಮನಸ್ಸಿಗೂ ನಿನ್ನ ವಂಶಕ್ಕೂ ತಕ್ಕ ಮಾತು. ನೀನು ನನಗೆ ಪ್ರಾಣಕ್ಕಿಂತ ಹೆಚ್ಚು. ನೀನು ನನಗೆ ಸಹಧರ್ಮಚಾರಿಣಿ. ನಾನು ಹಿಡಿದ ಧರ್ಮವನ್ನೇ ನೀನೂ ನಡೆಸ ಬೇಕು."

ತನ್ನ ಪ್ರಿಯೆ, ಜನಕರಾಜಪುತ್ರಿಗೆ ಹೀಗೆ ಸಮಾಧಾನ ಹೇಳಿ ಧೀರ ಆದ ರಾಮ ಬಿಲ್ಲುಬಾಣ ತೊಟ್ಟು ತಮ್ಮನ ಸಂಗಡ ರಮಣೀಯ ತಪೋವನ ಗಳಿಗೆ ಹೊರಟ.

೧೧

ಮುಂದೆ ರಾಮ, ಹಿಂದೆ ಧನುರ್ಧಾರಿ ಲಕ್ಷ್ಮಣ. ನಡುವೆ ಅಂದದ ನಡುವಿನ ಸೀತೆ. ಬಗೆಬಗೆಯ ಬೆಟ್ಟದ ತಪ್ಪಲುಗಳಲ್ಲಿ ಕಾಡುಗಳಲ್ಲಿ ವಿವಿಧ ನದಿಗಳ ಪಕ್ಕದಲ್ಲಿ ತಿರುಗಾಡಿದರು. ಆ ನದಿಗಳ ಮರಳುದಿಣ್ಣೆಗಳ ಮೇಲೆ ಆಡುತ್ತ ಇದ್ದ ಸಾರಸಪಕ್ಷಿ ಚಕ್ರವಾಕಪಕ್ಷಿಗಳನ್ನೂ ಬಗೆಬಗೆಯ ನೀರುಹಕ್ಕಿ ಇದ್ದ ತಾವರೆಕೊಳಗಳನ್ನೂ ಗುಂಪು ಗುಂಪು ಆಗಿ ತಿರುಗುತ್ತ ಇದ್ದ ಜಿಂಕೆ ಗಳನ್ನೂ ಕೊಬ್ಬಿನಿಂದ ಮೈಮರೆತು ತಿರುಗುತ್ತ ಇದ್ದ ಉದ್ದ ಕೊಂಬಿನ ಕಾಡು ಎಮ್ಮೆಗಳನ್ನೂ ಕಾಡುಹಂದಿಗಳನ್ನೂ ಅಲ್ಲಲ್ಲಿ ಗಿಡಮರಗಳನ್ನೂ ಉರುಳಿಸುತ್ತ ಇದ್ದ ಆನೆಗಳನ್ನೂ ನೋಡುತ್ತ ಹೊತ್ತು ಮುಳುಗುವವರೆಗೂ ತಿರುಗಾಡಿದರು. ಅಲ್ಲಿ ಗಾವುದ ಅಗಲದ ಒಂದು ಕೆರೆ. ನೋಡಲು ಬಲು ರಮಣೀಯ. ಕೆರೆಯ ತುಂಬ ಅರಳಿದ ಕಮಲದ ಹೂ. ಕೆರೆಯ ದಡದಲ್ಲಿ ಆನೆಯ ಹಿಂಡುಗಳು ತಿರುಗುತ್ತ ಇವೆ. ಹಂಸ ಸಾರಸಪಕ್ಷಿಗಳು ಇಂಪು ಆಗಿ ಹಾಡುತ್ತ ಇವೆ. ಕೆರೆಯ ನೀರು ತಿಳಿ. ಆ ಕೊಳದ ಒಳಗಿನಿಂದ ಸೊಗಸಾದ ಸಂಗೀತ, ವಾದ್ಯ ಕೇಳಿಸುತ್ತ ಇದೆ. ಅಲ್ಲಿ ಮನುಷ್ಯರ ಸುಳಿವೇ ಇಲ್ಲ. ಇದೇನು ಆಶ್ಚರ್ಯ ಎಂದು

ರಾಮಲಕ್ಷ್ಮಣರು ತಮ್ಮ ಜೊತೆಯಲ್ಲಿ ಇದ್ದ ಧರ್ಮಭೃತ್ ಋಷಿಯನ್ನು ಕೇಳಿದರು, ಆ ರಹಸ್ಯವನ್ನು ತಿಳಿಸಲು.

ಆ ಋಷಿ ಹೇಳಿದ: "ರಾಮ, ಇದು ಪಂಚಾಪ್ಸರ ಕೊಳ. ಇದರಲ್ಲಿ ನಿರಂತರವೂ ಗೀತವಾದ್ಯ ಧ್ವನಿ ಕೇಳಿಸುತ್ತದೆ. ಮಾಂಡಕರ್ಣಿ ಎಂಬ ಋಷಿ ತನ್ನ ತಪಃಪ್ರಭಾವದಿಂದ ಈ ಕೊಳವನ್ನು ನಿರ್ಮಿಸಿದ. ಆ ಮಹಾನುಭಾವ ಹತ್ತು ಸಾವಿರ ವರ್ಷ ನೀರಿನಲ್ಲಿ ನಿಂತು ಗಾಳಿ ಕುಡಿದು ಉಗ್ರತಪಸ್ಸು ಮಾಡಿದ. ಇದನ್ನು ಕಂಡು ಇಂದ್ರಾಗ್ನಿಗಳು ದೇವತೆಗಳು ಎಲ್ಲರೂ ಬೆದರಿದರು. ಎಲ್ಲರೂ ಸೇರಿ ಆಲೋಚನೆ ಮಾಡಿದರು. ತಮ್ಮೊಳಗೆ ಯಾರ ಪದವಿಯನ್ನೋ ಆಶಿಸಿ ಹೀಗೆ ಘೋರ ತಪಸ್ಸು ಮಾಡುತ್ತ ಇರಬೇಕು ಎಂದುಕೊಂಡು ಅಂಜಿದರು. ಆ ಋಷಿಯ ತಪಸ್ಸನ್ನು ಭಂಗಪಡಿಸಲು ಮಿಂಚಿನಂತೆ ಹೊಳೆವ ಮೈಯ ಐವರು ಉತ್ತಮೋತ್ತಮ ಅಪ್ಸರೆಯರನ್ನು ಕಳಿಸಿದರು. ಅವರು ಐವರೂ ದೇವಕಾರ್ಯವನ್ನು ನಡೆಸಲು ಆ ಮಹರ್ಷಿಯ ಬಳಿಗೆ ಹೋದರು. ಎಲ್ಲವೂ ಗೊತ್ತು ಇದ್ದರೂ ಆ ಋಷಿ ಕಾಮಪರವಶ ಆಗುವಂತೆ ಮಾಡಿದರು. ಐವರೂ ಅವನಿಗೆ ಹೆಂಡಿರು ಆದರು. ಆ ಐವರಿಗೂ ಐದು ಬೇರೆ ಬೇರೆ ಮನೆ ಕಟ್ಟಿಸಿಕೊಟ್ಟ ಆ ಋಷಿ ಈ ಕೊಳದ ಅಡಿಯಲ್ಲಿ. ತನ್ನ ತಪೋಬಲದಿಂದ ಆ ಋಷಿ ಯುವಕನೂ ಆದ. ಆ ಐವರು ಅಪ್ಸರೆಯರೂ ಆತನನ್ನು ಸುಖಪಡಿಸುತ್ತ ಕ್ರೀಡಿಸುತ್ತ ಇರುತ್ತಾರೆ. ಅವರ ಆಭರಣಗಳ ಸದ್ದು ಅವರ ಗಾಯನವಾದನಗಳ ಧ್ವನಿ ಯಾವಾಗಲೂ ಇಲ್ಲಿ ಕೇಳಿಸುತ್ತದೆ. ನಮಗೆ ಕೇಳಿಸುವ ದಿವ್ಯಧ್ವನಿ ಇದೇ."

ರಾಮಲಕ್ಷ್ಮಣರಿಗೆ ಆಶ್ಚರ್ಯ ಆಯಿತು. ಆ ಮಾತು ಈ ಮಾತು ಆಡುತ್ತ ಮುಂದೆ ನಡೆದರು. ಅಲ್ಲಿ ಒಂದು ಋಷ್ಯಾಶ್ರಮ. ದರ್ಭೆ ನಾರುಮಡಿ ಕಂಡವು. ಸೀತಾಲಕ್ಷ್ಮಣರ ಜೊತೆಯಲ್ಲಿ ರಾಮ ಆ ಆಶ್ರಮವನ್ನು ಪ್ರವೇಶಿಸಿದ. ಅಲ್ಲಿ ಇದ್ದ ಮುನಿಪುಂಗವರು ಮಾಡಿದ ಸತ್ಕಾರವನ್ನು ಸವಿಯುತ್ತ ಅಲ್ಲಿಯೇ ಕೆಲವು ದಿನ ವಾಸಮಾಡಿದ ರಾಮ. ಒಮ್ಮೆ ವಾಸಮಾಡಿದ ಋಷ್ಯಾಶ್ರಮದಲ್ಲೇ ಮತ್ತೊಮ್ಮೆ ವಾಸಮಾಡುತ್ತ ಕೆಲವು ದಿನ, ಅವರಿಗೆ ರಾಕ್ಷಸಬಾಧೆಯನ್ನು ತಪ್ಪಿಸಿದ ರಾಮ. ಒಂದು ಆಶ್ರಮದಲ್ಲಿ ಹದಿಮೂರು ತಿಂಗಳು, ಇನ್ನೊಂದರಲ್ಲಿ ಒಂದು ವರ್ಷ ವಾಸ ಆಗಿದ್ದ. ಒಂದು ಕಡೆ ನಾಲ್ಕು ತಿಂಗಳು, ಒಂದು ಕಡೆ ಐದು ತಿಂಗಳು, ಇನ್ನೊಂದು ಕಡೆ ಏಳು ತಿಂಗಳು, ಮತ್ತೆ ಒಂದು ಕಡೆ

ಒಂದೂಕಾಲು ತಿಂಗಳು, ಒಂದು ಕಡೆ ಮುಕ್ಕಾಲು ತಿಂಗಳು, ಒಂದು ಕಡೆ ಮೂರು ತಿಂಗಳು, ಒಂದು ಕಡೆ ಎಂಟು ತಿಂಗಳು ಸುಖದಿಂದ ಕಾಲ ಕಳೆಯುತ್ತ ಇದ್ದ. ಹೀಗೆ ಹತ್ತು ವರ್ಷ ಆಯಿತು.

ಆಮೇಲೆ ಶ್ರೀಮಂತ, ಧರ್ಮಜ್ಞ ಆದ ರಾಮ ಸೀತೆಲಕ್ಷ್ಮಣರ ಸಮೇತ ಮತ್ತೆ ಸುತೀಕ್ಷ್ಣಾಶ್ರಮಕ್ಕೆ ಬಂದ. ಅಲ್ಲಿ ಮುನಿಗಳು ಎಲ್ಲರೂ ಅವನನ್ನು ಸತ್ಕರಿಸಿದರು. ಅಲ್ಲಿಯೇ ಕೆಲವು ಕಾಲ ಇದ್ದರು ಸೀತಾರಾಮಲಕ್ಷ್ಮಣರು. ಒಂದು ದಿನ ಸುತೀಕ್ಷ್ಣಮಹರ್ಷಿಯ ಬಳಿಗೆ ಬಂದು ವಿನಯದಿಂದ ರಾಮ ಕೇಳಿದ: "ಮಹರ್ಷಿ, ಈ ಕಾಡಿನಲ್ಲಿಯೇ ಅಗಸ್ತ್ಯಮುನಿ ಇದಾರಂತೆ. ಅವರ ಆಶ್ರಮ ಎಲ್ಲಿ ಇದೆ? ನನಗೆ ದಾರಿ ತಿಳಿಯದು. ತಿಳಿಸಿದರೆ ಸೀತಾಲಕ್ಷ್ಮಣರ ಜೊತೆಯಲ್ಲಿ ಹೋಗಿಬರುತ್ತೇನೆ. ಅವರ ಸೇವೆ ಮಾಡಿ ಬರುತ್ತೇನೆ."

ಸುತೀಕ್ಷ್ಣನಿಗೆ ಪರಮಸಂತೋಷ. ಸೀತಾಲಕ್ಷ್ಮಣರ ಸಂಗಡ ಹೋಗಿ ಅಗಸ್ತ್ಯರ ದರ್ಶನ ಮಾಡಿಕೊಂಡು ಬಾ ಎಂದು ಆತನೇ ರಾಮನಿಗೆ ಹೇಳಬೇಕು ಎಂದು ಇದ್ದ. ರಾಮನೇ ಕೇಳಿದ್ದು ಆತನಿಗೆ ಸಂತೋಷ ಆಯಿತು. ಅಗಸ್ತ್ಯರ ಆಶ್ರಮದ ಸ್ಥಳವನ್ನು ತಿಳಿಸಿದ. "ಇಲ್ಲಿಂದ ದಕ್ಷಿಣ ದಿಕ್ಕಿನಲ್ಲಿ ನಾಲ್ಕು ಗಾವುದ ಹೋದರೆ ಅಗಸ್ತ್ಯರ ತಮ್ಮ ಸುದರ್ಶನನ ಆಶ್ರಮ ಸಿಗುತ್ತದೆ. ಅಲ್ಲಿ ಹೂ ಹಣ್ಣು ಸಮೃದ್ಧಿ. ಯಾವಾಗಲೂ ನಾನಾ ಪಕ್ಷಿಗಳ ಮಧುರಗಾನ ಕೇಳುತ್ತದೆ. ಹಿಪ್ಪಲಿ ಗಿಡಗಳು ಅಲ್ಲಿ ಹೆಚ್ಚು. ತಾವರೆ ಕೊಳಗಳೂ ಬೇಕಾದಷ್ಟು ಇವೆ. ಅವುಗಳ ನೀರು ಬಹಳ ತಿಳಿ. ಆ ಕೊಳಗಳ ಬಳಿ ಹಂಸ ಚಕ್ರವಾಕ ಪಕ್ಷಿಗಳೂ ನೀರುಕೋಳಿಗಳೂ ಇವೆ.

"ಅಲ್ಲಿ ರಾತ್ರಿ ತಂಗಿ, ಬೆಳಗು ಆದಮೇಲೆ ಮುಂದೆ ದಕ್ಷಿಣಕ್ಕೆ ಹೋಗು. ದಾರಿಯಲ್ಲಿ ದೊಡ್ಡ ತೋಪು. ಅದರ ಪಕ್ಕದಲ್ಲಿಯೆ ಹಾದಿ. ಒಂದು ಗಾವುದ ದೂರ ಆ ಹಾದಿಯಲ್ಲಿ ನಡೆದರೆ ಅಲ್ಲಿ ಅಗಸ್ತ್ಯಾಶ್ರಮ ಸಿಗುತ್ತದೆ. ಆಶ್ರಮದ ಸುತ್ತ ರಮಣೀಯ ವನ. ಅಲ್ಲಿ ನೀನೂ ನಿನ್ನ ಹೆಂಡತಿಯೂ ತಮ್ಮನೂ ಹಾಯಿ ಆಗಿ ಇರಬಹುದು. ನಿನಗೆ ಅಗಸ್ತ್ಯಮಹಾಮುನಿಯನ್ನು ನೋಡುವ ಮನಸ್ಸು ಆಗಿದೆ. ಆದ್ದರಿಂದ ಸ್ವಲ್ಪವೂ ತಡಮಾಡದೆ ಹೊರಡು. ಈಗಲೇ ಹೊರಡು" ಎಂದ ಮುನಿ.

ಸೀತಾರಾಮಲಕ್ಷ್ಮಣರು ಸುತೀಕ್ಷ್ಣಮುನಿಗೆ ನಮಸ್ಕಾರಮಾಡಿ ಪಯಣ ಆದರು. ದಾರಿಯಲ್ಲಿ ರಮಣೀಯ ವನಗಳನ್ನು ಮೇಘಮಂಡಲದಂಥ ಪರ್ವತ ಗಳನ್ನು ನದಿಗಳನ್ನು ಕೊಳಗಳನ್ನು ನೋಡುತ್ತ ಯಾವ ಅಡಚಣೆಯೂ ಇಲ್ಲದೆ ಅಗಸ್ತ್ಯಭ್ರಾತ ಸುದರ್ಶನನ ಆಶ್ರಮದ ಹತ್ತಿರಕ್ಕೆ ಬಂದರು. "ಲಕ್ಷ್ಮಣ, ಇಲ್ಲಿ ನೋಡು. ಹಣ್ಣಿನ ಭಾರಕ್ಕೂ ಹೂಗಳ ಭಾರಕ್ಕೂ ಬಗ್ಗಿರುವ ಗಿಡ ಹೇರಳ ಆಗಿ ಇವೆ ಈ ವನದಲ್ಲಿ. ಹಿಪ್ಪಲಿ ಚೆನ್ನಾಗಿ ಮಾಗಿ ಸುವಾಸನೆ ಬರುತ್ತಾ ಇದೆ. ಋಷಿಗಳು ಆರಿಸಿ ತಂದು ಇಟ್ಟ ಸೌದೆ, ಕುಯ್ದು ತಂದ ದರ್ಭೆ ರಾಶಿ ರಾಶಿ ಬಿದ್ದಿವೆ. ಹೇಗೆ ವೈಡೂರ್ಯದ ಹಾಗೆ ಹೊಳೆಯುತ್ತ ಇವೆ. ತಮ್ಮ, ಈ ವನದ ನಡುವೆ ಕಪ್ಪು ಮೋಡದಂತೆ ಹೊಗೆ ಏಳುತ್ತ ಇರುವುದನ್ನು ನೋಡು. ಬ್ರಾಹ್ಮಣರು ಪುಣ್ಯತೀರ್ಥಗಳಲ್ಲಿ ಮಿಂದು ಹೂಗಳನ್ನು ಹರಿದು ತಂದು ಪುಷ್ಪಬಲಿ ಕೊಡುತ್ತಿದ್ದಾರೆ. ಇದೇ ಅಗಸ್ತ್ಯರ ತಮ್ಮನ ಆಶ್ರಮ. ಸಂದೇಹ ಇಲ್ಲ. ಈ ಮಹರ್ಷಿಯ ಅಣ್ಣ ಅಗಸ್ತ್ಯರು ತಮ್ಮ ತಪೋಮಹಿಮೆಯಿಂದ ಇಲ್ಲಿ ಇದ್ದ ರಾಕ್ಷಸರನ್ನು ಲೋಕಹಿತಾರ್ಥ ಆಗಿ ಕೊಂದು ಈ ದಕ್ಷಿಣದೇಶವನ್ನು ವಾಸಯೋಗ್ಯ ಆಗಿ ಮಾಡಿದರು. ಗೊತ್ತೆ?

"ಇಬ್ಬರು ರಾಕ್ಷಸರು ಇದ್ದರು ಇಲ್ಲಿ, ಅಣ್ಣ-ತಮ್ಮ: ಇಲ್ವಲ, ವಾತಾಪಿ. ಬ್ರಾಹ್ಮಣರನ್ನು ಕೊಂದು ತಿನ್ನುವುದೇ ಅವರ ಕೆಲಸ. ಇಲ್ವಲ ಬ್ರಾಹ್ಮಣವೇಷ ಹಾಕಿ, ಸಂಸ್ಕೃತ ಮಾತಾಡಿ, ಶ್ರಾದ್ಧಕ್ಕೆ ಎಂದು ಬ್ರಾಹ್ಮಣ ರನ್ನು ಊಟಕ್ಕೆ ಕರೆಯುತ್ತ ಇದ್ದ. ವಾತಾಪಿ ಮೇಕೆಯ ರೂಪ ಧರಿಸುತ್ತ ಇದ್ದ. ಆ ಮೇಕೆಯನ್ನು ಕೊಂದು ಅದರ ಮಾಂಸವನ್ನು ಅತಿಥಿಗಳು ಆಗಿ ಬಂದ ಬ್ರಾಹ್ಮಣರಿಗೆ ಬಡಿಸುತ್ತ ಇದ್ದ ಇಲ್ವಲ. ಊಟ ಮುಗಿದಮೇಲೆ ವಾತಾಪಿ, ಬಾ ಎಂದು ಕೂಗಬೇಕು ಇವನು. ವಾತಾಪಿ ಆ ಬ್ರಾಹ್ಮಣರ ಹೊಟ್ಟೆಯನ್ನು ಸೀಳಿಕೊಂಡು ಮೇಕೆಯ ಹಾಗೆ ಅರಚುತ್ತ ಹೊರಗೆ ಬರಬೇಕು. ಇದು ಅವರ ನಿತ್ಯಕ್ರಮ. ಆ ರಾಕ್ಷಸರು ಕಾಮರೂಪಿಗಳು. ಹೀಗೆ ಸಾವಿರಾರು ಬ್ರಾಹ್ಮಣರನ್ನು ಕೊಂದು ತಿಂದರು. ಆಗ ದೇವತೆಗಳು ಬಂದು ಅಗಸ್ತ್ಯರನ್ನು ಬೇಡಿಕೊಂಡರು.

"ಅಗಸ್ತ್ಯರು ಇಲ್ವಲನ ಕರೆಗೆ ಒಪ್ಪಿ ಶ್ರಾದ್ಧಕ್ಕೆ ಬಂದರು. ಎಲ್ಲ ಬ್ರಾಹ್ಮಣರ ಹಾಗೇ ಮೇಕೆಯ ರೂಪದ ವಾತಾಪಿಯನ್ನು ಅವರೂ ತಿಂದರು. ಊಟ ಮುಗಿದಮೇಲೆ ನಿಮಗೆ ತೃಪ್ತಿ ಆಯಿತೆ ಎಂದು ಕೇಳಿ ಉತ್ತರ ಆಪೋಶನ

ವನ್ನು ಕೊಟ್ಟು ರೂಢಿಯಂತೆ ತಮ್ಮನನ್ನು ಕರೆದ ಇಲ್ವಲ. ವಾತಾಪಿ, ಬಾ. ಧೀಮಂತ ಅಗಸ್ತ್ಯಮಹರ್ಷಿ ಇಲ್ವಲನಿಗೆ ಹೇಳಿದರು: ಇನ್ನು ಎಲ್ಲಿಯ ವಾತಾಪಿಯೋ? ಮೇಕೆಯ ರೂಪದ ನಿನ್ನ ತಮ್ಮ ವಾತಾಪಿ ಆಗಲೇ ಜೀರ್ಣ ಆಗಿ ಹೋದ ನನ್ನ ಹೊಟ್ಟೆಯಲ್ಲಿ. ಆಗಲೇ ಯಮಪುರಿಗೆ ಸೇರಿದ.

"ಇಲ್ವಲನಿಗೆ ಸಿಟ್ಟುಬಂತು. ಅಗಸ್ತ್ಯರನ್ನು ಹಿಂಸಿಸಲು ಅವರ ಮೇಲೆ ಏರಿಬಂದ. ಆದರೆ ಅಗಸ್ತ್ಯರ ತೇಜಸ್ಸಿನ ಮುಂದೆ ಅವನದು ಯಾವ ಲೆಕ್ಕ? ಮಹರ್ಷಿ ಬೆಂಕಿಯಂತೆ ಉರಿಯುವ ಕಣ್ಣಿನಿಂದ ದುರದುರ ನೋಡಿದರು. ಆ ನೋಟಕ್ಕೇ ಇಲ್ವಲ ಸುಟ್ಟು ಬೂದಿ ಆದ. ಇದು ಆ ಮಹಾನುಭಾವನ ತಮ್ಮನ ಆಶ್ರಮ. ಕೆರೆ, ತೋಟ ಎಷ್ಟು ಮನೋಹರ ಆಗಿವೆ ಇಲ್ಲಿ!"

ಈ ವೇಳೆಗೆ ಸೂರ್ಯ ಮುಳುಗಿದ. ಸಂಜೆ ಆಯಿತು. ರಾಮಲಕ್ಷ್ಮಣರು ಸಂಧ್ಯೋಪಾಸನೆ ಮಾಡಿದರು. ಆಮೇಲೆ ಆಶ್ರಮದ ಒಳಕ್ಕೆ ಹೋಗಿ ಸುದರ್ಶನ ಮುನಿಗೆ ನಮಸ್ಕಾರ ಮಾಡಿದರು. ಆ ಮುನಿ ಇವರನ್ನು ಹಣ್ಣು ಗಡ್ಡೆಗೆಣಸು ಕೊಟ್ಟು ಸತ್ಕರಿಸಿದ. ಸೀತಾರಾಮಲಕ್ಷ್ಮಣರು ಆ ಸತ್ಕಾರವನ್ನು ಸವಿದು ಆ ರಾತ್ರಿ ಅಲ್ಲೇ ತಂಗಿದರು.

ಬೆಳಗ್ಗೆ ಎದ್ದು ಮುನಿಯ ಬಳಿಗೆ ಬಂದು ಮುಂದಿನ ಪಯಣಕ್ಕೆ ಆತನ ಅಪ್ಪಣೆ ಬೇಡಿದ ರಾಮ. ಮುನಿಯ ಅಪ್ಪಣೆ ಪಡೆದು ಮುಂದೆ ಪಯಣ ಬೆಳೆಸಿದರು. ದಾರಿ ಸುತೀಕ್ಷ್ಣಮುನಿ ಹೇಳಿದ್ದೇ. ಉದ್ದಕ್ಕೂ ಭತ್ತದ ಪಯಿರು. ಪಕ್ಕದಲ್ಲೇ ನೂರಾರು ಹಲಸಿನ ಮರ. ತಾಳೆಗಿಡ, ಪಗಡೆ, ಕಡವು, ತಿಮಿರ, ಬಿಲ್ವ, ತಮಾಲ. ಬಗೆಬಗೆಯ ಗಿಡಗಳು. ಎಲ್ಲಾ ಹೂತ ಗಿಡ. ಅದಕ್ಕೆ ಸುತ್ತಿಕೊಂಡು ಬೆಳೆದ ಬಳ್ಳಿಗಳಲ್ಲೂ ತುಂಬಾ ಹೂ. ಆನೆಗಳು ಸೊಂಡಿಲಿನಿಂದ ಮುರಿದುಹಾಕಿದ ಕೊಂಬೆ ರೆಂಬೆ. ಮರದಿಂದ ಮರಕ್ಕೆ ಹಾರುತ್ತ ಆಡುವ ಕೋತಿಗಳು. ಮಿಡಿಕುಡಿಗಳನ್ನು ತಿಂದು ಮದಿಸಿದ ಗುಂಪು ಗುಂಪು ಹಕ್ಕಿಗಳ ಕಲಕಲ ಧ್ವನಿ. ಎಲ್ಲವನ್ನೂ ನೋಡಿ ರಾಮ ತಮ್ಮನಿಗೆ ಹೇಳಿದ.

"ಲಕ್ಷ್ಮಣ, ಎಷ್ಟು ಸೊಗಸು ಈ ಹಸಿರು ಎಲೆಗಳ ಗಿಡಮರಗಳ ಗುಂಪು. ಎಲ್ಲಾ ಚಿಗಿತು ಇವೆ. ಮೃಗಪಕ್ಷಿಗಳಿಗೆ ಇಲ್ಲಿ ವೈರ ಇಲ್ಲ. ಶಾಂತಿಯಿಂದ ತಿರುಗಾಡುತ್ತ ಇವೆ. ಬಹುಶಃ, ಪರಮಾತ್ಮಪರಾಯಣ ಅಗಸ್ತ್ಯರ ಆಶ್ರಮ ಇಲ್ಲೇ ಎಲ್ಲೋ ಇರಬೇಕು. ತನ್ನ ತಪೋಮಹಿಮೆಯಿಂದ ವಿಂಧ್ಯಪರ್ವತವನ್ನು

ಕದಲದಂತೆ ಮಾಡಿದ. ಎಂಥ ಅಸಾಧ್ಯ ಕಾರ್ಯ! ಅದರಿಂದಲೇ ಅವರನ್ನು ಅಗಸ್ತ್ಯ ಎನ್ನುತ್ತಾರೆ. ಅಲ್ಲಿ ನೋಡು, ಹೋಮದ ಬೆಂಕಿಯ ಹೊಗೆ ಏಳುತ್ತ ಇದೆ. ನಾರುಮಡಿಗಳನ್ನು ಆರಹಾಕಿದಾರೆ.

"ತಮ್ಮ, ಇಲ್ಲಿ ರಾಕ್ಷಸರ ಬಾಧೆ ಇಲ್ಲ. ಈ ಮಹರ್ಷಿಯ ಪ್ರಭಾವ. ದಕ್ಷಿಣ ದಿಕ್ಕು ಎಂದರೇನೇ ರಾಕ್ಷಸರಿಗೆ ಭಯ ಆಗಿದೆ. ಬೇರೆ ಕಡೆ ಇದ್ದಹಾಗೆ ಅವರಿಗೆ ಇಲ್ಲಿ ಸ್ವೇಚ್ಛೆ ಇಲ್ಲ. ಋಷಿಗಳ ಮೇಲೆ ವೈರವನ್ನು ತೋರದೆ ಶಾಂತರು ಆಗಿ ಇದಾರೆ. ಈ ದಿಕ್ಕಿಗೇ ಅಗಸ್ತ್ಯ ದಿಕ್ಕು ಎಂಬ ಹೆಸರು ಬಂದು ಇದೆ. ಹಿಂದೆ ವಿಂಧ್ಯಪರ್ವತ ಎತ್ತರ ಆಗಿ ಬೆಳೆಯುತ್ತ ಸೂರ್ಯನಿಗೇ ಅಡ್ಡ ಆಗಿ ನಿಲ್ಲುವ ಪ್ರಯತ್ನ ಮಾಡಿತು. ಆಗ ಈ ಮಹರ್ಷಿ ಬೆಳೆಯಬೇಡ ಎಂದು ಈ ಪರ್ವತಕ್ಕೆ ಅಪ್ಪಣೆ ಮಾಡಿದರು. ಅವರ ಅಪ್ಪಣೆಯನ್ನು ಮೀರಲಾರದೆ ಅಲ್ಲಿಗೇ ನಿಂತಿತು ಪರ್ವತ.

"ಅಗಸ್ತ್ಯಮಹರ್ಷಿಗಳು ಲೋಕವಿಖ್ಯಾತರು. ಚಿರಂಜೀವಿಗಳು. ಸಕಲ ಲೋಕಪೂಜ್ಯರು. ಮಹಾಸಾಧು. ಸಜ್ಜನರಿಗೆ ಯಾವಾಗಲೂ ಮಂಗಳವನ್ನು ಮಾಡುವವರು. ಇದೇ ಅವರ ಆಶ್ರಮ. ನಾವೂ ಹೋಗಿ ಅವರ ದರ್ಶನ ಮಾಡೋಣ. ನಮಗೂ ಮಂಗಳ ಆಗುತ್ತದೆ. ಇನ್ನು ಉಳಿದ ವನವಾಸ ಕಾಲ ಎಲ್ಲವನ್ನೂ ಇಲ್ಲೇ ಕಳೆಯೋಣ. ಮಹರ್ಷಿ ನಿಯತಾಹಾರಿ. ಇವರನ್ನು ಸೇವಿಸಲು ದಿನವೂ ಇಲ್ಲಿಗೆ ದೇವತೆಗಳು ಗಂಧರ್ವ ಸಿದ್ಧರು ದೇವರ್ಷಿಗಳು ಬರುತ್ತಾರೆ. ಸುಳ್ಳು ಆಡುವವರು, ಕ್ರೂರಿಗಳು, ಮೋಸಗಾರರು, ಘಾತುಕರು, ಶಾಸ್ತ್ರನಿಯಮಗಳನ್ನು ಬಿಟ್ಟು ಸ್ವೇಚ್ಛೆಯಿಂದ ನಡೆಯುವ ದುರಾಚಾರಿಗಳು ಇಲ್ಲಿಗೆ ಬಂದರೆ ಬದುಕಲು ಸಾಧ್ಯವೇ ಇಲ್ಲ. ಅಗಸ್ತ್ಯರ ಮಹಿಮೆ ಅಷ್ಟು ಅಪಾರ. ಇಲ್ಲಿ ದೇವತೆಗಳೂ ಯಕ್ಷರೂ ನಾಗರೂ ಪತಗರೂ ನಿಯತಾಹಾರಿಗಳು ಆಗಿ ಧರ್ಮದಂತೆ ನಡೆಯುತ್ತಾರೆ. ಮಹಾತ್ಮರು ಆದ ಮುನಿಗಳು ಅನೇಕರು ಇಲ್ಲಿ ತಪಸ್ಸು ಮಾಡಿ ಸಿದ್ಧಿಪಡೆದು, ತಮ್ಮ ಮನುಷ್ಯದೇಹಗಳನ್ನು ಬಿಟ್ಟು ದಿವ್ಯದೇಹಗಳನ್ನು ಧರಿಸಿ, ಸೂರ್ಯಕಾಂತಿಗೆ ಸಮ ಆದ ವಿಮಾನಗಳಲ್ಲಿ ಸ್ವರ್ಗಕ್ಕೆ ಹೋದರು. ಈ ಆಶ್ರಮದಲ್ಲಿ ತಮ್ಮನ್ನು ಆರಾಧಿಸಿದವರಿಗೆ ಯಕ್ಷತ್ವವನ್ನೂ ದೇವತ್ವವನ್ನೂ ಕೊಟ್ಟು ಇದಾರೆ ದೇವತೆಗಳು. ಅನೇಕರಿಗೆ ರಾಜ್ಯಾಧಿಪತ್ಯವನ್ನೂ ಕೊಟ್ಟು ಇದಾರೆ.

"ಲಕ್ಷ್ಮಣ, ಇದು ಅಗಸ್ತ್ಯಾಶ್ರಮ. ನೀನು ಮೊದಲು ಹೋಗು. ಸೀತಾಸಮೇತ ನಾನು ಬಂದ ವಿಷಯವನ್ನು ಮಹರ್ಷಿಗಳಿಗೆ ತಿಳಿಸು" ಎಂದ.

೧೨

ಲಕ್ಷ್ಮಣ ಅಗಸ್ತ್ಯಾಶ್ರಮಕ್ಕೆ ಹೋದ. ಅಲ್ಲಿ ಅವರ ಶಿಷ್ಯ ಒಬ್ಬ ಸಿಕ್ಕ. ಅವನಿಗೆ ತಿಳಿಸಿದ: "ದಶರಥಮಹಾರಾಜನ ಹಿರಿಯ ಮಗ ರಾಮ ತನ್ನ ಹೆಂಡತಿ ಸೀತಾದೇವಿಯ ಸಮೇತ ಅಗಸ್ತ್ಯರ ದರ್ಶನಕ್ಕಾಗಿ ಆಶ್ರಮಕ್ಕೆ ಬಂದು ಇದಾನೆ. ನಾನು ಲಕ್ಷ್ಮಣ, ಆತನ ತಮ್ಮ. ನಾನು ಆತನ ವಿಶ್ವಾಸಪಾತ್ರ, ಭಕ್ತ, ಹಿತಕಾಂಕ್ಷಿ. ತಂದೆಯ ಅಪ್ಪಣೆಯಂತೆ ನಾವು ಈ ಘೋರ ಅರಣ್ಯಕ್ಕೆ ಬಂದೆವು. ಅಗಸ್ತ್ಯಮಹರ್ಷಿಯ ದರ್ಶನದ ಬಯಕೆಯಿಂದ ಇಲ್ಲಿಗೆ ಬಂದೆವು. ಈ ವಿಷಯವನ್ನು ನಿಮ್ಮ ಗುರುಗಳಿಗೆ ತಿಳಿಸಬೇಕು."

ಆ ಶಿಷ್ಯ ಒಳಗೆ ಅಗ್ನಿಹೋತ್ರ ಗೃಹಕ್ಕೆ ಹೋದ. ತಪೋಜ್ವಾಲೆಯಿಂದ ದುರ್ದರ್ಶ ಆದ ಅಗಸ್ತ್ಯಮುನಿಯ ಮುಂದೆ ಕೈ ಜೋಡಿಸಿ ನಿಂತು ಲಕ್ಷ್ಮಣ ಹೇಳಿದ ರೀತಿಯಲ್ಲೇ ಸುದ್ದಿಯನ್ನು ಹೇಳಿದ: "ದಶರಥರಾಜನ ಮಕ್ಕಳು ರಾಮಲಕ್ಷ್ಮಣರೂ ರಾಮನ ಹೆಂಡತಿ ಸೀತೆಯೂ ತಮ್ಮ ದರ್ಶನಕ್ಕೆ ಶುಶ್ರೂಷೆಗೆ ಆಶ್ರಮಕ್ಕೆ ಬಂದು ಇದಾರೆ. ಅಪ್ಪಣೆ ಆದಂತೆ ಮಾಡುತ್ತೇನೆ."

ಈ ಮಾತನ್ನು ಕೇಳಿ ಅಗಸ್ತ್ಯರಿಗೆ ಬಹಳ ಸಂತೋಷ ಆಯಿತು. "ಹೋಗು. ಅವರನ್ನು ಒಳಗೆ ಕರೆದುಕೊಂಡು ಬಾ. ಮೊದಲೇ ಕರೆತರಬೇಕಾಗಿತ್ತು. ಇಷ್ಟು ದಿನದ ಮೇಲೆ ಆದರೂ ಬಂದ ರಾಮ. ನನ್ನದೇ ಭಾಗ್ಯ. ರಾಮ ಯಾವಾಗ ಬಂದಾನೋ ಎಂದು ಕಾದಿದೇನೆ. ಸೀತಾರಾಮಲಕ್ಷ್ಮಣರು ಸಾಮಾನ್ಯರು ಅಲ್ಲ. ಸಮಸ್ತ ಲೋಕಕ್ಕೂ ಪರಮಪೂಜ್ಯರು. ಹೋಗು, ಅವರನ್ನು ಕೂಡಲೇ ಕರೆದು ತಾ" ಎಂದರು.

ಮಹಾತ್ಮರು ಧರ್ಮಜ್ಞರು ಗುರುಗಳು. ಕೈ ಕಟ್ಟಿಕೊಂಡು ನಿಂತು ಕೇಳುತ್ತ ಇದ್ದ ಶಿಷ್ಯ ಗುರುಗಳಿಗೆ ನಮಸ್ಕಾರ ಮಾಡಿ ಬೇಗ ಹೊರಗೆ ಹೋದ. "ಲಕ್ಷ್ಮಣ, ಎಲ್ಲಿ ನಿಮ್ಮ ಅಣ್ಣ? ಕೂಡಲೇ ಬರಬಹುದು ಗುರುಗಳ ದರ್ಶನಕ್ಕೆ. ಅವರೇ ರಾಮನನ್ನು ಇದಿರು ನೋಡುತ್ತ ಇದಾರೆ" ಎಂದ. ಇಬ್ಬರೂ ಆಶ್ರಮದ ಬಾಗಿಲಿಗೆ ಬಂದರು. ಅಲ್ಲಿ ಇದ್ದ ಸೀತಾರಾಮರನ್ನು ನೋಡಿ

ಅಗಸ್ತ್ಯಶಿಷ್ಯನಿಗೆ ರೋಮಾಂಚ ಆಯಿತು. ಅವರನ್ನು ಸತ್ಕರಿಸಿ, ಅಗಸ್ತ್ಯರು ಹೇಳಿದ ಮಾತನ್ನು ಎಲ್ಲಾ ರಾಮನಿಗೆ ಹೇಳುತ್ತ ಒಳಕ್ಕೆ ಕರೆದು ಒಯ್ದ. ಜಿಂಕೆಗಳು ಪ್ರಶಾಂತಿಯಿಂದ ಆಡುತ್ತ ಇದ್ದವು. ಅಲ್ಲಲ್ಲಿ ಬೇರೆ ಬೇರೆ ಪೂಜಾಸ್ಥಾನಗಳು ಇದ್ದವು. ಬ್ರಹ್ಮ-ಅಗ್ನಿ-ವಿಷ್ಣು-ಇಂದ್ರ-ಸೂರ್ಯ-ಚಂದ್ರ-ಭಗ-ಧನದ-ಧಾತೃ-ವಿಧಾತೃ-ವಾಯು-ಶೇಷ-ಅನಂತ-ಗಾಯತ್ರೀ-ಅಷ್ಟವಸುಗಳು-ಪಾಶಹಸ್ತವರುಣ-ಕಾರ್ತಿಕೇಯ-ಧರ್ಮ, ಮುಂತಾದ ದೇವತೆಗಳ ಪೂಜಾಸ್ಥಾನಗಳನ್ನು ನೋಡಿದ ರಾಮ.

ಅಷ್ಟರಲ್ಲಿ ಶಿಷ್ಯರ ಸಮೇತ ಅಗಸ್ತ್ಯಮಹರ್ಷಿ ತಾನೇ ರಾಮನಿಗೆ ಇದಿರು ಆಗಿ ಬಂದರು. ಮಹರ್ಷಿಗಳ ಜೊತೆಯಲ್ಲಿ ಬರುವ ಮಹಾತೇಜಸ್ವಿ ಅಗಸ್ತ್ಯರನ್ನು ನೋಡಿ ರಾಮ ಹೇಳಿದ ಲಕ್ಷ್ಮಣನಿಗೆ. "ತಮ್ಮ, ಅಗಸ್ತ್ಯಮುನಿ ಬರುತ್ತ ಇದಾರೆ. ಅವರ ದಿವ್ಯತೇಜಸ್ಸನ್ನು ನೋಡು. ಆ ತೇಜೋಗಾಂಭೀರ್ಯವೇ ಅವರು ಅಗಸ್ತ್ಯಮಹರ್ಷಿ ಎಂದು ಹೇಳುತ್ತ ಇದೆ."

ರಾಮನಿಗೆ ಪರಮಾನಂದ. ಸೂರ್ಯನಂಥ ವರ್ಚಸ್ಸಿನ ಆ ಮುನಿಪುಂಗವನ ಪಾದಗಳಿಗೆ ನಮಸ್ಕಾರ ಮಾಡಿದ. ರಾಮಸೀತಾಲಕ್ಷ್ಮಣರೂ ಮಾಡಿದರು. ನಮಸ್ಕಾರ ಮಾಡಿ ಮುನಿಯ ಇದಿರಿಗೆ ಕೈಮುಗಿದು ನಿಂತ ಪರಂತಪ ಮಹಾಬಾಹು ರಾಮ. ಮಹಾಮುನಿ ರಾಮನಿಗೆ ಅರ್ಘ್ಯಪಾದ್ಯಗಳನ್ನು ಕೊಟ್ಟು ಕೂಡಿಸಿ ಕುಶಲ ಪ್ರಶ್ನೆ ಮಾಡಿದರು. ಆಮೇಲೆ ಅಗ್ನಿಕ್ರಿಯೆಗಳನ್ನು ಮುಗಿಸಿ ಅತಿಥಿಗಳಿಗೆ ಅರ್ಘ್ಯವನ್ನು ಕೊಟ್ಟು, ವಾನಪ್ರಸ್ಥ ಧರ್ಮದಂತೆ ಅವರಿಗೆ ಕಂದಮೂಲಫಲಗಳನ್ನು ನೀಡಿದರು. ಆಮೇಲೆ ತಾವು ಕುಳಿತುಕೊಂಡು ಧರ್ಮಜ್ಞ ರಾಮನನ್ನು ಕೂಡಿಸಿದರು. "ರಾಮ, ಮೊದಲು ವೈಶ್ವದೇವವನ್ನು ಮಾಡಬೇಕು. ಆಮೇಲೆ ಅತಿಥಿಪೂಜೆ. ಈ ನಿಯಮವನ್ನು ಬಿಟ್ಟು ಋಷಿಗಳು ನಡೆದರೆ ಸುಳ್ಳು ಸಾಕ್ಷ್ಯ ನುಡಿದವನ ಹಾಗೆ ಪರಲೋಕದಲ್ಲಿ ತಮ್ಮ ಮಾಂಸವನ್ನು ತಾವೇ ತಿನ್ನಬೇಕು. ರಾಮ, ನೀನು ಮೂರು ಲೋಕಕ್ಕೂ ದೊರೆ. ಪರಮಧರ್ಮಿಷ್ಠ, ಮಹಾರಥ, ಪೂಜನೀಯ, ಮಾನ್ಯ. ಈಗ ನಮಗೆ ಪ್ರಿಯ ಅತಿಥಿ. ನಿನ್ನನ್ನು ವಿಶೇಷ ರೀತಿಯಲ್ಲಿ ಸತ್ಕರಿಸಬೇಕು" ಎಂದರು.

ಫಲಮೂಲಗಳನ್ನೂ ಪುಷ್ಪಗಳನ್ನೂ ಇತರ ಪೂಜಾದ್ರವ್ಯಗಳನ್ನೂ ತಂದು ಯಥಾವಿಧಿ ಆಗಿ ಪೂಜಿಸಿ ಅಗಸ್ತ್ಯರು ಶ್ರೀರಾಮನಿಗೆ ಮತ್ತೆ ಹೇಳಿದರು.

"ರಾಮ, ಈ ರತ್ನಖಚಿತ ಧನುಸ್ಸು ವಿಷ್ಣುವಿನದು. ಇದನ್ನು ಮಾಡಿದವನು ವಿಶ್ವಕರ್ಮ. ಸೂರ್ಯನಂತೆ ಹೊಳೆಯುವ ಈ ಉತ್ತಮ ಬಾಣ ನನಗೆ ಬ್ರಹ್ಮದೇವ ಕೊಟ್ಟದ್ದು. ಅಗ್ನಿಜ್ವಾಲೆಯಂತೆ ಹೊಳೆಯುವ ಬಾಣಗಳ ಈ ಎರಡು ಬತ್ತಳಿಕೆಗಳನ್ನೂ ಇಂದ್ರ ಕೊಟ್ಟ. ಇವೆರಡೂ ಅಕ್ಷಯ. ಚಿನ್ನದ ಹಿಡಿಯ ಈ ಕತ್ತಿಯೂ ಅವನು ಕೊಟ್ಟದ್ದೇ. ಹಿಂದೆ ರಾಕ್ಷಸರನ್ನು ಸಂಹರಿಸಿ ದೇವತೆಗಳಿಗೆ ರಾಜ್ಯವನ್ನು ಮಹಾವಿಷ್ಣು ಕೊಡಿಸಿದ್ದು ಈ ಧನುಸ್ಸಿನಿಂದಲೇ. ಈ ಧನುಸ್ಸನ್ನೂ ಬತ್ತಳಿಕೆಗಳನ್ನೂ ಕತ್ತಿಯನ್ನೂ ಹಿಡಿ. ದೇವೇಂದ್ರ ವಜ್ರಾ-ಯುಧವನ್ನು ತೆಗೆದುಕೊಂಡಂತೆ ನೀನು ಇವನ್ನು ತೆಗೆದುಕೊ. ಶತ್ರುಗಳನ್ನು ಜಯಿಸು" ಎಂದರು.

ಅವು ಎಲ್ಲವನ್ನೂ ರಾಮ ತೆಗೆದುಕೊಂಡ.

೧೩

ಅಗಸ್ತ್ಯರು ಮತ್ತೆ ಹೇಳಿದರು: "ರಾಮ, ಲಕ್ಷ್ಮಣ. ನನ್ನನ್ನು ನೋಡಲು ಸೀತಾದೇವಿಯನ್ನು ಕರೆದುಕೊಂಡು ಇಷ್ಟು ದೂರ ಬಂದಿರಿ. ಬಹಳ ಸಂತೋಷ. ನಿಮಗೆ ಮಂಗಳ ಆಗಲಿ. ಮಾರ್ಗಾಯಾಸದಿಂದ ನಿಮ್ಮ ಮೈ ಬೆವರು ಆಗಿದೆ. ನಿಮಗೆ ಬಹಳ ದಣಿವು ಆಗಿರಬೇಕು. ಜನಕರಾಜಪುತ್ರಿ ಸೀತೆ ಬಹಳ ಬಳಲಿದ್ದಾಳೆ. ಕೋಮಲ ಶರೀರದ ಈ ಸೀತೆ ಎಂದೂ ಕಷ್ಟಪಟ್ಟವಳು ಅಲ್ಲ. ಈಕೆಗೆ ವಿಶ್ರಾಂತಿ ಬೇಕು. ರಾಮ, ಪತಿಸ್ನೇಹದಿಂದ ಘೋರ ಅರಣ್ಯದ ಬಾಧೆಗಳನ್ನೂ ಲೆಕ್ಕಿಸದೆ ಎಂಥ ದುಷ್ಕರ ಕಾರ್ಯ ಮಾಡಿದ್ದಾಳೆ! ನಮ್ಮ ಆಶ್ರಮ ದಲ್ಲಿ ಈಕೆ ಸಂತೋಷದಿಂದ ವಿಶ್ರಾಂತಿ ಪಡೆಯುವಂತೆ ಮಾಡು. ಈಕೆಯ ಹಾಗೆ ಗಂಡನನ್ನು ಹಿಂಬಾಲಿಸಿ ಬರುವುದು ಬೇರೆ ಯಾವ ಹೆಂಗಸಿಗೂ ಸಾಧ್ಯ ಅಲ್ಲ.

"ರಘುನಂದನ! ಗಂಡ ಒಳ್ಳೆಯ ಸ್ಥಿತಿಯಲ್ಲಿ ಇರುವವರೆಗೆ ಸಾಧಾರಣ ಆಗಿ ಹೆಂಗಸರಿಗೆ ಅವನ ಮೇಲೆ ಪ್ರೀತಿ. ಅವನಿಗೆ ಏನಾದರೂ ಕೆಟ್ಟ ಸ್ಥಿತಿ ಬಂತೋ ಬಿಟ್ಟು ಹೋಗುತ್ತಾರೆ. ಹೆಂಗಸರ ಸ್ವಭಾವ ಮಿಂಚಿನಂತೆ ಬಲು ಚಂಚಲ. ಅವರ ಮನಸ್ಸೋ ಕತ್ತಿಯಂತೆ ಹರಿತ. ಯಾವ ಕೆಲಸವನ್ನೇ

ಆಗಲಿ ಗರುಡನ ವೇಗದಿಂದ ವಾಯುವೇಗದಿಂದ ಮಾಡುತ್ತಾರೆ. ಮಾಡಬಹುದೇ ಬೇಡವೇ ಎಂದು ಯೋಚಿಸರು. ಹೆಂಗಸರಿಗೆ ಸಹಜ ಆದ ಈ ದೋಷ ಯಾವುದೂ ನಿನ್ನ ಹೆಂಡತಿಯಲ್ಲಿ ಇಲ್ಲ. ಅರುಂಧತಿಯಂತೆ ಮಹಾಖ್ಯಾತಿವಂತೆ. ಪತಿವ್ರತೆಯರು ಎಲ್ಲರಲ್ಲೂ ಸೀತೆಯೇ ಮೊದಲು.

"ರಾಮ, ಅರಿಂದಮ, ಪತಿವ್ರತಾಶಿರೋಮಣಿ ಆದ ಈ ಸೀತೆ, ನಿನ್ನ ತಮ್ಮ ಲಕ್ಷ್ಮಣ, ಇವರ ಸಂಗಡ ನೀನು ಎಲ್ಲಿ ನೆಲೆಸಿದರೂ ಆ ಸ್ಥಳಕ್ಕೆ ಭೂಷಣ. ನಮ್ಮ ಆಶ್ರಮಕ್ಕೆ ಬಂದಿರಿ. ಆಶ್ರಮಕ್ಕೇ ಒಂದು ಅಲಂಕಾರ ನೀವು" ಎಂದರು ಅಗಸ್ತ್ಯಮಹರ್ಷಿಗಳು.

ರಾಮ ಕೈಜೋಡಿಸಿಕೊಂಡು ಜ್ವಲಂತ ಅಗ್ನಿಯಂತೆ ಅಗಸ್ತ್ಯಮಹರ್ಷಿಗಳನ್ನು ಕೇಳಿದ. ವಿನಯದಿಂದ "ಮಹಾತ್ಮ, ತಾವು ವರಪ್ರದಾಯಕರು. ತಾವು ನನ್ನನ್ನೂ ನನ್ನ ಹೆಂಡತಿಯನ್ನೂ ತಮ್ಮನನ್ನೂ ಮೆಚ್ಚಿದಿರಿ. ನಾವು ಧನ್ಯರು. ಅನುಗ್ರಹ ಪಡೆದೆವು. ಆದರೆ, ಎಲ್ಲಿ ಆದರೂ ಒಂದು ಬೇರೆ ಆಶ್ರಮವನ್ನು ಕಟ್ಟಿಕೊಂಡು ನಿಯತ ಆಗಿ ಸುಖದಿಂದ ಇರಬೇಕು ಎಂದುಕೊಂಡು ಇದೇನೆ. ಜಲಸಮೃದ್ಧ ಫಲಪುಷ್ಪಸಮೃದ್ಧ ಪ್ರದೇಶ ಒಂದನ್ನು ತೋರಿಸಬೇಕು ಕೃಪೆ ಇಟ್ಟು" ಎಂದ.

ಧರ್ಮಾತ್ಮ ಧೀರ ಆದ ಆ ಋಷಿಶ್ರೇಷ್ಠರು ಸ್ವಲ್ಪಹೊತ್ತು ಆಲೋಚಿಸಿದರು. ಮನಸಿನಲ್ಲಿ ನಿಶ್ಚಯ ಮಾಡಿಕೊಂಡರು. "ರಾಮ, ಇಲ್ಲಿಗೆ ಎರಡು ಗಾವುದ ದೂರದಲ್ಲಿ ಪಂಚವಟಿ ಇದೆ. ಅಲ್ಲಿ ತಿಳಿನೀರು ಫಲಮೂಲಗಳು ಸಮೃದ್ಧಿ. ನಾನಾ ಬಗೆಯ ಮೃಗಗಳು ಇವೆ. ಬಹಳ ರಮಣೀಯ ಸ್ಥಾನ. ಸೀತಾಲಕ್ಷ್ಮಣಸಮೇತ ಅಲ್ಲಿ ನೀನು ಆಶ್ರಮವನ್ನು ಕಟ್ಟು. ನಿಮ್ಮ ತಂದೆಯ ಅಪ್ಪಣೆಯಂತೆ ನೀನು ವನವಾಸ ಮಾಡುವ ಅವಧಿಯಲ್ಲಿ ಬಹುಭಾಗ ಆಗಲೇ ಆಗಿಹೋಯಿತು. ಇರುವ ಸ್ವಲ್ಪ ಕಾಲವನ್ನು ಅಲ್ಲಿ ಕಳೆದು ನಿನ್ನ ಪ್ರತಿಜ್ಞೆ ತೀರಿದಮೇಲೆ ರಾಜ್ಯಭಾರ ಮಾಡು.

"ರಾಮ, ಯಯಾತಿರಾಜನೂ ಹೀಗೇ ಹಿರಿಯ ಮಗನಿಂದ ಮಾತು ನಡೆಸಿಕೊಂಡು ಮುಕ್ತ ಆದ. ದಶರಥಮಹಾರಾಜನಿಗೂ ಹಿರಿಯ ಮಗ ನಿನ್ನಿಂದ ತನ್ನ ಶಪಥ ಪೂರಯಿಸಿತು. ಆತ ಧನ್ಯ ಆದ. ರಾಮ, ನನಗೂ ದಶರಥಮಹಾರಾಜನಿಗೂ ಬಹಳ ಸ್ನೇಹ. ಅದರಿಂದಲೂ ನನ್ನ ತಪಃಪ್ರಭಾವ

ದಿಂದಲೂ ನಿನ್ನ ಸಮಾಚಾರ ಎಲ್ಲವೂ ನನಗೆ ಗೊತ್ತು. ನಿನ್ನ ಮನಸ್ಸನ್ನೂ ಅರಿತುಕೊಂಡಿದೇನೆ. ಮೊದಲು ಇಲ್ಲಿ ಇರಲು ನಿನಗೆ ಹೇಳಿದುದು ಅದಕ್ಕೇ. ಈಗ ನಿನ್ನ ಅಭಿಪ್ರಾಯ ತಿಳಿಯಿತು. ನೀನು ಪಂಚವಟಿಗೆ ಹೋಗಲು ನನ್ನ ಸಮ್ಮತಿ.

"ಪಂಚವಟಿ ರಮಣೀಯ ಸ್ಥಾನ. ಗೋದಾವರೀ ನದಿಗೆ ತುಂಬಾ ಹತ್ತಿರ. ಇಲ್ಲಿಗೂ ಹತ್ತಿರ. ಪಂಚವಟೀ ಪ್ರದೇಶದಲ್ಲಿ ಹಣ್ಣು ಹಂಪಲು ಗಡ್ಡೆ ಗೆಣಸು ಸಮೃದ್ಧಿ. ಬಗೆಬಗೆಯ ಪಕ್ಷಿಗಳು ನಾನಾ ವಿಧದ ಮೃಗಗಳು ಇವೆ. ಸ್ಥಳ ಪವಿತ್ರ, ನಿರ್ಜನ. ಅಲ್ಲಿ ನೀನೂ ನಿನ್ನ ಹೆಂಡತಿಯೂ ಸುಖದಿಂದ ಇರಬಹುದು. ನೀನು ಅಲ್ಲಿ ಇದ್ದರೆ ಆ ಪ್ರಾಂತದಲ್ಲಿ ಇರುವ ತಪಸ್ವಿಗಳಿಗೆ ಎಲ್ಲರಿಗೂ ಕಾವಲು ಆಗುತ್ತದೆ. ವೀರವರ, ಅಲ್ಲಿ ಕಾಣುತ್ತದೆ ನೋಡು, ಹಿಪ್ಪೆಯ ಮರದ ತೋಪು. ತೋಪಿನಿಂದ ಉತ್ತರಕ್ಕೆ ಹೋದರೆ ಒಂದು ದೊಡ್ಡ ಆಲದ ಮರ ಸಿಗುತ್ತದೆ. ಅದೇ ದಾರಿಯಲ್ಲಿ ಆ ಮರವನ್ನು ದಾಟಿಹೋದರೆ ಅಲ್ಲಿ ಒಂದು ದಿಬ್ಬ ಇದೆ. ಅದನ್ನು ಏರಿಹೋದರೆ ಒಂದು ಬೆಟ್ಟ ಕಾಣಿಸುತ್ತದೆ. ಆ ಬೆಟ್ಟದ ಅಡಿಯಲ್ಲಿ ಇದೆ ಪಂಚವಟಿ. ಅಲ್ಲಿ ಸದಾಕಾಲದಲ್ಲೂ ಹೂ ಅರಳಿ ಇರುತ್ತವೆ." ಅಗಸ್ತ್ಯಮಹರ್ಷಿಗಳು ಹೀಗೆ ಹೇಳಿದರು.

ಸೀತಾಲಕ್ಷ್ಮಣರೂ ರಾಮನೂ ಆ ಮಹರ್ಷಿಗಳಿಗೆ ಪಾದಾಭಿವಂದನೆ ಮಾಡಿ ಅವರ ಅಪ್ಪಣೆ ಪಡೆದರು. ಅಣ್ಣತಮ್ಮಂದಿರು ಇಬ್ಬರೂ ಬಿಲ್ಲುಬಾಣ ಹಿಡಿದು ಸೀತಾಸಮೇತರು ಆಗಿ ಮುಂದೆ ಪಯಣಮಾಡಿದರು. ಅಗಸ್ತ್ಯ ಮಹರ್ಷಿ ಹೇಳಿದ ದಾರಿಯಲ್ಲೇ ಎಚ್ಚರಿಕೆಯಿಂದ ಸಾಗಿದರು.

೧೪

ಪಂಚವಟಿಗೆ ಹೋಗುತ್ತ ಇದ್ದರು ಸೀತಾರಾಮಲಕ್ಷ್ಮಣರು. ದಾರಿಯಲ್ಲಿ ಒಂದು ಆಲದ ಮರದ ಮೇಲೆ ಬಹಳ ದೊಡ್ಡ ಗಾತ್ರದ ಹದ್ದು ಕುಳಿತಿತ್ತು. ನೋಡಿದರೇನೇ ಅದರ ಭಯಂಕರ ಪರಾಕ್ರಮ ತಿಳಿಯುತ್ತಿತ್ತು. ಯಾರೋ ರಾಕ್ಷಸ ಈ ವೇಷದಲ್ಲಿ ಇದ್ದಾನೆ ಎಂದು ಸಂದೇಹಪಟ್ಟು "ಯಾರು ನೀನು?" ಎಂದು ಕೇಳಿದರು. ಆ ಹದ್ದು ಸವಿಮಾತಿನಿಂದ ಹೇಳಿತು: "ರಾಮ, ನಾನು ನಿಮ್ಮ ತಂದೆ ದಶರಥರಾಯನ ಪರಮಸ್ನೇಹಿತ."

ಅದನ್ನು ಕೇಳಿ ರಾಮ ಅದನ್ನು ಗೌರವಿಸಿದ. ಅದರ ಹೆಸರನ್ನೂ ವಂಶ ವೃತ್ತಾಂತವನ್ನೂ ಕೇಳಿದ. ಆ ಪಕ್ಷಿ ಮೊದಲು ಸಮಸ್ತ ಪ್ರಾಣಿಗಳ ಉತ್ಪತ್ತಿ ಯಿಂದ ಪ್ರಾರಂಭಿಸಿತು: "ರಾಮ, ಮೊದಲು ಪ್ರಜಾಪತಿಗಳ ವಿಷಯ ಹೇಳುತ್ತೇನೆ. ಮೊದಲನೆ ಪ್ರಜಾಪತಿ ಕರ್ದಮ. ಎರಡನೆಯವನು ವಿಕ್ರೀತ. ಆಮೇಲೆ ಶೇಷ. ಅನೇಕರು ಪುತ್ರರನ್ನು ಪಡೆದ ವೀರ್ಯವಂತ ಸಂಶ್ರಯ ತರುವಾಯ. ಆಮೇಲೆ ಸ್ಥಾಣು, ಮರೀಚಿ, ಅತ್ರಿ, ಮಹಾಬಲಾಢ್ಯ ಕ್ರತು, ಪುಲಸ್ತ್ಯ, ಅಂಗೀರಸ, ಪ್ರಚೇತಸ, ಪುಲಹ, ದಕ್ಷ, ವಿವಸ್ವಂತರು ಪ್ರಜಾಪತಿಗಳು ಆದರು. ಅರಿಷ್ಟನೇಮಿ ಎಂಬ ನಾಮಾಂತರದ ಕಾಶ್ಯಪನೇ ಕೊನೆಯ ಪ್ರಜಾಪತಿ.

"ರಾಮ, ಇದರಲ್ಲಿ ದಕ್ಷಪ್ರಜಾಪತಿಗೆ ಅರವತ್ತುಮಂದಿ ಹೆಣ್ಣುಮಕ್ಕಳು. ಎಲ್ಲರೂ ಕೀರ್ತಿವಂತರು. ಅವರಲ್ಲಿ ಎಂಟು ಜನ ಬಹಳ ಸುಂದರಿಯರು: ಅದಿತಿ, ದಿತಿ, ದನು, ಕಾಳಿಕೆ, ತಾಮ್ರೆ, ಕ್ರೋಧವಶೆ, ಮನು, ಅನಲೆ. ಇವರನ್ನು ಕಾಶ್ಯಪ ಮದುವೆ ಆದ. ಕಾಶ್ಯಪನಿಗೆ ಬಹಳ ಹಿಗ್ಗು. ತನಗೆ ಸಮಾನರು ಆಗಿ ಮೂರು ಲೋಕಗಳನ್ನೂ ಆಳಬಲ್ಲ ಮಕ್ಕಳನ್ನು ಹಡೆಯಬೇಕು ಎಂದು ಹೆಂಡತಿಯರಿಗೆ ಹೇಳಿದ. ದಿತಿ, ಅದಿತಿ, ದನು, ಕಾಳಿಕೆಯರು ಅದೇ ರೀತಿ ಸಂಕಲ್ಪ ಮಾಡಿದರು. ಉಳಿದ ಭಾರ್ಯೆಯರು ಅಸಡ್ಡೆಯಿಂದ ಇದ್ದರು.

"ರಾಮಚಂದ್ರ, ಅದಿತಿಗೆ ಹನ್ನೆರಡು ಮಂದಿ ಆದಿತ್ಯರು ಅಷ್ಟವಸುಗಳು, ಹನ್ನೊಂದು ಮಂದಿ ರುದ್ರರು, ಇಬ್ಬರು ಅಶ್ವಿನೀ ದೇವತೆಗಳು, ಹೀಗೆ ಮೂವತ್ತುಮೂರು ದೇವತೆಗಳು ಹುಟ್ಟಿದರು. ಮಹಾಕೀರ್ತಿವಂತ ದೈತ್ಯ ರನ್ನು ಹಡೆದಳು ದಿತಿ. ಕಾಡುಕಡಲುಗಳ ಈ ಭೂಮಿ ಎಲ್ಲವೂ ಮೊದಲು ದೈತ್ಯರ ವಶದಲ್ಲೇ ಇತ್ತು. ದನು ಹಯಗ್ರೀವನನ್ನು ಹಡೆದಳು. ಕಾಳಿಕೆಗೆ ನರಕ, ಕಾಲಕ ಇಬ್ಬರು ಮಕ್ಕಳು ಆದರು. ತಾಮ್ರೆಗೆ ಲೋಕಪ್ರಸಿದ್ಧರು ಆದ ಕ್ರೌಂಚಿನಿ, ಭಾಸಿನಿ, ಶ್ಯೇನಿ, ಧೃತರಾಷ್ಟ್ರಿ, ಶುಕಿ ಎಂಬ ಪಂಚಕನ್ಯೆಯರು. ಅವರಲ್ಲಿ ಕ್ರೌಂಚಿನಿಗೆ ಗೂಬೆಗಳು ಹುಟ್ಟಿದವು. ಭಾಸಿನಿಗೆ ಭಾಸಪಕ್ಷಿಗಳು. ಶ್ಯೇನಿಗೆ ಮಹಾವೀರ್ಯವಂತ ಆದ ಹದ್ದುಗಳು ಹುಟ್ಟಿದವು. ಧೃತರಾಷ್ಟ್ರಿ ಹಂಸ ಕಲಹಂಸ ಚಕ್ರವಾಕ ಪಕ್ಷಿಗಳನ್ನು ಹಡೆದಳು. ಶುಕಿಗೆ ನತೆ ಎಂಬ ಮಗಳು. ನತೆಗೆ ವಿನತೆ.

"ಕಶ್ಯಪನ ಆರನೆ ಹೆಂಡತಿ ಕ್ರೋಧವಶೆಗೆ ಹತ್ತು ಮಂದಿ ಹೆಣ್ಣು ಮಕ್ಕಳು : ಮೃಗಿ, ಮೃಗಮಂದೆ, ಹರಿ, ಭದ್ರಮದೆ, ಮಾತಂಗಿ, ಶಾರ್ದೂಲಿ, ಶ್ವೇತೆ, ಸುರಭಿ, ಸರ್ವಲಕ್ಷಣಸಂಪನ್ನೆ ಸುರಸೆ, ಕದ್ರು. ಎಲ್ಲಾ ಜಿಂಕೆಗಳಿಗೂ ಮೂಲ ಮೃಗಿ. ಕರಡಿ, ಚಮರೀಮೃಗ, ಸೃಮರಮೃಗಗಳ ತಾಯಿ ಮೃಗಮಂದೆ. ಹರಿಗೆ ಸಿಂಹಗಳು ವಾನರಗಳು ಹುಟ್ಟಿದವು. ಭದ್ರಮದೆಗೆ ಇರಾವತಿ. ಇರಾವತಿಗೆ ಗಜಶ್ರೇಷ್ಠ ಐರಾವತ. ಅದು ದೇವೇಂದ್ರನ ವಾಹನ ಆಯಿತು. ಮಾತಂಗಿಗೆ ಆನೆಗಳು ಹುಟ್ಟಿದವು. ಶಾರ್ದೂಲಿಗೆ ಹುಲಿಗಳು, ಸಿಂಗಳೀಕಗಳು. ಶ್ವೇತೆಗೆ ದಿಗ್ಗಜಗಳು. ಸುರಭಿಗೆ ರೋಹಿಣಿ, ಗಂಧರ್ವಿ ಹುಟ್ಟಿದರು. ರೋಹಿಣಿಗೆ ಹಸುಗಳೂ ಗಂಧರ್ವಿಗೆ ಕುದುರೆಗಳೂ ಆದವು. ಸುರಸೆಗೆ ದಿವ್ಯನಾಗಗಳು, ಕದ್ರುವಿಗೆ ಸಾಮಾನ್ಯ ಸರ್ಪಗಳು. ಮನುವಿಗೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರು ಹುಟ್ಟಿದರು. ಅನಲೆ ಉತ್ತಮ ಫಲ ಕೊಡುವ ಗಿಡಮರಗಳನ್ನು ಸೃಷ್ಟಿಸಿದಳು.

"ರಾಮ, ನನ್ನ ವಂಶದ ವೃತ್ತಾಂತವನ್ನು ಕೇಳು. ಶುಕಿಗೆ ವಿನತೆ ಮೊಮ್ಮಗಳು. ಕದ್ರು ಸುರಸೆಯ ತಂಗಿ. ಸಾವಿರ ಹೆಡೆಗಳಿಂದ ಭೂಮಿಯನ್ನು ಹೊತ್ತುಕೊಂಡಿರುವ ಆದಿಶೇಷ ಕದ್ರುವಿನ ಮಗ. ವಿನತೆಗೆ ಗರುಡ ಅರುಣ ಇಬ್ಬರು ಮಕ್ಕಳು. ಅರುಣನಿಗೆ ಶ್ಯೇನಿಯಲ್ಲಿ ಹುಟ್ಟಿದ ಮಗ ನಾನು. ನನ್ನ ಅಣ್ಣ ಸಂಪಾತಿ. ನನ್ನ ಹೆಸರು ಜಟಾಯು.

"ನಿನಗೆ ಇಷ್ಟ ಇದ್ದರೆ ವನವಾಸದಲ್ಲಿ ನಿನಗೆ ಸಹಾಯಕ ಆಗಿ ಇರಲು ನನಗೆ ಆಸೆ. ಈ ಅರಣ್ಯ ಬಹಳ ದುರ್ಗಮ. ಇಲ್ಲಿ ಕ್ರೂರಮೃಗಗಳು ಹೆಚ್ಚು. ರಾಕ್ಷಸರ ಹಾವಳಿಯೂ ಇಲ್ಲಿ ಬಹಳ. ಎಲ್ಲೆಲ್ಲೂ ಕ್ರೂರಮೃಗಗಳ ಸುತ್ತಾಟ ರಾಕ್ಷಸರ ತಿರುಗಾಟ ಯಾವಾಗಲೂ ಇರುತ್ತದೆ. ನೀನೂ ಲಕ್ಷ್ಮಣನೂ ಎಲ್ಲಿಗೆ ಆದರೂ ಹೊರಗೆ ಹೋಗುವ ಪ್ರಸಂಗ ಬಂದರೆ, ನಾನು ಸೀತಾದೇವಿಗೆ ಕಾವಲು ಇರುತ್ತೇನೆ."

ಜಟಾಯುವನ್ನು ಆಲಿಂಗಿಸಿದ ರಾಮ. ಪದೇ ಪದೇ ತನಗೂ ದಶರಥನಿಗೂ ಇದ್ದ ಸ್ನೇಹದ ಮಾತನ್ನು ಜಟಾಯು ಹೇಳುತ್ತಿದ್ದರೆ ರಾಮನಿಗೆ ಮಹದಾನಂದ. ಬೆಂಕಿ ಪತಂಗಗಳನ್ನು ಸುಡುವಂತೆ ಶತ್ರುಗಳನ್ನು ಸುಡುವ ರಾಮ ಸೀತಾಲಕ್ಷ್ಮಣ ಜಟಾಯುಸಮೇತ ಮುಂದೆ ನಡೆದ.

೧೫

ಸೀತಾರಾಮಲಕ್ಷ್ಮಣರು ಪಂಚವಟಿಗೆ ಬಂದರು. ಅಲ್ಲಿ ನಾನಾವಿಧ ಮೃಗಗಳು, ಬಗೆಬಗೆಯ ಹಾವುಗಳು. ಅಲ್ಲಿ ಆಶ್ರಮ ಕಟ್ಟಲು ಲಕ್ಷ್ಮಣನಿಗೆ ಹೇಳಿದ. "ತಮ್ಮ, ಇದೇ ಅಗಸ್ತ್ಯರು ಹೇಳಿದ ಸ್ಥಳ. ಎಲ್ಲೆಲ್ಲೂ ಹೂ ಬಿಟ್ಟು ಇದೆ. ಈ ಕಾಡನ್ನು ಎಲ್ಲಾ ತಿರುಗಾಡಿ ನೋಡು. ಎಲ್ಲಿ ನಾವು ಆಶ್ರಮವನ್ನು ಕಟ್ಟಬೇಕೋ ನಿರ್ಧರಿಸು. ಆ ಸ್ಥಳ ನನಗೂ ನಿನಗೂ ಸೀತೆಗೂ ಮನಸಿಗೆ ಒಪ್ಪಬೇಕು. ಸುತ್ತಲೂ ರಮಣೀಯ ವೃಕ್ಷಸಮೂಹ ಇರಲಿ. ನೆಲ ಹಳ್ಳ ಆಗಬಾರದು. ಎತ್ತರ ಆಗಿ ಸಮನೆಲ ಆಗಬೇಕು. ಸಮಿತ್ತು, ಹೂ, ದರ್ಭೆ ಮೊದಲು ಆದ ವಸ್ತುಗಳು ಹತ್ತಿರದಲ್ಲೇ ಸಿಗಬೇಕು. ನೀರು ಸಮೃದ್ಧಿ ಆಗಿ ಇರಬೇಕು. ಇಂಥ ಸ್ಥಳ ಒಂದನ್ನು ಹುಡುಕು."

ಸೀತೆಯ ಇದಿರಿಗೇ ರಾಮನ ಮುಂದೆ ಕೈಜೋಡಿಸಿ ನಿಂತು ಲಕ್ಷ್ಮಣ ಹೇಳಿದ: "ಅಣ್ಣ, ನಿನ್ನ ಜೊತೆಯಲ್ಲಿ ನಾನು ನೂರು ವರ್ಷ ಇದ್ದರೂ ಪರ-ತಂತ್ರನೇ ವಿನಾ ಸ್ವತಂತ್ರನಲ್ಲ. ನೀನೇ ನಿನ್ನ ಮನಸಿಗೆ ಪ್ರಿಯ ಆದ ಒಂದು ಸ್ಥಳವನ್ನು ತೋರಿಸಿ ಆಶ್ರಮವನ್ನು ಕಟ್ಟು ಎಂದರೆ ಅಲ್ಲಿ ಕಟ್ಟುತ್ತೇನೆ."

ಲಕ್ಷ್ಮಣ ಹೇಳಿದ ಮಾತನ್ನು ಕೇಳಿ ಸಂತೋಷಗೊಂಡು ರಾಮ ತಾನೇ ಒಂದು ಅನುಕೂಲ ಸ್ಥಳವನ್ನು ಆರಿಸಿದ. ಲಕ್ಷ್ಮಣನ ಕೈ ಹಿಡಿದುಕೊಂಡು, "ತಮ್ಮ ಲಕ್ಷ್ಮಣ, ಈ ಸ್ಥಳ ತಗ್ಗುದಿಣ್ಣೆ ಇಲ್ಲದೆ ಸಮ ಆಗಿ ಇದೆ. ಸುತ್ತಲೂ ಹೂಗಿಡ. ಹತ್ತಿರದಲ್ಲೆ ಒಂದು ಕೊಳ ಇದೆ. ಅದರ ತುಂಬಾ ಸುವಾಸನೆಯ ಕಮಲದ ಹೂ. ಸೂರ್ಯನಂತೆ ಹೊಳೆಯುತ್ತ ಇವೆ ಕಮಲ. ಹತ್ತಿರದಲ್ಲಿಯೆ ಆಗಸ್ತ್ಯರು ಹೇಳಿದಂತೆ ಗೋದಾವರಿ ನದಿ ಹರಿಯುತ್ತಾ ಇದೆ. ಅಲ್ಲಿ ನೋಡು. ಹಂಸಗಳೂ ಚಕ್ರವಾಕಗಳೂ ನೀರುಕೋಳಿಗಳೂ ತಿರುಗಾಡುತ್ತ ಇವೆ. ತೀರ ಹತ್ತಿರವೂ ಅಲ್ಲ, ತೀರಾ ದೂರವೂ ಅಲ್ಲ, ಬೆಟ್ಟದ ಸಾಲು ಕಾಣುತ್ತ ಇದೆ. ಅನೇಕ ಮೃಗಗಳಿಗೆ ಅದು ಆವಾಸಸ್ಥಾನ. ಎಷ್ಟೋ ಆನೆ ಇವೆ ಅಲ್ಲಿ. ಅಲ್ಲಿಂದ ನವಿಲಿನ ಕೇಕೆ ಕೇಳಿಸುತ್ತ ಇದೆ. ಬೆಟ್ಟಗಳಲ್ಲಿ ಅನೇಕ ಗುಹೆ ಇವೆ. ಹೂ ಬಿಟ್ಟ ಆ ವೃಕ್ಷರಾಜಿಯನ್ನು ನೋಡು ಅಲ್ಲಿ. ದೊಡ್ಡ ದೊಡ್ಡ ಆನೆಗಳ ಹಾಗೆ ಇವೆ ಬೆಟ್ಟಗಳು. ಆ ಬೆಟ್ಟಗಳಲ್ಲಿ ಅಲ್ಲಲ್ಲಿ ಕಾಣಬರುವ ಬಂಗಾರ ಬೆಳ್ಳಿ ತಾಮ್ರದ

ಬಣ್ಣಗಳ ಆದಿರು ಥಳಥಳ ಹೊಳೆಯುತ್ತ ಇವೆ, ಆ ಆನೆಗಳಿಗೆ ಮಾಡಿದ ಅಲಂಕಾರದಂತೆ.

"ಆ ಬೆಟ್ಟಗಳ ಮೇಲೆ ಮತ್ತಿ ತಾಳೆ ಹೊಂಗೆ ಖರ್ಜೂರ ಹಲಸು ಮಾವು ಕಡವು ನೇಮಿ ಹೊನ್ನೆ ಅಸುಗೆ ನಿಂಬೆ ತಿಲಕ ಕೇದಗೆ ಗಿಡಗಳು ಹೂ ಬಿಟ್ಟು ಘಮಘಮಿಸುತ್ತ ಇವೆ. ಬಳ್ಳಿಗಳು ಹೇಗೆ ಸುತ್ತಿಕೊಂಡು ಇವೆ ನೋಡು. ಆ ಅಶೋಕಮರಗಳು ಕದಂಬವೃಕ್ಷಗಳು ಎಷ್ಟು ಎತ್ತರ ಬೆಳೆದಿವೆ. ಕಣ್ಣಿಗೆ ಹಬ್ಬ ಆಗಿ ಕಾಣುತ್ತ ಇದೆ ಎಲ್ಲವೂ. ಚಂದನವೃಕ್ಷಗಳೂ ಸ್ಪಂದನವೃಕ್ಷಗಳೂ ಉಮ್ಮತ್ತಿ ಮುತ್ತುಗ ಬನ್ನಿ ಪಾದರಿ ಗಿಡಗಳೂ ತುಂಬಿ ಇವೆ. ಇದು ಪವಿತ್ರ ಸ್ಥಳ. ಇಲ್ಲಿ ಅನೇಕ ಮೃಗಪಕ್ಷಿಗಳು ಹಾಯಿ ಆಗಿ ವಾಸಮಾಡುತ್ತ ಇವೆ. ನಾವೂ ಈ ಜಟಾಯುವೂ ಇಲ್ಲೇ ಇರೋಣ" ಎಂದ ರಾಮ.

ಇಷ್ಟು ಹೇಳಿದುದೇ ತಡ ಲಕ್ಷ್ಮಣ ಪರ್ಣಶಾಲೆಯನ್ನು ಕಟ್ಟಲು ಪ್ರಾರಂಭಿಸಿದ. ಪರ್ಣಶಾಲೆ ವಿಸ್ತಾರ ಆದದ್ದು, ಉತ್ತಮ ಆದದ್ದು. ಲಕ್ಷ್ಮಣ ಬಲಾಢ್ಯ, ಕಾರ್ಯಚತುರ. ನೆಲವನ್ನು ಅಗೆದು ಸಮ ಮಾಡಿದ. ಗಟ್ಟಿ ಬೊಂಬುಗಳನ್ನು ಕಂಬ ಆಗಿ ನೆಟ್ಟ. ಆ ಕಂಬಗಳ ಮೇಲೆ ಬಿದಿರಿನ ತೊಲೆಗಳನ್ನು ಕೂಡಿಸಿದ. ತೊಲೆಗಳ ಮೇಲೆ ಅಡ್ಡಡ್ಡ ಬನ್ನಿ ಮರದ ಕೊಂಬೆಗಳನ್ನು ಹರವಿದ. ಅವನ್ನು ಅಂಬುಗಳಿಂದ ಬಿಗಿದು ಕಟ್ಟಿ ಅದರ ಮೇಲೆ ದರ್ಭೆ ನೊದೆ ತರಗೆಲೆಗಳನ್ನು ಹೊದಿಸಿದ. ಒಳಗಡೆ ನೆಲವನ್ನು ಮೆತ್ತಗೆ ಮಾಡಿ ಬೇಗ ಪರ್ಣಶಾಲೆಯನ್ನು ತಯಾರಿಸಿದ. ಆಶ್ರಮದ ಕೆಲಸ ಮುಗಿದಮೇಲೆ ಲಕ್ಷ್ಮಣ ಗೋದಾವರಿ ನದಿಯಲ್ಲಿ ಸ್ನಾನಮಾಡಿ ತಾವರೆ ಹೂಗಳನ್ನೂ ಹಣ್ಣನ್ನೂ ತಂದ. ಶಾಸ್ತ್ರ ವಿಧಿಯಂತೆ ಪುಷ್ಪಬಲಿ ಮುಂತಾದ ಶಾಂತಿಕರ್ಮಗಳನ್ನು ಮಾಡಿದ. ವಾಸ್ತು ಪೂಜೆ ಮಾಡಿದ.

ಸೀತಾರಾಮರು ಆ ಪರ್ಣಶಾಲೆಯನ್ನು ನೋಡಿ ಬಹಳ ಹಿಗ್ಗಿದರು. ಸಂತೋಷದಿಂದ ರಾಮ ತನ್ನ ಎರಡೂ ತೋಳುಗಳಿಂದಲೂ ತಮ್ಮನನ್ನು ಬಿಗಿದು ಅಪ್ಪಿಕೊಂಡ. "ತಮ್ಮ, ನನ್ನ ಸಂತೋಷವನ್ನು ಇಷ್ಟು ಎಂದು ಹೇಳಲಾರೆ. ದೊಡ್ಡ ಕೆಲಸವನ್ನು ಮಾಡಿದೆ. ನಿನಗೆ ಏನು ಬಹುಮಾನ ಕೊಡಲಿ? ನಿನ್ನನ್ನು ಅಪ್ಪಿಕೊಳ್ಳುತ್ತೇನೆ. ಇದೇ ಬಹುಮಾನ.

"ಲಕ್ಷ್ಮಣ, ನನ್ನ ಮನಸ್ಸನ್ನು ತಿಳಿದುಕೊಂಡು ಇದೀಯೆ. ನನಗೆ ಯಾವುದು ಸಂತೋಷವೋ ಅದನ್ನೇ ಮಾಡುತ್ತೀಯೆ. ಧರ್ಮವನ್ನು ಎಂದೂ

ತಪ್ಪಿಲ್ಲ ನೀನು. ನನ್ನನ್ನು ಕಾಪಾಡುತ್ತ ಇದೀಯೆ. ನಿನ್ನನ್ನು ನೋಡಿದರೆ ಧರ್ಮಾತ್ಮ ದಶರಥರಾಯ ಇನ್ನೂ ಬದುಕಿದಾನೆ ಎಂದುಕೊಳ್ಳಬೇಕಾಗಿದೆ." ಹೀಗೆ ಎಂದು ಆಶ್ರಮವನ್ನು ಹೊಕ್ಕ. ಫಲಮೂಲಗಳು ಹೇರಳ ಆದ ಆ ಪಂಚವಟಿಯಲ್ಲಿ ಮೂವರೂ ನೆಲೆಸಿದರು. ಸೀತಾಲಕ್ಷ್ಮಣರಿಬ್ಬರೂ ರಾಮನ ಸೇವೆಮಾಡುತ್ತ ಇದ್ದರು. ದೇವಲೋಕದಲ್ಲಿ ದೇವೇಂದ್ರನಂತೆ ಸುಖಸಂತೋಷ ಗಳಿಂದ ರಾಮ ಕಾಲ ಕಳೆದ.

೧೬

ಮಹಾತ್ಮ ರಾಮ ಆಶ್ರಮದಲ್ಲಿ ಸುಖದಿಂದ ಕಾಲ ಕಳೆಯುತ್ತ ಇದ್ದ. ಶರತ್ಕಾಲ ಕಳೆಯಿತು. ಹೇಮಂತ ಋತು ಬಂತು. ಕಾಮಿನೀಕಾಮುಕರಿಗೆ ಬಹಳ ಇಷ್ಟ ಆದ ಕಾಲ.

ಒಂದು ಬೆಳಗಿನ ಜಾವ. ರಮಣೀಯ ಗೋದಾವರಿಯಲ್ಲಿ ಸ್ನಾನ ಮಾಡಲು ಹೊರಟ ರಾಮ. ವೀರ್ಯವಂತ ಲಕ್ಷ್ಮಣ ಕಲಶವನ್ನು ಹಿಡಿದುಕೊಂಡು ವಿನಯದಿಂದ ರಾಮನ ಹಿಂದೆ ಹೊರಟ. ಸೀತೆಯೂ ಹೊರಟಳು. ಆಗ ಲಕ್ಷ್ಮಣ ಹೇಳಿದ: "ಅಣ್ಣಾ, ನಿನಗೆ ಇಷ್ಟ ಆದ ಹೇಮಂತಋತು ಬಂದಿದೆ. ಇಡೀ ವರ್ಷಕ್ಕೆ ಈ ಋತು ಒಂದು ಅಲಂಕಾರ. ಮಂಜಿನಿಂದ ಮನುಷ್ಯರ ಮೈ ಬಿರಿದು ಬಿರುಸು ಈಗ. ಭೂಮಿ ಪೈರುಪಚ್ಚೆಗಳಿಂದ ಮನೋಹರ. ನೀರು ಈಗ ಹಿಮಶೀತಲ; ಕುಡಿಯುವ ಬಯಕೆಯೇ ಕಡಮೆ. ಎಲ್ಲರೂ ಬೆಂಕಿ ಕಾಯಿಸುತ್ತಾರೆ. ಬೆಂಕಿ ಎಲ್ಲರಿಗೂ ಬೇಕು. ಹೊಸ ಧಾನ್ಯ ಬರುತ್ತದೆ. ಅದನ್ನು ತಿನ್ನುವ ಮೊದಲು ಸತ್ಪುರುಷರು ಅಗ್ರಯಣದ ಯಜ್ಞಮಾಡಿ ತಮ್ಮ ಪಾಪಗಳನ್ನು ನೀಗುತ್ತಾರೆ. ಹಳ್ಳಿಗಳಲ್ಲಿ ಆಕಳ ಹಾಲು ಈಗ ಯಥೇಷ್ಟ. ಪದಾರ್ಥಗಳು ಸಮೃದ್ಧಿ ಆಗಿ ಸಿಗುತ್ತವೆ. ರಾಜಮಹಾರಾಜರು ದಂಡಯಾತ್ರೆಗೆ ಹೊರಡುವುದೂ ಈಗಲೇ.

"ಅಣ್ಣಾ, ಸೂರ್ಯ ದಕ್ಷಿಣ ದಿಕ್ಕಿಗೆ ಬಂದು ಇದಾನೆ. ಉತ್ತರ ದಿಕ್ಕು ಈಗ ಕುಂಕುಮ ಇಲ್ಲದ ಹೆಂಗಸಿನಂತೆ ಇದೆ. ಸೂರ್ಯ ದೂರ ಹೊರಟುಹೋದುದ ರಿಂದ ಹಿಮಗಿರಿ ಮತ್ತಷ್ಟು ಮಂಜಿನಿಂದ ತುಂಬಿ ಇದೆ. ಹಿಮಗಿರಿ ಎಂಬ

ಹೆಸರು ಸಾರ್ಥಕ ಆಯಿತು ಅದಕ್ಕೆ. ಈಗ ನಡುಹಗಲಿನಲ್ಲಿಯೂ ಸೂರ್ಯನ ಬಿಸಿಲು ಹಿತಕರ. ಬಿಸಿಲಿನಲ್ಲಿ ತಿರುಗಾಡಿದರೆ ಹಾಯಾಗಿ ಇರುತ್ತದೆ. ಈಗ ಯಾರಿಗೂ ಮರದ ನೆರಳು ತಣ್ಣನೆ ನೀರು ಬೇಡ. ಸೂರ್ಯನೂ ಈಗ ವೃದ್ಧ. ಎಲ್ಲಿ ನೋಡಿದರೂ ಮಂಜು ಬೀಳುತ್ತ ಇದೆ. ಚಳಿ ಗಾಳಿ ಬಹಳ ಹೆಚ್ಚು. ಕಾಡಿನ ಪ್ರಾಣಿಗಳು ಚಳಿಯ ಬಾಧೆಯನ್ನು ತಡೆಯಲಾರದೆ ಹೊರಗೇ ತಲೆ ಇಡುತ್ತ ಇಲ್ಲ. ಅರಣ್ಯ ಈಗ ಜನಶೂನ್ಯ ಆಗಿದೆ. ಯಾರೂ ನೆಲದ ಮೇಲೆ ಮಲಗಲು ಸಾಧ್ಯ ಇಲ್ಲ. ಮಂಜು ಮುಸುಕಿ ಏನೂ ಕಾಣಬರುವುದೇ ಇಲ್ಲ. ರಾತ್ರಿಯ ಹೊತ್ತು ಗಾಳಿ ಬಹಳ ತಂಪು. ಎಷ್ಟು ಹೊತ್ತು ಆದರೂ ರಾತ್ರಿ ಕಳೆಯುವುದೇ ಇಲ್ಲ. ಚಂದ್ರ ಬಹಳ ಸೊರಗಿದಾನೆ. ಚಂದ್ರನ ಕಾಂತಿ ಎಲ್ಲವೂ ಸೂರ್ಯನಿಗೆ ಬಂದಹಾಗೆ ಇದೆ. ಕನ್ನಡಿಯ ಮೇಲೆ ಉಸಿರು ಬಿಟ್ಟರೆ ಹೇಗೋ ಹಾಗೆ ಚಂದ್ರನ ಬಣ್ಣ ಕುಂದಿ ಇದೆ. ಹುಣ್ಣಿಮೆಯ ಬೆಳುದಿಂಗಳು ಕೂಡ ಸೊಂಪು ಆಗಿ ಇಲ್ಲ. ಅದಕ್ಕೂ ಎಡೆಬಿಡದ ಮಂಜಿನ ಬಾಧೆ. ಕಾಡಿನಲ್ಲಿ ಬಿಸಿಲಿಗೆ ಬಳಲಿದ ಸೀತಾದೇವಿಯ ಹಾಗೆ ಇದೆ ಬೆಳುದಿಂಗಳು. ಬಾಡಿದರೂ ಸೀತಾದೇವಿಗೆ ಸೊಬಗು ಇದೆ. ಇದಕ್ಕೆ ಇಲ್ಲ. ಬೆಳಗಿನ ಜಾವದ ಪಶ್ಚಿಮದ ಗಾಳಿ ಮೊದಲೇ ತಂಪು. ಈಗ ಮಂಜು ಸೇರಿ ಕೊರೆಯುತ್ತದೆ ತಣ್ಣಗೆ.

"ಮಂಜು ಮುಸುಕಿದ ಕಾಡು ಸೂರ್ಯ ಹುಟ್ಟಿದಾಗ ನಳನಳಿಸುತ್ತ ಕಾಣುತ್ತದೆ. ಸೂರ್ಯನನ್ನು ಕಂಡು ಕ್ರೌಂಚ ಪಕ್ಷಿಗಳೂ ಸಾರಸ ಪಕ್ಷಿಗಳೂ ಇಂಪು ಆಗಿ ಸದ್ದುಮಾಡುತ್ತ ಇವೆ. ಬತ್ತದ ಪಯಿರು ಮಾಗಿ ಬಂಗಾರದ ಬಣ್ಣಕ್ಕೆ ತಿರುಗಿದೆ. ಬತ್ತದ ತೆನೆ ಖರ್ಜೂರದ ಹೂವಿನಂತೆ ಹೊಳೆಯುತ್ತ ತಮ್ಮ ಭಾರಕ್ಕೆ ಪಯಿರನ್ನು ಬಗ್ಗಿಸಿವೆ. ಹೊತ್ತು ಏರಿದರೂ ಸೂರ್ಯನ ಕಿರಣ ಗಳಿಗೆ ಮಂಜಿನ ಹನಿ ಮುಸುಕಿ ಸೂರ್ಯ ತಣ್ಣಗೆ ಇದಾನೆ ಚಂದ್ರನ ಹಾಗೆ. ಬೆಳಗ್ಗೆ ಬಿಸಿಯೇ ಇಲ್ಲ ಬಿಸಿಲಿನಲ್ಲಿ. ಸ್ವಲ್ಪ ಮೈಗೆ ಹಿತ ಎನಿಸಬೇಕಾದರೆ ಬಿಸಿಲು, ಹೊತ್ತು ಪೂರಾ ಏರಬೇಕು. ಆಗ ಸೂರ್ಯಬಿಂಬ ಎಳೆಗೆಂಪು ಬಿಳುಪು ಆಗಿ ಕಾಣುತ್ತ ಬಿಸಿಲು ಹಾಯಿ ಆಗುತ್ತದೆ.

"ಹಸಿರು ಹುಲ್ಲಿನ ಮೇಲೆ ಇಬ್ಬನಿ ಬಿದ್ದು ಬಿಸಿಲಿನಲ್ಲಿ ಆ ಹನಿ ತಳತಳ ಹೊಳೆಯುತ್ತವೆ ವಜ್ರಗಳಂತೆ. ಬಹಳ ನೀರಡಸಿ ನೀರು ಕುಡಿಯಲು ಧಾವಿಸಿ ಬರುತ್ತದೆ ಕಾಡಾನೆ. ಆದರೆ ನೀರಿಗೆ ಸೊಂಡಿಲು ಇಟ್ಟ ಕೂಡಲೇ ಆ ಶೀತವನ್ನು

ತಡೆಯಲಾರದೆ ತನ್ನ ಸೊಂಡಿಲನ್ನು ಹಿಂದಕ್ಕೆ ಮುದುರಿಕೊಳ್ಳುತ್ತದೆ. ನೋಡಿದೆಯಾ? ಇಲ್ಲಿ ನೀರುಹಕ್ಕಿಗಳೂ ಕೂಡ ಕೊಳದ ಸುತ್ತಲೂ ಕುಳಿತು ಇವೆ ನೀರಿಗೆ ಇಳಿಯಲು ಚಳಿಗೆ ಅಂಜಿ. ರಣರಂಗಕ್ಕೆ ಬಂದು ಹಿಂದೆ ನಿಂತ ಹೇಡಿಗಳ ಹಾಗೆ. ಮಂಜು ಕವಿದು ಕಾಡಿನ ಮರಗಳು ಎಲ್ಲಾ ಮಂಜಿನ ದುಪ್ಪಟಿ ಹೊದೆದುಕೊಂಡ ಹಾಗೆ ಇವೆ. ಎಲೆ ಹೂ ಇಲ್ಲದುದರಿಂದ ಎಲ್ಲವೂ ಕಣ್ಣು ಮುಚ್ಚಿ ನಿದ್ರಿಸುವಂತೆ ಇವೆ. ನದಿಯ ಮೇಲೆ ದಟ್ಟ ಆದ ಮಂಜು. ನದಿಯ ನೀರೇ ಕಾಣದು. ಸಾರಸಪಕ್ಷಿಗಳು ಕಣ್ಣಿಗೆ ಕಾಣವು. ಕೂಗಿದ್ದರಿಂದ ಅಲ್ಲಿ ಇವೆ ಎಂದು ತಿಳಿಯಬೇಕು. ನದೀತೀರದ ಮರಳು ಇಬ್ಬನಿಯಿಂದ ಪೂರಾ ತೊಯ್ದುಹೋಗಿದೆ.

"ಯಾವಾಗಲೂ ಸುರಿಯುವ ಮಂಜು, ಬಿಸಿಯೇ ಇಲ್ಲದ ಬಿಸಿಲು. ಇದರಿಂದ ಬೆಟ್ಟದ ನದಿ ಝರಿಗಳ ನೀರನ್ನೂ ಆಳ ಆದ ಸರೋವರಗಳ ನೀರನ್ನೂ ಬಹಳ ಶೀತ ಆಗಿ ಕುಡಿಯಲು ಸಾಧ್ಯ ಇಲ್ಲ. ವಿಷದ ಹಾಗೆ ಈ ನೀರು. ಮಂಜಿನ ಬಾಧೆಗೆ ತಾವರೆಹೂಗಳಿಗೆ ಬಂದ ಅವಸ್ಥೆಯನ್ನು ನೋಡು. ಒಳಗಿನ ದಿಂಡು ಕೇಸರ ಉದುರಿಹೋಗಿದೆ. ದಂಟು ಮಾತ್ರ ಉಳಿದು ಇದೆ. ತಾವರೆಹೂವಿಗೆ ಇರುವ ಅಂದಚೆಂದ ಕಳೆ ಯಾವುದೂ ಇಲ್ಲ.

"ಇಷ್ಟು ಆದರೂ ಇದು ಭೋಗಕಾಲ. ರಾಮ, ಇಂಥ ಕಾಲದಲ್ಲಿ ಕೂಡ ಸಕಲ ರಾಜಭೋಗಗಳನ್ನು ಬಿಟ್ಟು ನಿನ್ನ ಮೇಲಿನ ಭಕ್ತಿಯಿಂದ ತಪಸ್ಸು ಮಾಡುತ್ತ ಇದಾನಲ್ಲ ಭರತ! ಎಂಥ ಧರ್ಮಾತ್ಮ, ಎಂಥ ಮಾನವೋತ್ತಮ! ಯಾವಾಗಲೂ ನಿನ್ನನ್ನೇ ನೆನೆಯುತ್ತ ನಿನಗಾಗಿ ದುಃಖಿಸುತ್ತ ಫಲಮೂಲ ಗಳನ್ನು ತಿನ್ನುತ್ತ ಮುನಿಯ ಹಾಗೆ ಕಾಲ ಕಳೆಯುತ್ತಾನೆ. ರಾಜ್ಯವನ್ನು ಬಿಟ್ಟು, ರಾಜ ಎಂಬ ಹೆಮ್ಮೆಯನ್ನು ಬಿಟ್ಟ. ಜಡೆ, ನಾರುಮಡಿ. ನೆಲದ ಮೇಲೆ ಮಲಗುವುದು. ಈ ವೇಳೆಗೇ ಎದ್ದು ಸರಯೂ ನದಿಗೆ ಸ್ನಾನಕ್ಕೆ ಹೋಗುತ್ತಾನೆ. ಬಾಲ್ಯದಿಂದಲೂ ಬಹಳ ಮುದ್ದು ಆಗಿ ಬೆಳೆದ ಸುಕುಮಾರ, ಯಾವಾಗಲೂ ಸುಖವನ್ನೆ ಅನುಭವಿಸಿದ ಭರತ ಈ ಅರ್ಧರಾತ್ರಿಯಲ್ಲಿ ಸರಯೂ ನದಿಯ ಶೀತ ಜಲದಲ್ಲಿ ಮುಳುಗಬೇಕಲ್ಲ!

"ರಾಮ, ನೀನು ಇಲ್ಲಿ ತಾಪಸವೃತ್ತಿಯಲ್ಲಿದ್ದರೆ ನಿನ್ನನ್ನೇ ಅನುಸರಿಸಿ ತಾನೂ ಮುನಿವೇಷ ಧರಿಸಿ ಅಯೋಧ್ಯೆಯಲ್ಲಿ ತಾಪಸಿ ಆಗಿ ಇದಾನಲ್ಲ ಭರತ.

ಸ್ವಭಾವದಲ್ಲಿ ಶರೀರದಲ್ಲಿ ಏನೂ ನ್ಯೂನತೆ ಇಲ್ಲ ಅವನಿಗೆ. ತಾವರೆದಳದ ಕಣ್ಣು, ಸ್ವಲ್ಪ ಶ್ಯಾಮವರ್ಣ. ಸತ್ಯವಾದಿ, ಜಿತೇಂದ್ರಿಯ, ವೀರ, ದೀರ್ಘಬಾಹು, ಅರಿಂದಮ. ಅಕೃತ್ಯ ಎಂದರೆ ಹೇಸಿಗೆ ಅವನಿಗೆ. ಅವನಿಗೆ ಎಲ್ಲ ಧರ್ಮವೂ ಗೊತ್ತು. ಪ್ರಿಯವನ್ನೇ ನುಡಿಯುವ ಸ್ವಭಾವ.

"ಅಣ್ಣ, ತಾಯಿಯಂತೆ ಮಕ್ಕಳು ಎನ್ನುತ್ತಾರೆ ಲೋಕದಲ್ಲಿ. ಭರತ ಅದನ್ನು ತಲೆಕೆಳಗೆ ಮಾಡಿದ. ತಂದೆಯಂತೆ ಭರತ. ದಶರಥಮಹಾರಾಜನಂಥ ಸತ್ಪುರುಷ ಗಂಡ, ಭರತನಂಥ ಸಜ್ಜನ ಮಗ; ಹೀಗೆ ಇದ್ದರೂ ಕೈಕೇಯಿಗೆ ಈ ಕ್ರೂರಸ್ವಭಾವ ಏಕೆ ಬಂತೋ?" ಎಂದ ಲಕ್ಷ್ಮಣ.

ಕೈಕೇಯಿಯ ನಿಂದೆಯನ್ನು ಕೇಳಿ ಸಹಿಸಲಿಲ್ಲ ರಾಮ. "ತಮ್ಮ, ಲಕ್ಷ್ಮಣ, ತಾಯಿ ಕೈಕೇಯಿಯನ್ನು ನಿಂದಿಸಬೇಡ. ಸರಿ ಅಲ್ಲ. ಭರತನ ವಿಷಯ ಹೇಳು. ಅವನ ಗುಣಗಳನ್ನು ಕೊಂಡಾಡು. ವನವಾಸ ಮಾಡಲು ನಾನು ದೃಢವ್ರತ ತೊಟ್ಟು ಇದ್ದೇನೆ. ಆದರೂ ಭರತನ ನೆನಪು ಆದಾಗ ಎಲ್ಲಾ ನನ್ನ ಸ್ಥೈರ್ಯ ಕೆಡುತ್ತದೆ, ಮನಸ್ಸು ಹೊಯ್ದಾಡುತ್ತದೆ. ಅವನ ಸವಿಮಾತು, ಮೆದುಮಾತು, ಅವನ ಪ್ರಿಯ ರೀತಿ ನನ್ನ ಮನಸ್ಸಿನಲ್ಲಿ ನೆಟ್ಟು ಇವೆ. ಅವನ ಮಾತು ಅಮೃತಸಮಾನ. ನನ್ನ ಮನಸ್ಸು ಉಕ್ಕಿ ತುಳುಕುತ್ತದೆ ಅವನನ್ನು ನೆನೆದರೆ. ಭರತ ಮಹಾತ್ಮ. ಅವನೂ ಪರಾಕ್ರಮಿ ಆದ ಶತ್ರುಘ್ನನೂ ನೀನೂ ನಾನೂ ಸೀತೆಯೂ ಯಾವಾಗ ಒಟ್ಟಿಗೆ ಸೇರುತ್ತೇವೋ ಏನೋ!" ಎಂದು ಗೋಳಾಡಿದ ರಾಮ.

ಆಮೇಲೆ ಮೂವರೂ ಗೋದಾವರಿಗೆ ಹೋದರು. ಎಲ್ಲರೂ ಅಲ್ಲಿ ಸ್ನಾನಮಾಡಿದರು. ಅಲ್ಲಿ ರಾಮ ಪಿತೃಗಳಿಗೂ ದೇವತೆಗಳಿಗೂ ತರ್ಪಣ ಬಿಟ್ಟ. ಸೂರ್ಯೋಪಸ್ಥಾನ ಮಾಡಿದ. ಸಂಧ್ಯಾವಂದನೆ ಮಾಡಿದ. ಪಾರ್ವತಿ ನಂದೀಶ್ವರರೊಡನೆ ಕೂಡಿ ಬೆಳಗುವ ಪೂಜ್ಯ ಶಿವನಂತೆ ದಿವ್ಯ ತೇಜಸ್ಸಿನಿಂದ ಶೋಭಿಸಿದ ಶ್ರೀರಾಮ ಸೀತಾಲಕ್ಷ್ಮಣರ ಜೊತೆಯಲ್ಲಿ.

೧೭

ಸ್ನಾನ ಸಂಧ್ಯಾವಂದನೆಗಳನ್ನು ಮುಗಿಸಿಕೊಂಡು ಗೋದಾವರಿಯಿಂದ ಸೀತಾಲಕ್ಷ್ಮಣರೊಡನೆ ಪರ್ಣಶಾಲೆಗೆ ಹಿಂದಿರುಗಿ ಬಂದ ರಾಮ. ಪರ್ಣಶಾಲೆ

ಯಲ್ಲಿ ರಾಮಲಕ್ಷ್ಮಣರು ಇಬ್ಬರೂ ಮಧ್ಯಾಹ್ನ ಮಾಡಬೇಕಾದ ಕರ್ಮಗಳು ಎಲ್ಲವನ್ನೂ ಮಾಡಿದರು. ಆಮೇಲೆ ಸೀತಾಲಕ್ಷ್ಮಣರ ಸಂಗಡ ಮಾತುಕತೆ ಆಡುತ್ತ ಕುಳಿತ ರಾಮ. ಸೀತಾಸಮೇತ ಆದ ರಾಮ ಚಿತ್ರಾನಕ್ಷತ್ರದ ಸಂಗಡ ಕೂಡಿದ ಚಂದ್ರನ ಹಾಗೆ ಇದ್ದ.

ಇವರು ಹೀಗೆ ಸುಖಸಂಕಥಾವಿನೋದದಲ್ಲಿ ಇರಲು, ಅಕಸ್ಮಾತ್ತಾಗಿ ಅಲ್ಲಿಗೆ ಒಬ್ಬ ರಾಕ್ಷಸಿ ಬಂದಳು. ರಾವಣನ ತಂಗಿ, ಶೂರ್ಪಣಖೆ.

ನೆಟ್ಟಗೆ ರಾಮ ಇದ್ದ ಸ್ಥಳಕ್ಕೇ ಬಂದಳು ರಾಕ್ಷಸಿ. ರಾಮನನ್ನು ಕಣ್ಣು ತುಂಬಾ ನೋಡಿದಳು. ದೇವೇಂದ್ರನಂತೆ ಹೊಳೆಯುತ್ತ ಇದಾನೆ. ಆ ವಿಶಾಲ ವಕ್ಷ, ಮಹಾಬಾಹು, ಕಮಲನೇತ್ರ, ಮಹಾತೇಜಸ್ವಿ, ಮಹಾಸತ್ವಸಂಪನ್ನ, ಪ್ರಿಯದರ್ಶನ, ಗಜಗಂಭೀರ, ಜಟಾಮಂಡಲಧಾರಿ, ಕೋಮಲಶರೀರಿ, ಮಹಾ ಬಲಾಢ್ಯ, ಸಮಸ್ತರಾಜಲಕ್ಷಣಲಕ್ಷಿತ, ಇಂದೀವರಶ್ಯಾಮ, ಮನ್ಮಥಸಮ ದೇಹ, ಕಾಂತಿಯುಕ್ತ ಆದ ರಾಮನನ್ನು ನೋಡಿದಳು. ನೋಡಿ ಕಾಮವಿಕಾರವಶಳು ಆದಳು.

ಪ್ರಸನ್ನವದನ ರಾಮ. ಅವಳೋ ದುರ್ಮುಖಿ. ರಾಮನ ನಡು ಬಲು ಸಣ್ಣ. ಅವಳ ಹೊಟ್ಟೆಯೋ ಗುಡಾಣ. ರಾಮ ವಿಶಾಲನೇತ್ರ. ಅವಳ ಕಣ್ಣು ವಿಕಾರ. ರಾಮನ ಕೇಶರಾಶಿ ನುಣುಪು, ಕಪ್ಪು. ಅವಳದು ತಾಮ್ರದ ತಲೆ. ಅವನದು ಮೋಹಕ ರೂಪ. ಅವಳು ಕುರೂಪಿ. ಅವನ ಕಂಠ ಬಲು ಇಂಪು. ಅವಳ ಧ್ವನಿಯೋ ಭಯಂಕರ. ರಾಮನ ಮಾತು ಯಾವಾಗಲೂ ಋಜು. ಅವಳ ಮಾತು ವಕ್ರವಕ್ರ, ಗ್ರಾಮ್ಯ. ಸದಾಚಾರಸಂಪನ್ನ ರಾಮ. ಆ ರಾಕ್ಷಸಿ ದುರಾಚಾರಶೀಲೆ. ರಾಮನನ್ನು ನೋಡಿದರೆ ಆನಂದ. ಅವಳನ್ನು ನೋಡಿದರೆ ಅಸಹ್ಯ. ರಾಮ ಯುವಕ. ಆ ರಾಕ್ಷಸಿ ಹಣ್ಣುಹಣ್ಣು ಮುದುಕಿ. ಆದರೂ ಕಾಮಪೀಡಿತೆ ಆದಳು ರಾಮನನ್ನು ನೋಡಿ.

ರಾಮನನ್ನು ಮಾತು ಆಡಿಸಿದಳು ಶೂರ್ಪಣಖೆ. "ಅಯ್ಯಾ, ನೀನು ನೋಡಿದರೆ ಜಡೆ ಬಿಟ್ಟು ತಾಪಸಿಯ ಹಾಗೆ ಇದೀಯೆ. ನಿನಗೆ ಏಕೆ ಪಕ್ಕದಲ್ಲಿ ಹೆಂಡತಿ? ಕೈಯಲ್ಲಿ ಬಿಲ್ಲುಬಾಣ ಏಕೆ? ಇದು ರಾಕ್ಷಸರು ತಿರುಗಾಡುವ ಪ್ರದೇಶ. ಇಲ್ಲಿಗೆ ಏಕೆ ಬಂದೆ ನೀನು? ನಿಜವನ್ನು ಹೇಳು" ಎಂದು ಕೇಳಿದಳು.

ಪರಂತಪ ಶ್ರೀರಾಮ ನಿಷ್ಕಪಟಿ, ಋಜುಸ್ವಭಾವಿ. ಎಂದೂ ಸುಳ್ಳು ಹೇಳಲಿಲ್ಲ. ಈಗ ತಾಪಸ ಧರ್ಮವನ್ನು ಅನುಸರಿಸಿ ಋಷ್ಯಾಶ್ರಮದಲ್ಲಿ ಇದಾನೆ. ಅದರಲ್ಲೂ ಒಬ್ಬ ಹೆಂಗಸಿಗೆ ಸುಳ್ಳು ಹೇಳಬೇಕೆ? ಆದ್ದರಿಂದ ತನ್ನ ಸಮಾಚಾರ ಎಲ್ಲವನ್ನೂ ಅವಳಿಗೆ ತಿಳಿಸಿದ. "ದೇವತೆಗಳಿಗೆ ಪರಾಕ್ರಮದಲ್ಲಿ ಸಾಟಿ ಎನಿಸಿದ್ದ ದಶರಥ ಮಹಾರಾಜನ ಹಿರಿಯ ಮಗ ನಾನು. ರಾಮ ಎನ್ನುತ್ತಾರೆ ನನ್ನನ್ನು. ಇವನು ನನ್ನ ತಮ್ಮ, ಲಕ್ಷ್ಮಣ. ಯಾವಾಗಲೂ ಇವನು ನನ್ನ ಜೊತೆಯಲ್ಲಿಯೇ ಇರುತ್ತಾನೆ. ಇವಳು ನನ್ನ ಹೆಂಡತಿ. ವಿದೇಹ ರಾಜನ ಮಗಳು. ಇವಳ ಹೆಸರು ಸೀತೆ. ನಮ್ಮ ತಂದೆ ದಶರಥಮಹಾರಾಜ, ನಮ್ಮ ತಾಯಿ ಕೈಕೇಯಿ, ವನವಾಸ ಮಾಡಲು ಹೇಳಿದರು. ತಂದೆಯ ಅಪ್ಪಣೆ ಯಂತೆ ನಾನು ಕಾಡಿಗೆ ಬಂದೆ. ಧರ್ಮಪರಿಪಾಲನೆಗಾಗಿ, ಧರ್ಮಸಂಪಾದನೆ ಗಾಗಿ ಇಲ್ಲಿಗೆ ಬಂದೆ.

"ಈಗ ನಿನ್ನ ಸಮಾಚಾರ ಹೇಳು. ನೀನು ಯಾರು? ಯಾರ ಮಗಳು? ನಿನ್ನ ತಂದೆತಾಯಿ ಯಾರು? ನಿನ್ನ ಹೆಸರು ಏನು? ನೀನು ಯಾರ ಹೆಂಡತಿ? ನಿನ್ನನ್ನು ನೋಡಿದರೆ ರಾಕ್ಷಸಿಯಂತೆ ಕಾಣುವುದಿಲ್ಲ. ಇಲ್ಲಿಗೆ ಏಕೆ ಬಂದೆ? ನಿಜವನ್ನು ಹೇಳು" ಎಂದ ರಾಮ.

ಶೂರ್ಪಣಖಿಗೆ ಕಾಮಬಾಧೆ ಮತ್ತೂ ಹೆಚ್ಚು ಆಯಿತು. "ರಾಮ, ಯಥಾರ್ಥವನ್ನು ಹೇಳುತ್ತೇನೆ, ಕೇಳು. ನಾನು ರಾಕ್ಷಸಿ, ಶೂರ್ಪಣಖಿ. ನಾನು ಕಾಮರೂಪಿಣಿ. ನನ್ನ ಹೆಸರು ಕೇಳಿಯೇ ಎಲ್ಲರೂ ತಲ್ಲಣಿಸಿಹೋಗು ತ್ತಾರೆ. ನಾನು ಒಂಟಿ ಆಗಿಯೇ ಈ ಕಾಡನ್ನು ಸುತ್ತುತ್ತೇನೆ. ವಿಶ್ರವಸ್ಸಿನ ಮಗ, ಮಹಾವೀರಾಧಿವೀರ, ರಾಕ್ಷಸಚಕ್ರವರ್ತಿ ರಾವಣ ನನ್ನ ಅಣ್ಣ. ನೀನು ಅವನ ಸಮಾಚಾರ ಕೇಳಿ ಇರಬಹುದು. ಇನ್ನೊಬ್ಬ ಅಣ್ಣ ಕುಂಭಕರ್ಣ. ಯಾವಾಗಲೂ ನಿದ್ದೆಯೇ ಅವನಿಗೆ. ರಾಕ್ಷಸ ಕೃತ್ಯಗಳಲ್ಲಿ ಇಷ್ಟ ಇಲ್ಲದ ವಿಭೀಷಣ ಎಂಬ ತಮ್ಮ ಇದಾನೆ. ಮಹಾಪರಾಕ್ರಮಿಗಳು ಎಂದು ಹೆಸರು ಆದ ಖರದೂಷಣರೂ ನನ್ನ ಒಡಹುಟ್ಟಿದವರು. ನನ್ನ ಒಡಹುಟ್ಟುಗಳೇ.

"ಇವರು ಯಾರಿಗೂ ನೀನು ಅಂಜಬೇಕಾದ್ದು ಇಲ್ಲ. ನನ್ನ ಇಷ್ಟ ಬಂದಂತೆ ನಾನು ನಡೆಯುತ್ತೇನೆ. ನಾನು ಸ್ವತಂತ್ರಳು. ನನ್ನ ಮಹಿಮೆ ಅಪಾರ. ನಿನ್ನನ್ನು ನಾನು ವರಿಸಿದೆ. ನೀನು ಬಹುಕಾಲ ನನಗೆ ಗಂಡ ಆಗಿ ಇರು.

ಈ ಸೀತೆಯನ್ನು ಕಟ್ಟಿಕೊಂಡು ನಿನಗೆ ಏನು ಆಗಬೇಕು? ಇವಳು ವಕ್ರಾಂಗಿ, ಕುರೂಪಿ. ನಿನಗೆ ತಕ್ಕವಳು ನಾನು. ನನ್ನ ಕೈಹಿಡಿ. ಈ ಕುರೂಪಿ, ಈ ದುರ್ಮಾರ್ಗಿ, ಸೊಂಟ ಬಗ್ಗಿದ ಈ ಮನುಷ್ಯಹೆಂಗಸಿಗೆ ಅಂಜಬೇಡ. ನಾನು ಇವಳನ್ನೂ ನಿನ್ನ ತಮ್ಮನನ್ನೂ ತಿಂದುಬಿಡುತ್ತೇನೆ.

"ನಲ್ಲ, ನನ್ನನ್ನು ವರಿಸು. ಇಬ್ಬರೂ ಗುಡ್ಡಬೆಟ್ಟದ ತುದಿಗಳಲ್ಲೂ ಬಗೆಬಗೆಯ ವನಗಳಲ್ಲೂ ವಿಹರಿಸುತ್ತ ಈ ದಂಡಕಾರಣ್ಯದಲ್ಲಿ ಎಲ್ಲೆಲ್ಲೂ ತಿರುಗಾಡೋಣ" ಎಂದಳು. ಅವಳಿಗೆ ಮದ ಏರಿತ್ತು.

ಅವಳ ಮಾತನ್ನು ಕೇಳಿ ರಾಮ ನಸುನಕ್ಕ.

೧೮

ನಸನಗುತ್ತ ಸ್ಪಷ್ಟ ಆಗಿ ಸವಿ ಆಗಿ ಹೇಳಿದ: "ಇಲ್ಲಿ ನೋಡು ತಾಯಿ, ನಾನು ಇವಳನ್ನು ಮದುವೆ ಆಗಿದೇನೆ. ನನಗೆ ಇವಳು ಇಷ್ಟ. ನಿನ್ನಂಥ ಹೆಂಗಸಿಗೆ ಸವತಿಯ ಬಾಧೆ ಸರಿ ಅಲ್ಲ. ಅದು ನೋಡು, ನನ್ನ ತಮ್ಮ ಲಕ್ಷ್ಮಣ. ಅವನು ಸದಾಚಾರಸಂಪನ್ನ. ಚೆಲುವ. ಅದ್ಭುತ ಪರಾಕ್ರಮಿ. ಅವನ ಹೆಂಡತಿಯೂ ಇಲ್ಲಿ ಇಲ್ಲ. ಇಲ್ಲಿಯವರೆಗೆ ಭಾರ್ಯಾಸುಖವನ್ನು ಕಂಡು ಇಲ್ಲ. ಅವನಿಗೆ ಹೆಂಡತಿ ಬೇಕು. ಸೊಗಸು ಆದ ಯೌವನ ಅವನದು. ನಿನ್ನ ಚೆಲುವಿಗೆ ತಕ್ಕವನು. ನಿನ್ನ ಬೊಗಸೆಗಣ್ಣಿಗೂ ದೊಡ್ಡ ದೊಡ್ಡ ಸ್ತನಗಳಿಗೂ ಅವನು ತಕ್ಕ ಗಂಡ. ಅವನ ಕೈಹಿಡಿದರೆ ನಿನಗೆ ಸವತಿಯ ಕಾಟ ಇಲ್ಲ. ಸೂರ್ಯಕಾಂತಿ ಮೇರುಪರ್ವತವನ್ನು ಸೇರುವಂತೆ ನೀನು ಅವನನ್ನು ವರಿಸು" ಎಂದ.

ಶೂರ್ಪಣಖಿಗೆ ಮೈಮೇಲೆ ಎಚ್ಚರ ಇಲ್ಲ. ಕಾಮಬಾಧೆ. ರಾಮನ ಮಾತಿಗೆ ಹೂಂಗುಟ್ಟಿದಳು. ಲಕ್ಷ್ಮಣನ ಬಳಿಗೆ ಹೋದಳು. "ಲಕ್ಷ್ಮಣ, ನಿನ್ನ ವಯಸ್ಸಿಗೆ ನಿನ್ನ ರೂಪಕ್ಕೆ ತಕ್ಕ ಹೆಂಡತಿ ನಾನು. ನನ್ನಂಥ ಚೆಲುವೆಯನ್ನು ಕೈಹಿಡಿದು ನೀನು ದಂಡಕಾರಣ್ಯದಲ್ಲಿ ಎಲ್ಲೆಲ್ಲೂ ವಿಹರಿಸು" ಎಂದಳು.

ಲಕ್ಷ್ಮಣ ಮಾತಿನಲ್ಲಿ ಬಹು ಚತುರ. ಅವಳ ಮಾತನ್ನು ಕೇಳಿ ನಕ್ಕ. ಅವಳ ಉಗುರು ಕೂಡ ಮೊರಗಳ ಹಾಗೆ ಅಗಲ. ಆದರೂ ಅವಳನ್ನು ಕಮಲದ ಮೈಬಣ್ಣದವಳೇ ಎಂದ. "ನಾನು ಅಣ್ಣನ ಸೇವಕ. ನನ್ನ ಹೆಂಡತಿ ಆದರೆ ನೀನೂ ಸೇವಕಿ ಆಗಬೇಕು. ಶೂರ್ಪಣಖಿ, ನೀನು ಚೆಲುವೆ, ವಿಶಾಲಾಕ್ಷಿ.

ನಮ್ಮ ಅಣ್ಣ ಮಹದೈಶ್ವರ್ಯಸಂಪನ್ನ. ಅತನನ್ನೇ ಹಿಡಿ. ಈಗ ಇರುವ ಹೆಂಡತಿ ಕುರೂಪಿ, ದುರ್ಮಾರ್ಗಿ, ಸೊಂಟ ಇಲ್ಲದ ಮುದುಕಿ, ದುರಾಚಾರಿ. ಅವಳನ್ನು ಬಿಟ್ಟು ನಿನ್ನನ್ನೇ ಇಷ್ಟಪಡುತ್ತಾನೆ. ನೀನು ಉತ್ತಮ ಕಾಂತೆ. ನಿನ್ನಂತಹ ಈ ಚೆಲುವನ್ನು ನೋಡಿದಮೇಲೆ ಮನುಷ್ಯ ಸ್ತ್ರೀಯನ್ನು ಬಯಸುತ್ತಾನೆಯೆ ಬುದ್ಧಿವಂತ?" ಎಂದ.

ಲಕ್ಷ್ಮಣ ಆಡಿದ್ದು ಪರಿಹಾಸ ಎಂದು ಆ ರಾಕ್ಷಸಿಗೆ ತಿಳಿಯಲಿಲ್ಲ. ನಿಜ ಎಂದು ನಂಬಿದಳು. ಆ ದೊಡ್ಡ ಹೊಟ್ಟೆಯ ಭಯಂಕರ ಆಕಾರದ ಹೆಂಗಸು ಮತ್ತೆ ರಾಮನ ಬಳಿಗೆ ಹೋದಳು. ಪರ್ಣಶಾಲೆಯ ಒಳಗೆ ಸೀತೆಯ ಸಂಗಡ ಕೂತು ಇದ್ದ ರಾಮ. "ಈ ಕುರೂಪಿ, ದುರಾಚಾರಿ, ದುರ್ಮಾರ್ಗಿ, ಸೊಂಟ ಇಲ್ಲದ ಮುದುಕಿ, ಇವಳನ್ನು ಮೆಚ್ಚಿ ನನ್ನನ್ನು ತಿರಸ್ಕರಿಸುತ್ತೀಯಾ ? ನಿನ್ನ ಕಣ್ಣ ಇದಿರಿಗೇ ಈ ಮನುಷ್ಯಸ್ತ್ರೀಯನ್ನು ತಿಂದುಹಾಕುತ್ತೇನೆ. ಆಗ ನನಗೆ ಸವತಿಯ ಬಾಧೆಯೇ ಇಲ್ಲದೆ ಹೋಗುತ್ತದೆ. ನಿನ್ನನ್ನು ಸೇರಿ ಇಷ್ಟಬಂದಂತೆ ಸುಖಭೋಗ ಅನುಭವಿಸುತ್ತೇನೆ" ಎಂದಳು ಕೋಪದಿಂದ.

ಅವಳಿಗೆ ರೇಗಿಹೋಯಿತು. ಕಣ್ಣು ಕೆಂಡ ಆದವು. ಸೀತೆ ಅಂಜಿದಳು. ಆಕೆಯ ಕಣ್ಣು ಜಿಂಕೆಯ ಮರಿಯ ಕಣ್ಣಿನಂತೆ ಚಂಚಲ ಆಯಿತು. ರಾಕ್ಷಸಿ ದುರದುರನೆ ನೋಡುತ್ತ ರೋಹಿಣೀ ನಕ್ಷತ್ರದ ಮೇಲೆ ಬೀಳುವ ಉಲ್ಕಾಪಾತ ದಂತೆ ಸೀತೆಯ ಮೇಲೆ ಬೀಳಲು ಬಂದಳು. ಯಮಪಾಶದಂತೆ ಮೇಲೆ ಬೀಳಲು ಓಡಿಬಂದ ಅವಳನ್ನು ರಾಮ ಕೋಪದಿಂದ ಅಡ್ಡಗಟ್ಟಿ ತಡೆದ.

ಲಕ್ಷ್ಮಣನನ್ನು ಕರೆದ ರಾಮ. "ತಮ್ಮ, ಕ್ರೂರಿಗಳಲ್ಲಿ ದುಷ್ಟರಲ್ಲಿ ಪರಿಹಾಸ ಯೋಗ್ಯ ಅಲ್ಲ. ಈ ಸೀತೆಗೆ ಏನೂ ಅಪಾಯ ಆಗದಂತೆ ನೋಡಿ ಕೊಳ್ಳಬೇಕು. ಈ ದುಷ್ಟೆಗೆ, ಮಹೋದರಿಗೆ, ವಿಕಾರರೂಪಿಣಿಗೆ ಕೊಬ್ಬು ಏರಿದೆ. ಇವಳ ರೂಪನ್ನು ಕೆಡಿಸುವುದೇ ಯೋಗ್ಯ" ಎಂದ.

ಲಕ್ಷ್ಮಣನಿಗೆ ಆಗಲೇ ಸಿಟ್ಟು ಬಂದು ಇತ್ತು. ರಾಮನ ಮಾತನ್ನು ಕೇಳಿದ ಕೂಡಲೇ ರಾಮನ ಪಕ್ಕದಲ್ಲಿ ಇದ್ದ ಕತ್ತಿಯನ್ನು ಸೆಳೆದುಕೊಂಡು ಶೂರ್ಪಣಖಿಯ ಕಿವಿಗಳನ್ನೂ ಮೂಗನ್ನೂ ಕುಯಿದು ಹಾಕಿದ.

ಮೊದಲೇ ವಿಕಾರಸ್ವರೂಪಿ. ಈಗ ಮತ್ತಷ್ಟು ವಿಕೃತರೂಪಿ. ವಿಕಟ ಆಗಿ ಗೋಳಾಡುತ್ತ, ಬಂದ ದಾರಿಯನ್ನೆ ಹಿಡಿದು ಕಾಡಿನ ಕಡೆ ಓಡಿದಳು.

ನೆತ್ತರು ಸುರಿದು ಮೈ ಎಲ್ಲಾ ಒದ್ದೆ. ಮಳೆಗಾಲದ ಗುಡುಗಿನಂತೆ ಅರಚುತ್ತ, ಸುರಿಯುವ ರಕ್ತಕ್ಕೆ ಕೈ ಹಿಡಿದು ಜನಸ್ಥಾನಕ್ಕೆ ಹೋದಳು. ಅಲ್ಲಿ ರಾಕ್ಷಸರ ನಡುವೆ ಕುಳಿತಿದ್ದ ಭಯಂಕರ ಆಕಾರದ ಖರನ ಮುಂದೆ ಧೊಪ್ ಎಂದು ಬಿದ್ದಳು. ಸಿಡಿಲು ಬಿದ್ದಹಾಗೆ ಆಯಿತು. ಸ್ವಲ್ಪಹೊತ್ತು ಆದಮೇಲೆ ಎಚ್ಚೆತ್ತು ನಡೆದ ಸಂಗತಿಯನ್ನು ತಿಳಿಸಿದಳು.

೧೯

ರೂಪಗೆಟ್ಟು ಮೈ ಎಲ್ಲಾ ರಕ್ತ ಆಗಿ ಮೂರ್ಛೆಗೊಂಡು ಬಿದ್ದು ಇದ್ದ ತಂಗಿಯನ್ನು ನೋಡಿದ ಖರ. ಬಹಳ ಸಿಟ್ಟುಬಂತು. "ತಂಗಿ, ಏಳು. ಏನು ನಡೆಯಿತೋ ಹೇಳು ನನಗೆ. ಯಾರು ನಿನ್ನನ್ನು ಹೀಗೆ ರೂಪಗೆಡಿಸಿದವರು? ಸರಿ ಆಗಿ ಹೇಳು. ಹಲ್ಲಿನಲ್ಲಿ ಮಹಾವಿಷವನ್ನು ತುಂಬಿಕೊಂಡು ಕಾಳಸರ್ಪ ಯಾರಿಗೂ ಏನೂ ಮಾಡದೆ ತನ್ನ ಪಾಡಿಗೆ ತಾನು ಮಲಗಿದ್ದರೆ, ಕುಚೇಷ್ಟೆಗೆ ಅದನ್ನು ಬೆರಳಿನಿಂದ ಚುಚ್ಚುತ್ತಾರೆಯೆ? ಯಾರು ಅದು? ತಿಳಿವು ಇಲ್ಲದೆ ಕೊರಳಿಗೆ ಮೃತ್ಯುಪಾಶವನ್ನು ಯಾರು ಸುತ್ತಿಕೊಂಡವರು? ನಿನ್ನನ್ನು ಕೆಣಕಿ ವಿಷ ಕುಡಿದವನು ಯಾರು?"

"ತಂಗಿ, ನಿನಗೆ ಬಲ ಕಡಮೆಯೆ? ನಿನ್ನ ಇಷ್ಟಬಂದಲ್ಲಿ ಹೋಗಬಲ್ಲೆ. ಇಷ್ಟಬಂದ ರೂಪ ಧರಿಸಬಲ್ಲೆ. ಮೃತ್ಯುವಿಗೆ ಸಮ ನೀನು. ನಿನಗೆ ಈ ದುರವಸ್ಥೆಯೆ? ಯಾರು ಹೀಗೆ ಮಾಡಿದವನು? ದೇವತೆಯೆ ಗಂಧರ್ವನೆ? ಮಹರ್ಷಿಗಳೆ? ಹೇಳು. ಪಾಕಾಸುರನನ್ನು ಕೊಂದ ದೇವೇಂದ್ರನಿಗೆ ಕೂಡ ನನ್ನನ್ನು ಕೆಣಕುವ ಧೈರ್ಯ ಇಲ್ಲವಲ್ಲ. ನೀರನ್ನು ಬಿಟ್ಟು ಹಾಲನ್ನು ಮಾತ್ರವೇ ಕುಡಿಯುವ ಹಂಸದ ಹಾಗೆ ನನ್ನ ಬಾಣಗಳಿಂದ ಅವನ ಪ್ರಾಣ ಹೀರಿಬಿಡುತ್ತೇನೆ. ನನ್ನ ಬಾಣಕ್ಕೆ ಹುಸಿ ಇಲ್ಲ. ನನ್ನ ಬಾಣ ತಗಲಿ ಕೆಳಕ್ಕೆ ಬಿದ್ದರೆ ಅವನ ಬಿಸಿ ರಕ್ತವನ್ನು ಈ ನೆಲ ಕುಡಿಯುತ್ತದೆ. ಅವನ ಮೈಯ ಮಾಂಸವನ್ನು ಹದ್ದುಕಾಗೆ ಕಿತ್ತು ತಿನ್ನುತ್ತವೆ.

"ನಾನು ಯುದ್ಧಕ್ಕೆ ನಿಂತರೆ ಅವನನ್ನು ಕಾಪಾಡಬಲ್ಲದ್ದು ಯಾವುದೂ ಇಲ್ಲ. ದೇವತೆಗಳು ಗಂಧರ್ವರು ರಾಕ್ಷಸರು ಯಾರೂ ಬದುಕಿಸಲಾರರು.

ಪಿಶಾಚಿಗಳಿಗೂ ಸಾಧ್ಯ ಇಲ್ಲ. ಈ ದಂಡಕಾರಣ್ಯದಲ್ಲಿ ಇಷ್ಟು ಕೊಬ್ಬೆ? ಯಾರು ನಿನಗೆ ಹೀಗೆ ಮಾಡಿದವನು? ಯಾರು ಆ ದುರುಳ? ಹೇಳು" ಎಂದ ಖರ.

ಶೂರ್ಪಣಖೆ ಕಂಬನಿ ಕರೆಯುತ್ತ ಇದ್ದಳು. "ಅಣ್ಣ, ಅವರು ಯುವಕರು, ಚೆಲುವರು, ಕೋಮಲರು, ಮಹಾಪರಾಕ್ರಮಿಗಳು. ಅವರ ಕಣ್ಣು ಬಿಳಿ ತಾವರೆಯಂತೆ ಅಗಲ. ನಾರುಮಡಿ ಉಟ್ಟು ಕೃಷ್ಣಾಜಿನ ಹೊದೆದು ತಪಸ್ವಿಗಳ ಹಾಗೆ ಇದಾರೆ. ಕಂದಮೂಲಫಲ ಆಹಾರಿಗಳು, ಧರ್ಮಿಷ್ಠರು, ಬ್ರಹ್ಮಚರ್ಯ ವ್ರತಪರಾಯಣರು. ಇಬ್ಬರೂ ಅಣ್ಣತಮ್ಮಂದಿರು. ದಶರಥಮಹಾರಾಜನ ಮಕ್ಕಳು ಅಂತೆ. ಗಂಧರ್ವರಾಜರ ಹಾಗೆ ಇದಾರೆ. ಸಮಸ್ತ ರಾಜಲಕ್ಷಣಗಳೂ ಇವೆ. ಅವರು ದೇವತೆಗಳೋ ಮನುಷ್ಯರೋ ತಿಳಿಯಲಿಲ್ಲ.

"ಅವರ ನಡುವೆ ಒಬ್ಬ ಯುವತಿ. ಬಹಳ ಚೆಲುವೆ. ಸರ್ವ ಆಭರಣ ಭೂಷಿತೆ. ಸೊಗಸು ಆದ ನಡು. ಆ ಹೆಂಗಸಿನಿಂದ ಅವರು ನನ್ನನ್ನು ಈ ಗತಿಗೆ ತಂದರು. ಅವರು ಮೂವರನ್ನೂ ನೀನು ಕೊಲ್ಲಬೇಕು. ನೊರೆ ಕೂಡಿದ ಅವರ ಬಿಸಿ ರಕ್ತವನ್ನು ಮನದಣಿಯೆ ಕುಡಿಯಬೇಕು. ಇದೇ ನನ್ನ ಬಯಕೆ. ನೀನು ಇದನ್ನು ನಡೆಸಿಕೊಡಬೇಕು."

ಶೂರ್ಪಣಖೆ ಮಾತು ಮುಗಿಸುವುದರ ಒಳಗೇ ಯಮನ ಹಾಗೆ ಬಲಿಷ್ಠರು ಆದ ಹದಿನಾಲ್ಕು ಮಂದಿ ರಾಕ್ಷಸವೀರರನ್ನು ಕರೆದ ಖರ. "ರಾಕ್ಷಸೋತ್ತಮರೆ, ನಮ್ಮ ದಂಡಕಾರಣ್ಯಕ್ಕೆ ಇಬ್ಬರು ಮನುಷ್ಯರು ಬಂದು ಇದಾರಂತೆ. ನಾರುಮಡಿ ಉಟ್ಟು ಕೃಷ್ಣಾಜಿನ ಹೊದೆದಿದಾರಂತೆ. ಆಯುಧಪಾಣಿಗಳಂತೆ. ಅವರ ಜೊತೆಯಲ್ಲಿ ಒಬ್ಬ ಹೆಂಗಸು. ನೀವು ಹೋಗಿ ಆ ಮೂವರನ್ನೂ ಕೊಂದು ಬನ್ನಿ. ನನ್ನ ತಂಗಿ ಶೂರ್ಪಣಖಿ ಅವರ ನೆತ್ತರನ್ನು ಕುಡಿಯುತ್ತಾಳೆ. ಅವಳ ಬಯಕೆ ನನಗೂ ಸಮ್ಮತ. ಹೋಗಿ" ಎಂದ.

ಆ ಹದಿನಾಲ್ಕು ಮಂದಿ ರಾಕ್ಷಸರೂ ಗಾಳಿಗೆ ಓಡುವ ಮೋಡಗಳಂತೆ ಓಡಿದರು. ಶೂರ್ಪಣಖೆಯು ಜೊತೆಯಲ್ಲಿ ರಾಮನ ಆಶ್ರಮಕ್ಕೆ ಬಂದರು. ಮಹಾತೇಜೋಸಂಪನ್ನ ಶ್ರೀರಾಮನನ್ನು ನೋಡಿದರು. ಉರಿಯುತ್ತಿರುವ ಕಾಳ್ಗಿಚ್ಚನ್ನು ಕಂಡು ಕಾಡಾನೆಗಳು ಅಂಜಿ ನಿಲ್ಲುವಂತೆ ನೈ ನಡುಗಿ ಅಲ್ಲೇ ನಿಂತರು.

೨೦

ಶೂರ್ಪಣಖಿ ಆ ರಾಕ್ಷಸರಿಗೆ ಸೀತಾರಾಮಲಕ್ಷ್ಮಣರನ್ನು ತೋರಿಸಿದಳು. ಪರ್ಣಶಾಲೆಯ ಒಳಗೆ ಕರೆದು ಒಯ್ದಳು. ಸೀತೆಯ ಜೊತೆಯಲ್ಲಿ ಕುಳಿತು ಇದ್ದ ರಾಮನನ್ನೂ ಲಕ್ಷ್ಮಣನನ್ನೂ ಅವರಿಗೆ ತೋರಿಸಿದಳು.

ಆ ರಾಕ್ಷಸರನ್ನೂ ಶೂರ್ಪಣಖಿಯನ್ನೂ ನೋಡಿದ ರಾಮ. ಲಕ್ಷ್ಮಣನಿಗೆ ಸೀತೆಯನ್ನು ನೋಡಿಕೊಳ್ಳಲು ಹೇಳಿ ಆ ರಾಸರನ್ನೂ ಆ ರಾಕ್ಷಸಿಯನ್ನೂ ಕೊಂದುಹಾಕಲು ಹೊರಟ. ಚಿನ್ನದ ಕಟ್ಟಿನ ತನ್ನ ಬಿಲ್ಲಿಗೆ ಹೆದೆ ಏರಿಸಿದ. "ರಾಕ್ಷಸರೆ, ನಾವು ದಶರಥಮಹಾರಾಜನ ಮಕ್ಕಳು, ರಾಮಲಕ್ಷ್ಮಣರು. ನನ್ನ ಹೆಂಡತಿ ಸೀತೆ. ಮೂವರೂ ಕಾರಣಾಂತರದಿಂದ ದಂಡಕಾರಣ್ಯಕ್ಕೆ ಬಂದೆವು. ಇಲ್ಲಿ ಫಲಮೂಲಗಳನ್ನು ತಿನ್ನುತ್ತ ತಪೋನಿರತರು ಆಗಿ ಜಿತೇಂದ್ರಿಯರೂ ಧರ್ಮನಿರತರೂ ಆಗಿ ಇದೇವೆ. ನಮ್ಮನ್ನು ಸುಮ್ಮನೆ ಏಕೆ ಹಿಂಸಿಸುತ್ತೀರಿ? ನೀವು ಋಷಿಕಂಟಕರು, ಪಾಪಾತ್ಮರು. ನಿಮ್ಮನ್ನು ಎಲ್ಲರನ್ನೂ ಯುದ್ಧಮಾಡಿ ಕೊಲ್ಲಬೇಕು ಎಂದು ಮುನಿಗಳು ನನಗೆ ಅಪ್ಪಣೆ ಮಾಡಿದಾರೆ. ಆದರಿಂದ ನಾವು ಬಾಣಬಿಲ್ಲು ಹಿಡಿದು ಬಂದಿದೇವೆ. ನಿಮಗೆ ಯುದ್ಧ ಬೇಕೋ ಅಲ್ಲೇ ನಿಲ್ಲಿ. ಪ್ರಾಣದ ಮೇಲೆ ಆಸೆ ಆದರೆ ಓಡಿಹೋಗಿ" ಎಂದ ರಾಮ.

ಬ್ರಹ್ಮಘ್ನರು ಆ ಹದಿನಾಲ್ಕು ಮಂದಿಗೂ ಬಹಳ ಸಿಟ್ಟು ಬಂತು. "ಮಾನವಾಧಮ, ಮಹಾಪರಾಕ್ರಮಶಾಲಿ ಖರ ನಮ್ಮ ಪ್ರಭು. ಆತ ನಿನ್ನ ಮೇಲೆ ಸಿಟ್ಟು ಆಗಿದಾನೆ. ಈಗ ಯುದ್ಧದಲ್ಲಿ ನೀನೇ ಸಾಯುತ್ತೀ. ನೀನು ಒಬ್ಬ, ನಾವು ಹದಿನಾಲ್ಕು. ನಮಗೆ ನೀನು ಸಾಟಿಯೆ? ನಮ್ಮ ಮುಂದೆ ನಿಲ್ಲಬಲ್ಲೆಯ ನೀನು? ಬಾ, ಯುದ್ಧಕ್ಕೆ ಬಾ. ನಮ್ಮ ಶೂಲಗಳನ್ನು ಲಾಳ ಪಂಡಿಗೆಗಳನ್ನು ನೋಡು. ನಿನ್ನ ಬಿಲ್ಲು ಮುರಿದು ನಿನ್ನ ಜೀವ ತಿನ್ನುತ್ತವೆ ಇವು" ಎನ್ನುತ್ತ ಆ ರಾಕ್ಷಸರು ಎಲ್ಲರೂ ಒಂದೇ ಸಲ ತಮ್ಮ ಶೂಲಗಳನ್ನು ಎಸೆದರು. ರಾಮನನ್ನು ಗೆಲ್ಲುವವರು ಯಾರು? ಹದಿನಾಲ್ಕು ಬಾಣ ಬಿಟ್ಟ. ಹದಿನಾಲ್ಕು ಶೂಲಗಳೂ ಮುರಿದುಬಿದ್ದವು. ಆಗ ಸೂರ್ಯನಂತೆ ಉರಿಯುವ ಥಳಥಳ ಹೊಳೆಯುವ ಹದಿನಾಲ್ಕು ಬಾಣಗಳನ್ನು ಹೊರತೆಗೆದು ಗುರಿ ಇಟ್ಟ ರಾಮ. ಕಲ್ಲನ್ನಾದರೂ ಸೀಳಿಕೊಂಡು ಹೋಗುವ ಬಾಣ ಅವು. ರಾಮನಿಗೆ ಬಹಳ ಸಿಟ್ಟುಬಂದಿತ್ತು. ರಾಕ್ಷಸರಿಗೆ ಗುರಿ ಇಟ್ಟು ಬಾಣ ಬಿಟ್ಟ.

ದೇವೇಂದ್ರ ವಜ್ರಾಯುಧವನ್ನು ಪ್ರಯೋಗಿಸಿದ ಹಾಗೆ ಇತ್ತು. ಚಿನ್ನದ ಹಿಡಿ, ಚಿನ್ನದ ಕಟ್ಟು ಧಗಧಗ ಹೊಳೆಯುತ್ತ ಬೆಂಕಿಯಂಥ ಆ ಬಾಣಗಳು ಆ ರಾಕ್ಷಸರ ಎದೆಯನ್ನು ಸೀಳಿಕೊಂಡು ಬೆನ್ನಿನಲ್ಲಿ ಹೊರಕ್ಕೆ ಬಂದವು. ರಕ್ತದಿಂದ ತೊಯ್ದು ನೆಲದ ಮೇಲೆ ಬಂದು ಬಿದ್ದಾಗ ಆ ಬಾಣಗಳು, ಸಿಡಿಲು ಮೊಳಗಿದಂತೆ ಆಯಿತು. ಎದೆ ತೂತು ಬಿದ್ದು ಮೈ ಎಲ್ಲಾ ನೆತ್ತರಿನಲ್ಲಿ ನೆನೆದು ವಿಕಾರ ಸ್ವರೂಪದ ಆ ರಾಕ್ಷಸರು ಬುಡ ಕಡಿದ ಮರಗಳಂತೆ ಉರುಳಿ ಬಿದ್ದು ಪ್ರಾಣ ಬಿಟ್ಟರು.

ಹದಿನಾಲ್ಕು ಮಂದಿ ರಾಕ್ಷಸರೂ ಸತ್ತು ಬಿದ್ದುದನ್ನು ಶೂರ್ಪಣಖಿ ನೋಡಿದಳು. ಅವಳ ಕೋಪದಲ್ಲಿ ಮೈಮೇಲೆ ಎಚ್ಚರವೇ ಉಳಿಯಲಿಲ್ಲ. ಭಯಂಕರ ಆಗಿ ವಿಕಟಸ್ವರದಿಂದ ಅಬ್ಬರಿಸಿದಳು. ಹಾಗೇ ಕೂಗಿಕೊಳ್ಳುತ್ತ ಅಲ್ಲಿ ನಿಲ್ಲಲಾರದೆ ಓಡಿದಳು. ಅವಳ ಕಿವಿಮೂಗಿನ ಗಾಯ ಒಣಗಿ ರಕ್ತ ಗಡ್ಡೆ ಕಟ್ಟಿತ್ತು. ಬೇಲದ ಮರದ ಹಾಗೆ ಇತ್ತು ಅವಳ ರೂಪ. ಧಾರೆ ಆಗಿ ಕಣ್ಣೀರು ಸುರಿಸುತ್ತ ಖರನ ಬಳಿಗೆ ಓಡಿಬಂದಳು.

ಖರನ ಇದಿರಿನಲ್ಲಿ ಬಂದು ಧೊಪ್ ಎಂದು ಬಿದ್ದಳು ಶೂರ್ಪಣಖಿ.

೨೧

ಶೂರ್ಪಣಖಿ ಬಂದದ್ದು ರಾಕ್ಷಸರ ವಿನಾಶಕ್ಕೆ ಎಂಬುದು ತಿಳಿಯದು ಖರನಿಗೆ. ಕೋಪದಿಂದ "ತಂಗಿ, ಮತ್ತೆ ಏಕೆ ಬಂದೆ? ರುಧಿರಾಶನರೂ ಶೂರರೂ ಆದ ರಾಕ್ಷಸವೀರರನ್ನು ಈಗತಾನೆ ಕಳಿಸಿದೆ ನಿನ್ನ ಮಾತಿನಂತೆ. ಮತ್ತೆ ಬಂದೆ. ಇನ್ನೂ ಅಳುತ್ತಾ ಇದೀಯೆ. ಏಕೆ? ನಾನು ಕಳಿಸಿದ ರಾಕ್ಷಸರು ನನ್ನ ಭಕ್ತರು, ಅನುರಾಗಿಗಳು. ಯಾವಾಗಲೂ ನನ್ನ ಮೇಲನ್ನೆ ಕೋರುವವರು. ಅವರನ್ನು ಇದಿರಿಸುವವರು ಇಲ್ಲ. ಎಂಥ ಶತ್ರುವನ್ನೇ ಆದರೂ ಕೊಲ್ಲಬಲ್ಲರು. ನನ್ನ ಮಾತನ್ನು ಮೀರುವವರು ಅಲ್ಲ. ಆದರೂ ದಿಕ್ಕು ಇಲ್ಲದವಳಂತೆ ಅಳುತ್ತಾ ಇದೀಯಲ್ಲ. ನೆಲದ ಮೇಲೆ ಬಿದ್ದು ಹಾವಿನ ಹಾಗೆ ಹೊರಳುತ್ತ ಇದೀಯೆ. ಏಕೆ? ಅಂಜಬೇಡ. ಕಳವಳಪಡಬೇಡ. ಹೇಳು" ಎಂದ.

ಸೆರಗಿನಿಂದ ಕಣ್ಣೀರನ್ನು ಒರೆಸಿಕೊಂಡಳು ಶೂರ್ಪಣಖೆ. "ಅಣ್ಣ, ಕಿವಿ ಮೂಗು ಕುಯಿಸಿಕೊಂಡು ನೆತ್ತರು ಸೋರುತ್ತ ನಿನ್ನ ಬಳಿಗೆ ಬಂದೆ. ನೀನು ನನ್ನನ್ನು ಸಮಾಧಾನಪಡಿಸಿ ರಾಮಲಕ್ಷ್ಮಣರನ್ನು ಕೊಲ್ಲಲು ಹದಿನಾಲ್ಕು ರಾಕ್ಷಸರನ್ನು ಕಳಿಸಿದೆ. ನಿಜವೇ. ಅವರೂ ಶೂಲಪಟ್ಟಿಶಗಳನ್ನು ಹಿಡಿದು ರಾಮನ ಮೇಲೆ ಬಿದ್ದರು. ಆ ರಾಮ ಮರ್ಮಭೇದಕ ಬಾಣಗಳನ್ನು ಬಿಟ್ಟು ಎಲ್ಲರನ್ನೂ ಹೊಡೆದು ಕೆಡವಿದ. ಅಂಥ ಬಲಾಢ್ಯರು ಅರೆಗಳಿಯಲ್ಲಿ ಸತ್ತುಬಿದ್ದರು. ರಾಮನ ಈ ಅಸಾಧಾರಣ ಪರಾಕ್ರಮವನ್ನು ನೋಡಿ ನನಗೆ ಬಲು ಭಯ ಆಗಿದೆ. ನನ್ನ ಭಯಕ್ಕೂ ದುಃಖಕ್ಕೂ ಪಾರವೇ ಇಲ್ಲ. ಎಲ್ಲಿ ನೋಡಿದರೂ ನನಗೆ ಭಯವೇ. ಅದರಿಂದ ಮತ್ತೆ ನಿನ್ನ ಬಳಿಗೆ ಬಂದೆ. ನಿನ್ನನ್ನೇ ಮರೆಹೊಕ್ಕೆ.

"ಶೋಕಸಾಗರದಲ್ಲಿ ಮುಳುಗಿಹೋಗುತ್ತ ಇದೇನೆ ನಾನು. ದುಃಖ ಎಂಬ ಮೊಸಳೆಗಳು ಭಯ ಎಂಬ ಅಲೆಗಳು ಈ ಮಹಾಸಮುದ್ರದಲ್ಲಿ. ನನ್ನನ್ನು ಬದುಕಿಸು, ಅಣ್ಣ. ನೀನು ಕಳಿಸಿದ ರಾಕ್ಷಸರು ಎಲ್ಲರೂ ರಾಮನ ಕೂರಂಬಿನ ಪೆಟ್ಟಿಗೆ ಬಿದ್ದುಹೋದರು. ಆ ರಾಮ ದಂಡಕಾರಣ್ಯದಲ್ಲಿ ನೆಲೆಸಿ ರಾಕ್ಷಸರಿಗೆ ಕಂಟಕ ಆಗಿದಾನೆ. ನಿನಗೆ ನನ್ನಮೇಲೂ ಆ ರಾಕ್ಷಸರಮೇಲೂ ದಯೆ ಇದ್ದರೆ, ಅಣ್ಣ, ಈಗಲೇ ದಂಡಕಾರಣ್ಯಕ್ಕೆ ನಡೆ. ರಾಮನನ್ನು ಇದಿರಿಸುವ ಶಕ್ತಿ ಇದ್ದರೆ ಇದಿರಿಸಿ ಕೂಡಲೇ ಅವನನ್ನು ಕೊಲ್ಲು. ಕಿವಿಹರಕಿ ಮೂಕೊರೆ ಆಗಿ ನಾಚಿಕೆ ಕೆಟ್ಟು ಇದೇನೆ. ನೀನು ಅವನನ್ನು ಕೊಲ್ಲದೆ ಹೋದರೆ ನಾನು ಬದುಕಿ ಇರಲಾರೆ. ನಿನ್ನ ಇದಿರಿನಲ್ಲೇ ಪ್ರಾಣಬಿಡುತ್ತೇನೆ.

"ನನಗೆ ಏನೋ ನೀನು ಅವನನ್ನು ಇದಿರಿಸಲಾರೆ ಎಂದೇ ಎನಿಸುತ್ತದೆ. ನಿನ್ನ ಸಮಸ್ತ ಸೈನ್ಯವೂ ಅವನನ್ನು ಇದಿರಿಸಲಾರದು. ಶೂರ ಎಂಬ ಒಣ ಜಂಬವೇ ನಿನ್ನದು. ನಿಜಕ್ಕೂ ನೀನು ಶೂರ ಅಲ್ಲ. ಆಗಿ ಇದ್ದರೆ ಹೋಗಿ ರಾಮನನ್ನು ಕೊಂದು ಬಾ ಮತ್ತೆ. ನಿನಗೆ ಎಲ್ಲಿ ಇದೆ ಅಷ್ಟು ಸಾಮರ್ಥ್ಯ? ನಿನ್ನ ಶೌರ್ಯ ಬರೀ ಸುಳ್ಳು. ನೀನು ಬರೀ ಹೇಡಿ, ಅಂಜುಗುಳಿ. ನೀನು ಕುಲಗೇಡಿ. ರಾಮನಿಗೆ ಸಮ ಆದ ಶಕ್ತಿ ತೇಜಸ್ಸು ಇದ್ದರೆ ಹೋಗಿ ಅವನನ್ನು ಕೊಲ್ಲು. ನಿನ್ನಂಥ ಒಬ್ಬ ಅಲ್ಪವೀರ್ಯನಿಗೆ ಬಲಹೀನನಿಗೆ ಅದು ಸಾಧ್ಯವೆ? ಈ ಜನಸ್ಥಾನದಲ್ಲಿ ಏಕೆ ಇದೀಯೆ ನೀನು? ನಿನ್ನ ಬಂಧುಬಳಗದ ಸಮೇತ

ಓಡಿಹೋಗು. ಇಲ್ಲದೆ ಇದ್ದರೆ ಆ ರಾಮ ಬಂದು ನಿನ್ನನ್ನು ಧ್ವಂಸಮಾಡುತ್ತಾನೆ. ದಶರಥಮಹಾರಾಜನ ಮಗ ಅವನು. ಮಹಾತೇಜಸ್ವಿ ಮಹಾ ಪರಾಕ್ರಮಶಾಲಿ. ನನ್ನ ಕಿವಿ ಮೂಗು ಕುಯಿದ ಅವನ ತಮ್ಮ ಲಕ್ಷ್ಮಣ ಅಣ್ಣನಿಗಿಂತಲೂ ಒಂದು ಕೈ ಹೆಚ್ಚು."

ಎರಡೂ ಕೈಗಳಿಂದ ತನ್ನ ಗುಡಾಣದ ಹೊಟ್ಟೆಯನ್ನು ಬಡಿದುಕೊಳ್ಳುತ್ತ ಹೀಗೆ ಹೇಳಿದಳು.

೨೨

ರಾಕ್ಷಸರ ಇದಿರಿಗೆ ಶೂರ್ಪಣಖೆ ಹೀಗೆ ಹೀಗಳೆದುದು ಶೂರ ಖರನನ್ನು ರೇಗಿಸಿತು. ರೌದ್ರಾವೇಶದಿಂದ ಹೇಳಿದ: "ತಂಗಿ, ನಿನಗೆ ಆದ ಅವಮಾನದಿಂದ ನನಗೆ ಎಷ್ಟು ಸಿಟ್ಟು ಬಂದಿದೆಯೋ ಹೇಳಲಾರೆ. ಉಕ್ಕಿಬರುವ ಕಡಲಿನ ಹಾಗೆ ತಡೆಯಲು ಸಾಧ್ಯ ಇಲ್ಲದೆ ಇದೆ. ಆ ರಾಮ ಮನುಷ್ಯಮಾತ್ರ. ಅವನ ಆಯುಸ್ಸು ತೀರಿತು. ಎಷ್ಟುಮಾತ್ರದವನು ಅವನು? ತನ್ನ ದುಷ್ಕೃತ್ಯಗಳಿಂದ ತಾನೇ ಸಾಯುತ್ತಾನೆ ಈಗ ನನ್ನ ಕೈಯಲ್ಲಿ. ತಂಗಿ, ಅಳಬೇಡ. ಅವನನ್ನೂ ಅವನ ತಮ್ಮನನ್ನೂ ಯಮಪುರಿಗೆ ಅಟ್ಟುತ್ತೇನೆ. ನನ್ನ ಕೊಡಲಿಯಿಂದ ಕಡಿದುಹಾಕುತ್ತೇನೆ. ಅವನ ಬಿಸಿ ರಕ್ತವನ್ನು ನೀನು ಕುಡಿಯುತ್ತೀಯಂತೆ."

ಖರನ ಬಾಯಿಂದ ಬಂದ ಈ ವೀರಾಲಾಪವನ್ನು ಕೇಳಿ ಶೂರ್ಪಣಖೆ ಉಬ್ಬಿದಳು. ಮೂರ್ಖಬುದ್ಧಿ. ಖರನನ್ನು ಹೊಗಳಿ ಇನ್ನೂ ಉಬ್ಬಿಸಿದಳು. ಅಷ್ಟುಹೊತ್ತೂ ಅವನನ್ನು ಹೀಗಳೆದ ಅವಳು ಈಗ ಹೊಗಳಲಾರಂಭಿಸಿದಳು. ಆ ಹೊಗಳಿಕೆಯನ್ನು ಕೇಳಿ ಖರನಿಗೆ ಹಿಗ್ಗು. ತನ್ನ ಸೇನಾಧಿಪತಿ ದೂಷಣನನ್ನು ಕರೆದ. "ಹದಿನಾಲ್ಕು ಸಾವಿರ ರಾಕ್ಷಸರು ಹೊರಡಲಿ ಯುದ್ಧಕ್ಕೆ. ಮಹಾವೇಗಶಾಲಿಗಳು, ಯುದ್ಧದಲ್ಲಿ ಹಿಂಜರಿಯದವರು, ಎಂಥ ಕ್ರೂರ ಕೆಲಸವನ್ನೂ ಮಾಡಬಲ್ಲವರು, ಪ್ರಾಣಿಹಿಂಸಾವಿನೋದಿಗಳು, ಕಾಲಮೇಘದಂಥ ಮೈಯ ಭಯಂಕರಾಕಾರರು, ಕೊಬ್ಬಿದ ಹುಲಿಗಳಂಥವರು, ಉಗ್ರತೇಜಸ್ಸು ದೊಡ್ಡಬಾಯಿ ಇರುವವರು, ಮಹಾಬಲಾಢ್ಯರು, ಗರ್ವಿಷ್ಠರು, ನನ್ನ ಚಿತ್ತದಂತೆ ನಡೆಯುವವರು ಆಗಬೇಕು. ಈ ಕೂಡಲೇ ಸಿದ್ಧ ಆಗಬೇಕು.

"ಎಲ್ಲ ಪ್ರಯತ್ನಗಳೂ ಈಗಲೇ ಆಗಲಿ. ನನ್ನ ರಥ, ನನ್ನ ಬಿಲ್ಲು, ಬಗೆ ಬಗೆಯ ಬಾಣಗಳು, ಕತ್ತಿಗಳು, ಈಟಿಗಳು ಬರಲಿ. ತರಿಸು. ಆ ರಾಮನನ್ನು ಕೊಲ್ಲಬೇಕು. ಅವನ ಸೊಕ್ಕು ಹೆಚ್ಚಿಹೋಗಿದೆ. ಮಹಾಬಲಿಷ್ಠರ ವಂಶ ಪುಲಸ್ತ್ಯ ವಂಶ. ಅದರಲ್ಲಿ ನಾನು ರಣಕೋವಿದ. ನಾನೇ ಮೊದಲು ಹೋಗುತ್ತೇನೆ" ಎಂದು ಹೇಳಿದ.

ಸೂರ್ಯನಂತೆ ಜಾಜ್ವಲ್ಯಮಾನ ರಥ. ಮೇರುಶಿಖರದಂತೆ ಬೆಳಗುತ್ತ ಇದೆ. ಬಂಗಾರದ ಮಲಾಮನ್ನು ಹಾಕಿದ್ದಾರೆ. ಬಂಗಾರದ ಚಕ್ರಗಳು. ನೊಗಕ್ಕೆ ವೈಡೂರ್ಯಗಳನ್ನು ಕೂಡಿಸಿದ್ದಾರೆ. ಬಂಗಾರದಲ್ಲಿ ಮಾಡಿದ ಹಕ್ಕಿ ಮೀನು ಹೂಗಿಡ ಸೂರ್ಯ ಚಂದ್ರ ನಕ್ಷತ್ರ ಮೊದಲಾದ ಗೊಂಬೆ ಅದರಲ್ಲಿ. ಬಂಗಾರದ ಕಿರುಗಂಟೆಗಳನ್ನು ಕಟ್ಟಿದ್ದಾರೆ. ರಥದಲ್ಲಿ ಕತ್ತಿಗಳು ಬಾಕುಗಳು. ವಿಶಾಲ ಆದ ರಥದ ಮೇಲೆ ಎತ್ತರದಲ್ಲಿ ಬಾವುಟ.

ರಥವನ್ನು ಏರಿದ ಖರ.

ಕೂಡಲೇ ಮಹಾಬಲಾಢ್ಯರು ಆದ ರಾಕ್ಷಸರು ಕೆಲವರು ರಥವನ್ನು ಸುತ್ತುಗಟ್ಟಿ ನಿಂತರು. ಕೆಲವರು ದೂಷಣನ ಸುತ್ತ ನಿಂತರು. ಕೈಯಲ್ಲಿ ದೊಡ್ಡ ದೊಡ್ಡ ಬಿಲ್ಲು, ಮೈಮೇಲೆ ಗಡುಸು ಯುದ್ಧಕವಚ, ವಿವಿಧ ಆಯುಧಗಳು. ಹೀಗೆ ಸಿದ್ಧ ಆಗಿ ನಿಂತ ದಂಡನ್ನು ನೋಡಿ ಮುಂದಕ್ಕೆ ಹೊರಡುವಂತೆ ಅಪ್ಪಣೆ ಮಾಡಿದ ಖರ. ಖರನ ಚಿತ್ತಾನುವರ್ತಿಗಳು ಆ ಹದಿನಾಲ್ಕುಸಾವಿರ ಜನವೂ ಭಯಂಕರ ಆಗಿ ಆರ್ಭಟಿಸುತ್ತ ಮುಂದೆ ಸಾಗಿತು. ಅವರ ಕೈಯಲ್ಲಿ ಮುದ್ಗರ, ಅಡ್ಡಕತ್ತಿ, ಶೂಲ, ಹರಿತ ಆದ ಕೊಡಲಿ, ಕತ್ತಿ, ಚಕ್ರತೋಮರ ಭಿಂಡಿವಾಲ, ಶಕ್ತ್ಯಾಯುಧ, ಪರಿಘ, ಬಿಲ್ಲು, ಗದೆ, ಈಟಿ ಎಲ್ಲವೂ ಇದ್ದವು. ಎಂಟು ಮೂಲೆಯ ವಜ್ರಾಯುಧದಂಥದು ಬೇರೆ. ಎಲ್ಲರೂ ಕೋಲಾಹಲ ಮಾಡುತ್ತ ಜನಸ್ಥಾನ ದಿಂದ ಹೊರಟರು.

ಹಿಂದೆ ಖರನ ರಥ. ಸಾರಥಿಗೆ ಖರನ ಇಂಗಿತ ತಿಳಿಯಿತು. ಕುದುರೆ ಗಳನ್ನು ಚುರುಕು ಮಾಡಿದ. ಆಗ ಆ ರಥದ ಸದ್ದು ಎಂಟೂ ದಿಕ್ಕುಗಳಲ್ಲೂ ತುಂಬಿಹೋಯಿತು. ಮಹಾರಭಸದಿಂದ ಹೋಗುತ್ತ ಇದ್ದ ದಂಡು, ವೇಗದಿಂದ ಹೋಗುತ್ತ ಇದ್ದ ರಥ. ಖರನ ಸಿಟ್ಟು ಹೆಚ್ಚು ಆಯಿತು. ಅಬ್ಬರಿಸತೊಡಗಿದ. ಯಾವಾಗ ಕೊಂದೇನೋ ಶತ್ರುವನ್ನು ಎಂದು ಯಮನ ಹಾಗೆ ಭಯಂಕರ

ಆಗಿ ಹೊರಟ ಖರ. ರಥವನ್ನು ಇನ್ನೂ ಬೇಗ ಹೊಡೆ ಎಂದು ಗರ್ಜಿಸಿದ. ಕಲ್ಲಿನ ಮಳೆ ಸುರಿಯುವ ಮೇಘದಂತೆ ಸಿಂಹನಾದ ಮಾಡಿದ.

೨೩

ಖರನ ದಂಡು ಹೊರಟಾಗ ಮುಗಿಲಿನಲ್ಲಿ ಕತ್ತೆಯ ಬಣ್ಣದ ಮೋಡಗಳು ಕವಿದವು. ರಕ್ತದ ಮಳೆ ಸುರಿಯಿತು. ದಾರಿಯಲ್ಲಿ ಹೂ ಹಾಸಿ ಇದ್ದರೂ ನೆಲ ದಿಣ್ಣೆತಗ್ಗು ಇಲ್ಲದೆ ಸಮ ಆಗಿ ಇದ್ದರೂ ಖರನ ರಥದ ಕುದುರೆಗಳು ಮುಗ್ಗರಿಸಿದವು. ಎತ್ತರ ಆಗಿ ಇದ್ದ ಅವನ ಸುವರ್ಣಧ್ವಜದ ಮೇಲೆ ಮಹಾದೇಹದ ಭಯಂಕರ ರಣಹದ್ದು ಒಂದು ಕುಳಿತು ಇತ್ತು. ಪೂರ್ವ ದಿಕ್ಕಿಗೆ ತಿರುಗಿ ನರಿಗಳು ಕುಯ್ಯೋ ಎಂದು ಕೂಗುತ್ತ ಬಾಯಿಂದ ಕಿಡಿ ಕಾರುತ್ತ ಭಯಂಕರ ಆಗಿ ಅರಚಿಕೊಂಡವು. ಅಡವಿಯ ಮೃಗಗಳೂ ಮಾಂಸ ತಿನ್ನುವ ರಣಹದ್ದುಗಳೂ ದಂಡಿನ ಮುಂದೆ ಬಂದು ನಿಂತು ಕರ್ಣಕಠೋರ ಆಗಿ ಕೂಗಿದವು.

ಸೂರ್ಯನ ಪರಿವೇಷ ಕಪ್ಪು ಆಯಿತು. ಅಂಚು ನೆತ್ತರಿನ ಬಣ್ಣಕ್ಕೆ ತಿರುಗಿ ಕೊಳ್ಳಿಯ ಚಕ್ರ ಒಂದು ಸೂರ್ಯನನ್ನು ಸುತ್ತಿದಂತೆ ಇತ್ತು. ರುಂಡ ಇಲ್ಲದ ಮುಂಡ ಒಂದು, ಪರಿಘದಂಥವು, ಸೂರ್ಯಬಿಂಬದ ಸಮೀಪದಲ್ಲಿ ಕಂಡಿತು. ಆಗ ಪರ್ವಕಾಲ ಅಲ್ಲ. ಆದರೂ ಸೂರ್ಯ ರಾಹುವಿನ ಪಾಲು ಆಗಿ ಕಳೆ ಕುಂದಿದ. ಭಯಂಕರ ಇದಿರುಗಾಳಿ. ಸಂಜೆ ಆಗದೆ ಇದ್ದರೂ ಪಡುವಣ ದಿಕ್ಕು ಕೆಂಪಗೆ ರಕ್ತವರ್ಣ ತುಂಬಿತು.

ವಜ್ರಾಯುಧದ ಹೊಡೆತಕ್ಕೆ ಸಿಕ್ಕ ಬೆಟ್ಟಗಳ ಹಾಗೆ ಕೆಂಬಣ್ಣದ ಮೋಡಗಳು ಮುಗಿಲಿನಲ್ಲಿ ದಟ್ಟ ಆಗಿ ಸೇರಿದವು. ಅಮಂಗಳ ಆದ ಭಯಂಕರ ರಕ್ತವರ್ಷ ಸುರಿಯಿತು. ಹಠಾತ್ತಾಗಿ ಎಲ್ಲೆಲ್ಲೂ ಕಾಳ್ಗತ್ತಲೆ ಕವಿಯಿತು. ದಿಕ್ಕು ವಿದಿಕ್ಕು ಕಾಣಲಿಲ್ಲ. ಮಿಂಚುಹುಳಗಳ ಹಾಗೆ ಕಂಡವು ನಕ್ಷತ್ರಗಳು. ಭಯಂಕರ ಆಗಿ ಧಗಧಗಿಸುವ ಸಿಡಿಲು ಬಿದ್ದವು. ಗುಡ್ಡ ಬೆಟ್ಟ ಕಾಡು ಇಡೀ ಭೂಮಿಯೇ ಗಡಗಡ ನಡುಗಿತು.

ತಾವರೆಕೊಳದ ಕಮಲಗಳು ಎಲ್ಲವೂ ಒಣಗಿದವು. ನೀರಿನ ಜಂತುಗಳು ಹೆದರಿ ತಳಕ್ಕೆ ಹೋಗಿ ಸೇರಿಕೊಂಡವು, ಕಣ್ಣಿಗೆ ಕಾಣದಂತೆ. ಗಿಡಗಳು ಎಲ್ಲಾ

ಬೋಳು ಬೋಳು. ಹೂ ಹಣ್ಣು ಕಾಯಿ ಎಲೆ ಎಲ್ಲಾ ಉದುರಿಹೋದವು. ಶಾರಿಕೆಗಳ ಸೌಮ್ಯ ಧ್ವನಿ ಅಡಗಿ ಗಡುಸು ಆಗಿ ಚೀರತೊಡಗಿದವು.

ಇಷ್ಟು ಅಮಂಗಳ ಸೂಚನೆ ಕಂಡರೂ ಖರನ ರಣೋತ್ಸಾಹ ತಗ್ಗಲಿಲ್ಲ. ಹೆದರಬೇಡಿ ಎಂದು ಸಿಂಹಧ್ವನಿಯಿಂದ ದಂಡಾಳುಗಳಿಗೆ ಹೇಳುತ್ತ ಇದ್ದ. ಇದ್ದಕ್ಕೆ ಇದ್ದಂತೆ ಅವನ ಗಂಟಲು ಕುಗ್ಗಿತು. ಮಾತು ತಡವರಿಸಿತು. ಎಡತೋಳು ಅದಿರಿತು. ನಿಷ್ಕಾರಣ ಆಗಿ ಅವನ ಕಣ್ಣಿನಲ್ಲಿ ನೀರು ತುಂಬಿತು. ಹಠಾತ್ತಾಗಿ ನೆತ್ತಿಯಲ್ಲಿ ಒಂದು ಬಗೆಯ ನೋವು.

ಇದು ಯಾವುದನ್ನೂ ಲಕ್ಷ್ಯಮಾಡಲಿಲ್ಲ ಖರ. ರಾಮನನ್ನು ಕೊಲ್ಲಬೇಕು ಎಂಬ ಭ್ರಾಂತಿ ಬಲ ಆಗಿತ್ತು ಅವನಿಗೆ. ಅಪಶಕುನಗಳನ್ನು ನೋಡಿ ಕಿಲಕಿಲ ನಕ್ಕ. "ರಾಕ್ಷಸಯೋಧರೆ, ಈ ಭಯಂಕರ ಅಪಶಕುನಗಳಿಗೆ ಹೆದರುವವನು ಅಲ್ಲ ನಾನು. ಬಲಾಢ್ಯನಿಗೆ ಬಲಹೀನ ಒಂದು ಲೆಕ್ಕವೆ? ನನ್ನ ಬಾಣದ ಪೆಟ್ಟಿಗೆ ಮುಗಿಲಿನ ಚಿಕ್ಕೆಗಳೇ ಕೆಳಗೆ ಉರುಳಿ ಬೀಳುತ್ತವೆ. ಮೃತ್ಯುದೇವತೆಯನ್ನೇ ಸಾಯಿಸಬಲ್ಲೆ ನಾನು. ತಾನು ಬಲಶಾಲಿ ಎಂಬ ಗರ್ವ ರಾಮನಿಗೆ. ಅವನನ್ನೂ ಅವನ ತಮ್ಮ ಲಕ್ಷ್ಮಣನನ್ನೂ ಕೊಲ್ಲದೆ ನಾನು ಹಿಂದಿರುಗುವುದು ಇಲ್ಲ. ನನ್ನ ತಂಗಿ ಅವರ ನೆತ್ತರನ್ನು ಕುಡಿಯಬೇಕಂತೆ. ಅವಳ ಬಯಕೆ ಈಡೇರಬೇಕು. ಅದಕ್ಕಾಗಿ ಈಗ ನಾವು ಹೊರಟು ಇರುವುದು. ನಾನು ಎಂದೂ ಎಲ್ಲೂ ಸೋತು ಇಲ್ಲ. ನೀವೇ ಕಂಡು ಇದೀರಿ. ನಾನು ಸುಳ್ಳು ಹೇಳುವವನು ಅಲ್ಲ. ನನಗೆ ಸಿಟ್ಟುಬಂದು ನಾನು ಯುದ್ಧಕ್ಕೆ ಹೊರಟರೆ ಐರಾವತ ಏರಿಬಂದ ದೇವೇಂದ್ರನೂ ಕೆಳಗೆ ಉರುಳಬೇಕಾದ್ದೇ. ಅಂಥದರಲ್ಲಿ ಈ ನರಬಾಲಕರು ನನಗೆ ಲೆಕ್ಕವೆ?" ಎಂದು ಗರ್ಜಿಸಿದ.

ರಾಕ್ಷಸರ ದಂಡಿಗೆ ತಾವು ಸಾವಿನ ಬಾಯಿಗೆ ನುಗುತ್ತಿದೇವೆ ಎಂಬುದು ತಿಳಿಯದು. ಖರನ ಮಾತನ್ನು ಕೇಳಿ ಹಿರಿಹಿರಿ ಹಿಗ್ಗಿದರು. ದಂಡು ವೇಗದಿಂದ ಮುಂದೆ ಸಾಗಿತು. ಮುಂದೆ ಖರನ ರಥ. ಅವನ ಪಕ್ಕದಲ್ಲಿ ಹನ್ನೆರಡು ಮಂದಿ ಅಮಾತ್ಯರು: ಶ್ಯೇನಗಾಮಿ, ಪೃಥುಗ್ರೀವ, ಯಜ್ಞಶತ್ರು, ವಿಹಂಗಮ, ದುರ್ಜಯ, ಕರವೀರಾಕ್ಷ, ಪರುಷ, ಕಾಲಕಾರ್ಮುಕ, ಮೇಘಮಾಲಿ, ಮಹಾಮಾಲಿ, ಸರ್ಪಮುಖ, ರುಧಿರಾಶನ. ಅವರ ಹಿಂದೆ ದೂಷಣ. ಅವನ ಜೊತೆಯಲ್ಲಿ ಸೇನಾಪತಿಗಳು ನಾಲ್ವರು: ಮಹಾಕಾಪಾಲಿ, ಸ್ಥೂಲಾಕ್ಷ, ಪ್ರಮಾಥಿ, ತ್ರಿಶಿರ.

ಸೂರ್ಯಚಂದ್ರರ ಮೇಲೆ ದಾಳಿಮಾಡಹೊರಟ ಅಂಗಾರಕ ಮುಂತಾದ ಗ್ರಹಗಳಂತೆ ರಾಮಲಕ್ಷ್ಮಣರ ಕಡೆಗೆ ಬಂತು ಆ ದಂಡು ಯುದ್ಧೋತ್ಸಾಹದಿಂದ ಮಹಾವೇಗದಿಂದ.

ಈ ಮಹಾಯುದ್ಧವನ್ನು ನೋಡಲು ದೇವಗಂಧರ್ವಸಿದ್ಧಚಾರಣರು ಋಷಿಗಳು ಬಂದರು. "ಲೋಕಹಿತ ಬಯಸುವ ಮಹಾತ್ಮರಿಗೆ ಮಂಗಳ. ಚಕ್ರಪಾಣಿ ವಿಷ್ಣು ದೈತ್ಯರನ್ನು ಕೊಂದಂತೆ ಶ್ರೀರಾಮ ಪುಲಸ್ತ್ಯವಂಶದ ರಾಕ್ಷಸರು ಎಲ್ಲರನ್ನೂ ನಾಶಮಾಡಲಿ" ಎಂದು ಹರಸಿದರು.

೨೪

ಖರ ರಾಮಾಶ್ರಮದ ಕಡೆ ಹೊರಟಾಗ ಮಹಾ ಉತ್ಪಾತಗಳು ಕಾಣಿಸಿಕೊಂಡವು. ಅವನ್ನು ರಾಮಲಕ್ಷ್ಮಣರು ನೋಡಿದರು. ಮೈ ನಡುಗಿಸುವ ಆ ಭಯಂಕರ ಅಪಶಕುನ ನೋಡಿ ರಾಮ ಹೇಳಿದ ಲಕ್ಷ್ಮಣನಿಗೆ: "ಮಹಾ ಪರಾಕ್ರಮಿ, ಎಂಥ ಘೋರ ಉತ್ಪಾತಗಳು ಇವು. ಸಮಸ್ತ ಪ್ರಾಣಿಕೋಟಿಗೇ ನಾಶವನ್ನು ಸೂಚಿಸುತ್ತವೆ ಇವು. ರಾಕ್ಷಸಕುಲವಿನಾಶವೇ ಇದರ ಅರ್ಥ. ಈ ಕತ್ತೆಯ ಬಣ್ಣದ ಮೋಡಗಳ ಸುತ್ತಾಟವನ್ನು ನೋಡು. ಗುಡುಗುಸಿಡಿಲಿನಂತೆ ಸದ್ದುಮಾಡುತ್ತ ನೆತ್ತರುಮಳೆ ಕರೆಯುತ್ತ ಇವೆ. ಇಲ್ಲಿ ನೋಡು, ಲಕ್ಷ್ಮಣ, ನನ್ನ ಬಾಣಗಳು ಹೊಗೆ ಆಡುತ್ತ ಇವೆ. ಯುದ್ಧಾತುರದಿಂದ ನನ್ನ ಬಿಲ್ಲು ಹೊರಳುತ್ತಾ ಇದೆ. ಕಾಡುಹಕ್ಕಿಗಳ ಆ ಕರ್ಕಶ ಅಶುಭ ಧ್ವನಿಯನ್ನು ಕೇಳಿದೆಯಾ? ಪ್ರಾಣಹಾನಿಯನ್ನೋ ಭಯವನ್ನೋ ಸೂಚಿಸುತ್ತವೆ. ಅಂತೂ ಒಂದು ಮಹಾಯುದ್ಧ ನಡೆಯುತ್ತದೆ. ಸಂದೇಹ ಇಲ್ಲ. ನನ್ನ ಬಲಭುಜ ಪದೇ ಪದೇ ಅದಿರುತ್ತ ಇದೆ. ನಮಗೆ ಗೆಲವು, ಶತ್ರುಗಳಿಗೆ ಸೋಲು ಖಂಡಿತ.

"ತಮ್ಮ, ನಿನ್ನ ಮುಖ ಈಗ ಬಹಳ ಪ್ರಸನ್ನ ಆಗಿದೆ. ಬಹಳ ಕಳೆಗೊಂಡು ಇದೆ. ಯುದ್ಧಕ್ಕೆ ಹೋಗುವವರ ಮುಖ ಕಳೆಗುಂದಬಾರದು. ಅಂಥವರಿಗೆ ಸಾವು ಖಂಡಿತ. ರಾಕ್ಷಸರು ಬರುವ ಹಾಗೆ ಇದೆ. ಅವರ ಸಿಂಹನಾದ ಭೇರೀ ಧ್ವನಿಗಳು ಕಠೋರ ಆಗಿ ಕೇಳಿಸುತ್ತ ಇವೆ. ಮುಂದೆ ಬರುವ ವಿಪತ್ತಿನ ಸಂಶಯ ತೋರಿದಾಗ ತಕ್ಕ ಪ್ರತೀಕಾರವನ್ನು ಯೋಚಿಸಿಕೊಳ್ಳುವುದು ಬುದ್ಧಿವಂತರ

ಲಕ್ಷ್ಮಣ. ಆದ್ದರಿಂದ ನೀನು ಕೂಡಲೆ ಜಾನಕಿಯನ್ನು ಕರೆದುಕೊಂಡು ಹೋಗು. ಗಿಡಮರ ದಟ್ಟ ಆಗಿ ಹೊರಗಿನಿಂದ ಏನೂ ಕಾಣಿಸದಂಥ ಗುಹೆಯೊಳಕ್ಕೆ ಹೋಗು. ಕೈಯಲ್ಲಿ ಬಿಲ್ಲುಬಾಣ ಇರಲಿ. ನನ್ನ ಮಾತಿಗೆ ಇದಿರು ಆಡಬೇಡ. ನನ್ನ ಆಣೆ. ಈಗಲೇ ಹೊರಡು. ನೀನು ಶೂರ, ಬಲಿಷ್ಠ. ಇವರು ಎಲ್ಲರನ್ನೂ ಕೊಲ್ಲಬಲ್ಲೆ. ಸಂದೇಹ ಇಲ್ಲ. ಆದರೆ ಇವರನ್ನು ನಾನು ಕೊಲ್ಲಬಯಸಿದೇನೆ."

ಲಕ್ಷ್ಮಣ ಮರುಮಾತು ಆಡಲಿಲ್ಲ. ಸೀತೆಯನ್ನು ಕರೆದುಕೊಂಡು ಬಿಲ್ಲುಬಾಣ ಹಿಡಿದು ಒಂದು ಗುಹೆಯನ್ನು ಹೊಕ್ಕ. ರಾಮನಿಗೆ ನೆಮ್ಮದಿ ಆಯಿತು ಆಗ. ಬೆಂಕಿಯ ಹಾಗೆ ಹೊಳೆಯುವ ಕವಚವನ್ನು ತೊಟ್ಟು ಬಿಲ್ಲು ಬಾಣಗಳನ್ನು ಕೈಗೆ ಎತ್ತಿಕೊಂಡು ಹತ್ತೂ ದಿಕ್ಕುಗಳೂ ಮಾರ್ಮೊಳಗುವಂತೆ ಟಂಕಾರ ಮಾಡಿದ. ಕತ್ತಲಲ್ಲಿ ಹೊಗೆ ಇಲ್ಲದೆ ಧಗಧಗಿಸುವ ಬೆಂಕಿಯ ಹಾಗೆ ಇದ್ದ ರಾಮ.

ಈ ಯುದ್ಧವನ್ನು ನೋಡಲು ಬಂದು ಇದ್ದ ಸಿದ್ಧಚಾರಣ ಗಂಧರ್ವಾದಿ ದೇವತೆಗಳೂ ಮಹರ್ಷಿಗಳೂ ಗಾಬರಿಯಿಂದ "ಈ ರಾಕ್ಷಸರು ಹದಿನಾಲ್ಕು ಸಾವಿರ. ಬಲು ಕ್ರೂರರು, ದುಷ್ಟರು. ಧರ್ಮಾತ್ಮ ರಾಮ ಒಬ್ಬನೇ ಒಬ್ಬ ಇಷ್ಟು ಜನರೊಡನೆ ಹೇಗೆ ಯುದ್ಧಮಾಡಿಯಾನು" ಎಂದುಕೊಳ್ಳುತ್ತಿದ್ದರು.

ರಾಮ ಯುದ್ಧಸನ್ನದ್ಧ ಆಗಿ ನಿಂತ. ಎಂಥ ಮಹತ್ತರ ಕೆಲಸವನ್ನೂ ಲೀಲಾಜಾಲ ಆಗಿ ಮಾಡಬಲ್ಲವನು ರಾಮ. ಆಗ ಅವನ ತೇಜಸ್ಸನ್ನು ನೋಡಿ ಸಮಸ್ತ ಜೀವಿಗಳಿಗೂ ತಲ್ಲಣ, ಭಯ. ಪ್ರಳಯರುದ್ರನಂತೆ ಕಾಣುತ್ತ ಇದ್ದ ರಾಮ.

ರಾಕ್ಷಸಸೇನೆ ಬಂತು. ಭಯಂಕರ ಕವಚಗಳನ್ನು ತೊಟ್ಟು ಆಯುಧಗಳನ್ನು ಹಿಡಿದು ಬಾವುಟಗಳನ್ನು ಹಾರಿಸುತ್ತ ಗಂಭೀರ ಧ್ವನಿ ಮಾಡುತ್ತ ಬಂತು ದಂಡು. ಅವರ ಸಿಂಹನಾದಕ್ಕೆ ಕಾಡು ಎಲ್ಲಾ ನಡುಗಿತು. ರಾಮನನ್ನು ಕೊಲ್ಲಲು ತಾನು ಮುಂದೆ ತಾನು ಮುಂದೆ ಎಂಬ ಸ್ಪರ್ಧೆ ಅವರವರಲ್ಲಿ. ಒಂದು ಕಡೆ ಟಂಕಾರ, ಒಂದು ಕಡೆ ಗರ್ಜನೆ, ಒಂದು ಕಡೆ ಅಪರಿಮಿತ ಯುದ್ಧೋತ್ಸಾಹದ ಘೋಷ, ಒಂದು ಕಡೆ ದುಂದುಭಿಧ್ವಾನ, ಎಲ್ಲೆಲ್ಲೂ ಚೀರಾಟ–ಕೂಗಾಟ. ರಾಕ್ಷಸರ ಈ ಗುಲ್ಲುಗದ್ದಲದಿಂದ ಅಡವಿಯ ಕ್ರೂರ ಮೃಗಗಳು ಎಲ್ಲವೂ ಬೆದರಿ ಓಡಿಹೋಗಿ ಅವಿತುಕೊಂಡವು.

ವಿವಿಧ ಆಯುಧ, ಗಂಭೀರ ಧ್ವನಿ. ರಾಕ್ಷಸರ ದಂಡು ಮಹಾಸಮುದ್ರದ ಹಾಗೆ ರಾಮನ ಕಡೆ ಬಂದಿತು. ರಾಮ ರಣಪಂಡಿತ. ಎಚ್ಚರಿಕೆಯಿಂದ ನಾಲ್ಕೂ ಸಿಟ್ಟನ್ನು ನೋಡಿದ. ಯುದ್ಧಾತುರದಿಂದ ಖರನ ದಂಡು ಇದಿರು ಬರುತ್ತ ಇತ್ತು. ತನ್ನ ಬಿಲ್ಲನ್ನು ಸಜ್ಜುಮಾಡಿದ. ಬತ್ತಳಿಕೆಯಿಂದ ಬಾಣ ಗಳನ್ನು ತೆಗೆದ. ರಾಕ್ಷಸರ ಗುಂಪನ್ನೇ ನಾಶಮಾಡಬೇಕು ಎನ್ನುವಷ್ಟು ಸಿಟ್ಟು ಬಂತು. ಆ ಕೋಪಕ್ಕೆ ಪ್ರಳಯಾಗ್ನಿಯಂತೆ ಉರಿದು ಭಯಂಕರ ಆದ. ರಾಮನ ಆ ರೌದ್ರಾವತಾರವನ್ನು ನೋಡಲು ಅಂಜಿ ವನದೇತೆಗಳು ಎಲ್ಲಾ ಓಡಿ ಹೋದರು. ದಕ್ಷಯಜ್ಞವನ್ನು ಧ್ವಂಸಮಾಡಲು ಬಂದ ರುದ್ರ ಹೀಗೇ ಇದ್ದ. ಹೀಗೆ ಮಹಾತೇಜಸ್ವಿ ಕೋದಂಡಪಾಣಿ ಆದ ರಾಮ ಯುದ್ಧಕ್ಕೆ ನಿಂತುದನ್ನು ಕಂಡು ಸಮಸ್ತ ಪ್ರಪಂಚವೂ ಭಯಗೊಂಡಿತು.

ಬೆಂಕಿಯಂತೆ ಬೆಳಗುವ ಕವಚಗಳನ್ನು ತೊಟ್ಟು ಆಯುಧ ಹಿಡಿದು ವೀರಭೂಷಣ ಧರಿಸಿ ಬಿಲ್ಲುಬಾವುಟಗಳ ಸಮೇತ ಬಂತು ರಾಕ್ಷಸರ ದಂಡು ಸೂರ್ಯೋದಯಕಾಲದ ನೀಲಮೇಘಪರಂಪರೆಯಂತೆ.

೨೫

ಕೋಪಗೊಂಡು ಇದ್ದ ರಾಮ. ಶತ್ರುಸಂಹಾರಕ್ಕೆ ಬಿಲ್ಲುಬಾಣ ಹಿಡಿದು ನಿಂತು ಇದ್ದ. ಆತನನ್ನು ನೋಡಿ ಖರ ಬಿಲ್ಲುಬಾಣ ಎತ್ತಿ ಹಿಡಿದು ಟಂಕಾರ ಮಾಡಿದ. ರಾಮನಿಗೆ ಇದಿರು ಆಗಿ ಹೊಡೆ ರಥವನ್ನು ಎಂದು ಸಾರಥಿಗೆ ಅಪ್ಪಣೆ ಮಾಡಿದ. ರಥ ರಾಮನ ಬಳಿಗೆ ಬಂತು. ರಾಮನೋ ಏಕಾಕಿ. ಇದನ್ನು ನೋಡಿದರು ಇತರ ರಾಕ್ಷಸರು. ದೊಡ್ಡದು ಆಗಿ ಸಿಂಹನಾದ ಮಾಡಿ ಅವನನ್ನು ಸುತ್ತುಗಟ್ಟಿದರು. ರಾಕ್ಷಸರ ನಡುವೆ ರಥದಲ್ಲಿ ಖರ ಇದ್ದದ್ದು ನಕ್ಷತ್ರಗಳ ನಡುವೆ ಅಂಗಾರಕ ಇದ್ದಂತೆ ಇತ್ತು.

ಖರ ಸಾವಿರ ಬಾಣ ಬಿಟ್ಟ ರಾಮನ ಮೇಲೆ. ಸಿಂಹನಾದ ಮಾಡಿದ. ರಾಕ್ಷಸರು ಎಲ್ಲರೂ ನಾನಾ ಶಸ್ತ್ರಾಸ್ತ್ರಗಳಿಂದ ರಾಮನ ಮೇಲೆ ಬಿದ್ದರು. ಕೆಲವರ ಕೈಯಲ್ಲಿ ಗುದ್ದಲಿ, ಕೆಲವರ ಕೈಯಲ್ಲಿ ಅಡ್ಡಕತ್ತಿ. ಶೂಲ ಪಟ್ಟಸ ಕತ್ತಿ ಕೊಡಲಿ ಕೆಲವರ ಕೈಯಲ್ಲಿ. ಆದರೂ ರಾಮ ಕದಲಲಿಲ್ಲ. ಮೋಡದಂತೆ

ಕಪ್ಪು, ಗುಡುಗಿನಂತೆ ಧ್ವನಿ. ರಾಕ್ಷಸರು ಕೆಲವರು ಬೆಟ್ಟದಂತೆ ಆನೆ ಏರಿ ಬಂದರು. ಕೆಲವರು ಕಾಂತಿವಂತ ಕುದುರೆಗಳ ಮೇಲೆ ಬಂದರು. ಕೆಲವರು ರಥ ಏರಿ. ಎಲ್ಲರಿಗೂ ಒಂದೇ ಆತುರ—ರಾಮನನ್ನು ಕೊಲ್ಲಬೇಕು. ಮೋಡಗಳು ಬೆಟ್ಟದ ಮೇಲೆ ಮಳೆ ಸುರಿಯುವಂತೆ ರಾಮನ ಮೇಲೆ ಬಾಣದ ಮಳೆಗರೆದರು.

ಎಷ್ಟೇ ವೇಗದಿಂದ ಹರಿದುಬಂದರೂ ಕಡಲು ನದಿಯನ್ನು ತಡೆಯುವಂತೆ ಇತರ ಶಸ್ತ್ರ ಅಸ್ತ್ರ ಎಲ್ಲವನ್ನೂ ರಾಮ ತಡೆದು ನಿಲ್ಲಿಸಿದ. ನೂರಾರು ಸಿಡಿಲು ಬಡಿದರೂ ಕದಲದ ಮಹಾಪರ್ವತದಂತೆ, ರಾಕ್ಷಸರು ಘೋರ ಧ್ವನಿಯನ್ನು ಮಾಡುತ್ತ ಭಯಂಕರ ಶಸ್ತ್ರಗಳಿಂದ ಹೊಡೆದರೂ ರಾಮನಿಗೆ ಸ್ವಲ್ಪವೂ ನೋವು ಆಗಲಿಲ್ಲ. ಮೈಯಲ್ಲಿ ಗಾಯ ಆದರೂ ಮೈ ಎಲ್ಲಾ ರಕ್ತ ಆದರೂ ರಾಮನಿಗೆ ನೋವು ಆಗಲಿಲ್ಲ. ಸಂಧ್ಯಾಕಾಲದ ಮೋಡಗಳು ಸುತ್ತಿಕೊಂಡು ಸೂರ್ಯನಂತೆ ಹೊಳೆಯುತ್ತ ಇದ್ದ.

ರಾಕ್ಷಸರು ಸಾವಿರಾರು ಮಂದಿ. ರಾಮ ಒಬ್ಬನೇ. ನೋಡಿ ಬೆದರಿದರು ದೇವಗಂಧರ್ವಸಿದ್ಧರು ಮಹರ್ಷಿಗಳು. ಆಗ ರಾಮನಿಗೆ ಕೋಪ ಉಕ್ಕಿತು. ಬಿಲ್ಲನ್ನು ಸೆಳೆದ ಕಿವಿಯವರೆಗೂ. ದುರ್ನಿವಾರ್ಯ ಆದ ಸಾವಿರಾರು ಬಾಣಗಳನ್ನು ಬಿಟ್ಟ. ಎಲ್ಲವೂ ಯಮದಂಡದಂಥವು. ಈ ಬಾಣಗಳು ರಾಕ್ಷಸರ ಮೇಲೆ ಬಿದ್ದು ಅರೆಗಳಿಗೆಯಲ್ಲಿ ಅವರ ಪ್ರಾಣಗಳನ್ನು ಹಿಂಡಿದವು. ರಾಕ್ಷಸರ ಮೈಯನ್ನು ಸೀಳಿಕೊಂಡು ಅವರ ನೆತ್ತರಿನಿಂದ ನೆನೆದು ಮುಗಿಲಿಗೆ ಹಾರಿ ಉರಿಯುವ ಬೆಂಕಿಯ ಹಾಗೆ ಬೆಳಗಿದವು. ರಾಮನ ಬಿಲ್ಲಿನಿಂದ ಹೊರಬಂದ ಬಾಣಗಳಿಗೆ ಲೆಕ್ಕವೇ ಇಲ್ಲ. ಒಂದರ ಹಿಂದೆ ಒಂದು. ಅವಿಚ್ಛಿನ್ನ ಪರಂಪರೆ.

ರಾಮನ ಬಾಣಪರಂಪರೆಗೆ ರಾಕ್ಷಸರ ಕೈಯಲ್ಲಿ ಇದ್ದ ಬಿಲ್ಲುಗಳು, ಅವರ ರಥದ ಮೇಲೆ ಇದ್ದ ಧ್ವಜಗಳು ಮುರಿದುಬಿದ್ದವು. ಅವರ ಕವಚ ಹರಿದವು. ಭುಜಕೀರ್ತಿಸಮೇತ ಅವರ ಕೈ ಕತ್ತರಿಸಿಬಿತ್ತು. ಆನೆಯ ಸೊಂಡಿಲಿನ ಹಾಗೆ ಇದ್ದ ಅವರ ತೊಡೆ ಮುರಿಯಿತು. ಅವರ ತಲೆಗಳು ಕಡಿದು ಬಿದ್ದವು. ಬಂಗಾರದ ಆಭರಣಗಳಿಂದ ಅಲಂಕರಿಸಿದ್ದ ರಥಗಳು ಮುರಿದು ಬಿದ್ದವು. ಕುದುರೆಗಳು ಸತ್ತವು. ಸಾರಥಿಗಳು ಉರುಳಿದರು. ದಂಡಿನ ಕಾಲಾಳುಗಳು ಅನೇಕರು ಬಿದ್ದುಹೋದರು. ರಾಮನ ಬಾಣಗಳ ಏಟಿಗೆ ರಾಕ್ಷಸಸೇನೆ ನಿಲ್ಲಲು ಆಗಲಿಲ್ಲ. ಅಂಕುಶಬಾಣ, ಕೊಕ್ಕೆಬಾಣ, ನಾಳಬಾಣ; ರಾಮನ ಬಾಣಗಳು

ರಾಕ್ಷಸರ ದೇಹಗಳನ್ನು ಸೀಳುವುದನ್ನು ಕಂಡು ರಾಕ್ಷಸರು ಭಯಂಕರ ಆಗಿ ಕೂಗಿದರು. ಮರ್ಮಭೇದಕಗಳು ಆದ ಈ ಬಾಣಗಳ ಹೊಡೆತಕ್ಕೆ ಒಣ ಕಾಡು ಬೆಂಕಿಗೆ ಸಿಕ್ಕಹಾಗೆ ಸಿಕ್ಕಿ ನಾಶ ಆಯಿತು ರಾಕ್ಷಸಸೇನೆ.

ಕೆಲವರು ಬಲಾಢ್ಯ ರಾಕ್ಷಸರು ಇನ್ನೂ ಬದುಕಿ ಇದ್ದರು. ಅವರು ಕತ್ತಿ ಕೊಡಲಿ ಶೂಲಗಳನ್ನು ರಾಮನ ಮೇಲೆ ಎಸೆದರು. ದಾರಿಯಲ್ಲೇ ಕತ್ತರಿಸಿ ಹಾಕಿದ ಅವನ್ನು ರಾಮ ಬಾಣ ಬಿಟ್ಟು. ಅವರ ತಲೆಗಳನ್ನೂ ಹಾರಿಸಿಬಿಟ್ಟ. ಕವಚ ಹರಿದು ಬಿಲ್ಲು ಮುರಿದು ತಲೆ ಕಡಿದು ಕೆಳಗೆ ಬಿದ್ದರು ಅವರು. ಗರುಡ ಹಾರಿಹೋಗುವಾಗ ರೆಕ್ಕೆಗಳ ರಭಸಕ್ಕೆ ಮರಗಳು ಉರುಳುವಂತೆ. ಸಾಯದೆ ಉಳಿದು ಇದ್ದ ರಾಕ್ಷಸರು ಓಡಿಹೋಗಿ ಖರನಿಗೆ ಗೋಳು ಹೇಳಿಕೊಂಡರು.

ದೂಷಣ ಅವರನ್ನು ಸಂತಯಿಸಿ ಮತ್ತೆ ರಣರಂಗಕ್ಕೆ ಕರೆತಂದ. ಯಮನ ಹಾಗೆ ರೌದ್ರದಿಂದ ತಾನೂ ಬಂದ. ದೂಷಣನನ್ನು ಹಿಂಬಾಲಿಸಿ ಕೆಲವರು ಬಂದರು ಮತ್ತೆ ರಣರಂಗಕ್ಕೆ. ಅವರ ಆಯುಧಗಳು ಎಲ್ಲವೂ ಮುರಿದು ಬಿದ್ದು ಹೋದವು. ತಾಳೆಮರಗಳನ್ನು ಸಾಲವೃಕ್ಷಗಳನ್ನು ಕಿತ್ತು ತಂದರು. ಕಲ್ಲು ಗುಂಡುಗಳನ್ನು ಎತ್ತಿ ತಂದರು. ಶೂಲಮುದ್ಗರಗಳೂ ಬಿಲ್ಲುಗಳೂ ಇದ್ದವರು ಕೆಲವರು ಬಂದು ಕೂಡಿದರು. ಎಲ್ಲರೂ ಕಲೆತು ಶಸ್ತ್ರವರ್ಷ ಬಾಣವರ್ಷ ಸುರಿಸಿದರು. ಕೆಲವರು ಗಿಡಮರಗಳನ್ನೂ ಕೆಲವರು ಗುಂಡುಬಂಡೆಗಳನ್ನೂ ಎಸೆದರು. ನೋಡುವವರಿಗೆ ಮೈನವಿರು ಏಳುವಂತೆ ಇತ್ತು ಯುದ್ಧ.

ಆ ತುಮುಲಯುದ್ಧ ಬಲು ಭಯಂಕರ. ರಾಕ್ಷಸರಿಗೆ ಬಹಳ ಸಿಟ್ಟು ಬಂದು ಇತ್ತು. ಎಲ್ಲಾ ದಿಕ್ಕುಗಳಿಂದಲೂ ರಾಮನನ್ನು ಸುತ್ತಿದರು. ಬಾಣದ ಮಳೆ ಕರೆದರು. ರಾಮನಿಗೆ ರೇಗಿತು. ಭಯಂಕರ ಆದ ಸಿಂಹನಾದವನ್ನು ಮಾಡಿದ. ಹೊಳೆಹೊಳೆವ ಗಾಂಧರ್ವಾಸ್ತ್ರವನ್ನು ಬಿಟ್ಟ. ಸಾವಿರಾರು ಬಾಣ ಪರಂಪರೆ ಆಗಿ ಹೊರಟವು. ಬಾಣ ಬಂದು ನೆಟ್ಟದ್ದೇ ಗುರುತು ರಾಕ್ಷಸರಿಗೆ. ರಾಮ ಬಾಣ ಬಿಟ್ಟದ್ದು ತಿಳಿಯಲಿಲ್ಲ. ಅಂತರಿಕ್ಷವನ್ನು ಎಲ್ಲಾ ಮುಚ್ಚಿದವು ಆ ಬಾಣಗಳು. ಮುಗಿಲು ಕಾಣದೆ ಕತ್ತಲೆ ಕವಿಯಿತು. ಬಾಣ ಬಿಡುತ್ತ ಇಲ್ಲ ರಾಮ, ಕಾರುತ್ತ ಇದ್ದಾನೆ ಎನಿಸಿತು ರಾಕ್ಷಸರಿಗೆ.

ತಂಡ ತಂಡ ಆಗಿ ಉರುಳಿ ಬಿದ್ದರು ರಾಕ್ಷಸರು. ಸತ್ತು ಬಿದ್ದವರು, ಸಾಯಲಾಗಿ ನರಳುತ್ತ ಬಿದ್ದವರು, ಎರಡು ತುಂಡು ಆಗಿ ಕತ್ತರಿಸಿ ಬಿದ್ದವರು,

ತುಂಡು ತುಂಡು ಆಗಿ ಕತ್ತರಿಸಿ ಬಿದ್ದವರು ಮೈ ಸೀಳಿ ಬಿದ್ದವರು ಸಾವಿರ ಗಟ್ಟಲೆ. ತಲೆಗೆ ಸುತ್ತಿದ ರುಮಾಲು ಹಾಗೇ ಇದೆ ಕೆಲವು ರುಂಡಗಳಿಗೆ. ಭುಜಕೀರ್ತಿಸಮೇತ ತೋಳು ಕತ್ತರಿಸಿ ಬಿದ್ದಿವೆ. ತೊಡೆ ಮುರಿದು ಬಿದ್ದಿವೆ. ಮುರಿದ ಮೊಣಕಾಲು, ತರಿದ ತಲೆ. ಅಂಗಾಂಗಗಳು ಚೆಲ್ಲಾಪಿಲ್ಲಿ. ರಥಗಳು ಪುಡಿಪುಡಿ. ಸೈನಿಕನ ಸಮೇತ ಕುದುರೆ, ಮಾವುತನ ಸಮೇತ ಆನೆ ಬಿದ್ದು ಇವೆ. ಕತ್ತಿ ಕೊಡಲಿ ಈಟಿ ಭಲ್ಲೆ, ಛತ್ರಚಾಮರ ವ್ಯಜನ ಮುರಿದಿವೆ. ಕಲ್ಲು ಗುಂಡು ಚೂರು ಚೂರು. ಬಿಲ್ಲುಬಾಣ ತುಂಡು ತುಂಡು.

ಬಹಳ ಭಯಂಕರ ಆಗಿ ಇತ್ತು ಯುದ್ಧಭೂಮಿ.

೨೬

ದೂಷಣ ನೋಡಿದ—ರಾಕ್ಷಸರ ದಂಡು ಎಲ್ಲವೂ ಸತ್ತುಹೋಯಿತು. ಎಂಥ ಯುದ್ಧಕ್ಕೂ ಹಿಂಜರಿಯದ ಇನ್ನೂ ಐದು ಸಾವಿರ ರಾಕ್ಷಸಯೋಧರನ್ನು ಕರೆದ. ಅವರು ಭಯಂಕರ ವೇಗಶಾಲಿಗಳು. ಬಂದವರೇ ಅವರು ರಾಮನನ್ನು ಸುತ್ತುಗಟ್ಟಿದರು. ಕತ್ತಿ ಶೂಲ ಪಟ್ಟಸಗಳನ್ನು ರಾಮನ ಮೇಲೆ ಎಸೆದರು. ಕೈಗೆ ಸಿಕ್ಕ ಕಲ್ಲು ಮರಗಳನ್ನು ಎಸೆದರು. ಎಂಥ ದೊಡ್ಡ ಮಳೆ ಬಂದರೂ ಲೆಕ್ಕಿಸದೆ ಕಣ್ಣು ಮುಚ್ಚಿ ನಿಂತ ಹೋರಿಯ ಹಾಗೆ ನಿಂತ ರಾಮ. ಮೇಲೆ ಬೀಳುತ್ತ ಇದ್ದ ಬಾಣದ ಮಳೆಯನ್ನೂ ಗಮನಿಸಲಿಲ್ಲ. ಈ ರಾಕ್ಷಸರು ಎಲ್ಲರನ್ನೂ ಕೊಂದುಬಿಡಬೇಕು ಎಂದು ಸಿಟ್ಟು ಬಂತು. ಬೆಂಕಿಯ ಹಾಗೆ ಉರಿಯತೊಡಗಿದ. ದೂಷಣನ ಜೊತೆಯಲ್ಲಿ ಬಂದ ಆ ದಂಡಿನ ಮೇಲೆ ಬಾಣದ ಮಳೆ ಕರೆದ.

ರಾಕ್ಷಸ ಸೇನೆಯ ಅಧಿಪತಿ ದೂಷಣನಿಗೆ ಸಿಟ್ಟು ಬಂತು. ರಾಮನ ಮೇಲೆ ಸಿಡಿಲಿನಂಥ ಬಾಣವನ್ನು ಬಿಟ್ಟ. ಆ ಬಾಣವನ್ನು ದಾರಿಯಲ್ಲಿಯೇ ಕತ್ತರಿಸಿದ ರಾಮ. ಆಮೇಲೆ ಕತ್ತಿಯಂಥ ಒಂದು ಬಾಣ ಬಿಟ್ಟ. ದೂಷಣನ ಬಿಲ್ಲನ್ನು ಮುರಿದ. ಬೇರೆ ನಾಲ್ಕು ಬಾಣ ಬಿಟ್ಟ. ದೂಷಣನ ರಥದ ನಾಲ್ಕು ಕುದುರೆ ಸತ್ತುಬಿದ್ದವು. ಅರ್ಧಚಂದ್ರನಂಥ ಬಾಣ ಒಂದನ್ನು ಬಿಟ್ಟು ಅವನ ಸಾರಥಿಯನ್ನು ಉರುಳಿಸಿದ. ಅವನ ಎದೆಗೇ ಮೂರು ಬಾಣ ಬಿಟ್ಟ. ಬಿಲ್ಲು

ಹೋಯಿತು, ರಥ ಮುರಿಯಿತು, ಕುದುರೆ ಸಾರಥಿ ಇಲ್ಲ. ದೂಷಣನಿಗೆ ಬಹಳ ಸಿಟ್ಟು. ಮೈ ನಡುಗಿಸುವಷ್ಟು ಭಯಂಕರ ಪರ್ವತಾಕಾರದ ಪರಿಘ ಒಂದನ್ನು ತೆಗೆದುಕೊಂಡ.

ಆ ಪರಿಘ ಬಲು ಕ್ರೂರ ಆದುದು. ಮಹಾವಿಷಸರ್ಪದ ಹಾಗೆ. ಮುಟ್ಟಿದರೆ ಬರಸಿಡಿಲು. ಅದರ ತುಂಬಾ ಉಕ್ಕಿನ ಮುಳ್ಳು. ದೇವಸೇನೆಯನ್ನು ಎಷ್ಟೋ ಸಲ ಅರೆದದ್ದು. ಹಗೆಗಳ ರಕ್ತದಿಂದ ಪೂರಾ ತೊಯ್ದದ್ದು. ಅದರ ಬಲದಿಂದ ಹಲವು ವೈರಿಪುರದ್ವಾರಗಳನ್ನು ಒಡೆದಿದ್ದ ದೂಷಣ. ಆ ಪರಿಘವನ್ನು ಹಿಡಿದುಕೊಂಡು ತನ್ನ ಮೇಲೆ ಬೀಳಲು ಬರುತ್ತ ಇದ್ದ ದೂಷಣನನ್ನು ನೋಡಿದ ರಾಮ. ಕೂಡಲೇ ಎರಡು ಬಾಣ ಹೂಡಿ ಅವನ ಎರಡು ತೋಳನ್ನೂ ಕತ್ತರಿಸಿ ಕೆಡವಿದ. ಅವನ ಕೈಯಲ್ಲಿ ಇದ್ದ ಪರಿಘವೂ ಧೊಪ್ ಎಂದು ನೆಲಕ್ಕೆ ಬಿತ್ತು, ಇಂದ್ರಧ್ವಜ ಉತ್ಸವ ಮುಗಿದಮೇಲೆ ಬೀಳುವಂತೆ. ದೂಷಣನೂ ನೆಲಕ್ಕೆ ಉರುಳಿದ ಕೊಂಬು ಮುರಿದ ಕಾಡಾನೆಯ ಹಾಗೆ. ರಣರಂಗದಲ್ಲಿ ಸತ್ತುಬಿದ್ದ ದೂಷಣನನ್ನು ಕಂಡು ಸಮಸ್ತ ಪ್ರಾಣಿಗಳೂ ರಾಮನನ್ನು ಭಲೆ ಭಲೆ ಎಂದು ಹೊಗಳಿದವು.

ಮಹಾಕಪಾಲ, ಸ್ಥೂಲಾಕ್ಷ, ಪ್ರಮಾಥಿ ಮೂವರೂ ಸೇನಾಪತಿಗಳು. ತಮಗೆ ಸಾವು ಕಾದು ಇದೆ ಎಂದು ತಿಳಿಯದು. ರೇಗಿ ರಾಮನ ಮೇಲೆ ಏರಿ ಬಂದರು. ಮಹಾಕಪಾಲ ದೊಡ್ಡ ಶೂಲವನ್ನು ಹಿಡಿದ. ಸ್ಥೂಲಾಕ್ಷನ ಕೈಯಲ್ಲಿ ಅಡ್ಡಗತ್ತಿ, ಪ್ರಮಾಥಿಯ ಕೈಯಲ್ಲಿ ಕೊಡಲಿ. ಯಾರು ಆದರೂ ಬಂದರೆ ಸತ್ಕರಿಸುವಂತೆ ಅವರ ಮೇಲೆ ಮೂರು ಬಾಣಬಿಟ್ಟ ರಾಮ. ಆಮೇಲೆ ಚುರುಕು ಹರಿತ ಆದ ಬಾಣಗಳಿಂದ ಮಹಾಕಪಾಲನ ತಲೆಯನ್ನು ಕಡಿದ. ಪ್ರಮಾಥಿಯ ಮೇಲೆ ಬಿಟ್ಟ ಬಾಣಗಳಿಗೆ ಲೆಕ್ಕವೇ ಇಲ್ಲ. ಹಲವು ಕೊಂಬೆಗಳ ದೊಡ್ಡ ಮರ ಉರುಳಿಬೀಳುವಂತೆ ಬಿದ್ದ ಪ್ರಮಾಥಿ. ಸ್ಥೂಲಾಕ್ಷನ ಕಣ್ಣಿನ ತುಂಬಾ ಬಾಣ ನೆಟ್ಟುಕೊಂಡವು. ದೂಷಣನ ಹಿಂದೆ ಬಂದಿದ್ದರಲ್ಲ ಐದು ಸಾವಿರ ರಾಕ್ಷಸಯೋಧರು. ಎಲ್ಲರನ್ನೂ ಐದು ಸಾವಿರ ಬಾಣಬಿಟ್ಟು ಕೊಂದ. ಒಂದೇ ಗಳಿಗೆಯಲ್ಲಿ.

ಖರನಿಗೆ ಮಹತ್ತರ ಕೋಪ. ಬಲಾಢ್ಯರು ಆದ ತನ್ನ ಸೇನಾಪತಿಗಳನ್ನು ಕರೆದು "ವೀರರೇ, ದೂಷಣನೂ ಅವನ ಜೊತೆಯಲ್ಲಿ ಹೋದ

ಯೋಧರೂ ಮಡಿದರು. ದೊಡ್ಡ ಸೈನ್ಯದ ಸಮೇತ ನಾನಾ ಶಸ್ತ್ರಾಸ್ತ್ರಗಳ ಸಮೇತ ಹೋಗಿ ಆ ಮನುಷ್ಯಮಾತ್ರ ಆದ ಅಲ್ಪನನ್ನು ಕೊಂದು ಬನ್ನಿ" ಎಂದು ಹೇಳಿದ.

ಶ್ಯೇನಗಾಮಿ ಪೃಥುಗ್ರೀವ ಯಜ್ಞಶತ್ರು ವಿಹಂಗಮ ದುರ್ಜಯ ಕರವೀರಾಕ್ಷ ಪರುಷ ಕಾಲಕಾರ್ಮುಕ ಮೇಘಶೂಲಿ ಮಹಾಶೂಲಿ ಸರ್ಪ ಮುಖ ರುಧಿರಾಶನ—ಈ ಹನ್ನೆರಡು ಮಂದಿ ದಳಪತಿಗಳೂ ದಂಡಿನ ಒಡನೆ ರಾಮನ ಮೇಲೆ ಶರವರ್ಷವನ್ನೆ ಕರೆದರು.

ಚಿನ್ನದ ಕಟ್ಟು-ವಜ್ರಾಲಂಕಾರ-ಅಗ್ನಿಯಂತೆ ಉರಿ-ಉಕ್ಕಿನ ಅಲಗು-ಇಂಥ ಬಾಣಗಳನ್ನು ಹೂಡಿದ ರಾಮ. ಆ ಬಾಣಗಳೋ ಹೊಗೆ ಆಡುತ್ತ ಉರಿ ಉರಿಯುತ್ತ ರಾಕ್ಷಸರ ಮೇಲೆ ಬಿದ್ದವು. ಸಿಡಿಲು ಹೊಡೆದ ಹೆಮ್ಮರ ಉರುಳುವಂತೆ ರಾಕ್ಷಸರು ಎಲ್ಲರೂ ಸತ್ತು ಬಿದ್ದರು.

ನೂರು ಮಂದಿ ಹಗೆಗಳು ಇದಿರು ಆದರೆ ನೂರು ಬಾಣ, ಸಾವಿರ ಇದಿರು ಆದರೆ ಸಾವಿರ ಬಾಣ. ಆ ಬಾಣಗಳ ಏಟಿಗೆ ರಾಕ್ಷಸರ ಕವಚ ಬಿಲ್ಲು ಆಭರಣ ಆಯುಧ ಎಲ್ಲವೂ ಮುರಿದವು. ಮೈಯಿಂದ ರಕ್ತ ಸೋರುತ್ತ ಬಿದ್ದರು. ತಲೆಗೂದಲು ಕೆದರಿಹೋಯಿತು. ದರ್ಭೆ ಹಾಸಿದ ಯಜ್ಞವೇದಿಕೆ ಯಂತೆ ಇತ್ತು ರಣಭೂಮಿ. ಎಲ್ಲಿ ನೋಡಿದರೂ ರಾಕ್ಷಸರ ಹೆಣ, ಅವರ ರಕ್ತಮಾಂಸದ ಕೆಸರು. ಘೋರ ನರಕದ ಹಾಗೆ.

ಒಂದೇ ಗಳಿಗೆ. ಕ್ರೂರಕರ್ಮಿಗಳು ಹದಿನಾಲ್ಕು ಸಾವಿರ ಮಂದಿ ರಾಕ್ಷಸ ರನ್ನೂ ಒಬ್ಬನೇ ಒಬ್ಬ ಮನುಷ್ಯ, ಬರೀ ಪದಾತಿ-ರಾಮ, ಕೊಂದುಹಾಕಿದ. ಮಹಾವೀರ್ಯವಂತರೂ ಭಯಂಕರರೂ ಇದಿರು ಇಲ್ಲದ ಮಹಾಪರಾಕ್ರಮಿ ಗಳೂ ಆದ ರಾಕ್ಷಸರು ಎಲ್ಲರೂ ಸತ್ತುಬಿದ್ದರು. ಖರನ ದಂಡಿಗೆ ದಂಡೇ ನಾಶ ಆಯಿತು.

ಉಳಿದವರು ಮೂವರೇ ಆ ರಣರಂಗದಲ್ಲಿ. ಅತ್ತ ಮಹಾರಥ ಖರ, ಅವನ ದಳಪತಿ ತ್ರಿಶಿರ. ಇತ್ತ ಶತ್ರುಮರ್ದನ ಶ್ರೀರಾಮ.

ಖರ ಮಹಾರಥವನ್ನು ಏರಿದ. ವಜ್ರಾಯುಧವನ್ನು ಹಿಡಿದು ಬರುವ ಇಂದ್ರನ ಹಾಗೆ ರಭಸದಿಂದ ಬಂದ.

೨೭

ರಾಮನಿಗೆ ಇದಿರು ಆಗಿ ಹೋಗುತ್ತ ಇದ್ದ ಖರನನ್ನು ತಡೆದ ತ್ರಿಶಿರ. "ವೀರಾಧಿವೀರ! ಈ ಕೆಲಸಕ್ಕೆ ನೀನು ಹೋಗಬೇಕೆ? ನಾನು ಇಲ್ಲವೆ? ಆ ರಾಮನನ್ನು ಈಗಲೇ ಕೊಲ್ಲುತ್ತೇನೆ. ನನ್ನನ್ನು ಕಳಿಸು. ನಾನು ಒಬ್ಬನೇ ಸಾಕು. ನನ್ನ ಆಯುಧದ ಆಣೆ! ನಾನೇ ಅವನನ್ನು ಕೊಲ್ಲುತ್ತೇನೋ ಅವನೇ ನನ್ನನ್ನು ಕೊಲ್ಲುತ್ತಾನೋ. ನೀನು ಒಂದು ಗಳಿಗೆ ದೂರ ನಿಂತು ಸಾಕ್ಷಿ ಆಗಿ ನೋಡು. ನಾನು ರಾಮನನ್ನು ಕೊಂದರೆ ಸಂತೋಷದಿಂದ ನೀನು ಜನ-ಸ್ಥಾನಕ್ಕೆ ಹಿಂದಿರುಗಬಹುದು. ಅವನೇ ನನ್ನನ್ನು ಕೊಂದರೆ ಮುಂದೆ ನೀನು ಯುದ್ಧಕ್ಕೆ ಬರಲೇಬೇಕು. ನಾನು ಇರುವಾಗ ನೀನು ಯುದ್ಧಮಾಡುವುದೆ?" ಎಂದ. ತ್ರಿಶಿರನಿಗೆ ಸಾವು ಕಾದು ಇತ್ತು. ಖರನನ್ನು ಅಂಗಲಾಚಿ ಒಪ್ಪಿಸಿದ.

ಬೆಟ್ಟದ ಶಿಖರ ಮೂರು ಇರುವಂತೆ ಮೂರು ದೊಡ್ಡ ತಲೆ ಅವನಿಗೆ. ಒಳ್ಳೆಯ ಕುದುರೆ ಕಟ್ಟಿದ ರಥ ಏರಿ ಬಂದ. ದಾರಿಯಲ್ಲೇ ರಾಮನ ಬಾಣದ ಮಳೆ ಸುರಿಯಿತು. ನೀರಿನಲ್ಲಿ ನೆನೆದ ಭೇರಿಯಂತೆ ಘೋರ ಆಗಿ ಗರ್ಜಿಸಿದ ರಾಕ್ಷಸ. ಹರಿತ ಆದ ಬಾಣಗಳನ್ನು ಬಿಟ್ಟು ತ್ರಿಶಿರನನ್ನು ತಡುಬಿದ ರಾಮ. ಮದ್ದಾನೆಗೂ ಸಿಂಹಕ್ಕೂ ಹೋರಾಟ ನಡೆದ ಹಾಗೆ ಇತ್ತು ರಾಮ–ತ್ರಿಶಿರರ ಕಾಳಗ. ರಾಮನ ಹಣೆಗೆ ಗುರಿ ಇಟ್ಟು ಮೂರು ಬಾಣ ಬಿಟ್ಟ ತ್ರಿಶಿರ. ಅದಕ್ಕೆ ನಕ್ಕು "ರಾಕ್ಷಸ, ನೀನು ಶೂರನೇನೋ ಸರಿ. ಹೂವಿನಿಂದ ಹೊಡೆದೆಯಲ್ಲ ನನ್ನ ಹಣೆಗೆ. ನನ್ನ ಬಾಣಗಳ ಸವಿಯನ್ನು ನೋಡು" ಎಂದು ವಿಷಸರ್ಪದಂಥ ಹದಿನಾಲ್ಕು ಬಾಣಗಳನ್ನು ಬಿಟ್ಟ ತ್ರಿಶಿರನ ಎದೆಗೆ. ಕೊಂಕು ಡೊಂಕು ಇಲ್ಲದೆ ನೆಟ್ಟನೆ ಗೆಣ್ಣು ಇದ್ದ ನಾಲ್ಕು ಬಾಣ ಬಿಟ್ಟು ತ್ರಿಶಿರನ ರಥದ ನಾಲ್ಕು ಕುದುರೆಗಳನ್ನು ಕೆಡಹಿದ. ಆಮೇಲೆ ಎಂಟು ಬಾಣ. ಸಾರಥಿ ಕೆಳಕ್ಕೆ ಬಿದ್ದ. ಇನ್ನು ಒಂದು ಬಾಣ. ಆ ರಥದ ಧ್ವಜ ಕಡಿದುಬಿತ್ತು.

ರಥ ಕೆಲಸಕ್ಕೆ ಬಾರದಂತೆ ಆಯಿತು. ರಾಕ್ಷಸ ರಥದಿಂದ ಇಳಿದ. ರಾಮನ ಮೇಲೆ ಹಾರಿದ. ರಾಮ ಅದನ್ನು ನೋಡಿದ. ಅವನ ಎದೆಯನ್ನು ಸೀಳುವಂತೆ ಒಂದು ಬಾಣ ಬಿಟ್ಟ. ಅವನ ಎದೆ ಒಡೆದು ರಾಕ್ಷಸ ಮೂರ್ಛೆ ಬಿದ್ದ. ರಾಮನ ಮೂರು ಬಾಣ, ಬಹಳ ಹರಿತ ಬಹಳ ವೇಗಶಾಲಿ ಆದದ್ದು,

ತ್ರಿಶಿರನ ಮೂರೂ ತಲೆಗಳನ್ನೂ ಕತ್ತರಿಸಿದವು. ನೆತ್ತರು ಕಾರುತ್ತ ಆ ತಲೆ ಕೆಳಕ್ಕೆ ಬಿದ್ದವು.

ಖರನ ಸೇವಕರು ಕೆಲವರು ಉಳಿದು ಇದ್ದರು. ಇದನ್ನು ನೋಡಿ ಬೆದರಿದರು. ಹುಲಿಯನ್ನು ಕಂಡು ಕ್ಷುದ್ರ ಮೃಗಗಳು ಅಂಜಿ ಓಡುವಂತೆ ಓಡಿದರು. ಓಡಿಹೋಗುತ್ತ ಇದ್ದ ಆಳುಗಳನ್ನು ಹಿಂದಿರುಗಿಸಿ ಖರ ತಾನೇ ಬಂದ ಯುದ್ಧಕ್ಕೆ. ಚಂದ್ರನನ್ನು ಹಿಡಿಯಲು ಬರುವ ರಾಹುವಿನಂತೆ ಬಂದ.

೨೮

ದೂಷಣ ತ್ರಿಶಿರರು ಇಬ್ಬರೂ ಸತ್ತರು ಯುದ್ಧದಲ್ಲಿ. ಖರನಿಗೆ ಭಯ. ಇದಿರು ನಿಲ್ಲಲು ಸಾಧ್ಯ ಇಲ್ಲ ರಾಕ್ಷಸಸೇನೆಗೆ. ಅಂಥ ದಂಡು. ವೀರಾಧಿ ವೀರರು ಆದ ದೂಷಣ ತ್ರಿಶಿರರು. ಅತ್ತ ಕಡೆ ಏಕಾಕಿ ರಾಮ. ಖರನ ಹುರುಪು ಅಡಗಿಹೋಯಿತು. ನಮುಚಿ ರಾಕ್ಷಸ ದೇವೇಂದ್ರನ ಮೇಲೆ ಏರಿ ಹೋದ ಹಾಗೆ ತಾನೂ ಯುದ್ಧಕ್ಕೆ ಹೋದ. ಸಿಟ್ಟುಗೊಂಡ ನಾಗರಹಾವಿನಂಥ ಕ್ರೂರ ಬಾಣಗಳನ್ನು ಹೂಡಿದ. ಕಿವಿಯವರೆಗೂ ಬಿಲ್ಲನ್ನು ಬಾಗಿಸಿದ. ತನ್ನ ಬಿಲ್ಲುವಿದ್ಯೆಯ ಕೌಶಲವನ್ನು ತೋರುತ್ತ ನಾಣನ್ನು ಸೆಳೆದು ಟಂಕಾರಮಾಡಿದ. ನಾನಾ ಬಗೆಯ ಬಾಣಗಳನ್ನು ಬಿಟ್ಟ.

ಖರ ರಥದಲ್ಲಿ. ರಾಮ ನೆಲದ ಮೇಲೆ. ಆದರೂ ತನ್ನ ಬಾಣಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿದ ರಾಮ. ಮೋಡದಿಂದ ಮಳೆ ಸುರಿಯುವಂತೆ ಬೆಂಕಿ ಉಗುಳುವ ಬಾಣಗಳನ್ನು ಸುರಿಸಿದ. ಮುಗಿಲು ಮುಚ್ಚಿ ಕಾಣದಂತೆ ಆಯಿತು. ಒಬ್ಬರನ್ನು ಇನ್ನೊಬ್ಬರು ಕೊಲ್ಲಬೇಕು ಎಂದು ಹರಿತ ಆದ ಬಾಣಗಳನ್ನು ಬಿಟ್ಟರು. ಅದರಿಂದ ಸೂರ್ಯ ಮರೆ ಆದ. ಮದಿಸಿದ ಆನೆಯನ್ನು ಈಟಿಯಿಂದ ತಿವಿಯುವಂತೆ ನಾಳಾಕಾರದ ಚೂಪು ಅಲಗಿನ ಕೋಲುಬಾಣಗಳನ್ನೂ ಕರ್ಣಾಕಾರದ ಬಾಣಗಳನ್ನೂ ಬಿಟ್ಟ ಖರ. ಕೈಯಲ್ಲಿ ಬಿಲ್ಲು ಹಿಡಿದು ರಥದಲ್ಲಿ ಕುಳಿತ ಖರ ಕೈಯಲ್ಲಿ ಪಾಶ ಹಿಡಿದ ಯಮನ ಹಾಗೆ ಕಾಣುತ್ತ ಇದ್ದ.

ರಾಮ ಮಹಾಬಲಾಢ್ಯನೇ. ಆದರೆ ರಾಕ್ಷಸ ಸೇನೆಯನ್ನು ಕೊಂದು ಬಳಲಿದ್ದಾನೆ ಎಂದುಕೊಂಡ ಖರ. ಧೈರ್ಯದಿಂದ ಮುನ್ನುಗ್ಗಿದ. ಸಿಂಹ ಮದ್ದಾನೆಯ ಮೇಲೆ ನುಗ್ಗುವಂತೆ ರಾಮನ ಮೇಲೆ ನುಗ್ಗಿದ ಖರ. ಕ್ಷುದ್ರ

ಮೃಗ ಇದಿರು ಬಂದಾಗ ಸಿಂಹ ಹೇಗೆ ನೋಡುತ್ತದೆಯೋ ಹಾಗೆ ನೋಡಿದ ರಾಮ. ಕದಲಲಿಲ್ಲ. ಸೂರ್ಯನಂತೆ ಬೆಳಗುವ ತನ್ನ ರಥದಲ್ಲಿ ಕುಳಿತು ಬಂದ ಖರ; ಬೆಂಕಿಗೆ ಇದಿರು ಬರುವ ಪತಂಗದ ಹುಳದಂತೆ. ತನ್ನ ಕೈಚಳಕವನ್ನು ತೋರಿಸಲು ಒಂದು ಬಾಣ ಬಿಟ್ಟ ಖರ. ಆ ಬಾಣ ರಾಮನ ಕೈಯಲ್ಲಿ ಇದ್ದ ಬಾಣ ಏರಿಸಿದ ಬಿಲ್ಲಿನ ಹಿಡಿಗೆ ತಗಲಿ ಬಿಲ್ಲನ್ನು ಮುರಿಯಿತು. ಅಲ್ಲಿಗೆ ತೀರಲಿಲ್ಲ ಅವನ ಸಿಟ್ಟು. ದೇವೇಂದ್ರನ ವಜ್ರಾಯುಧಕ್ಕೆ ಸಮ ಆದ ಏಳು ಬಾಣಗಳನ್ನು ರಾಮನ ಕವಚಕ್ಕೆ ಗುರಿ ಇಟ್ಟು ಹೊಡೆದ. ಕವಚ ಹರಿದು ನೆಲಕ್ಕೆ ಬಿತ್ತು. ಇನ್ನೂ ಒಂದು ಸಾವಿರ ಬಾಣಗಳನ್ನು ಕೂಡಲೇ ಬಿಟ್ಟು ರಾಮನ ಮೈ ಗಾಯ ಮಾಡಿದ. ಇನ್ನು ಗೆದ್ದೆ ಎಂದು ಖರ ಹಿಗ್ಗಿನಿಂದ ಸಿಂಹನಾದ ಮಾಡಿದ.

ರಾಮನ ಮೈ ಎಲ್ಲಾ ಗಾಯ. ಸಿಟ್ಟು ಮಿತಿಮೀರಿತು. ನಿಗಿನಿಗಿ ಕೆಂಡದ ಹಾಗೆ ಉರಿದ. ಅಗಸ್ತ್ಯರು ಕೊಟ್ಟ ವೈಷ್ಣವಧನುಸ್ಸನ್ನು ತೆಗೆದು ಕೊಂಡು ಹೆದೆ ಏರಿಸಿದ. ಅದರ ಟಂಕಾರಧ್ವನಿ ಮಹತ್ತರ. ಸರ್ವೋತ್ತಮ ಆ ಬಿಲ್ಲು. ಅದಕ್ಕೆ ಚಿನ್ನದ ಹಿಡಿ. ಕೂರಲಗು ಇರುವ ಬಾಣಗಳನ್ನು ಹೂಡಿ ಮೊದಲು ಖರನ ಬಾವುಟವನ್ನು ಕೆಡವಿದ. ಚಿನ್ನದ ಬಾವುಟ ಅದು. ನೋಡಲು ಬಲು ಅಂದ. ದೇವತೆಗಳ ಅಪ್ಪಣೆಯಂತೆ ಭೂಮಿಗೆ ಇಳಿದುಬಂದ ಸೂರ್ಯನ ಹಾಗೆ ನೆಲದ ಮೇಲೆ ಬಿತ್ತು ಅದು.

ಖರನಿಗೆ ರೇಗಿತು. ಅಂಕುಶದಿಂದ ಆನೆಯನ್ನು ತಿವಿಯುವಂತೆ ರಾಮನ ಮರ್ಮಸ್ಥಾನಕ್ಕೆ ನಾಲ್ಕು ಬಾಣ ಹೊಡೆದ. ರಾಮನ ಮೈ ಎಲ್ಲಾ ರಕ್ತ ಆಯಿತು. ಬೇರೆ ಒಂದು ಬಿಲ್ಲನ್ನು ತೆಗೆದುಕೊಂಡ. ಆರು ಬಾಣ ಹೂಡಿದ. ಒಂದು ಆ ರಾಕ್ಷಸನ ತಲೆಗೆ, ಎರಡು ಎರಡು ತೋಳುಗಳಿಗೆ, ಮೂರು ಅರ್ಧ ಚಂದ್ರ ಬಾಣ ಅವನ ಎದೆಗೆ. ಖರನನ್ನು ಕೊಲ್ಲಬೇಕು ಎಂದು ಮತ್ತೆ ಹದಿಮೂರು ಬಾಣ ಹೂಡಿದ. ಸೂರ್ಯನಂತೆ ತೇಜಸ್ಸು ಇರುವ ಆ ಬಾಣ ಗಳಲ್ಲಿ ಒಂದು ಖರನ ರಥದ ನೊಗವನ್ನು ಕೆಡವಿತು. ನಾಲ್ಕು ಬಾಣ ರಥದ ಕುದುರೆಗಳಿಗೆ, ಆರನೆಯದು ಸಾರಥಿಯ ತಲೆಗೆ ತಗಲಿದವು. ಅವು ಬಿದ್ದಮೇಲೆ ಮತ್ತೆ ಮೂರು ಬಾಣಗಳಿಂದ ರಥದ ಮೂಕಿ ಕಡಿದುಬಿತ್ತು. ಎರಡು ಬಾಣ ಅವನ ಅಚ್ಚನ್ನು ಕಡಿದವು. ಹನ್ನೆರಡನೆಯದು ಖರನ ಕೈಯಲ್ಲಿದ್ದ ಬಿಲ್ಲನ್ನೂ ಮುರಿಯಿತು. ಹದಿಮೂರನೆಯದು ಖರನ ಮೈಯನ್ನು ಜರ್ಝರಿತ ಮಾಡಿತು.

ಕೈಯಲ್ಲಿ ಇದ್ದ ಬಿಲ್ಲು ಮುರಿಯಿತು. ರಥ ಪುಡಿಪುಡಿ. ಕುದುರೆ ಸತ್ತವು. ಸಾರಥಿ ಸತ್ತ. ಖರ ಕೈಗೆ ಗದೆಯನ್ನು ತೆಗೆದುಕೊಂಡ. ರಥದಿಂದ ಕೆಳಕ್ಕೆ ಧುಮುಕಿ ಯುದ್ಧಕ್ಕೆ ನಿಂತ.

ರಾಮನ ಪರಾಕ್ರಮವನ್ನು ನೋಡಿ ದೇವತೆಗಳೂ ಮಹರ್ಷಿಗಳೂ ರಾಮನಿಗೆ ಕೈಮುಗಿದು ಅವನನ್ನು ಹೊಗಳಿದರು.

೨೯

ರಥ ಇಲ್ಲದೆ ಗದೆ ಹಿಡಿದು ನಿಂತ ಖರನನ್ನು ನೋಡಿ ಮಹಾತೇಜಸ್ವಿ ರಾಮ ಹೇಳಿದ–ಮಾತು ಮೃದು ಆದರೂ ಭಾವ ಪರುಷ ಆಗಿತ್ತು. “ರಾಕ್ಷಸ, ರಥಗಜತುರಗಾದಿಗಳ ದೊಡ್ಡ ದಂಡನ್ನು ಕಟ್ಟಿ ಸಮಸ್ತಲೋಕಗಳೂ ಜುಗುಪ್ಸೆ ಗೊಳ್ಳುವ ಕ್ರೂರ ಕಾರ್ಯಗಳನ್ನು ಮಾಡಿದೆ. ಯಾವಾಗಲೂ ಜೀವರಾಶಿಗಳಿಗೆ ದುಃಖ ಕೊಡುವ ಮಹಾಘಾತಕ, ಪಾಪಕರ್ಮಿ ಎಂದಿಗೂ ಬದುಕಲಾರ. ಮೂರು ಲೋಕಗಳ ಒಡೆಯನೇ ಆದರೂ ಬದುಕಲಾರ. ಕೆಟ್ಟ ಹಾವನ್ನು ಕಂಡರೆ ಜನ ಕೊಲ್ಲುತ್ತಾರೆ. ಲೋಕವಿರುದ್ಧ ಕಾರ್ಯಗಳನ್ನು ಮಾಡುವ ಕ್ರೂರನ ಗತಿಯೂ ಅಷ್ಟೆ. ಕಾಮದಿಂದಲೋ ಲೋಭದಿಂದಲೋ ಪಾಪಕಾರ್ಯ ಮಾಡಿದವನು ಭ್ರಷ್ಟ. ಆಲಿಕಲ್ಲನ್ನು ತಿಂದ ಹಾವರಾಣಿಯಂತೆ ಅವನು ಸಾಯುತ್ತಾನೆ.

“ಕೇವಲ ಧರ್ಮನಿರತರು ಮಹಾತ್ಮರು ಆದ ತಪಸ್ವಿಗಳನ್ನು ಕೊಂದು ನಿನಗೆ ಬಂದದ್ದು ಏನು? ಪೂರ್ವಪುಣ್ಯದಿಂದ ಅಲ್ಪಸ್ವಲ್ಪ ಐಶ್ವರ್ಯವನ್ನು ಪಡೆದು ಇದ್ದರೂ ಪಾಪಕರ್ಮಿಗಳು ಕ್ರೂರರು ಜಗತ್ತಿಗೆ ಅಸಹ್ಯ ಆಗುವಂಥ ದುಷ್ಟರಿಗೆ ಗತಿ ಇಲ್ಲ. ಬುಡ ತಿಂದ ಮರದ ಹಾಗೆ ಬೇಗ ನಾಶ ಆಗುತ್ತಾರೆ. ಕಾಲಕ್ಕೆ ಸರಿ ಆಗಿ ಗಿಡ ಹೂ ಬಿಡುತ್ತವೆ. ಕಾಲ ಬಂದಾಗ ಮಾಡಿದ ಪಾಪಪುಣ್ಯಗಳ ಫಲವನ್ನು ಅನುಭವಿಸಲೇ ಬೇಕು. ವಿಷ ಬೆರೆತ ಅನ್ನ ತಿಂದರೆ ಫಲ ಕೂಡಲೇ ಕಾಣುತ್ತದೆ. ಘೋರ ಪಾಪಮಾಡಿದವರಿಗೂ ಹೀಗೇ. ಬೇಗ ಪಾಪಫಲ ಬರುತ್ತದೆ.

“ರಾಕ್ಷಸ, ಘೋರ ಪಾಪಕಾರ್ಯನಿರತರನ್ನೂ ಜನರಿಗೆ ಕೇಡುಮಾಡು ವವರನ್ನೂ ಕೊಲ್ಲಲು ನಮ್ಮ ತಂದೆ ದಶರಥಮಹಾರಾಜ ನನ್ನನ್ನು ಕಳಿಸಿದ್ದಾನೆ.

ಈಗ ನಾನು ತೊಡುವ ಬಂಗಾರದ ಬಾಣ ಹುತ್ತವನ್ನು ಒಡೆದು ಹಾವು ಹೊರಗೆ ಬರುವಂತೆ ನಿನ್ನ ಮೈಯನ್ನು ಸೀಳಿ ಪ್ರಾಣ ತೆಗೆದು ಬರುತ್ತವೆ. ಇಷ್ಟು ದಿನ ಈ ದಂಡಕಾರಣ್ಯದಲ್ಲಿ ಮಹರ್ಷಿಗಳನ್ನು ಕೊಂದು ತಿಂದೆಯಲ್ಲ. ಅವರ ಬಳಿಗೆ ನಿನ್ನ ದಂಡಿನ ಜೊತೆಗೆ ನೀನೂ ಹೋಗುತ್ತೀಯೆ. ನನ್ನ ಬಾಣದ ಹೊಡೆತಕ್ಕೆ ನೆಲಕ್ಕೆ ಬಿದ್ದು ನೀನು ವಿಲಿವಿಲಿ ಅನಸ್ಥೆಪಡುತ್ತ ಇದ್ದರೆ, ನಿನ್ನಿಂದ ಹಿಂಸೆಗೊಂಡು ಇದ್ದ ದೇವತೆಗಳೂ ಋಷಿಗಳೂ ವಿಮಾನಗಳಿಂದ ನೋಡಿ ಹಿಗ್ಗುತ್ತಾರೆ.

"ಖರ, ನಿನ್ನ ಕೈಯಲ್ಲಿ ಆದಷ್ಟು ಪ್ರಯತ್ನ ಮಾಡು. ಇಷ್ಟಬಂದಂತೆ ನನ್ನನ್ನು ಹೊಡೆ. ತಾಳೆಹಣ್ಣನ್ನು ಕೆಳಕ್ಕೆ ಕೆಡಹುವಂತೆ ನಿನ್ನ ತಲೆಯನ್ನು ಈಗಲೇ ಬೀಳಿಸುತ್ತೇನೆ."

ಇದನ್ನು ಕೇಳಿ ಖರನಿಗೆ ಬಹಳ ಕೋಪ ಬಂತು. ಕಣ್ಣು ಕೆಂಪು ಆದವು. ಮೈಮರೆಯಿತು. ಹಲ್ಲುಕಡಿಯುತ್ತ ಪಕಪಕ ನಗುತ್ತ "ದಶರಥನ ಮಗನೆ, ಯಾರೋ ಸಾಮಾನ್ಯ ರಾಕ್ಷಸರನ್ನು ಕೊಂದಮಾತ್ರಕ್ಕೇ ಇಷ್ಟು ಸ್ವಪ್ರಶಂಸೆಯೆ? ಪರಾಕ್ರಮಿಗಳೂ ಬಲಾಢ್ಯರೂ ಆತ್ಮಪ್ರಶಂಸೆ ಮಾಡಿಕೊಳ್ಳರು, ಹೆಮ್ಮೆಪಡರು. ರಾಮ, ಅಲ್ಪರು ಹೇಡಿಗಳು ಕ್ಷತ್ರಿಯಾಧಮರು ಮಾತ್ರ ತಮ್ಮನ್ನು ತಾವೇ ಹೊಗಳಿಕೊಳ್ಳುತ್ತಾರೆ. ಯುದ್ಧದಲ್ಲಿ ಸಾವು ಒದಗಿಬಂದಾಗ ಯಾರೂ ಕುಲ ಪ್ರಶಂಸೆ ಆತ್ಮಸ್ತುತಿ ಮಾಡರು. ನಿನ್ನ ಈ ಸ್ವಪ್ರಶಂಸೆಯೇ ನಿನ್ನ ಅಲ್ಪತನಕ್ಕೆ ಸಾಕ್ಷಿ. ದರ್ಭೆಯ ಹುಲ್ಲು ಬಂಗಾರದಂತೆ ಹೊಳೆದು ಉರಿದರೂ ಆಗಲೇ ಆರಿಹೋಗುತ್ತದೆ.

"ಗದೆ ಹಿಡಿದು ಬೆಟ್ಟದ ಹಾಗೆ ಕದಲದೆ ನಿಂತು ಇರುವ ನನ್ನನ್ನು ನೋಡು. ನನ್ನ ಗದೆ ಶತ್ರುರಕ್ತದಿಂದ ಕೆಂಪು ಆಗಿದೆ. ಮೂರು ಲೋಕಗಳನ್ನೂ ನಾಶಮಾಡಲು ಪಾಶಹಸ್ತ ಯಮ ಒಬ್ಬ ಸಾಕು. ನಿನ್ನ ಪ್ರಾಣ ತೆಗೆಯಲು ನನ್ನ ಗದೆ ಒಂದೇ ಸಾಕು. ಇನ್ನೂ ಎಷ್ಟೋ ಹೇಳಬೇಕು ನಿನಗೆ. ಈಗ ಅದಕ್ಕೆ ಅವಕಾಶವಲ್ಲ. ಸೂರ್ಯ ಮುಳುಗುತ್ತ ಇದಾನೆ. ಮುಳುಗಿಬಿಟ್ಟರೆ ಯುದ್ಧ ನಿಲ್ಲುತ್ತದೆ, ನಿನ್ನನ್ನು ಕೊಲ್ಲಲು ಅಡ್ಡಿ ಆಗುತ್ತದೆ. ಹದಿನಾಲ್ಕು ಸಾವಿರ ರಾಕ್ಷಸರನ್ನು ನೀನು ಕೊಂದೆ. ನಿನ್ನನ್ನು ಕೊಂದು ನಾನು ಅವರ ಹೆಂಗಸರ ಕಣ್ಣೀರನ್ನು ಒರೆಸಬೇಕು" ಎಂದ.

ಕೋಪದಿಂದ ಗದೆಯನ್ನು ಎಸೆದ. ಸಿಡಿಲಿನಂತೆ ಧಗಧಗ ಉರಿಯುತ್ತ ಬಂದ ಆ ಗದೆಯ ದಾರಿಗೆ ಅಡ್ಡಬಂದ ಗಿಡಮರ ಎಲ್ಲಾ ಸುಟ್ಟುಹೋದವು. ರಾಮ ಬಾಣಗಳನ್ನು ಬಿಟ್ಟು ಆ ಗದೆ ಅರ್ಧ ದಾರಿಯಲ್ಲೇ ಚೂರುಚೂರು ಆಗುವಂತೆ ಕತ್ತರಿಸಿದ. ಮಂತ್ರಗಳ ಔಷಧಗಳ ಬಲದಿಂದ ಸತ್ತುಬಿದ್ದ ಕಾಳ ಸರ್ಪದ ಹಾಗೆ ಮುರಿದುಬಿತ್ತು ಆ ಗದೆ.

೩೦

ಆಯುಧ ಇಲ್ಲದೆ ಗೊಂದಲಗೆಟ್ಟ ಖರನಲ್ಲಿ ಧರ್ಮವತ್ಸಲ ರಾಮನಿಗೆ ಮರುಕ ಹುಟ್ಟಿತು. ಅವನಿಗೆ ಬುದ್ಧಿವಾದ ಹೇಳಿದ ನಸುನಗುತ್ತ. "ರಾಕ್ಷಸ, ಅಧಮ, ನಿನ್ನ ಬಂಡವಾಳ ಎಲ್ಲವೂ ಬಯಲಿಗೆ ಬಿತ್ತು. ನಿನಗೆ ಬರೀ ಗರ್ವ, ಬರೀ ಮದ. ನಿನಗೆ ಬಲ ಇಲ್ಲ. ಬರೀ ಬಾಯಾಡಿ. ಈ ಗದೆ ನಿನ್ನನ್ನು ಗೆಲ್ಲಿಸುತ್ತದೆ ಎಂದು ನಂಬಿ ಇದ್ದೆ. ನನ್ನ ಬಾಣಗಳಿಗೆ ನಿನ್ನ ಗದೆಗೆ ಆದ ಅವಸ್ಥೆಯನ್ನು ನೋಡು. ಪುಡಿಪುಡಿ. ನನ್ನನ್ನು ಕೊಂದು ನಾನು ಕೊಂದ ರಾಕ್ಷಸರ ಹೆಂಗಸರ ಕಣ್ಣೀರು ಒರೆಸುತ್ತೇನೆ ಎಂದೆ ಅಲ್ಲವೆ? ನಿನ್ನ ಮಾತು ಸುಳ್ಳು ಆಯಿತು. ನೀನು ನೀಚ, ದುರಾಚಾರಿ, ದುಷ್ಟಸ್ವಭಾವಿ. ನನ್ನ ಬಾಣಗಳಿಂದ ನಿನ್ನ ತಲೆ ಕಡಿದು ನಿನ್ನ ನೊರೆನೆತ್ತರನ್ನು ಈ ಭೂಮಿಗೆ ಕುಡಿಸುತ್ತೇನೆ. ಗರುಡ ಅಮೃತವನ್ನು ಒಯ್ದಂತೆ ನಿನ್ನ ಪ್ರಾಣಗಳನ್ನು ಒಯ್ಯುತ್ತೇನೆ. ನೆಲದ ಮೇಲೆ ಬಿದ್ದು ಹೊರಳಾಡುತ್ತೀ ನೀನು. ದುರ್ಲಭಳು ಆದ ಹೆಂಗಸು ಸಿಕ್ಕಾಗ ಅವಳನ್ನು ಬಿಗಿ ಆಗಿ ಅಪ್ಪಿಕೊಳ್ಳುವಂತೆ ನೀನು ಭೂಮಿಯನ್ನು ಅಪ್ಪಿಕೊಂಡು ದೀರ್ಘನಿದ್ರೆ ಮಾಡುತ್ತೀ. ಆಗ ದಂಡಕಾರಣ್ಯದಲ್ಲಿ ಋಷಿಗಳಿಗೆ ಹಾಯಿ.

"ಇಲ್ಲಿ ಇರುವ ರಾಕ್ಷಸಸಮೂಹ ಎಲ್ಲವೂ ನನ್ನ ಬಾಣಗಳಿಂದ ಸತ್ತಮೇಲೆ ಈ ಜನಸ್ಥಾನದಲ್ಲಿ ಮಹಾಮುನಿಗಳು ನಿರ್ಭಯದಿಂದ ಎಲ್ಲಿ ಬೇಕಾದರೂ ತಿರುಗಾಡಬಹುದು. ಋಷಿಗಳಿಗೆ ಭಯ ಹುಟ್ಟಿಸುತ್ತ ಇದ್ದ ರಾಕ್ಷಸಸ್ತ್ರೀಯರು ಗಂಡಂದಿರನ್ನು ಕಳೆದುಕೊಂಡು ಅಳುತ್ತ ಓಡಿಹೋಗುತ್ತಾರೆ. ನಿನಗೆ ತಕ್ಕಂಥ ವರೇ ನಿನ್ನ ಹೆಂಡಿರು. ಅವರ ಮನಸಿನ ಕೋರಿಕೆಗಳು ಈಗ ಕೈಗೂಡವು. ಶೋಕ ಎಂದರೆ ಏನೋ ಅವರಿಗೆ ತಿಳಿಯದು. ಈಗ ತಿಳಿಯುತ್ತದೆ. ಘಾತಕ,

ನೀಚ, ಕ್ರೂರ, ಬ್ರಾಹ್ಮಣಕಂಟಕ, ನಿನ್ನ ಭಯದಿಂದ ಮಹರ್ಷಿಗಳು ಹೋಮ ಮಾಡಲು ಹಿಂಜರಿಯುತ್ತ ಇದ್ದರು. ಇನ್ನು ನಿಷ್ಕಂಟಕ" ಎಂದ.

ಖರನಿಗೆ ಸಹಿಸಲು ಆಗದ ಕೋಪ. ಘೋರ ಗರ್ಜನೆ ಮಾಡಿದ. "ರಾಮ, ನಿನಗೆ ಕೊಬ್ಬು. ಈಗ ನೀನು ಅಂಜಬೇಕು. ಆದರೂ ನಿರ್ಭಯ ದಿಂದ ಏನು ಆಡಬಹುದೋ ಏನು ಆಡಬಾರದೋ ತಿಳಿಯದೆ ಮಾತು ಆಡುತ್ತ ಇದೀಯೆ. ಸಾವು ಒದಗಿಬಂದವರಿಗೆ ಯುಕ್ತಾಯುಕ್ತ ತಿಳಿಯುವುದು ಇಲ್ಲ. ನಿನಗೆ ವಿನಾಶಕಾಲ, ವಿಪರೀತಬುದ್ಧಿ." ನಾಲ್ಕೂ ಕಡೆ ನೋಡಿದ ಖರ. ಹುಬ್ಬುಗಂಟು ಹಾಕಿದ. ಕೋಪದಿಂದ ಹಲ್ಲುಕಡಿದ. ಹತ್ತಿರದಲ್ಲಿ ಇದ್ದ ಒಂದು ಸಾಲವೃಕ್ಷವನ್ನು ಬುಡಸಹಿತ ಕಿತ್ತ. "ರಾಮ, ನೀನು ಸತ್ತೆ" ಎಂದು ಆ ಮರವನ್ನು ಅವನ ಮೇಲೆ ಎಸೆದ.

ರಾಮ ಮಹಾಪರಾಕ್ರಮಿ. ಆ ಮರ ಬರುತ್ತ ಇದ್ದ ಹಾಗೆ ಅದನ್ನು ತುಂಡು ತುಂಡು ಆಗಿ ಕತ್ತರಿಸಿದ. ಬಹಳ ಕೋಪ ಬಂತು ರಾಮನಿಗೆ. ಮೈ ಎಲ್ಲಾ ಬೆವರು ಹರಿಯಿತು. ಕಣ್ಣು ಕೆಂಪು ಆದವು. ಒಂದೇ ಸಲ ಸಾವಿರ ಬಾಣ ಬಿಟ್ಟ ಖರನ ಮೇಲೆ. ಅವು ಖರನ ಅಂಗಾಂಗಗಳಲ್ಲೂ ನಾಟಿ ಕೊಂಡವು. ಮೈ ಎಲ್ಲಾ ತೂತು ತೂತು. ಪರ್ವತದಿಂದ ತೊರೆ, ಝರಿ ಹರಿಯುವಂತೆ ಅವನ ಮೈಯಿಂದ ರಕ್ತಧಾರೆ ಹರಿಯಿತು. ಆ ರಕ್ತವೋ ದುರ್ವಾಸನೆ. ರಾಮನ ಬಾಣದ ಪೆಟ್ಟಿಗೆ ತಳಮಳ ಆಯಿತು ಖರನಿಗೆ. ನೆತ್ತರು ಸೋರುತ್ತ ಇದ್ದಂತೆಯೇ ರಾಮನ ಮೇಲೆ ಬೀಳಲು ಬಂದ. ರಾಮ ಒಂದೆರಡು ಹೆಜ್ಜೆ ಹಿಂದೆ ಇಟ್ಟು ತಪ್ಪಿಸಿಕೊಂಡ. ಬೆಂಕಿಯ ಹಾಗೆ ಉರಿಯುವ ಬ್ರಹ್ಮ ದಂಡದಂಥ ಬಾಣ ಒಂದನ್ನು ತೆಗೆದುಕೊಂಡ. ಅದು ದೇವೇಂದ್ರ ಕೊಟ್ಟ ಬಾಣ. ಬಿಲ್ಲನ್ನು ಕಿವಿಯವರೆಗೂ ಸೆಳೆದು ಆ ಬಾಣವನ್ನು ಬಿಟ್ಟ. ಸಿಡಿಲಿನಂತೆ ಆರ್ಭಟಿಸುತ್ತ ಬಂತು ಅದು. ಬಂದು ಖರನ ಎದೆಗೆ ನಾಟಿತು. ಹಿಂದೆ ಶ್ವೇತಾರಣ್ಯದಲ್ಲಿ ಅಂಧಕಾಸುರನನ್ನು ಹಣೆಗಣ್ಣಿನ ಬೆಂಕಿಯಿಂದ ಸುಟ್ಟುಹಾಕಿದ್ದ ರುದ್ರ. ದೇವೇಂದ್ರ ವಜ್ರಾಯುಧದಿಂದ ವೃತ್ರಾಸುರನನ್ನು ಕೊಂದ. ರಾಮನ ಬಾಣ ಈಗ ಖರನನ್ನು ಕೆಡವಿತು. ನಮುಚಿಯಂತೆ ನೊರೆ ಸುರಿಸುತ್ತ, ಇಂದ್ರಾಯುಧದಿಂದ ಕೆಳಗೆ ಬಿದ್ದ ಬಲಾಸುರನಂತೆ ಕೆಳಕ್ಕೆ ಉರುಳಿದ ಖರ.

ಅಲ್ಲಿ ಇದ್ದ ರಾಜರ್ಷಿಗಳೂ ಮಹರ್ಷಿಗಳೂ ಪರಮ ಸಂತೋಷದಿಂದ ರಾಮನನ್ನು ಕೊಂಡಾಡಿದರು. "ರಾಮ, ಈ ರಾಕ್ಷಸಸಂಹಾರದ ನಿಮಿತ್ತ ದಿಂದಲೇ ಶರಭಂಗ ಆಶ್ರಮಕ್ಕೆ ದೇವೇಂದ್ರ ಬಂದದ್ದು. ಇದಕ್ಕೆ ಎಂದೇ ಉಪಾಯದಿಂದ ಮಹರ್ಷಿಗಳು ನಿನ್ನನ್ನು ಇಲ್ಲಿಗೆ ಕರೆತಂದರು. ನೀನು ರಾಕ್ಷಸ ಸಮೂಹವನ್ನು ಕೊಂದು ನಮ್ಮ ಬಯಕೆಯನ್ನು ಸಲ್ಲಿಸಿದೆ. ಇನ್ನು ಈ ದಂಡಕಾರಣ್ಯದಲ್ಲಿ ತಮ್ಮ ಧರ್ಮವನ್ನು ನಡಸುತ್ತ ಋಷಿಗಳು ಹಾಯಾಗಿ ಇರಬಲ್ಲರು."

ದೇವತೆಗಳೂ ಚಾರಣರೂ ದುಂದುಭಿ ಬಾರಿಸಿದರು. ಹೂಮಳೆ ಕರೆದರು. "ಆತ್ಮಜ್ಞಾನಿ ಶ್ರೀರಾಮ ಎಂಥ ಮಹತ್ತರ ಕೆಲಸಮಾಡಿದ. ಎಷ್ಟು ಪರಾಕ್ರಮ! ಎಷ್ಟು ಸಾಮರ್ಥ್ಯ! ಒಬ್ಬನೇ ಒಬ್ಬ ಮೂರೇ ಗಳಿಗೆಯಲ್ಲಿ ಭಯಂಕರರು ಆದ ಹದಿನಾಲ್ಕು ಸಾವಿರ ರಾಕ್ಷಸರನ್ನೂ ಖರದೂಷಣಾದಿ ವೀರರನ್ನೂ ಕೊಂದ. ಮಹಾವಿಷ್ಣುವಿನ ಹಾಗೆ ಇದ್ದಾನೆ" ಎಂದು ಹೇಳಿಕೊಂಡರು.

ಗುಡ್ಡದ ಗುಹೆಯಿಂದ ಸೀತಾದೇವಿಯನ್ನು ಕರೆದು ತಂದ ಲಕ್ಷ್ಮಣ. ಮೂವರೂ ಆಶ್ರಮಕ್ಕೆ ಹೋದರು. ಶತ್ರುಗಳನ್ನು ಸದೆಬಡಿದು ಋಷಿಗಳನ್ನು ಕಾಪಾಡಿದ ರಾಮನನ್ನು ಸಂತೋಷದಿಂದ ಅಪ್ಪಿಕೊಂಡಳು ಸೀತೆ. ಅಷ್ಟು ಮಂದಿ ರಾಕ್ಷಸರನ್ನು ಧ್ವಂಸಮಾಡಿಯೂ ಸ್ವಲ್ಪವೂ ಬಾಧೆ ಆಗಿರಲಿಲ್ಲ ರಾಮನಿಗೆ. ಆ ದೃಶ್ಯವನ್ನು ನೋಡಿ ಚಂದ್ರಮುಖಿ ಸೀತೆಗೆ ಮಹದಾನಂದ ಆಯಿತು. ಮತ್ತೆ ಬಿಗಿದು ಅಪ್ಪಿದಳು ಸೀತೆ ರಾಮನನ್ನು.

೩೧

ಅಕಂಪನ ರಾವಣನ ಗೂಢಚಾರ. ಜನಸ್ಥಾನದಲ್ಲಿ ಹೀಗೆ ರಾಕ್ಷಸ ಸಂಹಾರ ಆದುದನ್ನು ನೋಡಿ ಕೂಡಲೇ ಲಂಕೆಗೆ ಹೋದ. ಲಂಕಾಧಿಪತಿ ರಾವಣನಿಗೆ ಸಮಾಚಾರ ತಿಳಿಸಿದ. "ಪ್ರಭು, ಜನಸ್ಥಾನದ ರಾಕ್ಷಸರು ಎಲ್ಲರೂ ಹತರು ಆದರು. ಖರದೂಷಣತ್ರಿಶಿರರೂ ಸತ್ತರು. ಹೇಗೋ ತಲೆ ತಪ್ಪಿಸಿಕೊಂಡು ಈ ಸುದ್ದಿ ಹೇಳಲು ಬಂದೆ ನಾನು" ಎಂದ.

ರಾವಣನಿಗೆ ಮೂಗಿನ ಮೇಲೇ ಕೋಪ. ಈಗ ಕೋಪ ಉಕ್ಕಿತು. ಕಣ್ಣು ಕೆಂಪಗೆ ಆದವು. ಕಣ್ಣಿಂದಲೇ ಸುಡುವವನಂತೆ ದುರದುರ ನೋಡಿದ.

"ರಮಣೀಯ ಆದ ಜನಸ್ಥಾನದಲ್ಲಿ ಇದ್ದ ರಾಕ್ಷಸರನ್ನು ಎಲ್ಲರನ್ನೂ ಕೊಂದವನು ಯಾರು? ಅವನಿಗೆ ಉಳಿಗಾಲ ಇಲ್ಲ. ಯಾರನ್ನು ಮರೆಹೊಕ್ಕು ಬದುಕಬಲ್ಲ? ನನ್ನನ್ನು ವಿರೋಧಿಸಿ ಬದುಕಬಲ್ಲವರು ಯಾರು? ನನಗೆ ಅಪ್ರಿಯವನ್ನು ಬಗೆದರೆ ಕುಬೇರದೇವೇಂದ್ರರಾಗಲಿ ವಿಷ್ಣುವೇ ಆಗಲಿ ಸುಖದಿಂದ ಇರಬಲ್ಲರೆ? ನಾನು ಯಾರೋ ತಿಳಿಯದೇನು ಅವನಿಗೆ? ಯಮನಿಗೇ ಯಮ ನಾನು. ಸುಡುವ ಬೆಂಕಿಯನ್ನೆ ಸುಡಬಲ್ಲೆ. ಕೋಪ ಬಂದರೆ ನನಗೆ, ಸೂರ್ಯಚಂದ್ರರು ಬೂದಿ ಆಗುತ್ತಾರೆ. ಗಾಳಿಯನ್ನೆ ಕಟ್ಟಿಹಾಕುತ್ತೇನೆ" ಎಂದು ರೇಗಿದ. ಅಕಂಪನನಿಗೆ ಭಯ, ನಡುಕ. ಮಾತು ತೊದಲಿತು. ಕೈಜೋಡಿಸಿ ಅಭಯ ಬೇಡಿದ.

ರಾವಣ ಅವನಿಗೆ ಅಭಯ ನೀಡಿದ. ಆಗ ಅಕಂಪನನಿಗೆ ಧೈರ್ಯ ಬಂತು. ಹೇಳಿದ: "ಮಹಾರಾಜ, ಅವನು ಚೆಲುವ. ಹರೆಯದವನು. ಹೋರಿಯ ಹೆಗಲಿನಂತೆ ಉಬ್ಬಿದೆ ಅವನ ಹೆಗಲು. ದುಂಡು ತೋಳು-ಉದ್ದ. ಸಿಂಹಪರಾಕ್ರಮಿ. ಮಹಾವೀರ. ಅವನ ದೇಹಕಾಂತಿ ಬಲು ಸೊಗಸು. ಮಹಾ ಕೀರ್ತಿಶಾಲಿ. ಅವನ ಬಲಪರಾಕ್ರಮಗಳಿಗೆ ಸರಿಸಾಟಿ ಇಲ್ಲ. ನಮ್ಮ ಜನಸ್ಥಾನ ಎಲ್ಲವನ್ನೂ ಹಾಳುಮಾಡಿದ. ಅವನ ಹೆಸರು ರಾಮ. ದಶರಥನ ಮಗ. ಖರದೂಷಣರನ್ನು ಕೊಂದದ್ದು ಅವನೇ."

ನಾಗರಹಾವಿನಂತೆ ಬುಸುಗುಟ್ಟಿದ ರಾವಣ. "ಅಕಂಪನ, ಆ ರಾಮ ದೇವಸೇನೆಯ ಸಮೇತ ದೇವೇಂದ್ರನ ಜೊತೆಯಲ್ಲಿ ಬಂದನೆ ಏನು? ಹೇಳು" ಎಂದು ಗದರಿಸಿದ.

ಇನ್ನೂ ವಿವರ ಆಗಿ ಹೇಳಿದ ಅಕಂಪನ ರಾಮನ ಬಲಪರಾಕ್ರಮಗಳ ಸಂಗತಿ. "ದೊರೆಯೆ, ಆ ರಾಮ ಮಹಾತೇಜಸ್ವಿ, ಬಿಲ್ಲುಗಾರರಲ್ಲಿ ಅತ್ಯಂತ ಶ್ರೇಷ್ಠ. ಸಮಸ್ತ ದಿವ್ಯಾಸ್ತ್ರಗಳೂ ಅವನಿಗೆ ವಶ. ಮಹಾಶೂರ. ಯುದ್ಧದಲ್ಲಿ ದೇವೇಂದ್ರನಿಗೆ ಸಮಾನ. ಅವನಿಗೆ ತಕ್ಕ ತಮ್ಮ ಒಬ್ಬ ಇದಾನೆ—ಲಕ್ಷ್ಮಣ. ಅವನೂ ಅಣ್ಣನ ಹಾಗೇ ರೂಪವಂತ, ಸಾಮರ್ಥ್ಯವಂತ. ಅವನ ಕಣ್ಣು ಕನ್ನೈದಿಲೆಯ ಹಾಗೆ. ದುಂದುಭಿಯ ನಾದದ ಹಾಗೆ ಅವನ ಕಂಠಸ್ವರ. ಚಂದ್ರಬಿಂಬದಂಥ ಮುಖ.

"ಬೆಂಕಿಗೆ ಗಾಳಿ ಜೊತೆ, ರಾಮನಿಗೆ ಲಕ್ಷ್ಮಣ ಜೊತೆ. ಆದರೆ ನಮ್ಮ ಜನಸ್ಥಾನವನ್ನು ಹಾಳುಮಾಡಿದುದು ರಾಮ ಒಬ್ಬನೇ. ಯಾವ ದೇವತೆಯ ನೆರವೂ ಇಲ್ಲ. ಆ ಮನುಷ್ಯ ಒಬ್ಬನೇ ಇಷ್ಟೆಲ್ಲ ಮಾಡಿದ. ಸಂದೇಹ ಬೇಡ. ಚಿನ್ನದ ಗರಿಯ ಬಾಣಗಳನ್ನು ಅವನು ಬಿಟ್ಟರೆ ಅವು ಐದು ತಲೆಯ ಹಾವುಗಳ ಹಾಗೆ ಬಂದು ನಮ್ಮ ರಾಕ್ಷಸರು ಎಲ್ಲರನ್ನೂ ನುಂಗಬೇಕೆ. ನಮ್ಮವರು ಯಾವ ಆಯುಧ ಹಿಡಿದರೆ ಆ ಆಯುಧ ಹಿಡಿದು, ಯಾವ ದಿಕ್ಕಿಗೆ ಓಡಿದರೆ ಆ ದಿಕ್ಕಿನಲ್ಲಿ ಕಾಣಿಸಿಕೊಂಡ ರಾಮ. ಜನಸ್ಥಾನವೆಲ್ಲಾ ಶೂನ್ಯ ಆಗಿಹೋಯಿತು ಅವನಿಂದ."

"ಏ ಅಕಂಪನ, ಏನು ಹೇಳುತ್ತೀ. ಈಗಲೇ ಜನಸ್ಥಾನಕ್ಕೆ ಹೋಗಿ ರಾಮನನ್ನೂ ಅವನ ತಮ್ಮ ಲಕ್ಷ್ಮಣನನ್ನೂ ಕೊಂದುಬರುತ್ತೇನೆ" ಎಂದ ರಾವಣ.

ಅಕಂಪನ ಮುಂದುವರಿಸಿದ. "ಪ್ರಭು, ಆತುರಪಡಬೇಡಿ. ಆ ರಾಮನ ಸಂಗತಿ ಇನ್ನೂ ಹೇಳುತ್ತೇನೆ ಕೇಳಿ. ಆ ರಾಮ ಮಹಾಕೀರ್ತಿವಂತ. ಸಿಟ್ಟು ಬಂದರೆ ಅಸಾಧ್ಯ. ಅವನಿಗೆ ಇದಿರು ನಿಲ್ಲುವವರೇ ಇಲ್ಲ. ಕೋಪದಿಂದ ಅವನು ಬಾಣ ಬಿಟ್ಟರೆ ಉಕ್ಕಿಹರಿಯುವ ಮಹಾಪೂರ ತಡೆದುನಿಂತೀತು. ಅವನ ಬಾಣದ ಹೊಡೆತಕ್ಕೆ ನವಗ್ರಹಗಳೂ ಇಪ್ಪತ್ತೇಳು ನಕ್ಷತ್ರಗಳೂ ಕೆಳಕ್ಕೆ ಉರುಳಿ ಬಿದ್ದಾವು. ಈ ಭೂಮಿಯೆ ಸಮುದ್ರದಲ್ಲಿ ಮುಳುಗಿ ಹೋಗುತ್ತ ಇದ್ದರೂ ಅದನ್ನು ಮೇಲಕ್ಕೆ ಎತ್ತಿಹಿಡಿದು ನಿಲ್ಲಿಸಬಲ್ಲ. ಸಮುದ್ರದ ದಡವನ್ನು ಮುರಿದು ಲೋಕಗಳು ಎಲ್ಲವನ್ನೂ ನೀರಿನಲ್ಲಿ ಮುಳುಗಿಸಬಲ್ಲ. ಸಮುದ್ರವನ್ನು ತರುಬಿ ನಿಲ್ಲಿಸಿಬಿಟ್ಟಾನು. ಗಾಳಿಯನ್ನು ತಡೆಯಬಲ್ಲ ಬೀಸದಂತೆ. ಆ ಪುರುಷಸಿಂಹ ಎಲ್ಲಾ ಲೋಕಗಳನ್ನೂ ನಾಶಮಾಡಲೂ ಬಲ್ಲ, ಎಲ್ಲವನ್ನೂ ಮತ್ತೆ ಸೃಷ್ಟಿ ಮಾಡಲೂ ಬಲ್ಲ.

"ಪಾಪಿಗಳಿಗೆ ಸ್ವರ್ಗ ಇಲ್ಲ. ಯುದ್ಧದಲ್ಲಿ ನಿಮಗೂ ರಾಕ್ಷಸರಿಗೂ ಜಯ ಇಲ್ಲ. ದೇವತೆಗಳೂ ರಾಕ್ಷಸರೂ ಒಂದು ಆದರೂ ಅವನನ್ನು ಜಯಿಸ ಲಾರರು. ರಾವಣೇಶ್ವರ, ಆ ರಾಮನನ್ನು ಗೆಲ್ಲಲು ಒಂದು ಉಪಾಯ ಇದೆ. ಗಮನಿಸಿ ಕೇಳಬೇಕು, ಹೇಳುತ್ತೇನೆ. ರಾಮನ ಹೆಂಡತಿ ಒಬ್ಬಳು ಇದಾಳೆ, ಸೀತೆ. ಬಹಳ ಉತ್ತಮೋತ್ತಮ ಸ್ತ್ರೀ. ಜಗತ್ತಿನಲ್ಲಿ ಅಂಥ ಚೆಲುವೆ ಯಾರೂ ಇಲ್ಲ. ಅಂದದ ನಡು. ಚೆಂದದ ಮೈಬಣ್ಣ. ಅವಳ ಅವಯವಗಳು ಎಲ್ಲವೂ ಅನುರೂಪ.

ಯಾವುದೂ ಹೆಚ್ಚು ಕಡಮೆ ಇಲ್ಲ. ರತ್ನಾಭರಣಭೂಷಿತೆ ಆದ ಆಕೆ ಸ್ತ್ರೀಯರಲ್ಲಿ ರತ್ನ. ದೇವತೆಗಳಲ್ಲಿ ಗಂಧರ್ವರಲ್ಲಿ ಅಂಥ ಹೆಂಗಸು ಇಲ್ಲ. ರಾಕ್ಷಸಸ್ತ್ರೀಯರಲ್ಲಿ ಅಂತೂ ಇಲ್ಲವೇ ಇಲ್ಲ. ಅಪ್ಸರಸೆಯರೂ ಅವಳಿಗಿಂತ ಕೀಳು. ಮನುಷ್ಯರಲ್ಲಿ ಅವಳಿಗೆ ಸಾಟಿ ಸಾಧ್ಯವೇ ಇಲ್ಲ. ಏನೇ ಆದರೂ ಮಾಡಿ ರಾಮನಿಗೆ ತಿಳಿಯದ ಹಾಗೆ ಮೋಸದಿಂದ ಸೀತೆಯನ್ನು ಕದ್ದು ತನ್ನಿ. ಆ ರಾಮ ಮಹಾಕಾಮುಕ. ಹೆಂಡತಿಯನ್ನು ಬಿಟ್ಟು ಒಂದು ಗಳಿಗೆಯೂ ಇರಲಾರ. ಸೀತೆ ಕಾಣದೆ ಹೋದರೆ ಪ್ರಾಣವನ್ನೇ ಬಿಡುತ್ತಾನೆ."

ರಾವಣನಿಗೆ ಈ ಉಪಾಯ ರುಚಿಸಿತು. ಮನಸಿನಲ್ಲಿಯೆ ಅದನ್ನು ಮೆಲುಕು ಹಾಕಿದ. "ಅಕಂಪನ, ಒಳ್ಳೆಯ ಮಾತನ್ನು ಹೇಳಿದೆ. ನಾಳೆ ಬೆಳಗ್ಗೆಯೇ ಹೋಗುತ್ತೇನೆ. ಒಬ್ಬ ಸಾರಥಿ ಸಾಕು. ಸಂತೋಷದಿಂದ ಆ ಸೀತೆಯನ್ನು ಲಂಕೆಗೆ ಕರೆತರುತ್ತೇನೆ" ಎಂದ.

ಮರುದಿನ ಬೆಳಗ್ಗೆ ಸೂರ್ಯನಂತೆ ಹೊಳೆಯುವ ಅವನ ರಥ ಸಿದ್ಧ ಆಯಿತು. ವೇಗಶಾಲಿಗಳು ಆದ ಎರಡು ಹೇಸರಕತ್ತೆಗಳನ್ನು ಹೂಡಿತ್ತು. ರಥವನ್ನು ಏರಿ ರಾವಣ ಹೊರಟ. ಆಕಾಶಮಾರ್ಗದಲ್ಲಿ ಹೋಯಿತು ರಥ. ಮೇಘಮಂಡಲದ ಒಳಗೆ ಚಂದ್ರನ ಹಾಗೆ ಶೋಭಿಸಿತು ರಥ. ರಾವಣ ಮಾರೀಚಾಶ್ರಮಕ್ಕೆ ಬಂದ. ಮಾರೀಚ ತಾಟಕೆಯ ಮಗ. ರಾಕ್ಷಸರಾಜ ತನ್ನಲ್ಲಿಗೆ ಬಂದ ಎಂದು ಸಂತೋಷದಿಂದ ಅರ್ಘ್ಯಪಾದ್ಯ ಕೊಟ್ಟು, ಮನುಷ್ಯರಿಗೆ ದುರ್ಲಭ ಆದ ಭಕ್ಷ್ಯಭೋಜ್ಯಗಳಿಂದ ಸತ್ಕರಿಸಿದ. "ರಾಕ್ಷಸಪ್ರಭು, ರಾಕ್ಷಸರು ಎಲ್ಲರೂ ಕ್ಷೇಮವೆ? ಇಷ್ಟು ಅವಸರದಿಂದ ಏಕಾಏಕಿ ಬಂದದ್ದನ್ನು ನೋಡಿದರೆ ಏನೋ ವಿಶೇಷ ಇರಬೇಕು. ಹೇಳು. ನನಗೆ ಸಂದೇಹ ಆಗುತ್ತ ಇದೆ" ಎಂದ.

ರಾವಣ ಮಾತಿನಲ್ಲಿ ಜಾಣ. "ಮಾವ, ಮಾರೀಚ, ಏನು ಹೇಳಲಿ. ಜನಸ್ಥಾನದಲ್ಲಿ ನಮ್ಮ ಖರ ಇರಲಿಲ್ಲವೆ? ಅವನನ್ನೂ ಅವನ ಜೊತೆಯ ರಾಕ್ಷಸವೀರರು ಎಲ್ಲರನ್ನೂ ರಾಮ ಕೊಂದುಹಾಕಿ ಆ ಪ್ರದೇಶವನ್ನು ಹಾಳು ಮಾಡಿದ. ಅವನ ಹೆಂಡತಿಯನ್ನು ಕದ್ದು ಒಯ್ಯಬೇಕು ಎಂದು ಯೋಚಿಸಿದೆ ನಾನು. ನೀನು ನನಗೆ ಸಹಾಯ ಮಾಡಬೇಕು" ಎಂದ.

ಮಾರೀಚ ಬೆಚ್ಚಿಬಿದ್ದ! "ರಾಕ್ಷಸಕುಲೋತ್ತಂಸ, ಯಾರು ನಿನಗೆ ಈ ದುರಾಲೋಚನೆಯನ್ನು ಹೇಳಿಕೊಟ್ಟವರು? ಯಾರೋ ಮಿತ್ರನಂತೆ

ನಟಿಸುವ ಶತ್ರು ಇರಬೇಕು. ನಿನ್ನ ಐಶ್ವರ್ಯವನ್ನು ಕಂಡು ಸಹಿಸಲಾರದ ಮನುಷ್ಯ ಅವನು. ಸೀತೆಯನ್ನು ಕದ್ದು ತಾ ಎಂದು ನಿನ್ನ ಕಿವಿಯಲ್ಲಿ ಊದಿದ ಅವನು ಯಾರು? ರಾಕ್ಷಸಕುಲಕ್ಕೆ ಶಿಖರದ ಹಾಗೆ ಇದೀಯೆ. ನಿನ್ನನ್ನು ಕೆಡಿಸಲು ಯಾರೋ ಈ ದುರ್ಮಂತ್ರ ಹೇಳಿದಾರೆ. ನಿನ್ನ ಶತ್ರುವೇ ಇರಬೇಕು. ಸಂದೇಹ ಇಲ್ಲ. ಕ್ರೂರ ಸರ್ಪದ ಬಾಯಿಗೆ ಕೈ ಇಟ್ಟು ಅದರ ಹಲ್ಲನ್ನು ಕೀಳು ಎನ್ನಬಹುದೆ? ಈ ಕೆಟ್ಟ ದಾರಿಗೆ ಎಳೆದವನು ಯಾರು? ರಾವಣ, ಸುಖದಿಂದ ಮಲಗಿ ಇದ್ದ ನಿನ್ನ ತಲೆಯ ಮೇಲೆ ಹೊಡೆದು ಎಬ್ಬಿಸಿ ಇಂಥ ಅನರ್ಥವನ್ನು ತಂದಿಟ್ಟ, ಯಾವನೋ!

"ರಾವಣ, ರಾಮ ಕೊಬ್ಬಿದ ಕಾಡಾನೆಯಂತೆ. ಪವಿತ್ರ ವಂಶದಲ್ಲಿ ಹುಟ್ಟಿದುದು ಅದರ ಸೊಂಡಿಲು. ಮಹಾಬಾಹುಗಳೇ ದಂತ. ಪರಾಕ್ರಮವೇ ಆ ಆನೆಯ ಮದಜಲ. ಈ ಮದ್ದಾನೆ ರಣರಂಗದಲ್ಲಿ ನಿಂತರೆ ಕಣ್ಣೆತ್ತಿ ನೋಡ ಬಲ್ಲವರು ಯಾರು? ಆ ಮದಜಲದ ವಾಸನೆಗೇ ಉಳಿದ ಆನೆಗಳು ಪಲಾಯನ ಮಾಡುತ್ತವೆ. ಈಗ ರಾಮನ ಸಂಗಡ ಯುದ್ಧಕ್ಕೆ ನಿಂತವರು ಉಂಟೆ?

"ಆನೆ ಎಂದರೆ ಸಾಲದು. ರಾಮ ಸಿಂಹದ ಹಾಗೆ. ಮನುಷ್ಯರಲ್ಲಿ ಸಿಂಹ. ಸಿಂಹಕ್ಕೆ ಕೋಪ ಬಂದರೆ ಬಾಲವನ್ನು ಮೇಲಕ್ಕೆ ಎತ್ತುತ್ತದೆ. ಅದನ್ನು ನೋಡಿದರೆ ಓಡಿಹೋಗುವುದೇ. ಕ್ರೂರ ಸಿಂಹ ಮಲಗಿ ಇದೆ. ಹೊಡೆದು ಎಬ್ಬಿಸುತ್ತೀಯಾ? ಸರಿ ಅಲ್ಲ. ಸಿಂಹವನ್ನು ಕೆಣಕಿ ಬದುಕಬಹುದೆ?

"ರಾವಣೇಶ್ವರ, ರಾಮ ಸಾಮಾನ್ಯ ಅಲ್ಲ. ಘೋರ ಪಾತಾಳದ ಹಾಗೆ. ಅವನ ಬಿಲ್ಲು ಮೊಸಳೆ. ಅವನ ಭುಜಬಲ ಕೆಸರು. ಅವನ ಬಾಣಪರಂಪರೆಯೆ ಅಲೆಗಳ ಮಾಲೆ. ಅವನ ಸಂಗಡ ಯುದ್ಧ ಎಂದರೆ ಮಹಾಸಮುದ್ರದಲ್ಲಿ ಬಿದ್ದ ಹಾಗೆ. ಈ ಮಹಾಬಿಲದಲ್ಲಿ ಬಿದ್ದ ಮೇಲೆ ಗತಿ ಎಲ್ಲಿ?

"ಪ್ರಭು, ಕೋಪಗೊಳ್ಳಬೇಡ. ಮನ್ನಿಸು. ಈಗಲೇ ಲಂಕೆಗೆ ಹಿಂದಕ್ಕೆ ಹೋಗು. ನಿನ್ನ ಅಂತಃಪುರದಲ್ಲಿ ನಿನ್ನ ಪತ್ನಿಯರು ಇದಾರಲ್ಲ, ಅವರೊಡನೆ ಸುಖಿಸು. ಈ ಅಡವಿಯಲ್ಲಿ ತನ್ನ ಹೆಂಡತಿಯೊಡನೆ ರಾಮ ಅಲೆಯಲಿ. ನೀನು ಲಂಕೆಯಲ್ಲಿ ಸುಖದಿಂದ ಇರು" ಎಂದು ಬುದ್ಧಿ ಹೇಳಿದ.

ರಾವಣ ಮಾರೀಚನ ಮಾತನ್ನು ಕೇಳಿ ಲಂಕೆಗೆ ಹಿಂದಿರುಗಿದ. ತನ್ನ ರಮಣೀಯ ಆದ ಅರಮನೆಗೆ ಹೋದ.

೩೨

ಭಯಂಕರ ಪರಾಕ್ರಮಿಗಳು ರಾಕ್ಷಸರು. ಅಂಥವರು ಹದಿನಾಲ್ಕು ಸಾವಿರವನ್ನು ಒಬ್ಬನೇ ಕೊಂದ ರಾಮ. ಖರದೂಷಣತ್ರಿಶಿರರೂ ಸತ್ತರು. ಶೂರ್ಪಣಖಿ ಇದನ್ನು ನೋಡಿ ಮೇಘಗರ್ಜನೆ ಮಾಡಿದಳು. ರಾಮನ ಪರಾಕ್ರಮ ಅತ್ಯದ್ಭುತ. ಬೇರೆ ಯಾರಿಗೂ ಸಾಧ್ಯ ಅಲ್ಲ. ನೋಡಿ ಅಂಜಿದಳು. ರಾವಣನ ರಾಜ್ಯಕ್ಕೆ ಲಂಕೆಗೆ ಓಡಿಬಂದಳು. ಘೋರ ಆಗಿ ಅರಚುತ್ತ ಬಿಕ್ಕಿ ಬಿಕ್ಕಿ ಅಳುತ್ತ ಬಂದಳು.

ದೇವತೆಗಳ ನಡುವೆ ಕೂತ ದೇವೇಂದ್ರನ ಹಾಗೆ ಲಂಕೆಯಲ್ಲಿ ಪುಷ್ಪಕ ವಿಮಾನದಲ್ಲಿ ಕೂತಿದ್ದ ರಾವಣ. ಸುತ್ತಲೂ ಮಂತ್ರಿಗಳು. ಅವನು ಕೂತ ಸುವರ್ಣಪೀಠ ಸೂರ್ಯನಂತೆ ಬೆಳಗುತ್ತ ಇತ್ತು. ಚಿನ್ನದ ಇಟಿಕೆಗಳಿಂದ ಕಟ್ಟಿದ ವೇದಿಕೆಯಲ್ಲಿ ಆಜ್ಯಾಹುತಿ ಕೊಟ್ಟರೆ ಹೇಗೆ ಉರಿಯಬಹುದೋ ಅಗ್ನಿ ಹಾಗೆ ಹೊಳೆಯುತ್ತ ಇದ್ದ. ಮಹಾತೇಜೋವಂತ. ದೇವತೆಗಳು ಗಂಧರ್ವರು ಮಹರ್ಷಿಗಳು ಇತರ ಜೀವಿಗಳು ಯಾರೂ ಅವನನ್ನು ಜಯಿಸುವಂತೆ ಇಲ್ಲ. ಲೋಕೈಕವೀರ. ಬಾಯಿ ತೆರೆದ ಯಮನ ಹಾಗೆ ಇದ್ದ.

ದೇವಾಸುರಯುದ್ಧಗಳಲ್ಲಿ ವಜ್ರಾಯುಧದ ಹೊಡೆತದಿಂದ ಅವನ ಮೈ ಎಲ್ಲಾ ಗಾಯ ಆಗಿ ಇತ್ತು. ಇಂದ್ರನ ಐರಾವತ ಕೊಂಬಿನಿಂದ ತಿವಿದಾಗ ಆದ ಗಾಯ ಜಡ್ಡುಗಟ್ಟಿ ಇದ್ದವು. ಆ ಯುದ್ಧಗಳಲ್ಲಿ ಎಷ್ಟೋ ಸಲ ವಿಷ್ಣುವಿನ ಚಕ್ರಾಯುಧದ ಸವಿ ಉಂಡಿತ್ತು ಅವನ ಮೈ. ದೇವತೆಗಳ ಶಸ್ತ್ರಾಸ್ತ್ರಗಳ ಪೆಟ್ಟುಗಳು ಲೆಕ್ಕ ಇಲ್ಲದಷ್ಟು. ಎಲ್ಲರೂ ಹೊಡೆದವರೇ. ಮೈಮೇಲೆ ಆ ಗುರುತು ಇದ್ದವು.

ರಾವಣ ಸ್ವರೂಪವಿಲಕ್ಷಣ. ಹತ್ತು ತಲೆ, ಇಪ್ಪತ್ತು ತೋಳು. ರಮಣೀಯ ಛತ್ರಚಾಮರ. ನಿಗಿನಿಗಿ ಹೊಳೆಯುವ ವೈಡೂರ್ಯಗಳ ಆಭರಣ, ಧಗಧಗ ಹೊಳೆಯುವ ಚಿನ್ನದ ಕಡುಕು. ದುಂಡು ತೋಳು, ಬೆಳ್ಳನೆ ಹಲ್ಲು, ವಿಶಾಲ ವಕ್ಷಸ್ಥಲ, ಬೆಟ್ಟದಂಥ ಎತ್ತರದ ಮೈಕಟ್ಟು, ದೊಡ್ಡ ಹಣೆ. ಸಕಲರಾಜಲಕ್ಷಣ ಗಳೂ ಇದ್ದವು.

ಅತುಲಪರಾಕ್ರಮಿ ರಾವಣ. ಅಕ್ಷೋಭ್ಯಸಮುದ್ರವನ್ನು ಬತ್ತಿಸಬಲ್ಲ. ಎಂಥ ಬೆಟ್ಟವನ್ನೂ ಕಿತ್ತು ಚೆಂಡಾಟ ಆಡಬಲ್ಲ. ನೆನೆದ ಕೆಲಸವನ್ನು ಚಿಟಿಕೆ

ಯಲ್ಲಿ ಮಾಡಬಲ್ಲ. ದೇವತೆಗಳನ್ನು ತಲೆ ಎತ್ತದಂತೆ ಅಡಗಿಸಿದ ಧೀರ. ಅನೇಕ ಯಜ್ಞಗಳನ್ನು ಹಾಳುಮಾಡಿದ. ಪರಸತಿಯರನ್ನು ಕೆಡಿಸಿದ. ಅವನಿಗೆ ಎಲ್ಲ ದಿವ್ಯಾಸ್ತ್ರಗಳೂ ಗೊತ್ತು. ಹಠಾತ್ತನೆ ಪಾತಾಳದ ಭೋಗವತೀಪುರಕ್ಕೆ ಹೋಗಿ ಸರ್ಪರಾಜ ವಾಸುಕಿಯನ್ನು ಸೋಲಿಸಿದ. ತಕ್ಷಕನ ಹೆಂಡತಿಯನ್ನು ಅಪಹರಿಸಿ ತಂದ. ಕೈಲಾಸಪರ್ವತಕ್ಕೆ ಹೋಗಿ ಕುಬೇರನನ್ನು ಗೆದ್ದು ಪುಷ್ಪಕ ವಿಮಾನ ವನ್ನು ತಂದ. ಕುಬೇರನ ಉದ್ಯಾನವನ ಚೈತ್ರರಥವನ್ನೂ ಕಮಲಸರೋವರ ವನ್ನೂ ನಾಶಮಾಡಿದ. ದೇವೇಂದ್ರನ ನಂದನವನ್ನೂ ದೇವತೆಗಳ ಇತರ ಉದ್ಯಾನಗಳನ್ನೂ ಧ್ವಂಸಮಾಡಿದ.

ಪರ್ವತಶಿಖರದ ಹಾಗೆ ಅವನ ಆಕೃತಿ. ಸೂರ್ಯಚಂದ್ರರನ್ನು ತನ್ನ ಕೈಗಳಿಂದಲೇ ಅಡ್ಡಗಟ್ಟಿ ತಡೆದು, ಹುಟ್ಟದಂತೆ ಮಾಡಬಲ್ಲ. ಹತ್ತು ಸಾವಿರ ವರ್ಷ ಉಗ್ರತಪಸ್ಸು ಮಾಡಿದ ಬ್ರಹ್ಮದೇವನನ್ನು ಮೆಚ್ಚಿಸಲು. ತನ್ನ ಹತ್ತೂ ತಲೆಗಳನ್ನು ಕಡಿದು ಬ್ರಹ್ಮನಿಗೆ ಕಾಣಿಕೆ ನೀಡಿದ. ಬ್ರಹ್ಮದೇವನನ್ನು ಮೆಚ್ಚಿಸಿ ದೇವದಾನವಗಂಧರ್ವಪಿಶಾಚಪತಗನಾಗರು ಯಾರಿಂದಲೂ ತನಗೆ ಮರಣ-ಭಯ ಇಲ್ಲದಂತೆ ವರ ಪಡೆದ.

ಯಜ್ಞಸಮಯದಲ್ಲಿ ಬ್ರಾಹ್ಮಣರು ಮಂತ್ರಿಸಿದ ಸೋಮರಸವನ್ನು ನಾಶ ಮಾಡುವುದು, ಯಾಗ ಮುಗಿದು ದಕ್ಷಿಣೆ ಕೊಡುವಾಗ ಕೆಡಿಸುವುದು, ಬ್ರಹ್ಮಹತ್ಯೆ ಮಾಡುವುದು, ತನ್ನ ಹಿತಕ್ಕಾಗಿ ಪ್ರಜೆಗಳಿಗೆ ಅಹಿತ ಮಾಡುವುದು ಅವನ ದಿನಚರ್ಯೆ. ಬಹಳ ಕ್ರೂರ. ದಯಾದಾಕ್ಷಿಣ್ಯ ಇಲ್ಲ. ಸಮಸ್ತ ಲೋಕಕ್ಕೂ ಅವನನ್ನು ಕಂಡರೆ ಹೆದರಿಕೆ. ಇಂಥ ಕ್ರೂರ ದುರ್ಮಾರ್ಗಿ ಅವನು. ದಿವ್ಯ ವಸ್ತ್ರಾಭರಣಗಳನ್ನು ಉಟ್ಟು ತೊಟ್ಟು ದಿವ್ಯ ಪುಷ್ಪಮಾಲಿಕೆ ಧರಿಸಿ ದಿವ್ಯ ಸಿಂಹಾಸನದ ಮೇಲೆ ಕುಳಿತಿದ್ದ ಯಮನಿಗೇ ಯಮನ ಹಾಗೆ ಶೋಭಿಸುತ್ತ ಇದ್ದ ಆ ಶತ್ರುಹಂತಕ, ಪುಲಸ್ತ್ಯವಂಶದಲ್ಲಿ ಹುಟ್ಟಿದ ರಾವಣ.

ಅಲ್ಲಿಗೆ ಬಂದಳು ಶೂರ್ಪಣಖೆ. ಯಾರಿಗೂ ಅಂಜದೆ ಎಲ್ಲಿ ಎಂದರೆ ಅಲ್ಲಿಗೆ ಹೋಗುವ ಶೂರ್ಪಣಖೆಯ ಕಿವಿಮೂಗನ್ನು ಕೊಯ್ದು ಹಾಕಿದ್ದ ಲಕ್ಷ್ಮಣ. ಅದನ್ನು ನೆನೆದು ಬೆದರಿದಳು. ತನ್ನ ಭಂಗವನ್ನು ಅಣ್ಣ ರಾವಣನಿಗೆ ತೋರಿಸಿದಳು.

೩೩

ರಾವಣ ಮಾತು ಆಡಲಿಲ್ಲ. ಶೂರ್ಪಣಖೆಗೆ ಸಿಟ್ಟು ಬಂತು. ಮಂತ್ರಿಗಳ ನಡುವೆ ಇದ್ದ ರಾವಣನಿಗೆ ಬಹಳ ಕಠಿನ ಆಗಿ ಹೇಳಿದಳು: "ರಾವಣ, ಕಾಮೋಪಭೋಗಗಳಲ್ಲಿ ಮುಳುಗಿದೀಯೆ. ನಿನಗೆ ಮದ ಏರಿದೆ. ನಿರಂಕುಶ ಆಗಿ ಇದೀಯೆ. ಎಂಥ ಘೋರಕಾರ್ಯ ನಡೆಯುತ್ತ ಇದೆಯೋ ತಿಳಿದುಕೊಳ್ಳ ಬೇಡವೆ? ಲೋಭಿ ಕಾಮಿ ಆಗಿ ಗ್ರಾಮ್ಯಭೋಗಗಳನ್ನು ಅನುಭವಿಸುತ್ತ ಕೂತರೆ ರಾಜ, ಪ್ರಜೆಗಳು ಮೆಚ್ಚುತ್ತಾರೆಯೆ? ಮಸಣದ ಬೆಂಕಿಯ ಹಾಗೆ ಹೀನ ಆಗಿ ಕಾಣುತ್ತಾರೆ. ಕಾಲಕ್ಕೆ ತಕ್ಕ ಕೆಲಸಗಳನ್ನು ತಾನು ಸ್ವಯಂ ಮಾಡಿಕೊಳ್ಳದ ದೊರೆ ತಾನೂ ಹಾಳು ಆಗುತ್ತಾನೆ, ಆ ಕೆಲಸಗಳನ್ನೂ ಹಾಳು ಮಾಡುತ್ತಾನೆ. ಕಾಲಕಾಲಕ್ಕೆ ಪ್ರಜೆಗಳಿಗೆ ದರ್ಶನ ಕೊಡದೆ, ಗೂಢಚಾರರನ್ನು ಇಟ್ಟುಕೊಳ್ಳದೆ, ಹೆಂಗಸರಿಗೆ ಸ್ವಾಧೀನ ಆದರೆ ದೊರೆ, ನದಿಯ ಹುದಲನ್ನು ಕಂಡು ಆನೆಗಳು ದೂರ ಸರಿಯುವಂತೆ ಪ್ರಜೆಗಳೂ ಅವನನ್ನು ಬಿಟ್ಟು ದೂರ ಹೋಗುತ್ತಾರೆ. ಹೆಂಗಸರಿಗೆ ಸ್ವಾಧೀನ ಆಗಿ ರಾಜ್ಯಪಾಲನೆ ಮಾಡಲಾರದ ರಾಜ ಸಮುದ್ರದಲ್ಲಿ ಮುಳುಗಿದ ಬೆಟ್ಟದ ಹಾಗೆ. ಪ್ರಕಾಶಕ್ಕೆ ಬರಲಾರ.

"ರಾವಣ, ದೇವದಾನವಗಂಧರ್ವಾದಿಗಳು ಎಲ್ಲರೂ ನಿನಗೆ ವೈರಿಗಳು ಆಗಿದಾರೆ. ನೀನೋ ಗೂಢಚಾರರನ್ನು ಕೂಡ ಇಟ್ಟುಕೊಳ್ಳದೆ ವಿಷಯ ಲೋಲುಪ ಆಗಿದೀಯೆ. ಹೀಗೇ ಇದ್ದರೆ ನಿನ್ನ ರಾಜ್ಯ ಉಳಿಯುತ್ತದೆಯೆ? ಇನ್ನೂ ಹುಡುಗತನ ನಿನಗೆ. ಲವಲೇಶವೂ ವಿವೇಕ ಇಲ್ಲ. ಮುಖ್ಯ ಆಗಿ ತಿಳಿದುಕೊಳ್ಳಬೇಕು ಎಂಬ ಸುದ್ದಿಯೇ ನಿನಗೆ ತಿಳಿಯದು. ಬುದ್ಧಿಗೇಡಿ. ನಿನ್ನ ರಾಜ್ಯಭಾರ ಹೇಗೆ ನಡೆಯಬೇಕು?

"ರಾವಣ, ಇದುವರೆಗೆ ಎಲ್ಲದರಲ್ಲೂ ನೀನೇ ಗೆದ್ದೆ. ಆದ್ದರಿಂದ ರಾಜ-ನೀತಿಯನ್ನು ಕಡೆಗಣಿಸಿದೆ. ಕಾಲಕಾಲಕ್ಕೆ ಗೂಢಚಾರರಿಂದ ಸುದ್ದಿ ತಿಳಿದು ಕೊಳ್ಳಬೇಕು. ಬೊಕ್ಕಸವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ರಾಜನೀತಿಗೆ ತಪ್ಪಬಾರದು. ಹೀಗೆ ಮಾಡದ ದೊರೆ ಹಾಳು ಆಗುತ್ತಾನೆ. ದೂರ ದೇಶದ ಸುದ್ದಿ ಬರುತ್ತ ಇರಬೇಕು ಚಾರರಿಂದ. ಅಂಥ ಅರಸರಿಗೇ ದೂರದೃಷ್ಟಿ. ನಿನಗೋ ಗೂಢಚಾರರು ಇಲ್ಲ. ಸುತ್ತಲೂ ಇರುವ ನಿನ್ನ ಮಂತ್ರಿಗಳು ಬರೀ ಹೊಗಳುಭಟ್ಟರು.

" ಜನಸ್ಥಾನ ಇಡೀ ಹಾಳು ಆಯಿತು. ಹದಿನಾಲ್ಕುಸಾವಿರ ರಾಕ್ಷಸರೂ ಸತ್ತರು. ಖರದೂಷಣತ್ರಿಶಿರರೂ ಸತ್ತರು. ಒಬ್ಬ ರಾಮ ಅವರನ್ನು ಎಲ್ಲರನ್ನೂ ಕೊಂದ. ಇಷ್ಟು ಆದರೂ ನಿನಗೆ ಎಚ್ಚರ ಇಲ್ಲ, ನಿನಗೆ ಗೊತ್ತೇ ಇಲ್ಲ. ಆ ರಾಮ ಋಷಿಗಳಿಗೆ ಅಭಯ ಕೊಟ್ಟು ಬಂದಿದಾನಂತೆ. ಜನಸ್ಥಾನವನ್ನು ರಾಕ್ಷಸ ರಹಿತ, ನಿರಾತಂಕ ಆಗಿ ಮಾಡಿಕೊಟ್ಟ.

" ನೀನು ನಿನ್ನ ದೇಶಕ್ಕೆ ಒದಗಿದ ಆಪತ್ತನ್ನು ಅರಿತುಕೊಂಡಿಲ್ಲ. ನೀನು ಗೂಢಚಾರರಿಗೆ ಹಣ ಕೊಡಲಾರದ ಜಿಪುಣ. ಹೆಂಗಸರ ಕೈಬೊಂಬೆ. ಬರೀ ಗರ್ವ ನಿನಗೆ. ಮದ ಬೇರೆ. ಕ್ರೂರ, ಶಠ, ನಿನ್ನಂಥವನಿಗೆ ವಿಪತ್ತು ಬಂದರೆ ಪ್ರಜೆಗಳು ನೆರವು ಆಗುವುದು ಇಲ್ಲ. ಯಾವಾಗಲೂ ಆತ್ಮಪ್ರಶಂಸೆ ಮಾಡಿ ಕೊಳ್ಳುತ್ತ ಯಾರನ್ನೂ ಹತ್ತಿರ ಸೇರಿಸದ ದೊರೆಯನ್ನು, ಸದಾ ಕೋಪಿ ಅಹಂಕಾರಿ ಆದ ದೊರೆಯನ್ನು ಸ್ವಜನರೇ ಸಮಯ ಬಂದಾಗ ಕೊಂದು ಬಿಡುತ್ತಾರೆ. ಭಯ ಒದಗಿದಾಗ ಭಯಪಟ್ಟು ಎಚ್ಚರಗೊಳ್ಳದ, ಕಾಲಕ್ಕೆ ಸರಿ ಆಗಿ ಕೆಲಸಮಾಡದ, ದೊರೆ ರಾಜ್ಯಭ್ರಷ್ಟ ಆಗುತ್ತಾನೆ. ಹುಲ್ಲುಕಡ್ಡಿಗಿಂತಲೂ ಕಡೆ ಅವನ ಬದುಕು.

" ರಾವಣ, ಒಣಗಿದ ಸೌದೆ, ಮಣ್ಣುಹೆಂಟೆ, ಕಡೆಗೆ ಧೂಳು ಆದರೂ ಕೆಲಸಕ್ಕೆ ಬರುತ್ತದೆ. ರಾಜ್ಯಭ್ರಷ್ಟ ರಾಜ ಮಾತ್ರ ಯಾವುದಕ್ಕೂ ತರ ಅಲ್ಲ. ಉಟ್ಟು ಮಾಸಿದ ಬಟ್ಟೆ, ಮುಡಿದು ಬಾಡಿದ ಹೂ ಇದ್ದಹಾಗೆ ರಾಜ್ಯಭ್ರಷ್ಟ ರಾಜ. ಎಷ್ಟು ಸಮರ್ಥ ಆದರೂ ಪ್ರಯೋಜನ ಇಲ್ಲ. ಎಚ್ಚರ ತಪ್ಪದೆ ಎಲ್ಲ ಸುದ್ದಿಸಂಗತಿಗಳನ್ನೂ ತಿಳಿದುಕೊಂಡು, ಜಿತೇಂದ್ರಿಯ ಕೃತಜ್ಞ ಧರ್ಮಶೀಲ ಆದ ದೊರೆಯೇ ಬಹುಕಾಲ ರಾಜ್ಯ ಆಳಬಲ್ಲ. ಯಾರ ಕೋಪ ಅನುಗ್ರಹಗಳು ಸಕ್ರಮವೋ ಯಾರಿಗೆ ರಾಜನೀತಿಯ ವಿಷಯದಲ್ಲಿ ಯಾವಾಗಲೂ ಹೆಚ್ಚು ಜಾಗರೂಕತೆಯೋ ಅವನು ಕಣ್ಣು ಮುಚ್ಚಿ ಕೂತರೂ ಪ್ರಜೆಗಳಿಗೆ ಅವನಲ್ಲಿ ಗೌರವವೇ.

" ರಾಜಯೋಗ್ಯ ಗುಣ ಇಂಥವು. ನಿನ್ನಲ್ಲಿ ಒಂದೂ ಇಲ್ಲ. ನೀನು ಕೇವಲ ವಿಷಯಭೋಗದಲ್ಲಿ ಮುಳುಗಿದೆ. ನಿನ್ನದು ದುರ್ಬುದ್ಧಿ. ಎಲ್ಲರನ್ನೂ ಅವಮಾನಿಸುತ್ತೀ. ನಿನಗೆ ಔದಾಸೀನ್ಯ ಹೆಚ್ಚು. ಜನಸ್ಥಾನದಲ್ಲಿ ಆದ ರಾಕ್ಷಸವಧೆಯ ಸಂಗತಿಯೇ ನಿನಗೆ ತಿಳಿಯದು. ಯಾವ ಕಾಲದಲ್ಲಿ ಎಲ್ಲಿ ಏನು

ಮಾಡಬೇಕೋ ನಿನಗೆ ಗೊತ್ತು ಇಲ್ಲ. ಯುಕ್ತ ಅಯುಕ್ತ ವಿಮರ್ಶಾಜ್ಞಾನ ಸಾಲದು. ನಿನಗೆ ಬೇಗ ರಾಜ್ಯಭ್ರಷ್ಟತ್ವ ಬರುತ್ತದೆ. ಖಂಡಿತ. ಹಾಳು ಆಗಿ ಹೋಗುತ್ತೀಯೆ" ಎಂದಳು.

ರಾವಣನಿಗೆ ಧನದ ಕೊಬ್ಬು, ಬಲದ ಕೊಬ್ಬು, ಶೌರ್ಯದ ಕೊಬ್ಬು. ಆದರೂ ಶೂರ್ಪಣಖೆ ಹೀಗೆ ದೋಷಗಳನ್ನು ಎತ್ತಿ ಆಡಿದಾಗ ತನ್ನದು ಏನು ತಪ್ಪು ಎಂದು ಮನಸಿನ ಒಳಗೇ ಗುಣಾಕಾರ ಮಾಡಿದ.

೩೪

ತಂಗಿ ಶೂರ್ಪಣಖೆ ಹೇಳಿದುದನ್ನೆಲ್ಲ ಕೇಳಿದ ರಾವಣ. ಪೂರಾ ಸಿಟ್ಟು ಉಕ್ಕಿ ಏರಿಬಂತು. ಮಂತ್ರಿಗಳ ನಡುವೆ ಹೀಗೆ ಕ್ರೂರವಾಕ್ಯಗಳನ್ನು ಆಡಿದಳಲ್ಲ. ಸಿಟ್ಟನಿಂದಲೇ ಕೇಳಿದ: "ತಂಗಿ ಶೂರ್ಪಣಖೆ, ಯಾರು ಆ ರಾಮ? ಏನು ಅವನ ಪರಾಕ್ರಮ? ಎಂಥ ವೀರ ಅವನು? ಹೇಗಿದ್ದಾನೆ ನೋಡಲಿಕ್ಕೆ? ಒಳಹೊಗಲು ಸಾಧ್ಯ ಅಲ್ಲದ ಈ ದಂಡಕಾರಣ್ಯಕ್ಕೆ ಏಕೆ ಬಂದ? ರಾಕ್ಷಸರನ್ನು ಹೇಗೆ ಕೊಂದ? ಯಾವ ಆಯುಧದಿಂದ? ಖರದೂಷಣತ್ರಿಶಿರರನ್ನು ಹೇಗೆ ಕೊಂದ?"

ಶೂರ್ಪಣಖೆಗೆ ತುಂಬಾ ಸಿಟ್ಟು. ಆದರೂ ರಾಮನ ವಿಷಯವನ್ನು ವಿಸ್ತಾರ ಆಗಿ ಹೇಳಿದಳು: "ದಶರಥನ ಮಗ ರಾಮನಿಗೆ ಉದ್ದನೆ ತೋಳು, ಅಗಲ ಕಣ್ಣು. ನಾರುಮಡಿ ಉಟ್ಟು, ಕೃಷ್ಣಾಜಿನ ಹೊದ್ದು ಇದ್ದರೂ ನವ ಮನ್ಮಥ. ಇಂದ್ರಧನುಸ್ಸಿನಂಥ ಚಿನ್ನದ ಕಟ್ಟಿನ ಬಿಲ್ಲು ಇದೆ ಅವನ ಕೈಯಲ್ಲಿ. ಅವನ ಬಾಣಗಳು ವಿಷಸರ್ಪಗಳಂತೆ ಹೊಳೆಯುತ್ತ ಇವೆ. ಬತ್ತಳಿಕೆಯಿಂದ ಅವನು ಬಾಣಗಳನ್ನು ಹೇಗೆ ತೆಗೆದನೋ, ಅವನ್ನು ಹೇಗೆ ಹೂಡಿದನೋ, ಬಿಲ್ಲನ್ನು ಹೇಗೆ ಎಳೆದನೋ ನನಗೆ ಕಾಣಲಿಲ್ಲ. ಇಂದ್ರ ಆಲಿಕಲ್ಲಿನ ಮಳೆ ಕರೆದರೆ ಪಯಿರು ನೆಲಕ್ಕೆ ಬೀಳುವಂತೆ ರಾಮನ ಶರವರ್ಷದಿಂದ ರಾಕ್ಷಸಸೇನೆ ಸತ್ತುಬಿದ್ದದ್ದನ್ನು ಮಾತ್ರ ಕಂಡೆ. ರಾಮ ಒಬ್ಬನೇ. ಅದೂ ಕಾಲಾಳು. ಹದಿನಾಲ್ಕು ಸಾವಿರ ರಾಕ್ಷಸವೀರರನ್ನೂ ಖರದೂಷಣರನ್ನೂ ತನ್ನ ತೀಕ್ಷ್ಣ ಬಾಣಗಳಿಂದ ಒಂದೂವರೆ ಗಳಿಗೆಯ ಒಳಗೇ ಕೊಂದುಹಾಕಿದ.

"ಋಷಿಗಳಿಗೆ ಅಭಯ ಕೊಟ್ಟಿದ್ದ. ಅಂತೆಯೆ ದಂಡಕಾರಣ್ಯವನ್ನು ಅವರಿಗೆ ನಿರಾತಂಕ ಆಗಿ ಮಾಡಿಕೊಟ್ಟು ಮಾತನ್ನು ಸಲಿಸಿದ. ಸಮಸ್ತ ಧರ್ಮ ಗಳನ್ನೂ ತಿಳಿದ ಮಹಾಪರಾಕ್ರಮಶಾಲಿ. ಸ್ತ್ರೀಹತ್ಯೆ ಮಾಡಬಾರದು ಎಂದು ನನ್ನನ್ನು ಒಬ್ಬಳನ್ನು ಕೈಬಿಟ್ಟ ಕೊಲ್ಲದೆ. ಸುಮ್ಮನೆ ಬಿಟ್ಟನೆ? ಅಪಮಾನ ಮಾಡಿ ಬಿಟ್ಟ.

"ಮಹಾತೇಜೋವಂತ, ಗುಣಪರಾಕ್ರಮಗಳಲ್ಲಿ ರಾಮನಿಗೆ ಸರಿಸಾಟಿ ಆದ ತಮ್ಮ ಒಬ್ಬ ಇದಾನೆ ಅವನಿಗೆ. ಆ ಲಕ್ಷ್ಮಣ ಬಹಳ ವೀರ್ಯವಂತ. ಅಣ್ಣ ಎಂದರೆ ಅಪರಿಮಿತ ಭಕ್ತಿ ಅವನಿಗೆ, ಬಹಳ ಪ್ರೇಮ. ಮೂಗಿನ ಮೇಲೇ ಕೋಪ ಅವನಿಗೆ. ಯಾರೂ ಅವನನ್ನು ಗೆಲ್ಲಲಾರರು. ಅವನು ಎಲ್ಲರನ್ನೂ ಗೆಲ್ಲಬಲ್ಲ. ಮಹಾಬಲಶಾಲಿ, ತುಂಬ ಬುದ್ಧಿವಂತ. ರಾಮನಿಗೆ ಬಲಭುಜ, ಬಹಿಃಪ್ರಾಣ.

"ರಾಮನಿಗೆ ಒಬ್ಬ ಹೆಂಡತಿ ಇದಾಳೆ. ಚಂದ್ರಮುಖಿ, ವಿಶಾಲಾಕ್ಷಿ. ಗಂಡನ ಮನದನ್ನೆ. ಗಂಡನಿಗೆ ಹಿತ ಆಗುವ ಕೆಲಸಗಳಲ್ಲೇ ಯಾವಾಗಲೂ ನಿರತಳು. ಸೊಗಸು ಆದ ತಲೆಗೂದಲು, ಚೆಂದದ ಮೂಗು, ಅಂದದ ನುಣ್ಣನೆ ತೊಡೆ. ಮಹಾರೂಪವತಿ, ಬಹುಕೀರ್ತಿವತಿ. ವನದೇವತೆಯ ಹಾಗೆ, ಸಾಕ್ಷಾತ್ ಲಕ್ಷ್ಮಿಯ ಹಾಗೆ ಇದಾಳೆ. ಮೈಬಣ್ಣ ಪುಟ ಹಾಕಿದ ಚಿನ್ನ. ಕೆಂಪು ಕೊನೆ ಉಗುರು. ರಮಣೀಯ ನಿತಂಬ. ಸಣ್ಣನೆ ನಡು. ಮಂಗಳಾಂಗಿ. ಆ ಸೀತೆ ವಿದೇಹರಾಜನ ಮಗಳು. ದೇವಗಂಧರ್ವಯಕ್ಷಕಿನ್ನರರು ಯಾರಲ್ಲಿಯೂ ಇಂಥ ರೂಪವತಿ ನನ್ನ ಕಣ್ಣಿಗೆ ಬೀಳಲಿಲ್ಲ. ಭೂಲೋಕದಲ್ಲಿ ಇಲ್ಲವೆಂದು ಹೇಳಬೇಕೆ?

"ಆ ಸೀತೆ ಯಾರ ಹೆಂಡತಿ ಆಗುತ್ತಾಳೋ ಯಾರನ್ನು ಅವಳು ಸಂತೋಷದಿಂದ ಅಪ್ಪಿಕೊಳ್ಳುತ್ತಾಳೋ ಅವನು ದೇವೇಂದ್ರನಿಗಿಂತ ಹೆಚ್ಚು ಪುಣ್ಯಶಾಲಿ. ಆ ಸೀತೆಯ ಸ್ವಭಾವ ಬಲು ಒಳ್ಳೆಯದು. ಅವಳ ಮೈಯ ಸೊಬಗು ಸಾಟಿ ಇಲ್ಲದ್ದು. ಅವಳಂಥ ರೂಪವತಿ ಈ ಭೂಲೋಕದಲ್ಲಿ ಇಲ್ಲ. ನಿನಗೆ ತಕ್ಕ ಹೆಂಡತಿ ಅವಳು. ಅವಳಿಗೆ ತಕ್ಕ ಗಂಡ ನೀನು. ವಿಸ್ತಾರ ಜಘನ, ಉಬ್ಬಿದ ಸ್ತನ—ಆ ಚೆಲುವೆಯನ್ನು ನಿನಗೆ ಹೆಂಡತಿ ಆಗಿ ತರಲು ನಾನು ಬಹಳ ಪ್ರಯತ್ನ ಮಾಡಿದೆ. ಅದರ ಫಲ ಈ ವಿರೂಪ. ಆ ಕ್ರೂರಿ ಲಕ್ಷ್ಮಣ ಹೀಗೆ ಮಾಡಿದ.

"ರಾವಣ, ಆ ಪೂರ್ಣಚಂದ್ರಮುಖಿಯನ್ನು ನೀನು ಕಣ್ಣಾರೆ ನೋಡಿದ ಕೂಡಲೇ ಮನ್ಮಥಬಾಣಕ್ಕೆ ಸಿಗುತ್ತೀಯೆ. ಆ ಸೀತೆ ನಿನ್ನ ಕೈಹಿಡಿಯಬೇಕು ಎಂಬ ಆಸೆ ಇದ್ದರೆ ಏಳು. ಕೂಡಲೇ ನಿನ್ನ ಬಲಗಾಲನ್ನು ಮುಂದೆ ಇಡು. ಆ ಆಶ್ರಮದಲ್ಲಿ ಇರುವ ಆ ಕ್ರೂರ ರಾಮನನ್ನು ಕೊಂದು ನಮ್ಮ ರಾಕ್ಷಸರು ಎಲ್ಲರಿಗೂ ಸಂತೋಷ ತಂದುಕೊಡು. ಆ ರಾಮನನ್ನು ಮಹಾರಥ ಲಕ್ಷ್ಮಣನನ್ನು ಕೊಲ್ಲಲಿ ನಿನ್ನ ಹರಿತ ಆದ ಬಾಣಗಳು. ಸೀತೆಗೆ ಆಗ ದಿಕ್ಕು ಇಲ್ಲದೆ ಹೋಗುತ್ತದೆ. ಅವಳನ್ನು ಮನೆಗೆ ಕರೆತಂದು ಯಥೇಚ್ಛವಾಗಿ ಸುಖಿಸಬಹುದು. ರಾಕ್ಷಸಾಧಿಪತಿ, ನಾನು ಹೇಳಿದುದು ನಿನಗೆ ರುಚಿಸಿತೆ? ಹಾಗಾದರೆ ಈಗಲೇ ಹೊರಡು, ನಾನು ಹೇಳಿದಂತೆ ಮಾಡು. ಸಂಶಯಪಡಬೇಡ.

"ನಿನ್ನ ಬಲಾಬಲಗಳನ್ನು ಲೆಕ್ಕಹಾಕು. ಜನಸ್ಥಾನದಲ್ಲಿ ರಾಕ್ಷಸರು ಎಲ್ಲರನ್ನೂ ಕೊಂದ. ಖರದೂಷಣರನ್ನು ಕೊಂದ. ಅದನ್ನು ಯೋಚಿಸು, ಆ ಸರ್ವಾಂಗಸುಂದರಿಯನ್ನು ಕರೆತಂದು ಕೈಹಿಡಿ. ಹೇಗೆ ಮಾಡಿದರೆ ಒಳಿತೋ ಈ ವಿಷಯದಲ್ಲಿ ನಿಶ್ಚಯಿಸಿಕೊಂಡು ಮಾಡು" ಎಂದಳು.

೩೫

ರಾವಣನಿಗೆ ರೋಮಾಂಚ ಆಯಿತು. ಮಂತ್ರಿಗಳನ್ನು ಕಳಿಸಿಕೊಟ್ಟ. ಏನು ಮಾಡಬೇಕು ಈಗ? ಅಂತಃಪುರಕ್ಕೆ ಹೋಗಿ ಒಬ್ಬನೇ ಕೂತುಕೊಂಡು ಆಲೋಚಿಸಿದ. ಸೀತೆಯನ್ನು ಕದ್ದುತರಬೇಕು. ಹೇಗೆ? ಸಾಧಕಬಾಧಕಗಳನ್ನು ಬಲಾಬಲಗಳನ್ನು ಆಲೋಚಿಸಿದ, ಹೀಗೆಯೇ ಸರಿ ಎಂಬ ನಿರ್ಣಯಕ್ಕೆ ಬಂದ. ಆಗ ಅವನ ಮನಸ್ಸು ಸ್ತಿಮಿತಕ್ಕೆ ಬಂತು.

ತಾನು ಮಾಡುವ ಕೆಲಸ ಗುಟ್ಟು. ಯಾರಿಗೂ ತಿಳಿಯಬಾರದು. ಯಾರಿಗೂ ತಿಳಿಯದಂತೆ ತನ್ನ ಬಹು ರಮಣೀಯ ಆದ ಕುದುರೆಲಾಯಕ್ಕೆ ಬಂದ. ಗುಟ್ಟು ಆಗಿ ಸಾರಥಿಯನ್ನು ಕರೆದು ರಥವನ್ನು ಸಜ್ಜು ಮಾಡಲು ಹೇಳಿದ. ಕೂಡಲೇ ರಥ ಸಿದ್ಧ ಆಯಿತು. ಆ ಸಾರಥಿ ಬಲು ಚುರುಕು. ರಾವಣೇಶ್ವರನ ಮನಸಿಗೆ ಒಪ್ಪುವ ಹಾಗೆ ಸಿದ್ಧಗೊಳಿಸಿದ. ಸುವರ್ಣದ ರಥ, ರತ್ನಖಚಿತ. ಪಿಶಾಚಮುಖದ ಹೇಸರಕತ್ತೆಗಳಿಗೆ ಬಂಗಾರದ ಆಭರಣಗಳ

ಅಲಂಕಾರಮಾಡಿ ರಥಕ್ಕೆ ಕಟ್ಟಿದ. ಆ ರಥವೋ ತಾನು ಬಯಸಿದ ಕಡೆಗೆ ಹೋಗುವಂಥದು.

ಆ ರಥವನ್ನು ಏರಿದ ರಾವಣ ಮೇಘಗರ್ಜನೆ ಮಾಡುತ್ತ. ಹಿಂದೆ ಶ್ವೇತಚ್ಛತ್ರ. ಮೈಮೇಲೆ ವಜ್ರವೈಡೂರ್ಯಗಳ ಒಡವೆಗಳು. ಅದರ ಕಾಂತಿಗೆ ಥಳಥಳ ಹೊಳೆಯುವ ಮೈ. ಕಿವಿಯಲ್ಲಿ ಥಗಥಗಿಸುವ ಚಿನ್ನದ ಕಡುಕು. ಸೊಗಸು ಆದ ಬಟ್ಟೆ. ಹತ್ತು ತಲೆ, ಇಪ್ಪತ್ತು ತೋಳು. ಹತ್ತು ಶಿಖರಗಳ ಮಹಾಪರ್ವತದಂತೆ ಕಾಣುತ್ತ ಇದ್ದ ಆ ದೇವತೆಗಳ ಶತ್ರು, ಮುನಿಜನರ ಕೊಲೆಗಾರ. ಕಾಮಸಂಚಾರವ ಆ ರಥವನ್ನು ಏರಿ ರಾವಣ ಬರುತ್ತ ಇದ್ದರೆ ಗುಡುಗುಮಿಂಚುಗಳನ್ನು ಹುಟ್ಟಿಸುತ್ತ ಮುಗಿಲಿನಲ್ಲಿ ಸುತ್ತಾಡುವ ಮಹಾಮೇಘ ದಂತೆ ಕಾಣಿಸುತ್ತ ಇದ್ದ. ಮೇಘದಂತೆ ಸದ್ದುಮಾಡುತ್ತ ಆ ರಥ ಸಮುದ್ರ ತೀರಕ್ಕೆ ಹೋಯಿತು.

ಅಲ್ಲಿ ಫಲಪುಷ್ಪಗಳಿಂದ ತುಂಬಿದ ನಾನಾ ಬಗೆಯ ವೃಕ್ಷಸಮೂಹ. ಅನೇಕ ಪರ್ವತಗಳು. ತಂಪು ಆದ ನೀರಿನ ತಾವರೆಕೊಳಗಳು. ಸುತ್ತಲೂ ಅನೇಕ ಯಜ್ಞವೇದಿಕೆ ಇದ್ದ ವಿಸ್ತಾರ ಆದ ಆಶ್ರಮಸಮೂಹ. ಬಾಳೆಗಿಡ ತೊಗರಿಗಿಡ ತೆಂಗಿನ ಮರಗಳು ದಟ್ಟ ಆಗಿ ಬೆಳೆದಿವೆ. ಸಾಲ, ತಾಳ, ಹೊನ್ನೆ ಮರಗಳು ಹೂ ಬಿಟ್ಟು ರಮಣೀಯ ಆಗಿ ಇವೆ.

ಆ ಸಮುದ್ರತೀರದಲ್ಲಿ ಸಾವಿರಾರು ಜನ ನಾಗರು ಗರುಡರು ಗಂಧರ್ವರು ಕಿನ್ನರರು ತಿರುಗಾಡುತ್ತ ಇದ್ದರು. ಅಯೋನಿಜರೂ ನಿಯತಾಹಾರಿಗಳೂ ಆದ ವೈಖಾನಸರು, ಮಾಷಜರು ಆದ ವಾಲಖಿಲ್ಯರು ಮುಂತಾದ ಋಷಿಗಳೂ ಸಿದ್ಧರೂ ಚಾರಣರೂ ಅಲ್ಲಿ ನೆಲೆಸಿ ಇದ್ದರು. ದಿವ್ಯ ಆಭರಣಗಳ ಸಮೇತ ಹೂಮಾಲೆಗಳನ್ನು ಧರಿಸಿ ದಿವ್ಯರೂಪಗಳಿಂದ ಬಗೆಬಗೆಯ ರತಿಕ್ರೀಡೆ ಆಡಬಲ್ಲ ಅಪ್ಸರಸ್ತ್ರೀಯರೂ ದಿವ್ಯಕಾಂತಿಯುತರೂ ಆದ ದೇವತಾಸ್ತ್ರೀಯರು ಅಮೃತ ಪಾನ ಮಾಡಿದ ದೇವತೆಗಳೂ ಅಲ್ಲಿ ವಿಹರಿಸುತ್ತ ಇದ್ದರು. ಹಂಸ ಕ್ರೌಂಚ ಸಾರಸಪಕ್ಷಿಗಳೂ ನೀರುಕೋಳಿಗಳೂ ಇಂಪು ಆಗಿ ಕಲಕಲಧ್ವನಿ ಮಾಡುತ್ತ ಇದ್ದವು. ವೈಡೂರ್ಯಮಣಿಗಳ ಕಾಂತಿ ಬಂದಿತ್ತು ಸಮುದ್ರದ ತೇಜಸ್ಸಿನಿಂದ ಆ ಸ್ಥಳಕ್ಕೆ. ರಮ್ಯ ಆ ದೃಶ್ಯ.

ಈ ಸೊಬಗನ್ನು ಸವಿಯುತ್ತ ರಥದಲ್ಲಿ ಹೋಗುತ್ತ ಇದ್ದ ರಾವಣನಿಗೆ ಬೆಳ್ಳಗೆ ವಿಮಾನಗಳ ಸಮೂಹ ಸುತ್ತಲೂ ಕಾಣಿಸಿತು. ದಿವ್ಯಪುಷ್ಪಮಾಲೆಗಳಿಂದ ಅಲಂಕರಿಸಿ ಇದಾರೆ. ವಿಮಾನಗಳಿಂದ ಗೀತವಾದ್ಯಧ್ವನಿ, ತೂರ್ಯಘೋಷ ಕೇಳಿಸುತ್ತ ಇದೆ. ಈ ವಿಮಾನಗಳು ಸಿದ್ಧಪುರುಷರಿಗೆ ತಪೋಬಲದಿಂದ ಲಭ್ಯ ಆಗಿವೆ. ಇಷ್ಟಬಂದಲ್ಲಿಗೆ ಹೋಗುವ ವಿಮಾನ ಅವು. ಗಂಧರ್ವರೂ ಅಪ್ಸರೆಯರೂ ಅದರಲ್ಲಿ ಇದ್ದರು.

ಮುಂದೆ ಸಾವಿರಾರು ಗಂಧದ ಮರ. ಒಳ್ಳೆಯ ಸುವಾಸನೆ. ಉತ್ತಮ ಅಗರುವೃಕ್ಷಗಳು ತಕ್ಕೋಲ ವೃಕ್ಷಗಳು, ಸುವಾಸನೆ ಬೀರುವ ಜಾಜಿಕಾಯಿ ಗಿಡಗಳು ತುಂಬಿ ಇದ್ದವು. ಈ ವನಗಳಲ್ಲಿ ಹೊಂಗೆಯ ಹೂಗಳು ಮೆಣಸಿನ ಬಳ್ಳಿಗಳು ಸಾವಿರಾರು. ಸಮುದ್ರದ ತೀರದಲ್ಲಿ ಚೆಲ್ಲಾಡಿದಂತೆ ಬಿದ್ದಿವೆ ಮುತ್ತು. ಶಂಖಗಳೂ ಹವಳಗಳೂ ರಾಶಿರಾಶಿ. ಇವನ್ನು ನೋಡುತ್ತ ಬೆಳ್ಳಿ ಬೆಟ್ಟ ಬಂಗಾರದ ಬೆಟ್ಟಗಳನ್ನು ದಾಟಿದ ರಾವಣ. ದಾರಿಯ ಪಕ್ಕದಲ್ಲಿ ಮನಸೆಳೆವ ಗಿರಿನದಿಗಳು ನಿರ್ಮಲೋದಕದ ಮಡುಗಳು ಇದ್ದವು. ಉತ್ತಮ ಸ್ತ್ರೀಯರಿಂದ ಒಪ್ಪುವ, ರಥಗಜತುರಗಗಳಿಂದ ತುಂಬಿದ, ಧನಧಾನ್ಯಸಮೃದ್ಧ ಪಟ್ಟಣಗಳನ್ನು ದಾಟಿದ.

ಹಳ್ಳತಿಟ್ಟು ಇಲ್ಲದೆ ಸಮಭೂಮಿ ಆಗಿ ಸಮುದ್ರದ ತಂಗಾಳಿಯ ಸ್ಪರ್ಶದಿಂದ ಸ್ವರ್ಗಲೋಕದಂತೆ ಸೊಗಸು ಆದ ಆ ತೀರಪ್ರದೇಶದಲ್ಲಿ ಒಂದು ಹೆಮ್ಮರ, ಆಲದ್ದು, ಕಾಣಬಂತು. ನೂರು ಯೋಜನ ಬೆಳೆದ ಕೊಂಬೆಗಳು ಅದಕ್ಕೆ. ಕೊಂಬೆ ಸುತ್ತಲೂ ಹರಡಿವೆ. ಮಹಾಮೇಘದ ಹಾಗೆ ಇದೆ ಮರ. ಅದರ ಕೆಳಗೆ ಋಷಿಗಳು ಅನೇಕರು ಇದಾರೆ. ಮಹಾಬಲಾಢ್ಯ ಗರುಡ ಹಿಂದೆ ಒಂದು ದೊಡ್ಡ ಆನೆಯನ್ನೂ ದೊಡ್ಡ ಆಮೆಯನ್ನೂ ಹಿಡಿದು ತಂದು ಅದನ್ನು ತಿನ್ನಲು ಈ ಮರದ ಕೊಂಬೆಯ ಮೇಲೆ ಕೂತ. ಆ ಭಾರವನ್ನು ತಡೆಯಲಾರದೆ ಆ ಕೊಂಬೆ ತಟ್ಟನೆ ಮುರಿದುಹೋಯಿತು. ಆ ಕೊಂಬೆಯ ಕೆಳಗೆ ವೈಖಾನಸರು ಮಾಷರು ವಾಲಖಿಲ್ಯರು ಮರೀಚಿತರು ಅಜರು ಧೂಮ್ರರು ಮೊದಲು ಆದ ಮಹರ್ಷಿಗಳು ತಪಸ್ಸುಮಾಡುತ್ತ ಇದ್ದರು. ಅವರಿಗೆ ಅಪಾಯ ಆಗದಂತೆ ಕಾಪಾಡಲು ಆ ನೂರು ಗಾವುದದ ಆಲದ ಕೊಂಬೆಯನ್ನೂ ಆನೆ ಆಮೆಗಳನ್ನೂ ಒಂದೇ ಕಾಲಿನಿಂದ ಹಿಡಿದುಕೊಂಡು ಅತಿವೇಗದಿಂದ ದೂರ

ಹೋದ. ಆನೆಯನ್ನೂ ಆಮೆಯನ್ನೂ ತಿಂದು ಆ ಕೊಂಬೆಯನ್ನು ಒಂದು ನಿಷಾದಪ್ರದೇಶದ ಮೇಲೆ ಎತ್ತಿಹಾಕಿ ಅಲ್ಲಿದ್ದವರನ್ನು ಕೊಂದ. ಋಷಿಗಳಿಗೆ ನಿಷ್ಕಂಟಕ ಆಯಿತು. ಗರುಡನಿಗೆ ಸಂತೋಷ ಆಯಿತು.

ಈ ಸಂತೋಷದಿಂದ ಇಮ್ಮಡಿ ಬೆಳೆದ ಗರುಡ. ಅವನ ಪರಾಕ್ರಮವೂ ಇಮ್ಮಡಿಸಿತು. ಸ್ವರ್ಗಲೋಕದಿಂದ ಅಮೃತವನ್ನು ತರಲು ಹೊರಟ. ಇಂದ್ರನ ಅರಮನೆಗೆ ಬಂದು ಕಬ್ಬಿಣದ ಗವಾಕ್ಷಗಳನ್ನು ಮುರಿದು ರತ್ನದ ಗೋಡೆಗಳನ್ನು ಕೆಡವಿದ. ಒಳಹೊಕ್ಕು ಬಚ್ಚಿಟ್ಟಿದ್ದ ಅಮೃತವನ್ನು ಯಾರಿಗೂ ತಿಳಿಯದಂತೆ ತಂದ.

ಗರುಡನಿಂದ ಮುರಿದ ಆ ಆಲದ ಮರದ ಹೆಸರು ಸುಭದ್ರ. ಆ ಕೊಂಬೆ ಮುರಿದು ಗುರುತು ಕಾಣಿಸುತ್ತದೆ. ಅದರ ಕೆಳಗೆ ಅನೇಕರು ಮಹರ್ಷಿಗಳು ತಪೋನಿರತರು ಆಗಿ ಇದ್ದಾರೆ.

ಆ ಅಡವಿಯ ನಡುವೆ ಏಕಾಂತ ಸ್ಥಳ ಒಂದು, ರಮಣೀಯ ಪವಿತ್ರ ಆದದ್ದು ಇದೆ. ಅಲ್ಲಿ ಒಂದು ಆಶ್ರಮ. ಆ ಆಶ್ರಮಕ್ಕೆ ಹೊರಟ ರಾವಣ. ಅಲ್ಲಿ ಇದ್ದವನು ಜಟಾವಲ್ಕಲಕೃಷ್ಣಾಜಿನಧಾರಿ ನಿಯತಾಹಾರಿ ಮಾರೀಚ.

ಯಥಾವಿಧಿ ಆಗಿ ಸತ್ಕರಿಸಿದ ಮಾರೀಚ. ಮಾನವದುರ್ಲಭ ಆದ ಪದಾರ್ಥಗಳಿಂದ ಆತಿಥ್ಯ ಮಾಡಿದ. ಆಮೇಲೆ "ರಾಕ್ಷಸೇಂದ್ರ, ಲಂಕೆಯಲ್ಲಿ ಎಲ್ಲರೂ ಕ್ಷೇಮವೆ? ಇಷ್ಟು ಬೇಗ ಮತ್ತೆ ಬಂದೆಯಲ್ಲ. ಏನು ಕೆಲಸ?" ಎಂದು ಕೇಳಿದ. ಆ ಮಾತಿನಲ್ಲಿ ಅರ್ಥ ಅಡಗಿತ್ತು.

೩೭

ರಾವಣ ನುಡಿಜಾಣ. ಸಮಯಕ್ಕೆ ತಕ್ಕ ಹಾಗೆ ಮಾತಾಡುವವನು. ಹೇಳಿದ: "ಅಯ್ಯಾ, ಮಾರೀಚ, ನಾನು ಹೇಳುವ ಮಾತು ಎಲ್ಲವನ್ನೂ ಲಾಲಿಸಿ ಕೇಳು. ನನಗೆ ಈಗ ಬಹಳ ಕಷ್ಟ ಬಂದಿದೆ. ನಿನ್ನ ಹೊರತು ನನಗೆ ಬೇರೆ ದಿಕ್ಕು ಇಲ್ಲ.

"ನಿನಗೆ ಗೊತ್ತು. ನನ್ನ ತಮ್ಮಂದಿರು ಖರದೂಷಣರೂ ತಂಗಿ ಶೂರ್ಪಣಖೆಯೂ ಮಹಾ ತೇಜೋವಂತ ತ್ರಿಶಿರನೂ ಸಾವಿರಾರು ಮಂದಿ

ರಾಕ್ಷಸವೀರರೂ ಜನಸ್ಥಾನದಲ್ಲಿ ಇದ್ದರು. ಮಹರ್ಷಿಗಳನ್ನು ಪೀಡಿಸುತ್ತ ಕಾವಲು ಆಗಿ ಇದ್ದರು ಅಲ್ಲಿ. ನಾನೇ ಅಲ್ಲಿ ಇರಲು ಅವರಿಗೆ ಅಪ್ಪಣೆ ಮಾಡಿದವನು. ಅವರು ಎಲ್ಲರೂ ಮಹಾ ಶೂರರು, ಮಹೋತ್ಸಾಹಿಗಳು, ರಿಪು-ಭಯಂಕರರು. ಆ ಹದಿನಾಲ್ಕುಸಾವಿರ ರಾಕ್ಷಸರೂ ಖರನ ಆಜ್ಞಾನುವರ್ತಿಗಳು. ಬಗೆಬಗೆಯ ಆಯುಧಗಳಿಂದ ಎಲ್ಲರೂ ರಾಮನ ಮೇಲೆ ಯುದ್ಧ ಮಾಡಿದರು. ರಾಮನಿಗೆ ಬಹಳ ಸಿಟ್ಟುಬಂತು. ಆದರೂ ಒಂದೂ ಬಿರುನುಡಿ ಆಡದೆ ಗಂಭೀರ ಆಗಿ ನಿಂತು ತನ್ನ ಬಿಲ್ಲುವಿದ್ಯೆಯನ್ನು ತೋರಿಸಿದ ರಾಮ. ಒಬ್ಬನೇ ಒಬ್ಬ, ಮಾರೀಚ, ಮನುಷ್ಯಮಾತ್ರ. ಅವರಲ್ಲೂ ಬರೀ ಪದಾತಿ. ತನ್ನ ಕೂರಂಬು ಗಳಿಂದ ರಾಕ್ಷಸರು ಎಲ್ಲರನ್ನೂ ಖರದೂಷಣತ್ರಿಶಿರರನ್ನೂ ಕೊಂದುಹಾಕಿದ. ದಂಡಕಾರಣ್ಯ ಈಗ ನಿರ್ಭಯ ಆಯಿತು ಋಷಿಗಳಿಗೆ.

"ಮಾರೀಚ, ಆ ರಾಮನಿಗೆ ಆಯುಸ್ಸು ಮುಗಿದಿದೆ. ತಂದೆ ಸಿಟ್ಟು ಗೊಂಡು ರಾಜ್ಯ ಬಿಟ್ಟು ಓಡಿಸಿದರೆ ಆ ರಾಮ ದೇಶಭ್ರಷ್ಟ ಆಗಿ ಹೆಂಡತಿಯನ್ನು ಕಟ್ಟಿಕೊಂಡು ಕಾಡಿನಲ್ಲಿ ಅಲೆಯುತ್ತ ಜನಸ್ಥಾನಕ್ಕೆ ಬರಬೇಕೆ? ಇಲ್ಲಿ ರಾಕ್ಷಸ ರನ್ನು ಕೊಲ್ಲಬೇಕೆ? ಆ ಕ್ಷತ್ರಿಯ ಬಲು ಕೆಟ್ಟವನು. ಕ್ರೂರ, ಕಠಿನ, ಮೂರ್ಖ, ಜಿಪುಣ, ಇಂದ್ರಿಯಲೋಲ, ಧರ್ಮವನ್ನು ಕೈಬಿಟ್ಟುಕೊಂಡಿದಾನೆ. ಅಧರ್ಮ ಪ್ರವರ್ತಕ. ಸಮಸ್ತ ಜೀವಿಗಳಿಗೂ ಕೇಡುಮಾಡುವುದೇ ಅವನ ಕೆಲಸ.

"ಮಾರೀಚ, ತನಗೆ ಬಲ ಇದೆ ಎಂಬ ಕೊಬ್ಬು ಅವನಿಗೆ. ನನ್ನ ತಂಗಿಯ ಕಿವಿ ಮೂಗು ಕುಯಿದು ವಿರೂಪ ಮಾಡಿದಾನಲ್ಲ. ಏನು ದ್ವೇಷ ಇತ್ತು? ವೈರ ಸ್ವಲ್ಪವೂ ಇಲ್ಲದೆ ಇದ್ದರೂ ಈ ಕೆಲಸ ಮಾಡಿದಾನೆ. ಅದಕ್ಕೆ ಬದಲು ತೀರಿಸಬೇಡವೆ? ಅವನ ಹೆಂಡತಿ ಸೀತೆ ದೇವಕನ್ಯೆಯಂಥವಳು. ಅವಳನ್ನು ಹೊತ್ತುಕೊಂಡುಹೋಗಲು ಬಂದಿದೇನೆ. ಇದರಲ್ಲಿ ನಿನ್ನ ನೆರವು ಬೇಕು.

"ನೀನು ಮಹಾಸಮರ್ಥ, ಮಾರೀಚ. ಪರಾಕ್ರಮದಲ್ಲಿ ಶೌರ್ಯದಲ್ಲಿ ದರ್ಪದಲ್ಲಿ ನಿನಗೆ ಯಾರೂ ಸಮಾನರು ಅಲ್ಲ. ನಿನಗೆ ತಿಳಿಯದ ಉಪಾಯ ಇಲ್ಲ. ಶೂರಾಗ್ರಣಿ ನೀನು. ಸಮಸ್ತಮಾಯಾನಿಪುಣ. ಆದ್ದರಿಂದ ನಿನ್ನನ್ನು ಹುಡುಕಿಕೊಂಡು ಬಂದೆ. ನೀನೂ ನನ್ನ ತಮ್ಮಂದಿರೂ ನನ್ನ ಜೊತೆಗೆ ನಿಂತರೆ ದೇವತೆಗಳು ಎಲ್ಲರೂ ಒಟ್ಟು ಆಗಿ ಬಂದರೂ ನನಗೆ ಲೆಕ್ಕ ಇಲ್ಲ.

“ ನಿನ್ನ ಬಳಿಗೆ ಬಂದೆ. ಏನು ಮಾಡಬೇಕೋ ಹೇಳು. ನೀನು ರಾಮನ ಆಶ್ರಮಕ್ಕೆ ಹೋಗಬೇಕು. ಅಲ್ಲಿ ಒಂದು ವಿಲಕ್ಷಣ ಕಾಂಚನಮೃಗದ ರೂಪ ಧರಿಸಿ ಸೀತೆಯ ಮುಂದೆ ಸುಳಿದಾಡಬೇಕು. ಆ ಬಂಗಾರದ ಮೈಮೇಲೆ ಬೆಳ್ಳಿ ಚುಕ್ಕೆ ಇರಲಿ. ನಿನ್ನ ಆ ಜಿಂಕೆಯ ರೂಪವನ್ನು ನೋಡಿ ಸೀತೆಗೆ ಆಸೆ ಆಗುತ್ತದೆ. ನಿನ್ನನ್ನು ಹಿಡಿದು ತರಲು ರಾಮನನ್ನೂ ಲಕ್ಷ್ಮಣನನ್ನೂ ಬಲಾತ್ಕಾರ ಮಾಡಿ ಕಳಿಸುತ್ತಾಳೆ ಸೀತೆ. ಅವರು ಇಬ್ಬರೂ ನಿನ್ನ ಹಿಂದೆ ಬಂದರೆ ಅವಳು ಒಬ್ಬಳೇ ಆಗುತ್ತಾಳೆ. ಚಂದ್ರಪ್ರಭೆಯನ್ನು ರಾಹು ಹಿಡಿಯುವಂತೆ ನಾನು ಅವಳನ್ನು ಆಗ ಕದ್ದು ಒಯ್ಯುತ್ತೇನೆ. ನನ್ನ ಕೆಲಸ ಆಗುತ್ತದೆ. ಹೆಂಡತಿಯನ್ನು ಕಾಣದೆ ದುಃಖದಿಂದ ಕಂದಿ ಕುಂದಿ ಬಾಡುತ್ತಾನೆ ರಾಮ. ಆಗ ಅವನು ಯುದ್ಧಕ್ಕೆ ಬಂದರೂ ಸುಲಭ ಆಗಿ ಅವನನ್ನು ಕೊಂದುಬಿಡುತ್ತೇನೆ” ಎಂದ.

ರಾಮನ ಹೆಸರು ಕೇಳಿಯೇ ಮಾರೀಚನಿಗೆ ಬಹಳ ಭಯ ಆಯಿತು. ಮುಖ ಬಾಡಿತು. ಬಾಯಿ ಒಣಗಿತು. ಒಣಗಿದ ತುಟಿಗಳನ್ನು ನಾಲಗೆಯಿಂದ ಸವರಿಕೊಂಡ. ಎಚ್ಚರ ತಪ್ಪಿತು. ಸತ್ತ ಹೆಣದಂತೆ ಬಿಟ್ಟ ಕಣ್ಣು ಮುಚ್ಚದೆ ರೆಪ್ಪೆಹಾಕದೆ ರಾವಣನ ಕಡೆಯೇ ನೋಡಿದ.

ಮಹಾವನದಲ್ಲಿ ಹಿಂದೆ ಒಮ್ಮೆ ರಾಮನ ಪರಾಕ್ರಮದ ರುಚಿ ಕಂಡಿದ್ದ ಮಾರೀಚ. ಅದರಿಂದಲೇ ಅವನಿಗೆ ಭಯ. ತತ್ತರಿಸಿಹೋದ. ದೈನ್ಯದಿಂದ ರಾವಣನಿಗೂ ತನಗೂ ಶ್ರೇಯಸ್ಕರ ಆದ ಬುದ್ಧಿವಾದವನ್ನು ಹೇಳಿದ.

೩೭

ಮಾರೀಚ ಮಹಾಪ್ರಾಜ್ಞ. ಮಾತಿನಲ್ಲಿ ಬಲು ಜಾಣ. ಹೇಳಿದ: “ ರಾವಣ, ರಾಕ್ಷಸರಾಜ, ಸವಿಮಾತು ಆಡುವ ಭಟ್ಟಂಗಿಗಳು ಬೇಕಾದಲ್ಲಿ ಸಿಗುತ್ತಾರೆ. ಅಧರಕ್ಕೆ ಕಹಿ ಉದರಕ್ಕೆ ಸಿಹಿ ಆದ ಪಥ್ಯದಂತೆ ತತ್ಕಾಲಕ್ಕೆ ಅಪ್ರಿಯ ಆಗಿ ಕಂಡರೂ ಕಾಲಾನುಕಾಲಕ್ಕೆ ಹಿತಕರ ಆದ ಮಾತನ್ನು ಹೇಳುವವರೂ ಕೇಳುವವರೂ ಬಹಳ ವಿರಳ. ಪ್ರಭು, ನಿನಗೆ ಗೂಢಚಾರರು ಇಲ್ಲ. ನಿನ್ನದು ಚಪಲಚಿತ್ತ. ಶ್ರೀರಾಮ ಎಂಥ ಮಹಾವೀರ, ಎಂಥ ಗುಣಶಾಲಿ ಎಂಬುದನ್ನು ನೀನು ಅರಿಯೆ.

"ರಾವಣ, ಇನ್ನು ಈ ಭೂಮಿಯ ಮೇಲೆ ರಾಕ್ಷಸರಿಗೆ ಸುಖ ಇಲ್ಲ. ರಾಮನಿಗೆ ಕೋಪ ಬಂದರೆ ಸಮಸ್ತ ರಾಕ್ಷಸಕುಲವನ್ನೂ ನಾಶಮಾಡದೆ ಬಿಡುತ್ತಾನೆಯೆ? ನಿನ್ನ ಪ್ರಾಣನಾಶಕ್ಕಾಗಿಯೇ ಹುಟ್ಟಿದಳೋ ಏನೋ ಆ ಸೀತಾದೇವಿ. ಸೀತೆಯ ನಿಮಿತ್ತ ನನಗೂ ದುಃಖ ಕಾದು ಇದೆಯೋ ಏನೋ. ಮನಬಂದಹಾಗೆ ನಡೆಯುವ ನಿರಂಕುಶ ಬುದ್ಧಿಯ ನೀನು ಲಂಕಾಧಿಪತಿ ಆಗಿ ಇದ್ದೀಯೆ. ಆದ್ದರಿಂದ ನೀನೂ ಸಮಸ್ತ ರಾಕ್ಷಸರೂ ನಿನ್ನ ಲಂಕಾಪಟ್ಟಣವೂ ನಾಶ ಆಗುವುದು ಖಂಡಿತ. ದುಶ್ಶೀಲ ಆಗಿ ದುರಾಲೋಚನೆ ಮಾಡುವ ದುರ್ಬುದ್ಧಿಯ ನಿನ್ನಂಥ ಸ್ವೇಚ್ಛಾಚಾರಿ ದೊರೆ ಆದರೆ ಆ ದೇಶಕ್ಕೆ, ಅವನಿಗೆ ಅವನ ಪರಿವಾರಕ್ಕೆ ಮುಳಿವೇ.

"ರಾವಣ, ನಿನಗೆ ತಿಳಿಯದು. ರಾಮನನ್ನು ಅವನ ತಂದೆ ಓಡಿಸಲಿಲ್ಲ. ಮರ್ಯಾದೆ ಇಲ್ಲದವನು ಅಲ್ಲ ರಾಮ. ಜಿಪುಣ ಅಲ್ಲ. ಮೂರ್ಖ ಅಲ್ಲ. ನೀಚ ಕ್ಷತ್ರಿಯ ಅಲ್ಲ. ಕ್ರೂರ ಅಲ್ಲ. ಜೀವರಾಶಿಯನ್ನು ಹಿಂಸಿಸುವವನೂ ಅಲ್ಲ. ಸತ್ಯಕ್ಕೆ ತಪ್ಪುವವನು ಅಧರ್ಮಪ್ರವರ್ತಕ ಅಲ್ಲ. ಕೌಸಲ್ಯೆಯ ಮಗ ರಾಮ. ಸತ್ಯಸಂಧ ದಶರಥರಾಯ ಕಿರಿಯ ಹೆಂಡತಿ ಕೈಕೇಯಿಯ ಮಾತಿಗೆ ಮರುಳು ಆಗಿ ಕಟ್ಟುಬಿದ್ದ. ಅದನ್ನು ನೋಡಿ ಧರ್ಮಾತ್ಮ ರಾಮ ತಂದೆಯ ಮಾತನ್ನು ನಡೆಸಿ ಮಲತಾಯಿ ಕೈಕೇಯಿಯ ಕೋರಿಕೆಯನ್ನು ಈಡೇರಿಸಲು ತಾನೇ ಸ್ವಯಂ ಕಾಡಿಗೆ ಬಂದ. ತಂದೆತಾಯಿಯರ ಇಷ್ಟಸಿದ್ಧಿಗೆ ಎಂದು ರಾಜ್ಯವನ್ನೂ ಭೋಗಗಳನ್ನೂ ತೊರೆದು ದಂಡಕಾರಣ್ಯಕ್ಕೆ ಬಂದ. ಬೇರೆ ಏನೂ ಇಲ್ಲ. ರಾಮ ಸಾಮಾನ್ಯ ಅಲ್ಲ. ಕ್ರೂರನೂ ಅಲ್ಲ, ಮೂರ್ಖನೂ ಅಲ್ಲ. ಇಂದ್ರಿಯ ಅಧೀನನೂ ಅಲ್ಲ. ಯಾರೋ ನಿನಗೆ ಸುಳ್ಳು ಹೇಳಿದಾರೆ, ಮೋಸಮಾಡಿದಾರೆ. ನೀನು ಹೀಗೆ ಹೇಳಬಾರದು.

"ರಾವಣ, ನಿನಗೆ ತಿಳಿಯದು. ಧರ್ಮವೇ ರಾಮನ ರೂಪದಲ್ಲಿ ಹುಟ್ಟಿದೆ ಈ ಲೋಕದಲ್ಲಿ. ಮಹಾಸಾಧು ರಾಮ. ಸತ್ಯಪರಾಕ್ರಮ. ದೇವತೆಗಳಿಗೆ ದೇವೇಂದ್ರ ಪ್ರಭು. ಸಮಸ್ತ ಲೋಕಗಳಿಗೂ ಶ್ರೀರಾಮ ಪ್ರಭು. ಅವನ ಹೆಂಡತಿಯನ್ನು ಕದ್ದು ತರಬೇಕು ಎನ್ನುತ್ತೀಯಲ್ಲ. ಸೂರ್ಯನಿಂದ ಸೂರ್ಯ ಕಾಂತಿಯನ್ನು ಬೇರೆ ಮಾಡಲು ಸಾಧ್ಯವೆ? ಸೀತೆಯನ್ನು ಕದ್ದುತರುವುದು ಸೂರ್ಯಪ್ರಭೆಯನ್ನು ಕದ್ದು ತರುವ ಹಾಗೆ. ರಾಮನ ಪರಾಕ್ರಮ ಅವಳಿಗೆ ರಕ್ಷೆ! ನಿನಗೆ ಸಾಧ್ಯ ಅಲ್ಲ.

"ರಾಮ ಅಗ್ನಿಯ ಹಾಗೆ. ಬಿಲ್ಲು ಕತ್ತಿ ಆ ಬೆಂಕಿಗೆ ಸೌದೆ. ಅಸದಳ ಬಾಣಗಳೇ ಆ ಬೆಂಕಿಯ ನಾಲಗೆ. ಅದರ ಉರಿಯನ್ನು ನೀನು ಏಕೆ ಪ್ರವೇಶಿಸುತ್ತೀಯೆ? ಬೇಡ, ಕಂದ. ಆ ರಾಮ ಕಾಲಾಂತಕ. ರಾಮನಿಗೆ ಸಿಟ್ಟು ಬಂದು ಶತ್ರುಸಂಹಾರಕ್ಕೆ ಎಂದು ಬಿಲ್ಲನ್ನು ಬಾಗಿಸಿದನೋ ಬಾಣ ಹೂಡಲು, ಯಮ ಬಾಯಿ ತೆರೆದಂತೆ. ಆ ಬಾಯಿಂದ ಉರಿಯನ್ನು ಉಗುಳಿದ ಹಾಗೆ ಬಾಣ ಬಿಡುತ್ತಾನೆ. ಅವನ ಕೈಯ ಬಿಲ್ಲು ಯಮನ ಪಾಶ. ರಾಜ್ಯ ಭೋಗ ಅನುಭವಿಸುತ್ತ ಇದೀಯೆ. ಸಕಲ ಸೌಖ್ಯವೂ ಇದೆ ನಿನಗೆ. ಇದನ್ನು ಎಲ್ಲವನ್ನೂ ಕಳೆದುಕೊಂಡು ಪ್ರಾಣವನ್ನೂ ಕಳೆದುಕೊಳ್ಳಲು ಅಲ್ಲಿಗೆ ಏಕೆ ಹೋಗುತ್ತೀ?

"ರಾವಣ, ಜನಕಮಹಾರಾಜನ ಮಗಳು ಸೀತೆಯ ಗಂಡನ ಪರಾಕ್ರಮ ಅಪಾರ. ಅವನ ಬಿಲ್ಲು ಸೀತೆಗೆ ಕಾಪು. ಅವಳನ್ನು ಕದ್ದು ಒಯ್ಯಬೇಕು ಎನ್ನುತ್ತೀಯಲ್ಲ. ನಿನಗೆ ಸಾಧ್ಯ ಅಲ್ಲ. ಸಿಂಹದ ಹಾಗೆ ವಿಶಾಲ ವಕ್ಷಸ್ಥಲದ ಆ ಪುರುಷಸಿಂಹ ರಾಮನಿಗೆ ಆ ಸೀತೆ ಎಂದರೆ ಪಂಚಪ್ರಾಣ. ಆಕೆಯೋ ಯಾವಾಗಲೂ ರಾಮನನ್ನೇ ಹಿಂಬಾಲಿಸುತ್ತಾಳೆ. ಶೂರ ಶ್ರೀರಾಮನ ಹೆಂಡತಿ ಆ ಸುಮಧ್ಯಮ ಮೈಥಿಲಿ. ಅವಳನ್ನು ಮುಟ್ಟುವುದು ಉರಿವ ಬೆಂಕಿಯನ್ನು ಮುಟ್ಟಿದಂತೆ.

"ಪ್ರಭು, ಯುದ್ಧಕ್ಕೆ ನಿಂತು ರಾಮನ ಕಣ್ಣಿಗೆ ಬಿದ್ದೆಯೋ ಅಂದೇ ನಿನ್ನ ಬದುಕು ಮುಗಿಯಿತು. ಈ ವ್ಯರ್ಥಪ್ರಯತ್ನ ಬೇಡ. ನಿನ್ನ ರಾಜ್ಯ, ಭೋಗ ಬಹಳ ದುರ್ಲಭ. ಬಹುಕಾಲ ಸುಖದಿಂದ ಬದುಕಬೇಕು, ಸುಖ ಅನುಭವಿಸಬೇಕು ಎಂದು ಮನಸ್ಸು ಇದ್ದರೆ ಆ ರಾಮನ ತಂಟೆಗೆ ಹೋಗಬೇಡ. ಅವನಿಗೆ ಕೇಡನ್ನು ಬಗೆಯಬೇಡ. ಇಲ್ಲಿಂದಲೇ ಲಂಕೆಗೆ ಹಿಂದಿರುಗು. ಧರ್ಮಾತ್ಮ ವಿಭೀಷಣ ಮೊದಲು ಆದ ಮಂತ್ರಿಗಳನ್ನು ಕೇಳಿ ಆಲೋಚಿಸು. ಗುಣದೋಷಗಳನ್ನೂ ಬಲಾಬಲಗಳನ್ನೂ ಯಥಾರ್ಥ ಆಗಿ ಲೆಕ್ಕಹಾಕಿಕೊ. ನಿನ್ನ ಬಲ ಎಷ್ಟು, ರಾಮನ ಬಲ ಎಷ್ಟು? ಅದರಲ್ಲಿ ಮೇಲು ಕೀಳನ್ನು ಆಲೋಚಿಸು. ಆಮೇಲೆ ಮಾಡಬೇಕಾದ್ದನ್ನು ಮಾಡು. ಯುದ್ಧದಲ್ಲಿ ರಾಮನಿಗೆ ಇದಿರು ಆಗುವುದು ನಿನಗೆ ಸರಿ ಅಲ್ಲ. ಎಷ್ಟು ಸಲ ಕೇಳಿದರೂ ಇದನ್ನೇ ಮತ್ತೆ ಮತ್ತೆ ಹೇಳುತ್ತೇನೆ.

"ನನ್ನ ಮಾತನ್ನು ಕೇಳು.

೩೮

“ರಾವಣ, ನನಗೂ ಯೌವನ ಇತ್ತು, ಕೆಚ್ಚು ಇತ್ತು. ತಲೆಗೆ ಕಿರೀಟ, ಕಿವಿಯಲ್ಲಿ ಕುಂಡಲ, ಕೈಯಲ್ಲಿ ಒಂದು ದೊಡ್ಡ ಕಬ್ಬಿಣದ ಗುದ್ದಲಿ. ನನಗೆ ಸಾವಿರ ಆನೆಗಳ ಬಲ. ನೋಡಲು ದೊಡ್ಡ ಬೆಟ್ಟದ ಹಾಗೆ ಇದ್ದೆ. ಕಾರ್ಮೋಡದಂಥ ಕಪ್ಪು ಮೈ. ನೋಡಿದವರು ಎಲ್ಲರಿಗೂ ಭಯ. ಎಲ್ಲೆಲ್ಲೂ ತಿರುಗುತ್ತ ಋಷಿಗಳನ್ನು ಕೊಂದು ತಿನ್ನುತ್ತ ದಂಡಕಾರಣ್ಯದಲ್ಲಿ ಇದ್ದೆ.

“ಧರ್ಮಾತ್ಮ ವಿಶ್ವಾಮಿತ್ರ ಮಹರ್ಷಿ ನನಗೆ ಅಂಜಿ ದಶರಥ ರಾಜನ ಬಳಿಗೆ ಹೋದ. ‘ಮಹಾರಾಜ, ನನ್ನ ಯಜ್ಞವನ್ನು ನಡೆಸಲು ನನಗೆ ರಕ್ಷಣೆ ಬೇಕು. ಮಾರೀಚ ಎಂಬ ರಾಕ್ಷಸ ನಮಗೆ ಬಹಳ ಬಾಧೆ ಕೊಡುತ್ತ ಇದ್ದಾನೆ. ನಮ್ಮನ್ನು ಕಾಪಾಡಲು ರಾಮನನ್ನು ಕಳಿಸಿಕೊಡು’ ಎಂದು ಕೇಳಿದ.

“ದಶರಥನಿಗೆ ಹೆದರಿಕೆ ಆಯಿತು. ‘ಮಹರ್ಷಿ, ನನ್ನ ಮಗ ಇನ್ನೂ ಹನ್ನೆರಡು ವರ್ಷದ ಹಸುಳೆ. ಅವನಿಗೆ ಅಸ್ತ್ರವಿದ್ಯಾಭ್ಯಾಸ ಇನ್ನೂ ಪೂರ್ತಿ ಆಗಿ ಇಲ್ಲ. ರಾಕ್ಷಸರ ಸಂಗಡ ಯುದ್ಧಮಾಡಲು ನನ್ನ ಚತುರಂಗಸೇನೆಯನ್ನೂ ಕಳಿಸುತ್ತೇನೆ. ನಾನೇ ಬರುತ್ತೇನೆ. ನಿಮ್ಮ ಚಿತ್ತದಂತೆ ಆ ರಾಕ್ಷಸರು ಎಲ್ಲರನ್ನೂ ನಾನೇ ಕೊಲ್ಲುತ್ತೇನೆ’ ಎಂದ.

“‘ಮಹಾರಾಜ, ಆ ಮಾರೀಚ ರಾಕ್ಷಸನನ್ನು ಅಡಗಿಸಲು ರಾಮನೇ ಸಮರ್ಥ ಈ ಭೂಲೋಕದಲ್ಲಿ. ಯಾವ ದಂಡಿಗೂ ಸಾಧ್ಯ ಅಲ್ಲ. ನೀನು ದೇವತೆಗಳ ದಂಡಿಗೇ ದಳಪತಿ ಆಗಿ ಇದ್ದೆ. ನಿನ್ನ ಸಾಮರ್ಥ್ಯ ದೊಡ್ಡದು. ಮೂರು ಲೋಕಗಳಲ್ಲಿಯೂ ಪ್ರಸಿದ್ಧ ಆಗಿ ಇದೆ ನಿನ್ನ ಸಾಹಸ. ನಿನ್ನ ದಂಡೂ ಅಪಾರ. ಅದು ಇಲ್ಲಿಯೇ ಇರಲಿ. ಅದರಿಂದ ಕೆಲಸ ಇಲ್ಲ. ಈ ರಾಮಚಂದ್ರ ಹುಡುಗ ಆದರೂ ಮಹಾಪರಾಕ್ರಮಿ. ಶ್ರೀರಾಮ ಒಬ್ಬನೇ ಸಾಕು ನನಗೆ. ಕರೆದು ಒಯ್ಯುತ್ತೇನೆ. ನಿನಗೆ ಶುಭ ಆಗುತ್ತದೆ’ ಎಂದು ಹೇಳಿ ರಾಮನನ್ನು ಕರೆತಂದ ಸಂತೋಷಗೊಂಡು.

“ವಿಶ್ವಾಮಿತ್ರನ ಯಜ್ಞವನ್ನು ಕಾಪಾಡಲು ಬೆಂಗಾವಲು ಆಗಿ ನಿಂತ ರಾಮ. ಬಿಲ್ಲನ್ನು ಎಳೆದು ಟಂಕಾರಮಾಡಿದ. ಆಗ ರಾಮ ಇನ್ನೂ ಹಸುಳೆ. ಹರೆಯದ ಗುರುತು ಇನ್ನೂ ಬಂದು ಇರಲಿಲ್ಲ. ಆದರೂ ಒಂದು ಬಗೆಯ

ಪ್ರಸನ್ನತೇಜಸ್ಸು ಮುಖದಲ್ಲಿ. ಕಣ್ಣು ಕಮಲ. ಉಟ್ಟಿದ್ದು ಒಂದೇ ಬಟ್ಟೆ. ಶಿಖೆಯಲ್ಲಿ ಚಿನ್ನದ ಹೂಮಾಲೆ. ಅವನು ದಿವ್ಯತೇಜಸ್ಸಿನಿಂದ ಬೆಳಗುತ್ತ ಇದ್ದರೆ ಮೂಡಿಬರುವ ಬಾಲಚಂದ್ರನ ಹಾಗೆ ಇದ್ದ.

"ನನಗೆ ಆಗ ಸಾವಿರ ಆನೆಗಳ ಬಲ. ನನ್ನ ಮೈ ಕಾರ್ಮೋಡದ ಹಾಗೆ. ನನ್ನ ಕಿವಿಯ ಚಿನ್ನದ ಕಡುಕು ನಿಗಿನಿಗಿ ಬೆಳಗುವ ಕೆಂಡ. ನನ್ನ ಕೆಚ್ಚು ಹೇಳಲು ಅಸದಳ. ಆಯುಧ ಹಿಡಿದು ಅತಿ ವೇಗದಿಂದ ವಿಶ್ವಾಮಿತ್ರನ ಆಶ್ರಮಕ್ಕೆ ಹೋದೆ. ರಾಮ ನನ್ನನ್ನು ನೋಡಿದ. ಸ್ವಲ್ಪವೂ ಬೆದರಲಿಲ್ಲ, ಬೆಚ್ಚಲಿಲ್ಲ. ಬಿಲ್ಲಿಗೆ ಹೆದೆ ಏರಿಸಿದ. ಇವನು ಬರೀ ಹುಡುಗ ಎಂದು ಅಲಕ್ಷ್ಯ ದಿಂದ ನಾನು ವಿಶ್ವಾಮಿತ್ರನ ಯಜ್ಞವೇದಿಕೆಯ ಬಳಿಗೆ ಹೋದೆ. ಆಗ ರಾಮ ಒಂದು ಬಾಣ ಬಿಟ್ಟ. ಶತ್ರುಸಂಹಾರಕ ನಿಶಿತ ಅಸ್ತ್ರ.

"ಆ ಬಾಣದ ಹೊಡೆತಕ್ಕೆ ನಾನು ಗಾಳಿಗೆ ಹಾರಿಹೋದೆ. ನೂರು ಯೋಜನ ದೂರ ಹೊತ್ತುಕೊಂಡು ಹೋಯಿತು ಆ ಬಾಣ. ಸಮುದ್ರ ಮಧ್ಯದಲ್ಲಿ ಕೆಡವಿತು. ಆಳ ಆಗಿ ಮುಳುಗಿಹೋದೆ ನಾನು. ಎಚ್ಚರ ತಪ್ಪಿ ಹೋಯಿತು. ಮತ್ತೆ ಎಚ್ಚರ ಬರಲು ಬಹಳ ಹೊತ್ತು ಹಿಡಿಯಿತು. ಎಚ್ಚರ ಆದಮೇಲೆ ಲಂಕೆಗೆ ಹೋದೆ. ನಾನು ಒಬ್ಬನೇ ಹೋದದ್ದು. ನನ್ನ ಜೊತೆಯಲ್ಲಿ ಇದ್ದವರು ಎಲ್ಲರೂ ಸತ್ತರು. ರಾಮ ಒಬ್ಬನೇ ಕೊಂದ. ನನ್ನನ್ನು ಒಬ್ಬನನ್ನೇ ಜೀವಸಹಿತ ಬಿಟ್ಟದ್ದು.

"ಆಗ ರಾಮ ಹುಡುಗ. ಶಸ್ತ್ರಾಸ್ತ್ರಗಳ ಅಭ್ಯಾಸ ಇನ್ನೂ ಮುಗಿದು ಇರಲಿಲ್ಲ. ಆದರೂ ಅನಾಯಾಸದಿಂದ ಕೆಲಸ ಮಾಡಿದ. ರಾವಣ, ಪ್ರಭು, ನನ್ನ ಮಾತು ಕೇಳು. ಬೇಡ, ಅವನ ಗೊಡವೆ ಬೇಡ. ಇಷ್ಟು ಹೇಳಿದರೂ ಕೇಳದೆ ರಾಮನ ಸಂಗಡ ಹಗೆತನ ಕಟ್ಟಿಕೊಂಡರೆ ನಿನಗೆ ಭಯಂಕರ ವಿಪತ್ತೇ. ನಿನಗೆ ಒಬ್ಬನಿಗೇ ಬಾರದು ಕೇಡು. ಈಗ ಹಲವು ಬಗೆಯ ರತಿಕ್ರೀಡೆಗಳಲ್ಲಿ ಮುಳುಗಿ ಸಮಸ್ತ ಭೋಗಗಳನ್ನೂ ಅನುಭವಿಸುತ್ತ ಸಂತೋಷದಿಂದ ಉತ್ಸವ ಗಳನ್ನು ಮಾಡುತ್ತ ಸಭೆ ಸೇರುತ್ತ ಇರುವ ರಾಕ್ಷಸರಿಗೆ ಎಲ್ಲರಿಗೂ ತುಂಬ ಕೇಡೇ. ಉಪ್ಪರಿಗೆಗಳು ಮೇಲ್ಮನೆಗಳು ರತ್ನಾಭರಣಗಳಿಂದ ಅಲಂಕೃತ ಆಗಿ ಬೆಳಗುತ್ತ ಇವೆ ನಮ್ಮ ಲಂಕೆಯಲ್ಲಿ. ಸೀತೆಯ ದೆಸೆಯಿಂದ ಲಂಕಾಪಟ್ಟಣ ನಾಶ ಆಗುತ್ತದೆ. ನೀನೇ ಕಣ್ಣಾರೆ ನೋಡುತ್ತೀ. ಮೀನುಗಳು ಸಾಧು

ಪ್ರಾಣಿಗಳು. ಹಾವಿನ ಮಡುವಿನಲ್ಲಿ ಇದ್ದರೆ ಮೀನುಗಳಿಗೂ ನಾಶವೇ ಗತಿ. ಪಾಪಿಗಳ ಜೊತೆಯಲ್ಲಿ ಪರಿಶುದ್ಧಾತ್ಮರೂ ನಾಶ ಆಗುತ್ತಾರೆ. ದಿವ್ಯಚಂದನ ಬಳಿದುಕೊಂಡು ದಿವ್ಯಾಭರಣಗಳಿಂದ ಸಿಂಗರಿಸಿಕೊಂಡು ಮೆರೆಯುತ್ತ ಇರುವ ರಾಕ್ಷಸರು ಎಲ್ಲರೂ ನಿನ್ನ ತಪ್ಪಿನಿಂದ ರಾಮಬಾಣಕ್ಕೆ ಸಿಕ್ಕಿ ಸಾಯುತ್ತಾರೆ. ಸಾಯದೆ ಬದುಕಿದ ರಾಕ್ಷಸರು ತಬ್ಬಲಿಗಳು ಆಗಿ ತಮ್ಮ ಹೆಂಡಿರನ್ನು ಕಟ್ಟಿಕೊಂಡೋ ಬಿಟ್ಟುಬಿಟ್ಟೋ ದಿಕ್ಕುದಿಕ್ಕಿಗೂ ಓಡಿಹೋಗುತ್ತಾರೆ. ನೀನೇ ನೋಡುತ್ತೀ ಇದನ್ನು. ರಾಮಬಾಣಗಳು ಲಂಕಾಪಟ್ಟಣ ಎಲ್ಲವನ್ನೂ ಸುಟ್ಟು ಬೂದಿ ಮಾಡುತ್ತವೆ. ಮಹಾ ಮಹಾ ಭವನಗಳು ಎಲ್ಲವೂ ಬೂದಿ ಬೂದಿ ನಿನ್ನ ಕಣ್ಣಿನ ಇದಿರಿಗೇ.

"ರಾಕ್ಷಸೇಶ್ವರ, ಪರಸ್ತ್ರೀಯರನ್ನು ಕೆಡಿಸುವುದರಷ್ಟು ಮಹಾ ಪಾಪ ಬೇರೆ ಇಲ್ಲ. ಸಾವಿರ ಹೆಂಡಿರನ್ನು ಮದುವೆ ಆಗಿದೀಯೆ. ಅವರಲ್ಲಿ ಸುಖ ಪಡಬಾರದೆ? ನಿನಗೆ ಏಕೆ ಈ ಪರಸ್ತ್ರೀವ್ಯಾಮೋಹ? ಸ್ವಭಾರ್ಯಾಸಕ್ತ ಆಗು. ನಿನ್ನ ವಂಶವನ್ನು ನಿನ್ನ ಗೌರವವನ್ನು ಐಶ್ವರ್ಯವನ್ನು ಕಾಪಾಡಿಕೊ. ನಿನ್ನ ರಾಜ್ಯವನ್ನು ಪ್ರಾಣವನ್ನು ಉಳಿಸಿಕೊ. ಚೆಲುವೆಯರು ಆದ ಹೆಂಡತಿಯರು ಒಳ್ಳೆಯ ಗೆಳೆಯರು ಇದಾರೆ ನಿನಗೆ. ಅವರ ಜೊತೆಯಲ್ಲಿ ಬಹುಕಾಲ ಸುಖದಿಂದ ಬಾಳು. ರಾಮನ ಗೊಡವೆಗೆ ಹೋದೆಯೋ, ಅವನಿಗೆ ಕೇಡು ಬಗೆದೆಯೋ, ಇದು ಸಾಧ್ಯ ಅಲ್ಲ. ನಾನು ನಿನ್ನ ಹಿತಕೋರುವವನು. ಆದ್ದರಿಂದ ಇಷ್ಟು ಹೇಳಿದೆ. ಆದರೂ ಕೇಳದೆ ಬಲಾತ್ಕಾರದಿಂದ ಸೀತೆಯನ್ನು ಹೊತ್ತು ತಂದರೆ ನಿನ್ನ ಬಂಧುಬಳಗ ನಿನ್ನ ದಂಡುಗಿಂಡು ಎಲ್ಲಾ, ನೀನೂ ಕೂಡ, ರಾಮಬಾಣಕ್ಕೆ ಸಿಕ್ಕಿ ಸತ್ತು ಯಮಪುರಿಗೆ ಹೋಗುತ್ತೀರಿ" ಎಂದು ಹೇಳಿದ ಮಾರೀಚ.

೩೯

ಮಾರೀಚ ತನ್ನ ಕಥೆಯನ್ನು ಮುಂದುವರಿಸಿದ :

"ರಾವಣ, ಆಗ ವಿಶ್ವಾಮಿತ್ರನ ಆಶ್ರಮದಿಂದ ಹೇಗೋ ಪಾರು ಆಗಿ ಬಂದೆ. ಕೆಲವೇ ದಿನಗಳ ಕೆಳಗೆ ಒಂದು ಸಂಗತಿ ನಡೆಯಿತು. ಸಾವಧಾನದಿಂದ

ಕೇಳು, ಹೇಳುತ್ತೇನೆ. ರಾಮನಿಂದ ನನಗೆ ಅಷ್ಟು ದುರವಸ್ಥೆ ಆದರೂ ನನ್ನ ಮನಸಿನ ದ್ವೇಷ ಹೋಗಲಿಲ್ಲ. ಇಬ್ಬರು ರಾಕ್ಷಸರು ಮೃಗರೂಪ ಧರಿಸಿ ದಂಡಕಾರಣ್ಯಕ್ಕೆ ಬಂದರು. ನಾನೂ ಅವರ ಜೊತೆಗೆ ಸೇರಿದೆ. ಉರಿಯುವ ಕೆಂಡದಂಥ ನಾಲಗೆ, ಹರಿತ ಆದ ಕೋರೆದಾಡೆ, ದೊಡ್ಡ ದೇಹ. ನೋಡಲು ಮಾತ್ರ ಜಿಂಕೆಯ ರೂಪ. ಹೀಗೆ ದಂಡಕಾರಣ್ಯದಲ್ಲಿ ತಿರುಗಾಡಿದೆ. ಯಜ್ಞ ಶಾಲೆಗಳಿಗೆ ತೀರ್ಥಸ್ಥಳಗಳಿಗೆ ದೇವಾಲಯಗಳಿಗೆ ಮರಗಳ ಕೆಳಗೆ ಇದ್ದ ಋಷಿಗಳ ಗುಂಪಿಗೆ ನುಗ್ಗಿ ಆ ತಪಸ್ವಿಗಳನ್ನು ಬೆದರಿಸಿ, ಧರ್ಮನಿರತರು ಆದ ಆ ಋಷಿಗಳನ್ನು ಕೊಂದು ಅವರ ನೆತ್ತರು ಕುಡಿಯುತ್ತ ಅವರ ಮಾಂಸ ತಿನ್ನುತ್ತ ತಿರುಗಾಡುತ್ತ ಇದ್ದೆ. ಅದರಿಂದ ಮದ ಏರಿ ಕ್ರೂರ ಆಗಿ ಧರ್ಮ ವಿನಾಶಕ ಆದೆ.

"ಆಗ ಧರ್ಮಾತ್ಮ ರಾಮ ತಾಪಸವೇಷದಲ್ಲಿ ಇದ್ದ. ಅವನ ತಮ್ಮ, ಮಹಾರಥ ಲಕ್ಷ್ಮಣ, ಪರಮ ಪೂಜ್ಯೆ ಸೀತಾದೇವಿ ಇಬ್ಬರೂ ಜೊತೆಯಲ್ಲಿ ಇದ್ದರು. ರಾಮಬಾಣದ ಹೊಡೆತ ನನಗೆ ನೆನಪು ಇತ್ತು. ಆದರೂ ಹಿಂದಿನ ಹಗೆ. ಈಗ ರಾಮ ತಪಸ್ವಿ ನಿಯತಾಹಾರಿ ಸಮಸ್ತಭೂತಹಿತಕಾಂಕ್ಷಿ, ನನ್ನನ್ನು ಏನೂ ಮಾಡಲಾರ ಎಂದುಕೊಂಡೆ. ಆ ಮಹಾಬಲಾಢ್ಯ ರಾಮನನ್ನು ನನ್ನ ಚೂಪು ಕೊಂಬಿನಿಂದ ಇರಿಯಲು ಹೋದೆ. ನನಗೆ ಬುದ್ಧಿ ಕೆಟ್ಟು ಇತ್ತು. ತಿಳಿಗೇಡಿತನದಿಂದ ರಾಮನ ಮೇಲೆ ನುಗ್ಗಿದೆ.

"ರಾಮ ಹೆದೆ ಏರಿಸಿದ. ಮೂರು ಬಾಣ ಬಿಟ್ಟ. ವಜ್ರಸಮ ಬಾಣ. ವೇಗದಲ್ಲಿ ಗರುಡನಿಗೂ ವಾಯುವಿಗೂ ಸಮ. ಅವುಗಳ ಗೆಣ್ಣು ಬಗ್ಗಿತ್ತು. ಅವುಗಳ ಧ್ವನಿ ಮಹಾಭಯಂಕರ. ಇದುವರೆಗೆ ಎಷ್ಟು ಮಂದಿ ಶತ್ರುಗಳ ನೆತ್ತರು ಕುಡಿದು ಇದ್ದವೋ ಆ ಬಾಣ. ರಾಮಬಾಣ ಎಂದರೆ ಎಷ್ಟು ಭಯಂಕರವೋ ನನಗೆ ಮೊದಲೇ ಗೊತ್ತು. ಹೇಗೋ ತಲೆತಪ್ಪಿಸಿಕೊಂಡು ಓಡಿಹೋದೆ. ಉಳಿದ ಇಬ್ಬರಿಗೂ ಸಂಗತಿ ತಿಳಿಯದು. ಆ ಬಾಣಗಳ ಏಟಿಗೆ ಅವರು ಸತ್ತರು. ಎಷ್ಟೋ ಪ್ರಯತ್ನದಿಂದ ತಪ್ಪಿಸಿಕೊಂಡು ಬದುಕಿ ಬಂದೆ.

"ದುಷ್ಕೃತ್ಯಗಳಲ್ಲಿ ಬೇಸರ ಹುಟ್ಟಿತು ನನಗೆ. ಎಲ್ಲವನ್ನೂ ಕೈಬಿಟ್ಟೆ. ಭೋಗಗಳನ್ನು ತೊರೆದೆ. ಯೋಗಾಭ್ಯಾಸ ಮಾಡುತ್ತ ಮನಸ್ಸನ್ನು ಸ್ಥಿರಪಡಿಸಿ ಕೊಂಡು ಇಲ್ಲಿ ಇದೇನೆ.

“ರಾವಣ, ಈಗಲೂ ನನಗೆ ರಾಮನ ಭಯ ತಪ್ಪಿ ಇಲ್ಲ. ಮರ ಮರದಲ್ಲೂ ನಾರುಮಡಿ ಉಟ್ಟು ಕೃಷ್ಣಾಜಿನ ಧರಿಸಿ ಕೈಯಲ್ಲಿ ಬಿಲ್ಲನ್ನು ಹಿಡಿದು, ಪಾಶಹಸ್ತ ಯಮನಂತೆ, ಆ ರಾಮ ಕಾಣುತ್ತಾನೆ ನನಗೆ. ಎತ್ತ ನೋಡಿದರೆ ಅತ್ತ ರಾಮ. ಸಾವಿರಾರು ಮಂದಿ ರಾಮರು. ರಾಮ ಇಲ್ಲದ ಸ್ಥಳವೇ ಇಲ್ಲ. ಈ ಕಾಡು ಎಲ್ಲಾ ರಾಮಮಯ. ಶೂನ್ಯದಲ್ಲಿಯೂ ರಾಮನೇ. ಕನಸಿನಲ್ಲೂ ರಾಮನೇ. ಮೈಮರೆತು ಹುಚ್ಚನ ಹಾಗೆ ಕನವರಿಸುತ್ತೇನೆ. ರಾವಣ, ರಾಮ ಎಂದರೆ ನನಗೆ ಎಷ್ಟು ಭಯ ಗೊತ್ತೆ? ರತ್ನ, ರಥ ಮುಂತಾದ ರಕಾರದ ಹೆಸರು ಕೇಳಿದರೇ ಸಾಕು ಎದೆ ನಡುಗುತ್ತದೆ. ರಾಕ್ಷಸೇಶ್ವರ, ರಾಮನ ಮಹಿಮೆಯನ್ನು ನಾನು ಬಲ್ಲೆ. ಅವನ ಸಂಗಡ ಯುದ್ಧ ಮಾಡಲಾರೆ ನೀನು. ಬಲ, ನಮುಚಿ ಕೂಡ ಅವನ ಇದಿರಿಗೆ ಒಂದೇ ಗಳಿಗೆ.

“ರಾವಣ, ನೀನು ರಾಮನ ಸಂಗಡ ಯುದ್ಧ ಮಾಡುವುದು ಆದರೆ ಮಾಡಿಕೊ. ಬೇಡ ಎಂದರೆ ಬಿಡು. ಆದರೆ ನಾನು ಇನ್ನೂ ಬದುಕಿ ಇರಬೇಕು ಎಂಬುದು ಆದರೆ ನನ್ನ ಹತ್ತಿರ ಆ ರಾಮನ ಸುದ್ದಿಯನ್ನೇ ಎತ್ತಬೇಡ.

“ಪರರ ತಪ್ಪಿಗೆ ಲೋಕದಲ್ಲಿ ಎಷ್ಟೋ ಮಂದಿ ಸಾಧುಸಜ್ಜನರು ಧಾರ್ಮಿಕರು ಸಪರಿವಾರ ಆಗಿ ನಾಶಹೊಂದುತ್ತಾರೆ. ನಿನ್ನ ತಪ್ಪಿನಿಂದ ನಾನು ಸಾಯಬೇಕಾಗುತ್ತದೆ. ನಿನ್ನ ಮನಸಿಗೆ ಬಂದಂತೆ ಮಾಡಿಕೊ. ನಾನು ನಿನ್ನ ದಾರಿಗೆ ಬರುವವನು ಅಲ್ಲ. ಆ ರಾಮ ಮಹಾತೇಜಸ್ವಿ, ಮಹಾಧೈರ್ಯಶಾಲಿ, ಮಹಾಬಲಾಢ್ಯ. ರಾಕ್ಷಸಕುಲಕ್ಕೆ ಯಮ ಅವನು.

“ಖರಾದಿ ಜನಸ್ಥಾನದ ರಾಕ್ಷಸರು ರಾಮನಿಂದ ಸತ್ತರು. ನಿಜ. ಶೂರ್ಪಣಖೆಯ ಮಾತು ಕೇಳಿ ಖರ ಮೇಲೆ ಏರಿಹೋಗಿ ಸತ್ತ. ಇದರಲ್ಲಿ ರಾಮನದು ಏನು ತಪ್ಪು? ನಾನು ನಿನ್ನ ಬಂಧು. ನಿನಗೆ ಹಿತ ಕೋರುತ್ತೇನೆ. ನಿನಗೆ ಒಳ್ಳೆಯದನ್ನು ಕೋರಿ ಈ ಮಾತು ಹೇಳಿದೆ. ನನ್ನ ಮಾತನ್ನು ಕೇಳದೆ ಹೋದರೆ ನಿನಗೆ ರಾಮಬಾಣದಿಂದ ಸಾವು ಸಿದ್ಧ.”

೪೦

ಸಾಯಬೇಕು ಎಂಬವನಿಗೆ ಔಷಧಿ ಕುಡಿಯುವ ಮನಸ್ಸು ಆಗುತ್ತದೆಯೆ? ಮಾರೀಚ ಸಾವಿರ ಹೇಳಿದರೂ ರಾವಣ ಕೇಳುತ್ತಾನೆಯೆ? ಅವನಿಗೆ ವಿನಾಶ ಕಾಲ. ಮಾರೀಚನ ಮಾತು ಅವನಿಗೆ ಹಿಡಿಸಲಿಲ್ಲ. ಅದರ ಬದಲು ತಾನೇ ಅತಿ ಕ್ರೂರ ಆಗಿ ಕಡಕು ಆಗಿ ಮಾತು ಆಡಿದ.

"ಮಾರೀಚ, ನಾನು ಪ್ರಭು. ನಿನ್ನ ಮಾತು ಎಲ್ಲವೂ ಅನುಚಿತ. ಮರುಭೂಮಿಯಲ್ಲಿ ಬೀಜ ಬಿತ್ತಿದ ಹಾಗೆ ಎಲ್ಲವೂ ನಿಷ್ಫಲ. ಆ ರಾಮ ಎಷ್ಟರವನು? ಒಬ್ಬ ಹೆಂಗಸಿನ ಮಾತಿಗೆ ಅಡವಿಗೆ ಬಂದ ಮೂರ್ಖ. ಕೇವಲ ಮನುಷ್ಯಮಾತ್ರ. ಏನೂ ಕಾರಣ ಇಲ್ಲದೆ ನಮ್ಮವರನ್ನು ಕೊಂದ ಕಡುಪಾಪಿ. ಅವನು ಯುದ್ಧದಲ್ಲಿ ನನಗೆ ತಡೆಯುತ್ತಾನೆಯೆ? ತನ್ನ ತಂದೆತಾಯಿಗಳನ್ನೂ ರಾಜ್ಯವನ್ನೂ ಗೆಳೆಯರನ್ನೂ ತೊರೆದು ಕಾಡಿಗೆ ಬಂದ, ಒಬ್ಬ ಹೆಂಗಸಿನ ಮಾತಿಗೆ. ಎಂಥ ಮೂರ್ಖ! ಖರನನ್ನು ಕೊಂದದ್ದಕ್ಕೆ ಅವನಿಗೆ ಶಾಸ್ತಿ ಮಾಡುತ್ತೇನೆ. ಅವನ ಪ್ರಾಣಕ್ಕಿಂತಲೂ ಪ್ರಿಯಳು ಆದ ಅವನ ಸೀತೆಯನ್ನು ನಿನ್ನ ಇದಿರಿಗೇ ಎತ್ತಿಕೊಂಡು ಹೋಗುತ್ತೇನೆ, ನೋಡು.

"ಮಾರೀಚ, ಮೊದಲೇ ನಿಶ್ಚಯ ಮಾಡಿದೇನೆ. ಈ ಕೆಲಸ ಮಾಡಲೇ ಬೇಕು. ದೇವಾಸುರರು ಎಲ್ಲರೂ ಸೇರಿ ದೇವೇಂದ್ರನೆ ಮುಂದೆ ಬಂದರೂ ನನ್ನ ನಿರ್ಧಾರವನ್ನು ತಿರುಗಿಸಲಾರರು. ಈ ನಿರ್ಧಾರ ಮಾಡುವಾಗ ಇದರ ಗುಣ ದೋಷ ಉಪಾಯ ಅಪಾಯಗಳ ಬಗೆಗೆ ನಿನ್ನನ್ನು ಕೇಳಿದ್ದರೆ ನೀನು ಹೇಳ ಬಹುದು ಆಗಿತ್ತು. ನಾನೇನು ನಿನ್ನನ್ನು ಕೇಳಲಿಲ್ಲ. ಬಾಳಿ ಬದುಕಿ ಮುಂದಕ್ಕೆ ಬರಬೇಕು ಎಂಬ ಮಂತ್ರಿ ಎಷ್ಟೇ ಬುದ್ಧಿಶಾಲಿ ಆದರೂ ದೊರೆ ಕೇಳಿದಾಗ ಕೈಜೋಡಿಸಿಕೊಂಡು ತನಗೆ ತಿಳಿದುದನ್ನು ಹೇಳಬೇಕು. ತನ್ನ ಮಾತು ಎಷ್ಟೇ ಹಿತ ಆದರೂ ದೊರೆಯ ಮನಸ್ಸಿಗೆ ವಿರೋಧ ಆಗದಂತೆ ವಿನಯ ವಿಧೇಯತೆ ಗಳಿಂದ ಮೃದು ಆಗಿ ಹೇಳಬೇಕು. ನಿರ್ಲಕ್ಷ್ಯ ಆಗಿ ಗೌರವ ತೋರದೆ ಎಂಥ ಹಿತವನ್ನು ಹೇಳಿದರೂ ರಾಜರು ಅದನ್ನು ಒಪ್ಪರು.

"ತೇಜೋವಂತ ರಾಜರಿಗೆ ಐದು ರೂಪ: ಇಂದ್ರ ಅಗ್ನಿ ಯಮ ವರುಣ ಚಂದ್ರ. ದೇವೇಂದ್ರನ ಪರಾಕ್ರಮ, ಅಗ್ನಿಯ ತೇಜಸ್ಸು, ಯಮನ ಶಿಕ್ಷಾಶಕ್ತಿ, ಚಂದ್ರನ ಸೌಮ್ಯತ್ವ, ವರುಣನ ಪ್ರಸನ್ನತೆ ಐದೂ ಇರುತ್ತವೆ ರಾಜರಲ್ಲಿ.

ಆದ್ದರಿಂದ ರಾಜರನ್ನು ಯಾವಾಗಲೂ ಎಲ್ಲ ಅವಸ್ಥೆಗಳಲ್ಲೂ ಗೌರವಿಸಬೇಕು, ಪೂಜಿಸಬೇಕು. ನಿನಗೆ ರಾಜಧರ್ಮ ತಿಳಿಯದು, ಮಾರೀಚ. ಅಜ್ಞಾನದಿಂದ ಸಲ್ಲದ ಮಾತು ಆಡಿದೆ, ನಾನೇ ನಿನ್ನ ಮನೆಬಾಗಿಲಿಗೆ ಬಂದಾಗಲೂ ಕೂಡ. ನನ್ನ ಕೆಲಸದ ಗುಣದೋಷಗಳನ್ನು ಯುಕ್ತಾಯುಕ್ತತೆಯನ್ನು ಕೇಳಲು ನಿನ್ನ ಬಳಿಗೆ ಬರಲಿಲ್ಲ ನಾನು. ಹಿಡಿದು ಇರುವ ಕೆಲಸ ಬಲು ದೊಡ್ಡದು. ನೀನು ನನಗೆ ಅದರಲ್ಲಿ ನೆರವು ನೀಡಬೇಕು. ನೀನು ಮಹಾಪರಾಕ್ರಮಶಾಲಿ. ಅಡ್ಡ ಮಾತು ಹೇಳಬೇಡ. ಹೇಳಿದ ಕೆಲಸ ಮಾಡು.

“ನೀನು ಏನು ಮಾಡಬೇಕೋ ಹೇಳುತ್ತೇನೆ ಕೇಳು. ಬೆಳ್ಳಿಯ ಚುಕ್ಕೆಗಳ ಬಂಗಾರದ ಜಿಂಕೆ ಆಗಿ ನೀನು ರಾಮಾಶ್ರಮದಲ್ಲಿ ಸೀತೆಯ ಮುಂದೆ ಸುಳಿಯಬೇಕು. ಅವಳಿಗೆ ಆಸೆ ಹುಟ್ಟುವಂತೆ ಮಾಡಬೇಕು. ಜಿಂಕೆಯನ್ನು ತಂದುಕೊಡು ಎಂದು ರಾಮನನ್ನು ಬಲವಂತ ಮಾಡುತ್ತಾಳೆ ಸೀತೆ. ನೀನು ಅಲ್ಲಲ್ಲಿಯೆ ಸ್ವೇಚ್ಛೆ ಆಗಿ ತಿರುಗಾಡುತ್ತ ಇರು. ರಾಮ ಜಿಂಕೆಯನ್ನು ಹಿಡಿದು ಕೊಳ್ಳಲು ಬರುತ್ತಾನೆ. ಅವನ ಕೈಗೆ ಸಿಗದಂತೆ ನೀನು ದೂರ ಓಡಿಹೋಗು. ಅವನು ನಿನ್ನ ಬೆನ್ನಟ್ಟಿಬರುತ್ತಾನೆ. ಬಹುದೂರ ಹೋದಮೇಲೆ ರಾಮನ ಧ್ವನಿಯನ್ನು ಅನುಕರಿಸಿ ‘ಅಯ್ಯೋ ಸೀತೆ, ಅಯ್ಯೋ ಲಕ್ಷ್ಮಣ’ ಎಂದು ಅವನ ಹಾಗೆಯೇ ಕೂಗು. ಆ ದೀನಧ್ವನಿಯನ್ನು ಕೇಳಿ ಲಕ್ಷ್ಮಣ ಕಳವಳ ಗೊಳ್ಳುತ್ತಾನೆ. ಸೀತೆ ಭಯಪಟ್ಟು ರಾಮನಿಗೋಸ್ಕರ ಲಕ್ಷ್ಮಣನನ್ನು ಬಲವಂತ ಮಾಡಿ ಅಟ್ಟುತ್ತಾಳೆ. ಅವರು ಇಬ್ಬರೂ ಆಶ್ರಮದಿಂದ ಹೊರಗೆ ಹೋದ ಕೂಡಲೇ ಹಾಯಿ ಆಗಿ ನಾನು ಸೀತೆಯನ್ನು ಎತ್ತಿಕೊಂಡು ಹೋಗು ತ್ತೇನೆ. ದೇವೇಂದ್ರ ಶಚಿಯನ್ನು ತಂದ ಹಾಗೆ.

“ಇಷ್ಟು ಕೆಲಸ ಮಾಡು. ಆಮೇಲೆ ನಿನ್ನ ಇಷ್ಟ ಬಂದ ಕಡೆ ಹೋಗು. ಮಾರೀಚ, ನೀನು ನಿಯಮಾನುಷ್ಠಾನಪರ. ನೀನು ಈ ಕೆಲಸ ಮಾಡಿದರೆ ನಿನಗೆ ಅರ್ಧ ರಾಜ್ಯ ಕೊಡುತ್ತೇನೆ. ನೀನು ಸೌಮ್ಯ. ಈ ಕೆಲಸವನ್ನು ಸಾಧಿಸಲು ನೀನು ಜಿಂಕೆ ಆಗು. ದಂಡಕಾರಣ್ಯಕ್ಕೆ ನಡೆ. ನಾನೂ ನಿನ್ನ ಹಿಂದೆಯೇ ಬರುತ್ತೇನೆ ಈ ರಥದಲ್ಲಿ. ರಾಮನ ಸಂಗಡ ಯುದ್ಧವೇ ಬೇಡ ನಮಗೆ. ಅವನಿಗೆ ಮೋಸಮಾಡಿ ಸೀತೆಯನ್ನು ಕದ್ದು ತರಬೇಕು. ಅವಳನ್ನು ಲಂಕೆಗೆ ಒಯ್ದರೆ ನಾವು ಕೃತಕೃತ್ಯರು.

"ಮಾರೀಚ, ಈ ಕೆಲಸ ಮಾಡಲು ಒಲ್ಲೆ ಎಂದೆಯೋ ನೀನು, ನಿನ್ನನ್ನು ಕೊಂದುಹಾಕುತ್ತೇನೆ. ನನ್ನ ಬಲವಂತಕ್ಕೆ ಆದರೂ ನೀನು ಈ ಕೆಲಸವನ್ನು ಮಾಡಬೇಕು. ರಾಜನಿಗೆ ಇದಿರುನಿಂತವನಿಗೆ ಸೌಖ್ಯ ಇಲ್ಲ, ಪ್ರಾಣ ಉಳಿಯುವುದೂ ಇಲ್ಲ. ರಾಮನ ಬಳಿಗೆ ಹೋದರೆ ನೀನು ಸಾಯದೆ ಬದುಕುವ ಸಂಭವವೂ ಇದೆ. ಇಲ್ಲಿ ನನ್ನ ಸಂಗಡ ವಿರೋಧ ಕಟ್ಟಿಕೊಂಡರೆ ನಿನಗೆ ಸಾವು ಖಂಡಿತ. ಏನು ಮಾಡುತ್ತೀಯೋ ನೀನೇ ಯೋಚಿಸು. ನಿನ್ನ ಇಷ್ಟ" ಎಂದ ರಾವಣ.

೪೧

ಮಾರೀಚನಿಗೆ ಇಷ್ಟ ಇಲ್ಲದ ಕೆಲಸ ಮಾಡಲು ರಾವಣ ಅರಸನಂತೆ ಅಪ್ಪಣೆಮಾಡಿದ. ಕೊಲ್ಲುವ ಬೆದರಿಕೆಯನ್ನೂ ಹಾಕಿದ. ಮಾರೀಚನಿಗೆ ಸಿಟ್ಟು. ಮತ್ತೂ ಕಠಿನ ಆಗಿ ಹೇಳಿದ: 'ರಾಕ್ಷಸ, ನೀನು ನಿನ್ನ ಮಕ್ಕಳು ನಿನ್ನ ರಾಜ್ಯ ಎಲ್ಲವೂ ಹಾಳು ಆಗುವ ಈ ಉಪದೇಶವನ್ನು ನಿನಗೆ ಯಾವ ಪಾಪಿ ಮಾಡಿದನೊ! ನಿನ್ನ ಸುಖವನ್ನು ನೋಡಿ ಹಿಗ್ಗದ ಆ ಪಾಪಿ ಯಾರು? ಹೀಗೆ ಉಪಾಯದಿಂದ ನಿನ್ನನ್ನು ಸಾವಿನ ಬಾಯಿಗೆ ನೂಕಿದವನು ಯಾರು? ಯಾರೋ ಕ್ಷುದ್ರ ರಾಕ್ಷಸರು ನಿನ್ನ ಬಳಿ ಸೇರಿ ಇದಾರೆ. ಆ ಬಲಿಷ್ಠ ಶತ್ರುವಿನಿಂದ ನಿನ್ನನ್ನು ಕೊಲ್ಲಿಸಬೇಕು ಎನ್ನುವ ಆ ಹಗೆ ಯಾರೋ? ಸ್ವಯಂಕೃತ ಅಪರಾಧದಿಂದಲೇ ನೀನು ಹಾಳು ಆಗಲಿ ಎಂದು ಆ ಕ್ಷುದ್ರರು ನಿನಗೆ ದುರ್ಬೋಧನೆ ಮಾಡಿ ಇದಾರೆ.

"ರಾವಣ, ನೀನು ದಾರಿ ತಪ್ಪಿದರೆ ನಿನ್ನನ್ನು ತಡೆಯಬೇಡವೆ ನಿನ್ನ ಮಂತ್ರಿಗಳು? ಅವರನ್ನು ಕೊಲ್ಲಬೇಕು. ಅರಸರು ದಾರಿ ತಪ್ಪಿ ಕೆಟ್ಟರೆ ಸಜ್ಜನರು ಆದ ಮಂತ್ರಿಗಳು ಅರಸನನ್ನು ಸರ್ವ ವಿಧದಲ್ಲೂ ತಡೆಯಬೇಕು. ನಿನ್ನನ್ನು ನಿನ್ನ ಮಂತ್ರಿಗಳು ತಡೆಯಲಿಲ್ಲವಲ್ಲ. ರಾವಣ, ದೊರೆ ನಿರ್ದೋಷಿ ಆದರೆ ಮಂತ್ರಿಗಳಿಗೆ ಧರ್ಮ ಅರ್ಥ ಕಾಮ. ಅವರಿಗೆ ಕೀರ್ತಿ. ರಾಜ ಗುಣಹೀನ ಆದರೆ ಎಲ್ಲವೂ ಹಾಳು. ಮಂತ್ರಿಗಳೂ ಪ್ರಜೆಗಳೂ ರಾಜನ ಅವಿವೇಕದಿಂದ ದುಃಖದ ಪಾಲಾಗುತ್ತಾರೆ. ಧರ್ಮಕ್ಕೂ ಗೆಲವಿಗೂ ರಾಜನೇ ಮೂಲಕಾರಣ.

ಆದ್ದರಿಂದ ಎಲ್ಲ ಕಾಲದಲ್ಲೂ ಎಲ್ಲ ಅವಸ್ಥೆಗಳಲ್ಲೂ ರಾಜನನ್ನು ಎಲ್ಲರೂ ಕಾಪಾಡಿಕೊಳ್ಳಬೇಕು.

"ರಾಕ್ಷಸೇಂದ್ರ, ಅರಸ ಕ್ರೂರ, ಪ್ರಜೆಗಳಿಗೆ ಪ್ರತಿಕೂಲ ಅವಿನಯವಂತ ಇಂದ್ರಿಯನಿಗ್ರಹಹೀನ ಆದರೆ ಆ ರಾಜ್ಯಕ್ಕೆ ಉಳಿಗಾಲ ಇಲ್ಲ. ಸಾರಥಿಗೆ ಚಾತುರ್ಯ ಇಲ್ಲದೆ ಇದ್ದರೆ ಹಳ್ಳತಿಟ್ಟು ನೋಡದೆ ಕುದುರೆಗಳು ಓಡಿದರೆ ವೇಗದಿಂದ, ಆ ರಥ ಆ ಕುದುರೆ ಆ ಸಾರಥಿ ಎಲ್ಲರಿಗೂ ನಾಶವೇ. ಹಾಗೇ ಬುದ್ಧಿ ಇಲ್ಲದ ರಾಜ, ದುರಾಲೋಚನೆಯ ಮಂತ್ರಿಗಳು ಆದರೆ ಆ ರಾಜ ಆ ಮಂತ್ರಿಗಳು ಆ ರಾಜ್ಯ ಎಲ್ಲವೂ ಹಾಳೇ.

"ಪ್ರಭು, ಇತರರ ತಪ್ಪಿನಿಂದ ಲೋಕದಲ್ಲಿ ಧರ್ಮಾನುಷ್ಠಾನಪರರು ನೀತಿಮಾರ್ಗಪ್ರವರ್ತಕರು ಅನೇಕರು ಪರಿವಾರಸಮೇತ ನಾಶ ಆಗಿ ಇದಾರೆ. ಪ್ರತಿಕೂಲ ಆದ ದೊರೆಯ ಕೈಗೆ ಸಿಕ್ಕ ಪ್ರಜೆ ತೋಳದ ಕಾವಲಿಗೆ ಸಿಕ್ಕ ಕುರಿಗಳ ಹಾಗೆ ಕ್ಷೀಣಿಸುತ್ತಾರೆ. ರಾವಣ, ನೀನು ದುರ್ಬುದ್ಧಿ, ಕ್ರೂರ, ಅಜಿತೇಂದ್ರಿಯ. ನಿನ್ನಂಥ ರಾಜನಿಂದ ರಾಕ್ಷಸಕುಲಕ್ಕೇ ವಿನಾಶ ತಪ್ಪದು, ಖಂಡಿತ.

"ರಾವಣ, ಈ ಘೋರ ವಿಪತ್ತು ಅಕಸ್ಮಾತ್ತಾಗಿ ಕಾಕತಾಳೀಯದಂತೆ ನನ್ನ ತಲೆಯ ಮೇಲೆ ಬಿದ್ದು ಇದೆ. ಸ್ವಬುದ್ಧಿಯಿಂದ ನಾನು ಈ ಕೆಟ್ಟ ದಾರಿ ತುಳಿಯಲಿಲ್ಲ. ನಾನು ಸಾಯುವುದು ಖಂಡಿತ. ರಾಮ ನನ್ನನ್ನು ಕೊಂದೇ ಕೊಲ್ಲುತ್ತಾನೆ. ನಿನ್ನ ಕೈಯಲ್ಲಿ ಸಾಯುವುದಕ್ಕಿಂತ ರಾಮನ ಕೈಯಿಂದ ಸಾಯುವುದೇ ಲೇಸು. ನಾನು ಕೃತಾರ್ಥ. ರಾಮದರ್ಶನ ಆದರೆ ಸಾಕು, ನಾನು ಸತ್ತೆ. ಆದರೆ ನೀನೂ ಸಾಯುತ್ತೀಯಲ್ಲ. ನೀನು ಒಬ್ಬ ಅಲ್ಲ. ನಿನ್ನ ಬಂಧುಬಳಗ ಸಮಸ್ತ ಸೈನ್ಯವೂ ಸಾಯುತ್ತದೆ. ಆದರಿಂದ ನನಗೆ ದುಃಖ ಆಗುತ್ತಿದೆ.

"ರಾಮಾಶ್ರಮದಿಂದ ಸೀತೆಯನ್ನು ಕದ್ದೆಯೋ ನಾನೂ ಇಲ್ಲ, ನೀನೂ ಇಲ್ಲ. ರಾಕ್ಷಸರೂ ಇಲ್ಲ. ಲಂಕೆಯೂ ಇಲ್ಲ. ಎಲ್ಲಾ ನಿರ್ನಾಮ. ರಾಕ್ಷಸ, ನಿನ್ನ ಹಿತವನ್ನು ಕೋರಿ ನಾನು ಎಷ್ಟೋ ಹೇಳಿದೆ. ನೀನು ಕೇಳಲಿಲ್ಲ. ಸಾವು ಬಂದು ನಿಂತು ಇದೆ ಇದಿರಿಗೆ. ಇಂಥ ಹೊತ್ತಿನಲ್ಲಿ ಗೆಳೆಯರ ಮಾತು ಕಿವಿಗೇ ಹತ್ತದು" ಎಂದ.

ಎರಡನೆ ಖಂಡ

ಸೀತಾಪಹರಣ

ಇಷ್ಟೆಲ್ಲ ಹೇಳಿದರೂ ಮಾರೀಚನಿಗೆ ರಾವಣನನ್ನು ಕಂಡರೆ ಭಯ. ಆಗಲಿ ಎಂದ. "ರಾವಣ, ಬಿಲ್ಲು ಬಾಣ ಕತ್ತಿ ಹಿಡಿದು ನಿಂತ ರಾಮನನ್ನು ನೋಡಿದರೆ ಸಾಕು, ನನ್ನ ಪ್ರಾಣ ಹೋಗುತ್ತದೆ. ರಾಮನನ್ನು ಇದಿರಿಸಿ ಬದುಕಿ ಬರುವವರು ಯಾರೂ ಇಲ್ಲ. ನಿನಗೆ ಯಮದಂಡದ ಸ್ಪರ್ಶ ಆಗಿದೆ. ನಿನ್ನ ಜೊತೆಯಲ್ಲಿ ನನಗೂ. ನಿನಗೆ ದುರ್ಬುದ್ಧಿ ಹುಟ್ಟಿ ಇದೆ. ನಾನು ಏನು ಮಾಡಬಲ್ಲೆ ! ರಾವಣ, ರಾಕ್ಷಸರಾಜ, ಇದೋ, ನಾನು ಹೊರಟೆ. ನಿನಗೆ ಮಂಗಳ ಆಗಲಿ" ಎಂದ.

ರಾವಣನಿಗೆ ಪರಮಾನಂದ. ಮಾರೀಚನನ್ನು ಬಿಗಿದು ಅಪ್ಪಿಕೊಂಡ. "ಮಾರೀಚ, ಈಗ ನೀನು ಆಡಿದ ಮಾತು ಸರಿ. ನಾನು ಬಯಸಿದಂತೆ ನಿನ್ನ ವೀರ್ಯಕ್ಕೆ ತಕ್ಕ ಮಾತು ಹೇಳಿದೆ. ಈಗ ನೀನು ಮಾರೀಚ. ಇಷ್ಟಕ್ಕೆ ಮೊದಲು ನೀನು ಯಾರೋ ಹೆಸರು ಇಲ್ಲದ ರಾಕ್ಷಸ. ಮಾರೀಚ, ರತ್ನಗಳಿಂದ ಸಿಂಗರಿಸಿ ಪಿಶಾಚ ಮುಖದ ಹೇಸರಕತ್ತೆಗಳನ್ನು ಕಟ್ಟಿದ ಈ ರಥವನ್ನು ಹತ್ತು. ಸೀತೆಗೆ ಆಸೆ ಹುಟ್ಟಿಸಿ ಆಮೇಲೆ ಎಲ್ಲಿಗೆ ಆದರೂ ಹೋಗು. ನಿನ್ನ ಮನಬಂದ ಕಡೆ. ಯಾರೂ ಇಲ್ಲದಾಗ ನಾನು ಸೀತೆಯನ್ನು ಹೊತ್ತುಕೊಂಡು ಹೋಗುತ್ತೇನೆ" ಎಂದ.

ರಾವಣ ಮಾರೀಚ ಇಬ್ಬರೂ ವಿಮಾನದಂಥ ಆ ರಥವನ್ನು ಹತ್ತಿದರು. ಮಾರೀಚಾಶ್ರಮವನ್ನು ಕೂಡಲೇ ಬಿಟ್ಟರು. ವೇಗದಿಂದ ಸಾಗಿತು ರಥ. ದಾರಿಯಲ್ಲಿ ಅನೇಕ ಪಟ್ಟಣಗಳನ್ನೂ ಅರಣ್ಯಗಳನ್ನೂ ಪರ್ವತಗಳನ್ನೂ ನದಿಗಳನ್ನೂ ರಾಜ್ಯಗಳನ್ನೂ ನೋಡಿದರು. ದಂಡಕಾರಣ್ಯಕ್ಕೆ ಬಂದರು. ಅಲ್ಲಿ ರಾಮಾಶ್ರಮ ಕಾಣಿಸಿತು. ರಾವಣ ತನ್ನ ಬಂಗಾರದ ರಥದಿಂದ ಇಳಿದ. ಮಾರೀಚನ ಕೈ ಹಿಡಿದುಕೊಂಡು "ಗೆಳೆಯ, ಅದೋ, ಸುತ್ತಲೂ ಬಾಳೆಯ ತೋಟ ಇದೆಯಲ್ಲ. ಅದೇ ರಾಮಾಶ್ರಮ. ಇನ್ನು ನಾವು ಬಂದ ಕೆಲಸ ಬೇಗ ಆಗಲಿ" ಎಂದ.

ಮಾರೀಚ ಜಿಂಕೆಯ ರೂಪ ಧರಿಸಿ ಆಶ್ರಮದ ಮುಂದೆ ಸುಳಿಯ ತೊಡಗಿದ. ಅತ್ಯಾಶ್ಚರ್ಯಕರ ಮೃಗ. ಅದರ ಮುಖ ಸ್ವಲ್ಪ ಕಪ್ಪು ಸ್ವಲ್ಪ

ಬಿಳುಪು. ಅದರ ಕೊಂಬುಗಳ ಕೊನೆ ಇಂದ್ರನೀಲ ಮಣಿಗಳ ಹಾಗೆ. ಅದರ ಮೇಲ್ತುಟಿ ಕೆಂದಾವರೆ, ಕೆಳದುಟಿ ಕರೀ ನೈದಿಲೆ. ಕಿವಿಗಳು ಕರೀ ನೈದಿಲೆಯ ಆಕಾರ. ಬಣ್ಣ ಇಂದ್ರನೀಲ. ಕೊರಳು ಎತ್ತರ. ತುಟಿಯಲ್ಲಿ ಇಂದ್ರನೀಲದ ಹೊಳಪಿನ ಕಾಂತಿ. ಅದರ ಹೊಟ್ಟೆ ಮೊಲ್ಲೆಯ ಹೂವಿನಂತೆ ಕೋಮಲ. ಚಂದ್ರನ ಹಾಗೆ ವಜ್ರದ ಹಾಗೆ ಬೆಳ್ಳಗೆ. ಅದರ ಪಕ್ಕೆ ಹಿಪ್ಪೆಯ ಹೂವಿನಂತೆ ಹೊಳೆಯುತ್ತ ಇದ್ದವು. ಅವಯವಗಳು ಎಲ್ಲವೂ ತಾವರೆಯ ಕೇಸರಗಳ ಹಾಗೆ. ಅದರ ಗೊರಸು ವೈಡೂರ್ಯದಂತೆ ಥಳಥಳ. ಮೊಳಕಾಲು ಸಣ್ಣಗೆ ಇದ್ದರೂ ಕೀಲುಗಳು ಗಟ್ಟಿ. ಮೇಲಕ್ಕೆ ಎತ್ತಿದ ಅದರ ಬಾಲ ಕಾಮನ ಬಿಲ್ಲಿನ ಹಾಗೆ ಇತ್ತು. ಮೈ ನುಣುಪು. ಆಕಾರ ಮನೋಹರ. ಮೈಯಲ್ಲಿ ಬಗೆಬಗೆಯ ಬಣ್ಣದ ಚುಕ್ಕೆ. ನವರತ್ನಗಳಿಂದ ಸಿಂಗರಿಸಿದಂತೆ ಭುವನಮೋಹಕ ಆಗಿ ಇತ್ತು ಆ ಮಾಯಾಮೃಗ.

ಒಂದೇ ಗಳಿಗೆ. ಆ ವನಪ್ರದೇಶ ಎಲ್ಲವೂ ಕಂಗೊಳಿಸಿತು ಆ ಮಾಯಾ ಜಿಂಕೆಯ ವಿಚಿತ್ರ ರೂಪದಿಂದ. ಮಾರೀಚ ಮನೋಹರ ಪ್ರಲೋಭನೀಯ ವೇಷ ತೊಟ್ಟು ರಾಮಾಶ್ರಮದ ಮುಂದೆ ಸುಳಿದಾಡಿದ. ಸೀತೆಯನ್ನು ಮೋಸ ಗೊಳಿಸಬೇಕಲ್ಲ. ಅಲ್ಲಿ ಇದ್ದ ಹುಲ್ಲನ್ನು ತಿನ್ನುತ್ತ ಅತ್ತಿಂದ ಇತ್ತ ಇತ್ತಿಂದ ಅತ್ತ ಹಾರಾಡುತ್ತ ಆಶ್ರಮದ ಮುಂದೆ ತಿರುಗಾಡುತ್ತ ಇತ್ತು ಆ ಜಿಂಕೆ. ಮೈಮೇಲಿನ ಆ ಬೆಳ್ಳಿಯ ಚುಕ್ಕೆಗಳನ್ನು ನೋಡಿದರೆ ಸಂತೋಷ ಆಗುತ್ತ ಇತ್ತು. ಗಿಡ ಬಳ್ಳಿಗಳ ಕುಡಿಗಳನ್ನು ಕಡಿಯುತ್ತ ಆಶ್ರಮದ ಬಾಳೆಯ ಗಿಡದ ಮನೆಗಳಲ್ಲಿ ಹೊಕ್ಕು ಅಲ್ಲಿನ ಗೊರಟೆ ಗಿಡಗಳನ್ನು ಬಳಸಿಕೊಂಡು ಜಿಂಕೆ ಸೀತೆಯ ಕಣ್ಣಿಗೆ ಬೀಳುವಂತೆ ಸುತ್ತಾಡತೊಡಗಿತು.

ತಾವರೆಯ ದಳಗಳ ಹಾಗೆ ವಿಚಿತ್ರ ಅದರ ಮೈ. ಆ ಮಾಯಾಮೃಗ ಆಶ್ರಮದ ಮುಂದೆ ಮನಬಂದಂತೆ ತಿರುಗಾಡಿತು. ಒಂದೇ ಕಡೆ ನಿಲ್ಲದು. ಮುಂದಕ್ಕೆ ಹೋಗುವುದು, ಹಿಂದಕ್ಕೆ ಬರುವುದು. ಮತ್ತೆ ಮುಂದಕ್ಕೆ ಓಡುವುದು. ಅಲ್ಲಿಂದ ಮತ್ತೆ ಹಿಂದಕ್ಕೆ ಬರುವುದು. ಹೀಗೆ ಚೆಲ್ಲಾಟ ಆಡುತ್ತ ಒಂದು ಕಡೆ ನೆಲದ ಮೇಲೆ ಮಲಗುವುದು. ಆಶ್ರಮದ ಬಾಗಿಲಿನವರೆಗೂ ಓಡಿ ಬರುವುದು. ಅಲ್ಲಿಂದ ತಟ್ಟನೆ ಹಿಂದಿರುಗಿ ಉಳಿದ ಜಿಂಕೆಗಳ ಗುಂಪನ್ನು ಸೇರುವುದು. ಸ್ವಲ್ಪ ದೂರ ಆ ಗುಂಪಿನಲ್ಲಿ ಹೋಗಿ ಮತ್ತೆ ಆಶ್ರಮದ ಬಾಗಿಲಿಗೆ

ಓಡಿಬರುವುದು. ಇಲ್ಲಿ ಚಕ್ರಾಕಾರ ಆಗಿ ತಿರುಗುವುದು. ಏನು ಆದರೂ ಮಾಡಿ ಸೀತೆಯ ಗಮನವನ್ನು ಸೆಳೆಯಬೇಕು.

ಕಾಡಿನಲ್ಲಿ ಇದ್ದ ಉಳಿದ ಜಿಂಕೆಗಳು ಎಲ್ಲಾ ಮಾರೀಚ ಮೃಗವನ್ನು ಮೂಸಿ ನೋಡಿ ಬೆದರಿದವು. ಇದು ರಾಕ್ಷಸ ಮಾಯೆ ಎಂದು ಅವಕ್ಕೆ ತಿಳಿಯಿತೋ ಏನೋ. ಎಲ್ಲವೂ ದಿಕ್ಕುದಿಕ್ಕಿಗೆ ಓಡಿಹೋದವು. ಮಾರೀಚ ಜಿಂಕೆಗಳನ್ನು ಕೊಂದು ತಿನ್ನುವ ರೂಢಿ ಇದ್ದವನು. ಆದರೆ ತನ್ನ ಗುಟ್ಟು ರಟ್ಟು ಆಯಿತಲ್ಲ ಎಂದು ಸುಮ್ಮನೆ ಇದ್ದ. ಆ ಕಾಡುಜಿಂಕೆಗಳು ಬಂದು ತನ್ನನ್ನು ಮುಟ್ಟಿದಾಗಲೂ ಸುಮ್ಮನೆ ಇದ್ದ. ಕೊಲ್ಲಲಿಲ್ಲ.

ಹೂಗಳನ್ನು ಹರಿಯಲು ಸೀತೆ ಹೂಗಿಡಗಳ ಬಳಿಗೆ ಬಂದಳು. ಹೂ ಕುಯ್ಯುತ್ತ ಕುಯ್ಯುತ್ತ ಬೆಟ್ಟದಾವರೆ ಅಶೋಕ ಮಾವು ಮುಂತಾದ ಗಿಡಗಳ ಬಳಿಗೆ ಬಂದಳು. ಅರಣ್ಯವಾಸಕ್ಕೆ ತಕ್ಕವಳು ಅಲ್ಲ ಸೀತೆ. ಆದರೂ ಅರಣ್ಯ ವಾಸಿನಿ ಆಗಿ ಪ್ರಸನ್ನಮುಖದಿಂದ ಹೂ ಕುಯ್ಯುತ್ತ ಇದ್ದಳು. ಹಠಾತ್ತನೆ ಆಗ ಮಾಯಾಮೃಗ ಕಣ್ಣಿಗೆ ಬಿತ್ತು. ಮೈಗೆ ಮುತ್ತುರತ್ನ ಬಿಗಿದಂತೆ ಇದೆ. ಆಶ್ಚರ್ಯ ಆಯಿತು. ಕಣ್ಣು ಅರಳಿಸಿ ನೆಟ್ಟದೃಷ್ಟಿಯಿಂದ ಅದನ್ನೇ ನೋಡಿದಳು. ಆಕೆಯ ಅಂದದ ತುಟಿ ಬಿರಿದು ಬಿಳಿಯ ಹಲ್ಲಿನ ಸಾಲು ಕಂಡಿತು.

ಆ ಜಿಂಕೆಯ ಮೇಲೆ ವಿಶೇಷ ಪ್ರೀತಿ ಹುಟ್ಟಿತು. ಅದರ ಮೈಕೂದಲು ಬಣ್ಣಬಣ್ಣ ಆಗಿ ಹೊಳೆಹೊಳೆಯುತ್ತ ಇತ್ತು. ಸೀತೆ ತನ್ನನ್ನೇ ನೋಡುತ್ತ ಇದಾಳೆ ಎಂದು ಜಿಂಕೆಗೆ ತಿಳಿಯಿತು. ಆಕೆಗೆ ಮತ್ತೂ ಇಷ್ಟು ಆಸೆ ಹುಟ್ಟಿಸಲು ಚಿತ್ರವಿಚಿತ್ರ ಆಗಿ ತಿರುಗಾಡಿತು. ಅದರ ದೇಹಕಾಂತಿಯಿಂದ ವನವೆಲ್ಲಾ ಕಂಗೊಳಿಸಿತು. ಹಿಂದೆ ಎಂದೂ ಇಂಥ ಜಿಂಕೆಯನ್ನು ನವರತ್ನಮಯ ಮೃಗವನ್ನು ನೋಡಲಿಲ್ಲ. ಕೇಳಿ ಇರಲೂ ಇಲ್ಲ. ಆಕೆಗೆ ಪರಮಾಶ್ಚರ್ಯ. ಎಷ್ಟೋ ವಾತ್ಸಲ್ಯ.

೨

ಕಂದು ಕುಂದು ಇಲ್ಲದ ಮೈ, ಅಪರಂಜಿ ಚಿನ್ನದ ಮೈಬಣ್ಣ, ಚೆಲುವು ಆದ ನಿತಂಬಗಳ— ಸೀತೆ ಹೂ ಕುಯ್ಯುತ್ತ ಈ ವಿಲಕ್ಷಣ ಮೃಗವನ್ನು

ನೋಡಿದಳು. ಒಂದು ಪಕ್ಕ ಬಂಗಾರದ ಕಾಂತಿಯಿಂದ ಇನ್ನೊಂದು ಬೆಳ್ಳಿಯ ಹೊಳಪಿನಿಂದ ಹೊಳೆಯುತ್ತ ಇದೆ. ಪರಮಾಶ್ಚರ್ಯ, ಪರಮಾನಂದ. ಗಂಡನನ್ನೂ ಮೈದುನನನ್ನೂ ಕೂಗಿದಳು. ಆಯುಧಪಾಣಿಗಳು ಆಗಿ ಬನ್ನಿ ಇಲ್ಲಿಗೆ ಎಂದು ಸಂಭ್ರಮದಿಂದ ಕರೆದಳು.

ಪುರುಷವ್ಯಾಘ್ರರು ಅಣ್ಣತಮ್ಮಂದಿರು ಇಬ್ಬರೂ ಹಿಂದಿರುಗಿ ಬಂದರು. ಅತ್ತ ಇತ್ತ ನೋಡಿ ಕೊನೆಗೆ ಕಾಂಚನಮೃಗವನ್ನು ನೋಡಿದರು. ಅದನ್ನು ನೋಡಿದ ಕೂಡಲೇ ಲಕ್ಷ್ಮಣನಿಗೆ ಸಂದೇಹ. “ಅಣ್ಣ, ಇದು ಮಾಯಾಮೃಗ. ಆ ಮಾರೀಚ ರಾಕ್ಷಸನೇ ಇದು ಎನಿಸುತ್ತ ಇದೆ ನನಗೆ. ಆ ಮಾರೀಚ ಕಾಮರೂಪಿ. ಇಂಥ ರೂಪತಳೆದು ಮೋಸಮಾಡಿ ಬೇಟೆ ಆಡಲು ಕಾಡಿಗೆ ಬಂದ ರಾಜರು ಅನೇಕರನ್ನು ಕೊಂದು ತಿಂದು ಇದ್ದಾನೆ. ಅವನೇ ಇದು. ಆಕಾಶದಲ್ಲಿ ಗಳಿಗೆಗಳಿಗೆಗೂ ಬಗೆಬಗೆಯ ಕಾಂತಿಯನ್ನು ತೋರುತ್ತ ಥಳಥಳ ಹೊಳೆಯುವ ಗಂಧರ್ವನಗರದ ಹಾಗೇ ಇದರ ದೇಹಕಾಂತಿಯ ಹೊಳಪು. ಖಂಡಿತ ಇದು ಮಾಯಾಮೃಗವೇ. ಮುತ್ತುರತ್ನಗಳ ಚುಕ್ಕೆಯ ಜಿಂಕೆ ಇದುವರೆಗೆ ಸೃಷ್ಟಿಯಲ್ಲಿ ಇಲ್ಲ” ಎಂದ.

ಸೀತೆಗೆ ಆ ಮಾಯಾಮೃಗದ ಚರ್ಮದ ಆಸೆ ಆಗಿತ್ತು. ಲಕ್ಷ್ಮಣನ ಮಾತನ್ನು ತಡೆದಳು. ಮುಗುಳುನಗೆ ನಗುತ್ತ ಹೇಳಿದಳು: “ಆರ್ಯಪುತ್ರ, ಎಷ್ಟು ಮನೋಹರ ಈ ಜಿಂಕೆ. ನನಗೆ ಅದರ ಮೇಲೆ ಮನಸ್ಸು ಆಗಿದೆ. ಅದನ್ನು ನೀವು ಹಿಡಿದು ತನ್ನಿ ನನಗೆ. ನಮ್ಮ ಕ್ರೀಡೆಗೆ ಇರುತ್ತದೆ ಇದು. ನಮ್ಮ ಆಶ್ರಮದಲ್ಲಿ ಅನೇಕ ಪ್ರಾಣಿಗಳಿವೆ. ಸೃಮರ, ಚಮರಿ, ಬಗೆಬಗೆಯ ಜಿಂಕೆ, ಕರಡಿ ಕಪಿ ಕಿನ್ನರಮೃಗ ಎಲ್ಲವೂ ಇವೆ. ಆದರೆ ಇದಕ್ಕೆ ಸಮ ಅಲ್ಲ ಯಾವುದೂ. ಇದರ ದೇಹಕಾಂತಿ, ಇದರ ಶಾಂತಿ ಯಾವುದಕ್ಕೂ ಇಲ್ಲ. ಎಂಥ ವಿಚಿತ್ರ ದೇಹ. ರತ್ನದ ಮಚ್ಚೆ. ಇಂಥ ಜಿಂಕೆಯನ್ನು ನಾವು ಯಾವಾಗಲೂ ನೋಡಿಲ್ಲ. ಚಂದ್ರನ ಬೆಳುದಿಂಗಳಿನ ಹಾಗೆ ಈ ಅಡವಿಯಲ್ಲಿ ಎಲ್ಲಾ ಅದರ ಕಾಂತಿ ತುಂಬಿ ಇದೆ. ಅದರ ರೂಪೋ, ಅದರ ಹೊಳಪೋ, ಅದರ ಕಂಠದ ಇಂಪೋ, ಅದರ ಮೈಯೋ! ನನ್ನ ಮನಸ್ಸನ್ನು ಸೂರೆಗೊಂಡಿದೆ. ಅದನ್ನು ಜೀವಸಹಿತ ನೀವು ಹಿಡಿದುತಂದರೆ ಎಲ್ಲರಿಗೂ ಆಶ್ಚರ್ಯ ಆಗುತ್ತದೆ.” ವನವಾಸ ಮುಗಿದು ನಾವು ಹಿಂದಕ್ಕೆ ಹೋದಾಗ ನಮ್ಮ ಅಂತಃಪುರಕ್ಕೆ ಒಂದು ಭೂಷಣ.

"ಅದನ್ನು ನೋಡಿದರೆ ಅತ್ತೆಯರಿಗೂ ಭರತಶತ್ರುಘ್ನರಿಗೂ ಆಶ್ಚರ್ಯ ಆಗುತ್ತದೆ. ನಮಗೂ ಅತ್ಯಾನಂದ. ಪುರುಷೋತ್ತಮ, ಜೀವಸಹಿತ ಸಿಗದೆ ಇದ್ದರೂ ಚಿಂತೆ ಇಲ್ಲ. ಅದ್ಭುತ ಆದ ಅದರ ಚರ್ಮವನ್ನು ಆದರೂ ತನ್ನಿ. ಅದರ ಬಂಗಾರದ ಚರ್ಮವನ್ನು ತಂದುಕೊಟ್ಟರೆ ದರ್ಭಾಸನದ ಮೇಲೆ ಅದನ್ನು ಹಾಸಿ ನಿಮ್ಮನ್ನು ಉಪಾಸನೆ ಮಾಡುತ್ತೇನೆ. ನಾಥ, ಹೀಗೆ ತಮ್ಮ ಮನಸಿಗೆ ಬಂದದ್ದನ್ನು ತಂದುಕೊಡಲು ಪತಿಯನ್ನು ನಿರ್ಬಂಧಿಸಬಾರದು ಹೆಂಗಸು. ಗಂಡನಿಗೆ ಹೀಗೆ ತೊಂದರೆ ಕೊಡುವುದು ತಪ್ಪು. ಬಲ್ಲೆ. ಆದರೆ ಈ ಜಿಂಕೆಯ ಚರ್ಮ ನನಗೆ ಹುಚ್ಚು ಹಿಡಿಸಿದೆ. ಏನು ಮಾಡಲಿ?" ಎಂದಳು.

ಹೊನ್ನಿನ ಮೈಬಣ್ಣ, ಕೊಂಬಿನ ಇಂದ್ರನೀಲಮಣಿಕಾಂತಿ, ಬಾಲಸೂರ್ಯನ ದೇಹಕಾಂತಿ, ಗಗನಮಂಡಲದ ನಕ್ಷತ್ರಗಳಂಥ ಚುಕ್ಕೆಗಳು. ರಾಮನಿಗೂ ಆಶ್ಚರ್ಯ. ಆತನಿಗೆ ಅದರ ಮೇಲೆ ಮನಸ್ಸು ಹೋಯಿತು. ಸೀತಾದೇವಿಯೂ ಹುರಿದುಂಬಿಸಿದಳು. ಆ ಜಿಂಕೆಯನ್ನು ನೋಡಿದ. ಆಸೆ ಹುಟ್ಟಿತು.

"ಲಕ್ಷ್ಮಣ, ಈ ಜಿಂಕೆಯ ಮೇಲೆ ಸೀತೆಗೆ ಎಷ್ಟು ಆಸೆಯೋ ನೋಡು. ಇಂಥ ಚೆಲುವು ಆದ ಜಿಂಕೆ ನಮಗೆ ಬೇರೆಲ್ಲಿಯೂ ಸಿಗದು. ಇಂದ್ರನ ನಂದನ ವನದಲ್ಲಿ ಆಗಲಿ ಕುಬೇರನ ಚೈತ್ರರಥದಲ್ಲಿ ಆಗಲಿ ಸಿಗದು. ಭೂಲೋಕದಲ್ಲಿ ಅಂತೂ ಸಿಗುವುದು ಸಾಧ್ಯವೇ ಇಲ್ಲ. ಇದರ ಮೈಮೇಲಿನ ಕೂದಲನ್ನು ನೋಡು. ಹೇಗೆ ಹಾಸುಹೊಕ್ಕು ಇದ್ದಹಾಗೆ, ಹೆಣೆದ ಹಾಗೆ ಇದೆ! ಎಷ್ಟು ಮನೋಹರ ಮೈಮೇಲಿನ ಈ ಬಂಗಾರದ ಚುಕ್ಕೆ? ಅದು ನೋಡು, ಜಿಂಕೆ ಆಕಳಿಸಿದರೆ ಬೆಂಕಿಯ ಕುಡಿ ಹೊರಟ ಹಾಗೆ ಆ ನಾಲಗೆ! ಮೋಡಗಳಲ್ಲಿ ಮಿಂಚು ಹೊಳೆಯುವಂತೆ ನಿಗಿನಿಗಿ ಹೊಳೆಯುತ್ತ ಇದೆ. ಆ ಬಾಯಿ ಇಂದ್ರನೀಲಮಣಿಯ ಬಟ್ಟಲು! ಹೊಟ್ಟೆ ಶಂಖದ ಬಣ್ಣ, ಮುತ್ತಿನ ಬಣ್ಣ. ಇದರ ಅಂದಚೆಂದವನ್ನು ವರ್ಣಿಸಲು ಅಸದಳ. ರತ್ನದ ಚುಕ್ಕೆ, ಬಂಗಾರದ ಮೈ; ಇದು ದಿವ್ಯಮೃಗ. ಇದನ್ನು ನೋಡಿದರೆ ಯಾರಿಗೆ ತಾನೆ ಆಶ್ಚರ್ಯ ಆಗದು? ಯಾರಿಗೆ ತಾನೆ ಇದರ ಮೇಲೆ ಮನಸ್ಸು ಆಗದು?

"ರಾಜರು ಬೇಟೆ ಆಡಿ ಜಿಂಕೆಗಳನ್ನು ಕೊಲ್ಲುತ್ತಾರೆ. ತಮ್ಮ ಧನುರ್ವಿದ್ಯಾ ವಿನೋದಕ್ಕಾಗಿ, ಅದರ ಮಾಂಸಕ್ಕಾಗಿ ಕೊಲ್ಲುತ್ತಾರೆ. ಈ ಬೇಟೆಗಳಲ್ಲೇ ಕಾಡಿನಲ್ಲಿ ರತ್ನಗಳನ್ನೂ ವಜ್ರಗಳನ್ನೂ ಚಿನ್ನವನ್ನೂ ಬೇರೆಬೇರೆ ಧಾತುಗಳನ್ನೂ

ರಾಜರು ಸಂಪಾದಿಸುವುದು. ಶುಕ್ರನಿಗೆ ಮನಸಿನಲ್ಲಿ ತೋರಿದ ಧನ ಎಲ್ಲವೂ ಬೊಕ್ಕಸಕ್ಕೆ ಬಂದು ಬೀಳುತ್ತದೆಯಂತೆ. ಕಾಡಿನಲ್ಲಿ ಸಿಗುವ ಅಮೂಲ್ಯ ಧನರಾಶಿ ಎಲ್ಲವನ್ನೂ ರಾಜರು ಸಂಗ್ರಹಿಸುತ್ತಾರೆ. ಆದರಿಂದ ಅವರ ಬೊಕ್ಕಸ ತುಂಬಿ ಬೆಳೆಯುತ್ತದೆ.

"ಒಂದು ವಸ್ತುವನ್ನು ಬಯಸುತ್ತಾನೆ ಮನುಷ್ಯ. ಅದನ್ನು ಸಂಪಾದಿಸುವ ಪ್ರಯತ್ನವನ್ನು ಮಾಡುತ್ತಾನೆ. ಹಾಗೆ ಮಾಡುವಾಗ ಬೇರೆ ಯಾವ ವಿಷಯವನ್ನೂ ಆಲೋಚಿಸುವುದಿಲ್ಲ. ಅರ್ಥಶಾಸ್ತ್ರವೇತ್ತರು ಆ ವಸ್ತುವನ್ನು ಅರ್ಥ—ಬಯಸಿದ್ದು—ಎನ್ನುತ್ತಾರೆ. ಈ ಕಾಂಚನಮೃಗ ಅಂಥದು ಒಂದು ಬಯಸಿದ ವಸ್ತು. ನಾನು ಬಯಸಿದೇನೆ. ಇದರ ಚಿನ್ನದ ಚರ್ಮದ ಮೇಲೆ ನನ್ನ ಜೊತೆಯಲ್ಲಿ ಚಂದದ ನಡುವಿನ ಸೀತೆ ಕುಳಿತುಕೊಳ್ಳುತ್ತಾಳೆ. ಇದರ ಚರ್ಮಕ್ಕೆ ಯಾವುದೂ ಸಮ ಅಲ್ಲ. ಕಪ್ಪು ಬಣ್ಣದ ಗೆರೆಗಳ ಕದಲೀಮೃಗದ ಚರ್ಮ, ಕರಿ ಬಿಳಿ ಚುಕ್ಕೆಗಳ ಚಿಗರಿಯ ಚರ್ಮ, ಕುರಿಯ ಚರ್ಮ, ಮೇಕೆಯ ಚರ್ಮ, ಯಾವುದೂ ಇಷ್ಟು ಮೆದು ಅಲ್ಲ. ಈ ಸುಖಸ್ಪರ್ಶ ಅವಾವುದಕ್ಕೂ ಇಲ್ಲ. ಆಕಾಶದಲ್ಲಿ ಮೃಗಶೀರ್ಷ ನಕ್ಷತ್ರ, ಭೂಮಿಯಲ್ಲಿ ಈ ಕಾಂಚನಮೃಗ. ಇವು ಎರಡೇ ದಿವ್ಯಮೃಗಗಳು.

"ನೀನು ಹೇಳಿದ ಹಾಗೆ ಈ ಜಿಂಕೆ ಮಾರೀಚನ ಮಾಯೆಯೇ ಆದರೆ, ಇದನ್ನು ನಾನು ಖಂಡಿತ ಕೊಲ್ಲಲೇಬೇಕು. ಮಾರೀಚ ದುಷ್ಟ, ದಯಾಹೀನ. ಹಿಂದೆ ಹೀಗೇ ಮೃಗರೂಪ ಧರಿಸಿ ಎಷ್ಟೋ ಋಷಿಗಳನ್ನು ಕೊಂದು ತಿಂದು ಇದ್ದಾನೆ. ಬೇಟೆಗೆ ಎಂದು ಬಂದ ಅನೇಕ ರಾಜರನ್ನೂ ಕೊಂದು ಇದ್ದಾನೆ. ಲಕ್ಷ್ಮಣ, ಈ ಮಾರೀಚ ವಾತಾಪಿಯ ಹಾಗೆ. ವಾತಾಪಿ ತನ್ನ ಮಾಯೆಯಿಂದ ಮೇಕೆ ಆಗಿ ತಪಸ್ವಿಗಳ ಋಷಿಗಳ ಹೊಟ್ಟೆಯ ಒಳಕ್ಕೆ ಹೋಗಿ, ಅವರ ಹೊಟ್ಟೆಯನ್ನು ಸೀಳಿಕೊಂಡು ಹೊರಕ್ಕೆ ಬರುತ್ತ ಇದ್ದ. ಒಂದು ದಿನ ಮಾಂಸದ ಆಸೆಯಿಂದ ಅಗಸ್ತ್ಯ ಮಹರ್ಷಿಗಳ ಹೊಟ್ಟೆಯನ್ನೂ ಹೊಕ್ಕ. ಅವರ ಹೊಟ್ಟೆಯಿಂದ ಹೊರಕ್ಕೆ ಬರಲು ಎಂದಿನಂತೆ ಪ್ರಯತ್ನಿಸಿದಾಗ ಪೂಜ್ಯ ಅಗಸ್ತ್ಯರು ಮುಗುಳುನಗೆ ನಕ್ಕು 'ವಾತಾಪಿ, ಎಷ್ಟೋ ಜನ ತಪಸ್ವಿಗಳನ್ನು ನಿನ್ನ ಹೊಟ್ಟೆಗೆ ಸೇರಿಸಿದೆ ಇಷ್ಟು ದಿನ. ಈಗ ನೀನೇ ನನ್ನ ಹೊಟ್ಟೆಯಲ್ಲಿ ಸೇರಿಹೋದೆ' ಎಂದರು. ಆ ರಾಕ್ಷಸ ಹಾಗೆಯೇ ಜೀರ್ಣ ಆದ. ಅವನ ಪೀಡೆ ತಪ್ಪಿತು ಲೋಕಕ್ಕೆ.

"ಲಕ್ಷ್ಮಣ, ನಾನು ಧರ್ಮನಿರತ, ಜಿತೇಂದ್ರಿಯ. ನನಗೆ ಇದಿರು ಆದರೆ ಈ ರಾಕ್ಷಸನೂ ಆ ವಾತಾಪಿಯಂತೆ ಸಾಯಬೇಕಾದ್ದೇ. ತಮ್ಮ, ನೀನು ಬಿಲ್ಲುಬಾಣ ಹಿಡಿದು ಸನ್ನದ್ಧ ಆಗಿ ಈ ಸೀತೆಗೆ ಕಾವಲು ಆಗಿ ಇರು. ಈಗ ನಾವು ಏನು ಮಾಡಿದರೂ ಈಕೆಗೆ, ಈ ಸೀತೆಗೆ, ಆಗಿಯೇ ಅಲ್ಲವೆ? ಇವಳಿಗೆ ಈ ಜಿಂಕೆಯ ಚರ್ಮದ ಮೇಲೆ ಬಹಳ ಆಸೆ ಆಗಿದೆ. ಇನ್ನು ಈ ಜಿಂಕೆಯನ್ನು ಹಿಡಿದು ಆದರೂ ತರುತ್ತೇನೆ, ಕೊಂದು ಆದರೂ ತರುತ್ತೇನೆ. ನಾನು ಹೋಗಿ ಬರುತ್ತೇನೆ. ಬೇಗ ಬರುತ್ತೇನೆ. ನಾನು ಬರುವವರೆಗೂ ನೀನು ವ್ಯೆಮರೆಯದೆ ಇಲ್ಲೇ ಇರು. ಎಚ್ಚರಿಕೆಯಿಂದ ಇರು.

"ಈ ಜಟಾಯು ಮಹಾಸಮರ್ಥ, ಬಲಾಢ್ಯ, ಬುದ್ಧಿವಂತ. ಈತ ಇರುತ್ತಾನೆ ನಿನ್ನ ಸಹಾಯಕ್ಕೆ. ಬಹಳ ಎಚ್ಚರಿಕೆ ಇರಲಿ. ನಾಲ್ಕು ಕಡೆಗೂ ಗಮನ ಇರಲಿ. ಸುತ್ತಲೂ ಕಣ್ಣು ಇಟ್ಟು ನೋಡು. ಜೋಕೆ, ಜೋಕೆ, ಜೋಕೆ."

೩

ತಮ್ಮನಿಗೆ ಎಚ್ಚರಿಕೆ ಹೇಳಿದ ರಾಮ. ಚಿನ್ನದ ಹಿಡಿಯ ಕತ್ತಿಯನ್ನು ಸೊಂಟಕ್ಕೆ ಕಟ್ಟಿದ. ಎರಡು ಬತ್ತಳಿಕೆಗಳನ್ನೂ ಮೂರು ಗೆಣ್ಣುಗಳ ಬಿಲ್ಲನ್ನೂ ತೆಗೆದುಕೊಂಡ. ಆಶ್ರಮವನ್ನು ಬಿಟ್ಟು ಹೊರಟ.

ತನ್ನನ್ನು ಬೆನ್ನಟ್ಟಿಬಂದ ರಾಮನನ್ನು ನೋಡಿದ ಮಾರೀಚ. ಭಯ ಆಯಿತು. ಆದರೆ ರಾಮನನ್ನು ವಂಚಿಸಬೇಕಲ್ಲ. ಎಲ್ಲೋ ಮರೆಯಲ್ಲಿ ಅವಿತು ಕೊಂಡ. ಥಟ್ಟನೆ ದೂರದಲ್ಲಿ ಕಣ್ಣಿಗೆ ಬಿದ್ದ. ರಾಮ ಆ ಜಿಂಕೆಯನ್ನು ಬೆನ್ನಟ್ಟಿ ಹೊರಟ. ಕೈಯಲ್ಲಿ ಬಿಲ್ಲು, ಸೊಂಟದಲ್ಲಿ ಕತ್ತಿ. ರಾಮ ಅದರ ಹತ್ತಿರಕ್ಕೆ ಓಡಿದ. ಆ ಜಿಂಕೆ ಮತ್ತೆ ಕಣ್ಮರೆ ಆಯಿತು. ಪುನಃ ಕಾಣಿಸಿ ಕೊಂಡಿತು. ಹಿಂತಿರುಗಿ ನೋಡಿ ರಾಮ ಬಾಣ ಬಿಡುತ್ತಾನೋ ಏನೋ ಎಂದು ಅಂಜಿ ಓಡಿಹೋಗುವಂತೆ ನಟಿಸಿತು. ಮಹಾ ಭಯದಿಂದ ಮುಗಿಲಿಗೆ ನೆಗೆಯಿತು. ಮೋಡದಲ್ಲಿ ಅವಿತುಕೊಂಡ ಚಂದ್ರನ ಹಾಗೆ ಆ ಕಾಡಿನಲ್ಲಿ ಎಲ್ಲಿಯೋ ಅಪಿತುಕೊಂಡು, ಎಲ್ಲಿಯೋ ಕಾಣಿಸಿಕೊಂಡು ಓಡತೊಡಗಿತು

ಜಿಂಕೆ. ಇನ್ನೇನು ಕೈಗೆ ಸಿಕ್ಕಿತು ಎಂಬಷ್ಟು ಹತ್ತಿರ ಬಂತು. ಹಿಡಿಯಲು ಕೈಚಾಚಿದ ಒಡನೆಯೆ ಟಣ್ಣನೆ ನೆಗೆದು ಎಲ್ಲಿಯೋ ಓಡಿಹೋಯಿತು.

ರಾಮ ಹಿಂದೆ ಹಿಂದೆ, ಮಾರೀಚ ಮುಂದೆ ಮುಂದೆ. ಓಡಿ ಓಡಿ ಸಾಕು ಆಯಿತು ರಾಮನಿಗೆ. ಆಶ್ರಮವನ್ನು ಬಿಟ್ಟು ಬಹಳ ದೂರ ಬಂದು ಇದ್ದ. ಬಳಲಿಕೆ. ಅಲ್ಲಿ ಒಂದು ಮರದ ಕೆಳಗೆ ಹಸಿರು ಹುಲ್ಲಿನ ಮೇಲೆ ದಣಿವು ಆರಿಸಿಕೊಳ್ಳಲು ಒಂದು ಗಳಿಗೆ ಕುಳಿತ. ಅಷ್ಟರಲ್ಲಿ ಕಾಡುಜಿಂಕೆಗಳ ಗುಂಪಿನಲ್ಲಿ ಹತ್ತಿರದಲ್ಲೇ ಕಾಣಿಸಿತು ಚಿನ್ನದ ಜಿಂಕೆ. ಅದನ್ನು ನೋಡಿ ಎದ್ದ ರಾಮ. ಅದನ್ನು ಹಿಡಿಯಲು ಹೋದ. ಜಿಂಕೆ ರಾಮನನ್ನು ನೋಡಿ ಅಂಜಿತು. ಅಂಜಿ ಕೈಗೆ ಸಿಕ್ಕದಂತೆ ಓಡಿಹೋಯಿತು. ಒಂದು ಅರೆಗಳಿಗೆ. ಮತ್ತೆ ಗಿಡದ ಪೊದೆಗಳ ಒಳಗಿನಿಂದ ಹೊರಗೆ ಬಂತು. ರಾಮನಿಗೆ ಅಸಾಧ್ಯ ಕೋಪ. ಜಿಂಕೆಯನ್ನು ಕೊಂದೇ ಬಿಡಬೇಕು ಎಂದು ನಿಶ್ಚಯಿಸಿದ.

ಶತ್ರುಸಂಹಾರಕ ಮಹಾಬಲಶಾಲಿ ರಾಮ ಒಂದು ಬಾಣ ಹೂಡಿದ. ಬ್ರಹ್ಮನಿರ್ಮಿತ ಅಸ್ತ್ರ ಅದು. ಸೂರ್ಯನಂತೆ ಉರಿಯುತ್ತ ಕಾಳಸರ್ಪದಂತೆ ಬುಸುಗುಟ್ಟುತ್ತ ಬಂತು. ಕಿವಿಯವರೆಗೂ ಸೆಳೆದುಬಿಟ್ಟ ರಾಮ. ಆ ಬಾಣ ಮಾರೀಚನ ಮಾಯಾವೇಷವನ್ನು ಭೇದಿಸಿತು. ಅದರ ಒಳಗಿನ ಮಾರೀಚ ಹೃದಯವನ್ನೂ ಭೇದಿಸಿತು. ಒಂದು ತಾಳೆಮರದ ಎತ್ತರಕ್ಕೆ ಹಾರಿ ಭಯಂಕರ ಆಗಿ ಚೀರಿ ನೆಲಕ್ಕೆ ಬಿದ್ದ ರಾಕ್ಷಸ. ಅವನ ಮಾಯಾರೂಪ ಹೋಗಿ ನಿಜ ರೂಪ ಬಂತು. ರಾವಣನ ಮಾತು ನೆನಪು ಆಯಿತು. ಸೀತೆ ಲಕ್ಷ್ಮಣನನ್ನು ಆಶ್ರಮದಿಂದ ಅಟ್ಟಬೇಕು, ಆಕೆ ಒಂಟಿ ಆಗಬೇಕು, ಆಗ ಆಕೆಯನ್ನು ಕದ್ದು ತರಲು ರಾವಣನಿಗೆ ಅನುಕೂಲ. ಇದಕ್ಕೆ ಏನು ಆದರೂ ಉಪಾಯ ಮಾಡಬೇಕು. ರಾಮನ ಹಾಗೇ ಕೂಗಿಕೊಂಡ. "ಹಾ ಲಕ್ಷ್ಮಣ, ಹಾ ಸೀತೆ!"

ರಾಮನ ಬಾಣ ಮರ್ಮಸ್ಥಾನಕ್ಕೆ ನಾಟಿತ್ತು. ಪ್ರಾಣ ಹೋಯಿತು. ಪ್ರಾಣ ಹೋಗುವಾಗ ಆ ಜಿಂಕೆ ಮತ್ತೆ ಮಾರೀಚ ಆಯಿತು. ಅವನ ಆ ದೊಡ್ಡ ದೇಹ, ವಿಚಿತ್ರ ಭುಜಕೀರ್ತಿ, ಚಿನ್ನದ ಹಾರಗಳು, ದಿವ್ಯಾಭರಣಗಳು, ದೊಡ್ಡ ಕೋರೆದಾಡೆಗಳು, ನೆತ್ತರಿನಿಂದ ತೊಯ್ದು ಮೈ—ಆ ರಾಕ್ಷಸನನ್ನು ನೋಡಿದ ರಾಮ. ಲಕ್ಷ್ಮಣ ಆಡಿದ ಮಾತು ನೆನಪಿಗೆ ಬಂತು.

'ಲಕ್ಷ್ಮಣ ಹೇಳಿದ—ಇದು ಮಾರೀಚನ ಮಾಯೆ. ನಿಜವೇ ಆಯಿತು ಅವನ ಮಾತು. ಎಂಥ ಮಾಯಾವಿ. ಸಾಯುವಾಗ ಹಾ ಲಕ್ಷ್ಮಣ, ಹಾ ಸೀತೆ ಎಂದು ಕೂಗಿಕೊಂಡ. ಗಟ್ಟಿ ಆಗಿ ಕೂಗಿದ. ಸೀತೆಗೆ ಕೇಳಿಸಿರಬೇಕು. ಕೇಳಿಸಿದರೆ ಸೀತೆಯ ಗತಿ ಏನೋ! ಲಕ್ಷ್ಮಣನ ಕಿವಿಗೆ ಬಿದ್ದರೆ ಈ ಮಾತು ಅವನು ಏನು ಮಾಡುವನೋ! ಏನು ಅವಸ್ಥೆಯೊ ಅವರಿಗೆ.' ಹೀಗೆ ನಾನಾ ಬಗೆಯ ಚಿಂತೆ ರಾಮನಿಗೆ. ಮೈ ನಿಮಿರು ಆಯಿತು. ಮನಸಿಗೆ ಗಾಬರಿ, ತೀವ್ರ ಭಯ.

ಸಾಯುವಾಗ ಮಾರೀಚ ಹಾಗೆ ಕೂಗಿದ. ಏನು ಅನರ್ಥವೋ ಇದರಿಂದ! ಬೇರೆ ಒಂದು ಜಿಂಕೆಯನ್ನು ಕೊಂದು ಅದರ ಮಾಂಸವನ್ನು ತೆಗೆದುಕೊಂಡು ಜನಸ್ಥಾನದ ಕಡೆ ಹೊರಟ ರಾಮ. ಬೇಗ ಬೇಗ ಕಾಲು ಹಾಕಿದ.

೪

ಗಂಡನ ಧ್ವನಿ ಅದು. ಬಹಳ ದೀನಧ್ವನಿ. ಏನು ಆಯಿತೋ ಏನೋ! "ಲಕ್ಷ್ಮಣ, ಹೋಗು. ನಿಮ್ಮ ಅಣ್ಣನ ಗತಿ ಏನು ಆಗಿದೆಯೋ ನೋಡಿ ಬಾ. ಈಗಲೇ ಹೋಗು. ನಿನಗೆ ಕೇಳಿಸಲಿಲ್ಲವೆ ಆ ಪರಮ ದೀನಧ್ವನಿ? ನನಗೆ ಕೇಳಿಸಿತಲ್ಲ ಈಗ. ಅದನ್ನು ಕೇಳಿದಾಗಿನಿಂದ ನನಗೆ ಮನಸು ಸ್ತಿಮಿತ ಆಗಿ ಇಲ್ಲ. ನನ್ನ ಜೀವ ನಿಲ್ಲುವ ಹಾಗೆ ಇಲ್ಲ. ಏನು ಅಪಾಯವೋ ಕಾಡಿನಲ್ಲಿ? ಹಾಗೆ ಕೂಗಿಕೊಂಡರು ನಿಮ್ಮ ಅಣ್ಣ. ಎತ್ತು ಒಂಟಿ ಆಗಿ ಸಿಂಹಗಳ ಕೈಗೆ ಸಿಕ್ಕಿದ ಹಾಗೆ ಒಂಟಿ ಆಗಿ ರಾಕ್ಷಸರ ನಡುವೆ ಸಿಕ್ಕಿಹಾಕಿಕೊಂಡರೋ ಏನೋ. ದಿಕ್ಕು ಇಲ್ಲದೆ ಗೋಳು ಇಡುತ್ತ ಇರುವ ನಿಮ್ಮ ಅಣ್ಣ ರಕ್ಷಣೆ ಬೇಡುತ್ತ ಇದಾರೆ. ಹೋಗು. ತಡಮಾಡಬೇಡ. ಬೇಗ ಹೋಗಿ ಅವರನ್ನು ಕಾಪಾಡು" ಎಂದಳು ಸೀತೆ.

ಜಾನಕಿ ಎಷ್ಟು ಒತ್ತಾಯಮಾಡಿದರೂ ಲಕ್ಷ್ಮಣ ಅಲ್ಲಿಂದ ಅಲ್ಲಾಡಲಿಲ್ಲ, ಅಣ್ಣನ ಅಪ್ಪಣೆಯನ್ನು ಮೀರುವಂತೆ ಇಲ್ಲ. ಲಕ್ಷ್ಮಣ ಅಲ್ಲಾಡದೆಯೆ ನಿಂತೇ ಇದ್ದುದನ್ನು ನೋಡಿ ಸೀತೆಗೆ ರೇಗಿತು. "ಸೌಮಿತ್ರಿ, ನಿಮ್ಮ ಅಣ್ಣನಿಗೆ ಅಂಥ

ದುರವಸ್ಥೆ ಒದಗಿಸುವಾಗ ನೀನು ಆತನ ಸಹಾಯಕ್ಕೆ ಹೋಗದೆ ಇಲ್ಲೇ ನಿಂತು ಇದೀಯಲ್ಲ. ನೀನು ನಿಜ ಆಗಿ ಮಿತ್ರನೋ ಶತ್ರುವೋ ನನಗೆ ಸಂದೇಹ.

"ಲಕ್ಷ್ಮಣ, ನಿನಗೆ ನನ್ನ ಮೇಲೆ ಆಸೆ. ಅದರಿಂದ ನಿಮ್ಮ ಅಣ್ಣ ಸಾಯಲಿ ಎಂದು ಕಾದು ಇದೀಯೆ. ಇಲ್ಲದೆ ಇದ್ದರೆ ಅಣ್ಣನಿಗೆ ಸಹಾಯ ಮಾಡಲು ಹೋಗುತ್ತ ಇರಲಿಲ್ಲವೆ? ಖಂಡಿತ, ನಿನಗೆ ನನ್ನ ಮೇಲೆ ಆಸೆ. ಸಂದೇಹ ಇಲ್ಲ. ಅಣ್ಣನಿಗೆ ಕಷ್ಟ ಬಂದರೆ ನಿನಗೆ ಸಂತೋಷ, ಅಲ್ಲವೆ? ಅಣ್ಣ ಎಂಬ ಪ್ರೀತಿ ಇಲ್ಲ ನಿನಗೆ. ಇದ್ದರೆ ಹೀಗೆ ಆ ತೇಜೋವಂತನ ಸಹಾಯಕ್ಕೆ ಹೋಗದೆ ಇಲ್ಲೇ ನಿಲ್ಲುತ್ತ ಇದ್ದೆಯಾ? ನಿನಗೆ ಅಣ್ಣನೇ ಮುಖ್ಯ, ಆತನಿಗೆ ಎಂದೇ ಕಾಡಿಗೆ ಬಂದೆ ಎಂಬುದು ನಿಜ ಆದರೆ ಅಣ್ಣನಿಗೆ ಪ್ರಾಣಸಂಕಟ ಬಂದು ಇರುವಾಗ ಇಲ್ಲಿ ಏಕೆ ಇರಬೇಕು ನೀನು? ನನ್ನನ್ನು ಕಾಪಾಡಬೇಕಾದ್ದೂ ಇಲ್ಲ, ನೀನು ಇಲ್ಲಿ ಇರಬೇಕಾದ್ದೂ ಇಲ್ಲ" ಎಂದಳು ಸೀತೆ. ಅವಳ ಕಣ್ಣಿನಿಂದ ನೀರಿನ ಧಾರೆ ಹರಿಯಿತು. ಬೆದರಿದ ಹೆಣ್ಣು ಜಿಂಕೆಯಂತೆ ತತ್ತರಿಸಿದಳು.

ಲಕ್ಷ್ಮಣ ಆಕೆಗೆ ಸಮಾಧಾನ ಹೇಳಿದ: "ವೈದೇಹಿ, ಭಯ ಏಕೆ? ಯಕ್ಷರಾಕ್ಷಸಗಂಧರ್ವನಾಗಕಿನ್ನರಕಿಂಪುರುಷರು ದೇವಮಾನವರು ಯಾರೂ ನಿನ್ನ ಗಂಡ ಶ್ರೀರಾಮನನ್ನು ಜಯಿಸಲಾರರು. ಸಂಶಯ ಏಕೆ? ನಿನ್ನ ಗಂಡ ರಾಮ ಬಲದಲ್ಲಿ ದೇವೇಂದ್ರನಿಗೆ ಸಮ. ಆತನಿಗೆ ಇದಿರು ನಿಲ್ಲಬಲ್ಲವರು ಈ ಲೋಕದಲ್ಲಿಯೆ ಇಲ್ಲ. ಆತನನ್ನು ಕೊಲ್ಲಬಲ್ಲವರು ಯಾರು? ನೀನು ಹೀಗೆ ಎಲ್ಲಾ ಮಾತು ಆಡಬಾರದು. ಮೂರು ಲೋಕದ ಮಹಾ ಬಲಾಢ್ಯರು ಎಲ್ಲರನ್ನೂ ಸೇರಿಸಿಕೊಂಡು ದೇವೇಂದ್ರನೇ ಸಮಸ್ತ ದೇವತೆಗಳನ್ನು ಕರೆ ತಂದರೂ ರಾಮನೊಡನೆ ಸೆಣಸಲಾರರು. ವ್ಯಥೆಪಡಬೇಡ, ದೇವಿ. ಚಿಂತಿಸ ಬೇಡ. ಧೈರ್ಯ ತಂದುಕೊ.

"ನಿನ್ನ ಗಂಡ ಬರುತ್ತಾನೆ ಬೇಗ. ಆ ಮೃಗವನ್ನು ಕೊಂದುತರುತ್ತಾನೆ. ನಮಗೆ ಕೇಳಿಬಂದ ಆ ದೀನಧ್ವನಿ ರಾಮನದು ಅಲ್ಲ. ಅದು ರಾಕ್ಷಸಮಾಯೆ. ರಾಮನ ಹಾಗೆ ಕೂಗಿದ ಧ್ವನಿ ಅದು. ಆ ಮಾರೀಚ ಬಲು ಮಾಯಾವಿ. ಅದು ಅವನ ಕೆಲಸವೇ.

"ಜಾನಕಿ, ರಾಮ ಇಲ್ಲದೆ ಇದ್ದಾಗ ನಿನ್ನನ್ನು ಒಂಟಿ ಆಗಿ ಬಿಟ್ಟು ನಾನು ಹೋಗಲಾರೆ. ಹೋಗಬೇಕಾದರೆ ರಾಮ ನನಗೆ ಏನು ಹೇಳಿದ? ನಾನು

ಬರುವವರೆಗೂ ನೀನು ಇಲ್ಲೇ ಇರು ಎನ್ನಲಿಲ್ಲವೆ? ಸೀತೆಗೆ ಕಾವಲು ಆಗಿರು ಎನ್ನಲಿಲ್ಲವೆ? ಅಣ್ಣ ಬಂದಮೇಲೆ ನಿನ್ನನ್ನು ಆತನಿಗೆ ಒಪ್ಪಿಸಬೇಕು ನಾನು. ನಿನ್ನನ್ನು ಒಬ್ಬಳನ್ನೇ ಬಿಟ್ಟು ನಾನು ಹೋಗಲಾರೆ. ಇಷ್ಟ ಇಲ್ಲ ನನಗೆ. ಈ ಜನಸ್ಥಾನದಲ್ಲಿ ಇದ್ದ ಖರನನ್ನೂ ಇತರ ರಾಕ್ಷಸರನ್ನೂ ಕೊಂದು ರಾಕ್ಷಸರ ವೈರವನ್ನು ಕಟ್ಟಿಕೊಂಡು ಇದೇವೆ. ಅವರಿಗೆ ಹಿಂಸೆ ಒಂದು ಆಟ. ನಮ್ಮನ್ನು ವಂಚಿಸಲು ಏನು ಬೇಕಾದರೂ ಮಾಡುತ್ತಾರೆ ಅವರು. ಬಗೆಬಗೆಯ ವೇಷ, ಬಗೆಬಗೆಯ ಮಾತು ಅವರದು. ಅದನ್ನು ನಾವು ಹಚ್ಚಿಕೊಳ್ಳಬಾರದು. ಈ ಭ್ರಾಂತಿ ಬೇಡ ನಿನಗೆ" ಎಂದು ಹೇಳಿದ.

ಲಕ್ಷ್ಮಣನ ಮಾತನ್ನು ಕೇಳಿ ಸೀತೆಗೆ ಸಿಟ್ಟು ನೆತ್ತಿಗೆ ಏರಿತು. ಆಕೆಯ ಕಣ್ಣು ಕೆಂಪು ಆದವು. ಲಕ್ಷ್ಮಣ ಹೇಳಿದ ಮಾತು ನಿಜ ಎಂದುಕೊಳ್ಳಲಿಲ್ಲ ಆಕೆ. ಬಹಳ ಕ್ರೂರ ಆಗಿ ಲಕ್ಷ್ಮಣನನ್ನು ದಂಡಿಸಿದಳು. ಅವನು ಹೇಳಿದುದು ನಿಜ ಎಂದು ಆಕೆಗೆ ತಿಳಿಯಲಿಲ್ಲ. "ಕುಲಗೇಡಿ, ದುರ್ಮಾರ್ಗ, ನಿರ್ದಯಿ ನೀನು. ನನ್ನ ಪತಿ ಇಂಥ ಮಹಾ ಕಷ್ಟಕ್ಕೆ ಸಿಕ್ಕಿದ್ದು ನಿನಗೆ ಇಷ್ಟ ಇದ್ದಂತೆ ಕಾಣುತ್ತದೆ. ಅಲ್ಲಿ ಆತ ಆಪತ್ತಿನಲ್ಲಿ ಮುಳುಗಿದ್ದರೂ ನೀನು ಹೀಗೆ ಹೇಳುತ್ತ ಇದೀಯಲ್ಲ. ನೀನು ಕಪಟಿ, ಪ್ರಚ್ಛನ್ನಶತ್ರು. ನಿನ್ನಂಥವನಿಗೆ ಕೆಟ್ಟ ಬುದ್ಧಿ ಹುಟ್ಟುವುದು ಏನು ಆಶ್ಚರ್ಯ? ನೀನು ನನಗಾಗಿ ಅಡವಿಗೆ ಬಂದೆ, ಅಣ್ಣನಿಗಾಗಿ ಅಲ್ಲ. ನೀನೇ ಬಂದೆಯೋ ಭರತನೇ ನಿನ್ನನ್ನು ಕಳಿಸಿದನೋ ಅಂತೂ ಒಬ್ಬನೇ ಆದ ನಿಮ್ಮ ಅಣ್ಣನ ಹಿಂದೆ ಬಂದು ಇದೀಯೆ.

"ಆದರೆ ನಿನಗೆ ಆಗಲಿ ಭರತನಿಗೆ ಆಗಲಿ ಅದು ಎಂದೂ ಸಿದ್ಧಿಸದು. ತಾವರೆಕಣ್ಣಿನ ಕನ್ನೈದಿಲೆ ಬಣ್ಣದ ಶ್ರೀರಾಮನ ಕೈಹಿಡಿದಮೇಲೆ ಇತರರನ್ನು ಕ್ಷುದ್ರರನ್ನು ನಾನು ಬಯಸುತ್ತೇನೆಯೆ? ಸೌಮಿತ್ರಿ, ನಿನ್ನ ಇದಿರಿಗೇ ನಾನು ಪ್ರಾಣಬಿಡುತ್ತೇನೆ. ರಾಮನನ್ನು ಬಿಟ್ಟು ಬೇರೆ ಯಾರ ಜೊತೆಯಲ್ಲೂ ಒಂದು ಗಳಿಗೆ ಆದರೂ ನಾನು ಈ ಭೂಮಿಯಲ್ಲಿ ಬದುಕುವುದು ಸಾಧ್ಯ ಇಲ್ಲ. ಸಂದೇಹ ಬೇಡ" ಎಂದಳು ಸೀತೆ.

ಲಕ್ಷ್ಮಣನಿಗೆ ರೋಮಾಂಚ ಆಯಿತು. ಮೈ ಎಲ್ಲಾ ನಡುಗಿತು. ಸೀತೆಯ ಮುಂದೆ ಕೈಜೋಡಿಸಿ ನಿಂತ. "ದೇವಿ, ಏನು ಹೇಳಲಿ ಉತ್ತರ ನಿನ್ನ ಮಾತಿಗೆ? ನನ್ನ ಪಾಲಿಗೆ ನೀನು ದೇವತೆ. ನೀನು ಹೀಗೆ ಅನುಚಿತ ಆದ ಮಾತುಗಳನ್ನು

ಆಡಿದುದು ಆಶ್ಚರ್ಯ ಅಲ್ಲ. ಹೆಂಗಸರ ಸ್ವಭಾವವೇ ಹಾಗೆ. ಎಲ್ಲ ಲೋಕಗಳಲ್ಲೂ ಹೀಗೇ. ಹೆಂಗಸರಮ ಬಲು ಚಪಲಚಿತ್ತ, ಕ್ರೂರಮನಸ್ಸು. ಧರ್ಮಕ್ಕೆ ತಪ್ಪಿನಡೆಯುತ್ತಾರೆ. ಪರಸ್ಪರ ವಿರೋಧವನ್ನು ತಂದು ಇಡುತ್ತಾರೆ.

"ಜಾನಕಿ, ಈಗ ನೀನು ಆಡಿದೆಯಲ್ಲ. ಈ ಮಾತು ಕಾದ ಕಬ್ಬಿಣದ ಸಲಾಕೆ. ನನ್ನ ಕಿವಿಗಳನ್ನು ಚುಚ್ಚಿದವು. ಇಂಥ ಕಠಿನ ಮಾತನ್ನು ನಾನು ಸಹಿಸಲಾರೆ. ನನ್ನ ಮಾತು ನ್ಯಾಯ. ನನಗೇ ನೀನು ಕಠಿನ ಅನ್ಯಾಯ ಆದ ಮಾತನ್ನು ಹೇಳಬಹುದೆ? ನಿನ್ನ ಮಾತಿಗೆ ಈ ವನದೇವತೆಗಳೇ ಸಾಕ್ಷಿ. ಅವರು ಎಲ್ಲವನ್ನೂ ಕೇಳಿದಾರೆ. ಅಣ್ಣನ ಮಾತಿಗೆ ಕಟ್ಟುಬಿದ್ದು ನಾನು ಇಲ್ಲಿ ನಿಂತು ಇದೇನೆ. ನೀನು ನನ್ನನ್ನು ಸಂದೇಹಪಡುತ್ತೀಯಲ್ಲ. ನೀನು ಹಾಳಾಗುತ್ತೀಯೆ. ಖಂಡಿತ. ಹೆಂಗಸರ ಸ್ವಭಾವವೇ ಕೆಟ್ಟದ್ದು. ವಿಶಾಲಾಕ್ಷಿ, ನಿನ್ನನ್ನು ಒಂಟಿ ಆಗಿಯೇ ಬಿಟ್ಟು ಈಗ ಹೋಗುತ್ತೇನೆ. ರಾಮನ ಬಳಿಗೆ ಹೋಗುತ್ತೇನೆ.

"ಏಕೋ ಬಹಳ ದುಶ್ಶಕುನ ಆಗುತ್ತಾ ಇದೆ. ಏನು ಆಗುತ್ತದೆಯೋ! ರಾಮನ ಸಂಗಡ ನಾನು ಇಲ್ಲಿಗೆ ಮರಳಿ ಬಂದಾಗ ನಿನ್ನನ್ನು ನೋಡುತ್ತೇನೋ ಇಲ್ಲವೋ. ಏನೋ ಸಂದೇಹ. ಈ ವನದೇವತೆಗಳೇ ನಿನಗೆ ರಕ್ಷೆ! ನಿನಗೆ ಮಂಗಳ ಆಗಲಿ" ಎಂದ.

ಸೀತೆಯ ಕೋಪ ದುಃಖ ತಗ್ಗಲಿಲ್ಲ. ಹೆಚ್ಚಿತು. ಬಿಕ್ಕಿಬಿಕ್ಕಿ ಅತ್ತಳು. ಕಣ್ಣೀರು ಧಾರೆಯಾಗಿ ಸುರಿಯುತ್ತ ಇತ್ತು. "ಲಕ್ಷ್ಮಣ, ರಾಮನನ್ನು ಅಗಲಿ ಒಂದು ಗಳಿಗೆಯೂ ನಾನು ಬದುಕಲಾರೆ. ಗೋದಾವರಿಯಲ್ಲಿ ಮುಳುಗಿ ಸಾಯುತ್ತೇನೆ. ಇಲ್ಲವೆ ನೇಣು ಹಾಕಿಕೊಳ್ಳುತ್ತೇನೆ. ಅಥವಾ ಎತ್ತರದಿಂದ ಕೆಳಕ್ಕೆ ಧುಮುಕುತ್ತೇನೆ. ಬೆಂಕಿಯಲ್ಲಿ ಬೀಳುತ್ತೇನೆ ಅಥವಾ ಘೋರ ವಿಷವನ್ನು ಕುಡಿಯುತ್ತೇನೆ. ರಾಮನನ್ನು ಬಿಟ್ಟು ಬೇರೆ ಗಂಡಸನ್ನು ಕಾಲಿನಿಂದ ಕೂಡ. ನಾನು ಮುಟ್ಟುವುದು ಇಲ್ಲ" ಎಂದಳು.

ಲಕ್ಷ್ಮಣನನ್ನು ಬೈದಳು. ಗೋಳು ಇಟ್ಟಳು. ದುಃಖದಿಂದ ತನ್ನ ಎರಡೂ ಕೈಗಳಿಂದ ಹೊಟ್ಟೆ ಬಡಿದುಕೊಂಡಳು. ಸುಕುಮಾರಿ ಸೀತೆ. ಬೆದರಿ ಗೋಳು ಇಡುತ್ತ ಇದಾಳೆ. ಲಕ್ಷ್ಮಣ ಬಗೆಬಗೆ ಆಗಿ ಸಮಾಧಾನ ಮಾಡಿದ. ಸೀತೆಗೆ ಸಮಾಧಾನ ಇಲ್ಲ. ಇದು ಎಲ್ಲಾ ಒಂದು ನೆಪ. ಲಕ್ಷ್ಮಣ ಸುಮ್ಮನೆ ಕಾಲ ಕಳೆಯುತ್ತ ಇದಾನೆ ಎಂದು ಅವಳ ಭಾವನೆ. ಒಂದು ಮಾತನ್ನೂ ಆಡಲಿಲ್ಲ.

ಲಕ್ಷ್ಮಣ ಸೀತೆಗೆ ಕೈಮುಗಿದ. ತಲೆಬಾಗಿದ. ನಮಸ್ಕರಿಸಿ ಅಲ್ಲಿಂದ ಹೊರಟ. ಹೆಜ್ಜೆ ಹೆಜ್ಜೆಗೂ ಹಿಂದಿರುಗಿ ನೋಡುತ್ತ ರಾಮನನ್ನು ಹುಡುಕಿಕೊಂಡು ಹೊರಟ.

೫

ಲಕ್ಷ್ಮಣನಿಗೆ ಸಿಟ್ಟೇ ಬಂತು ಸೀತೆಯ ಚುರುಕು ಮಾತನ್ನು ಕೇಳಿ. ಆಕೆಯನ್ನು ಒಬ್ಬಳನ್ನೇ ಅಲ್ಲಿ ಬಿಟ್ಟುಹೋಗುವುದು ಅವನಿಗೆ ಸ್ವಲ್ಪವೂ ಇಷ್ಟ ಇಲ್ಲ. ಆದರೂ ರಾಮನ ಬಳಿಗೆ ಹೊರಟ. ಬೇಗ ಬೇಗ ಹೆಜ್ಜೆ ಬೀಳಲಿಲ್ಲ. ಆದರೂ ಹೊರಟ.

ಮರೆ ಆಗಿ ನಿಂತು ಇಷ್ಟು ಹೊತ್ತೂ ಕಾದಿದ್ದ ರಾವಣನಿಗೆ ಇದು ಒಳ್ಳೆಯ ಸಮಯ. ಕೂಡಲೇ ಕಾವಿಬಟ್ಟೆ ಉಟ್ಟ, ಜಡೆ ಕಟ್ಟಿದ. ಕೊಡೆ ಹಿಡಿದ. ದಂಡಕಮಂಡಲುಗಳನ್ನು ತೆಗೆದುಕೊಂಡ. ಕಾಲಿಗೆ ಆವುಗೆ ಮೆಟ್ಟಿಕೊಂಡ. ಸನ್ಯಾಸಿಯ ವೇಷ ಪೂರಾ ಆಯಿತು.

ಸೀತೆಯ ಬಳಿಗೆ ಬಂದ.

ಸೂರ್ಯ ಮುಳುಗಿ ಚಂದ್ರ ಇನ್ನೂ ಮೂಡದ ಸಂಜೆಯ ಕತ್ತಲಿನಂತೆ ರಾಮಲಕ್ಷ್ಮಣರು ಇಬ್ಬರೂ ಇಲ್ಲದೆ ಸೀತೆ ಒಂಟಿ ಆಗಿ ಇದ್ದ ಆ ಸಮಯದಲ್ಲಿ ಆ ಮಹಾಬಲಾಢ್ಯ ಸೀತಾದೇವಿಯ ಬಳಿಗೆ ಹೋದ. ಚಂದ್ರನನ್ನು ಅಗಲಿದಾಗ ಕ್ರೂರ ಅಂಗಾರಕ ಗ್ರಹದ ದೃಷ್ಟಿ ರೋಹಿಣಿಯ ಮೇಲೆ ಬೀಳುವಂತೆ ರಾಮ ಇಲ್ಲದಾಗ ಅವನ ಹೆಂಡತಿ ಯಶಸ್ವಿನಿ ಸೀತೆಯ ಮೇಲೆ ರಾವಣ ಕಣ್ಣು ಹಾಕಿದ.

ಜನಸ್ಥಾನದ ಗಿಡಮರಗಳು ಎಲ್ಲಾ ಆ ಕ್ರೂರಕರ್ಮಿಯನ್ನು ನೋಡಿದ ಕೂಡಲೇ ಗಡಗಡ ನಡುಗಿದವು. ಆ ಉಗ್ರತೇಜನನ್ನು ಕಂಡು ಗಾಳಿ ಅಂಜಿ ಬೀಸದೆ ನಿಂತುಹೋಯಿತು. ಗೋದಾವರಿ ನದಿ ಬಲು ಬಿರುಸಾಗಿ ಓಡಬೇಕು. ಅಂಥ ನದಿಯೂ ಕೂಡ ರಾವಣ ಕೆಂಗಣ್ಣಿನಿಂದ ನೋಡುವುದನ್ನು ಕಂಡು ಅಂಜಿ ಮೆಲ್ಲಮೆಲ್ಲನೆ ಹರಿಯತೊಡಗಿತು.

ರಾಮ ಇಲ್ಲದ ಸಮಯವನ್ನೇ ಕಾಯುತ್ತ ಇದ್ದ ರಾವಣ. ಸನ್ಯಾಸಿ ವೇಷವನ್ನು ಧರಿಸಿ ಸೀತೆಯ ಬಳಿಗೆ ಬಂದ. ಶನಿಗ್ರಹ ಚಿತ್ರಾ ನಕ್ಷತ್ರವನ್ನು ಅಡ್ಡಗಟ್ಟುವಂತೆ ಅವಳ ಮುಂದೆ ಬಂದು ನಿಂತ. ಮೇಲೆ ಹುಲ್ಲು ಬೆಳೆದು ಆಳ ಗೊತ್ತು ಆಗದ ಹಾಳುಬಾವಿಯ ಹಾಗೆ ಮೇಲೆ ಶುಭರೂಪ ತೊಟ್ಟ ಆ ಪಾಪಿಷ್ಠ ರಾವಣ ವೈದೇಹಿಯನ್ನು ನೋಡುತ್ತ ನಿಂತ.

ಒಂಟಿ ಆಗಿ ಪರ್ಣಶಾಲೆಯಲ್ಲಿ ಕುಳಿತು ಇದ್ದಾಳೆ ಸೀತೆ. ಹುಣ್ಣಿಮೆಯ ಚಂದಿರನ ಮುಖ, ಮೊಲ್ಲೆಮೊಗ್ಗಿನ ಹಲ್ಲು, ತಾವರೆ ಎಸಳಿನ ಕಣ್ಣು, ತೊಂಡೆಯ ಹಣ್ಣಿನ ತುಟಿ, ಲೋಕಮೋಹಕ ರೂಪ ಆ ಮಂಗಳಾಂಗಿಯದು. ಹೊಂಬಣ್ಣದ ರೇಶಿಮೆ ಸೀರೆ ಉಟ್ಟು ದುಃಖದಲ್ಲಿ ಮುಳುಗಿ ಕುಳಿತು ಇದ್ದಾಳೆ. ಆಕೆಯನ್ನು ನೋಡಿ ಬ್ರಾಹ್ಮಣಸನ್ಯಾಸಿವೇಷದ ಆ ರಾಕ್ಷಸರಾಜ ರಾವಣ ಕಾಮಪರವಶ ಆದ. ವೇಷಕ್ಕೆ ತಕ್ಕಹಾಗೆ ವೇದಮಂತ್ರಗಳನ್ನು ಹೇಳುತ್ತ ಮುಂದೆ ಬಂದ.

ತಾವರೆಯನ್ನು ಅಗಲಿದ ಲಕ್ಷ್ಮಿಯ ಹಾಗೆ ಇದ್ದಾಳೆ ಈ ಲೋಕದ ಹೆಂಗಸರು ಎಲ್ಲರಿಗಿಂತಲೂ ಮೇಲು ಆದ ಆ ಸೀತೆ. ಆಕೆಯ ದೇಹಕಾಂತಿ ಆಶ್ರಮವನ್ನು ಎಲ್ಲಾ ಬೆಳಗುತ್ತ ಇದೆ. ಆಕೆಯನ್ನು ಮಾತು ಆಡಿಸಬೇಕಲ್ಲ. ಆಕೆಯನ್ನು ಅತಿ ವಿನಯದಿಂದ ಹೊಗಳಿದ ದುರುಳ ರಾವಣ.

"ಯಾರು ನೀನು? ಮೈಯ ಹೊಂಬಣ್ಣದ ಜೊತೆಗೆ ಬಂಗಾರದ ರೇಶಿಮೆ ಸೀರೆ ಉಟ್ಟು ಇದ್ದೀಯೆ. ಕಮಲದ ಕಣ್ಣು, ಕಮಲಮುಖ, ಕಮಲದ ಕೈ, ಕಮಲದ ಕಾಲು. ಕಮಲದ ಬಳ್ಳಿಯೇ ಆಗಿದ್ದೀಯಲ್ಲ; ನೀನು ಯಾರು? ಶುಭಾನನೆ, ನೀನು ಶ್ರೀದೇವಿಯೋ ಭೂದೇವಿಯೋ? ಕಾಂತಿದೇವತೆಯೋ ಕೀರ್ತಿದೇವತೆಯೋ? ಅಪ್ಸರೆಯೋ ಐಶ್ವರ್ಯದೇವತೆಯೋ ಅಥವಾ ಸ್ವಚ್ಛಂದ ಚಾರಿಣಿ ಆದ ರತಿದೇವಿಯೋ? ಹೇಳು. ಹೆಚ್ಚುಕಡಮೆ ಇಲ್ಲದೆ ಒಂದೇ ಸಮ ಆಗಿ ಕೊನೆಗೂಡಿ ನುಣ್ಣಗೆ ಬೆಳ್ಳಗೆ ಹೊಳೆಯುತ್ತ ಇದೆ ನಿನ್ನ ಹಲ್ಲುಗಳ ಸಾಲು. ಕರಿಯ ಕಣ್ಗೊಂಬೆ, ಕೆಂಪು ಕುಡಿ, ನಿರ್ಮಲ ವಿಶಾಲ ನೇತ್ರ ನಿನ್ನವು. ನಿನ್ನ ಜಘನ ವಿಸ್ತಾರ. ನಿನ್ನ ತೊಡೆಗಳು ಆನೆಯ ಸೊಂಡಿಲಿನಂತೆ ಇವೆ. ನಿನ್ನ ಸ್ತನಗಳು ಬಲಿತು ಗುಂಡಗೆ ಉಬ್ಬಿ ಬೆಳೆದು ಇವೆ. ಒಂದಕ್ಕೆ ಒಂದು ಸೇರುವಂತೆ

ಒತ್ತು ಆಗಿ ಗಟ್ಟಿ ಆಗಿ ತಾಳೆಹಣ್ಣಿನಂತೆ ಇವೆ. ನುಣುಪು ಆದ ಸ್ತನಗಳ ಮೇಲೆ ತೂಗುತ್ತ ಇರುವ ರತ್ನಹಾರದ ಭಾರಕ್ಕೆ ಜಗ್ಗಿ ಮನೋಹರ ಆಗಿ ಇದೆ.

"ಮಹಾವಿಲಾಸಿನಿ, ನಿನ್ನ ಮುಗುಳುನಗೆಯ ಸೊಗಸು, ನಿನ್ನ ಹಲ್ಲುಗಳ ಚೆಂದ, ನಿನ್ನ ಕಣ್ಣುಗಳ ಅಂದ, ನಿನ್ನ ಚೆಲುವು ನದಿಯ ಪ್ರವಾಹ ದಡಗಳನ್ನು ಕೊಚ್ಚುವಂತೆ ನನ್ನ ಮನಸ್ಸನ್ನು ಕೊರೆದುಬಿಟ್ಟಿದೆ. ನಿನ್ನ ಕೂದಲಿನ ಅಂದವೋ ಒಂದೇ ಹಿಡಿಯ ನಿನ್ನ ಸಣ್ಣ ನಡುವೋ! ಇಂಥ ರೂಪವನ್ನು ನಾನು ಎಲ್ಲೂ ನೋಡಿ ಇಲ್ಲ. ನಿನ್ನಂಥ ಸುಂದರಿಯನ್ನು ದೇವಗಂಧರ್ವಯಕ್ಷಕಿನ್ನರರಲ್ಲಿ ಯಾರಲ್ಲಿಯೂ ನಾನು ಕಂಡುದು ಇಲ್ಲ. ಅಸದೃಶ ರೂಪ, ಈ ಸೌಕುಮಾರ್ಯ, ನಿನ್ನ ಯೌವನ, ಈ ಮಹಾರಣ್ಯವಾಸ—ನನಗೆ ಹುಚ್ಚು ಹಿಡಿದಂತೆ ಆಗಿದೆ.

"ನೀನು ಈ ಗೊಂಡಾರಣ್ಯದಲ್ಲಿ ಇರಬೇಕಾದವಳು ಅಲ್ಲ. ಇದು ಕಾಮರೂಪಿಗಳು ಆದ ಭಯಂಕರ ರಾಕ್ಷಸರಿಗೆ ವಾಸಸ್ಥಾನ. ಇಂಥ ಸ್ಥಳದಲ್ಲಿ ಇರಬೇಕಾದವಳು ಅಲ್ಲ ನೀನು. ಸರ್ವಸಂಪನ್ನ ಆದ ಸುಗಂಧಯುಕ್ತ ರಮ್ಯ ಉಪವನಗಳಲ್ಲಿ ಉಪ್ಪರಿಗೆಗಳಲ್ಲಿರಬೇಕು. ಉತ್ತಮ ಹೂಗಳನ್ನು ಮುಡಿದು ಉತ್ತಮ ವಸ್ತ್ರಗಳನ್ನು ಧರಿಸಿ ಉತ್ತಮ ಮೃಷ್ಟಾನ್ನವನ್ನು ಭುಜಿಸಬೇಕು ನೀನು. ಅದೇ ರೀತಿ ಉತ್ತಮೋತ್ತಮ ಪತಿಯನ್ನು ಪಡೆಯಬೇಕು ನೀನು.

"ನಾರೀಮಣಿ, ನೀನು ಒಬ್ಬಳೇ ಏಕೆ ಇದೀಯೆ ಇಲ್ಲಿ? ದೇವತಾ ಸ್ತ್ರೀಯಂತೆ ಕಾಣುತ್ತ ಇದೀಯೆ. ನೀನು ಯಾರು? ಏಕಾದಶರುದ್ರರ ಸಂಬಂಧಿಯೆ? ಸಪ್ತಮರುತ್ತುಗಳವಳೆ? ಅಷ್ಟವಸುಗಳೆ ಆದಿತ್ಯರೆ, ಯಾರು ನಿನ್ನವರು? ಇದು ರಾಕ್ಷಸರ ಸೀಮೆ. ಇಲ್ಲಿಗೆ ಗಂಧರ್ವರು ದೇವತೆಗಳು ಕಿನ್ನರರು ಯಾರೂ ಬಾರರು. ನೀನು ಇಲ್ಲಿಗೆ ಹೇಗೆ ಬಂದೆ? ಈ ಕಾಡಿನಲ್ಲಿ ಕೋತಿ ಕರಡಿ ಚಿರತೆ ಹುಲಿ ಸಿಂಹ ರಣಹದ್ದು ಸ್ವೇಚ್ಛೆಯಿಂದ ತಿರುಗಾಡುತ್ತವೆ. ನಿನಗೆ ಅಂಜಿಕೆ ಇಲ್ಲವೆ? ಕೊಬ್ಬಿದ ಕಾಡು ಆನೆಗಳು ಭಯಂಕರ ಆಗಿ ಗೀಳು ಇಡುತ್ತ ಓಡಾಡುತ್ತ ಇವೆ. ನಿನಗೆ ಭಯ ಆಗದೆ? ಒಬ್ಬಳೇ ಇದೀಯಲ್ಲ ಧೈರ್ಯದಿಂದ

"ಭದ್ರೆ, ನೀನು ಯಾರು? ಯಾರವಳು? ಎಲ್ಲಿಂದ ಬಂದೆ? ಈ ಭಯಂಕರ ದಂಡಕಾರಣ್ಯದಲ್ಲಿ ನಿನಗೆ ಏನು ಕೆಲಸ? ಒಬ್ಬಳೇ ಏಕೆ ಇಲ್ಲಿ ಇದೀಯೆ?"

ರಾವಣ ಹೀಗೆ ಸೀತೆಯನ್ನು ಪ್ರಶಂಸೆ ಮಾಡಿದ. ಈ ಕಪಟಸನ್ಯಾಸಿ ನಿಜ ಆಗಿಯೂ ಸನ್ಯಾಸಿ ಎಂದು ತಿಳಿದಳು ಆಕೆ. ಅವನಿಗೆ ಸಮಸ್ತ ಅತಿಥಿಸತ್ಕಾರಗಳನ್ನೂ ಮಾಡಿದಳು. ಮಣೆ ಹಾಕಿದಳು. ಅರ್ಘ್ಯಪಾದ್ಯಗಳನ್ನು ಕೊಟ್ಟು ಅನ್ನ ಸಿದ್ಧ ಆಗಿದೆ ಎಂದಳು.

ಸೌಮ್ಯ ಆಗಿ ಕಂಡ ಆ ಕಪಟಸನ್ಯಾಸಿ ಅಪಾಯಕಾರಿ ಅಲ್ಲ ಎಂದು ತಿಳಿದಳು ಸೀತೆ. ಆಕೆಗೆ ತಿಳಿಯದು ಅವನ ಮೋಸ. ಬ್ರಾಹ್ಮಣ ಎಂದು ಆದರಿಸಿದಳು. "ಬ್ರಾಹ್ಮಣ, ಇದು ಪಾದ್ಯ. ಕಂದಮೂಲಫಲಗಳಿಂದ ಪಕ್ವಮಾಡಿದ ಪದಾರ್ಥ ಇದು. ತೃಪ್ತಿ ಆಗಿ ತಿನ್ನಬಹುದು" ಎಂದಳು.

ಮೈಥಿಲಿ ಹೀಗೆ ಆದರಿಸಿದರೆ ಆ ರಾವಣ ಅವಳನ್ನೇ ನೋಡುತ್ತ ಇದ್ದ. ಸಾವು ಅವನನ್ನು ಕರೆಯುತ್ತ ಇತ್ತು. ಆಕೆಯನ್ನು ಬಲಾತ್ಕಾರದಿಂದ ಎತ್ತಿ ಕೊಂಡು ಹೋಗಬೇಕು ಎಂದು ನಿಶ್ಚಯಿಸಿದ.

ರಾಮಲಕ್ಷ್ಮಣರು ಯಾವಾಗ ಬರುತ್ತಾರೋ ಎಂದು ಇದಿರು ನೋಡುತ್ತ ಇದ್ದಳು ಸೀತೆ. ಎಷ್ಟು ನೋಡಿದರೂ ಬರೀ ಗೊಂಡಾರಣ್ಯವೇ. ಮತ್ತೇನೂ ಕಾಣಲಿಲ್ಲ.

೬

ಸೀತೆಯನ್ನು ಮರುಳುಗೊಳಿಸಿ ಅಪಹರಿಸಬೇಕು ಎಂದು ರಾವಣ ಮಾತು ಆಡಿದ. ಅವನ ಸನ್ಯಾಸಿವೇಷವನ್ನು ನೋಡಿ, ಬ್ರಾಹ್ಮಣ ಅತಿಥಿ ಆಗಿ ಬಂದಾಗ ಉತ್ತರ ಹೇಳದೆ ಇದ್ದರೆ ಶಪಿಸಿದರೂ ಶಪಿಸಬಹುದು ಎಂದುಕೊಂಡಳು. ಒಂದು ಗಳಿಗೆ ಯೋಚಿಸಿ ಆಮೇಲೆ ಹೇಳಿದಳು.

"ಬ್ರಾಹ್ಮಣೋತ್ತಮ, ನಿನಗೆ ಮಂಗಳ ಆಗಲಿ. ನಾನು ಮಿಥಿಲಾಧಿಪತಿ ಮಹಾತ್ಮಾ ಜನಕರಾಯನ ಮಗಳು. ನನ್ನ ಹೆಸರು ಸೀತೆ. ನಾನು ರಾಮನ ಹೆಂಡತಿ. ಇಕ್ಷ್ವಾಕುವಂಶದ ಅರಮನೆಯಲ್ಲಿ ಹನ್ನೆರಡು ವರ್ಷ ಸಮಸ್ತ ಸುಖ ಭೋಗವನ್ನೂ ಅನುಭವಿಸಿದೆ. ನಾನು ಸಂಸಾರಕ್ಕೆ ಬಂದ ಹದಿಮೂರನೆ ವರ್ಷದಲ್ಲಿ ನಮ್ಮ ಮಾವನವರು ದಶರಥಮಹಾರಾಜರು ಮಂತ್ರಿಗಳನ್ನೂ ಸಾಮಂತರಾಜರನ್ನೂ ಸಭೆ ಸೇರಿಸಿದರು. ಅಲ್ಲಿ ಶ್ರೀರಾಮನಿಗೆ ಯುವರಾಜ

ಪಟ್ಟ ಕಟ್ಟುವ ವಿಷಯವನ್ನು ಆಲೋಚಿಸಿದರು. ಪಟ್ಟಾಭಿಷೇಕಕ್ಕೆ ಎಲ್ಲ ಸನ್ನಾಹವೂ ಆಯಿತು.

"ಆಗ ನಮ್ಮ ಅತ್ತೆಯರಲ್ಲಿ ಕಿರಿಯಳು ಆದ ಕೈಕೇಯಿ ತನ್ನ ಗಂಡ ದಶರಥರಾಜನನ್ನು ವರ ಕೇಳಿದಳು. ನಮ್ಮ ಮಾವ ರಾಜಶ್ರೇಷ್ಠ, ಸತ್ಯಸಂಧರು. ತಾನು ಹಿಂದೆ ಮಾಡಿದ್ದ ಉಪಕಾರವನ್ನು ನೆನಪು ಮಾಡಿಕೊಟ್ಟಳು ಕೈಕೇಯಿ. ಎಂದೋ ಕೊಟ್ಟಿದ್ದ ವರಗಳನ್ನು ಆಗ ಕೇಳಿದಳು. ತನ್ನ ಮಗ ಭರತನಿಗೆ ಪಟ್ಟ ಕಟ್ಟಬೇಕು, ರಾಮನನ್ನು ವನವಾಸಕ್ಕೆ ಕಳಿಸಬೇಕು—ಇವು ಆಕೆ ಕೇಳಿದ ವರ. ಅದನ್ನು ಸಲ್ಲಿಸದೆ ಇದ್ದರೆ ನಾನು ಅನ್ನ ನೀರು ಬಿಟ್ಟು ನಿದ್ದೆಮಾಡದೆ ಪ್ರಾಣವನ್ನೆ ಬಿಡುತ್ತೇನೆ ಎಂದು ಶಪಥಮಾಡಿದಳು. ಎಷ್ಟೋ ಹಣ, ಮುತ್ತು ರತ್ನ, ಒಡವೆ ವಸ್ತು ಕೊಡುತ್ತೇನೆ ಎಂದರೂ ಆಕೆ ತನ್ನ ಪಟ್ಟು ಬಿಡಲಿಲ್ಲ.

"ರಾಮನಿಗೆ ಆಗ ಇಪ್ಪತ್ತೈದೇ ವರ್ಷ. ನನಗೆ ಹದಿನೆಂಟು. ನನ್ನ ಗಂಡ ಮಹಾಗುಣವಂತ, ಸತ್ಯವಂತ, ಮಹಾಪರಿಶುದ್ಧ ಎಂದು ಹೆಸರಾಗಿದ್ದರು. ಸಮಸ್ತ ಪ್ರಾಣಿಕೋಟಿಗೂ ಹಿತವನ್ನು ಕೋರುವ ಆಜಾನುಬಾಹು, ವಿಶಾಲ ನೇತ್ರ. ಆದರೆ ಏನು ? ಕೈಕೇಯಿಯ ಮಾತು ಕೇಳಿ ಮಾವನವರು ನನ್ನ ಗಂಡನಿಗೆ ಪಟ್ಟಕಟ್ಟಲಿಲ್ಲ. ಪಟ್ಟಾಭಿಷೇಕಕ್ಕೆ ಎಂದು ತಂದೆಯ ಬಳಿಗೆ ಹೋದ ನನ್ನ ಗಂಡನಿಗೆ ತನ್ನ ಮಗ ಭರತ ನಿಷ್ಕಂಟಕ ಆಗಿ ರಾಜ್ಯ ಆಳಬೇಕು, ನೀನು ಹದಿನಾಲ್ಕುವರ್ಷ ವನವಾಸಕ್ಕೆ ಹೋಗಬೇಕು ಎಂದು ಮಹಾರಾಜನ ಅಪ್ಪಣೆ; ತಂದೆಯನ್ನು ಸತ್ಯವಂತ ಆಗುವಂತೆ ಮಾಡು ಎಂದು ಮಹಾರಾಜರ ಸಮಕ್ಷಮ ದಲ್ಲೇ ಹೇಳಿದಳು.

"ರಾಮನಿಗೆ ಭಯವೇ ಇಲ್ಲ. ಹಿಡಿದ ವ್ರತವನ್ನು ಬಿಡುವುದೂ ಇಲ್ಲ. ಬೇಡಿದವರಿಗೆ ಕೊಟ್ಟವರೇ ಹೊರತು ಕೈ ನೀಡಿದವರಲ್ಲ. ಎಂದೂ ಸುಳ್ಳು ಆಡಿದವರಲ್ಲ, ಸತ್ಯವ್ರತರು. ರಾಮನಿಗೆ ಯಾವಾಗಲೂ ಜೊತೆಯಾಗಿ ಇರುವ ತಮ್ಮ ಒಬ್ಬ ಇದಾನೆ, ಮಲತಾಯಿಯ ಮಗ. ಮಹಾಶೂರ. ಎಂತಹ ಶತ್ರುವನ್ನೂ ಹುಟ್ಟು ಅಡಗಿಸಬಲ್ಲ. ಪರಮಧಾರ್ಮಿಕ, ದೃಢವ್ರತ, ಬ್ರಹ್ಮಚಾರಿ. ಬಿಲ್ಲು ಹಿಡಿದು ಆತನೂ ಅಣ್ಣನನ್ನು ಹಿಂಬಾಲಿಸಿದ. ನಾನೂ ಬಂದೆ.

"ನನ್ನ ಗಂಡ ರಾಮ ಧರ್ಮ ತಪ್ಪಿ ನಡೆದದ್ದು ಇಲ್ಲ. ಜಿತೇಂದ್ರಿಯ. ಜಟಾಧಾರಿ ಆದ, ತಾಪಸವೇಷವನ್ನು ಧರಿಸಿದ. ನಾವು ಮೂವರೂ ಈ

ದಂಡಕಾರಣ್ಯಕ್ಕೆ ಬಂದೆವು. ಕೈಕೇಯಿಯ ದೆಸೆಯಿಂದ ರಾಜ್ಯಭ್ರಷ್ಟರು ಆದೆವು. ಇಲ್ಲಿ ನನ್ನ ಗಂಡನ ಪರಾಕ್ರಮವೇ ನನಗೆ ರಕ್ಷೆ.

"ಬ್ರಾಹ್ಮಣಶ್ರೇಷ್ಠ, ಸ್ವಲ್ಪ ಹೊತ್ತು ಇಲ್ಲಿ ಕೂತು ಆಯಾಸ ಪರಿಹಾರ ಮಾಡಿಕೊ. ನನ್ನ ಗಂಡ ಬೇಗನೆ ಬರುತ್ತಾರೆ. ನಾನಾಬಗೆಯ ಆಹಾರವನ್ನು ಪುಷ್ಕಲ ಆಗಿ ತರುತ್ತಾರೆ.

"ಪೂಜ್ಯ, ತಾವು ಯಾರು? ತಮ್ಮ ಕುಲಗೋತ್ರ ಏನು? ತಾವು ಒಂಟಿ ಆಗಿ ಈ ಅರಣ್ಯದಲ್ಲಿ ಏಕೆ ಸುತ್ತುತ್ತೀರಿ?" ಎಂದು ಸೀತೆ ಕೇಳಿದಳು.

ರಾವಣಾಸುರ ಒಡನೆಯೆ ಉತ್ತರ ಹೇಳಿದ. "ಈ ಮೂರು ಲೋಕಗಳಲ್ಲಿ ದೇವಗಂಧರ್ವಪನ್ನಗರು ಯಾರ ಹೆಸರು ಕೇಳಿದರೆ ಅಂಜಿ ನಡುಗುತ್ತಾರೆಯೋ ಆ ರಾವಣಾಸುರ ನಾನು. ನಾನೇ. ನಿನ್ನ ಮೈಯ ಬಂಗಾರದ ಬಣ್ಣ, ನಿನ್ನ ಹಳದಿ ರೇಶಿಮೆ ಸೀರೆಗಳಿಗೆ ನಾನು ಮನಸೋತೆ. ನಿನ್ನನ್ನು ನೋಡಿದಮೇಲೆ ನನ್ನ ಹೆಂಡಿರಮೇಲೆ ನನಗೆ ಮನಸ್ಸೇ ಇಲ್ಲ. ಎಲ್ಲ ಕಡೆಯಿಂದಲೂ ಉತ್ತಮೋತ್ತಮ ಸ್ತ್ರೀಯರನ್ನು ತಂದೆ ನಾನು. ನಿನ್ನ ಮುಂದೆ ಅವರು ಯಾರೂ ಅಲ್ಲ. ನೀನು ಅವರಿಗೆ ಎಲ್ಲರಿಗೂ ಹಿರಿಯಳು, ಪಟ್ಟದ ರಾಣಿ ಆಗು.

"ನನ್ನದು ಲಂಕಾಪಟ್ಟಣ. ಸಮುದ್ರದ ನಡುವೆ ತ್ರಿಕೂಟಪರ್ವತದ ಮೇಲೆ ಇದೆ. ಸಮುದ್ರವೇ ಅದರ ಕಂದಕ. ಅಲ್ಲಿ ಅನೇಕ ಉದ್ಯಾನವನಗಳು ಇವೆ. ಅಲ್ಲಿ ನಾವು ವಿಹರಿಸೋಣ. ನಿನಗೆ ಈ ವನವಾಸ ತಕ್ಕದ್ದು ಅಲ್ಲ. ಇದನ್ನು ಮರೆ. ನೀನು ನನ್ನ ಕೈಹಿಡಿದರೆ ನನ್ನ ಅಂತಃಪುರದ ಐದು ಸಾವಿರ ದಾಸಿಯರೂ ನಿನಗೆ ಸದಾ ಸೇವೆಮಾಡುತ್ತಾರೆ."

ಶುದ್ಧಾಂಗಿ ಸೀತೆಗೆ ಸಿಟ್ಟು ತಡೆಯಲು ಆಗಲಿಲ್ಲ. ರಾವಣನ ಮಾತನ್ನು ಎಳ್ಳಷ್ಟೂ ಲೆಕ್ಕಿಸದೆ ಹೇಳಿದಳು:

"ರಾಕ್ಷಸ, ನಾನು ಯಾರು ಗೊತ್ತೆ? ದೇವೇಂದ್ರನಿಗೆ ಸಾಟಿ ಆದ ರಾಮನ ಹೆಂಡತಿ. ಕದಲಿಸಲು ಆಗದ ಮಹಾ ಪರ್ವತ, ಗೊಂದಲಗೆಡಿಸಲು ಆಗದ ಮಹಾ ಸಮುದ್ರ ಶ್ರೀರಾಮ. ಸರ್ವಲಕ್ಷಣಸಂಪನ್ನ ವಿಶಾಲವಕ್ಷಸ್ಥಳ ಆಜಾನುಬಾಹು ಸತ್ಯಸಂಧ ಮಹಾಭಾಗ ಆತ. ನಡಿಗೆಯಲ್ಲಿ ಸಿಂಹಗಾಂಭೀರ್ಯ, ಪುರುಷರಲ್ಲಿ ಸಿಂಹ. ಜಿತೇಂದ್ರಿಯ, ಕೀರ್ತಿವಂತ, ಮಹಾತ್ಮ, ಪೂರ್ಣ

ಚಂದ್ರಾನನ ಆ ಶ್ರೀರಾಮ. ಅವರು ನನ್ನ ಪ್ರಾಣವಲ್ಲಭ. ಅವರ ನೆರಳಿನಂತೆ ಅನುಸರಿಸುತ್ತ ಇದೇನೆ. ಇದು ನನ್ನ ವ್ರತ.

"ನಾನು ಸಿಂಹಿಣಿ. ನೀನು ಚಿಲ್ಲರೆ ನರಿ. ನಿನಗೆ ನನ್ನ ಮೇಲೆ ಆಸೆಯೆ? ಸೂರ್ಯಕಿರಣಗಳನ್ನು ಹಿಡಿಯಬಲ್ಲವರು ಉಂಟೆ? ಆಗದ ಕೆಲಸ. ಸಾವು ಬಂದಾಗ ಬಂಗಾರದ ಗಿಡಗಳು ಕನಸಿನಲ್ಲಿ ಕಾಣುವಂತೆ ರಾಮನ ಧರ್ಮಪತ್ನಿಯ ಮೇಲೆ ನಿನ್ನ ಕಣ್ಣೆ? ನಿನಗೆ ಕೊನೆಗಾಲ. ಇಲ್ಲದಿದ್ದರೆ ಈ ವಿಪರೀತಬುದ್ಧಿಯೆ? ರಾಕ್ಷಸ, ಹಸಿದ ಸಿಂಹದ ಬಾಯಿಗೆ, ಕೋಪಗೊಂಡ ಕೃಷ್ಣಸರ್ಪದ ಬಾಯಿಗೆ ಕೈಹಾಕಿದೆಯಲ್ಲ. ಪರ್ವತಶ್ರೇಷ್ಠ ಮಂದರವನ್ನು ಎತ್ತಿಕೊಂಡು ಹೋಗಲು ಬಯಸುತ್ತೀಯ? ಕಾಲಕೂಟ ವಿಷವನ್ನು ಕುಡಿದು ಹಾಯಾಗಿ ಹೋಗ ಬಯಸುತ್ತೀಯಾ?

"ದುರುಳ ರಾಕ್ಷಸ, ರಾಮನ ಮಡದಿಯನ್ನು ಎತ್ತಿಕೊಂಡುಹೋಗುವುದು ಸೂಜಿಯಿಂದ ಕಣ್ಣನ್ನು ತೊಳೆದ ಹಾಗೆ. ಹರಿತ ಆದ ಕತ್ತಿಯ ಅಲಗನ್ನು ನೆಕ್ಕಿದ ಹಾಗೆ. ಕುತ್ತಿಗೆಗೆ ದೊಡ್ಡ ಕಲ್ಲು ಕಟ್ಟಿಕೊಂಡು ಯಾರೇ ಆದರೂ ಈಸುತ್ತಾರೆಯೆ? ಧಗಧಗ ಉರಿಯುವ ಬೆಂಕಿಯನ್ನು ಮೂಟೆಯಲ್ಲಿ ಕಟ್ಟಿ ಕೊಳ್ಳುತ್ತಾರೆಯೆ? ರಾಮನ ಪ್ರಿಯ ಭಾರ್ಯೆಯನ್ನು ಬಯಸಿ ಕೆಡುತ್ತೀಯೆ. ಸೂರ್ಯಚಂದ್ರರನ್ನು ಈ ಕೈಗಳಿಂದ ಹಿಡಿದುಕೊಳ್ಳಲು ಸಾಧ್ಯವೆ? ಉಕ್ಕಿನ ಮೊನೆಯ ಶೂಲಗಳ ಮೇಲೆ ನಡೆಯುವ ಈ ದುರ್ಬುದ್ಧಿ ನಿನಗೆ ಏಕೆ?

"ರಾಕ್ಷಸಾಧಮ, ಸಿಂಹಕ್ಕೂ ನರಿಗೂ, ನೀರಿನ ಬುಗ್ಗೆಗೂ ಮಹಾ ಸಮುದ್ರಕ್ಕೂ, ಬಂಗಾರಕ್ಕೂ ಸೀಸಕ್ಕೂ, ಗಂಧಕ್ಕೂ ಕೆಸರಿಗೂ ಎಷ್ಟು ಅಂತರ. ಮದ್ದಾನೆಗೂ ಮನೆಯ ಬೆಕ್ಕಿಗೂ, ಗರುಡನಿಗೂ ಕಾಗೆಗೂ, ನವಿಲಿಗೂ ನೀರು-ಕಾಗೆಗೂ, ಸಾರಸಪಕ್ಷಿಗೂ ಹದ್ದಿಗೂ ಎಷ್ಟು ಅಂತರವೋ ಶ್ರೀರಾಮನಿಗೂ ನಿನಗೂ ಅಷ್ಟು ಅಂತರ. ಶ್ರೀರಾಮನಿಗೆ ದೇವೇಂದ್ರನಿಗೆ ಸಮಾನ ಆದ ಪ್ರಭಾವ. ಕೈಯಲ್ಲಿ ಬಿಲ್ಲುಬಾಣ ಹಿಡಿದರೆ ಶ್ರೀರಾಮ, ನಿನ್ನ ಗತಿ ತುಪ್ಪ ಕುಡಿದ ನೊಣದ ಗತಿ. ನನ್ನನ್ನು ವಶಮಾಡಿಕೊಳ್ಳಲಾರೆ. ನಿನಗೆ ಸಾವು ಖಂಡಿತ" ಎಂದಳು.

ಮಾತು ಆಡಿದ್ದು ದಿಟ್ಟತನದಿಂದಲೇ ಆದರೂ ಸೀತಾದೇವಿ ಗಡಗಡ ನಡುಗುತ್ತ ಇದ್ದಳು. ಗಾಳಿಯು ಹೊಡೆತಕ್ಕೆ ಬಾಳೆಯ ಗಿಡ ಬಳುಕುವಂತೆ

ನಡುಗಿದಳು. ಮನಸಿನಲ್ಲಿ ಪೂರಾ ಭಯ. ಆಕೆಯ ಭಯವನ್ನು ಕಂಡು ಮೃತ್ಯುಸಮ ಪ್ರಭಾವದ ಆ ರಾವಣಾಸುರ ಮತ್ತಷ್ಟು ಬೆದರಿಸಿದ.

೭

ಬಹಳ ಕೋಪ ಬಂತು ರಾವಣಾಸುರನಿಗೆ. ಹುಬ್ಬುಗಂಟು ಹಾಕಿದ. ಬಹಳ ಕಠಿನ ಆಗಿ ಮಾತು ಆಡಿದ. "ಸೊಗಸಿನ ಬಣ್ಣದ ಹೆಣ್ಣೆ, ನಾನು ಯಾರು ಗೊತ್ತೆ? ಕುಬೇರನ ತಮ್ಮ. ಅವನ ಮಲತಾಯಿಯ ಮಗ ರಾವಣ. ನನಗೆ ಹತ್ತು ತಲೆ. ಮಹಾ ಪರಾಕ್ರಮಶಾಲಿ ನಾನು. ನನ್ನನ್ನು ನೋಡಿದರೆ ಸಾಕು, ದೇವಗಂಧರ್ವಪಿಶಾಚಪನ್ನಗರು ಸಾವನ್ನು ಕಂಡ ಪ್ರಾಣಿಗಳ ಹಾಗೆ ಬೆದರಿ ಬೆಂಡಾಗಿ ಪಲಾಯನ ಮಾಡುತ್ತಾರೆ. ಒಂದು ಸಲ ಕಾರಣಾಂತರ ದಿಂದ ನನಗೂ ಕುಬೇರನಿಗೂ ಯುದ್ಧ ಆಯಿತು. ನಾನು ಗೆದ್ದೆ. ಕುಬೇರ ಅಂಜಿ ತನ್ನ ಸಕಲೈಶ್ವರ್ಯವನ್ನೂ ಲಂಕಾಪಟ್ಟಣವನ್ನೂ ಬಿಟ್ಟು ಓಡಿಹೋದ. ಕೈಲಾಸಪರ್ವತದಲ್ಲಿ ಇದಾನೆ ಈಗ. ಅವನದೇ ಪುಷ್ಪಕ ವಿಮಾನ. ಈ ವಿಮಾನ ಬಯಸಿದ ಕಡೆಗೆ ಹೋಗುತ್ತದೆ. ಆಕಾಶದಲ್ಲಿ ಹೋಗುತ್ತದೆ. ನನ್ನ ಪರಾಕ್ರಮದಿಂದ ಸಂಪಾದಿಸಿದೇನೆ.

"ಸೀತೆ, ನನಗೆ ಕೋಪ ಬಂದರೆ ದೇವೇಂದ್ರನೂ ದೇವತೆಗಳೂ ನನ್ನ ಮುಖವನ್ನು ನೋಡಲಾರದೆ ಓಡಿಹೋಗುತ್ತಾರೆ. ಅಷ್ಟು ಭಯ. ನಾನು ಇದ್ದ ಕಡೆ ಗಾಳಿ ಮೆಲ್ಲಮೆಲ್ಲನೆ ಬೀಸುತ್ತದೆ. ಉರಿವ ಸೂರ್ಯನ ಕಿರಣಗಳೂ ತಂಪು ಆಗಿ ಬರುತ್ತವೆ. ನಾನು ನಿಂತಲ್ಲಿ ಮರದ ಎಲೆ ಅಲ್ಲಾಡದು, ಹೊಳೆ ವೇಗದಿಂದ ಹರಿಯದು. ಸಮುದ್ರದ ಅತ್ತ ಕಡೆ ಇದೆ ನನ್ನ ಲಂಕಾಪಟ್ಟಣ. ದೇವೇಂದ್ರನ ಅಮರಾವತಿಯ ಹಾಗೆ ಶೋಭಿಸುತ್ತದೆ. ಊರಿನ ಸುತ್ತಲೂ ಬೆಳ್ಳಗೆ ಹೊಳೆಯುವ ಕೋಟೆ. ಊರಿನ ತುಂಬಾ ಬಂಗಾರದ ಉಪ್ಪರಿಗೆಗಳು. ರಾಕ್ಷಸರಿಗೆ ನೆಲೆ ಲಂಕೆ. ಊರುಬಾಗಿಲು ವೈಡೂರ್ಯಗಳಿಂದ ಅಲಂಕೃತ. ರಥಗಜತುರಗಗಳು ಕಿಕ್ಕಿರಿದು ತುಂಬಿವೆ ಊರಿನಲ್ಲಿ. ಯಾವಾಗಲೂ ಭೇರೀ ನಾದ ಕೇಳಿಬರುತ್ತದೆ. ಲಂಕೆಯ ಉದ್ಯಾನಗಳಲ್ಲಿ ಎಲ್ಲ ಕಾಲದಲ್ಲೂ ಕಾಯಿ ಬಿಡುವ ಗಿಡ ಇವೆ. ಎಂಥ ಚೆಲುವು ಆ ವನಗಳದು!

“ರಾಜಕುಮಾರಿ, ನಿನ್ನ ಮನಸ್ಸು ಒಳ್ಳೆಯದು. ಆ ಲಂಕಾಪಟ್ಟಣಕ್ಕೆ ಬಂದು ನನ್ನ ಜೊತೆಯಲ್ಲಿ ಇರು. ಒಂದೇ ಗಳಿಗೆ. ಆಮೇಲೆ ಈ ಮನುಷ್ಯ-ಭೋಗ ಕಸಕ್ಕಿಂತಲೂ ಕಡೆ ಆಗುತ್ತದೆ. ಆ ದಿವ್ಯ ಭೋಗಗಳನ್ನು ನನ್ನ ಜೊತೆಯಲ್ಲಿ ಅನುಭವಿಸಿದರೆ ಕನಸುಮನಸಿನಲ್ಲೂ ರಾಮನ ನೆನಪು ಆಗದು ನಿನಗೆ. ರಾಮ ಹಿರಿಯ ಮಗ ಆದರೂ ಅವನನ್ನು ಕಾಡಿಗೆ ಅಟ್ಟಿ ತನ್ನ ಪ್ರಿಯಪುತ್ರನಿಗೆ ಪಟ್ಟಕಟ್ಟಲಿಲ್ಲವೆ ದಶರಥರಾಜ? ಏಕೆ? ರಾಮ ಪರಾಕ್ರಮ ಹೀನ. ಅವನು ಬುದ್ಧಿಹೀನ, ರಾಜ್ಯಭ್ರಷ್ಟ. ತಾಪಸವೇಷ ಧರಿಸಿ ಕಾಡಿನಲ್ಲಿ ಅಲೆಯುತ್ತ ಇದಾನೆ. ಅವನಿಂದ ಏನು ಸುಖ ಆದೀತು?

“ವಿಶಾಲಾಕ್ಷಿ, ವರವರ್ಣಿನಿ, ನಿನ್ನ ಭಾಗ್ಯವೇ ನಿನ್ನನ್ನು ಇಲ್ಲಿಗೆ ಕರೆ ತಂದಿತು. ನಾನು ಸಮಸ್ತ ರಾಕ್ಷಸಕುಲಕ್ಕೂ ಒಡೆಯ. ಕಾಮಪರವಶ ಆಗಿ ನಾನೇ ನಿನ್ನ ಬಳಿಗೆ ಬಂದೆ. ನನ್ನನ್ನು ತಿರಸ್ಕರಿಸಬೇಡ. ಭೀರು, ಒಂದು ವೇಳೆ ನೀನು ಈಗ ತಿರಸ್ಕರಿಸಿದರೂ ಮುಂದೆ ಪಶ್ಚಾತ್ತಾಪ ಪಡುತ್ತೀಯೆ. ತನ್ನ ಕಾಲಿಗೆ ಬಿದ್ದು ಬೇಡಿದ ಪುರೂರವನನ್ನು ಮೊದಲು ಕಾಲಿನಿಂದ ಒದೆದು ತಿರಸ್ಕರಿಸಿ ಆಮೇಲೆ ಪಶ್ಚಾತ್ತಾಪಗೊಂಡಳಲ್ಲ ಊರ್ವಶಿ, ಹಾಗೆ. ಆ ರಾಮ ಮನುಷ್ಯ ಮಾತ್ರ. ಯುದ್ಧಕ್ಕೆ ನಿಂತರೆ ಒಂದು ಕಿರುಬೆರಳಿಗೂ ಸಮ ಅಲ್ಲ. ನಾನು ನಿನ್ನನ್ನು ಬಯಸಿಬಂದದ್ದು ನಿನ್ನ ಭಾಗ್ಯ. ನನ್ನನ್ನು ಒಪ್ಪಿಕೊ” ಎಂದ.

ಸೀತೆಯ ಕಣ್ಣು ಕೆಂಪು ಅಡರಿದವು. ಬಹಳ ಸಿಟ್ಟುಬಂತು. ಏಕಾಂತ ಸ್ಥಳ. ನಿರ್ಜನಪ್ರದೇಶ, ಏಕಾಕಿನಿ, ಯಾರೂ ಇಲ್ಲ. ಆದರೂ ನಿರ್ಭಯದಿಂದಲೇ ಹೇಳಿದಳು. “ರಾಕ್ಷಸ, ಸರ್ವಲೋಕಪೂಜ್ಯ ಕುಬೇರನ ತಮ್ಮ ಎಂದು ಹೇಳಿ ಕೊಳ್ಳುತ್ತೀ. ಆದರೂ ಇಂಥ ಪಾಪಕಾರ್ಯಮಾಡಲು ಬಯಸುತ್ತೀಯಲ್ಲ. ರಾವಣ, ನೀನು ಕ್ರೂರ, ಬುದ್ಧಿಗೇಡಿ, ಇಂದ್ರಿಯಲೋಲ. ನೀನು ನಾಶ ಆಗುವುದು ಖಂಡಿತ. ನಿನ್ನ ಜೊತೆಯಲ್ಲಿ ನಿನ್ನ ಪ್ರಜೆ ಎಲ್ಲರೂ, ಸಮಸ್ತ ರಾಕ್ಷಸರೂ, ನಾಶ ಆಗುತ್ತಾರೆ. ಇಂದ್ರನ ಹೆಂಡತಿ ಶಚೀದೇವಿಯನ್ನು ಅಪಹರಿಸಿ ದರೂ ಬದುಕಬಹುದೇನೋ, ರಾಮನ ಧರ್ಮಪತ್ನಿಯನ್ನು ಕೆಣಕಿ ಬದುಕಲಾರೆ. ಅಮೃತವನ್ನೆ ಕುಡಿದು ಇದ್ದರೂ ನೀನು ಬದುಕಲಾರೆ.”

೮

ಸೀತೆಯ ಬಿರುನುಡಿಯನ್ನು ಕೇಳಿ ರಾವಣನಿಗೆ ಕೋಪ ಉಕ್ಕಿಬಂತು. ಚಪ್ಪಾಳೆ ಹೊಡೆದ. ಕೂಡಲೇ ಮಹಾಕಾಯ ಆದ. ರಾವಣನ ನಿಜರೂಪ ಪ್ರಕಟ ಆಯಿತು.

ರಾವಣನ ಸನ್ಯಾಸಿವೇಷ ಹೋಯಿತು. ಪ್ರಳಯಕಾಲದ ಯಮನ ಹಾಗೆ ಕಂಡ. ಹತ್ತು ತಲೆ, ಇಪ್ಪತ್ತು ಕಣ್ಣು. ಕಣ್ಣು ಸೂರ್ಯನ ಹಾಗೆ ಉರಿಯುತ್ತ ಬೆಂಕಿಯ ಕಿಡಿ ಕಾರುತ್ತ ಇದ್ದವು. ಕಣ್ಣಿನ ಕುಡಿಗಳಲ್ಲಿ ಗೋರೋಚನದ ಬಣ್ಣ ಕಾಣಿಸಿತು. ಫಳಫಳ ಹೊಳೆಯುವ ನೀಲಮೇಘದಂಥ ಮೈ. ಥಳಥಳ ಹೊಳೆಯುವ ಬೆಂಕಿಯಂತೆ ಬೆಳಗುವ ಬಂಗಾರದ ಕಡುಕು. ಕಣ್ಣುಗಳಲ್ಲಿ ಉರಿ. ಮೈಮೇಲೆ ಕೆಂಪು ವಸ್ತ್ರ. ಕೈಯಲ್ಲಿ ಬಿಲ್ಲುಬಾಣ.

“ಸೀತೆ, ನಿನಗೆ ಹುಚ್ಚು. ನನ್ನ ಪರಾಕ್ರಮ ನಿನಗೆ ಅರ್ಥ ಆಗಿಲ್ಲ. ನೀನು ಕೇಳಲೇ ಇಲ್ಲ. ಆಕಾಶದಲ್ಲಿ ನಿಂತು ಈ ಭೂಮಿಯನ್ನು ಎರಡು ಕೈಯಿಂದ ಎತ್ತಿ ಬಿಸಾಡಬಲ್ಲೆ ನಾನು. ಇಡೀ ಸಮುದ್ರದ ನೀರನ್ನು ಒಂದೇ ಗುಟುಕಿನಲ್ಲಿ ಕುಡಿಯಬಲ್ಲೆ. ಮೃತ್ಯುದೇವತೆಯೇ ಇದಿರು ಆದರೂ ರಣರಂಗ ದಲ್ಲಿ ಕೊಲ್ಲಬಲ್ಲೆ. ಚೂಪು ಬಾಣಗಳಿಂದ ಸೂರ್ಯನನ್ನೂ ತಡೆಯಬಲ್ಲೆ. ಭೂಮಿಯನ್ನು ಸೀಳಬಲ್ಲೆ” ಎನ್ನುತ್ತ ರಾವಣ ಸೀತೆಯನ್ನು ನೋಡುತ್ತ ನಿಂತ.

ಮೈಯ ಹೊಂಬಣ್ಣ, ಉಟ್ಟ ಹೊಂಬಣ್ಣದ ಸೀರೆ, ತುದಿಯವರೆಗೂ ಕಪ್ಪು ಆದ ಕೂದಲು, ಮೈತುಂಬಾ ದಿವ್ಯಾಭರಣ. ಸೀತೆ ಸೂರ್ಯಕಾಂತಿ ಯಂತೆ ಕಣ್ಣುಕೋರೈಸುತ್ತ ಇದ್ದಳು. ಅವಳನ್ನು ನೋಡಿ ರಾವಣ ಹೇಳಿದ : “ಮೂರು ಲೋಕಗಳಲ್ಲೂ ಪ್ರಸಿದ್ಧ ಆದ ಗಂಡ ದೊರೆತರೆ ನೀನೂ ಪ್ರಸಿದ್ಧಿ ಆಗುತ್ತೀಯೆ. ನಾನೇ ಅಂಥ ಗಂಡ. ನಿನಗೆ ನಾನೇ ಸರಿ. ನಿತಂಬಿನಿ, ನಿನಗೆ ಬಹಳ ಕಾಲದಮೇಲೆ ದೊರಕಿದೆ ನಾನು. ನಿನಗೆ ಅನುರೂಪ ನಾನು. ನನ್ನನ್ನು ವರಿಸು. ನಿನಗೆ ಅಪ್ರಿಯ ಆದ ಕೆಲಸವನ್ನು ಎಂದಿಗೂ ನಾನು ಮಾಡೆ.

“ಭದ್ರೆ, ಇನ್ನೂ ಆ ಮನುಷ್ಯಮಾತ್ರನ ಮೇಲೆಯೆ ಮನಸ್ಸೆ? ನಿನಗೆ ಏನೂ ತಿಳಿಯದು. ತಿಳಿಗೇಡಿ ನೀನು. ಆದರೆ ನಿನಗೆ ಎಲ್ಲವೂ ಗೊತ್ತು ಎಂದು ಕೊಂಡಿದೀಯೆ. ಒಬ್ಬ ಹೆಂಗಸಿನ ಮಾತಿಗೆ ರಾಜ್ಯ ಬಿಟ್ಟು, ಬಂಧುಬಳಗ ಬಿಟ್ಟು

ಕ್ರೂರ ಮೃಗಗಳ ಬೀಡಿನಲ್ಲಿ ಕಾಡಿನಲ್ಲಿ ಅಲೆಯುತ್ತ ಇದಾನಲ್ಲ. ರಾಜ್ಯಭ್ರಷ್ಟ, ಬಯಕೆಗೆಟ್ಟ ಅಲ್ಪಾಯುಷ್ಕ. ಆ ರಾಮನಲ್ಲಿ ಏನು ಇದೆ ಗುಣ? ಏಕೆ ಹೀಗೆ ಭ್ರಾಂತಿಗೊಳ್ಳುತ್ತೀ?"

ಪ್ರಿಯವಾದಿನಿ ಸೀತೆ ಕಣ್ಣು ಎತ್ತಿ ಕೂಡ ನೋಡಲಿಲ್ಲ. ರಾವಣನಿಗೋ ಕಾಮೋದ್ರೇಕ. ಸೀತೆಗೆ ಸಲ್ಲಿಸಬೇಕಾದ ಗೌರವವನ್ನೂ ಮರೆತ. ದುರುಳ ರಕ್ಕಸ ಸೀತಾದೇವಿಯನ್ನು ಹಿಡಿದುಕೊಳ್ಳಲು ನಿರ್ಭಯ ಆಗಿ ಮುಂದೆಬಂದ. ರೋಹಿಣಿಯನ್ನು ಆಕಾಶದಲ್ಲಿ ಬುಧ ಹಿಡಿಯುವಂತೆ ಸೀತೆಯನ್ನು ಹಿಡಿಯಬಂದ.

ಆ ಕಮಲನಯನೆಯ ಕೂದಲನ್ನು ತನ್ನ ಎಡಗೈಯಿಂದ ಹಿಡಿದುಕೊಂಡ. ಬಲಗೈಯಿಂದ ತೊಡೆಗಳನ್ನು ಹಿಡಿದುಕೊಂಡ. ಮೇಲಕ್ಕೆ ಎತ್ತಿದ. ಚೂಪು ಕೋರೆಹಲ್ಲು, ದೊಡ್ಡ ಕೈ, ಬೆಟ್ಟದಂಥ ಮೈ, ಕಾಲಯಮನಂಥ ರಾವಣಾಸುರ ಸೀತೆಯನ್ನು ಹಿಡಿದು ಎತ್ತಿದ್ದನ್ನು ನೋಡಿ ಅಲ್ಲಿ ಇದ್ದ ವನದೇವತೆಗಳು ಎಲ್ಲರೂ ಬೆದರಿ ದಿಕ್ಕುದಿಕ್ಕಿಗೆ ಓಡಿಹೋದರು.

ಅಷ್ಟು ಹೊತ್ತೂ ಕಣ್ಣಿಗೆ ಕಾಣದಂತೆ ಮಾಯ ಆಗಿದ್ದ ರಾವಣನ ಮಹಾರಥ ಆಗ ಕಾಣಿಸಿತು. ಹೇಸರಕತ್ತೆಗಳನ್ನು ಕಟ್ಟಿದ ಚಿನ್ನದ ಚಕ್ರಗಳ ಆ ರಥ ಭಯಂಕರ ಚೀತ್ಕಾರ ಮಾಡುತ್ತ ಬಂತು. ತುರುಬನ್ನು ಹಿಡಿದು ಎತ್ತಿದ್ದ ಸೀತೆಯನ್ನು ರಾಕ್ಷಸ ಆ ರಥದಲ್ಲಿ ಕೂಡಿಸಿದ. ಲೋಕವಿಖ್ಯಾತ ಪತಿವ್ರತೆ ಸೀತೆಗೆ ಹೇಳತೀರದ ದುಃಖ. ತಾನು ದುಷ್ಟ ರಾಕ್ಷಸನ ಕೈಗೆ ಸಿಕ್ಕಿದಾಳೆ. ರಾಮನೋ ಎಲ್ಲೋ ದೂರದಲ್ಲಿದಾನೆ ಅಡವಿಯಲ್ಲಿ. "ರಾಮಾ, ರಾಮಾ" ಎಂದು ಒಂದೇ ಸಮನೆ ಕೂಗಿಕೊಂಡಳು ಸೀತೆ. ದುಃಖದಿಂದ ತತ್ತ್ರಳಿಸಿದಾಳೆ. ಕಣ್ಣಿಂದ ನೀರು ಒಂದೇ ಸಮನೆ ಹರಿಯುತ್ತ ಇದೆ. ನಾಗಕನ್ಯೆಯಂತೆ ವಿಲಿವಿಲಿ ಒದೆದಾಡುತ್ತ ಹೊರಳಾಡುತ್ತ ಇದಾಳೆ. ರಾವಣನಿಗೆ ಇದು ಒಂದೂ ಲಕ್ಷ್ಯ ಇಲ್ಲ. ಸೀತೆಯನ್ನು ಗದರಿಸಿ ಬೆದರಿಸುತ್ತ ಅವಳನ್ನು ಎತ್ತಿಕೊಂಡು ಗಗನಕ್ಕೆ ಅಡರಿದ ಆ ಕಾಮಪೀಡಿತ.

ರಾಕ್ಷಸರಾಜನ ರಥ ಆಕಾಶಮಾರ್ಗದಲ್ಲಿ ಹೊರಟಿತು. ಭಯದುಃಖಗಳಿಂದ ಸೀತೆಗೆ ಹುಚ್ಚು ಹಿಡಿದಂತೆ ಆಯಿತು. ಮೈಮರೆತು ಗಟ್ಟಿಯಾಗಿ ಗೋಳಾಡಿದಳು. "ಲಕ್ಷ್ಮಣ, ಯಾವಾಗಲೂ ಅಣ್ಣನ ಮನಸಿನಂತೆ ನಡೆವ ಮಹಾಬಾಹು. ಈ ರಾಕ್ಷಸ ನನ್ನನ್ನು ಹೊತ್ತುಕೊಂಡು ಹೋಗುತ್ತ ಇದಾನೆ.

ನಿನಗೆ ತಿಳಿಯದಲ್ಲ ಇದು. ರಾಮ, ಧರ್ಮಕ್ಕಾಗಿ ಸುಖಸಂಪತ್ತು, ಪ್ರಾಣವನ್ನು ಕೂಡ ತೊರೆಯುವ ನೀನು ಅರಿಯೆ. ಈ ರಾಕ್ಷಸ ನನ್ನನ್ನು ಕದ್ದು ಒಯ್ಯುತ್ತ ಇರುವುದು ನಿನಗೆ ತಿಳಿಯದಲ್ಲ. ದುಷ್ಟರ ಹುಟ್ಟು ಅಡಗಿಸುವುದು ನಿನ್ನ ಧರ್ಮ. ಪರಂತಪ, ಈ ಪಾಪಿ ರಾವಣನನ್ನು ಶಿಕ್ಷಿಸಬಾರದೆ?

"ದುಷ್ಟ ಕೆಲಸಕ್ಕೆ ಫಲ ಕೂಡಲೇ ಕಾಣದು. ಬಿತ್ತಿದ ಕೂಡಲೆ ಬೆಳೆ ಬರುತ್ತದೆಯೆ? ಅದಕ್ಕೆ ಕಾಲ ಒದಗಬೇಕು. ನೀಚ ರಾವಣ, ಕಾಲವಶದಿಂದ ಬುದ್ಧಿ ಕೆಟ್ಟದೆ ನಿನಗೆ. ಇಂಥ ದುಷ್ಟ ಕೆಲಸ ಮಾಡಿದೆ. ರಾಮ ನಿನ್ನನ್ನು ಸುಮ್ಮನೆ ಬಿಡ. ನಿನಗೆ ಘೋರ ವಿಪತ್ತು ಕಾದಿದೆ, ರಾಮನ ಕೈಯಲ್ಲಿ ನಾಶ ಆಗುತ್ತೀಯೆ.

"ಆಹಾ! ಕೈಕೇಯಿಯೂ ಆಕೆಯ ಬಳಗವೂ ಬಯಸಿದಂತೆಯೇ ಆಯಿತಲ್ಲ. ಧರ್ಮಕಾಮ ಮಹಾಯಶಸ್ವಿ ರಾಮನ ಧರ್ಮಪತ್ನಿಯನ್ನು ಈ ರಾಕ್ಷಸ ಕದ್ದು ಒಯ್ಯುತ್ತ ಇದಾನಲ್ಲ. ಈ ಸಂಗತಿ ರಾಮನಿಗೆ ಹೇಗೆ ತಿಳಿಯಬೇಕು? ಯಾರು ತಿಳಿಸುತ್ತಾರೆ? ಸೊಗಸು ಆಗಿ ಅರಳಿದ ಹೂಗಳ ಈ ಕರ್ಣಿಕಾರ ಗಿಡಗಳಿಗೆ ಹೇಳುತ್ತೇನೆ. ಕರ್ಣಿಕಾರ ವೃಕ್ಷಗಳೆ! ರಾವಣ ಸೀತೆಯನ್ನು ಎತ್ತಿಕೊಂಡು ಹೋದ ಎಂದು ಹೇಳುತ್ತೀರಾ ರಾಮನಿಗೆ? ಅದೋ ಹೂಗಳಿಂದ ತುಂಬಿದ ಶಿಖರಗಳ ಪ್ರಸ್ರವಣ ಪರ್ವತ! ಪ್ರಸ್ರವಣ ಗಿರಿ, ನಿನಗೆ ನಮಸ್ಕಾರ. ರಾಮ ಬಂದ ಕೂಡಲೆ ಹೇಳು, ರಾವಣ ಸೀತೆಯನ್ನು ಎತ್ತಿಕೊಂಡುಹೋದ ಎಂತ. ಹಂಸಸಾರಸಪಕ್ಷಿಗಳ ಉಲಿವಿನಿಂದ ಶೋಭಿಸುವ ಗೋದಾವರೀ, ನೀನು ಹೇಳು, ತಾಯಿ. ರಾಮ ಬಂದ ಕೂಡಲೆ ಹೇಳು.

"ಬಗೆಬಗೆಯ ಗಿಡಮರಗಳ ಈ ಕಾಡಿನ ವನದೇವತೆಗಳೆ, ನಿಮಗೆಲ್ಲರಿಗೂ ನಮಸ್ಕಾರ. ನೀವು ಹೇಳುತ್ತೀರಾ ರಾಮನಿಗೆ? ಈ ದುಷ್ಟ ನನ್ನನ್ನು ಕದ್ದು ಒಯ್ಯುತ್ತ ಇದಾನೆ. ಈ ಕಾಡಿನಲ್ಲಿ ಇರುವ ಮೃಗಗಳೆ, ಪಕ್ಷಿಗಳೆ, ನಿಮಗೆ ಎಲ್ಲರಿಗೂ ಶರಣು. ನನ್ನ ಗಂಡನಿಗೆ ನೀವು ಆದರೂ ತಿಳಿಸಿ. ನಿನಗೆ ಪ್ರಾಣಕ್ಕಿಂತಲೂ ಹೆಚ್ಚು ಆದ ನಿನ್ನ ಹೆಂಡತಿ ಸೀತೆಯನ್ನು ರಾವಣಾಸುರ ಕದ್ದು ಒಯ್ಯುತ್ತ ಇದಾನೆ ಎಂದು. ಆ ಆಜಾನುಬಾಹು ಮಹಾಪರಾಕ್ರಮಿ ರಾಮಚಂದ್ರನಿಗೆ ನಾನು ಇರುವ ಸ್ಥಳ ತಿಳಿದರೆ ಸಾಕು, ಯಮಲೋಕದಲ್ಲಿ ಇಟ್ಟರೂ ತನ್ನ ಪರಾಕ್ರಮದಿಂದ ಬಿಡಿಸಿ ತರಬಲ್ಲ."

ವಿಶಾಲನೇತ್ರಿ ಸೀತಾದೇವಿ ಅತಿ ದೀನ ಧ್ವನಿಯಿಂದ ಕೂಗುತ್ತ ಇದ್ದಳು ರಾವಣಾಸುರನ ಕೈಗೆ ಸಿಕ್ಕಿ. ಅಲ್ಲಿ ಮರದ ಮೇಲೆ ಇದ್ದ ಜಟಾಯುವನ್ನು ನೋಡಿದಳು. ಆಕೆಯ ದುಃಖ ಇಮ್ಮಡಿಸಿತು. ಅಂಜಿಕೆಯಿಂದ ಗಡಗಡ ನಡುಗುತ್ತ "ಪೂಜ್ಯ ಜಟಾಯು! ಈ ದುಷ್ಟ ರಾಕ್ಷಸ ರಾವಣ ದಿಕ್ಕು ಇಲ್ಲದವಳಂತೆ ನನ್ನನ್ನು ಕದ್ದು ಒಯ್ಯುತ್ತ ಇದಾನೆ. ನೋಡಬಾರದೆ. ನೀನು ಆದರೂ ಏನು ಮಾಡೀಯೆ. ಈ ರಾಕ್ಷಸ ಮಹಾಕ್ರೂರ, ಬಲಾಢ್ಯ. ಆಯುಧ ಸಹಿತ. ಗೆದ್ದೆ ಎಂಬ ಗರ್ವದಿಂದ ನನ್ನನ್ನು ಎತ್ತಿಕೊಂಡು ಹೋಗುತ್ತಿದಾನೆ. ಇವನು ಕಪಟಯುದ್ಧಚತುರ. ಇವನನ್ನು ಇದಿರಿಸಲು ನಿನಗೆ ಸಾಧ್ಯವಿಲ್ಲ. ಜಟಾಯು, ಈಗ ನಡೆದದ್ದನ್ನು ನಡೆದಂತೆ ನನ್ನ ಗಂಡನಿಗೆ ತಿಳಿಸು. ಸೀತೆಯನ್ನು ರಾವಣಾಸುರ ಕದ್ದು ಒಯ್ದ ಎಂದು ರಾಮಲಕ್ಷ್ಮಣರಿಗೆ ತಿಳಿಸು" ಎಂದು ಗಟ್ಟಿ ಆಗಿ ಕೂಗಿಕೊಂಡಳು.

೯

ಜಟಾಯು ಮರದ ಮೇಲೆ ನಿದ್ರಿಸುತ್ತ ಇದ್ದ. ಸೀತೆಯ ಅಳುವಿನ ಧ್ವನಿ ಕೇಳಿಸಿತು. ಕಣ್ಣು ತೆರೆದು ಸುತ್ತಲೂ ನೋಡಿದ. ರಾವಣ, ಸೀತೆ ಇವರನ್ನು ನೋಡಿದ. ಪರ್ವತ ಶಿಖರದಂತೆ ಬೆಳಗುವ ಆ ಪಕ್ಷಿಶ್ರೇಷ್ಠ ಆ ಮರದ ಮೇಲಿನಿಂದಲೇ ರಾವಣನಿಗೆ ಹೇಳಿದ:

"ಏ ದಶಕಂಠ, ನಾನು ಜಟಾಯು, ಗೃಧ್ರರಾಜ, ಸನಾತನ ಧರ್ಮವನ್ನು ತಪ್ಪದೆ ನಡಸಿದೇನೆ. ಸತ್ಯವಾದಿ ನಾನು. ಬಹುಪರಾಕ್ರಮಿ. ರಾಮ ಸಮಸ್ತಲೋಕಗಳ ಪ್ರಭು. ದೇವೇಂದ್ರನಿಗೂ ವರುಣನಿಗೂ ಸಮ. ಸಮಸ್ತ ಲೋಕಕ್ಕೂ ಹಿತ ಕೋರುವವನು. ರಾಮ ದಶರಥಮಹಾರಾಜನ ಮಗ. ನೀನು ಈಗ ಕದ್ದು ಒಯ್ಯುವ ಈ ಹೆಂಗಸು ಸೀತಾದೇವಿ ಆ ಲೋಕನಾಥ ರಾಮಚಂದ್ರನ ಹೆಂಡತಿ. ಮಹಾಪತಿವ್ರತೆ.

"ಧರ್ಮದಂತೆ ನಡೆಯುವ ದೊರೆ ಪರಸ್ತ್ರೀಯರನ್ನು ಮುಟ್ಟಬಹುದೆ? ರಾಜಪತ್ನಿಯರನ್ನು ಬಹಳ ಗೌರವದಿಂದ ನೋಡಬೇಡವೇ? ಬುದ್ಧಿವಂತರು ನಿಂದೆಗೆ ಗುರಿ ಆಗುವ ಕೆಲಸವನ್ನು ಮಾಡುತ್ತಾರೆಯೆ? ಛೀ, ಇಂಥ ಕೆಲಸ

ವನ್ನು ಮಾಡುತ್ತೀಯಲ್ಲ ನೀನು. ಪರಸ್ತ್ರೀಯರನ್ನು ಮುಟ್ಟುವುದಕ್ಕಿಂತ ಹೀನಕಾರ್ಯ ಇದೆಯೆ? ತನ್ನ ಹೆಂಡತಿಯನ್ನು ಪರಪುರುಷರು ಮುಟ್ಟದಂತೆ ಕಾಪಾಡುವ ಹಾಗೆಯೆ ಪರರ ಹೆಂಡಿರನ್ನೂ ಕಾಪಾಡಬೇಕು.

“ರಾಕ್ಷಸರಾಜ, ನೀನು ಪುಲಸ್ತ್ಯವಂಶೋದ್ಭವ. ಶಾಸ್ತ್ರಸಮ್ಮತ ಅಲ್ಲದ ಧರ್ಮ ಅರ್ಥ ಕಾಮುಗಳನ್ನು ಯಾರೂ ಬಯಸರು. ಸಾಮಾನ್ಯ ಜನಕ್ಕೆ ರಾಜನ ನಡೆನುಡಿಯೇ ದಾರಿಗಂಬ. ರಾಜನೇ ಧರ್ಮಕಾಮುಗಳ ಪ್ರವರ್ತಕ. ರಾಜ ಧಾರ್ಮಿಕ ಆದರೆ ಪ್ರಜೆಗಳೂ ಧಾರ್ಮಿಕರು. ರಾಜ ಪಾಪಿ ಆದರೆ ಜನರೂ ಪಾಪನಿರತರು. ತನಗೆ ಎಂದು ಅಲ್ಲದೆ ಇದ್ದರೂ ಪ್ರಜೆಗಳಿಗಾಗಿ ದೊರೆ ಧರ್ಮದಂತೆ ನಡೆಯಬೇಕು. ಪಾಪಕಾರ್ಯ ಮಾಡಬಾರದು. ಧರ್ಮಾರ್ಥ ಕಾಮುಗಳಿಗೆ ರಾಜನೇ ನಿಧಿ.

“ರಾಕ್ಷಸರಾಜ, ನೀನು ವಿಷಯಲೋಲ, ಪಾಪಶೀಲ. ಪಾಪ ಮಾಡಿ ದವನಿಗೆ ದೇವಲೋಕ ಇಲ್ಲ. ಹಾಗೇ ಪಾಪಕರ್ಮ ನಿನಗೆ ರಾಜ್ಯಾಧಿಪತ್ಯ ಐಶ್ವರ್ಯ ಕೊಡದು. ಅವನವನ ಸಹಜಸ್ವಭಾವವನ್ನು ತಿದ್ದಲು ಯಾರಿಗೂ ಸಾಧ್ಯ ಅಲ್ಲ. ದುಷ್ಟಾತ್ಮರಿಗೆ ಹಿರಿಯರ ಸದುಪದೇಶ ಹಿಡಿಸುವುದೇ ಇಲ್ಲ. ಹಿಡಿಸಿದರೂ ಬಹಳ ಕಾಲ ನಿಲ್ಲದು.

“ರಾವಣ, ಶ್ರೀರಾಮ ಮಹಾಬಲಿಷ್ಠ, ಧರ್ಮಾತ್ಮ. ನಿನ್ನ ರಾಜ್ಯದಲ್ಲಿ ನಿನ್ನ ಪಟ್ಟಣದಲ್ಲಿ ಆತ ಯಾವ ಅಪರಾಧವನ್ನೂ ಮಾಡಲಿಲ್ಲ. ಅಂಥದರಲ್ಲಿ ನೀನು ಏಕೆ ಈ ಅಪರಾಧ ಮಾಡುತ್ತೀ? ಎಂಥ ಕೆಲಸವನ್ನೆ ಆದರೂ ಅವಲೀಲೆ ಆಗಿ ರಾಮ ಮಾಡಬಲ್ಲ. ಖರ ಮುಂತಾದ ರಾಕ್ಷಸರನ್ನು ಕೊಂದ ರಾಮ. ಆ ಸೇಡನ್ನು ತೀರಿಸುತ್ತೇನೆ ಎಂದೀಯೆ ನೀನು. ಹೇಳುತ್ತೇನೆ ಕೇಳು. ನಿನ್ನ ತಂಗಿ ಶೂರ್ಪಣಖೆಯ ಮಾತು ಕೇಳಿ ತನ್ನ ಮಿತಿಯನ್ನು ಮೀರಿಬಂದ ಖರ. ಅದರಿಂದ ರಾಮ ಖರನನ್ನು ಕೊಂದ. ಇದರಲ್ಲಿ ರಾಮನ ತಪ್ಪು ಏನೂ ಇಲ್ಲ. ನೀನೇ ಆಲೋಚಿಸು. ಏನು ತಪ್ಪು ಹೇಳು?

“ರಾಕ್ಷಸರಾಜ, ಸೀತಾದೇವಿಯನ್ನು ನೀನು ಇಲ್ಲಿಯೇ ಬಿಟ್ಟುಹೋಗು. ಇಲ್ಲದಿದ್ದರೆ ವಜ್ರಾಯುಧದಿಂದ ದೇವೇಂದ್ರ ವೃತ್ರಾಸುರನನ್ನು ಕೊಂದಂತೆ ಆ ರಾಮಚಂದ್ರ ತನ್ನ ಕಣ್ಣಿನ ನೋಟದಿಂದಲೇ ನಿನ್ನನ್ನು ಸುಟ್ಟುಬಿಡುತ್ತಾನೆ.

ನಿನ್ನ ಸೆರಗಿನಲ್ಲಿ ಮಹಾ ವಿಷಸರ್ಪವನ್ನು ಕಟ್ಟಿಕೊಂಡು ಇದೀಯೆ. ನಿನ್ನ ಕುತ್ತಿಗೆಗೆ ಕಾಲಪಾಶ ಬಿದ್ದಿದೆ. ನಿನಗೆ ಗೊತ್ತು ಇಲ್ಲ. ವೈಮರೆತು ಇದೀಯೆ.

"ತಿಣಿಕಿ ಸಾಯುವಷ್ಟು ಭಾರವನ್ನು ಹೊರಬಹುದೆ ಯಾರೇ ಆಗಲಿ? ಶಕ್ತಿ ಮೀರಿ ಹೊರಬಾರದು. ಅರಗುವಷ್ಟು ಆಹಾರ ತಿನ್ನಬೇಕೇ ವಿನಾ ಅಳತೆಗೆಟ್ಟು ತಿನ್ನಬಾರದು. ಯಾವ ಕೆಲಸವನ್ನು ಮಾಡಿದರೂ ಧರ್ಮವೋ ಕೀರ್ತಿಯೋ ಐಶ್ವರ್ಯವೋ ಯಾವುದಾದರೂ ಒಂದು ಸಿಗಬೇಕು. ಏನೂ ಸಿಗದೆ ಯಾವುದರಿಂದ ಬರೀ ಮೈಗೆ ಆಯಾಸ ಆಗುತ್ತದೆಯೋ ಅಂಥ ಕೆಲಸವನ್ನು ಏಕೆ ಮಾಡಬೇಕು?

"ರಾವಣ, ನಾನು ಹುಟ್ಟಿ ಅರವತ್ತುಸಾವಿರ ವರ್ಷ. ವಂಶಪರಂಪರೆ ಯಿಂದ ಬಂದ ರಾಜ್ಯವನ್ನು ಯಥಾಕ್ರಮ ಆಗಿ ಪಾಲಿಸುತ್ತ ಇದೇನೆ. ನಾನು ಮುದುಕ. ನನ್ನ ಬಳಿ ಆಯುಧಗಳು ಇಲ್ಲ. ನೀನೋ ಯುವಕ. ಬಿಲ್ಲುಬಾಣ ಇವೆ ನಿನ್ನಲ್ಲಿ. ನಿನಗೆ ರಥ ಇದೆ, ಕವಚ ಇದೆ. ನನಗೆ ಇಲ್ಲ. ಆದರೂ ಸೀತಾದೇವಿಯನ್ನು ಕದ್ದು ಒಯ್ಯಲು ಬಿಡಲಾರೆ. ನನ್ನ ಕಣ್ಣ ಇದಿರಿಗೇ ಇಂಥ ಕೆಲಸವೆ?

"ನ್ಯಾಯಶಾಸ್ತ್ರದ ಬಲದಿಂದ ವೇದಪ್ರಮಾಣ್ಯವನ್ನು ಖಂಡಿಸಲು ಸಾಧ್ಯವಿಲ್ಲ. ನನ್ನ ಇದಿರಿನಲ್ಲಿ ಸೀತಾದೇವಿಯನ್ನು ನೀನು ಬಲಾತ್ಕಾರದಿಂದ ಎತ್ತಿಕೊಂಡು ಹೋಗಲಾರೆ. ನೀನು ಶೂರ ಆಗಿದ್ದರೆ ಯುದ್ಧಕ್ಕೆ ಬಾ. ಇಲ್ಲದೆ ಹೋದರೆ ಸ್ವಲ್ಪ ತಡೆ ರಾಮ ಬರುವವರೆಗೆ. ಖರ ಸತ್ತುಬಿದ್ದನಲ್ಲ, ಹಾಗೇ ನೀನೂ ನೆಲಕ್ಕೆ ಉರುಳುತ್ತೀ. ಯುದ್ಧದಲ್ಲಿ ಲೆಕ್ಕ ಇಲ್ಲದಷ್ಟು ಮಂದಿ ದೈತ್ಯದಾನವರನ್ನು ಕೊಂದ ಜಟಾವಲ್ಕಲಧಾರಿ ಬರುತ್ತಾನೆ. ಬೇಗನೆ ನಿನ್ನನ್ನು ಕೊಲ್ಲುತ್ತಾನೆ.

"ನೀಚ, ಆ ರಾಜಕುಮಾರರು–ರಾಮಲಕ್ಷ್ಮಣರು–ಬಹಳ ದೂರದಲ್ಲಿ ಇದಾರೆ. ನಾನು ಅವರನ್ನು ಕರೆತರಲಾರೆ ಎಂದು ಓಡಿಹೋಗುತ್ತೀಯಾ? ಅವರಿಗೆ ಅಂಜಿ ಅವರ ಕಣ್ಣಿಗೆ ಬೀಳದಂತೆ ಮೊದಲೇ ಓಡಿಹೋಗುತ್ತೀಯಾ? ನಿಲ್ಲು, ನಿಲ್ಲು, ಓಡಿಹೋಗಬೇಡ. ನಾನು ಬದುಕಿ ಇರುವಾಗ ಈ ಕಮಲ ನಯನೆ ಮಂಗಳಸ್ವರೂಪಿಣಿ ಶ್ರೀರಾಮನ ಪ್ರಿಯ ಪತ್ನಿ ಸೀತಾದೇವಿಯನ್ನು ಎತ್ತಿಕೊಂಡು ಹೋಗಲು ಬಿಟ್ಟೇನೆ?

“ ರಾಕ್ಷಸ, ದಶಕಂಠ, ರಾವಣಾಸುರ, ನಿಲ್ಲು. ಸ್ವಲ್ಪ ಹೊತ್ತು ಯುದ್ಧ ಮಾಡು. ನನ್ನ ಪ್ರಾಣ ಇರುವವರೆಗೂ ನಾನು ಹೋರಾಡುತ್ತೇನೆ. ನಿನ್ನನ್ನು ಸುಮ್ಮನೆ ಬಿಡುತ್ತೇನೆಯೆ? ನಿನಗೆ ಯುದ್ಧದ ಆತಿಥ್ಯ ನೀಡುತ್ತೇನೆ. ತೊಟ್ಟಿನಿಂದ ಹಣ್ಣನ್ನು ಕೆಡಹುವಂತೆ ನಿನ್ನನ್ನು ರಥದಿಂದ ಕೆಳಕ್ಕೆ ಉರುಳಿಸುತ್ತೇನೆ.”

೧೦

ಜಟಾಯು ಹೇಳಿದ್ದು ಎಲ್ಲಾ ನ್ಯಾಯವೇ. ಆದರೂ ರಾವಣನಿಗೆ ರೇಗಿತು. ಅವನ ಇಪ್ಪತ್ತು ಕಣ್ಣೂ ಕಿಡಿ ಕಾರಿದವು. ಮುಖದಲ್ಲಿ ರೌದ್ರಾವೇಶ ತುಂಬಿತು. ಚಿನ್ನದ ಕುಂಡಲಗಳ ಥಗಥಗ ಹೊಳಪು ಅದನ್ನು ಮತ್ತೂ ಹೆಚ್ಚಿಸಿ ತೋರಿಸಿತು. ರಾಕ್ಷಸ ಹಲ್ಲುಕಡಿದ ಕಟಕಟ. ಜಟಾಯುವನ್ನು ಇದಿರಿಸಿದ.

ಗಾಳಿಯ ವೇಗದಿಂದ ಓಡಿಬರುವ ಮೋಡಗಳು ಒಂದನ್ನು ಒಂದು ಘಟ್ಟಿಸಿದಂತೆ ಇತ್ತು ಅವರ ಹೋರಾಟ. ಎರಡು ಮಾಲ್ಯವಂತ ಪರ್ವತಗಳು ಗರಿಗೆದರಿ ಹಾರಿಬಂದು ಹೋರಾಡುತ್ತ ಇವೆ ಎನಿಸಿತು. ಆ ಪಕ್ಷಿರಾಜ ರಾಕ್ಷಸ ರಾಜರ ಹೋರಾಟ ಆಶ್ಚರ್ಯಕರ.

ರಾವಣ ಮಹಾ ಬಲಾಢ್ಯ. ಮೊನಚು ಕೋಲು ಬಾಣ, ಹರಿತ ಆದ ಕೊಕ್ಕೆಬಾಣಗಳನ್ನು ಮಳೆಗರೆದ ಹಾಗೆ ಸುರಿದ ಜಟಾಯುವಿನ ಮೇಲೆ. ಜಟಾಯುವಿಗೆ ಆ ಬಾಣಗಳು ಲೆಕ್ಕವೆ ಇಲ್ಲ. ಧೈರ್ಯದಿಂದ ಅವನ್ನು ತಡೆದು ಮುಂದೆ ನುಗ್ಗಿದ. ಅವನ ಉಗುರು ಬಹಳ ಚೂಪು. ರಾವಣನ ಮೈಯನ್ನು ಪರಚಿ ಗಾಯಮಾಡಿದ. ರಾವಣನಿಗೆ ಕೋಪ ಮಿತಿಮೀರಿತು. ತನ್ನ ಕೆಲಸಕ್ಕೆ ಅಡ್ಡಬಂದ ಈ ಶತ್ರುವನ್ನು ಕೊಂದುಬಿಡೋಣ ಎಂದು ಕಾಲದಂಡಕ್ಕೆ ಸಮಾನ ಆದ ಹತ್ತು ಬಾಣಗಳನ್ನು ಕೈಗೆ ತೆಗೆದುಕೊಂಡ. ಅವು ಚೆನ್ನಾಗಿ ಸಾಣೆ ಹಿಡಿದ ಬಾಣ. ಬಲು ಚುರುಕು–ಹರಿತ. ಉಕ್ಕಿನ ಅಲಗು ಅವಕ್ಕೆ. ಎಂದೂ ಗುರಿತಪ್ಪುವ ಬಾಣಗಳು ಅಲ್ಲ. ಆ ಹತ್ತು ಬಾಣಗಳನ್ನೂ ಹೂಡಿ ಕಿವಿಯ ವರೆಗೆ ಬಿಲ್ಲನ್ನು ಎಳೆದು ಬಿಟ್ಟ.

ಜಟಾಯುವಿಗೆ ಆ ಬಾಣಗಳ ಕಡೆ ಗಮನವೆ ಇಲ್ಲ. ರಥದಲ್ಲಿ ಸೀತಾದೇವಿ ಕಂಬನಿಗರೆಯುತ್ತ ಇದಾಳೆ. ಅವಳನ್ನು ಹೇಗೆ ಆದರೂ ಮಾಡಿ ಕಾಪಾಡ

ಬೇಕು. ನೆಟ್ಟಗೆ ಹಾರಿ ನಿರ್ಭಯದಿಂದ ರಾವಣಾಸುರನ ಮೇಲೆ ಧುಮುಕಿದ. ಮುತ್ತಿನ ಮಣಿ ಕಟ್ಟಿದ ಅವನ ಬಿಲ್ಲನ್ನೂ ಬಾಣವನ್ನೂ ತನ್ನ ಕಾಲಿನಿಂದ ಮೆಟ್ಟಿ ಮುರಿದುಬಿಟ್ಟ. ಕೋಪದಿಂದ ರಾವಣ ಇನ್ನೊಂದು ಬಿಲ್ಲನ್ನು ತೆಗೆದು ಕೊಂಡು ಜಟಾಯುವಿನ ಮೇಲೆ ಸಾವಿರಾರು ಬಾಣ ಬಿಟ್ಟ. ಸುತ್ತಲೂ ಬಾಣಗಳು ಕವಿದು ಇದ್ದರೆ ಜಟಾಯು ಗೂಡಿನಲ್ಲಿ ಕುಳಿತ ಪಕ್ಷಿಯ ಹಾಗೆ ಕಂಡ.

ಜಟಾಯು ಸಾಮಾನ್ಯ ಅಲ್ಲ. ಬಹಳ ತೇಜೋವಂತ. ಆ ಬಾಣಗಳನ್ನು ಎಲ್ಲಾ ತನ್ನ ರೆಕ್ಕೆಗಳಿಂದ ಕೊಡವಿ ಹಾರಿಬಂದು ರಾವಣನ ಹೊಸ ಬಿಲ್ಲನ್ನೂ ಮುರಿದುಹಾಕಿದ. ಅಲ್ಲಿಗೇ ಬಿಡಲಿಲ್ಲ. ಬೆಂಕಿಯಂತೆ ಉರಿಯುತ್ತ ಇದ್ದ ಅವನ ಕವಚವನ್ನು ಕಿತ್ತು ರೆಕ್ಕೆಗಳಿಂದ ಮೇಲಕ್ಕೆ ಹಾರಿಸಿದ. ಬಂಗಾರದ ಕವಚ ತೊಡಿಸಿದ ಪಿಶಾಚಮುಖದ ಹೇಸರಕತ್ತೆಗಳನ್ನು, ರಾವಣನ ರಥಕ್ಕೆ ಕಟ್ಟಿದ್ದ ವನ್ನು ರೆಕ್ಕೆಗಳಿಂದ ಹೊಡೆದು ಕೊಂದ. ಮನಬಂದಂತೆ ಚಲಿಸುವ ಚಿನ್ನದ ಚಕ್ರಗಳ ಬಲಿಷ್ಠ ನೊಗದ ಅವನ ರಥವನ್ನು ಪುಡಿಪುಡಿಮಾಡಿದ. ರಾವಣನ ಬೆಳ್ಗೊಡೆ ಹುಣ್ಣಿಮೆ ಚಂದಿರನಂತೆ ಇತ್ತು. ಅದನ್ನೂ ಚಾಮರಗಳನ್ನೂ ಹರಿದುಹಾಕಿದ. ಅವನ್ನು ಹಿಡಿದು ಇದ್ದ ಸೇವಕರನ್ನು ಕೊಂದ. ರಾವಣನ ಸಾರಥಿಯ ತಲೆಯನ್ನು ಕುಕ್ಕಿ ಕೊಂಡ.

ಪಕ್ಷಿರಾಜನ ಹೊಡೆತಕ್ಕೆ ಎಲ್ಲ ಸಾಧನಗಳೂ ಭಗ್ನ. ಬಿಲ್ಲು ಮುರಿಯಿತು. ರಥ ಚೂರುಚೂರು. ರಥಕ್ಕೆ ಕಟ್ಟಿದ್ದ ಹೇಸರಕತ್ತೆ ಸತ್ತವು. ಸಾರಥಿ ಕೆಳಗೆ ಉರುಳಿದ. ಇಷ್ಟು ಆದರೂ ವೈದೇಹಿಯನ್ನು ಬಿಡಲಿಲ್ಲ ಆ ನೀಚ. ವೈದೇಹಿ ಯನ್ನು ಎತ್ತಿಕೊಂಡೇ ನೆಲಕ್ಕೆ ಧುಮುಕಿದ. ರಾವಣ ಹೀಗೆ ನೆಲದ ಮೇಲೆ ಬಿದ್ದುದನ್ನು ನೋಡಿ ಸಮಸ್ತಪ್ರಾಣಿಗಳೂ ಭಲೆ ಭಲೆ! ಎಂದು ಜಟಾಯುವನ್ನು ಮೆಚ್ಚಿಕೊಂಡವು.

ಜಟಾಯು ಮುದುಕ. ಎಷ್ಟು ಹೊತ್ತು ಯುದ್ಧ ಮಾಡಿಯಾನು? ದಣಿದ. ಇದನ್ನು ಕಂಡ ರಾವಣ ಸೀತೆಯನ್ನು ಎತ್ತಿಕೊಂಡೇ ಮತ್ತೆ ಮುಗಿಲಿಗೆ ಹಾರಿದ. ಮುಂದೆ ಹೋಗತೊಡಗಿದ. ಜಟಾಯು ಅದನ್ನು ನೋಡಿ ಮತ್ತೆ ಬಂದು ಅಡ್ಡಗಟ್ಟಿ ತರುಬಿ ಹೇಳಿದ. "ನೀಚ, ತಿಳಿಗೇಡಿ, ರಾಕ್ಷಸಕುಲದ ವಿನಾಶಕ್ಕೆ ಸಂಚಕಾರ ಕೊಡುತ್ತಿದೀಯಲ್ಲ. ರಾಮನ ಹೆಂಡತಿಯನ್ನು ಕದ್ದು ಒಯ್ದರೆ ಆಗುವುದು ಅದೇ. ರಾಮನ ಬಾಣಗಳು ವಜ್ರಾಯುಧಕ್ಕೆ ಸಮ.

ನಿನಗೆ ರಾಮಬಾಣದ ಮಹಿಮೆ ತಿಳಿಯದು. ಬಾಯಿ ಆರಿದವನು ನೀರು ಕುಡಿಯುವ ಹಾಗೆ ನೀನು ಕಾಮಬಾಧೆಯಿಂದ ವಿಷ ಕುಡಿಯುತ್ತೀಯಲ್ಲ ಸೀತೆಯನ್ನು ಕದ್ದು ಒಯ್ದು. ನೀನು ಒಬ್ಬ ಅಲ್ಲ. ನಿನ್ನ ಬಂಧುಬಳಗ ಮಂತ್ರಿಮಿತ್ರರು ಎಲ್ಲರಿಗೂ ಕುಡಿಸುತ್ತೀಯಲ್ಲ. ಅವಿವೇಕಿಗಳಿಗೆ ತಾವು ಮಾಡುವ ಕೆಲಸಗಳ ಫಲಾಫಲ ತಿಳಿಯದು. ಕಡೆಗೆ ಅವರ ಕೆಲಸವೇ ಅವರನ್ನು ನಾಶಮಾಡುತ್ತದೆ. ನಿನ್ನ ಹಾಗೆಯೆ ಅವರು. ಗಾಳವನ್ನು ಕಚ್ಚಿದ ಮೀನಿಗೆ ಎಲ್ಲಿ ಹೋದರೂ ಸಾವು ತಪ್ಪದು. ಕೊರಳಿಗೆ ಕಾಲಪಾಶ ಬಿಗಿದಾಗ ಎಲ್ಲಿ ಹೋದರೆ ತಾನೆ ಏನು ?

" ನೀನು ಈಗ ಮಾಡಿದ ಅಪರಾಧಕ್ಕೆ ಕ್ಷಮೆ ಇಲ್ಲ. ಯಾರೂ ಇದಿರಿಸ ಲಾರದ ಆ ಮಹಾವೀರರು ರಾಮಲಕ್ಷ್ಮಣರು ನಿನ್ನನ್ನು ಮನ್ನಿಸರು. ನೀನೂ ಒಬ್ಬ ಶೂರನೇ? ಹೇಡಿ. ಯಾರೂ ಇಲ್ಲದ ಸಮಯ ನೋಡಿ ಸೀತೆಯನ್ನು ಹೊತ್ತುಕೊಂಡು ಹೋಗುತ್ತ ಇದೀಯೆ. ಕಳ್ಳ! ಕಳವು ಮಾಡಿದೆ. ವೀರರು ಹೀಗೆ ಮಾಡುತ್ತಾರೆಯೇ? ವೀರ ಆದರೆ ಬಾ ಯುದ್ಧಕ್ಕೆ. ನಿನ್ನ ತಮ್ಮ ಖರನ ಜೊತೆಗೇ ಹೊಗುತ್ತೀ. ನೀನೂ ನೆಲದ ಮೇಲೆ ಬೀಳುತ್ತೀ. ಸಾವು ಒದಗಿಬಂದಾಗ ಮನುಷ್ಯ ಅಧರ್ಮಕಾರ್ಯ ಮಾಡಿ ನಾಶ ಆಗುತ್ತಾನೆ. ನೀನೂ ಈಗ ಅದೇ ರೀತಿ ಮಾಡಬಾರದ ಕೆಲಸ ಮಾಡುತ್ತ ಇದೀಯೆ. ನಿನ್ನ ವಿನಾಶಕಾಲ ಒದಗಿಬಂದಿದೆ. ಇಂಥ ಪಾಪಕೃತ್ಯವನ್ನು ಯಾರೂ ಮಾಡರು."

ಹೀಗೆ ಹೇಳಿದ ಜಟಾಯುವಿನ ಹಿತವಚನಕ್ಕೆ ಕಿವಿಗೊಡಲಿಲ್ಲ ರಾವಣ. ಮುಂದೆ ಸಾಗಿದ. ಜಟಾಯು ಕೋಪಗೊಂಡು ಮೇಲಕ್ಕೆ ಹಾರಿ ರಾವಣನ ಬೆನ್ನನ್ನು ಅಪ್ಪಳಿಸಿದ. ಮದ ಏರಿದ ಆನೆಯನ್ನು ಮಾವಟಿಗ ಅಂಕುಶದಿಂದ ತಿವಿಯುವಂತೆ ಜಟಾಯು ತನ್ನ ಚೂಪು ಉಗುರಿನಿಂದ ರಾವಣನನ್ನು ಪರಚಿದ. ಕೊಕ್ಕಿನಿಂದ ತಿವಿದ, ಕಡಿದ. ಮಂಡೆಯ ಕೂದಲನ್ನು ಎಳೆದು ಕಿತ್ತಿದ.

ಜಟಾಯುವಿನ ಬಾಧೆ ತಡೆಯಲು ಆಗಲಿಲ್ಲ ರಾವಣನಿಗೆ. ಕೋಪದಿಂದ ತುಟಿ ಅದುರಿದವು. ಮೈ ನಡುಗಿತು. ಸೀತೆಯನ್ನು ಎಡಗಡೆ ಇರುಕಿಕೊಂಡ ಗಟ್ಟಿಯಾಗಿ. ಕೈಯಿಂದ ಜಟಾಯುವನ್ನು ಅಪ್ಪಳಿಸಿದ. ಜಟಾಯು ತನ್ನ ಕೊಕ್ಕಿನಿಂದ ರಾವಣನನ್ನು ಕಡಿಯುತ್ತ ಅವನ ಎಡಗೈ ಹತ್ತನ್ನೂ ಕಡಿದು ಹಾಕಿದ. ಅವು ನೆಲದ ಮೇಲೆ ಬಿದ್ದವು. ಆದರೆ ಏನು? ಒಡನೆಯೆ ಮತ್ತೆ

ಹತ್ತೂ ಕೈ ಚಿಗುರಿ ಬಂದವು ಹುತ್ತದಿಂದ ಹೊರಗೆ ಬಂದು ಹೆಡೆ ಆಡಿಸುವ ಕರಿಯ ನಾಗರಹಾವುಗಳ ಹಾಗೆ.

ರಾವಣನಿಗೆ ತಡೆಯಲಾರದ ಸಿಟ್ಟು. ಸೀತೆಯನ್ನು ಕೆಳಗೆ ಇಳಿಸಿದ. ಮುಷ್ಟಿಯಿಂದ ಗುದ್ದಿದ. ಕಾಲಿನಿಂದ ತುಳಿದ ಜಟಾಯುವನ್ನು. ಇಬ್ಬರೂ ಎಣೆ ಇಲ್ಲದ ಪರಾಕ್ರಮಿಗಳು. ಸ್ವಲ್ಪ ಹೊತ್ತು ಇಬ್ಬರಿಗೂ ಘೋರ ಯುದ್ಧ ನಡೆಯಿತು. ರಾಮನಿಗಾಗಿ ಜಟಾಯು ಮೈಮರೆತು ಹೋರಾಡಿದ. ತಟ್ಟನೆ ಕತ್ತಿ ಎತ್ತಿ ರಾವಣ ಪಕ್ಷಿರಾಜನ ರೆಕ್ಕೆಗಳನ್ನೂ ಗರಿಗಳನ್ನೂ ಕತ್ತರಿಸಿದ. ಕಾಲುಗಳನ್ನೂ ಕತ್ತರಿಸಿದ. ಜಟಾಯುವಿಗೆ ಅರೆಜೀವ ಆಯಿತು. ನೆಲದ ಮೇಲೆ ಬಿದ್ದು ನೆತ್ತರಿನಲ್ಲಿ ಹೊರಳಾಡಿದ. ಸೀತೆ ನೋಡಿದಳು. ಆಪ್ತ ಬಂಧು ಒಬ್ಬ ಮಡಿದ ಹಾಗೆ ಎನಿಸಿತು. ಅದರ ಹತ್ತಿರಕ್ಕೆ ಓಡಿಬಂದಳು. ಚಂದ್ರಮುಖದ ಆ ಜನಕಪುತ್ರಿ ಜಟಾಯುವನ್ನು ತಬ್ಬಿಕೊಂಡು ಮೈದಡವಿ ಕಂಬನಿಗರೆಯುತ್ತ ಅತ್ತಳು.

ನೀಲಮೇಘದಂಥ ಮೈ, ಬೆಳ್ಳನೆ ವಕ್ಷಸ್ಥಲ, ನಂದಿಹೋದ ಕಾಳ್ಗಿಚ್ಚಿನಂತೆ ಆ ಮಹಾಪರಾಕ್ರಮಿ ಜಟಾಯು ಶಾಂತ ಆಗಿ ನೆಲದ ಮೇಲೆ ಬಿದ್ದುದನ್ನು ನೋಡಿದ ರಾವಣ. ಸಂತೋಷಪಟ್ಟ.

೧೧

ರಾಮಾಶ್ರಮದ ಹತ್ತಿರವೇ ಇದು ನಡೆದದ್ದು. ನೆಲದ ಮೇಲೆ ಬಿದ್ದು ಸಾವನ್ನು ಇದಿರುನೋಡುತ್ತ ಇದ್ದ ಜಟಾಯುವನ್ನು ರಾವಣ ನೋಡುತ್ತ ಇದ್ದ. ರಾವಣನಿಂದ ಗಾಯ ಮಾಡಿಸಿಕೊಂಡು ಸಾಯುತ್ತ ಬಿದ್ದ ಜಟಾಯುವನ್ನು ನೋಡಿ ಸೀತೆಗೆ ಅಪಾರ ದುಃಖ. ಪಕ್ಷಿಯನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತಳು. " ಕಣ್ಣು ಅದುರುವುದು, ಭುಜ ಅದುರುವುದು, ಹಕ್ಕಿಗಳ ಕೂಗು, ಅವುಗಳ ಹಾರಾಟ ಮುಂತಾದವು ಮನುಷ್ಯರಿಗೆ ಮುಂದೆ ಬರಲಿರುವ ಸುಖ ದುಃಖಗಳನ್ನು ಸೂಚಿಸುವ ಶಕುನಗಳು ಎಂದು ಶಾಸ್ತ್ರ ಹೇಳುತ್ತದೆ. ನನಗೆ ಈ ಮಹಾವಿಪತ್ತು ಬಂತು ಎಂದು ಶ್ರೀರಾಮನಿಗೆ ತಿಳಿಯಲಿಲ್ಲವಲ್ಲ! ಇಲ್ಲಿನ ಮೃಗಪಕ್ಷಿಗಳು ಎಲ್ಲವೂ ನಿನ್ನ ಬಳಿಗೇ ಓಡುತ್ತ ಇವೆಯಲ್ಲ, ರಾಮ. ನಿನಗೆ

ಒಂದೂ ಶಕುನ ಕಾಣಲಿಲ್ಲವೆ? ನನ್ನನ್ನು ಕಾಪಾಡಲು ಬಂದ ಈ ಪಕ್ಷಿರಾಜನೂ ರಾವಣನ ಕೈಯಲ್ಲಿ ಸಾಯಬೇಕೆ? ಎಂಥ ದೌರ್ಭಾಗ್ಯ ನನ್ನದು!" ಎಂದು ಮರುಗಿದಳು ಸೀತೆ.

ರಾಮಲಕ್ಷ್ಮಣರು ಅಲ್ಲೇ ಎಲ್ಲೋ ಹತ್ತಿರದಲ್ಲಿ ಇದ್ದಾರೆ ಎಂಬ ಹಾಗೆ "ರಾಮಾ, ಲಕ್ಷ್ಮಣಾ, ಬನ್ನಿ. ನನ್ನನ್ನು ಕಾಪಾಡಿ" ಎಂದು ಭಯದಿಂದ ನಡುಗುತ್ತ ಕೂಗಿಕೊಂಡಳು. ಸೀತೆಯ ಒಡವೆ ಕೆದರಿಹೋದವು. ಅವಳು ಮುಡಿದ ಹೂ ಬಾಡಿತು. ಹೂಬಳ್ಳಿಯ ಹಾಗೆ ಬಳುಕುತ್ತ ನಡುಗುತ್ತ ಒಂದು ಗಿಡವನ್ನು ಅಪ್ಪಿಕೊಂಡು ದಿಕ್ಕುಗಾಣದವಳಂತೆ ಅತ್ತಳು. "ರಾಮ, ರಾಮ" ಎಂದು ಅತ್ತಳು.

ರಾವಣಾಸುರ ಕಾಲಾಂತಕನ ಹಾಗೆ ಬಂದು ನಿಂತ ಸೀತೆಯ ಹತ್ತಿರ. ಅವನ್ನು ಕಂಡು ಸೀತೆ ಬೆದರಿ ಓಡಿದಳು. ಅವಳ ಕೈಯಲ್ಲಿ ಆದೀತೆ? ಜಾರಿ ಬಿದ್ದಳು. ಅಲ್ಲಿ ಇದ್ದ ಗಿಡವನ್ನು ಬಳ್ಳಿಯ ಹಾಗೆ ಸುತ್ತಿಕೊಂಡು "ರಾಮ, ರಾಮ" ಎಂದು ಅತ್ತಳು. "ಆ ಗಿಡವನ್ನು ಬಿಟ್ಟುಬಿಡು" ಎನ್ನುತ್ತ ರಾವಣ ಸೀತೆಯ ತುರುಬಿಗೆ ಕೈಹಾಕಿದ. ತನ್ನ ಮೃತ್ಯುವನ್ನೆ ತಾನು ಸೆಳೆದುಕೊಂಡ.

ಈ ಪರಿ ಸೀತಾದೇವಿಯನ್ನು ರಾವಣ ಭಂಗಗೊಳಿಸುವುದನ್ನು ನೋಡಿ ಚರಾಚರ ಜಗತ್ತು ಸಮಸ್ತವೂ ಕತ್ತಲೆಯಲ್ಲಿ ಮುಳುಗಿತು. ಜಗತ್ತು ತುಂಬಾ ಕಂಗೆಟ್ಟಿತು. ಸೂರ್ಯ ಕಳೆಗುಂದಿಹೋದ. ಗಾಳಿ ಬೀಸಲಿಲ್ಲ. ಚತುರ್ಮುಖ ಬ್ರಹ್ಮ ದಿವ್ಯದೃಷ್ಟಿಯಿಂದ ನೋಡಿದ. "ಇನ್ನು ನಮ್ಮ ಕೆಲಸ ಕೈಗೂಡಿತು" ಎಂದ. ದಂಡಕಾರಣ್ಯದ ಮಹರ್ಷಿಗಳು ಎಲ್ಲರೂ ಸೀತಾದೇವಿಯ ದುರವಸ್ಥೆಯನ್ನು ನೋಡಿ ಮರುಗಿದರು. ಲೋಕಕಂಟಕ ರಾವಣನ ಕೊನೆಗಾಲ ಬಂತು ಎಂದು ಹರ್ಷಗೊಂಡರು.

"ರಾಮಾ, ರಾಮಾ, ಲಕ್ಷ್ಮಣ" ಎಂದು ಸೀತೆ ಅಳುತ್ತ ಅಳುತ್ತ ಕೂಗುತ್ತಲೇ ಇದ್ದಳು. ಆಕೆ ಅಳುತ್ತ ಇದ್ದರೂ ಎತ್ತಿಕೊಂಡು ರಾವಣ ಆಕಾಶಕ್ಕೆ ಹಾರಿದ.

ಮೈಯ ಹೊಂಬಣ್ಣ, ಉಟ್ಟ ಹೊಂಬಣ್ಣದ ರೇಶ್ಮೆ ಶೀರೆ, ಸೀತಾದೇವಿ ಮಿಂಚಿನ ಬಳ್ಳಿಯ ಹಾಗೆ ಕಂಡಳು ಮುಗಿಲಿನಲ್ಲಿ. ಗಾಳಿಗೆ ಹಾರುತ್ತ ಇತ್ತು ಆಕೆಯ ಸೆರಗು. ಆಗ ಆ ರಾಕ್ಷಸ ದೊಡ್ಡ ಪರ್ವತದ ಹಾಗೆ, ಸೀತೆಯ ಸೆರಗಿನ

ಹೊಂಬಣ್ಣ ಆ ಪರ್ವತವನ್ನು ಕವಿದ ದಳ್ಳುರಿಯ ಹಾಗೆ ಕಂಡಿತು. ಆ ಮಂಗಳ ಸ್ವರೂಪಳ ಮುಡಿಯಿಂದ ಗಾಳಿಗೆ ಹಾರಿ ಕನ್ನೈದಿಲೆ ಹೂ ರಾವಣನ ಮೇಲೆ ಬಂದು ಬಿದ್ದವು. ಮುಗಿಲಿನಲ್ಲಿ ಹಾರಾಡುವ ಸೀತೆಯ ಸೆರಗು ಸೂರ್ಯನ ಕಾಂತಿಗೆ ಕೆಂಪಗೆ ರಕ್ತಮೇಘದಂತೆ ಕಾಣಿಸಿತು. ಸೀತೆಯ ಮೂಗು ಅವಳ ಮುಖದ ಚೆಲುವನ್ನು ಹೆಚ್ಚಿಸುವಂಥದು. ಈಗ ಯಾವುದೂ ಇಲ್ಲ. ರಾಮ ಇಲ್ಲದ್ದರಿಂದ ದಂಟು ಇಲ್ಲದ ಕಮಲದ ಹಾಗೆ ಇತ್ತು ಅವಳ ಮುಖ.

ಅವಳ ಹಣೆಗೆ ಒಪ್ಪುವ ಮುಂಗುರುಳು. ಅರಳುವ ತಾವರೆಹೂವಿನ ಹಾಗೆ ಇದ್ದಳು ಸೀತೆ. ಯಾವ ದೋಷವೂ ಕಾಣಲಿಲ್ಲ. ಕಾಲಮೇಘದ ಹಾಗೆ ಇದ್ದ ರಾವಣನ ಪಕ್ಕದಲ್ಲಿ ಸೀತೆ ಮೋಡಗಳ ಮರೆಯಲ್ಲಿ ಮೂಡುತ್ತ ಇದ್ದ ಚಂದ್ರನಂತೆ ಕಂಡಳು.

ಎಸಳಿನಂಥ ಮೂಗು, ಅಂದದ ಕೆಂದುಟಿ, ಬೆಳ್ಳಗೆ ಥಳಥಳ ಹೊಳೆವ ನಿರ್ಮಲ ಆದ ಹಲ್ಲಿನ ಸಾಲು, ಹೊಂಬಣ್ಣದ ಮೈಹೊಳಪು, ಸೀತೆಯ ಮುಖ ಚಂದ್ರಬಿಂಬದ ಹಾಗೆ ಇತ್ತು. ಆದರೆ ರಾಮ ಇಲ್ಲ, ರಾವಣ ಕದ್ದು ಒಯ್ಯುತ್ತ ಇದಾನೆ. ಸೀತೆ ಒಂದೇ ಸಮನೆ ಅಳುತ್ತಾಳೆ. ಭಯದಿಂದ ಗಡಗಡ ನಡುಗುತ್ತಾಳೆ. ಹಗಲಿನಲ್ಲಿ ಕಾಣುವ ಚಂದ್ರನ ಹಾಗೆ ಕಳಾಹೀನ ಆಗಿತ್ತು ಆ ಮುಖ.

ರಾವಣನ ಮೈ ಕಾಳಗಪ್ಪು. ಅವನ ಪಕ್ಕದಲ್ಲಿ ಬಂಗಾರದ ಹೊಳಪಿನ ಸೀತೆ ಇಂದ್ರನೀಲಮಣಿಗೆ ಸುತ್ತಿದ ಚಿನ್ನದ ಒಡ್ಯಾಣದಂತೆ ಕಂಡಳು. ತಾವರೆ ಹೂವಿನ ಬಣ್ಣದ ಮೈ, ಚಿನ್ನದ ಒಡವೆಗಳ ಥಳಥಳ, ಕಾರ್ಮೋಡದಲ್ಲಿ ಮಿಂಚಿನ ಹಾಗೆ ಕಂಡಳು ಸೀತೆ. ಚಿಗುರೆಲೆಯ ಎಳೆಗೆಂಪುಬಣ್ಣದ ಸೀತೆಯನ್ನು ಆ ಕರಿಯ ರಾಕ್ಷಸ ಎತ್ತಿಕೊಂಡು ಹೋಗುತ್ತ ಇದ್ದರೆ ಬಂಗಾರದ ಸರಪಣಿ ಕಟ್ಟಿದ ಆನೆ ಒಂದು ಮುಗಿಲಿನಲ್ಲಿ ಹೋಗುವ ಹಾಗೆ ಇತ್ತು.

ರಾವಣಾಸುರ ಕಾರ್ಮೋಡದ ಹಾಗೆ, ಸೀತೆಯ ಆಭರಣಗಳ ಝಣ ಝಣ ಗುಡುಗಿನ ಹಾಗೆ, ಆಕೆಯ ಮೈಯ ಬಣ್ಣ ನಿಗಿನಿಗಿ ಮಿಂಚಿನ ಹಾಗೆ ಕಾಣಿಸಿತು. ಸೀತಾದೇವಿಯ ಮುಡಿಯಿಂದ ಉದುರಿಬಿದ್ದವು ಆಕೆ ಮುಡಿದು ಇದ್ದ ಹೂ. ರಾವಣನ ವೇಗಕ್ಕೆ ಆ ಹೂ ನೆಲ ಸೋಂಕದೆ ಮೇಲೇ ಎಗರಿ, ಆ ಗಾಳಿಗೆ ಅವನ ಸುತ್ತಲೂ ಹಾರಿಬಂದವು. ಮೇರುಪರ್ವತದಂಥ ರಾಕ್ಷಸನ ಸುತ್ತ ನಕ್ಷತ್ರಗಳಂತೆ ಈ ಹೂಗಳು.

ಸೀತೆಯ ಕಾಲಿನಲ್ಲಿ ರತ್ನ ಖಚಿತ ಅಂದುಗೆ ಇತ್ತು. ಈ ವೇಗಕ್ಕೆ ಅದು ಕಾಲಿನಿಂದ ಜಾರಿತು. ಮಿಂಚಿನಂತೆ ಮೆರೆಯುತ್ತ ಮಧುರಧ್ವನಿ ಮಾಡುತ್ತ ನೆಲಕ್ಕೆ ಬಿತ್ತು. ಸೀತೆ ಮುಗಿಲಿನಲ್ಲಿ ಜಾಜ್ವಲ್ಯಮಾನ ಧೂಮಕೇತುವಿನ ಹಾಗೆ ಕಂಡುಬಂದಳು. ಸೀತೆಯ ಆಭರಣಗಳು ಬೆಂಕಿಯ ಬಣ್ಣದಿಂದ ಹೊಳೆಹೊಳೆಯುತ್ತ ಇದ್ದವು. ಅವು ಒಂದು ಒಂದು ಆಗಿ ಕೆಳಕ್ಕೆ ಬೀಳುತ್ತ ಇದ್ದರೆ ಗಲಗಲ ಸದ್ದು ಮಾಡುತ್ತ ನಕ್ಷತ್ರಗಳು ಆಕಾಶದಿಂದ ಉದುರುತ್ತ ಇವೆಯೇನೋ ಎನಿಸಿತು. ಚಂದ್ರನಂತೆ ಹೊಳೆಯುವ ಆಕೆಯ ಮುತ್ತಿನ ಸರ ಎದೆಯಿಂದ ಜಾರಿ ಕೆಳಗೆ ಬಿದ್ದರೆ ಆಕಾಶದಿಂದ ಗಂಗೆ ಇಳಿದುಬರುತ್ತಾಳೋ ಎನಿಸಿತು.

ರಾವಣ ಆಕಾಶದಲ್ಲಿ ಹೋಗುವ ವೇಗಕ್ಕೆ ಗಾಳಿ ಬಿರುಸು ಆಗಿ ಬೀಸಿತು. ಗಿಡಮರ ಅಲ್ಲಾಡಿದವು. ಅಲ್ಲಿ ಇದ್ದ ಬಗೆಬಗೆಯ ಹಕ್ಕಿಗಳು ಕಲಕಲ ಸದ್ದು ಮಾಡಿದವು. ಸೀತಾದೇವಿಯನ್ನು ನೋಡಿ ಹೆದರಬೇಡ ಎಂದು ಎಲ್ಲವೂ ಹೇಳುವ ಹಾಗೆ ಇತ್ತು. ತಮ್ಮ ಸಖಿ ಸೀತೆಯ ಸಂಕಟವನ್ನು ನೋಡಿ ಸರೋವರಗಳು ಉಸಿರೇ ಆಡದೆ ದುಃಖಿಸುತ್ತ ಇದ್ದವು. ಕಮಲದ ಹೂ ಬಾಡಿತ್ತು, ಮೀನುಗಳ ಗುಂಪು ಹೆದರಿತ್ತು. ಸಿಂಹಗಳೂ ಹುಲಿಗಳೂ ಜಿಂಕೆಗಳೂ ಇತರ ಮೃಗಪಕ್ಷಿಗಳೂ ಸೀತೆಯ ನೆರಳನ್ನು ಹಿಂಬಾಲಿಸಿ ಓಡಿದವು. ರಾವಣನ ಮೇಲೆ ಸಿಟ್ಟು ಅವಕ್ಕೆ. ಸೀತೆಯನ್ನು ಹೊತ್ತುಕೊಂಡು ಹೋಗುತ್ತಾನಲ್ಲ ದುರುಳ ಎಂದು ಬೆಟ್ಟಗುಡ್ಡಗಳಿಗೆ ಸಿಟ್ಟು. ಅವು ಕೈ ಎತ್ತಿದ ಹಾಗೆ ಶಿಖರಗಳು, ಕಂಬನಿಗರೆಯುವಂತೆ ಗಿರಿನದಿಗಳು. ಸೀತಾಪಹರಣವನ್ನು ನೋಡಿ ಸೂರ್ಯ ಕಳೆಗುಂದಿದ. ಬಿಳುಪು ಏರಿದ.

'ಲೋಕನಾಥ ಶ್ರೀರಾಮನ ಹೆಂಡತಿಯನ್ನು ನೀಚ ರಾವಣ ಕದ್ದು ಒಯ್ಯುತ್ತ ಇದಾನೆ. ಇನ್ನು ಈ ಲೋಕದಲ್ಲಿ ಧರ್ಮ ಎಲ್ಲಿಯದು? ಸತ್ಯ ಎಲ್ಲಿಯದು? ದಯೆ ಇಲ್ಲವೇ ಇಲ್ಲ. ಋಜುತ್ವ ಎಲ್ಲಿ ಬಂತು?' ಎಂದು ಸಮಸ್ತ ಜೀವರಾಶಿಯೂ ಸೇರಿ ಮೊರೆ ಇಟ್ಟವು. ಚಿಗರಿಯ ಮರಿಗಳು ಬೆದರಿ ಭಯದಿಂದ ನಡುಗುತ್ತ ಮುಖ ಕಂದಿ ಕಂಬನಿಗರೆಯುತ್ತ ಸೀತೆಯನ್ನು ನೋಡುತ್ತ ಇದ್ದವು.

"ರಾಮಾ, ಲಕ್ಷ್ಮಣಾ" ಎಂದು ಸವಿದನಿಯಿಂದ ಕೂಗಿ ಅಳುತ್ತ, ಭೂಮಿಯ ಕಡೆಗೇ ತಿರುತಿರುಗಿ ನೋಡುತ್ತ ಇದ್ದ ಸೀತೆಯನ್ನು ನೋಡಿ ವನದೇವತೆಗಳು ಎಲ್ಲರೂ ದುಃಖದಿಂದ ನಡುಗಿದರು.

ಕೆದರಿದ ಮುಂಗುರುಳು, ಮಾಸಿದ ತಿಲಕ, ದೀನಳಾಗಿ ಗೋಳಿಡುತ್ತ ಇದ್ದಾಳೆ ಸೀತೆ. ತನಗೆ ಇದೇ ಸಾವಿನ ಮೊದಲು ಎಂಬುದನ್ನು ಅರಿಯದೆ ಆ ರಾವಣ ಆ ಮಹಾಪತಿವ್ರತೆಯನ್ನು ಎತ್ತಿಕೊಂಡು ಹೋದ.

ಕಾಪಾಡುವವರು ಯಾರೂ ಇಲ್ಲದೆ ರಾಮಲಕ್ಷ್ಮಣರ ಸುಳಿವೇ ಇಲ್ಲದೆ ಸೀತೆ ಸೊರಗಿಹೋದಳು. ಅವಳ ಮುಗುಳುನಗೆ ಮಾಯ ಆಯಿತು.

೧೨

ರಾವಣಾಸುರ ಎತ್ತಿಕೊಂಡು ಹೋಗುತ್ತ ಇದ್ದಾನೆ. ಸೀತೆಗೆ ಮಹಾ ಭಯ, ಘೋರ ದುಃಖ. ಗಡಗಡ ನಡುಗಿದಳು. ಅತ್ತಳು. ಅತ್ತು ಅತ್ತು ಕಣ್ಣು ಕೆಂಪು ಆದವು. ಕರುಣೆ ಹುಟ್ಟುವಂತೆ ಅತ್ತಳು. ನೀಚ ರಾಕ್ಷಸನ ಮನಸ್ಸು ಬದಲು ಆಗಲಿಲ್ಲ. ಕಡೆಗೆ ಸಿಟ್ಟುಗೊಂಡು ಅವನನ್ನು ಬೈದಳು ಸೀತೆ.

"ನೀಚ, ರಾಮಲಕ್ಷ್ಮಣರು ಇಲ್ಲದ ವೇಳೆಯನ್ನು ನೋಡಿ ನನ್ನನ್ನು ಕದ್ದು ಓಡಿಹೋಗುತ್ತೀಯಲ್ಲ! ನಾಚಿಕೆ ಇಲ್ಲವೆ ನಿನಗೆ? ಇಂಥ ದುಷ್ಟ ಕೆಲಸ ಮಾಡುತ್ತೀಯಲ್ಲ. ದುರುಳ, ಹೇಡಿ. ನನ್ನ ಗಂಡ ವೀರಾಧಿವೀರ ಶ್ರೀರಾಮನ ಇದಿರಿಗೆ ನಿಲ್ಲಲು ಅಂಜಿ ನನ್ನನ್ನು ಕದ್ದು ಒಯ್ಯಲು ಇಷ್ಟು ಮಾಯಾತಂತ್ರ ಹೂಡಿದೆಯಾ? ನೀನೇ ಜಿಂಕೆಯ ರೂಪದಿಂದ ಮರುಳುಮಾಡಿ ರಾಮನನ್ನು ದೂರ ಕರೆದು ಒಯ್ದೆ. ನಮ್ಮ ಮಾವನವರ ಗೆಳೆಯ ಮುದುಕ ಜಟಾಯು. ಆತ ನನ್ನನ್ನು ಕಾಪಾಡಲು ಬಂದರೆ ಕೊಂದೆಯಲ್ಲ. ಏನು ಶೌರ್ಯ ನಿನ್ನದು? ನಿನ್ನ ಪರಾಕ್ರಮ ಕೀರ್ತಿಗಳನ್ನು ಎಷ್ಟೋ ಹೊಗಳಿಕೊಂಡೆ. ರಾಕ್ಷಸಾಧಮ! ರಾಮನನ್ನು ಇದಿರಿಸಲಾರದೆ ನನ್ನನ್ನು ಕದ್ದು ಒಯ್ಯುವುದೇ ನಿನ್ನ ಶೌರ್ಯ.

"ಯಾರೂ ಇಲ್ಲದ ಸಮಯದಲ್ಲಿ ಪರಸ್ತ್ರೀಯನ್ನು ಕದಿಯುವ ನೀಚ ಕಾರ್ಯವೇಯೆ ನಿನ್ನ ಪರಾಕ್ರಮ? ನಾಚಿಕೆ ಆಗದೆ ನಿನಗೆ? ಏನು ನಿನ್ನ ಜಂಬ? ಕೈಲಾಗದ ಹೆಂಗಸು! ಪರಸ್ತ್ರೀ. ಯಾರೂ ಇಲ್ಲದ ಸಮಯ! ಇಂಥ ಕ್ರೂರ ಅಧರ್ಮದ ಕಾರ್ಯ ಮಾಡಿದ ನೀನೂ ಒಬ್ಬ ಗಂಡಸೆ? ಶೂರನೆ? ಸುಡು ಸುಡು ನಿನ್ನ ಶೌರ್ಯ. ಎಲ್ಲರೂ ನಗುತ್ತಾರಲ್ಲ ನಿನ್ನನ್ನು ಗೇಲಿಮಾಡಿ. ನಿನ್ನ ವಂಶಕ್ಕೇ ಕೆಟ್ಟ ಹೆಸರು ಬಂತೆ. ನಿನ್ನ ಚರಿತ್ರೆಗೆ ಬೆಂಕಿ ಇಡು. ನೀನೋ ನಿನ್ನ ಶೌರ್ಯವೋ ನಿನ್ನ ಪೌರುಷವೋ ನಿನ್ನ ಜಂಬವೋ. ಸುಡು ಸುಡು.

"ಹೀಗೆ ಓಡಿಹೋಗುತ್ತ ಇದ್ದರೆ ನಾನು ಏನು ಮಾಡಲಿ? ಎರಡು ಗಳಿಗೆ ತಡೆ. ಪ್ರಾಣಸಹಿತ ಹಿಂದಕ್ಕೆ ಹೋಗಲಾರೆ. ರಾಮಲಕ್ಷ್ಮಣರ ಕಣ್ಣಿಗೆ ಬಿದ್ದೆಯೋ, ನಿನ್ನ ಸಮಸ್ತ ಸೇನೆಯನ್ನೂ ಕಟ್ಟಿಕೊಂಡು ಬಂದರೂ ಒಂದು ಗಳಿಗೆ ಕೂಡ ಬದುಕಲಾರೆ. ಕಾಡಿನಲ್ಲಿ ಕಾಳ್ಗಿಚ್ಚಿಗೆ ಸಿಕ್ಕ ಪಕ್ಷಿಗಳ ಹಾಗೆ ರಾಮಲಕ್ಷ್ಮಣರ ಬಾಣದ ಏಟಿಗೆ ಕೂಡಲೆ ಸಾಯುತ್ತೀ ನೀನು. ನನ್ನ ಮಾತು ಕೇಳು. ನಿನ್ನ ಹಿತಕ್ಕೆ ಎಂದೇ ನನ್ನನ್ನು ಬಿಡು.

"ನೀನು ಬಿಡದೆ ಇದ್ದರೆ ನೀನು ಹೀಗೆ ನನ್ನನ್ನು ಅಪಹರಿಸಿದೆ ಎಂದು ತಿಳಿದ ಕೂಡಲೇ ಲಕ್ಷ್ಮಣಸಮೇತ ಬರುತ್ತಾನೆ ರಾಮ. ಅವರ ಕೈಯಲ್ಲಿ ಸಾಯುತ್ತೀಯೆ. ಖಂಡಿತ. ನೀನು ಬಲವಂತದಿಂದ ನನ್ನನ್ನು ಕದ್ದು ಒಯ್ಯುತ್ತ ಇದ್ದೀಯೆ. ನಿನ್ನ ಆಸೆ ಮಣ್ಣುಪಾಲು ಆಗುತ್ತವೆ. ನನ್ನ ಗಂಡ ದೇವಸಮಾನ. ಆತನನ್ನು ಕಾಣದೆ ಶತ್ರುವಶಳು ಆಗಿ ನಾನು ಬಹಳ ಕಾಲ ಬದುಕುತ್ತೇನೆಯೆ? ಸಾಧ್ಯ ಇಲ್ಲ.

"ವಿನಾಶಕಾಲಕ್ಕೆ ಮನುಷ್ಯನಿಗೆ ವಿಪರೀತಬುದ್ಧಿ. ನಿನಗೆ ಈಗ ವಿನಾಶ ಕಾಲ ಬಂದಿದೆ. ಹಿತ ಯಾವುದೋ ಅಹಿತ ಯಾವುದೋ ನಿನಗೆ ತಿಳಿಯುತ್ತ ಇಲ್ಲ. ಸಾಯುವವನಿಗೆ ಬದುಕು ರುಚಿಸದು. ನಿನ್ನ ಕೊರಳಿಗೆ ಕಾಲಪಾಶ ಬಿದ್ದಿದೆ. ಈಗ ನೀನು ಭಯಪಡಬೇಕು. ಆದರೆ ನಿರ್ಭಯ ಆಗಿ ಇದ್ದೀಯೆ. ಆದ್ದರಿಂದ ನಿನಗೆ ಸಾವು ಖಂಡಿತ.

"ನೆತ್ತರು ತುಂಬಿ ಹರಿಯುವ ವೈತರಣೀ ದರ್ಶನ ಆಗುತ್ತದೆ ನಿನಗೆ. ಕತ್ತಿಗಳೇ ಮರದ ಎಲೆಗಳು ಆಗಿರುವ ಅಸಿಪತ್ರ ವನವನ್ನು ನೋಡುತ್ತೀ. ಪುಟ ಇಟ್ಟ ಚಿನ್ನದ ಹೂಗಳು ವೈಡೂರ್ಯದ ಎಲೆಗಳು ಕಬ್ಬಿಣದ ಚೂಪು ಮುಳ್ಳುಗಳು ಇರುವ ಬೂರುಗ ಮರ ಕಾಣುತ್ತದೆ ನಿನಗೆ. ನಿನಗೆ ಎಳ್ಳಷ್ಟೂ ದಯೆ ಇಲ್ಲ. ಮಹಾತ್ಮ ರಾಮನಿಗೆ ಇಂಥ ಮಹದಪಕಾರ ಮಾಡಿದೆ. ವಿಷ ಕುಡಿದೆ ನೀನು. ಇನ್ನು ಬೇಗನೆ ಸಾಯುತ್ತೀ.

"ರಾಕ್ಷಸ, ಎಲ್ಲಿಗೆ ಹೋದರೂ ನಿನಗೆ ರಾಮನ ಭಯ ತಪ್ಪಿದ್ದು ಅಲ್ಲ. ಬೆನ್ನಟ್ಟಿ ಬರುತ್ತದೆ. ಕಾಲಪಾಶ ಸುತ್ತಿಕೊಂಡಿದೆ ನಿನಗೆ. ತಮ್ಮನನ್ನೂ ಕರೆಯದೆ ಒಬ್ಬನೇ ನಿಂತು ಹದಿನಾಲ್ಕುಸಾವಿರ ರಾಕ್ಷಸರನ್ನು ಹುಟ್ಟು ಅಡಗಿಸಿದ ಮಹಾಪರಾಕ್ರಮಶಾಲಿ ಸರ್ವಾಸ್ತ್ರವಿಶಾರದ ಶ್ರೀರಾಮ! ಅದೂ ಒಂದೇ ನಿಮಿಷ

ದಲ್ಲಿ. ಅಂಥವನ ಪ್ರೀತಿಯ ಹೆಂಡತಿಯನ್ನು ಕದ್ದು ತಂದವನನ್ನು ಕೊಲ್ಲದೆ ಬಿಟ್ಟಾನೆಯೆ?"

ಭಯ, ದುಃಖ. ಸೀತೆಗೆ ಮೈಮೇಲೆ ಎಚ್ಚರ ಇಲ್ಲ. ಬಾಯಿಗೆ ಬಂದ ಹಾಗೆ ಕಠಿನ ಶಬ್ದಗಳಿಂದ ರಾವಣನನ್ನು ಬೈದಳು. ಅತ್ತಳು. ಗಡಗಡ ನಡುಗಿದಳು ರಾವಣನ ಕೈಗೆ ಸಿಕ್ಕಿ.

ರಾವಣನಿಗೆ, ಆ ಪಾಪಾತ್ಮನಿಗೆ, ಎಳ್ಳಷ್ಟೂ ಕನಿಕರ ಬರಲಿಲ್ಲ. ವೇಗದಿಂದ ಮುಂದೆ ಸಾಗುತ್ತಲೇ ಇದ್ದ.

೧೩

ರಾವಣ ಸೀತೆಯನ್ನು ಎತ್ತಿಕೊಂಡು ಹೋಗುತ್ತ ಇದಾನೆ. ಆಕೆಯನ್ನು ಬಿಡಿಸಿಕೊಳ್ಳುವವರು ಯಾರೂ ಕಾಣಲಿಲ್ಲ. ಸೀತೆ ನಾಲ್ಕೂ ದಿಕ್ಕಿಗೂ ನೋಡುತ್ತ ಇದಾಳೆ. ಯಾರಾದರೂ ಇದಾರೆಯೆ? ಅಲ್ಲಿ ಒಂದು ಬೆಟ್ಟದ ಕೋಡುಗಲ್ಲಿನ ಮೇಲೆ ಐದು ಮಂದಿ ವಾನರಶ್ರೇಷ್ಠರು ಕೂತಿದ್ದುದು ಕಂಡಿತು. ಈ ವಾನರರು ರಾಮನಿಗೆ ತನ್ನ ಸುದ್ದಿ ತಿಳಿಸಬಹುದು ಎಂದುಕೊಂಡು ಸೀತೆ ತನ್ನ ಒಡವೆಗಳನ್ನು ಕಳಚಿ ತನ್ನ ಹೊಂಬಣ್ಣದ ಸೀರೆಯ ಸೆರಗಿನಲ್ಲಿ ಕಟ್ಟಿ ಅವರ ನಡುವೆ ಬೀಳುವಂತೆ ಎಸೆದಳು. ರಾವಣ ನೋಡಲಿಲ್ಲ. ಅವನಿಗೆ ಅವನ ಸಂಭ್ರಮವೇ ಸಂಭ್ರಮ.

ಒಡವೆಗಳ ಗಂಟು ನಡುವೆ ಬಿದ್ದಾಗ ವಾನರರು ತಲೆ ಎತ್ತಿ ನೋಡಿದರು. ರಾವಣ ಸೀತೆಯನ್ನು ಎತ್ತಿಕೊಂಡು ಹೋಗುತ್ತ ಇದಾನೆ. ಸೀತೆ ಗೋಳಾಡುತ್ತ ಇದಾಳೆ. ತಮ್ಮ ಜೇನುಬಣ್ಣದ ಕಣ್ಣಿಂದ ವಾನರರು ಎವೆ ಇಕ್ಕದೆ ನೋಡಿದರು. ರಾವಣ ಪಂಪಾಸರೋವರವನ್ನು ದಾಟಿದ. ಸೀತೆ ಎಷ್ಟು ಅತ್ತರೂ ಅವನಿಗೆ ಗಮನ ಇಲ್ಲ. ಲಂಕೆಯ ಕಡೆ ಸಾಗಿದ. ಸೀತೆ ತನ್ನ ಪಾಲಿನ ಮೃತ್ಯುದೇವತೆ, ಚೂಪು ಕೋರೆಹಲ್ಲಿನ ವಿಷಸರ್ಪ ಎಂದು ಅವನಿಗೆ ತಿಳಿಯಲಿಲ್ಲ. ಸಂತೋಷ ದಿಂದ ಹೋಗುತ್ತ ಇದ್ದ. ಕಾಡುಮೇಡು ಗುಡ್ಡಬೆಟ್ಟ ಹೊಳೆತೊರೆ ಕೆರೆಕೊಳ ಎಲ್ಲವನ್ನೂ ವೇಗವಾಗಿ ದಾಟಿ ಆಕಾಶಮಾರ್ಗದಲ್ಲಿ ಸಾಗಿದ. ಬಿಲ್ಲಿನಿಂದ ಚಿಮ್ಮಿಬಂದ ಬಾಣದ ಹಾಗೆ. ಸಮಸ್ತ ನದಿಗಳಿಗೂ ಆಶ್ರಯ, ತಿಮಿತಿಮಿಂಗಲ

ಮಕರಗಳಿಗೆ ನಿವಾಸ ಆದ ಸಮುದ್ರವನ್ನೂ ದಾಟಿದ. ರಾವಣ ಹೀಗೆ ಸೀತಾ ದೇವಿಯನ್ನು ಒಯ್ಯುವುದನ್ನು ನೋಡಿತು ಸಮುದ್ರ. ಅದಕ್ಕೆ ಭಯ ಆಯಿತು. ಅಲೆ ನಿಂತು ಸ್ತಬ್ಧ ಆಯಿತು ಸಮುದ್ರ. ಜಲಚರ ಪ್ರಾಣಿಗಳು ಒಂದೂ ಮೇಲಕ್ಕೆ ಬರಲೇ ಇಲ್ಲ, ನೀರಿನ ಒಳಗೇ ಅಡಗಿಕೊಂಡವು.

ಆಕಾಶದಲ್ಲಿಯೇ ಓಡಾಡುತ್ತ ಇದ್ದ ಸಿದ್ಧರೂ ಚಾರಣರೂ ಇದನ್ನು ನೋಡಿದರು. "ಸರಿ, ಇಲ್ಲಿಗೆ ರಾವಣನ ಕೆಲಸ ಮುಗಿಯಿತು" ಎಂದು ಕೊಂಡರು. ಸೀತಾದೇವಿ ರಾವಣನ ಪಟ್ಟು ಬಿಡಿಸಿಕೊಳ್ಳಲು ಹೆಣಗಿದಳು. ರಾವಣ ಮತ್ತಷ್ಟು ಗಟ್ಟಿ ಆಗಿ ಅಮುಕಿ ಹಿಡಿದುಕೊಂಡ. ಸೀತೆ ಬಿಕ್ಕಿಬಿಕ್ಕಿ ಅತ್ತಳು. ಸೀತೆಯೇ ತನ್ನ ಮೃತ್ಯುದೇವತೆ ಎಂದು ಅರಿಯದ ರಾವಣಾಸುರ ಲಂಕೆಗೆ ಬಂದ. ಅಚ್ಚುಕಟ್ಟು ಆದ ರಾಜಬೀದಿಗಳನ್ನು ದಾಟಿ ಜನರ ಗಜಿಬಿಜಿ ಯಿಂದ ತುಂಬಿದ ಹಲವು ತೊಟ್ಟಿಗಳ ತನ್ನ ಅಂತಃಪುರವನ್ನು ಹೊಕ್ಕ. ಸೀತೆ ದುಃಖದಿಂದ ಮೈಮರೆತು ಇದ್ದಾಳೆ. ಅವಳನ್ನು ಮಯನ ಮಾಯೆಯಿಂದ ಕಟ್ಟಿದ ತನ್ನ ಅಂತಃಪುರದಲ್ಲಿ ಇಳಿಸಿದ.

ಅಲ್ಲಿ ಇದ್ದ ರಾಕ್ಷಸಸ್ತ್ರೀಯರು ಭಯಂಕರರು, ಪಿಶಾಚಮುಖದವರು. "ನೀವು ಇವಳಿಗೆ ಕಾವಲು. ನನ್ನ ಅಪ್ಪಣೆ ಇಲ್ಲದೆ ಗಂಡಸು ಹೆಂಗಸು ಯಾರೂ ಇವಳನ್ನು ನೋಡಕೂಡದು. ಮುತ್ತು ರತ್ನ ಚಿನ್ನ ಒಡವೆ ವಸ್ತ್ರ ಯಾವುದನ್ನು ಕೇಳಿದರೂ ಇವಳು, ಅದನ್ನು ಆ ಕೂಡಲೇ ತಂದುಕೊಡಬೇಕು. ಇದು ನನ್ನ ಅಪ್ಪಣೆ. ತಿಳಿದೋ ತಿಳಿಯದೆಯೋ ಲವಲೇಶ ಮಾತ್ರ ನಿಷ್ಠುರ ಮಾತು ಆಡಿದರೆ ನೀವು, ನಿಮಗೆ ಸಾವೇ. ತಿಳಿದುಕೊಳ್ಳಿ" ಎಂದು ಆ ಮಹಾಪ್ರತಾಪಶಾಲಿ ರಾಕ್ಷಸರಾಜ ಹೊರಗೆ ಹೋದ.

ಮುಂದೆ ಏನು ಮಾಡಬೇಕು ಎಂದು ಸ್ವಲ್ಪ ಹೊತ್ತು ಯೋಚಿಸಿದ. ಮಹಾಶೂರರೂ ನರಮಾಂಸಭಕ್ಷಕರೂ ಆದ ಎಂಟು ಮಂದಿ ರಾಕ್ಷಸರನ್ನು ಕರೆಯಿಸಿದ. ಬ್ರಹ್ಮನ ವರಬಲದಿಂದ ಮದೋನ್ಮತ್ತ ಆದ ರಾವಣ ಆ ರಾಕ್ಷಸ ವೀರರನ್ನು ಅವರ ಶಕ್ತಿಸಾಮರ್ಥ್ಯಗಳನ್ನೂ ಬಹಳ ಹೊಗಳಿದ. "ರಾಕ್ಷಸ ವೀರರೆ, ನಾನಾ ಆಯುಧಗಳನ್ನು ತೆಗೆದುಕೊಂಡು ನೀವು ಈಗಲೆ ಜನಸ್ಥಾನಕ್ಕೆ ಹೊರಡಿ. ಮೊದಲು ಖರ ಇದ್ದ ಅಲ್ಲಿ. ಈಗ ಅದು ಹಾಳು ಆಗಿದೆ. ಈಗ ರಾಕ್ಷಸರು ಯಾರೂ ಅಲ್ಲಿ ಇಲ್ಲ. ಅಲ್ಲಿಗೆ ಹೋಗಬೇಕು ನೀವು. ಅಂಜಬೇಡಿ.

ನಿಮ್ಮ ಪೌರುಷಶಕ್ತಿಗಳೇ ನಿಮ್ಮ ಕಾವಲು. ಖರದೂಷಣರ ನಾಯಕತನದಲ್ಲಿ ದೊಡ್ಡ ದಂಡು ಇತ್ತು ಅಲ್ಲಿ. ಎಲ್ಲರನ್ನೂ ಯುದ್ಧದಲ್ಲಿ ರಾಮ ಕೊಂದ. ಆ ಕೋಪದಿಂದ ನನಗೆ ವೈಮನಸ್ಯವಿದೆ. ರಾಮನ ಮೇಲೆ ಮಹಾದಾರುಣ ವೈರ ಹುಟ್ಟಿದೆ. ಆ ಹಗೆಯನ್ನು ನಾನು ತೀರಿಸಿಕೊಳ್ಳಬೇಕು. ಅವನನ್ನು ಕೊಲ್ಲದೆ ನನಗೆ ನಿದ್ದೆ ಹಿಡಿಯದು. ನೀವು ಖರದೂಷಣಹಂತಕ ಆ ರಾಮನನ್ನು ಕೊಲ್ಲಬೇಕು. ಕೊಂದರೆ ಬಡವನಿಗೆ ಭಾಗ್ಯದ ನಿಧಿ ಸಿಕ್ಕಂತೆ ನನಗೆ ಪರಮ ಸಂತೋಷ. ಅಲ್ಲಿಯವರೆಗೆ ನನಗೆ ಸೊಗಸು ಇಲ್ಲ. ನೀವು ಜನಸ್ಥಾನದಲ್ಲಿ ಇದ್ದು ರಾಮ ಯಾವಾಗ ಏನು ಮಾಡುತ್ತಾನೋ ತಿಳಿದುಕೊಂಡು ಇದ್ದದ್ದು ಇದ್ದಹಾಗೇ ನನಗೆ ತಿಳಿಸಬೇಕು.

"ರಾಕ್ಷಸರೆ, ನೀವು ಮಾತ್ರ ಸ್ವಲ್ಪವೂ ವೈಮನಸ್ಯಪಡಕೂಡದು. ನೀವು ಯಾವಾಗಲೂ ರಾಮನನ್ನು ಕೊಲ್ಲಲು ಪ್ರಯತ್ನ ಮಾಡುತ್ತ ಇರಿ. ನಿಮ್ಮ ಬಲಪರಾಕ್ರಮಗಳು ನನಗೆ ಗೊತ್ತು. ರಣರಂಗದಲ್ಲಿ ನೋಡಿದೇನೆ ಎಷ್ಟೋ ಸಲ. ಆದ್ದರಿಂದಲೇ ನಿಮ್ಮನ್ನು ಜನಸ್ಥಾನಕ್ಕೆ ಕಳಿಸುತ್ತ ಇದೇನೆ" ಎಂದ.

ರಾವಣ ಆಡಿದ ಈ ಸವಿಮಾತಿನಿಂದ ಉಬ್ಬಿಹೋದರು ಆ ರಾಕ್ಷಸರು. ತಮ್ಮ ಪ್ರಭುವನ್ನು ನಮಸ್ಕರಿಸಿದರು. ಯಾರ ಕಣ್ಣಿಗೂ ಬೀಳದಂತೆ ಲಂಕಾ ಪಟ್ಟಣವನ್ನು ಬಿಟ್ಟು ಆ ಎಂಟು ಮಂದಿಯೂ ಒಟ್ಟು ಆಗಿ ಜನಸ್ಥಾನಕ್ಕೆ ಹೋದರು.

ಸೀತೆಯನ್ನು ಕದ್ದುತಂದೆನಲ್ಲ ಎಂದು ರಾವಣನಿಗೆ ಅಪರಿಮಿತ ಆನಂದ. ಶ್ರೀರಾಮನಿಗೂ ತನಗೂ ಮಹಾವೈರ ಬಂತು ಇದರಿಂದ ಎಂದು ಅವನಿಗೆ ತಿಳಿಯಲಿಲ್ಲ. ಅಜ್ಞಾನ. ಬುದ್ಧಿ ಇಲ್ಲದೆ ಸಂತೋಷಪಟ್ಟ.

೧೪

ಮಹಾಬಲಾಢ್ಯರು ಆದ ಆ ಎಂಟು ಜನರನ್ನು ಜನಸ್ಥಾನಕ್ಕೆ ಕಳಿಸಿ ತಾನು ಕೃತಕೃತ್ಯ ಆದೆ ಎಂದು ಹಿಗ್ಗಿದ ರಾವಣ. ಮತಿ ಕೆಟ್ಟರೆ ಹೀಗೇ. ಕಾಮಬಾಣಪೀಡಿತ. ಯಾವಾಗಲೂ ಅವನಿಗೆ ಸೀತೆಯದೇ ಧ್ಯಾನ. ಆಕೆಯನ್ನು ನೋಡಬೇಕು ಎಂದು ಅಂತಃಪುರಕ್ಕೆ ಬಂದ.

ಕಂಬನಿಗರೆಯುತ್ತ ರಾಕ್ಷಸಸ್ತ್ರೀಯರ ನಡುವೆ ಸಂಕಟಪಡುತ್ತ ಇದ್ದಳು ಸೀತಾದೇವಿ. ಎಲ್ಲ ಕಡೆಗಳಿಂದಲೂ ಬಂದು ಅಪ್ಪಳಿಸುವ ಬಿರುಗಾಳಿಯ ಹೊಡೆತಕ್ಕೆ ಮುಳುಗುತ್ತ ಇರುವ ಹಡಗಿನ ಹಾಗೆ ಇತ್ತು ಸೀತಾದೇವಿಯ ಸ್ಥಿತಿ. ಹಿಂಡನ್ನು ಅಗಲಿ ಬಂದು ಬೇಟೆನಾಯಿಗಳ ನಡುವೆ ಸಿಕ್ಕಿಬಿದ್ದ ಹೆಣ್ಣುಜಿಂಕೆಯಂತೆ ಘೋರ ರಾಕ್ಷಸಸ್ತ್ರೀಯರ ನಡುವೆ ತಲೆತಗ್ಗಿಸಿಕೊಂಡು ದುಃಖದಲ್ಲಿ ಮುಳುಗಿ ಕುಳಿತು ಇದ್ದಳು.

ಅಳುತ್ತ ಇದ್ದ ದೀನೆ ಪರಾಧೀನೆ ಆದ ಸೀತಾದೇವಿಯನ್ನು ಬಲಾತ್ಕಾರದಿಂದ ಕರೆದು ಒಯ್ದು ತನ್ನ ಇಂದ್ರಭವನಸಮಾನ ಆದ ಅರಮನೆಯನ್ನು ತೋರಿಸಿದ. ಉಪ್ಪರಿಗೆಗಳು ಮೇಲ್ಮನೆಗಳು ಸಾವಿರಾರು ಮಂದಿ ಹೆಂಗಸರು, ಬಗೆಬಗೆಯ ಪಕ್ಷಿಸಮೂಹ, ಚಿನ್ನಬೆಳ್ಳಿಯ ಕೆಲಸ, ದಂತದ ಕೆತ್ತನೆ, ವಜ್ರ ವೈಡೂರ್ಯಾದಿ ನವರತ್ನಗಳ ಜೋಡಣೆಮಾಡಿದ ಕಂಬದ ಸಾಲು— ಮನೋಹರ ಆದ ಅರಮನೆಯನ್ನು ತೋರಿಸಿದ.

ಒಂದು ಉಪ್ಪರಿಗೆಯಿಂದ ಇನ್ನು ಒಂದಕ್ಕೆ ಹೋಗಲು ಬಂಗಾರದ ಮೆಟ್ಟಿಲು, ಒಂದು ಬಂಗಾರದ ಬಾಗಿಲು. ಆ ಮೆಟ್ಟಿಲನ್ನು ಮೆಟ್ಟಿದ ಕೂಡಲೇ ದಿವ್ಯದುಂದುಭಿ ಧ್ವನಿ ಆಗುತ್ತದೆ. ಸೀತಾದೇವಿಯನ್ನು ಕರೆದುಕೊಂಡು ಆ ಮೆಟ್ಟಿಲನ್ನು ಏರಿದ ರಾವಣ. ಅಲ್ಲಿ ಚಿನ್ನಬೆಳ್ಳಿಯಿಂದ ದಂತದಿಂದ ಮಾಡಿದ ಚಿತ್ರವಿಚಿತ್ರ ಗವಾಕ್ಷಗಳು. ಆ ಗವಾಕ್ಷಗಳ ಮೂಲಕ ಅರಮನೆಯ ರತ್ನಖಚಿತ ನೆಲಗಟ್ಟನ್ನು ತೋರಿಸಿದ. ಮತ್ತೂ ಒಂದು ರತ್ನಸೋಪಾನವನ್ನು ಇಳಿಸಿ ದುಃಖಪರಾಯಣೆ ಸೀತೆಗೆ ತನ್ನ ವಿಹಾರೋದ್ಯಾನವನ್ನು ತೋರಿಸಿದ. ಅಲ್ಲಿನ ಇಳಿಬಾವಿಗಳನ್ನೂ ಕಮಲಸರೋವರಗಳನ್ನೂ ಸುತ್ತಲೂ ಬೆಳೆದ ನಾನಾಬಗೆಯ ಗಿಡಮರಗಳನ್ನೂ ತೋರಿಸಿದ.

ಸೀತೆಯ ಮನ ಒಲಿಸಬೇಕಲ್ಲ! ಸೀತೆ ಬಗ್ಗಿಸಿದ ತಲೆ ಎತ್ತಲಿಲ್ಲ. ಮನದಲ್ಲಿ ರಾಮ, ಕಣ್ಣಿನಲ್ಲಿ ನೀರು. ಬೇರೆ ಇಲ್ಲ. ಪಾಪಾತ್ಮ ರಾವಣ ಹೇಳಿದ: "ಸೀತೆ, ಈ ಪಟ್ಟಣದಲ್ಲಿ ಹತ್ತುಕೋಟಿ ರಾಕ್ಷಸರು ಇದಾರೆ. ಇನ್ನೂ ಇಪ್ಪತ್ತೆರಡು ಕೋಟಿ ಇದಾರೆ. ಎಲ್ಲರೂ ಭಯಂಕರರು, ಕ್ರೂರಕರ್ಮಿಗಳು. ಅವರಿಗೆ ಎಲ್ಲರಿಗೂ ನಾನೇ ದೊರೆ. ಮುದುಕರಿಗೆ ಎಳೆಯ ಮಕ್ಕಳಿಗೆ ಇಲ್ಲ. ಉಳಿದವರಿಗೆ ಎಲ್ಲರಿಗೂ ಸಾವಿರ ಸಾವಿರ ಮಂದಿ ಪರಿಚಾರಕರು. ಈ

ರಾಜಪರಿಕರ ಎಲ್ಲವೂ ನಿನ್ನದು ಆಗುತ್ತದೆ. ನನ್ನ ಪ್ರಾಣವೂ ನಿನ್ನ ಅಧೀನವೇ. ವಿಶಾಲನೇತ್ರಿ, ನೀನು ನನ್ನ ಪ್ರಾಣಕ್ಕಿಂತಲೂ ಹೆಚ್ಚು. ನೀನು ನನ್ನನ್ನು ವರಿಸು.

"ಪ್ರಿಯೆ, ಸೀತೆ, ನನ್ನನ್ನು ವರಿಸಿದರೆ ಈ ಅಂತಃಪುರದಲ್ಲಿ ಇರುವ ಸಾವಿರಾರು ಉತ್ತಮಾಂಗನೆಯರು ಇದಾರಲ್ಲ ನನ್ನ ಹೆಂಡತಿಯರು, ಅವರಿಗೆ ನೀನು ಒಡತಿ ಆಗುತ್ತೀ. ಬೇರೆ ಯೋಚನೆ ಮಾಡಬೇಡ. ನನ್ನ ಮಾತನ್ನು ಕೇಳು. ಕಾಮದ ಬೆಂಕಿ ನನ್ನನ್ನು ಸುಡುತ್ತ ಇದೆ. ನನ್ನನ್ನು ಅನುಗ್ರಹಿಸು.

"ಈ ಲಂಕಾಪಟ್ಟಣದ ವಿಸ್ತೀರ್ಣ ನೂರು ಗಾವುದ. ಸುತ್ತಲೂ ಮಹಾ ಸಮುದ್ರ. ದೇವೇಂದ್ರನನ್ನೇ ಮುಂದಿಟ್ಟುಕೊಂಡು ದೇವಾಸುರರು ಒಟ್ಟು ಆಗಿ ಬಂದರೂ ಈ ಪಟ್ಟಣವನ್ನು ಪ್ರವೇಶಿಸಲಾರರು. ಮೂರು ಲೋಕಗಳಲ್ಲಿಯೂ ನನಗೆ ಸಮಾನ ಪರಾಕ್ರಮಿ ಯಾರೂ ಇಲ್ಲ. ದೇವದಾನವಗಂಧರ್ವಯಕ್ಷ ರಾಕ್ಷಸರಲ್ಲಿ ಯಾರೂ ಇಲ್ಲ. ಆ ರಾಮ ಏನು ಮಾಡಬಲ್ಲ? ರಾಜ್ಯಭ್ರಷ್ಟ, ಮಹಾ ದೀನ, ತಾಪಸವೇಷಧಾರಿ, ಗತಾಯು, ಆ ರಾಮನಿಂದ ಏನು ಆದೀತು? ಅವನನ್ನು ಮರೆ. ನನ್ನನ್ನು ವರಿಸು. ನಾನೇ ನಿನಗೆ ತಕ್ಕ ಪತಿ.

"ಹುಚ್ಚಿ, ಯೌವನ ಸ್ಥಿರ ಅಲ್ಲ. ನನ್ನನ್ನು ಸೇರಿ ಸುಖದಿಂದ ವಿಹರಿಸು. ಬೇಕುಬೇಕಾದ ಭೋಗ ಅನುಭವಿಸು. ಸುಂದರಾಂಗಿ, ರಾಮನನ್ನು ನೆನೆಯ ಬೇಡ. ಇನ್ನೆಲ್ಲಿಯ ರಾಮ? ಈ ಪಟ್ಟಣದ ಮಾತನ್ನೆ ಅವನು ಯೋಚಿಸಲಾರ. ಮುಗಿಲಿನಲ್ಲಿ ಮಹಾವೇಗದಿಂದ ಸಂಚರಿಸುವ ಗಾಳಿಯನ್ನು ಕಟ್ಟಹಾಕಲು ಆದೀತೆ? ಧಗಧಗ ಉರಿಯುವ ಬೆಂಕಿಯನ್ನು ಕೈಯಿಂದ ಹಿಡಿದುಕೊಳ್ಳಲು ಆದೀತೆ? ಈ ಲಂಕಾಪಟ್ಟಣವನ್ನು ಆಕ್ರಮಿಸಲು ಯಾರಿಗೂ ಸಾಧ್ಯ ಅಲ್ಲ. ನನ್ನ ಭುಜಬಲ ಇದನ್ನು ಕಾಪಾಡುತ್ತ ಇದೆ. ಇಲ್ಲಿಂದ ನಿನ್ನನ್ನು ಕರೆದು ಒಯ್ಯಲು ಯಾರಿಗೆ ಇದೆ ಶಕ್ತಿ?

"ಮೈಥಿಲಿ, ಈ ಲಂಕೆಯ ರಾಜ್ಯವನ್ನು ನಿನ್ನ ವಶಕ್ಕೆ ಒಪ್ಪಿಸುತ್ತೇನೆ. ಸಮಸ್ತ ದೇವತೆಗಳೂ ನಾನೂ ನಿನ್ನ ಸೇವಕರು ಆಗುತ್ತೇವೆ. ಚರಾಚರ ಜಗತ್ತು ಎಲ್ಲವೂ ನಿನ್ನ ಅಧೀನ ಆಗುತ್ತದೆ. ನೀನೇ ಪಟ್ಟಾಭಿಷೇಕ ಮಾಡಿಕೊ. ನೀನೂ ಸಂತೋಷಪಡು, ನನ್ನನ್ನೂ ಸಂತೋಷಪಡಿಸು. ಪೂರ್ವಜನ್ಮದ ಪಾಪದಿಂದ ನಿನಗೆ ವನವಾಸ ಆಯಿತು. ಅದು ಮುಗಿಯಿತು. ಪೂರ್ವಪುಣ್ಯ

ಫಲ ಆಗಿ ರಾಜಭೋಗ ಒದಗಿದೆ. ಅನುಭವಿಸು. ಸೀತೆ, ದಿವ್ಯಗಂಧಪುಷ್ಪ ಮಾಲಿಕೆ ಇವೆ. ಉತ್ತಮ ಆಭರಣ ಇವೆ. ಸಿಂಗರಿಸಿಕೊ. ನನ್ನನ್ನು ವರಿಸು.

"ಸುಶ್ರೋಣಿ, ನಮ್ಮ ಅಣ್ಣ ಕುಬೇರನನ್ನು ಭುಜಬಲದಿಂದ ಗೆದ್ದು ಪುಷ್ಪಕ ವಿಮಾನವನ್ನು ತಂದೆ. ಸೂರ್ಯನಂತೆ ಬೆಳಗುತ್ತದೆ ಅದು. ಬಹಳ ವಿಸ್ತಾರ. ಉತ್ತಮೋತ್ತಮ. ನನ್ನ ಸಂಗಡ ಅದರಲ್ಲಿ ವಿಹರಿಸು, ಸೀತೆ.

"ನಿನ್ನ ಮುಖ ನಿರ್ಮಲ. ಕಮಲದ ಹಾಗೆ. ಬಲು ಚೆಲುವೆ ನೀನು. ಅತ್ತು ಅತ್ತು ಮುಖ ಕೆಡಿಸಿಕೊಳ್ಳುತ್ತೀ ಏಕೆ?"

ಸೀತೆಯ ದುಃಖ ಹೆಚ್ಚಿತು. ಚಂದ್ರನಂಥ ತನ್ನ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡು ಧಾರೆಧಾರೆ ಕಂಬನಿ ಕರೆಯುತ್ತ ಅತ್ತಳು. ರಾಮಧ್ಯಾನದಿಂದ ಕಂದಿ ಕುಂದಿ ಸೊರಗಿ ಸೊಪ್ಪು ಆದಳು ಸೀತೆ.

ಪಾಪಿ ರಾಕ್ಷಸ ಮತ್ತೆ ಮಾತು ಆಡಿಸಿದ. "ವೈದೇಹಿ, ಧರ್ಮ ಕೆಟ್ಟೀತು ಎಂದು ನಾಚಬೇಡ. ಕೈಲಾಗದ ಗಂಡನನ್ನು ಬಿಟ್ಟು ವೀರಪುರುಷನ ಕೈ ಹಿಡಿಯುವುದು ಸರಿ. ನನ್ನ ಸಂಬಂಧ ಅಧರ್ಮ ಅಲ್ಲ. ಇದು ದೈವಯೋಗದಿಂದ ಒದಗಿದ್ದು. ನಿನ್ನ ಕಾಲಿಗೆ ಬೀಳುತ್ತೇನೆ. ನಾನು ನಿನಗೆ ವಶ. ಅನುಗ್ರಹಿಸು. ನಿನ್ನ ದಾಸ ನಾನು. ಮನ್ಮಥತಾಪದಿಂದ ಹೀಗೆ ಆಡಬಾರದ ಮಾತನ್ನು ಆಡುತ್ತ ಇದೇನೆ. ಈ ದಶಕಂಠ ಮಹಾಪರಾಕ್ರಮಶಾಲಿ. ಯಾರಿಗೂ ಎಂದೂ ತಲೆ ಬಾಗಿಸಿದವನು ಅಲ್ಲ. ಆದರಲ್ಲೂ ಒಬ್ಬ ಹೆಂಗಸಿಗೆ. ಇದು ನಿನ್ನ ಭಾಗ್ಯ ಎಂದು ತಿಳಿ."

ರಾವಣನಿಗೆ ಕಾಲ ಕೂಡಿಬಂದದ್ದು ತಿಳಿಯಲಿಲ್ಲ. ಸೀತೆ ತನ್ನವಳು ಆದಳು ಎಂದುಕೊಂಡ.

೧೫

ದುಃಖದಿಂದ ಕಂದಿ ಕುಂದಿ ಬಾಡಿದ ಸೀತೆ ರಾವಣನ ಮಾತನ್ನು ಕೇಳಿದಳು. ಅವನಿಗೆ ಉತ್ತರ ಹೇಳಬೇಕು. ಆದರೆ ಅವನ ಸಂಗಡ ಮಾತು ಆಡಲು ಅಸಹ್ಯ. ಒಂದು ಹುಲ್ಲುಕಡ್ಡಿಯನ್ನು ಹಿಡಿದುಕೊಂಡು ಅದಕ್ಕೆ ಹೇಳಿದಳು:

"ರಾಕ್ಷಸ, ಧರ್ಮಸೇತುವಿನಂತೆ ಇದ್ದ ದಶರಥಮಹಾರಾಜ ಲೋಕ ಪ್ರಸಿದ್ಧ, ಅಚಲ, ಸತ್ಯಸಂಧ. ಆತನ ಹಿರಿಯ ಮಗ ಶ್ರೀರಾಮ ಮಹಾಧರ್ಮಿಷ್ಠ. ತ್ರಿಲೋಕಪ್ರಖ್ಯಾತಿ ಆತನದು. ಆಜಾನುಬಾಹು, ವಿಶಾಲಲೋಚನ. ಇಕ್ಷ್ವಾಕು ವಂಶದಲ್ಲಿ ಹುಟ್ಟಿದವನು. ಮಹಾತೇಜಸ್ವಿ. ಆತನ ಭುಜ ಸಿಂಹಭುಜ. ಆತ ನನ್ನ ಗಂಡ. ಆತನೇ ನನ್ನ ಪರದೈವ. ಆತನ ತಮ್ಮ ಲಕ್ಷ್ಮಣ. ತಮ್ಮ ಅಣ್ಣ ಇಬ್ಬರೂ ಇಲ್ಲಿಗೆ ಬರುತ್ತಾರೆ. ನಿನ್ನನ್ನು ಕೊಲ್ಲುತ್ತಾರೆ.

"ಆ ರಾಮನ ಇದಿರಿನಲ್ಲಿ ನನ್ನನ್ನು ಬಲಾತ್ಕಾರದಿಂದ ತರಲು ಪ್ರಯತ್ನಿಸ ಬೇಕಾಗಿತ್ತು ನೀನು. ಜನಸ್ಥಾನದಲ್ಲಿ ಆ ಖರ ಸತ್ತುಬಿದ್ದ. ಅವನ ಹಾಗೆ ನೀನೂ ಸತ್ತು ನೆಲಕ್ಕೆ ಉರುಳುತ್ತ ಇದ್ದೆ. ಎಷ್ಟೋ ಜನ ಮಹಾಬಲಶಾಲಿಗಳು ಭಯಂಕರರು ಆದ ಘೋರ ರಾಕ್ಷಸರು ಇದಾರೆ ಎಂದು ಬಡಾಯಿ ಕೊಚ್ಚಿದೆ. ಎಂಥ ವಿಷಸರ್ಪ ಆದರೆ ಏನು, ಎಷ್ಟು ಹಾವು ಆದರೆ ಏನು ಗರುಡನ ಮುಂದೆ? ರಾಮನ ಮುಂದೆ ಅವರ ಹುಟ್ಟು ಅಡಗಿಹೋಗುತ್ತದೆ. ಅಲೆಗಳ ಹೊಡೆತಕ್ಕೆ ನದಿಯ ದಡ ಕುಸಿಯುವಂತೆ ಚಿನ್ನದ ಹಿಡಿಯ ಬಾಣಗಳು ರಾಮನ ಕೈಯ ಬಿಲ್ಲಿನಿಂದ ಚಿಮ್ಮಿದರೆ ಸಾಕು, ನೀನು ಬಿದ್ದುಹೋಗುತ್ತೀಯೆ.

"ದೇವತೆಗಳ ಕೈಯಲ್ಲಿ ರಾಕ್ಷಸರ ಕೈಯಲ್ಲಿ ನಿನಗೆ ಸಾವು ಇಲ್ಲದೆಯೇ ಇರಬಹುದು. ರಾಮನ ಕೈಯಲ್ಲಿ ಸಾವು ತಪ್ಪದು ನಿನಗೆ. ರಾಮನ ಸಂಗಡ ಹಗೆಯನ್ನು ಕಟ್ಟಿಕೊಂಡೆ. ಆತ ನಿನ್ನ ಜೀವ ಉಳಿಸುತ್ತಾನೆಯೆ? ನಿನ್ನ ಆಯುಸ್ಸು ಇನ್ನು ಬಹಳ ಇಲ್ಲ. ಯೂಪಸ್ತಂಭಕ್ಕೆ ಕಟ್ಟಿದ ಯಜ್ಞಪಶು ಬದುಕುವುದು ಉಂಟೆ? ಒಂದು ಸಲ ಕೋಪದ ಉರಿಗಣ್ಣಿನಿಂದ ರಾಮ ನಿನ್ನನ್ನು ನೋಡಿದರೆ ಆಯಿತು ನಿನ್ನ ಆಟ, ಆ ಗಳಿಗೆಯಲ್ಲೇ ಸುಟ್ಟು ಬೂದಿ ಆಗುತ್ತೀಯೆ.

"ರಾಮನ ಮಹಿಮೆ ನಿನಗೆ ತಿಳಿಯದು, ರಾಕ್ಷಸ. ಆಕಾಶದಲ್ಲಿ ಇರುವ ಚಂದ್ರ ನೆಲಕ್ಕೆ ಬೀಳುತ್ತಾನೆ ರಾಮ ಮನಸ್ಸುಮಾಡಿದರೆ. ನಾಶ ಆಗಿಯೂ ಹೋಗುತ್ತಾನೆ. ಸಮುದ್ರಗಳು ಎಲ್ಲವೂ ಬತ್ತಿಹೋದಾವು. ಇಂಥ ವೀರಾಗ್ರಣಿ ರಾಮ. ನಿನ್ನನ್ನು ಕೊಂದು ಆತ ತನ್ನ ಪ್ರಿಯ ಪತ್ನಿಯನ್ನು ಬಿಡಿಸಿಕೊಂಡು ಹೋಗಲಾರನೆ?

"ಪಾಪಿ, ನಿನಗೆ ಕೊನೆಗಾಲ. ನಿನ್ನ ಭಾಗ್ಯ ಮುಗಿಯಿತು. ನಿನ್ನ ಸಾಮರ್ಥ್ಯ ಕುಗ್ಗಿತು. ನಿನಗೆ ಮತಿಯೂ ಕೆಟ್ಟುಹೋಯಿತು. ನೀನು ಮಾಡಿದ ಮಹಾಪಾತಕದಿಂದ ನಿನ್ನ ಈ ಲಂಕಾಪಟ್ಟಣಕ್ಕೆ ವೈಧವ್ಯ ತಪ್ಪದು. ದುರುಳ, ನನ್ನನ್ನು ಪತಿಯಿಂದ ಅಗಲಿಸಿ ಎತ್ತಿಕೊಂಡು ಬಂದೆ. ಇದರಿಂದ ನಿನಗೆ ಸುಖ ಇಲ್ಲ. ದುಃಖದ ಪಾಲು ಆಗುತ್ತೀಯೆ. ನನ್ನ ಗಂಡ ಶ್ರೀರಾಮ ದೈವಬಲಸಂಪನ್ನ. ಮಹಾತೇಜಸ್ವಿ. ಶೂನ್ಯ ಆದ ದಂಡಕಾರಣ್ಯದಲ್ಲಿ ವಾಸ ಆಗಿದಾನೆ ನಿರ್ಭಯ ದಿಂದ. ಆತನ ಪರಾಕ್ರಮವೇ ಆತನ ಬಲ. ಏನು ಎಂದು ತಿಳಿದಿದೀಯೆ ರಾಮನನ್ನು?

"ದುಷ್ಟ ರಾಕ್ಷಸ, ರಾಮನ ಶರವರ್ಷಕ್ಕೆ ನಿನ್ನ ಮದ ನಿನ್ನ ಬಲ ನಿನ್ನ ವೀರ್ಯ ನಿನ್ನ ಕೊಬ್ಬು ಎಲ್ಲವೂ ಅಡಗಿಹೋಗುತ್ತವೆ. ನಿನ್ನ ಪ್ರಾಣ ಹಾರಿ ಹೋಗುತ್ತದೆ. ಲೋಕದಲ್ಲಿ ಎಲ್ಲ ಪ್ರಾಣಿಗಳೂ ಕಾಲಕ್ಕೆ ವಶ. ವಿನಾಶಕಾಲ ಬಂದರೆ ದುರ್ಬುದ್ಧಿ ಹುಟ್ಟುತ್ತದೆ. ವೈಪರೀತ್ಯ ಮನುಷ್ಯ ಮಾಡಬಾರದುದನ್ನು ಮಾಡುತ್ತಾನೆ. ಅದಕ್ಕೆ ವಿನಾಶವೇ ಫಲ. ಹಿಂದೆಮುಂದೆ ನೋಡದೆ ನನ್ನನ್ನು ಅವಮಾನಗೊಳಿಸಿದೆ. ನಿನಗೂ ನಿನ್ನ ರಾಕ್ಷಸರಿಗೂ ನಿನ್ನ ಅಂತಃಪುರದವರಿಗೂ ಎಲ್ಲರಿಗೂ ಕಡೆಗಾಲ ಬಂತು.

"ನೀಚ, ಸೃಗ್ಭಾಂಡ ಮುಂತಾದ ಹೋಮಸಾಧನಗಳನ್ನು ಇಟ್ಟ ಮಂತ್ರದಿಂದ ಪವಿತ್ರಗೊಳಿಸಿದ ಯಾಗವೇದಿಯನ್ನು ಚಂಡಾಲರಿಂದ ಮುಟ್ಟಿಸಿ ಬಿಡುತ್ತಾರೆಯೆ? ಸಾಧ್ಯವೆ ಇದು? ರಾಕ್ಷಸಾಧಮ, ಮಹಾಧರ್ಮಿಷ್ಠ ಆದ ಶ್ರೀರಾಮನ ಧರ್ಮಪತ್ನಿ ನಾನು. ಪತಿವ್ರತೆ ನಾನು. ನನ್ನನ್ನು ವಶಪಡಿಸಿ ಕೊಳ್ಳುತ್ತೀಯಾ ನೀನು? ಅಸಾಧ್ಯ. ತಾವರೆಕೊಳದಲ್ಲಿ ರಾಜಹಂಸದ ಜೊತೆಯಲ್ಲಿ ವಿಹರಿಸುವ ಹಂಸಿ ಹುಲ್ಲಿನ ಪೊದೆಯಲ್ಲಿರುವ ನೀರುಕಾಗೆಯನ್ನು ನೋಡೀತೆ ಕಣ್ಣು ಎತ್ತಿ?

"ಮಾನವ ಶರೀರ ಮೊದಲೇ ಜಡ. ಈಗ ಅಂತೂ ರಾಮನ ಅಗಲಿಕೆ ಯಿಂದ ನನ್ನ ಮೈ ಮರ ಆಗಿದೆ. ನನಗೆ ಈ ಮೈಯನ್ನು ಈ ಜೀವವನ್ನು ಕಾಪಾಡಿಕೊಳ್ಳುವ ಉದ್ದೇಶ್ಯ ಇಲ್ಲ. ಇದನ್ನು ಕಟ್ಟಿಹಾಕು, ಬೇಕು ಎನಿಸಿದರೆ ತಿಂದುಹಾಕು. ನನಗೆ ಅಂಜಿಕೆ ಇಲ್ಲ. ನನ್ನ ಪಾತಿವ್ರತ್ಯಭಂಗ ಆಯಿತು ಎಂಬ ಲೋಕಾಪವಾದಕ್ಕೆ ಮಾತ್ರ ನಾನು ಎಂದಿಗೂ ಸಿದ್ಧಳು ಅಲ್ಲ." ಹೀಗೆ ಕಠಿನ ಆಗಿ ಮಾತು ಆಡಿ ಸೀತೆ ಸುಮ್ಮನೆ ಆದಳು.

ರಾವಣನ ಮೈ ನಿಮಿರು ಆಯಿತು. ಅವನಿಗೆ ತಡೆಯಲಾರದ ಸಿಟ್ಟು ಬಂತು. ಭಯಂಕರ ಆದ. "ಸೀತೆ, ನನ್ನ ಮಾತನ್ನು ಕೇಳು. ನಿನಗೆ ಇನ್ನು ಹನ್ನೆರಡು ತಿಂಗಳು ಅವಧಿ. ಮುಗುಳುನಗೆಯ ಮೊಗದವಳೆ, ಆ ಅವಧಿಯಲ್ಲಿ ನೀನು ನನ್ನ ವಶ ಆಗಲಿಲ್ಲವೋ, ಮರುದಿನವೇ ನನ್ನ ಪರಿಚಾರಕರು ಬೆಳಗಿನ ಊಟಕ್ಕೆ ನಿನ್ನನ್ನು ತುಂಡು ತುಂಡು ಆಗಿ ಕತ್ತರಿಸುತ್ತಾರೆ" ಎಂದ.

ಸೀತೆಯನ್ನು ಹೀಗೆ ಹೆದರಿಸಿ ರಾವಣಾಸುರ ಅಲ್ಲಿದ್ದ ರಾಕ್ಷಸಿಯರನ್ನು ಕರೆದು ಕಟ್ಟಪ್ಪಣೆ ಮಾಡಿದ. "ರಾಕ್ಷಸಿಯರೆ, ಈಗಲೇ ನೀವು ಭಯಂಕರ ವಿಕಾರ ರೂಪನ್ನು ಧರಿಸಿರಿ. ಈ ಸೀತೆಯ ಕೊಬ್ಬನ್ನು ಮುರಿಯಬೇಕು." ಆ ಭಯಂಕರ ಆಕಾರದ ಹೆಂಗಸರು ಅಪ್ಪಣೆ ಎಂದು ಕೈಮುಗಿದು ಸೀತೆಯನ್ನು ಸುತ್ತುಗಟ್ಟಿದರು.

ರಾವಣನ ಸಿಟ್ಟು ತಗ್ಗಲಿಲ್ಲ. ಭೂಮಿ ನಡುಗುವ ಹಾಗೆ ನೆಲವನ್ನು ಒದೆದ. ಕಟಕಟ ಹಲ್ಲುಕಡಿದ. "ರಾಕ್ಷಸಿಯರೆ, ಈ ಸೀತೆಯನ್ನು ನಮ್ಮ ಅಶೋಕವನಕ್ಕೆ ಕರೆದು ಒಯ್ಯಿರಿ. ಯಾರ ಕಣ್ಣಿಗೂ ಬೀಳದ ಹಾಗೆ ಅಲ್ಲಿ ಇವಳನ್ನು ಗುಟ್ಟು ಆಗಿ ಬಚ್ಚಿಡಿ. ಮೈಮರೆಯದಂತೆ ಇವಳಿಗೆ ನೀವು ಕಾವಲು ಆಗಿ ಇರಬೇಕು. ಕಾಡಿನ ಹೆಣ್ಣು ಆನೆಯನ್ನು ಪಳಗಿಸುವ ಹಾಗೆ ನಯದಿಂದ ಭಯದಿಂದ ಇವಳನ್ನು ದಾರಿಗೆ ತರಬೇಕು. ಸ್ವಾಧೀನ ಮಾಡಿಕೊಳ್ಳಬೇಕು" ಎಂದು ಅಪ್ಪಣೆ ಮಾಡಿದ.

ರಾವಣನ ಅಪ್ಪಣೆಯಂತೆ ಆ ರಾಕ್ಷಸಿಯರು ಸೀತೆಯನ್ನು ಅಶೋಕವನಕ್ಕೆ ಕರೆದು ಒಯ್ದರು. ಆ ಕಾಲ ಈ ಕಾಲ ಎನ್ನದೆ ಎಲ್ಲಾ ಕಾಲಗಳಲ್ಲಿಯೂ ಹೂ ಹಣ್ಣು ಬಿಡುವ ಗಿಡಮರ ಆ ವನದಲ್ಲಿ. ಆ ವನದ ಹಕ್ಕಿಗಳಿಗೆ ಯಾವಾಗಲೂ ಮದ. ಯಾವಾಗಲೂ ಕೂಗುತ್ತ ಇರುತ್ತವೆ. ಹುಲಿಗಳ ನಡುವೆ ಹೆಣ್ಣುಜಿಂಕೆ ಸಿಕ್ಕರೆ ಹೇಗೋ ಹಾಗೆ ಬೆದರಿಹೋದಳು ಸೀತೆ ಆ ರಾಕ್ಷಸಸ್ತ್ರೀಯರ ನಡುವೆ. ದುಃಖಸಂತಪ್ತೆ ಆದ ಆಕೆಗೆ ಹೆಣ್ಣುಜಿಂಕೆಗೆ ಹಗ್ಗ ಹಾಕಿ ಬಿಗಿದು ಕಟ್ಟಿದ ಹಾಗೆ ಆಯಿತು. ಆ ರಾಕ್ಷಸಿಯರೋ ಸೀತೆಯನ್ನು ಗದರಿಸಿ ಬೆದರಿಸುತ್ತ ಇದ್ದರು. ಸೀತೆಗೆ ಒಂದು ಅರೆಗಳಿಗೆಯೂ ಸುಖಶಾಂತಿ ಇಲ್ಲ. ತನ್ನ ಪ್ರಾಣವಲ್ಲಭ, ಪರದೈವ ಆದ ರಾಮನ ಧ್ಯಾನವೇ ಧ್ಯಾನ. ಎಡೆಬಿಡದ ಸ್ಮರಣೆ. ಮೂರ್ಛೆ ಬೀಳುತ್ತ, ಚೇತರಿಸಿಕೊಳ್ಳುತ್ತ ಅಶೋಕವನದಲ್ಲಿ ಇದ್ದಳು.

೧೬

ಮೃಗರೂಪದಿಂದ ಬಂದು ದಂಡಕಾರಣ್ಯದಲ್ಲಿ ಅಲೆದಾಡುತ್ತ ಇದ್ದ ಕಾಮರೂಪಿ ಮಾರೀಚ ರಾಕ್ಷಸನನ್ನು ಕೊಂದ ರಾಮ. ಕೂಡಲೇ ಆಶ್ರಮಕ್ಕೆ ಹಿಂದಿರುಗಿದ. ಸೀತಾದೇವಿಯನ್ನು ನೋಡಬೇಕು ಎಂಬ ತಳಮಳ. ಬೇಗ ಬೇಗ ಹೆಜ್ಜೆಹಾಕಿದ. ಅವನ ಹಿಂದೆ ಒಂದು ನರಿ ಭಯಂಕರ ಧ್ವನಿಯಿಂದ ಊಳಿಟ್ಟಿತು. ಮೊದಲೇ ಗಾಬರಿಗೊಂಡು ಇತ್ತು ರಾಮನ ಮನಸ್ಸು. ದಾರುಣ ಆದ ನರಿಯ ಕೂಗು ರೋಮಾಂಚ ಹುಟ್ಟಿಸಿತು. ಮನಸಿನ ಒಳಗೆ ಶಂಕೆ. "ಏನೋ ಅಶುಭ ಸೂಚಿಸುತ್ತದೆ ನರಿಯ ಕೂಗು. ಸೀತೆ ಸುಖದಿಂದ ಇದ್ದಾಳೋ ಇಲ್ಲವೋ? ಅವಳನ್ನು ರಾಕ್ಷಸರು ತಿಂದುಹಾಕಿದರೋ ಏನೋ! ಆ ಮೃಗ ರೂಪದ ಮಾರೀಚ ನನ್ನ ಹಾಗೇ ಕೂಗಿದುದನ್ನು ಲಕ್ಷ್ಮಣ ಕೇಳಿ ಇದ್ದಾನು. ಸೀತೆಯೂ ಕೇಳಿರಬಹುದು. ಲಕ್ಷ್ಮಣ ಒಲ್ಲೆ ಎಂದರೂ ಸೀತೆ ಅವನನ್ನು ಬಲವಂತ ಮಾಡಿ ಕಳಿಸಿದಳೋ ಏನೋ! ಅಲ್ಲಿ ಮೈಥಿಲಿಯನ್ನು ಬಿಟ್ಟು ಲಕ್ಷ್ಮಣ ನನ್ನನ್ನು ಹುಡುಕಿಕೊಂಡು ಹೊರಟಿರಬೇಕು.

"ಈ ಮಾರೀಚ ಕಾಂಚನ ಮೃಗದ ರೂಪ ತಾಳಿದ. ನನ್ನನ್ನು ಇಷ್ಟು ದೂರ ಕರೆತಂದ. ಕಡೆಗೆ ಸಾಯುವಾಗ ಮತ್ತೆ ರಾಕ್ಷಸ ಆದ. 'ಹಾ ಲಕ್ಷ್ಮಣ, ಹಾ ಸೀತೆ' ಎಂದು ದೀನ ಧ್ವನಿಯಿಂದ ಕೂಗಿದ. ಇದು ಒಂದು ತಂತ್ರ. ರಾಕ್ಷಸರು ಎಲ್ಲರೂ ಸೇರಿ ಸೀತೆಯನ್ನು ಕೊಲ್ಲಲು ಈ ಕಪಟತಂತ್ರ ಹೂಡಿದರು. ಸಂದೇಹ ಇಲ್ಲ. ಜನಸ್ಥಾನದ ರಾಕ್ಷಸರನ್ನು ಎಲ್ಲರನ್ನೂ ಕೊಂದಾಗಿನಿಂದ ಅವರಿಗೂ ನಮಗೂ ವೈರ ಬೆಳೆಯಿತು. ಈ ಮಹಾರಣ್ಯದಲ್ಲಿ ನಾನು ಇಲ್ಲದಾಗ ಸೀತಾಲಕ್ಷ್ಮಣರು ಕ್ಷೇಮದಿಂದ ಇರಬಲ್ಲರೆ? ಏಕೋ ಏನೋ, ಭಯಂಕರ ದುಶ್ಶಕುನಗಳು ಕಾಣುತ್ತ ಇವೆಯಲ್ಲ."

ರಾಮನಿಗೆ ಹಲವು ಬಗೆಯ ಚಿಂತೆ. ಮೃಗರೂಪದ ಮಾರೀಚ ಮೋಸ ಮಾಡಿ ತನ್ನನ್ನು ಆಶ್ರಮದಿಂದ ಬಲುದೂರ ಕರೆದು ಒಯ್ದ. ನರಿ ಅಮಂಗಳ ಸೂಚಕ ಆಗಿ ಕೂಗಿತು. ಏನೋ ಶಂಕೆ, ಏನೋ ಭಯ ರಾಮನಿಗೆ. ದಾರಿ ಉದ್ದಕ್ಕೂ ದುಶ್ಶಕುನಗಳೇ. ಮೊದಲೇ ವ್ಯಾಕುಲ. ಮೇಲೆ ಇದು. ಪ್ರಾಣಿಗಳು ಎಡದಿಂದ ಬಲಕ್ಕೆ ಹೋದವು. ಘೋರಧ್ವನಿ ಮಾಡಿದವು. ರಾಮನಿಗೆ ಭಯ

ಹೆಚ್ಚಿತು. ಬೇಗ ಬೇಗ ಹೆಜ್ಜೆ ಹಾಕಿದ ಆಶ್ರಮದ ಕಡೆಗೆ. ಮಹಾಪರಾಕ್ರಮಶಾಲಿ ಲಕ್ಷ್ಮಣ, ಪತಿವ್ರತೆ ಸೀತೆ— ಇಬ್ಬರನ್ನೂ ಕುರಿತು ಚಿಂತಿಸಿದ.

ದಾರಿಯಲ್ಲಿ ಇದಿರಿಗೆ ಬಂದ ಲಕ್ಷ್ಮಣ.

ರಾಮನ ಮನಸ್ಸು ಧಿಗ್ಗನೆ ನಡುಗಿತು. ಅವನ ಮುಖ ಕಳೆಗುಂದಿತ್ತು. ತನಗಿಂತಲೂ ಹೆಚ್ಚು ದುಃಖದಿಂದ ಸಂಕಟಪಡುತ್ತ ಬರುತ್ತ ಇದ್ದ ಲಕ್ಷ್ಮಣ. ರಾಮನ ಕಳವಳ ಮತ್ತೂ ಹೆಚ್ಚು ಆಯಿತು. ರಾಕ್ಷಸರ ವಾಸಸ್ಥಾನ ಆದ ಕಾಡಿನಲ್ಲಿ ಸೀತೆ ಒಬ್ಬಳನ್ನೇ ಬಿಟ್ಟು ಬಂದದ್ದು ಲಕ್ಷ್ಮಣನ ತಪ್ಪು. ರಾಮ ಲಕ್ಷ್ಮಣನ ಎಡಗೈ ಹಿಡಿದುಕೊಂಡ. ಸಿಹಿ–ಕಹಿ ಆಗಿ ಹೇಳಿದ: “ಲಕ್ಷ್ಮಣ, ಸೀತೆ ಒಬ್ಬಳನ್ನೇ ಬಿಟ್ಟು ಬಂದೆಯಲ್ಲ. ಎಂಥ ಕೆಲಸ ಮಾಡಿದೆ! ಮಾಡ ಬಾರದ ಕೆಲಸ ಮಾಡಿದೆ. ಇದರಿಂದ ನಮಗೆ ಕ್ಷೇಮ ಇಲ್ಲ. ನಮಗೆ ಅಪಾಯ ತಪ್ಪೀತೆ ಇನ್ನು? ನನಗೆ ಅಂತೂ ಬರೀ ದುಶ್ಶಕುನಗಳೇ ಆಗುತ್ತ ಇವೆ.

“ಲಕ್ಷ್ಮಣ, ಸೀತೆ ಕ್ಷೇಮದಿಂದ ಇಲ್ಲ ಎಂದೇ ತೋರುತ್ತ ಇದೆ ನನಗೆ. ರಾಕ್ಷಸರು ಅವಳನ್ನು ಎತ್ತಿಕೊಂಡೇ ಹೋದರೋ ತಿಂದೇ ಬಿಟ್ಟರೋ! ಲಕ್ಷ್ಮಣ, ಪುರುಷಶ್ರೇಷ್ಠ, ಜಾನಕಿಯನ್ನು ಮತ್ತೆ ನಾವು ನೋಡುತ್ತೇವೋ ಇಲ್ಲವೋ! ಅಲ್ಲಿ ನೋಡು. ಜಿಂಕೆಗಳೂ ನರಿಗಳೂ ಸೂರ್ಯನ ಕಡೆ ಮೋರೆ ಮಾಡಿ ಭಯಂಕರ ಆಗಿ ಕೂಗುತ್ತ ಇವೆ. ಕಾಗೆಗಳು ಕೂಗುತ್ತ ಇವೆ. ಬರೀ ದುಶ್ಶಕುನಗಳೇ. ಸೀತೆ ಕ್ಷೇಮದಿಂದ ಇರುವುದು ಸಂದೇಹ.

“ತಮ್ಮ, ಆ ಜಿಂಕೆ ಮಾಯಾಮೃಗ. ನನ್ನನ್ನು ಮೋಸಗೊಳಿಸಿ ಬಲು ದೂರ ಒಯ್ಯಿತು. ನಾನೂ ಹಿಂಬಾಲಿಸಿ ಹೋದೆ. ಕಡೆಗೆ ಅದನ್ನು ಕೊಂದೆ. ಕೊಂದರೆ ಅದು ರಾಕ್ಷಸ ಆಗಬೇಕೆ? ಈಗ ನನ್ನ ಮನಸಿಗೆ ನೆಮ್ಮದಿ ಇಲ್ಲ. ಲಕ್ಷ್ಮಣ, ಎಡಗಣ್ಣು ಅದಿರುತ್ತ ಇದೆ. ಸೀತೆ ಈಗ ಆಶ್ರಮದಲ್ಲಿಲ್ಲ. ಲಕ್ಷ್ಮಣ, ಸಂದೇಹ ಇಲ್ಲ. ರಾಕ್ಷಸರು ಅವಳನ್ನು ಕದ್ದು ಒಯ್ದಿರಬೇಕು. ಅಥವಾ ಒಯ್ಯುತ್ತಾ ಇರಬೇಕು. ಆಶ್ರಮದಲ್ಲಿ ಅಂತೂ ಇಲ್ಲವೇ ಇಲ್ಲ. ಸಂದೇಹ ಇಲ್ಲ ಇದಕ್ಕೆ.”

೧೭

ನಿರ್ಜನ ಅರಣ್ಯದಲ್ಲಿ ಸೀತೆಯನ್ನು ಒಂಟಿ ಆಗಿ ಬಿಟ್ಟುಬಂದುದರಿಂದ ದೀನ ಆಗಿ ನಿಂತ ಲಕ್ಷ್ಮಣನನ್ನು ನೋಡಿದ ರಾಮ. "ಲಕ್ಷ್ಮಣ, ವನವಾಸಕ್ಕೆ ನಾನು ಹೊರಟಾಗ ನನ್ನನ್ನು ಬಿಟ್ಟಿರಲಾರದೆ ನನ್ನ ಹಿಂದೆ ಬಂದವಳು ಸೀತೆ. ಅವಳನ್ನು ಒಬ್ಬಳನ್ನೇ ಬಿಟ್ಟು ನನ್ನ ಬಳಿಗೆ ಬಂದೆ ನೀನು. ತಮ್ಮ, ಈಗ ಎಲ್ಲಿ ಇದ್ದಾಳೆ ಸೀತೆ? ರಾಜ್ಯಭ್ರಷ್ಟನಾಗಿ ದುಃಖದಿಂದ ದಂಡಕಾರಣ್ಯದಲ್ಲಿ ನಾನು ಅಲೆಯುತ್ತ ಇದ್ದರೆ ನನ್ನ ಜೊತೆಯಲ್ಲಿ ಇದ್ದು ನೆರವು ಆಗಬೇಕು ಎಂದು ಬಂದಳಲ್ಲ. ನನ್ನ ಸಮಭಾಗಿನಿ, ಸುಮಧ್ಯೆ ಎಲ್ಲಿ ಈಗ?

"ವೀರಲಕ್ಷ್ಮಣ, ದೇವಕನ್ಯೆಯಂಥ ಸೀತೆಯನ್ನು ಬಿಟ್ಟು ನಾನು ಒಂದು ಕ್ಷಣವೂ ಇರಲಾರೆ. ನನ್ನ ಜೀವಕ್ಕೆ ಅವಳು ಮುಖ್ಯ ಆಧಾರ. ಎಲ್ಲಿ ಇದ್ದಾಳೆ ಈಗ ಅವಳು? ಎಲ್ಲಿ ಚಿನ್ನದ ಗೊಂಬೆ? ಸೀತೆ ಇಲ್ಲದಿದ್ದರೆ ನನಗೆ ದೇವಲೋಕದ ಆಧಿಪತ್ಯವೂ ಬೇಡ, ಭೂಮಂಡಲದ ಆಧಿಪತ್ಯವೂ ಬೇಡ. ಸೌಮಿತ್ರಿ, ಸೀತೆ ನನಗೆ ಪ್ರಾಣಕ್ಕಿಂತ ಹೆಚ್ಚು. ಅವಳು ಬದುಕಿ ಇದ್ದಾಳೆಯೆ? ನನ್ನ ವನವಾಸ ವ್ರತ ಮುಗಿಯದೆಯೆ ನಾನು ಪ್ರಾಣ ಬಿಡಬೇಕಾಯಿತು. ಸೀತೆ ಇಲ್ಲದೆ ನನ್ನ ಪ್ರಾಣ ಉಳಿಯದು. ನಾನು ಸತ್ತು ನೀನು ಅಯೋಧ್ಯೆಗೆ ಹೋಗಿ ಈ ಸುದ್ದಿ ತಿಳಿಸಿದರೆ ಕೈಕೇಯಿಗೆ ಎಷ್ಟು ಸಂತೋಷವೊ! ಅವಳ ಕೋರಿಕೆ ಕೈಗೂಡಿತಲ್ಲ. ಹೀಗೆ ನಡೆಯುತ್ತದೆಯೋ ಏನೋ!

"ಲಕ್ಷ್ಮಣ, ಇದ್ದ ಒಬ್ಬ ಮಗನನ್ನು ಕಳೆದುಕೊಂಡು ತಾಯಿ ಕೌಸಲ್ಯೆ ಎಷ್ಟು ದುಃಖಪಡುತ್ತಾಳೋ! ರಾಜ್ಯ, ಐಶ್ವರ್ಯ, ರಾಜಮಾತೆಯ ಪದವಿ, ಎಲ್ಲವನ್ನೂ ಕಳೆದುಕೊಂಡು ಕೈಕೇಯಿಯ ಊಳಿಗ ಮಾಡಬೇಕೋ ಏನೋ ದೀನಳು ಆಗಿ! ಲಕ್ಷ್ಮಣ, ಸೀತೆ ಬದುಕಿ ಇದ್ದರೆ ನನಗೆ ಆಶ್ರಮ. ಇಲ್ಲದಿದ್ದರೆ ನಾನೂ ಪ್ರಾಣ ಬಿಡುತ್ತೇನೆ. ಆಶ್ರಮದಲ್ಲಿ ಕಾಲು ಇಟ್ಟ ಕೂಡಲೆ ಕಿಲಕಿಲ ನಗುತ್ತಾ ಬಂದು ಮಾತಾಡಿಸುತ್ತ ಇದ್ದಳು ವೈದೇಹಿ. ಅವಳು ಇಲ್ಲದೆ ನನಗೆ ಬದುಕೇ? ಇಲ್ಲ, ಸಾಯುತ್ತೇನೆ. ಖಂಡಿತ.

"ಲಕ್ಷ್ಮಣ, ಮೊದಲು ಹೇಳು. ಸೀತೆ ಬದುಕಿ ಇದ್ದಾಳೆಯೆ, ಇಲ್ಲವೆ? ನೀನು ಕೊಂಚ ಮೈಮರೆತೆ ಎಂದು ರಾಕ್ಷಸರು ಅವಳನ್ನು ತಿಂದುಹಾಕಿದರೆ?

ತಮ್ಮ, ಸೀತೆ ಹೂವಿನ ಹಾಗೆ ಕೋಮಲೆ. ಇನ್ನೂ ಬಾಲೆ. ದುಃಖವನ್ನು ಎಂದೂ ಕಂಡವಳು ಅಲ್ಲ. ನನ್ನನ್ನು ಅಗಲಿ ಎಷ್ಟು ಸಂಕಟಪಡುತ್ತಿದಾಳೋ! ಅಳುತ್ತ ಇದಾಳೋ! ಆ ಕಪಟಿ, ಆ ದುಷ್ಟ ರಾಕ್ಷಸ ಮಾರೀಚ ಸಾಯುವಾಗ ಮೋಸಮಾಡಿದ. ಲಕ್ಷ್ಮಣ, ಸೀತೆ ಎಂದು ಕೂಗಿಕೊಂಡ. ನಿನಗೆ ಬಹಳ ಭಯ ಆಗಿರಬೇಕು ಆ ಕೂಗನ್ನು ಕೇಳಿ. ನನ್ನ ಕಂಠಸ್ವರದ ಹಾಗೇ ಇತ್ತು ಆ ಧ್ವನಿ. ಸೀತೆಗೆ ಅಂತೂ ಅದನ್ನು ಕೇಳಿ ಭಯ ಹುಟ್ಟಿ ಇರಬೇಕು. ಅವಳು ನಿನ್ನನ್ನು ಹೋಗು ಎಂದು ಅಟ್ಟಿರಬೇಕು. ನೀನು ನನ್ನನ್ನು ಹುಡುಕಿಕೊಂಡು ಬಂದೆ.

"ತಮ್ಮ, ಬಹಳ ತಪ್ಪು ಮಾಡಿದೆ. ಸೀತೆ ಒಬ್ಬಳನ್ನೇ ಅಡವಿಯಲ್ಲಿ ಬಿಟ್ಟುಬಂದೆಯಲ್ಲ. ನಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ಕ್ರೂರ ರಾಕ್ಷಸರು ಕಾದು ಇದ್ದರು. ಈಗ ಒಳ್ಳೇ ಅವಕಾಶ ಸಿಕ್ಕಿತು ಅವರಿಗೆ. ಖರನನ್ನು ಕೊಂದದ್ದರಿಂದ ರಾಕ್ಷಸರಿಗೆ ದಿಗಿಲಾಗಿದೆ. ನಮ್ಮ ಮೇಲೆ ದ್ವೇಷ ಹುಟ್ಟಿದೆ. ಸಮಯ ಸಾಧಿಸಿ ಸೀತೆಯನ್ನು ತಿಂದುಹಾಕಿದಾರೆ ಆ ಮಾಂಸಾಹಾರಿಗಳು. ಸ್ವಲ್ಪವೂ ಸಂದೇಹ ಇಲ್ಲ, ತಮ್ಮ.

"ಲಕ್ಷ್ಮಣ, ದುಃಖಸಮುದ್ರದಲ್ಲಿ ಮುಳುಗಿಹೋಗುತ್ತ ಇದೇನೆ ನಾನು. ಶತ್ರುಂಜಯ, ಇಂಥ ದುಃಖವನ್ನು ಅನುಭವಿಸಬೇಕಾಗಿ ಬಂದಿತೆ ನನಗೆ? ಬಂದದ್ದನ್ನು ಭೋಗಿಸಲೇಬೇಕು."

ಬೇಗ ಬೇಗ ಹೆಜ್ಜೆಹಾಕಿದರು ಅಣ್ಣತಮ್ಮ ಇಬ್ಬರೂ. ರಾಮನಿಗೋ ಒಂದು ಕಡೆ ಸೀತೆಯ ಚಿಂತೆ. ಇನ್ನೊಂದು ಕಡೆ ಮಾಯಾಮೃಗವನ್ನು ಬೆನ್ನಟ್ಟಿ ಬಹುದೂರ ಹೋದ ಬಳಲಿಕೆ. ಮತ್ತೊಂದು ಕಡೆ ಹಸಿವು. ಬಿಸಿಲಿಗೆ ಬಾಯಿ ಒಣಗಿತ್ತು. ನಿಟ್ಟುಸಿರು ಬಿಟ್ಟ. ಮುಖ ಬಾಡಿತು, ಬಣ್ಣಗೆಟ್ಟಿತು. ಆಶ್ರಮಕ್ಕೆ ಬೇಗ ಬೇಗ ಬಂದ.

ಸೀತೆ ಕಾಣಲಿಲ್ಲ. ಬಾಗಿಲಲ್ಲಿ ಇಲ್ಲ. ಒಳಗೆ ಹೋದ. ಅಲ್ಲಿಯೂ ಇಲ್ಲ. ಪರ್ಣಶಾಲೆಯಲ್ಲಿ ನೋಡಿದ. ಇಲ್ಲ. ಸೀತೆ ವಿಹರಿಸುತ್ತ ಇದ್ದ ಸ್ಥಳಗಳಲ್ಲಿ ಹುಡುಕಿದ. ಕಾಣಲಿಲ್ಲ. ತಾನೂ ಸೀತೆಯೂ ವಿಹರಿಸುತ್ತ ಇದ್ದ ಒಂದೊಂದು ಸ್ಥಳಕ್ಕೂ ಹೋಗಿ ನೋಡಿದ. ಎಲ್ಲಿಯೂ ಇಲ್ಲ ಸೀತೆ!

ಮಹಾನುಭಾವ ರಾಮನ ಮೈ ನಿಮಿರಾಯಿತು. ದುಃಖದಲ್ಲಿ ಮುಳುಗಿ ಹೋದ.

೧೮

ಹೀಗೆ ಆಯಿತಲ್ಲ ಎಂದು ಲಕ್ಷ್ಮಣನಿಗೆ ಬಹಳ ದುಃಖ. ರಾಮನಿಗೂ ಸಂಕಟ. "ತಮ್ಮ, ನಿನ್ನನ್ನು ನಂಬಿ ನಾನು ಸೀತೆಯನ್ನು ಆಶ್ರಮದಲ್ಲಿ ಬಿಟ್ಟುಬಂದೆ. ನೀನು ಅವಳನ್ನು ಒಬ್ಬಳನ್ನೇ ಬಿಟ್ಟುಬಂದೆಯಲ್ಲ. ಏಕೆ? ನೀನು ಒಬ್ಬನೇ ಬಂದಾಗಲೇ ನನಗೆ ಸಂದೇಹ. ಸೀತೆಗೆ ಏನೋ ಅಪಾಯ ಆಗಿರಬೇಕು. ಇನ್ನೂ ನೀನು ದೂರದಲ್ಲಿ ಬರುತ್ತಿದ್ದಾಗಲೇ ನನ್ನ ಎಡಗಣ್ಣು ಎಡಭುಜ ಅದಿರಿದವು. ನನ್ನ ಎದೆ ನಡುಗಿಹೋಯಿತು" ಎಂದ ರಾಮ.

ಇನ್ನೂ ಹೆಚ್ಚಿತು ಲಕ್ಷ್ಮಣನ ದುಃಖ. ಆ ಶುಭಲಕ್ಷಣಲಕ್ಷಿತ ಅಳುತ್ತ ಹೇಳಿದ: "ಅಣ್ಣ, ನಾನು ಸ್ವೇಚ್ಛೆಯಿಂದ ನಾನಾಗಿಯೇ ಸೀತೆಯನ್ನು ಬಿಟ್ಟು ಬರಲಿಲ್ಲ. ಆಕೆ ನನ್ನನ್ನು ನಿಂದಿಸಿ ಕ್ರೂರ ಆಗಿ ಮಾತು ಆಡಿದಳು. ಅದನ್ನು ಸಹಿಸಲಾರದೆ ಆಕೆಯ ನಿರ್ಬಂಧದಿಂದ ಬಂದೆ. ಹಾ ಲಕ್ಷ್ಮಣ, ಹಾ ಸೀತೆ ಎಂದು ನೀನೇ ಕೂಗಿದ ಹಾಗೆ ನಮಗೆ ಕೇಳಿಸಿತು. ಅದು ಆರ್ತನಾದ. ಕೇಳಿ ಸೀತೆ ಬೆದರಿದಳು. ನಿನ್ನಲ್ಲಿ ಇರುವ ಪ್ರೇಮಾತಿಶಯದಿಂದ ನಿನಗೆ ಏನೋ ವಿಪತ್ತು ಬಂದಿದೆ ಎಂದುಕೊಂಡಳು. ಗಟ್ಟಿ ಆಗಿ ಅಳುತ್ತ ಹೋಗು ಹೋಗು ಎಂದು ನಿರ್ಬಂಧಿಸಿದಳು. ನನಗೆ ನಿನ್ನ ಶೌರ್ಯ ಪರಾಕ್ರಮ ತಿಳಿಯದೆ? ನಾನು ಅಲ್ಲಾಡಲಿಲ್ಲ.

"ಆರ್ಯೆ, ರಾಮನಿಗೆ ಏತರ ಭಯ? ಅಣ್ಣನನ್ನು ಇದಿರಿಸುವ ರಾಕ್ಷಸನನ್ನು ಈವರೆಗೆ ನಾನು ಕಂಡುದು ಇಲ್ಲ. ಇದು ರಾಮನ ಧ್ವನಿ ಅಲ್ಲ. ಯಾರೋ ರಾಕ್ಷಸ ನಮಗೆ ಮೋಸಮಾಡಲು ಹೀಗೆ ಕೂಗಿದಾನೆ. ದೇವತೆಗಳು ಭಯಪಟ್ಟರೆ ಅವರಿಗೇ ಅಭಯವನ್ನು ಕೊಡಬಲ್ಲವನು ರಾಮ. ಅಂಥವನು ಸೀತೇ, ನಾನು ಕೆಟ್ಟೆ, ಕಾಪಾಡು ಎಂದು ಇಷ್ಟು ದೀನ ಆರ್ತನಾದ ಮಾಡಬಹುದೆ? ಲಕ್ಷ್ಮಣ ಎಂದು ಕೂಗಿದ ಧ್ವನಿ ಅಣ್ಣನದು ಅಲ್ಲ. ಖಂಡಿತ, ಯಾರೋ ರಾಕ್ಷಸನ ಧ್ವನಿ ಅದು. ಸಾಮಾನ್ಯ ಹೆಂಗಸಿನಂತೆ ನೀನು ಅಳಬೇಡ. ದುಃಖಿಸಬೇಡ. ಬೆದರಬೇಡ, ನೆಮ್ಮದಿ ಇರಲಿ. ಯುದ್ಧಕ್ಕೆ ನಿಂತರೆ ರಾಮನನ್ನು ಜಯಿಸಬಲ್ಲವರು ಈ ಮೂರು ಲೋಕಗಳಲ್ಲಿಯೂ ಯಾರೂ ಇಲ್ಲ. ದೇವತೆಗಳು ಎಲ್ಲರೂ ಬಂದರೂ ದೇವೇಂದ್ರನೇ ಮುಂದೆ ನಿಂತರೂ ಯುದ್ಧದಲ್ಲಿ ಅವರಿಗೆ ಗೆಲವು ಇಲ್ಲ.

" ಹೀಗೆ ಎಷ್ಟೋ ಹೇಳಿದೆ. ಆಕೆ ನನ್ನನ್ನು ನಂಬಲಿಲ್ಲ. ವೈಮನಸ್ಯದಿಂದ ಮತಿ ಕೆಟ್ಟು ಅಳುತ್ತ ಮಾತನಾಡಿದಳು. 'ಲಕ್ಷ್ಮಣ, ನಿಮ್ಮ ಅಣ್ಣ ಸತ್ತರೆ ನನ್ನನ್ನು ಪಡೆಯಬೇಕು ಎಂಬ ದುರ್ಬುದ್ಧಿ ನಿನಗೆ. ನೀನು ನನ್ನನ್ನು ಪಡೆಯಲಾರೆ. ಭರತನೂ ನೀನೂ ಏನೋ ಒಂದು ಮಾತು ಮಾಡಿಕೊಂಡು ಇದೀರಿ. ನೀನು ಕಪಟಿ. ನಿಮ್ಮ ಅಣ್ಣನಿಗೆ ಶತ್ರು. ಅಣ್ಣ ಕಷ್ಟದಲ್ಲಿ ಸಿಕ್ಕಿಕೊಂಡು ಆರ್ತನಾದ ಮಾಡಿದರೂ ಅಸಡ್ಡೆ ಮಾಡುತ್ತ ಇದೀಯೆ. ನನ್ನ ಆಸೆಯಿಂದ ಅಣ್ಣನ ಹಿಂದೆ ಬಂದಿದೀಯೆ. ಈಗ ಸಮಯ ಸಿಕ್ಕಿತು ಎಂದು ಆತನ ಬಳಿಗೆ ಹೋಗದೆ ಇದೀಯೆ' ಎಂದಳು.

" ಈ ಮಾತನ್ನು ಕೇಳಿ ನನಗೂ ಕೋಪ ಬಂತು. ನನ್ನ ಕಣ್ಣು ಕೆಂಪು ಆದವು. ತುಟಿ ಅದಿರಿದವು. ಅಲ್ಲಿ ಇರಲು ಸಾಧ್ಯ ಆಗಲಿಲ್ಲ. ನಿನ್ನನ್ನು ಹುಡುಕಿಕೊಂಡು ಹೊರಟೆ. ಇದಿರಿಗೆ ಬಂದೆ ನೀನು" ಎಂದ ಲಕ್ಷ್ಮಣ.

ರಾಮನಿಗೆ ದುಃಖ ಇಮ್ಮಡಿಸಿತು. ವೈಮನಸ್ಯದಿಂದ "ಲಕ್ಷ್ಮಣ, ಸೀತೆಯನ್ನು ಒಂಟಿ ಆಗಿ ಬಿಟ್ಟುಬಂದು ಎಂಥ ತಪ್ಪು ಮಾಡಿದೆ. ಎಷ್ಟು ಮಂದಿ ರಾಕ್ಷಸರು ಬಂದರೂ ಗೆಲ್ಲುವ ಸಾಮರ್ಥ್ಯ ಇದೆ ನನಗೆ ಎಂದು ತಿಳಿದು ಇದ್ದರೂ ಅಜ್ಞಾನದಿಂದ ಸೀತೆ ಕೋಪ ಮಾಡಿಕೊಂಡು ಕ್ರೂರ ಆಗಿ ಮಾತಾಡಿದಳು ಎಂದು ನೀನು ಬಂದುಬಿಡುವುದೆ ಅವಳ ಮಾತಿಗೆ ಹೆದರಿ? ಸೀತೆ ಅವಿವೇಕಿ. ಸಿಟ್ಟು ಬೇರೆ. ಹೆಣ್ಣು ಹೆಂಗಸು. ಅವಳ ಮಾತಿಗೆ ಹೆದರಿ ನೀನು ಅವಳನ್ನು ಒಬ್ಬಳನ್ನೇ ಬಿಟ್ಟುಬರುವುದೆ?

"ತಮ್ಮ, ಎಂಥ ತಪ್ಪು ಮಾಡಿದೆ. ಸೀತೆ ದುಡುಕಿ ಮಾತಾಡಿದಳು. ನೀನು ಕೋಪ ಮಾಡಿಕೊಳ್ಳುವುದೆ? ನನ್ನ ಅಪ್ಪಣೆಯನ್ನು ಮೀರುವುದೆ? ನಿನ್ನದು ತಪ್ಪು. ಲಕ್ಷ್ಮಣ, ಮೃಗರೂಪದಿಂದ ನನ್ನನ್ನು ವಂಚಿಸಿ ಬಹುದೂರ ನನ್ನನ್ನು ಸೆಳೆದುಕೊಂಡು ಹೋದ ಆ ರಾಕ್ಷಸ ನನ್ನ ಬಾಣದ ಏಟಿಗೆ ಸತ್ತು ಬಿದ್ದ. ಆ ಏಟನ್ನು ತಡೆಯಲಾರದೆ ಜಿಂಕೆಯ ರೂಪವನ್ನು ಬಿಟ್ಟು ರಾಕ್ಷಸ ಆದ. ಸಾಯುವ ಮೊದಲು ನನ್ನ ಹಾಗೇ ಬಹುದೂರ ಕೇಳುವಂತೆ ಕೂಗಿಕೊಂಡ. ಅದನ್ನು ಕೇಳಿ ನೀನು ಸೀತೆಯನ್ನು ಬಿಟ್ಟುಬಂದೆ" ಎಂದ.

೧೯

ಆಶ್ರಮಕ್ಕೆ ಬರುವಾಗಲೇ ರಾಮನ ಎಡಗಣ್ಣಿನ ರೆಪ್ಪೆ ಅದಿರುತ್ತ ಇತ್ತು. ಕಾಲು ತಡವರಿಸಿದವು. ಮೈ ನಡುಗಿತು. ಈ ದುಶ್ಶಕುನಗಳನ್ನು ಕಂಡು ಸೀತೆ ಕ್ಷೇಮದಿಂದ ಇಲ್ಲ ಎಂದುಕೊಂಡ. ಆಕೆಯನ್ನು ಬೇಗ ನೋಡಬೇಕು ಎಂಬ ಆತುರ ಹೆಚ್ಚಿತು.

ಬೇಗ ಬೇಗ ಬಂದ. ಪರ್ಣಶಾಲೆ ಬಂತು. ಸೀತೆ ಇಲ್ಲ. ಮೂಲೆಮೂಲೆಯಲ್ಲೂ ಹುಡುಕಿದ. ಎಲ್ಲೂ ಇಲ್ಲ. ಹೇಮಂತ ಋತುವಿನಲ್ಲಿ ತಾವರೆ ಇಲ್ಲದ ಕೊಳ ಇರುವಂತೆ ಇತ್ತು ಆಶ್ರಮ. ಆಶ್ರಮದ ಹೂಗಿಡಗಳ ಹೂ ಎಲ್ಲಾ ಬಾಡಿ ಉದುರಿಹೋಗಿದ್ದವು. ದುಂಬಿಗಳ ಝೇಂಕಾರ ಬಹಳ ದೀನ ಆಗಿತ್ತು. ಗಿಡಮರ ಎಲ್ಲಾ ಸೀತೆ ಇಲ್ಲದ್ದಕ್ಕೆ ಅಳುತ್ತ ಇದ್ದವು. ಮೃಗಪಕ್ಷಿಗಳು ಕಳೆಗುಂದಿ ಸ್ತಬ್ಧ ಆಗಿ ಇದ್ದವು. ವನದೇವತೆಗಳು ಹೊರಟುಹೋಗಿದ್ದರು. ಆಶ್ರಮ ಹಾಳುಬಿದ್ದಿತ್ತು.

ಆಶ್ರಮದಲ್ಲಿ ಕೃಷ್ಣಾಜಿನಗಳೂ ದರ್ಭೆಗಳೂ ಮಣೆಗಳೂ ಚೆಲ್ಲಾಚೆದರು ಆಗಿ ಬಿದ್ದು ಇದ್ದವು. ಎಲ್ಲಾ ಗೊಂದಲ. ರಾಮನಿಗೆ ಶೂನ್ಯ ಆಶ್ರಮವನ್ನು ನೋಡಿ ದುಃಖ ಉಕ್ಕಿತು.

" ಸೀತು ಭೀರು. ರಾಕ್ಷಸರೇ ಅವಳನ್ನು ಹೊತ್ತುಕೊಂಡು ಹೋದರೋ ತಿಂದುಹಾಕಿದರೋ? ಸತ್ತುಹೋದಳೋ ಏನೋ. ವಿಪತ್ತಿಗೆ ಸಿಕ್ಕಿದಾಳೋ ಅಡವಿಯ ಒಳಕ್ಕೆ ಹೋದಳೋ ಅವಿತುಕೊಂಡು ಇದಾಳೋ? ಹೂ ಹಣ್ಣು ತರಲು ಹೋಗಿದಾಳೋ ನೀರು ತರಲು ಗೋದಾವರಿಗೆ ಹೋದಳೋ ಸ್ನಾನಕ್ಕೆ ತಾವರೆಕೊಳಕ್ಕೆ ಹೋದಳೋ! ಎಲ್ಲಿ ಹೋದಳೋ ಕಾಣೆ" ಎಂದು ಅಳುತ್ತ ರಾಮ ಎಲ್ಲೆಲ್ಲೂ ಹುಡುಕಿದ. ಸೀತೆ ಕಾಣಲಿಲ್ಲ.

ದುಃಖದಿಂದ ರಾಮನ ಕಣ್ಣು ಎರಡೂ ಕೆಂಪು ಆದವು. ಹುಚ್ಚನ ಹಾಗೆ ಮರಮರಕ್ಕೂ ಹೋದ. ಬೆಟ್ಟಬೆಟ್ಟಕ್ಕೂ ಹೋದ. ನದಿನದಗಳಿಗೂ ಓಡಿ ಹೋದ. ಎಲ್ಲಿ ಹುಡುಕಿದರೂ ಸೀತೆ ಕಾಣಲಿಲ್ಲ.

ದುಃಖಸಮುದ್ರದಲ್ಲಿ ಮುಳುಗಿಹೋದ ರಾಮ. ಕಣ್ಣಿಗೆ ಕಂಡ ಗಿಡವನ್ನು ಕೇಳಿದ—" ಎಲೆ ಕದಂಬೆ, ನನ್ನ ಪ್ರಿಯ ಪತ್ನಿ ಸೀತೆಯನ್ನು ಕಂಡೆಯಾ? ನಿನ್ನ ಹೂ ಅವಳಿಗೆ ಬಲು ಇಷ್ಟ ಅಲ್ಲವೆ? ಸೀತೆ ಬಲು ಚೆಲುವೆ. ನೀನು

ನೋಡಿದ್ದರೆ ಹೇಳುತ್ತೀಯಾ? ಬಿಲ್ವವೃಕ್ಷವೇ, ನನ್ನ ಸೀತೆಯನ್ನು ನೋಡಿಲ್ಲವೆ? ಅವಳ ಸೀರೆಯ ಬಣ್ಣ ನಿನ್ನ ಚಿಗುರಿನ ಬಣ್ಣ, ಹೊಂಬಣ್ಣ. ನಿನ್ನ ಹಣ್ಣಿನ ಹಾಗೇ ಅವಳ ಮೊಲೆ. ಹೇಳು, ಎಲ್ಲಿ ಇದಾಳೆ? ಅರ್ಜುನವೃಕ್ಷವೆ, ಸೀತೆಗೆ ನಿನ್ನನ್ನು ಕಂಡರೆ ಬಲು ಇಷ್ಟ. ನಿನಗೆ ತಿಳಿದು ಇರಬೇಕು ಆ ಭಯಶೀಲೆ ಜನಕನಂದಿನಿಯ ಸಂಗತಿ. ಹೇಳು."

ಮುಂದೆ ಸಾಗಿದ. ಕಕುಭವೃಕ್ಷವನ್ನು ನೋಡಿದ. "ಕಕುಭ! ನಿನ್ನ ರೆಂಬೆಗಳ ಹಾಗೇ ಸೀತೆಯ ತೊಡೆ. ಸೊಗಸು ಆಗಿ ಚಿಗುರು ಹೂ ಬಿಟ್ಟು ಇದೀಯೆ. ನಿನಗೆ ಗೊತ್ತು ಇರಬೇಕು ಸೀತೆಯ ಸಮಾಚಾರ. ಹೇಳು. ಎಲೆ ತಿಲಕ! ನೀನು ವೃಕ್ಷಜಾತಿಗೇ ತಿಲಕ. ನಿನ್ನ ಬಳಿ ಯಾವಾಗಲೂ ದುಂಬಿಗಳು ಗುಂಯಿಗುಂಯಿ ಗಾನಮಾಡುತ್ತವೆ. ಆದರಿಂದ ಸೀತೆಗೆ ನಿನ್ನ ಮೇಲೆ ಬಹಳ ಪ್ರೀತಿ. ನಿನಗೆ ಹೇಳಲಿಲ್ಲವೆ ಸೀತೆ? ಇದೊ ಅಶೋಕ. ಶೋಕವನ್ನು ನೀಗಿಸುವ ಮರ ನೀನು. ನನ್ನ ಪ್ರಿಯೆ ಸೀತೆಯನ್ನು ಕಾಣದೆ ಶೋಕದಲ್ಲಿ ಮುಳುಗಿ ಇದೇನೆ. ಸೀತೆ ಎಲ್ಲಿ ಇದಾಳೋ ಹೇಳಿ ನಿನ್ನ ಹೆಸರನ್ನು ಉಳಿಸಿಕೊ. ತಾಳೆ ಗಿಡವೆ, ನಿನ್ನ ಹಣ್ಣು ಸೀತೆಯ ಸ್ತನಗಳ ಹಾಗೆ. ದಯೆ ಇಟ್ಟು ಹೇಳುತ್ತೀಯಾ ಆ ಸುಂದರ ನಿತಂಬಿನಿ ಎಲ್ಲಿ ಇದಾಳೊ! ನಿನ್ನ ಹಣ್ಣು ಇದ್ದ ಹಾಗೇ ಸೀತೆಯ ಮೈಯೂ ನುಣುಪು, ನೇರಿಳೆ! ನಿನಗೆ ಗೊತ್ತು ಎಲ್ಲಿ ಇದಾಳೋ ಆಕೆ. ಹೇಳುತ್ತೀಯಾ? ನಿರ್ಭಯದಿಂದ ಹೇಳು. ಎಲೆ ಕರ್ಣಿಕಾರ, ನಿನ್ನ ಹೂ ಎಂದರೆ ಸೀತೆಗೆ ಬಲು ಆಸೆ. ನಿನ್ನಲ್ಲೋ ಸಮೃದ್ಧಿ ಹೂಗಳು. ಹೂಗಳಿಗೆ ನಿನ್ನ ಬಳಿಗೆ ಓಡಿಬರುತ್ತ ಇದ್ದಳಲ್ಲ. ಆ ಪತಿವ್ರತೆ ನನ್ನ ಪ್ರಿಯತಮೆ, ಎಲ್ಲಿ ಇದಾಳೋ ಹೇಳು."

ಒಂದೊಂದು ಗಿಡದ ಬಳಿಗೂ ಹೋದ ರಾಮ. ದೈನ್ಯದಿಂದ ಸೀತೆ ಎಲ್ಲಿ ಸೀತೆ ಎಲ್ಲಿ ಎಂದು ಕೇಳಿದ ಆ ಮಹಾಕೀರ್ತಿವಂತ. ಮಾವು, ಕಡವು, ಮತ್ತಿ, ಹಲಸು, ಗೋರಂಟಿ, ಗೊಬ್ಬಳಿ, ದಾಳಿಂಬೆ, ಪಗಡೆ, ಪುನ್ನಾಗ, ಶ್ರೀಗಂಧದ ಮರಗಳನ್ನು ಕೇಳಿದ. ಮಲ್ಲಿಗೆ, ಇರುವಂತಿಗೆ, ಸಂಪಿಗೆ, ಕೇದಗೆ ಮುಂತಾದ ಹೂಗಿಡಗಳನ್ನು ಕೇಳಿದ.

ಅವನಿಗೆ ಹುಚ್ಚು. ಅವು ಉತ್ತರ ಕೊಟ್ಟಾವೆ?

ಗಿಡಮರ ಉತ್ತರ ಹೇಳಲಿಲ್ಲ ಎಂದು ಮೃಗಗಳನ್ನು ಕೇಳಿದ ರಾಮ. ಜಿಂಕೆ ಕಂಡಿತು. "ಜಿಂಕೆ, ಮರಿಜಿಂಕೆಯ ಕಣ್ಣುಗಳ ಹಾಗೇ ನನ್ನ ಸೀತೆಯ ಕಣ್ಣು. ಹೆಣ್ಣುಜಿಂಕೆಯ ನೋಟದ ಹಾಗೆ ಅವಳ ನೋಟವೂ ಬಹಳ ಚಂಚಲ. ನಿಮ್ಮ ನಡುವೆ ಸೇರಿಕೊಂಡು ಇದ್ದಾಳೆಯೋ ಹೇಗೆ? ಹೇಳು. ಗಜರಾಜ, ನಿನ್ನ ಸೊಂಡಿಲಿನ ಹಾಗೆ ನನ್ನ ಪ್ರಿಯತಮೆಯ ತೊಡೆ. ನಿನಗೆ ತಿಳಿದು ಇದ್ದೀತು ಸೀತೆಯ ವಿಷಯ. ಓಹೋ ಹುಲಿರಾಯ! ನೀನು ಧೈರ್ಯಶಾಲಿ. ಹೆದರಬೇಡ. ನಿನಗೆ ಏನೂ ಮಾಡೆ. ಸೀತೆಯನ್ನು, ಆ ಚಂದ್ರಮುಖಿಯನ್ನು ನೋಡಿದ್ದರೆ ಹೇಳು."

ಯಾವುದೂ ಹೇಳಲಿಲ್ಲ. ಆದರೆ ರಾಮನಿಗೆ ಸೀತೆಯ ಹೊರತು ಬೇರೆ ಯೋಚನೆಯೆ ಇಲ್ಲ. ಸೀತೆಯನ್ನು ಇದಿರಿಗೆ ಕಂಡ ಹಾಗೆ ಆಯಿತು. "ಸೀತೆ, ನೋಡಿದೆ ನೋಡಿದೆ. ಇನ್ನು ಓಡಿಹೋಗುವೆ ಏಕೆ? ಕಮಲಾಕ್ಷಿ, ಈ ಕಣ್ಣು ಮುಚ್ಚಾಲೆ ಏಕೆ? ಗಿಡಗಳ ಮರೆಯ ಹಿಂದೆ ಏಕೆ ಅವಿತುಕೊಳ್ಳುತ್ತೀ? ಮಾತೇ ಆಡದೆ ಇದ್ದೀಯಲ್ಲ. ಏಕೆ? ನಿಲ್ಲು, ನಿಲ್ಲು. ಓಡಿಹೋಗಬೇಡ. ಸ್ವಲ್ಪ ಆದರೂ ಕರುಣೆ ಇಲ್ಲವೆ ನನ್ನ ಮೇಲೆ? ನಿನ್ನ ಸ್ವಭಾವ ಹುಡುಗಾಟ ನಗೆಯಾಟದ್ದು ಅಲ್ಲವಲ್ಲ. ಹೀಗೆ ಏಕೆ ಕಾಡುತ್ತೀ? ಚೆನ್ನೆ, ನೀನು ಓಡಿ ಹೋಗುತ್ತ ಇದ್ದರೆ ಏನು? ನೀನು ಉಟ್ಟ ಹಳದಿ ಪೀತಾಂಬರ ಕಾಣುತ್ತಲೇ ಇದೆಯಲ್ಲ. ಇನ್ನು ಏಕೆ ಈ ಓಟ, ಕಣ್ಣುಮುಚ್ಚಾಲೆ ಆಟ? ನಿಲ್ಲು, ನಿಲ್ಲು. ನನ್ನ ಮೇಲೆ ಪ್ರೀತಿ ಇಲ್ಲವೆ ನಿನಗೆ?"

ಸ್ವಲ್ಪ ಭ್ರಾಂತಿ ಇಳಿಯಿತು. "ಓಹೋ ಸೀತೆ ಇಲ್ಲ. ಮನಸೆಳೆವ ನಸುನಗೆಯ ಪ್ರಿಯತಮೆ ಆಶ್ರಮದಲ್ಲಿ ಇಲ್ಲ. ರಾಕ್ಷಸರು ಅವಳನ್ನು ಕೊಂದು ಇರಬೇಕು. ಬದುಕಿ ಇದ್ದರೆ ನನ್ನ ಸಂಕಟದಲ್ಲಿ ನನ್ನನ್ನು ಉಪೇಕ್ಷಿಸುತ್ತ ಇದ್ದಳೆ ಹೀಗೆ? ಯಾರೋ ಮಾಂಸಾಹಾರಿ ರಾಕ್ಷಸರು ನಾನು ಇಲ್ಲದಾಗ ಅವಳನ್ನು ತುಂಡುತುಂಡು ಆಗಿ ಕತ್ತರಿಸಿ ತಿಂದು ಇರಬೇಕು. ಸಂದೇಹ ಇಲ್ಲ. ಮೊಲ್ಲೆಯ ಮೊಗ್ಗಿನ ಸಾಲಿನಂಥ ಹಲ್ಲು, ತೊಂಡೆಯ ಹಣ್ಣಿಗೆ ಸಮಾನ ಆದ ತುಟಿ, ಸೊಗಸು ಆದ ಮೂಗು, ಥಳಥಳ ಹೊಳೆವ ರತ್ನಕುಂಡಲ, ಪೂರ್ಣ ಚಂದ್ರನಂಥ ಮುಖ. ಎಷ್ಟು ಕಂದಿಹೋಯಿತೋ ಮುಖ ರಾಕ್ಷಸರು ಮುತ್ತಿ ಕೊಂಡಾಗ! ಕೊರಳಲ್ಲಿ ಕಂಠಾಭರಣ ಧರಿಸಿದ ಸಂಪಿಗೆಹೂವಿನ ಮೈಬಣ್ಣದ

ಆ ಕೋಮಲಾಂಗಿಯ ಕತ್ತನ್ನು ರಾಕ್ಷಸರು ಹಿಸುಕಿದಾಗ ಪ್ರಾಣ ಬಿಡಲಾರದೆ ಎಷ್ಟು ಅತ್ತಳೊ! ತೋಳ್ಬಳೆ ಹಸ್ತಾಭರಣಗಳು ಇದ್ದ ಅವಳ ಮೃದು ಆದ ತೋಳುಗಳಿಂದ ನಡುನಡುಗುತ್ತ ಅಡ್ಡಿ ಮಾಡಲು, ಅವಳ ಕೈಗಳನ್ನೇ ತಿಂದು ಹಾಕಿ ಇರಬೇಕು ರಾಕ್ಷಸರು. ರಾಕ್ಷಸರ ಬಾಯಿಗೆ ತುತ್ತು ಆಗಲಿ ಎಂದೇ ನಾನು ಅವಳನ್ನು ಬಿಟ್ಟು ಹೋದಂತೆ ಆಯಿತೆ! ಎಷ್ಟು ಜನ ಬಂಧುಬಳಗ ಅವಳಿಗೆ. ಎಲ್ಲರನ್ನೂ ಬಿಟ್ಟು ನನ್ನ ಜೊತೆಯಲ್ಲಿ ಬಂದುದಕ್ಕೆ ಇದೇಯೆ ಗತಿ? ಪ್ರಯಾಣಿಕರು ಹೆಂಗಸು ಒಬ್ಬಳನ್ನು ದಾರಿಯಲ್ಲಿ ಬಿಟ್ಟುಹೋದರೆ ಕಾಡುಮೃಗ ಗಳು ತಿಂದುಹಾಕುವ ಹಾಗೆ ರಾಕ್ಷಸರು ಅವಳನ್ನು ತಿಂದುಹಾಕಿದರೆ?

" ಲಕ್ಷ್ಮಣ, ಸೀತೆಯನ್ನು ನೋಡಿದೆಯಾ ನೀನು? ಸೀತೆ, ಮಂಗಳ ಸ್ವರೂಪಿಣಿ, ಪ್ರಿಯತಮೆ ಎಲ್ಲಿ ಹೋದೆ ನೀನು? ಎಲ್ಲಿಗೆ, ಎಲ್ಲಿಗೆ?"

ರಾಮ ಬಿಕ್ಕಿಬಿಕ್ಕಿ ಅತ್ತ. ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ತಿರುಗಾಡಿದ. ದುಃಖ ಹೆಚ್ಚಿ ನೋಡಿದ ವಸ್ತುವನ್ನು ಎಲ್ಲಾ ಸೀತೆ ಎಲ್ಲಿ ಎಂದು ಕೇಳಿದ. ಸೀತೆ, ಸೀತೆ ಎಂದು ಕೂಗಿಕೊಂಡ. ಎಲ್ಲೆಲ್ಲೂ ಸೀತೆಯನ್ನು ಹುಡುಕಿದ. ಬಳುಕುವ ಬಳ್ಳಿಯನ್ನು ನೋಡಿ ಸೀತೆ ಎಂದುಕೊಂಡ. ಮೈಮೇಲೆ ಎಚ್ಚರ ಇಲ್ಲ. ದಿಕ್ಕು ದಾರಿ ನೋಡದೆ ಗುಡ್ಡಬೆಟ್ಟ, ಕಾಡು ಹೊಳೆ-ತೊರೆ, ಹಳ್ಳಕೊಳ್ಳ, ತೋಟ ತುಡಿಕೆ ಎಂದು ಎಲ್ಲವನ್ನೂ ಸುತ್ತಿದ. ನಿಂತಲ್ಲಿ ನಿಲ್ಲಲಿಲ್ಲ. ಎಲ್ಲವನ್ನೂ ಜಾಲಾಡಿಸಿದ. ಮತ್ತೆ ಮತ್ತೆ ಹುಡುಕಿ ಬಂದ. ಹುಚ್ಚನ ಹಾಗೆ ಅಲೆದಲೆದ.

ಎಲ್ಲೂ ಸೀತೆ ಕಾಣಲಿಲ್ಲ.

ಆದರೂ ರಾಮನ ಆಸೆ ತೀರಲಿಲ್ಲ. ನೆಮ್ಮದಿ ಇಲ್ಲದೆ ಮತ್ತೆ ಹೊರಟ ಹುಡುಕಲು.

೨೦

ಆಶ್ರಮ ಹಾಳು ಸುರಿಯುತ್ತ ಇದೆ. ಕೃಷ್ಣಾಜಿನ ಮಣೆ ದರ್ಭೆ ಚದುರಿ ಬಿದ್ದು ಇವೆ. ಸೀತೆ ಇಲ್ಲ. ಎಷ್ಟು ಹುಡುಕಿದರೂ ಸೀತೆ ಕಾಣಲಿಲ್ಲ. ಸೀತೇ ಸೀತೇ ಎಂದು ಕೂಗಿಕೊಂಡ ರಾಮ. ಗೊಳೋ ಎಂದು ಅತ್ತ. " ಲಕ್ಷ್ಮಣ, ಸೀತೆ ಎಲ್ಲಿಗೆ ಹೋದಳು? ಯಾರು ಆದರೂ ಅವಳನ್ನು ಎತ್ತಿಕೊಂಡು

ಹೋದರೆ? ರಾಕ್ಷಸರು ತಿಂದುಹಾಕಿದರೆ? ಯಾರು ಇರಬಹುದು?" ಎಂದು ಕೇಳಿದ.

"ಸೀತೆ, ಗಿಡದ ಮರೆಯಲ್ಲಿ ನಿಂತು ವಿನೋದ ಮಾಡುತ್ತ ಇದೀಯಾ? ಸಾಕು ನಿನ್ನ ಹಾಸ್ಯ. ನಿನಗೆ ಆಗಿ ನಾನು ಎಷ್ಟು ಸಂಕಟಪಡುತ್ತ ಇದೇನೆ. ಇನ್ನು ತಡೆಯಲಾರೆ. ಬಾ, ಬೇಗ ಬಾ ಹತ್ತಿರಕ್ಕೆ. ಸೀತೇ, ನಿರ್ಭಯದಿಂದ ನಿನ್ನಲ್ಲಿ ನಂಬಿಕೆ ಇಟ್ಟು ನಿನ್ನ ಬಳಿಗೆ ಬಂದು ಆಡುತ್ತ ಇದ್ದವಲ್ಲ ಜಿಂಕೆಯ ಮರಿಗಳು. ಅವೂ ಕೂಡ ನಿನ್ನನ್ನು ಕಾಣದೆ ಕಣ್ಣೀರು ಸುರಿಸುತ್ತ ಇವೆ. ನಿನ್ನ ಧ್ಯಾನವೇ ಧ್ಯಾನ ಅವಕ್ಕೆ" ಎಂದ.

ಲಕ್ಷ್ಮಣನ ಕಡೆ ತಿರುಗಿದ. "ಲಕ್ಷ್ಮಣ, ಸೀತೆ ಇಲ್ಲದೆ ನಾನು ಇನ್ನು ಬದುಕಲಾರೆ. ಸೀತೆಯನ್ನು ಕಳೆದುಕೊಂಡ ದುಃಖದಿಂದ ಸ್ವಲ್ಪ ದಿನಗಳಲ್ಲಿಯೆ ನಾನು ಪರಲೋಕಕ್ಕೆ ಹೋಗುತ್ತೇನೆ. ಅಲ್ಲಿ ನಮ್ಮ ತಂದೆ ದಶರಥಮಹಾರಾಜ ನನ್ನನ್ನು ನೋಡುತ್ತಾರೆ. ಖಂಡಿತ. ಹದಿನಾಲ್ಕು ವರ್ಷ ವನವಾಸ ಮಾಡು ತ್ತೇನೆ ಎಂದೆಯಲ್ಲ ನನ್ನ ಅಪ್ಪಣೆಯಂತೆ. ನಿನ್ನ ಶಪಥ ಏನು ಆಯಿತು? ಈಗಲೇ ಬಂದೆಯಲ್ಲ ನನ್ನ ಬಳಿಗೆ. ಏಕೆ? ನೀನು ಮನಬಂದಂತೆ ನಡೆಯುವ ಪರಮ ದುರ್ಮಾರ್ಗ, ಸುಳ್ಳ ಎಂದು ಅಲ್ಲಿ ಅವರು ನನ್ನನ್ನು ಹಳಿಯುತ್ತಾರೆ."

ಮತ್ತೆ ಸೀತೆಯ ಮೇಲೆ ಮನಸ್ಸು ಹೋಯಿತು.

"ಸೀತೆ, ನನಗೆ ಈಗ ಮೈಮೇಲೆ ಪ್ರಜ್ಞೆ ಇಲ್ಲ. ದುಃಖ ಸುಡುತ್ತಿದೆ. ದೀನ ಆದೆ. ನನ್ನ ಆಸೆ ಎಲ್ಲವೂ ಭಗ್ನ ಆಯಿತು. ಕಪಟಿಯನ್ನು ಕೀರ್ತಿ ಬಿಟ್ಟು ತೊಲಗುವಂತೆ ನೀನು ನನ್ನನ್ನು ಬಿಟ್ಟು ಎಲ್ಲಿ ಹೋದೆ? ನನ್ನನ್ನು ಬಿಟ್ಟು ಹೋದರೆ ನೀನು, ನಾನು ಬದುಕಬಲ್ಲೆನೆ?" ಹುದುಲಿನಲ್ಲಿ ಇಳಿಬಿದ್ದ ಆನೆಯ ಹಾಗೆ ಕಸಿವಿಸಿಗೊಂಡ ರಾಮ. ಸೀತೆಯನ್ನು ಕಾಣಬೇಕು ಎಂಬ ಕಳವಳ, ಆತುರ. ಆಕೆ ಕಾಣಲಿಲ್ಲ.

ಅಣ್ಣನ ದುಃಖವನ್ನು ಮರೆಸೋಣ, ಸಮಾಧಾನ ಮಾಡೋಣ ಎಂದು ಲಕ್ಷ್ಮಣನ ಆಸೆ. "ಅಣ್ಣ, ನೀನು ಮಹಾಬಾಹು, ಶೂರ. ದುಃಖ ಏಕೆ? ಸೀತಾದೇವಿಯನ್ನು ಇಬ್ಬರೂ ಹುಡುಕೋಣ. ಮೈಥಿಲಿಗೆ ವನಸಂಚಾರ ಬಹಳ ಇಷ್ಟ. ನೀರಾಟ ಎಂದರೂ ಇಷ್ಟ. ಅಡವಿಯಲ್ಲಿ ತಿರುಗುತ್ತ ಇರಬಹುದು. ಸೊಗಸು ಆಗಿ ಅರಳಿದ ತಾವರೆಕೊಳಕ್ಕೆ ಹೋಗಿ ಇರಬಹುದು ನೀರಾಟಕ್ಕೆ.

ಮೀನುಗಳ ಆಟದಿಂದ ನೀರುಬಳ್ಳಿಗಳ ಸೊಂಪಿನಿಂದ ಮನಸೆಳೆವ ನದಿಗೆ ಸ್ನಾನಕ್ಕೆ ಹೋಗಿರಬಹುದು. ಅಥವಾ ಹುಡುಗಾಟಕ್ಕೆ ಎಂದು ಅಡವಿಯಲ್ಲಿ ಎಲ್ಲಿ ಆದರೂ ಅವಿತುಕೊಂಡು ಇರಬಹುದು. ನಮ್ಮನ್ನು ಬೆದರಿಸಬೇಕು ಎಂದುಕೊಂಡಳೋ ವೈದೇಹಿ! ನನ್ನನ್ನೂ ನಿನ್ನನ್ನೂ ಪರೀಕ್ಷಿಸಲು ಬಚ್ಚಿಟ್ಟು ಕೊಂಡು ಇದಾಳೋ ಏನೋ. ಈಗಲೇ ಆಕೆಯನ್ನು ಹುಡುಕೋಣ. ಈ ಕಾಡನ್ನು ಪೂರಾ ಜಾಲಾಡಿಸಿಬಿಡೋಣ. ಚಿಂತಿಸಬೇಡ, ಅಣ್ಣ" ಎಂದ.

ಲಕ್ಷ್ಮಣನ ಈ ಪ್ರೇಮಾತಿಶಯದಿಂದ ರಾಮನಿಗೆ ಸ್ವಲ್ಪ ಸಮಾಧಾನ ಆಯಿತು. ಇಬ್ಬರೂ ಹುಡುಕಲು ಹೊರಟರು. ಅಡವಿ ಬೆಟ್ಟ ಹೊಳೆ ತೊರೆ ಕೊಳ ಎಲ್ಲವನ್ನೂ ಗಾಲಿಸಿದರು. ಎಲ್ಲಿಯೂ ಸೀತೆ ಕಾಣಲಿಲ್ಲ. ಪ್ರಸ್ರವಣ ಪರ್ವತದ ತಪ್ಪಲಲ್ಲಿ ಗವಿಗಳಲ್ಲಿ ಹುಡುಕಿದರು. ಶಿಖರವನ್ನು ಏರಿದರು. ಸೀತೆ ಕಾಣಲಿಲ್ಲ. ಇಲ್ಲಿಯೂ ಕಾಣಲಿಲ್ಲ ಸೀತೆ, ಏನು ಮಾಡೋಣ ಎಂದು ರಾಮ ಕೇಳಿದ ಲಕ್ಷ್ಮಣನನ್ನು. ದಂಡಕಾರಣ್ಯವನ್ನು ಎಲ್ಲಾ ಸುತ್ತಿ ಬಂದು ಇದ್ದ ಲಕ್ಷ್ಮಣ. "ಅಣ್ಣ, ನೀನು ಮಹಾಪ್ರಾಜ್ಞ. ಮಹಾಬಾಹು ವಿಷ್ಣು ಬಲಿ ಚಕ್ರವರ್ತಿಯನ್ನು ಬಂಧಿಸಿ ಭೂಮಂಡಲವನ್ನು ಪಡೆದ. ನೀನೂ ಜನಕನಂದಿನಿ ಯನ್ನು ಅಪಹರಿಸಿದವನನ್ನು ಶಿಕ್ಷಿಸಿ ಆಕೆಯನ್ನು ಪಡೆಯುತ್ತೀಯೆ" ಎಂದ.

ಲಕ್ಷ್ಮಣ ಪ್ರೀತಿಯಿಂದ ಹೇಳಿದ ಈ ಮಾತನ್ನು. ರಾಮನಿಗೆ ಗದ್ಗದ ಕಂಠ ಆಯಿತು. ದುಃಖದಿಂದ ಹೇಳಿದ—"ಮಹಾ ಮೇಧಾವಿ, ಅಡವಿಯಲ್ಲಿ ಎಲ್ಲೆಲ್ಲೂ ಹುಡುಕಿದೆವು. ತಾವರೆ ಕೊಳಗಳಲ್ಲಿ ಹುಡುಕಿದುದು ಆಯಿತು. ಹೊಳೆ ತೊರೆ ಬೆಟ್ಟದ ಗವಿಗಳು ಎಲ್ಲವನ್ನೂ ಹುಡುಕಿದೆವು. ಬೆಟ್ಟವನ್ನು ಪೂರಾ ಶೋಧಿಸಿದೇವೆ. ಸೀತೆ ಎಲ್ಲಿಯೂ ಕಾಣಿಸಲಿಲ್ಲವಲ್ಲ. ಸೀತೆಯನ್ನು ಕಾಣದೆ ದುಃಖದಿಂದ ನಲುಗಿಹೋಗಿ ಸಂಕಟದಿಂದ ಗೊಳೋ ಎಂದು ಅತ್ತ.

ಆ ದುಃಖದಿಂದ ರಾಮನ ಅಂಗಾಂಗಗಳು ಎಲ್ಲವೂ ಬಾಡಿ ಸೊರಗಿ ಹೋದವು. ಮೈಮೇಲೆ ಎಚ್ಚರ ತಪ್ಪಿತು. ಬಿಸಿ ಬಿಸಿ ನಿಟ್ಟುಸಿರು ಬಿಟ್ಟು ಕಂಬನಿ ಕರೆಯುತ್ತ "ಪ್ರಿಯೆ, ಅಯ್ಯೋ" ಎಂದು ಗಟ್ಟಿ ಆಗಿ ಕೂಗಿದ. ಮತ್ತೆ ಮತ್ತೆ ಮೂರ್ಛೆ. ಧರ್ಮಜ್ಞ ಆದ ಲಕ್ಷ್ಮಣ ಕೈಜೋಡಿಸಿಕೊಂಡು ಮಹಾ ವಿನಯದಿಂದ ರಾಮನನ್ನು ಸಮಾಧಾನಪಡಿಸತೊಡಗಿದ.

ರಾಮನ ಕಿವಿಗೆ ಆ ಮಾತು ಒಂದೂ ಬೀಳಲಿಲ್ಲ. ಸೀತೆ ಕಾಣಲಿಲ್ಲವಲ್ಲ ಎಂದು ಬಿಕ್ಕಿಬಿಕ್ಕಿ ಅಳುತ್ತಲೇ ಇದ್ದ.

೨೧

ಮಹಾಬಾಹು, ಪುಂಡರೀಕಾಕ್ಷ, ಧರ್ಮಾತ್ಮ, ರಾಮ ಸೀತೆಯ ವಿರಹದಿಂದ ಮೈಮರೆತ. ಸೀತೆ ಕಣ್ಣಿದಿರಿಗೆ ಇಲ್ಲದೆ ಇದ್ದರೂ, ಕಾಮಪರವಶ ಆಗಿ ಸೀತೆ ಇದಿರಿಗೆ ಇದಾಳೇನೋ ಎಂದು ಮಾತನ್ನು ಆಡಿದ. "ಪ್ರಿಯೆ, ನಿನಗೆ ಹೂಗಳು ಎಂದರೆ ಬಲು ಇಷ್ಟ. ಗಿಡದ ತುಂಬಾ ಹೂ ಬಿಟ್ಟ ಅಶೋಕ ವೃಕ್ಷದ ರೆಂಬೆಗಳಲ್ಲಿ ಮೈಮರೆಸಿಕೊಂಡು ಇದೀಯಾ ನೀನು? ನನ್ನ ಸಂತಾಪ ಹೆಚ್ಚಲಿ ಎಂದೆ? ನೀನು ಬಾಳೆಯ ಗಿಡಗಳ ನಡುವೆ ಅವಿತುಕೊಂಡರೆ ನನಗೆ ಗೊತ್ತು ಆಗದೆ? ಬಾಳೆಯ ದಿಂಡಿನ ಹಾಗೆ ಕಾಣುವ ನಿನ್ನ ತೊಡೆಗಳನ್ನು ನಾನು ಕಂಡೆ.

"ದೇವಿ, ಕಲ್ಯಾಣಿ, ಕರ್ಣಿಕಾರ ಗಿಡಗಳ ಮರೆಯಲ್ಲಿ ಸುಳಿಯುತ್ತೀಯಾ? ಸಾಕು, ನಿನ್ನ ಈ ಪರಿಹಾಸ. ನನಗೆ ಬಾಧೆ ಆಗುತ್ತ ಇದೆ. ಬಿಡು ಈ ವಿನೋದ. ನನ್ನನ್ನು ಅಣಕಿಸಿದರೆ ನಿನಗೆ ಏನು ಸಿಗುತ್ತದೆ ಸೀತೆ? ಹಿಂದೆ ನೀನು ವಿನೋದ ಆಡಿದರೆ ಸಂತೋಷ ಆಗುತ್ತ ಇತ್ತು. ಈಗ ನಾನು ದಣಿದು ಇದೇನೆ. ಇದು ಪರಿಹಾಸಕ್ಕೆ ಸಮಯ ಅಲ್ಲ. ಮನಸಿಗೆ ಹಿಗ್ಗು ಇಲ್ಲ. ಇಲ್ಲಿ, ಈ ಋಷ್ಯಾಶ್ರಮದಲ್ಲಿ ಇಂಥ ವಿನೋದ ಮಾಡಬಾರದು. ನೀನು ಪರಿಹಾಸಪ್ರಿಯೆ. ನಾ ಬಲ್ಲೆ. ಆದರೆ ಇದು ಸಮಯ ಅಲ್ಲ. ವಿಶಾಲಾಕ್ಷಿ, ಇನ್ನು ಬಾ. ಬೇಗನೆ ಬಾ. ನೀನು ಇಲ್ಲದೆ ಆಶ್ರಮವೇ ಹಾಳುಸುರಿಯುತ್ತದೆ.

"ಲಕ್ಷ್ಮಣ, ರಾಕ್ಷಸರು ಸೀತೆಯನ್ನು ತಿಂದು ಇರಬಹುದು. ಇಲ್ಲವೆ ಎತ್ತಿಕೊಂಡು ಆದರೂ ಹೋಗಿ ಇರಬೇಕು. ನೋಡು, ನಾನು ಇಷ್ಟು ವಿಲಪಿಸಿದರೂ ಆಕೆ ಬರಲಿಲ್ಲ. ಹೌದು, ರಾಕ್ಷಸರು ತಿಂದುಹಾಕಿದಾರೆ. ಸಂದೇಹ ಇಲ್ಲ. ಈ ಜಿಂಕೆಗಳ ಹಿಂಡು ಕಣ್ಣೀರು ಸುರಿಸಿ ಹೇಳುತ್ತವೆ ನೋಡು ನನಗೆ.

"ಸೀತೆ, ನೀನು ಪತಿವ್ರತೆ, ಪರಮಪೂಜ್ಯೆ. ಸೊಬಗಿನ ಮೈಬಣ್ಣದವಳೆ, ಅಯ್ಯೋ! ಎಲ್ಲಿ ಹೋದೆ? ಕೈಕೇಯಿಯ ಕೋರಿಕೆ ಈಡೇರಿತೆ? ಸೀತೆಯ ಜೊತೆಯಲ್ಲಿ ಬಂದೆ ಅಯೋಧ್ಯೆಯಿಂದ. ಈಗ ಸೀತೆ ಇಲ್ಲದೆ ಅಯೋಧ್ಯೆಗೆ ಹಿಂದಿರುಗಲೆ? ಹೇಗೆ? ಸೀತೆಯೆ ಇಲ್ಲದೆ ಹಾಳುಬಿದ್ದ ಅಂತಃಪುರದಲ್ಲಿ ಹೇಗೆ ಕಾಲು ಇಡಲಿ? ಒಬ್ಬನೇ ಹಿಂದಕ್ಕೆ ಹೋದರೆ ಜನರು ಏನು ಅಂದಾರು? ನಿರ್ವೀರ್ಯ, ನಿರ್ದಯ ಎನ್ನರೆ? ಸೀತೆಯನ್ನು ರಾಕ್ಷಸರು ಹೊತ್ತುಕೊಂಡು ಹೋದರು ಎಂದರೆ ಹೇಡಿ ಎನ್ನರೆ ಜನ ನನ್ನನ್ನು?

“ವನವಾಸ ಮುಗಿಸಿ ಅಯೋಧ್ಯೆಗೆ ಹೋದಮೇಲೆ ಜನಕಮಹಾರಾಜ ಬರುತ್ತಾನೆ ಯೋಗಕ್ಷೇಮ ವಿಚಾರಿಸಲಿಕ್ಕೆ. ನಾನು ಹೇಗೆ ನೋಡಲಿ ಆತನ ಮುಖ? ಸೀತೆಯನ್ನು ಕಳೆದುಕೊಂಡು ಒಬ್ಬನೇ ಹೋದರೆ ನಾನು, ಆತನ ಗತಿ? ಮಗಳ ಮೇಲಣ ಪ್ರೀತಿಯಿಂದ ಕೂಡಲೇ ಮೂರ್ಛೆಹೋಗುತ್ತಾನೆ. ಖಂಡಿತ. ಇಲ್ಲ, ನಾನು ಅಯೋಧ್ಯೆಗೆ ಹೋಗುವುದೇ ಇಲ್ಲ. ಭರತ ಆಳುತ್ತ ಇರಲಿ. ಅಯೋಧ್ಯೆ ಅಲ್ಲ, ಸೀತೆ ಇಲ್ಲದ ಸ್ವರ್ಗಲೋಕವೂ ನನಗೆ ಬೇಡ.

“ತಮ್ಮ, ಲಕ್ಷ್ಮಣ, ನೀನು ಅಯೋಧ್ಯೆಗೆ ಹೋಗು. ನಾನು ಈ ಕಾಡಿನಲ್ಲೇ ಇರುತ್ತೇನೆ. ಸೀತೆ ಇಲ್ಲದೆ ನಾನು ಬದುಕುವ ಮಾತೇ ಇಲ್ಲ. ಅಯೋಧ್ಯೆಗೆ ಹೋಗಿ ಭರತನನ್ನು ತಬ್ಬಿಕೊಂಡು—ಭರತ, ಅಣ್ಣ ಹೇಳಿದ, ಇನ್ನು ನೀನೇ ರಾಜ್ಯ ನಡೆಸಬೇಕು ಎಂದು ಹೇಳು. ತಾಯಂದಿರು ಕೈಕೇಯಿಗೂ ಸುಮಿತ್ರೆಗೂ ಕೌಸಲ್ಯೆಗೂ ನನ್ನ ನಮಸ್ಕಾರಗಳನ್ನು ಶಾಸ್ತ್ರಪ್ರಕಾರ ಅರ್ಪಿಸು. ತಮ್ಮ, ನೀನು ನನ್ನ ಮಾತಿನಂತೆ ನಡೆಯುವವನು. ನನ್ನ ತಾಯಿ ಕೌಸಲ್ಯಾದೇವಿಯನ್ನು ಜತನದಿಂದ ಕಾಪಾಡು. ಕೌಸಲ್ಯೆಗೆ ಎಲ್ಲವನ್ನೂ ವಿಶದ ಆಗಿ ತಿಳಿಸು—ಸೀತೆಯ ವಿಷಯ ನನ್ನ ವಿಷಯ.”

ರಾಮ ಅತ್ತ. ಸೀತೆಯನ್ನು ಕಾಣದ ಸಂಕಟದಿಂದ ಅತ್ತ. ಅದನ್ನು ನೋಡಿ ಲಕ್ಷ್ಮಣನಿಗೆ ಗಾಬರಿ ಆಯಿತು. ಅವನ ಮುಖ ಬಣ್ಣಗೆಟ್ಟಿತು. ಮನಸ್ಸು ಬೆಂದುಹೋಯಿತು.) ರಾಮ ಅತ್ತ ಸೀತೆಯನ್ನು

೨೨

ದಶರಥ ಮಹಾರಾಜನ ಮಗ. ಸತ್ಯಕ್ಕೆ ಕಟ್ಟುಬಿದ್ದು ವನವಾಸಕ್ಕೆ ಬಂದರೆ ಇಲ್ಲಿ ಪ್ರಿಯ ಪತ್ನಿಯ ಅಗಲಿಕೆಯೆ? ರಾಮನಿಗೆ ದುಃಖ, ಮೋಹ. ಮನಸೇ ಕೆಟ್ಟುಹೋಯಿತು. ದೀನ ಆದ. ಪಕ್ಕದಲ್ಲಿ ಇದ್ದ ಲಕ್ಷ್ಮಣನಿಗೂ ಮಹಾದುಃಖ. ಅಣ್ಣನ ಶೋಕ ಮಿತಿಮೀರಿತ್ತು. ದುಃಖ ಉಕ್ಕಿ ತುಳುಕಿ ಚೆಲ್ಲಿತು. ನಿಟ್ಟುಸಿರು ಬಿಡುತ್ತ ಭೋರೆಂದು ಅಳುತ್ತ ರಾಮ ಹೇಳುತ್ತ ಇದಾನೆ.

“ತಮ್ಮ, ನನ್ನಷ್ಟು ಪಾಪ ಮಾಡಿದವನು ಈ ಭೂಮಿಯಲ್ಲಿ ಬೇರೆ ಯಾರೂ ಇಲ್ಲ. ಒಂದರ ಹಿಂದೆ ಒಂದು, ದುಃಖಪರಂಪರೆಯೇ ಬಂದು ನನ್ನ ಮನಸ್ಸನ್ನು ತಳಮಳಗೊಳಿಸುತ್ತ ಇದೆ. ಪೂರ್ವಜನ್ಮದಲ್ಲಿ ಎಷ್ಟು ಪಾಪ ಮಾಡಿ

ಇದ್ದೆನೋ, ಅದರ ಫಲವನ್ನು ಈಗ ಅನುಭವಿಸುತ್ತ ಇದೇನೆ. ಪೂರ್ವಾರ್ಜಿತ ಪಾಪಕರ್ಮದ ಫಲ. ಅನುಭವಿಸಿ ತೀರಬೇಕು. ಮೊದಲು ರಾಜ್ಯವನ್ನು ಕಳೆದುಕೊಂಡೆ. ಕೈಗೆ ಬಂದದ್ದನ್ನು. ಆಮೇಲೆ ನನ್ನವರು ತನ್ನವರು ಎಲ್ಲರನ್ನೂ ಅಗಲಿದೆ. ಹೆತ್ತ ತಾಯಿ ಕೌಸಲ್ಯಾದೇವಿಯನ್ನು ಅಗಲಿ ಬಂದೆ. ತರುವಾಯ ತಂದೆಯ ಸಾವು. ಎಲ್ಲವನ್ನೂ ನೆನೆದರೆ ಅಲೆ ಅಲೆ ಆಗಿ ಬಂದು ದುಃಖಸಮುದ್ರ ನನ್ನನ್ನು ಮುಳುಗಿಸುತ್ತ ಇದೆ.

"ಇಷ್ಟು ದುಃಖ ಇದ್ದರೂ ಈ ನಿರ್ಜನ ಅರಣ್ಯದಲ್ಲೂ ಸೀತೆ ನನ್ನ ಜೊತೆಗೆ ಇದ್ದುದರಿಂದ ಎಲ್ಲವನ್ನೂ ಮರೆತು ಇದ್ದೆ. ಈಗ ಅಕಸ್ಮಾತ್ ಈ ಸೀತಾವಿಯೋಗ. ಸೌದೆಯಲ್ಲಿ ಅಡಗಿದ್ದ ಬೆಂಕಿ ಪ್ರಜ್ವಲಿಸುವಂತೆ ಏಕಾಏಕಿ ಈ ದುಃಖ ಎಲ್ಲವೂ ಮತ್ತೆ ಹೊರಹೊಮ್ಮಿದೆ. ಆ ಉರಿ ನನ್ನ ಅಂಗಾಂಗಗಳನ್ನು ಸುಡುತ್ತಿದೆ.

"ಲಕ್ಷ್ಮಣ, ಸೀತೆ ಬಹಳ ಭೀರು. ಯಾರೋ ರಾಕ್ಷಸರು ಬಲಾತ್ಕಾರದಿಂದ ಆಕಾಶಮಾರ್ಗದಲ್ಲಿ ಹೊತ್ತುಕೊಂಡು ಹೋದಾಗ ಎಷ್ಟು ಬೆದರಿದಳೋ! ವಿಕಾರ ಸ್ವರದಿಂದ ಎಷ್ಟು ಚೀರಿದಳೋ ಕೂಗಿದಳೋ! ಎಷ್ಟು ಅತ್ತಳೋ! ಅವಳ ಸ್ತನಗಳು ರಕ್ತಚಂದನ ಲೇಪನದಿಂದ ಕೆಂಪು ಆಗಿ ಅಂದ ಆಗಿ ಗುಂಡಗೆ ಕಾಣುತ್ತ ಇದ್ದವು. ರಾಕ್ಷಸರು ಅವಳನ್ನು ಕೊಯ್ದಾಗ ನೆತ್ತರಿನ ಮಡುವಿನಲ್ಲಿ ಬಿದ್ದು ಅಂದಗೆಟ್ಟು ಇರಬೇಕು. ಅವಳ ಗುಂಗುರು ಗುಂಗುರು ಮುಂಗುರುಳು, ಕಿವಿಗೆ ಇಂಪೂ ಮೆದುವೂ ಆದ ಮಾತು, ಅವಳ ಆ ಮುಖಬಿಂಬ, ರಾಕ್ಷಸರ ಕೈಗೆ ಸಿಕ್ಕಿ ರಾಹು ಕಬಳಿಸಿದ ಚಂದ್ರನ ಹಾಗೆ ಆಗಿರಬೇಕು. ಯಾವಾಗಲೂ ಮುತ್ತಿನ ಹಾರಗಳಿಂದ ಶೋಭಿಸುತ್ತಿದ್ದ ನನ್ನ ಪ್ರಿಯತಮೆಯ ಕಂಠ ಈ ನಿರ್ಜನ ಅರಣ್ಯದಲ್ಲಿ ರಾಕ್ಷಸರು ಮುರಿದು ನೆತ್ತರು ಕುಡಿಯುವಂತೆ ಆಯಿತೆ?

"ತಮ್ಮ, ನೀನೂ ಇರಲಿಲ್ಲ. ನಾನೂ ಇರಲಿಲ್ಲ. ಈ ನಿರ್ಜನ ಆದ ಕಾಡಿನಲ್ಲಿ ಒಬ್ಬಳೇ. ಆ ಮನೋಹರನಯನೆ. ಆಗ ರಾಕ್ಷಸರು ಅವಳನ್ನು ಎಳೆದುಕೊಂಡು ಹೋಗುವಾಗ ಬೆದರಿದ ಹೆಣ್ಣು ಜಿಂಕೆಯಂತೆ ಕಣ್ಣೀರು ಸುರಿಸುತ್ತ ಗಟ್ಟಿ ಆಗಿ ಅತ್ತು ಇರಬೇಕು ನನ್ನ ಪ್ರಿಯೆ. ತಮ್ಮ, ಸೀತೆಯ ನಡೆನುಡಿ ಸರ್ವೋತ್ತಮ. ಅವಳ ಮುಗುಳುನಗೆ ಮನೋಹರ. ಈ ಬಂಡೆಯ ಮೇಲೆ ಕೂತು ಹುಸಿನಗೆ ನಗುತ್ತ ನಿನ್ನ ಬಗೆಗೆ ಎಷ್ಟೋ ಮಾತು ಹೇಳಿದ್ದಳಲ್ಲ.

"ಈ ಗೋದಾವರಿ ನದಿಯಲ್ಲಿ ಸೀತೆಗೆ ಬಹಳ ಪ್ರೀತಿ. ಇದು ಶ್ರೇಷ್ಠ ನದಿ. ಇದರಲ್ಲಿ ಸ್ನಾನ ಎಂದರೆ ಅವಳಿಗೆ ಬಲು ಇಷ್ಟ, ಬಹು ಸಂತೋಷ. ಅಲ್ಲಿಗೆ ಸ್ನಾನಕ್ಕೆ ಏನಾದರೂ ಹೋಗಿ ಇರಬಹುದೆ? ಇಲ್ಲ. ನನ್ನನ್ನು ಬಿಟ್ಟು ತಾನು ಒಬ್ಬಳೇ ಎಂದೂ ಹೋದವಳು ಅಲ್ಲ. ಸೀತೆ ಕಮಲಮುಖಿ, ಕಮಲನಯನೆ. ಕಮಲಗಳನ್ನು ಹರಿದು ತರಲು ಹೋಗಿರಬಹುದೆ? ಇಲ್ಲ. ಹಾಗೆ ಎಂದೂ ಹೋದವಳು ಅಲ್ಲ. ನಾನು ಜೊತೆಯಲ್ಲಿ ಇಲ್ಲದೆ ಒಬ್ಬಳೇ ಹೋಗಳು. ಈ ವನದಲ್ಲಿ ಗಿಡಮರ ಎಲ್ಲ ಹೇರಳ ಆಗಿ ಹೂ ಬಿಟ್ಟು ಇವೆ. ಆ ಮರಗಳಲ್ಲಿ ಹಲವು ಬಗೆಯ ಹಕ್ಕಿ ಇಂಪು ಆಗಿ ಹಾಡುತ್ತ ಇವೆ. ಅಲ್ಲಿಗೆ ಹೋದಳೆ? ಇಲ್ಲ. ಹಾಗೆ ಮಾಡಳು ಸೀತೆ. ನನ್ನ ಮನದನ್ನೆ ಅಂಜುಬುರಕಿ. ಒಬ್ಬಳೇ ಹೋಗಳು.

"ಸೂರ್ಯ, ನೀನು ಕರ್ಮಸಾಕ್ಷಿ. ಲೋಕದಲ್ಲಿ ನಡೆಯುವ ಪುಣ್ಯಪಾಪಗಳನ್ನು ನೋಡುತ್ತ ಇದೀಯೆ. ನಿನಗೆ ಗೊತ್ತು. ಹೇಳು, ನನ್ನ ನಲ್ಲೆ ಎಲ್ಲಿಗೆ ಹೋದಳು? ಹೇಳು. ಯಾರು ಅವಳನ್ನು ಹೊತ್ತುಕೊಂಡು ಹೋದರು? ನನ್ನ ದುಃಖ ಇದ್ದೇ ಇದೆ.

"ವಾಯುದೇವ, ನಿನಗೆ ತಿಳಿಯದುದು ಏನು ಉಂಟು ಮೂರು ಲೋಕದಲ್ಲಿ? ಸತ್ಕುಲಪ್ರಸೂತೆ ಸೀತೆ. ಅವಳನ್ನು ರಾಕ್ಷಸರು ಕದ್ದು ಒಯ್ದರೆ? ಒಯ್ಯುತ್ತಾ ಇದಾರೆಯೆ? ಸತ್ತೇ ಹೋದಳೋ? ಹೇಳು."

ರಾಮ ಒಂದೇ ಸಮನೆ ಅತ್ತು ಅತ್ತು ಮೂರ್ಛೆಹೋದ. ಲಕ್ಷ್ಮಣ ಬಹಳ ಧೈರ್ಯ ಮಾಡಿದ. ಕಾಲೋಚಿತ ಆಗಿ ಮಾತನ್ನು ಆಡಿ ರಾಮನನ್ನು ಸಂತಯಿಸಿದ. "ಆರ್ಯ, ದುಃಖಿಸಬೇಡ, ಧೈರ್ಯದಿಂದ ಇರು. ಸೀತಾದೇವಿಯನ್ನು ಹುಡುಕೋಣ ಉತ್ಸಾಹದಿಂದ. ಉತ್ಸಾಹವಂತರು ಎಂಥ ದುಷ್ಕರ ಕೆಲಸವನ್ನು ಆದರೂ ಧೈರ್ಯದಿಂದ ಸಾಧಿಸುತ್ತಾರೆ" ಎಂದ.

ಲಕ್ಷ್ಮಣ ಎಷ್ಟು ಹೇಳಿದರೂ ರಾಮ ಅದನ್ನು ಕೇಳಲೇ ಇಲ್ಲ. ಅವನ ಧೈರ್ಯ ಕುಸಿದುಹೋಯಿತು. ದುಃಖ ಆವರಿಸಿತು.

೨೩

ರಾಮನ ದನಿ ಕುಗ್ಗಿತು. ಅತಿ ದೈನ್ಯದಿಂದ ಲಕ್ಷ್ಮಣನಿಗೆ ಹೇಳಿದ: "ಲಕ್ಷ್ಮಣ, ಗೋದಾವರಿಗೆ ಹೋಗಿ ನೋಡಿ ಬಾ. ಕಮಲದ ಹೂ ತರಲು ಅಲ್ಲಿಗೆ ಹೋಗಿದ್ದಾಳು ಸೀತೆ."

ಪರಂತಪ ಲಕ್ಷ್ಮಣ ಕೂಡಲೇ ಗೋದಾವರಿ ನದಿಗೆ ಹೋದ. ಬೇಗ ಬೇಗ ಹೋದ. ರಮಣೀಯ ನದಿ. ಅಲ್ಲಿ ಎಲ್ಲಾ ಘಟ್ಟಗಳಲ್ಲೂ ಹುಡುಕಿದ. ಹಿಂದಕ್ಕೆ ಬಂದು "ಅಣ್ಣ, ಎಲ್ಲಾ ಘಟ್ಟಗಳಲ್ಲೂ ಹುಡುಕಿದೆ. ಗಟ್ಟಿ ಆಗಿ ಕೂಗಿದೆ. ಉತ್ತರ ಇಲ್ಲ. ನಮ್ಮ ಕಷ್ಟಗಳನ್ನು ಎಲ್ಲವನ್ನೂ ಕಳೆಯುವ ವೈದೇಹಿ ಎಲ್ಲಿ ಇದಾಳೋ, ಎಲ್ಲಿಗೆ ಹೋಗಿ ಇದಾಳೋ ತಿಳಿಯಲಿಲ್ಲ" ಎಂದ.

ರಾಮನಿಗೆ ವಿರಹಸಂಕಟ ಹೆಚ್ಚಿತು. ತಾನೇ ಹೊರಟ ಗೋದಾವರಿಗೆ. ನದಿಯ ಬಳಿಗೆ ಬಂದು "ಗೋದಾವರೀ, ಸೀತೆ ಎಲ್ಲಿ?" ಎಂದು ಕೇಳಿದ. ಗೋದಾವರಿ ಮಾತೂ ಆಡಲಿಲ್ಲ, ಯಾವುದೂ ಹೇಳಲಿಲ್ಲ—ರಾವಣಾಸುರ ಸೀತೆಯನ್ನು ಎತ್ತಿಕೊಂಡು ಹೋದ ಎಂದು. ಸಮಸ್ತ ಜೀವಿಗಳೂ ರಾವಣನ ಸುದ್ದಿಯನ್ನು ಎಲ್ಲ ರಾಮನಿಗೆ ಹೇಳು ಎಂದು ಗೋದಾವರಿಯನ್ನು ಎಷ್ಟೋ ಕೇಳಿಕೊಂಡವು. ಗೋದಾವರಿ ಹೇಳಲಿಲ್ಲ. ದುರಾತ್ಮ ರಾವಣನ ಭಯಂಕರ ರೂಪವನ್ನೂ ಅವನ ಕ್ರೂರಕೃತ್ಯಗಳನ್ನೂ ನೆನೆದು ಗೋದಾವರಿ ಹೆದರಿದಳು. ಹೆದರಿ ಬಾಯೇ ಬಿಡದೆ ಹೋದಳು.

ಗೋದಾವರಿ ನಿರಾಶೆಗೊಳಿಸಿದಳು. ಸೀತೆಯ ಜಾಡು ತಿಳಿಯದೆಯೇ ರಾಮನಿಗೆ ಬಹಳ ವ್ಯಸನ ಆಯಿತು. "ಲಕ್ಷ್ಮಣ, ಈ ಗೋದಾವರಿಯೂ ಏನೂ ತಿಳಿಸದು. ನಾನು ಅಯೋಧ್ಯೆಗೆ ಹೇಗೆ ಹೋಗಲಿ ಸೀತೆ ಇಲ್ಲದೆ? ಜನಕಮಹಾರಾಜನಿಗೆ ಏನು ಹೇಳಲಿ? ತಾಯಿ ಕೌಸಲ್ಯಾದೇವಿಗೆ ಹೇಗೆ ತಿಳಿಸಲಿ ಈ ಅಪ್ರಿಯ ವಾರ್ತೆ? ರಾಜ್ಯಭ್ರಷ್ಟ ಆಗಿ ಕಾಡಿಗೆ ಬರುತ್ತ ಇದ್ದ ನನ್ನನ್ನು ಹಿಂಬಾಲಿಸಿ ಬಂದಳಲ್ಲ. ಇಲ್ಲಿ ಸಿಗುವ ಹಣ್ಣುಹಂಪಲನ್ನು ತಿಂದು ಬದುಕುವ ನನ್ನ ಕಷ್ಟದಲ್ಲಿ ಪಾಲುಗೊಂಡಳು. ಅವಳನ್ನು ನೋಡಿ ನನ್ನ ಕಷ್ಟ ಎಲ್ಲವೂ ಅಡಗಿಹೋಗುತ್ತ ಇತ್ತು. ನನ್ನ ದುಃಖವನ್ನು ನೀಗಿದ ನಲ್ಲೆ ವೈದೇಹಿ ಎಲ್ಲಿ ಹೋದಳೋ!

"ಸೀತೆ ಜೊತೆಗೆ ಇದ್ದಳು ಎಂದು ನನಗೆ ಬಂಧುವಿಯೋಗದ ದುಃಖ ತಿಳಿಯಲಿಲ್ಲ. ಈಗ ಅವಳೇ ಇಲ್ಲವಲ್ಲ. ರಾತ್ರಿಯನ್ನು ಹೇಗೆ ಕಳೆಯಲಿ? ನಿದ್ದೆ ಬರುತ್ತದೆಯೆ ನನಗೆ? ಒಂದೊಂದು ರಾತ್ರಿಯೂ ಒಂದೊಂದು ಯುಗದಂತೆ ಆಗುತ್ತದೆ. ಈ ಗೋದಾವರೀ ತೀರ, ಈ ಜನಸ್ಥಾನ, ಈ ಪ್ರಸ್ರವಣ ಪರ್ವತ; ಸೀತೆ ಸಿಕ್ಕರೆ ಇಲ್ಲಿಯೆ ಇದ್ದುಬಿಡುತ್ತೇನೆ ನಾನು. ಬಹಳ ಮನಸೆಳೆವ ಪ್ರದೇಶ ಇದು.

"ಲಕ್ಷ್ಮಣ, ಅಲ್ಲಿ ನೋಡು. ಈ ಮೃಗಗಳು ನನ್ನನ್ನೇ ನೋಡುತ್ತ ಇವೆ. ಏನೋ ಹೇಳಬೇಕು ನನಗೆ ಎಂದು ಇವುಗಳ ಇಂಗಿತ." ರಾಮ ನರಶಾರ್ದೂಲ. ಆದರೂ ಕಂಬನಿಗರೆಯುತ್ತ ಆ ಜಿಂಕೆಗಳನ್ನು ನೋಡಿ "ಸೀತೆ ಎಲ್ಲಿ?" ಎಂದು ಕೇಳಿದ.

ಕೂಡಲೆ ಆ ಜಿಂಕೆಗಳು ಎಲ್ಲವೂ ತಟ್ಟನೆ ಎದ್ದುನಿಂತವು. ದಕ್ಷಿಣದ ಕಡೆ ತಿರುಗಿ ಮೋರೆಯನ್ನು ಮೇಲಕ್ಕೆ ಆಕಾಶದ ಕಡೆಗೆ ಎತ್ತಿಕೊಂಡು ಓಡಿದವು. ಸೀತೆ ಹೋದ ದಾರಿಯಲ್ಲೇ ಸ್ವಲ್ಪ ದೂರ ಓಡಿಹೋಗಿ ನಿಂತು ರಾಮನ ಕಡೆ ನೋಡಿದವು. ಇದನ್ನು ಲಕ್ಷ್ಮಣ ಕಂಡ. ಆ ಮೃಗಗಳ ಮನಸಿನ ಅಭಿಪ್ರಾಯ ವನ್ನು ಅರ್ಥಮಾಡಿಕೊಂಡ. ಮಾತು ಆಡಿದ ಹಾಗೇ ಇತ್ತು ಅವುಗಳ ಚೇಷ್ಟೆ. ಬುದ್ಧಿವಂತ ಲಕ್ಷ್ಮಣ ತತ್‌ಕ್ಷಣವೆ ಅಣ್ಣನಿಗೆ ಹೇಳಿದ.

"ರಾಮ, ಈ ಮೃಗಗಳನ್ನು ಕೇಳಿದೆಯಲ್ಲ ನೀನು, ಸೀತೆ ಎಲ್ಲಿ ಎಂದು. ಕೂಡಲೆ ಈ ಮೃಗಗಳು ತಟ್ಟನೆ ಜಿಗಿದು ನಿಂತವು. ಆಕಾಶವನ್ನು ನೋಡುತ್ತ ಎಲ್ಲವೂ ದಕ್ಷಿಣ ದಿಕ್ಕಿಗೇ ಓಡುತ್ತ ಇವೆ. ಇದನ್ನು ನೋಡಿದರೆ ದಕ್ಷಿಣ ದಿಕ್ಕಿಗೇ ನಾವು ಹೋಗಬೇಕು. ಅಲ್ಲಿ ಸೀತಾದೇವಿ ನಮಗೆ ಸಿಗಬಹುದು. ಕಡೆಗೆ ಆಕೆಯ ಜಾಡು ಆದರೂ ತಿಳಿಯಬಹುದು."

ಹಾಗೆಯೇ ಆಗಲಿ ಎಂದ ರಾಮ. ಇಬ್ಬರೂ ದಕ್ಷಿಣ ದಿಕ್ಕಿಗೆ ಹೊರಟರು. ಅನ್ಯೋನ್ಯ ಆಗಿ ಮಾತು ಆಡುತ್ತ ನೆಲದ ಕಡೆ ಕಣ್ಣು ಇಟ್ಟು ಇಬ್ಬರೂ ನಡೆದರು. ದಾರಿಯಲ್ಲಿ ನೆಲದ ಮೇಲೆ ಉದುರಿ ಇದ್ದ ಹೂ ಕಂಡುಬಂದವು. ದಾರಿಯ ಉದ್ದಕ್ಕೂ ಹೂಮಳೆ ಸುರಿದಂತೆ ಇತ್ತು. ಆ ಹೂವನ್ನು ನೋಡಿ ದುಃಖದಿಂದ ರಾಮ ಹೇಳಿದ: "ದಾರಿಯಲ್ಲಿ ಉದುರಿ ಇರುವ ಈ ಹೂಗಳನ್ನು ನಾನು ಗುರುತಿಸಬಲ್ಲೆ, ಲಕ್ಷ್ಮಣ. ನಾನೇ ಕುಯಿದು ತಂದುಕೊಟ್ಟ ಹೂ

ಇವು, ಸೀತೆಗೆ. ಆಕೆ ಇವನ್ನು ಮುಡಿದು ಇದ್ದಳು. ಇಲ್ಲಿ ಬಿದ್ದ ಈ ಹೂಗಳು ಇನ್ನೂ ಬಾಡಿ ಇಲ್ಲ. ಚದರಿ ಇಲ್ಲ. ಸೂರ್ಯ, ವಾಯು, ಭೂಮಿ ಎಲ್ಲರೂ ನನಗೆ ಎಂದೇ ಈ ಹೂವನ್ನು ಕಾಪಾಡಿದಾರೆ. ಸೀತೆಯ ಸುದ್ದಿಯನ್ನು ನನಗೆ ತಿಳಿಸಲಿಕ್ಕೆ."

ಪ್ರಸ್ರವಣ ಪರ್ವತ ಕಾಣಿಸಿತು ಮುಂದೆ. ಅದರ ಮುಂದೆ ನಿಂತು ರಾಮ ಕೇಳಿದ: "ನಾನು ಇಲ್ಲಿ ಬಿಟ್ಟು ಹೋದ ಸರ್ವಾಂಗಸುಂದರಿ ಸೀತೆ ಎಲ್ಲಿ? ನೀನು ನೋಡಲಿಲ್ಲವೆ?" ಆ ಬೆಟ್ಟ ಏನೂ ಹೇಳಲಿಲ್ಲ. ರಾಮ ಆಡಿದ ಮಾತೇ ಮಾರ್ದನಿ ಆಗಿ ಬಂತು. ಧರ್ಮಾತ್ಮ, ಪುರುಷಶ್ರೇಷ್ಠ ರಾಮನಿಗೆ ಬಹಳ ಸಿಟ್ಟುಬಂತು. "ಎಲೆ ಬೆಟ್ಟ, ಹೊಂಬಣ್ಣದ ಮೈಯ ಚಿನ್ನದ ಪುತ್ಥಳಿ ಸೀತೆ. ಅವಳನ್ನು ತೋರಿಸು. ಇಲ್ಲದೆ ಹೋದರೆ ನಿನ್ನ ತಪ್ಪಲುಗಳನ್ನು ಎಲ್ಲವನ್ನೂ ಧ್ವಂಸಮಾಡುತ್ತೇನೆ, ನೋಡು" ಎಂದ. ಏನೋ ಮಾರ್ದನಿ ಬಂತು. ಆ ಬೆಟ್ಟ ಏನೂ ಹೇಳಲೂ ಇಲ್ಲ. ಸೀತೆಯನ್ನು ತೋರಿಸಲೂ ಇಲ್ಲ.

ರಾಮ ಕಿಡಿಕಿಡಿ ಆದ. "ಒಂದು ಹುಲ್ಲುಕಡ್ಡಿ, ಒಂದು ಮರ, ಒಂದು ಬಳ್ಳಿ ಕೂಡ ಇಲ್ಲದಂತೆ ಮಾಡುತ್ತೇನೆ. ನನ್ನ ಬಾಣದಿಂದ ಸುಟ್ಟು ಬೂದಿ ಮಾಡುತ್ತೇನೆ. ಆಮೇಲೆ ನಿನ್ನ ಬಳಿಗೆ ಯಾರು ಬರುತ್ತಾರೆ?" ಎಂದ. ಲಕ್ಷ್ಮಣನ ಕಡೆ ನೋಡಿ ಹೇಳಿದ: "ತಮ್ಮ, ನನ್ನ ನಲ್ಲೆ, ಆ ಚಂದ್ರಮುಖಿ ಸೀತೆ ಎಲ್ಲಿ ಇದಾಳೋ ಹೇಳದೆ ಇದ್ದರೆ ಈ ಗೋದಾವರಿಯನ್ನು ಬತ್ತಿಸಿ ಬಿಡುತ್ತೇನೆ."

ಕಣ್ಣಿನಿಂದಲೇ ಲೋಕವನ್ನು ಸುಟ್ಟು ಬೂದಿ ಮಾಡುವಂತೆ ಸಿಟ್ಟನಿಂದ ನೋಡಿದ ರಾಮ. ಆಗ ಅಲ್ಲಿ ನೆಲದ ಮೇಲೆ ಒಬ್ಬ ರಾಕ್ಷಸನ ದೊಡ್ಡ ದೊಡ್ಡ ಹೆಜ್ಜೆಯ ಗುರುತು ಕಂಡವು. ಆ ಗುರುತಿನ ಪಕ್ಕದಲ್ಲಿಯೆ ಒಬ್ಬ ಹೆಂಸಸಿನ ಹೆಜ್ಜೆಯ ಗುರುತು. ರಾಕ್ಷಸನ ಭಯದಿಂದ ರಾಮನನ್ನು ಕಾಣಬೇಕು ಎಂಬ ಕಾತರದಿಂದ ಓಡಿಹೋಗಲು ಯತ್ನಿಸಿದ ಸೀತೆಯ ಹೆಜ್ಜೆಯ ಗುರುತು ಅದು.

ರಾಕ್ಷಸನ ಹೆಜ್ಜೆಯ ಗುರುತು, ಸೀತೆಯ ಹೆಜ್ಜೆಯ ಗುರುತು ಎರಡನ್ನೂ ನೋಡಿದ ರಾಮ. ಅಲ್ಲಿಯೆ ಒಂದು ಬಿಲ್ಲು ಮುರಿದು ಬಿದ್ದು ಇತ್ತು. ಪಕ್ಕದಲ್ಲಿ ಚೂರುಚೂರು ಆದ ಬತ್ತಳಿಕೆ_ಬಾಣಗಳು. ಪುಡಿಪುಡಿ ನುಚ್ಚುನುರಿ ಆಗಿ ಬಿದ್ದ ರಥ ಒಂದು ಕಾಣಿಸಿತು. ದಿಗ್ಭ್ರಮೆ ಆಯಿತು ರಾಮನಿಗೆ. ತನ್ನ

ಆಣುಗು ತಮ್ಮ ಲಕ್ಷ್ಮಣನಿಗೆ ಹೇಳಿದ—“ ತಮ್ಮ, ಸೀತೆಯ ಆಭರಣಗಳಿಂದ ಉದುರಿದ ಚಿನ್ನದ ಪುಡಿ ಕಾಣುತ್ತ ಇದೆ ನೆಲದ ಮೇಲೆ. ಅವಳು ತಲೆಯಲ್ಲಿ ಮುಡಿದು ಇದ್ದ ಹೂವಿನ ಸರ ಇಲ್ಲಿ ಹರಿದು ಬಿದ್ದು ಇದೆ. ಸುತ್ತಲೂ ರಕ್ತದ ಹನಿ ಬಿದ್ದು ಇದೆ ಸ್ವರ್ಣಬಿಂದುಗಳ ಹಾಗೆ. ಯಾರೋ ಕಾಮರೂಪಿಗಳಾದ ರಾಕ್ಷಸರು ಅವಳನ್ನು ತುಂಡರಿಸಿ ತಿಂದು ಇದಾರೆ. ಅಥವಾ ಅವಳಿಗೆ ಆಗಿ ಇಬ್ಬರು ರಾಕ್ಷಸರು ಘೋರ ಯುದ್ಧಮಾಡಿ ಇದಾರೆ ಇಲ್ಲಿ.

“ ಇಲ್ಲಿ ನೋಡು, ಲಕ್ಷ್ಮಣ. ಚಿನ್ನದ ಕಟ್ಟು ಮತ್ತು ಮುತ್ತುರತ್ನಗಳ ಅಲಂಕಾರದ ದೊಡ್ಡ ಬಿಲ್ಲು ಮುರಿದು ಬಿದ್ದು ಇದೆ. ಯಾರದೋ? ವೈಡೂರ್ಯ ಖಚಿತ ಆಗಿ ಬಾಲಸೂರ್ಯನಂತೆ ಹೊಳೆಹೊಳೆವ ಈ ಚಿನ್ನದ ಕವಚವನ್ನು ನೋಡಿದೆಯಾ? ಯಾರದು ಈ ಕವಚ? ಕಾವು ಮುರಿದು ಬಿದ್ದು ಇದೆ ಯಾರದೋ ಶ್ವೇತಛತ್ರ. ನೂರು ಕಂಬಿ, ದಿವ್ಯ ಪುಷ್ಪಹಾರಗಳು ಕಟ್ಟಿ ಇದ್ದದ್ದು. ಯಾರ ಛತ್ರ ಇದು? ಬಂಗಾರದ ಕವಚ ತೊಟ್ಟ ಭಯಂಕರ ರೂಪದ ಪಿಶಾಚಮುಖದ ಈ ಹೇಸರಕತ್ತೆಗಳನ್ನು ನೋಡು. ಯುದ್ಧದಲ್ಲಿ ಸತ್ತು ಒರಗಿ ಇವೆ. ಯಾರ ರಥದ್ದೋ? ಯುದ್ಧರಥ ಪುಡಿಪುಡಿ, ಧ್ವಜದಂಡ ಚೂರುಚೂರು. ಉರಿಯುವ ಬೆಂಕಿಯ ಹಾಗೆ ಧಗಧಗಿಸುತ್ತಿವೆ. ಯಾರವೋ ಇವು? ಚಿನ್ನದ ತುದಿಗಳು ಮೊಂಡು ಆದ ಉದ್ದ ಬಾಣಗಳು ಇಲ್ಲಿ ಎಲ್ಲಾ ಮುರಿದು ಬಿದ್ದು ಇವೆ. ಯಾವ ಕ್ರೂರಕರ್ಮಿಯ ಬಾಣಗಳೋ ಇವು? ಲಕ್ಷ್ಮಣ, ನೋಡು. ಬಾಣ ತುಂಬಿದ ಬತ್ತಳಿಕೆಗಳು ಎರಡೂ ನುಚ್ಚುನುರಿ ಆಗಿವೆ. ಕೈಯಲ್ಲಿ ಚಾಟಿಯನ್ನೂ ಕಡಿವಾಣಗಳನ್ನೂ ಹಿಡಿದುಕೊಂಡೇ ಸತ್ತು ಬಿದ್ದ ಈ ಸಾರಥಿ ಯಾರೋ? ರತ್ನಕುಂಡಲಗಳನ್ನು ಧರಿಸಿ ತಲೆಗೆ ಮುಂಡಾಸ ಸುತ್ತಿ ಸತ್ತುಬಿದ್ದ ಈ ಚಾಮರಗ್ರಾಹಿಗಳು ಇಬ್ಬರೂ ಯಾರ ಕಡೆಯವರೊ?

“ ಯಾರದೋ ರಾಕ್ಷಸರದೇ. ಸಂದೇಹ ಏನು? ಇನ್ನು ಸಮಸ್ತ ರಾಕ್ಷಸರ ಪ್ರಾಣವನ್ನೂ ತೆಗೆಯುತ್ತೇನೆ. ರಾಕ್ಷಸರ ಮೇಲಿನ ವೈರ ನೂರ್ಮಡಿ ಆಯಿತು. ಕಾಮರೂಪಿಗಳೂ ಕ್ರೂರಿಗಳೂ ಆದ ರಾಕ್ಷಸರೇ ಸೀತೆಯನ್ನು ಕದ್ದು ಒಯ್ದು ಇದಾರೆ. ಸಂದೇಹ ಇಲ್ಲ. ಅಥವಾ ಕೊಂದು ಇದಾರೆ.

“ ತಮ್ಮ, ಲಕ್ಷ್ಮಣ, ಈ ಮಹಾ ಅರಣ್ಯದಲ್ಲಿ ಧರ್ಮ ಕಾಪಾಡಲಿಲ್ಲವಲ್ಲ ಸೀತೆಯನ್ನು. ಯಾವ ದೇವತೆಗಳು ತಾನೆ ನನಗೆ ಸಂತೋಷ ನೀಡಬಲ್ಲರು?

ಅವರಿಗೆ ಶಕ್ತಿ ಇದ್ದಿದ್ದರೆ ಹೀಗೆ ಆಗುತ್ತ ಇತ್ತೆ? ಸಮಸ್ತ ಲೋಕಗಳನ್ನೇ ಸೃಷ್ಟಿಸುವ ಶಕ್ತಿ ಇದ್ದರೂ ಎಂಥ ಲೋಕೈಕಶೂರ ಆದರೂ ದಯಾವಂತ ಆದರೆ ಅವನನ್ನು ಸಮಸ್ತ ಜಂತುಗಳೂ ಅವಮಾನಿಸುತ್ತವೆ. ತಿಳಿಗೇಡಿ ಲೋಕದ ಸ್ವಭಾವವೇ ಇದು. ಎಲ್ಲರಿಗೂ ಹಿತವನ್ನು ಕೋರುತ್ತ ಶಾಂತದಾಂತ ಆಗಿ ದಯಾಪರ ಆಗಿ ಮೃದು ಆಗಿ ಇದ್ದೇನಲ್ಲ ನಾನು. ದೇವತೆಗಳು ಕೂಡ ಕೈಲಾಗದವನು ನಾನು ಎಂದುಕೊಂಡು ಇದ್ದಾರೆ.

"ಲಕ್ಷ್ಮಣ, ನನ್ನ ಗುಣವೇ ದೋಷ ಆಯಿತು. ಚಂದ್ರನ ಕಾಂತಿಯನ್ನು ನುಂಗಿ ಸೂರ್ಯ ತನ್ನ ತೇಜದಿಂದ ಈ ಲೋಕವನ್ನು ಬೆಳಗನೆ? ಇನ್ನು ನನ್ನ ದಯಾದಾಕ್ಷಿಣ್ಯಗಳನ್ನು ಕಟ್ಟಿ ಇಡುತ್ತೇನೆ. ರಾಕ್ಷಸರನ್ನೂ ಸಮಸ್ತ ಪ್ರಾಣಿಗಳನ್ನೂ ಮೂಲೋತ್ಪಾಟನ ಮಾಡುತ್ತೇನೆ. ನನ್ನ ಪರಾಕ್ರಮವನ್ನು ನೋಡು. ತಮ್ಮ, ಇನ್ನು ಯಕ್ಷರಾಕ್ಷಸಗಂಧರ್ವಕಿನ್ನರಪಿಶಾಚರು ಯಾರೂ ಸುಖದಿಂದ ಇರಲಾರರು. ನನ್ನ ಬಾಣಗಳಿಂದ ಮೂರು ಲೋಕಗಳನ್ನೂ ತುಂಬಿಬಿಡುತ್ತೇನೆ. ಮುಗಿಲನ್ನು ಮುಚ್ಚಿಬಿಡುತ್ತೇನೆ. ಯಾರೂ ತಿರುಗಾಡದಂತೆ ಮಾಡುತ್ತೇನೆ.

"ಇನ್ನು ಗ್ರಹಗಳಿಗೆ ಓಡಾಟ ಇಲ್ಲ. ಚಂದ್ರನನ್ನು ಕಟ್ಟಿ ನಿಲ್ಲಿಸುತ್ತೇನೆ. ಅಗ್ನಿ ನಂದಬೇಕು. ಜಲ ಬತ್ತಬೇಕು. ಗಾಳಿ ಬೀಸಕೂಡದು. ಸೂರ್ಯ ಕಾಣದ ಹಾಗೆ ಮಾಡುತ್ತೇನೆ. ಪ್ರಪಂಚದ ಪರ್ವತಶಿಖರಗಳು ಎಲ್ಲಾ ಮುರಿದು ಬೀಳುತ್ತವೆ. ಗಿಡಮರಬಳ್ಳಿ ಪೊದೆ ಎಲ್ಲವೂ ನಿರ್ಮೂಲ. ಸಮುದ್ರಗಳು ಎಲ್ಲವೂ ಬತ್ತಿಹೋಗುತ್ತವೆ. ಲಕ್ಷ್ಮಣ, ಮೂರು ಲೋಕಗಳನ್ನೂ ನಿರ್ಮೂಲ ಮಾಡುತ್ತೇನೆ. ಒಂದೇ ಕ್ಷಣ.

"ಸೌಮಿತ್ರಿ, ದೇವತೆಗಳು ಎಲ್ಲ ಸೀತೆಯನ್ನು ಕಾಪಾಡಬೇಕಾಗಿ ಇತ್ತು. ಈಗಲೂ ಅವಳನ್ನು ಕ್ಷೇಮದಿಂದ ತಂದು ನನಗೆ ಒಪ್ಪಿಸಲಿಲ್ಲ. ಈಗ ಅವರಿಗೆ ತೋರಿಸುತ್ತೇನೆ ನನ್ನ ಪರಾಕ್ರಮ. ಹೆದೆ ಏರಿಸಿ ಬಿಟ್ಟೆ ಎಂದರೆ ಬಾಣಗಳನ್ನು, ಕ್ಷಣಮಾತ್ರದಲ್ಲಿ ಆಕಾಶವನ್ನು ಮುಚ್ಚಿಬಿಡುತ್ತೇನೆ. ಆಕಾಶದಲ್ಲಿ ಯಾರೂ ಸಂಚರಿಸದಂತೆ ಮಾಡುತ್ತೇನೆ. ಪ್ರಾಣಿಗಳು ಯಾವುವೂ ಮೇಲೆ ಹಾರದಂತೆ ಮಾಡುತ್ತೇನೆ.

"ನನ್ನ ಬಾಣಗಳ ಹೊಡೆತಕ್ಕೆ ಸಮಸ್ತ ಮೃಗಪಕ್ಷಿಗಳೂ ನಾಶ ಆಗುತ್ತವೆ. ಲೋಕ ಎಲ್ಲವೂ ಅಲ್ಲಕಲ್ಲೋಲ ಆಗುತ್ತದೆ. ಎಲ್ಲವೂ ತಲೆ ಕೆಳಗೆ. ಕಿವಿಯ

ವರೆಗೂ ಸೆಳೆದು ಬಾಣಬಿಟ್ಟೆನೋ ನಾನು, ಅದನ್ನು ತಡೆಯಲು ಯಾರಿಗೂ ಸಾಧ್ಯ ಇಲ್ಲ. ರಾಕ್ಷಸರ ಪಿಶಾಚರ ಹೆಸರೇ ಇಲ್ಲದಂತೆ ಮಾಡುತ್ತೇನೆ. ನನಗೆ ಕೋಪ ಬಂದಾಗ ಬಿಟ್ಟ ಬಾಣಗಳ ವೇಗವನ್ನೂ ಶಕ್ತಿಯನ್ನೂ ನೋಡಲಿ ದೇವತೆಗಳು. ಮೂರು ಲೋಕಗಳೂ ನನ್ನ ಕೋಪದಿಂದ ಸುಟ್ಟು ಬೂದಿ ಆಗುತ್ತವೆ. ಇನ್ನು ದೇವತೆಗಳೂ ಇಲ್ಲ, ದಾನವರೂ ಇಲ್ಲ. ರಾಕ್ಷಸರೂ ನಾಶ, ಪಿಶಾಚರೂ ನಾಶ. ಅವರ ಲೋಕಗಳನ್ನು ಎಲ್ಲವನ್ನೂ ತುಂಡು ತುಂಡು ಮಾಡುತ್ತೇನೆ.

"ಲಕ್ಷ್ಮಣ, ರಾಕ್ಷಸರು ಎತ್ತಿಕೊಂಡುಹೋದ ಸೀತೆಯನ್ನು ದೇವತೆಗಳು ತಂದುಕೊಡಬೇಕು ಈಗ. ಅವಳು ಬದುಕಿ ಇರಲಿ, ಸತ್ತು ಇರಲಿ. ಇಲ್ಲವೋ, ಈ ಬಾಣ ಬಿಟ್ಟು ಹದಿನಾಲ್ಕು ಲೋಕಗಳನ್ನೂ ತಲೆ ಕೆಳಗೆ ಮಾಡುತ್ತೇನೆ. ಚರಾಚರಗಳ ಈ ಜಗತ್ತೇ ಧ್ವಂಸ."

ರಾಮನ ಕಣ್ಣು ಕೋಪದಿಂದ ಕೆಂಪಗೆ ಉರಿದವು. ಬಿಲ್ಲನ್ನು ಎತ್ತಿ ಬಗ್ಗಿಸಿದ. ಧಗಧಗ ಉರಿಯುವ ನಾಲಗೆಯಿಂದ ಘೋರ ವಿಷಸರ್ಪದ ಹಾಗೆ ಭಯಂಕರ ಆದ ಬಾಣವನ್ನು ಹೂಡಿದ. ಶತ್ರುಂಜಯ ರಾಮ ಪ್ರಳಯ ಕಾಲಾಗ್ನಿಯಂತೆ ಬೆಳಗುತ್ತ "ಲಕ್ಷ್ಮಣ, ಲೋಕದಲ್ಲಿ ಸಮಸ್ತ ಜೀವಿಗಳಿಗೂ ಮುಪ್ಪು ಸಾವು ಕಾಲವಿಧಿ ತಪ್ಪದು. ಏನು ಮಾಡಿದರೂ ತಪ್ಪಿಸಲು ಸಾಧ್ಯ ಇಲ್ಲ. ನನಗೂ ಕೋಪ ಬಂದಮೇಲೆ ತಡೆಯುಬಲ್ಲವರು ಯಾರೂ ಇಲ್ಲ. ಯಾರೂ ತಪ್ಪಿಸಲಾರರು.

"ಹಸನ್ಮುಖಿ, ಪತಿವ್ರತೆ, ನಿರ್ದೋಷಿ ಆದ ಸೀತೆಯನ್ನು ತಂದು ಒಪ್ಪಿಸ ಬೇಕು ನನಗೆ. ಇಲ್ಲದೆ ಇದ್ದರೆ ಜಗತ್ತನ್ನೇ ನಾಶಮಾಡುತ್ತೇನೆ" ಎಂದ.

೨೪

ಸೀತೆಯನ್ನು ಕಾಣದ ದುಃಖ ರಾಮನಿಗೆ. ಪ್ರಳಯಕಾಲದ ಬೆಂಕಿ ಯಂತೆ ಎಲ್ಲ ಲೋಕಗಳ ನಾಶನಕ್ಕೂ ಅಣಿ ಆದ. ಕೈಯಲ್ಲಿ ಇದ್ದ ಬಿಲ್ಲನ್ನು ನೋಡುತ್ತಾನೆ, ನಾರಿಯನ್ನು ಟಂಗ್ ಎನಿಸುತ್ತಾನೆ. ನಿಟ್ಟುಸಿರು ಬಿಡು ತ್ತಾನೆ. ಇಷ್ಟು ಸಿಟ್ಟು ಯಾವಾಗಲೂ ಇಲ್ಲ ರಾಮನಿಗೆ. ಕಾಲಭೈರವ, ಪ್ರಳಯರುದ್ರ!

ಲಕ್ಷ್ಮಣನಿಗೆ ಈ ಭಯಂಕರ ರೂಪವನ್ನು ನೋಡಿ ಭಯ ಆಯಿತು. ಮುಖ ಬಾಡಿತು. ಧೈರ್ಯದಿಂದ ಕೈಮುಗಿದು ಹೇಳಿದ: "ಇದೇನು ಇದು, ಅಣ್ಣ? ಜಿತೇಂದ್ರಿಯ ನೀನು. ನಿನ್ನ ಸ್ವಭಾವ ಬಹಳ ಮೃದು. ಸಮಸ್ತ ಜೀವಿಗಳಿಗೂ ಹಿತಕಾರಿ. ಕೋಪಕ್ಕೆ ಬಲಿ ಆಗಿ ನಿನ್ನ ನಿಜಸ್ವಭಾವವನ್ನು ಬಿಡಬಹುದೆ? ಈ ಭಯಂಕರ ಆಕಾರ ಏಕೆ? ಚಂದ್ರನಿಗೆ ತಂಪು ಆದ ಬೆಳುದಿಂಗಳು. ಸೂರ್ಯನಿಗೆ ಕಣ್ಣು ಕುಕ್ಕುವ ತೇಜಸ್ಸು ಸಹಜ. ವಾಯು ಜಗತ್ಸಂಚಾರಿ. ಭೂಮಿ ಕ್ಷಮಾಶೀಲೆ. ಪ್ರತಿ ಒಬ್ಬರಿಗೂ ಒಂದೊಂದು ಸ್ವಾಭಾವಿಕ ಗುಣ. ನಿನ್ನಲ್ಲಿ ಎಲ್ಲಾ ಗುಣಗಳೂ ಸರ್ವೋತ್ತಮವಾಗಿ ಸೇರಿವೆ. ಜೊತೆಗೆ ಕೀರ್ತಿಶ್ರೀ. ಯಾರೋ ಒಬ್ಬ ಮಾಡಿದ ತಪ್ಪಿಗೆ ಮೂರೂ ಲೋಕಗಳನ್ನು ನಾಶಮಾಡಬೇಕೆ? ಸರಿ ಅಲ್ಲ.

"ಅಣ್ಣ, ಇಲ್ಲಿ ಮುರಿದುಬಿದ್ದ ರಥ ಯಾರದೋ ತಿಳಿಯಲಿಲ್ಲ. ಯುದ್ಧದ ಆಯುಧಗಳು ತುಂಡುತುಂಡಾಗಿ ಬಿದ್ದು ಇವೆ. ಯಾರು ಮುರಿದರು ಈ ರಥ? ಏಕೆ ಮುರಿದರು? ಹೇಸರಕತ್ತೆಗಳ ಗೊರಸಿನ ಗುರುತು ರಥದ ಗಾಲಿ ತಿರುಗಿದ ಗುರುತು ಕಾಣುತ್ತ ಇದೆ. ನೆತ್ತರಿನ ಹಸಿಗಳು ಬಿದ್ದು ಈ ಪ್ರದೇಶ ಭಯಂಕರ ಆಗಿ ಇದೆ. ಘೋರ ಯುದ್ಧ ನಡೆದು ಇರಬೇಕು ಇಲ್ಲಿ.

"ರಾಮ, ಇದು ಒಬ್ಬನದೇ ಯುದ್ಧ. ಹೆಚ್ಚು ರಥಿಕರು ಇಲ್ಲ. ಒಬ್ಬನೇ ರಥಿಕ. ಇನ್ನು ಒಬ್ಬನಿಗೆ ರಥ ಇಲ್ಲ. ಯಾವ ದೊಡ್ಡ ದಂಡೂ ಬಂದ ಗುರುತು ಇಲ್ಲಿ ಇಲ್ಲ. ಇದು ಎಲ್ಲಾ ಒಬ್ಬನದೇ ಕೆಲಸ. ಆ ಒಬ್ಬ ಮಾಡಿದುದಕ್ಕೆ ಲೋಕಗಳನ್ನು ನಾಶಮಾಡುತ್ತಾರೆಯೆ? ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆ ಮಾಡುವುದು ರಾಜರ ಗುಣ. ತಮ್ಮ ಪ್ರಶಾಂತಚಿತ್ತವನ್ನು ದಯಾಗುಣವನ್ನು ಅವರು ಕೈಬಿಡಲಾಗದು. ನೀನು ಸಾಮಾನ್ಯ ರಾಜ ಅಲ್ಲ. ಸಮಸ್ತ ಪ್ರಾಣಿ ಕೋಟಿಯ ರಕ್ಷಕ, ಪರಮಗತಿ.

"ರಾಮ, ಪತ್ನೀವಿಯೋಗವನ್ನು ಯಾರು ತಾನೆ ಒಳ್ಳೆಯದು ಎಂದಾರು? ಯಜ್ಞದೀಕ್ಷಿತನಿಗೆ ಋತ್ವಿಜರು ಮೋಸಮಾಡರು. ನದಿ ಸಮುದ್ರ ಬೆಟ್ಟಗುಡ್ಡ ದೇವತೆಗಳು ಗಂಧರ್ವರು ದಾನವರು ಯಾರೂ ನಿನಗೆ ದ್ರೋಹ ಮಾಡರು.

"ಪ್ರಭು, ಸೀತಾದೇವಿಯನ್ನು ಯಾರು ಎತ್ತಿಕೊಂಡು ಹೋಗಿದಾರೋ ಹುಡುಕಬೇಕು. ಅದೇ ಮೊದಲನೆ ಕೆಲಸ. ಬಿಲ್ಲುಬಾಣ ಹಿಡಿದು ನಿನ್ನ ಹಿಂದೆ

ನಾನು ಬರುತ್ತೇನೆ. ಈ ದಂಡಕಾರಣ್ಯದ ಮಹರ್ಷಿಗಳು ಎಲ್ಲರೂ ನಮಗೆ ಜೊತೆ. ಸೀತೆಯನ್ನು ಕದ್ದವನನ್ನು ಹುಡುಕೋಣ ನಡೆ. ಎಲ್ಲಾ ಕಾಡುಗಳಲ್ಲೂ ಹುಡುಕೋಣ. ಗುಡ್ಡಗಳಲ್ಲಿ ಗವಿಗಳಲ್ಲಿ ಹುಡುಕೋಣ. ನದಿ ಕೊಳ ಸಮುದ್ರ ಎಲ್ಲಾ ಕಡೆಗಳಲ್ಲೂ ಹುಡುಕೋಣ. ದೇವಗಂಧರ್ವಲೋಕಗಳಲ್ಲಿ ಹುಡುಕೋಣ. ಸೀತೆಯನ್ನು ಕದ್ದು ಒಯ್ದವನು ಸಿಗುವವರೆಗೂ ಹುಡುಕೋಣ.

"ಕೋಸಲೇಂದ್ರ, ಸಿಕ್ಕರೆ ಅವನು, ನಯವಿನಯದಿಂದ ಅವನನ್ನು ಕೇಳೋಣ. ನಿನ್ನ ಸವಿನುಡಿಗೆ, ನಯನಡೆಗೆ ವಿನಯಕ್ಕೆ, ಅವನು ಬಗ್ಗದೆ ಇದ್ದರೆ ಇದ್ದೇ ಇದೆ ದಂಡೋಪಾಯ. ದೇವೇಂದ್ರನ ವಜ್ರಾಯುಧಕ್ಕೆ ಸಮಾನ ಆದ ಚಿನ್ನದ ಕೊಂಡಿಗಳ ನಿನ್ನ ಬಾಣಗಳು ಇದ್ದೇ ಇವೆ. ಆಗ ಎಲ್ಲವನ್ನೂ ನಾಶಮಾಡಬಹುದು."

೨೫

ದುಃಖದಿಂದ ದಿಕ್ಕುಗಾಣದೆ ಅಳುತ್ತ ಮಹತ್ತರ ವ್ಯಾಮೋಹದಿಂದ ಸಂಕಟಪಡುತ್ತ ಮೈಮರೆತ ರಾಮನನ್ನು ಲಕ್ಷ್ಮಣ ಸಂತಯಿಸಿದ. ರಾಮನ ಕಾಲು ಎರಡನ್ನೂ ಹಿಡಿದುಕೊಂಡು ಮತ್ತೆ ಹೇಳಿದ: "ಬಹಳ ಪ್ರಯಾಸಪಟ್ಟು ಕಡೆಯಲ್ಲಿ ದೇವತೆಗಳು ಅಮೃತವನ್ನು ಪಡೆದರು. ದಶರಥಮಹಾರಾಜನೂ ತಪಸ್ಸು ಮಾಡಿ ಯಾಗ ವ್ರತಗಳನ್ನು ಮಾಡಿ ನಿನ್ನನ್ನು ಪಡೆದರು. ನಿನ್ನ ಕಲ್ಯಾಣಗುಣಗಳಿಗೆ ಕಟ್ಟುಬಿದ್ದು ಕಡೆಗೆ ನಿನ್ನ ಅಗಲಿಕೆಯನ್ನು ಸಹಿಸಲಾರದೆ ಸ್ವರ್ಗಸ್ಥ ಆದರು ಎಂದು ಭರತ ಹೇಳಿದ.

"ಕಾಕುತ್ಸ್ಥವಂಶಶಿಖಾಮಣಿ ನೀನು. ನೀನೇ ಈ ದುಃಖವನ್ನು ತಾಳದೆ ಹೋದರೆ ಸಾಮಾನ್ಯರು ಅಲ್ಪಬಲರು ಹೇಗೆ ಸಹಿಸಬೇಕು? ನರಶಾರ್ದೂಲ, ಈ ದುಃಖಕ್ಕೆ ಸೋತು ನೀನು ನಿನ್ನ ಪರಾಕ್ರಮದಿಂದ ಈ ಲೋಕವನ್ನು ಎಲ್ಲಾ ಸುಟ್ಟರೆ ಲೋಕದ ಜನ ಎಲ್ಲಿಗೆ ಹೋಗಬೇಕು? ಅವರಿಗೆ ಬೇರೆ ದಿಕ್ಕು ಯಾರು? ಕಷ್ಟ–ಸುಖ ಮನುಷ್ಯರಿಗೆ ಸಹಜ.

"ಹಿಂದೆ ನಹುಷನ ಮಗ ಯಯಾತಿ ಸ್ವರ್ಗಕ್ಕೆ ಹೋದ. ಆಗ, ನಿನ್ನ ರಾಜ್ಯದಲ್ಲಿ ಯಾರು ಶ್ರೇಷ್ಠರು? ಎಂದು ದೇವೇಂದ್ರ ಕೇಳಿದ. ಯಯಾತಿ

ಇದ್ದದ್ದನ್ನು ಇದ್ದಂತೆ ಹೇಳುವವನು. ನಾನೇ ಎಂದ. ಆತ್ಮಶ್ಲಾಘಿ ಎಂದು ದೇವೇಂದ್ರ ಅವನನ್ನು ಸ್ವರ್ಗಕ್ಕೆ ಬಿಡಲಿಲ್ಲ. ವಸಿಷ್ಠರು ಮಹರ್ಷಿಗಳು. ನಮ್ಮ ಕುಲಪುರೋಹಿತರು. ಅವರಿಗೆ ಹುಟ್ಟಿದ ನೂರು ಮಕ್ಕಳೂ ಒಂದು ಗಳಿಗೆಯಲ್ಲಿ ಸತ್ತರು.

"ಅಣ್ಣ, ಸಮಸ್ತ ಲೋಕಗಳ ತಾಯಿ, ಎಲ್ಲರಿಂದಲೂ ನಮಸ್ಕಾರ ಮಾಡಿಸಿಕೊಳ್ಳುವವಳು—ಭೂದೇವಿ. ಆಕೆಗೂ ಚಲನ ತಪ್ಪಲಿಲ್ಲ. ಸೂರ್ಯ ಚಂದ್ರರು ಧರ್ಮಸ್ವರೂಪಿಗಳು. ಲೋಕಕ್ಕೆ ಎರಡು ಕಣ್ಣು ಇದ್ದ ಹಾಗೆ. ಮಹಾಬಲಶಾಲಿಗಳು. ಸಮಸ್ತ ಜಗತ್ತಿಗೂ ಆಧಾರಭೂತರು. ಅವರಿಗೂ ಆಗಾಗ ಗ್ರಹಣಬಾಧೆ ಇದ್ದೇ ಇದೆ. ದೇವೇಂದ್ರನಿಗೂ ದೇವತೆಗಳಿಗೂ ಸುಖ ದುಃಖ ತಪ್ಪಿದ್ದು ಅಲ್ಲ.

"ಪುರುಷಶ್ರೇಷ್ಠ, ಎಂಥ ಎಂಥ ದೊಡ್ಡವರೇ ದೇವತೆಗಳೇ ಮಹಾನು-ಭಾವರೇ ದೈವಸಂಕಲ್ಪವನ್ನು ಮೀರಲು ಆಗಿಲ್ಲ. ರಾಮ, ನೀನು ವ್ಯಸನ ಪಡಬಾರದು. ನೀನು ಪಾಪವನ್ನು ಅರಿಯದವನು. ನೀನೇ ಸಾಮಾನ್ಯ ಜನರ ಹಾಗೆ ದುಃಖಿಸಿದರೆ ಏನು ಪ್ರಯೋಜನ? ವೈದೇಹಿಯನ್ನು ಯಾರೋ ಎತ್ತಿಕೊಂಡು ಹೋಗಿದಾರೆ. ಅಥವಾ ಆಕೆ ಸತ್ತೇ ಹೋಗಿದಾಳೆ. ಆದರೂ ನೀನು ದುಃಖಿಸಬಾರದು. ಸತ್ಯದರ್ಶಿಗಳು ತತ್ವಜ್ಞಾನಿಗಳು ಎಂಥ ಕಷ್ಟವೇ ಬರಲಿ, ಎಂದೂ ದುಃಖದ ಪಾಲು ಆಗರು.

"ಅಣ್ಣ, ತತ್ವಬುದ್ಧಿಯಿಂದ ನೀನೇ ಆಲೋಚಿಸು. ಮಹಾಜ್ಞಾನಿಗಳು ಕಾಲೋಚಿತಬುದ್ಧಿಯ ಪ್ರಾಜ್ಞರು ಶುಭಾಶುಭಗಳ ಕಾರಣವನ್ನು ಅರಿತುಕೊಳ್ಳುತ್ತಾರೆ. ಪೂರ್ವಜನ್ಮದ ಕರ್ಮಫಲ ಈಗ ಅನುಭವಕ್ಕೆ ಬರುತ್ತದೆ. ಪೂರ್ವ ಕರ್ಮದ ಗುಣದೋಷ ಈಗ ತಿಳಿಯುವುದೂ ಇಲ್ಲ. ತಿಳಿದರೂ ಏನೂ ಮಾಡುವ ಹಾಗೆ ಇಲ್ಲ. ಅದರ ಫಲವನ್ನು ಅನುಭವಿಸಲೇಬೇಕು. ಇದು ಎಲ್ಲವನ್ನೂ ನೀನೇ ನನಗೆ ಹೇಳಿಕೊಟ್ಟು ಇದೀಯೆ. ಇದನ್ನು ನಿನಗೆ ಯಾರು ಹೇಳಿಕೊಡಬಲ್ಲರು? ಸಾಕ್ಷಾತ್ ಬೃಹಸ್ಪತಿಗೂ ಸಾಧ್ಯ ಅಲ್ಲ.

"ಮಹಾಮತಿ, ಪ್ರಾಜ್ಞ, ದೇವತೆಗಳಿಗೂ ದುರ್ಲಭ ನಿನ್ನ ಬುದ್ಧಿ. ಆದರೆ ದುಃಖಭಾರಕ್ಕೆ ನಿನ್ನ ಜ್ಞಾನ ಮಲಗಿದೆ. ನಾನು ಅದನ್ನು ಎಚ್ಚರಿಸುತ್ತೇನೆ. ರಾಮ, ನೀನು ಇಕ್ಷ್ವಾಕುಕುಲಶ್ರೇಷ್ಠ, ಆಲೋಚಿಸಿಕೋ. ಸ್ವರ್ಗದಲ್ಲಿ ದೇವ

ಗಂಧರ್ವ ಪ್ರಾಣಿಕೋಟಿ ಇವೆ. ಇವು ಎಲ್ಲವನ್ನೂ ಸಂಹಾರ ಮಾಡಬಲ್ಲದ್ದು ನಿನ್ನ ಪರಾಕ್ರಮ. ಯೋಚಿಸಿ ನೋಡು. ಶತ್ರುಗಳನ್ನು ನಾಶಮಾಡುವುದು ಸರಿ. ನಾಶಮಾಡಬೇಕಾದ್ದೇ.

"ಅಣ್ಣ, ಶತ್ರುಸಂಹಾರವನ್ನು ಬಿಟ್ಟು ಮೂರು ಲೋಕಗಳನ್ನೂ ನಾಶ ಮಾಡಿದರೆ ಬಂದದ್ದು ಏನು? ಈ ಪಾಪಕಾರ್ಯ ಮಾಡಿದ ಶತ್ರು ಯಾರೋ ತಿಳಿದುಕೊಳ್ಳೋಣ. ಅವನನ್ನು ನಾಶಮಾಡುವೆಯಂತೆ."

೨೬

ಲಕ್ಷ್ಮಣ ಚಿಕ್ಕವನು. ಆದರೂ ಅವನ ಮಾತು ಯುಕ್ತಿಯುಕ್ತ, ಸಾರವಂತ. ರಾಮ ದೊಡ್ಡವನೇ. ಆದರೂ ಸಾರಗ್ರಾಹಿ. ತಮ್ಮನ ಮಾತನ್ನು ಕೇಳಿ ತನ್ನ ಕೋಪವನ್ನು ಅಡಗಿಸಿಕೊಂಡ. ಎತ್ತಿದ್ದ ಬಿಲ್ಲನ್ನು ಕೆಳಗೆ ಇಳಿಸಿದ. "ತಮ್ಮ, ನೀನು ಹೇಳಿದ್ದು ಸರಿ. ನಾವು ಈಗ ಏನು ಮಾಡಬೇಕು, ಎಲ್ಲಿಗೆ ಹೋಗಬೇಕು? ಸೀತೆಯನ್ನು ಕಂಡುಹಿಡಿಯಲು ಏನು ಉಪಾಯ? ಆಲೋಚಿಸು" ಎಂದ.

"ಅಣ್ಣ, ಈ ಜನಸ್ಥಾನದಲ್ಲೇ ಹುಡುಕೋಣ. ಇಲ್ಲಿ ರಾಕ್ಷಸರು ಬಹಳ. ಇಲ್ಲಿ ಗಿಡಬಳ್ಳಿ ದಟ್ಟ. ಗಿರಿದುರ್ಗ, ಗವಿ, ಕಣಿವೆ, ಹಳ್ಳಕೊಳ್ಳ, ಪೊದೆ ಬೇಕಾದಷ್ಟು ಇವೆ. ಅನೇಕ ಕ್ರೂರಮೃಗಗಳ ವಾಸಸ್ಥಾನ ಇದು. ಕಿನ್ನರರು ಗಂಧರ್ವರು ಮನೆಮಾಡಿಕೊಂಡು ಇದಾರೆ. ಎಲ್ಲ ಕಡೆಯಲ್ಲೂ ಹುಡುಕೋಣ. ನಾನೂ ನಿನ್ನ ಹಿಂದೆಯೇ ಇರುತ್ತೇನೆ. ಬಿರುಗಾಳಿ ಬಂದರೆ ಬೆಟ್ಟಗಳು ಅಲುಗಾಡುತ್ತವೆಯೆ? ನೀನು ಪುರುಷಶ್ರೇಷ್ಠ, ಬುದ್ಧಿಸಂಪನ್ನ, ಧೈರ್ಯವಂತ. ನೀನು ಎದೆಗೆಡುವುದು ಉಂಟೆ?" ಎಂದ ಲಕ್ಷ್ಮಣ.

ಲಕ್ಷ್ಮಣನ ಮಾತಿನಂತೆ ಜನಸ್ಥಾನದಲ್ಲಿ ಹುಡುಕಲು ಇಬ್ಬರೂ ಹೊರಟು ಹೋದರು. ರಾಮನ ಕೋಪ ಇನ್ನೂ ಇಳಿದಿರಲಿಲ್ಲ. ಕೈಯಲ್ಲಿ ಬಿಲ್ಲು ಇದ್ದೇ ಇತ್ತು. ಮಹಾಘೋರ ಅರ್ಧಚಂದ್ರಾಕಾರ ಆದ ಬಾಣವನ್ನು ಹೂಡಿಕೊಂಡೇ ಇದ್ದ. ಲಕ್ಷ್ಮಣನ ಜೊತೆಯಲ್ಲಿ ಹಾಗೆಯೇ ಹೊರಟ.

ಮುಂದೆ ನೆಲದ ಮೇಲೆ ಬಿಟ್ಟದಂಥ ಒಂದು ಹಕ್ಕಿಯನ್ನು ನೋಡಿದರು. ಅದರ ಮೈ ಎಲ್ಲಾ ನೆತ್ತರಿನಿಂದ ತೊಯ್ದು ಇತ್ತು. ಅದನ್ನು ನೋಡಿದ ಒಡನೆಯೆ ರಾಮನ ಕೋಪ ಉಕ್ಕಿತು. "ಲಕ್ಷ್ಮಣ, ಇವನೇ ನೋಡು, ಜನಕಪುತ್ರಿಯನ್ನು ತಿಂದವನು. ಸಂದೇಹ ಇಲ್ಲ. ಹದ್ದಿನ ರೂಪದ ರಾಕ್ಷಸ! ವಿಶಾಲಾಕ್ಷಿ ವೈದೇಹಿಯನ್ನು ತಿಂದು ಹಾಕಿ ಹಾಯಿ ಆಗಿ ಮಲಗಿ ನಿದ್ದೆಮಾಡುತ್ತ ಇದಾನೆ. ಇವನನ್ನು ಈಗಲೇ ಕೊಲ್ಲುತ್ತೇನೆ. ಈ ಬಾಣದ ಅಲಗು ದಳ್ಳುರಿಯಂತೆ ಉರಿಯುತ್ತದೆ. ಇದನ್ನೇ ಬಿಡುತ್ತೇನೆ" ಎಂದ.

ಟಂಕಾರ ಮಾಡಿದ ರಾಮ. ಸಮುದ್ರ ಸುತ್ತುವರಿದ ಈ ಭೂಮಂಡಲವನ್ನೆ ಗಡಗಡ ನಡುಗಿಸಿದ. ನೆಲದ ಮೇಲೆ ಬಿದ್ದ ಹದ್ದಿನ ಮೇಲೆ ನುಗ್ಗಿದ.

ಆ ಹದ್ದು ಜಟಾಯು. ಶ್ರೀರಾಮನನ್ನು ನೋಡಿ ಬಾಯಿಂದ ನೆತ್ತರು ಕಾರುತ್ತ ಗದ್ಗದಸ್ವರದಿಂದ ಗೃಧ್ರರಾಜ ಹೇಳಿದ. "ಆಯುಷ್ಮಂತ ರಾಮಚಂದ್ರ, ಮೂಲಿಕೆಗಾಗಿ ಮಹಾವನವನ್ನು ಹುಡುಕುವಂತೆ ಸೀತೆಯನ್ನು ಹುಡುಕುತ್ತ ಇದೀಯೆ ನೀನು. ಅವಳನ್ನೂ ನನ್ನ ಪ್ರಾಣವನ್ನೂ ರಾವಣಾಸುರ ಅಪಹರಿಸಿದ. ರಾಮ, ನೀನೂ ಲಕ್ಷ್ಮಣನೂ ಆಶ್ರಮದಲ್ಲಿ ಇಲ್ಲದ ಸಮಯದಲ್ಲಿ ಮಹಾಬಲಿಷ್ಠ ರಾವಣಾಸುರ ಸೀತೆಯನ್ನು ಕದ್ದು ಒಯ್ಯುತ್ತ ಇದ್ದ. ನಾನು ನೋಡಿದೆ. ಸೀತಾದೇವಿಯನ್ನು ಬಿಡಿಸೋಣ ಎಂದು ನಾನು ಅವನನ್ನು ತರುಬಿ ಯುದ್ಧ ಮಾಡಿದೆ. ಅವನ ರಥವನ್ನು ಪುಡಿಪುಡಿ ಮಾಡಿದೆ. ಅಲ್ಲಿಯೇ ಬಿದ್ದು ಇದೆ, ನೋಡು. ಅವನ ಬಿಲ್ಲನ್ನು ಬಾಣಗಳನ್ನು ಮುರಿದೆ. ಅವನ ಕವಚ ಕಳಚಿ ಬಿತ್ತು. ನನ್ನ ರೆಕ್ಕೆಗಳಿಂದ ಅವನ ಸಾರಥಿಯನ್ನು ಬಡಿದು ಕೊಂದೆ.

"ಆ ವೇಳೆಗೆ ಬಹಳ ಬಳಲಿಕೆ ಆಯಿತು ನನಗೆ. ಅದನ್ನು ನೋಡಿ ಆ ರಾವಣ ತನ್ನ ಕತ್ತಿಯಿಂದ ನನ್ನ ರೆಕ್ಕೆ ಎರಡನ್ನೂ ಕಡಿದುಹಾಕಿದ. ನಾನು ನೆಲಕ್ಕೆ ಬಿದ್ದೆ. ಅವನು ಸೀತೆಯನ್ನು ಎತ್ತಿಕೊಂಡು ಅಂತರಿಕ್ಷಕ್ಕೆ ಹಾರಿ ಹೋದ. ನನ್ನನ್ನು ಆ ರಾವಣಾಸುರನೇ ಕೊಂದ. ಈಗ ಮತ್ತೆ ನೀನು ಕೊಲ್ಲಬೇಕಾದ್ದು ಏನು ಇದೆ?" ಎಂದ ಜಟಾಯು.

ಸೀತೆಯ ಸುದ್ದಿಯನ್ನು ಕೇಳಿ ರಾಮನಿಗೆ ದುಃಖ ಇಮ್ಮಡಿಸಿತು. ಕಣ್ಣಿನಲ್ಲಿ ನೀರು ತುಂಬಿತು. ಮೈಮೇಲೆ ಎಚ್ಚರ ತಪ್ಪಿತು. ಮುಂದೆ ಬಂದು ಗೃಧ್ರರಾಜನ ಮೈ ಸವರಿದ. ಕೈಯಲ್ಲಿ ಇದ್ದ ಬಿಲ್ಲು ಕೆಳಗೆ ಬಿತ್ತು. ಜಟಾಯು

ವನ್ನು ತಬ್ಬಿಕೊಂಡು ಅಳುತ್ತ ಮೂರ್ಛೆಹೋದ. ಬಹು ದುರ್ಗಮವು ಮಾರ್ಗ. ಇಕ್ಕಟ್ಟು ಆದ ಪ್ರದೇಶ. ಏಕಾಕಿಯಾಗಿ ರಾವಣನನ್ನು ಇದಿರಿಸಿ ಹೋರಾಡಿ ಪ್ರಾಣಸಂಕಟದಿಂದ ನಿಟ್ಟುಸಿರು ಬಿಡುತ್ತ ಇದ್ದ ಜಟಾಯುವನ್ನು ನೋಡಿ ರಾಮನಿಗೆ ಬಹಳ ಪರಿತಾಪ ಆಯಿತು. ಸಾಯುತ್ತ ಬಿದ್ದು ಇದ್ದ ಜಟಾಯು ವನ್ನು ನೋಡಿ "ಲಕ್ಷ್ಮಣ, ಏನು ದೌರ್ಭಾಗ್ಯ ಇದು? ರಾಜ್ಯ ಹೋಯಿತು. ಕಾಡಿನಲ್ಲಿ ಅಲೆದೆ. ಈಗ ಸೀತೆಯನ್ನೂ ಕಳೆದುಕೊಂಡೆ. ಅವಳನ್ನು ಕಾಪಾಡಲು ಬಂದ ಈ ಪಕ್ಷಿರಾಜ ಕೂಡ ಸಾವಿಗೆ ತುತ್ತು ಆಗಿದಾನೆ. ಎಂಥ ದೌರ್ಭಾಗ್ಯ! ಬೆಂಕಿಯನ್ನೆ ಸುಟ್ಟು ಬೂದಿ ಮಾಡುವ ದುಃಖ. ಈ ದುಃಖಶಮನಕ್ಕೆ ನಾನು ಸಮುದ್ರಕ್ಕೆ ಹೋಗಿ ಮುಳುಗಿದರೆ ನನ್ನ ಮೈಯ ಬೆಂಕಿಗೆ ಅದೂ ಬತ್ತಿ ಹೋದೀತು.

"ಚರ ಅಚರ ಕೂಡಿದ ಈ ಭೂಲೋಕದಲ್ಲಿ ನನಗಿಂತ ಭಾಗ್ಯಹೀನ ಯಾರೂ ಇಲ್ಲ. ಮಹಾದುಃಖದ ಬಲೆಯಲ್ಲಿ ಸಿಕ್ಕಿಬಿದ್ದೆ. ತಮ್ಮ, ನಮ್ಮ ತಂದೆಯ ಪರಮ ಮಿತ್ರ, ಜಟಾಯು ಈ ಮುಪ್ಪಿನಲ್ಲಿ ನನ್ನ ದೌರ್ಭಾಗ್ಯದ ದೆಸೆಯಿಂದ ಹೀಗೆ ಪೆಟ್ಟು ತಿಂದು ಕೆಳಗೆ ಬೀಳಬೇಕೆ?" ಎನ್ನುತ್ತ ರಾಮ ಅತ್ತ. ತಂದೆಯ ಹಾಗೆ ಜಟಾಯುವನ್ನು ಕಂಡು ಅವನ ಮೈಯನ್ನು ಸವರಿದ. ಎರಡೂ ರೆಕ್ಕೆ ಕಡಿದುಹೋಗಿ ನೆತ್ತರು ಸೋರುತ್ತ ಬಿದ್ದು ಇದ್ದ ಜಟಾಯುವನ್ನು ಅಪ್ಪಿಕೊಂಡ. "ವೃದ್ಧ ಜಟಾಯು, ನನ್ನ ಪ್ರಾಣಕ್ಕೆ ಸಮಾನಳು ಆದ ಸೀತೆ ಈಗ ಎಲ್ಲಿ ಇದಾಳೆ" ಎಂದು ಕೇಳಿದ. ಅಷ್ಟರಲ್ಲಿ ದುಃಖ ಉಮ್ಮಳಿಸಿ ಬಂತು. ಮೂರ್ಛೆಬಿದ್ದ.

೨೭

ರಾಮ ಎಚ್ಚೆತ್ತ. ರಾವಣಾಸುರ ನೆಲಕ್ಕೆ ಕೆಡವಿದ ಜಟಾಯುವನ್ನು ನೋಡಿದ. ಸ್ನೇಹವೇ ಸಂಪತ್ತು ಆದ ಲಕ್ಷ್ಮಣನನ್ನು ನೋಡಿದ. ಹೇಳಿದ: "ತಮ್ಮ, ನನಗೆ ಉಪಕಾರ ಮಾಡಲು ಈ ಪಕ್ಷಿರಾಜ ರಾವಣನ ಸಂಗಡ ಹೋರಾಡಿದ. ಅವನ ಕೈಯಿಂದ ಹತ ಆದ. ಆದರೂ ನನ್ನನ್ನು ನೋಡಲು ಎಂದೇ ಇನ್ನೂ ಪ್ರಾಣ ಹಿಡಿದು ಇರುವಂತೆ ಇದೆ. ಆಗಲೇ ದನಿ ಕುಗ್ಗಿ ಇದೆ. ಸಂಕಟಪಡುತ್ತ ಇದಾನೆ." ಜಟಾಯುವಿನ ಕಡೆ ತಿರುಗಿದ.

"ಇನ್ನೂ ಮಾತು ಆಡುವ ಶಕ್ತಿ ಇದ್ದರೆ ಆ ರಾಕ್ಷಸ ನಿನ್ನನ್ನು ಹೇಗೆ ಕೊಂದ? ಹೇಳು. ಸೀತೆಯ ಸುದ್ದಿ ಹೇಳು. ಆ ರಾಕ್ಷಸ ಸೀತೆಯನ್ನು ಏಕೆ ಕದ್ದುಕೊಂಡು ಹೋದ? ನಾನು ಏನು ಅವನಿಗೆ ಅಪಕಾರ ಮಾಡಿದ್ದೆ? ನನ್ನಿಂದ ಆದ ತಪ್ಪು ಎಂಥದು? ಸೀತೆಯ ಮುಖ ಚಂದ್ರಬಿಂಬದ ಹಾಗೆ. ಆಗ ಅವಳ ಮುಖ ಹೇಗೆ ಇತ್ತು? ಸೀತೆ ಏನು ಆದರೂ ಹೇಳಿದಳೆ? ಆ ರಾಕ್ಷಸನ ಶೌರ್ಯ ಎಂಥದು? ನೋಡಲು ಹೇಗೆ ಇದಾನೆ? ಅವನು ಮಾಡುವ ಕೆಲಸ ಏನು? ಅವನು ಇರುವುದು ಎಲ್ಲಿ? ವಿಸ್ತಾರ ಆಗಿ ಹೇಳು, ಹೇಳಬಲ್ಲೆ ಆದರೆ" ಎಂದು ಕೇಳಿದ ಜಟಾಯುವನ್ನು.

ಜಟಾಯುವಿನ ದನಿ ಬಹಳ ಕುಗ್ಗಿ ಇತ್ತು. ಹಾಗೆಯೇ ಹೇಳಿದ: "ರಾಮ, ಆ ರಾಕ್ಷಸರಾಜ ತನ್ನ ಮಾಯೆಯಿಂದ ಬಿರುಗಾಳಿ ಬೀಸುವಂತೆ ಮಾಡಿ ಮೋಡಗಳನ್ನು ಹುಟ್ಟಿಸಿ ಕತ್ತಲೆ ಕವಿಯಿಸಿ ಸೀತಾದೇವಿಯನ್ನು ಎತ್ತಿಕೊಂಡು ಆಕಾಶಮಾರ್ಗದಲ್ಲಿ ಹೋದ. ರಾಮ, ಯುದ್ಧಮಾಡಿ ನಾನು ಬಳಲಿ ಇದ್ದೆ. ನನ್ನ ರೆಕ್ಕೆಗಳನ್ನು ಕಡಿದು ಸೀತಾದೇವಿಯನ್ನು ಎತ್ತಿಕೊಂಡು ದಕ್ಷಿಣ ದಿಕ್ಕಿಗೆ ಹೋದ. ನನ್ನ ಪ್ರಾಣಕ್ಕೆ ಈಗ ಮರಣಸಂಕಟ. ನನ್ನ ಕಣ್ಣು ತಿರುಗುತ್ತ ಇವೆ. ಲಾಮಂಚದ ಕುಡಿ ಇರುವ ಬಂಗಾರದ ಮರ ಕಾಣುತ್ತ ಇದೆ.

"ಹೆಚ್ಚು ಮಾತು ಆಡಲಾರೆ. ಒಂದು ಮಾತು. ರಾವಣ ಸೀತೆಯನ್ನು ಎತ್ತಿಕೊಂಡು ಹೋದ ಮುಹೂರ್ತ ಇಂಥ ಮುಹೂರ್ತ. ಆ ಮುಹೂರ್ತದಲ್ಲಿ ಕಳೆದುಹೋದ ವಸ್ತು ಬೇಗ ಮತ್ತೆ ಹಿಂದಿರುಗುತ್ತದೆ. ನೀನು ಕಳೆದುಕೊಂಡ ಸೀತೆ ಬೇಗ ನಿನಗೆ ತಿರುಗಿ ಬರುತ್ತಾಳೆ. ಗಾಳ ನುಂಗಿದ ಮೀನಿನಂತೆ ರಾವಣ ಖಂಡಿತ ಸಾಯುತ್ತಾನೆ ಸೀತೆಯನ್ನು ಕದ್ದುದಕ್ಕೆ. ಸೀತೆಯ ಚಿಂತೆ ಬಿಡು. ಬೇಗನೆ ಆ ರಾಕ್ಷಸನನ್ನು ಕೊಲ್ಲುತ್ತೀಯೆ. ಸೀತೆಯನ್ನು ಕರೆತಂದು ಸುಖದಿಂದ ಇರುತ್ತೀಯೆ" ಎಂದ ಜಟಾಯು. ಈ ಮಾತು ಆಡುತ್ತ ಇರುವಾಗಲೇ ಬಾಯಿಂದ ಕಂಡ, ನೆತ್ತರು ಬಿತ್ತು. ಸಾವು ಸಮೀಪಿಸಿತು.

ಆದರೂ ಹೇಳಿದ ಜಟಾಯು. "ರಾಮ, ರಾವಣ ವಿಶ್ರವಸ್ಸಿನ ಮಗ. ಕುಬೇರನ ತಮ್ಮ......." ಎನ್ನುತ್ತ ಇದ್ದಹಾಗೆಯೇ ಗೃಧ್ರರಾಜನ ಪ್ರಾಣ ಹೋಯಿತು. ಕೈಮುಗಿದು ನಿಂತು ಕೇಳುತ್ತ ಇದ್ದ ರಾಮ "ಹೇಳು, ಹೇಳು" ಎನ್ನುತ್ತಲೇ ಇದಾನೆ. ಜಟಾಯುವಿನ ಪ್ರಾಣ ಹೋಯಿತು. ಹಕ್ಕಿಯ ತಲೆ

ನೆಲಕ್ಕೆ ಬಿತ್ತು. ಕಾಲು ಚಾಚಿದವು. ಮೈ ನಡುಗಿತು. ಬೆಟ್ಟದ ಹಾಗೆ ನೆಲದ ಮೇಲೆ ಬಿದ್ದು ಇತ್ತು ಜಟಾಯುವಿನ ಕಳೇಬರ.

ಮೇಲಿಂದಮೇಲೆ ಬಂದು ಒದಗಿದ ದುಃಖಪರಂಪರೆಯಿಂದ ದೀನ ಆದ ರಾಮ. ಜಟಾಯುವನ್ನು ನೋಡಿ ಅತ್ತು ಅತ್ತು ಅವನ ಕಣ್ಣು ಕೆಂಪಗೆ ಆದವು. ಲಕ್ಷ್ಮಣನಿಗೆ ಹೇಳಿದ: "ಲಕ್ಷ್ಮಣ, ರಾಕ್ಷಸರ ನಿವಾಸಸ್ಥಾನ ಆದ ಈ ದಂಡಕಾರಣ್ಯದಲ್ಲಿ ಎಷ್ಟೋ ವರ್ಷಗಳಿಂದ ನಿರ್ಭಯ ಆಗಿ ಜಟಾಯು ವಾಸ ಮಾಡುತ್ತ ಇದ್ದ. ಈಗ ನಮಗೆ ಆಗಿ ಪ್ರಾಣಬಿಟ್ಟ. ಅನೇಕ ವರ್ಷ ಇಲ್ಲಿ ಬದುಕಿ ಇದ್ದ. ಸುಖದಿಂದ ಇದ್ದ. ಈಗ ಈ ವಯಸ್ಸಿನಲ್ಲಿ ಒಬ್ಬ ರಾಕ್ಷಸನ ಸಂಗಡ ಹೋರಾಡಿ ಪ್ರಾಣ ಬಿಟ್ಟ. ಕಾಲಗತಿ! ಯಾರು ಮೀರಬಲ್ಲರು ಕಾಲಗತಿ? ತಮ್ಮ, ನಮಗೆ ಉಪಕಾರ ಮಾಡಬೇಕು, ಸೀತೆಯನ್ನು ರಕ್ಷಿಸಬೇಕು ಎಂದು ನಮ್ಮ ಹಿಂದೆ ಬಂದ ಜಟಾಯು. ಪಿತೃಪಿತಾಮಹರಿಂದ ತನಗೆ ಬಂದ ಗೃಧ್ರ ರಾಜ್ಯವನ್ನು ಬಿಟ್ಟು ಬಂದ. ಇಲ್ಲಿ ಹೀಗೆ ಹೋರಾಡಿ ಪ್ರಾಣ ಬಿಟ್ಟ.

"ಸೌಮಿತ್ರಿ, ಮೃಗಪಕ್ಷಿಗಳಲ್ಲಿ ಕೂಡ ಧರ್ಮಾತ್ಮರೂ ಸಾಧುಗಳೂ ಇರುತ್ತಾರೆ. ಶೂರರೂ ಶರಣ್ಯರೂ ಇರುತ್ತಾರೆ. ನನಗೋಸ್ಕರ ಪ್ರಾಣ ಬಿಟ್ಟ ಈ ಜಟಾಯುವನ್ನು ನೋಡಿದರೆ ಸೀತೆಯನ್ನು ಕಳೆದುಕೊಂಡ ದುಃಖ ಬಹಳ ಸಣ್ಣದು. ಈ ಸಂಕಟ ದೊಡ್ಡದು. ನಮ್ಮ ತಂದೆ ದಶರಥ ಮಹಾರಾಜರು ಹೇಗೋ ಈ ಪಕ್ಷಿರಾಜನೂ ಹಾಗೆಯೇ ನಮಗೆ ಪೂಜ್ಯ, ಮಾನ್ಯ. ಲಕ್ಷ್ಮಣ, ಸೌದೆಯನ್ನು ಚಿತೆ ಮಾಡು. ನನಗೆ ಎಂದು ಪ್ರಾಣ ಕೊಟ್ಟ ಈ ಜಟಾಯುವಿಗೆ ನಾನೇ ಕೈಯಾರೆ ಅಗ್ನಿಸಂಸ್ಕಾರ ಮಾಡುತ್ತೇನೆ" ಎಂದ.

ಚಿತೆ ಸಿದ್ಧ ಆಯಿತು. ಜಟಾಯುವಿನ ದೇಹವನ್ನು ಚಿತೆಯ ಮೇಲೆ ಇಟ್ಟರು. "ಪರಾಕ್ರಮಶಾಲಿ ಪಕ್ಷಿರಾಜ, ಯಜ್ಞಶೀಲರಿಗೆ ಆಗುವ ಸದ್ಗತಿ, ಆಹಿತಾಗ್ನಿಗಳಿಗೆ ಆಗುವ ಸದ್ಗತಿ ನಿನಗೆ ಆಗಲಿ. ಸನ್ಯಾಸಿಗಳಿಗೆ ಭೂದಾತರಿಗೆ ಲಭಿಸುವ ಲೋಕ ನಿನಗೆ ಲಭಿಸಲಿ. ನಾನೇ ದಹನಸಂಸ್ಕಾರ ಮಾಡುತ್ತ ಇದೇನೆ." ಬಂಧುಗಳಿಗೆ ಹೇಗೆ ಮಾಡುತ್ತಾರೋ ಸಂಸ್ಕಾರ ಅದೇ ರೀತಿ ಮಾಡಿದ ರಾಮ. ಲಕ್ಷ್ಮಣನ ಜೊತೆಯಲ್ಲಿ ಅಡವಿಗೆ ಹೋಗಿ ಕೇಸರೀಮೃಗ ಗಳನ್ನು ಕೊಂದುತಂದ. ಎಳೆಗರಿಕೆ ಮೊಳೆತು ರಮಣೀಯ ಆದ ನೆಲದ ಮೇಲೆ ಆ ಮಾಂಸವನ್ನು ಉಂಡೆಗಳು ಆಗಿ ಮಾಡಿ ಜಟಾಯುವಿಗೆ ಪಿಂಡಪ್ರದಾನ

ಮಾಡಿದ. ಸತ್ತವರನ್ನು ಸ್ವರ್ಗಕ್ಕೆ ಏರಿಸಲು ಬ್ರಾಹ್ಮಣರು ಹೇಳುವ ಪಿತೃ ದೇವತಾಕ ಮಂತ್ರಗಳನ್ನು ಜಟಾಯುವಿಗೋಸ್ಕರ ರಾಮ ಹೇಳಿ ಜಪಿಸಿದ. ಆಮೇಲೆ ಅಣ್ಣತಮ್ಮ ಇಬ್ಬರೂ ಜಲತರ್ಪಣವನ್ನು ಬಿಡಲು ಗೋದಾವರಿಗೆ ಹೋದರು. ನಿಷ್ಠೆಯಿಂದ ಶಾಸ್ತ್ರೋಕ್ತ ಆಗಿ ಸ್ನಾನಮಾಡಿ ಉದಕಕ್ರಿಯೆ ನಡೆಸಿದರು.

ಯಾರೂ ಮಾಡಲಾರದಂಥ ಕೆಲಸವನ್ನು ಮಾಡಿದ ಆ ಗೃಧ್ರರಾಜ. ಆ ವಯಸಿನಲ್ಲಿ ನಿರಾಯುಧ ಆಗಿ ಸತ್ಯಕ್ಕೋಸ್ಕರ ಹೋರಾಡಿದ. ಯುದ್ಧದಲ್ಲಿ ಸತ್ತು ಕೀರ್ತಿ ಗಳಿಸಿದ. ಮಹರ್ಷಿಸಮ ಆದ ರಾಮನೇ ನಿಂತು ಅವನಿಗೆ ಅಗ್ನಿ ಸಂಸ್ಕಾರ ಮಾಡಿದ. ಜಟಾಯು ಪುಣ್ಯಲೋಕಕ್ಕೆ ಹೋದ.

ರಾಮಲಕ್ಷ್ಮಣರು ತರ್ಪಣ ಬಿಟ್ಟು ಬಂದರು. ಜಟಾಯು ಹೇಳಿದ ದಿಕ್ಕಿಗೆ ಸೀತೆಯನ್ನು ಹುಡುಕುತ್ತ ಸ್ಥಿರಬುದ್ಧಿಯಿಂದ ಹೊರಟರು.

ಇಬ್ಬರೂ ಹೋಗುತ್ತ ಇದ್ದರೆ ಮಹಾವಿಷ್ಣುವೂ ದೇವೇಂದ್ರನೂ ಕೂಡಿ ಹೋಗುವಂತೆ ಇತ್ತು.

೨೮

ರಾಮಲಕ್ಷ್ಮಣರು ಬಿಲ್ಲುಬಾಣ ಹಿಡಿದು ಹೊರಟರು. ಜಟಾಯು ಹೇಳಿದಂತೆ ದಕ್ಷಿಣ ದಿಕ್ಕಿಗೆ ಹೊರಟರು. ನಿರ್ಜನ ಅರಣ್ಯ. ಜನಸಂಚಾರದ ಗುರುತೇ ಇರಲಿಲ್ಲ. ಎತ್ತ ನೋಡಿದರೂ ಗಿಡಮರ ಬಳ್ಳಿಪೊದೆ. ಓಡಾಡಲು ದಾರಿ ಕೂಡ ಇರಲಿಲ್ಲ. ಹುಲಿ ಸಿಂಹ ದುಷ್ಟ ಸರ್ಪ ಇವುಗಳದೇ ಓಡಾಟ. ಬಹಳ ಭಯಂಕರ ಅರಣ್ಯ. ರಾಮಲಕ್ಷ್ಮಣರು ಬೇಗಬೇಗ ಅದನ್ನು ದಾಟಿದರು.

ಮುಂದೆ ಮೂರು ಹರಿದಾರಿ ನಡೆದು ಕ್ರೌಂಚಾರಣ್ಯಕ್ಕೆ ಬಂದರು. ಅಲ್ಲಿ ಗಿಡಮರಗಳು ಎತ್ತರ ಆಗಿ ಬೆಳೆದು ಬಣ್ಣಬಣ್ಣದ ಮೋಡಗಳ ಹಾಗೆ ಕಾಣುತ್ತ ಇದ್ದವು. ಬಗೆಬಗೆಯ ಹಕ್ಕಿಗಳು ಹಾರಾಡುತ್ತ ಇದ್ದವು. ಕ್ರೂರ ಮೃಗಗಳೂ ವಿಷಸರ್ಪಗಳೂ ತುಂಬಿ ಇದ್ದವು. ಅಲ್ಲಿ ಎಲ್ಲಿಯೂ ಸೀತೆ ಕಾಣಲಿಲ್ಲ. ಅಲ್ಲಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತ ಸೀತೆಯನ್ನು ಹುಡುಕುತ್ತ ಮತ್ತೆ ಮೂರು ಹರಿದಾರಿ ನಡೆದರು ಮತಂಗಾಶ್ರಮದ ಕಡೆ.

ದಾರಿಯಲ್ಲಿ ಮತ್ತೂ ಒಂದು ಗೊಂಡಾರಣ್ಯ. ಅಲ್ಲೂ ಕ್ರೂರಮೃಗಗಳು ಸರ್ಪಗಳು ನಾನಾ ಬಗೆಯ ಹಕ್ಕಿಗಳು. ಅಲ್ಲಿ ಒಂದು ದೊಡ್ಡ ಗುಹೆ. ಒಳಗೆ ಬರೀ ಕತ್ತಲೆ. ಪಾತಾಳದ ಹಾಗೆ ಮಹಾಗಭೀರ. ನರಶಾರ್ದೂಲರು ಆ ಅಣ್ಣತಮ್ಮ ಇಬ್ಬರೂ ಆ ಗುಹೆಯನ್ನು ಪರಿಶೀಲಿಸತೊಡಗಿದರು.

ಅಲ್ಲಿ ಒಬ್ಬ ವಿಕಾರಮುಖದ ಬೃಹದಾಕಾರದ ಒಬ್ಬ ರಾಕ್ಷಸಿ. ಅವಳನ್ನು ನೋಡಿದರೆ ಚಿಲ್ಲರೆ ಜಂತುಗಳು ಗಾಬರಿಗೊಂಡು ಓಡಬೇಕಾದ್ದೇ. ಬಲು ಅಸಹ್ಯ ರೂಪ. ಭೀಕರದೃಷ್ಟಿ, ಜೋಲುಬಿದ್ದ ಡೊಳ್ಳುಹೊಟ್ಟೆ, ಚೂಪು ಕೋರೆಹಲ್ಲು, ಒರಟು ಮೈ. ಕೂದಲು ಕೆದರಿತ್ತು. ಮಹಾಕರಾಳಿ. ಕಣ್ಣಿಗೆ ಬಿದ್ದ ಕ್ರೂರ ಮೃಗಗಳನ್ನು ಹಿಡಿದು ತಿನ್ನುವವಳು.

ತನ್ನ ಕಡೆಗೇ ಬರುತ್ತಿದ್ದ ರಾಮಲಕ್ಷ್ಮಣರನ್ನು ಆ ರಾಕ್ಷಸಿ ನೋಡಿದಳು. ಧಿಗ್ಗನೆ ಬಂದಳು. ರಾಮ ಹಿಂದೆ ಲಕ್ಷ್ಮಣ ಮುಂದೆ ಬರುತ್ತ ಇದ್ದರು. ಲಕ್ಷ್ಮಣನ ಬಳಿಗೆ ಬಂದು ಅವನನ್ನು ಹಿಡಿದುಕೊಂಡು "ಬಾ, ಇಬ್ಬರೂ ರತಿಕ್ರೀಡೆ ಆಡೋಣ" ಎಂದಳು. ಅವನನ್ನು ಬರಸೆಳೆದು ಬಿಗಿದು ಅಪ್ಪಿ "ಪ್ರಾಣನಾಥ, ನನ್ನ ಹೆಸರು ಅಯೋಮುಖಿ. ವೀರ, ನೀನು ನನಗೆ, ನಾನು ನಿನಗೆ. ನೀನು ನಲ್ಲ, ನಾನು ನಲ್ಲೆ. ಬದುಕಿ ಇರುವಷ್ಟು ದಿನವೂ ಈ ಪರ್ವತ ಶಿಖರಗಳಲ್ಲಿ ಆ ನದೀತೀರದ ಮರಳುದಿಣ್ಣೆಗಳಲ್ಲಿ ಹಾಯಿ ಆಗಿ ಕ್ರೀಡಿಸುತ್ತ ಕಾಲ ಕಳೆಯಬಹುದು ನಾವು ಇಬ್ಬರೂ" ಎಂದಳು.

ಲಕ್ಷ್ಮಣನಿಗೆ ಬಹಳ ಸಿಟ್ಟುಬಂತು. ರಾಕ್ಷಸಿ ಇನ್ನೂ ಏನೋ ಹೇಳುತ್ತ ಇದ್ದಳು. ಲಕ್ಷ್ಮಣ ತನ್ನ ಕತ್ತಿಯನ್ನು ಹೊರಗೆ ಎಳೆದು ಅವಳ ಕಿವಿಮೂಗನ್ನೂ ಮೊಲೆಗಳನ್ನೂ ಕುಯಿದು ಹಾಕಿದ. ಅಯ್ಯೋ ಎಂದು ವಿಕಟಸ್ವರದಿಂದ ಅರಚಿಕೊಳ್ಳುತ್ತ ಆ ರಾಕ್ಷಸಿ ಬಂದ ದಾರಿಯಲ್ಲೇ ಓಡಿಹೋದಳು.

ಇಬ್ಬರೂ ಮುಂದೆ ಸಾಗಿದರು. ಕೆಲವು ದೂರ ನಡೆದಮೇಲೆ ಏಕೋ ಲಕ್ಷ್ಮಣ ತಟ್ಟನೆ ಅಂಜಿದ. ಶುದ್ಧ ಶೀಲ ಸ್ವಭಾವದ ಆ ಲಕ್ಷ್ಮಣ ಬಲಾಢ್ಯ. ಆದರೂ "ಅಣ್ಣ, ಏಕೋ ನನ್ನ ಎಡತೋಳು ಅದಿರುತ್ತ ಇದೆ. ಬರೀ ದುಶ್ಶಕುನಗಳೇ ಕಾಣುತ್ತವೆ. ಏಕೋ ಕಳವಳಗೊಂಡು ಇದೆ ಮನಸ್ಸು. ಏನೋ ದೊಡ್ಡ ಕೇಡು ಕಾದು ಇದೆ ನಮಗೆ. ನೀನು ಸಿದ್ಧ ಆಗಿ ಇರು, ಅಣ್ಣ. ಪರವಾ ಇಲ್ಲ. ಇಲ್ಲಿ ಮಂಜುಳ ಪಕ್ಷಿ ಕೂಗುತ್ತ ಇದೆ. ಯುದ್ಧದಲ್ಲಿ ನಮಗೆ ಗೆಲವು ಖಂಡಿತ" ಎಂದು ಕೈಮುಗಿದು ವಿನಯದಿಂದ ಹೇಳಿದ.

ಆ ಅಡವಿಯಲ್ಲಿ ಎಲ್ಲೆಲ್ಲೂ ಹುಡುಕಿದರು ರಾಮಲಕ್ಷ್ಮಣರು. ಅಲ್ಲಿ ಒಂದು ಕಡೆ ಭಯಂಕರ ದೊಡ್ಡ ಧ್ವನಿ ಕೇಳಿಸಿತು. ಕಾಡಿನ ದೊಡ್ಡ ದೊಡ್ಡ ಮರಗಳು ಎಲ್ಲಾ ಮುರಿದುಬೀಳುತ್ತವೆ ಎನಿಸಿತು. ಗಾಳಿಬೀಸಿತು ಪ್ರಬಲ ಆಗಿ. ಆ ಗಾಳಿಯ ಜೊತೆಯಲ್ಲೇ ಆ ಧ್ವನಿ ಆ ಅಡವಿಯಲ್ಲಿ ಎಲ್ಲೆಡೆಯೂ ತುಂಬಿತು. ಎಲ್ಲಿಂದ ಬಂತೋ ಆ ಧ್ವನಿ ನೋಡಬೇಕು ಎಂದು ಸಂಭ್ರಮದಿಂದ ಹೊರಟರು ರಾಮಲಕ್ಷ್ಮಣರು.

ಇದಿರಿಗೆ ಒಂದು ಪೊದೆ. ಅದರಲ್ಲಿ ಒಬ್ಬ ಮಹಾಕಾಯ ರಾಕ್ಷಸ. ಬೆಟ್ಟದಂಥ ಮೈ. ವಿಸ್ತಾರ ಆದ ಎದೆ. ಬರೀ ಮುಂಡ. ಅದಕ್ಕೆ ರುಂಡ ಆಗಲಿ ಕತ್ತು ಆಗಲಿ ಇಲ್ಲ. ಅದಕ್ಕೆ ಹೊಟ್ಟೆಯಲ್ಲಿಯೆ ಬಾಯಿ. ಎದೆಯಲ್ಲಿಯೆ ಹಣೆ. ಮೈತುಂಬಾ ಕೂದಲು. ಸೂಜಿಗಳ ಹಾಗೆ ಬಿರುಸು. ಕರಾಳ ಕಾಲಮೇಘದಂಥ ಕಪ್ಪು ಮೈ. ಕೂಗಿದರೆ ಮೋಡ ಗುಡುಗಿದ ಹಾಗೇ ಭಯಂಕರ ಗರ್ಜನೆ. ಎದೆಯ ಮೇಲಿನ ಹಣೆಯಲ್ಲಿ ಒಂದೇ ಕಣ್ಣು. ದೊಡ್ಡ ದೊಡ್ಡ ರೆಪ್ಪೆ. ಪಿಂಗಳ ಬಣ್ಣದ ಕಣ್ಣಾಲಿ. ಎಷ್ಟು ದೂರದಲ್ಲಿ ಇದ್ದರೂ ಎಂಥ ಸೂಕ್ಷ್ಮ ವಸ್ತುವನ್ನೇ ಆದರೂ ಒಂದೇ ಕಣ್ಣಿನಿಂದ ನೋಡಬಲ್ಲ ಕೂರುನೋಟ. ಆ ಕಣ್ಣಿನಲ್ಲಿ ಬೆಂಕಿ ಉರಿಯುತ್ತ ಇರುತ್ತದೆ. ಅಗಲ ಆದ ಬಾಯಿ, ಹರಿತ ಆದ ಕೋರೆಹಲ್ಲು. ಯಾವಾಗಲೂ ಆಡುವ ನೀಳ ಆದ ನಾಲಗೆ. ಅವನ ತೋಳೇ ಮಹಾ ಭಯಂಕರ. ಒಂದೊಂದೂ ಒಂದೊಂದು ಗಾವುದ ಉದ್ದ. ಆ ತೋಳನ್ನು ಆಡಿಸುತ್ತ ಕೈಗೆ ಸಿಕ್ಕ ಕರಡಿ ಸಿಂಹ ಆನೆ ಜಿಂಕೆ ಎಲ್ಲವನ್ನೂ ಮೃಗಪಕ್ಷಿಗಳು ಎಲ್ಲವನ್ನೂ ಸೆಳೆದುಕೊಂಡು ನುಂಗುತ್ತ ಇದ್ದ. ತನಗೆ ಬೇಡ ಎನಿಸಿದ್ದನ್ನು ಕೊಡವಿಬಿಡುತ್ತ ಇದ್ದ.

ರಾಮಲಕ್ಷ್ಮಣರೂ ಅವನ ಕೈಗೆ ಸಿಕ್ಕರು. ಬಹು ದೂರದಿಂದಲೇ ಇಬ್ಬರೂ ಆ ರಾಕ್ಷಸನನ್ನು ನೋಡಿದರು. ಇಬ್ಬರ ಕೈಯಲ್ಲೂ ಬಿಲ್ಲು, ಕತ್ತಿ. ಇಬ್ಬರೂ ಮಹಾ ಬಲಾಢ್ಯರು, ತೇಜಸ್ವಿಗಳು. ಆದರೂ ಅವನ ತೋಳುಗಳ ಹಿಡಿತ ಅವರನ್ನು ಕಕ್ಕಾಬಿಕ್ಕಿ ಮಾಡಿತು. ರಾಮ ಅಷ್ಟು ಕಳವಳಪಡಲಿಲ್ಲ. ಧೈರ್ಯದಿಂದಲೇ ಇದ್ದ. ಲಕ್ಷ್ಮಣ ಚಿಕ್ಕವನು. ಅವನಿಗೆ ಧೈರ್ಯ ಕುಸಿಯಿತು. ಕಳವಳಗೊಂಡ. "ಅಣ್ಣಾ, ಈಗ ಏನು ಮಾಡಬೇಕು? ಈ ರಾಕ್ಷಸನ ಕೈಗೆ ಸಿಕ್ಕಿದೆವಲ್ಲ. ನಾನು ಅಂತೂ ಇವನ ಬಾಯಿಗೆ ತುತ್ತು. ನೀನು ಆದರೂ ತಪ್ಪಿಸಿ

ಕೊಂಡು ಹೋಗು. ನನ್ನ ಚಿಂತೆ ಮಾಡಬೇಡ. ನಾನು ಬಲಿ ಆಗುತ್ತೇನೆ. ಬೇಗ ನೀನು ಸೀತಾದೇವಿಯನ್ನು ಸೇರುವೆ. ತಂದೆತಾತಂದಿರ ರಾಜ್ಯವನ್ನು ಆಳುತ್ತ ಇರುವಾಗ ನನ್ನನ್ನು ನೆನೆದರೆ ಅಷ್ಟೇ ಸಾಕು" ಎಂದ ಲಕ್ಷ್ಮಣ.

"ತಮ್ಮ, ಭಯಪಡಬೇಡ. ನಿನ್ನಂಥ ವೀರ ಹೀಗೆ ಬೆದರಬಹುದೆ?" ಎಂದ ರಾಮ. ಇಷ್ಟರಲ್ಲಿ ಆ ರಾಕ್ಷಸ ಮೇಘಗಂಭೀರ ಧ್ವನಿಯಿಂದ: "ನೀವು ಯಾರು? ಗೂಳಿಯ ಭುಜದಂಥ ಭುಜ, ಕೈಯಲ್ಲಿ ಬಿಲ್ಲು ಬಾಣ ಕತ್ತಿ. ನೀವು ಯಾರು? ಈ ಗೊಂಡಾರಣ್ಯಕ್ಕೆ ಏಕೆ ಬಂದಿರಿ? ಇಲ್ಲಿ ಏನು ಕೆಲಸ ನಿಮಗೆ? ನನಗೆ ಈಗ ಹಸಿವು ಆಗಿದೆ. ಹೊತ್ತಿಗೆ ಸರಿ ಆಗಿ ನೀವೂ ಬಂದಿರಿ. ನಿಮ್ಮ ಬಿಲ್ಲುಬಾಣ ಕತ್ತಿ ನಿಮ್ಮನ್ನು ಕಾಯಲಾರವು. ಚೂಪು ಕೊಂಬಿನ ಎತ್ತು ಇದ್ದ ಹಾಗೆ ಇದ್ದರೂ ನಿಮ್ಮನ್ನು ತಿಂದುಹಾಕಿಬಿಡುತ್ತೇನೆ. ನನ್ನ ಬಾಯಿಗೆ ಬಿದ್ದಿರಿ. ಇನ್ನು ನಿಮಗೆ ಉಳಿಗಾಲ ಇಲ್ಲ" ಎಂದ.

ಆ ರಾಕ್ಷಸನ ಹೆಸರು ಕಬಂಧ. ರಾಮ ಆ ದುಷ್ಟನ ಮಾತನ್ನು ಕೇಳಿದ. ಅವನಿಗೂ ಸ್ವಲ್ಪ ಕಸಿವಿಸಿ ಆಯಿತು. ಸತ್ಯಪರಾಕ್ರಮಿ ಲಕ್ಷ್ಮಣನನ್ನು ನೋಡಿ ಹೇಳಿದ: "ತಮ್ಮ, ನಮಗೆ ಕಷ್ಟದ ಮೇಲೆ ಕಷ್ಟ. ಸೀತೆಯೂ ಸಿಗಲಿಲ್ಲ. ಈ ಪ್ರಾಣಾಂತಕ ವಿಪತ್ತು ಬೇರೆ ಬಂತು. ಎಂಥ ಕಷ್ಟಕ್ಕೆ ಸಿಕ್ಕಿದೆವು ಇಬ್ಬರೂ. ಲಕ್ಷ್ಮಣ, ಕಾಲವನ್ನು ಇದಿರಿಸಬಲ್ಲವರು ಯಾರು? ಎಲ್ಲರೂ ಕಾಲಕ್ಕೆ ತಲೆ ಬಾಗಬೇಕು. ಕಾಲಪುರುಷನಿಗೆ ಪ್ರಯಾಸವೇ ಇಲ್ಲ, ಅಸಾಧ್ಯವೂ ಇಲ್ಲ. ಎಷ್ಟೇ ಶೂರರು ಬಲಾಢ್ಯರು ಸಮಸ್ತ ಶಸ್ತ್ರಾಸ್ತ್ರಸಂಪನ್ನರು ಆಗಿದ್ದರೂ ಮರಳಿನ ಅಣೆಕಟ್ಟು ಪ್ರವಾಹಕ್ಕೆ ಕೊಚ್ಚಿಕೊಂಡುಹೋಗುವಂತೆ ಕಾಲಹತರಾಗುತ್ತಾರೆ. ಕಾಲವಶದಿಂದ ನನಗೂ ಮನಸ್ಸು ಚದರಿದೆ."

ಹೀಗೆ ಹೇಳಿದ ಆ ಸತ್ಯವಿಕ್ರಮ, ಮಹಾಯಶಸ್ವಿ, ಶೂರ ರಾಮ ತನ್ನ ಮನಸ್ಸನ್ನು ಗಟ್ಟಿಮಾಡಿಕೊಂಡ.

೨೯

ತೋಳುಗಳಲ್ಲಿ ಸಿಕ್ಕಿಬಿದ್ದೂ ಸುಮ್ಮನೆ ನಿಂತು ಇದ್ದರು ರಾಮಲಕ್ಷ್ಮಣರು. ಕಬಂಧ ಹೇಳಿದ—"ಬುದ್ಧಿ ಇಲ್ಲದವರಂತೆ ಏಕೆ ಸುಮ್ಮನೆ ನಿಂತುಕೊಂಡಿದೀರಿ?

ಹಸಿವು ಸುಡುತ್ತ ಇದೆ. ದೈವವೇ ನಿಮ್ಮನ್ನು ಆಹಾರ ಆಗಿ ಕಳಿಸಿದ ನನಗೆ. ನೀವು ಕ್ಷತ್ರಿಯಶ್ರೇಷ್ಠರೇ ಇರಬಹುದು. ಆದರೆ ಇಲ್ಲಿಂದ ಬದುಕಿ ಹೋಗ ಲಾರಿರಿ.” ಕಬಂಧ ಬಾಯಿ ತೆರೆದ.

ಅಲ್ಲಿಯವರೆಗೆ ಭಯಚಿಂತೆಗಳಿಂದ ಇದ್ದ ಲಕ್ಷ್ಮಣನಿಗೆ ಹೇಗೋ ಧೈರ್ಯ ಬಂತು. ಕಾಲೋಚಿತ, ಹಿತಕರ ಆಗಿ ಹೇಳಿದ : “ಅಣ್ಣ, ಈ ದುರುಳ ರಕ್ಕಸ ನಮ್ಮನ್ನು ಇಬ್ಬರನ್ನೂ ನುಂಗಿಬಿಡುತ್ತಾನೆ. ಈಗ ಯೋಚನೆಗೆ ಸಮಯ ಇಲ್ಲ. ಇವನಿಗೆ ತೋಳುಗಳೇ ಬಲ. ಈ ತೋಳುಗಳನ್ನು ನಾವು ಕಡಿದುಹಾಕೋಣ. ಇವನನ್ನು ಕೊಂದರೆ ತಪ್ಪು. ಯಜ್ಞಕಾಲದಲ್ಲಿ ತಂದ ಪಶುಗಳನ್ನೂ ತಮ್ಮನ್ನು ತಾವು ಕಾಪಾಡಿಕೊಳ್ಳಲು ಶಕ್ತಿ ಇಲ್ಲದವರನ್ನೂ ಕೊಲ್ಲುವುದು ರಾಜಧರ್ಮ ಅಲ್ಲ. ಆದರೆ ಇವನು ತಲೆ ಕಾಲು ಇಲ್ಲದೆ ಇದ್ದರೂ ಮಹಾಭಯಂಕರ. ತೋಳು ಗಳಿಂದಲೇ ಲೋಕವನ್ನು ಗೆದ್ದು ಈಗ ನಮ್ಮನ್ನು ಕೊಲ್ಲಬೇಕು ಎನ್ನುತ್ತಾನೆ. ಆದ್ದರಿಂದ ಇವನನ್ನು ತೀರಿಸೋಣ” ಎಂದ.

ಲಕ್ಷ್ಮಣನ ಮಾತನ್ನು ಕೇಳಿ ಕನಲಿದ ಕಬಂಧ. ಇಬ್ಬರನ್ನೂ ನುಂಗಲು ಬಾಯಿ ತೆರೆದ. ಕೈಗಳಿಂದ ಇಬ್ಬರನ್ನೂ ಬಾಯಿಯ ಬಳಿಗೆ ಸೆಳೆದ. ರಾಮ ಲಕ್ಷ್ಮಣರಿಗೆ ದೇಶಕಾಲ ಗೊತ್ತು. ಸಮಯ ನೋಡಿ ಅವನ ತೋಳುಗಳನ್ನು ಕತ್ತರಿಸಿ ಕೆಡವಿದರು. ಬಲತೋಳನ್ನು ರಾಮ ಕತ್ತರಿಸಿದ. ಎಡತೋಳನ್ನು ಲಕ್ಷ್ಮಣ ಕತ್ತರಿಸಿದ. ಕೈಗಳು ಎರಡೂ ಕಡಿದುಬಿದ್ದುದರಿಂದ ಕಬಂಧ ಕೆಳಗೆ ಬಿದ್ದ. ಬೀಳುವಾಗ ಅವನು ಮಾಡಿದ ಗರ್ಜನೆಯಿಂದ ನೆಲ ಮುಗಿಲು ಎರಡೂ ಮಾರ್ಮೊಳಗಿದವು.

ಭುಜಗಳಿಂದ ನೆತ್ತರು ಧಾರೆ ಆಗಿ ಹರಿಯುತ್ತ ಇದೆ. ತೋಳು ಮುರಿದು ಬಿದ್ದು ಇವೆ. ಮೈ ಎಲ್ಲಾ ನೆತ್ತರಿನಿಂದ ತೋಯ್ದು ಇದೆ. ಕಬಂಧನ ಗರ್ವ ಅಡಗಿತು. ದೀನ ಆದ. “ವೀರರೇ, ನೀವು ಯಾರು?” ಎಂದು ನಮ್ರತೆ ಯಿಂದ ಕೇಳಿದ.

ಶುಭಲಕ್ಷಣ ಆದ ಲಕ್ಷ್ಮಣ ಅವನಿಗೆ ಹೇಳಿದ: “ಕಬಂಧ, ಈತ ಇಕ್ಷ್ವಾಕು ವಂಶದ ರಾಮ. ಈತನ ಹೆಸರನ್ನು ಎಲ್ಲರೂ ಕೇಳಿ ಬಲ್ಲರು. ನಾನು ಈತನ ತಮ್ಮ, ಲಕ್ಷ್ಮಣ. ಈತ ದೇವತೆಗಳಿಗೆ ಸಮಾನ. ನಿರ್ಜನ ಅರಣ್ಯದಲ್ಲಿ ವಾಸ ಮಾಡಬೇಕಾಯಿತು. ಈತ ಇಲ್ಲದ ಸಮಯವನ್ನು ನೋಡಿ ಯಾರೋ ರಾಕ್ಷಸ

ಈತನ ಹೆಂಡತಿಯನ್ನು ಕದ್ದು ಒಯ್ದ. ಆಕೆಯನ್ನು ಹುಡುಕುತ್ತ ನಾವು ಇಲ್ಲಿಗೆ ಬಂದೆವು. ನೀನು ಯಾರು ಹೇಳು? ತಲೆ ಕಾಲು ಇಲ್ಲದೆ ಬರೀ ಮುಂಡ ಆಗಿ ಏಕೆ ಇದೀಯೆ? ಈ ಕಾಡಿನಲ್ಲಿ ಏಕೆ? ನಿನ್ನ ಎದೆಯಲ್ಲಿ ಇದೆ ನಿನ್ನ ಬಾಯಿ. ನಿನ್ನ ನಾಲಗೆ ಉರಿಯುತ್ತ ಇದೆ. ಕಾಲು ಇಲ್ಲದೆ ಉರುಳಿಕೊಂಡು ಏಕೆ ತಿರುಗಾಡುತ್ತೀ?" ಲಕ್ಷ್ಮಣ ಕೇಳಿದ.

ಹಿಂದೆ ದೇವೇಂದ್ರ ತನಗೆ ಹೇಳಿದ್ದ ಮಾತು ಕಬಂಧನಿಗೆ ಈಗ ನೆನಪು ಆಯಿತು. ಸಂತೋಷ ಆಯಿತು. ರಾಮಲಕ್ಷ್ಮಣರನ್ನು ಸ್ವಾಗತಿಸಿದ. "ಪುರುಷ ಶ್ರೇಷ್ಠರೆ, ನಿಮಗೆ ಸ್ವಾಗತ. ನನ್ನ ಭಾಗ್ಯದ ಫಲ, ಈಗ ನಿಮ್ಮ ದರ್ಶನ ಆಯಿತು. ನನ್ನ ತೋಳನ್ನು ಕತ್ತರಿಸಿ ನನಗೆ ಬಹಳ ಉಪಕಾರ ಮಾಡಿದಿರಿ. ನನ್ನ ಪರಮಭಾಗ್ಯ ಅದು. ನನಗೆ ಈ ವಿಕಾರ ರೂಪ ಬಂದದ್ದಕ್ಕೆ ನಾನೇ ಕಾರಣ. ನನ್ನ ದುರ್ಮಾರ್ಗದಿಂದ ಅದು ಬಂತು. ಪುರುಷೋತ್ತಮ, ರಾಮ, ವಿವರ ಆಗಿ ಎಲ್ಲವನ್ನೂ ಹೇಳುತ್ತೇನೆ. ಕೇಳಬೇಕು" ಎಂದ.

೩೦

"ಮಹಾಬಾಹು, ಮಹಾಪರಾಕ್ರಮಶಾಲಿ ರಾಮ! ಹಿಂದಿನ ಜನ್ಮದಲ್ಲಿ ನನಗೂ ದಿವ್ಯರೂಪ ಇತ್ತು. ಸೂರ್ಯಚಂದ್ರರ ಹಾಗೆ ದೇವೇಂದ್ರನ ಹಾಗೆ ಹೊಳೆಯುತ್ತ ಇತ್ತು. ನನ್ನ ತೇಜೋವಂತ ರೂಪ ಮೂರು ಲೋಕಗಳಲ್ಲೂ ಖ್ಯಾತಿಪಡೆದು ಇತ್ತು. ಆದರೆ ನಾನು ಈ ಭಯಂಕರ ರೂಪವನ್ನು ಧರಿಸಿ ಕಾಡಿನಲ್ಲಿ ಸುತ್ತುತ್ತ ತಪಸ್ವಿಗಳನ್ನು ಬೆದರಿಸಲು ಆರಂಭಿಸಿದೆ.

"ಒಂದು ದಿನ ಸ್ಥೂಲಶಿರ ಮಹರ್ಷಿ ಕಂದಮೂಲಾದಿಗಳಿಗೆ ಎಂದು ಕಾಡಿನಲ್ಲಿ ತಿರುಗುತ್ತ ಇದ್ದ. ನನ್ನ ಘೋರ ರೂಪದಿಂದ ಆತನನ್ನು ನಾನು ಅಂಜಿಸಿದೆ. ಆತನಿಗೆ ಸಿಟ್ಟುಬಂತು. ಈ ಘೋರ ರೂಪವೇ ನಿನಗೆ ಶಾಶ್ವತ ಆಗಲಿ ಎಂದು ಶಪಿಸಿಬಿಟ್ಟ. ನನಗೆ ಗಾಬರಿ. ನಾನು ಮಾಡಿದ್ದು ತಪ್ಪು. ಈ ಶಾಪಕ್ಕೆ ವಿಮೋಚನೆಯನ್ನು ಅನುಗ್ರಹಿಸಬೇಕು ಎಂದು ಆತನನ್ನು ಬೇಡಿಕೊಂಡೆ. 'ಶ್ರೀರಾಮ ಈ ನಿರ್ಜನ ಅರಣ್ಯಕ್ಕೆ ಬರುತ್ತಾನೆ. ನಿನ್ನ ತೋಳುಗಳನ್ನು ಕಡಿಯುತ್ತಾನೆ. ನಿನ್ನನ್ನು ಸುಡುತ್ತಾನೆ. ಆಗ ನಿನಗೆ ಶಾಪ ವಿಮೋಚನೆ' ಎಂದ ಆತ.

" ಲಕ್ಷ್ಮಣ, ಶ್ರೀರಾಮಪ್ರಭುವೆ, ನನ್ನ ಹೆಸರು ದನು. ಶ್ರೀಯ ಮಗ. ಹಿಂದೆ ದೇವೇಂದ್ರನ ಸಂಗಡ ಹೋರಾಡಿ ಈ ಕಬಂಧರೂಪವನ್ನು ತಂದು ಕೊಂಡೆ. ಬಹಳ ಘೋರ ತಪಸ್ಸುಮಾಡಿ ಬ್ರಹ್ಮದೇವನನ್ನು ಮೆಚ್ಚಿಸಿದೆ ಹಿಂದೆ. ಆತ ಪ್ರಸನ್ನ ಆಗಿ ನನಗೆ ದೀರ್ಘ ಆಯುಸ್ಸನ್ನು ಅನುಗ್ರಹಿಸಿದ. ಅದರಿಂದ ನನಗೆ ಗರ್ವ ಬಂತು. ನನ್ನ ಮುಂದೆ ಈ ದೇವೇಂದ್ರನದು ಏನು ಪರಾಕ್ರಮ ಎಂದು ಅವನನ್ನು ಯುದ್ಧಕ್ಕೆ ಕೆಣಕಿದೆ. ನನ್ನ ಕೊಬ್ಬನ್ನು ನೋಡಿ ದೇವೇಂದ್ರ ನೂರು ಏಣಿನ ತನ್ನ ವಜ್ರಾಯುಧದಿಂದ ನನ್ನನ್ನು ಅಪ್ಪಳಿಸಿದ. ಆ ಪೆಟ್ಟಿಗೆ ನನ್ನ ತಲೆಯೂ ಮೊಣಕಾಲೂ ನನ್ನ ಮೈಯೊಳಗೆ ಹುದುಗಿಹೋದವು.

" ಈ ರೂಪದಿಂದ ಇರಲಾರೆ, ಕೊಲ್ಲು ಎಂದು ದೇವೇಂದ್ರನನ್ನು ಅಂಗ ಲಾಚಿದೆ. ಬ್ರಹ್ಮದೇವನ ಮಾತು ತಪ್ಪುನಂತೆ ಇಲ್ಲ. ಕಾಲು ಇಲ್ಲದೆ ತಿರುಗಾಟ ಇಲ್ಲ. ಬಾಯಿ ಇಲ್ಲದೆ ತಿನ್ನಲು ಸಾಧ್ಯ ಇಲ್ಲ. ಹೇಗೆ ಮಾಡಬೇಕು ಎಂದು ಆತನನ್ನೇ ಪ್ರಾರ್ಥಿಸಿದೆ. ಆಗ ಇಂದ್ರ ನನಗೆ ಈ ಗಾವುದ ಕೈಗಳನ್ನೂ ಹರಿತ ಆದ ಕೋರೆಹಲ್ಲುಗಳ ಸಮೇತ ಹೊಟ್ಟೆಯಲ್ಲೇ ಬಾಯನ್ನೂ ಕೊಟ್ಟ. ಆಮೇಲೆ ನಾನು ಈ ಕಾಡಿಗೆ ಬಂದೆ. ಇಲ್ಲಿ ಹುಲಿ ಸಿಂಹ ಆನೆ ಮುಂತಾದ ಪ್ರಾಣಿಗಳನ್ನು ಸೆಳೆದು ತಿನ್ನುತ್ತಿದ್ದೇನೆ. ' ರಾಮಲಕ್ಷ್ಮಣರು ನಿನ್ನ ತೋಳುಗಳನ್ನು ಕಡಿದಾಗ ನೀನು ಸ್ವರ್ಗಕ್ಕೆ ಬಾ ' ಎಂದು ದೇವೇಂದ್ರನೂ ನನಗೆ ಹೇಳಿದ.

" ರಾಮ, ಈ ರೂಪ ನನಗೆ ಎಂದು ಬಂತೋ ಅಂದಿನಿಂದ ಈ ಕಾಡಿನಲ್ಲಿ ಕಣ್ಣಿಗೆ ಕಂಡದ್ದನ್ನು ಎಲ್ಲವನ್ನೂ ತಿನ್ನುತ್ತ ಇದೇನೆ. ತಿನ್ನಬಹುದು ತಿನ್ನ ಬಾರದು ಎಂಬ ಭೇದ ಇರಲಿಲ್ಲ. ಇಷ್ಟು ಆದರೂ ಈ ದೇಹದ ಪೋಷಣೆ ಕಷ್ಟ ಆಗಿ ಇತ್ತು. ಆದರೆ ಮಹರ್ಷಿ ಹೇಳಿದ ಮಾತು ದೇವೇಂದ್ರ ಹೇಳಿದ ಮಾತು ಇತ್ತಲ್ಲ. ತಪ್ಪದೆ ರಾಮ ಬರುತ್ತಾನೆ, ನನಗೆ ಬಿಡುಗಡೆ ಆಗುತ್ತದೆ ಎಂದು ಸುತ್ತುತ್ತ ಇದ್ದೆ.

" ಇಷ್ಟು ಕಾಲದ ಮೇಲೆ ಬಂದೆ ನೀನು, ರಾಮ. ನನ್ನ ತೋಳುಗಳನ್ನು ಕಡಿಯಲು ಬೇರೆ ಯಾರಿಗೆ ಸಾಧ್ಯ? ನೀನೇ ರಾಮ. ನಿನ್ನಿಂದಲೇ ನನಗೆ ಅಗ್ನಿಸಂಸ್ಕಾರ ಆಗಬೇಕು. ನಾನು ಕೃತಾರ್ಥ ಆಗುತ್ತೇನೆ. ನಿನ್ನಿಂದಲೇ ನನಗೆ ಮೋಕ್ಷ. ಮಹರ್ಷಿಯೂ ದೇವೇಂದ್ರನೂ ಹೀಗೆ ಹೇಳಿದಾರೆ. ನಿಮಗೂ

ಮುಂದಿನ ಉಪಾಯವನ್ನು ಹೇಳುತ್ತೇನೆ ನನ್ನ ಬುದ್ಧಿಗೆ ತೋಚಿದಷ್ಟು. ನಿಮಗೆ ತಕ್ಕ ಒಬ್ಬ ಮಿತ್ರನನ್ನು ತೋರಿಸಿಕೊಡುತ್ತೇನೆ" ಎಂದ ಕಬಂಧ.

ಲಕ್ಷ್ಮಣನಿಗೂ ಕೇಳಿಸುವ ಹಾಗೆ ರಾಮ ಹೇಳಿದ. "ಕಬಂಧ, ನಾನೂ ನನ್ನ ತಮ್ಮ ಲಕ್ಷ್ಮಣನೂ ಹೊರಗೆ ಹೋಗಿ ಇದ್ದೆವು. ನಾವು ಇಲ್ಲದ ಸಮಯ ವನ್ನು ಕಾದು ಇದ್ದ ರಾವಣಾಸುರ ನನ್ನ ಹೆಂಡತಿ ಸೀತೆಯನ್ನು ಎತ್ತಿಕೊಂಡು ಹೋದ ಎಂದು ತಿಳಿಯಿತು. ಆ ರಾಕ್ಷಸ ಯಾರೋ ಎಲ್ಲಿಯವನೋ ಹೇಗೆ ಇದಾನೋ ಅವನ ಬಲ ಎಂಥದೋ ಒಂದೂ ತಿಳಿಯದು. ನಮಗೆ ಈಗ ಬಹಳ ದುಃಖ. ದಿಕ್ಕುಕೆಟ್ಟು ಇದೇವೆ. ಆದರೂ ಪರೋಪಕಾರ ಮಾಡುವುದೇ ನಮಗೆ ಸ್ವಭಾವ. ನಿನಗೆ ಬೇಕು ಆದದ್ದನ್ನು ನಾವು ಮಾಡುತ್ತೇವೆ. ನಮಗೆ ಬೇಕು ಆದದ್ದನ್ನು ನೀನು ಮಾಡು. ನಮ್ಮ ದುಃಸ್ಥಿತಿಯನ್ನು ನೋಡಿ ದಯೆ ತೋರುವುದು ಯುಕ್ತವೇ ಸರಿ.

"ಕಬಂಧ, ಕಾಡಿನಲ್ಲಿ ಆನೆಗಳು ಮುರಿದ ಕಟ್ಟಿಗೆ ಅಲ್ಲಲ್ಲಿ ಬಿದ್ದು ಒಣಗಿ ಇವೆ. ಅವನ್ನು ಆರಿಸಿ ತರುತ್ತೇವೆ. ಒಂದು ಹಳ್ಳ ಮಾಡಿ ಅದರಲ್ಲಿ ನಿನ್ನನ್ನು ಸುಡುತ್ತೇವೆ. ನಿನಗೆ ಸೀತೆಯ ಸುದ್ದಿ ನಿಜ ತಿಳಿದು ಇದ್ದರೆ ಹೇಳು. ಅವಳನ್ನು ಯಾರು ಕದ್ದರೋ, ಎಲ್ಲಿಗೆ ಒಯ್ದರೋ, ರಾವಣಾಸುರನೇಯೋ ಮತ್ತೆ ಯಾರಾದರೂ ಒಯ್ದರೋ ಹೇಳು. ನಮಗೆ ಮಹೋಪಕಾರವನ್ನು ಮಾಡಿದ ಹಾಗೆ ಆಗುತ್ತದೆ" ಎಂದ ರಾಮ.

"ರಾಮ, ನನಗೆ ಈಗ ಇಲ್ಲ ದಿವ್ಯಜ್ಞಾನ. ಸೀತಾದೇವಿಯ ಸುದ್ದಿ ನನಗೆ ಏನೂ ತಿಳಿಯದು. ನನಗೆ ಮೊದಲು ಅಗ್ನಿಸಂಸ್ಕಾರ ಮಾಡಿ. ಆಗ ನನಗೆ ನಿಜರೂಪ ಬರುತ್ತದೆ. ಆಗ ಸೀತಾದೇವಿಯನ್ನು ಕದ್ದು ಒಯ್ದವನನ್ನು ಬಲ್ಲವರ ಸುದ್ದಿ ಹೇಳಬಲ್ಲೆ. ಆದರೆ ನನ್ನನ್ನು ಸುಡುವವರೆಗೆ ನನಗೆ ಯಾವ ಶಕ್ತಿಯೂ ಇಲ್ಲ. ಶಾಪದೋಷದಿಂದ ನನ್ನ ಜ್ಞಾನ ಎಲ್ಲವೂ ಹಾಳು ಆಗಿ ಇದೆ. ಈ ವಿಕಾರರೂಪ ನನಗೆ ಬಂದದ್ದು ನನ್ನ ತಪ್ಪಿನಿಂದಲೇ.

"ಸೂರ್ಯ ಮುಳುಗುವುದರ ಒಳಗೆಯೆ ನನ್ನನ್ನು ಯಥಾವಿಧಿ ಆಗಿ ಸುಟ್ಟುಬಿಡಿ. ಆಗಲೇ ಸೂರ್ಯನ ಕುದುರೆ ಸುತ್ತಿಸುತ್ತಿ ಬಂದು ದಣಿದು ಇವೆ. ನೀನು ನನ್ನನ್ನು ಸುಟ್ಟಮೇಲೆ ಸೀತೆಯ ಅಪಹರಣದ ಸುದ್ದಿಯನ್ನು ಅರಿತವನ ಹೆಸರು ಹೇಳುತ್ತೇನೆ. ಅವನು ನೀತಿವಂತ, ಮಹಾಶೂರ. ಅವನ ಗೆಳೆತನ

ಮಾಡು. ಅವನು ನಿನಗೆ ಸಹಾಯಮಾಡುತ್ತಾನೆ. ಮೂರು ಲೋಕಗಳಲ್ಲೂ ಅವನಿಗೆ ತಿಳಿಯದ ಸ್ಥಳ ಇಲ್ಲ. ಹಿಂದೆ ಒಂದು ಕಾರಣದಿಂದ ಈ ಸಮಸ್ತ ಲೋಕಗಳನ್ನೂ ಸುತ್ತಿಬಂದಿದಾನೆ ಅವನು. ಅವನಿಗೆ ತಿಳಿಯದವರು ಯಾರೂ ಇಲ್ಲ" ಎಂದ.

೩೧

ಬೆಟ್ಟದ ಪಕ್ಕದಲ್ಲಿ ದೊಡ್ಡ ಹಳ್ಳ. ಅಲ್ಲಿಗೆ ಕಬಂಧನ ದೇಹವನ್ನು ಉರುಳಿಸಿದರು ರಾಮಲಕ್ಷ್ಮಣರು. ಚಿತೆ ಮಾಡಿದರು. ಬೆಂಕಿ ಇಟ್ಟರು. ಉರಿಯುವ ಕೊಳ್ಳಿಗಳಿಂದ ಲಕ್ಷ್ಮಣ ಸುತ್ತಲೂ ಉರಿ ಎಬ್ಬಿಸಿದ. ಚಿತೆಯೂ ಚೆನ್ನಾಗಿ ಉರಿಯಿತು ಧಗಧಗ. ಕಬಂಧನ ಕಳೇಬರ ತುಪ್ಪದ ಮುದ್ದೆಯ ಹಾಗೆ ಇತ್ತು. ವಿಶೇಷ ಕೊಬ್ಬು ಸೇರಿದ ಮೈ. ಬೇಗ ಸುಡಲಿಲ್ಲ. ಮೆಲ್ಲಮೆಲ್ಲನೆ ಸುಡುತ್ತ ಇತ್ತು.

ಮಹಾಬಲಿಷ್ಠ ಆದ ಕಬಂಧನ ರಾಕ್ಷಸದೇಹ ಸುಟ್ಟಮೇಲೆ ಸಂತೋಷ ಪಡುತ್ತ ಆ ಚಿತೆಯಿಂದ ಒಂದು ದಿವ್ಯಾಕೃತಿ ಮೇಲೆ ಎದ್ದು ಬಂತು. ಹೊಗೆ ಇಲ್ಲದ ಬೆಂಕಿಯ ಹಾಗೆ ಧಗಧಗಿಸುತ್ತ ಇತ್ತು ಆ ವ್ಯಕ್ತಿ. ಶುಭ್ರವಸ್ತ್ರ, ದಿವ್ಯ ಮಾಲಿಕೆ, ಸಮಸ್ತ ಆಭರಣ. ದಿವ್ಯತೇಜಸ್ಸಿನಿಂದ ನಗೆಮೊಗದಿಂದ ಕಬಂಧ ಬಂದು ನಿಂತ. ಅವನಿಗೋಸ್ಕರ ಆಗ ಒಂದು ವಿಮಾನ ಬಂತು ಅಲ್ಲಿಗೆ. ಅದಕ್ಕೆ ಸುತ್ತಲೂ ಹಂಸಪಕ್ಷಿಗಳ ಅಲಂಕಾರ. ಅದರ ಪ್ರಭೆ ಸುತ್ತಲೂ ಹರಡಿತು. ದಿವ್ಯದೇಹಿ ಕಬಂಧ ವಿಮಾನವನ್ನು ಅಡರಿದ. ಕೂಡಲೇ ವಿಮಾನ ಆಕಾಶಕ್ಕೆ ಹಾರಿತು.

ಆಕಾಶದಿಂದಲೇ ಕಬಂಧ ರಾಮನಿಗೆ ಹೇಳಿದ: "ರಾಮ, ಸೀತಾದೇವಿ ಸಿಗುವ ಉಪಾಯ ಹೇಳುತ್ತೇನೆ ನಿನಗೆ. ಕೇಳು. ನಾನು ಹೇಳುವುದು ನಿಜ. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯ ಎಂಬ ಆರು ಉಪಾಯ ಇವೆ ಕಾರ್ಯಸಿದ್ಧಿಗೆ. ರಾಜರು ತಮ್ಮ ಕೆಲಸಗಳನ್ನು ಸಾಧಿಸುವುದು ಈ ಉಪಾಯಗಳಿಂದಲೇ. ದುರವಸ್ಥೆಯಲ್ಲಿ ಇರುವವನು ತನ್ನಂತೆಯೇ ದುರವಸ್ಥೆಯಲ್ಲಿ ಇರುವವರ ಮೂಲಕವೇ ತನ್ನ ಕೆಲಸವನ್ನು ಸಾಧಿಸಿಕೊಳ್ಳಬೇಕು.

"ನಿನ್ನ ಹೆಂಡತಿಯನ್ನು ಯಾರೋ ಕದ್ದುದರಿಂದ ನಿನಗೆ ದುರವಸ್ಥೆ, ರಾಮ. ನಿನ್ನ ಜೊತೆಯಲ್ಲಿ ಲಕ್ಷ್ಮಣನಿಗೂ ದುರವಸ್ಥೆ. ಇಬ್ಬರಿಗೂ ಹೀನದೆಸೆ. ನಿಮ್ಮ ಹಾಗೆಯೇ ಕಷ್ಟದಲ್ಲಿ ಇರುವವರ ಸಂಗಡ ನೀವು ಸ್ನೇಹಮಾಡಬೇಕು. ಇಲ್ಲದೆ ಇದ್ದರೆ ನಿಮ್ಮ ಕೆಲಸ ಕೈಗೂಡದು. ನಾನು ಹೇಳುವವನ ಸಂಗಡ ಸ್ನೇಹ ಮಾಡಿಕೊಂಡರೆ ನಿಮ್ಮ ಕೆಲಸ ಕೈಗೂಡುತ್ತದೆ.

"ರಾಮ, ಸುಗ್ರೀವ ಎಂಬ ವಾನರ ಇದಾನೆ. ಅವನ ಸ್ನೇಹ ಮಾಡು ನೀನು. ಅವನ ಅಣ್ಣ ವಾಲಿ ದೇವೇಂದ್ರನ ಮಗ. ವಾಲಿಗೆ ತಮ್ಮನ ಮೇಲೆ ಸಿಟ್ಟುಬಂದು ಅವನನ್ನು ರಾಜ್ಯದಿಂದ ಓಡಿಸಿಬಿಟ್ಟಿದಾನೆ. ಮಹಾಬಲಾಢ್ಯ ಆ ಸುಗ್ರೀವ. ಈಗ ಪಂಪಾಸರೋವರದ ಬಳಿ ಋಷ್ಯಮೂಕ ಪರ್ವತದಲ್ಲಿ ಇದಾನೆ. ಅವನ ಜೊತೆಯಲ್ಲಿ ನಾಲ್ವರು ವಾನರಶ್ರೇಷ್ಠರಿದಾರೆ. ವಾನರೇಂದ್ರ ಸುಗ್ರೀವ ಬಹಳ ವೀರ್ಯವಂತ. ಮಹಾತೇಜಸ್ವಿ. ವಿನಯಸಂಪನ್ನ. ಧೀರ, ಮತಿವಂತ, ದಕ್ಷ. ಮಾತಿಗೆ ತಪ್ಪುವವನು ಅಲ್ಲ. ಪೂಜ್ಯ. ಯಾವ ಕಾರ್ಯವನ್ನು ಆದರೂ ಸಾಧಿಸಬಲ್ಲ. ರಾಜ್ಯದ ನಿಮಿತ್ತ ತಮ್ಮನನ್ನು ಓಡಿಸಿದಾನೆ ಅಣ್ಣ.

"ಆ ಸುಗ್ರೀವ ನಿನಗೆ ಗೆಳೆಯ ಆಗುತ್ತಾನೆ. ಸೀತೆಯನ್ನು ಹುಡುಕಲು ನಿನಗೆ ನೆರವು ಆಗುತ್ತಾನೆ. ನಿನಗೆ ಮೇಲನ್ನು ಮಾಡುತ್ತಾನೆ. ಇನ್ನು ನೀನು ದುಃಖವನ್ನು ಬಿಡು. ಚಿಂತಿಸಬೇಡ. ಇಕ್ಷ್ವಾಕು ಕುಲೋತ್ತಮ, ನಿನಗೆ ತಿಳಿಯದುದು ಯಾವುದು? ಕಾಲಗತಿಯನ್ನು ಮೀರಬಲ್ಲವರು ಯಾರು? ಯಾವ ಕಾಲಕ್ಕೆ ಏನು ಆಗಬೇಕೋ ಹೇಗೆ ಆಗಬೇಕೋ ಆಗಿ ತೀರುತ್ತದೆ. ಅದನ್ನು ತಡೆಯಲು ಆಗದು. ಕಾಲವನ್ನು ಮೀರಿದವರು ಯಾರೂ ಇಲ್ಲ.

"ಈಗಲೇ ಹೊರಡು. ಆ ಸುಗ್ರೀವನ ಬಳಿಗೆ ಹೋಗು. ಅವನ ಗೆಳೆತನ ಮಾಡು. ಪರಸ್ಪರ ದ್ರೋಹಮಾಡದಂತೆ ಇಬ್ಬರೂ ಅಗ್ನಿಸಾಕ್ಷಿ ಶಪಥಮಾಡಿ ಸ್ನೇಹ ಬೆಳೆಸಿರಿ. ಸುಗ್ರೀವ ವಾನರರಾಜ. ಇತರರು ಮಾಡಿದ ಉಪಕಾರ ವನ್ನು ಮರೆಯದ ಮನುಷ್ಯ ಅವನು. ಕಾಮರೂಪ. ಶೂರ. ಅವನಿಗೂ ಈಗ ನೆರವು ಬೇಕು. ಆ ಸುಗ್ರೀವ ಬಯಸುವ ಕೆಲಸವನ್ನು ನೀವು ಮಾಡಬಲ್ಲಿರಿ. ಅವನ ಕೆಲಸ ಆಗಲಿ ಬಿಡಲಿ ನಿಮಗಂತೂ ಅವನು ಸಹಾಯ ಮಾಡುತ್ತಾನೆ.

"ಸುಗ್ರೀವ ಸಾಕ್ಷಾತ್ ಸೂರ್ಯನ ವರಪುತ್ರ. ಋಕ್ಷರಾಜನ ಮಗ. ವಾಲಿಗೂ ಅವನಿಗೂ ಹಗೆ ಬೆಳೆದು ಅಣ್ಣನಿಗೆ ಬೆದರಿ ಈಗ ಪಂಪಾಸರೋವರ

ಪ್ರಾಂತದಲ್ಲಿ ವಾಸ ಆಗಿ ಇದಾನೆ. ಈಗಲೇ ಅವನ ಬಳಿಗೆ ಹೋಗಿ. ಯಜ್ಞೇಶ್ವರನ ಇದಿರಿಗೆ ಆಯುಧಸಾಕ್ಷಿ ಆಗಿ ಅವನ ಸ್ನೇಹ ಮಾಡಿಕೊಳ್ಳಿ. ರಾಮ, ಆ ಸುಗ್ರೀವನಿಗೆ ತಿಳಿಯದ ಸ್ಥಳ ಇಲ್ಲ. ರಾಕ್ಷಸರು ಎಲ್ಲೆಲ್ಲಿಇದಾರೋ ಅವನು ಬಲ್ಲ. ಸಾವಿರ ಕದಿರ ಸೂರ್ಯನ ಬೆಳಕು ಎಲ್ಲೆಲ್ಲಿ ಬೀಳುತ್ತದೋ ಈ ಲೋಕದಲ್ಲಿ ಅದನ್ನು ಎಲ್ಲವನ್ನೂ ಬಲ್ಲ ಅವನು. ಅವನು ಸೀತಾದೇವಿಯನ್ನು ಹುಡುಕಲು ಹೊರಟರೆ ಅವನ ವಾನರರು ಎಲ್ಲರೂ ಹೊರಡುತ್ತಾರೆ. ವಿಶಾಲ ಪರ್ವತಪಙ್ಕ್ತಿ, ದುರ್ಗಮ ಅರಣ್ಯ, ಮಹಾನದಿಗಳು, ಗಿರಿಗುಹೆಗಳು, ಎಲ್ಲ ಎಡೆಗಳಲ್ಲೂ ಹುಡುಕಿ ಬರುತ್ತಾರೆ. ಸೀತಾದೇವಿ ಇರುವ ಸ್ಥಳವನ್ನು ಕಂಡು ಹಿಡಿಯುತ್ತಾರೆ. ರಾಮ, ಆ ವಾನರರು ಬೃಹತ್ಶರೀರಿಗಳು. ಎಲ್ಲಾ ದಿಕ್ಕುಗಳಲ್ಲಿಯೂ ಹುಡುಕಿಬರುತ್ತಾರೆ.

"ರಘುರಾಮ, ನಿನ್ನನ್ನು ಅಗಲಿ ಸೀತಾದೇವಿ ಕೊರಗುತ್ತ ಇರುತ್ತಾಳೆ. ಏನೂ ಕಳಂಕ ಇಲ್ಲದ ಆ ಪತಿವ್ರತೆ ರಾವಣನ ಮನೆಯಲ್ಲಿ ಇದ್ದರೆ ತಿಳಿದುಕೊಂಡು ಬರುತ್ತಾರೆ ವಾನರರು. ಎಲ್ಲಿಯೋ ಇರಲಿ, ಮೇರು ಪರ್ವತದ ಕೋಡುಗಲ್ಲಿನ ಮೇಲೆ ಇರಲಿ, ಪಾತಾಳದಲ್ಲೇ ಇರಲಿ, ಹುಡುಕಿಕೊಂಡು ಬರುತ್ತಾರೆ. ಎಷ್ಟು ಜನ ರಾಕ್ಷಸರು ಅಡ್ಡಗಟ್ಟಿದರೂ ಅವರನ್ನು ಎಲ್ಲರನ್ನೂ ಕೊಂದು ಆ ವಾನರೇಂದ್ರ ಸೀತೆಯನ್ನು ತಂದು ನಿನಗೆ ಒಪ್ಪಿಸುತ್ತಾನೆ. ಖಂಡಿತ" ಎಂದು ಹೇಳಿದ ದಿವ್ಯರೂಪಧಾರಿ ಕಬಂಧ.

೩೨

ಸೀತೆಯನ್ನು ಪಡೆಯುವ ಉಪಾಯವನ್ನು ತಿಳಿಸಿದ ಕಾರ್ಯಸಾಧನಾ ಕುಶಲ ಕಬಂಧ. ಇನ್ನೂ ಹೇಳಿದ. "ರಾಮ, ಇಲ್ಲಿಂದ ಪಶ್ಚಿಮ ದಿಕ್ಕಿಗೆ ಹೋಗಬೇಕು. ನೇರಳೆ ಹಲಸು ಆಲ ನಾಗಕೇಸರಿ ಅರಳಿ ಕರ್ಣಿಕಾರ ತಿಲಕ ನಕ್ತಮಾಲ ಮಾವು ಅಸುಗೆ ಕಡವು ಮರಗಿಡಗಳ ಗುಂಪು ಇದೆ. ಕಣಿಗಿಲೆ ರಕ್ತಚಂದನ ಅಶೋಕ ಕದಂಬ ಕರವೀರ ಮಂದಾರ ಎಲ್ಲವೂ ಹೂತು ಇವೆ. ಆ ಗಿಡಗಳ ಪಕ್ಕದಲ್ಲೇ ಹೋಗಬೇಕು. ಮರಗಳು ಅಡ್ಡ ಬೆಳೆದು ಇದ್ದರೆ ಏರಿ ಮುಂದೆ ಸಾಗಿರಿ. ಅಥವಾ ಕಡಿದುಹಾಕಿ ಮುಂದೆ ಸಾಗಿ. ಆ ಹಣ್ಣುಗಳು ಅಮೃತದ ಹಾಗೆ ರುಚಿ. ಅವನ್ನು ತಿಂದು ಸಾಗಿರಿ.

" ಈ ತೋಪನ್ನು ದಾಟಿದರೆ ಇನ್ನೊಂದು ಮನೋಹರ ವನ ಸಿಗುತ್ತದೆ. ಉತ್ತರ ಕುರುದೇಶದ ಹಾಗೆ ನಂದನವನದ ಹಾಗೆ ಇದೆ ಆ ವನ. ಅಲ್ಲಿ ಯಾವಾಗಲೂ ಜೇನುತೊಟ್ಟು ಇಡುತ್ತವೆ ಹಣ್ಣುಗಳು. ಎಲ್ಲಾ ಕಾಲಗಳಲ್ಲೂ ಹೂ ಹಣ್ಣು ಬಿಡುತ್ತವೆ ಆ ಮರಗಳು. ಋತುಭೇದವೇ ಇಲ್ಲ. ಕುಬೇರನ ಚೈತ್ರರಥವನ ಇದ್ದಂತೆ. ಒಂದೊಂದು ಮರದ ರೆಂಬೆಗಳೂ ದೂರದೂರದವರೆಗೆ ಚಾಚಿವೆ. ಹಣ್ಣು ತುಂಬಿ ಆ ರೆಂಬೆಗಳು ಹಣ್ಣಿನ ಭಾರಕ್ಕೆ ನೆಲಕ್ಕೆ ಬಾಗಿ ಇವೆ. ಆ ಮರಗಳು ಬೆಟ್ಟಗಳ ಹಾಗೆ ಇವೆ. ನೆಲಕ್ಕೆ ಇಳಿದ ಮೋಡಗಳ ಹಾಗೆ ಇವೆ. ಅಲ್ಲಿಯೂ ಅಷ್ಟೇ. ಮರಗಳನ್ನು ಹತ್ತಬೇಕು ಇಲ್ಲವೆ ಕಡಿದು ಉರುಳಿಸಬೇಕು. ಅಲ್ಲಿನ ಹಣ್ಣುಗಳೂ ಅಮೃತೋಪಮ. ಲಕ್ಷ್ಮಣ ಹಣ್ಣು ತಂದುಕೊಡುತ್ತಾನೆ. ತಿಂದು ನೀವು ಮುಂದಕ್ಕೆ ಸಾಗಿ ಹೋಗಿ.

" ಹಾಗೆಯೇ ಮುಂದೆ ಸಾಗಿ. ಬೆಟ್ಟದಿಂದ ಬೆಟ್ಟಕ್ಕೆ ಕಾಡಿನಿಂದ ಕಾಡಿಗೆ ಮುಂದೆ ಸಾಗಿದರೆ ಅಲ್ಲೇ ಪಂಪಾಸರೋವರ. ಬಹಳ ರಮಣೀಯ ಸ್ಥಳ. ಮಣ್ಣು ಇಲ್ಲ ನೊರಜುಕಲ್ಲು ಇಲ್ಲ ಅಲ್ಲಿ. ಕಾಲಿಗೆ ಏನೂ ಚುಚ್ಚಿಕೊಳ್ಳದು. ಕಾಲು ಜಾರದು ಸ್ನಾನಘಟ್ಟಗಳಲ್ಲಿ. ಪಾಚಿ ಇದ್ದರೆ ತಾನೆ? ಸ್ವಚ್ಛ ಮರಳಿನ ಮೇಲೆ ಹರಿಯುತ್ತದೆ ನೀರು. ಯಥೇಚ್ಛ ಕಮಲ ನೀಲೋತ್ಪಲ ಅರಳಿ ಇವೆ. ಹಂಸ ಕಾರಂಡವ ಕ್ರೌಂಚ ಕುರವಕಪಕ್ಷಿಗಳು ಇಂಪಾಗಿ ಹಾಡುತ್ತ ಇರುತ್ತವೆ. ಅಲ್ಲಿ ಆ ಹಕ್ಕಿಗಳನ್ನು ಯಾವ ಮನುಷ್ಯನೂ ಕೊಂದದ್ದು ಇಲ್ಲ. ಆದ್ದರಿಂದ ಅವಕ್ಕೆ ಮನುಷ್ಯರು ಎಂದರೆ ಭಯ ಇಲ್ಲ. ಬೆಣ್ಣೆಯ ಮುದ್ದೆಯ ಹಾಗೆ ಬೆಳೆದು ಇವೆ. ಅವನ್ನು ಕೊಂದು ತಿನ್ನಬಹುದು ನೀವು.

" ರಾಮ, ಪಂಪಾಸರೋವರದಲ್ಲಿ ಅತ್ಯುತ್ತಮ ಮೀನು ಇವೆ. ಗಂಡು ಮೀನು, ವಕ್ರತುಂಡ, ನಡಮೀನು ಇವೆ. ಅವಕ್ಕೆ ಚರ್ಮ ಇಲ್ಲ, ರೆಕ್ಕೆ ಇಲ್ಲ. ಮೈಮೇಲೆ ಮುಳ್ಳೂ ಅಷ್ಟು ಇಲ್ಲ. ಮಾಂಸ ತುಂಬ ಚೆನ್ನಾಗಿ ಬಲಿತು ಇವೆ. ಇದುವರೆಗೆ ಗಾಳಕ್ಕೆ ಸಿಕ್ಕಿ ಇಲ್ಲ. ಲಕ್ಷ್ಮಣ ಆ ಮೀನುಗಳನ್ನು ಕೊಂದು ತಂದು ಅಟ್ಟಿಕೊಡುತ್ತಾನೆ. ಕಬ್ಬಿಣದ ಕಂಬಿಗೆ ಚುಚ್ಚಿ ಸುಟ್ಟುಕೊಡುತ್ತಾನೆ. ನೀವು ಇಬ್ಬರೂ ತಿನ್ನಿ.

" ಪುರುಷೋತ್ತಮ, ಪಂಪಾಸರೋವರದ ನೀರು ಬಲು ತಿಳಿ. ಕಮಲದ ಸುವಾಸನೆ ಬರುತ್ತದೆ. ಸುಖಶೀತಲ. ಸ್ಫಟಿಕದಂತೆ ಸ್ವಚ್ಛ ಆ ನೀರು. ಬಹಳ

ಆರೋಗ್ಯಕರ. ತಾವರೆ ಎಲೆಯ ದೊನ್ನೆಯಲ್ಲಿ ನೀರನ್ನು ತಂದುಕೊಡುತ್ತಾನೆ ಲಕ್ಷ್ಮಣ. ಪಂಪಾಸರೋವರದಲ್ಲಿ ನೀರು ಕುಡಿಯಲು ಗೂಳಿಗಳ ಹಾಗೆ ಗುಟರು ಹಾಕುತ್ತ ಬರುತ್ತವೆ ಕಾಡುಹಂದಿಗಳು. ಬೆಟ್ಟದ ಗವಿಗಳಲ್ಲಿ ವಾಸ. ಸುತ್ತಣ ಕಾಡಿನಲ್ಲಿ ತಿರುಗಾಟ. ಕೊಬ್ಬಿ ಬಲಿಷ್ಠ ಆಗಿವೆ. ಅಂದ ಆಗಿ ಇವೆ ಆ ಹಂದಿಗಳು.

"ರಾಮ, ಪಂಪಾತೀರದಲ್ಲಿ ಇರುವ ಹೂಗಿಡಗಳ ತುಂಬಾ ಅರಳಿದ ಹೂ. ತಲೆಯಲ್ಲಿ ಹೂವಿನ ಸರಗಳನ್ನು ಮುಡಿದ ಸುಂದರಿಯರಂತೆ ಕಾಣುತ್ತವೆ. ಆ ಹೂಗಿಡಗಳನ್ನು ನೋಡುತ್ತ ಪಂಪಾಸರೋವರದ ನೀರಿನ ತಂಪನ್ನು ಅನುಭವಿಸುತ್ತ ಸಂಜೆಹೊತ್ತು ಅಲ್ಲಿ ತಿರುಗಾಡಿದರೆ ನಿನ್ನ ದುಃಖ ಮರೆಯುತ್ತದೆ. ರಾಮಚಂದ್ರ, ಬಿರಿದ ಹೂಗಳ ಹೊಂಗೆ ಮರ, ತಿಲಕವೃಕ್ಷಗಳನ್ನೂ ಪೂರಾ ಅರಳಿದ ತಾವರೆ ನೈದಿಲೆ ಹೂಗಳನ್ನೂ ನೋಡುತ್ತ ನಿನ್ನ ದುಃಖವನ್ನು ಮರೆಯುತ್ತೀಯೆ. ಅಲ್ಲಿ ಹೂ ಬಾಡುವುದೂ ಇಲ್ಲ, ಕೆಳಕ್ಕೆ ಉದುರುವುದೂ ಇಲ್ಲ. ಯಾವಾಗಲೂ ಹೊಚ್ಚಹೊಸ ಹೂ ಇದ್ದಂತೆಯೇ ಇರುತ್ತವೆ. ಅಲ್ಲಿ ಹೂ ಮುಡಿಯುವವರೇ ಇಲ್ಲ.

"ರಘುರಾಮ, ಹಿಂದೆ ಅಲ್ಲಿ ಮತಂಗ ಮಹಾಮುನಿಗಳ ಶಿಷ್ಯರು ವಾಸ ಮಾಡುತ್ತಿದ್ದರು. ಆ ತಪಸ್ವಿಗಳು ಗುರುಗಳಿಗಾಗಿ ಕಾಡಿನಿಂದ ಕಂದಮೂಲ ಗಳನ್ನು ಆರಿಸಿಕೊಂಡು ತರುತ್ತ ಇದ್ದರು ದಿನವೂ. ಕಂದಮೂಲಗಳ ಭಾರಕ್ಕೆ ಅವರ ಮೈ ಬೆವರಿ ಬೆವರಿನ ಹನಿ ನೆಲದ ಮೇಲೆ ಬಿದ್ದು ಆ ಗಿಡಗಳಲ್ಲಿ ಹೂ ಆದವು. ಆ ಹೂಗಳು ಎಂದಿಗೂ ಬಾಡದೆ ಇರುವುದು ಅವರ ತಪೋಮಹಿಮೆ. ಮತಂಗ ಮಹರ್ಷಿಯ ಶಿಷ್ಯರು ಎಲ್ಲರೂ ಸ್ವರ್ಗಸ್ಥರು ಈಗ. ಅವರ ಪರಿಚಾರಿಕೆ ಯರಲ್ಲಿ ಒಬ್ಬಳು ಶಬರಿ. ಚಿರಂಜೀವಿನಿ, ಸನ್ಯಾಸಿನಿ. ಈಗಲೂ ಅಲ್ಲೇ ಇದ್ದಾಳೆ.

"ಆ ಶಬರಿಯ ಗುರುಶುಶ್ರೂಷಾಧರ್ಮನಿಷ್ಠೆಗೆ ಯಾವಾಗಲೂ ಚ್ಯುತಿ ಇಲ್ಲ. ಅವಳು ನಿನಗಾಗಿಯೇ ಕಾದು ಇದ್ದಾಳೆ, ರಾಮ. ನೀನು ದೇವಸಮಾನ. ಸಮಸ್ತಪ್ರಾಣಿನಮಸ್ಕೃತ. ನಿನ್ನ ದರ್ಶನಮಾಡಿಕೊಂಡು ಸ್ವರ್ಗಕ್ಕೆ ಹೋಗ ಬೇಕು ಎಂದು ಕಾದು ಇದ್ದಾಳೆ. ಅವಳ ಆಶ್ರಮ ಕಣ್ಣಿಗೆ ಕಾಣದು. ಏಕಾಂತ ಸ್ಥಳದಲ್ಲಿ ಇದೆ. ಸರ್ವೋತ್ತಮ ಆ ಶಬರಿಯ ಆಶ್ರಮ. ಆಶ್ರಮದ ಸುತ್ತಲೂ ಆ ಋಷ್ಯಮೂಕ ಪರ್ವತದಲ್ಲಿಯೂ ಬಗೆಬಗೆಯ ಆನೆ ಇವೆ. ಅಷ್ಟು ಆನೆ

ಇದ್ದರೂ ಆಶ್ರಮದ ಒಳಗೆ ಕಾಲು ಇಡಲಾರವು. ಮತಂಗ ಮಹರ್ಷಿಗಳ ಆಶ್ರಮ ಅಲ್ಲವೆ? ಬಗೆಬಗೆಯ ಪಕ್ಷಿಸಮೂಹದ ಮಧುರಗಾನ ಕೇಳಿಸುತ್ತದೆ ಅಲ್ಲಿ. ದೇವೋದ್ಯಾನಗಳಿಗೆ ಸಮಾನ ಆ ವನ. ಆ ವನಕ್ಕೆ ಹೋದರೆ ನಿನ್ನ ದುಃಖ ಎಲ್ಲವೂ ಅಳಿಯುತ್ತದೆ. ಹಾಯಾಗಿ ಇರುತ್ತದೆ.

"ಪಂಪಾಸರೋವರದ ಇದಿರಿಗೇ ಇದೆ ಋಷ್ಯಮೂಕ ಪರ್ವತ. ಅಲ್ಲಿ ಯಾವಾಗಲೂ ಹೂ ಅರಳಿ ಇರುತ್ತವೆ. ಯಾವಾಗಲೂ ಮರಿ ಆನೆಗಳು ಕಾವಲು ಕಾಯುತ್ತವೆ. ಆ ಬೆಟ್ಟವನ್ನು ಹತ್ತುವುದು ಕಷ್ಟ. ಬಹಳ ಪ್ರಶಸ್ತ ಆದ ಆ ಬೆಟ್ಟ ಬ್ರಹ್ಮದೇವ ನಿರ್ಮಿಸಿದ್ದು. ಆ ಬೆಟ್ಟದಲ್ಲಿ ಮಲಗಿದಾಗ ಹಣ ಸಿಕ್ಕಂತೆ ಕನಸು ಕಂಡರೆ ಎಚ್ಚರಗೊಂಡಾಗ ಹಣ ಸಿಕ್ಕೇ ಸಿಗುತ್ತದೆ. ಪಾಪಾತ್ಮ, ದುರಾಚಾರಿ ಆ ಬೆಟ್ಟವನ್ನು ಹತ್ತಲಾರ. ಒಂದುವೇಳೆ ಹತ್ತಿದ. ಅವನು ಮಲಗಿದ್ದಾಗ ರಾಕ್ಷಸರು ಅವನನ್ನು ಕೊಂದುಹಾಕುತ್ತಾರೆ.

"ಪಂಪಾಸರೋವರಕ್ಕೆ ಆಟ ಆಡಲು ಬರುವ ಮತಂಗಾಶ್ರಮದ ಮರಿ ಆನೆಗಳು ಘೀಂಕಾರ ಮಾಡಿದರೆ ಋಷ್ಯಮೂಕಪರ್ವತಕ್ಕೆ ಕೇಳಿಸುತ್ತದೆ. ನೀಲ ಮೇಘದಂಥ ಸಲಗಗಳು ಪರಸ್ಪರ ಹೋರಾಡಿ ಮೈ ಎಲ್ಲಾ ನೆತ್ತರು ಸೋರುವಂತೆ ಗಾಯ ಮಾಡಿಕೊಳ್ಳುತ್ತವೆ. ಗಾಯ ಮಾಡಿಕೊಂಡು ಬೇರೆ ಬೇರೆ ಆಗಿ ಪಂಪಾಸರೋವರದ ತೀರದಲ್ಲಿ ಆ ಆನೆಗಳು ತಿರುಗಾಡುತ್ತ ಇರುವುದು ಋಷ್ಯ ಮೂಕಕ್ಕೆ ಕಾಣಬರುತ್ತದೆ. ಅಲ್ಲಿನ ಅಡವಿಗಳಲ್ಲಿ ಇರುವ ಆನೆಗಳು ಎಲ್ಲವೂ ಪಂಪಾಸರೋವರದ ನಿರ್ಮಲ ಆರೋಗ್ಯಪ್ರದ ಶೀತಲ ಜಲದ ಆಸೆಗೆ ಅಲ್ಲಿಗೆ ಬಂದು ನೀರು ಕುಡಿದು ಸಂತೋಷದಿಂದ ಹೋಗುತ್ತವೆ. ರಾಮಚಂದ್ರ, ಅಲ್ಲಿ ತಿರುಗುವ, ನೀಲಮಣಿಯಂತೆ ಹೊಳೆಯುವ ಕರೀ ಜಿಂಕೆಗಳನ್ನೂ ಹುಲಿ ಕರಡಿ ಗಳನ್ನೂ ನೋಡಿದರೆ ನಿನ್ನ ವ್ಯಸನವನ್ನು ತೊರೆಯುತ್ತೀಯೆ.

"ರಾಮ, ಆ ಬೆಟ್ಟದ ಮೇಲೆ ಒಂದು ದೊಡ್ಡ ಗುಹೆ ಇದೆ. ಅದರ ಬಾಗಿಲಿಗೆ ಒಂದು ದೊಡ್ಡ ಬಂಡೆ ಮುಚ್ಚಿ ಇದೆ. ಆ ಗುಹೆಯ ಒಳಕ್ಕೆ ಹೋಗುವುದು ಬಹಳ ಕಷ್ಟ. ಆ ಗುಹೆಯ ಮೂಡಣ ಬಾಗಿಲಿಗೆ ಇದಿರು ಆಗಿ ಸ್ವಚ್ಛ ಶೀತಲ ಜಲದ ಒಂದು ಮಡುವು ಇದೆ. ಅದರ ತೀರದಲ್ಲಿ ಸಮೃದ್ಧ ಆಗಿ ಬೆಳೆದ ನಾನಾಬಗೆಯ ಹಣ್ಣಿನ ಗಿಡ ಇವೆ. ನಾನಾ ಮೃಗಗಳು ಅಲ್ಲಿ ತಿರುಗುತ್ತ ಇರುತ್ತವೆ. ಅದರ ಪಕ್ಕದ ಗುಹೆ ಒಂದರಲ್ಲಿ ಸುಗ್ರೀವ ವಾಸಮಾಡುತ್ತಾನೆ.

ಅವನ ನಾಲ್ವರು ಮಾನರ ಗೆಳೆಯರೂ ಅಲ್ಲೇ ಇದಾರೆ. ಆಗಾಗ ಅವರು ಆ ಬೆಟ್ಟದ ಕೋಡುಗಲ್ಲಿನ ಮೇಲೆ ಕೂತಿರುತ್ತಾರೆ. ನೀವು ಹೋಗಿ ಅವನನ್ನು ನೋಡಿ" ಎಂದ. ಕಬಂಧನ ಕತ್ತಿನಲ್ಲಿ ಈಗ ದಿವ್ಯಪುಷ್ಪಮಾಲಿಕೆ. ದಿವ್ಯ ರೂಪದಿಂದ ಸೂರ್ಯನ ಹಾಗೆ ಬೆಳಗುತ್ತ ಇದ್ದ ಆಕಾಶದಲ್ಲಿ.

ಅಂತರಿಕ್ಷದಲ್ಲಿ ಹೊಳೆಹೊಳೆಯುತ್ತ ನಿಂತ ಕಬಂಧನನ್ನು ನೋಡಿದರು ರಾಮಲಕ್ಷ್ಮಣರು. "ಕಬಂಧ, ಇನ್ನು ನೀನು ಹೋಗು" ಎಂದರು. "ಅಣ್ಣ ತಮ್ಮಂದಿರೆ, ನಿಮ್ಮ ಕಾರ್ಯ ಸಿದ್ಧಿ ಆಗುತ್ತದೆ. ನೀವೂ ಈಗಲೇ ಹೊರಡಿ" ಎಂದ ಕಬಂಧ. ದಿವ್ಯರೂಪ ತಳೆದು ಸೂರ್ಯನಂತೆ ಹೊಳೆಯುತ್ತ ಆಕಾಶಮಾರ್ಗದಲ್ಲಿ ಹೋಗುತ್ತ ರಾಮಲಕ್ಷ್ಮಣರಿಗೆ ಋಷ್ಯಮೂಕಪರ್ವತದ ದಾರಿಯನ್ನು ತೋರುತ್ತ ಇದ್ದಂತೆ ಇತ್ತು ಕಬಂಧ. ಸ್ವಲ್ಪ ದೂರ ಹೋಗಿ ಮರಳಿ ನೋಡಿ "ರಾಮ, ನೀನು ತಪ್ಪದೆ ಅಲ್ಲಿಗೆ ಹೋಗಿ ಸುಗ್ರೀವನ ಸಖ್ಯ ಮಾಡು" ಎಂದ.

೩೩

ಪಡುವಣ ದಿಕ್ಕಿಗೆ ಕಬಂಧ ಹೇಳಿದ ದಾರಿಯಲ್ಲಿ ಹೊರಟರು ರಾಮ ಲಕ್ಷ್ಮಣರು ಪಂಪಾಸರೋವರಕ್ಕೆ. ಅಲ್ಲಲ್ಲಿ ಜೇನುತೊಟ್ಟು ಇಡುವ ಹಣ್ಣು ಗಳನ್ನು ತಿನ್ನುತ್ತ ಗುಡ್ಡಬೆಟ್ಟಗಳನ್ನು ದಾಟಿದರು. ಸುಗ್ರೀವನನ್ನು ನೋಡುವ ಕುತೂಹಲ. ಬೇಗ ಬೇಗ ನಡೆದು ಪಂಪಾಸರೋವರದ ಪಶ್ಚಿಮ ತೀರಕ್ಕೆ ಬಂದರು.

ರಮಣೀಯ ಆಶ್ರಮ ಕಾಣಬಂತು. ಆಶ್ರಮದ ಸುತ್ತ ಅನೇಕ ಗಿಡ ಮರ. ಆಶ್ರಮದ ಸೊಂಪನ್ನು ನೋಡುತ್ತ ಶಬರಿಯ ಬಳಿಗೆ ಹೋದರು. ರಾಮಲಕ್ಷ್ಮಣರು ಆಶ್ರಮಕ್ಕೆ ಬಂದುದನ್ನು ಯೋಗಸಿದ್ಧೆ ಆದ ಶಬರಿ ಕಂಡಳು. ಧಿಗ್ಗನೆ ಎದ್ದು ನಿಂತು ಕೈಮುಗಿದು ರಾಮನ ಪಾದಗಳನ್ನು ಮುಟ್ಟಿ ನಮಸ್ಕರಿಸಿ ದಳು. ಲಕ್ಷ್ಮಣನಿಗೂ ನಮಸ್ಕಾರ ಮಾಡಿದಳು. ಅವರಿಗೆ ಅರ್ಘ್ಯಪಾದ್ಯ ಆಚಮನೀಯಗಳನ್ನು ಕೊಟ್ಟಳು. ವ್ರತನಿಷ್ಠಳು ಸನ್ಯಾಸಿನಿ ಆದ ಶಬರಿಯನ್ನು ರಾಮ ಕುಶಲಪ್ರಶ್ನೆ ಮಾಡಿದ. "ಶಬರಿ, ನೀನು ತಪೋನಿಧಿ. ನಿನ್ನ ತಪಸ್ಸಿಗೆ ಬಂದ ಅಡಚಣೆಗಳನ್ನು ಎಲ್ಲವನ್ನೂ ಗೆದ್ದೆಯಾ? ಆಹಾರನಿಯಮ ನಡೆಯುತ್ತ

ಇದೆಯೆ? ನೀನು ತೊಟ್ಟ ವ್ರತಗಳು ಎಲ್ಲಾ ಸಾಂಗ ಆಗಿ ಮುಗಿದವೆ? ನಿನ್ನ ಮನಸಿಗೆ ನೆಮ್ಮದಿಯೆ? ನಿನ್ನ ಗುರುಶುಶ್ರೂಷೆ ಸಫಲ ಆಯಿತೆ? ಮಧುರ ಭಾಷಿಣಿ ನೀನು, ಶಬರಿ. ಹೇಳು" ಎಂದ.

ವೃದ್ಧಸನ್ಯಾಸಿನಿ, ಎಲ್ಲ ಸಿದ್ಧರೂ ಪೂಜಿಸುವ ಪರಮಸಿದ್ಧಾಂಗನೆ ಶಬರಿ ಹೇಳಿದಳು: "ರಾಮಾ, ಮಹಾತ್ಮಾ, ನಿನ್ನ ದರ್ಶನದಿಂದ ನನ್ನ ತಪಸ್ಸು ಹಣ್ಣು ಆಯಿತು. ನನ್ನ ವ್ರತಗಳು ಎಲ್ಲವೂ ಈಗ ಸಫಲ. ನನ್ನ ಗುರುಸೇವೆ ಫಲಿಸಿತು. ಪುರುಷೋತ್ತಮ, ದೇವತೆಗಳಲ್ಲಿ ಸರ್ವಶ್ರೇಷ್ಠ ನೀನು. ನಿನ್ನನ್ನು ಪೂಜಿಸುವ ಭಾಗ್ಯ ದೊರೆತು ನನ್ನ ಜನ್ಮ ಸಫಲ ಆಯಿತು. ನನಗೆ ಇನ್ನು ಸ್ವರ್ಗ ಸಿಗುತ್ತದೆ, ಪರಮಪದ ಲಭಿಸುತ್ತದೆ. ರಘುನಂದನ, ನಿನ್ನ ಕರುಣೆಯ ತಣ್-ನೋಟದಿಂದ ನನ್ನ ಪಾಪ ಎಲ್ಲವೂ ಕ್ಷಯ ಆಗಿ ನಾನು ಪರಿಶುದ್ಧಳು ಆದೆ. ನಿನ್ನ ಅನುಗ್ರಹದಿಂದ ಅಕ್ಷಯಲೋಕಪ್ರಾಪ್ತಿ ನನಗೆ.

"ರಾಮಪ್ರಭು, ನನ್ನಿಂದ ಸೇವೆ ಮಾಡಿಸಿಕೊಳ್ಳುತ್ತ ಇದ್ದ ಮಹರ್ಷಿಗಳು ಮತಂಗ ಮಹಾಮುನಿಯ ಶಿಷ್ಯರು. ಎಲ್ಲರೂ ಧರ್ಮಾತ್ಮರು. ನೀನು ಚಿತ್ರಕೂಟಕ್ಕೆ ಬಂದಾಗ ಅವರು ದಿವ್ಯವಿಮಾನಗಳನ್ನು ಏರಿ ದಿವ್ಯಲೋಕಕ್ಕೆ ಹೋದರು. ಅವರಿಗೆ ಮುಂದೆ ನಡೆಯುವುದೂ ಗೊತ್ತಿತ್ತು. 'ಶಬರಿ, ಈ ಪುಣ್ಯಾಶ್ರಮಕ್ಕೆ ರಾಮಲಕ್ಷ್ಮಣರು ಬರುತ್ತಾರೆ. ಅವರಿಗೆ ಉತ್ತಮ ಅತಿಥಿ ಸತ್ಕಾರವನ್ನು ನೀಡು. ರಾಮದರ್ಶನದಿಂದ ನಿನಗೆ ಅಕ್ಷಯಲೋಕ ಪ್ರಾಪ್ತಿ ಆಗುತ್ತದೆ' ಎಂದು ಹೇಳಿ ಹೋದರು.

"ಪುರುಷೋತ್ತಮ, ಅಂದಿನಿಂದ ಈ ಪಂಪಾತೀರದಲ್ಲಿ ಸಿಗುವ ಫಲ-ಮೂಲ ಮುಂತಾದ ವನ್ಯಪದಾರ್ಥಗಳನ್ನು ಕೂಡಹಾಕಿ ಇಟ್ಟು ಇದೇನೆ ನಿನಗೆ ಎಂದು. ನನ್ನ ಆತಿಥ್ಯವನ್ನು ಇಬ್ಬರೂ ಸ್ವೀಕರಿಸಿ" ಎಂದಳು.

ಶಬರಿ ಯಾವಾಗಲೂ ಬ್ರಹ್ಮಜ್ಞಾನಪರಾಯಣೆ. ಶ್ರೀರಾಮನಿಗೆ ಅವಳ ಮಾತನ್ನು ಕೇಳಿ ಬಹು ಸಂತೋಷ ಆಯಿತು. "ಶಬರಿ, ಮಹಾತ್ಮರು ಆದ ನಿನ್ನ ಗುರುಗಳ ಪ್ರಭಾವವನ್ನೂ ನಿನ್ನ ವಿಷಯವನ್ನೂ ದನುವಂಶದ ಕಬಂಧ ನನಗೆ ಹೇಳಿ ಇದ್ದ. ನಿನಗೆ ಇಷ್ಟ ಆದರೆ ಎಲ್ಲವನ್ನೂ ಕಣ್ಣಾರೆ ನೋಡಬೇಕು ಎನ್ನುತ್ತೇನೆ" ಎಂದ ಆ ಧರ್ಮಾತ್ಮ.

ಶಬರಿಗೆ ಹಿಗ್ಗೋ ಹಿಗ್ಗು. ರಾಮಲಕ್ಷ್ಮಣರನ್ನು ಕರೆದುಕೊಂಡು ಆ ಮಹಾವನವನ್ನು ಎಲ್ಲಾ ತೋರಿಸಿದಳು. "ರಘುನಂದನ, ಇದೇ ಮತಂಗ ವನ. ಮೇಘಸಮೂಹದಂತೆ ಬೆಳಗುತ್ತಿದೆ. ನಾನಾವಿಧ ಮೃಗಪಕ್ಷಿ ಇವೆ ಇಲ್ಲಿ. ತೇಜೋಮೂರ್ತಿ, ಆತ್ಮವಿದರು ನಮ್ಮ ಗುರುಗಳು. ಮಂತ್ರ-ವೇತ್ತರು ಆದ ಋತ್ವಿಕ್ಕುಗಳ ಸಹಾಯದಿಂದ ಮಂತ್ರಪೂತ ಯಜ್ಞಗಳನ್ನು ಮಾಡಿದ್ದು ಇಲ್ಲೇ. ಇದೇ ನಮ್ಮ ಗುರುಗಳು ಪೂಜೆ ಮಾಡುತ್ತ ಇದ್ದ ಯಜ್ಞವೇದಿಕೆ. ಅವರಿಗೆ ಹಣ್ಣುಹಣ್ಣು ಮುಪ್ಪು. ಪೂಜೆ ಮಾಡುವಾಗ ಅವರ ಕೈ ನಡುಗುತ್ತ ಇದ್ದವು. ಪಡುವಣ ಜಗಲಿ ಇದು. ಅವರ ತಪಸ್ಸಿನ ಪ್ರಭಾವದಿಂದ ಈ ಯಜ್ಞವೇದಿಕೆಗಳು ಈಗಲೂ ಅಸಮಾನ ಕಾಂತಿಯಿಂದ ಬೆಳಗುತ್ತ ಇವೆ. ಬಹಳ ಶ್ರದ್ಧಾಭಕ್ತಿಗಳಿಂದ ಗುರುಗಳ ಸೇವೆ ಮಾಡುತ್ತ ಇದ್ದೆ ನಾನು. ಮುಪ್ಪಿನ ದೆಸೆಯಿಂದ ವ್ರತೋಪವಾಸಗಳ ಬಳಲಿಕೆಯಿಂದ ಹೊರಗೆ ಹೋಗಲು ಅವರು ಅಶಕ್ತರು. ಆದ್ದರಿಂದ ಸಪ್ತಸಮುದ್ರಗಳನ್ನೂ ಇಲ್ಲಿಗೇ ತರಿಸಿದರು. ಮನಸಿನಲ್ಲಿ ನೆನೆದರು. ಸಮುದ್ರಗಳು ಬಂದವು. ಬಂದು ಇಲ್ಲಿ ಕಲೆತಾಗ ಗುರುಗಳು ಆ ಜಲದಲ್ಲಿ ಸ್ನಾನಮಾಡಿ ಇಲ್ಲಿನ ಗಿಡಗಳ ಮೇಲೆ ಬಟ್ಟೆಗಳನ್ನು ಆರಹಾಕಿ ಇದ್ದರು. ಆ ನಾರುಮಡಿಗಳು ಹಾಗೆಯೇ ಇವೆ. ಇನ್ನೂ ಆರಿ ಇಲ್ಲ, ಒದ್ದೆ ಆಗಿಯೇ ಇವೆ. ಪೂಜೆ ಮಾಡಲು ಅವರು ಕಟ್ಟಿದ್ದ ಹೂಮಾಲೆಯ ನೈದಿಲೆ ಮೊದಲು ಆದ ಹೂಗಳು ಇನ್ನೂ ಬಾಡಿ ಇಲ್ಲ. ನೋಡಿದೆಯಾ! ಇದು ಎಲ್ಲಾ ಗುರುಗಳ ತಪಃಪ್ರಭಾವ.

"ರಾಮ, ಈ ವನವನ್ನು ಎಲ್ಲಾ ನೋಡಿದೆ. ಕೇಳಬೇಕಾದದ್ದೆಲ್ಲ ವನ್ನೂ ಕೇಳಿದೆ. ಇನ್ನು ನನಗೆ ಅಪ್ಪಣೆ ಕೊಡುತ್ತೀಯಾ? ರಾಮ, ಜೀರ್ಣ ಆದ ಈ ದೇಹವನ್ನು ಬಿಟ್ಟು ಹೋಗುತ್ತೇನೆ. ನಾನು ಯಾರ ಶುಶ್ರೂಷೆ ಮಾಡಿದೆನೋ ಈ ಆಶ್ರಮ ಯಾರದೋ ಆ ಪರಮಾತ್ಮವೇತ್ತ ಮಹರ್ಷಿಗಳ ಬಳಿಗೆ ಹೋಗುತ್ತೇನೆ. ಅಪ್ಪಣೆ ಕೊಡಿ" ಎಂದಳು ಶಬರಿ.

ರಾಮಲಕ್ಷ್ಮಣರಿಗೆ ಬಹಳ ಸಂತೋಷ ಆಗಿತ್ತು. ವ್ರತನಿಷ್ಠಳು ಆದ ಶಬರಿಗೆ ರಾಮ ಹೇಳಿದ: "ಶಬರಿ, ಭಕ್ತಿಯಿಂದ ಪೂಜಿಸಿದೆ, ಸತ್ಕರಿಸಿದೆ. ನಿನ್ನ ಇಷ್ಟದಂತೆ ನೀನು ದಿವ್ಯಲೋಕಕ್ಕೆ ಹೋಗು." ಜಟಾವಲ್ಕಲಧಾರಿಣಿ, ಕೃಷ್ಣಾಜಿನವನ್ನು ಹೊದ್ದ ಮುದುಕಿ ಶಬರಿ ರಾಮನ ಅಪ್ಪಣೆಯನ್ನು ಪಡೆದು

ಅಗ್ನಿಯನ್ನು ಪ್ರವೇಶಿಸಿದಳು. ಅಗ್ನಿಯಂತೆ ಪ್ರಜ್ವಲಿಸುವ ದಿವ್ಯದೇಹ, ದಿವ್ಯ ಆಭರಣ, ದಿವ್ಯಮಾಲ್ಯಾನುಲೇಪನ, ದಿವ್ಯ ವಸ್ತ್ರ–ಕಮನೀಯ ರೂಪದಿಂದ ಮಿಂಚಿನ ಬಳ್ಳಿಯಂತೆ ಹೊಳೆಯುತ್ತ ಆ ಪ್ರದೇಶ ಎಲ್ಲವನ್ನೂ ಬೆಳಗಿ, ಪುಣ್ಯಾತ್ಮರು ಮತಂಗಶಿಷ್ಯರು ಇದ್ದ ಪುಣ್ಯಲೋಕಕ್ಕೆ ಹೋದಳು.

೩೪

ದಿವ್ಯತೇಜಸ್ಸಿನಿಂದ ಬೆಳಗುತ್ತ ಶಬರಿ ದಿವ್ಯಲೋಕಕ್ಕೆ ಹೋದಳು. ಧರ್ಮಾತ್ಮ ರಾಮ ಅಲ್ಲಿ ಇದ್ದ ಮಹರ್ಷಿಗಳ ಪ್ರಭಾವವನ್ನು ನೆನೆದ. ಸ್ಥಿರ ಚಿತ್ತ, ಪ್ರಿಯಂಕರ ಆದ ಲಕ್ಷ್ಮಣನಿಗೆ ಹೇಳಿದ: "ತಮ್ಮ, ಎಷ್ಟು ಆಶ್ಚರ್ಯ ಈ ಆಶ್ರಮಪ್ರದೇಶದಲ್ಲಿ! ಹುಲಿ ಜಿಂಕೆ ವೈರವನ್ನು ಬಿಟ್ಟು ನಿರ್ಭಯದಿಂದ ಸಂಚರಿಸುತ್ತ ಇವೆ ಇಲ್ಲಿ. ಬಗೆಬಗೆಯ ಪಕ್ಷಿಗಳು ಎಲ್ಲವೂ ಒಟ್ಟು ಆಗಿ ಸೇರಿ ಇವೆ. ಎಷ್ಟು ಎಂದರೂ ಪರಮಾತ್ಮನೇತ್ರರು ಆದ ಮಹರ್ಷಿಗಳ ಆಶ್ರಮ! ಸಪ್ತಸಮುದ್ರತೀರ್ಥದಲ್ಲಿ ಸ್ನಾನ ಮಾಡಿದೆವು. ಪಿತೃದೇವತೆಗಳಿಗೆ ತರ್ಪಣ ಬಿಟ್ಟೆವು. ನಮಗೆ ಸಮಸ್ತ ಅಶುಭವೂ ನೀಗಿತು. ಶುಭಕಾಲವೂ ಸಮೀಪಿಸಿತು. ಖಂಡಿತ. ತಮ್ಮ, ಈಗ ನನ್ನ ಮನಸಿಗೆ ಎಷ್ಟೋ ನೆಮ್ಮದಿ, ಶುಭ ಆಗುವಂತೆ ಇದ್ದರೆ ಮೊದಲೇ ಮನಸಿಗೆ ತಟ್ಟುತ್ತದೆ.

"ಲಕ್ಷ್ಮಣ, ಈಗಲೇ ನಾವು ಇಲ್ಲಿಂದ ಹೊರಡೋಣ. ವಾಲಿಯ ಭಯದಿಂದ ಋಷ್ಯಮೂಕ ಪರ್ವತದಲ್ಲಿ ವಾನರಸಖರ ಸಂಗಡ ಇದಾನೆ ಆ ಧರ್ಮಾತ್ಮ ಸೂರ್ಯಪುತ್ರ ಸುಗ್ರೀವ. ಅದರ ಪಕ್ಕದಲ್ಲಿಯೆ ರಮಣೀಯ ಪಂಪಾಸರೋವರ. ಆ ವಾನರಶ್ರೇಷ್ಠನನ್ನು ಯಾವಾಗ ನೋಡಿಯೇನೋ ಎಂದು ಹಾತೊರೆಯುತ್ತ ಇದೆ ನನ್ನ ಮನಸ್ಸು. ಸೀತೆಯನ್ನು ಹುಡುಕುವ ಕೆಲಸ ಅವನಿಂದ ಆಗಬೇಕು. ಹೋಗೋಣ" ಎಂದ ರಾಮ.

"ಅಣ್ಣ, ಈಗಲೇ ಹೊರಡೋಣ. ನನಗೂ ಮನಸಿನಲ್ಲಿ ಆತುರ ಬೇಗ ಹೋಗೋಣ ನಡೆ" ಎಂದ ಲಕ್ಷ್ಮಣ.

ಇಬ್ಬರೂ ಪಂಪಾಸರೋವರಕ್ಕೆ ಪಯಣ ಆದರು.

ಪಂಪಾಸರೋವರ ಪುಣ್ಯಸರೋವರ. ಅನೇಕರು ಮಹರ್ಷಿಗಳು ಇದ್ದ ಸ್ಥಳ. ಪಾವನಜಲ. ಅದರ ಸುತ್ತಲೂ ನಾನಾ ವಿಧದ ಗಿಡಬಳ್ಳಿ. ಸರೋವರ ದಲ್ಲಿ ಕೆಂದಾವರೆ ಕೆನ್ನೈದಿಲೆಗಳ ಕೆಂಪು, ಬಿಳೀ ನೈದಿಲೆಯ ಬಿಳುಪು, ಕಪ್ಪು ನೈದಿಲೆಯ ಕಪ್ಪು–ಎಲ್ಲವೂ ಸೇರಿ ಸರೋವರ ಒಂದು ದೊಡ್ಡ ಚಿತ್ರಗಂಬಳಿಯ ಹಾಗೆ ಕಾಣುತ್ತ ಇತ್ತು. ಪಂಪಾಸರೋವರ ಬಲು ದೊಡ್ಡದು. ಬಹಳ ಉದ್ದ. ಹತ್ತಿರದಲ್ಲಿ ಇದ್ದ ಮತಂಗಸರಸ್ಸಿನಲ್ಲಿ ರಾಮಲಕ್ಷ್ಮಣರು ಸ್ನಾನ ಮಾಡಿದರು. ಪಂಪಾಸರೋವರದ ಸೊಂಪನ್ನು ನೋಡುತ್ತ ಮುಂದೆ ನಡೆದರು.

ಕೆಂದಾವರೆ ಕನ್ನೈದಿಲೆ ಬಿಳಿದಾವರೆ ಹೂಗಳು. ತುಂಬಾ ಹೂ ಬಿಟ್ಟ ಮಾವಿನ ತೋಪುಗಳು. ಆ ತೋಪುಗಳಲ್ಲಿ ಕಿವಿಗೆ ಇಂಪು ಆಗಿ ಕೂಗುವ ನವಿಲುಗಳ ಕೇಕಾರವ. ಪಕ್ಕದಲ್ಲಿಯೆ ದಟ್ಟ ಆಗಿ ಬೆಳೆದ ಆಲ ಬೇಲ ಅತ್ತಿ ಮತ್ತಿ ಮಾವು ಬೇವು ಸಾಲೆ ಹಾಲೆ ಮರಗಳು, ಮೊಲ್ಲೆ ಮಲ್ಲಿಗೆ ಸಂಪಿಗೆ ಇರುವಂತಿಗೆ ಹೊನ್ನೆ ಸುರಹೊನ್ನೆ ಅಸುಗೆ ಪಗಡೆ ಮುಂತಾದ ಹೂಗಿಡಬಳ್ಳಿ. ಸಮಸ್ತ ಆಭರಣಭೂಷಿತೆ ಆಗಿ ಸಿಂಗರಿಸಿಕೊಂಡು ನಿಂತ ಪ್ರಮದೆಯಂತೆ ಕಾಣುತ್ತ ಇತ್ತು ಆ ಪಂಪಾಸರೋವರ.

ಆ ಸರೋವರದ ಸೊಂಪನ್ನು ನೋಡುತ್ತ ಬರುತ್ತ ಇದ್ದರು ರಾಮ ಲಕ್ಷ್ಮಣರು. ತೀರದ ಮರಗಿಡಗಳಲ್ಲಿ ಬರೀ ಹೂವೇ ಹೂವು. ತುಂಬಾ ಅರಳಿ ಇತ್ತು. ಟಿಟ್ಟಿಭ ಕೋಗಿಲೆ ಗಿಳಿ ನವಿಲುಗಳು ಕಲಕಲ ಧ್ವನಿಮಾಡುತ್ತ ಇದ್ದವು. ಅಶೋಕ ತಿಲಕ ಹೊನ್ನೆ ಪಗಡೆ ಸಂಪಿಗೆ ಮರಗಳು ಸೊಗಸು ಆಗಿ ಎತ್ತರ ಬೆಳೆದಿದ್ದವು. ಅಲ್ಲಲ್ಲಿ ತಂಪು ನೀರಿನ ಕೊಳಗಳು. ಪಂಪಾಸರೋವರದ ಸೊಬಗು ಸೊಂಪು ರಾಮನ ಮನಸಿನಲ್ಲಿ ಸೀತೆಯ ನೆನಪನ್ನು ಮೂಡಿಸಿತು. ಕಾಮಪೀಡಿತ ಆದ.

ಕಂಪು ಬೀರುವ ಕುಸುಮರಾಶಿ. ಗುಂಯಿ ಗುಂಯಿ ಗಾನ ಮಾಡುವ ದುಂಬಿಗಳ ಗುಂಪು. ಸ್ಫಟಿಕದಂತೆ ತಿಳಿ ತಿಳಿ ನೀರು. ಮೆತ್ತನೆ ಮರಳು. ಕಮಲದ ಹೂ ಕನ್ನೈದಿಲೆ ಹೂ. ಪಂಪಾ ಸರೋವರವನ್ನು ಪದೇ ಪದೇ ನೋಡಿದ ರಾಮ. "ತಮ್ಮ, ಕಬಂಧ ಹೇಳಿದ ಋಷ್ಯಮೂಕ ಪರ್ವತ ಇದೇ. ಸಮಸ್ತ ಗೈರಿಕಾದಿ ಧಾತುಗಳ ಥಗಥಗಾಯಮಾನಕಾಂತಿ, ನಿರಂತರ ಫಲ- ಪುಷ್ಪದ ಸೊಬಗು. ಇಲ್ಲಿಯೇ ಋಕ್ಷರಾಜಕುಮಾರ, ಮಹಾಪರಾಕ್ರಮಶಾಲಿ

ಸುಗ್ರೀವ ಇರುವುದು. ಲಕ್ಷ್ಮಣ, ನೀನು ಹೋಗಿ ನೋಡಿ ಬಾ ಅವನನ್ನು" ಎಂದ ರಾಮ.

ಒಂದು ಕ್ಷಣ ಆದಮೇಲೆ ಮತ್ತೆ ಹೇಳಿದ: "ಲಕ್ಷ್ಮಣ, ನಾನು ರಾಜ್ಯ ಭ್ರಷ್ಟ, ದೀನ. ಸೀತೆಯೇ ನನಗೆ ಈಗ ಆಸರೆ. ನನ್ನ ಮನಸ್ಸು ಎಲ್ಲವೂ ಅವಳಲ್ಲೇ ನೆಟ್ಟು ಇತ್ತು. ಇದೆ ಈಗಲೂ. ಸೀತೆ ಇಲ್ಲದೆ ನಾನು ಹೇಗೆ ಬದುಕಲಿ?"

ಲಕ್ಷ್ಮಣ ಏನೂ ಹೇಳಲಿಲ್ಲ. ರಾಮನಿಗೋ ಬೇಸರ. ಅನನ್ಯಮನಸ್ಕ, ಮನ್ಮಥತಾಪಪೀಡಿತ ಅವನು. ಮನಸಿನಲ್ಲಿ ವ್ಯಥೆ, ದುಃಖ. ಸೀತೆಯ ಮಾತೇ ಮಾತು. ಬೇರೆ ಇಲ್ಲ.

ಪಂಪಾಸರೋವರದ ಸೊಬಗನ್ನು ನೋಡುತ್ತ ನಡೆದ ರಾಮ.

ಮೂರನೆ ಖಂಡ

ಸುಗ್ರೀವಸಖ್ಯ

೧

ಪಂಪಾಸರೋವರದಲ್ಲಿ ತಾವರೆ ಕನ್ನೈದಿಲೆ ಅರಳಿ ಇವೆ. ನಾನಾ ಬಗೆಯ ಮೀನು ನೆಗೆದಾಡುತ್ತ ಇವೆ. ರಾಮಲಕ್ಷ್ಮಣರು ಆ ಸರೋವರಕ್ಕೆ ಬಂದರು. ರಾಮ ಕೊಳದ ಕಮಲಗಳನ್ನು ನೋಡಿದ. ಸೀತೆಯ ಮುಖ-ಕಮಲ ನೆನಪು ಆಯಿತು. ಕನ್ನೈದಿಲೆಗಳನ್ನು ನೋಡಿದ. ಸೀತೆಯ ಕಣ್ಣು ನೆನಪು ಆಯಿತು. ಮನಸ್ಸು ವ್ಯಾಕುಲಗೊಂಡಿತು. ಕಾಮುಪರವಶ ಆದ. ಸರ್ವ ಇಂದ್ರಿಯಗಳೂ ಚಲಿಸಿದವು. ಅಳಲು ಪ್ರಾರಂಭಿಸಿದ.

"ತಮ್ಮ, ಲಕ್ಷ್ಮಣ, ಈ ಪಂಪಾಸರೋವರ ಎಷ್ಟು ಸ್ವಚ್ಛ ಆಗಿದೆ ನೋಡು. ವೈಡೂರ್ಯದ ಹಾಗೆ ಇದೆ. ಕಮಲದ ಹೂ ಕನ್ನೈದಿಲೆ ಹೂ ಬಿರಿದು ಇವೆ. ಬಗೆಬಗೆಯ ಮರಗಳ ಸಾಲು ಎತ್ತರ ಆಗಿ ಬೆಳೆದು ಶಿಖರ ಸಮೇತ ಇರುವ ಬೆಟ್ಟಗಳಂತೆ ಕಾಣುತ್ತ ಇವೆ. ಎಷ್ಟು ರಮ್ಯ ಈ ಪ್ರದೇಶ!

"ತಮ್ಮ, ಅಲ್ಲಿ ಭರತ ಕಷ್ಟಪಡುತ್ತ ಇದಾನೆ. ಇಲ್ಲಿ ಸೀತೆಯನ್ನು ಕಳೆದುಕೊಂಡು ಇದೇನೆ. ಬಹಳ ದುಃಖ ನನಗೆ. ಇದರ ಜೊತೆಗೆ ಈ ವಸಂತ ಋತುವೂ ನನ್ನನ್ನು ಕಾಡಬೇಕೆ? ಆದರೂ ಈ ಚಿತ್ರವಿಚಿತ್ರ ವೃಕ್ಷರಾಜಿ, ಹಲವು ಬಗೆಯ ಹೂ ಚೆಲ್ಲಿದ ಈ ನೆಲ, ಈ ಪರಿಶುದ್ಧ ಜಲ, ನನಗೂ ಸಂತೋಷ ಕೊಡುತ್ತ ಇವೆ. ನಾನಾಬಗೆಯ ಮೃಗಗಳು ತಿರುಗಾಡುತ್ತ ಇವೆ. ಬಗೆಬಗೆಯ ಹಕ್ಕಿ ಹಾಡುತ್ತ ಇವೆ. ಹಾವುಗಳು ತಮ್ಮ ಹಲವು ಹೆಡೆ ಬಿಚ್ಚಿ ಆಡಿಸುತ್ತ ಇವೆ. ಕಮಲದ ಹೂ ದಟ್ಟ ಆಗಿ ಬೆಳೆದು ನೀರನ್ನು ಮುಚ್ಚಿದೆ. ಈ ಬಯಲಿನ ಹುಲ್ಲು ನೀಲಿಹಸಿರು ಬಣ್ಣಕ್ಕೆ ತಿರುಗಿ ಮನೋಹರ ಆಗಿದೆ. ಅದರ ಮೇಲೆ ಉದುರಿ ಇರುವ ಬಗೆಬಗೆಯ ಬಣ್ಣದ ಹೂ ಆ ನೆಲಕ್ಕೆ ರತ್ನಕಂಬಳಿ ಹಾಸಿದೆ.

"ರೆಂಬೆರೆಂಬೆಗೂ ಹೂಗೊಂಚಲು ಈ ಮರಗಳಿಗೆ. ಈ ಮರಗಳಿಗೆ ತುಂಬಾ ಹೂ ಅರಳಿದ ಹೂಬಳ್ಳಿಗಳು ಹೇಗೆ ಸುತ್ತಿಕೊಂಡಿವೆಯೋ ನೋಡು. ನಲ್ಲನನ್ನು ನಲ್ಲೆ ಅಪ್ಪಿಕೊಂಡಂತೆ. ತಮ್ಮ, ಇದು ವಸಂತಸಮಯ. ಗಿಡ ಬಳ್ಳಿ ಹೂತು ಇವೆ. ಗಾಳಿಯ ಸುಖಸ್ಪರ್ಶ ಹಿತಕರ ಆಗಿದೆ. ಇದು ಎಲ್ಲವೂ ಕಾಮೋದ್ದೀಪಕ. ಈ ವನವನ್ನು ನೋಡು. ಗಾಳಿಯ ಹೊಡೆತಕ್ಕೆ ಹೇಗೆ ಹೂಮಳೆ ಕರೆಯುತ್ತ ಇವೆ ಗಿಡಗಳು! ಮಳೆ ಮೋಡಗಳ ಹಾಗೆ. ನೆಲದ

ಮೇಲೆ ರಾಶಿ ರಾಶಿ ಬಿದ್ದಿವೆ ಹೂಗಳು. ಇನ್ನೂ ಉದುರುತ್ತಲೇ ಇವೆ. ಕೆಲವು ಹೂ ಗಿಡಗಳಲ್ಲೇ ಇವೆ. ಎಲ್ಲಿ ನೋಡಿದರೂ ಹೂವೇ. ವಸಂತದ ಗಾಳಿ ಹೂಗಳಿಂದ ಆಟ ಆಡುತ್ತ ಇರುವ ಹಾಗೆ ಇದೆ. ಗಾಳಿಗೆ ಮರದ ರೆಂಬೆ ಅಲುಗಾಡಿ ಅದರಲ್ಲಿ ಇದ್ದ ಹೂ ಎಲ್ಲಾ ಕೆಳಗೆ ಉದುರುತ್ತ ಇವೆ. ಆ ಹೂಗಳಲ್ಲಿ ಇದ್ದ ದುಂಬಿಗಳು ಸಂಭ್ರಮದಿಂದ ಮೇಲೆ ಹಾರುತ್ತ ಗುಂಯ್ ಗುಂಯ್ ಗಾನಮಾಡುತ್ತ ಇವೆ. ಹಿಮ್ಮೇಳ ಕಟ್ಟಿ ಹಾಡು ಹಾಡುತ್ತ ನಟರಿಂದ ನರ್ತನ ಮಾಡಿಸುವವನಂತೆ ಬೆಟ್ಟದ ಗುಹೆಗಳಿಂದ ಬರುತ್ತ ಇದೆ ಗಾಳಿ. ಮತ್ತ ಕೋಕಿಲೆಯ ಹಾಡೇ ಅದರ ಹಾಡು, ಗಿಡಮರಗಳ ತೂಗಾಟವೇ ನರ್ತನ. ಗಾಳಿಯ ವೇಗಕ್ಕೆ ತೂಗಾಡಿ ಗಿಡಗಳ ರೆಂಬೆಗಳು ಒಂದಕ್ಕೆ ಒಂದು ಹೆಣೆದುಕೊಂಡು ಹೂಮಾಲೆಯಂತೆ ಕಾಣುತ್ತ ಇವೆ. ಗಾಳಿಯೂ ತಂಗಾಳಿ, ಗಂಧದಂತೆ ತಂಪು. ಅದರಲ್ಲಿ ಬೆರೆತು ಇದೆ ಹೂವಿನ ನರುಗಂಪು. ಪಯಣದ ಬಳಲಿಕೆ ಎಲ್ಲಾ ಕಳೆಯಿತು ಇದರಿಂದ. ಎಷ್ಟು ಹಾಯಿ! ಈ ಗಿಡಗಳಲ್ಲಿ ಎಂಥ ಮಕರಂದದ ವಾಸನೆ. ಗಾಳಿಗೆ ಅಲುಗಾಡುತ್ತ ಇವೆ ಗಿಡ. ಗಿಡಗಳಲ್ಲಿ ಇರುವ ದುಂಬಿಗಳ ಝೇಂಕಾರ ಆ ಗಿಡಗಳೇ ಸದ್ದು ಮಾಡುವ ಹಾಗೆ ಇದೆ. ಬೆಟ್ಟದ ತಪ್ಪಲಲ್ಲಿ ದೊಡ್ಡದಾಗಿ ಬೆಳೆದ ಗಿಡಗಳ ತುಂಬ ಅರಳಿದ ಹೂವೇ ಹೂ. ಬೆಟ್ಟದ ಶಿಖರಗಳು ಕಾಣದ ಹಾಗೆ ದಟ್ಟ ಆಗಿ ಬೆಳೆದು ಇವೆ ಗಿಡ. ಶಿಖರಗಳು ಎಲ್ಲಾ ಹೂವಿನ ರಾಶಿಯಂತೆ ಅಂದ ಆಗಿ ಕಾಣುತ್ತ ಇವೆ. ಗಾಳಿಗೆ ಹೂಗಳು ಅಲುಗಾಡುವಾಗ ಹೂಗಳ ಸುತ್ತಲೂ ದುಂಬಿಗಳು ಝೇಂಕರಿಸುತ್ತ ಇದ್ದರೆ ಸಂಗೀತಗಾತಿಯರು ಹಾಡುವಂತೆ ನರ್ತನ ಮಾಡುವಂತೆ ಕಾಣಿಸುತ್ತದೆ. ಈ ಕರ್ಣಿಕಾರ ವೃಕ್ಷಗಳು ರೆಂಬೆರೆಂಬೆಗೂ ಹೂ ಬಿಟ್ಟು ನಿಂತು ಇದ್ದರೆ ಚಿನ್ನದ ಒಡವೆ ಇಟ್ಟುಕೊಂಡು ಪೀತಾಂಬರ ಉಟ್ಟು ನಿಂತ ಪುರುಷರ ಹಾಗೆ ಇದೆ.

"ಲಕ್ಷ್ಮಣ, ಬಗೆಬಗೆಯ ಹಕ್ಕಿಗಳು ಹಾಡುತ್ತ ಇದ್ದರೆ ನನಗೆ ದುಃಖ. ಈ ವಸಂತಋತುವಿನಲ್ಲಿ ಸೀತೆ ಇಲ್ಲ. ಮೊದಲೇ ನನಗೆ ದುಃಖ. ಸಾಲದ್ದಕ್ಕೆ ಈ ಮನ್ಮಥನ ಪೀಡೆ ಬೇರೆ. ಆ ಕೋಗಿಲೆ ಬಹಳ ಸಂತೋಷದಿಂದ ಹಾಡುತ್ತ ನನ್ನನ್ನು ಅಣಕಿಸುತ್ತ ಇದೆ. ಮನಸೆಳೆವ ಆ ಹೊಳೆಯಲ್ಲಿ ನೀರುಕೋಳಿ ಹೇಗೆ ಆಡುತ್ತ ಇದೆ ಧ್ವನಿಗೈಯುತ್ತ. ಕಾಮಪೀಡಿತ ಆದ ನನ್ನ ದುಃಖ ಹೆಚ್ಚುತ್ತ ಇದೆ ಅದರಿಂದ. ನೀರುಕೋಳಿ ಎಂದರೆ ಸೀತೆಗೆ ಬಲು ಇಷ್ಟ. ಆಶ್ರಮದಲ್ಲಿ

ಇದ್ದಾಗ ನೀರುಕೋಳಿಯ ಕೂಗು ಕೇಳಿಸಿದರೆ ಎಷ್ಟು ಸಂತಸಪಡುತ್ತ ಇದ್ದಳು! ಕೂಡಲೇ ನನಗೆ ಅದನ್ನು ತೋರಿಸಿ ಸಂತೋಷಪಡುತ್ತ ಇದ್ದಳು. ಇಲ್ಲಿ ಗಿಡ ಮರ ಬಳ್ಳಿಗಳಲ್ಲಿ ಎಲ್ಲೆಲ್ಲೂ ಚಿತ್ರವಿಚಿತ್ರ ಪಕ್ಷಿಗಳು, ಗಂಡುಹಕ್ಕಿಗಳು ಹೆಣ್ಣು ಹಕ್ಕಿಗಳು, ಕುಳಿತು ಸಂತೋಷದಿಂದ ಕ್ರೀಡಿಸುತ್ತ ಇವೆ. ಈ ಪಕ್ಷಿದಂಪತಿಗಳ ಆನಂದವೇ ಆನಂದ. ದುಂಬಿಗಳೂ ಗುಂಜಾರವ ಮಾಡುತ್ತ ಇವೆ ಸಂತೋಷ ದಿಂದ. ಅದನ್ನು ಕೇಳಿ ಹಕ್ಕಿಗಳೂ ಇಂಪಾಗಿ ರತಿಕೂಜಿತ ಮಾಡುತ್ತ ಇವೆ. ಕೋಗಿಲೆಗಳು ಕೂಗುತ್ತ ಇವೆ. ನೀರುಕೋಳಿಗಳು ಧ್ವನಿಮಾಡುತ್ತ ಇವೆ. ಆ ಗಿಡಗಳೇ ಕೂಗುವಂತೆ ಇದೆ. ನನಗೆ ಹರ್ಷ ಆಗುತ್ತ ಇದೆ. ಈ ಅಶೋಕ ವೃಕ್ಷದ ಹೂಗಳೇ ಕೆಂಡ. ದುಂಬಿಗಳ ಗುಣುಗುಣು ಗಾನವೇ ಕಿಡಿ ಸಿಡಿದರೆ ಆಗುವ ಫಟಫಟ ಶಬ್ದ. ಚಿಗುರು ಎಲೆಗಳೇ ಬೆಂಕಿಯ ಉರಿನಾಲಗೆ. ಹೀಗೆ ಈ ವಸಂತದ ಬೆಂಕಿ ನನ್ನನ್ನು ಸುಡುತ್ತ ಇದೆ.

"ಸೌಮಿತ್ರಿ, ಸೀತೆಯನ್ನು ಕಾಣದೆ ನಾನು ಬದುಕಿ ಏನು ಪ್ರಯೋಜನ? ಅವಳ ಸೂಕ್ಷ್ಮ ಕಣ್ಣೆವೆ, ನುಣುಪು ನೀಳ ಆದ ಕೂದಲು, ಇಂಪು ಸುರಿವ ಮಾತು; ಸೀತೆಯನ್ನು ಕಾಣದೆ ಏನು ಪ್ರಯೋಜನ ಬದುಕಿ? ಸೊಬಗು ಸುರಿವ ಅಡವಿಯಲ್ಲಿ ವಸಂತಋತು ಮೊದಲು ಆಗಿ ಕೋಗಿಲೆಗಳು ಕೂಗಿದರೆ ಸೀತೆಗೆ ಎಷ್ಟು ಸಂತೋಷ. ನನಗೋ ಈಗ ಮನ್ಮಥಬಾಧೆಯ ಬೆಂಕಿ. ಈ ವಸಂತ ಋತು ಆ ಬೆಂಕಿಯನ್ನು ದೊಡ್ಡದು ಮಾಡಿ ಉರಿಸುತ್ತ ಇದೆ. ನನ್ನನ್ನು ಸುಟ್ಟೂ ಬಿಡುತ್ತದೆ ಇದು. ನನಗೆ ಸೀತೆ ಕಾಣಬಾರಳು. ಅಂದದ ಗಿಡಬಳ್ಳಿ ಕಾಣುತ್ತ ಮನ್ಮಥತಾಪವನ್ನು ಹೆಚ್ಚಿಸುತ್ತ ಇವೆ. ಸೀತೆಯನ್ನು ಕಾಣದೆ ಈ ದುಃಖ ಹೆಚ್ಚುತ್ತ ಇದೆ ನನಗೆ. ರತಿಕೇಳಿಯ ಆಯಾಸದ ಬೆವರು ಇಲ್ಲ. ಆ ಆಯಾಸ ವನ್ನು ನೀಗಿಸುವ ಮಂದಮಾರುತ ಮಾತ್ರ ಬೀಸುತ್ತ ಕಾಮತಾಪವನ್ನು ಹೆಚ್ಚಿಸುತ್ತ ಇದೆ. ತಂಗಾಳಿ ಕೂಡ ಇಷ್ಟು ಕ್ರೂರ ಆಗಿ ಕಾಡಬೇಕೆ? ಚಿಗರೆ ಕಣ್ಣಿನ ಸೀತೆಯ ಚಿಂತೆಯೇ ಚಿಂತೆ ನನಗೆ. ಈಗ ಇದರ ಕಾಟವೆ?

"ತಮ್ಮ, ಅಲ್ಲಿ ನವಿಲುಗಳು ಕುಣಿಯುತ್ತ ಇವೆ. ಗರಿ ಕೆದರಿ ಅವು ಕುಣಿಯುವಾಗ ಗಾಳಿಗೆ ರೆಕ್ಕೆ ಅಲುಗಾಡಿದರೆ ಸ್ಫಟಿಕ ಗವಾಕ್ಷಗಳಂತೆ ಕಾಣುತ್ತ ಇವೆ. ಗಂಡುನವಿಲು ಕುಣಿಯುತ್ತ ಇದ್ದರೆ ಹೆಣ್ಣುನವಿಲು ಸುತ್ತುವರಿದು ಇದೆ. ಗಂಡುಹಕ್ಕಿಗೆ ಮೈಮೇಲೆ ಎಚ್ಚರವೇ ಇಲ್ಲ. ಕುಣಿತವೇ ಕುಣಿತ. ಅದರ ಸುತ್ತ

ಹೆಣ್ಣು ಹಕ್ಕಿಗಳೂ ಕುಣಿಯುತ್ತ ಇವೆ. ಮನಸೆಳೆವ ತನ್ನ ಗರಿಗಳನ್ನು ಬಿಚ್ಚಿ ನಾಟ್ಯಮಾಡುತ್ತ ಗಂಡುನವಿಲು ನನ್ನನ್ನು ಅಣಕಿಸುತ್ತ ಕೇಕೆಹಾಕುತ್ತ ಇದೆ. ತನ್ನ ನಲ್ಲೆಯು ಕರೆಗೆ ಓಗೊಡುವಂತೆ ಅದರ ಬಳಿಗೆ ಧಾವಿಸುತ್ತ ಇದೆ. ಹೌದು, ಈ ನವಿಲಿನ ಹೆಂಡತಿಯನ್ನು ಯಾವ ರಾಕ್ಷಸನೂ ಕದ್ದು ಒಯ್ಯಲಿಲ್ಲ. ನಿಶ್ಚಿಂತೆಯಿಂದ ಈ ಬೆಟ್ಟದ ತಪ್ಪಲಿನಲ್ಲಿ ತನ್ನ ನಲ್ಲೆಯ ಜೊತೆಯಲ್ಲಿ ಕುಣಿಯುತ್ತ ಕ್ರೀಡಿಸುತ್ತ ಇದೆ. ಇದನ್ನು ಎಲ್ಲಾ ನೋಡುತ್ತ ಈ ವಸಂತಕಾಲದಲ್ಲಿ ಈ ಕಾಡಿನಲ್ಲಿ ಹೇಗೆ ಇರಲಿ, ಲಕ್ಷ್ಮಣ, ಸೀತೆಯನ್ನು ಬಿಟ್ಟು?

"ಲಕ್ಷ್ಮಣ, ಜಗತ್ತಿನಲ್ಲಿ ಹೆಣ್ಣನ್ನು ಬಯಸಿ ಹಿಂಬಾಲಿಸುತ್ತಾನೆ ಗಂಡು. ಆದರೆ ಅಲ್ಲಿ ನೋಡು. ಆ ಹೆಣ್ಣು ನವಿಲು ಕಾಮಾತಿಶಯದಿಂದ ತಾನೇ ಬಯಸಿ ಹೋಗಿ ಗಂಡುನವಿಲನ್ನು ಕರೆಯುತ್ತ ರಮಿಸುತ್ತ ಇದೆ. ಪಶುಪಕ್ಷಿಗಳಲ್ಲಿಯೂ ಕೂಡ ಎಷ್ಟು ಅನುರಾಗ. ಈ ವಸಂತದ ಮಹಿಮೆಯೇ ಅಂಥದು. ಸೀತೆಯನ್ನು ರಾಕ್ಷಸ ಎತ್ತಿಕೊಂಡು ಹೋಗದೆ ಇದ್ದರೆ ಎಷ್ಟು ಸಂಭ್ರಮದಿಂದ ಕಣ್ಣು ಅರಳಿಸಿ ನನ್ನನ್ನು ಬಯಸಿ ಬರುತ್ತ ಇದ್ದಳೋ ಸೀತೆ ನನ್ನ ಹಿಂದೆ! ಹೇಗೆ ವಿಹರಿಸುತ್ತ ಇದ್ದಳೋ!

"ತಮ್ಮ, ವಸಂತದ ಹೂಗಳು ಎಷ್ಟು ಸಮೃದ್ಧಿ ಆಗಿ ಅರಳಿವೆ ಇಲ್ಲಿ. ಏನು ಪ್ರಯೋಜನ? ನನಗೆ ನಿಷ್ಫಲ. ಎಷ್ಟು ರುಚಿರ, ಎಷ್ಟು ಕಾಂತಿನಂತ ಈ ಹೂಗಳು. ದುಂಬಿಗಳು ಹೇಗೆ ಝೇಂಕರಿಸುತ್ತ ಬಂದು ಹೂಗಳಲ್ಲಿ ಕುಡಿಯುತ್ತ ಇವೆ. ಇನ್ನು ಆ ಹೂಗಳೂ ಈ ದುಂಬಿಗಳ ಸಮೇತ ನೆಲಕ್ಕೆ ಉದುರಬೇಕು.

"ಲಕ್ಷ್ಮಣ, ಈ ಹಕ್ಕಿಗಳನ್ನು ನೋಡು. ಹೇಗೆ ಗುಂಪು ಗುಂಪು ಆಗಿ ಸೇರಿವೆ. ಸಂತೋಷದಿಂದ ಸವಿಯಿಂದ ಒಂದನ್ನು ಒಂದು ಕರೆಯುತ್ತ ಕೇಕೆಹಾಕುತ್ತ ಇವೆ. ಆ ಸವಿದನಿ, ಆ ಸೊಬಗಿನ ನೋಟ ನನಗೆ ಕಾಮವನ್ನು ಹೆಚ್ಚಿಸಿ ಮರುಳು ಮಾಡುತ್ತ ಇವೆ. ನನ್ನ ಹಾಗೇ ಸೀತೆಗೂ ಈ ವಸಂತಬಾಧೆ ಈ ಮದನಪೀಡೆ ಇರಬೇಕು. ಅವಳೂ ಹೀಗೆ ದುಃಖಿಸುತ್ತ ಇರುತ್ತಾಳೆ. ವಸಂತಬಾಧೆ ಇರದೆ ಇದ್ದರೂ ಅವಳಿಗೆ ಅಗಲಿಕೆಯ ಬಾಧೆ ಅಂತೂ ಇದ್ದೇ ಇದೆ. ಹೇಗೆ ಬದುಕುತ್ತಾಳೋ ಅವಳು ನನ್ನನ್ನು ಅಗಲಿ? ಅವಳ ಸುತ್ತಲೂ ಇರುವ ರಾಕ್ಷಸರು ಎಷ್ಟು ಪೀಡಿಸುತ್ತಾರೋ? ಆ ಪೀಡೆಯನ್ನೂ ಈ ಬಾಧೆಯನ್ನೂ ಸಹಿಸಲಾರದೆ ಪ್ರಾಣ ಬಿಡುತ್ತಾಳೆ.

“ಲಕ್ಷ್ಮಣ, ಸವಿನುಡಿಯ ಆ ಜೊಗಸೆಗಣ್ಣಿನ ಸೀತೆಗೆ ಇನ್ನೂ ನಡು ಹರೆಯ. ಈ ವಸಂತಕಾಲ ಅವಳಿಗೆ ದುರ್ಭರ. ಮಹಾಪತಿವ್ರತೆ ಅವಳು. ಅವಳ ಅನುರಾಗ ಎಲ್ಲವೂ ನನ್ನಲ್ಲಿಯೇ. ನನಗೂ ಅವಳಲ್ಲೇ ಸಂಪೂರ್ಣ ಅನುರಾಗ. ಅವಳು ಒಂದು ಗಳಿಗೆ ಕೂಡ ನನ್ನನ್ನು ಬಿಟ್ಟು ಬದುಕಲಾರಳು. ನನಗೂ ಹಾಗೆಯೇ. ಈ ಗಾಳಿ ನೋಡು. ಎಷ್ಟು ಸುವಾಸನೆಯನ್ನು ಹೊತ್ತು ತರುತ್ತ ಇದೆ. ಎಷ್ಟು ತಂಪು. ಆದರೂ ಸೀತೆಯ ಅಗಲಿಕೆಯಿಂದ ಇದೂ ಬೆಂಕಿಯ ಹಾಗೆ ನನ್ನನ್ನು ಸುಡುತ್ತ ಇದೆ. ಸೀತೆ ಜೊತೆಯಲ್ಲಿ ಇದ್ದಾಗ ಈ ಗಾಳಿ ಬಹಳ ಹಿತಕರ, ಸುಖಕರ ಆಗಿ ಇತ್ತು. ಅದೇ ಈಗ ಅವಳು ಇಲ್ಲದ್ದರಿಂದ ದುಃಖ ತರುತ್ತ ಇದೆ.

“ತಮ್ಮ, ಸೀತೆ ನಾನು ಒಟ್ಟಿಗೆ ಇದ್ದಾಗ ಈ ಕಾಗೆಯ ಕೂಗು ನನಗೆ ಕರ್ಣಕಠೋರ ಆಗಿ ಇತ್ತು. ವಿಯೋಗಸೂಚಕ ಆ ಕೂಗು. ಈಗ ಕಾಗೆ ಮರದ ಮೇಲೆ ಕೂತು ಸಂತೋಷದಿಂದ ಕೂಗುತ್ತ ಇದೆ. ಸೀತೆಯನ್ನು ನೀನು ಕೂಡುತ್ತೀಯೆ ಎಂದು ಈಗ ಅದರ ಸೂಚನೆ. ಆಗ ಅಗಲಿಸಿದ್ದೂ ಇದೇ. ಈಗ ಕೂಡಿಸುವುದೂ ಇದೇ. ಈ ಕಾಡಿನ ಗಿಡಗಳಲ್ಲಿ ಎಲ್ಲ ರೆಂಬೆಗಳೂ ಹೂ ಬಿಟ್ಟವೆ. ಆ ರೆಂಬೆಗಳ ಮೇಲೆ ಕುಳಿತು ಇಂಪು ಧ್ವನಿಮಾಡುತ್ತ ಇವೆ ಆ ಹಕ್ಕಿಗಳು. ಅದರಿಂದ ನನಗೆ ಮದನಬಾಧೆ. ಈ ತಿಲಕವೃಕ್ಷದ ರೆಂಬೆ ಗಾಳಿಗೆ ಕದಲುತ್ತ ಇದೆ. ಆ ಹೂಗಳ ಬಳಿಗೆ ಹೇಗೆ ಓಡಿಹೋಗುತ್ತ ಇದೆ ದುಂಬಿ, ಕಾಮಾತುರೆ ಆದ ನಲ್ಲೆಯ ಬಳಿಗೆ ಹೋಗುವ ಕಾಮುಕನ ಹಾಗೆ! ವಿರಹಿಗಳ ಶೋಕವನ್ನು ಹೆಚ್ಚಿಸುವುದು ಈ ಅಶೋಕವೃಕ್ಷದ ರೂಢಿ. ಗಾಳಿಯಿಂದ ಅದರ ಹೂಗೊಂಚಲು ಅಲುಗಾಡುತ್ತ ಇವೆ. ಆ ಹೂಗೊಂಚಲಿನ ಕೈಗಳಿಂದ ನನ್ನನ್ನು ಬೆದರಿಸುತ್ತ ಇದೆ ಅದು. ಹೂ ಅರಳಿ ಕಂಗೊಳಿಸುತ್ತ ಇರುವ ಈ ಮಾವಿನ ಮರ ನೋಡು, ಲಕ್ಷ್ಮಣ. ಹೂ ಮುಡಿದು ಗಂಧ ಬಳಿದುಕೊಂಡು ವಿಲಾಸದಿಂದ ಉತ್ಸಾಹಗೊಂಡ ಕಾಮುಕನ ಹಾಗೆ ನಿಂತು ಇದೆ.

“ನರಶ್ರೇಷ್ಠ, ಸೌಮಿತ್ರಿ, ಪಂಪಾತೀರದ ಈ ಚಿತ್ರವಿಚಿತ್ರ ವನಗಳಲ್ಲಿ ಕಿನ್ನರರು ವಿಹರಿಸುತ್ತ ಇದಾರೆ. ನೋಡು. ಸುತ್ತಲೂ ಪರಿಮಳ ಬೀರುವ ಈ ಕೆಂದಾವರೆಗಳು ಪಂಪಾಸರೋವರದ ನೀರಿನಲ್ಲಿ ಬಾಲಸೂರ್ಯನ ಪ್ರತಿಬಿಂಬದಂತೆ ಹೊಳೆಯುತ್ತ ಇವೆ. ಲಕ್ಷ್ಮಣ, ಪಂಪಾಸರೋವರದ ಈ ತಿಳಿನೀರು, ಕಮಲ

ಕಣ್ಸೆಳೆಯುವ ಹೂಗಳು, ಕಿವಿಗೆ ಇಂಪು ಆಗಿ ದನಿಮಾಡುವ ಹಂಸಕಾರಂಡವ ಪಕ್ಷಿಗಳು, ಎಷ್ಟು ರಮಣೀಯ! ಸರೋವರದ ನೀರೇ ಕಣ್ಣಿಗೆ ಕಾಣದ ಹಾಗೆ ಬೆಳೆದು ಇವೆ ಕಮಲದ ಹೂ. ದುಂಬಿಗಳು ಕಮಲದ ಎಸಳುಗಳನ್ನು ನೀರಿನ ತುಂಬಾ ಕೆಡವಿ, ಬಾಲಸೂರ್ಯನಂತೆ ಹೊಳೆಯುತ್ತಿದೆ ಸರೋವರ. ಸುತ್ತಲೂ ಇರುವ ಚಿತ್ರವಿಚಿತ್ರ ವನಗಳಿಂದ ಬೆಟ್ಟದ ತಪ್ಪಲುಗಳಿಂದ ಸರೋವರದಲ್ಲಿ ನೀರು ಕುಡಿಯಲು ಹಿಂಡುಗಟ್ಟಿ ಬರುತ್ತ ಇವೆ ಆನೆ ಜಿಂಕೆ. ಈ ಚಕ್ರವಾಕ ಪಕ್ಷಿಗಳ ಗುಂಪನ್ನು ನೋಡು. ಇವುಗಳಿಂದ ಎಷ್ಟು ಸೊಬಗು ಈ ಸರೋವರಕ್ಕೆ. ಈ ಕಮಲಗಳನ್ನು ನೋಡು, ಗಾಳಿಯು ಹೊಡತಕ್ಕೆ ಪಂಪಾಸರೋವರದ ನೀರು ಅಲೆ ಅಲೆ ಆಗಿ ಎದ್ದು ಈ ಕಮಲಗಳನ್ನು ನಡುಗಿಸುತ್ತ ಇದೆ. ಎಷ್ಟು ಸೊಗಸು!

"ಲಕ್ಷ್ಮಣ, ಕಮಲದಳಾಯತಾಕ್ಷಿ ಸೀತೆ. ಇಂಥ ಕಮಲ ಎಂದರೆ ಅವಳಿಗೆ ಬಲು ಇಷ್ಟ. ಅವಳು ಇಲ್ಲದೆ ಹೀಗೆ ಬದುಕುವುದು ನನಗೆ ಇಷ್ಟ ಇಲ್ಲ. ಈ ಮನ್ಮಥ ಎಷ್ಟು ವಕ್ರ, ಎಷ್ಟು ಕ್ರೂರ. ಸೀತೆ ಮಂಗಳಾಂಗಿ. ಯಾವಾಗಲೂ ಶುಭವನ್ನೆ ನುಡಿಯುತ್ತ ಇದ್ದಳು. ಎಲ್ಲಿ ಇದ್ದಾಳೋ ಈಗ. ಅವಳ ಸುದ್ದಿಯೇ ದುರ್ಲಭ. ಈಗ ಅವಳ ನೆನಪನ್ನೇ ತಂದುಕೊಡುತ್ತ ಇದ್ದಾನಲ್ಲ ಈ ಮನ್ಮಥ. ಗಿಡದ ತುಂಬಾ ಹೂ ಅರಳಿಸದೆ ಇದ್ದರೆ ಈ ವಸಂತಋತು, ಮದನಬಾಧೆ ಇಷ್ಟು ಇರುತ್ತ ಇರಲಿಲ್ಲ ನನಗೆ. ತಡೆದುಕೊಳ್ಳುತ್ತ ಇದ್ದೆ. ಸೀತೆ ನನ್ನ ಬಳಿ ಇದ್ದಾಗ ಯಾವುದು ನನಗೆ ರಮಣೀಯ ಆಗಿತ್ತೋ ಅದು ಈಗ ಅಸಹ್ಯ ಆಗಿದೆ. ದುಃಖ ಕೊಡುತ್ತ ಇದೆ ಸೀತೆ ಇಲ್ಲದ್ದರಿಂದ. ಈ ಕಮಲದ ಮೊಗ್ಗು ನೋಡಿ ಸೀತೆಯ ಕಣ್ಣಿನ ರೆಪ್ಪೆ ನೆನಪು ಆಗುತ್ತ ಇದೆ. ಕಮಲದ ದಳಗಳನ್ನು ಸೋಕಿ ಮರಗಳ ಸಂದಿನಲ್ಲಿ ಹಾಯ್ದು ಬರುವ ಈ ಗಾಳಿ ಸೀತೆಯ ನಿಟ್ಟುಸಿರಿನಂತೆ ಸುವಾಸನೆ ಆಗಿ ಇದೆ. ಎಷ್ಟು ಮನೋಹರ ಅದರ ಸ್ಪರ್ಶ.

"ಲಕ್ಷ್ಮಣ, ಪಂಪಾಸರೋವರದ ದಕ್ಷಿಣ ತೀರದಲ್ಲಿ ಅರಳಿದ ಹೂ ತುಂಬಿ ಪರಮ ಮಂಗಳಕರ ಆಗಿ ಕಾಣುವ ಕರ್ಣಿಕಾರ ಗಿಡವನ್ನು ನೋಡು. ಆ ಬೆಟ್ಟದಲ್ಲಿ ಇರುವ ಬಗೆಬಗೆಯ ಬಣ್ಣದ ಧಾತುಗಳ ಧೂಳಿ ರಂಗು ರಂಗು ಆಗಿ ಹೇಗೆ ಬರುತ್ತ ಇದೆ ಗಾಳಿಗೆ. ಬೆಟ್ಟದ ತಪ್ಪಲಿನಲ್ಲಿ ಎಲ್ಲೆಲ್ಲೂ ಮುತ್ತುಗದ ಗಿಡಗಳು ಕೆಂಪಗೆ ಹೂ ಬಿಟ್ಟು ಧಗಧಗ ಉರಿಯುವ ಜ್ವಾಲೆಯ ಹಾಗೆ ಇವೆ. ಹೂಗಿಡಗಳು ಒತ್ತಾಗಿ ಬೆಳೆದು ಒಂದಕ್ಕೆ ಒಂದು ಹೆಣೆದುಕೊಂಡು ಹೇಗೆ

ಸುತ್ತಲೂ ಪರಿಮಳವನ್ನು ಬೀರುತ್ತ ಇವೆ! ಎಷ್ಟು ಬಗೆಯ ಹೂ ಗಿಡಬಳ್ಳಿ! ಮಾಲತಿ ಮಲ್ಲಿಗೆ ಕಣಿಗಿಲೆ ಕೇದಗೆ ಗುಲಗಂಜಿ ದುಂಡುಮಲ್ಲಿಗೆ ನೀರ್ಗುಂಡಿ ನಾಗಕೇಸರಿ ಕಡವು ಸಂಪಗೆ ಖರ್ಜೂರ ಪದ್ಮ ನೀಲಾಶೋಕ ಹವಳ ತಿಲಕ ನೀಪ ಅಂಕೋಲೆ ಗೋರಂಟಿ ಪೂರ್ಣಕ ಪಾರಿಭದ್ರಕ ಪಾದರಿ ಮಾವು ಕೋವಿದಾರ ಪಾಟಲಿ ಅರ್ಜುನ. ಎಷ್ಟು ಬಗೆಯ ಬಳ್ಳಿಗಿಡಗಳಲ್ಲಿ ಇದೆ ಹೂ. ಇನ್ನೂ ಇವೆ ನೋಡು, ತಮ್ಮ. ಕೇದಗೆ ಉದ್ದಾಲಕ ಶಿರೀಷ ಶಿಂಶುಪ ಆಲ ಅರಳಿ ಬೂರುಗ ಮುತ್ತುಗ ಕಿಸಿಶ ನಕ್ತಮಾಲ ಚಂದನ ಸ್ಪಂದನ ವೃಕ್ಷಗಳೂ ಹೂತಿವೆ. ಅವಕ್ಕೆ ಸುತ್ತಿಕೊಂಡು ಇರುವ ಬಳ್ಳಿಗಳೂ ಹೂತು ಇವೆ. ಎಷ್ಟು ಸೊಂಪು ನೋಟ. ಎಷ್ಟು ಸೊಬಗು! ತಂಗಾಳಿ ಬೀಸಿ ಈ ಗಿಡಮರ ಅಲುಗಾಡಿದರೂ ಈ ಹೂಬಳ್ಳಿಗಳು ಆ ರೆಂಬೆಗಳನ್ನೇ ಅಂಟಿಕೊಂಡಿವೆ. ಕಾಮಮೋಹಿತರು ಆದ ಸ್ತ್ರೀಯರು ತಮ್ಮ ನಲ್ಲರನ್ನು ಬಿಡದೆ ಅಪ್ಪಿಕೊಳ್ಳುವಂತೆ.

"ವತ್ಸ, ಲಕ್ಷ್ಮಣ, ಈ ತಂಗಾಳಿಯನ್ನು ನೋಡು. ಗಿಡದಿಂದ ಗಿಡಕ್ಕೆ ಬೆಟ್ಟದಿಂದ ಬೆಟ್ಟಕ್ಕೆ ವನದಿಂದ ವನಕ್ಕೆ ಬೀಸುತ್ತ ಬಗೆಬಗೆಯ ಮಕರಂದವನ್ನು ಕುಡಿದು ಮದೋನ್ಮತ್ತ ಆಗಿ ಮೆಲ್ಲಮೆಲ್ಲನೆ ಬರುತ್ತ ಇದೆ. ಈ ಗಿಡಗಳನ್ನು ನೋಡು. ಬರೀ ಹೂವೇ. ಹೇಗೆ ಹರಡಿ ಇದೆ ಆ ಸುಗಂಧ! ಕೆಲವು ಗಿಡ ಇನ್ನೂ ಮೊಗ್ಗು ಬಿಟ್ಟವೆ. ಆ ಎಲೆಗಳ ನೀಲಿಹಸಿರು ಸೊಗಸು ಆಗಿ ಇದೆ. ಈ ಹೂ ಬಲುರುಚಿ, ಈ ಹೂ ಬಲು ರಸವಂತ, ಸೊಗಸು ಆಗಿ ಅರಳಿದ್ದು ಈ ಹೂ ಎನ್ನುತ್ತ ಒಂದೊಂದು ಹೂವಿನ ಮೇಲೂ ಕುಳಿತು ಮಕರಂದಪಾನ ಮಾಡುತ್ತ ಇವೆ ದುಂಬಿಗಳು. ಮಕರಂದದ ಆಸೆ ದುಂಬಿಗಳಿಗೆ. ಒಂದು ಗಿಡವನ್ನೂ ಬಿಡಲಾರವು, ಒಂದು ಹೂವನ್ನೂ ಬಿಡಲಾರವು.

"ತಮ್ಮ, ಈ ನೆಲದ ಮೇಲೆ ಉದುರಿಬಿದ್ದಿರುವ ಹೂಗಳು ಸುಖದಿಂದ ಮಲಗಲು ಸುಪ್ಪತ್ತಿಗೆ ಹಾಸಿದ ಹಾಗೆ ಇವೆ, ನೋಡು. ಬೆಟ್ಟದ ತಪ್ಪಲಿನಲ್ಲಿ ಉದುರಿಬಿದ್ದಿರುವ ಬಣ್ಣಬಣ್ಣದ ಹೂಗಳನ್ನು ನೋಡು. ಕೆಂಪು ಬಣ್ಣದ್ದು ಹಳದಿ ಬಣ್ಣದ್ದು ಹಾಸಿಗೆ ಹಾಸಿದಂತೆ ಇವೆ. ಎಷ್ಟು ರಮ್ಯ. ಗಿಡಗಳು ಹೂ ಬಿಡುವುದರಲ್ಲಿ ಪೋಟಿ ಮಾಡಿ ಇವೆ ಈ ವಸಂತಮಾಸದಲ್ಲಿ. ಈ ಗಿಡಗಳ ಕೊಂಬೆಗಳು ಗಾಳಿಗೆ ತಲೆದೂಗುತ್ತ ಇವೆ. ದುಂಬಿಗಳ ದನಿಯಿಂದ ಒಂದನ್ನು ಒಂದು ಮಾತಾಡಿಸುತ್ತ ಇವೆ.

"ಲಕ್ಷ್ಮಣ, ಆ ಕಾರಂಡವ ಪಕ್ಷಿ ನೀರಿಗೆ ಇಳಿದು ತನ್ನ ನಲ್ಲೆಯ ಸಂಗಡ ವಿಹರಿಸುತ್ತ ನನ್ನ ಕಾಮೋದ್ರೇಕವನ್ನು ಹೆಚ್ಚಿಸುತ್ತ ಇದೆ. ತಮ್ಮ, ಪಂಪಾಸರೋವರದ ಚೆಂದ ನಾವು ನೋಡಿದ ಮಂದಾಕಿನೀ ನದಿಯ ಚೆಂದ ಒಂದೇ ರೀತಿ. ಗಂಗಾನದಿ ಬಲು ರಮ್ಯ ಎಂದು ಹೆಸರು ಬಂದದ್ದು ಸರಿ. ಈಗಲಾದರೂ ಆ ಪರಮಪತಿವ್ರತೆ ಸೀತೆ ಸಿಕ್ಕರೆ ನಾವು ಇಲ್ಲೇ ಇದ್ದುಬಿಡಬಹುದು. ಆಗ ನನಗೆ ಅಯೋಧ್ಯೆಯೂ ಬೇಡ, ಇಂದ್ರಪದವಿಯೂ ಬೇಡ. ಮನಸೆಳೆವ ಈ ಹುಲ್ಲುಬಯಲಿನಲ್ಲಿ ಸೀತೆಯ ಸಂಗಡ ವಿಹರಿಸುತ್ತ ಇದ್ದರೆ ನನಗೆ ಬೇರೆ ಏನೂ ಬೇಡ. ಯಾವ ಚಿಂತೆಯೂ ಇರದು.

"ತಮ್ಮ, ಬಗೆಬಗೆಯ ಹೂ, ಬಣ್ಣಬಣ್ಣದ ಎಲೆ. ಈ ಕಾಡು ಎಷ್ಟು ಮನೋಹರ. ನನಗೆ ಹುಚ್ಚು ಹಿಡಿಸುತ್ತ ಇದೆ ಇದು. ತಂಪು ನೀರು, ಸೊಂಪಿನ ತಾವರೆ, ಚಕ್ರವಾಕ ಕಾರಂಡವ ನೀರುಕೋಳಿ ಕ್ರೌಂಚಪಕ್ಷಿಗಳು, ತೀರದಲ್ಲಿ ಹಂದಿ ಹುಲ್ಲೆ—ಈ ಪಂಪಾಸರೋವರ ಎಷ್ಟು ರಮಣೀಯ. ಸುತ್ತಲೂ ಇಂಪು ಹಾಡು ಹಾಡುತ್ತ ಇರುವ ಹಕ್ಕಿಗಳಿಂದ ಇದರ ಸೊಬಗು ಹೆಚ್ಚಿದೆ. ಇದೆಲ್ಲವನ್ನೂ ಕಂಡು ನಡುಹರೆಯದ ಕಮಲದ ಕಣ್ಣಿನ ಚಂದ್ರಮುಖಿ ಸೀತೆಯ ನೆನಪು ನನಗೆ. ಏನು ಮಾಡಲಿ? ಕಾಮತಾಪ ಸುಡುತ್ತ ಇದೆಯಲ್ಲ.

"ಅಲ್ಲಿ ನೋಡು, ಚಿತ್ರವಿಚಿತ್ರ ಆದ ಈ ತಪ್ಪಲಿನಲ್ಲಿ ಹೆಣ್ಣುಜಿಂಕೆಗಳ ಒಡನೆ ಗಂಡುಜಿಂಕೆಗಳು ಹೇಗೆ ಕ್ರೀಡಿಸುತ್ತಿವೆ. ಜಿಂಕೆಗಣ್ಣಿನ ಆ ಸೀತೆಯನ್ನು ಕಳೆದುಕೊಂಡು ದುಃಖಿಸುತ್ತ ಇರುವ ನನ್ನನ್ನು ನೋಡು. ಈ ತಪ್ಪಲಲ್ಲಿ ಮೃಗಪಕ್ಷಿಗಳು ಗಂಡು ಹೆಣ್ಣು ಕಲೆತು ಕ್ರೀಡಿಸುತ್ತ ಇವೆ. ನನಗೋ ವ್ಯಥೆ. ಈಗ ನಾನು ನನ್ನ ನಲ್ಲೆ ಸೀತೆಯನ್ನು ಕಂಡರೆ ನನಗೆ ಸುಖ. ಪದ್ಮಸೌಗಂಧಿಕಾ ಪುಷ್ಪಗಳ ಸುಗಂಧವನ್ನು ಹೊತ್ತು ತರುವ ಪಂಪಾತೀರದ ಈ ತಂಗಾಳಿ ಬಹಳ ಮಂಗಳಕರ. ಎಲ್ಲ ದುಃಖಗಳನ್ನೂ ನೀಗುತ್ತದೆ. ಈ ಗಾಳಿಯನ್ನು ತಮ್ಮ ತಮ್ಮ ನಲ್ಲೆಯರ ಜೊತೆಯಲ್ಲಿ ಅನುಭವಿಸಬಲ್ಲವರೇ ಪುಣ್ಯಾತ್ಮರು.

"ತಮ್ಮ, ಕಮಲನಯನೆ ಸೀತೆಗೆ ಈಗ ನಡುಹರೆಯ. ನನ್ನನ್ನು ಅಗಲಿ ಅವಳು ಬದುಕಿ ಇರುವುದೇ ನನಗೆ ಸಂಶಯ. ಸತ್ಯವಾದಿ ಧರ್ಮಜ್ಞ ಜನಕ ಮಹಾರಾಜ ಹತ್ತು ಜನರ ನಡುವೆ ಮಗಳ ಕ್ಷೇಮಸಮಾಚಾರ ಕೇಳಿದರೆ ಏನು ಹೇಳಲಿ? ಎಂಥ ದುರ್ಭಾಗ್ಯ ನಾನು! ರಾಜ್ಯಭ್ರಷ್ಟ ಆದೆ. ಆದರೂ ಸೀತೆ

ನನ್ನ ಹಿಂದೆಯೇ ಬಂದಳು. ಎಂಥ ಪತಿವ್ರತೆ! ನನಗೆ ಬುದ್ಧಿ ಕೆಡದಂತೆ ಕಾಪಾಡಿದಳು. ಆ ಶುಭಾಂಗಿ ಪದ್ಮಪತ್ರಾಕ್ಷಿ ಸುಗಂಧಿ ಈಗ ಎಲ್ಲಿ ಇದ್ದಾಳೋ! ಅವಳ ಮುಖವನ್ನು ಕಾಣದೆ ನನ್ನ ಮನಸಿಗೆ ಬಹಳ ದುಃಖ ಆಗಿದೆ. ತಳಮಳ ಗೊಳ್ಳುತ್ತ ಇದೆ ಮನಸ್ಸು. ಸ್ವಾಭಾವಿಕ ಮಂದಹಾಸ ಸೀತೆಯದು. ಆಗಾಗ ಕಿರುನಗೆ ನಗುತ್ತ ಕಿವಿಗೆ ಇಂಪು ಮನಸಿಗೆ ಹಿತ ಆಗಿ ಅಸಮಾನ ರೀತಿಯಲ್ಲಿ ಸವಿನುಡಿ ನುಡಿಯುವುದು ಅವಳ ಗುಣ. ಆ ಸವಿಮಾತು ಮತ್ತೆ ಕೇಳಿಬರುವುದು ಯಾವಾಗ? ತಾನೇ ವನವಾಸ ದುಃಖಕ್ಕೆ ಈಡು ಆದರೂ ಏನೂ ದುಃಖ ಅರಿಯದವಳ ಹಾಗೆ ಸವಿನುಡಿಗಳನ್ನು ಹೇಳುತ್ತ ಇದ್ದಳಲ್ಲ ಆ ಶ್ಯಾಮಾಂಗಿ, ಆ ನಲ್ಲೆ ಮನ್ಮಥಬಾಧೆಯಿಂದ ಮರುಗುವ ನನಗೆ! ಇನ್ನು ಎಲ್ಲಿ ಆ ಸೀತೆ? ನಾವು ಅಯೋಧ್ಯೆಗೆ ಹೋದರೆ ತಾಯಿ ಕೌಸಲ್ಯೆ ಸೊಸೆ ಎಲ್ಲಿ ಎಂದು ಕೇಳಿದರೆ ಏನು ಹೇಳಲಿ, ತಮ್ಮ? ಲಕ್ಷ್ಮಣ, ನಾನು ಇನ್ನು ಬದುಕಲಾರೆ" ಎಂದು ದಿಕ್ಕು ಕಾಣದವನಂತೆ ರಾಮ ಅತ್ತ.

ಸಮಯೋಚಿತ ಆಗಿ ಲಕ್ಷ್ಮಣ ಹೇಳಿದ ಮರುಮಾತಾಡಲು ಬಾರದಂತೆ. "ಅಣ್ಣ, ದುಃಖವನ್ನು ಅಡಗಿಸು. ಧೈರ್ಯ ತಂದುಕೊ. ರಾಮ, ನೀನು ಪುರುಷೋತ್ತಮ. ದುಃಖಿಸಬೇಡ. ನಿನಗೆ ಮಂಗಳ ಆಗುತ್ತದೆ. ನೀನು ಧೀರ. ಧರ್ಮಾತ್ಮ. ನಿನಗೂ ಬುದ್ಧಿಮಾಂದ್ಯವೇ? ನಿನಗೆ ತಿಳಿಯದುದು ಏನು? ಸ್ನೇಹ ಹೆಚ್ಚಿದಷ್ಟೂ ವಿಯೋಗದ ದುಃಖ ಹೆಚ್ಚು. ಅತಿಸ್ನೇಹ ಗತಿ ಕೆಡಿಸುತ್ತದೆ. ಎಣ್ಣೆ ಹೆಚ್ಚು ಇದ್ದರೆ ಬತ್ತಿ ಬೇಗ ಸುಡುತ್ತದೆ. ಅತಿಸ್ನೇಹ ಬೇಡ, ಅಣ್ಣ.

"ಸೀತಾದೇವಿಯನ್ನು ಕದ್ದು ಒಯ್ದು ಆ ರಾವಣ ಪಾತಾಳದಲ್ಲೇ ಇರಲಿ ಇನ್ನೂ ಆಳ ಆದ ರಹಸ್ಯ ಸ್ಥಳದಲ್ಲೇ ಇರಲಿ, ಅವನಿಗೆ ಸಾವು ಖಂಡಿತ. ಆ ಪಾಪಾತ್ಮನ ಜಾಡು ತಿಳಿದರೆ ಸಾಕು. ಅವನ ಸುಳಿವು ತಿಳಿಯಬೇಕು. ಸೀತೆಯನ್ನು ಆದರೂ ತಂದು ಒಪ್ಪಿಸುತ್ತಾನೆ. ಇಲ್ಲವೆ ಪ್ರಾಣಗಳನ್ನು ಆದರೂ ಒಪ್ಪಿಸುತ್ತಾನೆ. ಎರಡರಲ್ಲಿ ಒಂದು. ಸೀತಾದೇವಿಯನ್ನು ಎತ್ತಿಕೊಂಡುಹೋಗಿ ಇಂದ್ರನ ತಾಯಿ ಅದಿತಿಯ ಗರ್ಭದಲ್ಲಿ ಅವಿತುಕೊಂಡರೂ ಬಿಡುವುದು ಇಲ್ಲ. ಅಲ್ಲೇ ಕೊಲ್ಲುತ್ತೇನೆ. ಖಂಡಿತ.

"ಅಣ್ಣ, ಶ್ರೀರಾಮ, ಧೈರ್ಯ ತಂದುಕೊ. ದೈನ್ಯವನ್ನು ಬಿಡು. ಪ್ರಯತ್ನ ಮಾಡದೆ ಕಾರ್ಯಸಿದ್ಧಿ ಇಲ್ಲ. ಪ್ರಯತ್ನ ಮಾಡಿ ಯಾವ ಕಾರ್ಯ

ವನ್ನು ಆದರೂ ಸಾಧಿಸಬೇಕು. ಉತ್ಸಾಹವೇ ಕಾರ್ಯಸಿದ್ಧಿಗೆ ಪ್ರಬಲವಾದ ಸಾಧನ. ಅದಕ್ಕಿಂತ ಹೆಚ್ಚಿನ ಬಲ ಇಲ್ಲ. ಉತ್ಸಾಹಕ್ಕೆ ದುರ್ಲಭ ಆದದ್ದು ಇಲ್ಲ. ಧೈರ್ಯ ಇದ್ದರೆ ಉತ್ಸಾಹ. ಉತ್ಸಾಹ ಇದ್ದರೆ ಜಯ. ಉತ್ಸಾಹ ಇದ್ದರೆ ಯಾವ ಕ್ಲೇಶವೂ ಇಲ್ಲ. ಅಣ್ಣ, ನೀನು ಉತ್ಸಾಹವನ್ನು ತೊರೆಯಬೇಡ. ಅದು ಇದ್ದರೆ ನಮಗೆ ಸೀತಾದೇವಿ ಸಿಕ್ಕುಂತೆಯೇ. ಅಣ್ಣ, ದುಃಖವನ್ನು ಬಿಡು, ಕಾಮವಿಕಾರವನ್ನು ನೀಗು. ನೀನು ಮಹಾಮಹಿಮ. ಸಾಮಾನ್ಯ ಅಲ್ಲ. ನಿನ್ನದು ಅಸಾಧಾರಣ ಬುದ್ಧಿ. ಈಗ ನಿನ್ನನ್ನೇ ನೀನು ಮರೆತು ಇದೀಯೆ" ಎಂದು ಹೇಳಿದ.

ರಾಮನ ಮನಸ್ಸು ದುಃಖದಿಂದ ಬೆಂದು ಕೆಟ್ಟುಹೋಗಿತ್ತು. ಆದರೂ ಲಕ್ಷ್ಮಣನ ಮಾತನ್ನು ಕೇಳಿ ತನ್ನ ಶೋಕಮೋಹಗಳನ್ನು ತೊರೆದ. ಧೈರ್ಯ ತಳೆದ. ಗಾಳಿಯಿಂದ ತೂಗಾಡುತ್ತ ಇದ್ದ ಗಿಡಮರಗಳ ಆ ಪಂಪಾಸರೋವರ ವನ್ನು ಆ ರಮಣೀಯ ಪ್ರದೇಶವನ್ನು ದಾಟಿ ಮುಂದೆ ಹೋದ. ಅಚಿಂತ್ಯ ವಿಕ್ರಮ ರಾಮ. ಸ್ಥಿರಮನಸ್ಸಿನಿಂದ ಮುಂದೆ ಹೋದ. ವನಗಳನ್ನು ದಾಟಿದ. ಗಿರಿನದಿಗಳನ್ನೂ ಪರ್ವತಗುಹೆಗಳನ್ನೂ ದಾಟಿದ. ಮನಸಿನಲ್ಲಿ ಸೀತೆಯನ್ನು ಕಾಣದ ಕೊರಗು.

ಲಕ್ಷ್ಮಣನಿಗೆ ಯಾವ ಚಾಂಚಲ್ಯವೂ ಇಲ್ಲ. ಮದ್ದಾನೆಯ ಗಂಭೀರ ಗಮನ ಅವನದು. ರಾಮನನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತ ಹಲವು ಬಗೆಯ ರಾಜನೀತಿಗಳನ್ನು ತಿಳಿಸುತ್ತ ಧೈರ್ಯವನ್ನು ಕೊಡುತ್ತ ರಾಮನನ್ನು ಕಾಪಾಡುತ್ತ ಜೊತೆಯಲ್ಲಿ ನಡೆಯುತ್ತ ಇದ್ದ.

ನೋಡುವವರಿಗೆ ಅಚ್ಚರಿ ಹುಟ್ಟಿಸುತ್ತಾ ನಡೆಯುತ್ತ ಇದ್ದ ಆ ಅಣ್ಣ ತಮ್ಮಂದಿರನ್ನು ಋಷ್ಯಮೂಕ ಪರ್ವತದಲ್ಲಿ ತಿರುಗಾಡುತ್ತ ಇದ್ದ ವಾನರಾಧಿಪತಿ ಮಹಾಬಲಾಢ್ಯ ಸುಗ್ರೀವ ನೋಡಿದ. ಅವನಿಗೆ ಬಹಳ ಭಯ ಆಯಿತು. ಕಂಬದಂತೆ ನಿಂತುಬಿಟ್ಟ.

ಅವನ ಜೊತೆಯ ವಾನರರೂ ನೋಡಿದರು. ಬೆದರಿದರು. ಮತಂಗ ಆಶ್ರಮಕ್ಕೆ ಓಡಿಹೋದರು.

೨

ರಾಮಲಕ್ಷ್ಮಣರ ಭದ್ರ ಶರೀರ, ಅವರ ಕೈಯ ಮಹಾ ಆಯುಧಗಳು. ಸುಗ್ರೀವ ಅಂಜಿದ. ಮನಸಿಗೆ ಅನುಮಾನ ಆಯಿತು. ಮನಸ್ಸು ತಲ್ಲಣಿಸಿ ಹೋಯಿತು. ದಿಕ್ಕೇ ತೋರಲಿಲ್ಲ. ಸುತ್ತಲೂ ನೋಡಿದ. ಎಲ್ಲಿಗೆ ಹೋಗ ಬೇಕೋ ತಿಳಿಯಲಿಲ್ಲ. ಇದ್ದಲ್ಲಿ ಇರಲು ಧೈರ್ಯ ಇಲ್ಲ. ನಿಂತ ಕಡೆ ನಿಲ್ಲಲಾರದೆ ಹೋದ. ಎದೆಯೆ ಒಡೆದ ಹಾಗೆ ಆಯಿತು. ಆದರೆ ಸುಗ್ರೀವ ರಾಜಧರ್ಮಜ್ಞ. ಇಲ್ಲಿಯೇ ಇದ್ದು ನೋಡೋಣವೊ ಬೇರೆ ಸ್ಥಳಕ್ಕೆ ಓಡಿಹೋಗೋಣವೊ ಎಂದು ಆಲೋಚಿಸಿದ. ಬಗೆಹರಿಯಲಿಲ್ಲ. ಇದರ ಕಷ್ಟ ಸುಖಗಳನ್ನು ಮಂತ್ರಿಗಳ ಸಂಗಡ ಚರ್ಚಿಸುವುದು ಒಳ್ಳೆಯದು ಎನಿಸಿತು. ಬಹಳ ಬೆದರಿದ. ಆ ಭಯ ದಿಂದಲೇ “ಇವರು ಯಾರೋ ವಾಲಿ ಕಳಿಸಿದವರೇ ಆಗಿರಬೇಕು. ನಾರು ಬಟ್ಟೆ ಉಟ್ಟು ವೇಷಾಂತರದಿಂದ ಈ ದುರ್ಗಮ ಅರಣ್ಯಕ್ಕೆ ಬಂದ ಕಪಟಿಗಳು ಇವರು” ಎಂದ ರಾಮಲಕ್ಷ್ಮಣರನ್ನು ತೋರಿಸಿ. ರಾಮಲಕ್ಷ್ಮಣರು ಬಿಲ್ಲುಬಾಣ ಹಿಡಿದು ಬರುತ್ತಾ ಇದ್ದರು. ಅವರನ್ನು ನೋಡಿ ಸುಗ್ರೀವನ ಸಚಿವರು ಇದ್ದ ಬೆಟ್ಟದ ತುದಿಯನ್ನು ಬಿಟ್ಟು ಬೇರೆ ಎತ್ತರದ ಇನ್ನೊಂದು ಶಿಖರವನ್ನು ಏರಿದರು.

ಅಲ್ಲಿಯೂ ಸ್ಥಿರ ಆಗಿ ನಿಲ್ಲಲಿಲ್ಲ. ಬೆಟ್ಟದಿಂದ ಬೆಟ್ಟಕ್ಕೆ ಶಿಖರದಿಂದ ಶಿಖರಕ್ಕೆ ಹಾರಿದರು. ಆ ನೆಗೆತಕ್ಕೆ ಪರ್ವತಶಿಖರಗಳು ಅಲ್ಲಾಡಿದವು. ಹೂವಿನ ಗಿಡಗಳು ಮುರಿದುಬಿದ್ದವು. ಅವರ ಹಾರಾಟವನ್ನು ನೋಡಿ ಜಿಂಕೆ ಕಾಡು ಬೆಕ್ಕು ಹುಲಿ ಎಲ್ಲವೂ ಹೆದರಿ ಓಡಿಹೋದವು. ವಾನರರು ಎಲ್ಲರೂ ಸುಗ್ರೀವ ಇದ್ದಲ್ಲಿಗೆ ಬಂದು ಸೇರಿದರು. ಅವನ ಮುಂದೆ ಕೈಮುಗಿದು ನಿಂತರು.

ಹನುಮಂತ ನುಡಿಜಾಣ, ಮಾತುಬಲ್ಲವನು. “ವಾನರವೀರರೆ, ವಾಲಿಯ ಭಯ ಏಕೆ? ಇದು ಋಷ್ಯಮೂಕ ಪರ್ವತ. ಇಲ್ಲಿ ವಾಲಿಯ ಭಯ ಇಲ್ಲ. ವಾನರೇಂದ್ರ, ವಾಲಿ ಇಲ್ಲಿಗೆ ಬರಲಾರ. ಸಾಧ್ಯ ಇಲ್ಲ. ಅವನು ಕ್ರೂರಿ, ದುಷ್ಟ. ಅವನ ಭಯವನ್ನು ತಪ್ಪಿಸಿಕೊಳ್ಳಲು ಇಲ್ಲಿಗೆ ಬಂದೆವು. ಇಲ್ಲೂ ಭಯಪಡಬೇಕೆ? ಸುಗ್ರೀವ, ನಿನ್ನ ಮನಸ್ಸು ಧೃತಿಗೆಟ್ಟು ಇದೆ. ಚಪಲಚಿತ್ತ ಆದೆ. ನಿನ್ನ ಕಪಿ ಸ್ವಭಾವ ಇದು. ನಿನಗೆ ಬುದ್ಧಿ ಇದೆ, ಲೋಕಜ್ಞಾನ ಇದೆ. ಇಂಗಿತದಿಂದ ಇತರರ ಸ್ವಭಾವವನ್ನರಿಯಬೇಕು. ಬುದ್ಧಿಶಕ್ತಿ ಇಲ್ಲದ ರಾಜ ಪ್ರಜಾಪಾಲನೆ ಮಾಡಲಾರ” ಎಂದ ಸಮಯಕ್ಕೆ ತಕ್ಕ ಹಾಗೆ.

ಹನುಮಂತನ ಮಾತು ಮಂಗಳಕರ. ಸುಗ್ರೀವ ಅದನ್ನು ಕೇಳಿ ಮತ್ತೂ ಸವಿ ಆಗಿ ಹೇಳಿದ: "ಗೆಳೆಯ, ಆ ಆಜಾನುಬಾಹುಗಳು ವಿಶಾಲನೇತ್ರರು. ಧನುರ್ಧಾರಿಗಳು. ದೇವಕುಮಾರರ ಹಾಗೆ ಇದ್ದಾರೆ. ಅವರನ್ನು ನೋಡಿದರೆ ಯಾರಿಗೂ ಭಯವೇ. ಆಂಜನೇಯ, ಅವರನ್ನು ವಾಲಿ ಕಳಿಸಿರಬಹುದು ಎಂದು ಅನುಮಾನಪಟ್ಟೆ. ರಾಜರಿಗೆ ಗೆಳೆಯರು ಬಹಳ. ಅವರನ್ನು ನಂಬ ಬಾರದು. ಶತ್ರುಗಳು ಕಪಟವೇಷದಿಂದ ತಿರುಗುತ್ತ ಇರುತ್ತಾರೆ. ನಾವು ಅವರ ಗುಟ್ಟನ್ನು ಭೇದಿಸಬೇಕು. ಇಲ್ಲದೆ ಹೋದರೆ ಅವರು ನಮಗೆ ನಂಬಿಕೆ ಹುಟ್ಟಿಸಿ ನಾವು ಮೈಮರೆತಾಗ ನಮ್ಮನ್ನು ಕೊಲ್ಲುತ್ತಾರೆ. ವಾಲಿಗೆ ರಾಜಕಾರ್ಯದಲ್ಲಿ ಬಲು ಚಾತುರ್ಯ, ಬಹಳ ಸೂಕ್ಷ್ಮಬುದ್ಧಿ. ಶತ್ರುಸಂಹಾರಕ್ಕೆ ರಾಜರು ಮಾಡುವ ಉಪಾಯಗಳು ಬಹುವಿಧ. ಬುದ್ಧಿವಂತರು ವೇಷಾಂತರದಿಂದ ಶತ್ರುಗಳ ಗುಟ್ಟನ್ನು ತಿಳಿದುಕೊಳ್ಳಬೇಕು.

"ವಾನರಶ್ರೇಷ್ಠ ಆಂಜನೇಯ, ನೀನು ಒಂದು ಕೆಲಸ ಮಾಡು ಈಗ. ಸಾಮಾನ್ಯ ಮನುಷ್ಯನ ಹಾಗೆ ನೀನು ಆ ವೀರರ ಬಳಿಗೆ ಹೋಗು. ಅವರ ರೂಪಿನಿಂದ ಅವರ ಮಾತಿನಿಂದ ಅವರ ನಡೆಯಿಂದ ಅವರ ಇಂಗಿತವನ್ನು ಅರಿತುಕೊ. ಅವರು ಯಾರೋ ತಿಳಿದುಕೊ. ಅವರನ್ನು ಹೊಗಳಿ ಉಬ್ಬಿಸು. ಅವರು ದುಷ್ಟರು ಎನಿಸಿದರೆ ಅವರಿಗೆ ನಂಬಿಕೆ ಹುಟ್ಟುವ ಹಾಗೆ ಮಾತಾಡು. ಅವರು ನಮ್ಮನ್ನು ನಂಬಿದಮೇಲೆ ಏಕೆ ಬಿಲ್ಲುಬಾಣ ಹಿಡಿದು ಈ ಕಾಡಿಗೆ ಬಂದರೋ ಅವರು, ಕೇಳಿ ತಿಳಿದುಕೊ. ಹನುಮಂತ, ನೀನು ತಿಳಿದುಕೊಳ್ಳಬಲ್ಲೆ, ಅವರು ಸಾಧುಗಳೋ ದುಷ್ಟರೋ. ಹೋಗಿ ಬಾ, ಕೆಲಸ ಮಾಡಿಕೊಂಡು ಬಾ" ಎಂದ ಸುಗ್ರೀವ.

ಸುಗ್ರೀವನ ಮಾತು ಸರಿ ಎನಿಸಿತು ಮಾರುತಿಗೆ. ರಾಮಲಕ್ಷ್ಮಣರ ಬಳಿಗೆ ಹೋಗಲು ಸಿದ್ಧರಿಸಿದ. "ಅಪ್ಪಣೆ" ಎಂದ ಸುಗ್ರೀವನ ಮಾತಿಗೆ. ಶತ್ರುಭಯಂಕರ ಸುಗ್ರೀವನ ಮಾತು ಸರಿ ಎಂದು ಕೊಂಡಾಡಿದ.

೩

ಋಷ್ಯಮೂಕದಿಂದ ಹಾರಿ ರಾಮಲಕ್ಷ್ಮಣರು ಇದ್ದ ಸ್ಥಳಕ್ಕೆ ಬಂದ ಹನುಮಂತ. ರಾಮಲಕ್ಷ್ಮಣರಿಗೆ ತನ್ನ ವಿಷಯವನ್ನು ತಿಳಿಯಗೊಡದಂತೆ ಒಬ್ಬ

ಭಿಕ್ಷುಕನ ರೂಪ ತಳೆದ. ರಾಮಲಕ್ಷ್ಮಣರ ಇದಿರಿಗೆ ಬಂದು ನಿಂತು ತುಂಬಾ ವಿನಯದಿಂದ ಅವರಿಗೆ ಪ್ರಣಾಮ ಮಾಡಿದ. ಬಹಳ ಸವಿ ಆಗಿ ಅವರನ್ನು ಮಾತಾಡಿಸಿದ. ಸತ್ಯಪರಾಕ್ರಮಿಗಳು ಆದ ಅವರಲ್ಲಿ ಭಕ್ತಿಯನ್ನು ತೋರಿಸಿದ.

"ಪುರುಷೋತ್ತಮರೆ, ನೋಡಲು ನೀವು ದೇವತೆಗಳ ಹಾಗೆ ರಾಜರ್ಷಿಗಳ ಹಾಗೆ ಇದೀರಿ. ಆದರೆ ಕಠಿನ ವ್ರತನಿಷ್ಠೆಯ ತಪಸ್ವಿಗಳ ಹಾಗೂ ಇದೀರಿ. ತಾವು ಯಾರು? ಇಲ್ಲಿಗೆ ಏಕೆ ಬಂದಿರಿ? ಬಂಗಾರದಂಥ ಮೈಯ ನಿಮಗೆ ಈ ವನಸಂಚಾರ ಏಕೆ? ಏನೋ ಕಳೆದುಕೊಂಡವರಂತೆ ಈ ಪಂಪಾತೀರದ ಗಿಡಮರಗಳನ್ನು ಹುಡುಕುತ್ತ ಇದೀರಿ. ಈ ಕಾಡಿನ ಜಿಂಕೆಗಳೂ ಬೇರೆ ಮೃಗಗಳೂ ನಿಮ್ಮನ್ನು ನೋಡಿಯೇ ಅಂಜಿ ಓಡಿಹೋಗುತ್ತ ಇವೆ.

"ಮಹಾತ್ಮರೆ, ನಿಮ್ಮ ದೇಹಕಾಂತಿಯಿಂದ ನಿಮ್ಮ ವ್ಯಕ್ತಿತ್ವದಿಂದ ಪಂಪಾ ಸರೋವರದ ತಿಳಿನೀರು ಥಳಥಳ ಹೊಳೆಯುತ್ತ ಇದೆ. ಮಹಾಧೈರ್ಯವಂತರು ನೀವು. ಸಿಂಹದ ನೋಟ ನಿಮ್ಮದು. ಸಿಂಹಪರಾಕ್ರಮಿಗಳು ನೀವು. ಶತ್ರುಗಳನ್ನು ಸದೆಬಡಿಯುವ ಸಾಮರ್ಥ್ಯ, ಮನೋಹರ ರೂಪಸಂಪತ್ತಿ, ವೃಷಭ ಸಮಾನ ಗಮನ ನಿಮ್ಮದು. ಬಹಳ ದೂರದಿಂದ ಬಂದ ಹಾಗೆ ಇದೆ ನೀವು. ನಿಟ್ಟುಸಿರು ಬಿಡುತ್ತ ಇದೀರಿ. ನಿಮ್ಮ ಭುಜಗಳು ಆನೆಯ ಸೊಂಡಿಲಿನಂತಿವೆ. ಇಂದ್ರನ ವಜ್ರಾಯುಧದಂತೆ ಇದೆ ನಿಮ್ಮ ಬಿಲ್ಲು. ಬಿಲ್ಲಿನ ಚಿನ್ನದ ಕಟ್ಟು, ಗಂಧಮಾಲ್ಯಾಲಂಕಾರ ಆಶ್ಚರ್ಯಕರ ಆಗಿ ಇದೆ. ಬುಸುಗುಟ್ಟುವ ಭಯಂಕರ ಕಾಳಸರ್ಪಗಳ ಬುಟ್ಟಿ ನಿಮ್ಮ ತೀಕ್ಷ್ಣತರ ಬಾಣಗಳ ಬತ್ತಳಿಕೆ. ಬಂಗಾರದ ಹಿಡಿಯ ನಿಮ್ಮ ಕತ್ತಿಗಳು ಮಹಾಪ್ರಮಾಣದವು. ಪರೆ ಕಳೆದ ಹಾವಿನಂತೆ ಹೊಳೆಯುತ್ತ ಇವೆ.

"ನಿಮ್ಮ ಇಬ್ಬರದೂ ಒಂದೇ ರೂಪು. ದೇವಲೋಕದಿಂದ ಇಳಿದು ಬಂದಿರೋ? ಸ್ವೇಚ್ಛೆಯಿಂದ ಭೂಲೋಕಕ್ಕೆ ಇಳಿದುಬಂದ ಚಂದ್ರಸೂರ್ಯರೋ ನೀವು? ನಿಮ್ಮ ಸಿಂಹಭುಜ, ನೀಳ ದುಂಡು ಆದ ಕಬ್ಬಿಣದ ಅಗಳಿಗಳ ಹಾಗೆ ಇರುವ ನಿಮ್ಮ ತೋಳು, ನಿಮ್ಮ ಕಮಲದ ಕಣ್ಣು ನೋಡಿದರೆ, ಸಪ್ತಸಮುದ್ರ ಪರಿವೇಷ್ಟಿತ, ಮಹಾಮೇರುವಿಂಧ್ಯಾದಿಪರ್ವತಗಳಿಂದ ಅಲಂಕೃತ, ಮಹಾರಣ್ಯ ಯುಕ್ತ ಆದ ಈ ಸಮಸ್ತ ಭೂಮಂಡಲಕ್ಕೂ ಒಡೆಯರು ಆಗಲು ತಕ್ಕವರು ಎನಿಸುತ್ತದೆ. ಇಲ್ಲಿಗೆ ಏಕೆ ಬಂದಿರಿ ನೀವು? ನೀವು ಯಾರು?

"ವೀರಶ್ರೇಷ್ಠರೆ, ನಾನು ಇಷ್ಟು ವಿನಯದಿಂದ ಮಾತು ಆಡುತ್ತಿದೇನೆ. ಏಕೋ ನೀವು ಉತ್ತರ ಕೊಡುತ್ತಿಲ್ಲವಲ್ಲ. ಹೋಗಲಿ. ನನ್ನ ವಿಷಯವನ್ನು ಹೇಳುತ್ತೇನೆ ಕೇಳಿ.

"ಸುಗ್ರೀವ ಎಂಬ ವಾನರರಾಜ ಒಬ್ಬ ಇದಾನೆ. ಮಹಾವೀರ, ಧರ್ಮ ಪರಾಯಣ. ಆತನ ಅಣ್ಣ ವಾಲಿ ಸುಗ್ರೀವನಿಗೆ ಮೋಸಮಾಡಿ ರಾಜ್ಯವನ್ನು ಕಿತ್ತುಕೊಂಡು ಓಡಿಸಿದ. ರಾಜ್ಯಭ್ರಷ್ಟ ಆಗಿ ದುಃಖದಿಂದ ಇಡೀ ಭೂಮಂಡಲ ವನ್ನು ಸುತ್ತಿದ. ಆ ಮಹಾನುಭಾವ ವಾನರಾಧಿಪತಿ ಸುಗ್ರೀವ ನನ್ನನ್ನು ಇಲ್ಲಿಗೆ ಕಳಿಸಿದ. ನನ್ನ ಹೆಸರು ಹನುಮಂತ. ನಾನು ವಾನರ. ಸುಗ್ರೀವನ ಮಂತ್ರಿ. ಆತನಿಗೆ ಒಳ್ಳೆಯದನ್ನು ಮಾಡಬೇಕು ಎಂದು ಭಿಕ್ಷುಕ ವೇಷದಿಂದ ನಾನು ಇಲ್ಲಿಗೆ ಬಂದೆ ಋಷ್ಯಮೂಕ ಪರ್ವತದಿಂದ. ನಾನು ಕಾಮರೂಪಿ. ಇಷ್ಟಬಂದ ರೂಪದಿಂದ ಇಷ್ಟಬಂದ ಕಡೆಗೆ ಹೋಗಬಲ್ಲೆ. ನಮ್ಮ ದೊರೆ ಸುಗ್ರೀವನಿಗೆ ನಿಮ್ಮ ಸ್ನೇಹ ಬೆಳೆಸುವ ಆಸೆ. ಅದಕ್ಕಾಗಿ ನನ್ನನ್ನು ಕಳಿಸಿದ" ಎಂದ ಆ ನುಡಿಜಾಣ ಆಂಜನೇಯ. ಉತ್ತರ ಏನು ಹೇಳುತ್ತಾರೋ ರಾಮ ಲಕ್ಷ್ಮಣರು ಕೇಳೋಣ ಎಂದು ಸುಮ್ಮನಾದ.

ಹನುಮಂತನ ಮಾತನ್ನು ಕೇಳಿ ರಾಮಚಂದ್ರನಿಗೆ ಬಲು ಸಂತೋಷ. ಮುಖದಲ್ಲಿ ಉಲ್ಲಾಸ ಹೊಮ್ಮಿತು. ಪಕ್ಕದಲ್ಲಿ ಇದ್ದ ಲಕ್ಷ್ಮಣನಿಗೆ ಹೇಳಿದ: "ಲಕ್ಷ್ಮಣ, ಸುಗ್ರೀವನ ಸಚಿವ ಈ ಹನುಮಂತ. ಸುಗ್ರೀವನೇ ಕಳಿಸಿದ್ದರಿಂದ ಇಲ್ಲಿಗೆ ಬಂದ. ನಾವೂ ಸುಗ್ರೀವನನ್ನೇ ನೋಡಬೇಕು ಎಂದು ಬಂದವರು. ದೈವವಶದಿಂದ ಈತ ನಮ್ಮ ಬಳಿಗೇ ಬಂದ.

"ಶತ್ರುಮರ್ದನ ಲಕ್ಷ್ಮಣ, ಸುಗ್ರೀವನ ಮಂತ್ರಿ ಈ ಹನುಮಂತ ಮಾತಿನಲ್ಲಿ ಜಾಣ. ಋಗ್ ಯಜುಸ್ ಸಾಮವೇದ ಮೂರನ್ನೂ ಅಧ್ಯಯನ ಮಾಡಿ ಇರಬೇಕು ಈತ. ಇಲ್ಲದೆ ಇದ್ದರೆ ಈ ರೀತಿ ಮಾತು ಆಡಲು ಸಾಧ್ಯ ಅಲ್ಲ. ವ್ಯಾಕರಣಶಾಸ್ತ್ರವೂ ಈತನಿಗೆ ಅಭ್ಯಸ್ತ ಆಗಿರಬೇಕು. ಇಷ್ಟು ಹೊತ್ತು ಮಾತು ಆಡಿದರೂ ಒಂದೇ ಒಂದು ಅಪಶಬ್ದ ಆಡಲಿಲ್ಲ. ಮಾತಾಡುವಾಗ ಮುಖದಲ್ಲಿ ಕಣ್ಣಿನಲ್ಲಿ ಹಣೆ ಕಣ್ಣುಬೊಂಬೆಗಳಲ್ಲಿ ಯಾವುದರಲ್ಲೂ ಸ್ವಲ್ಪವೂ ದೋಷ ಕಾಣಲಿಲ್ಲ. ಮಾತಿನಲ್ಲಿ ಮಂದವೂ ಅಲ್ಲ, ಅತಿ ವೇಗವೂ ಅಲ್ಲ, ಬಹಳ ಗಂಭೀರ. ಮಾತಿನಲ್ಲಿ ಶಬ್ದಾಡಂಬರ ಇಲ್ಲ, ಸಂದೇಹವೂ ಇಲ್ಲ. ಮಾತಾಡು

ವಾಗ ಹೃದಯದಿಂದ ಬರಲಿ ಮಾತು, ಕಂಠದಿಂದ ಬರಲಿ, ಮಧ್ಯಮ ಸ್ವರ. ಮಾತಿನಲ್ಲಿ ವ್ಯಾಕರಣಶುದ್ಧಿ ಇದೆ. ಉದಾತ್ತ ಅನುದಾತ್ತ ಸ್ವರಿತ ಮೂರೂ ಸ್ವರ ಕೂಡಿ ಇವೆ. ಮಾತು ಬೇಗ ಅರ್ಥ ಆಗುತ್ತದೆ. ಯಾವ ದೋಷವೂ ಇಲ್ಲ.

"ಹೀಗೆ ಮಾತಾಡಿದರೆ, ಕಡಿದು ಹಾಕಬೇಕು ಎಂದು ಕತ್ತಿ ಎತ್ತಿದ ಶತ್ರುವೂ ಸಂತೋಷದಿಂದ ಕೈಬಿಡುತ್ತಾನೆ. ಅವನ ಮನಸ್ಸೂ ಕರಗುತ್ತದೆ. ಇಂಥ ದೂತ ಇಲ್ಲದೆ ಇದ್ದರೆ ರಾಜನಿಗೆ ಕಾರ್ಯಸಿದ್ಧಿ ಆಗದು. ಇಂಥ ಗುಣಶಾಲಿಗಳೂ ಕಾರ್ಯಸಾಧಕರೂ ಆದ ದೂತರು ಇದ್ದರೆ ರಾಜನ ಕೆಲಸ ಕೈಗೂಡುತ್ತದೆ."

ಲಕ್ಷ್ಮಣ ಇಂಗಿತಜ್ಞ. ವಾಕ್ಚತುರ ವಿದ್ವಾಂಸ ಆದ ಹನುಮಂತನನ್ನು ಮಾತಾಡಿಸಿದ. "ವಿದ್ವಾಂಸ, ಸುಗ್ರೀವನ ಗುಣಗಳನ್ನು ನಾವೂ ಕೇಳಿದೇವೆ. ನಾವೂ ಆತನನ್ನೇ ಹುಡುಕುತ್ತ ಇದೇವೆ. ಹನುಮಂತ, ನೀನು ಸತ್‌ಪುರುಷ. ಸುಗ್ರೀವ ನಮ್ಮ ಸ್ನೇಹ ಬಯಸಿದ ಎಂದೆ. ನಾವೂ ಸುಗ್ರೀವನ ಸ್ನೇಹವನ್ನು ಬಯಸಿ ಇದೇವೆ. ನೀನು ಹೇಳಿದಂತೆಯೆ ಮಾಡೋಣ" ಎಂದ.

ಲಕ್ಷ್ಮಣನ ಮಾತನ್ನು ಕೇಳಿ ಹನುಮಂತ ಹಿಗ್ಗಿದ. ಸುಗ್ರೀವನಿಗೆ ವಾಲಿಯನ್ನು ಗೆಲ್ಲಲು ದಾರಿ ಆಯಿತು ಎಂದು ನಿಶ್ಚಯಿಸಿಕೊಂಡ. ರಾಮ ಲಕ್ಷ್ಮಣರಿಗೂ ಸುಗ್ರೀವನಿಗೂ ಸ್ನೇಹಮಾಡಿಸಬೇಕು ಎಂದು ನಿರ್ಧರಿಸಿದ.

೪

ರಾಮನೂ ಯಾವುದೋ ಕೆಲಸಕ್ಕಾಗಿ ಸುಗ್ರೀವನ ಬಳಿಗೆ ಬರುತ್ತ ಇದಾನೆ ಎನಿಸಿತು ಲಕ್ಷ್ಮಣನ ಸವಿನುಡಿಯನ್ನು ಕೇಳಿ. ರಾಮನ ಕೆಲಸವನ್ನು ಮಾಡಿದರೆ ಸುಗ್ರೀವನಿಗೆ ರಾಜ್ಯಲಾಭ ಎಂದು ಮನಸಿನೊಳಗೇ ನಿಶ್ಚಯಿಸಿದ ಹನುಮಂತ. ಬಹಳ ಸಂತೋಷ ಆಯಿತು. ರಾಮನನ್ನು ಕೇಳಿದ ವಾಕ್ಯವಿಶಾರದ ಹನುಮಂತ. "ಪುರುಷೋತ್ತಮ, ಪಂಪಾಸರೋವರದ ಕಾಡು ಭಯಂಕರ. ಅನೇಕ ಕ್ರೂರಮೃಗಗಳಿಗೂ ವಿಷಸರ್ಪಗಳಿಗೂ ಬೀಡು. ಇಲ್ಲಿಗೆ ನೀವು ಏಕೆ ಬಂದಿರಿ ?" ಎಂದು ಕೇಳಿದ.

ರಾಮನ ಮನಸ್ಸನ್ನು ಅರಿತ ಲಕ್ಷ್ಮಣ ಹೇಳಿದ: "ವಾನರೋತ್ತಮ ಆಂಜನೇಯ, ದಶರಥ ಎಂಬ ರಾಜ ಇದ್ದ. ಮಹಾ ತೇಜಸ್ವಿ, ಧರ್ಮ

ಪರಾಯಣ. ಯಾವಾಗಲೂ ಚತುರ್ವರ್ಣಗಳನ್ನು ಪಾಲಿಸಿದ. ಆತನಿಗೆ ದ್ವೇಷ ಎಂಬುದು ಇರಲಿಲ್ಲ. ಆತನ ಮೇಲೂ ಯಾರಿಗೂ ದ್ವೇಷ ಇರಲಿಲ್ಲ. ಬ್ರಹ್ಮದೇವನ ಹಾಗೆ ಇದ್ದ. ಭೂರಿದಕ್ಷಿಣೆ ಕೊಟ್ಟು ಅಗ್ನಿಷ್ಟೋಮ ಮುಂತಾದ ಯಾಗಗಳನ್ನು ಮಾಡಿಸಿದ.

"ಆ ಮಹಾನುಭಾವನ ಹಿರಿಯ ಮಗ ಈತ. ರಾಮ ಎಂದು ಹೆಸರು. ಈತ ಸರ್ವಭೂತಶರಣ್ಯ. ಪಿತೃವಾಕ್ಯಪರಿಪಾಲಕ. ದಶರಥ ಮಹಾರಾಜನ ಮಕ್ಕಳಲ್ಲಿ ಹೆಚ್ಚು ಗುಣವಂತ. ಸಮಸ್ತ ರಾಜಲಕ್ಷಣಗಳೂ ಇವೆ. ಆದರೆ ರಾಜ್ಯಭ್ರಷ್ಟ ಆಗಿ ವನವಾಸಮಾಡಲು ಈ ಘೋರ ಅರಣ್ಯಕ್ಕೆ ಬಂದ. ಸಂಜೆಯ ಹೊತ್ತಿನಲ್ಲಿ ಸೂರ್ಯ ಮುಳುಗುವಾಗ ಆ ತೇಜೋವಂತನನ್ನು ಅವನ ಕಾಂತಿ ಹೇಗೆ ಅನುಸರಿಸುತ್ತದೆಯೋ ಹಾಗೇ ಈತನ ಹೆಂಡತಿಯೂ ಈ ಜಿತೇಂದ್ರಿಯನ ಹಿಂದೆಯೇ ವನವಾಸಕ್ಕೆ ಬಂದುಬಿಟ್ಟಳು.

"ನಾನು ಈತನ ತಮ್ಮ. ಹೆಸರು ಲಕ್ಷ್ಮಣ. ಮಾಡಿದ ಉಪಕಾರವನ್ನು ಎಂದೆಂದಿಗೂ ಮರೆಯದವನು ನಮ್ಮ ಅಣ್ಣ. ಸಮಸ್ತ ಪ್ರಾಣಿಗಳಿಗೂ ಹಿತವನ್ನು ಬಯಸುವುದೇ ಈತನ ಸ್ವಭಾವ. ಮಹಾ ಪೂಜನೀಯ. ಸುಖ ಐಶ್ವರ್ಯಗಳನ್ನು ಅನುಭವಿಸಬೇಕು ಈತ. ಆದರೆ ಎಲ್ಲವನ್ನೂ ತೊರೆದು ಬಂದ ವನವಾಸಕ್ಕೆ. ಈತನ ಗುಣಾತಿಶಯಕ್ಕೆ ಪರವಶ ಆಗಿ ನಾನು ಈತನಿಗೆ ಸೇವೆಮಾಡುತ್ತಿದೇನೆ.

"ಒಂದು ಸಲ ನಾವು ಇಬ್ಬರೂ ಇಲ್ಲದಾಗ ಯಾವನೋ ಕಾಮರೂಪಿ ರಾಕ್ಷಸ ಈತನ ಹೆಂಡತಿಯನ್ನು ಕದ್ದು ಒಯ್ದ. ಯಾರೋ ಆ ರಾಕ್ಷಸ ನಮಗೆ ತಿಳಿಯದು. ದಾರಿಯಲ್ಲಿ ದನು ಎಂಬ ರಾಕ್ಷಸ ಸಿಕ್ಕ. ಅವನಿಗೆ ಮಹರ್ಷಿಶಾಪ ಒಂದು ಇತ್ತು. ವಾನರಾಧಿಪತಿ ಸುಗ್ರೀವ ಮಹಾವೀರ ಮಹಾಸಮರ್ಥ, ರಾಮನ ಹೆಂಡತಿಯನ್ನು ಯಾರು ಕದ್ದು ಒಯ್ದರೋ ಹುಡುಕಬಲ್ಲ ಎಂದು ಅವನು ನಮಗೆ ಹೇಳಿದ. ಹೀಗೆ ಹೇಳಿ ಶಾಪವಿಮುಕ್ತ ಆಗಿ ಅವನು ಸ್ವರ್ಗಕ್ಕೆ ಹೋದ.

"ಹನುಮಂತ, ನೀನು ಕೇಳಿದೆ. ಇದ್ದದ್ದನ್ನು ಇದ್ದಂತೆ ಎಲ್ಲವನ್ನೂ ನಿನಗೆ ಹೇಳಿದೆ. ಈ ರಾಮನೂ ನಾನೂ ಸುಗ್ರೀವನನ್ನು ನಂಬಿಯೇ ಇಲ್ಲಿಗೆ ಬಂದೆವು. ಹನುಮಂತ, ಈ ರಾಮ ಲೋಕನಾಥ, ಸರ್ವಲೋಕಶರಣ್ಯ, ಶರಣಾಗತರಕ್ಷಕ. ಅಂಥವನು ಈಗ ತಾನೇ ಸುಗ್ರೀವನಿಗೆ ಶರಣುಬಂದು ಇದಾನೆ. ತನ್ನ ಐಶ್ವರ್ಯ ಎಲ್ಲವನ್ನೂ ದಾನಮಾಡಿದಾನೆ ಶ್ರೀರಾಮ. ಧರ್ಮಾತ್ಮ. ದಶರಥ ಮಹಾ

ರಾಜನ ಮಗ. ಯಾರ ಅನುಗ್ರಹಕ್ಕಾಗಿ ಮೂರು ಲೋಕವೂ ಸದಾ ಕಾದು ಇದೆಯೋ ಆ ಶ್ರೀರಾಮ ಈಗ ಸುಗ್ರೀವನ ಅನುಗ್ರಹಕ್ಕಾಗಿ ತಾನೇ ಬಂದಿದಾನೆ. ಗುಣವಂತರಾದ ರಾಜರನ್ನು ಎಲ್ಲರನ್ನೂ ಕಾಪಾಡಿದ ನಾಥ ಈಗ ವಾನರಾಧಿಪತಿ ಸುಗ್ರೀವನನ್ನು ನಾಥ ಆಗಿ ಮಾಡಿಕೊಳ್ಳಬಯಸಿ ಇದಾನೆ. ಹೆಂಡತಿಯನ್ನು ಅಗಲಿದ ದುಃಖದಿಂದ ಬಾಧೆಪಡುವ ಶ್ರೀರಾಮನ ಕೈಹಿಡಿಯಬೇಕು ಸುಗ್ರೀವ." ಲಕ್ಷ್ಮಣನ ಕಣ್ಣಿನಿಂದ ನೀರು ಸುರಿಯಿತು. ಬಹಳ ದೈನ್ಯದಿಂದ ಹೇಳಿದ.

ಹನುಮಂತನಿಗೆ ಸವಿನುಡಿಯನ್ನು ಹೇಳಿಕೊಡಬೇಕೆ? "ಲಕ್ಷ್ಮಣ, ನಿಮ್ಮಂಥ ಜಿತೇಂದ್ರಿಯರನ್ನು ಬುದ್ಧಿವಂತರನ್ನು ಕೋಪರಹಿತರನ್ನು ಸುಗ್ರೀವ ತಾನೇ ಹುಡುಕಿಕೊಂಡು ಬರಬೇಕು. ಆತನ ಪುಣ್ಯ, ನೀವೇ ಬಂದು ಆತನಿಗೆ ದರ್ಶನ ಕೊಡುತ್ತ ಇದೀರಿ. ಸುಗ್ರೀವನೂ ಈಗ ರಾಜ್ಯಭ್ರಷ್ಟ. ಅವನಿಗೂ ಅವನ ಅಣ್ಣ ವಾಲಿಗೂ ದ್ವೇಷ ಹೆಚ್ಚಿದೆ. ವಾಲಿ ಸುಗ್ರೀವನ ಹೆಂಡತಿಯನ್ನು ಅಪಹರಿಸಿದ. ಮೋಸಮಾಡಿ ಸುಗ್ರೀವನನ್ನು ರಾಜ್ಯ ಬಿಟ್ಟು ಓಡಿಸಿದ ಕಾಡಿಗೆ. ಸುಗ್ರೀವ ಖಂಡಿತ ನಿಮಗೆ ನೆರವು ಆಗುತ್ತಾನೆ. ಸೀತೆಯನ್ನು ಹುಡುಕಲು ಆತನೂ ನಾವೂ ಪ್ರಯತ್ನಮಾಡುತ್ತೇವೆ" ಎಂದ. "ಪ್ರಭು, ಈಗ ಸುಗ್ರೀವನ ಬಳಿಗೆ ಹೋಗೋಣ" ಎಂದು ಸವಿ ಆಗಿ ಹೇಳಿದ.

ಲಕ್ಷ್ಮಣ ಧರ್ಮಜ್ಞ. ಶಾಸ್ತ್ರೋಕ್ತ ಆಗಿ ಹನುಮಂತನನ್ನು ಗೌರವಿಸಿದ. ಅಣ್ಣನಿಗೆ ಹೇಳಿದ: "ಅಣ್ಣ, ವಾಯುಪುತ್ರ ಹನುಮಂತ ನಮ್ಮ ಮಾತನ್ನು ಕೇಳಿ ಸಂತಸಗೊಂಡು ಇದಾನೆ. ಇದ್ದದ್ದನ್ನು ಇದ್ದಂತೆ ಹೇಳಿದ. ಸುಗ್ರೀವನಿಗೂ ನಮ್ಮಿಂದ ಕೆಲಸ ಆಗಬೇಕು. ನಮಗೂ ಅವನಿಂದ ಕೆಲಸ ಆಗಬೇಕು. ಅಣ್ಣ, ನಾವು ಕೃತಾರ್ಥರು. ಈ ಹನುಮಂತ ಪ್ರಸನ್ನಮುಖದಿಂದ ಸಂತೋಷದಿಂದ ಮಾತಾಡಿದ. ಇವನ ಮಾತೂ ಸ್ಪಷ್ಟ. ಇವನು ಸುಳ್ಳು ಆಡಲಾರ."

ಹನುಮಂತ ತನ್ನ ಭಿಕ್ಷುವೇಷವನ್ನು ಬಿಟ್ಟು ನಿಜ ವಾನರರೂಪವನ್ನು ತಳೆದ. ವೀರರು ಆದ ರಾಮಲಕ್ಷ್ಮಣರನ್ನು ತನ್ನ ಹೆಗಲಿನ ಮೇಲೆ ಕೂಡಿಸಿ ಕೊಂಡು ಸುಗ್ರೀವನ ಬಳಿಗೆ ಹೊರಟ.

ಹನುಮಂತ ಮಹಾಪ್ರಾಜ್ಞ, ಮಹಾಪರಾಕ್ರಮಿ, ಮಹಾಯಶೋವಂತ, ವಾಯುಪುತ್ರ. ಸುಗ್ರೀವನ ಕೆಲಸ ಹಣ್ಣು ಆಯಿತು ಎಂದು ಹಿಗ್ಗಿ ರಾಮ ಲಕ್ಷ್ಮಣರನ್ನು ಋಷ್ಯಮೂಕ ಪರ್ವತಕ್ಕೆ ಕೊಂಡು ಬಿಟ್ಟ.

೫

ಋಷ್ಯಮೂಕ ಪರ್ವತದಲ್ಲಿ ರಾಮಲಕ್ಷ್ಮಣರನ್ನು ಇಳಿಸಿ ಸುಗ್ರೀವನನ್ನು ನೋಡಲು ಮಲಯಪರ್ವತಕ್ಕೆ ಹೋದ ಹನುಮಂತ. "ವಾನರೋತ್ತಮ, ಅಲ್ಲಿ ನೋಡು. ಇಬ್ಬರೂ ಬಂದು ಇದಾರೆ. ಅವರಲ್ಲಿ ಹಿರಿಯ ರಾಮ. ಕಿರಿಯ ಲಕ್ಷ್ಮಣ. ಇಬ್ಬರೂ ಅಣ್ಣತಮ್ಮಂದಿರು. ಇಕ್ಷ್ವಾಕುವಂಶದವರು. ದಶರಥ ಮಹಾರಾಜನ ಮಕ್ಕಳು. ಆತ ಅನೇಕ ಯಜ್ಞ ಮಾಡಿದ. ಭೂರಿದಕ್ಷಿಣೆ ಕೊಟ್ಟ. ಲಕ್ಷ ಲಕ್ಷ ಗೋದಾನ ಮಾಡಿದ. ಸತ್ಯಸಂಧ. ಧರ್ಮಾತ್ಮ. ತನ್ನ ಕಿರಿಯ ಹೆಂಡತಿಗೆ ಏನೋ ಮಾತುಕೊಟ್ಟಿದ್ದ. ಅದಕ್ಕಾಗಿ ರಾಮನನ್ನು ಕಾಡಿಗೆ ಕಳಿಸಿದ. ತಂದೆಯ ಮಾತನ್ನು ನಡೆಸಲು ರಾಮ ರಾಜ್ಯವನ್ನು ಬಿಟ್ಟು ಕಾಡಿಗೆ ಬಂದ.

"ರಾಮ ಮಹಾಪ್ರಾಜ್ಞ, ಮಹಾಪರಾಕ್ರಮಶಾಲಿ. ಪರಮಧಾರ್ಮಿಕ. ಸತ್ಯವ್ರತ. ತನ್ನ ಹೆಂಡತಿಯ ನಿಮಿತ್ತ ನಿನ್ನನ್ನು ಮರೆಹೊಕ್ಕು ಇದಾರೆ. ಈ ಅಣ್ಣತಮ್ಮಂದಿರು ನಿನ್ನ ಗೆಳೆತನವನ್ನು ಬಯಸಿದಾರೆ. ಇಬ್ಬರೂ ಮಹಾ ಪೂಜನೀಯರು. ಇಬ್ಬರನ್ನೂ ಪೂಜಿಸಿ ಗೆಳೆತನ ಮಾಡು" ಎಂದ.

ಸುಗ್ರೀವನಿಗೆ ಸಂತೋಷ ಆಯಿತು. ರಾಮಲಕ್ಷ್ಮಣರ ಬಗ್ಗೆ ಇದ್ದ ಭಯ ಕಳೆಯಿತು. ತನ್ನ ವಾನರ ರೂಪವನ್ನು ಬಿಟ್ಟ. ದರ್ಶನೀಯ ಮನುಷ್ಯ ರೂಪವನ್ನು ಧರಿಸಿದ. ರಾಮಲಕ್ಷ್ಮಣರ ಬಳಿಗೆ ಬಂದು ಪ್ರೀತಿಪೂರ್ವಕ ಮಾತು ಆಡಿದ: "ಮಹಾತ್ಮರೆ, ನೀವು ಧರ್ಮಪರಾಯಣರು, ಮಹಾಪರಾಕ್ರಮ ಶಾಲಿಗಳು, ಸಮಸ್ತ ಪ್ರಾಣಿಗಳಲ್ಲೂ ದಯೆ ಇರುವವರು ಎಂದು ನಿಮ್ಮ ಸದ್ಗುಣಗಳು ಎಲ್ಲವನ್ನೂ ಹನುಮಂತ ನನಗೆ ಹೇಳಿದಾನೆ. ಸ್ವಾಮಿ, ಇಂಥ ಗುಣವಂತರು ನೀವು ಕೇವಲ ವಾನರ ನನ್ನೊಡನೆ ಸ್ನೇಹ ಬಯಸಿ ಬಂದದ್ದೇ ನನಗೆ ದೊಡ್ಡ ಗೌರವ. ಇದಕ್ಕಿಂತಲ್ಲೂ ಹೆಚ್ಚಿನ ಲಾಭ ನನಗೆ ಬೇರೆ ಇನ್ನೇನು? ಶ್ರೀರಾಮ, ನನ್ನ ಸ್ನೇಹ ನಿನಗೆ ಇಷ್ಟ ಅಲ್ಲವೆ? ಇದೋ ಕೈನೀಡಿದೆ. ನನ್ನ ಕೈಹಿಡಿ. ನಮ್ಮ ಸ್ನೇಹ ದೃಢ ಆಗುವಂತೆ ಮಾಡು."

ಸುಗ್ರೀವನ ಮಾತಿನಿಂದ ರಾಮನಿಗೆ ಸಂತೋಷ ಆಯಿತು. ಸುಗ್ರೀವನ ಕೈ ಹಿಡಿದುಕೊಂಡ. ಅವನ ಕೈಯನ್ನು ಪ್ರೀತಿಯಿಂದ ಹಿಸುಕುತ್ತ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡ.

ನಿಜರೂಪು ಧರಿಸಿದ್ದ ಆಂಜನೇಯ ಎರಡು ಅರಣಿ ಕಟ್ಟಿಗೆ ತಂದು ಉಜ್ಜಿ ಬೆಂಕಿ ಮಾಡಿದ. ಉರಿಯುವ ಆ ಬೆಂಕಿಯ ಸುತ್ತ ಹೂ ಇರಿಸಿ ಪೂಜೆ ಮಾಡಿದ. ಆ ಅಗ್ನಿಯನ್ನು ತಂದು ರಾಮನಿಗೂ ಸುಗ್ರೀವನಿಗೂ ನಡುವೆ ಇಟ್ಟ.

ಅಗ್ನಿ ಪ್ರಜ್ವಲಿಸಿತು. ರಾಮನೂ ಸುಗ್ರೀವನೂ ಒಬ್ಬರ ಕೈ ಒಬ್ಬರು ಹಿಡಿದುಕೊಂಡು ಅದಕ್ಕೆ ಪ್ರದಕ್ಷಿಣೆ ಮಾಡಿದರು. ಅಗ್ನಿಸಾಕ್ಷಿಯಾಗಿ ಇಬ್ಬರಿಗೂ ಸ್ನೇಹ ಆಯಿತು. ಇಬ್ಬರಿಗೂ ಬಲು ಸಂತೋಷ. ಒಬ್ಬರನ್ನು ಒಬ್ಬರು ಎವೆ ಇಕ್ಕದೆ ಬಹಳ ಹೊತ್ತು ನೋಡಿದರು.

"ರಾಮ ಪ್ರಭು, ನೀನು ನನಗೆ ಗೆಳೆಯ. ನಿನಗಿಂತ ಹೆಚ್ಚಿನ ಗೆಳೆಯ ಇಲ್ಲ ನನಗೆ. ನಮಗೆ ಇಬ್ಬರಿಗೂ ಸುಖದುಃಖ ಇನ್ನುಮೇಲೆ ಒಂದೇ ಸಮ. ಭೇದ ಇಲ್ಲ" ಎಂದ ಸುಗ್ರೀವ. ತುಂಬಾ ಹೂಬಿಟ್ಟ ದಟ್ಟ ಆಗಿ ಎಲೆ ಚಿಗುರಿದ ಸಾಲವೃಕ್ಷದ ಕೊಂಬೆ ಒಂದನ್ನು ಮುರಿದು ತಂದ. ಆ ಎಲೆಗಳನ್ನು ನೆಲದ ಮೇಲೆ ಹಾಸಿ ರಾಮನನ್ನು ಕೂಡಿಸಿ ತಾನೂ ಕುಳಿತ. ಗಂಧದ ಮರದ ಕೊಂಬೆ ಒಂದನ್ನು ಹೂತದ್ದನ್ನು ತಂದು ಲಕ್ಷ್ಮಣನಿಗೆ ಕೂಡಲು ಕೊಟ್ಟ ಹನುಮಂತ.

ಸುಗ್ರೀವನ ಆನಂದಕ್ಕೆ ಮೇರೆ ಇಲ್ಲ. ಆನಂದಬಾಷ್ಪಗಳನ್ನು ಉದುರಿಸಿದ. ಸವಿನುಡಿಗಳಲ್ಲಿ ಹೇಳಿದ: "ರಘುನಂದನ, ನಮ್ಮ ಅಣ್ಣ ನನಗೆ ಮೋಸಮಾಡಿ ನನ್ನ ಹೆಂಡತಿಯನ್ನು ಅಪಹರಿಸಿದ. ಈ ದುರ್ಗಮ ಕಾನನದಲ್ಲಿ ನಾನು ಇರುವುದೂ ಅವನ ಭಯದಿಂದಲೇ. ಈಗ ನೀನೇ ನನಗೆ ದಿಕ್ಕು. ಮೋಸ ಮಾಡಿದ್ದೇ ಅಲ್ಲ ನಮ್ಮ ಅಣ್ಣ, ನನ್ನ ಮೇಲೆ ಹಗೆ ಸಾಧಿಸುತ್ತ ಇದಾನೆ. ನನಗೆ ವಾಲಿ ಎಂದರೆ ಭಯ. ನನಗೆ ಬುದ್ಧಿ ಕೆಟ್ಟು ಕಾಡಿನಲ್ಲಿ ಇದೇನೆ. ನನಗೆ ಅಭಯ ಕೊಡಬೇಕು. ಕಾಪಾಡಬೇಕು."

ಧರ್ಮವತ್ಸಲ ಮಹಾತೇಜಸ್ವಿ ರಾಮ. ಸುಗ್ರೀವನ ಮಾತನ್ನು ಕೇಳಿ ನಸುನಕ್ಕ. "ವಾನರಶ್ರೇಷ್ಠ, ಗೆಳೆತನಕ್ಕೆ ಉಪಕಾರವೇ ಫಲ. ನನಗೆ ಗೊತ್ತು. ನಿನ್ನ ಹೆಂಡತಿಯನ್ನು ಅಪಹರಿಸಿದವನನ್ನು ನಾ ಕೊಲ್ಲುತ್ತೇನೆ. ಖಂಡಿತ. ನನ್ನ ಬಾಣಗಳು ತೀಕ್ಷ್ಣ. ಸೂರ್ಯನಿಗೆ ಸಮಾನ. ಇವಕ್ಕೆ ಗರಿ ಇವೆ. ಇವುಗಳ ತುದಿ ಬಹಳ ಚೂಪು. ಗೆಣ್ಣು ಗಟ್ಟಿ. ಇವು ರೋಷಗೊಂಡ ವಿಷಸರ್ಪಗಳ ಹಾಗೆ. ಎಂದೂ ಹುಸಿ ಹೋಗುವಂಥವು ಅಲ್ಲ. ದುರಾಚಾರಿ ವಾಲಿಯ ಮೇಲೆ ಬಿದ್ದು ಅವನನ್ನು ಕೊಲ್ಲುತ್ತವೆ. ಬೆಟ್ಟ ಮುರಿದುಬಿದ್ದಂತೆ ಆ ವಾಲಿ ನೆಲಕ್ಕೆ ಉರುಳು ತ್ತಾನೆ. ನೀನೇ ನೋಡುತ್ತೀ. ಅಂಜಬೇಡ" ಎಂದ ರಾಮ.

ತನಗೆ ಸಂತೋಷ ಕೊಡುವ ಮಾತನ್ನು ಹೇಳಿದ ರಾಮ. ಸುಗ್ರೀವನಿಗೆ ಪರಮಾನಂದ. "ನರಶ್ರೇಷ್ಠ, ನರದೇವ, ನಿನ್ನ ಅನುಗ್ರಹದಿಂದ ನನಗೆ ನನ್ನ ನಲ್ಲೆಯೂ ಸಿಗುತ್ತಾಳೆ, ರಾಜ್ಯವೂ ಸಿಗುತ್ತದೆ. ವಾಲಿ ನನ್ನ ವೈರಿ. ಹೇಗೆ ಅವನನ್ನು ಕೊಲ್ಲಬಹುದೋ ಯಾವಾಗಲೋ ಯೋಚಿಸಿ ನೀನು ಪ್ರಯತ್ನಿಸು" ಎಂದ.

ಹೀಗೆ ಇಲ್ಲಿ ರಾಮಸುಗ್ರೀವರು ಮಾತಾಡಿಕೊಂಡರು. ತಾವರೆ ಎಸಳಿನಂಥ ಸೀತೆಯ ಎಡಗಣ್ಣೂ ಬಂಗಾರದ ಬಣ್ಣದ ವಾಲಿಯ ಎಡಗಣ್ಣೂ ಬೆಂಕಿಯ ಕೆಂಡದ ಹಾಗೆ ಉರಿಯುವ ರಾವಣನ ಎಡಗಣ್ಣೂ ಅದೇ ಸಮಯದಲ್ಲಿ ಒಂದೇ ಕಾಲಕ್ಕೆ ಅದುರಿದವು.

೬

ಆನಂದದಿಂದ ಸುಗ್ರೀವ ಮತ್ತೆ ಹೇಳಿದ: "ರಾಮ, ಈ ಹನುಮಂತ ಮಂತ್ರಿಶ್ರೇಷ್ಠ. ನೀನು ಕಾಡಿಗೆ ಏಕೆ ಬಂದೆಯೋ ನನಗೆ ಹೇಳಿದ. ನೀನೂ ಲಕ್ಷ್ಮಣನೂ ಇಬ್ಬರೂ ಇಲ್ಲದ ಸಮಯವನ್ನು ಹೊಂಚುಹಾಕುತ್ತ ಇದ್ದ ರಾಕ್ಷಸ ನಿನ್ನ ಹೆಂಡತಿಯನ್ನು ಎತ್ತಿಕೊಂಡು ಹೋದ ಸಮಾಚಾರವೂ ತಿಳಿಯಿತು. ಆಕೆ ಬೆದರಿ ನಡುನಡುಗಿ ಗೋಳಿಡುತ್ತ ಇದ್ದುದನ್ನು ನೋಡಿ ಜಟಾಯು ಆ ದುಷ್ಟನಿಗೆ ಅಡ್ಡ ಬಂದರೆ ಅವನನ್ನು ಕೊಂದನಂತೆ ದುರುಳ. ಬಲವಂತದಿಂದ ಎತ್ತಿಕೊಂಡು ಹೋದನಂತೆ ರಾಕ್ಷಸ ನಿನ್ನ ಹೆಂಡತಿಯನ್ನು. ಎಲ್ಲವನ್ನೂ ತಿಳಿಸಿದ. ಇನ್ನು ಸ್ವಲ್ಪ ಕಾಲದಲ್ಲಿಯೇ ಈ ವಿಯೋಗದುಃಖ ಕಳೆಯುತ್ತದೆ ನಿನಗೆ. ಶ್ರೀರಾಮ, ಶತ್ರುಮರ್ದನ, ನಿನ್ನ ಹೆಂಡತಿ ಸೀತಾದೇವಿ ಪಾತಾಳ ಲೋಕದಲ್ಲಿ ಇರಲಿ ಅಂತರಿಕ್ಷದಲ್ಲಿ ಇರಲಿ ಆಕೆಯನ್ನು ತಂದು ನಿನಗೆ ಒಪ್ಪಿಸುತ್ತೇನೆ. ಹಿಂದೆ ವೇದಗಳನ್ನು ಕದ್ದು ಸಮುದ್ರತಲದಲ್ಲಿ ಅಡಗಿ ಇದ್ದ ಮಧುಕೈಟಭರನ್ನು ಮತ್ಸ್ಯಾವತಾರ ಎತ್ತಿ ಮಹಾವಿಷ್ಣು ಕೊಂದು ಅವನ್ನು ತಿರುಗಿ ತರಲಿಲ್ಲವೆ? ಹಾಗೆ ನಾನೂ ತರುತ್ತೇನೆ ಸೀತಾದೇವಿಯನ್ನು. ನನ್ನ ಮಾತನ್ನು ನಂಬು. ಇದು ಯಥಾರ್ಥ.

"ಮಹಾಬಾಹು, ಸುರಾಸುರರು ಸೇರಿದರೂ ದೇವೇಂದ್ರನನ್ನೇ ಕೂಡಿಸಿಕೊಂಡರೂ ನಿನ್ನ ಹೆಂಡತಿಯನ್ನು ಸ್ವಾಧೀನಪಡಿಸಿಕೊಳ್ಳಲಾರರು. ಆಕೆ

ವಿಷಭಕ್ಷ್ಯದಂತೆ. ತಿನ್ನಲು ಯಾರಿಗೆ ಧೈರ್ಯ? ನೀನು ಇನ್ನು ದುಃಖವನ್ನು ಬಿಡು. ನಾನೇ ನಿನ್ನ ನಲ್ಲೆಯನ್ನು ತಂದು ಒಪ್ಪಿಸುತ್ತೇನೆ.

"ರಾಘವ, ಈಗ ನನಗೆ ಹೊಳೆಯುತ್ತದೆ. ಆಕೆಯೇ ಮೈಥಿಲಿ. ಖಂಡಿತ. ಅನುಮಾನವೇ ಇಲ್ಲ. ಆ ಕ್ರೂರಕರ್ಮಿ ರಾಕ್ಷಸ ಆಕೆಯನ್ನು ಎತ್ತಿಕೊಂಡು ಆಕಾಶದಲ್ಲಿ ಹೋಗುತ್ತ ಇದ್ದ. ಆಗ ಆಕೆ ನಾಗಕನ್ನಿಕೆಯಂತೆ ತಪ್ಪಿಸಿಕೊಳ್ಳಲು ವಿಲಿವಿಲಿ ಒದ್ದಾಡುತ್ತ ರಾಮಾ, ಲಕ್ಷ್ಮಣಾ ಎಂದು ದೀನ ಸ್ವರದಿಂದ ಕೂಗುತ್ತ ಇದ್ದಳು. ನಾನು ಕಂಡೆ. ಶೋಕಿಸಿ ಶೋಕಿಸಿ ಆಕೆ ಕಳೆಗುಂದಿದ್ದಳು. ನಾನೂ ನಾಲ್ವರು ಕಪಿವೀರರೂ ಈ ಬೆಟ್ಟದ ತಲೆಯ ಮೇಲೆ ಇದ್ದೆವು. ಆಕೆ ನಮ್ಮನ್ನು ನೋಡಿದಳು. ತನ್ನ ಉತ್ತರೀಯದಲ್ಲಿ ತನ್ನ ಒಡವೆಗಳನ್ನು ಎಲ್ಲಾ ಗಂಟುಕಟ್ಟಿ ನಮ್ಮ ಕಡೆ ಬಿಸುಟಳು. ರಾಮ, ಆ ಒಡವೆಗಳು ಎಲ್ಲವನ್ನೂ ನಾವು ತೆಗೆದು ಇಟ್ಟಿದ್ದೇವೆ. ಅವನ್ನು ತಂದು ತೋರಿಸುತ್ತೇನೆ. ಅವನ್ನು ನೀನು ಗುರುತು ಹಿಡಿಯಬಹುದು" ಎಂದ.

"ಗೆಳೆಯ, ತಡ ಏಕೆ? ತರಿಸು" ಎಂದ ರಾಮ. ಅವನಿಗೆ ಅತಿ ಆತುರ. ಕೂಡಲೇ ಸುಗ್ರೀವ ತನ್ನ ದುರ್ಗಮ ಗುಹೆಯನ್ನು ಹೊಕ್ಕು ಆ ಒಡವೆಗಳನ್ನೂ ಉತ್ತರೀಯವನ್ನೂ ತಂದು ರಾಮನಿಗೆ ಕೊಟ್ಟ. ರಾಮ ಅವನ್ನು ಕೈಗೆ ಎತ್ತಿಕೊಂಡ. ಅವನ ಕಣ್ಣಿನಲ್ಲಿ ನೀರು ತುಂಬಿತು. ಮಂಜು ಕಂಡ ಚಂದ್ರನ ಹಾಗೆ ಆಯಿತು ಅವನ ಸ್ಥಿತಿ. "ಹಾ, ಪ್ರಿಯೆ" ಎಂದು ಅತ್ತ. ನಿಲ್ಲಲಾರದೆ ನೆಲದ ಮೇಲೆ ಬಿದ್ದು ಮೂರ್ಛೆಹೋದ. ಎಚ್ಚೆತ್ತು ಆ ಒಡವೆಗಳನ್ನು ಮತ್ತೆ ಮತ್ತೆ ಎದೆಗೆ ಒತ್ತಿಕೊಂಡು ಹುತ್ತದಲ್ಲಿ ಅಡಗಿ ಕೋಪದಿಂದ ಬುಸುಗುಟ್ಟುವ ಹಾವಿನಂತೆ ನಿಟ್ಟುಸಿರು ಬಿಟ್ಟ. ಕಣ್ಣಿಂದ ಕಂಬನಿಯ ಧಾರೆ ಹರಿಯಿತು. ಪಕ್ಕದಲ್ಲಿದ್ದ ಲಕ್ಷ್ಮಣನನ್ನು ನೋಡಿದ. "ತಮ್ಮ, ರಾಕ್ಷಸ ಕದ್ದು ಒಯ್ಯುವಾಗ ನನ್ನ ನಲ್ಲೆ ಸೀತೆ ಬಿಸುಟ ಒಡವೆ ಉತ್ತರೀಯ ಇದು. ನೋಡು. ಇಲ್ಲಿ ಈ ಹುಲ್ಲುನೆಲದ ಮೇಲೆ ಹಾಕಿದಳು ಎನಿಸುತ್ತದೆ. ಈ ಒಡವೆ ಎಂದಿನಂತೆಯೆ ಇವೆ. ಸ್ವಲ್ಪವೂ ಅಚ್ಚಳಿದಿಲ್ಲ. ನೋಡು, ಹೌದೋ ಅಲ್ಲವೋ?" ಎಂದ ರಾಮ.

"ಅಣ್ಣ, ಅತ್ತಿಗೆಯ ಕೈಬಳೆ ಕಿವಿಯ ಓಲೆ ನನಗೆ ಗುರುತು ಇಲ್ಲ. ನಾನು ಅವನ್ನು ಕಣ್ಣಿಟ್ಟು ನೋಡಿಲ್ಲ. ದಿನವೂ ಆಕೆಗೆ ಪಾದಾಭಿವಂದನೆ ಮಾಡುತ್ತಿದ್ದೆ. ಆಕೆಯ ಕಾಲಂದುಗೆಗಳನ್ನು ಚೆನ್ನಾಗಿ ಬಲ್ಲೆ. ಗುರುತಿಸಬಲ್ಲೆ" ಎಂದ ಲಕ್ಷ್ಮಣ.

ದುಃಖದಿಂದ ಸುಗ್ರೀವನನ್ನು ನೋಡಿದ ರಾಮ. "ಗೆಳೆಯ, ನನಗೆ ಪ್ರಾಣಕ್ಕಿಂತಲೂ ಹೆಚ್ಚು ಸೀತೆ. ಆ ಕ್ರೂರ ರಾಕ್ಷಸ ಅವಳನ್ನು ಕದ್ದು ಒಯ್ಯು ವಾಗ ನೀನು ನೋಡಿದೆಯಲ್ಲ. ಆ ಭಯಂಕರ ರಾಕ್ಷಸ ಅವಳನ್ನು ಎಲ್ಲಿಗೆ ಒಯ್ದ? ಹೇಗೆ? ನನಗೆ ಇಂಥ ಮಹಾವ್ಯಸನವನ್ನು ತಂದಿಟ್ಟ ಆ ರಾಕ್ಷಸ ಎಲ್ಲಿ ವಾಸ ಆಗಿದಾನೆ? ಯಾರ ತಪ್ಪಿಗಾಗಿ ಸಮಸ್ತ ರಾಕ್ಷಸಕುಲವನ್ನೆ ಈಗ ನಾನು ಸಂಹರಿಸಬೇಕೋ, ಸೀತೆಯನ್ನು ಕದ್ದು ಯಾರು ನನಗೆ ಸಿಟ್ಟುಬರುವಂತೆ ಮಾಡಿದನೋ ಆ ರಾಕ್ಷಸನ ವಾಸಸ್ಥಾನ ಯಾವುದು? ಮೃತ್ಯುದೇವತೆಯ ಮನೆಬಾಗಿಲನ್ನು ತಾನೇ ತೆರೆದ ಆ ನೀಚ, ಆ ಶತ್ರು ಎಲ್ಲಿ ಇದಾನೋ ಹೇಳು. ಈಗಲೇ ಅವನನ್ನು ಯಮಲೋಕಕ್ಕೆ ಕಳಿಸುತ್ತೇನೆ" ಎಂದ.

೭

ದುಃಖಾರ್ತ ರಾಮನ ಮಾತನ್ನು ಕೇಳಿ ಸುಗ್ರೀವನಿಗೂ ಹನಿಗಣ್ಣು ಆಯಿತು. "ಅರಿಂದಮ, ಆ ಪಾಪಿ ರಾಕ್ಷಸ ಎಲ್ಲಿದಾನೋ ನನಗೆ ತಿಳಿಯದು. ಅವನ ಸಾಮರ್ಥ್ಯ ವೀರ್ಯ ಎಂಥದೋ ನನಗೆ ಗೊತ್ತಿಲ್ಲ. ಆ ದುಷ್ಟನ ಕುಲ ಯಾವುದೋ ನಾನು ಕೇಳಿಲ್ಲ. ರಾಮ, ಅದನ್ನು ಕಟ್ಟಿಕೊಂಡು ನಮಗೆ ಆಗಬೇಕಾದುದು ಏನು? ನೀನು ದುಃಖಿಸಬೇಡ, ಪ್ರಭು.

"ಆಣೆ ಇಟ್ಟು ಶಪಥಮಾಡುತ್ತೇನೆ. ಸೀತಾದೇವಿಯನ್ನು ತಂದು ನಿನಗೆ ಒಪ್ಪಿಸುವ ಭಾರ ನನ್ನದು. ಅದರ ಪ್ರಯತ್ನ ನನಗೆ ಇರಲಿ. ಪರಿವಾರಸಮೇತ ಆ ರಾವಣನನ್ನು ಕೊಂದುಬರುತ್ತೇನೆ. ನನ್ನ ಪೌರುಷ ಸಾರ್ಥಕ ಆಗಿ ನಿನಗೆ ಸಂತೋಷ ಆಗುವಂತೆ ಮಾಡುತ್ತೇನೆ. ನೀನು ಈ ದುಃಖವನ್ನು ಬಿಡು. ನಿನ್ನದು ಧೀರಸ್ವಭಾವ. ನಿನ್ನಂಥ ಮಹಾಮಹಿಮನಿಗೆ ಈ ಲಾಘವ ಸರಿ ಅಲ್ಲ. ನನಗೂ ಹೆಂಡತಿಯ ಅಗಲಿಕೆಯ ದುಃಖವೇ. ನಿನ್ನ ಹಾಗೇ. ಆದರೂ ಹೀಗೆ ಶೋಕಿಸಲಿಲ್ಲ. ಧೈರ್ಯ ಕುಂದಲೂ ಇಲ್ಲ. ನಾನು ಸಾಮಾನ್ಯ. ಅದರಲ್ಲಿಯೂ ವಾನರ. ಯುಕ್ತಾಯುಕ್ತ ತಿಳಿಯದವ. ಆದರೂ ನನ್ನ ಹೆಂಡತಿಗಾಗಿ ನಾನು ಇಷ್ಟು ದುಃಖಿಸುತ್ತ ಇಲ್ಲ. ನೀನೋ ಮಹಾತ್ಮ. ನೀತಿಯನ್ನು ಬಲ್ಲವನು. ಧೈರ್ಯಶಾಲಿ. ಸುಶಿಕ್ಷಿತ. ಇಂಥ ಕಾಲದಲ್ಲಿ ಧೈರ್ಯದಿಂದ ಇರಬೇಕು ಎಂದು ನಿನಗೆ

ಹೇಳಬೇಕೆ? ಉಕ್ಕಿಬರುವ ಕಣ್ಣೀರನ್ನು ತಡೆ. ದುಃಖಿಸಬೇಡ. ಧೈರ್ಯ ಬಿಡಬೇಡ. ಧೈರ್ಯವನ್ನು ತೊರೆಯದೆ ಇರುವುದು ಬಲಿಷ್ಠರ ಲಕ್ಷಣ. ಎಂಥ ಕಷ್ಟ ಬಂದರೂ ದ್ರವ್ಯನಾಶ ಆದರೂ ಪ್ರಾಣವೇ ಹೋಗುವ ಭಯ ಆದರೂ ಬುದ್ಧಿವಂತರು ಬುದ್ಧಿಬಲವನ್ನು ನೀಗರು. ಅವರಿಗೆ ದುರ್ಗತಿ ಇಲ್ಲ. ಬುದ್ಧಿಬಲ ಇಲ್ಲದವನು ಎದೆಗುಂದಿ ಯಾವಾಗಲೂ ದುಃಖಿಸುತ್ತಾನೆ. ಭಾರ ಹೆಚ್ಚು ಆದರೆ ಹಡಗು ನೀರಿನಲ್ಲಿ ಮುಳುಗುವಂತೆ ಕುಸಿದುಬೀಳುತ್ತಾನೆ ದುಃಖದ ಭಾರದಿಂದ.

"ರಘುಕುಲೋತ್ತಮ, ಕೈಮುಗಿದು ಬೇಡುತ್ತೇನೆ. ಸ್ನೇಹಪೂರ್ವಕ ಕೇಳಿಕೊಳ್ಳುತ್ತೇನೆ. ಪೌರುಷವನ್ನು ಅವಲಂಬಿಸು. ದುಃಖಕ್ಕೆ ಅವಕಾಶವನ್ನೆ ಕೊಡಬೇಡ. ದುಃಖಿಸುವವರಿಗೆ ಸುಖ ಎಂದೂ ಇಲ್ಲ. ಅವರ ತೇಜಸ್ಸು ಕುಂದುತ್ತದೆ. ದುಃಖವಶರು ಆದರೆ ಒಮ್ಮೊಮ್ಮೆ ಪ್ರಾಣಕ್ಕೇ ಸಂದೇಹ. ಆದ್ದರಿಂದ ಪ್ರಭು, ನೀನು ಶೋಕವನ್ನು ಬಿಡು. ಧೈರ್ಯ ಹಿಡಿ. ನಾನು ನಿನಗೆ ಉಪದೇಶ ಮಾಡುತ್ತ ಇಲ್ಲ. ಸ್ನೇಹದ ಸಲಿಗೆಯಿಂದ ಹೇಳುತ್ತೇನೆ. ಅಷ್ಟೆ. ನನ್ನ ಗೆಳೆತನವನ್ನು ಮನ್ನಿಸಿ ದುಃಖವನ್ನು ಬಿಡು" ಎಂದು ಸವಿನುಡಿಗಳಿಂದ ಸುಗ್ರೀವ ರಾಮನನ್ನು ಮನ ಒಲಿಸಿದ.

ರಾಮನಿಗೆ ಸ್ವಲ್ಪ ಸಮಾಧಾನ ಆಯಿತು. ಧೈರ್ಯ ಬಂತು. ಕಣ್ಣೀರನ್ನು ಒರಸಿಕೊಂಡು ಸುಗ್ರೀವನನ್ನು ಅಪ್ಪಿಕೊಂಡ. "ಸುಗ್ರೀವ, ನೀನು ಗೆಳೆಯ. ಗೆಳೆಯ ಆದವನು ಹೇಗೆ ನಡೆಯಬೇಕೋ ಹಾಗೇ ನಡೆದೆ ನೀನು. ನನ್ನ ಹಿತವನ್ನು ಕೋರಿ ಹೇಳಿದೆ. ನನಗೆ ಸಮಾಧಾನ ಕೊಟ್ಟೆ. ಇಂಥ ಆಪದ್ಬಂಧು ಗಳು ಈ ಕಾಲದಲ್ಲಿ ದುರ್ಲಭ. ಗೆಳೆಯ, ನನ್ನ ಮನದನ್ನೆ ಸೀತೆ ಎಲ್ಲಿ ಇದಾಳೋ ಆ ಕ್ರೂರ ರಾಕ್ಷಸ ರಾವಣ ಎಲ್ಲಿ ಇದಾನೋ ಇನ್ನು ಹುಡುಕಬೇಕು. ನಿನ್ನ ಪ್ರಯತ್ನ ಸಾಗಲಿ. ನಾನು ಏನು ಮಾಡಬೇಕೋ ಹೇಳು. ಸಂಕೋಚ ಬೇಡ. ಮಳೆಗಾಲದಲ್ಲಿ ಒಳ್ಳೆಯ ನೆಲದಲ್ಲಿ ಬಿತ್ತಿದ ಬೀಜ ತಪ್ಪದೆ ಮೊಳೆಯು ವಂತೆ ನನ್ನ ಮೇಲೆ ಹೊರಿಸಿದ ಎಲ್ಲ ಕಾರ್ಯವೂ ಫಲಿಸುತ್ತದೆ. ಅನುಮಾನ ಬೇಡ.

"ವಾನರೋತ್ತಮ, ಅಭಿಮಾನಕ್ಕಾಗಿ ಹೇಳಿದ ನನ್ನ ಮಾತು ಖಂಡಿತ. ತಿಳಿದುಕೊ. ನಾನು ಯಾವಾಗಲೂ ಸುಳ್ಳು ಹೇಳಿದವನು ಅಲ್ಲ. ಮುಂದೆಯೂ ಹೇಳುವವನು ಅಲ್ಲ. ಆಣೆ ಮಾಡಿ ಹೇಳುತ್ತೇನೆ. ಸತ್ಯದ ಮೇಲೆ ಆಣೆ" ಎಂದ ರಾಮ.

ರಾಮನ ಈ ದೃಢಪ್ರತಿಜ್ಞೆ ಸುಗ್ರೀವನಿಗೂ ಅವನ ಮಂತ್ರಿಗಳಿಗೂ ಪರಮಸಂತೋಷ ನೀಡಿತು. ರಾಮಸುಗ್ರೀವರು ಒಬ್ಬರಿಗೆ ಒಬ್ಬರು ಸುಖ ದುಃಖ ಹೇಳಿದರು. ರಾಮನ ಮಾತನ್ನು ಕೇಳಿ ವಿದ್ವಾಂಸ ವಾನರೋತ್ತಮ ಸುಗ್ರೀವನಿಗೆ ತನ್ನ ಕೆಲಸ ಆಯಿತು ಎಂಬಷ್ಟು ಸಂತೋಷ.

೮

ಸುಗ್ರೀವನಿಗೆ ಪರಮಾನಂದ. ಲಕ್ಷ್ಮಣನ ಇದಿರಿಗೆ ರಾಮನಿಗೆ ಹೇಳಿದ. "ಸಕಲಸದ್ಗುಣಸಂಪನ್ನ ನೀನು. ನೀನು ನನ್ನ ಗೆಳೆಯ ಆದುದರಿಂದ ನಾನು ದೇವತಾನುಗ್ರಹಕ್ಕೆ ಪಾತ್ರ ಆದೆ. ಎಲ್ಲ ವಿಧದಲ್ಲೂ, ನಿಸ್ಸಂಶಯ ಆಗಿ. ರಾಮ, ನೀನು ದೋಷರಹಿತ. ನಿನ್ನ ಸಹಾಯ ಒಂದು ಇದ್ದರೆ ಸ್ವರ್ಗವನ್ನೇ ಸಂಪಾದಿಸಬಲ್ಲೆ ನಾನು. ವಾನರರಾಜ್ಯ ನನಗೆ ವಶ ಆಗುತ್ತದೆ ಖಂಡಿತ. ಸರ್ವೋತ್ತಮ ರಘುವಂಶ. ಅದರಲ್ಲಿ ಉತ್ತಮೋತ್ತಮ ನೀನು. ನಿನ್ನ ಗೆಳೆತನ ಆದಮೇಲೆ ನನಗೆ, ನನ್ನ ಬಂಧುಮಿತ್ರರು ಎಲ್ಲರಿಗೂ ನೀನು ಪೂಜನೀಯ ಆದೆ.

"ರಾಮ, ನಿನಗೆ ತಕ್ಕ ಸ್ನೇಹಿತ ನಾನು. ಕಾಲಕ್ರಮದಲ್ಲಿ ಇದು ನಿನಗೆ ತಿಳಿಯುತ್ತದೆ. ನನ್ನ ಗುಣಸಾಮರ್ಥ್ಯಗಳನ್ನು ನಾನೇ ಹೇಳಿಕೊಳ್ಳ ಬಾರದು. ಆತ್ಮಜ್ಞಾನಿಗಳ ಧೈರ್ಯ ಸ್ಥಿರ, ದೃಢ. ನಿನ್ನಂಥ ಮಹಾತ್ಮರಿಗೆ ಆತ್ಮಜ್ಞಾನಿಗಳಿಗೆ ಪ್ರೀತಿ ಹುಟ್ಟಿದರೆ ಅದು ಸ್ಥಿರ. ತಮ್ಮಲ್ಲಿ ಇರುವ ಒಡವೆ ವಸ್ತು ಬೆಳ್ಳಿ ಬಂಗಾರವನ್ನು ಅವಿಭಕ್ತ ಎಂದು ತಿಳಿಯುತ್ತಾರೆ ಗೆಳೆಯರು. ನಿನ್ನದು ನನ್ನದು ಎಂದು ಭೇದ ಮಾಡರು. ಹಣಗಾರ ಆಗಲಿ ಬಡವ ಆಗಲಿ ದುಃಖ ಆಗಲಿ ಸುಖ ಆಗಲಿ ದೋಷಿ ಆಗಲಿ ನಿರ್ದೋಷಿ ಆಗಲಿ ಪ್ರತಿ ಒಬ್ಬನಿಗೂ ಗೆಳೆಯನೇ ಪರಮಗತಿ. ತನಗೆ ಸಮ ಆದ ಗೆಳೆಯನಿಗಾಗಿ ಧನ ವನ್ನು ಸುಖವನ್ನು, ಕಡೆಗೆ ಪ್ರಾಣವನ್ನೇ ಒಪ್ಪಿಸುತ್ತಾರೆ ಗೆಳೆಯರು."

ದೇವೇಂದ್ರನಿಗೆ ಸಮಾನ ಕಾಂತಿಯ ಲಕ್ಷ್ಮಣ ಪಕ್ಕದಲ್ಲೇ ಇದ್ದ. ಸುಗ್ರೀವನ ಮಾತನ್ನು ಮನ್ನಿಸಿ ರಾಮ ಹೇಳಿದ: "ಗೆಳೆಯ, ನೀನು ಹೇಳಿ ದುದು ನಿಜ."

ರಾಮನೂ ಮಹಾಬಲಿಷ್ಠ ಲಕ್ಷ್ಮಣನೂ ನಿಂತುಕೊಂಡೇ ಮಾತಾಡುತ್ತ ಇದ್ದರು. ಸುಗ್ರೀವನಿಗೆ ತಿಳಿಯಿತು. ಸುತ್ತಲೂ ನೋಡಿದ. ತುಂಬಾ ಹೂ

ಬಿಟ್ಟ ಚಿಗುರು ಎಲೆಗಳ ಸಾಲವೃಕ್ಷ ಒಂದು ಕಾಣಿಸಿತು ಹತ್ತಿರದಲ್ಲಿ. ಹೂಗಳಿಗೆ ದುಂಬಿಗಳು ತುಂಬಿಕೊಂಡಿದ್ದವು. ಆ ಮರದ ಕೊಂಬೆ ಒಂದನ್ನು ಮುರಿದು ತಂದು ಆಸನದಂತೆ ಹರಡಿ ಅದರ ಮೇಲೆ ರಾಮನನ್ನು ಕೂಡಿಸಿ ಪಕ್ಕದಲ್ಲಿ ತಾನೂ ಕುಳಿತ ಸುಗ್ರೀವ. ಇದನ್ನು ನೋಡಿ ಹನುಮಂತ ಇನ್ನೂ ಒಂದು ಕೊಂಬೆಯನ್ನು ಮುರಿದು ತಂದು ಅದರ ಮೇಲೆ ಲಕ್ಷ್ಮಣನನ್ನು ಕೂಡಿಸಿದ. ಆ ಪರ್ವತದ ಗಿಡಮರಗಳು ಎಲ್ಲಾ ಹೂ ಹಣ್ಣು ಬಿಟ್ಟಿದ್ದವು. ಆ ಬೆಟ್ಟದ ಮೇಲೆ ಪ್ರಸನ್ನತೆಯಿಂದ ಕುಳಿತು, ಸಮುದ್ರಗಂಭೀರ ಆಗಿದ್ದ ರಾಮನನ್ನು ನೋಡಿದ ಸುಗ್ರೀವ. ಸಂತೋಷ ಉಕ್ಕಿತು. ಮೃದುಮಧುರ ಆಗಿ ಮಾತು ಆಡಿದ. ಮಾತು ತಡವರಿಸುತ್ತ ಇತ್ತು. "ರಾಮ, ನನ್ನ ಅಣ್ಣ ವಾಲಿ ನನ್ನ ಹೆಂಡತಿಯನ್ನು ಅಪಹರಿಸಿದ. ನನಗೆ ಅವಮಾನ ಮಾಡಿದ. ರಾಜ್ಯದಿಂದ ಓಡಿಸಿದ. ನಾನು ಅವನಿಗೆ ಅಂಜಿ ದಿಕ್ಕು ಕಾಣದೆ ಈ ಋಷ್ಯಮೂಕ ಪರ್ವತದಲ್ಲಿ ಇದೇನೆ. ಅಣ್ಣನ ಭಯದಿಂದ ನನಗೆ ಹುಚ್ಚು ಹಿಡಿದಂತೆ ಆಗಿದೆ.

"ರಾಮ, ಸಮಸ್ತಲೋಕಕ್ಕೂ ಅಭಯ ನೀಡಿ ಕಾಪಾಡುವ ಮಹಾನುಭಾವ ನೀನು. ನಾನು ಈಗ ಅನಾಥ. ವಾಲಿಯ ಸಂಗಡ ದ್ವೇಷ ಬೆಳೆದು ಹೋಯಿತು. ನನ್ನನ್ನು ನೀನು ಅನುಗ್ರಹಿಸಬೇಕು" ಎಂದ.

ಮಹಾತೇಜೋವಂತ ಧರ್ಮಾತ್ಮ ಧರ್ಮವತ್ಸಲ ಶ್ರೀರಾಮ ನಸುನಗೆ ನಕ್ಕ. "ಗೆಳೆಯ, ಗೆಳೆತನದ ಲಕ್ಷಣವೇ ಉಪಕಾರ. ಅಪಕಾರ ಶತ್ರುತ್ವದ ಲಕ್ಷಣ. ನಿನ್ನ ಹೆಂಡತಿಯನ್ನು ಅಪಹರಿಸಿದ ವಾಲಿಯನ್ನು ನಾನು ಈಗಲೇ ಕೊಲ್ಲುತ್ತೇನೆ. ನನ್ನ ಬಾಣಗಳ ತೇಜಸ್ಸು ಅಪರಿಮಿತ. ವೇಗವೂ ಬಹಳ. ಕಾರ್ತಿಕೇಯನವನದಲ್ಲಿ ಹುಟ್ಟಿದವು ಇವು. ಚಿನ್ನದ ಕಟ್ಟು ಹಾಕಿ ಕಂಕಪಕ್ಷಿಯ ಗರಿಗಳನ್ನು ಕಟ್ಟಿ ಇದೆ. ಈ ಗೆಣ್ಣು ಬಹಳ ಒಳ್ಳೆಯದು. ಅಲಗೇ ಬಹಳ ಚೂಪು. ದೇವೇಂದ್ರನ ವಜ್ರಾಯುಧಕ್ಕೆ ಸಮ. ರೋಷಗೊಂಡ ಸರ್ಪಗಳಂಥ ಈ ಬಾಣಗಳು. ಒಡಹುಟ್ಟಿದರೂ ಹಗೆ ಆದ ನಿಮ್ಮ ಅಣ್ಣ ವಾಲಿಯನ್ನು ಕೊಲ್ಲುತ್ತೇನೆ. ಬೆಟ್ಟವನ್ನು ಹೊಡೆದು ಸೀಳಿ ಕೆಡಹುವಂತೆ ಅವನನ್ನು ಉರುಳಿಸುತ್ತೇನೆ" ಎಂದ.

ಸುಗ್ರೀವನಿಗೆ ಪರಮಸಂತೋಷ. ಭಲೆ ಭಲೆ ಎಂದು ರಾಮನನ್ನು ಕೊಂಡಾಡಿದ. "ರಾಮ, ದುಃಖಿಗಳ ದಿಕ್ಕು ನೀನು. ನಾನು ಮೊರೆ ಇಟ್ಟರೂ

ಇಡದೆ ಇದ್ದರೂ ನನ್ನ ಕಷ್ಟವನ್ನು ನೀಗುವ ಭಾರ ನಿನ್ನದು. ನೀನು ಈಗ ನನ್ನ ಕೈ ಹಿಡಿದು ಅಗ್ನಿಸಾಕ್ಷಿ ಗೆಳೆಯ ಆಗಿದೀಯೆ. ನೀನು ಈಗ ನನಗೆ ಪ್ರಾಣಕ್ಕಿಂತಲೂ ಹೆಚ್ಚು. ಆಣೆಮಾಡಿ ಹೇಳುತ್ತೇನೆ. ನನ್ನ ದುಃಖವನ್ನು ನಿನ್ನಲ್ಲಿ ತೋಡಿಕೊಳ್ಳುತ್ತೇನೆ ಸಲಿಗೆಯಿಂದ. ನನ್ನ ಒಳಗಿನ ದುಃಖ ನನ್ನನ್ನು ಸದಾ ಸುಡುತ್ತದೆ, ನನ್ನ ಮತಿ ಕೆಡಿಸುತ್ತದೆ."

ಸುಗ್ರೀವನ ಗುಂಟಲು ಕುಗ್ಗಿತು. ಮಾತು ಹೊರಡಲಿಲ್ಲ. ಅವನ ಕಣ್ಣಿನಲ್ಲಿ ನೀರು ತುಂಬಿತು. ನದಿಯ ಪ್ರವಾಹದಂತೆ ನುಗ್ಗಿಬರುವ ತನ್ನ ಕಣ್ಣೀರನ್ನು ಧೈರ್ಯದಿಂದ ತಡೆದ. ಕಣ್ಣೀರನ್ನು ಒರೆಸಿಕೊಂಡು ನಿಟ್ಟುಸಿರು ಬಿಟ್ಟ. "ರಾಮ, ವಾಲಿ ಬಲಿಷ್ಠ. ಮೊದಲು ನನ್ನನ್ನು ಯುವರಾಜಪದವಿಯಿಂದ ಇಳಿಸಿದ. ಆಡಬಾರದ ಮಾತು ಆಡಿದ. ರಾಜ್ಯ ಬಿಟ್ಟು ಓಡಿಸಿದ. ನನ್ನ ಪ್ರಾಣಕ್ಕಿಂತ ಪ್ರಿಯ ಆದ ನನ್ನ ಭಾರ್ಯೆಯನ್ನು ಅಪಹರಿಸಿದ. ಇಷ್ಟಕ್ಕೆ ಬಿಡದೆ ನನ್ನ ಗೆಳೆಯರನ್ನು ಎಲ್ಲರನ್ನೂ ಸೆರೆಯಲ್ಲಿ ಇಟ್ಟ.

"ಈಗಲೂ ನನ್ನನ್ನು ಕೊಲ್ಲಿಸುವ ಪ್ರಯತ್ನದಲ್ಲೇ ಇದಾನೆ. ಎಷ್ಟೋ ಮಂದಿ ವಾನರರನ್ನು ಅದಕ್ಕಾಗಿ ಕಳಿಸಿದ. ಅವರನ್ನೆಲ್ಲರನ್ನೂ ನಾನು ಕೊಂದೆ. ನಿನ್ನನ್ನು ಮೊದಲು ನೋಡಿದಾಗ ನೀವು ವಾಲಿಯ ಕಡೆಯವರೋ ಏನೋ ಎಂದು ಅನುಮಾನಪಟ್ಟು ಬೆದರಿದೆ. ನಿನ್ನ ಬಳಿ ಬಾರದಿರಲು ಆ ಅಂಜಿಕೆಯೇ ಕಾರಣ. ಭಯಕ್ಕೆ ಕಾರಣ ಇದ್ದಾಗ ಭಯಪಡುವುದು ಸಹಜ.

"ರಾಮಪ್ರಭು, ಈ ಆಪತ್ಕಾಲದಲ್ಲಿ ಹನುಮಂತ ಮುಂತಾದ ನಾಲ್ಕು ಮಂದಿ ವಾನರರು ಸಹಾಯಕರು ಆದರು. ಇವರ ಬಲವೇ ಬಲ ನನಗೆ. ಇಷ್ಟು ಕಷ್ಟದಲ್ಲಿ ಇದ್ದರೂ ನಾನು ಬದುಕಿ ಇರುವುದು ಇವರಿಂದಲೇ. ನನ್ನ ಮೇಲಣ ಸ್ನೇಹದಿಂದ ಯಾವಾಗಲೂ ನನ್ನ ಹಿಂದೆಯೇ ಇರುತ್ತಾರೆ. ಎಲ್ಲಿಗೆ ಹೋದರೂ ಬೆನ್ನು ಹಿಂದೆಯೇ. ನನ್ನನ್ನು ಕಾಪಾಡಲು ಬಹಳ ಎಚ್ಚರಿಕೆ ಇವರಿಗೆ. ಸ್ವಲ್ಪದರಲ್ಲಿ ಇದೇ ನನ್ನ ಸ್ಥಿತಿ.

"ರಾಮ, ನಮ್ಮ ಅಣ್ಣ ವಾಲಿಯ ಪರಾಕ್ರಮ ಎಣೆ ಇಲ್ಲದ್ದು. ಅಂಥವನ ವೈರ ನನಗೆ. ಅವನು ಸತ್ತರೇನೇ ನನ್ನ ದುಃಖ ಕೊನೆಗಾಣಬೇಕಾದರೆ. ಅವನು ಸತ್ತಮೇಲೆಯೇ ನನಗೆ ಸುಖ, ನನ್ನ ಬಾಳು-ಬದುಕು. ನಾನು

ದುಃಖಪೀಡಿತ. ನನ್ನದು ಎಲ್ಲವನ್ನೂ ಹೇಳಿದೆ. ದುಃಖದಲ್ಲೂ ಸುಖದಲ್ಲೂ ಗೆಳೆಯನಿಗೆ ಗೆಳೆಯನೇ ಗತಿ" ಎಂದ.

ಆಗ ರಾಮ ಸುಗ್ರೀವನಿಗೆ ಹೇಳಿದ—"ಸುಗ್ರೀವ, ನಿನಗೂ ನಿಮ್ಮ ಅಣ್ಣನಿಗೂ ವೈರ ಏಕೆ ಹುಟ್ಟಿತು? ಇದ್ದದ್ದನ್ನು ಇದ್ದಹಾಗೆ ಹೇಳು. ಕೇಳುತ್ತೇನೆ. ಕಾರಣವನ್ನು ತಿಳಿದುಕೊಂಡು ಬಲಾಬಲಗಳನ್ನು ವಿಚಾರಮಾಡುತ್ತೇನೆ. ತಕ್ಕ ಪ್ರತಿಕ್ರಿಯೆ ಆಮೇಲೆ. ವಾಲಿ ನಿನಗೆ ಅವಮಾನ ಮಾಡಿದ್ದನ್ನು ಕೇಳಿಯೇ ಮಳೆಗಾಲದ ನದೀವೇಗದಂತೆ ನನಗೆ ಕೋಪ ಉಕ್ಕಿಬಂತು. ನನ್ನ ಎದೆ ನಡುಗಿತು. ಸಂಕೋಚ ಇಲ್ಲದೆ ಎಲ್ಲವನ್ನೂ ಹೇಳು. ನಿನ್ನ ಸುದ್ದಿ ಮುಗಿಯುವುದರೊಳಗಾಗಿ ನನ್ನ ಬಿಲ್ಲು ಏರಿತು ಎಂದು ತಿಳಿ. ನಾನು ಬಾಣ ಬಿಟ್ಟೆನೋ ಹಗೆ ಬದುಕುವುದು ಸುಳ್ಳು."

ಈ ಮಾತನ್ನು ಕೇಳಿ ಸುಗ್ರೀವನಿಗೂ ಅವನ ನಾಲ್ವರು ಮಂತ್ರಿಗಳಿಗೂ ಪರಮಸಂತೋಷ ಆಯಿತು. ಆಗ ಸುಗ್ರೀವ ವೈರಕಾರಣವನ್ನು ಇದ್ದದ್ದನ್ನು ಇದ್ದಹಾಗೇ ಹೇಳಿದ.

೬

"ನನಗೂ ನಮ್ಮ ತಂದೆಗೂ ಹಿಂದೆ ನಮ್ಮ ಅಣ್ಣ ವಾಲಿಯನ್ನು ಕಂಡರೆ ಬಹಳ ಇಷ್ಟ. ವಾಲಿ ಎಂಥ ಶತ್ರುವನ್ನು ಆದರೂ ಸದೆಬಡಿಯುತ್ತ ಇದ್ದ. ನಮ್ಮ ತಂದೆ ತೀರಿದಾಗ ಮಂತ್ರಿಗಳು ಎಲ್ಲರೂ ಸೇರಿ ಹಿರಿಯ ಎಂದು ವಾನರ ರಾಜ್ಯಕ್ಕೆ ವಾಲಿಯನ್ನು ದೊರೆ ಎಂದು ಮಾಡಿದರು. ವಂಶಪರಂಪರೆಯಿಂದ ಬಂದ ವಾನರರಾಜ್ಯವನ್ನು ನಮ್ಮ ಅಣ್ಣ ಆಳಿದ. ಸರ್ವಕಾಲಗಳಲ್ಲಿಯೂ ಅವನ ಸೇವೆ ಮಾಡಿದೆ ನಾನು ಸೇವಕನಂತೆ.

"ಮಾಯಾವಿ ಎಂಬ ಒಬ್ಬ ರಾಕ್ಷಸ. ದುಂದುಭಿಯ ಹಿರಿಯ ಮಗ. ಬಹಳ ಪರಾಕ್ರಮಿ. ಒಬ್ಬ ಹೆಂಗಸಿನ ನಿಮಿತ್ತ ಅವನಿಗೂ ನಮ್ಮ ಅಣ್ಣ ವಾಲಿಗೂ ಮಹಾವೈರ ಹುಟ್ಟಿತು. ಎಲ್ಲರಿಗೂ ತಿಳಿದ ವಿಷಯ ಇದು. ಒಂದು ದಿನ ನಡುರಾತ್ರಿ. ನಾವು ಎಲ್ಲರೂ ನಿದ್ರಿಸುತ್ತ ಇದ್ದೆವು. ಆಗ ಮಾಯಾವಿ ನಮ್ಮ ಕಿಷ್ಕಿಂಧೆಯ ಬಾಗಿಲಿಗೆ ಬಂದು ಅಬ್ಬರದಿಂದ ಆರ್ಭಟಿಸಿ ವಾಲಿಯನ್ನು

ಯುದ್ಧಕ್ಕೆ ಕರೆದ. ವಾಲಿ ಗಾಢನಿದ್ರೆಯಲ್ಲಿ ಇದ್ದ. ಆ ಭಯಂಕರ ಧ್ವನಿಯನ್ನು ಕೇಳಿ ಎದ್ದ. ಸಹಿಸಲು ಆಗದೆ ವೇಗದಿಂದ ಹೊರಗೆ ಬಂದ. ವಾಲಿಯ ಹೆಂಡತಿಯರೂ ನಾನೂ ಯುದ್ಧಕ್ಕೆ ಹೋಗಬೇಡ ಎಂದು ವಾಲಿಯನ್ನು ವಿನಯದಿಂದ ಹಲವು ಬಗೆಯಲ್ಲಿ ಬೇಡಿದೆವು. ನಮ್ಮ ಮಾತನ್ನು ಕೇಳದೆ ನಮ್ಮನ್ನು ಕೊಡವಿಬಿಟ್ಟು ಆ ರಾಕ್ಷಸನ ಸಂಗಡ ಯುದ್ಧಮಾಡಲು ಹೊರಟೇ ಹೋದ. ಅಣ್ಣನ ಮೇಲಿನ ಪ್ರೀತಿಯಿಂದ ನಾನೂ ಅವನ ಹಿಂದೆಯೇ ಹೋದೆ.

"ನಮ್ಮ ಅಣ್ಣನನ್ನೂ ದೂರದಲ್ಲಿ ಹಿಂದೆ ಬರುವ ನನ್ನನ್ನೂ ನೋಡಿದ ಆ ರಾಕ್ಷಸ. ನಮ್ಮನ್ನು ಇದಿರಿಸಲು ಭಯಪಟ್ಟ. ಓಡಲು ಆರಂಭಿಸಿದ. ನಾವೂ ವೇಗದಿಂದ ಅವನ ಬೆನ್ನು ಹತ್ತಿದೆವು. ಆಗ ಚಂದ್ರ ಹುಟ್ಟಿದ. ಬೆಳುದಿಂಗಳಿನಲ್ಲಿ ದಾರಿ ಚೆನ್ನಾಗಿ ಕಂಡಿತು. ಆ ರಾಕ್ಷಸ ಬಹಳ ದೂರ ಓಡಿದ. ಅಲ್ಲಿ ನೆಲದಲ್ಲಿ ಒಂದು ಬಿಲ. ಮೇಲೆ ಹುಲ್ಲು ಮುಚ್ಚಿತ್ತು. ಅದರ ಒಳಗೆ ಹೊಕ್ಕ ರಾಕ್ಷಸ. ಆ ಬಿಲ ದುರ್ಗಮ. ನಾವು ಇಬ್ಬರೂ ಬಿಲದ ಬಾಗಿಲಲ್ಲಿ ನಿಂತೆವು. ನಮ್ಮ ಅಣ್ಣನಿಗೆ ಬಲು ರೋಷ ಬಂತು. ಆ ಕೋಪಕ್ಕೆ ಅವನ ಮೈ ಎಲ್ಲಾ ನಡುಗಿತು. ಎಲ್ಲಾ ಇಂದ್ರಿಯಗಳೂ ಕಲಕಿದವು. 'ಸುಗ್ರೀವ, ನೀನು ಈ ಬಿಲದ ಬಾಗಿಲಲ್ಲಿಯೆ ಕಾದು ಇರು. ಎಚ್ಚರಿಕೆ. ನಾನು ಒಳಗೆ ಹೋಗಿ ಹಗೆಯನ್ನು ಕೊಂದುಬರುತ್ತೇನೆ. ಬರುವವರೆಗೂ ಇರು' ಎಂದ ಅಣ್ಣ. ನಾನೂ ಜೊತೆಗೆ ಬರುತ್ತೇನೆ ಎಂದು ಎಷ್ಟೋ ರೀತಿಯಲ್ಲಿ ಹೇಳಿದೆ. ಅವನು ಒಪ್ಪಲಿಲ್ಲ. ನನ್ನ ಕೈಗಳಿಂದ ತನ್ನ ಕಾಲು ಮುಟ್ಟಿಸಿಕೊಂಡು ಆಣೆ ಇಡಿಸಿದ. ಬಿಲದ ಒಳಕ್ಕೆ ಹೋದ.

"ಬಿಲದ ಒಳಕ್ಕೆ ವಾಲಿ ಹೋಗಿ ಒಂದು ವರ್ಷ ಪೂರ್ತಿ ಆಯಿತು. ಆ ವರ್ಷ ಎಲ್ಲಾ ನಾನು ಬಿಲದ ಬಾಗಿಲಲ್ಲೇ ಕಾದುಕೊಂಡು ಇದ್ದೆ. ಇಷ್ಟು ದಿನ ಆದರೂ ವಾಲಿ ಬರಲಿಲ್ಲ. ನನ್ನ ಭ್ರಾತೃಪ್ರೇಮ ನನಗೆ ಭಯ ಹುಟ್ಟಿಸಿತು. ಮನಸ್ಸು ಕಳವಳಗೊಂಡಿತು. ಮನಸಿನಲ್ಲಿ ಅನೇಕ ಸಂದೇಹ ಹುಟ್ಟಿದವು. ರಾಕ್ಷಸ ವಾಲಿಯನ್ನು ಕೊಂದನೋ ಏನೋ ಎನಿಸಿತು. ಆ ಬಿಲದಿಂದ ನೊರೆ ಕೂಡಿದ ನೆತ್ತರು ಹರಿದು ಬಂದು ನನಗೆ ಬಹಳ ದುಃಖ ಆಯಿತು. ಅಷ್ಟರಲ್ಲಿ ಬಿಲದ ಒಳಗಿನಿಂದ ಅನೇಕ ರಾಕ್ಷಸರ ಗರ್ಜನೆ ಕೇಳಿಸಿತು. ದೀನತೆಯಿಂದ ನಮ್ಮ ಅಣ್ಣ ಕೂಗಿದ ಹಾಗೆಯೇ ಕೇಳಿಸಿತು.

"ಗೆಳೆಯ, ರಾಮ, ಈ ಕುರುಹುಗಳಿಂದ ವಾಲಿ ಮಡಿದ ಎಂದು ನಿರ್ಧರಿಸಿಕೊಂಡೆ. ಒಳಗಡೆ ಇದ್ದ ರಾಕ್ಷಸರು ಅಲ್ಲಿಯೇ ಸಾಯಲಿ ಎಂದು ದೊಡ್ಡ ಬೆಟ್ಟದಂಥ ಬಂಡೆ ಒಂದನ್ನು ಹೊತ್ತುತಂದು ಬಿಲದ ಬಾಗಿಲನ್ನು ಭದ್ರ ಆಗಿ ಮುಚ್ಚಿಬಿಟ್ಟೆ. ಅಣ್ಣ ವಾಲಿಗೆ ಉದಕಕ್ರಿಯೆಗಳನ್ನು ಮಾಡಿ ಕಿಷ್ಕಿಂಧೆಗೆ ಬಂದೆ. ನಡೆದ ಸಂಗತಿಯನ್ನು ಯಾರಿಗೂ ತಿಳಿಸದೆ ಮರೆಮಾಚಿದೆ. ಮಂತ್ರಿಗಳು ಮಾತ್ರ ಬಹಳ ಪ್ರಯತ್ನ ಮಾಡಿ ನನ್ನ ಬಾಯಿ ಬಿಡಿಸಿದರು. ನನ್ನ ಮಾತನ್ನು ಕೇಳಿ ಮಂತ್ರಿಗಳು ಎಲ್ಲರೂ ಕಲೆತು ತೀರ್ಮಾನಿಸಿ ನನಗೆ ಪಟ್ಟಕಟ್ಟಿದರು.

"ನಾನು ನ್ಯಾಯದಿಂದ ರಾಜ್ಯಭಾರ ಮಾಡಿದೆ. ಇದ್ದಕ್ಕೆ ಇದ್ದಂತೆ ನಮ್ಮ ಅಣ್ಣ ವಾಲಿ ಬಂದ. ಶತ್ರುರಾಕ್ಷಸನನ್ನು ಕೊಂದುಹಾಕಿ ಕಿಷ್ಕಿಂಧೆಗೆ ಬಂದ. ರಾಜ್ಯಾಭಿಷೇಕ ಮಾಡಿಸಿಕೊಂಡು ಆಳುತ್ತ ಇದ್ದ ನನ್ನನ್ನು ಕಂಡ. ಅವನ ಕಣ್ಣು ಕೆಂಡ ಆದವು. ನನ್ನ ಮಂತ್ರಿಗಳನ್ನು ಕೂಡಲೇ ಸೆರೆಯಲ್ಲಿ ಇಟ್ಟ. ನನ್ನನ್ನೂ ಬೈದ. ಆಡಬಾರದ ಮಾತನ್ನು ಆಡಿದ. ವಾಲಿಯನ್ನು ಕೊಲ್ಲುವಷ್ಟು ಸಾಮರ್ಥ್ಯ ನನಗೆ ಇತ್ತು. ಎಷ್ಟು ಆದರೂ ಆತ ಅಣ್ಣ. ತಿರುಗಿ ಬೈಯಲಿಲ್ಲ. ಅವನ ಮೇಲೆ ಕೈ ಎತ್ತಲಿಲ್ಲ.

"ಶತ್ರುವನ್ನು ಕೊಂದುಬಂದ ಆ ಮಹಾಬಲಶಾಲಿಯನ್ನು ಯಥಾಶಾಸ್ತ್ರ ಗೌರವಿಸಿ ನಮಸ್ಕಾರ ಮಾಡಿದೆ. ಅವನಿಗೆ ಸಂತೋಷ ಆಗಲಿಲ್ಲ. ನನ್ನನ್ನು ಆಶೀರ್ವದಿಸಲೂ ಇಲ್ಲ. ರಾಮಪ್ರಭು, ಅಲ್ಲಿಗೇ ನಾನು ಬಿಡಲಿಲ್ಲ. ಅವನ ಪಾದಗಳಲ್ಲಿ ನನ್ನ ಕಿರೀಟವನ್ನು ಇಟ್ಟು ಅಡ್ಡಬಿದ್ದೆ. ಆದರೂ ಅಣ್ಣ ನನ್ನಲ್ಲಿ ಅನುಗ್ರಹ ತೋರಲಿಲ್ಲ. ಅವನ ಕೋಪವೂ ತಗ್ಗಲಿಲ್ಲ."

೧೦

"ರಘುಕುಲೋತ್ತಮ, ಅಣ್ಣನಿಗೆ ಕೋಪದಿಂದ ಮೈಮೇಲೆ ಎಚ್ಚರ ಇರಲಿಲ್ಲ. ಅವನನ್ನು ಸಮಾಧಾನಪಡಿಸೋಣ ಎಂದುಕೊಂಡೆ. 'ಅಣ್ಣ, ನೀನು ಕ್ಷೇಮದಿಂದ ಬಂದದ್ದು ನನ್ನ ಭಾಗ್ಯ. ಅಲ್ಲದೆ, ಶತ್ರುವನ್ನೂ ನಾಶಮಾಡಿ ಬಂದೆ. ನೀನು ಅನಾಥರಕ್ಷಕ. ನನಗೂ ನೀನೇ ನಾಥ. ಅಣ್ಣ, ಶತಶಲಾಕೆಗಳ ಈ ಶ್ವೇತಛತ್ರ ಪೂರ್ಣಚಂದ್ರನಂತೆ ಹೊಳೆಯುತ್ತ ಇದೆ. ಈ ಚಾಮರ,

ಈ ಛತ್ರ ರಾಜಚಿಹ್ನೆಗಳು. ನಾನೇ ಕೈಯಾರೆ ಇವನ್ನು ನಿನಗೆ ಹಿಡಿಯುತ್ತೇನೆ. ಸ್ವೀಕರಿಸು. ಹಿಂದಿನಂತೆ ರಾಜ್ಯವನ್ನು ನಡೆಸು.

"'ದೊರೆಯೆ, ಒಂದು ವರ್ಷಕಾಲ ನಾನು ಬಿಲದ್ವಾರದ ಬಳಿಯಲ್ಲಿಯೆ ಕಾದುಕೊಂಡು ಇದ್ದೆ. ನೀನು ಹಿಂದಿರುಗಿ ಬರಲಿಲ್ಲ. ಬಿಲದ ಒಳಗಿನಿಂದ ನೊರೆಯು ನೆತ್ತರು ಹರಿದುಬಂತು. ಅದನ್ನು ನೋಡಿ ನಾನು ಅನುಮಾನಪಟ್ಟೆ. ದುಃಖಗೊಂಡೆ. ನನ್ನ ಎದೆ ಒಡೆದುಹೋಯಿತು. ಮನಸ್ಸು ನಡುಗಿತು. ಇಂದ್ರಿಯಗಳಿಗೆ ಕಳವಳ. ಬೆಟ್ಟದಂಥ ಬಂಡೆ ಒಂದನ್ನು ತಂದು ಬಾಗಿಲಿಗೆ ಅಡ್ಡ ಇಟ್ಟು ಕಿಷ್ಕಿಂಧೆಗೆ ಬಂದೆ. ನೀನು ಎಷ್ಟು ದಿನ ಆದರೂ ಬರಲಿಲ್ಲ. ಕಡೆಗೆ ಮಂತ್ರಿಗಳೂ ಪೌರರೂ ಬಲಾತ್ಕಾರ ಮಾಡಿ ನನಗೆ ಪಟ್ಟಕಟ್ಟಿದರು. ನಾನೇ ನಾನು ರಾಜ್ಯವನ್ನು ಬಯಸಲಿಲ್ಲ. ದೇಶ ಅರಾಜಕ ಆದೀತು ಎಂದು ಜನರು ಬಲವಂತ ಮಾಡಿದರು. ಒಂದುವೇಳೆ ಅದು ನನ್ನ ತಪ್ಪೇ ಎಂದು ಆದರೆ ನನ್ನನ್ನು ಮನ್ನಿಸು.

"'ಅಣ್ಣ, ಈ ರಾಜ್ಯ ನಿನ್ನದು. ನೀನೇ ರಾಜ. ನೀನು ನನಗೆ ಪೂಜ್ಯ. ಮೊದಲಿನ ಹಾಗೇ ನಿನ್ನ ಸೇವೆ ಮಾಡಿಕೊಂಡು ಇರುವುದೇ ನನಗೆ ಸಂತೋಷ. ನೀನು ಇರಲಿಲ್ಲ ಎಂದು ನಾನು ರಾಜ್ಯ ಮಾಡಿದೆ. ನಿನ್ನ ರಾಜ್ಯ ಇದು. ನನ್ನಲ್ಲಿ ನ್ಯಾಸ ಆಗಿ ಇತ್ತು. ನಿಷ್ಕಂಟಕ ಆಗಿ ಇದನ್ನು ಕಾಪಾಡಿದೆ. ಈಗ ನಿನ್ನದನ್ನು ನಿನಗೆ ಒಪ್ಪಿಸುತ್ತೇನೆ.

"'ಪ್ರಭು, ನೀನು ಅರಿಂದಮ. ನಿನ್ನ ಸ್ವಭಾವ ಯಾವಾಗಲೂ ಸೌಮ್ಯ. ನನ್ನ ಮೇಲಿನ ಕೋಪವನ್ನು ಬಿಡು. ನಿನಗೆ ಕೈಮುಗಿದು ತಲೆಬಾಗಿ ಬೇಡಿಕೊಳ್ಳುತ್ತೇನೆ. ನಾನು ನಿನಗೆ ವಿಧೇಯ. ದೇಶದಲ್ಲಿ ಕ್ಷೋಭೆ ಆದೀತು ದೊರೆ ಇಲ್ಲದೆ ಎಂದು ಮಂತ್ರಿಗಳೂ ಪುರಜನರೂ ನನ್ನನ್ನು ಬಲಾತ್ಕರಿಸಿದರು. ನಾನು ರಾಜ್ಯವನ್ನು ಬಯಸಲೂ ಇಲ್ಲ, ಒಪ್ಪಲೂ ಇಲ್ಲ. ಅವರೇ ಮಾಡಿದ್ದು ಇದು.' ಹೀಗೆ ಎಷ್ಟೋ ಸ್ನೇಹದಿಂದ ಸವಿಮಾತಿನಲ್ಲಿ ಹೇಳಿದೆ ನಾನು.

"ವಾಲಿ ನನ್ನನ್ನು ಗದರಿಸಿ ಛೀಮಾರಿಮಾಡಿದ. ಬಾಯಿಗೆ ಬಂದಹಾಗೆ ಬೈದ. ಅಷ್ಟಕ್ಕೇ ಬಿಡಲಿಲ್ಲ. ತನಗೆ ಇಷ್ಟರು ಆದ ಮಂತ್ರಿಗಳನ್ನೂ ಪುರಜನರನ್ನೂ ಕರೆಯಿಸಿದ. ಅವರ ಎಲ್ಲರ ಇದಿರಿಗೆ ನನ್ನನ್ನು ಬೈದ. 'ಪ್ರಜೆಗಳೆ, ಆ ದುಷ್ಟ ರಾಕ್ಷಸ ಮಾಯಾವಿ ಆವತ್ತು ನಡುರಾತ್ರಿಯಲ್ಲಿ ನನ್ನನ್ನು ಯುದ್ಧಕ್ಕೆ

ಕರೆದುದನ್ನು ನೀವು ನೋಡಿದಿರಿ. ನಾನು ಕೂಡಲೆ ಹೊರಗೆ ಬಂದೆ. ಅತಿ ದುಷ್ಟ ತಮ್ಮ ಸುಗ್ರೀವ ಕೂಡ ನನ್ನ ಹಿಂದೆಯೆ ಬಂದ. ಆ ರಾಕ್ಷಸ ಬಲಾಢ್ಯನೇ. ನಾವು ಇಬ್ಬರೂ ಹೀಗೆ ಬಂದುದನ್ನು ನೋಡಿ ಬೆದರಿ ಕಾಲಿಗೆ ಬುದ್ಧಿಹೇಳಿದ. ಓಡಿ ಓಡಿ ಒಂದು ಬಿಲವನ್ನು ಹೊಕ್ಕ. ಭಯಂಕರ ಬಿಲ ಅದು. ದೊಡ್ಡದು. ಆಗ ಈ ದುರ್ಮಾರ್ಗಿ ತಮ್ಮನಿಗೆ ಬಿಲದ ಬಾಗಿಲಲ್ಲಿಯೇ ಎಚ್ಚರಿಕೆಯಿಂದ ಕಾದು ಇರಲು ಹೇಳಿದೆ. ರಾಕ್ಷಸನನ್ನು ಕೊಲ್ಲದೆ ನಾನು ಕಿಷ್ಕಿಂಧೆಗೆ ಮರಳುವುದು ಇಲ್ಲ. ನಾನು ಅವನನ್ನು ಕೊಂದುಬರುವವರೆಗೂ ನೀನು ಇಲ್ಲೇ ಕಾದು ಇರು ಎಂದು ಇವನಿಗೆ ಹೇಳಿದೆ.

"'ಇವನು ಕಾದಿರುತ್ತಾನೆ ಎಂದು ನಾನು ಒಳಗೆ ನುಗ್ಗಿದೆ. ದುರ್ಗಮ ಅದು. ನಿರ್ಭಯ ಆಗಿ ನುಗ್ಗಿದೆ. ಆ ರಾಕ್ಷಸನನ್ನು ಅಲ್ಲಿ ಹುಡುಕುವುದಕ್ಕೇ ಒಂದು ವರ್ಷ ಹಿಡಿಯಿತು ನನಗೆ. ಆಗ ಆ ಭಯಂಕರ ರಾಕ್ಷಸ ಕಣ್ಣಿಗೆ ಬಿದ್ದ. ಸುಲಭ ಆಗಿ ಅವನನ್ನೂ ಅವನ ಬಂಧುಗಳನ್ನೂ ಕೊಂದುಬಿಟ್ಟೆ. ನನ್ನ ಏಟಿಗೆ ತಾಳಲಾರದೆ ರಾಕ್ಷಸ ಅರಚಿಕೊಂಡು ಬಾಯಿಂದ ರಕ್ತ ಕಾರುತ್ತ ಕೆಳಗೆ ಬಿದ್ದ. ಆ ಬಿಲದ ತುಂಬ ಹರಡಿತು ನೆತ್ತರು. ಅವನು ಸತ್ತ. ಆ ರಕ್ತದ ದುರ್ಗಂಧ ಸಹಿಸಲು ಸಾಧ್ಯ ಇಲ್ಲದೆ ಹೊರಕ್ಕೆ ಬರಲು ಯತ್ನಿಸಿದೆ. ಬಿಲದ ಬಾಗಿಲೇ ಕಾಣಲಿಲ್ಲ. ಬಿಲದ ಬಾಗಿಲಿಗೆ ಬೆಟ್ಟದಂಥ ಬಂಡೆ ಅಡ್ಡ. ಸುಗ್ರೀವಾ ಸುಗ್ರೀವಾ ಎಂದು ಕೂಗಿಯೇ ಕೂಗಿದೆ. ಉತ್ತರವೇ ಇಲ್ಲ. ಬಹಳ ದುಃಖ ಆಯಿತು. ಬಾಗಿಲಿಗೆ ಅಡ್ಡ ಇದ್ದ ಬಂಡೆಯನ್ನು ಕಾಲಿನಿಂದ ಒದ್ದೆ. ಬಂಡೆ ಆಚೆಗೆ ಬಿತ್ತು. ಹೊರಗೆ ಬಂದು ಕಿಷ್ಕಿಂಧೆಗೆ ಬಂದೆ.

"'ಇಲ್ಲಿ ಬಂದರೆ ಈ ದ್ರೋಹಿ ಸುಗ್ರೀವ ರಾಜ ಆಗಿ ಮೆರೆಯುತ್ತಿದ್ದಾನೆ. ಇವನು ಭ್ರಾತೃದ್ರೋಹಿ, ರಾಜ್ಯಲೋಭಿ. ಇದೇ ಸಮಯ ರಾಜ್ಯವನ್ನು ದಕ್ಕಿಸಿ ಕೊಳ್ಳಲಿಕ್ಕೆ ಎಂದು ಬಿಲದ ಬಾಯಿಗೆ ಬಂಡೆಯನ್ನು ಅನಿಸಿ ಬಂದಿದ್ದಾನೆ. ದ್ರೋಹಿ' ಎಂದು ಉಟ್ಟ ಬಟ್ಟೆಯಿಂದ ನನ್ನನ್ನು ಊರು ಬಿಟ್ಟು ಓಡಿಸಿದ. ನನ್ನನ್ನು ವೈಮುರಿಯೆ ಹೊಡೆದು ನನ್ನ ಹೆಂಡತಿಯನ್ನು ಅಪಹರಿಸಿದ. ಹೆಂಡತಿಯನ್ನೂ ಅಗಲಿ ವಾಲಿಗೆ ಅಂಜಿ ಈ ಸಮಸ್ತ ಭೂಮಂಡಲವನ್ನೂ ಸುತ್ತಿದೆ ನಾನು. ನಾನು ಎಲ್ಲಿಗೆ ಹೋದರೂ ಬರುತ್ತಿದ್ದ ವಾಲಿ. ಎಲ್ಲ ಸಮುದ್ರ ಎಲ್ಲ ಕಾಡೂ ಸುತ್ತಿದ್ದು ಆಯಿತು, ಕಡೆಗೆ ಋಷ್ಯಮೂಕ ಪರ್ವತಕ್ಕೆ ಬಂದೆ.

ವಾಲಿ ಇಲ್ಲಿಗೆ ಬರುವ ಹಾಗೆ ಇಲ್ಲ. ಕಾರಣ ಬೇರೆ. ಇಲ್ಲಿ ಈಗ ಭಯ ಇಲ್ಲ.

"ರಾಮ, ಅಣ್ಣತಮ್ಮಂದಿರ ನಮ್ಮ ವೈರ ವೃತ್ತಾಂತ ದೊಡ್ಡದು. ಎಲ್ಲವನ್ನೂ ನಿನಗೆ ತಿಳಿಸಿದೆ. ನಾನು ನಿರಪರಾಧಿ. ಆದರೂ ಇಂಥ ದುಃಖ ಬಂತು. ನೀನು ಮಹಾವೀರ, ರಾಮ. ಸರ್ವಲೋಕಶರಣ್ಯ. ವಾಲಿಯ ಭಯದಿಂದ ಕೊರಗುವ ನನ್ನನ್ನು ಕಾಪಾಡು. ನನ್ನ ಭಯವನ್ನು ಕಳೆ. ನನ್ನ ಶತ್ರುವನ್ನು ನಿಗ್ರಹಿಸು" ಎಂದ ಸುಗ್ರೀವ.

ಆ ತೇಜೋವಂತ ಧರ್ಮಪರಾಯಣ ರಾಮ ಅದನ್ನು ಕೇಳಿ ನಸುನಕ್ಕ. ಧರ್ಮಯುಕ್ತ ಮಾತಿನಿಂದ ಹೇಳಿದ: "ಗೆಳೆಯ, ನನ್ನ ಈ ಬಾಣಗಳು ಅಮೋಘ, ಅತಿ ತೀಕ್ಷ್ಣ. ಸೂರ್ಯಸಮಾನ. ಇವುಗಳ ವೇಗ ಅಪರಿಮಿತ. ಆ ದುರ್ಮಾರ್ಗನ ಮೇಲೆ ಹೋಗಿ ಬೀಳುತ್ತವೆ ಇವು. ನಿನ್ನ ಹೆಂಡತಿಯನ್ನು ಅಪಹರಿಸಿದ ಆ ಪಾಪಾತ್ಮ ನನ್ನ ಕಣ್ಣಿಗೆ ಬೀಳುವುದೇ ತಡ. ಬಿದ್ದಮೇಲೆ ಖಂಡಿತ ಸತ್ತ. ಸುಗ್ರೀವ, ಹೆಂಡತಿಯ ಅಗಲಿಕೆಯಿಂದ ದುಃಖಿಸುವ ನನಗೆ ನೀನು ಎಂಥ ದುಃಖಸಮುದ್ರದಲ್ಲಿ ಮುಳುಗಿ ಇದ್ದೀಯೋ ಅರ್ಥ ಆಗುತ್ತದೆ. ಚಿಂತಿಸಬೇಡ. ಈ ದುಃಖಸಮುದ್ರದಿಂದ ನಿನ್ನನ್ನು ದಾಟಿಸುತ್ತೇನೆ. ನಿನ್ನ ಮನೋಭೀಷ್ಟವನ್ನು ನೆರವೇರಿಸುತ್ತೇನೆ."

ಸುಗ್ರೀವನಿಗೆ ಪರಮಸಂತೋಷ.

೧೧

ರಾಮನ ಮಾತು ವೀರ್ಯೋತ್ಸಾಹಸೂಚಕ. ಅದನ್ನು ಕೇಳಿ ಕೈಮುಗಿದು ನಿಂತ ಸುಗ್ರೀವ. "ರಾಮ, ನಿನಗೆ ಸಿಟ್ಟುಬಂದರೆ ನಿನ್ನ ಬಾಣಗಳು ಹದಿನಾಲ್ಕು ಲೋಕಗಳನ್ನೂ ಸುಡುತ್ತವೆ. ಸಂದೇಹ ಇಲ್ಲ. ನಿನ್ನ ಬಾಣಗಳು ತೀಕ್ಷ್ಣ, ಮರ್ಮಭೇದಕ. ಪ್ರಳಯಭಾಸ್ಕರನಿಗೆ ಸಮ. ವಾಲಿಯ ಪರಾಕ್ರಮ ವೀರ್ಯ ಧೈರ್ಯ ಎಂಥವೋ ಹೇಳುತ್ತೇನೆ ಕೇಳು. ಆಮೇಲೆ ಏನು ಮಾಡಬೇಕೋ ನಿಶ್ಚಯಿಸು.

"ದಿನವೂ ಸೂರ್ಯ ಹುಟ್ಟುವ ಮೊದಲೇ ವಾಲಿ ಪಶ್ಚಿಮಸಮುದ್ರದಿಂದ ಉತ್ತರಸಮುದ್ರಕ್ಕೆ ಹೋಗಿ ಅರ್ಘ್ಯ ನೀಡಿ ಬರುತ್ತಾನೆ. ಅವನಿಗೆ ಸ್ವಲ್ಪವೂ

ಆಯಾಸ ಆಗದು. ಮಹಾವೀರ. ಬೆಟ್ಟದ ತುದಿಗೆ ಏರಿ ದೊಡ್ಡ ದೊಡ್ಡ ಶಿಖರಗಳನ್ನು ಕಿತ್ತು ಮೇಲಕ್ಕೆ ಎಸೆದು ಚೆಂಡಿನ ಆಟ ಆಡುತ್ತಾನೆ. ಕಾಡುಗಳಲ್ಲಿ ಸಾರವಂತ ಮರಗಳು ಅನೇಕವನ್ನು ತನ್ನ ಕೈಯಿಂದಲೇ ಮುರಿದು ತನ್ನ ಬಲವನ್ನು ಪರೀಕ್ಷಿಸಿಕೊಳ್ಳುತ್ತಾನೆ.

"ರಾಮ, ಹಿಂದೆ ದುಂದುಭಿ ಎಂಬ ರಾಕ್ಷಸ ಇದ್ದ. ಕೈಲಾಸ ಪರ್ವತದ ಶಿಖರದಷ್ಟು ಎತ್ತರ. ಸಾವಿರ ಆನೆಗಳ ಬಲ. ಕೋಣದ ರೂಪ. ಅವನಿಗೆ ತನ್ನ ಪರಾಕ್ರಮದ ಕೊಬ್ಬು. ವರ ಪಡೆದೆ ತಪಸ್ಸುಮಾಡಿ ಎಂಬ ಗರ್ವ. ರತ್ನ ರಾಶಿಗಳಿಗೆ ತವರು, ಅಲೆಗಳ ಆಟದ ಬಯಲು, ನದಿಗಳ ಒಡೆಯ ಆದ ಸಮುದ್ರರಾಜನನ್ನು ಯುದ್ಧಕ್ಕೆ ಕರೆದ ಆ ದುಷ್ಟ ದುಂದುಭಿ.

"ದುಂದುಭಿಗೆ ಸಾವು ಹತ್ತಿರ ಬಂದಿತ್ತು. ಸಮುದ್ರರಾಜನಿಗೆ ಅದು ಗೊತ್ತು. ಧರ್ಮಿಷ್ಠ ಅವನು. 'ಯುದ್ಧವಿಶಾರದ ದುಂದುಭಿ, ನಿನ್ನ ಸಂಗಡ ಯುದ್ಧ ಮಾಡಲು ನಾನು ಸಮರ್ಥ ಅಲ್ಲ. ನಿನ್ನ ಸಂಗಡ ಸಮ ಆಗಿ ನಿಂತು ಯುದ್ಧಮಾಡಬಲ್ಲ ವೀರನನ್ನು ತೋರಿಸುತ್ತೇನೆ ಕೇಳು. ಹಿಮವಂತ ಎಂಬ ಪರ್ವತರಾಜ ಇದ್ದಾನೆ. ಆತ ತಪಸ್ವಿಗಳು ಅನೇಕರಿಗೆ ಆಶ್ರಯ. ರುದ್ರನ ಮಾವ. ದೊಡ್ಡ ದೊಡ್ಡ ಗುಹೆ, ಸಣ್ಣ ಸಣ್ಣ ಗುಹೆ, ಕಮರಿ, ಕಾಡು, ಗಿರಿನದಿ ಬೇಕಾದಷ್ಟು ಇವೆ. ಅವನ ಸಂಗಡ ಸಮ ಆಗಿ ನಿಂತು ಯುದ್ಧಮಾಡಬಹುದು ನೀನು' ಎಂದು ಹೇಳಿದ.

"ಸಮುದ್ರ ತನ್ನ ಪರಾಕ್ರಮಕ್ಕೆ ಅಂಜಿದ ಎಂದುಕೊಂಡ ರಾಕ್ಷಸ. ಬಿಲ್ಲಿನಿಂದ ಹೊರಟ ಬಾಣದಂತೆ ನೆಟ್ಟಗೆ ಹಿಮವತ್ ಪರ್ವತಕ್ಕೆ ವೇಗದಿಂದ ಹೋದ. ಅಲ್ಲಿ ಆನೆಗಳ ಗಾತ್ರದ ಕೆಲವು ಬಿಳಿಯ ಕಲ್ಲುಗಳನ್ನು ನೆಲಕ್ಕೆ ಉರುಳಿಸಿದ. ಭಯಂಕರ ಗರ್ಜನೆ ಮಾಡಿದ. ಬಿಳಿಯ ಮೇಘದ ಆಕಾರದ ಸಕಲಜನಸಂತೋಷಕರ ಸೌಮ್ಯ ರೂಪದ ಹಿಮವಂತ ಆ ಪರ್ವತಶಿಖರದ ಮೇಲೆ ಬಂದು ನಿಂತ. "ದುಂದುಭಿ, ನೀನು ಧರ್ಮವತ್ಸಲ. ನನ್ನನ್ನು ಪೀಡಿಸಬಾರದು. ನಿನ್ನ ಸಂಗಡ ನಾನು ಯುದ್ಧ ಮಾಡಲಾರೆ. ತಪಸ್ವಿಗಳು ಮುನಿಗಳು ಅನೇಕರು ನನ್ನಲ್ಲಿ ಆಶ್ರಯ ಪಡೆದು ಇದ್ದಾರೆ. ಆದ್ದರಿಂದ ನಾನು ಯುದ್ಧ ಮಾಡಲಾರೆ" ಎಂದ.

"ಬುದ್ಧಿವಂತ ಪರ್ವತರಾಜ. ಹೀಗೆ ಸಮಾಧಾನ ಮಾಡಿದ. ದುಂದುಭಿಗೆ ಸಿಟ್ಟುಬಂತು. ಕಣ್ಣು ಕೆಂಪು ಆದವು. "ಹಿಮವಂತ, ಯುದ್ಧ ಮಾಡಲು ನಿನಗೆ ಶಕ್ತಿ ಇದೆಯೋ ಇಲ್ಲವೋ. ಅಂತೂ ನನಗೆ ಹೆದರಿದೆ. ಯುದ್ಧ ಮಾಡಲಾರೆ ಎಂದೆ. ಹೋಗಲಿ. ನಿನ್ನ ಸಂಗಡ ಬೇಡ. ಯಾರ ಸಂಗಡ ಯುದ್ಧಮಾಡಲಿ? ಯಾರು ಸಮರ್ಥರು? ಹೇಳು."

"ಅದುವರೆಗೆ ಯಾರೂ ಹೀಗೆ ಮಾತು ಆಡಿರಲಿಲ್ಲ. ಬರೀ ಕೊಬ್ಬಿನ ಮಾತು. ಹಿಮವಂತನಿಗೆ ಸಿಟ್ಟುಬಂತು. ಆದರೆ ಹಿಮವಂತ ಮಾತುಬಲ್ಲವನು. 'ದುಂದುಭಿ, ವಾಲಿ ಎಂಬ ವಾನರರಾಜ ಇದಾನೆ. ಕಿಷ್ಕಿಂಧೆಯಲ್ಲಿ ರಾಜ್ಯ ಮಾಡುತ್ತಾನೆ. ಆ ಊರಿನ ಶೋಭೆ ಅಸಮಾನ. ಅವನು ಶ್ರೀಮಂತ, ಮಹಾಬುದ್ಧಿಂತ. ಪರಾಕ್ರಮದಲ್ಲಿ ದೇವೇಂದ್ರನಿಗೆ ಸಾಟಿ. ಯುದ್ಧವಿಶಾರದ. ಯುದ್ಧದ ಎಲ್ಲ ಬಗೆಯೂ ಅವನಿಗೆ ಗೊತ್ತು. ದ್ವಂದ್ವಯುದ್ಧದಲ್ಲಿ ನಿಸ್ಸೀಮ. ನಮುಚಿಯ ಸಂಗಡ ದೇವೇಂದ್ರ ಯುದ್ಧ ಮಾಡಿದನಲ್ಲ. ಹಾಗೆಯೆ ನೀನು ಮಾಡಬಹುದು. ವಾಲಿಯನ್ನು ಯಾರೂ ಇದಿರಿಸಲಾರರು. ನೀನು ಈಗಲೇ ಕಿಷ್ಕಿಂಧೆಗೆ ಹೋಗು. ಯಾವಾಗಲೂ ಅವನು ಯುದ್ಧಕ್ಕೆ ಸಿದ್ಧ. ಹೋಗು" ಎಂದು ಹೇಳಿದ.

"ಬಹಳ ಅಟಾಟೋಪದಿಂದ ದುಂದುಭಿ ಕೂಡಲೇ ಕಿಷ್ಕಿಂಧಾಪಟ್ಟಣಕ್ಕೆ ಹೊರಟ. ಮಳೆಗಾಲದ ಕಾರ್ಮೋಡದಂತೆ ಕೋಣದ ರೂಪದಲ್ಲಿ ಬಂದ ದುಂದುಭಿ ಕಿಷ್ಕಿಂಧೆಗೆ. ಕೋಣದ ಕೊಂಬು ಬಹಳ ಹರಿತ. ರೂಪ ಭಯಂಕರ. ಕಿಷ್ಕಿಂಧೆಯ ಬಾಗಿಲಲ್ಲಿ ನಿಂತು ಭೂಮಿ ಎಲ್ಲಾ ಗಡಗಡ ನಡುಗುವಂತೆ ಗರ್ಜನೆ ಮಾಡಿದ. ತನ್ನ ಗೊರಸುಗಳಿಂದ ನೆಲವನ್ನು ಕೆರೆದು ಹತ್ತಿರದ ಮರಗಳನ್ನು ಮುರಿದು ಕೊಂಬಿನಿಂದ ನಗರದ್ವಾರವನ್ನು ತಿವಿದ. ಆಗ ಅಂತಃಪುರದಲ್ಲಿ ಇದ್ದ ವಾಲಿ. ಈ ಆರ್ಭಟ ಅವನಿಗೆ ಕೇಳಿಸಿತು. ಅವನಿಗೆ ಸಿಟ್ಟುಬಂತು. ನಕ್ಷತ್ರಗಳ ನಡುವೆ ಚಂದ್ರನ ಹಾಗೆ ಅಂತಃಪುರದ ಹೆಂಗಸರ ನಡುವೆ ಹೊಳೆಯುತ್ತ ಹೊರಗೆ ಬಂದ. ದುಂದುಭಿಯನ್ನು ನೋಡಿದ. 'ದುಂದುಭಿ, ನಿನ್ನನ್ನು ಬಲ್ಲೆ ನಾನು. ಹೀಗೆ ಏಕೆ ನಗರದ್ವಾರವನ್ನು ತಿವಿಯುತ್ತೀಯೆ? ಏಕೆ ಅಬ್ಬರಿಸುತ್ತೀಯೆ? ನೀನು ಬಲಾಢ್ಯನೇ. ಆದರೂ ನಿನ್ನ ಪ್ರಾಣಗಳು ಉಳಿಯಬೇಕು ಎಂದರೆ ಸುಮ್ಮನೆ ಹೋಗು' ಎಂದ.

"ದುಂದುಭಿಯ ಕಣ್ಣು ಕೆಂಪು ಅಡರಿದವು. ಸಿಟ್ಟಿನಿಂದ ಹೇಳಿದ: 'ಹೆಂಗಸರ ಮುಂದೆ ಹೆಮ್ಮೆ ಕೊಚ್ಚಿಕೊಂಡರೆ ಏನು ಬಂತು? ಆತ್ಮಪ್ರಶಂಸೆ ನಿಲ್ಲಿಸು. ಯುದ್ಧಮಾಡಿ ನಿನ್ನ ಬಲವನ್ನು ತೋರಿಸು. ಆಗ ನಿನ್ನ ಬಂಡವಾಳ ಬಯಲಿಗೆ ಬೀಳುತ್ತದೆ. ವಾನರ, ಇದು ರಾತ್ರಿ ಹೊತ್ತು. ನೀನು ಕಾಮ ಭೋಗದಲ್ಲಿ ಇದೀಯೆ. ಆದ್ದರಿಂದ ನನ್ನ ಕೋಪವನ್ನು ತಡೆದುಕೊಳ್ಳುತ್ತೇನೆ. ಈ ರಾತ್ರಿ ನಿನ್ನ ಮನಸಿಗೆ ಬಂದ ಹಾಗೆ ಕಾಮಭೋಗವನ್ನು ಅನುಭವಿಸು. ಬೆಳಗಿನವರೆಗೂ ನಿನಗೆ ಅವಧಿ. ಬೆಳಗ್ಗೆ ಯುದ್ಧಕ್ಕೆ ಬಾ.

"ನೀನು ವಾನರರ ಅಧಿಪತಿ. ನಿನ್ನ ಬಂಧುಮಿತ್ರರನ್ನು ಆಲಿಂಗಿಸಿಕೊ. ಇದು ನಿನಗೆ ಕೊನೆಗಾಲ. ಯಾರುಯಾರಿಗೆ ಏನೇನು ಕೊಡಬೇಕೋ ಕೊಟ್ಟು ಬಿಡು. ನಿನ್ನ ಗೆಳೆಯರು ಎಲ್ಲರನ್ನೂ ಕಡೆಯ ಸಲ ನೋಡಿಕೊಂಡು ಬಾ. ಕಿಷ್ಕಿಂಧಾ ನಗರವನ್ನು ಎಲ್ಲಾ ಒಂದು ಸಲ ನೋಡಿ ಬಾ. ನಿನ್ನಂಥವನೇ ಒಬ್ಬ ರಾಜನನ್ನು ಹುಡುಕು. ಅವನಿಗೆ ಪಟ್ಟಾಭಿಷೇಕ ಮಾಡಿ ಬಾ. ನಿನ್ನ ಹೆಂಗಸ ರೊಡನೆ ಸುಖದಿಂದ ಕ್ರೀಡಿಸು. ನಿನ್ನ ಕೋರಿಕೆಗಳು ಎಲ್ಲವನ್ನೂ ಮುಗಿಸಿಕೊ. ಬೆಳಗ್ಗೆ ಬಾ. ನಿನ್ನ ಕೊಬ್ಬನ್ನು ಅಡಗಿಸುತ್ತೇನೆ. ಧರ್ಮದೃಷ್ಟಿಯಿಂದ ಇವನ್ನು ಹೇಳುತ್ತೇನೆ. ಮತ್ತು ಏರಿದವನನ್ನು ವೈಮರೆತವನನ್ನು ಮಲಗಿದ್ದವನನ್ನು ನಿರಾಯುಧನನ್ನು ನಿನ್ನಂತೆ ಹೆಂಗಸರ ನಡುವೆ ಕಾಮಾತುರದಿಂದ ಎಚ್ಚರ ತಪ್ಪಿದವನನ್ನು ಕೊಂದರೆ ಭ್ರೂಣಹತ್ಯಾದೋಷ ಬರುತ್ತದೆ. ಎಲ್ಲವನ್ನೂ ತೀರಿಸಿಕೊಂಡು ಬೆಳಗ್ಗೆ ಬಾ' ಎಂದ.

"ತಾರೆ ಮೊದಲು ಆಗಿ ಹೆಂಗಸರು ಎಲ್ಲರನ್ನೂ ಅಂತಃಪುರಕ್ಕೆ ಕಳಿಸಿದ ವಾಲಿ. ದುಂದುಭಿಯನ್ನು ನೋಡಿ ನಕ್ಕ. ಮೃದುವಚನದಿಂದ ಅವನಿಗೆ ಹೇಳಿದ. 'ದುಂದುಭಿ, ನಾನು ಕಾಮಾತುರ, ಮೈಮೇಲೆ ಎಚ್ಚರವಿಲ್ಲ ಎಂದುಕೊಳ್ಳಬೇಡ. ಯುದ್ಧಕ್ಕೆ ಮೊದಲು ಮಾಡುವ ವೀರಪಾನದ್ದು ನನ್ನ ಅಮಲು ಎಂದು ತಿಳಿ. ಯುದ್ಧಮಾಡಲು ನಿನಗೆ ಭಯ ಇಲ್ಲದೆ ಇದ್ದರೆ ವಾಲಿ ಸದಾ ಸಿದ್ಧ.'

"ತನ್ನ ತಂದೆ ದೇವೇಂದ್ರ ಕೊಟ್ಟ ಕಾಂಚನ ಮಾಲಿಕೆಯನ್ನು ಧರಿಸಿ ಯುದ್ಧಕ್ಕೆ ನಿಂತ ವಾಲಿ. ದುಂದುಭಿಯ ಕೊಂಬು ಎರಡನ್ನೂ ಎರಡು ಕೈಗಳಿಂದ ಹಿಡಿದುಕೊಂಡ. ಪರ್ವತದಂಥ ಅವನ ದೇಹವನ್ನು ಎತ್ತಿ ಗಿರಗಿರ ತಿರುಗಿಸಿದ. ಗರ್ಜಿಸಿದ. ದುಂದುಭಿಯನ್ನು ನೆಲಕ್ಕೆ ಅಪ್ಪಳಿಸಿ ದೂರ ಎಸೆದ. ಸಿಂಹನಾದ

ಮಾಡಿದ. ದುಂದುಭಿಯು ಎರಡೂ ಕಿವಿಗಳಿಂದ ರಕ್ತ ಹರಿಯಿತು. ಆದರೂ ಮೇಲೆ ಎದ್ದ ರಾಕ್ಷಸ. ಮತ್ತೆ ಯುದ್ಧಕ್ಕೆ ತೊಡಗಿದ. ಇಬ್ಬರಿಗೂ ಕೋಪಾವೇಶ. ಒಬ್ಬರನ್ನು ಒಬ್ಬರು ಗೆಲ್ಲುವ ಹಟ. ಘೋರ ಆಗಿ ನಡೆಯಿತು ಹೋರಾಟ. ಪರಾಕ್ರಮದಲ್ಲಿ ಇಂದ್ರನಿಗೆ ಸಮ ವಾಲಿ. ಕೈಗೆ ಸಿಕ್ಕ ಕಲ್ಲುಮರಗಳನ್ನು ದುಂದುಭಿಯ ಮೇಲೆ ಎಸೆದ. ಮುಷ್ಟಿಯಿಂದ ಮೊಳಕಾಲಿನಿಂದ ಗುದ್ದಿದ. ಇಬ್ಬರೂ ಹೋರಾಡುತ್ತ ಇದ್ದರು. ಬರಬರುತ್ತ ದುಂದುಭಿಯ ಶಕ್ತಿ ಕುಂದಿತು. ವಾಲಿಯ ಕೈ ಮೇಲೆ ಆಯಿತು. ಆತನ ಬಲಪರಾಕ್ರಮ ಯುದ್ಧೋತ್ಸಾಹ ತಗ್ಗಿತು. ಇದೇ ಸಮಯ ಎಂದು ವಾಲಿ ಅವನನ್ನು ಎತ್ತಿ ಕುಕ್ಕಿದ. ರಾಕ್ಷಸನ ಮೈ ನಜ್ಜುಗುಜ್ಜು. ಅವನ ಪ್ರಾಣ ಹೋಯಿತು. ಅವನ ಮೈಯನ್ನು ಎತ್ತಿ ಬಿಸುಟ ವಾಲಿ. ಒಂದು ಗಾವುದ ದೂರ ಹೋಗಿ ಬಿತ್ತು ಅದು.

"ಅವನು ದುಂದುಭಿಯ ದೇಹವನ್ನು ತಿರುತಿರುಗಿಸಿ ಬಿಸುಟಾಗ ಅದರ ಬಾಯಿಂದ ನೆತ್ತರು ಸೋರಿತು. ಗಾಳಿಗೆ ನೆತ್ತರಿನ ಹನಿ ಅಲ್ಲಿ ಇದ್ದ ಮತಂಗ ಆಶ್ರಮದಲ್ಲಿ ಹೋಗಿ ಬಿದ್ದವು. ಆ ರಕ್ತಬಿಂದುಗಳನ್ನು ನೋಡಿ ಮತಂಗ ಮಹಾಮುನಿಗೆ ಬಹಳ ಸಿಟ್ಟುಬಂತು. ಯಾರು ಹೀಗೆ ಮಾಡಿದವರು? ವಿವೇಕ ಇಲ್ಲದೆ ಈ ಪುಣ್ಯಾಶ್ರಮದಲ್ಲಿ ರಕ್ತ ಸುರಿಸಿ ಎಲ್ಲವನ್ನೂ ಅಶುಚಿ ಮಾಡಿದ ದುರ್ಬುದ್ಧಿ ಮೂರ್ಖ ಮೂಢ ಯಾರು?' ಎಂದು ಚಿಂತಿಸಿದರು. ಹೊರಗೆ ಬಂದು ಆಶ್ರಮದಲ್ಲಿ ನೋಡಿದರೆ ಪರ್ವತಾಕಾರದ ಎಮ್ಮೆಯ ಹೆಣ. ಯೋಗದೃಷ್ಟಿಯಿಂದ ಚಿಂತಿಸಿ ನಡೆದದ್ದು ಎಲ್ಲವನ್ನೂ ತಿಳಿದುಕೊಂಡರು.

"ವಾಲಿಯದು ಈ ಕೆಲಸ ಎಂದು ಅವರಿಗೆ ತಿಳಿಯಿತು. ವಾಲಿಗೆ ಶಾಪ ಕೊಟ್ಟರು. 'ಈ ಕೆಲಸವನ್ನು ಮಾಡಿದ ದುಷ್ಟ ನನ್ನ ಆಶ್ರಮದ ಎಲ್ಲೆಯ ಒಳಗೆ ಇನ್ನು ಕಾಲು ಇಡಕೂಡದು. ಕಾಲು ಇಟ್ಟನೋ ಕೂಡಲೇ ಅವನು ಸಾಯುತ್ತಾನೆ. ನನ್ನ ಆಶ್ರಮದಲ್ಲಿ ನೆತ್ತರಿನ ಹನಿ ಬೀಳಿಸಿದ. ಈ ತಪೋವನದ ಗಿಡಮರಗಳು ಎಲ್ಲಾ ಮುರಿದುಬೀಳುವಂತೆ ಈ ರಾಕ್ಷಸಕಳೇಬರವನ್ನು ಎಸೆದು ಇದ್ದಾನೆ. ಈ ಆಶ್ರಮಕ್ಕೆ ಒಂದು ಗಾವುದ ದೂರದಲ್ಲೇ ಇರಬೇಕೇ ವಿನಾ ಒಳಗೆ ಬಂದನೋ ಅವನಿಗೆ ಸಾವು ತಪ್ಪದು. ವಾಲಿಯೇ ಅಲ್ಲ, ಅವನ ಕಡೆಯವರು ಯಾರೂ ಇಲ್ಲಿ ಬರಕೂಡದು. ಕೂಸಿನ ಹಾಗೆ ಕಾಪಾಡಿದೆ ಎಷ್ಟೋ ವರ್ಷ ಈ ತಪೋವನವನ್ನು. ಈ ವನದಲ್ಲಿ ಎಲೆ ಚಿಗುರು ಗಡ್ಡೆಗೆಣಸು ಯಾವುದನ್ನೂ

ವಾಲಿಯ ಕಡೆಯವರು ಮುಟ್ಟಕೂಡದು. ಈಗ ಇಲ್ಲಿ ಇದ್ದವರು ಹೊರಟು ಹೋಗಲು ಒಂದು ದಿನ ಗಡುವು. ನಾಳೆ ಬೆಳಗ್ಗೆ ಅವರು ಯಾರೂ ಇಲ್ಲಿ ಇರಕೂಡದು. ಇದ್ದರೆ ಅವರು ಒಂದು ಸಾವಿರ ವರ್ಷ ಕಲ್ಲು ಆಗಿ ಇರುತ್ತಾರೆ.'

"ಮತಂಗಮಹರ್ಷಿಯ ಶಾಪವಾಣಿಯನ್ನು ಕೇಳಿ ಅಲ್ಲಿ ಇದ್ದ ವಾನರರು ಹೊರಟುಹೋದರು. ವಾಲಿಯ ಬಳಿಗೆ ಹೋದರು. 'ಏಕೆ ಎಲ್ಲರೂ ಗುಂಪು ಆಗಿ ಬಂದಿರಿ? ಮತಂಗಮುನಿಯ ಆಶ್ರಮದಲ್ಲಿ ಸುಖ ಇಲ್ಲವೆ?' ಎಂದು ಕೇಳಿದ ವಾಲಿ. ವಾನರರು ನಡೆದ ಸಂಗತಿ ಎಲ್ಲವನ್ನೂ ವಿವರ ಆಗಿ ತಿಳಿಸಿದರು. ವಾಲಿ ತತ್‌ಕ್ಷಣವೇ ಮತಂಗಾಶ್ರಮಕ್ಕೆ ಹೋದ. ಕೈಮುಗಿದು ಮುನಿಯನ್ನು ಹಲವು ಬಗೆಯಲ್ಲಿ ಬೇಡಿಕೊಂಡ. ಮುನಿ ವಾಲಿಯ ಮುಖವನ್ನೂ ನೋಡಲಿಲ್ಲ. ಆಶ್ರಮದ ಒಳಕ್ಕೆ ಹೊರಟುಹೋದ. ಅಲ್ಲಿ ಬಹಳ ಹೊತ್ತು ಇದ್ದರೆ ಶಾಪಕ್ಕೆ ಗುರಿ ಆಗಬಹುದು ಎಂದು ಬೆದರಿ ವಾಲಿ ಹೊರಟುಹೋದ.

"ಆಗಿನಿಂದ ಇಲ್ಲಿಗೆ ಬರಬೇಕು ಎಂದರೆ ವಾಲಿಗೆ ಶಾಪಭಯ. ಈ ಬೆಟ್ಟದ ಬಳಿಗೆ ಬರುವುದೇ ಇಲ್ಲ. ಇಣಿಕಿ ಕೂಡ ನೋಡುವುದಿಲ್ಲ. ಆದ್ದರಿಂದ ನನ್ನ ಈ ನಾಲ್ವರು ಮಂತ್ರಿಗಳ ಸಂಗಡ ನಾನು ಇಲ್ಲಿ ಇದೇನೆ. ಯಾವ ಭಯವೂ ಇಲ್ಲ ಇಲ್ಲಿ.

"ವಾಲಿ ಎತ್ತಿ ಬಿಸಾಟನಲ್ಲ. ಆ ದುಂದುಭಿಯ ಎಲುಬಿನ ಹಂದರ ಇನ್ನೂ ಬಿದ್ದಿದೆ ನೋಡು ಬೆಟ್ಟದ ಹಾಗೆ. ಇಲ್ಲಿ ಅನೇಕ ರೆಂಬೆಕೊಂಬೆಗಳ ಈ ಏಳು ಸಾಲವೃಕ್ಷಗಳು ಇವೆಯಲ್ಲ. ಒಂದು ಸಲ ಒಂದು ಮರದ ಕೊಂಬೆ ಹಿಡಿದು ಅಲ್ಲಾಡಿಸಿದ ಎಂದರೆ ವಾಲಿ, ಆ ಮರದ ಎಲೆಗಳು ಎಲ್ಲಾ ಉದುರಿಹೋಗ ಬೇಕಾದ್ದೇ. ವಾಲಿ ಬಹಳ ಶಕ್ತಿವಂತ. ಅವನ ಪರಾಕ್ರಮ ಸಾಟಿ ಇಲ್ಲದ್ದು.

"ರಾಮ, ನಾನು ವಾಲಿಯ ಪರಾಕ್ರಮವನ್ನು ವರ್ಣಿಸಿದೆ. ಇಂಥವನ ಸಂಗಡ ಹೇಗೆ ಯುದ್ಧಮಾಡಬೇಕೋ ಹೇಗೆ ಅವನನ್ನು ಕೊಲ್ಲಬೇಕೋ ನನಗೆ ತಿಳಿಯದು."

ಸುಗ್ರೀವ ಹೇಳಿದ್ದನ್ನು ಎಲ್ಲಾ ಕೇಳಿದ ಲಕ್ಷ್ಮಣ. ನಸುನಕ್ಕ. "ಸುಗ್ರೀವ, ರಾಮ ವಾಲಿಯನ್ನು ಗೆಲ್ಲಬಲ್ಲ ಕೊಲ್ಲಬಲ್ಲ ಎಂದು ನೀನು ನಂಬುವಂತೆ ಏನು ಮಾಡಬೇಕು? ಹೇಳು" ಎಂದು ಕೇಳಿದ.

"ಲಕ್ಷ್ಮಣ, ಈ ಸಾಲವೃಕ್ಷಗಳನ್ನು ಒಂದೊಂದನ್ನೂ ಒಂದೊಂದು ಬಾಣದಿಂದ ಹೊಡೆದು ಭೇದಿಸಿದ ವಾಲಿ. ರಾಮನೂ ಹಾಗೇ ಒಂದು ಬಾಣದಿಂದ ಒಂದು ಗಿಡವನ್ನು ಭೇದಿಸಲಿ. ಸಾಕು. ವಾಲಿ ಕೊಂದ ದುಂದುಭಿಯ ಕಳೇಬರ ಇದೆಯಲ್ಲ. ಅದನ್ನು ತನ್ನ ಕಾಲಿನಿಂದ ಇನ್ನೂರು ಬಾಣಗಳಷ್ಟು ದೂರ ಚಿಮ್ಮಲಿ ರಾಮ. ಇಷ್ಟಾದರೆ ವಾಲಿ ಸತ್ತ ಎಂದೇ ನಂಬುತ್ತೇನೆ" ಎಂದ ಸುಗ್ರೀವ. ಸ್ವಲ್ಪ ಹೊತ್ತು ಯೋಚನೆ ಮಾಡಿ ರಕ್ತಾಂತಲೋಚನ ರಾಮನನ್ನು ಕುರಿತು ಮತ್ತೆ ಹೇಳಿದ—"ವಾನರವೀರ ವಾಲಿ ಶೂರ. ಅನೇಕ ಮಂದಿ ಶೂರರನ್ನು ಕೊಂದವನು. ಹೆಸರಾದ ಪರಾಕ್ರಮಶಾಲಿ. ಯುದ್ಧದಲ್ಲಿ ಅವನು ಸೋತದ್ದೇ ಇಲ್ಲ. ದೇವತೆಗಳಿಗೂ ಕೈಯಲ್ಲಿ ಆಗದ ಕೆಲಸಗಳನ್ನು ಎಷ್ಟೋ ಮಾಡಿದವನು. ಇದನ್ನು ಎಲ್ಲಾ ಕಂಡೇ ನಾನು ಈ ಋಷ್ಯಮೂಕ ಪರ್ವತವನ್ನು ಸೇರಿದೆ. ವಾಲಿಯನ್ನು ಇದಿರಿಸಲು ಸಾಧ್ಯ ಅಲ್ಲ. ಅಜೇಯ ಪರಾಕ್ರಮಿ. ಮಹಾ ಕೋಪಿಷ್ಠ. ನನ್ನ ಪ್ರೀತಿಯ ಮಂತ್ರಿಗಳು ಯಾವಾಗಲೂ ನನ್ನ ಜೊತೆಯಲ್ಲೇ ಇರುತ್ತಾರೆ. ಅವನು ಇಲ್ಲಿಗೆ ಬರುವ ಹಾಗೆ ಇಲ್ಲ. ಆದರೂ ಯಾವಾಗಲೂ ನನಗೆ ಭಯವೆ.

"ದೈವಗತಿಯಿಂದ ನನಗೆ ನಿನ್ನ ಸ್ನೇಹ ಲಭಿಸಿತು. ಹಿಮವಂತನನ್ನು ಆಶ್ರಯಿಸುವಂತೆ ನಾನು ನಿನ್ನನ್ನು ಆಶ್ರಯಿಸಿದೆ. ಪುರುಷೋತ್ತಮ, ನನ್ನ ದುಷ್ಟ ಸೋದರನ ಬಲ ನನಗೆ ಗೊತ್ತು. ರಾಘವ, ಯುದ್ಧದಲ್ಲಿ ನಿನ್ನ ಪರಾಕ್ರಮ ಎಂಥದೋ ನಾನು ನೋಡಿಲ್ಲ. ಈಗ ನಾನು ಇದನ್ನು ಹೇಳಿದ್ದು ನಿನ್ನನ್ನು ಹೆದರಿಸಲಿಕ್ಕೆ ಅಥವಾ ಇತರರ ಸಂಗಡ ಹೋಲಿಸಿನೋಡಲಿಕ್ಕೆ ಅಥವಾ ನಿನ್ನನ್ನು ಅವಮಾನಪಡಿಸಲಿಕ್ಕೆ ಅಲ್ಲ. ಹಾಗೆ ತಿಳಿಯಬೇಡ. ವಾಲಿಯ ಭಯಂಕರ ಕೃತ್ಯಗಳನ್ನು ನೋಡಿ ನನಗೆ ಬಹಳ ಭಯ. ಆ ಭಯ ಹೀಗೆ ಆಡಿಸುತ್ತ ಇದೆ. ರಘುವಂಶಲಲಾಮ, ನೀನು ಕೊಟ್ಟ ಅಭಯವಚನವೇ ಸಾಕು. ಸಾಲದ್ದಕ್ಕೆ ನಿನ್ನ ಬುದ್ಧಿ ನಿನ್ನ ಆಕಾರ ಬೂದಿ ಮುಚ್ಚಿದ ಕೆಂಡದಂತೆ ಇರುವ ನಿನ್ನ ತೇಜಸ್ಸಿಗೆ ಸಾಕ್ಷಿ" ಎಂದ ಸುಗ್ರೀವ.

ರಾಮ ಸುಗ್ರೀವನ ಮಾತಿಗೆ ಕಿರುನಗೆ ನಗುತ್ತ "ವಾನರೇಂದ್ರ, ನನ್ನ ಪರಾಕ್ರಮದಲ್ಲಿ ನಿನಗೆ ನಂಬಿಕೆ ಇಲ್ಲವಷ್ಟೆ. ಈಗ ನಂಬಿಕೆ ಹುಟ್ಟಿಸುತ್ತೇನೆ ನೋಡು" ಎಂದ. ದುಂದುಭಿಯ ಎಲುಬಿನ ಗೂಡನ್ನು ಕಾಲಿನ ಹೆಬ್ಬೆರಳಿನಿಂದ ಚಿಮ್ಮಿದ. ಹತ್ತು ಯೋಜನ ದೂರ ಹೋಗಿ ಬಿತ್ತು ಅದು.

ಈಗ ಆ ಕಳೇಬರ ಒಣಗಿಹೋಗಿ ಹಗುರ ಆಗಿತ್ತು. ಆದ್ದರಿಂದ ರಾಮು ಅದನ್ನು ಅಷ್ಟು ದೂರ ಚಿಮ್ಮಿದ ಎಂದು ಸುಗ್ರೀವನಿಗೆ ಸಂದೇಹ. ಲಕ್ಷ್ಮಣನ ಇದಿರಿನಲ್ಲಿ ರಾಮನಿಗೆ ಹೇಳಿದ: "ಗೆಳೆಯ, ವಾಲಿ ಇದನ್ನು ಎಸೆದಾಗ ಇದು ಹಸಿ ದೇಹ. ಮಾಂಸ ತುಂಬಿ ಇತ್ತು. ಈಗ ಇದು ಒಣಗಿ ಹಗುರ ಆಗಿದೆ ಹುಲ್ಲಿನ ಹಾಗೆ. ಇಷ್ಟೇ ಅಲ್ಲ. ಇದನ್ನು ಬಿಸುಟಾಗ ನಮ್ಮ ಅಣ್ಣನಿಗೆ ಮೈಮೇಲೆ ಎಚ್ಚರ ಕಡಮೆ. ದಣಿದು ಇದ್ದ. ನೀನು ಲೀಲಾಜಾಲ ಆಗಿ ಈಗ ಇಷ್ಟು ದೂರ ಚಿಮ್ಮಿದೆ. ನಿನ್ನ ಬಲ ಹೆಚ್ಚೋ ಅವನ ಬಲ ಹೆಚ್ಚೋ ತಿಳಿಯಲು ಅಸಾಧ್ಯ ನನಗೆ. ಹಸಿಯದು ಒಣಗಿದ್ದು ಎಂಬ ಭೇದವೇ ಕಾರಣ ಸಂದೇಹಕ್ಕೆ. ಈ ಸಾಲವೃಕ್ಷಗಳನ್ನು ಭೇದಿಸಿದರೆ, ಒಂದನ್ನು ಒಂದೇ ಬಾಣದಿಂದ, ಆಗ ಸ್ಪಷ್ಟ ಆಗುತ್ತದೆ.

"ಗೆಳೆಯ, ನಿನ್ನ ಬಿಲ್ಲು ಆನೆಯ ಸೊಂಡಿಲಿನ ಹಾಗೆ ಇದೆ. ಇದನ್ನು ಬಿಗಿದು ಕಟ್ಟಿ ಬಾಣ ಬಿಟ್ಟರೆ ಸಾಲವೃಕ್ಷ ಸೀಳಿಹೋಗುತ್ತದೆ. ಸಂದೇಹ ಇಲ್ಲ. ಆದರೂ ನನ್ನ ಮನಸಿನ ತೃಪ್ತಿಗಾಗಿ ಕೇಳಿಕೊಳ್ಳುತ್ತೇನೆ. ನನ್ನ ಆಸೆ. ನಿನ್ನನ್ನು ನಾನು ಪರೀಕ್ಷಿಸುವುದು ಇಲ್ಲ. ಬೇರೆ ತಿಳಿಯಬೇಡ. ತೇಜೋವಂತರಲ್ಲಿ ಸೂರ್ಯ, ಪರ್ವತಗಳಲ್ಲಿ ಹಿಮವಂತ, ನಾಲ್ಕು ಕಾಲಿನ ಪ್ರಾಣಿಗಳಲ್ಲಿ ಸಿಂಹ ಹೇಗೆ ಶ್ರೇಷ್ಠ ಎನಿಸಿದೆಯೋ ಹಾಗೆಯೇ ಪರಾಕ್ರಮದಲ್ಲಿ ನೀನು ಮನುಷ್ಯರಲ್ಲೇ ಶ್ರೇಷ್ಠ" ಎಂದ.

೧೨

ಮಹಾತೇಜಸ್ವಿ ರಾಮ ಸುಗ್ರೀವನ ಮಾತನ್ನು ಕೇಳಿದ. ಅವನಿಗೆ ನಂಬಿಕೆ ಹುಟ್ಟಿಸಲು ಬಿಲ್ಲನ್ನು ಹಿಡಿದ. ಭಯಂಕರ ಬಾಣ ಒಂದನ್ನು ಬಿಲ್ಲಿಗೆ ಏರಿಸಿದ. ದಿಕ್ಕುಗಳನ್ನು ಎಲ್ಲಾ ತುಂಬುವಂತೆ ಟಂಕಾರಮಾಡಿದ. ಸಾಲವೃಕ್ಷಕ್ಕೆ ಗುರಿ ಇಟ್ಟು ಬಾಣ ಬಿಟ್ಟ.

ಆ ಬಾಣ ಆ ಏಳು ಸಾಲವೃಕ್ಷಗಳನ್ನೂ ಭೇದಿಸಿಕೊಂಡುಹೋಗಿ ಮುಂದೆ ಇದ್ದ ಬೆಟ್ಟದ ತಪ್ಪಲಲ್ಲಿ ಬಿತ್ತು. ಅಲ್ಲಿ ಆ ನೆಲವನ್ನು ಸೀಳಿ ಮೇಲಕ್ಕೆ ಎದ್ದು ಹಿಂದಿರುಗಿ ಮತ್ತೆ ರಾಮನ ಬತ್ತಳಿಕೆಗೇ ಬಂತು.

ಆ ಬಾಣದ ವೇಗಕ್ಕೆ ಒಂದೇ ಹೊಡೆತಕ್ಕೆ ಮುರಿದುಬಿದ್ದು ಏಳು ಸಾಲ ವೃಕ್ಷಗಳನ್ನೂ ಸುಗ್ರೀವ ನೋಡಿದ. ಬೆರಗು ಆದ. ಪರಮಸಂತೋಷ ಆಯಿತು. ಕಂಠಾಭರಣಗಳು ಜೋಲಾಡುತ್ತ ಇರುವಂತೆಯೇ ನೆಲಕ್ಕೆ ತಲೆ ಸೋಕಿಸಿ ಶಿರಬಾಗಿ ರಾಮನಿಗೆ ನಮಸ್ಕಾರಮಾಡಿದ. ಧರ್ಮಜ್ಞ ಸಮಸ್ತಶಸ್ತ್ರಾಸ್ತ್ರವೇತ್ತ ಶೂರ ಆದ ರಾಮನಿಗೆ ಸಂತೋಷದಿಂದ ಹೇಳಿದ: "ಪ್ರಭು, ನೀನು ಪುರುಷ ಪುಂಗವ. ದೇವೇಂದ್ರನೇ ಸಮಸ್ತ ದೇವತೆಗಳ ಸಮೇತ ಬಂದರೂ ಎಲ್ಲರೂ ನಿನ್ನ ಬಾಣಗಳ ಹೊಡೆತಕ್ಕೆ ಉರುಳಬೇಕಾದ್ದೇ. ಇಂಥ ಸಮರ್ಥ ನೀನು. ವಾಲಿಯನ್ನು ಕೊಲ್ಲುವುದರಲ್ಲಿ ಸಂದೇಹವೇ ಇಲ್ಲ. ನಿನ್ನ ಮುಂದೆ ವಾಲಿ ಎಷ್ಟರವನು? ಒಂದೇ ಬಾಣದಿಂದ ಈ ಸಪ್ತಸಾಲಗಳನ್ನು ಭೇದಿಸಿದೆ. ನಿನ್ನ ಇದಿರಿಗೆ ಯಾರು ನಿಲ್ಲಬಲ್ಲರು ಯುದ್ಧದಲ್ಲಿ? ಮಹೇಂದ್ರನಿಗೂ ವರುಣನಿಗೂ ಸಮ ನೀನು. ನಿನ್ನಂಥವನ ಗೆಳೆತನದಿಂದ ನನ್ನ ದುಃಖ ಎಲ್ಲವೂ ಹೋಯಿತು. ನನಗೆ ಈಗ ಎಷ್ಟೋ ಸಂತೋಷ. ನನ್ನ ಅಣ್ಣನ ರೂಪದ ನನ್ನ ಶತ್ರುವನ್ನೂ ಕೊಂದುಬಿಡು ಈಗಲೇ. ನಿನಗೆ ಕೈಮುಗಿಯುತ್ತೇನೆ."

ಸುಗ್ರೀವನನ್ನು ಅಪ್ಪಿಕೊಂಡ ರಾಮ. "ಸುಗ್ರೀವ, ನಡೆ. ಕಿಷ್ಕಿಂಧೆಗೆ ಹೋಗೋಣ. ನೀನು ಮುಂದೆ. ನಾವು ನಿನ್ನ ಹಿಂದೆ. ನಿನ್ನನ್ನು ಹಿಂಸಿಸಿದ ವಾಲಿಯನ್ನು ಯುದ್ಧಕ್ಕೆ ಕರೆ" ಎಂದ.

ಎಲ್ಲರೂ ಕಿಷ್ಕಿಂಧೆಗೆ ಹೊರಟರು. ಅಲ್ಲಿ ಹತ್ತಿರದಲ್ಲಿ ಒಂದು ದಟ್ಟ ಅಡವಿಯಲ್ಲಿ ಮರಗಳ ಮರೆಯಲ್ಲಿ ಎಲ್ಲರೂ ನಿಂತರು. ಸುಗ್ರೀವ ಒಬ್ಬನೇ ಮುಂದೆ ಹೋದ.

ದಟ್ಟಿಯನ್ನು ಬಿಗಿದು ಕಟ್ಟಿದ ಸುಗ್ರೀವ. ಮುಗಿಲು ಮುರಿದುಬೀಳುವಂತೆ ಗರ್ಜಿಸಿದ. ಯುದ್ಧಕ್ಕೆ ಬಾ ಎಂದು ವಾಲಿಯನ್ನು ಕರೆಯುವ ಸಿಂಹನಾದ ಮಾಡಿದ. ತಮ್ಮನ ಈ ಅಬ್ಬರವನ್ನು ಕೇಳಿ ಮಹಾಬಲಶಾಲಿ ವಾಲಿಗೆ ಸಿಟ್ಟುಬಂತು. ಯುದ್ಧಸನ್ನದ್ಧ ಆಗಿ ಬಂದ. ಅಸ್ತಾಚಲಕ್ಕೆ ಹೊರಟುಬರುವ ದಿನಮಣಿಯ ಹಾಗೆ.

ವಾಲಿಸುಗ್ರೀವರಿಗೆ ಯುದ್ಧ ಮೊದಲು. ಇಬ್ಬರಿಗೂ ಕೋಪೋದ್ರೇಕ. ನೈಮರೆತು ತಮ್ಮ ವಜ್ರಮುಷ್ಟಿಗಳಿಂದ ಸಿಡಿಲಿನಂಥ ತಮ್ಮ ಅಂಗೈಗಳಿಂದ

ಹೊಡೆದಾಡಿದರು. ಮುಗಿಲಿನಲ್ಲಿ ಬುಧ ಅಂಗಾರಕರ ಹೋರಾಟದಂತೆ ಇತ್ತು ಇವರ ಯುದ್ಧ.

ರಾಮ ಬಿಲ್ಲು ಹಿಡಿದು ನಿಂತು ಇದ್ದ. ಆದರೆ ವಾಲಿಸುಗ್ರೀವರಲ್ಲಿ ಯಾರು ವಾಲಿಯೋ ಯಾರು ಸುಗ್ರೀವನೋ ತಿಳಿಯಲಿಲ್ಲ. ಇಬ್ಬರೂ ಒಂದೇ ತೆರ. ಅವಳಿಜವಳಿ ಅಶ್ವಿನೀಕುಮಾರರ ಹಾಗೆ. ತಾನು ಬಾಣ ಬಿಟ್ಟರೆ ಸಾವು ಖಂಡಿತ. ಆದರೆ ಯಾರನ್ನು ಹೊಡೆಯಬೇಕು ? ರಾಮನಿಗೆ ತೋಚಲಿಲ್ಲ.

ಸುಗ್ರೀವ ನಿರಾಶ ಆದ. ಭಂಗಪಟ್ಟ. ಎತ್ತ ತಿರುಗಿದರೂ ತನ್ನ ರಕ್ಷಕ ರಾಮ ಕಾಣಬರಲಿಲ್ಲ. ಪಲಾಯನ ಮಾಡುವುದೇ ಸೂಕ್ತ ಎಂದು ಋಷ್ಯ-ಮೂಕಕ್ಕೆ ಓಡಿದ. ಸುಗ್ರೀವ ದಣಿದು ಇದ್ದ. ಶಕ್ತಿ ಎಲ್ಲಾ ಕುಗ್ಗಿತು. ಮೈ ಎಲ್ಲಾ ನೆತ್ತರು. ಅಂಗಾಂಗಗಳು ಎಲ್ಲಾ ಜರ್ಝರಿತ. ವಾಲಿ ಬೆನ್ನಟ್ಟಿಬರುತ್ತ ಇದ್ದ. ಸುಗ್ರೀವ ಋಷ್ಯಮೂಕವನ್ನು ಪ್ರವೇಶಿಸಿದ.

ವಾಲಿಗೆ ಶಾಪಭಯ. ಮುಂದೆ ಹೆಜ್ಜೆ ಇಡಲಾರದೆ “ಸುಗ್ರೀವ, ಉಳಿದು ಕೊಂಡೆ. ಬದುಕಿದೆ ಹೋಗು” ಎಂದು ಹಿಂದಿರುಗಿದ.

ಹನುಮಂತ ಲಕ್ಷ್ಮಣರ ಜೊತೆಯಲ್ಲಿ ಅಲ್ಲಿಗೆ ಬಂದ ರಾಮ. ಅವರನ್ನು ನೋಡಿ ಸುಗ್ರೀವನಿಗೆ ನಾಚಿಕೆ. ತಲೆ ಎತ್ತಲಿಲ್ಲ. “ಗೆಳೆಯ, ಹೀಗೆ ಏಕೆ ಮಾಡಿದೆ? ನಿನ್ನ ಅದ್ಭುತ ಪರಾಕ್ರಮವನ್ನು ತೋರಿಸಿದೆ. ವಾಲಿಯನ್ನು ಯುದ್ಧಕ್ಕೆ ಕರೆ ಎಂದೆ. ಆಪಸಿಂದ ನನ್ನನ್ನು ಹೊಡೆಯಿಸಿದೆ. ನಿನ್ನ ಮನಸ್ಸನ್ನು ನನಗೆ ಮೊದಲೇ ತಿಳಿಸಿ ಇದ್ದರೆ ನಾನು ಇಲ್ಲಿಂದ ಹೋಗುತ್ತಲೇ ಇರಲಿಲ್ಲ. ವಾಲಿಯನ್ನು ಕೊಲ್ಲುವುದಿಲ್ಲ ಎಂದು ಖಚಿತ ಆಗಿ ಹೇಳಬಾರದೆ? ಸುಮ್ಮನೆ ಏಟು ತಿಂದೆನಲ್ಲ.” ಸುಗ್ರೀವ ಬಲು ದೈನ್ಯದಿಂದ ಹೇಳಿದ.

“ಸುಗ್ರೀವ, ತಮ್ಮ. ಅನ್ಯಥಾ ಭಾವಿಸಬೇಡ. ನಾನು ಏಕೆ ಬಾಣ ಬಿಡಲಿಲ್ಲವೋ ಹೇಳುತ್ತೇನೆ ಕೇಳು. ನೀವು ಅಣ್ಣತಮ್ಮಂದಿರು ಇಬ್ಬರೂ ಒಂದೇ ರೀತಿ. ನಿಮ್ಮ ಗಾತ್ರ ನಿಮ್ಮ ಎತ್ತರ ನಿಮ್ಮ ವೇಷಭೂಷಣ ಎಲ್ಲವೂ ಒಂದೇ. ಭೇದವೇ ಇಲ್ಲ. ಪರಾಕ್ರಮ, ನಿಮ್ಮ ಗರ್ಜನೆ ನಿಮ್ಮ ವರ್ಚಸ್ಸು ನಿಮ್ಮ ನೋಟ ನಿಮ್ಮ ಮಾತು ಯಾವುದರಲ್ಲೂ ಸ್ವಲ್ಪವೂ ಭೇದ ಇಲ್ಲ.

“ಸುಗ್ರೀವ, ಇದರಿಂದ ನಾನು ಮೋಸಹೋದೆ. ನಿನ್ನ ಗುರುತೇ ಸಿಗಲಿಲ್ಲ ನನಗೆ. ನನ್ನ ಬಾಣ ಪ್ರಾಣ ಹೀರಿಯೇ ಬಿಡುತ್ತದೆ. ಆಸಲಿಗೇ ಮೋಸ

ಆದೀತು ಎಂದು ನನ್ನ ಭಯಂಕರ ಬಾಣವನ್ನು ಬಿಡಲಿಲ್ಲ. ಇದೇ ನಿಜ. ನಾನು ತಿಳಿಯದೆ ಅಲ್ಪಬುದ್ಧಿಯಿಂದ ನಿನಗೇ ವಿಪತ್ತು ತಂದರೆ ಏನು ಗತಿ? ನನ್ನ ಹುಡುಗತನವನ್ನೂ ಮೌಢ್ಯವನ್ನೂ ನೋಡಿ ಎಲ್ಲರೂ ನಗುತ್ತ ಇದ್ದರು. ನಿನಗೆ ಅಭಯ ಕೊಟ್ಟೆ ನಾನು. ನಿನ್ನನ್ನೇ ಕೊಂದರೆ ನನ್ನದು ಎಂಥ ಮಹಾಪಾತಕ! ಸುಗ್ರೀವ, ನಾನು ಲಕ್ಷ್ಮಣ ವರವರ್ಣಿನಿ–ಸೀತೆ ಎಲ್ಲರೂ ನಿನ್ನ ಅಧೀನ. ನೀನೇ ಈ ಕಾಡಿನಲ್ಲಿ ನಮ್ಮ ರಕ್ಷಕ. ನಮ್ಮಲ್ಲಿ ಅಪನಂಬಿಕೆ ಬೇಡ. ಸಂಶಯಪಡಬೇಡ. ಮತ್ತೆ ಹೋಗು. ವಾಲಿಯನ್ನು ಯುದ್ಧಕ್ಕೆ ಕರೆ. ಈ ಮುಹೂರ್ತದಲ್ಲೇ ವಾಲಿ ನೆಲಕ್ಕೆ ಉರುಳುತ್ತಾನೆ. ಖಂಡಿತ.

"ಆದರೆ ಒಂದು. ನೀನು ಈ ಸಲ ವಾಲಿಯ ಸಂಗಡ ಯುದ್ಧಕ್ಕೆ ಹೋಗುವಾಗ ಒಂದು ಗುರುತು ಇಟ್ಟುಕೋ ನನಗೆ ತಿಳಿಯಲಿಕ್ಕೆ. ಲಕ್ಷ್ಮಣ, ಆ ನಾಗಪುಷ್ಪೀಲತೆ ಚೆನ್ನಾಗಿ ಅರಳಿ ಇದೆ. ಬಹಳ ಶುಭಕರ ಮನೋಹರ ಅದು. ಅದನ್ನು ಕಿತ್ತು ತಂದು ಸುಗ್ರೀವನ ಕತ್ತಿಗೆ ಹಾಕು" ಎಂದ.

ಎಲೆಗಳೇ ಕಾಣದಂತೆ ಹೂ ಬಿಟ್ಟು ಆ ಬೆಟ್ಟದ ತಪ್ಪಲಿನಲ್ಲಿ ಬೆಳೆದ ಆ ಬಳ್ಳಿಯನ್ನು ಕಿತ್ತು ತಂದು ಲಕ್ಷ್ಮಣ ಸುಗ್ರೀವನ ಕೊರಳಿಗೆ ಹಾಕಿದ. ನಕ್ಷತ್ರ ಮಾಲೆಯನ್ನು ಸುತ್ತುವರಿಸಿಕೊಂಡ ಸೂರ್ಯನ ಹಾಗೆ ಬೆಳಗಿದ ಸುಗ್ರೀವ. ಬಲಾಕಪಕ್ಷಿಗಳ ಸಾಲು ಸಂಜೆಯ ಮೇಘಗಳ ನಡುವೆ ಇದ್ದಂತೆ ಇತ್ತು ಆ ಲತೆ ಅವನ ಮೈಮೇಲೆ.

ರಾಮನ ಮಾತಿನಲ್ಲಿ ಸಂಪೂರ್ಣ ವಿಶ್ವಾಸ ಸುಗ್ರೀವನಿಗೆ. ಮತ್ತೆ ರಾಮನ ಜೊತೆಯಲ್ಲಿ ಕಿಷ್ಕಿಂಧೆಗೆ ಹೊರಟ.

೧೩

ಚಿನ್ನದ ಕಟ್ಟಿನ ತನ್ನ ಮಹಾಧನುಸ್ಸನ್ನೂ ಸೂರ್ಯಕಾಂತಿಗೆ ಸಮ ಆಗಿ ಉರಿಯುವ ಯುದ್ಧಸಾಧನ ಆದ ತೀಕ್ಷ್ಣತರ ಬಾಣಗಳನ್ನೂ ಹಿಡಿದು ಹೊರಟ ರಾಮ. ರಾಮ ಹಿಂದೆ. ಅವನ ಮುಂದೆ ಲಕ್ಷ್ಮಣ, ಉಬ್ಬಿದ ಕಂಠದ ಸುಗ್ರೀವ. ರಾಮನಿಗೆ ದಾರಿ ತೋರಿಸುತ್ತ ಮುಂದೆ ಸುಗ್ರೀವ. ರಾಮನ ಹಿಂದೆ ವಾನರ ವೀರರು ಹನುಮಂತ, ನಳ, ನೀಲರು, ವಾನರಸೇನಾನಿ ಮಹಾಪರಾಕ್ರಮಶಾಲಿ ತಾರ.

ದಾರಿಯಲ್ಲಿ ಉದ್ದಕ್ಕೂ ಪುಷ್ಪಭಾರದಿಂದ ಬಾಗಿ ತೂಗುವ ಗಿಡ. ಕಡಲಿನ ಕಡೆಗೆ ಓಡುವ ತಿಳಿನೀರಿನ ನದಿ, ಬೆಟ್ಟಗಳು. ಅವುಗಳಲ್ಲಿ ದೊಡ್ಡ ಬಂಡೆಗಲ್ಲು, ಚಿಕ್ಕ ಚಿಕ್ಕ ಗುಹೆ, ಮನೆಗಳ ಹಾಗೆ ಇರುವ ದೊಡ್ಡ ದೊಡ್ಡ ಗುಹೆಗಳು, ಕಣಿವೆ ಕೊಳ್ಳಗಳು, ಕೋಡುಗಲ್ಲು, ಝರಿಗಳು. ವೈಡೂರ್ಯಮಣಿ ಗಳ ಹಾಗೆ ಸ್ವಚ್ಛ ಆದ ತಾವರೆ ಎಲೆ ಆಗತಾನೇ ಅರಳಿದ ಇನ್ನೂ ಅರಳುತ್ತ ಇದ್ದ ಅರಳಬೇಕಾದ ಮೊಗ್ಗು ಆದ ಕಮಲದ ಹೂಗಳು ತುಂಬಿದ ಕೊಳಗಳು. ಆ ಕೊಳಗಳಲ್ಲಿ ಅವುಗಳ ದಡದಲ್ಲಿ ಕಾರಂಡವ ಪಕ್ಷಿಗಳ ಸಾರಸ ವಂಜುಲ ಹಂಸ ಚಕ್ರವಾಕ ಪಕ್ಷಿಗಳ ನೀರುಕೋಳಿಗಳ ಇತರ ಹಕ್ಕಿಗಳ ಇಂಪು ಆದ ಕಲಕಲ ಧ್ವನಿ. ಅಲ್ಲಲ್ಲಿ ಹುಲ್ಲಿನ ಬಯಲು. ಅದರಲ್ಲಿ ಎಳೆ ಗರಿಕೆ ಮೆಲ್ಲುತ್ತ ನಿರ್ಭಯ ದಿಂದ ಆ ಕಾಡಿನಲ್ಲಿ ಸುತ್ತಾಡುವ ಜಿಂಕೆಗಳು. ಆ ಕಾಡಿನಲ್ಲಿಯೆ ಹುಟ್ಟಿ ಮದ ಏರಿ ಭಯಂಕರ ಆದ ಬಿಳಿಯ ದಂತಗಳ ಕಾಡಾನೆಗಳು. ಆ ಆನೆಗಳಿಗೆ ಮೈತೀಟೆ. ಕೆರೆ–ಕೊಳಗಳನ್ನು ಕುಮ್ಮಿ ತುಳಿದು ಹಾಳುಮಾಡುತ್ತ ನೆಲದ ಧೂಳನ್ನು ತಲೆಯ ಮೇಲೆ ಎರಚಿಕೊಳ್ಳುತ್ತ ಮುಗಿಲಿನಿಂದ ಇಳಿದುಬರುವ ಕಾರ್ಮೋಡಗಳಂತೆ ನಡೆದುಬರುವ ಬೆಟ್ಟಗಳಂತೆ ಇದ್ದವು ಆನೆಗಳು.

ಇವನ್ನೂ ಬೇರೆ ಮೃಗಪಕ್ಷಿಗಳನ್ನೂ ನೋಡುತ್ತ ರಾಮಸುಗ್ರೀವರ ಈ ಗುಂಪು ಮುಂದೆ ಸಾಗಿತು. ಗಿಡಗಳ ದಟ್ಟಣೆಯಿಂದ ಕಾಡಿನ ಹಾಗೆ ಇದ್ದ ಗಿಡಗಳ ಗುಂಪು ಒಂದು ಕಂಡಿತು ಅಲ್ಲಿ. “ಸುಗ್ರೀವ, ಇದು ಯಾರದು ವನ? ಕಾರ್ಮೋಡಗಳ ಹಾಗೆ ಇವೆ ಈ ಮರ. ಮೋಡಗಳು ಒಟ್ಟುಸೇರಿದಂತೆ ಗುಂಪು ಗುಂಪು ಆಗಿ ಇವೆ ಗಿಡಗಳು. ವಿಸ್ತಾರದಲ್ಲೂ ದೊಡ್ಡದು. ಸುತ್ತಲೂ ಬಾಳೆಯ ಗಿಡ ಇವೆ. ಬಹಳ ನಯನಮನೋಹರ ಈ ವನ. ಯಾರದು ಇದು?” ಎಂದು ಕೇಳಿದ ರಾಮ.

ದಾರಿ ನಡೆಯುತ್ತಾ ಸುಗ್ರೀವ ರಾಮನಿಗೆ ತಿಳಿಸಿದ. “ಇದು ಒಂದು ಋಷ್ಯಾಶ್ರಮ. ಇದರಲ್ಲಿ ಹಲವು ವನ ಇವೆ. ಬಲು ತಂಪು. ಎಷ್ಟು ಶ್ರಮ ಆಗಿ ಇದ್ದರೂ ಒಂದು ಕ್ಷಣದಲ್ಲಿ ನೀಗಿಸುತ್ತದೆ. ಇಲ್ಲಿನ ಕಂದಮೂಲಗಳು ಬಲು ರುಚಿ. ನೀರು ತುಂಬಾ ತಿಳಿ. ಇಲ್ಲಿ ಸಪ್ತಜನ ಎಂಬ ಏಳು ಮಂದಿ ಮಹರ್ಷಿಗಳು ಇದ್ದರು. ತೀಕ್ಷ್ಣವ್ರತ ಹಿಡಿದು ಆ ಮಹರ್ಷಿಗಳು ತಲೆಕೆಳಗೆ ಆಗಿ ನಿಂತು ನೀರಿನಲ್ಲಿ ಮುಳುಗಿ ತಪಸ್ಸು ಮಾಡಿದರು. ಏಳು ದಿನಕ್ಕೆ ಒಮ್ಮೆ

ಅವರದು ವಾಯುಭಕ್ಷಣ. ಇಷ್ಟೇ ಆಹಾರ. ಹೀಗೆ ಏಳುನೂರು ವರ್ಷ ತಪಸ್ಸನ್ನಮಾಡಿ ಸಶರೀರ ಸ್ವರ್ಗವನ್ನು ಪಡೆದರು. ಅವರ ಮಹಿಮೆ. ಗಿಡಮರಗಳೇ ಪ್ರಾಕಾರದಂತೆ ಬೆಳೆದು ಈ ವನ ಇಂದ್ರಾದಿದೇವತೆಗಳಿಗೂ ರಾಕ್ಷಸರಿಗೂ ಪ್ರವೇಶಿಸಲು ಸಾಧ್ಯ ಇಲ್ಲದಂತೆ ಆಯಿತು. ಮೃಗಪಕ್ಷಿಗಳು ಕೂಡ ಈ ಆಶ್ರಮಪದದ ಒಳಕ್ಕೆ ಹೋಗವು. ಒಂದುವೇಳೆ ತಿಳಿಯದೆ ಒಳಗೆ ಹೋದ ಪ್ರಾಣಿ ಹೊರಕ್ಕೆ ಬರುವುದು ಇಲ್ಲ.

"ರಘುಕುಲೋದ್ಭವ, ನೃತ್ಯಮಾಡುವ ಅಪ್ಸರೆಯರ ಆಭರಣಗಳ ಸದ್ದೂ ಅವರ ಅವ್ಯಕ್ತ ಮಧುರಾಕ್ಷರದ ಗಾಯನಧ್ವನಿಯೂ ವಾದ್ಯಧ್ವನಿಯೂ ಯಾವಾಗಲೂ ಇಂಪು ಆಗಿ ಕೇಳಿಸುತ್ತದೆ ಈ ಆಶ್ರಮದಲ್ಲಿ. ಸದಾ ದಿವ್ಯ ಪರಿಮಳ ಹೊರಡುತ್ತದೆ ಇಲ್ಲಿಂದ. ತ್ರೇತಾಗ್ನಿಗಳು ಇಲ್ಲಿ ಯಾವಾಗಲೂ ಉರಿಯುತ್ತ ಇರುತ್ತವೆ. ಈಗಲೂ ಆ ಹೊಗೆ ಕಾಣುತ್ತ ಇದೆ. ಈ ಗಿಡಗಳ ತುದಿಕೊಂಬೆಗಳನ್ನು ದಟ್ಟ ಆಗಿ ಸುತ್ತಿಕೊಂಡು ಪಾರಿವಾಳ ಕಂಠಕಾಂತಿಯನ್ನು ಮೆರೆಸುತ್ತಿವೆ. ಹೊಗೆ ತುಂಬಿ ಈ ಗಿಡಗಳು ಎಲ್ಲವೂ ಮೋಡ ಮುಚ್ಚಿದ ವೈಡೂರ್ಯಪರ್ವತಗಳ ಹಾಗೆ ಇವೆ.

"ಧರ್ಮಾತ್ಮ ರಾಮ, ನೀನೂ ಲಕ್ಷ್ಮಣನೂ ಆ ಮುನಿಶ್ರೇಷ್ಠರನ್ನು ನೆನೆದು ಭಕ್ತಿಯಿಂದ ಕೈಮುಗಿದು ನಮಸ್ಕರಿಸಿರಿ. ಆತ್ಮಜ್ಞಾನಿಗಳು ಆದ ಆ ಮಹರ್ಷಿಗಳಿಗೆ ನಮಸ್ಕಾರ ಮಾಡಿದವರಿಗೆ ಶರೀರದಲ್ಲಿ ಸ್ವಲ್ಪವೂ ಅಶುಭ ಆಗದು."

ರಾಮಲಕ್ಷ್ಮಣರೂ ಸುಗ್ರೀವಾದಿಗಳೂ ಆ ಮಹಾಮುನಿಗಳನ್ನು ನೆನೆದು ನಮಸ್ಕರಿಸಿದರು. ಪರಮಾನಂದಭರಿತರು ಆಗಿ ಮುಂದೆ ಸಾಗಿದರು. ಆ ಸಪ್ತಜನಾಶ್ರಮದಿಂದ ಬಲು ದೂರ ಸಾಗಿಬಂದರು. ಶತ್ರುಗಳು ಒಳಹೊಗಲು ಸಾಧ್ಯ ಇಲ್ಲದಂತೆ ವಾಲಿಯಿಂದ ಸುರಕ್ಷಿತ ಆದ ಕಿಷ್ಕಿಂಧೆ ಕಾಣಿಸಿತು.

೧೪

ಬೇಗ ಬೇಗ ನಡೆದರು. ಕಿಷ್ಕಿಂಧಾ ಪಟ್ಟಣದ ಹತ್ತಿರ ಬಂದರು. ಅಲ್ಲಿ ಒಂದು ಮರದ ಗುಂಪಿನ ಹಿಂದೆ ದಟ್ಟ ಅಡವಿಯಲ್ಲಿ ಕಣ್ಣಿಗೆ ಕಾಣದಂತೆ

ಮರೆಯಲ್ಲಿ ನಿಂತರು ರಾಮಾದಿಗಳು. ಅರಣ್ಯಪ್ರಿಯ ವಿಪುಲಗ್ರೀವ ಆದ ಸುಗ್ರೀವ ಆ ವನ ಎಲ್ಲವನ್ನೂ ಒಂದು ಸಲ ದಿಟ್ಟಿಸಿ ನೋಡಿದ. ನೋಡಿ ಅವನಿಗೆ ರೇಗಿಹೋಯಿತು. ಬಾಲಸೂರ್ಯನಿಗೆ ಸಮ ಆಗಿ ಮದಿಸಿದ ಸಿಂಹದಂತೆ ಗಂಭೀರಗಮನ ಆದ ಸುಗ್ರೀವ ಇತರ ವಾನರರ ಜೊತೆಯಲ್ಲಿ ಮಹಾಮೇಘದ ಗುಡುಗಿಗೆ ಸಮ ಆಗಿ ಸಿಂಹನಾದವನ್ನು ಮಾಡಿದ. ಆಕಾಶವೇ ಸೀಳಿಹೋಗು ವಂತೆ ಆಯಿತು ಅದರಿಂದ.

ಸುಗ್ರೀವ ರಾಮನ ಕಡೆ ತಿರುಗಿದ. "ರಾಮ, ಇದೇ ಕಿಷ್ಕಿಂಧಾ ಪಟ್ಟಣ. ಇದರ ಬಾಗಿಲು ಬಂಗಾರದ್ದು. ಧ್ವಜಗಳು ಯಂತ್ರಗಳು ಇಲ್ಲಿ ಹೇರಳ. ಬಲೆಯ ಹಾಗೆ ಇಲ್ಲಿನ ವಾನರರು. ಇದರ ಪಾಲಕ ವಾಲಿ.

"ವೀರಾಧಿವೀರ, ವಾಲಿಯನ್ನು ಕೊಲ್ಲುತ್ತೇನೆ ಎಂದು ನೀನು ಶಪಥ ಮಾಡಿದೀಯೆ. ಆ ಶಪಥ ಸಫಲ ಆಗುವ ಕಾಲ ಬಂತು. ಕಾಲ ಬಂದಾಗ ಬಳ್ಳಿ ಹೂ ಹಣ್ಣು ಬಿಡುತ್ತದೆ. ನಿನ್ನ ಶಪಥವನ್ನು ಈಗ ಹಣ್ಣು ಆಗಿಸಬೇಕು" ಎಂದ.

ರಾಮ ಹೇಳಿದ: "ಈಗ ನಾಗಪುಷ್ಪೀ ಲತೆಯನ್ನು ನಿನ್ನ ಕತ್ತಿಗೆ ಸುತ್ತಿದಾನೆ ಲಕ್ಷ್ಮಣ. ನಿನ್ನ ಗುರುತು ಹಿಡಿಯಲು ಈಗ ಸರಿಹೋಯಿತು. ನಿನ್ನ ಕತ್ತಿನಲ್ಲಿ ಈ ಮಾಲೆ ಇದ್ದರೆ ರಾತ್ರಿಯ ಹೊತ್ತು ಚುಕ್ಕೆಗಳ ನಡುವೆ ಚಂದ್ರನಂತೆ ಹೊಳೆಯುತ್ತೀಯೆ ನೀನು. ಸುಗ್ರೀವ, ಒಂದೇ ಬಾಣ. ವಾಲಿಯ ಭಯವನ್ನೂ ವೈರವನ್ನೂ ನೀಗಿಸಿಬಿಡುತ್ತೇನೆ.

"ಗೆಳೆಯ, ನಿನ್ನ ಅಣ್ಣನ ರೂಪದ ನಿನ್ನ ಶತ್ರುವನ್ನು ನನಗೆ ಒಮ್ಮೆ ತೋರಿಸು. ಸಾಕು. ಆಮೇಲೆ ಸತ್ತು ನೆಲಕ್ಕೆ ಉರುಳಿ ಧೂಳಿನಲ್ಲಿ ಹೊರಳಾಡು ತ್ತಾನೆ. ನನ್ನ ಕಣ್ಣಿಗೆ ಬೀಳಲಿ ಅವನು. ಆಮೇಲೆ ಬದುಕಿ ಹೋಗುವುದು ಎಂದರೆ ಏನು? ಹಾಗೆ ಆಗದೆ ಇದ್ದರೆ ಆಗ ನಾನು ದೋಷಿ. ಈಗ ನನ್ನನ್ನು ನಿಂದಿಸಬೇಡ. ಸುಗ್ರೀವ, ನಿನ್ನ ಇದಿರಿಗೇ ಸಪ್ತ ಸಾಲವೃಕ್ಷಗಳನ್ನೂ ಒಂದೇ ಬಾಣದಿಂದ ಹೊಡೆದೆ. ನೀನೇ ಕಣ್ಣಾರೆ ನೋಡಿದೆ. ಅದೇ ರೀತಿ. ಒಂದೇ ಬಾಣದಿಂದ ಕೊಲ್ಲುತ್ತೇನೆ ವಾಲಿಯನ್ನು.

"ಸುಗ್ರೀವ, ಗೆಳೆಯ, ಎಂಥ ಕಷ್ಟ ಕಾಲ ಬಂದರೂ ನಾನು ಸುಳ್ಳನ್ನು ಆಡಿಲ್ಲ. ಧರ್ಮಲೋಪ ಆಗಬಾರದು ಎಂಬುದೇ ನನ್ನ ಆಸೆ. ಈಗಲೂ ಅಷ್ಟೇ. ಇನ್ನುಮುಂದೆಯೂ ಅಷ್ಟೇ. ಎಂದೂ ಸುಳ್ಳು ಹೇಳುವವನು ಅಲ್ಲ.

ದೇವೇಂದ್ರ ಮಳೆ ಕರೆದು ಭೂಮಿಯಲ್ಲಿ ಪೈರನ್ನು ಮೊಳೆಯಿಸುತ್ತಾನೆ. ಒಂದೇ ಬಾಣದಿಂದ ನನ್ನ ಪ್ರತಿಜ್ಞೆಯನ್ನು ನಾನು ನೆರವೇರಿಸುತ್ತೇನೆ. ಗಾಬರಿಯನ್ನು ಬಿಡು. ಕಾಂಚನಮಾಲಿಕೆಯನ್ನು ಧರಿಸಿದ ವಾಲಿ ಯುದ್ಧಕ್ಕೆ ಬರುವ ಹಾಗೆ ಗರ್ಜಿಸು ನೀನು. ಕೇಳಿದ ಕೂಡಲೇ ಓಡಿಬರಬೇಕು. ಖಂಡಿತ ಓಡಿಬರುತ್ತಾನೆ. ಆ ವಾಲಿ ಇದಿನವರೆಗೆ ಯುದ್ಧದಲ್ಲಿ ಸೋಲನ್ನು ಕಂಡಿಲ್ಲ. ಅವನ ಭುಜಬಲ ಪ್ರಸಿದ್ಧ. ಶತ್ರುಗಳ ಬಲವನ್ನು ಕಂಡು ಯುದ್ಧಪ್ರಿಯ ಆದ ಅವನಿಗೆ ಸಂತೋಷ. ಆದ್ದರಿಂದ ಬಂದೇ ಬರುತ್ತಾನೆ.

"ಶೂರನಿಗೆ ಶತ್ರುಗಳ ಪರಾಕ್ರಮ ಸಹಿಸದು. ಅದರಲ್ಲೂ ಹೆಂಗಸರ ಮುಂದೆ ತಮ್ಮ ಪರಾಕ್ರಮವನ್ನು ಕೊಚ್ಚಿಕೊಳ್ಳುವವರು ಶತ್ರುಗಳು ಇದಿರು ಆದರೆ ಸ್ವಲ್ಪವೂ ಸಹಿಸರು."

ಬಂಗಾರದಂಥ ದೇಹಕಾಂತಿಯ ಸುಗ್ರೀವ ಇದನ್ನು ಎಲ್ಲಾ ಕೇಳಿದ. ಆಕಾಶವೇ ಒಡೆದುಹೋಗುವಂತೆ ಭಯಂಕರ ಆಗಿ ಗರ್ಜಿಸಿದ.

ರಾಜ್ಯ ಅರಾಜಕ ಆಗಿ ಕೇಳುವವರೇ ಇಲ್ಲದಾಗ ತಮ್ಮನ್ನು ಹಿಡಿದು ಕೊಳ್ಳಲು ಪರಪುರುಷರು ಬಂದರೆ ಭಯ ದುಃಖಗಳಿಂದ ದಿಕ್ಕುಗಾಣದೆಯೇ ತತ್ತಳಿಸುವ ಕುಲಸ್ತ್ರೀಯರ ಹಾಗೆ, ಊರಿನ ಒಳಕ್ಕೆ ಹೋಗುತ್ತ ಇದ್ದ ಹಸುಗಳು ಎಲ್ಲವೂ ಬೆದರಿ ಕಳೆಗುಂದಿ ದಿಕ್ಕಾಪಾಲು ಆಗಿ ಓಡಿದವು ಸುಗ್ರೀವನ ಗರ್ಜನೆ ಕೇಳಿ. ಯುದ್ಧದಲ್ಲಿ ಗಾಯಗೊಂಡ ಕುದುರೆಗಳು ಪಲಾಯನ ಮಾಡುವಂತೆ ಜಿಂಕೆಗಳು ದಿಕ್ಕೆಟ್ಟು ಓಡಿದವು. ಪುಣ್ಯ ಕ್ಷಯ ಆದ ಕೂಡಲೆ ಆಕಾಶದಿಂದ ಉದುರಿಬೀಳುವ ನಕ್ಷತ್ರಗಳಂತೆ ಹಕ್ಕಿಗಳು ನೆಲಕ್ಕೆ ಬಿದ್ದವು. ಗಾಳಿ ಬೀಸಿದಾಗ ಅಲ್ಲಕಲ್ಲೋಲ ಆಗುವ ಸಮುದ್ರದ ಹಾಗೆ ಶೌರ್ಯದಿಂದ ವೃದ್ಧಿಗೊಂಡ ತೇಜಸ್ಸಿನಿಂದ ಆ ಸೂರ್ಯಪುತ್ರ ಸುಗ್ರೀವ ಎಲ್ಲ ಮೋಡಗಳೂ ಒಟ್ಟು ಆಗಿ ಗುಡುಗಿದಂತೆ ಸಿಂಹನಾದ ಮಾಡಿದ.

೧೫

ಆಗ ಅಂತಃಪುರದಲ್ಲಿ ಇದ್ದ ವಾಲಿ. ಸಮಸ್ತ ಪ್ರಾಣಿಗಳನ್ನೂ ನಡುಗಿಸುವ ಆ ಸಿಂಹನಾದ ಅವನಿಗೆ ಕೇಳಿಸಿತು. ಆ ಗರ್ಜನೆಯನ್ನು ಕೇಳಿ ಅವನ ಅಮಲು

ಎಲ್ಲಾ ಇಳಿಯಿತು. ಬಹಳ ಕೋಪ ಬಂತು. ವಾಲಿಯ ಮೈಬಣ್ಣ ಸಂಜೆಗೆಂಪು. ಸೂರ್ಯನಿಗೆ ಗ್ರಹಣ ಹಿಡಿದಹಾಗೆ ಕೋಪ ಅವನನ್ನು ಹಿಡಿಯಿತು. ಅವನ ಮೈ ಎಲ್ಲಾ ಕಪ್ಪಗೆ ಆಯಿತು. ಭಯಂಕರ ಕೋರೆದಾಡೆಗಳ ಆ ವಾಲಿ ಕೋಪದಿಂದ ಉರಿಯುತ್ತ ಕಮಲದ ಹೂಗಳನ್ನು ಎಲ್ಲವನ್ನೂ ಕಿತ್ತಿಸೆದಮೇಲೆ ಬರೀ ಕೊಳ ಇರುವಂತೆ ಕಳೆಗುಂದಿ ಇದ್ದ.

ವಾಲಿ ಕೋಪದಿಂದ ಬೇಗ ಬೇಗ ಹೆಜ್ಜೆ ಇಡುತ್ತ ಬಂದ. ಅವನ ಪದ-ಘಾತಕ್ಕೆ ನೆಲ ಒಡೆದುಹೋಯಿತೋ ಏನೋ ಎನಿಸಿತು. ಅವನ ಹೆಂಡತಿ ತಾರೆಗೆ ಭಯ ಆಯಿತು. ದಡದಡ ಗಂಡನ ಬಳಿಗೆ ಓಡಿಬಂದಳು. ಪ್ರೀತಿಯಿಂದ ಅವನನ್ನು ಅಪ್ಪಿಕೊಂಡಳು. ಅವನಿಗೆ ಹಿತವನ್ನು ಕೋರಿ ಸ್ನೇಹದ ಮಾತನ್ನು ಹೇಳಿದಳು :

“ ವೀರಾಧಿವೀರ, ನದಿಯ ಪ್ರವಾಹ ಬರುವಂತೆ ಬಹಳ ಬೇಗ ಬಂತು ನಿಮಗೆ ಕೋಪ. ಬೇಡ. ಬೆಳಗ್ಗೆ ಹಾಸಿಗೆಯಿಂದ ಎದ್ದಾಗ ರಾತ್ರಿ ಮುಡಿದ ಹೂವಿನ ಸರವನ್ನು ಬಿಸುಡುವಂತೆ ಕೋಪವನ್ನು ಬಿಟ್ಟುಬಿಡಿ. ಬೆಳಕು ಹರಿದ ಮೇಲೆ ಯುದ್ಧಮಾಡಿದರೆ ಆಯಿತು. ಈಗ ಬೇಡ, ದೊರೆಯೆ. ಅಷ್ಟರೊಳಗಾಗಿ ನಿಮ್ಮ ವೈರಿಯ ಬಲ ಹೆಚ್ಚುವುದೂ ಇಲ್ಲ, ನಿಮ್ಮ ಬಲ ತಗ್ಗುವುದೂ ಇಲ್ಲ. ಇದ್ದಕ್ಕೆ ಇದ್ದಂತೆ ಈಗಲೇ ನೀವು ಯುದ್ಧಕ್ಕೆ ಹೋಗುವುದು ನನಗೆ ಸ್ವಲ್ಪವೂ ಇಷ್ಟ ಇಲ್ಲ. ಈಗ ಯುದ್ಧಕ್ಕೆ ಹೋಗಬೇಡಿ ಎಂದು ನಿಮ್ಮನ್ನು ಅಡ್ಡಿಮಾಡಲು ಕಾರಣ ಇದೆ. ಹೇಳುತ್ತೇನೆ ಕೇಳಿ.

“ ಇದಕ್ಕೆ ಮುಂಚೆ ಒಂದು ಸಲ ಬಂದು ಸುಗ್ರೀವ ನಿಮ್ಮನ್ನು ಯುದ್ಧಕ್ಕೆ ಕರೆದ. ಆಗ ನಿಮ್ಮ ಕೈಯಲ್ಲಿ ಸೋತು ದಿಕ್ಕೆಟ್ಟು ಓಡಿಹೋದ. ಆ ಏಟನ್ನು ಮರೆತು ಇಷ್ಟು ಬೇಗ ಮತ್ತೆ ಬಂದು ನಿಮ್ಮನ್ನು ಯುದ್ಧಕ್ಕೆ ಕರೆಯುತ್ತ ಇದಾನೆ. ಇದನ್ನು ನೋಡಿದರೆ ನನಗೆ ಏಕೋ ಸಂದೇಹ. ಅಲ್ಲದೆ ಈಗ ಅವನು ಮಾಡಿದ ಗರ್ಜನೆಯ ಆಟೋಪ ಬೇರೆ ವಿಧದ್ದು. ಏನೋ ಭಾರಿ ಪ್ರಯತ್ನ ನಡೆದು ಇರಬೇಕು. ದೊಡ್ಡ ಕಾರಣ ಇರಬೇಕು.

“ ಒಡೆಯ, ಮೊದಲಿನಂತೆ ಅಸಹಾಯ ಆಗಿ ಬಂದಿಲ್ಲ ಸುಗ್ರೀವ ಈಗ. ಯಾರನ್ನೋ ಆಶ್ರಯಿಸಿದಾನೆ. ಆ ಬಲದ ಧೈರ್ಯದಿಂದಲೇ ಮತ್ತೆ ಬಂದು ಹೀಗೆ ಅಬ್ಬರಿಸಿದಾನೆ. ಸುಗ್ರೀವ ಸ್ವಭಾವತಃ ಜಾಣ. ಬಹಳ ಚತುರ.

ತನ್ನ ಸಹಾಯಕ್ಕೆ ಬಂದವರ ಪರಾಕ್ರಮವನ್ನು ಪರೀಕ್ಷಿಸದೆ ನಂಬಲಾರ. ಪರೀಕ್ಷಿಸಿಯೇ ಆಶ್ರಯ ಪಡೆದು ಇರಬೇಕು.

"ದೊರೆಯೆ, ಹಿಂದೆಯೆ ಅಂಗದಕುಮಾರ ಹೇಳಿದ್ದನ್ನು ಕೇಳಿದೆ. ಈಗ ಹೇಳುತ್ತೇನೆ ಕೇಳಿ. ಅಂಗದಕುಮಾರ ಬೇಟೆಗೆ ಎಂದು ಅಡವಿಗೆ ಹೋಗಿದ್ದ. ಆಪ್ತರು ಆದ ಚಾರರು ಬಂದು ಅವನಿಗೆ ಸುದ್ದಿ ಹೇಳಿದರು. ಅವನು ನನಗೆ ಹೇಳಿದ. ಇಕ್ಷ್ವಾಕುವಂಶದ ಅಯೋಧ್ಯಾಪತಿ ದಶರಥ ರಾಜನ ಮಕ್ಕಳು ರಾಮಲಕ್ಷ್ಮಣರು ಸುಗ್ರೀವನಿಗೆ ಸಹಾಯ ಮಾಡಲು ಬಂದು ಇದಾರಂತೆ. ಅವರು ಮಹಾಶೂರರು. ಯುದ್ಧದಲ್ಲಿ ಅವರನ್ನು ಯಾರೂ ಗೆಲ್ಲಲಾರರಂತೆ. ಅವರು ಸುಗ್ರೀವನಿಗೆ ಗೆಳೆಯರು ಆಗಿದಾರೆ.

"ಅವರಲ್ಲಿ ನಿನ್ನ ತಮ್ಮನಿಗೆ ಸಹಾಯ ಶ್ರೀರಾಮನದು. ಆ ಶ್ರೀರಾಮ ಯುದ್ಧವಿಶಾರದ. ಶತ್ರುಗಳ ವಿಷಯದಲ್ಲಿ ಮಹಾಕಠಿನ. ಪ್ರಳಯಕಾಲದ ಬೆಂಕಿಯ ಹಾಗೆ ತನ್ನ ಬಾಣದಿಂದ ಎಷ್ಟು ಶತ್ರುಸೇನೆ ಇದ್ದರೂ ಸುಟ್ಟುಬಿಡಬಲ್ಲ. ಆ ರಾಮ ಸಾಧುಗಳಿಗೆ ನೆರಳು ನೀಡುವ ಮರದ ಹಾಗೆ. ಶರಣಾಗತರಿಗೆ ದಿಕ್ಕು. ದೀನರಿಗೆ ಆಶ್ರಯ. ಈ ಲೋಕಕ್ಕೆ ಎಲ್ಲಾ ಅವನು ಒಬ್ಬನೇ ಕೀರ್ತಿಭಾಜನ. ಜ್ಞಾನ ವಿಜ್ಞಾನ ಎರಡನ್ನೂ ಬಲ್ಲವನು. ಗೈರಿಕಾದಿಧಾತುಗಳಿಗೆ ಪರ್ವತ ಇದ್ದ ಹಾಗೆ ಸಮಸ್ತ ಸದ್ಗುಣಗಳಿಗೂ ಅವನು ಗಣಿ. ತಂದೆ ಎಳೆದ ಗೆರೆಯನ್ನು ಎಂದೂ ದಾಟಿದವನು ಅಲ್ಲ.

"ನಾಥ, ನಿಮ್ಮ ತಮ್ಮನಿಗೆ ಸಹಾಯಕ್ಕೆ ಬಂದವನು ಈ ಮಹಾನುಭಾವ. ಅವನು ಯುದ್ಧದಲ್ಲಿ ಎಂದೂ ಸೋತವನು ಅಲ್ಲ. ಅಪರಿಮಿತ ಪರಾಕ್ರಮಿ. ಆ ಮಹಾನುಭಾವನ ಸಂಗಡ ವೈರ ಕಟ್ಟಿಕೊಳ್ಳಬೇಡಿ. ಒಡೆಯ, ನೀವು ಶೂರರು. ಕೋಪಿಸಬೇಡಿ. ಒಂದು ಮಾತು ಹೇಳುತ್ತೇನೆ ಕೇಳಿ. ಇದನ್ನು ಪೂರಾ ಕೇಳಿ ಆಮೇಲೆ ನಿಮಗೆ ತೋಚಿದಂತೆ ಮಾಡಿ. ನಿಮ್ಮ ಹಿತಕ್ಕಾಗಿಯೇ ಹೇಳುತ್ತೇನೆ. ಈಗಲೇ ಸುಗ್ರೀವನನ್ನು ಕರೆಯಿಸಿ. ಅವನಿಗೆ ಒಡನೆಯೆ ಯೌವರಾಜ್ಯಾಭಿಷೇಕವನ್ನು ಮಾಡಿಬಿಡಿ.

"ಪ್ರಭು, ಸುಗ್ರೀವ ಈಗ ಬಲಗೊಂಡು ಇದಾನೆ. ನಿಮ್ಮ ತಮ್ಮ, ಬಲಾಢ್ಯ. ಅವನ ಸಂಗಡ ವಿರೋಧ ಬೇಡ. ಅವನಲ್ಲಿ ವೈರವನ್ನು ಬಿಟ್ಟು

ಪ್ರೀತಿಯನ್ನು ಬೆಳೆಸಿ. ರಾಮನ ಬಳಿಗೆ ನೀವೇ ಹೋಗಿ ಆತನ ಸ್ನೇಹ ಮಾಡಿಕೊಳ್ಳಿ. ಈಗಿನ ಸಂದರ್ಭದಲ್ಲಿ ಇದೇ ಸರಿ.

"ಸುಗ್ರೀವ ನಿಮಗೆ ಹೊರತು ಅಲ್ಲ. ನಿಮ್ಮ ತಮ್ಮ. ನಿಮಗೆ ಕಿರಿಯ. ಅಲ್ಲಿ ಇದ್ದರೂ ಇಲ್ಲಿ ಕಿಷ್ಕಿಂಧೆಯಲ್ಲಿ ಇದ್ದರೂ ಎಲ್ಲೇ ಇದ್ದರೂ ಅವನು ನಿಮ್ಮ ತಮ್ಮ. ಬೇರೆ ಅಲ್ಲ. ಒಡಹುಟ್ಟಿದವನಿಗಿಂತ ಹೆಚ್ಚಿನ ಬಂಧು ಯಾರು ಈ ಲೋಕದಲ್ಲಿ? ಎಂದಿಗೂ ಅಳಿಯದ ಬಂಧುತ್ವ ಇದು. ನೀವೇ ಅವನನ್ನು ಕರೆದು ಕಾಪಾಡಬೇಕು. ಅವನು ಸಿಟ್ಟುಗೊಂಡರೂ ನೀವು ಅವನನ್ನು ರಮಿಸಬೇಕು. ಅಂಥದರಲ್ಲಿ ವೈರವೆ? ಅವನನ್ನು ಕರೆದು ಸತ್ಕರಿಸಿ ಧನಕನಕಗಳನ್ನು ಕೊಡಿ. ನಿಮಗೆ ಅವನು ಸಹಾಯಕ ಆಗಿ ಇರುವಂತೆ ಮಾಡಿಕೊಳ್ಳಿ. ವಿಪುಲಗ್ರೀವ ಸುಗ್ರೀವ ನಿಮಗೆ ವೈರಿ ಅಲ್ಲ. ನಿಮ್ಮ ಆತ್ಮಬಂಧು. ಮೊದಲಿನಂತೆ ಅವನಿಗೆ ಪ್ರೀತಿ ತೋರಿಸಿ. ಈಗ ಬೇರೆ ಉಪಾಯ ಇಲ್ಲ ನಿಮಗೆ.

"ಒಡೆಯ, ನಾನು ಯಾವಾಗಲೂ ನಿಮ್ಮ ಹಿತವನ್ನೇ ಬಯಸುವವಳು. ನಿಮಗೂ ನನ್ನನ್ನು ಸಂತೋಷಪಡಿಸುವುದು ಇಷ್ಟ. ಬಹಳ ಯೋಚಿಸಿದೆ ನಾನು. ಕೈಮುಗಿದು ಬೇಡುತ್ತೇನೆ. ನಿಮ್ಮ ಹಿತಕ್ಕಾಗಿಯೇ ಹೇಳುತ್ತೇನೆ. ನನ್ನ ಮಾತನ್ನು ನಡೆಸಿಕೊಡಿ. ಪ್ರಭು, ಕೋಪ ಬೇಡ. ನನ್ನಲ್ಲಿ ಪ್ರಸನ್ನರು ಆಗಿ. ನನ್ನ ಮಾತು ಪಥ್ಯದ ಹಾಗೆ. ಕೇಳಿ. ಆ ಕೋಸಲ ರಾಜಪುತ್ರನ ತೇಜಸ್ಸು ಇಂದ್ರನಿಗೆ ಸಮಾನ. ಆ ರಾಮನ ಸಂಗಡ ಯುದ್ಧಮಾಡುವುದು ನಿಮಗೆ ಸರ್ವಥಾ ಯುಕ್ತ ಅಲ್ಲ. ಲೇಸು ಅಲ್ಲ."

ಅನೇಕ ಬಗೆಯಲ್ಲಿ ಹಿತಪಥ್ಯ ಆದ ಮಾತನ್ನು ಹೇಳಿದಳು ವಾಲಿಗೆ ತಾರೆ ಬಹಳ ಸ್ಪಷ್ಟ ಆಗಿ. ಆದರೆ ವಾಲಿಗೆ ಕಡೆಗಾಲ. ಆಗಲೇ ಹತ್ತಿರ ಬಂದಿತ್ತು ಸಾವು. ಆದ್ದರಿಂದ ಈ ಮಾತು ಒಂದೂ ರುಚಿಸಲಿಲ್ಲ.

೧೬

ಚಂದ್ರಮುಖಿ ತಾರೆ ಎಷ್ಟು ಹೇಳಿದರೂ ವಾಲಿ ಲೆಕ್ಕಿಸಲೇ ಇಲ್ಲ. ಅವಳನ್ನು ಗದರಿಸಿದ. "ವರಾನನೆ, ಅಲ್ಲಿ ಮಹಾ ಆಟೋಪದಿಂದ ಗರ್ಜಿಸಿದವನು ನನ್ನ ವೈರಿ, ನನ್ನ ತಮ್ಮ. ಇಷ್ಟು ಹೆಮ್ಮೆಯೆ ಅವನಿಗೆ? ನಾನು ಇದನ್ನು

ಸಹಿಸಿ ಸುಮ್ಮನೆ ಇರಬೇಕೆ? ಅಂಜುಬುರುಕಿ, ಇದುವರೆಗೆ ಯಾವ ಯುದ್ಧದಲ್ಲೂ ಹಿಂಜರಿದಿಲ್ಲ ನಾನು. ಸೋತಿಲ್ಲ. ಶತ್ರು ಬಂದು ಹೀಗಳೆಯುತ್ತ ಇದ್ದರೆ ಸುಮ್ಮನೆ ಸಹಿಸುವುದಕ್ಕಿಂತ ಸಾಯುವುದು ಲೇಸು. ಆ ಸುಗ್ರೀವನ ಕೊಬ್ಬನ್ನು ನೋಡು. ನನ್ನ ಸಂಗಡ ಯುದ್ಧಮಾಡುತ್ತಾನಂತೆ. ಅವನು ಕರೆದರೆ ನಾನು ಹೇಗೆ ಸುಮ್ಮನೆ ಇರಲಿ?

"ತಾರೆ, ರಾಮನಿಂದ ನನಗೆ ಕೇಡು ಆಗುತ್ತದೆ ಎಂದು ನೀನು ಚಿಂತಿಸ ಬೇಡ. ಅವನು ಧರ್ಮಜ್ಞ ಕೃತಜ್ಞ ಎಂದು ನೀನೇ ಹೇಳಿದೆ. ಅಂಥವನು ಮಾಡಬಾರದ ಕೆಲಸವನ್ನು ಏಕೆ ಮಾಡಿಯಾನು? ತಾರೆ, ನೀನು ಅಂತಃಪುರಕ್ಕೆ ಹೋಗು. ನನ್ನ ಹಿಂದೆ ಬರಬೇಡ. ನಿನಗೆ ನನ್ನಲ್ಲಿ ಅತಿಶಯ ಪ್ರೀತಿ ಭಕ್ತಿ. ಆದರಿಂದ ನನಗೆ ಹೇಳಬೇಕಾದುದನ್ನು ಎಲ್ಲಾ ಹೇಳಿದೆ. ಇನ್ನು ಹೋಗು. ನಾನು ಹೋಗಿ ಸುಗ್ರೀವನ ಸಂಗಡ ಯುದ್ಧಮಾಡುತ್ತೇನೆ. ನೀನು ಕಳವಳ ಪಡಬೇಡ. ನಾನು ಅವನ ಕೊಬ್ಬನ್ನು ಅಡಗಿಸುತ್ತೇನೆ. ಅಷ್ಟೇ. ಅವನನ್ನು ಕೊಲ್ಲುವುದು ಇಲ್ಲ.

"ಈಗ ಅವನು ಯುದ್ಧಕ್ಕೆ ಬಂದಿದಾನೆ. ಅವನ ಆಸೆ ಎಲ್ಲಾ ತೀರಲಿ. ತೀರುವ ಹಾಗೆ ಯುದ್ಧಮಾಡುತ್ತೇನೆ. ಮರಗಳಿಂದ ಹೊಡೆಯುತ್ತೇನೆ. ಮುಷ್ಟಿಯಿಂದ ಗುದ್ದುತ್ತೇನೆ. ಬಹಳ ಹೊತ್ತು ನನ್ನ ಏಟನ್ನು ತಡೆಯಲಾರ ಅವನು. ಓಡಿಹೋಗುತ್ತಾನೆ. ನಾನು ಅವನನ್ನು ಕೊಲ್ಲುವುದು ಇಲ್ಲ. ನನ್ನ ಜೀವದ ಆಣೆ. ಇನ್ನು ನೀನು ಅಂತಃಪುರಕ್ಕೆ ಹೋಗು. ನನಗೆ ಅಡ್ಡಿಮಾಡ ಬೇಡ. ಸುಗ್ರೀವನನ್ನು ಗೆದ್ದು ಬರುತ್ತೇನೆ ನಾನು" ಎಂದ ವಾಲಿ.

ತಾರೆ ಪ್ರಿಯಭಾಷಿಣಿ. ಆದರೆ ದಾಕ್ಷಿಣ್ಯಸ್ವಭಾವ. ಪತಿಯ ಮಾತಿಗೆ ಬದಲು ಹೇಳಲಾರದೆ ನಸುನಕ್ಕಳು. ಗಂಡನನ್ನು ಪ್ರೀತಿಯಿಂದ ಅಪ್ಪಿಕೊಂಡಳು. ಒಳಗೊಳಗೇ ಅಳುತ್ತ ಅವನಿಗೆ ಪ್ರದಕ್ಷಿಣೆ-ನಮಸ್ಕಾರಮಾಡಿದಳು. ಅವನು ಗೆಲ್ಲಲಿ ಎಂದು ಮಂತ್ರಪೂರ್ವಕ ಸ್ವಸ್ತ್ಯಯನವನ್ನು ಮಾಡಿದಳು. ಮೈಥಿಲಿಯ ದಷ್ಟು ದುಃಖ ಬಂತು. ಹೆಂಗಸರನ್ನು ಕರೆದುಕೊಂಡು ಅಂತಃಪುರಕ್ಕೆ ಹೋದಳು.

ವಾಲಿಯ ಕೋಪ ಎಲ್ಲಾ ಹೊರಕ್ಕೆ ಬಂತು. ಕೋಪಗೊಂಡ ಮಹಾ ಸರ್ಪದಂತೆ ಬುಸುಗುಟ್ಟುತ್ತ ನಿಟ್ಟುಸಿರು ಬಿಡುತ್ತ ಶತ್ರು ಎಲ್ಲಿ ಇದಾನೆ ಎಂದು ಸುತ್ತಲೂ ನೋಡಿದ. ದಟ್ಟಿ ಕಟ್ಟಿ ಯುದ್ಧಸನ್ನದ್ಧ ಆಗಿ ಬಂದುನಿಂತ ಬಂಗಾರದ

ಕಾಂತಿಯ ದೇಹದ ಸುಗ್ರೀವನನ್ನು ನೋಡಿದ. ಅವನನ್ನು ನೋಡಿ ರೋಷ ಹೆಚ್ಚಿತು. ತಾನೂ ದಟ್ಟಿಯನ್ನು ಬಿಗಿದು ಕಟ್ಟಿದ. ಕೈ ಎತ್ತಿದ ಮುಷ್ಟಿ ಹಿಡಿದು ಸುಗ್ರೀವನಿಗೆ ಇದಿರು ಆಗಿ ಬಂದ. ಸುಗ್ರೀವನೂ ಮುಷ್ಟಿ ಎತ್ತಿದ. ಕೋಪದಿಂದ ಆ ಕಾಂಚನಮಾಲಾಧರ ವಾಲಿಯ ಮೇಲೆ ಏರಿಬಂದ. ಮೇಲೆ ಬೀಳಲು ಬರುವ ಸುಗ್ರೀವನನ್ನು ನೋಡಿ ವಾಲಿಯ ಕಣ್ಣು ಕೆಂಡ ಆಯಿತು. "ಸುಗ್ರೀವ, ಬೆರಳು ಎಲ್ಲಾ ಗಟ್ಟಿ ಆಗಿ ಸೇರಿಸಿ ಹಿಡಿದ ಮುಷ್ಟಿ ಇದು. ಇದು ಒಂದೇ ಸಾಕು ನಿನ್ನ ಪ್ರಾಣ ಕಳೆಯಲಿಕ್ಕೆ. ಇನ್ನು ನಿನ್ನ ಆಟ ಮುಗಿಯಿತು" ಎಂದ.

ಸುಗ್ರೀವನಿಗೂ ಸಿಟ್ಟುಬಂತು. "ನನ್ನ ಮುಷ್ಟಿಯೂ ಗಟ್ಟಿ. ನಿನ್ನ ತಲೆಯನ್ನು ಇದು ಸೋಕಿತೋ ನೀನು ಸತ್ತೆ" ಎಂದ. ಈ ವೀರವಾದ ಮುಗಿಯು ವುದರ ಒಳಗಾಗಿಯೇ ವಾಲಿ ತನ್ನ ಮುಷ್ಟಿಯಿಂದ ಸುಗ್ರೀವನನ್ನು ಹೊಡೆದ. ಆ ಹೊಡೆತಕ್ಕೆ ಸುಗ್ರೀವನ ಮೈಯಲ್ಲಿ ಎಲ್ಲೆಲ್ಲೂ ರಕ್ತ ಸೋರಲು ಆರಂಭಿಸಿತು. ಗಿರಿನದಿಗಳು ಹರಿಯುವ ಬೆಟ್ಟದ ಹಾಗೆ ಇದ್ದ. ಆದರೂ ಎದೆಕುಂದಲಿಲ್ಲ ಸುಗ್ರೀವ. ಅಲ್ಲಿಯೆ ಇದ್ದ ಸಾಲವೃಕ್ಷ ಒಂದನ್ನು ಕಿತ್ತು ತಂದ. ವಜ್ರಾಯುಧ ದಿಂದ ದೇವೇಂದ್ರ ಪರ್ವತವನ್ನು ಹೊಡೆಯುವ ರೀತಿಯಲ್ಲಿ ವಾಲಿಯನ್ನು ಹೊಡೆದ. ಏಟು ಭಾರಿ. ವಾಲಿ ತಡೆಯಲಾರದೆ ತತ್ತರಿಸಿದ. ಭಾರ ಹೆಚ್ಚು ಆದರೆ ದೋಣಿ ಹೊಯ್ದಾಡುವಂತೆ ನೆಟ್ಟಗೆ ನಿಲ್ಲಲಾರದೆ ಹೋದ. ಒಬ್ಬರಿಗೆ ಒಬ್ಬರು ಕಡಮೆ ಅಲ್ಲ ವಾಲಿಸುಗ್ರೀವರು. ಇಬ್ಬರೂ ಪರಾಕ್ರಮಶಾಲಿಗಳು. ಭಯಂಕರ ರೂಪು ಇಬ್ಬರದೂ. ಗರುಡನ ಹಾಗೆ ಇಬ್ಬರೂ ವೇಗಶಾಲಿಗಳು. ಶತ್ರುಸಂಹಾರಸಮರ್ಥರು. ಆಕಾಶದಲ್ಲಿ ಚಂದ್ರಸೂರ್ಯರ ಹಾಗೆ ಇಬ್ಬರೂ.

ಇಬ್ಬರೂ ರೇಗಿದರು. ಒಬ್ಬರನ್ನು ಒಬ್ಬರು ಗೆಲ್ಲಬೇಕು ಎಂಬ ಹುರುಪು. ಪರಸ್ಪರ ಛಿದ್ರಗಳನ್ನು ಹುಡುಕುತ್ತ ಭಯಂಕರ ಯುದ್ಧವನ್ನು ಮಾಡಿದರು. ವಾಲಿಯ ಬಲ ಮೇಲುಗೈ ಆಯಿತು. ಸುಗ್ರೀವನ ಬಲ ಕುಗ್ಗುತ್ತ ಬಂತು. ಅವನ ಕೋಪವೂ ಹುರುಪೂ ತಗ್ಗಲಿಲ್ಲ. ಹೆಚ್ಚಿತು. ಕೈಗೆ ಸಿಕ್ಕ ಗಿಡಮರಗಳನ್ನು ಕಿತ್ತು ತಂದು ಇಬ್ಬರೂ ಹೊಡೆದರು. ರೆಂಬೆಗಳಿಂದ ಹೊಡೆದಾಡಿದರು. ಅವರ ಉಗುರು ವಜ್ರಾಯುಧದ ಹಾಗೆ ಬಲು ಚೂಪು. ಉಗುರುಗಳಿಂದ ಪರಚಿದರು. ಮುಷ್ಟಿಯಿಂದ ಗುದ್ದಿದರು. ಮೊಳಕಾಲು ಕಾಲುಗಳಿಂದ ಹೊಡೆದಾಡಿದರು. ಇಂದ್ರನಿಗೂ ವೃತ್ರಾಸುರನಿಗೂ ನಡೆದ ಯುದ್ಧದ ಹಾಗೆ ಘೋರ ಆಯಿತು.

ಯುದ್ಧ. ಇಬ್ಬರೂ ನೆತ್ತರಿನಿಂದ ತೊಯ್ದುಹೋದರು. ಆದರೂ ಧೈರ್ಯಗೆಡದೆ ಒಬ್ಬರನ್ನು ಒಬ್ಬರು ಹೆದರಿಸುತ್ತ ಮೋಡಗಳ ಗುಡುಗಿನಂತೆ ಸಿಂಹನಾದವನ್ನು ಮಾಡುತ್ತ ಹೋರಾಡಿದರು.

ಸುಗ್ರೀವನ ಬಲ ಕುಂದಿತು. ಯುದ್ಧ ಮಾಡಲಾರದೆ ದಿಕ್ಕು ದಿಕ್ಕು ನೋಡಿದ. ಶ್ರೀರಾಮನ ಕಣ್ಣಿಗೆ ಬಿತ್ತು ಆ ನೋಟ. ಮಹಾತೇಜಸ್ವಿ, ಪರಾಕ್ರಮಿ ಶ್ರೀರಾಮ ವಾಲಿಯನ್ನು ಕೊಲ್ಲಲು ಬಾಣ ಹೂಡಿದ. ಆ ಬಾಣ ಕೃಷ್ಣಸರ್ಪದಂಥದು. ಬಿಲ್ಲನ್ನು ರಾಮ ಕಿವಿಯವರೆಗೂ ಎಳೆದರೆ ಯಮರಾಯ ಕಾಲಚಕ್ರವನ್ನು ಎಳೆದ ಹಾಗೆ ಆಯಿತು. ಅದು ಮಾಡಿದ ಸದ್ದಿಗೆ ಪಶುಪಕ್ಷಿ ಎಲ್ಲವೂ ಅಂಜಿ ದಿಕ್ಕಾಪಾಲು ಆಗಿ ಓಡಿದವು. ಸಿಡಿಲು ಬೀಳುವಂತೆ ಸದ್ದು ಮಾಡುತ್ತ ಧಗಧಗ ಉರಿಯುತ್ತ ಆ ಬಾಣ ಬಂದು ವಾಲಿಯ ಎದೆಗೆ ತಗಲಿತು.

ಒಂದೇ ಬಾಣ. ಅದರ ವೇಗಕ್ಕೆ ಅತಿಶಯ ಪರಾಕ್ರಮದಿಂದ ಕೊಬ್ಬಿದ ಆ ಮಹಾತೇಜಸ್ವಿ ವಾನರೇಂದ್ರ ವಾಲಿ ನೆಲಕ್ಕೆ ಉರುಳಿದ. ಆಶ್ವಯುಜ ಹುಣ್ಣಿಮೆಯ ದಿನ ನೆಲಕ್ಕೆ ಬಿದ್ದ ದೇವೇಂದ್ರನ ಧ್ವಜದ ಹಾಗೆ ಬಿದ್ದ.

ಒಂದೇ ಬಾಣ ರಾಮ ಬಿಟ್ಟದ್ದು. ಬೆಳ್ಳಿ ಬಂಗಾರದ ಹಿಡಿಯಿಂದ ಬೆಳಗಿದ ಬಾಣ. ಶತ್ರುಸಂಹಾರಕ, ಬೆಂಕಿಯಂತೆ ಉರಿಯುವ ಪ್ರಳಯ ಕಾಲದ ಮೃತ್ಯುವಿನಂಥ ಬಾಣ. ಪ್ರಳಯರುದ್ರ ಬೆಂಕಿಯನ್ನು ಕಾರುವಂತೆ ಉರಿಯಿತು. ಇಂದ್ರಕುಮಾರ ವಾಲಿ ಅದರ ಪೆಟ್ಟಿಗೆ ಜರ್ಝರಿತ ಆಗಿ ಬಿದ್ದ. ಮೈಯಿಂದ ಹೊಳೆ ಹರಿಯಿತು ರಕ್ತ. ಸೊಗಸು ಆಗಿ ಹೂ ಬಿಟ್ಟ ಅಶೋಕ ವೃಕ್ಷ ಕಾಡುಕಿಚ್ಚಿನ ನಡುವೆ ಸಿಕ್ಕಹಾಗೆ ಸಿಕ್ಕಿಬಿದ್ದ ವಾಲಿ.

೧೭

ಕೊಡಲಿಯ ಏಟಿಗೆ ಉರುಳಿಬೀಳುವ ಮರದ ಹಾಗೆ ವಾನರೇಂದ್ರ ವಾಲಿ ನೆಲಕ್ಕೆ ಬಿದ್ದ. ಚಂದ್ರ ಇಲ್ಲದ ಆಕಾಶದ ಹಾಗೆ ಆಯಿತು ವಾನರರಾಜ್ಯ.

ನೆಲಕ್ಕೆ ಬಿದ್ದರೂ ವಾಲಿ ಕಳೆಗುಂದಲಿಲ್ಲ. ಅವನ ದೇಹಕಾಂತಿ ಆಗಲಿ ಅವನ ಪ್ರಾಣ ಆಗಲಿ ಅವನ ಪರಾಕ್ರಮ ಆಗಲಿ ಹೋಗಲಿಲ್ಲ. ಸುತ್ತಲೂ ಸಂಧ್ಯಾರಾಗ ಹರಡಿದ ಮೇಘದ ಹಾಗೆ ಇದ್ದ. ದೇವೇಂದ್ರ ಕೊಟ್ಟ ವಜ್ರ ಖಚಿತ ಕಾಂಚನಮಾಲಿಕೆ ಅವನ ಕತ್ತಿನಲ್ಲಿ ಇದ್ದುದರ ಫಲ.

ಕತ್ತಿನಲ್ಲಿದ್ದ ಈ ಕಾಂಚನಮಾಲೆಯ ಹೊಳಪು ಒಂದು ಕಡೆ. ಎದೆಯಲ್ಲಿ ನಾಟಿದ ರಾಮಬಾಣದ ಕಾಂತಿ ಇನ್ನೊಂದು ಕಡೆ. ಸ್ವಾಭಾವಿಕ ದೇಹಕಾಂತಿ ಒಂದು ಕಡೆ. ಹೀಗೆ ಮೂರು ಬಗೆಯಲ್ಲಿ ಬೆಳಗುತ್ತಿತ್ತು ವಾಲಿಯ ತೇಜಸ್ಸು.

ವಾಲಿಗೆ ಸ್ವರ್ಗ ಸ್ವತಸ್ಸಿದ್ಧ. ರಾಮನ ಬಾಣ ಮೈಗೆ ನಾಟದುದರಿಂದ ವಾಲಿಗೆ ಉತ್ತಮೋತ್ತಮ ಲೋಕ ಲಭಿಸುತ್ತದೆ.

ಉರಿ ಅಡಗಿದ ಬೆಂಕಿ ವಾಲಿ ಈಗ. ಮಹೇಂದ್ರನಂತೆ ಯಾರಿಂದಲೂ ಗೆಲ್ಲಲು ಆಗದ ಪರಾಕ್ರಮಿ, ಮಹಾವೀರ. ಸಿಂಹದ ಎದೆ. ಮಹಾಬಾಹು. ವಿಶಾಲನೇತ್ರ. ಅಂಥವನು ಈಗ ನೆಲದ ಮೇಲೆ ಬಿದ್ದು ತನ್ನ ಮೇಲೆ ಇಂಥ ಅದ್ಭುತ ಬಾಣವನ್ನು ಬಿಟ್ಟವರು ಯಾರೋ ನೋಡಲು ಸುತ್ತಲೂ ಕಣ್ಣು ಆಡಿಸಿದ. ಬಾಣದ ಬಾಧೆ ಅಷ್ಟಿಷ್ಟಲ್ಲ. ಯಮಯಾತನೆ. ಆದರೂ ಆ ಬಾಣದ ವೇಗವನ್ನು ಮೆಚ್ಚಿದ. ಆ ವೀರನನ್ನು ನೋಡಬೇಕು ಎಂದು ಕುತೂಹಲ. ಪುಣ್ಯಫಲ ಮುಗಿದ ಮೇಲೆ ದೇವಲೋಕದಿಂದ ಕೆಳಗೆ ಬಿದ್ದ ಯಯಾತಿ. ಪ್ರಳಯಕಾಲದಲ್ಲಿ ಸೂರ್ಯನೇ ಭೂಮಿಗೆ ಬಿದ್ದು ತೇಜೋಹೀನ ಆಗುತ್ತಾನೆ. ವಾಲಿಯದೂ ಕಾಲ ಮುಗಿಯಿತು.

ಲಕ್ಷ್ಮಣಸಮೇತ ರಾಮ ವಾಲಿಯ ಬಳಿಗೆ ಬಂದ. ಅವರು ಇಬ್ಬರನ್ನೂ ವಾಲಿ ನೋಡಿದ. ಪರುಷ ಆದರೂ ವಿನಯ ತುಂಬಿ ಧರ್ಮಯುಕ್ತ ಆಗಿ ರಾಮನನ್ನು ಕೇಳಿದ: "ರಾಮ, ನೀನು ರಾಜಕುಮಾರ. ಸತ್ಕುಲಪ್ರಸೂತ. ಖ್ಯಾತಿವಂತ. ಪ್ರಿಯದರ್ಶನ. ಸತ್ವಗುಣಸಂಪನ್ನ. ಮಹಾಪರಾಕ್ರಮಶಾಲಿ. ತೇಜೋವಂತ. ಅನೇಕ ವ್ರತ ನಡಸಿದವನು. ನಾನು ನಿನ್ನ ಸಂಗಡ ಯುದ್ಧ ಮಾಡಲಿಲ್ಲ. ಬೇರೆ ಒಬ್ಬನ ಸಂಗಡ ಯುದ್ಧಮಾಡುತ್ತ ಇದ್ದೆ. ಪರಾಙ್ಮುಖ ಆಗಿ ಇದ್ದೆ. ಅಂಥ ಹೊತ್ತಿನಲ್ಲಿ ನನ್ನ ಮೇಲೆ ಬಾಣ ಬಿಟ್ಟೆ. ಇದರಿಂದ ಏನು ದೊಡ್ಡಸ್ತಿಕೆ ಬಂತು ನಿನಗೆ?

"ರಾಮ, ನೀನು ಕರುಣಾಮಯ, ಪ್ರಜಾಹಿತನಿರತ, ದಯಾವಂತ, ಜಿತಕೋಪ, ದೃಢವ್ರತ, ಸಮಯಜ್ಞ ಎಂದು ಸಮಸ್ತ ಪ್ರಾಣಿಗಳೂ ನಿನ್ನನ್ನು ಕೊಂಡಾಡುತ್ತ ಇವೆ. ಇಂದ್ರಿಯನಿಗ್ರಹ ಶಾಂತಿ ದಾಂತಿ ಧೈರ್ಯ ಸತ್ಯ ಪರಾಕ್ರಮ ಅಪರಾಧ ದಂಡನೆ ಮುಂತಾದ ರಾಜಯೋಗ್ಯ ಗುಣಗಳು ಎಲ್ಲವೂ ನಿನ್ನಲ್ಲಿ ಇವೆ ಎಂದು ತಿಳಿದು ಇದ್ದೆನಲ್ಲ. ನಿನ್ನ ವಂಶಗೌರವವನ್ನು ನಂಬಿದೆ.

ತಾರೆ ನನಗೆ ಬಹಳ ಹೇಳಿದಳು. ನಿನ್ನಿಂದ ಅಪಕಾರ ಆಗುತ್ತದೆ ಎಂದಳು. ಅಡ್ಡಿಪಡಿಸಿದಳು. ನಾನು ನಿಲ್ಲಲಿಲ್ಲ. ಸುಗ್ರೀವನ ಸಂಗಡ ಯುದ್ಧ ಮಾಡಲು ಬಂದೆ. ಅವನ ಸಂಗಡ ಯುದ್ಧ ಮಾಡುತ್ತ ಮೈಮರೆತು ಇದ್ದೆ. ಅಂಥ ಸಮಯದಲ್ಲಿ ನೀನು ನನ್ನ ಮೇಲೆ ಬಾಣ ಬಿಡಲಾರೆ, ನನ್ನನ್ನು ಕೊಲ್ಲಲಾರೆ ಎಂದು ತಿಳಿದುಕೊಂಡು ಇದ್ದೆ. ನಿನ್ನನ್ನು ನೋಡಿದಮೇಲೆಯೇ ನಿನ್ನ ವಿಷಯ ತಿಳಿದದ್ದು. ನೀನು ತಿಳಿಗೇಡಿ, ಲೋಕವನ್ನು ವಂಚಿಸಲು ಧರ್ಮದ ವೇಷ ಹಾಕಿದ ದುರಾಚಾರಿ. ಹುಲ್ಲು ಹೊದಿಸಿದ ಹಾಳುಬಾವಿಯ ಹಾಗೆ ನೀನು. ನನಗೆ ಮೊದಲು ತಿಳಿಯಲಿಲ್ಲ. ಒಳಗೊಳಗೇ ಪಾಪಬುದ್ಧಿ, ಮೇಲೆ ಮಾತ್ರ ಧರ್ಮದ ಧ್ವಜ. ಸಜ್ಜನವೇಷದ ದುರ್ಜನ ನೀನು. ಬೂದಿ ಮುಚ್ಚಿದ ಕೆಂಡ. ಧರ್ಮದ ಸೋಗು ಹಾಕಿದ ಕಪಟಿ ನೀನು.

"ರಾಮ, ನಿನ್ನ ದೇಶಕ್ಕೆ ಬರಲಿಲ್ಲ ನಾನು. ಅಲ್ಲಿ ಕಾಲು ಇಡಲಿಲ್ಲ. ಯಾವ ಅಪಕಾರವನ್ನೂ ಮಾಡಲಿಲ್ಲ. ನಿನಗೆ ಅವಮಾನ ಮಾಡಲಿಲ್ಲ. ನಾನು ನಿರಪರಾಧಿ, ಕಂದಮೂಲಫಲಗಳನ್ನು ತಿನ್ನುತ್ತ ಅಡವಿಯಲ್ಲಿ ಓಡಾಡಿಕೊಂಡು ಇರುವ ವಾನರ ನಾನು. ನಿನ್ನ ಸಂಗಡ ಯುದ್ಧಕ್ಕೆ ಬರಲಿಲ್ಲ. ಬೇರೆ ಯಾರ ಸಂಗಡವೋ ಯುದ್ಧ ಮಾಡುತ್ತ ಇದ್ದಾಗ ನನ್ನ ಮೇಲೆ ಬಾಣ ಬಿಟ್ಟೆಯಲ್ಲ. ನೀನು ಧಾರ್ಮಿಕ ಅಲ್ಲ. ಧಾರ್ಮಿಕ ವೇಷದ ಅಧಾರ್ಮಿಕ. ಇದು ಸ್ಪಷ್ಟ ಆಯಿತು. ನೀನು ಕ್ಷತ್ರಿಯ ಕುಲದಲ್ಲಿ ಹುಟ್ಟಿದೆ. ಎಲ್ಲ ವಿದ್ಯೆಯನ್ನೂ ಅಭ್ಯಾಸ ಮಾಡಿದೆ. ಹಲವನ್ನು ಕೇಳ್ದೆ. ಧರ್ಮಾತ್ಮ ಎನಿಸಿದೆ. ಇಂಥವನು ಈ ಕ್ರೂರ ಕೃತ್ಯವನ್ನು ಮಾಡುವುದೆ?

"ರಾಮ, ರಾಜವಂಶದಲ್ಲಿ ಹುಟ್ಟಿದೆ. ಧರ್ಮಜ್ಞ ಎನಿಸಿಕೊಂಡೆ. ನಿನ್ನ ರೂಪು ಬಹಳ ಸೌಮ್ಯ, ಮಂಗಳಕರ. ಇಂಥ ಕ್ರೂರ ಕೆಲಸವನ್ನು ಮಾಡ ಬಹುದೆ ನೀನು? ಈ ಪರಾಙ್ಮುಖವಧೆಗೆ ಏನು ಕಾರಣ ಇತ್ತು? ನೀನು ದುಷ್ಟ, ಕಪಟಿ. ಈ ಸತ್ಪುರುಷ ವೇಷ ಹಾಕಿಕೊಂಡು ಏಕೆ ತಿರುಗುತ್ತಾ ಇದೀಯೆ ಈ ಕಾಡಿನಲ್ಲಿ?

"ರಾಜಕುಮಾರ, ಸಾಮ ದಾನ ಧರ್ಮ ಸತ್ಯ ಧೈರ್ಯ ಪರಾಕ್ರಮ ಕ್ಷಮೆ ಅಪರಾಧಿಗಳ ದಂಡನೆ ಎಂಟೂ ರಾಜಗುಣ. ನಾನು ಏನು ತಪ್ಪು ಮಾಡಿದೆ ದಂಡಿಸಲಿಕ್ಕೆ? ಗಡ್ಡೆಗೆಣಸು ತಿಂದು ಕಾಡಿನಲ್ಲಿ ಇರುವ ವನಚರ

ನಾನು. ನೀನೋ ನಗರನಿವಾಸಿ. ನೀನು ನರ. ನಾನು ವಾನರ. ನೀನು ದೊರೆ. ನನ್ನ ಮೇಲೆ ನಿನಗೆ ಏಕೆ ವೈರ? ನಿಷ್ಕಾರಣ ಆಗಿ ನನ್ನ ಮೇಲೆ ಬಾಣ ಬಿಟ್ಟೆಯಲ್ಲ.

"ಬೆಳ್ಳಿಬಂಗಾರ ಭೂಮಿ ಯುದ್ಧಕ್ಕೆ ಕಾರಣವಂತೆ. ನನಗೂ ನಿನಗೂ ಅಂಥ ಸಂಬಂಧವೇ ಇಲ್ಲವಲ್ಲ. ನಾವು ತಿನ್ನುವ ಕಂದಮೂಲಫಲಗಳಿಗೆ ಆಸೆ ಪಟ್ಟೆಯಾ? ಆ ದುರಾಶೆಯಿಂದ ನನ್ನ ಮೇಲೆ ಬಾಣ ಬಿಟ್ಟೆಯಾ?

"ರಾಮ, ನಯವಿನಯ ನಿಗ್ರಹ ಅನುಗ್ರಹ ರಾಜಧರ್ಮ. ಸಂದರ್ಭಕ್ಕೆ ಅನುಸಾರ ಈ ಧರ್ಮಗಳಂತೆ ನಡೆಯುತ್ತಾರೆ ರಾಜರು. ರಾಜಧರ್ಮಕ್ಕೆ ವ್ಯತಿರಿಕ್ತವಾಗಿ ನಡೆಯುವವರು ದುಷ್ಟ ರಾಜರು. ಆಯಾ ಕಾಲಕ್ಕೆ ತಕ್ಕಂತೆ ರಾಜಧರ್ಮ. ಎಲ್ಲವನ್ನೂ ಒಂದೇ ಆಗಿ ಬೆರೆಸಬಾರದು. ನಿನಗೋ ಕಾಮವೇ ಮುಖ್ಯ. ನಿನಗೆ ತಾಳ್ಮೆ ಇಲ್ಲ. ಕೋಪದ ಸ್ವಭಾವ ನಿನ್ನದು. ನೀನು ಸ್ವೇಚ್ಛಾಚಾರಿ. ರಾಜಮರ್ಯಾದೆ ನಿನಗೆ ಇಲ್ಲ. ಬರೀ ಅಕ್ರಮ. ಬಿಲ್ಲನ್ನು ಎಳೆದೆ. ಬಾಣ ಹೂಡಿ ಹೊಡೆದೆ. ಬೇರೆ ಉದ್ಯೋಗವೇ ಇದ್ದ ಹಾಗೆ ಇಲ್ಲ ನಿನಗೆ. ನ್ಯಾಯವೂ ಇಲ್ಲ ಅನ್ಯಾಯವೂ ಇಲ್ಲ. ಮನಸಿಗೆ ಬಂದ ಹಾಗೇ. ನಿನಗೆ ಧರ್ಮಬುದ್ಧಿ ಇಲ್ಲ. ಅರ್ಥವಿಷಯದಲ್ಲಿ ಒಂದು ನಿಯಮವೇ ಇಲ್ಲ. ಇಂದ್ರಿಯಪರಾಯಣ ನೀನು.

"ರಾಮ, ಕಾಕುತ್ಸ್ಥ ವಂಶದಲ್ಲಿ ಹುಟ್ಟಿಯೂ ನಿರಪರಾಧಿ ನನ್ನನ್ನು ಹಿಂದಿನಿಂದ ಹೊಡೆದು ಕೊಂದೆ. ಸತ್ಪುರುಷರ ನಡುವೆ ಏನು ಹೇಳುತ್ತೀ ಈ ದುಷ್ಕಾರ್ಯ ಮಾಡಿ? ದೊರೆಯನ್ನು ಬ್ರಾಹ್ಮಣನನ್ನು ಕೊಂದವನು, ಗೋಹತ್ಯೆ ಮಾಡಿದವನು ಕಳ್ಳತನ ಮಾಡಿದವನು ಪ್ರಾಣಿಹಿಂಸೆ ಮಾಡಿದವನು ನಾಸ್ತಿಕ ಅಣ್ಣನಿಗಿಂತ ಮೊದಲು ಮದುವೆ ಆಗುವ ತಮ್ಮ, ಪರರ ಮೇಲೆ ಚಾಡಿ ಹೇಳುವ ಪಿಸುಣ, ಲೋಭಿ, ಗೆಳೆಯರನ್ನು ಕೊಂದವನು, ಗುರುಭಾರ್ಯಾಗಮನ ಮಾಡಿದವನು ಪಾಪಿಗಳು. ಘೋರ ನರಕಕ್ಕೆ ಹೋಗುತ್ತಾರೆ ಎಲ್ಲರೂ. ಇದರಲ್ಲಿ ಸಂದೇಹ ಇಲ್ಲ.

"ರಾಮ, ಹುಲಿದೊಗಲು ಜಿಂಕೆದೊಗಲು ಸತ್ಪುರುಷರಿಗೆ ಧಾರ್ಮಿಕರಿಗೆ ಬೇಕು. ವಾನರಚರ್ಮವನ್ನು ಯಾರೂ ಮುಟ್ಟರು. ನಮ್ಮ ಕೂದಲನ್ನು ಉಪಯೋಗಿಸರು. ನಮ್ಮ ಎಲುಬುಗಳನ್ನು ಬಳಸರು. ವಾನರಮಾಂಸವನ್ನು

ಯಾರೂ ತಿನ್ನರು. ಐದು ಉಗುರಿನ ಪ್ರಾಣಿಗಳಲ್ಲಿ ಮುಳ್ಳುಹಂದಿ ಕಾಡು ಹಂದಿ ಉಡ ಆಮೆ ಮೊಲ ಇವು ಐದೇ ಕ್ಷತ್ರಿಯರಿಗೂ ಬ್ರಾಹ್ಮಣರಿಗೂ ಭಕ್ಷಣಯೋಗ್ಯ. ನಮ್ಮ ಚರ್ಮ ಮಾಂಸ ಎಲುಬು ಇವು ಯಾವುದೂ ಉಪಯೋಗಕ್ಕೆ ಬಾರವು. ಹೀಗೆ ಇದ್ದರೂ ನೀನು ನನ್ನನ್ನು ಏಕೆ ಕೊಂದೆ?

"ರಾಘವ, ನಾನು ಹೊರಟುಬರುವಾಗ ತಾರೆ ಎಷ್ಟೋ ಹೇಳಿ ತಡೆದಳು. ಹೋಗಬೇಡ ಎಂದು ಅಡ್ಡಗಟ್ಟಿದಳು. ಅವಳು ಸರ್ವಜ್ಞಳು. ಅವಳ ಮಾತು ಎಲ್ಲವೂ ನಿಜ. ನನಗೆ ಕಾಲ ಬಂತು. ಅವಳ ಮಾತನ್ನು ಕೇಳದೆ ಬಂದುಬಿಟ್ಟೆ. ಈಗ ಮೃತ್ಯುವಿನ ಪಾಲು ಆದೆ. ಸದಾಚಾರಸಂಪನ್ನೆ ಆದ ಹೆಂಗಸಿಗೆ ಧೂರ್ತ ಗಂಡ ಸಿಕ್ಕರೆ ಹೇಗೋ ಹಾಗೆ ನೀನು ಈ ಭೂಮಿಗೆ ಒಡೆಯ ಆದರೆ ಪ್ರಜೆಗಳಿಗೆ ಏನೂ ಸುಖ ಇಲ್ಲ. ನೀನು ಗುಟ್ಟನಲ್ಲಿ ಕೇಡು ಮಾಡುವವನು. ಅಪಕಾರ ಮಾಡುವುದೇ ನಿನ್ನ ಬದುಕು. ಬಲು ಕ್ಷುದ್ರ ಸ್ವಭಾವ. ಮೇಲೆ ಕಾಣ ಬರುವ ನಿನ್ನ ಪ್ರಶಾಂತ ಗುಣ ಬರೀ ತೋರಿಕೆ. ನೀನು ಪಾಪಿ. ಕಪಟ. ಮಹಾನುಭಾವ ದಶರಥರಾಜ. ಅವನ ಹೊಟ್ಟೆಯಲ್ಲಿ ಹೇಗೆ ಹುಟ್ಟಿದೆಯೋ ನೀನು!

"ಕೊಬ್ಬಿದ ಕಾಡಾನೆಯ ಹಾಗೆ ಸದಾಚಾರದ ಹಗ್ಗವನ್ನು ಹರಿದು ಜೊತೆಯ ಸತ್ಪುರುಷರ ದಾರಿಯನ್ನು ಬಿಟ್ಟು ಧರ್ಮದ ಅಂಕುಶವನ್ನು ಅಲಕ್ಷ್ಯ ಮಾಡಿದ ನಿನ್ನಂಥ ಮದೋನ್ಮತ್ತನ ಕೈಯಲ್ಲಿ ನನಗೆ ಸಾವೆ? ಇಂಥ ಅಮಂಗಳದ ಅಯುಕ್ತ ಕಾರ್ಯ ಮಾಡಿದೆಯಲ್ಲ. ನಾಳೆ ಸತ್ಪುರುಷರಿಗೆ ಹೇಗೆ ಮೋರೆ ತೋರಿಸುತ್ತೀ?

"ನಿನಗೆ ಕೇಡುಮಾಡಿದವನ ಮೇಲೆ ನಿನ್ನ ಪರಾಕ್ರಮ ತೋರಿಸಬೇಕು. ನಾನು ಉದಾಸೀನ. ಏನೂ ಕೇಡು ಮಾಡಲಿಲ್ಲ. ನನ್ನ ಮೇಲೆ ತೋರಿಸಿದೆ ಯಲ್ಲ ನಿನ್ನ ಪರಾಕ್ರಮವನ್ನು. ಸಾಲದ್ದಕ್ಕೆ ಹಿಂದೆ ನಿಂತು ಮರೆಯಿಂದ ಹೊಡೆದೆ. ನನ್ನ ಇದಿರಿಗೆ ನಿಂತು ಯುದ್ಧಮಾಡಿದ್ದರೆ ನಿನ್ನನ್ನು ಈ ವೇಳೆಗೆ ಯಮಲೋಕಕ್ಕೆ ಕಳಿಸುತ್ತಿದ್ದೆ. ನನ್ನನ್ನು ಗೆಲ್ಲಲು ಸಾಧ್ಯ ಇಲ್ಲ ಎಂದು ತಿಳಿದೇ ಹೀಗೆ ಮರೆಯಲ್ಲಿ ಅವಿತುಕೊಂಡೆ. ಮೈಮೇಲೆ ಎಚ್ಚರ ಇಲ್ಲದೆಯೆ ಮಲಗಿದವನನ್ನು ಕೆಟ್ಟ ಹಾವು ಕಡಿದ ಹಾಗೆ ನನ್ನ ಮೇಲೆ ಬಾಣ ಬಿಟ್ಟೆ ನೀನು.

"ರಾಮ, ನೀನು ಯಾವ ಕಾರಣಕ್ಕಾಗಿ ನನ್ನನ್ನು ಕೊಂದೆಯೋ ಅದನ್ನು ಮೊದಲೇ ನನಗೆ ತಿಳಿಸಿ ಇದ್ದರೆ—ಒಂದೇ ದಿನದಲ್ಲಿ ನಿನ್ನ ಹೆಂಡತಿ ಸೀತೆಯನ್ನು ತಂದು ಒಪ್ಪಿಸುತ್ತ ಇದ್ದೆ. ರಾವಣನನ್ನು ಕಂಡುಹಿಡಿಯಬೇಕು ಎಂದು ಸುಗ್ರೀವನನ್ನು ಸಂತೋಷಪಡಿಸಲು ಇಷ್ಟು ಕೆಲಸ ಮಾಡಿದೆ. ನನಗೇ ಹೇಳಿ ಇದ್ದರೆ ಆ ರಾವಣನ ಕುತ್ತಿಗೆಗೆ ಹಗ್ಗ ಹಾಕಿ ಎಳೆದು ತರುತ್ತ ಇದ್ದೆ. ನಿನ್ನ ಮುಂದೆ ನಿಲ್ಲಿಸುತ್ತ ಇದ್ದೆ. ಒಂದು ವೇಳೆ ಆ ರಾವಣ ಸೀತೆಯನ್ನು ಪಾತಾಳದಲ್ಲಿ ಬಚ್ಚಿಟ್ಟು ಇದ್ದರೂ, ಮಧುಕೈಟಭರು ಶ್ವೇತಾಶ್ವತರೀ ರೂಪದ ಶ್ರುತಿಯನ್ನು ಪಾತಾಳದಲ್ಲಿ ಬಚ್ಚಿಟ್ಟಾಗ ಹಯಗ್ರೀವ ರೂಪದಿಂದ ಹೋಗಿ ಭಗವಂತ ತಂದಹಾಗೆ, ತಂದು ಒಪ್ಪಿಸುತ್ತ ಇದ್ದೆ.

"ಸುಗ್ರೀವ ನನ್ನ ತರುವಾಯ ವಾನರ ರಾಜ್ಯವನ್ನು ಪಡೆಯಬೇಕು. ಅದಕ್ಕಾಗಿ ಅವನು ನನ್ನೊಡನೆ ಹೋರಾಡಿ ಕೊಲ್ಲುವುದು ಸರಿ. ಅವನು ನನ್ನ ದಾಯಾದಿ. ಏನೂ ಸಂಬಂಧ ಇಲ್ಲದ ನೀನು ನಡುವೆ ನುಗ್ಗಿಬಂದ. ನನ್ನನ್ನು ಕೊಂದು ಅವನಿಗೆ ರಾಜ್ಯ ಕೊಡಿಸುವುದು ಅನ್ಯಾಯ, ಅಧರ್ಮ. ನಿನಗೆ ಇದು ಸರಿ ಅಲ್ಲ. ಹುಟ್ಟಿದವನು ಒಂದು ದಿನ ಸಾಯಲೇಬೇಕು. ನನ್ನ ಸಾವಿಗಾಗಿ ನಾನು ಚಿಂತಿಸುವುದು ಇಲ್ಲ. ನಾನು ಸತ್ತು ಸುಗ್ರೀವ ದೊರೆ ಆಗಬೇಕು, ಇದು ಕಟ್ಟಿಟ್ಟದ್ದು. ನಡುವೆ ನೀನು ಬಂದು ಅನ್ಯಾಯ ಮಾಡಿದೆ ಅಲ್ಲ. ಮರೆಯಲ್ಲಿ ನಿಂತು ಹೊಡೆದು ಕೊಂದೆಯಲ್ಲ ನನ್ನನ್ನು. ಸರಿಯೆ? ಯೋಚಿಸು."

ರಾಮಬಾಣದ ಬೇಗೆಯಿಂದ ವಾಲಿಗೆ ಬಹಳ ಆಯಾಸ. ಬಾಯಿ ಒಣಗಿತು. ಸೂರ್ಯನಂತೆ ಬೆಳಗುತ್ತ ಇದ್ದ ರಾಮನನ್ನೇ ನೋಡುತ್ತಿದ್ದ ವಾಲಿ.

೧೮

ರಾಮಬಾಣದಿಂದ ಕೆಳಗೆ ಬಿದ್ದ ವಾಲಿಗೆ ಅರೆಬರೆ ಪ್ರಜ್ಞೆ. ಕಳೆಗುಂದಿದ ಸೂರ್ಯ, ನೀರು ಇಲ್ಲದ ಮೋಡ, ಉರಿ ಕಳೆದ ಬೆಂಕಿ; ಹೀಗೆ ನಿಶ್ಚೇಷ್ಟ ಆಗಿ ಬಿದ್ದಿದ್ದ. ಆದರೂ ರಾಮನನ್ನು ಕಠಿನ ಆಗಿಯೇ ಆಕ್ಷೇಪಿಸಿದ. ಧರ್ಮಾರ್ಥ ಯುಕ್ತ ಆಗಿ ಕೇಳಿದ. ತುಂಬುವಿನಯದಿಂದ ಕೇಳಿದ.

ರಾಮ ಮರೆಯಲ್ಲಿ ನಿಂತು ವಾಲಿಯ ಮೇಲೆ ಬಾಣ ಬಿಟ್ಟದ್ದು ಸರಿಯೆ? ಧರ್ಮವೆ? ಶ್ರೀರಾಮ ಧರ್ಮಾರ್ಥಸಂಪನ್ನ ಗುಣವಿಶಿಷ್ಟ ಆದ ಮಾತಿನಿಂದ ಹೇಳಿದ: "ವಾನರೇಂದ್ರ, ನಿನಗೆ ಧರ್ಮ ಅರ್ಥ ಕಾಮಗಳೂ ತಿಳಿಯದು, ಲೋಕಾಚಾರಸಂಪ್ರದಾಯಗಳೂ ತಿಳಿಯದು. ಬರೀ ಅಜ್ಞಾನದಿಂದ ನನ್ನನ್ನು ತೆಗಳುತ್ತೀಯೆ. ನಿನ್ನದು ಚಪಲಬುದ್ಧಿ. ಬುದ್ಧಿವಂತರು ವೃದ್ಧರು ಪೂಜ್ಯರು ಆದ ಗುರುಜನರಿಂದ ಧರ್ಮಾರ್ಥಕಾಮಗಳ ಸ್ವರೂಪವನ್ನು ಕೇಳಿ ತಿಳಿದು ಕೊಳ್ಳಲಿಲ್ಲ. ಕೇವಲ ಸಹಜಚಾಪಲ್ಯದಿಂದ ಹೀಗೆ ನಿಂದಿಸುತ್ತ ಇದೀಯೆ.

"ವಾನರ, ಕಾಡುಗುಡ್ಡಗಳ ಈ ಸಮಸ್ತ ಭೂಮಂಡಲವೂ ಇಕ್ಷ್ವಾಕು ವಂಶದವರದು. ಈ ಭೂಮಿಯ ಮೇಲಿನ ಮೃಗ ಮಾನವ ಪಕ್ಷಿಗಳನ್ನು ನಿಗ್ರಹಿಸುವ ಅಧಿಕಾರ ಸಂಪೂರ್ಣ ಆಗಿ ಇದೆ ಇಕ್ಷ್ವಾಕು ವಂಶದ ರಾಜರಿಗೆ. ಈಗ ಈ ಭೂಮಿಯನ್ನು ಆಳುವವನು ಧರ್ಮಾತ್ಮ, ಸತ್ಯಸಂಧ, ನಿಷ್ಕಪಟಿ, ನಯವಿನಯಶಾಲಿ ಆದ ಭರತ. ಆತ ಮಹಾಪರಾಕ್ರಮಿ. ದೇಶಕಾಲದ ಜ್ಞಾನ ಉಳ್ಳವನು. ಧರ್ಮಾರ್ಥಕಾಮಗಳ ಗುಟ್ಟನ್ನು ಬಲ್ಲವನು. ದುಷ್ಟರನ್ನು ದಂಡಿಸಿ ಶಿಷ್ಟರನ್ನು ಅನುಗ್ರಹಿಸಿ ಧರ್ಮದಿಂದ ಭೂಮಿಯನ್ನು ಪಾಲಿಸುತ್ತ ಇದಾನೆ.

"ಆ ಭರತನ ಅಪ್ಪಣೆಯನ್ನು ತಲೆಯ ಮೇಲೆ ಹೊತ್ತು ನಾನೂ ಅನೇಕ ಮಂದಿ ಸಾಮಂತರೂ ಧರ್ಮಕ್ಕೆ ಚ್ಯುತಿಬಾರದಂತೆ ನೋಡಿಕೊಳ್ಳುತ್ತ ಇದೇವೆ. ಧರ್ಮಪರಾಯಣ ರಾಜಶ್ರೇಷ್ಠ ಆದ ಅವನ ರಾಜ್ಯದಲ್ಲಿ ಯಾರೂ ಧರ್ಮಕ್ಕೆ ತಪ್ಪಿ ನಡೆಯುವ ಹಾಗೆ ಇಲ್ಲ. ತಪ್ಪಿ ನಡೆದವರಿಗೆ ಶಿಕ್ಷೆ ತಪ್ಪದು. ಶಾಸ್ತ್ರದಲ್ಲಿ ಹೇಳಿದಂತೆ ಅಂಥವರನ್ನು ನಾವು ದಂಡಿಸುತ್ತೇವೆ.

"ವಾನರ, ನೀನು ಧರ್ಮವನ್ನು ತೊರೆದೆ. ನಿನ್ನ ಕೆಲಸ ಎಲ್ಲವೂ ನಿಂದ್ಯ. ನಿನಗೆ ಕಾಮವ್ಯಾಪಾರವೇ ಮುಖ್ಯ. ರಾಜಯೋಗ್ಯ ಸನ್ಮಾರ್ಗದಲ್ಲಿ ನೀನು ನಡೆಯಲಿಲ್ಲ. ಧರ್ಮದಂತೆ ನಡೆಯುವವರಿಗೆ ಹಡೆದ ತಂದೆ, ಹಿರಿಯ ಅಣ್ಣ, ವಿದ್ಯೆ ಹೇಳಿದ ಗುರು, ಮೂವರೂ ತಂದೆಯ ಸಮಾನ. ತನ್ನ ಮಗ, ತನ್ನ ಕಿರಿಯ ತಮ್ಮ, ಗುಣವಂತ ಶಿಷ್ಯ ಮೂವರೂ ಧಾರ್ಮಿಕರಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗನ ಸಮಾನ. ಧರ್ಮ ಇಂದ್ರಿಯಗೋಚರ ಅಲ್ಲ. ಮಹಾ ಜ್ಞಾನಿಗಳಿಗೂ ಹಿರಿಯರಿಗೂ ಕೂಡ ನಿಲುಕದ್ದು ಅದು. ಶುಭಾಶುಭಗಳಿಗೆ

ಕಾರಣ ಆದ ಧರ್ಮ ಅಧರ್ಮಗಳ ಸೂಕ್ಷ್ಮವನ್ನು ಅರಿಯಬಲ್ಲವನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿ ಆದ ಪರಮಾತ್ಮ ಒಬ್ಬನೇ.

“ನೀನೋ ಬರೀ ಚಪಲಚಿತ್ತ. ಕುರುಡ ಕುರುಡರ ಸಂಗಡ ಸೇರಿ ಆಲೋಚಿಸುವಂತೆ ನೀನೂ ನಿನ್ನ ಹಾಗೇ ಚಪಲಚಿತ್ತರು ಆದ ಕಪಿಗಳ ಸಂಗಡ ಆಲೋಚಿಸಿದರೆ ಧರ್ಮಸೂಕ್ಷ್ಮ ತಿಳಿಯುತ್ತದೆಯೆ? ಬಿಡಿಸಿ ಹೇಳುತ್ತೇನೆ ಸ್ಪಷ್ಟ ಆಗಿ. ಕೇಳು. ಕೋಪಮಾಡಿಕೊಂಡು ನನ್ನನ್ನು ನಿಂದಿಸಬೇಡ. ನಿನ್ನನ್ನು ಏಕೆ ಕೊಂದೆನೋ ಹೇಳುತ್ತೇನೆ ಕೇಳು. ವಾಲಿ, ಸನಾತನ ಧರ್ಮವನ್ನು ತೊರೆದೆ ನೀನು. ನಿನ್ನ ತಮ್ಮ ಸುಗ್ರೀವನನ್ನು ಓಡಿಸಿಬಿಟ್ಟು ಅವನ ಹೆಂಡತಿಯನ್ನು ಅನುಭವಿಸುತ್ತ ಇದ್ದೆ. ಇದಕ್ಕಿಂತ ಬೇರೆ ಪಾಪಕೃತ್ಯ ಉಂಟೆ?

“ವಾಲಿ, ಸುಗ್ರೀವ ನಿನಗೆ ಮಗನ ಸಮಾನ. ಅವನ ಹೆಂಡತಿ ನಿನಗೆ ಸೊಸೆ ಆಗಬೇಕು. ತಮ್ಮ ಬದುಕಿಯೆ ಇದಾನೆ. ಕಾಮಪರವಶ ಆಗಿ ಅವಳನ್ನು ಅನುಭವಿಸಿದೆ. ಇದು ವ್ಯಭಿಚಾರ. ಇದು ಧರ್ಮದ ಅತಿಕ್ರಮಣ. ಕಾಮ ಕಾರ್ಯ. ಈ ದೋಷಕ್ಕೆ ಮರಣವೇ ದಂಡನೆ. ಶಾಸ್ತ್ರ ಹೇಳಿದ್ದು ಇದೇ. ಲೋಕಾಚಾರವನ್ನು ಧರ್ಮವನ್ನು ಮೀರಿದವನಿಗೆ ಮರಣದಂಡನೆಯೇ ಶಾಸ್ತ್ರೋಕ್ತ.

“ನಾನು ಸತ್ಕುಲಪ್ರಸೂತ ಕ್ಷತ್ರಿಯ. ನಿನ್ನ ಈ ಪಾಪಕೃತ್ಯವನ್ನು ನೋಡಿ ಹೇಗೆ ಸುಮ್ಮನೆ ಇರಲಿ? ಸಹಿಸಲಾರದೆ ನಿನ್ನನ್ನು ಶಿಕ್ಷಿಸಿದೆ. ಮಗಳು, ಒಡಹುಟ್ಟಿದವಳು, ತಮ್ಮನ ಹೆಂಡತಿ, ಇವರಲ್ಲಿ ಯಾರನ್ನು ಕಾಮಿಸಿ ರಮಿಸಿದರೂ ಶಾಸ್ತ್ರದಲ್ಲಿ ಹೇಳಿದ ಪ್ರಕಾರ ಮರಣವೇ ಶಿಕ್ಷೆ. ಈಗ ಭೂಮಿಗೆ ಒಡೆಯ ಧರ್ಮಿಷ್ಠ ಭರತ. ನಾವು ಆತನ ಆಜ್ಞಾಧಾರಿಗಳು. ಧರ್ಮವನ್ನು ಮೀರಿ ನಡೆದವರನ್ನು ಶಿಕ್ಷಿಸುವುದು ಆತನ ದೀಕ್ಷೆ. ಆದ್ದರಿಂದ ನಿನಗೆ ಈ ಶಿಕ್ಷೆ.

“ವಾಲಿ, ನನಗೆ ಲಕ್ಷ್ಮಣನಲ್ಲಿ ಎಷ್ಟು ಸ್ನೇಹವೋ ಸುಗ್ರೀವನಲ್ಲೂ ಅಷ್ಟೇ ಸ್ನೇಹ. ಅಷ್ಟೇ ದೃಢ. ನನ್ನ ಶ್ರೇಯಸ್ಸನ್ನು ಕೋರುವವನು ಸುಗ್ರೀವ. ಸುಗ್ರೀವನಿಗೆ ಹೆಂಡತಿಯನ್ನೂ ರಾಜ್ಯವನ್ನೂ ಸಂಪಾದಿಸಿಕೊಡುತ್ತೇನೆ ಎಂದು ವಾನರರ ಸಭೆಯಲ್ಲಿ ಶಪಥಮಾಡಿದೆ. ಅದಕ್ಕಾಗಿ ನಿನ್ನನ್ನು ಕೊಲ್ಲಲು ಪ್ರತಿಜ್ಞೆ ಮಾಡಿದೆ ಎಲ್ಲರ ಇದಿರಿನಲ್ಲಿ. ನಾನು ಆಡಿದ ಮಾತು ಎಂದೂ ಹುಸಿ ಆಗಿಲ್ಲ. ನಾನು ಈ ಕೆಲಸವನ್ನು ಮಾಡಿದ್ದು ಧರ್ಮಸಮ್ಮತ. ನಿನ್ನ ವಧೆ ನ್ಯಾಯ. ಧರ್ಮನಿರತರು ಆದ ಗೆಳೆಯರು ಪರಸ್ಪರ ನೆರವು ಆಗಬೇಕು. ಯಾವ ರೀತಿಯಲ್ಲಿ ನೋಡಿದರೂ ನಿನ್ನದು ದುಷ್ಕೃತ್ಯ. ಮರಣದಂಡನೆಗೆ ತಕ್ಕದ್ದು.

“ವಾನರ, ಹಿಂದೆ ಮನು ಎರಡು ಶ್ಲೋಕ ಹೇಳಿದ ಸದಾಚಾರದ ಬಗ್ಗೆ. ಧರ್ಮಪರಾಯಣರು ಎಲ್ಲರೂ ಅದನ್ನು ಒಪ್ಪಿದ್ದಾರೆ. ನಾನು ಈಗ ನಡೆಸಿದುದೂ ಅದನ್ನೇ. ತಪ್ಪುಮಾಡಿದವರನ್ನು ದೊರೆ ದಂಡಿಸಿದರೆ ಅವರ ಪಾಪ ನೀಗಿ ಅವರಿಗೆ ಸದ್ಗತಿ ಸಿಗುತ್ತದೆ. ಕಳ್ಳನನ್ನು ರಾಜ ಶಿಕ್ಷಿಸಿದರೆ ಆ ಕಳ್ಳನ ಪಾಪ ಹೋಗುತ್ತದೆ. ದೊರೆ ಕಳ್ಳನನ್ನು ದಂಡಿಸದೆ ಬಿಟ್ಟರೆ ದೊರೆಗೇ ಆ ಪಾಪ ಅಂಟಿಕೊಳ್ಳುತ್ತದೆ.

“ಪೂರ್ವದಲ್ಲಿ ಶ್ರಮಣ ಒಬ್ಬ ನಿನ್ನ ಹಾಗೇ ಪಾಪಕೃತ್ಯ ಮಾಡಿದ. ಆಗ ನಮ್ಮ ಪೂರ್ವಜ ಸುಪ್ರಸಿದ್ಧ ಮಾಂಧಾತರಾಜ ದೊರೆ. ಆತ ಆ ಕ್ಷಪಣಕನಿಗೆ ಘೋರ ಶಿಕ್ಷೆ ವಿಧಿಸಿದ. ದೊರೆಗಳು ಮೈಮರೆತಾಗ ಲೋಕದಲ್ಲಿ ಎಷ್ಟೋ ಜನ ಪಾಪಮಾಡುತ್ತಾರೆ. ಕೆಲವು ದಿನ ಅವರು ಹಾಯಿ ಆಗಿ ಇರಲೂ ಬಹುದು. ಮುಂದೆ ದೊರೆ ಅವರನ್ನು ಹಿಡಿದು ತಕ್ಕ ಶಿಕ್ಷೆ ಕೊಟ್ಟರೆ ಇಬ್ಬರಿಗೂ ಪಾಪ ಕಳೆಯುತ್ತದೆ. ಇಬ್ಬರಿಗೂ ಪುಣ್ಯ ಬರುತ್ತದೆ.

“ವಾನರಶ್ರೇಷ್ಠ, ಕೋಪಗೊಳ್ಳಬೇಡ. ಪರಿತಪಿಸಬೇಡ. ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತ ಆಯಿತು. ನಾನು ಧರ್ಮಕ್ಕಾಗಿಯೇ ನಿನ್ನನ್ನು ಕೊಂದೆ. ನಾನು ಸ್ವತಂತ್ರ ಅಲ್ಲ. ಇತ್ತ ಧರ್ಮ, ಅತ್ತ ಭರತನ ಅಪ್ಪಣೆ. ಸಿಟ್ಟು ಬಂದಾಗ ಹೊಡೆ, ದಯೆ ಬಂದಾಗ ಬಿಡು, ಹೀಗೆ ಮಾಡುವಂತೆ ಇಲ್ಲ. ನಾನು ಧರ್ಮವನ್ನು ಅನುಸರಿಸಿಯೇ ನಿನ್ನನ್ನು ಕೊಂದೆ.

“ಇನ್ನೂ ಒಂದು ಮಾತನ್ನು ಹೇಳುತ್ತೇನೆ. ನಿನ್ನ ಕೋಪ ಮಾಯ ಆಗುತ್ತದೆ. ನನ್ನನ್ನು ಮರೆಯಲ್ಲಿ ನಿಂತು ಕೊಂದೆ. ಇದಿರಿಗೆ ನಿಂತು ಯುದ್ಧ ಮಾಡಿದ್ದರೆ ಯಮಲೋಕಕ್ಕೆ ಕಳಿಸುತ್ತ ಇದ್ದೆ ಎಂದು ಹೇಳಿದೆ. ಮೃಗಗಳನ್ನು ಬೇಟೆ ಆಡುವಾಗ ಇದಿರು ನಿಂತು ಕೊಲ್ಲುವುದೂ ಉಂಟು, ಮರೆಯಲ್ಲಿ ನಿಂತು ಕೊಲ್ಲುವುದೂ ಉಂಟು. ಬಲೆ ಒಡ್ಡುತ್ತಾರೆ. ಹಗ್ಗ ಹಾಕುತ್ತಾರೆ. ಎಷ್ಟೋ ಮೋಸ ಅದರಲ್ಲಿ. ಅಂಜಿ ನಡುಗಿ ಓಡುತ್ತ ಇದ್ದರೂ, ಇದರಿಂದ ತಮಗೆ ಭಯ ಇಲ್ಲ ಎಂದು ನಿರ್ಭಯ ಆಗಿ ಇದ್ದರೂ, ದಯಾದಾಕ್ಷಿಣ್ಯ ಇಲ್ಲದೆ ಕೊಲ್ಲುತ್ತಾರೆ. ಧರ್ಮಮಾರ್ಗಾನುವರ್ತಿ ರಾಜರ್ಷಿಗಳೂ ಹೀಗೇ ಮಾಡುತ್ತಾರೆ. ಇದರಲ್ಲಿ ದೋಷ ಇಲ್ಲ.

“ನೀನು ಶಾಖಾಮೃಗ. ನಿನ್ನನ್ನು ಕೊಲ್ಲಲು ಯುದ್ಧಧರ್ಮ ಅಗತ್ಯ ಅಲ್ಲ. ಇದು ಬೇಟೆಯ ನೀತಿ. ನನಗೆ ಇದರಲ್ಲಿ ದೋಷ ಸ್ವಲ್ಪವೂ ಇಲ್ಲ.

“ವಾನರೇಂದ್ರ, ಲೋಕದಲ್ಲಿ ಧರ್ಮವನ್ನು ಪ್ರತಿಷ್ಠಿಸುವವನು, ಜನರಿಗೆ ಒಳಿತನ್ನು ಮಾಡಿ ಜೀವನವನ್ನು ಕಲ್ಪಿಸುವವನು ದೊರೆ. ಸಂದೇಹ ಇಲ್ಲ. ದೇವತೆಗಳೇ ರಾಜರು ಆಗಿ ಹುಟ್ಟಿ ಧರ್ಮರಕ್ಷಣೆ ಮಾಡುತ್ತಾರೆ. ರಾಜರದು ದೇವಾಂಶ. ಅವರನ್ನು ಹಿಂಸಿಸುವುದು ದೂಷಿಸುವುದು ಆಕ್ಷೇಪಿಸುವುದು ಸಲ್ಲದ್ದು. ನಮ್ಮ ತಾತಮುತ್ತಾತಂದಿರ ಕಾಲದ ಧರ್ಮದಂತೆ ನಾನು ನಡೆದೆ. ನಿನಗೆ ಧರ್ಮಸೂಕ್ಷ್ಮ ತಿಳಿಯದು. ಬರೀ ರೋಷ. ನಿನಗೆ ಇದು ಸರಿ ಅಲ್ಲ.”

ವಾಲಿಗೆ ಆಗ ಧರ್ಮದ ಸ್ವರೂಪ ತಿಳಿಯಿತು. ರಾಮನದು ತಪ್ಪು ಅಲ್ಲ ಎಂದು ನಿಶ್ಚಯಿಸಿಕೊಂಡ. ಮನಸಿನಲ್ಲಿ ಪಶ್ಚಾತ್ತಾಪ ಹುಟ್ಟಿತು. ರಾಮನಿಗೆ ಕೈಮುಗಿದ. “ಪುರುಷೋತ್ತಮ, ನೀನು ಹೇಳಿದುದು ಎಲ್ಲವೂ ನಿಜ. ಸಂದೇಹ ಇಲ್ಲ. ಧರ್ಮಸೂಕ್ಷ್ಮ ದುರವಗಾಹ. ನಾನೋ ಅಲ್ಪಮತಿ. ನಿನಗೆ ಏನು ಸಮಾಧಾನ ಹೇಳಲಿ? ಏನೋ ಅಜ್ಞಾನದಿಂದ ಆಡಬಾರದ ಮಾತನ್ನು ಆಡಿ ನಿನ್ನನ್ನು ನೋಯಿಸಿದೆ. ನನ್ನನ್ನು ಮನ್ನಿಸು. ರಾಮ, ಎಲ್ಲವನ್ನೂ ತಿಳಿದವನು ನೀನು. ಪಂಡಿತ. ಪ್ರಜಾಹಿತಪರಾಯಣ. ನನ್ನ ತಪ್ಪನ್ನು ಮನ್ನಿಸು. ಯಾವ ತಪ್ಪಿಗೆ ಯಾವ ಶಿಕ್ಷೆಯೋ ನಿರ್ಮಲಬುದ್ಧಿಯಿಂದ ನಿರ್ಣಯಿಸಬಲ್ಲವನು ನೀನು.

“ರಾಮ, ನಾನು ಧರ್ಮವನ್ನು ಮೀರಿ ನಡೆದೆ. ನಿಜ. ಮಾಡಬಾರದ್ದನ್ನು ಮಾಡಿದೆ. ನೀನು ಧರ್ಮಜ್ಞ. ನನ್ನನ್ನು ಕ್ಷಮಿಸು. ಅಭಯ ನೀಡು. ಕ್ಷಮಿಸಿದೆ ಎಂದು ನಿನ್ನ ಧರ್ಮದ ಬಾಯಲ್ಲಿ ಬರಲಿ.

“ರಾಮಭದ್ರ, ಸಾವಿನ ಚಿಂತೆ ನನಗೆ ಇಲ್ಲ. ಹೆಂಡತಿಯ ಚಿಂತೆ ಬಂಧುಗಳ ಚಿಂತೆ ನನಗೆ ಇಲ್ಲ. ಇರುವುದು ಎಲ್ಲಾ ಒಂದೇ. ನನ್ನ ಮಗ ಕನಕಾಂಗದ ಅಂಗದನದೇ ಚಿಂತೆ. ಅವನು ಮಹಾ ಗುಣವಂತ. ನನ್ನ ಮುದ್ದು ಮಗ ಅವನು. ನನ್ನನ್ನು ಬಿಟ್ಟು ಒಂದು ಗಳಿಗೆಯೂ ಇರಲಾರ. ಬಹಳ ಪ್ರೀತಿಯಿಂದ ಬೆಳೆಸಿದೆ ಅವನನ್ನು. ಮುಂದೆ ಅವನ ಗತಿ ಏನು ಆಗುತ್ತದೆಯೋ! ನೀರು ಒಣಗಿಹೋದ ಕೆರೆಯ ಹಾಗೆ ಎಲ್ಲಿ ಆಗುತ್ತದೆಯೋ ಅವನ ಗತಿ ನನ್ನ ತರುವಾಯ!

“ರಾಮ, ನನಗೂ ತಾರೆಗೂ ಅವನು ಒಬ್ಬನೇ ಮಗ. ಬಹುಕಾಲದ ಮೇಲೆ ಹುಟ್ಟಿದ. ಆದರಿಂದ ನಮಗೆ ಬಲು ಮುದ್ದು. ಅಂಗದ ಬಹಳ ಬಲಶಾಲಿ. ಆದರೆ ಹಸುಳೆ. ರಾಮ, ನೀನು ಅಂಗದನನ್ನು ಕಾಪಾಡಬೇಕು.

ಸುಗ್ರೀವನನ್ನೂ ಅಂಗದನನ್ನೂ ಸಮಾನ ಆಗಿ ಕಾಣಬೇಕು. ರಾಮ, ಇಬ್ಬರದೂ ರಕ್ಷಣೆ ಶಿಕ್ಷೆ ನಿನಗೆ ಸೇರಿದ್ದು. ಭರತಲಕ್ಷ್ಮಣರನ್ನು ಹೇಗೆ ಪ್ರೀತಿಸುತ್ತೀಯೋ ಸುಗ್ರೀವ ಅಂಗದರನ್ನೂ ಹಾಗೇ ಪ್ರೀತಿಸು.

"ರಾಮ, ಈ ತಾರೆ ನಿರ್ದೋಷಿ. ನನ್ನ ಹೆಂಡತಿ ಆದುದರಿಂದ ಸುಗ್ರೀವ ನಿಗೆ ಕೆಡುಕು ಮಾಡಿದಂತೆಯೇ ಆಯಿತು. ಇದನ್ನು ಮನಸಿನಲ್ಲಿ ಇಟ್ಟುಕೊಂಡು ಸುಗ್ರೀವ ಅವಳಿಗೆ ಅವಮಾನ ಮಾಡಿಯಾನು. ಮಾಡದಂತೆ ನೀನು ನೋಡಿ ಕೊಳ್ಳಬೇಕು. ನನ್ನ ಪ್ರಾರ್ಥನೆ. ರಾಮ, ನನ್ನ ತರುವಾಯ ಈ ವಾನರ ರಾಜ್ಯವನ್ನು ಆಳುವವನು ನಿನಗೆ ಅಧೀನ ಆಗಿ ನಿನ್ನ ಚಿತ್ತಾನುಸಾರ ನಡೆದು ನಿನ್ನ ಅನುಗ್ರಹ ಪಡೆಯಬೇಕು. ಅವನು ವಾನರರಾಜ್ಯಕ್ಕೇ ಅಲ್ಲ, ಸಮಸ್ತ ಭೂಮಂಡಲಕ್ಕೂ ಆತನೇ ಒಡೆಯ ಆಗುತ್ತಾನೆ. ಸರ್ವಲೋಕಕ್ಕೂ ಒಡೆಯ ಆಗುತ್ತಾನೆ.

"ರಾಮ, ನನಗೆ ಇದು ಗೊತ್ತು. ನಾನು ಹಾಗೆ ಮಾಡಬಹುದಾಗಿತ್ತು. ಆದರೆ ನನ್ನ ಉದ್ದೇಶ ಬೇರೆ. ತಾರೆ ಯುದ್ಧಕ್ಕೆ ಹೋಗಬೇಡ ಎಂದು ಬಹಳ ತಡೆದಳು. ಆದರೆ ನಿನ್ನ ಕೈಯಿಂದ ಮಡಿದರೆ ನನಗೆ ಸದ್ಗತಿ ಎಂದು ತಿಳಿದೆ. ಆ ಆಸೆಯಿಂದ ಸುಗ್ರೀವನ ಸಂಗಡ ಯುದ್ಧಮಾಡಲು ಬಂದೆ" ಎಂದ ವಾಲಿ.

ವಾಲಿ ಜ್ಞಾನದಿಂದ ಮಾತಾಡಿದುದನ್ನು ಕೇಳಿ ರಾಮ ಧರ್ಮಸೂಕ್ಷ್ಮವನ್ನು ಇನ್ನೂ ವಿವರಿಸಿದ: "ಕಪಿಶ್ರೇಷ್ಠ, ಅಂಗದನ ಚಿಂತೆಯನ್ನು ಬಿಡು. ನನ್ನ ವಿಷಯದಲ್ಲೂ ದೋಷ ಎಣಿಸಬೇಡ. ನಿನ್ನ ವಿಷಯದಲ್ಲೂ ದೋಷ ಎಣಿಸಬೇಡ. ಏನೂ ಯೋಚಿಸಬೇಡ. ನೀನು ದಂಡನೆಗೆ ಅರ್ಹ. ನಿನ್ನನ್ನು ದಂಡಿಸಿ ನಾನು ಧರ್ಮವನ್ನು ನಡೆಸಿದೆ. ರಾಜದಂಡನೆಯಿಂದ ನಿನ್ನ ಪಾಪ ತೊಲಗಿತು. ಇಬ್ಬರಿಗೂ ಇದು ಧರ್ಮಹೇತು. ಈಗ ನೀನು ಶುಚಿ ಆದೆ, ಪವಿತ್ರ ಆದೆ. ವಾನರೇಂದ್ರ, ಇನ್ನು ವ್ಯಸನಪಡಬೇಡ. ಮನಸಿನಲ್ಲಿ ಇರುವ ಮೋಹವನ್ನೂ ಭಯವನ್ನೂ ಬಿಡು. ವಿಧಿಯನ್ನು ಮೀರಬಲ್ಲವರು ಯಾರು?

"ವಾಲಿ, ಅಂಗದನ ಚಿಂತೆ ಬಿಡು. ನೀನು ಹೇಗೆ ನೋಡಿಕೊಂಡೆಯೋ ಅವನನ್ನು ನಾನೂ ಸುಗ್ರೀವನೂ ಹಾಗೇ ನೋಡುತ್ತೇವೆ. ಪುತ್ರವಾತ್ಸಲ್ಯ ದಿಂದಲೇ ಕಾಪಾಡುತ್ತೇವೆ. ಅವನೂ ಪಿತೃಭಕ್ತಿಯಿಂದ ನಡೆಯುತ್ತಾನೆ. ಸಂದೇಹಪಡಬೇಡ" ಎಂದು ಹೇಳಿದ ರಾಮ.

ಮಹಾತ್ಮ ರಣಧೀರ ಧರ್ಮನಿರತ ಆದ ರಾಮನ ಸವಿನುಡಿಯನ್ನು ಕೇಳಿ ವಾಲಿ ಹೇಳಿದ: "ಪ್ರಭು, ನೀನು ಲೋಕಕ್ಕೇ ಪ್ರಭು. ದೇವೇಂದ್ರನಿಗೆ ಸಮ ನೀನು. ಶತ್ರುಭಯಂಕರ ಪರಾಕ್ರಮಿ. ನಿನ್ನ ಬಾಣದ ಬೇಗೆಯಿಂದ ನಾನು ಮೈಮರೆತೆ. ಮೈಮರೆತು ನಿನ್ನನ್ನು ನಿಂದಿಸಿದೆ. ನಿನ್ನನ್ನು ಬೇಡಿಕೊಳ್ಳುತ್ತೇನೆ. ನನ್ನನ್ನು ಮನ್ನಿಸು. ಕೋಪ ಮಾಡಿಕೊಳ್ಳಬೇಡ."

೧೯

ಸುಗ್ರೀವ ಕಲ್ಲಿನಿಂದ ಗಿಡಮರಗಳಿಂದ ಹೊಡೆದು ವಾಲಿಯ ಮೈಯನ್ನು ಹಣ್ಣುಮಾಡಿದ್ದ. ರಾಮಬಾಣ ಬೇರೆ. ಆ ನೋವಿನಿಂದ ಪ್ರಾಣಾವಸಾನದ ಆ ಸಮಯದಲ್ಲಿ ವಾಲಿ ಮೂರ್ಛೆಹೋದ.

ರಾಮಬಾಣ ನೆಟ್ಟು ವಾಲಿ ನೆಲಕ್ಕೆ ಉರುಳಿದುದನ್ನು ಅಂತಃಪುರದಲ್ಲಿ ಇದ್ದ ತಾರೆ ಕೇಳಿದಳು. ಮಹಾದಾರುಣ ಸುದ್ದಿ. ಬಹು ಅಪ್ರಿಯ. ಸುದ್ದಿ ಕೇಳಿ ತಾರೆ ಭಯದಿಂದ ನಡುಗಿದಳು. ಮಗನನ್ನು ಕರೆದುಕೊಂಡು ಗಿರಿ ಗಹ್ವರಗಳನ್ನು ಬಿಟ್ಟು ಹೊರಗೆ ಬಂದಳು.

ಅಂಗದನಿಗೆ ಅಂಗರಕ್ಷಕರು ಮಹಾಪರಾಕ್ರಮಿಗಳು ಆದ ವಾನರರು ಧನುರ್ಧಾರಿ ರಾಮನನ್ನು ನೋಡಿ ಬೆದರಿ ಊರಿನ ಒಳಕ್ಕೆ ಓಡಿಬರುತ್ತ ಇದ್ದರು. ಬೇಟೆಗಾರ ಸಲಗವನ್ನು ಕೊಂದರೆ ಮೃಗಗಳ ಗುಂಪು ಎಲ್ಲವೂ ದಿಕ್ಕೆಟ್ಟು ಚೆಲ್ಲಾಪಿಲ್ಲಿ ಆಗಿ ಓಡುವಂತೆ ಓಡುತ್ತ ಇದ್ದರು. ತಮ್ಮನ್ನು ಬೆನ್ನಟ್ಟಿಬರುತ್ತದೆ ರಾಮಬಾಣ ಎಂದು ಭಯ. ಅವರನ್ನು ನೋಡಿದಳು ತಾರೆ. "ವಾನರವೀರರೆ, ರಾಜಸಿಂಹ ವಾಲಿಯ ಅನುಚರರು ನೀವು. ಆತನನ್ನು ತೊರೆದು ಭಯದಿಂದ ಓಡುತ್ತೀರಲ್ಲ. ಏಕೆ? ಮಹಾಕಠಿನಚಿತ್ತ ಸುಗ್ರೀವ ರಾಜ್ಯಲೋಭದಿಂದ ಅಣ್ಣನನ್ನು ರಾಮನ ಕೈಯಿಂದ ಕೊಲ್ಲಿಸಿರಬಹುದು. ರಾಮನ ಬಾಣ ಎಷ್ಟು ದೂರ ಆದರೂ ಹೋಗಿ ಲಕ್ಷ್ಯವನ್ನು ಸೀಳುತ್ತದೆ. ಆದರೆ ನಿಮಗೆ ಏನು ರಾಜ್ಯವೆ, ಕೋಶವೆ? ನಿಮಗೆ ಏತರ ಭಯ?" ಎಂದಳು.

ಆ ವಾನರವೀರರು ಹೇಳಿದರು: "ಅಮ್ಮಾ ರಾಣಿ, ನಮ್ಮ ಮಾತು ಹೇಗೂ ಇರಲಿ. ನಿನಗೆ ಮಗ ಇದ್ದಾನೆ. ಅಂಗದ. ಅವನನ್ನು ಕಾಪಾಡಿಕೊ.

ರಾಮನ ಕೈಗೆ ಅವನನ್ನು ಸಿಕ್ಕಿಸಬೇಡ. ಯಮ ಬಂದಿದಾನೆ ರಾಮನ ರೂಪಿನಿಂದ. ನಮ್ಮ ಮಹಾರಾಜ ವಾಲಿಯನ್ನು ಕೊಂದ. ಸುಗ್ರೀವ ಎಷ್ಟು ಮರ ಎಸೆದ, ಎಷ್ಟು ಕಲ್ಲುಬಂಡೆಗಳನ್ನು ಎಸೆದ! ಎಲ್ಲಾ ಪುಡಿಪುಡಿ. ಆದರೆ ರಾಮನ ಬಾಣ ವಜ್ರಸಮಾನ. ಅದನ್ನು ತಡೆಯಲು ಆಗಲಿಲ್ಲ ವಾಲಿಗೆ. ದೇವೇಂದ್ರಸಮಾನ ಪರಾಕ್ರಮಿ ವಾಲಿ. ನೆಲಕ್ಕೆ ಬಿದ್ದ. ಪ್ರಾಣ ಬಿಟ್ಟ. ದೊರೆ ಬಿದ್ದ ಕೂಡಲೆ ವಾನರಸೇನೆ ಎಲ್ಲಾ ಪಲಾಯನ.

"ಮಹಾರಾಣಿ, ನಮ್ಮನ್ನು ಕಾಪಾಡು. ಈಗಲೇ ಹಿಂದಿರುಗಿ ನಗರದ್ವಾರಗಳನ್ನು ಮುಚ್ಚಿಸಿಬಿಡು. ಅಂಗದನಿಗೆ ಪಟ್ಟಕಟ್ಟು. ವಾಲಿಯ ಮಗ ಅಂಗದ. ಎಲ್ಲ ವಾನರರೂ ಅವನಿಗೆ ವಶ ಆಗುತ್ತಾರೆ. ಕೂಡಲೇ ಮಾಡಬೇಕು ಇದನ್ನು. ಶತ್ರುಭಯದಿಂದ ವಾನರರೆಲ್ಲರೂ ಬೇರೆ ದುರ್ಗಗಳಿಗೆ ಹೋದಾರು. ಈಗಾಗಲೇ ಶತ್ರುಗಳು ಊರನ್ನು ಆಕ್ರಮಿಸಿ ಇರಬಹುದು. ಹಿಂದೆ ಎಷ್ಟೋ ಮಂದಿ ವಾನರರನ್ನು ವಾಲಿ ಓಡಿಸಿದ. ಅವರಲ್ಲಿ ಹೆಂಡಿರನ್ನು ಆಗಲಿದವರು ಕೆಲವರು. ಕೆಲವರು ಸೇರಿ ಒಬ್ಬ ಹೆಂಡತಿಯನ್ನೇ ಮಾಡಿಕೊಂಡು ಇದಾರೆ. ಎಲ್ಲರೂ ಮೊದಲು ಕಿಷ್ಕಿಂಧೆಯಲ್ಲಿಯೇ ಇದ್ದವರು. ಇವರು ಎಲ್ಲರೂ ಕಾದು ಇದಾರೆ. ಅವರು ಊರಿಗೆ ಬಂದು ಸೇರಿಕೊಂಡರೆ, ದಾಯಾದಿಗಳು ಸುಗ್ರೀವಾದಿಗಳು ಬಂದರೆ ನಮ್ಮ ಗತಿ ಏನು?"

ಅಲ್ಪಮತಿಗಳು ಅವರು. ತಾರೆ ಮಹಾಬುದ್ಧಿವಂತೆ. "ವಾನರರೆ, ಮಹಾತ್ಮ ಆದ ಆ ವಾನರಸಿಂಹನೇ ಹೋದಮೇಲೆ ಈ ಮಗ ಈ ರಾಜ್ಯ ನನ್ನ ಈ ದೇಹ ಇವೆಲ್ಲ ಏಕೆ? ಏನು ಆಗಬೇಕು? ರಾಮಬಾಣದಿಂದ ನೆಲಕ್ಕೆ ಬಿದ್ದ ಆ ಮಹಾತ್ಮನ ಪಾದತಲದಲ್ಲಿ ಹೋಗಿ ಬೀಳುತ್ತೇನೆ. ನಾನೂ ಜೊತೆಯಲ್ಲಿಯೇ ಹೋಗುತ್ತೇನೆ" ಎಂದಳು. ದುಃಖ ತುಂಬಿ ಬಂತು. ಗಟ್ಟಿ ಆಗಿ ಅತ್ತಳು. ಸಂಕಟವನ್ನು ತಡೆಯಲಾರದೆ ಎರಡೂ ಕೈಗಳಿಂದ ತಲೆಯನ್ನೂ ಹೊಟ್ಟೆಯನ್ನೂ ಬಡಿದುಕೊಂಡಳು.

ಎಂದೂ ಸೋಲದ ರಾಕ್ಷಸರನ್ನು ಯುದ್ಧದಲ್ಲಿ ಕೊಂದುಹಾಕಿದ ವಾಲಿ. ವಜ್ರಾಯುಧವನ್ನು ಇಂದ್ರ ಬೀಸುವಂತೆ ದೊಡ್ಡ ಪರ್ವತಗಳನ್ನು ಎಸೆಯುತ್ತ ಇದ್ದ ವಾಲಿ. ಮಹಾಮೇಘಗಳ ಸಂಘಾತದಿಂದ ಹೊರಡುವ ಧ್ವನಿಯ ಹಾಗೆ ಗರ್ಜಿಸುವ ವಾಲಿ. ಮಹಾವಾತಗಳು ಎಲ್ಲಾ ಒಂದು ಆದಹಾಗೆ ಬಲಶಾಲಿ.

ದೇವೇಂದ್ರಸಮಾನ ಪರಾಕ್ರಮಿ. ಈಗ ನೆಲದ ಮೇಲೆ ಬಿದ್ದು ಇದಾನೆ. ತಾರೆ ಆ ಸ್ಥಳಕ್ಕೆ ಓಡಿದಳು. ಎಡೆಬಿಡದೆ ಬಹುಕಾಲ ಮಳೆಗರೆದು ಬರಿದು ಆದ ಮಳೆ ಮೋಡದ ಹಾಗೆ ಮಲಗಿದ್ದ ವಾಲಿ. ಮಾಂಸಕ್ಕಾಗಿ ಒಂದು ಸಿಂಹದಿಂದ ಹತ ಆದ ಮತ್ತೊಂದು ಸಿಂಹದಂತೆ, ಹಾವುಗಳು ಇವೆ ಎಂದು ಗರುಡ ಕೆಡವಿದ ಚೈತ್ಯವೃಕ್ಷದಂತೆ, ರಾಮಬಾಣಹತ ಆಗಿ ಬಿದ್ದಿದ್ದ ವಾಲಿ. ತಾರೆ ನೋಡಿದಳು.

ಅಲ್ಲಿಯೇ ಸಮೀಪದಲ್ಲಿ ತನ್ನ ಬಿಲ್ಲನ್ನು ಊರಿಕೊಂಡು ನಿಂತಿದ್ದ ರಾಮನನ್ನೂ ಅವನ ತಮ್ಮ ಲಕ್ಷ್ಮಣನನ್ನೂ ತನ್ನ ಗಂಡನ ತಮ್ಮ ಸುಗ್ರೀವನನ್ನೂ ನೋಡಿದಳು ತಾರೆ. ನೋಡಿದರೂ ನೋಡದಂತೆ ದಾಟಿಹೋದಳು. ಗಂಡನನ್ನು ನೋಡಿ ಅಪ್ಪಿಕೊಂಡು ದುಃಖದಿಂದ ಭ್ರಾಂತಳು ಆದಳು. ಮೂರ್ಛೆ ಬಂತು. ನೆಲದ ಮೇಲೆ ಬಿದ್ದಳು. ಸ್ವಲ್ಪ ಹೊತ್ತು ಆದಮೇಲೆ ನಿದ್ದೆಯಿಂದ ಎದ್ದವಳ ಹಾಗೆ ಎದ್ದಳು. ಆರ್ಯಪುತ್ರ ಎಂದು ಕೂಗಿದಳು. ಸಾಯುತ್ತ ಇದ್ದ ಗಂಡನನ್ನು ನೋಡಿ ಗೋಳೋ ಎಂದು ಅತ್ತಳು.

ಕುರವ ಪಕ್ಷಿಯ ಹಾಗೆ ಅಳುವ ತಾರೆಯನ್ನು, ಆಕೆಯ ಬಳಿ ದೀನತೆ ಯಿಂದ ಅಳುತ್ತ ಇದ್ದ ಅಂಗದನನ್ನು ನೋಡಿದ ಸುಗ್ರೀವ.

ಸುಗ್ರೀವನಿಗೂ ದುಃಖ ಉಕ್ಕಿಬಂತು.

೨೦

ರಾಮಬಾಣದ ಏಟಿಗೆ ಪ್ರಾಣ ಹೋಗಬೇಕಾದ್ದೇ. ವಾಲಿ ಆ ಏಟಿನಿಂದ ಎಚ್ಚರ ತಪ್ಪಿ ಬಿದ್ದಿದ್ದ. ಚಂದ್ರಮುಖಿ ತಾರೆ ವಾಲಿಯನ್ನು ಅಪ್ಪಿಕೊಂಡು ಅತ್ತಳು. ಮದ್ದಾನೆಯಂಥ ಜೀವ. ರಾಮನ ಒಂದೇ ಬಾಣಕ್ಕೆ ಬುಡ ಕಡಿದ ಮರದಂತೆ ಬಿದ್ದ. ಅದನ್ನು ನೋಡಿ ತಾರೆ ಅಳಲು ಆರಂಭಿಸಿದಳು.

"ವೀರಾಗ್ರಣಿ, ಭಯಂಕರ ಪರಾಕ್ರಮಶಾಲಿ, ವೀರಾಧಿವೀರ, ವಾನರ ಶ್ರೇಷ್ಠ, ನಿರಪರಾಧಿ ಆದ ನನ್ನ ಸಂಗಡ ಮಾತಾಡುವುದು ಇಲ್ಲವೆ? ಏಕೆ? ಹೀಗೆ ಏಕೆ ನೆಲದ ಮೇಲೆ ಮಲಗಿದೆ, ವಾನರಸಿಂಹ? ಏಳು. ರಾಜರು ಹೀಗೆ ನೆಲದ ಮೇಲೆ ಮಲಗುತ್ತಾರೆಯೆ? ಏಳು. ಒಳ್ಳೆಯ ಹಾಸಿಗೆಯ ಮೇಲೆ ಮಲಗಿಕೊ. ದೊರೆಯೆ, ಪ್ರಾಣ ಹೋದರೂ ಭೂಮಿಯನ್ನು ಬಿಡದೆಯೆ

ಅಪ್ಪಿಕೊಂಡು ಇದೀಯಲ್ಲ. ನನಗಿಂತ ಹೆಚ್ಚು ಪ್ರಿಯತಮೆ ಆದಳೆ ಭೂಮಿ? ನನ್ನಲ್ಲಿ ಇಷ್ಟು ಅನಾದರ ಏಕೆ?

“ವಾನರಾಧಿಪ, ಸ್ವರ್ಗಕ್ಕೆ ಹೋಗುವ ದಾರಿಯಲ್ಲಿ ಕಿಷ್ಕಿಂಧೆಯಂಥದೇ ಬೇರೆ ಒಂದು ಮನೋಹರ ನಗರ ನಿನ್ನ ಧರ್ಮದ ಮಹಿಮೆಯಿಂದಲೇ ನಿರ್ಮಿತ ಆಗಿ ಇದ್ದೀತು. ಇಲ್ಲದೆ ಇದ್ದರೆ ನೀನು ಈ ಊರನ್ನು ಬಿಡುತ್ತ ಇದ್ದೆಯಾ? ಮಕರಂದ ಗಂಧವನ್ನು ಬೀರುವ ವನಗಳಲ್ಲಿ ನಮ್ಮ ಜೊತೆಯಲ್ಲಿ ವಿಹರಿಸಿದೆ. ಇನ್ನು ಆ ಆಟ ಎಲ್ಲಾ ತೀರಿತೆ? ಸಲಗಗಳಿಗೆ ಸಲಗ ನೀನು. ಹೀಗೆ ಮಲಗಿದರೆ ನನಗೆ ಇನ್ನು ಎಲ್ಲಿಯ ಸಂತೋಷ? ಇನ್ನು ಯಾವ ಆಸೆ? ದುಃಖಸಮುದ್ರದಲ್ಲಿ ಮುಳುಗಿಹೋದೆ. ನೀನು ಹೀಗೆ ಮಡಿದು ಬಿದ್ದುದನ್ನು ನೋಡಿ ನನ್ನ ಎದೆ ಹೋಳು ಹೋಳು ಆಗಿ ಒಡೆಯಲಿಲ್ಲವಲ್ಲ. ಎಂಥ ಕಲ್ಲೆದೆಯೋ!

“ವಾನರೇಶ್ವರ, ತಮ್ಮ ಸುಗ್ರೀವನನ್ನು ದೇಶದಿಂದ ಓಡಿಸಿದೆ. ಆತನ ಹೆಂಡತಿಯನ್ನು ಅಪಹರಿಸಿದೆ. ಇದು ಅದಕ್ಕೆ ಫಲ. ನಿನಗೆ ಲೇಸನ್ನು ಕೋರಿ ಎಷ್ಟು ಹಿತವಚನ ಹೇಳಿದೆನೋ ನಾನು. ನಿನ್ನ ಹಿತಕಾಂಕ್ಷಿಣಿಯನ್ನು ನೀನು ಧಿಕ್ಕರಿಸಿದೆ. ಅಜ್ಞಾನದಿಂದ ನನ್ನನ್ನೇ ಬೈದೆ.

“ಆರ್ಯ, ನನ್ನ ಮಾನವನ್ನು ಕಾಪಾಡುವವನು ನೀನು. ಬಿಟ್ಟು ಹೋದೆಯಲ್ಲ ವೀರಸ್ವರ್ಗಕ್ಕೆ. ಅಲ್ಲಿ ಇದಾರೆ ರೂಪಯೌವನಸಂಪನ್ನರು ಕಾಮ ತಂತ್ರಕುಶಲೆಯರು ಆದ ಅಪ್ಸರೆಯರು. ಅವರು ನಿನಗೆ ವಶರು ಆಗುತ್ತಾರೆ. ಖಂಡಿತ. ನೀನು ಮಾತ್ರ ಯಾರಿಗೂ ವಶ ಆಗುವವನು ಅಲ್ಲ. ಅಂಥವನು ಸುಗ್ರೀವನ ಕೈಗೆ ಸಿಕ್ಕಿದೆ. ಕಾಲವೇ ಹೀಗೆ ಮಾಡಿತು. ನಿನ್ನ ಪ್ರಾಣ ತೆಗೆಯಲಿಕ್ಕೇ ಕಾಲ ಹೀಗೆ ನಿನ್ನನ್ನು ಸೆಳೆತಂದಿತು. ನಿಸ್ಸಂಶಯ.

“ಪ್ರಭು, ಇದುವರೆಗೆ ಎಂದೂ ದುಃಖವನ್ನು ಅರಿತವಳು ಅಲ್ಲ ನಾನು. ದೈನ್ಯವನ್ನು ಅರಿಯಲಿಲ್ಲ. ಈಗ ದಿಕ್ಕು ಇಲ್ಲದೆ ದೀನೆ ದುಃಖಿ ವಿಧವೆ ಆಗಿ ಬದುಕಬೇಕೆ? ನಿನ್ನ ಮಗ ಈ ಅಂಗದ ಎಳೆತನದಿಂದಲೂ ಬಲು ಮುದ್ದು ಆಗಿ ಬೆಳೆದವನು. ಸುಖದಲ್ಲಿ ಬೆಳೆದ. ಸುಕುಮಾರ. ದಾಯಾದಿಮತ್ಸರದಿಂದ ಚಿಕ್ಕಪ್ಪ ಸುಗ್ರೀವ ಕೋಪಿಸಿಕೊಂಡರೆ ಹೇಗೆ? ಇವನ ಗತಿ ಏನು? ಏನು ದುರವಸ್ಥೆಯೋ ಇವನಿಗೆ?

“ಅಂಗದ, ಮಗನೆ, ಬಾ. ನಿನ್ನನ್ನು ಮುದ್ದು ಆಗಿ ಬೆಳೆಸಿದ ನಿನ್ನ ತಂದೆಯನ್ನು ಚೆನ್ನಾಗಿ ನೋಡಿಬಿಡು. ಇದೇ ಕಟ್ಟಕಡೆಯ ದರ್ಶನ. ಇನ್ನು ನಿನಗೆ ತಂದೆಯ ದರ್ಶನ ಇಲ್ಲ. ನಲ್ಲ, ನಿನ್ನ ಮಗನಿಗೆ ಹೇಳು. ನಿನ್ನ ಪರಲೋಕಪ್ರಯಾಣದ ಸುದ್ದಿ ಹೇಳಿ ಅವನನ್ನು ಸಮಾಧಾನಪಡಿಸು. ಅವನ ತಲೆಯನ್ನು ಮೂಸಿನೋಡಿ ಬುದ್ಧಿವಾದ ಹೇಳು. ಪ್ರಭು, ನಿನ್ನನ್ನು ಕೊಂದು ರಾಮ ತನ್ನ ಮಾತನ್ನು ನಡೆಸಿದ. ಋಣಮುಕ್ತ ಆದ.

“ಸುಗ್ರೀವ, ನಿನ್ನ ಕೋರಿಕೆ ಕೈಗೂಡಿತೆ? ನಿನ್ನ ಶತ್ರು–ನಿಮ್ಮ ಅಣ್ಣನನ್ನು ಕೊಂದದ್ದು ಆಯಿತಲ್ಲ. ಇನ್ನು ಈ ವಾನರ ರಾಜ್ಯವನ್ನು ನಿಷ್ಕಂಟಕ ಆಗಿ ಅನುಭವಿಸು. ಹಾಯಿ ಆಗಿ ರುಮೆಯನ್ನು ಅನುಭವಿಸು.

“ವಾನರಾಧಿಪ, ನಾನು ಇಷ್ಟು ಗೋಳಿಡುತ್ತ ಇದ್ದರೂ ನೀನು ಒಂದು ಮಾತನ್ನೂ ಆಡಲು ಒಲ್ಲೆ ಏಕೆ? ಪ್ರೀತಿ ಇಲ್ಲವೆ? ನನ್ನಲ್ಲಿ ಪ್ರೀತಿ ಇಲ್ಲದೆ ಇದ್ದರೂ ಇತರ ಪತ್ನಿಯರು ಬಂದಿದಾರಲ್ಲ. ಅವರನ್ನು ಆದರೂ ನೋಡಬಾರದೆ?”

ತಾರೆ ಗೋಳೋ ಎಂದು ಅಳುತ್ತ ಇದ್ದಳು. ವಾಲಿಯ ಹೆಂಡತಿಯರು ಎಲ್ಲರೂ ಅಂಗದನನ್ನು ಅಪ್ಪಿಕೊಂಡು ಅಳಲು ಆರಂಭಿಸಿದರು. ತಾರೆ ಮತ್ತೆ ವಾಲಿಯನ್ನು ನೋಡಿ ಹೀಗೆ ಎಂದಳು: “ಒಡೆಯ, ಈ ಅಂಗದ ನಿನ್ನ ಮುದ್ದುಮಗ. ನಿನ್ನ ಗುಣಗಳೇ ಅವನ ಗುಣಗಳು. ತಂದೆಯ ಹಾಗೇ ಮಗ. ಇಂಥ ಮಗನನ್ನು ಬಿಟ್ಟು ಹೊರಟುಹೋಗಬಹುದೆ? ದೀರ್ಘ ಪ್ರಯಾಣಕ್ಕೆ ಸಿದ್ಧ ಆದೆಯಲ್ಲ ಅವನನ್ನು ಬಿಟ್ಟು. ನಿನಗೆ ಇದು ಸರಿ ಅಲ್ಲ.

“ನಲ್ಲ, ನಾನು ಆಗಲಿ ಅಂಗದ ಆಗಲಿ ನಿನಗೆ ಏನು ಆದರೂ ಎಂದು ಆದರೂ ಅಪರಾಧ ಮಾಡಿದೆವೆ? ಇಲ್ಲವಲ್ಲ. ಒಂದುವೇಳೆ ಹಾಗೆ ತಿಳಿಯದೆ ಮಾಡಿದೆನೋ ಏನೋ. ಮನ್ನಿಸು ದೊರೆ. ನಿನ್ನ ಕಾಲಿಗೆ ಬೀಳುತ್ತೇನೆ.

ಅಳುತ್ತ ಅಳುತ್ತ ಸವತಿಯರ ನಡುವೆ ಇದ್ದ ತಾರೆಗೆ ಸಂಕಟ ತಡೆಯಲು ಆಗಲಿಲ್ಲ. ಪ್ರಾಯೋಪವೇಶಮಾಡಿ ಗಂಡನ ಜೊತೆಗೇ ತಾನೂ ಸಾಯಬೇಕು ಎಂದು ನಿಶ್ಚಯಿಸಿದಳು. ಗಂಡ ಮಡಿದು ಬಿದ್ದ ಕಡೆಯೇ ತಾನೂ ಮಡಿಯಲು ನಿರ್ಧರಿಸಿದಳು.

೨೧

ಮುಗಿಲಿನಿಂದ ತಾರೆ ಬಿದ್ದಹಾಗೆ ತಾರೆ ನೆಲದಲ್ಲಿ ಬಿದ್ದು ಹೊರಳಾಡುವುದನ್ನು ಹನುಮಂತ ನೋಡಿದ. ಆಕೆಯನ್ನು ಸಮಾಧಾನಪಡಿಸುತ್ತ "ಪೂಜ್ಯೆ, ದುಃಖಿಸಬೇಡ. ಪ್ರತಿ ಒಬ್ಬರೂ ತಮ್ಮ ಗುಣದೋಷಗಳಿಗೆ ತಕ್ಕಂತೆ ಪುಣ್ಯ ಕರ್ಮ ಪಾಪಕರ್ಮಗಳನ್ನು ಮಾಡುತ್ತಾರೆ. ಅದಕ್ಕೆ ತಕ್ಕಂತೆ ಪರಲೋಕದಲ್ಲಿ ಸುಖದುಃಖ. ಅದನ್ನು ತಪ್ಪಿಸಲು ಆಗದು. ಹೋದವರಿಗಾಗಿ ಅತ್ತು ಫಲ ಏನು? ಯಾರಿಗೆ ಯಾರು ಅಳಬೇಕು? ಈಗ ನಿನ್ನ ಚಿಂತೆಯನ್ನು ಮಾಡು ನೀನು.

"ತಾರೆ, ನೀನು ಈಗ ದೀನಳು. ದಿಕ್ಕು ಇಲ್ಲದವಳು. ಯಾರಿಗೆ ಆಗಿ ಹೀಗೆ ಅಳುತ್ತೀಯೆ? ಈ ನರದೇಹ ನೀರಿನ ಗುಳ್ಳೆ. ಕ್ಷಣಭಂಗುರ. ಎಲ್ಲರ ಬದುಕೂ ಹೀಗೇ. ಯಾರಿಗೆ ಆಗಿ ಯಾರು ಅಳಬೇಕು? ಸಾಕು ದುಃಖ.

"ರಾಣಿ, ನಿನ್ನ ಮಗನನ್ನು ನೋಡು. ಅವನನ್ನು ಚೆನ್ನಾಗಿ ಕಾಪಾಡು. ಅವನ ಏಳಿಗೆಗೆ ಏನು ಮಾಡಬೇಕೋ ಯೋಚಿಸು. ನೀನು ಅರಿತವಳು. ಹುಟ್ಟುಸಾವು ಅಸ್ಥಿರ. ನೀನು ಬಲ್ಲೆ. ನೀನು ನೀತಿಜ್ಞಳು. ಅಳಬೇಡ. ಅತ್ತು ಏನು ಲಾಭ? ವಾಲಿಗೆ ಪರಲೋಕದಲ್ಲಿ ಶ್ರೇಯಸ್ಸು ಆಗಬೇಕು. ಅದಕ್ಕೆ ಏನು ಮಾಡಬೇಕೋ ಕರ್ಮ, ಅಂಗದನಿಂದ ಮೊದಲು ಮಾಡಿಸು. ವಾಲಿಯ ಆಶ್ರಯದಲ್ಲಿ ಅರ್ಬುದ ಅರ್ಬುದ ವಾನರರು ಜೀವಿಸುತ್ತ ಇದ್ದರು. ವಾಲಿ ಈಗ ಇಲ್ಲ. ಆತ ಸಕಲ ಶಾಸ್ತ್ರಗಳನ್ನೂ ಬಲ್ಲವನು. ಸಾಮ ದಾನ ಕ್ಷಮೆಗಳಿಂದ ರಾಜ್ಯ ಮಾಡಿದ. ತನ್ನ ಧರ್ಮಬಲದಿಂದಲೇ ಸದ್ಗತಿಹೊಂದಿದ. ಅವನ ಚಿಂತೆ ಮಾಡಬೇಕಾಗಿಲ್ಲ ನೀನು.

"ಗುಣವತಿ, ದುಃಖಿಸಬೇಡ. ಈ ವಾನರೋತ್ತಮರೂ ಅಂಗದನೂ ವಾನರರಾಜ್ಯವೂ ಇನ್ನು ನಿನ್ನ ಅಧೀನ. ಅಂಗದ ಈ ರಾಜ್ಯವನ್ನು ನಡಸುವಂತೆ ಮಾಡು. ಲೋಕದಲ್ಲಿ ಪುತ್ರಸಂತಾನವನ್ನು ಕೋರುವುದು ಏಕೆ? ಮೊದಲು ವಾಲಿಗೆ ಪರಲೋಕ ಕ್ರಿಯೆಗಳನ್ನು ಮಾಡಲಿ ಅಂಗದ. ಆಮೇಲೆ ಅಂಗದನಿಗೆ ಪಟ್ಟಾಭಿಷೇಕ ಆಗಲಿ. ಇವು ಎರಡೂ ಈಗ ನಡೆಯಬೇಕು. ಮಗ ಸಿಂಹಾಸನ ಏರಿದ್ದನ್ನು ನೋಡಿದರೆ ನಿನ್ನ ದುಃಖ ನೀಗುತ್ತದೆ" ಎಂದ.

ಗಂಡನ ಸಾವಿನಿಂದ ದುಃಖಪಡುತ್ತ ಇದ್ದ ತಾರೆ ಹನುಮಂತನ ಮಾತನ್ನು ಕೇಳಿದಳು. "ಹನುಮಂತ, ಅಂಗದನಂಥ ನೂರು ಮಕ್ಕಳು ಇದ್ದರೂ ಏನು? ಅದಕ್ಕಿಂತಲೂ ಸತ್ತು ಬಿದ್ದ ಈ ವೀರನ ಗಾಢಾಲಿಂಗನವೇ ನನಗೆ ಹೆಚ್ಚು. ವಾಲಿಗೆ ಪ್ರೇತಸಂಸ್ಕಾರಗಳನ್ನು ಮಾಡಿಸುವುದು ಅಂಗದನಿಗೆ ಪಟ್ಟಾಭಿಷೇಕಮಾಡುವುದು ನನ್ನ ಕೆಲಸ ಅಲ್ಲ. ನಾನು ಹೆಂಗಸು. ಅಂಗದ ಉಂಟು, ಅವನ ಚಿಕ್ಕಪ್ಪ ಸುಗ್ರೀವ ಉಂಟು. ಅವನದು ಈ ಕೆಲಸ.

"ಇದರಲ್ಲಿ ನನ್ನ ಕೆಲಸ ಏನೂ ಇಲ್ಲ. ಯೋಚಿಸಬೇಕಾದ್ದೂ ಏನೂ ಇಲ್ಲ. ಮಗನಿಗೆ ದಿಕ್ಕು ತಂದೆ. ತಾಯಿ ಅಲ್ಲ. ತಂದೆ ಇಲ್ಲದೆ ಹೋದರೆ ಚಿಕ್ಕಪ್ಪ. ವಾನರರಾಜ ವಾಲಿಯ ಪಾದವನ್ನು ಆಶ್ರಯಿಸುವುದೇ ನನಗೆ ಶ್ರೇಯಸ್ಸು. ಇಲ್ಲಿ ಆಗಲಿ, ಅಲ್ಲಿ ಆಗಲಿ. ಇದಕ್ಕಿಂತ ಬೇರೆ ಶ್ರೇಯಸ್ಕರ ಆದುದು ಇಲ್ಲ. ಶತ್ರುವನ್ನು ಇದಿರಿಸಿ ವೀರ ವಾಲಿ ಹತ ಆಗಿ ಬಿದ್ದು ಇರುವ ಈ ನೆಲವೇ ನನಗೂ ಮಲಗಲು ಯೋಗ್ಯ.

"ಆತನ ಹಿಂದೆಯೇ ನಾನೂ. ನಿಶ್ಚಯಿಸಿದೇನೆ" ಎಂದಳು.

೨೨

ವಾಲಿಗೆ ಕೊನೆ ಉಸಿರು. ಮೂರ್ಛೆಯಿಂದ ಸ್ವಲ್ಪ ಎಚ್ಚರಗೊಂಡ. ಸುತ್ತಲೂ ನೋಡಿದ ನಿಟ್ಟುಸಿರು ಬಿಡುತ್ತ. ಇದಿರಿಗೆ ಅಂಗದ ಸುಗ್ರೀವ ಕಾಣಿಸಿದರು. ಗೆದ್ದು ನಿಂತು ಇದ್ದ ಸುಗ್ರೀವನನ್ನು ಸ್ನೇಹಪೂರ್ವಕ ಹತ್ತಿರಕ್ಕೆ ಕರೆದ. ಸ್ಪಷ್ಟ ಆಗಿ ಸ್ನೇಹದ ಮಾತಿನಿಂದ ಅವನಿಗೆ ಹೇಳಿದ: "ತಮ್ಮ, ಸುಗ್ರೀವ, ಇನ್ನು ನನ್ನ ದೋಷವನ್ನು ಎಣಿಸಬೇಡ. ವಿಧಿ ಹೀಗೆ ಇತ್ತು. ನನ್ನ ಬುದ್ಧಿ ಕೆಟ್ಟು ಹೀಗೆ ನಡೆದುಹೋಯಿತು. ವಿಧಿಯ ಸೆಳೆತ ಅದು. ನಾವು ಇಬ್ಬರೂ ಒಟ್ಟಿಗೆ ರಾಜ್ಯಸುಖವನ್ನು ಅನುಭವಿಸುತ್ತ ಅಣ್ಣತಮ್ಮಂದಿರಿಗೆ ಬೇಕಾದ ಪ್ರೀತಿಯಿಂದ ಇರಬಾರದು ಎಂಬುದೇ ದೈವಸಂಕಲ್ಪವೋ ಏನೋ. ಆದದ್ದು ಆಗಿ ಹೋಯಿತು. ಈಗ ನಾನು ಹೇಳುವುದನ್ನು ಕೇಳು.

"ಈಗ ನಾನು ಯಮಲೋಕಕ್ಕೆ ಹೊರಡುತ್ತ ಇದೇನೆ. ನನ್ನ ರಾಜ್ಯ, ಅಖಂಡ ಐಶ್ವರ್ಯ, ಅಜಯ್ಯ ಎಂಬ ಪ್ರಖ್ಯಾತಿ, ಪ್ರಾಣ ಎಲ್ಲವನ್ನೂ ಬಿಟ್ಟು

ಹೋಗುತ್ತ ಇದೇನೆ. ಈ ವಾನರರಾಜ್ಯವನ್ನು ತೆಗೆದುಕೊ. ಅದನ್ನು ನೀನು ಪರಿಪಾಲಿಸು. ನಾನು ಈಗ ಹೇಳುವ ಮಾತು ನಡಸಲು ಕಷ್ಟ ಆಗಿ ಕಂಡರೂ ಪ್ರಯತ್ನಪಟ್ಟು ಮಾಡು. ಈ ಅಂಗದನನ್ನು ನಿನ್ನ ಹೊಟ್ಟೆಯ ಮಗನ ಹಾಗೇ ಕಾಪಾಡು. ಚಿಕ್ಕಂದಿನಿಂದಲೂ ಸುಖದಲ್ಲಿ ಬೆಳೆದ ಹುಡುಗ. ಕಣ್ಣೀರು ಸುರಿಸುತ್ತ ನೆಲದ ಮೇಲೆ ಹೊರಳುತ್ತ ಇದಾನೆ. ನನಗೆ ಪ್ರಾಣಕ್ಕಿಂತಲೂ ಹೆಚ್ಚು. ಇವನನ್ನು ನಿನಗೆ ಒಪ್ಪಿಸುತ್ತೇನೆ. ತಂದೆ ಇಲ್ಲದ ತಬ್ಬಲಿಯನ್ನು ಮಾಡಬೇಡ. ಅವನಿಗೆ ಯಾವ ರೀತಿಯಲ್ಲೂ ಕೊರತೆ ಆಗದಂತೆ ನೀನೇ ತಂದೆ, ನೀನೇ ರಕ್ಷಕ ಆಗಿ ನಡಸು. ಅಭಯ ನೀಡು. ಬೇರೆ ಯಾರು ದಿಕ್ಕು ಅವನಿಗೆ.

"ಸುಗ್ರೀವ, ಅಂಗದಕುಮಾರ ಮಹಾತೇಜಸ್ವಿ. ಪರಾಕ್ರಮದಲ್ಲಿ ನಿನಗೆ ಸಮ. ರಾಕ್ಷಸರ ಸಂಗಡ ಯುದ್ಧಮಾಡುವ ಪ್ರಸಂಗ ಬಂದರೆ ಇವನು ನಿನಗಿಂತ ಮುಂದೆ. ಹುಡುಗ ಆದರೂ ಬಲಾಢ್ಯ. ವೇಗಶಾಲಿ. ಯುದ್ಧಕ್ಕೆ ನಿಂತರೆ ನಮ್ಮ ವಂಶಕ್ಕೆ ತಕ್ಕ ಶೌರ್ಯವನ್ನು ತೋರಿಸಿಯಾನು.

"ಸುಗ್ರೀವ, ಸುಷೇಣನ ಮಗಳು ತಾರೆ. ಸೂಕ್ಷ್ಮ ವಿಷಯಗಳನ್ನು ಅರಿತು ಮುಂದೆ ಬರುವ ಕಷ್ಟಸಂಕಟಗಳನ್ನು ತಿಳಿದುಕೊಳ್ಳಬಲ್ಲಳು. ಮುಂದಿನ ಕರ್ತವ್ಯಗಳನ್ನು ನಿರ್ಧರಿಸುವ ಚಾತುರ್ಯ ಇವಳದು. ಮುಂದೆ ಇಂಥ ಆಪತ್ತು ಬರುತ್ತದೆ ಎಂದು ನಿರ್ಣಯಪೂರ್ವಕ ಹೇಳಬಲ್ಲ ಜ್ಞಾನಿ. ಇದು ಒಳ್ಳೆಯದು ಎಂದು ಇವಳು ಹೇಳಿದರೆ ಸಂದೇಹ ಇಲ್ಲದೆ ಅದನ್ನು ಮಾಡಬಹುದು. ಅದರಂತೆ ತಪ್ಪದೆ ನಡೆದೇ ತೀರುತ್ತದೆ. ಇವಳ ಮಾತಿನಂತೆ ನೀನು ನಡೆ, ತಮ್ಮ.

"ಸುಗ್ರೀವ, ರಾಮನ ಕೆಲಸವನ್ನು ಖಂಡಿತ ನಡೆಸಿಕೊಡು. ಯಾವ ಸಂಶಯವೂ ಬೇಡ. ಮಾಡದಿದ್ದರೆ ಅದು ಅಧರ್ಮ. ಮಾತಿಗೆ ತಪ್ಪಿದೆಯೋ ರಾಮಪ್ರಭು ನಿನ್ನನ್ನು ಕೊಲ್ಲುತ್ತಾನೆ. ಚೆನ್ನಾಗಿ ತಿಳಿದುಕೊ.

"ತಮ್ಮ, ದೇವೇಂದ್ರ ನನಗೆ ಈ ಕಾಂಚನ ಮಾಲಿಕೆಯನ್ನು ಕೊಟ್ಟ. ನಾನು ಸತ್ತಾಗ ನನ್ನ ಮೈಮೇಲೆ ಇದು ಇದ್ದರೆ ಇದರ ಕಾಂತಿ ಎಲ್ಲವೂ ಅಳಿಯುತ್ತದೆ. ಈಗಲೇ ನೀನು ಇದನ್ನು ತೆಗೆದುಕೊ."

ವಾಲಿ ಸುಗ್ರೀವನಿಗೆ ಆ ಮಾಲಿಕೆಯನ್ನು ಕೊಟ್ಟ. ಅಣ್ಣನ ಭ್ರಾತೃ ವಾತ್ಸಲ್ಯವನ್ನು ಕಂಡು ಸುಗ್ರೀವನ ಕಣ್ಣಿನಲ್ಲಿ ನೀರು ಹರಿಯಿತು. ತಾನು ಗೆದ್ದೆ ಎಂಬ ಸಂತೋಷ ಹಾರಿಹೋಯಿತು. ರಾಹುಗ್ರಸ್ತ ಚಂದ್ರನಹಾಗೆ ಕಳೆಗುಂದಿದ.

ಅಂಗದನನ್ನು ಹತ್ತಿರಕ್ಕೆ ಕರೆದ ವಾಲಿ. "ಅಪ್ಪ, ಅಂಗದ, ಇನ್ನು ನೀನು ಸುಗ್ರೀವನ ಮಾತಿನಂತೆ ನಡೆ. ಕಾಲದೇಶಗಳನ್ನು ಅರಿತು ನಡೆ. ಪ್ರಿಯ ಅಪ್ರಿಯ ಎಂದು ಯೋಚಿಸಬೇಡ. ಪ್ರಭುವಾಕ್ಯದಂತೆ ನಡೆ. ಸುಖ ಬರಲಿ ದುಃಖ ಬರಲಿ ಒಂದೇ ರೀತಿ ಆಗಿ ನಡೆಯಬೇಕು. ಸುಗ್ರೀವನ ಶತ್ರುಗಳ ಸಂಗಡ ಅವರ ಕಡೆಯವರ ಸಂಗಡ ಸೇರಬೇಡ. ಪ್ರಭು ಸುಗ್ರೀವ. ಅವನಿಗೆ ಅಧೀನ ಆಗಿ ಸದಾ ನಡೆ. ಅವನ ಅಭಿವೃದ್ಧಿಯಲ್ಲೇ ಯಾವಾಗಲೂ ದೃಷ್ಟಿ ಇರಲಿ. ಜಿತೇಂದ್ರಿಯ ಆಗು. ಯಾರೊಡನೆಯೂ ಅತಿಸ್ನೇಹ ಬೇಡ. ಸ್ನೇಹವೇ ಇಲ್ಲದಂತೆ ಬಿಗಿದು ಕೂಡಲೂ ಬೇಡ. ಎರಡೂ ತಪ್ಪೇ. ಎಲ್ಲದರಲ್ಲೂ ಅತಿಯನ್ನು ಬಿಡಬೇಕು. ಮಧ್ಯ ರೀತಿಯಲ್ಲಿ ನಡೆಯಬೇಕು" ಎಂದು ಮಗನಿಗೆ ಹೇಳಿದ.

ಹೆಚ್ಚುತ್ತ ಬಂತು ರಾಮಬಾಣದ ಬಾಧೆ. ಕಣ್ಣು ವೇಗದಿಂದ ತಿರುಗಿದವು. ಬಾಯಿ ಬಿಟ್ಟ ಅಗಲ ಆಗಿ. ಭಯಂಕರ ಆದ ಹಲ್ಲು ತೆರೆದು ಕಂಡವು. ಪ್ರಾಣ ಹೋಯಿತು.

ಅಲ್ಲಿ ಇದ್ದ ವಾನರವೀರರು ಎಲ್ಲರೂ ಗೋಳೋ ಎಂದು ಅತ್ತರು. "ವಾನರೇಶ್ವರವಾಗಿ ಸ್ವರ್ಗಸ್ಥ ಆದ. ಇನ್ನು ಕಿಷ್ಕಿಂಧೆ ಹಾಳು ಬಿತ್ತು. ಇಲ್ಲಿನ ಉದ್ಯಾನಗಳು ಬೆಟ್ಟಗಳು ಕಾಡುಗಳು ಎಲ್ಲವೂ ಹಾಳು ಬಿದ್ದವು. ಇನ್ನು ವಾನರರ ಕಾಂತಿ ಕುಂದಿತು. ವಾಲಿ ನಡೆಯುವ ವೇಗಕ್ಕೆ ಅಡವಿಯಲ್ಲಿ ಹೂಗೊಂಚಲುಗಳು ಆತನ ಹಿಂದೆ ಮುಂದೆ ಹಾರುತ್ತ ಇದ್ದವು. ಇನ್ನು ಹಾಗೆ ನಡೆಯಬಲ್ಲವರು ಯಾರು? ಯಾರನ್ನು ಕಂಡು ಈ ಹೂಗೊಂಚಲು ಹೆದರಿ ಹಿಂಬಾಲಿಸುತ್ತವೆ ಇನ್ನು?

"ಎಂಥ ವೀರಾಧಿವೀರ ವಾಲಿ! ಮಹಾಭುಜ ಗೋಲಭ ಗಂಧರ್ವನ ಸಂಗಡ ಹದಿನೈದು ವರ್ಷ ಹಗಲೂ ಇರುಳೂ ಹೋರಾಡಿದ. ಹದಿನಾರನೆ ವರ್ಷದಲ್ಲಿ ಅವನನ್ನು ಕೊಂದ. ಲೋಕಕ್ಕೆ ಎಲ್ಲಾ ಅಭಯ ನೀಡಿದ. ಇಂಥ ಭಯಂಕರ ಪರಾಕ್ರಮಿ ವಾನರಸಿಂಹ ಹೇಗೆ ಮಡಿದನೋ" ಎಂದು ಅತ್ತರು.

ಗೊಂಡಾರಣ್ಯಕ್ಕೆ ಬಂದ ಸಿಂಹ ಗೂಳಿಯನ್ನು ಕೊಂದರೆ ಹಸುಗಳು ಎಲ್ಲವೂ ಕೂಗಿಕೊಳ್ಳುತ್ತವೆ. ರಾಮ ವಾಲಿಯನ್ನು ಕೊಂದಾಗಲೂ ಹಾಗೆಯೇ ವಾನರರು ಎಲ್ಲರೂ ವಾಲಿಯ ಸುತ್ತ ನಿಂತು ಗೋಳಿಡುತ್ತ ಇದ್ದರು.

ತನ್ನ ಗಂಡನ ಮುಖವನ್ನು ಮುದ್ದು ಇಡುತ್ತ ಅವನನ್ನು ಅಪ್ಪಿಕೊಳ್ಳುತ್ತ ಇದ್ದಳು ತಾರೆ. ದುಃಖಸಮುದ್ರದಲ್ಲಿ ಮುಳುಗಿದಳು. ನೆಲಕ್ಕೆ ಉರುಳಿ ಬಿದ್ದರೂ ಮರ, ಅದನ್ನು ಬಿಡದೆ ಅಪ್ಪಿದ ಬಳ್ಳಿಯ ಹಾಗೆ ವಾಲಿಯ ದೇಹವನ್ನು ಅಪ್ಪಿಕೊಂಡು ನೆಲದಲ್ಲಿ ಹೊರಳುತ್ತ ಇದ್ದಳು.

೨೩

ಸ್ವರ್ಗಸ್ಥ ಆದ ವಾನರೇಂದ್ರ ವಾಲಿಯ ಮುಖವನ್ನು ಮೂಸಿದಳು ತಾರೆ. "ವೀರಾಗ್ರಣಿ, ನನ್ನ ಮಾತನ್ನು ಕೇಳಲಿಲ್ಲ ನೀನು. ನೊರಜುಕಲ್ಲಿನ ಹಳ್ಳತಿಟ್ಟು ನೆಲದಲ್ಲಿ ನೀನು ಮಲಗಬೇಕಾಯಿತೆ? ದೊರೆಯೆ, ನನಗಿಂತ ಈ ಭೂಮಿಯೇ ನಿನಗೆ ಹೆಚ್ಚು ಪ್ರಿಯಳೆ? ಭೂಮಿಯನ್ನು ಅಪ್ಪಿದ ಮಾತ್ರಕ್ಕೆ ನನ್ನ ಸಂಗಡ ಒಂದು ಮಾತನ್ನೂ ಆಡಬಾರದೆ?

"ಅಯ್ಯೋ, ಎಂಥ ಘಟನೆ! ನಿನ್ನ ಕೈಯಲ್ಲಿ ಏಟು ತಿಂದು ಹೆದರಿ ಓಡಿ ಹೋಗುತ್ತ ಇದ್ದ ಸುಗ್ರೀವ ಇವತ್ತು ನಿನಗಿಂತ ಪರಾಕ್ರಮಿ ಆದನೆ? ದೈವಗತಿ ವಿಚಿತ್ರ! ಒಡೆಯ, ವಾನರಶ್ರೇಷ್ಠರೂ ಭಲ್ಲೂಕವೀರರೂ ನಿನ್ನ ಸುತ್ತ ನಿಂತು ಗೋಳಾಡುತ್ತ ಇದಾರೆ. ನಿನ್ನ ಮಗ ಅಂಗದ ಅಳುತ್ತ ಇದಾನೆ. ನಾನೂ ಅಳುತ್ತಾ ಇದೇನೆ. ಇದು ಯಾವುದೂ ನಿನಗೆ ಕೇಳಿಸದೆ? ಗಟ್ಟಿ ಆಗಿ ಕೂಗುತ್ತ ಇದೇವಲ್ಲ. ನಿನಗೆ ಎಚ್ಚರ ಆಗದೆ?

"ಶೂರ, ಹಿಂದೆ ನಿನ್ನ ವೈರಿಗಳನ್ನು ಕೊಂದು ಎಲ್ಲಿ ಮಲಗಿಸುತ್ತ ಇದ್ದೆಯೊ ಅಲ್ಲಿ ನೀನೇ ಮಲಗುವಂತೆ ಆಯಿತೆ? ಯುದ್ಧಪರಾಯಣ ನೀನು. ಯುದ್ಧದಲ್ಲೇ ನಿನಗೆ ಸಾವು ಬಂತು. ನನ್ನನ್ನು ಒಂಟಿ ಆಗಿ ಬಿಟ್ಟುಹೋದೆ. ತಿಳಿದವರು ಯಾರೂ ವೀರನಿಗೆ ಮಗಳನ್ನು ಕೊಡಬಾರದು. ನೀನು ಶೂರ. ನಿನ್ನ ಕೈಹಿಡಿದುದರಿಂದ ಅಲ್ಲವೆ ನನಗೆ ಈ ಗತಿ? ನನ್ನ ಮಾನ ಮರ್ಯಾದೆ ಕುಂಕುಮ ಎಲ್ಲವೂ ಹಾಳು. ಶಾಶ್ವತ ಆದ ಪತಿಶುಶ್ರೂಷೆಯ ಸದ್ಗತಿಯೂ ಹೋಯಿತು. ಆಳ ಅಗಲ ಆದ ದುಃಖಸಾಗರದಲ್ಲಿ ಮುಳುಗಿ ಹೋದೆ. ಸತ್ತುಬಿದ್ದ ಗಂಡನನ್ನು ನೋಡಿಯೂ ನನ್ನ ಎದೆ ಹೋಳು ಹೋಳು ಆಗಿ ಸಿಡಿಯಲಿಲ್ಲ. ಕಲ್ಲು ನನ್ನ ಎದೆ. ಇಲ್ಲದೆ ಇದ್ದರೆ ನಿನ್ನ ಸಾವಿನಿಂದ ಇದು

ಹಿಡಿದು ಹೋಗಬಾರದೆ? ನೀನು ನನ್ನ ಗಂಡ. ನನ್ನ ಗೆಳೆಯ. ನನ್ನ ನಲುಮೆಯ ನಲ್ಲ.

"ಮಹಾಪರಾಕ್ರಮಶಾಲಿ ನೀನು. ಶೂರ. ನಿನಗೂ ಇಂಥ ಸಾವೆ? ಗಂಡ ಹೋದಮೇಲೆ ಹೆಂಗಸು ಮುಂಡೆ. ಮಕ್ಕಳು ಎಷ್ಟು ಮಂದಿ ಇದ್ದರೆ ಏನು? ಧನಧಾನ್ಯಸಮೃದ್ಧಿ ಇದ್ದರೆ ಏನು? ವೈಧವ್ಯ ತಪ್ಪದು.

"ನಾಥ, ನಿನ್ನ ದೇಹದಿಂದಲೇ ಹೊರಟದ್ದು ಈ ರಕ್ತಪ್ರವಾಹ. ಇದರಲ್ಲಿ ನೀನು ಮಲಗಿ ಇದ್ದರೆ ಅರಗಿನ ಬಣ್ಣದ ಮಗ್ಗಲು ಹಾಸಿಗೆಯ ಮೇಲೆ ಮಲಗಿದಂತೆ ಇದೆ. ವಾನರೋತ್ತಮ, ನಿನ್ನ ಮೈಗೆ ದೂಳು ಅಂಟಿ ಇದೆ. ನೆತ್ತರು ಸೋರುತ್ತ ಇದೆ ಮೈಯಿಂದ. ನನ್ನ ತೋಳುಗಳಿಂದ ಅಪ್ಪಿಕೊಳ್ಳಲು ಆಗುತ್ತ ಇಲ್ಲವಲ್ಲ. ರಾಮನ ಒಂದು ಬಾಣ ನಿಮ್ಮ ಭಯಂಕರ ವೈರವನ್ನು ಮುಗಿಸಿತು. ಸುಗ್ರೀವ ಕೃತಕೃತ್ಯ ಆದ. ನಿರ್ಭಯ ಆದ. ನಾಥ, ನಿನ್ನನ್ನು ಬಿಗಿದು ಅಪ್ಪಿಕೊಳ್ಳೋಣ ಎಂದರೆ ನಿನ್ನ ಎದೆಗೆ ಚುಚ್ಚಿಕೊಂಡು ಇರುವ ಈ ಬಾಣ ಅಡ್ಡಬರುತ್ತ ಇದೆ. ಕಣ್ಣುತುಂಬಾ ನೋಡಿಯೆ ಆಸೆ ತೀರಿಸಿಕೊಳ್ಳ ಬೇಕು ಈಗ" ಎಂದು ಅತ್ತಳು.

ಆಗ ವಾನರಶ್ರೇಷ್ಠ ನೀಲ ಮುಂದೆ ಬಂದ. ಬೆಟ್ಟದ ಗವಿಯಲ್ಲಿ ಅಡಗಿಕೊಂಡ ಹಾವನ್ನು ಹೊರಕ್ಕೆ ಎಳೆಯುವಂತೆ ವಾಲಿಯ ಎದೆಯಲ್ಲಿ ನೆಟ್ಟು ಇದ್ದ ರಾಮಬಾಣವನ್ನು ಕಿತ್ತುಬಿಟ್ಟ. ಅಸ್ತಾಚಲದಿಂದ ಹೊರಟುಬರುವ ಸೂರ್ಯಕಾಂತಿಯ ಹಾಗೆ ಹೊಳೆಯಿತು ಆ ಬಾಣ. ವಾಲಿಯ ಮೈ ಎಲ್ಲಾ ಗಾಯ. ಆ ಗಾಯಗಳಿಂದ ಸೋರಿದ ರಕ್ತಧಾರೆ ಕೆಮ್ಮಣ್ಣು ಕಲೆತು ಬೆಟ್ಟದಿಂದ ಇಳಿಯುವ ಮಳೆನೀರಿನ ಪ್ರವಾಹದಂತೆ ಇತ್ತು. ತಾರೆ ಗಂಡನ ಮೈಮೇಲಿನ ಧೂಳನ್ನು ಬಾರಿಬಾರಿಗೂ ಒರೆಸಿದಳು. ತನ್ನ ಕಣ್ಣೀರಿನಿಂದ ಅವನ ಮೈಯನ್ನು ತೊಳೆದಳು. ನೆತ್ತರಿನಿಂದ ತೊಯ್ದ ಮೈಯ ವಾಲಿಯನ್ನು ನೋಡಿ ತಾರೆ ಅಂಗದನನ್ನು ಕುರಿತು ಹೇಳಿದಳು:

"ಮಗು, ನಿಮ್ಮ ತಂದೆಗೆ ಒದಗಿದ ಭಯಂಕರ ಅವಸ್ಥೆಯನ್ನು ನೋಡು. ಪಾಪಕರ್ಮದಿಂದ ಹುಟ್ಟಿದ ವೈರ ಹೀಗೆ ಕೊನೆಗಂಡಿತು. ಬಾಲಸೂರ್ಯನ ಹಾಗೆ ದೇದೀಪ್ಯಮಾನ ಶರೀರಿ ನಿಮ್ಮ ತಂದೆ. ಮಹಾರಾಜ, ಮಾನದಾನಿ. ಈಗ ಪರಲೋಕಕ್ಕೆ ಪಯಣ ಆಗಿದಾನೆ. ಆತನಿಗೆ ನಮಸ್ಕಾರ ಮಾಡು."

ಕೂಡಲೆ ಅಂಗದ ಎದ್ದು ಬಂದ. ತನ್ನ ದುಂಡನೆ ತೋಳುಗಳಿಂದ ವಾಲಿಯ ಪಾದಗಳನ್ನು ಹಿಡಿದ. "ತಂದೆ, ನಾನು ಅಂಗದ. ನಮಸ್ಕರಿಸುತ್ತ ಇದೇನೆ" ಎಂದ. ತಾರೆಗೆ ಸಂಕಟ ಹೆಚ್ಚಿತು. "ಸ್ವಾಮಿ, ಅಂಗದ ಯಾವಾಗ ನಮಸ್ಕರಿಸಿದರೂ ದೀರ್ಘಾಯುಷ್ಯವುಸ್ತು ಎಂದು ಆಶೀರ್ವದಿಸುತ್ತ ಇದ್ದೆ. ಈಗ ಮಾತೇ ಆಡೆಯಲ್ಲ. ಏಕೆ? ಸಿಂಹ ಕೊಂದ ಗೂಳಿಯನ್ನು ಅಗಲಲಾರದೆ ಅಳುವ ಹಸುಕರುಗಳಂತೆ ಆಯಿತು ನಮ್ಮ ಸ್ಥಿತಿ.

"ನಾಥ, ಯುದ್ಧ ಎಂಬ ಯಜ್ಞವನ್ನು ಆರಂಭಿಸಿದೆ ನೀನು. ರಾಮಬಾಣ ಎಂಬ ನೀರಿನಲ್ಲಿ ಅವಬೃಥಸ್ನಾನಮಾಡಿದೆ. ಹೆಂಡತಿಯನ್ನು ಬಿಟ್ಟು ನೀನು ಒಬ್ಬನೇ ಸ್ನಾನಮಾಡುವುದು ಸರಿ ಅಲ್ಲ. ಒಡೆಯ, ದೇವೇಂದ್ರ ಪ್ರಸನ್ನ ಆಗಿ ಕಾಂಚನಮಾಲೆಯನ್ನು ಅನುಗ್ರಹಿಸಿದ. ಅದು ನಿನ್ನ ಕತ್ತಿನಲ್ಲಿ ಇಲ್ಲವಲ್ಲ. ಮಹಾರಾಜ, ಸೂರ್ಯ ಮುಳುಗಿದರೂ ಅವನ ಕಾಂತಿ ಮುಳುಗದು. ಮೇರು ಪರ್ವತವನ್ನು ಬಿಡದು. ಸತ್ತರೂ ನಿನ್ನನ್ನು ರಾಜ್ಯಲಕ್ಷ್ಮಿ ತೊರೆದಿಲ್ಲ.

"ದೊರೆಯೆ, ನಾನು ಎಷ್ಟೋ ಹಿತವಚನ ಹೇಳಿದೆ. ನೀನು ಕೇಳಲಿಲ್ಲ. ಯುದ್ಧಕ್ಕೆ ಹೋಗದಂತೆ ತಡೆಯಲಾರದೆ ಹೋದೆ. ನೀನು ಸತ್ತಾಗಲೇ ನಾನೂ ನನ್ನ ಮಗನೂ ಸತ್ತೆವು. ನನ್ನ ಸಮಸ್ತ ಸೌಭಾಗ್ಯವೂ ಹೋಯಿತು."

೨೪

ತಾರೆಯ ದುಃಖಸಾಗರ ಉಕ್ಕಿ ಮೇರೆ ಮೀರಿ ಬಿಟ್ಟಿತ್ತು. ಅದರಲ್ಲಿ ಮುಳುಗಿ ಗೋಳೋ ಎಂದು ಅಳುತ್ತ ಇದ್ದ ತಾರೆಯನ್ನು ಸುಗ್ರೀವ ನೋಡಿದ. ಬಹಳ ಸಂಕಟ ಆಯಿತು. ಪಶ್ಚಾತ್ತಾಪಗೊಂಡ. ಕಂಬನಿಗರೆದ. ದುಃಖತಪ್ತ ಆಯಿತು ದೇಹ. ತಾರೆಯನ್ನು ನೋಡಿದ ಒಡನೆ ಅಣ್ಣನನ್ನು ಕೊಲ್ಲಿಸಿದ ಪಾಪಿ ತಾನು, ತನ್ನಂಥ ಪಾಪಿ ಯಾರೂ ಇಲ್ಲ ಎನಿಸುತ್ತ ಇತ್ತು. ದುಃಖ ಇಮ್ಮಡಿ ಆಗುತ್ತ ಇತ್ತು.

ಮೆಲ್ಲನೆ ರಾಮನ ಬಳಿಗೆ ಬಂದ ಸುಗ್ರೀವ. ಅವನ ಭೃತ್ಯರೂ ಜೊತೆಯಲ್ಲಿ ಬಂದರು. ಬಿಲ್ಲನ್ನೂ ಭಯಂಕರ ವಿಷಸರ್ಪಗಳಂಥ ಬಾಣಗಳನ್ನೂ ಕೈಯಲ್ಲಿ ಹಿಡಿದು ನಿಂತಿದ್ದ ಸರ್ವಲಕ್ಷಣಲಕ್ಷಿತ ಪುರುಷೋತ್ತಮ ರಾಮ.

ಸುಗ್ರೀವ ಹೇಳಿದ: “ಮಾನವೋತ್ತಮ, ನಿನ್ನ ಪ್ರತಿಜ್ಞೆ ನೆರವೇರಿತು. ಅದರ ಫಲವೂ ಕೈಯಲ್ಲಿ ಇದೆ. ಆದರೆ ನನಗೆ ಈಗ ರಾಜ್ಯಭೋಗದ ಆಸೆ ಇಲ್ಲ. ಬದುಕಬೇಕು ಎಂಬ ಬಯಕೆಯೂ ಇಂಗಿಹೋಯಿತು.

“ರಾಮಚಂದ್ರ, ಪಟ್ಟದ ರಾಣಿ ತಾರೆಯ ದುಃಖ ಬಲು ಘೋರ. ಕಿಷ್ಕಿಂಧಾವಾಸಿಗಳು ಎಲ್ಲರೂ ದುಃಖದಿಂದ ಕೊರಗಿ ಕೂಗುತ್ತ ಇದಾರೆ. ತಂದೆಯನ್ನು ಅಗಲಿ ಈ ಅಂಗದ ಬದುಕುವನೋ ಇಲ್ಲವೋ ಸಂದೇಹ. ಇಂಥದರಲ್ಲಿ ಈ ರಾಜ್ಯ ಏಕೆ ನನಗೆ?

“ಪುರುಷೋತ್ತಮ, ಕಾರಣ ಇಲ್ಲದೆ ಅಣ್ಣ ವಾಲಿ ನನ್ನನ್ನು ಕಿಷ್ಕಿಂಧಾ ನಗರದಿಂದ ಓಡಿಸಿದ. ಆಡಬಾರದ ಮಾತುಗಳನ್ನು ಆಡಿ ಅವಮಾನ ಮಾಡಿದ. ಅದರಿಂದ ಹುಟ್ಟಿದ ಸಿಟ್ಟುಮತ್ಸರಗಳಿಂದ ಅಣ್ಣನ ಕೊಲೆಗೆ ಒಪ್ಪಿಕೊಂಡೆ. ಅಣ್ಣನ ಕೊಲೆ ಆಯಿತು. ಈಗಂತೂ ನನ್ನ ಸಂಕಟಕ್ಕೆ ಮಿತಿ ಇಲ್ಲ. ದುಃಖದಿಂದ ತಪಿಸಿಹೋಗುತ್ತ ಇದೇನೆ. ತಡೆಯಲಾರೆ.

“ಇಕ್ಷ್ವಾಕು ಕುಮಾರ, ಇನ್ನು ಉಳಿದ ಆಯುಸ್ಸನ್ನು ಋಷ್ಯಮೂಕ ಪರ್ವತದಲ್ಲಿ ಕಳೆಯುವುದೇ ಲೇಸು ಎಂದು ತೋರುತ್ತದೆ. ಈಗ ನನಗೆ ಸ್ವರ್ಗಲೋಕವೇ ಸಿಕ್ಕರೂ ಬೇಡ ಎನಿಸುತ್ತದೆ. ರಾಮ, ನಮ್ಮ ಅಣ್ಣ ವಾಲಿ ಮಹಾನುಭಾವ. ಬುದ್ಧಿವಂತ. ಹಿಂದೆ ಎಷ್ಟೋ ಸಲ ಕಾಳಗ ಮಾಡಿದೇನೆ ಅವನ ಸಂಗಡ. ಹೋಗೋ, ಬದುಕಿಕೋ ಹೋಗು. ನಾನು ನಿನ್ನನ್ನು ಕೊಲ್ಲುವುದು ಇಲ್ಲ ಎನ್ನುತ್ತ ಇದ್ದ ನಾನು ದಣಿದಾಗ. ಎಷ್ಟು ಮರುಕ! ನಾನು ಕೃತಘ್ನ, ಅಣ್ಣನನ್ನು ಕೊಲ್ಲಿಸಿದೆ. ಎಷ್ಟು ದಾರುಣ. ಅವನ ಯೋಗ್ಯತೆ ಅವನದು. ನನ್ನ ಅಯೋಗ್ಯತೆ ನನ್ನದು. ಅಣ್ಣ ಸತ್ತರೆ ಆಗುವ ರಾಜ್ಯಲಾಭದ ಸಂತೋಷ ಹೆಚ್ಚೋ ದುಃಖ ಹೆಚ್ಚೋ ಮೊದಲು ನನಗೆ ತಿಳಿಯಲಿಲ್ಲ. ಆಸೆಗೆ ಬಲಿ ಆಗಿ ಅಣ್ಣನನ್ನು ಕೊಲ್ಲಿಸಿದೆ. ನನ್ನಂಥ ಪಾಪಿ ಬೇರೆ ಯಾರು? ಅಣ್ಣ ಮಹಾತ್ಮ. ತನ್ನ ತಮ್ಮನನ್ನು ಕೊಲ್ಲಲು ಇಚ್ಛಿಸಲಿಲ್ಲ. ನಾನು ದುರಾತ್ಮ. ಅಣ್ಣನನ್ನೇ ಕೊಲ್ಲಿಸಿದೆ. ಭ್ರಾತೃಮರ್ಯಾದೆಯನ್ನು ಮೀರಿದೆ.

“ಎಂಥ ದ್ರೋಹಿ ನಾನು. ವಾಲಿ ನನ್ನನ್ನು ಬಲು ಕಠಿನ ಆಗಿ ಹೊಡೆದ ಮರದ ರೆಂಬೆಯಿಂದ ಒಮ್ಮೆ. ಅದನ್ನು ತಡೆಯಲಾರದೆ ನಾನು ಅತ್ತೆ. ಅಣ್ಣ

ಪರಮ ದಯಾಮೂರ್ತಿ. ಇನ್ನುಮೇಲೆ ನನ್ನ ಸಂಗಡ ಯುದ್ಧಕ್ಕೆ ಬರಬೇಡ ಎಂದು ಹೇಳಿದ. ನನ್ನನ್ನು ಸಮಾಧಾನ ಮಾಡಿದ. ವಾಲಿ ಪೂಜ್ಯ, ದಯಾವಂತ. ಸೌಜನ್ಯ ಭ್ರಾತೃಪ್ರೇಮ ಇದ್ದವು ಅವನಲ್ಲಿ. ಧರ್ಮವನ್ನು ಬಿಡಲಿಲ್ಲ. ನಾನೋ ನನ್ನ ಕಪಿಸ್ವಭಾವ ಕೋಪ ದುರಾಶೆಗಳನ್ನು ತೋರಿಸಿದೆ.

"ರಾಮ, ನನ್ನ ಈ ಪಾಪ ಕೃತ್ಯ ಯಾರೂ ಊಹಿಸಲಾರದಂಥದು. ಪಾಪಿಗಳು ಯಾರೂ ಮಾಡದಂಥದು. ಸದಾ ಪಾಪಕೃತ್ಯ ಮಾಡುವವರೂ ಕೂಡ ಕಣ್ಣಿಂದ ನೋಡಲಾರದ ಪಾಪಕೃತ್ಯ ಇದು. ಇಂಥ ಪಾಪವನ್ನು ಮಾಡುವ ಬಯಕೆ ಯಾವ ಪಾಪಿಗೂ ಹುಟ್ಟದು. ಇಂಥ ಹೇಯ ಕಾರ್ಯ ಮಾಡಿದೆ ನಾನು. ತ್ವಷ್ಟೃಪುತ್ರ ವಿಶ್ವರೂಪನನ್ನು ಕೊಂದು ಮಹಾಪಾತಕಿ ಆದ ಇಂದ್ರನ ಹಾಗೆ ಆಯಿತು ಒಡಹುಟ್ಟಿದ ಅಣ್ಣನನ್ನು ಕೊಲ್ಲಿಸಿದ ನನ್ನ ಗತಿ. ಆದರೆ ದೇವೇಂದ್ರನ ಪಾಪವನ್ನು ಭೂದೇವಿಯೂ ನೀರೂ ಮರಗಳೂ ಹೆಂಗಸರೂ ಹಂಚಿಕೊಂಡರು. ನಾನೋ ಕಡುಕಪಿ. ನನ್ನ ಪಾಪವನ್ನು ಯಾರು ಹಂಚಿಕೊಂಡಾರು?

"ಪ್ರಭು, ನಾನು ನೀಚ. ಕುಲನಾಶಕ. ಅಧರ್ಮಕ್ಕೆ ಮಡಿಲು ಕಟ್ಟಿದೆ. ಅಣ್ಣನನ್ನು ಕೊಲ್ಲಿಸುವುದಕ್ಕಿಂತ ಅಧರ್ಮ ಉಂಟೆ? ಎಂಥ ಘೋರಕೃತ್ಯ! ಪ್ರಜೆಗಳ ಸನ್ಮಾನಕ್ಕೆ ನಾನು ಹೇಗೆ ಪಾತ್ರ ಆಗಬಲ್ಲೆ? ಯುವರಾಜಪದವಿಗೂ ತಕ್ಕವನು ಅಲ್ಲ. ಇನ್ನು ನನಗೆ ಏಕೆ ರಾಜ್ಯದ ಗೊಡವೆ?

"ರಾಮ, ಮಳೆನೀರು ಎಲ್ಲಿ ಬಿದ್ದರೂ ಹಳ್ಳಕ್ಕೇ ಹರಿಯುತ್ತದೆ. ಪಾಪ ಭಾರ ಶೋಕಭಾರಗಳ ಹಳ್ಳದಲ್ಲಿ ಮುಳುಗಿ ಇದೇನೆ. ನದಿಯ ದಡವನ್ನು ಮದ್ದಾನೆ ಗುದ್ದಿ ಕೆಡಹುತ್ತದೆ. ಅಣ್ಣನ ಕೊಲೆ ಎಂಬುದೇ ಬೆನ್ನು, ಬಾಲ. ಅದರ ಸಂತಾಪವೇ ಸೊಂಡಿಲು ಕಣ್ಣು ತಲೆ ಕೊಂಬು. ಪಾಪದ ಈ ಮದ್ದಾನೆ ನನ್ನನ್ನು ಪೀಡಿಸುತ್ತಿದೆ.

"ರಾಘವ, ಬಣ್ಣಗೆಟ್ಟ ಬಂಗಾರವನ್ನು ಪುಟಕ್ಕೆ ಇಟ್ಟರೆ ಕಿಟ್ಟ ಬೇರೆ, ಬಂಗಾರ ಬೇರೆ ಆಗುತ್ತದೆ. ಪಶ್ಚಾತ್ತಾಪದ ಬೆಂಕಿಯಲ್ಲಿ ನಾನು ಪುಟಕ್ಕೆ ಬಿದ್ದೆ. ನಾನು ಮಾಡಿದ್ದ ಅಲ್ಪಸ್ವಲ್ಪ ಪುಣ್ಯ ಕರಗಿ ಬೇರೆ ಆಗಿ ಭ್ರಾತೃವಧೆಯ ಪಾಪದ ಕಿಟ್ಟ ಮಾತ್ರ ಮಿಕ್ಕಿದೆ. ತಂದೆಯ ಸಾವಿಗಾಗಿ ಅಂಗದ

ಶೋಕದಿಂದ ಬೆಂದುಹೋಗುತ್ತ ಇದಾನೆ. ಮಹಾಬಲಾಢ್ಯರು ಯೂಥಪತಿಗಳು ಆದ ವಾನರವೀರರು ಅರೆಜೀವ ಆಗಿದಾರೆ. ಇಡೀ ವಾನರಕುಲವೇ ಕಳೆಗುಂದಿ ಇದೆ. ಈ ಅನರ್ಥ ಎಲ್ಲಕ್ಕೂ ನಾನೇ ಕಾರಣ.

"ಗೆಳೆಯ, ಮಗ ಹುಟ್ಟುವುದು ಸುಲಭ. ವಿನಯ ವಿಧೇಯತೆ ಸೌಜನ್ಯ ಉಳ್ಳ ಮಕ್ಕಳೂ ಆಗಬಹುದು. ಆದರೆ ಈ ಅಂಗದನಂಥ ಮಕ್ಕಳು ಎಲ್ಲಿ? ಯಾವ ದೇಶಕ್ಕೆ ಹೋದರೂ ಬಂಧುಗಳು ಸಿಕ್ಕಾರು. ಮತ್ತೊಮ್ಮೆ ಅಣ್ಣನ ಸಾನ್ನಿಧ್ಯ ಸಿಕ್ಕೀತೆ? ಈ ಅಂಗದ ಪಿತೃವಿಯೋಗದುಃಖವನ್ನು ಸಹಿಸಿ ಬದುಕಿ ಇರುತ್ತಾನೆಯೆ? ಅವನು ಬದುಕಿದರೆ ಅವನನ್ನು ನೋಡಿಕೊಳ್ಳಲು ತಾರೆಯೂ ಬದುಕಿ ಇದ್ದಾಳು. ಅವನು ಬದುಕದೆ ಹೋದರೆ ತಾರೆಯೂ ಬದುಕಳು. ಖಂಡಿತ. ಇಷ್ಟೆಲ್ಲ ಆದಮೇಲೆ ನಾನು ಬದುಕಿ ಏನು ಲಾಭ? ಉರಿಯುವ ಈ ಬೆಂಕಿಯಲ್ಲಿ ಬಿದ್ದು ನಾನೂ ಅಣ್ಣನ ಸಂಗಡ ಹೋಗುತ್ತೇನೆ.

"ರಾಮ, ನಾನು ಹೋದರೂ ಈ ವಾನರವೀರರು ಇರುತ್ತಾರೆ. ನಿನ್ನ ಅಪ್ಪಣೆಯನ್ನು ಶಿರಸಾವಹಿಸಿ ಸೀತಾದೇವಿಯನ್ನು ಹುಡುಕುತ್ತಾರೆ. ಪ್ರಭು, ನಾನು ಇರದೆ ಹೋದರೂ ನಿನ್ನ ಕಾರ್ಯಕ್ಕೆ ಯಾವ ಲೋಪವೂ ಆಗದು. ಸಂದೇಹ ಇಲ್ಲ. ನೀನು ಮಹಾಸಮರ್ಥ, ಅಸಾಮಾನ್ಯ. ನಿನ್ನ ಕಾರ್ಯ ಸಿದ್ಧಿ ಆಗದೆ ಹೋಗದು.

"ರಾಮ, ನಾನು ಕುಲಗೇಡಿ, ವಂಶಕಂಟಕ. ಮಹಾಪಾಪಿ. ನಾನು ಮಾಡಿದ್ದು ಮಹಾಪಾಪ. ನನ್ನಂಥವನು ಬದುಕಬಾರದು. ರಾಮ, ನಾನು ಅಗ್ನಿಪ್ರವೇಶ ಮಾಡುತ್ತೇನೆ, ಅಪ್ಪಣೆ ಕೊಡು" ಎಂದ ಸುಗ್ರೀವ.

ಸುಗ್ರೀವ ಹೀಗೆ ದುಃಖಾತಿರೇಕದಿಂದ ಮಾತು ಆಡಿದ್ದನ್ನು ಶತ್ರುಂಜಯ ರಘುರಾಮ ಕೇಳಿದ. ಅವನ ಕಣ್ಣುಗಳಲ್ಲೂ ಪಳಪಳ ನೀರು ಸುರಿಯಿತು. ಒಂದು ಗಳಿಗೆ ಏನೂ ತೋರಲಿಲ್ಲ. ತಾರೆ ರಾಮುನನ್ನೇ ನೋಡಿ ಅಳುತ್ತಿದ್ದಳು. ಬಾರಿ ಬಾರಿಗೂ ವಾಲಿಯನ್ನು ಅಪ್ಪಿಕೊಳ್ಳುತ್ತ ಗಟ್ಟಿ ಆಗಿ ಅಳುತ್ತ ಇದ್ದಳು. ಸಕಲ ಲೋಕರಕ್ಷಕ, ಭೂಮಿಯಂತೆ ಕ್ಷಮಾಶೀಲ ಆದ ರಾಮ ಅವಳನ್ನು ಸಂತಯಿಸಲು ನೋಡಿದ. ಮಂತ್ರಿಗಳು ಆ ಬುದ್ಧಿಶಾಲಿ ತಾರೆಯನ್ನು ಬಲವಂತದಿಂದ ಮೇಲಕ್ಕೆ ಎಬ್ಬಿಸಿ ಕರೆತಂದರು. ಗಂಡನ ಅಪ್ಪುಗೆಯನ್ನು ಬಿಟ್ಟುಬಂದಳು ತಾರೆ

ಕೈಯಲ್ಲಿ ಬಿಲ್ಲುಬಾಣ ಹಿಡಿದು ಸೂರ್ಯನ ಹಾಗೆ ಸ್ವಂತ ತೇಜಸ್ಸಿನಿಂದ ಹೊಳೆಯುವ ಸಮಸ್ತರಾಜಲಕ್ಷಣಲಕ್ಷಿತನನ್ನು ನೋಡಿದಳು ಮೃಗನೇತ್ರಿ ತಾರೆ. ಪುಂಡರೀಕಾಕ್ಷ ಪುರುಷೋತ್ತಮ ರಾಮ. ಅಂಥ ರೂಪಾತಿಶಯವನ್ನು ಹಿಂದೆ ಎಂದೂ ನೋಡಿರಲಿಲ್ಲ ತಾರೆ. ಅವನನ್ನು ನೆಟ್ಟ ದೃಷ್ಟಿಯಿಂದ ನೋಡಿದಳು. ಅವನೇ ರಾಮ ಎಂದು ಅರಿತುಕೊಂಡಳು. ದೇವೇಂದ್ರನಿಗೆ ಸಮಾನ, ಮಹಾನುಭಾವ ಆದ ರಾಮನ ಬಳಿಗೆ ಬಹಳ ವೇಗದಿಂದ ಬಂದಳು. ದುಃಖದಿಂದ ಅವಳ ಮೈ ಸ್ವಾಧೀನ ತಪ್ಪಿತ್ತು. ಆದರೂ ಅವಳ ಮನೋ ದಾರ್ಢ್ಯ ಪರಿಶುದ್ಧಹೃದಯ ಮಾತು ಆಡಿಸಿದವು. ಯುದ್ಧದಲ್ಲಿ ಸ್ಥಿರಲಕ್ಷ್ಯ ಇದ್ದ ರಾಮನನ್ನು ಕುರಿತು ಹೇಳಿದಳು :

“ ರಾಮ, ನೀನು ಅಪ್ರಮೇಯ, ದುರಾಸದ, ಜಿತೇಂದ್ರಿಯ, ಕುಂದು ಕಾಣದ ಕೀರ್ತಿವಂತ. ಧಾರ್ಮಿಕರಲ್ಲಿ ಉತ್ತಮ. ಅಪಾರ ಬುದ್ಧಿವಂತ. ಭೂದೇವಿಯ ಹಾಗೆ ಕ್ಷಮಾವಂತ. ಕೆನ್ನೀರಿನಂತೆ ಕೆಂಗಣ್ಣು ಉಳ್ಳ ಮಹಾ ಪುರುಷ. ಬಿಲ್ಲುಬಾಣ ಹಿಡಿದು ಇದೀಯೆ ಕೈಯಲ್ಲಿ. ಮಹಾಬಲಾಢ್ಯ ನೀನು. ಸರ್ವಾಂಗಸುಂದರ. ನೀನು ಮನುಷ್ಯನಂತೆ ಇದೀಯೆ. ಆದರೆ ನಿನ್ನ ಲಕ್ಷಣ ಎಲ್ಲವೂ ದಿವ್ಯಮಂಗಳಕಾರಕ.

“ ಪ್ರಭು, ಒಂದೇ ಬಾಣದಿಂದ ನನ್ನ ಪ್ರಿಯವಲ್ಲಭನನ್ನು ಕೊಂದೆ. ಅದೇ ಬಾಣದಿಂದ ಈಗ ನನ್ನನ್ನೂ ಕೊಂದುಬಿಡು. ನಾನೂ ನಿನ್ನ ಕೈಯಲ್ಲಿ ಸತ್ತು ನನ್ನ ನಲ್ಲನನ್ನು ಸೇರುತ್ತೇನೆ. ನನ್ನನ್ನು ಅಗಲಿ ಆತ ಸಂತೋಷದಿಂದ ನೆಮ್ಮದಿಯಿಂದ ಇರಲಾರ. ರಾಮ, ಸ್ವರ್ಗದಲ್ಲೂ ನನ್ನನ್ನು ಅಗಲಿ ನಲ್ಲನಿಗೆ ಸುಖ ಇಲ್ಲ. ಅಪ್ಸರೆಯರೇ ಇದಿರಿಗೆ ಬಂದರೂ ಆತ ಮನಸ್ಸು ಕೊಡಲಾರ. ಕೆಂಪು ಹೂಗಳನ್ನು ಮುಡಿದು ನಾನಾ ಬಗೆಯ ಅಲಂಕಾರ ಮಾಡಿಕೊಂಡು ಬಂದರೂ ಅವರು, ಅವರನ್ನು ಬಯಸಲಾರ. ನನ್ನನ್ನು ನೆನೆನೆನೆದು ಪರಿತಪಿಸು ತ್ತಾನೆ. ಕಳೆಗುಂದಿಹೋಗುತ್ತಾನೆ.

“ ರಾಮ, ನಿನಗೆ ಇದು ಅರ್ಥ ಆಗುತ್ತದೆ. ನಲುಮೆಯ ನಲ್ಲೆಯನ್ನು ಅಗಲುವುದು ಎಷ್ಟು ದುಃಖಕಾರಣವೋ ನಿನಗೆ ಗೊತ್ತು. ಅದರಲ್ಲೂ ಹರೆಯ ದವನಿಗೆ. ರಮಣೀಯ ಋಷ್ಯಮೂಕ ಪರ್ವತದ ತಪ್ಪಲಿನಲ್ಲಿಯೆ ಇದ್ದರೂ

ಸೀತೆ ಇಲ್ಲದುದರಿಂದ ಎಷ್ಟು ಪರಿತಪಿಸುತ್ತ ಇದೀಯೆ ನೀನು. ಅದೇ ರೀತಿ. ನಾನು ಇಲ್ಲವಲ್ಲ ಎಂದು ಸ್ವರ್ಗದಲ್ಲೂ ವಾಲಿ ಕಳೆಗುಂದಿ ಇರುತ್ತಾನೆ ಬಣ್ಣಗೆಟ್ಟು ನೆಮ್ಮದಿ ಕೆಟ್ಟು.

"ಆದ್ದರಿಂದ ನನ್ನನ್ನು ಕೊಂದುಬಿಡು ಈಗ. ನಾನು ನಲ್ಲನನ್ನು ಸೇರುತ್ತೇನೆ. ಆತನನ್ನು ಸಂತಸಪಡಿಸುತ್ತೇನೆ. ಪುಣ್ಯ ಬರುತ್ತದೆ ನಿನಗೆ ನಮ್ಮನ್ನು ಕಲೆಸಿದರೆ. ಏನು ಯೋಚಿಸುತ್ತೀಯೆ, ರಾಜಕುಮಾರ. ನನ್ನನ್ನು ಕೊಂದರೆ ಸ್ತ್ರೀಹತ್ಯಾದೋಷ ಬರುತ್ತದೆ ಎಂತಲೆ? ಇಲ್ಲ, ಖಂಡಿತ ಬಾರದು. ದಾಶರಥಿ, ನಾನು ವಾಲಿಯ ಅರ್ಧಾಂಗಿ. ಆತನ ಆತ್ಮಸ್ವರೂಪಳು. ಹೆಂಡತಿ ಗಂಡನ ಆತ್ಮ ಎಂದು ಶಾಸ್ತ್ರ ವೇದ ಹೇಳುತ್ತ ಇವೆ. ಈ ಲೋಕದಲ್ಲಿ ಭಾರ್ಯಾ ದಾನಕ್ಕಿಂತ ಹೆಚ್ಚಿನ ದಾನವಿಲ್ಲ ಎನ್ನುತ್ತಾರೆ ಜ್ಞಾನಿಗಳು. ನನ್ನನ್ನು ನನ್ನ ನಲ್ಲನ ಸಂಗಡ ಸೇರಿಸಿಬಿಡು.

"ವೀರ, ಧರ್ಮಸೂಕ್ಷ್ಮವನ್ನು ಆಲೋಚಿಸು. ನಾನು ಹೇಳಿದಂತೆಯೇ ನನ್ನನ್ನು ಕೊಂದು ನಲ್ಲನಿಗೆ ದಾನ ಮಾಡಿದರೆ ನಿನಗೆ ಯಾವ ಪಾಪವೂ ಅಂಟದು. ವೀರನನ್ನು ಕೊಂದ ಪಾಪವೂ ನೀಗುತ್ತದೆ. ಮದ್ದಾನೆಯ ಗಭೀರ ನಡಿಗೆಯ ಮಹಾಬುದ್ಧಿಯ ವಾನರಸಿಂಹ ವಾಲಿಯನ್ನು ಕೊಂದು ನನ್ನನ್ನು ತಬ್ಬಲಿ, ದುಃಖಿನಿ ಆಗಿಸಿದೆ. ಆ ಕಾಂಚನಮಾಲಿಕಾಧರನನ್ನು ಬಿಟ್ಟು ನಾನು ಇರಲಾರೆ. ನನ್ನನ್ನು ಕೊಲ್ಲು" ಎಂದು ಅತ್ತಳು ತಾರೆ.

ತಾರೆಯನ್ನು ಸಂತಯಿಸುತ್ತ ಮಹಾನುಭಾವ ಲೋಕದ ಒಡೆಯ ಆದ ರಾಮ ಹೇಳಿದ: "ತಾರೆ, ನೀನು ವೀರಪತ್ನಿ. ನೀನು ಎದೆಗುಂದಲಾಗದು. ಸಮಸ್ತ ಲೋಕವೂ ಬ್ರಹ್ಮನಿರ್ಮಿತ. ಎಲ್ಲರ ಸುಖದುಃಖಗಳಿಗೂ ಬ್ರಹ್ಮನೇ ಕರ್ತ. ಮೂರು ಲೋಕವೂ ಬ್ರಹ್ಮನ ಆಜ್ಞಾನುವರ್ತಿ. ಎಂದೂ ಮೀರಲಿಲ್ಲ. ನೀನೂ ಮೀರಲಾರೆ. ತಾರೆ, ವಾಲಿ ಇದ್ದಾಗ ಯಾವ ಸುಖಭೋಗ ಇತ್ತೋ ನಿನಗೆ ಮುಂದೆಯೂ ಇದ್ದೇ ಇರುತ್ತದೆ. ನಿನ್ನ ಮಗ ಅಂಗದನೇ ಯುವರಾಜ ಆಗುತ್ತಾನೆ. ಇದು ಬ್ರಹ್ಮನಿಯಾಮಕ. ನೀನು ಶೂರಪತ್ನಿ. ಹೀಗೆ ಶೂರ ಪತ್ನಿಯರು ಅಳಬಾರದು" ಎಂದ ಆ ಪರಂತಪ ಪ್ರಭಾವಯುಕ್ತ ರಾಮ.

ಮಹಾನುಭಾವ ರಾಮನ ಈ ಸಮಾಧಾನದ ಮಾತನ್ನು ಕೇಳಿ ವೀರಪತ್ನಿ ತಾರೆ ಸುಮ್ಮನೆ ಆದಳು.

೨೫

ಒಂದು ಕಡೆ ತಾರೆ ಅಂಗದ, ಇನ್ನು ಒಂದು ಕಡೆ ಸುಗ್ರೀವ ಅಳುತ್ತಾರೆ. ಇದನ್ನು ನೋಡಿ ರಾಮನಿಗೂ ಮರುಕ. ಲಕ್ಷ್ಮಣಸಮೇತ ಸುಗ್ರೀವ ಅಂಗದ ತಾರೆಯರನ್ನು ಸಂತಯಿಸಲು ಬಂದ.

"ನೀವು ಹೀಗೆ ಅಳುತ್ತಾ ಇದ್ದರೆ ಸತ್ತವರಿಗೆ ಸದ್ಗತಿ ಸಿಗುತ್ತದೆಯೆ? ಲೋಕಮರ್ಯಾದೆ ಇದು. ಅದಕ್ಕಾಗಿ ನೀವು ಅತ್ತದ್ದು ಸಾಕು. ಇನ್ನು ಸಾಕು. ವಾಲಿಗೆ ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಿ ಇನ್ನು. ಕರ್ಮವನ್ನು ಸಕಾಲದಲ್ಲಿ ಮಾಡಬೇಕು.

"ಲೋಕದಲ್ಲಿ ಎಲ್ಲಕ್ಕೂ ದೈವವೇ ಕಾರಣ. ಅದನ್ನು ಯಾರೂ ಮೀರಲಾರರು. ಎಲ್ಲ ಕರ್ಮಕ್ಕೂ ದೈವವೇ ಸಾಧನ. ದೈವವೇ ಸಮಸ್ತಪ್ರಾಣಿಗಳಿಗೂ ನಿಯಾಮಕ. ಎಲ್ಲಕ್ಕೂ ದೈವವೇ ಪ್ರೇರಕ. ಸಮಸ್ತಲೋಕವೂ ದೈವಾಧೀನ. ಯಾರಿಗೂ ಸ್ವಾತಂತ್ರ್ಯವೇ ಇಲ್ಲ. ಯಾವುದಕ್ಕೂ ಯಾರೂ ಕರ್ತರು ಅಲ್ಲ. ಪ್ರೇರಕರು ಯಾರಿಗೂ ಯಾರೂ ಅಲ್ಲ. ಕರ್ತರೂ ಅಲ್ಲ. ಎಲ್ಲಕ್ಕೂ ದೈವವೇ ಆಧಾರ.

"ದೈವ ಸರ್ವಸ್ವತಂತ್ರ. ದೈವ ಕಾಲಸ್ವರೂಪ. ಯಾವುದಕ್ಕೂ ಅಧೀನ ಅಲ್ಲ. ಎಲ್ಲವೂ ಅದಕ್ಕೆ ಅಧೀನ. ದೈವವೇ ಎಲ್ಲರಿಗೂ ಪರಮಗತಿ. ಅದನ್ನು ಯಾರೂ ಮೀರಲಾರರು. ದೈವವನ್ನು ಯಾರೂ ವಶಪಡಿಸಿಕೊಳ್ಳಲಾರರು. ಎಂಥ ಪರಾಕ್ರಮಕ್ಕೂ ಸಾಧ್ಯ ಅಲ್ಲ. ದೈವಕ್ಕೆ ಗೆಳೆಯ ದಾಯಾದಿ ಎಂಬ ಯಾವ ಬಂಧುತ್ವವೂ ಇಲ್ಲ. ಯಾವ ಪಕ್ಷಪಾತವೂ ಇಲ್ಲ. ಅವರವರ ಕರ್ಮದಂತೆ ಅವರವರಿಗೆ ಫಲ. ಧರ್ಮ ಅರ್ಥ ಕಾಮಗಳೂ ಅವರವರ ಕರ್ಮಗಳನ್ನು ಅನುಸರಿಸಿಯೇ. ತನ್ನ ಕರ್ಮಾನುಸಾರ ಧರ್ಮಾರ್ಥಕಾಮಗಳನ್ನು ಅನುಭವಿಸಲು ವಾಲಿ ಸ್ವರ್ಗಕ್ಕೆ ಹೋದ. ತನ್ನ ಪ್ರಾಣವನ್ನು ಲೆಕ್ಕಿಸದೆ ವಾಲಿ ತನ್ನ ಧರ್ಮವನ್ನು ನಡೆಸಿದ. ಅದರಿಂದ ಸ್ವರ್ಗವನ್ನು ಪಡೆದ. ಅವನದು ಉತ್ತಮಗತಿ.

"ತಾರೆ, ಇನ್ನು ವಾನರೇಂದ್ರನಿಗೋಸ್ಕರ ನೀನು ಶೋಕಿಸಬೇಡ. ಮಾಡಬೇಕಾದ ಕೆಲಸವನ್ನು ಮಾಡು" ಎಂದ ರಾಮ.

ದುಃಖದಿಂದ ಎಚ್ಚರ ತಪ್ಪಿದವನಂತೆ ನಿಂತಿದ್ದ ಸುಗ್ರೀವನನ್ನು ಶತ್ರುಮರ್ದನ ಲಕ್ಷ್ಮಣ ನೋಡಿದ. "ಸುಗ್ರೀವ, ಏಳು, ಎದ್ದೇಳು. ವಾಲಿಗೆ

ಪ್ರೇತಕಾರ್ಯ ನಡೆಯಬೇಕು. ದಹನಸಂಸ್ಕಾರ ಆಗಬೇಕು. ಒಣಗಿದ ಸೌದೆ ಗಂಧದ ಚಕ್ಕೆಗಳನ್ನು ತರಿಸು. ವಾನರರನ್ನು ಕಳಿಸು. ಅಂಗದ ಕೊರಗುತ್ತ ಇದಾನೆ. ಅವನನ್ನು ಸಂತಯಿಸು. ನೀನೂ ಅಳುತ್ತ ಕೂತರೆ ಹೇಗೆ? ಅಂಗದ ಮುಂದಿನ ಕೆಲಸಕ್ಕೆ ಸಿದ್ಧ ಆಗಲಿ. ನೀನು ಹುಡುಗಬುದ್ಧಿಯನ್ನು ಬಿಡು. ಈಗ ಕಿಷ್ಕಿಂಧಾನಗರ ನಿನ್ನ ಅಧೀನ.

" ಕಳಿಸು. ಹೂಮಾಲೆಗಳನ್ನೂ ನಾನಾವಿಧ ವಸ್ತ್ರಗಳನ್ನೂ ಅಂಗದನನ್ನು ಕಳಿಸಿ ತರಿಸು. ತುಪ್ಪ ಎಣ್ಣೆ ಸುಗಂಧದ್ರವ್ಯಗಳನ್ನು ಇತರ ಪದಾರ್ಥಗಳನ್ನು ತರಲಿ. ತಾರ, ಬೇಗ ಹೋಗಿ ಸ್ವಲ್ಪವೂ ತಡ ಮಾಡದೆ ಪಲ್ಲಕ್ಕಿಯನ್ನು ತೆಗೆಸಿಕೊಂಡು ಬಾ. ಕೆಲಸ ಮಾಡುವುದನ್ನು ತಡ ಇಲ್ಲದೆ ಮಾಡಿದರೆ ಯಾವಾಗಲೂ ಒಳ್ಳೆಯದು. ಇಂಥ ಸಮಯದಲ್ಲಿ ಅಂತೂ ಹೇಳಬೇಕಾದ್ದೇ ಇಲ್ಲ. ಪಲ್ಲಕ್ಕಿಯನ್ನು ಹೊರಲು ಬಲಿಷ್ಠರು ಆದ ವಾನರರು ಕೆಲವರು ಸಿದ್ಧರಾಗಿ."

ಹೀಗೆ ಹೇಳಿ ಲಕ್ಷ್ಮಣ ರಾಮನ ಪಕ್ಕದಲ್ಲಿ ಹೋಗಿ ನಿಂತ. ತಾರ ಕಿಷ್ಕಿಂಧಾನಗರಕ್ಕೆ ಹೋಗಿ ಪಲ್ಲಕ್ಕಿಯನ್ನು ಹೊರಿಸಿಕೊಂಡು ಬಂದ.

ರಥದ ಹಾಗೆ ವಿಸ್ತಾರ ಆದ ಪಲ್ಲಕ್ಕಿ ಅದು. ಮಹಾಬಲಾಢ್ಯರು ಶೂರರು ಮಾತ್ರವೇ ಹೊರಬಲ್ಲರು ಅದನ್ನು. ಅದರಲ್ಲಿ ನಡುವೆ ಸಿಂಹಾಸನ. ಸುತ್ತಲೂ ವಿವಿಧ ಪಕ್ಷಿಗಳ ಸಾಲಭಂಜಿಕೆಗಳ ಚಿತ್ರ ಇವೆ. ದೇವಯೋಗ್ಯ ವಿಮಾನದ ಹಾಗೆ ಇದೆ. ನಡುನಡುವೆ ಚಿತ್ರವಿಚಿತ್ರ ರೇಖೆ. ನೋಡಲು ಬಲು ಅಂದ. ಬಹಳ ಗಟ್ಟಿ. ವಿಶ್ವಕರ್ಮನ ನಿರ್ಮಾಣಚಮತ್ಕಾರ ಅದರಲ್ಲಿ ಕಾಣುತ್ತ ಇತ್ತು. ಬೆಟ್ಟಗಳನ್ನು ಬೆಟ್ಟಗಳ ಒಳಗೆ ಗುಹೆಗಳನ್ನು ಕಾಡುಗಳನ್ನು ಉಪವನಗಳನ್ನು ಮರದಲ್ಲಿ ಕೆತ್ತಿ ಜೋಡಿಸಿತ್ತು. ಸಣ್ಣದು ದೊಡ್ಡದು ಕಿಟಕಿಗಳು ಬೇರೆ. ಹೂಮಾಲೆಗಳಿಂದ ಸಿಂಗರಿಸಿತ್ತು. ಒಳಗಡೆ ರತ್ನದ ಒಡವೆಗಳು. ಹೊರಗಡೆ ಥಳಥಳಿಸುವ ನಯಗೆಲಸದ ಮೆರುಗು. ಪಲ್ಲಕ್ಕಿಗೆ ರಕ್ತಚಂದನದ ಬಣ್ಣ ಬಳಿದಿತ್ತು. ಇದು ಎಲ್ಲದರಿಂದ, ಬಾಲಸೂರ್ಯನ ಹಾಗೆ ಬೆಳಗುವ ಕೆಂದಾವರೆಗಳಿಂದ ಪಲ್ಲಕ್ಕಿ ರಮಣೀಯ ಆಗಿ ಹೊಳೆಯುತ್ತ ಇತ್ತು.

" ಲಕ್ಷ್ಮಣ, ವಾಲಿಯ ಕಳೇಬರವನ್ನು ಸಾಗಿಸಿ ಪ್ರೇತಕಾರ್ಯಗಳಿಗೆ ವ್ಯವಸ್ಥೆ ಮಾಡು " ಎಂದ ರಾಮ.

ಅಳುತ್ತ ಅಳುತ್ತ ಅಂಗದ ಸುಗ್ರೀವರು ವಾಲಿಯ ದೇಹವನ್ನು ಎತ್ತಿ ಪಲ್ಲಕ್ಕಿಯಲ್ಲಿ ಇಟ್ಟರು. ಆ ದೇಹಕ್ಕೆ ಹೂಮಾಲೆ ಹಾಕಿದರು. ನಾನಾವಿಧ ವಸ್ತ್ರಾಭರಣಗಳ ಅಲಂಕಾರ ಮಾಡಿದರು. ವಾನರವೀರರು ಎಲ್ಲರನ್ನೂ ಕರೆದು ಸುಗ್ರೀವ ಅಪ್ಪಣೆ ಮಾಡಿದ. "ಪೂಜ್ಯ ವಾಲಿಗೆ ಶಾಸ್ತ್ರೋಕ್ತ ಆಗಿ ಉತ್ತರ ಕ್ರಿಯೆಗಳು ನಡೆಯಬೇಕು. ನಾನಾರತ್ನಗಳನ್ನು ಚೆಲ್ಲುತ್ತ ಕೆಲವರು ವಾನರ ವೀರರು ನಡೆಯಲಿ. ಅವರ ಹಿಂದೆ ಹೋಗಲಿ ಪಲ್ಲಕ್ಕಿ. ರಾಜಯೋಗ್ಯ ಉತ್ತರಕ್ರಿಯೆ ನಡೆಯಬೇಕು ವಾಲಿಗೆ."

ವಾಲಿಯ ಸಮೀಪ ಬಂಧುಗಳು ಅಂಗದನ ಸುತ್ತ ಅಳುತ್ತ ಸಾಗಿದರು. ಅವರ ಹಿಂದೆ ವಾನರಸ್ತ್ರೀಯರು. "ವೀರ ಶೂರ" ಎಂದು ಗೋಳಿಡುತ್ತ ಅವರು ನಡೆದರು. ತರುವಾಯ ತಾರೆ, ಅವಳ ಸವತಿಯರು. ಕಲ್ಲನ್ನೂ ಕರಗಿಸುವಂತೆ ಇತ್ತು ಅವರ ಗೋಳಾಟ. ವಾನರವನಿತೆಯರು ಎಲ್ಲರೂ ಹೀಗೆ ಅಳುತ್ತ ಸಾಗಿದರೆ ಅದರ ಪ್ರತಿಧ್ವನಿಯಿಂದ ಅಲ್ಲಿಯ ಬೆಟ್ಟಗುಡ್ಡ ಕಾಡು ಎಲ್ಲವೂ ಅಳುವಂತೆ ಇತ್ತು.

ಒಂದು ಬೆಟ್ಟದ ತೊರೆಯ ಬಳಿ ಏಕಾಂತ ಸ್ಥಳದಲ್ಲಿ ಮರಳುದಿಬ್ಬದ ಮೇಲೆ ಚಿತೆಯನ್ನು ಮಾಡಿದರು. ಅಲ್ಲಿ ಪಲ್ಲಕ್ಕಿಯನ್ನು ಇಳಿಸಿದರು. ವಾನರರಿಗೆ ಹಿಡಿಸಲಾರದ ದುಃಖ. ಅಲ್ಲಿಯೇ ಒಂದು ಕಡೆ ಅಳುತ್ತ ನಿಂತರು. ತಾರೆ ಪಲ್ಲಕ್ಕಿಯ ಬಳಿಗೆ ಬಂದಳು. ಅದರಲ್ಲಿ ಇದ್ದ ವಾಲಿಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಭೋರೆಂದು ಅತ್ತಳು.

"ವಾನರೇಂದ್ರ, ನಾಥ, ಮಹಾಬಾಹು, ಪೂಜ್ಯ, ನಲ್ಲ, ಒಂದೇ ಒಂದು ಸಲ ಕಣ್ಣು ಎತ್ತಿ ನನ್ನನ್ನು ನೋಡು. ಇಲ್ಲಿ ಇರುವ ಹೆಂಗಸರು ಎಲ್ಲರೂ ಗೋಳಾಡುತ್ತ ಇದೇವಲ್ಲ. ನಮ್ಮನ್ನು ಒಮ್ಮೆ ನೋಡು. ನಲ್ಲ, ಪ್ರಾಣ ಹೋದರೂ ನಿನ್ನ ಮುಖದಲ್ಲಿ ಜೀವಕಳೆ ಉಕ್ಕುತ್ತ ಇದೆ. ಆ ನಗೆ ಆ ಸಂತೋಷ ಹಾಗೇ ಇದೆ. ಮುಳುಗುವ ಸೂರ್ಯಬಿಂಬದ ಹಾಗೆ ಹೊಳೆಯುತ್ತಿದೆ. ಯಮನೇ ಬಂದ ರಾಮರೂಪದಲ್ಲಿ ಇಲ್ಲಿಗೆ. ಒಂದೇ ಬಾಣದಿಂದ ನಿನ್ನನ್ನು ಕೊಂದು ನಮ್ಮನ್ನು ಎಲ್ಲರನ್ನೂ ವಿಧವೆಯರನ್ನು ಮಾಡಿದ.

"ರಾಜೋತ್ತಮ, ನಿನ್ನ ನಲ್ಲೆಯರು ಈ ವಾನರಾಂಗನೆಯರು ಎಷ್ಟೋ ದೂರದಿಂದ ಕಾಲುನಡಿಗೆಯಲ್ಲಿ ನಿನ್ನನ್ನು ಹಿಂಬಾಲಿಸಿ ಬಂದುದನ್ನು ಕಾಣೆಯಾ?

ಈ ಚಂದ್ರಮುಖಿಯರನ್ನು ಸಂತಯಿಸಬೇಡವೆ ನೀನು? ಏಕೆ ಸುಮ್ಮನೆ ಇದೀಯೆ? ಮನೋವಲ್ಲಭ, ಮಹಾರಾಜ, ಸುಗ್ರೀವನನ್ನು ಆದರೂ ನೋಡು. ತಾರ ಇದಾನೆ. ಇತರ ಮಂತ್ರಿಗಳೂ ಪೌರರೂ ಬಂದಿದಾರೆ. ಅವರಿಗೆ ಉಚಿತ ಮರ್ಯಾದೆ ಮಾಡಿ ಕಳಿಸಬೇಡವೆ? ಎಲ್ಲರೂ ಹೋದಮೇಲೆ ಈ ವನದಲ್ಲಿ ನಾವು ಮನ್ಮಥವಿಹಾರ ಮಾಡೋಣ" ಎಂದು ಅತ್ತಳು.

ತಾರೆಗೆ ಮೈಮೇಲೆ ಎಚ್ಚರ ಇಲ್ಲ. ಏನೋ ಮಾತು ಆಡುತ್ತ ಇದ್ದಳು. ವಾನರಾಂಗನೆಯರು ಬಂದು ಅವಳನ್ನು ಮೇಲಕ್ಕೆ ಎತ್ತಿ ಕರೆದು ಒಯ್ದರು.

ಅಂಗದಕುಮಾರ ಮುಂದೆ ಬಂದ. ದುಃಖದಿಂದ ಮೈ ಎಲ್ಲಾ ನಡುಗುತ್ತ ಇತ್ತು. ಗೊಳೋ ಎಂದು ಅಳುತ್ತಲೇ ಬಂದ. ಸುಗ್ರೀವನೂ ಅವನೂ ವಾಲಿಯ ಕಳೇಬರವನ್ನು ಚಿತೆಯ ಮೇಲೆ ಇಟ್ಟರು. ಆಮೇಲೆ ಶಾಸ್ತ್ರೋಕ್ತ ಆಗಿ ಅಂಗದ ಚಿತೆಗೆ ಬೆಂಕಿ ಇಟ್ಟ. ಅಪಸವ್ಯ ಪ್ರದಕ್ಷಿಣೆ ಮಾಡಿದ.

ದಹನಸಂಸ್ಕಾರ ಮುಗಿದಮೇಲೆ ಜಲತರ್ಪಣಕ್ಕಾಗಿ ಮಂಗಳಕರ ಆದ ತಣ್ಣನೆ ನೀರಿನ ನದಿಗೆ ಬಂದರು ಎಲ್ಲರೂ. ಮೊದಲು ಅಂಗದ, ಆಮೇಲೆ ತಾರಾಸುಗ್ರೀವರು, ಆಮೇಲೆ ಉಳಿದ ಎಲ್ಲ ವಾನರರೂ ವಾಲಿಗೆ ಜಲತರ್ಪಣ ಬಿಟ್ಟರು.

ಮಹಾಬಲಾಢ್ಯ ರಾಮನಿಗೂ ಅಷ್ಟೇ ದುಃಖ. ಸುಗ್ರೀವನ ಮೂಲಕ ವಾಲಿಗೆ ಸಮಸ್ತ ಪ್ರೇತಕರ್ಮಗಳನ್ನೂ ಮಾಡಿಸಿದ.

ಸುಗ್ರೀವ ಕರ್ಮ ಎಲ್ಲವನ್ನೂ ಮುಗಿಸಿ ರಾಮನ ಬಳಿಗೆ ಬಂದ.

೨೬

ಅಣ್ಣ ವಾಲಿಗೆ ಅಪರಕಾರ್ಯ ನಡೆಸಿ ಆ ಒದ್ದೆಬಟ್ಟೆಯಲ್ಲಿಯೇ ಸುಗ್ರೀವ ರಾಮನ ಬಳಿಗೆ ಬಂದ. ಬ್ರಹ್ಮನ ಸುತ್ತ ಮಹರ್ಷಿಗಳು ಎಲ್ಲರೂ ಗುಂಪುಕೂಡು ವಂತೆ ವಾನರರು ರಾಮನ ಸುತ್ತಲೂ ಸೇರಿದರು.

ಹೊಂಬಣ್ಣದ ಮೈ, ಬಾಲಸೂರ್ಯನಂಥ ಮುಖಕಾಂತಿ, ಆಂಜನೇಯನದು. ರಾಮನಿಗೆ ಕೈಮುಗಿದು ಹನುಮಂತ ಅತಿ ವಿನಯದಿಂದ ಹೇಳಿದ: "ರಘು-ಕುಲೋತ್ತಮ, ನಿನ್ನ ಅನುಗ್ರಹ. ಸುಗ್ರೀವನಿಗೆ ತಾತಮುತ್ತಾತಂದಿರ ರಾಜ್ಯ

ಲಭಿಸಿತು. ಇನ್ನು ನಿನ್ನ ಅಪ್ಪಣೆ ಪಡೆದು ತನ್ನ ಗೆಳೆಯರ ಸಂಗಡ ಕಿಷ್ಕಿಂಧೆಗೆ ಹೋಗಿ ಮುಂದಿನ ಕೆಲಸಗಳನ್ನು ಮಾಡಬೇಕು. ವಿವಿಧ ಗಂಧ ಓಷಧಿಗಳಿಂದ ಶಾಸ್ತ್ರೋಕ್ತ ಮಂಗಳಸ್ನಾನ ಮಾಡಬೇಕು. ಆಮೇಲೆ ಪಟ್ಟಾಭಿಷೇಕ ಮಾಡಿ ಕೊಳ್ಳಬೇಕು. ತರುವಾಯ ಬಂದು ನಿನ್ನನ್ನು ರತ್ನಗಳಿಂದಲೂ ಹೂಮಾಲೆ ಗಳಿಂದಲೂ ಪೂಜಿಸಬೇಕು. ಅಪ್ಪಣೆ ನೀಡು. ಗಿರಿಗುಹೆಯ ಹಾಗೆ ಮನೋಹರ ಆದ ಕಿಷ್ಕಿಂಧಾನಗರಕ್ಕೆ ದಯೆಮಾಡಿಸು. ಸುಗ್ರೀವನಿಗೆ ಪಟ್ಟಾಭಿಷೇಕ ಮಾಡು. ವಾನರರು ಎಲ್ಲರಿಗೂ ಸಂತೋಷ ಆಗುತ್ತದೆ."

ಹನುಮಂತ ವಾಕ್ಯಕೋವಿದ, ಬುದ್ಧಿವಂತ, ಶತ್ರುಮರ್ದನ. ಅವನ ಮಾತನ್ನು ಕೇಳಿ ರಾಮ ಹೇಳಿದ: "ಹನುಮಂತ, ಹದಿನಾಲ್ಕು ವರ್ಷಕಾಲ ನಾನು ಯಾವ ಊರಿನೊಳಗೂ ಗ್ರಾಮ ಆಗಲಿ ನಗರ ಆಗಲಿ ಕಾಲು ಇಡುವಂತೆ ಇಲ್ಲ. ನಮ್ಮ ತಂದೆಯ ಅಪ್ಪಣೆ ಅದು. ಸರ್ವಸಮೃದ್ಧ ರಮಣೀಯ ಕಿಷ್ಕಿಂಧಾ ನಗರಕ್ಕೆ ಸುಗ್ರೀವನನ್ನು ನೀವೇ ಕರೆದು ಒಯ್ದು ಶಾಸ್ತ್ರಕ್ಕೆ ಅನುಸಾರ ಆಗಿ ಪಟ್ಟಾಭಿಷೇಕ ಮಾಡಿ."

ಸುಗ್ರೀವನ ಕಡೆ ತಿರುಗಿದ. ಹೇಳಿದ: "ಸುಗ್ರೀವ, ನಿನಗೆ ಸದಾಚಾರ ಗೊತ್ತು. ನಿನ್ನ ಪಟ್ಟಾಭಿಷೇಕ ಆದಮೇಲೆ ಈ ಅಂಗದನಿಗೆ ಯುವರಾಜ ಪಟ್ಟಕಟ್ಟು. ಇವನು ನಿಮ್ಮ ಅಣ್ಣನ ಹಿರಿಯ ಮಗ. ಒಬ್ಬನೇ ಮಗ. ಆಚಾರ ಸಂಪನ್ನ. ಬುದ್ಧಿವಂತ. ಪರಾಕ್ರಮದಲ್ಲಿ ನಿನಗೆ ಸಮ. ಯುವರಾಜಪದವಿಗೆ ಎಲ್ಲ ರೀತಿಯಲ್ಲೂ ತಕ್ಕವನು.

"ಸುಗ್ರೀವ, ಈಗ ಮಳೆಗಾಲ. ಈ ಶ್ರಾವಣಮಾಸದಲ್ಲಿ ವರ್ಷಋತು ಮೊದಲು. ನಾಲ್ಕು ತಿಂಗಳು ಮಳೆಗಾಲ. ಈಗ ಯಾವ ಪ್ರಯತ್ನಕ್ಕೂ ಕಾಲ ಅಲ್ಲ. ನೀನು ಕಿಷ್ಕಿಂಧೆಗೆ ಹೋಗಿ ಈ ನಾಲ್ಕು ತಿಂಗಳೂ ಅಲ್ಲಿ ಇರು. ನಾನೂ ಲಕ್ಷ್ಮಣನೂ ಈ ಋಷ್ಯಮೂಕ ಪರ್ವತದಲ್ಲಿ ಇರುತ್ತೇವೆ. ಈ ಪರ್ವತಗುಹೆ ಬಹು ಮನೋಹರ. ಬಹಳ ವಿಶಾಲ. ಗಾಳಿಯೂ ಚೆನ್ನಾಗಿ ಬೀಸುತ್ತದೆ. ಹತ್ತಿರದಲ್ಲಿಯೆ ಕೊಳ. ಅದರಲ್ಲಿ ತಾವರೆ ನೈದಿಲೆ ಹೂಗಳೂ ಸಮೃದ್ಧಿ.

"ಮಳೆಗಾಲ ಮುಗಿದು ಕಾರ್ತೀಕಮಾಸ ಬಂದ ಒಡನೆ ರಾವಣವಧೆಗೆ ಸಕಲ ಸನ್ನಾಹ ಮಾಡು. ಇದೇ ನಮ್ಮ ಒಪ್ಪಂದ. ಇನ್ನು ನೀನು ಕಿಷ್ಕಿಂಧೆಗೆ

ಹೋಗು. ರಾಜ್ಯಾಭಿಷೇಕ ಮಾಡಿಕೊ. ಗೆಳೆಯರನ್ನು ಕೂಡು. ಅವರನ್ನು ಸಂತಸಪಡಿಸು. ನೀನೂ ಸಂತೋಷಪಡು."

ರಾಮನ ಮಾತಿಗೆ ಸುಗ್ರೀವ ತಲೆಬಾಗಿದ. ಅವನ ಅಪ್ಪಣೆ ಪಡೆದು ವಾಲಿ ಪರಿಪಾಲಿಸಿದ ಕಿಷ್ಕಿಂಧಾನಗರಕ್ಕೆ ಹೊರಟ. ಸಾವಿರಾರು ಮಂದಿ ವಾನರರು ಬಂದು ಸುಗ್ರೀವನಿಗೆ ನಮಸ್ಕಾರ ಮಾಡಿದರು. ನಗರಕ್ಕೆ ಅವನ ಹಿಂದೆ ನಡೆದರು. ಪಟ್ಟಣದಲ್ಲಿ ಇದ್ದ ಪ್ರಜೆಗಳು ಎಲ್ಲರೂ ಬಂದು ಸುಗ್ರೀವನಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು. ಎಲ್ಲರನ್ನೂ ಸುಗ್ರೀವ ಮೇಲಕ್ಕೆ ಎತ್ತಿ ಎಲ್ಲರ ಸಂಗಡಲೂ ಮಾತು ಆಡಿದ. ಎಲ್ಲರಿಗೂ ಸಂತೋಷ ಆಯಿತು. ಆಮೇಲೆ ನೆಟ್ಟಗೆ ವಾಲಿಯ ಅಂತಃಪುರಕ್ಕೆ ಹೋದ. ಅಲ್ಲಿ ತಾರೆ ಇದ್ದಳು. ಅವಳನ್ನು ಸಂತಯಿಸಿದ. ಅಲ್ಲಿಂದ ಹಿಂದಿರುಗಿ ಬಂದ ಸುಗ್ರೀವನಿಗೆ ಗೆಳೆಯರು ಎಲ್ಲರೂ ಸೇರಿ ಪಟ್ಟಾಭಿಷೇಕವನ್ನು ಮಾಡಿದರು. ದೇವತೆಗಳು ಇಂದ್ರನಿಗೆ ಪಟ್ಟಕಟ್ಟುವಂತೆ ವೈಭವದಿಂದ ಮಾಡಿದರು.

ಬಂಗಾರದ ದಂಡದ ಶ್ವೇತಚ್ಛತ್ರವನ್ನು ಹಿಡಿದರು. ಚಿನ್ನದ ಹಿಡಿಯ ಬಿಳಿಯ ಚಾಮರಗಳನ್ನು ಬೀಸಿದರು. ನವರತ್ನಗಳನ್ನೂ ಸಮಸ್ತ ಓಷಧಿ ಗಳನ್ನೂ ಗಿಡಮೂಲಿಕೆಗಳನ್ನೂ ಹಾಲು ಸುರಿಯುವ ಗಿಡಗಳ ಚಿಗುರನ್ನೂ ಬಗೆ ಬಗೆಯ ಹೂಗಳನ್ನೂ ತಂದು ಇಟ್ಟರು. ಬಿಳಿಯ ಬಟ್ಟೆ, ಬಿಳಿಯ ಲೇಪನದ್ರವ್ಯ ಗಳನ್ನೂ ಸುವಾಸನೆಯ ಹೂಮಾಲೆಗಳನ್ನೂ ದಿವ್ಯಚಂದನವನ್ನೂ ಸುಗಂಧ ದ್ರವ್ಯಗಳನ್ನೂ ನೆಲ ನೀರು ಎರಡರಲ್ಲೂ ಬೆಳೆಯುವ ಹೂಗಳನ್ನೂ ತಂದರು. ಹರಿದ್ರಾಕ್ಷತೆ ಗಸಗಸೆ ಜೇನುತುಪ್ಪ ಹುಲಿಯ ಚರ್ಮ ಹಂದಿಯ ಚರ್ಮದ ಪಾದರಕ್ಷೆ ಮುಂತಾದ್ದು ಎಲ್ಲವೂ ಅಣಿ ಆಯಿತು.

ವಿಲೇಪನ ಗೋರೋಚನ ಮಣಿಶಿಲೆಗಳನ್ನು ಹಿಡಿದುಕೊಂಡು ಹದಿನಾರು ಮಂದಿ ಕನ್ಯೆಯರು ಬಂದರು. ಶುಭಮುಹೂರ್ತಕ್ಕೆ ಸರಿ ಆಗಿ ವಾನರರು ಸುಗ್ರೀವನಿಗೆ ಪಟ್ಟಕಟ್ಟಿದರು.

ಉತ್ಸವಕ್ಕೆ ಬಂದ ಬ್ರಾಹ್ಮಣೋತ್ತಮರಿಗೆ ರತ್ನಗಳನ್ನೂ ವಸ್ತ್ರಗಳನ್ನೂ ಭಕ್ಷ್ಯಗಳನ್ನೂ ಕೊಟ್ಟು ಸಂತಸಪಡಿಸಿದರು.

ಮಂತ್ರ ಬಲ್ಲ ಬ್ರಾಹ್ಮಣರು ದರ್ಭೆಯನ್ನು ಹಾಸಿ ಅಗ್ನಿಯನ್ನು ಉರಿಸಿ ಮಂತ್ರಪೂತ ಹವಿಸ್ಸನ್ನು ಹೋಮ ಮಾಡಿದರು. ಆಗ ವಾನರಮುಖ್ಯರು

ಎಲ್ಲರೂ ಸುಗ್ರೀವನನ್ನು ಕರೆತಂದು ಉಪ್ಪರಿಗೆಯ ಮೇಲೆ ಸಿಂಹಾಸನದಲ್ಲಿ ಪೂರ್ವಾಭಿಮುಖ ಆಗಿ ಕುಳ್ಳಿರಿಸಿದರು. ಆ ಭದ್ರಾಸನಕ್ಕೆ ಬಂಗಾರದ ಕಾಲು, ಬಗೆಬಗೆಯ ಹೂವಿನ ಅಲಂಕಾರ, ಉತ್ತಮಾಸ್ತರಣ. ಸಮಸ್ತ ಪುಣ್ಯತೀರ್ಥ ಗಳಿಂದ ನದೀನದಗಳಿಂದ ನಾಲ್ಕೂ ಸಮುದ್ರಗಳಿಂದ ತಂದ ನಿರ್ಮಲಜಲವನ್ನು ಬಂಗಾರದ ಕಲಶಗಳಲ್ಲಿ ತುಂಬಿ ಇಟ್ಟಿದ್ದರು. ವಾನರಶ್ರೇಷ್ಠರು ಗಜ ಗವಾಕ್ಷ ಗವಯ ಶರಭ ಗಂಧಮಾದನ ಮೈಂದ ದ್ವಿವಿದ ನಳ ಹನುಮಂತ ಜಾಂಬವಂತ ಆದಿಗಳು ಯಥಾವಿಧಿ ಆಗಿ ಎತ್ತಿನ ಕೊಂಬುಗಳಿಂದ ಸುವರ್ಣ ಕಲಶಗಳಿಂದ ಆ ತೀರ್ಥವನ್ನು ಎರೆದು ವಸುಗಳು ಇಂದ್ರನಿಗೆ ಮಾಡುವಂತೆ ವೈಭವದಿಂದ ಅಭಿಷೇಕ ಮಾಡಿದರು.

ಪಟ್ಟಾಭಿಷೇಕ ಆದ ಒಡನೆ ಅಲ್ಲಿ ಇದ್ದ ಸಾವಿರಾರು ಮಂದಿ ವಾನರರು ಸಂಭ್ರಮದಿಂದ ಸಂತೋಷಾತಿಶಯದಿಂದ ಜಯಜಯಕಾರ ಮಾಡಿದರು. ಆಗ ಸುಗ್ರೀವ ರಾಮನ ಅಪ್ಪಣೆಯಂತೆ ಅಂಗದನನ್ನು ಕರೆದು ಅವನಿಗೆ ಯುವರಾಜ ಪಟ್ಟವನ್ನು ಕಟ್ಟಿದ. ಮೊದಲಿಗಿಂತ ಹೆಚ್ಚು ಸಂತೋಷ ಆಯಿತು ವಾನರರಿಗೆ. ಭಲೇ ಭಲೇ, ಶಬಾಷ್ ಎಂದು ಸುಗ್ರೀವನನ್ನು ಎಲ್ಲರೂ ಕೊಂಡಾಡಿದರು. ಈ ಎರಡೂ ಅಭಿಷೇಕೋತ್ಸವಗಳಿಗೆ ಕಾರಣರು ರಾಮಲಕ್ಷ್ಮಣರು. ಅವರನ್ನು ಎಡೆ ಬಿಡದೆ ಕೊಂಡಾಡಿದರು ವಾನರರು. ಕಿಷ್ಕಿಂಧಾಪಟ್ಟಣದಲ್ಲಿ ಆಗ ಕೋಲಾಹಲ. ಎಲ್ಲಿ ನೋಡಿದರೂ ಬಾವುಟಗಳೇ. ಜನರ ಸಂತೋಷಕ್ಕೆ ಪಾರ ಇರಲಿಲ್ಲ.

ವೀರ್ಯವಂತ ವಾನರಸೇನಾಧಿಪ ಸುಗ್ರೀವ ರಾಮನ ಬಳಿಗೆ ಹೋಗಿ ತನ್ನ ಪಟ್ಟಾಭಿಷೇಕದ ವಿವರಗಳನ್ನು ಅರಿಕೆ ಮಾಡಿದ.

ಹಿಂತಿರುಗಿ ಕಿಷ್ಕಿಂಧೆಗೆ ಬಂದು ತನ್ನ ಹೆಂಡತಿ ರುಮೆಯ ಜೊತೆಯಲ್ಲಿ ದೇವೇಂದ್ರನ ಹಾಗೆ ರಾಜ್ಯಭಾರ ಮಾಡಿದ.

೨೭

ಸುಗ್ರೀವ ಹಿಂದಿರುಗಿ ಕಿಷ್ಕಿಂಧಾ ಪಟ್ಟಣಕ್ಕೆ ಹೋದ. ಲಕ್ಷ್ಮಣಸಮೇತ ಶ್ರೀರಾಮ ಪ್ರಸ್ರವಣಗಿರಿಗೆ ಬಂದ. ಋಷ್ಯಮೂಕ ಪರ್ವತಪಂಕ್ತಿಯಲ್ಲಿ ಒಂದು ಬೆಟ್ಟ ಪ್ರಸ್ರವಣ. ಅಲ್ಲಿ ಸಿಂಹಗಳೂ ಹುಲಿಗಳೂ ಸದಾ ಗರ್ಜಿಸುತ್ತವೆ.

ಆ ಭಯಂಕರ ಧ್ವನಿ ಎಲ್ಲೆಲ್ಲೂ ಕೇಳಿಸುತ್ತದೆ. ಜಿಂಕೆ ಕರಡಿ ಕೋತಿ ಮುಸಿಯು ಕಾಡುಬೆಕ್ಕು ಎಲ್ಲೆಲ್ಲೂ ಕಾಣುತ್ತವೆ. ಬಗೆಬಗೆಯ ಪೊದೆ ಬಳ್ಳಿ ಗಿಡಮರಗಳು, ತಿಳಿನೀರಿನ ಕೊಳಗಳು ಯಥೇಷ್ಟ. ಮೋಡಗಳು ಗುಂಪುಕೂಡಿದಂತೆ ಕಾಣುವ ಆ ಬೆಟ್ಟಕ್ಕೆ ಬಂದ ಶ್ರೀರಾಮ.

ಬೆಟ್ಟದ ಶಿಖರದಲ್ಲಿ ವಿಶಾಲ ಆದ ಗುಹೆ ಒಂದನ್ನು ಹುಡುಕಿದರು ರಾಮ ಲಕ್ಷ್ಮಣರು ತಮ್ಮ ವಾಸಕ್ಕೆ. ಸುಗ್ರೀವನ ಸಂಗಡ ಮಾಡಿದ ಒಪ್ಪಂದದಂತೆ ನಾಲ್ಕು ತಿಂಗಳು ಅಲ್ಲೇ ಇರಬೇಕಲ್ಲ. ಆ ಸ್ಥಳವನ್ನು ಪರೀಕ್ಷಿಸಿ ನೋಡಿದ ರಾಮ. ಪಕ್ಕದಲ್ಲಿಯೆ ವಿನಯವಿಧೇಯತೆಗಳಿಂದ ನಿಂತು ಇದ್ದ ಲಕ್ಷ್ಮಣನನ್ನು ನೋಡಿದ. "ತಮ್ಮ, ಈ ಪರ್ವತಗುಹೆ ಬಹಳ ರಮ್ಯ. ತುಂಬಾ ವಿಶಾಲ. ಗಾಳಿಯೂ ಚೆನ್ನಾಗಿ ಬೀಸುತ್ತ ಇದೆ. ಮಳೆಗಾಲ ಮುಗಿಯುವವರೆಗೂ ನಾವು ಇಬ್ಬರೂ ಇಲ್ಲೇ ವಾಸಮಾಡೋಣ.

"ತಮ್ಮ, ಈ ಪರ್ವತಶಿಖರ ಎತ್ತರದಲ್ಲಿ ಇದೆ. ಬಲು ರಮ್ಯ, ಬಹಳ ವಿಶಾಲ. ಬಿಳುಪು ಕೆಂಪು ಕಂದು ಬಣ್ಣದ ಬಗೆಬಗೆಯ ಕಲ್ಲು ಕಾಣುತ್ತವೆ. ಹಲವು ಬಗೆಯ ಧಾತುಗಳು ಥಳಥಳಿಸುತ್ತಿವೆ. ಗುಹೆ ಗಿರಿ ನದಿಗಳು ಕಂಗೊಳಿಸುತ್ತ ಇವೆ. ಎಷ್ಟು ಬಗೆಯ ಗಿಡಮರ! ಎಷ್ಟು ಬಗೆಯ ಬಳ್ಳಿ ಪೊದರು! ಹಕ್ಕಿಗಳು ಕೂಗುತ್ತ ಇವೆ. ನವಿಲಿನ ಕೇಕೆಯನ್ನು ಕೇಳು. ಎಷ್ಟು ಇಂಪು. ಮಾಲತಿ ಮೊಲ್ಲೆ ಎಷ್ಟು ಹೂಗಳು ಬಿಟ್ಟವೆ. ಸಿಂಧುವಾರ ಗೋರಂಟೆ ಕಡವು ಅರ್ಜುನ ಸರ್ಜಕ ಮುಂತಾದ ಹೂಗಿಡ ಹೇಗೆ ಅರಳಿವೆ. ಹತ್ತಿರದಲ್ಲೇ ತಾವರೆ ಹೂವಿನ ಕೊಳ. ಅರಳಿದ ತಾವರೆಹೂಗಳನ್ನು ನೋಡು.

"ಇದರ ಬಾಗಿಲು ನೈಋತ್ಯಕ್ಕಿದೆ. ಪೂರ್ವ ದಿಕ್ಕಿನಲ್ಲಿ ಉತ್ತರ ದಿಕ್ಕಿನಲ್ಲಿ ಎತ್ತರ. ಗುಹೆಯು ಇದಿರಿಗೆ ಸಮನೆಲ. ಇದು ನಮಗೆ ಅನುಕೂಲ. ಗಾಳಿಯೂ ವಿಶೇಷ ಇರದು. ಇದರ ಬಾಗಿಲಿನ ಬಂಡೆಯನ್ನು ನೋಡು. ನುಣ್ಣಗೆ ಸಮ ಆಗಿ ಕಾಡಿಗೆ ರಾಶಿಯಂತೆ ಕಪ್ಪು ಆಗಿ ಇದೆ. ಬಹಳ ಅಂದ, ಬಲು ವಿಶಾಲ. ಉತ್ತರದಲ್ಲಿ ಇರುವ ಮಂಗಳಕರ ಶಿಖರವನ್ನು ನೋಡು. ಕಾಡಿಗೆ ಬೆಟ್ಟದ ಹಾಗೆ ಕರಿಯ ಮೋಡದ ಹಾಗೆ ಅಂದ, ಚೆಲುವು. ದಕ್ಷಿಣದಲ್ಲಿ ಆ ಬೆಳ್ಳಗೆ ಬಗೆಬಗೆಯ ಧಾತುಗಳಿಂದ ಹೊಳೆಯುವ ಶಿಖರವನ್ನು ನೋಡು. ಕೈಲಾಸಪರ್ವತದಂತೆ ಇದೆ. ಎಷ್ಟು ಚೆಲುವು!

“ ಪೂರ್ವಾಭಿಮುಖ ಆಗಿ ಇದಿರಿನಲ್ಲಿ ಹರಿಯುವ, ಸ್ವಲ್ಪವೂ ಕೆಸರಿಲ್ಲದ ನಿರ್ಮಲಜಲದ ನದಿಯನ್ನು ನೋಡಿದೆಯಾ ? ತ್ರಿಕೂಟಾಚಲದ ಗಂಗಾನದಿಯ ಹಾಗೆ ಇದೆ. ಇದರ ದಡದಲ್ಲಿ ಬೆಳೆದ ವೃಕ್ಷರಾಜಿಯನ್ನು ನೋಡು. ಸಂಪಿಗೆ ತಿಲಕ ತಾಳೆ ಹೊಂಗೆ ಆದಿಮುರ್ತ್ತೆ ಪದ್ಮಪರ್ಣಿ ಸರಳ ಅಶೋಕ ಆಲ ಸ್ಪಂದನ ನೀರುವಂಜಿ ಪಗಡೆ ಕೇದಗೆ ಹಿಂತಾಲ ತಿರಟ ನೀಪ ಚಿತ್ತ ಕಡವು ಕೃತಮೂಲ; ಎಷ್ಟು ಬಗೆಯ ಮರ ! ಮನೋಹರ ಆಗಿ ಕಂಗೊಳಿಸುತ್ತ ಇದೆ ಈ ಪ್ರದೇಶ.

“ ನೂರಾರು ಬಗೆಯ ಹಕ್ಕಿಗಳ ಗುಂಪು ಕೂಗುತ್ತ ಇದ್ದರೆ ಎಷ್ಟು ಬಗೆಯ ಸ್ವರ ಇಲ್ಲಿ. ಅನ್ಯೋನ್ಯ ಅನುರಾಗದಿಂದ ಜೊತೆ ಜೊತೆ ಆಗಿಯೇ ವಿಹರಿಸುವ ಚಕ್ರವಾಕ ದಂಪತಿಗಳ ಸೊಗಸೋ ! ಹಂಸ ಸಾರಸ ಪಕ್ಷಿಗಳ ವಿನೋದವೋ, ಮನಸೆಳೆವ ಈ ಮರಳು ದಿಣ್ಣೆಗಳೋ, ಈ ಗಿಡಮರಗಳೋ ಹೂಗಳೋ ! ಎಲ್ಲದರಿಂದ ಒಪ್ಪುವ ಈ ನದಿ ವಸ್ತ್ರಾಭರಣಗಳಿಂದ ಸಿಂಗರಿಸಿಕೊಂಡು ನಸುನಗೆ ನಗುತ್ತ ನಲಿಯುತ್ತ ನಿಂತ ವನಸುಂದರಿಯ ಹಾಗೆ ಕಾಣುತ್ತದೆ.

“ ಒಂದು ಕಡೆ ಕನ್ನೈದಿಲೆ ಇನ್ನೊಂದು ಕಡೆ ಕೆಂದಾವರೆ ಮತ್ತೂ ಒಂದು ಕಡೆ ಬಿಳಿನೈದಿಲೆ ದಟ್ಟ ಆಗಿ ಮುಚ್ಚಿ ಮನತಣಿಸುತ್ತ ಇವೆ. ನೂರಾರು ಕೊಕ್ಕರೆ ನವಿಲು ಕ್ರೌಂಚಪಕ್ಷಿಗಳ ಇಂಪು ದನಿ ಕೇಳಿಸುತ್ತ ಇದೆ. ನದಿಯ ದಡದಲ್ಲಿ ಅನೇಕ ಮಂದಿ ಮಹರ್ಷಿಗಳ ವಸತಿ ಇದೆ. ನೆಟ್ಟಗೆ ಸಾಲುಸಾಲು ಆಗಿ ಹೇಗೆ ಬೆಳೆದು ಇವೆ ಗಂಧದ ಮರ ! ಇವಕ್ಕೆ ಸಮ ಆಗಿ ಸಾಲುಮರ ಬೆಳೆಸಿದ ಹಾಗೆ ಇವೆ ಈ ಸ್ಯಂದನವೃಕ್ಷಗಳು. ಶತ್ರುಮರ್ದನ ಲಕ್ಷ್ಮಣ, ಮನಸೆಳೆವ ಈ ಪ್ರದೇಶ ದಲ್ಲಿಯೆ ವಾಸಮಾಡೋಣ ನಾವು.

“ ಚಿತ್ರವಿಚಿತ್ರ ಕಾನನ ಇವೆ ನಡುವೆ. ದಾಟಿದರೆ ಹತ್ತಿರದಲ್ಲೇ ಸುಗ್ರೀವನ ಕಿಷ್ಕಿಂಧೆ. ಆ ಪಟ್ಟಣದ ಗೀತವಾದ್ಯ ಮೃದಂಗಧ್ವನಿ ಇಲ್ಲಿಗೆ ಕೇಳಿಸುತ್ತದೆ. ವಾನರರ ಕೋಲಾಹಲಧ್ವನಿಯನ್ನು ಕೇಳು. ಲಕ್ಷ್ಮಣ, ವಾನರೇಂದ್ರ ಸುಗ್ರೀವ ನಿಗೆ ಕೈತಪ್ಪಿಹೋಗಿದ್ದ ಹೆಂಡತಿ ರಾಜ್ಯ ದೊರೆತವು. ಮಹಾಭಾಗ್ಯವೂ ಲಭಿಸಿತು. ಸಂತೋಷದಿಂದ ರಾಜ್ಯಪಾಲನೆ ಮಾಡುತ್ತಿರಬೇಕು ಈಗ ” ಎಂದ.

ಗುಹೆಗಳು ಲತಾಗೃಹಗಳು ಅನೇಕ ವಸ್ತುಗಳು ಇದ್ದ ಪ್ರಸ್ರವಣಪರ್ವತದಲ್ಲಿ ಬಿಡಾರ ಮಾಡಿದ ರಾಮ. ಅಷ್ಟು ಗಿಡಮರ, ಅಷ್ಟು ಹೂಬಳ್ಳಿ, ಅಷ್ಟು ವನ್ಯ

ಪದಾರ್ಥ ಎಲ್ಲಾ ಇದ್ದರೂ ಅವನಿಗೆ ಸಂತೋಷ ಆಗಲಿಲ್ಲ. ತನ್ನ ಪ್ರಾಣಕ್ಕಿಂತಲೂ ಪ್ರಿಯು ಆದ ಸೀತೆಯ ನೆನಪಿನಿಂದ ಅವನಿಗೆ ಯಾವಾಗಲೂ ಸಂಕಟವೇ.

ಸಂಜೆ. ಉದಯಾಚಲದ ಮೇಲೆ ಚಂದ್ರ ಮೂಡಿಬಂದ. ಚಂದ್ರನನ್ನು ನೋಡಿ ರಾಮನಿಗೆ ವಿರಹತಾಪ ಹೆಚ್ಚಿತು. ನಿದ್ದೆ ಬರಲಿಲ್ಲ. ರಾತ್ರಿ ಎಲ್ಲಾ ಹಾಸಿಗೆಯಲ್ಲಿ ಹೊರಳಾಟ. ಪ್ರತಿದಿನವೂ ಹೀಗೆಯೇ. ಲಕ್ಷ್ಮಣನೂ ಅಣ್ಣನ ದುಃಖದಲ್ಲಿ ಪಾಲುಗಾರ. ರಾಮನ ದುಃಖವನ್ನು ನೋಡಿ ನೋಡಿ ಸಾಕು ಆಗಿ ಹೇಳಿದ: "ವೀರಾಗ್ರಣಿ, ಸಾಕು ಬಿಡು. ಹೀಗೆ ಏಕೆ ದುಃಖಿಸುತ್ತೀ? ಉತ್ಸಾಹ ಕಳೆದುಕೊಂಡು ಸದಾ ದುಃಖಿಸುವವನಿಗೆ ಯಾವ ಪುರುಷಾರ್ಥವೂ ಕೈಗೂಡದು. ಸರ್ವಾರ್ಥನಾಶ ಆಗುತ್ತದೆ. ನಿನಗೆ ಇದು ತಿಳಿಯದುದು ಅಲ್ಲ. ನೀನು ಶ್ರದ್ಧಾವಂತ, ಕಾರ್ಯಸಾಧಕ, ಆಸ್ತಿಕ, ಧರ್ಮಪರಾಯಣ, ಪ್ರಯತ್ನಶೀಲ. ಹೀಗೆ ಸಂಕಟಪಡುತ್ತ ಪ್ರಯತ್ನ ಮಾಡದೆ ಕುಳಿತರೆ ಶತ್ರುವನ್ನು ಹೇಗೆ ಗೆಲ್ಲುತ್ತೀ? ಆ ರಾವಣನೋ ಕಪಟಿ, ರಾಕ್ಷಸ. ಎದೆಗುಂದಿ ಉತ್ಸಾಹಹೀನ ಆದವನು ಶತ್ರುವನ್ನು ಗೆಲ್ಲಬಲ್ಲನೆ? ದುಃಖವನ್ನು ಬಿಡು. ಬೇರುಸಹಿತ ಕಿತ್ತುಹಾಕು ಅದನ್ನು. ಸ್ಥಿರಪ್ರಯತ್ನ ಮಾಡಿದರೆ ಆ ರಾಕ್ಷಸಪರಿವಾರಸಮೇತ ನಾಶ ಆಗುತ್ತಾನೆ.

"ಅಣ್ಣ, ಕಾಡು ಗುಡ್ಡಬೆಟ್ಟ ಕಡಲು ಇರುವ ಈ ಭೂಮಂಡಲವನ್ನೇ ತಲೆಕೆಳಗೆ ಮಾಡಬಲ್ಲ ಶಕ್ತಿ ನಿನ್ನದು. ಕ್ಷುದ್ರ ರಾಕ್ಷಸ ಎಷ್ಟರವನು? ಪ್ರಭು, ನೀನು ಅವನನ್ನು ನಾಶಮಾಡಬಲ್ಲೆ. ನಿನಗೆ ಒಬ್ಬರು ಹೇಳಬೇಕೆ? ಇದು ಮಳೆಗಾಲ. ಶರತ್ಕಾಲ ಬರಲಿ. ಶರದೃತುವನ್ನು ಇದಿರುನೋಡೋಣ. ಆಮೇಲೆ ಬಂಧುಮಿತ್ರಸಮೇತ ಆ ರಾವಣಾಸುರನನ್ನು ನಾಶಮಾಡುವೆಯಂತೆ. ನಾನು ನಿನಗೆ ಉಪದೇಶ ಮಾಡುತ್ತ ಇಲ್ಲ. ಹಾಗೆ ತಿಳಿಯಬೇಡ. ಬೂದಿ ಮುಚ್ಚಿದ ಕೆಂಡವನ್ನು ಆಹುತಿಯಿಂದ ಉರಿಸುವಂತೆ ಸೀತಾವಿರಹದಿಂದ ಮಲಗಿ ಇರುವ ನಿನ್ನ ಪರಾಕ್ರಮವನ್ನು ಎಚ್ಚರಿಸುತ್ತ ಇದೇನೆ."

ಲಕ್ಷ್ಮಣನ ಮಾತು ಹಿತಕರ ಶ್ರೇಯಸ್ಕರ. ತಮ್ಮನನ್ನು ಅಭಿನಂದಿಸಿದ ರಾಮ. "ತಮ್ಮ, ನೀನು ಆಡಿದ ಮಾತು ಸರಿ. ನನ್ನ ಹಿತ ಕೋರಿ ಸ್ನೇಹ ಅನುರಾಗಪೂರ್ವಕ ಸತ್ವಪರಾಕ್ರಮಿಯ ಹಾಗೆ ಮಾತು ಆಡಿದೆ. ಇದೋ, ಈಗಲೇ ಬಿಟ್ಟೆ ಈ ದುಃಖವನ್ನು. ಎಲ್ಲ ಕೆಲಸಗಳಿಗೂ ಕಂಟಕ ಇದು. ಪ್ರಸಂಗ ಬರಲಿ. ನನ್ನ ಅಪ್ರತಿಹತ ಪರಾಕ್ರಮವನ್ನು ತೋರಿಸುತ್ತೇನೆ. ಲಕ್ಷ್ಮಣ, ನಿನ್ನ

ಮಾತಿನಂತೆಯೇ ಆಗಲಿ. ನದಿಗಳೆಲ್ಲವೂ ತಿಳಿ ಆಗಿ ಹರಿಯುವ ಶರತ್ಕಾಲವನ್ನು ಇದಿರುನೋಡುತ್ತೇನೆ. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಕೃತಜ್ಞ ವೀರರ ಲಕ್ಷಣ. ಮಾಡಿದ ಉಪಕಾರವನ್ನು ಮರೆತು ಪ್ರತ್ಯುಪಕಾರ ಮಾಡದ ಕೃತಘ್ನನನ್ನು ಸತ್ಪುರುಷರು ಮೆಚ್ಚರು. ಅವರಿಗೆ ನೋವೂ ಆಗುತ್ತದೆ."

ಲಕ್ಷ್ಮಣ ವಿನಯದಿಂದ ಕೈಮುಗಿದ. ಮುಂದಿನ ಕೆಲಸವನ್ನು ಮನಸಿನಲ್ಲೇ ಚಿಂತಿಸುತ್ತ ರಾಮನಿಗೆ ಹೇಳಿದ: "ಪ್ರಭು, ನಿಜ. ಸುಗ್ರಿವ ಹೇಳಿದ್ದನ್ನು ಮಾಡುತ್ತಾನೆ. ಶತ್ರುಗಳನ್ನು ಸದೆಬಡೆಯುವೆಯಂತೆ ನೀನು. ಶರತ್ಕಾಲದ ವರೆಗೆ ಕಾದು ಇರು. ಮಳೆಗಾಲ ಮುಗಿಯಲಿ. ಶತ್ರುವಿನ ಮೇಲೆ ಕೋಪ ಉಕ್ಕಿಬರುತ್ತದೆ. ಸಹಿಸಿಕೊ ಈ ನಾಲ್ಕು ತಿಂಗಳು. ಶತ್ರುವಧೆಯ ಪ್ರಯತ್ನ ಮಾಡುತ್ತ, ಲೆಕ್ಕ ಇಲ್ಲದ ಸಿಂಹಗಳಿಗೆ ನೆಲೆ ಆದ ಇಲ್ಲೇ ಇರೋಣ."

೨೮

ವಾಲಿವಧೆಆದಮೇಲೆ ಸುಗ್ರೀವ ರಾಜ್ಯಾಭಿಷೇಕ ಮಾಡಿಕೊಂಡು ಕಿಷ್ಕಿಂಧೆಯಲ್ಲಿ ಇದ್ದ. ಶ್ರೀರಾಮ ಮಾಲ್ಯವಂತ ಅಥವಾ ಪ್ರಸ್ರವಣ ಪರ್ವತದಲ್ಲಿ ಇದ್ದ.

ಮಳೆಗಾಲ ಬಂತು. "ತಮ್ಮ, ಸುಗ್ರೀವನ ಸಂಗಡ ಮಾತು ಆಡಿ ಬಂದೆವಲ್ಲ. ಈಗ ಮಳೆಗಾಲ ಪ್ರಾರಂಭ. ಮುಗಿಲಿನ ತುಂಬಾ ಬೆಟ್ಟದಂಥ ಮೋಡಗಳು. ಸೂರ್ಯಕಿರಣಗಳ ಮೂಲಕ ಸಮುದ್ರಜಲವನ್ನು ಹೀರಿಕೊಂಡು ಕಾರ್ತೀಕದಿಂದ ಆಷಾಢದವರೆಗೂ ಒಂಬತ್ತು ತಿಂಗಳು ಗರ್ಭಧಾರಣೆ ಮಾಡಿದಳು ಆಕಾಶಾಂಗನೆ. ಈಗ ಎಲ್ಲ ರಸಗಳಿಗೂ ಮೂಲ ಆದ ಜಲವನ್ನು ಪ್ರಸವಿಸುತ್ತ ಇದಾಳೆ.

"ಮುಗಿಲಿಗೆ ಮೆಟ್ಟಲು ಕಟ್ಟದಂತೆ ಈ ಮೋಡಗಳ ಸಾಲು ಹೇಗಿದೆಯೋ ನೋಡು. ಕಾಡುಮಲ್ಲಿಗೆಹೂಗಳನ್ನೂ ಸರಳಪುಷ್ಪಗಳನ್ನೂ ತೆಗೆದುಕೊಂಡು ಈ ಮೇಘಸೋಪಾನವನ್ನು ಏರಿಹೋಗಿ ಸೂರ್ಯನನ್ನೂ ಪೂಜಿಸಿ ಬರಬಹುದು. ಸಂಧ್ಯಾರಾಗ ಹರಡಿ ನಡುವೆ ಕೆಂಪಗೆ, ಅಂಚಿನಲ್ಲಿ ಬೆಳ್ಳಗೆ, ನೀರು ತುಂಬಿ ಮೆತ್ತಗೆ ಇರುವ ಮೋಡಗಳು ಆಕಾಶದ ಹುಣ್ಣುಗಳಿಗೆ ಕಟ್ಟಿದ ಕಟ್ಟು ಇದ್ದಹಾಗೆ ಇವೆ. ಈ ಆಕಾಶವೂ ನನ್ನ ಹಾಗೆ ಹೆಂಡತಿಯನ್ನು ಅಗಲಿದ ಕಾಮಾತುರನಂತೆ ಇದೆ.

ಸಂಧ್ಯಾರಾಗದ ಚಂದನ ಪೂಸಿಕೊಂಡು ಮಂದಮಾರುತದ ನಿಟ್ಟುಸಿರು ಬಿಡುತ್ತ ಸುಕ್ಕಿ ಬಿಳಿಚಿಕೊಂಡ ದೇಹದಂಥ ಬೆಳ್ಳನೆ ಮೋಡಗಳಿಂದ ಹಾಗೇ ಕಾಣುತ್ತದೆ ಮುಗಿಲು. ಇದುವರೆಗೂ ಬಿಸಿಲಿಗೆ ಕಾದು ಈಗತಾನೆ ಹೊಸ ಮಳೆನೀರು ಬಿದ್ದು ಭೂಮಿಯಿಂದ ಆವಿ ಏಳುತ್ತ ಇದೆ. ದುಃಖದಿಂದ ಕಂದಿಹೋದ ಸೀತೆಯೇ ಕಂಬನಿ ಕರೆಯುವ ಹಾಗೆ ಇದೆ ಈ ದೃಶ್ಯ.

" ಮೋಡಗಳ ಬಸಿರಿನಿಂದ ಹೊರಟು ಕೇದಗೆಹೂಗಳ ಸುವಾಸನೆಯನ್ನು ಬೀರುತ್ತ ಸೌಗಂಧಿಕದಂತೆ ತಂಪು ಆಗಿ ಬೀಸುತ್ತಿದೆ ಗಾಳಿ. ಇದನ್ನು ಬೊಗಸೆ ಯಲ್ಲಿ ತುಂಬಿಕೊಂಡು ಕುಡಿಯೋಣವೇ ಎನಿಸುತ್ತ ಇದೆ. ಬಿರಿದು ಅರಳಿದ ಸಾಲಪುಷ್ಪ, ಗಮಗಮಿಸುವ ಕೇದಗೆಹೂ, ನಿರಂತರ ಧಾರೆ ಆಗಿ ಬೀಳುತ್ತಿರುವ ಮಳೆ, ಇವುಗಳಿಂದ ಈ ಪರ್ವತ ವೈರಿನಿಗ್ರಹದ ತರುವಾಯ ಪಟ್ಟಾಭಿಷೇಕ ಮಾಡಿಕೊಂಡ ಸುಗ್ರೀವನ ಹಾಗೆ. ಕಾರ್ಮೋಡಗಳೇ ಕೃಷ್ಣಾಜಿನ, ನಿರಂತರವೂ ಸುರಿಯುವ ಜಲಧಾರೆಯೇ ಬಿಳೀ ಜನಿವಾರ, ಗುಹೆಗಳಲ್ಲಿ ತುಂಬಿ ಸದ್ದುಮಾಡುವ ಗಾಳಿಯ ಧ್ವನಿಯೇ ವೇದಘೋಷ; ಈ ಪರ್ವತಶಿಖರಗಳು ವೇದಾಧ್ಯಯನ ಮಾಡುವ ಬ್ರಹ್ಮಚಾರಿಗಳ ಹಾಗೆ ಇವೆ. ಬಂಗಾರದ ಚಾಟಿಯಿಂದ ಹೊಡೆದ ಹಾಗೆ ಕೋಲುಮಿಂಚಿನಿಂದ ಹೊಡೆಸಿಕೊಂಡು ಆಕಾಶ ನೋವಿನಿಂದ ಕೂಗಿ ಕೊಳ್ಳುತ್ತ ಇರುವಂತೆ ಗುಡುಗು ಗುಡುಗುಟ್ಟುತ್ತ ಇದೆ.

" ಲಕ್ಷ್ಮಣ, ಕರಿಯ ಮೋಡಗಳ ನಡುವೆ ಥಳಥಳಿಸುವ ಮಿಂಚನ್ನು ನೋಡು. ರಾವಣಾಸುರನ ಮಡಿಲಿನಿಂದ ತಪ್ಪಿಸಿಕೊಳ್ಳಲು ಸೀತೆ ಹೀಗೇ ಹೆಣಗಾಡಿದಳು ಎನಿಸುತ್ತದೆ. ಎಲ್ಲೆಲ್ಲೂ ಮೋಡ ಕವಿದು ಚಂದ್ರ ನಕ್ಷತ್ರ ಯಾವುದೂ ಕಾಣಿಸದು. ಕಗ್ಗತ್ತಲೆ. ದಿಕ್ಕು ಕಾಣದು. ಕಾಮುಕರಿಗೆ ಇದು ಒಳ್ಳೆಯ ಸಮಯ. ಮಳೆಗಾಲ ಬಂದು ಬೆಟ್ಟದ ತಪ್ಪಲಿನ ಕಾಡುಮಲ್ಲಿಗೆ ಚೆನ್ನಾಗಿ ಅರಳಿದೆ. ನೆಲದಿಂದ ಏಳುವ ಆವಿ ಆ ಹೂಗಳಲ್ಲಿ ತುಂಬಿಕೊಂಡು ನಲ್ಲನ ಸಮಾಗಮದಿಂದ ಆನಂದದ ಕಂಬನಿಗರೆಯುವ ನಲ್ಲೆಯಂತೆ ಕಾಣುತ್ತ ಇವೆ ಆ ಹೂ. ನನಗೆ ಕಾಮೋದ್ದೀಪನ ಮಾಡುತ್ತ ಇವೆ.

" ಬೇಸಗೆ ತಾಪ ಈಗ ಇಲ್ಲ, ಗಾಳಿ ಶಾಂತವಾಗಿ ಬೀಸುತ್ತದೆ. ಬಿರುಸು ಆಗಿ ಬೀಸಿ ಧೂಳು ಎಬ್ಬಿಸಿ ಮುಗಿಲನ್ನು ಧೂಳಿನಿಂದ ಮುಚ್ಚುತ್ತ ಇಲ್ಲ. ತಣ್ಣಗೆ ಇದೆ ಗಾಳಿ. ರಾಜರ ದಂಡಯಾತ್ರೆಗಳು ಸದ್ಯ ನಿಂತಿವೆ. ದೇಶಾಂತರ

ಹೋದವರು ಎಲ್ಲರೂ ಸ್ವದೇಶಕ್ಕೆ ಹಿಂದಿರುಗುತ್ತ ಇದಾರೆ. ಹಂಸಗಳು ಎಲ್ಲವೂ ಮಾನಸಸರೋವರಕ್ಕೆ ಹೋದವು. ಚಕ್ರವಾಕ ದಂಪತಿಗಳಿಗೆ ಕಾಮೋದ್ರೇಕ. ಒಂದನ್ನು ಒಂದು ಅಗಲದೆ ಇವೆ. ಮಳೆ ಸುರಿದು ದಾರಿ ಎಲ್ಲವೂ ಕೆಟ್ಟು ವಾಹನ ಸಂಚಾರ ನಿಂತುಹೋಗಿದೆ.

"ಆಕಾಶದಲ್ಲಿ ಒಂದು ಕಡೆ ಮೋಡ ಕವಿದು ಸ್ವಲ್ಪ ಬೆಳಕು ಕಾಣುತ್ತದೆ. ಇನ್ನೊಂದು ಕಡೆ ಕಾಣದು. ಅಲ್ಲಲ್ಲಿ ಪರ್ವತಗಳು ಕಂಡುಬಂದಾಗ ಅಲೆ ಆಡದ ಪ್ರಶಾಂತಸಮುದ್ರ ಕಂಡಹಾಗೆ ಆಗುತ್ತದೆ. ಬೆಟ್ಟದಿಂದ ಹರಿದುಬರುವ ತೊರೆಗಳ ನೀರನ್ನು ನೋಡು. ಬೆಟ್ಟದ ಮೇಲಿನ ಧಾತುಗಳು ಬೆರೆತು ನೀರು ಕೆಂಪು ಆಗಿದೆ. ಇದು ಹೊಸ ನೀರು. ಈ ನೀರಿನಲ್ಲಿ ಉದುರಿಬಿದ್ದ ಸಾಲಪುಷ್ಪ ಕದಂಬಪುಷ್ಪ ಗಳನ್ನು ನೋಡು. ಎಷ್ಟು ವೇಗ ಈ ಗಿರಿನದಿಗಳದು. ಈ ಪ್ರವಾಹಘೋಷಕ್ಕೆ ನವಿಲುಗಳ ಕೇಕೆಯ ಸದ್ದೂ ಸೇರಿದೆ. ನೇರಿಳೆಹಣ್ಣು ಕಪ್ಪಗೆ ದುಂಬಿಯ ಹಾಗೆ ಇದೆ. ರಸ ತುಂಬಿ ಇದೆ. ಯಥೇಚ್ಛ ಆಗಿ ತಿನ್ನುತ್ತ ಇದಾರೆ ಜನ. ಚೆನ್ನಾಗಿ ಮಾಗಿ ಗಾಳಿಗೆ ನೆಲಕ್ಕೆ ಉದುರಿಬಿದ್ದಿವೆ ಬಗೆಬಗೆಯ ಬಣ್ಣದ ಮಾವಿನಹಣ್ಣು.

"ಮಿಂಚಿನ ಗೊಂಚಲುಗಳು ಬಾವುಟಗಳ ಹಾಗೆ, ಹಂಸಪಂಕ್ತಿಯೇ ಹೂಮಾಲೆ. ಬೆಟ್ಟದ ಶಿಖರಗಳಂತೆ ಕಾಣುತ್ತ ಮೋಡಗಳು ರಣರಂಗದಲ್ಲಿ ಮುದ್ದಾನೆಗಳು ಘೀಂಕರಿಸುವಂತೆ ಸದ್ದುಮಾಡುತ್ತ ಇವೆ. ತಮ್ಮ, ಮಳೆ ಬಿದ್ದುದರಿಂದ ಹಚ್ಚಗೆ ಚಿಗುರಿದೆ ಹುಲ್ಲು ಬಯಲು. ಮಳೆ ಸುರಿದು ನಿಂತು ಮೋಡಗಳು ಬಿಳುಪು ಆಗಿವೆ. ನವಿಲುಗಳು ಕೇಕೆಹಾಕುತ್ತ ಕುಣಿಯುತ್ತ ಇವೆ. ಎಷ್ಟು ಸೊಬಗು, ಎಷ್ಟು ಸೊಗಸು ಸಂಜೆಯಲ್ಲಿ ಈ ಕಾಡು !

"ಈ ನೀರ್ಮೋಡಗಳು ನೀರಿನ ಭಾರಕ್ಕೆ ಬೇಗ ಬೇಗ ಸಾಗಲಾರದೆ ಅಲ್ಲಲ್ಲಿ ಬೆಟ್ಟದ ಶಿಖರಗಳ ಮೇಲೆ ಕೂತು ದಣಿವು ಆರಿಸಿಕೊಂಡು ಗುಡುಗುತ್ತ ಮೆಲ್ಲಗೆ ಮುಂದಕ್ಕೆ ಹೋಗುತ್ತ ಇವೆ. ಮೋಡಗಳನ್ನು ಮೋಹಿಸಿ ಅವನ್ನು ಹಿಂಬಾಲಿಸಿ ಹೋಗುತ್ತಿವೆ ಹಂಸಪಕ್ಷಿಗಳ ಸಾಲು. ಆಕಾಶವನ್ನು ಸಿಂಗರಿಸಲು ಬಿಳಿದಾವರೆಯ ಹೂಗಳ ಮಾಲೆಯನ್ನು ಗಾಳಿ ತೂಗಾಡಿಸುತ್ತ ಇರುವಂತಿದೆ.

"ಲಕ್ಷ್ಮಣ, ಮಳೆಯ ಹುಳಗಳು ಇಂದ್ರಗೋಪಗಳು ಬಿದ್ದಿವೆ ಹಸಿರು ಹುಲ್ಲಿನ ಮೇಲೆ ಅಲ್ಲಲ್ಲಿ. ನಡುನಡುವೆ ಕೆಂಪು ಚಿತ್ತಾರ ಮಾಡಿದ ಗಿಣಿಹಸಿರು

ಬಣ್ಣದ ಶಾಲನ್ನು ಹೊದ್ದುಕೊಂಡ ಹಾಗೆ ಇದೆ ಭೂಮಿ. ಒಳ್ಳೇ ಚೆಲುವೆ. ಸಮುದ್ರವನ್ನು ಕೂಡಲು ನದಿಗಳು ಎಲ್ಲವೂ ಬೇಗ ಬೇಗ ಓಡಿಹೋಗುತ್ತ ಇವೆ. ಬಲಾಕಪಕ್ಷಿಗಳು ಮೋಡಗಳ ಬೆನ್ನಂಟಿ ಹೋಗುತ್ತಿವೆ. ಹೆಂಗಸರು ಕಾಮ-ಪರವಶರು ಆಗಿ ತಮ್ಮ ನಲ್ಲರನ್ನು ಸೇರಲು ಹೋಗುತ್ತಿದಾರೆ. ನವಿಲುಗಳ ನಾಟ್ಯದಿಂದ ವನಪ್ರದೇಶ ಶೋಭಿಸುವುದು ಈಗಲೇ. ಕದಂಬವೃಕ್ಷಗಳೂ ಸಮೃದ್ಧಿ ಆಗಿ ಹೂ ಬಿಡುವುದೂ ಈಗಲೇ. ಗೂಳಿಗಳು ಕಾಮಾಸಕ್ತ ಆಗಿ ಗೋವುಗಳನ್ನು ಅರಸಿಹೋಗುತ್ತ ಇವೆ. ನೆಲ ಎಲ್ಲವೂ ಪಚ್ಚೆಪಯಿರಿನಿಂದ ನಳನಳಿಸುತ್ತಿವೆ. ಶ್ರೀ ಮಹಾವಿಷ್ಣು ಮೆಲ್ಲಮೆಲ್ಲನೆ ಯೋಗನಿದ್ರೆಗೆ ಒಳಗೆ ಆಗುತ್ತ ಇದಾನೆ.

"ತಮ್ಮ, ಎಡೆಬಿಡದೆ ಮಳೆ ಸುರಿಯುತ್ತದೆ ಈ ಕಾಲದಲ್ಲಿ. ನದಿಗಳಲ್ಲಿ ನೆರೆ. ಮದ್ದಾನೆಗಳು ಘೀಂಕರಿಸುತ್ತಿವೆ. ವನಪ್ರದೇಶಕ್ಕೆ ಹೊಸ ಶೋಭೆ ಬಂದಿದೆ. ನಲ್ಲೆಯರನ್ನು ಅಗಲಿದ ವಿರಹಿಗಳಿಗೆ ನಲ್ಲೆಯರದೇ ನೆನಪು. ನವಿಲುಗಳಿಗೆ ಬಲು ಸಂತೋಷ. ನಾಟ್ಯ ಮಾಡುತ್ತ ಇರುತ್ತವೆ. ಕೋತಿಗಳಿಗೂ ಆಹಾರ ಸಮೃದ್ಧಿ. ಸುಖದಿಂದ ಇವೆ. ಕೇದಗೆಹೂವಿನ ವಾಸನೆಯಿಂದ ಹಿಗ್ಗಿ ಗಿರಿನದಿಗಳ ಪ್ರವಾಹವೇಗದ ಸದ್ದನ್ನು ಕೇಳಿ ರೇಗಿ ಮಳೆಯಲ್ಲಿ ಅತ್ತಿತ್ತ ಓಡಾಡುತ್ತ ಇವೆ ಮದ್ದಾನೆಗಳು. ನವಿಲುಗಳಿಗೆ ಸಮ ಆಗಿ ಗರ್ಜಿಸುತ್ತಿವೆ. ಕದಂಬಪುಷ್ಪಗಳ ಮಕರಂದವನ್ನು ಸವಿದು ಮರುಗಳಿಗೆಯಲ್ಲೇ ಮದ ಏರಿದ ತುಂಬಿಗಳು ಕದಂಬವೃಕ್ಷದಲ್ಲಿ ಕುಳಿತಿವೆ. ಮಳೆಯ ಹೊಡೆತಕ್ಕೆ ಅವುಗಳ ಮದ ಇಳಿಯುತ್ತಿದೆ. ರಸ ತುಂಬಿದ ನೇರಿಳೆಹಣ್ಣು ಇದ್ದಿಲುಪುಡಿಯ ಹಾಗೆ ಕಪ್ಪಗೆ ಮರದಿಂದ ತೂಗಾಡುತ್ತ ದುಂಬಿಗಳು ಮರದಲ್ಲಿ ಕುಳಿತಂತೆ ಕಾಣುತ್ತಿವೆ.

"ಲಕ್ಷ್ಮಣ, ಬೆಟ್ಟದಮೇಲಿನ ಅಡವಿಗೆ ಹೋಗುವಾಗ ಮೋಡದ ಗುಡುಗು ಕೇಳಿಸಿತು ಕಾಡಾನೆಗಳಿಗೆ. ಇನ್ನೊಂದು ಆನೆಯ ಘೀಂಕಾರ ಅದು ಎಂದುಕೊಂಡು ಮತ್ತೆ ಹಿಂದಿರುಗುತ್ತ ಇವೆ ಅದರೊಡನೆ ಹೋರಾಡಲು. ಒಂದು ಕಡೆ ಭ್ರಮರಗಾನ, ಒಂದು ಕಡೆ ಮಯೂರನಾಟ್ಯ, ಒಂದು ಕಡೆ ಮದ್ದಾನೆಗಳ ಗರ್ಜನೆ. ಎಷ್ಟು ಸೊಗಸು ಈ ಅಡವಿ! ಕಡವು ಮತ್ತಿ ಬಾಳೆ ಹೂ ಕಾಣಬರುತ್ತಿವೆ. ಹೊಸ ನೀರು ಕುಡಿದು ನವಿಲುಗಳಿಗೆ ಮದ ಏರಿದೆ. ಗರಿಗೆದರಿ ನಾಟ್ಯಮಾಡುತ್ತಿವೆ. ಈ ವನಪ್ರದೇಶ ಒಂದು ಪಾನಶಾಲೆಯ ಹಾಗೆ ಕಾಣುತ್ತದೆ.

"ಮಳೆಯ ದೇವತೆ ಇಂದ್ರ ಸುರಿಸಿದ ಮಳೆಹನಿ ಮರದ ಎಲೆಗಳ ಮೇಲೆ ಬಿದ್ದು ಮುತ್ತಿನಂತೆ ಕಾಣುತ್ತಿವೆ. ಬಣ್ಣಬಣ್ಣದ ಗರಿಗಳ ಚಾತಕ ಪಕ್ಷಿಗಳಿಗೆ ಬಾಯಾರಿಕೆ ಅಡಗಲಿಲ್ಲ. ಈ ಮುತ್ತಿನ ಮಣಿಗಳನ್ನು ಬಲು ಹಿಗ್ಗಿನಿಂದ ಕುಡಿಯುತ್ತ ಇವೆ. ಅಡವಿಗಳು ಗಾನಗೋಷ್ಠಿಯನ್ನು ನಡಸುವ ಹಾಗೆ ತೋರುತ್ತಿದೆ. ಭ್ರಮರಗಳ ಝೇಂಕಾರವೇ ತಂತೀವಾದ್ಯಧ್ವನಿ, ಕಪ್ಪೆಗಳ ವಟವಟ ಸದ್ದು ತಾಳ, ಮೋಡದ ಗುಡುಗಿನ ಸದ್ದು ಮೃದಂಗಧ್ವನಿ. ನವಿಲುಗಳ ನಾಟ್ಯ. ಗರಿಗೆದರಿ ಇಂಪು ಆಗಿ ಹಾಡುವ ನವಿಲುಗಳ ಗಾನ. ಇದು ಎಲ್ಲವನ್ನೂ ನೋಡುತ್ತ ಮರದ ಕೊಂಬೆಗಳಲ್ಲಿ ಕುಳಿತ ಕೆಲವು ನವಿಲು. ಹಾಡು, ಕುಣಿತ, ಶ್ರವಣ-ವೀಕ್ಷಣ. ಸಂಗೀತಸಭೆ ನೆರೆದ ಹಾಗೇ ಇದೆ ಅಡವಿಗಳಲ್ಲಿ.

"ಲಕ್ಷ್ಮಣ, ಬಹುಕಾಲದಿಂದ ಎಲ್ಲ ವ್ಯಾಪಾರವನ್ನೂ ತೊರೆದು ನಿದ್ದೆ ಮಾಡಿದ ಕಪ್ಪೆಗಳು ಮೋಡಗಳ ಗುಡುಗಿನ ಸದ್ದಿಗೆ ಎಚ್ಚರಗೊಂಡಿವೆ. ಬಗೆ ಬಗೆಯ ಬಣ್ಣ-ರೂಪ ತಳೆದು ಮಳೆನೀರಿನ ಹೊಡೆತಕ್ಕೆ ಹಿಗ್ಗಿ ವಟಗುಟ್ಟುತ್ತ ಇವೆ. ನದಿಗಳಿಗೆ ನೆರೆ ಬಂದು ಉಕ್ಕಿ ದಡಗಳನ್ನು ಕೊರೆದು ಹರಿಯುತ್ತ ಇವೆ. ದಡ ಕಾಣುವುದೇ ಇಲ್ಲ. ನೀರಿನಲ್ಲಿ ಹೂ ಹಣ್ಣು ಕಾಯಿ ಹೊಡೆದುಕೊಂಡು ಬರುತ್ತಿವೆ. ಚಕ್ರವಾಕ ಪಕ್ಷಿಗಳು ನೀರಿನ ಮೇಲೆ ತೇಲಿಬರುತ್ತಿವೆ. ತಮ್ಮ ನಲ್ಲ ಸಮುದ್ರರಾಜನನ್ನು ಕೂಡಲು ಹೀಗೆ ಓಡುತ್ತ ಇರುವ ಈ ನದಿಗಳನ್ನು ನೋಡಿದರೆ ಉತ್ತಮ ಫಲ ಮುಂತಾದ ಉಪಾಹಾರಗಳನ್ನು ತೆಗೆದುಕೊಂಡು ಭೋಗದ್ರವ್ಯಗಳನ್ನು ಜೊತೆಮಾಡಿಕೊಂಡು ಹಿರಿಯರನ್ನು ಲೆಕ್ಕಿಸದೆ ತಮ್ಮ ನಲ್ಲರನ್ನು ಸೇರಲು ಹೋಗುವ ಕಾಮಪರವಶರು ಆದ ಉಬ್ಬಿದ ಸ್ತನಗಳ ಯುವತಿಯರ ಹಾಗೆ ಇವೆ.

"ಕಾಳ್ಗಿಚ್ಚು ಉರಿದು ಆರುವಾಗ ಇನ್ನೂ ಅಲ್ಲಲ್ಲಿ ಉರಿಯುವ ಬೆಂಕಿಯಿಂದ ಬೆಟ್ಟಗಳು ಒಂದರ ಮೇಲೆ ಒಂದು ಕಾಣುತ್ತವೆ. ಹೊಸ ನೀರು ತುಂಬಿದ ಕಪ್ಪು ಮಳೆಯ ಮೋಡಗಳು ಬಂದಾಗ ಮೋಡ ಕಪ್ಪಗೆ ಕಾಣುತ್ತವೆ. ನವಿಲು ಹಿಗ್ಗಿ ಕೇಕೆಹಾಕುತ್ತಿವೆ. ಹಸಿರು ನೆಲದ ಬಯಲಿನಲ್ಲಿ ಇಂದ್ರಗೋಪ ಹುಳಗಳು ಕೆಂಪಗೆ ಬಿದ್ದಿವೆ. ಕಡವು ಮುಂತಾದ ಗಿಡಗಳ ಹೂವಿನ ವಾಸನೆ ಘಮಘಮಿಸುತ್ತಿದೆ. ಹೀಗೆ ಸೊಬಗು ಸುರಿವ ಕಾಡಿನಲ್ಲಿ ಕಾಡಾನೆಗಳ ತಿರುಗಾಟ ಹೆಚ್ಚಿದೆ. ಮಳೆಯ ಹೊಡೆತಕ್ಕೆ ಕಮಲದ ಕೇಸರ ಉದುರಿಹೋಯಿತು. ಕಮಲ

ವನ್ನು ಬಿಟ್ಟು ಹೊಸ ಕೇಸರಗಳನ್ನು ಅರಳಿಸಿದ ಕದಂಬಪುಷ್ಪಗಳಿಗೆ ಹೋಗುತ್ತ ಇವೆ ದುಂಬಿಗಳು.

"ಆನೆಗಳಿಗೆ ಈಗ ಕೊಬ್ಬು. ಗೂಳಿಗಳಿಗೆ ಬಲು ಹಿಗ್ಗು. ಗುಟರು ಹಾಕುತ್ತಿವೆ. ಸಿಂಹಗಳ ಓಡಾಟ ಇಲ್ಲ. ವಿಶ್ರಾಂತಿ ಪಡೆಯುತ್ತಿವೆ. ಬಗೆಬಗೆಯ ಹೂ ಅರಳಿ ಬೆಟ್ಟಗಳು ಮನಸೆಳೆಯುತ್ತ ಇವೆ. ಯುದ್ಧಕಾರ್ಯವನ್ನು ನಿಲ್ಲಿಸಿ ಸುಖದಿಂದ ಇದಾರೆ ರಾಜರು. ದೇವೇಂದ್ರ ಒಬ್ಬನಿಗೇ ಈಗ ಆಟ. ಎಲ್ಲೆಲ್ಲೂ ಮಳೆಗರೆಯುತ್ತ ಇದಾನೆ. ಆಕಾಶದಲ್ಲಿ ಸುತ್ತುವ ಮೋಡಗಳು ಸಮುದ್ರ ಘೋಷಕ್ಕಿಂತ ಹೆಚ್ಚು ಗರ್ಜನೆಮಾಡುತ್ತಿವೆ. ಕೆರೆಕೊಳಬಾವಿಗಳನ್ನು ತುಂಬಿಸಿ ಭೂಮಿಯನ್ನೇ ನೀರಿನಲ್ಲಿ ಮುಳುಗಿಸಿ ಮಳೆಗರೆಯುತ್ತ ಇವೆ. ಗಾಳಿಯ ಸದ್ದೇ ಸದ್ದು. ಎಡೆಬಿಡದ ಮಳೆ. ನದಿಯಲ್ಲಿ ನೆರೆ. ದಡವನ್ನು ಮೀರಿ ವೇಗದಿಂದ ಹರಿಯುವ ನೆಗಸು.

"ಜಲಕುಂಭಗಳಿಂದ ಪ್ರಜೆಗಳು ರಾಜರಿಗೆ ಅಭಿಷೇಕ ಮಾಡುತ್ತಾರೆ. ಮೇಘಗಳಲ್ಲಿ ನೀರು ತುಂಬಿಕೊಟ್ಟರೆ ಗಾಳಿ ಅದನ್ನು ತಂದು ಅಭಿಷೇಕಮಾಡುತ್ತ ಇದೆ. ಅಭಿಷೇಕ ಆದಮೇಲೆ ರಾಜರಿಗೆ ಕಾಂತಿ ಹೆಚ್ಚು. ಕುಂಭವರ್ಷದಿಂದ ಅಭಿಷೇಕ ಮಾಡಿಸಿಕೊಂಡ ಪರ್ವತಗಳು ತಮ್ಮ ಸಿರಿಯನ್ನು ಸ್ಪಷ್ಟ ಆಗಿ ತೋರಿಸುತ್ತಿವೆ. ಈಗ ಮುಗಿಲನ್ನು ಮುಚ್ಚಿಬಿಡುತ್ತವೆ ಮೋಡಗಳು. ಸೂರ್ಯ ಕಾಣಬಾರದ ಹಗಲು. ರಾತ್ರಿ ನಕ್ಷತ್ರಗಳು ಕಾಣಬಾರವು. ಹೊಸ ಮಳೆಯಿಂದ ಭೂಮಿ ಎಲ್ಲಾ ಮುಚ್ಚಿಹೋಗುತ್ತದೆ. ಎಲ್ಲೆಲ್ಲೂ ನೀರೇ ನೀರು. ನೆಲ ಕಾಣುವುದೇ ಇಲ್ಲ. ಕತ್ತಲೆ ಕವಿದು ದಿಕ್ಕೇ ಕಾಣದು.

"ತಮ್ಮ, ಎತ್ತರದ ಪರ್ವತಶಿಖರಗಳು ಎಲ್ಲವನ್ನೂ ಮಳೆನೀರು ತೊಳೆದಿವೆ. ಆ ಬೆಟ್ಟಗಳ ಮೇಲೆ ಹರಿಯುವ ಗಿರಿನದಿಗಳು ಮುತ್ತಿನ ಹಾರಗಳ ಹಾಗೆ ಬೆಳಗುತ್ತ ಇವೆ. ಈ ಗಿರಿನದಿಗಳು ಬೆಟ್ಟದಿಂದ ಕೆಳಕ್ಕೆ ಇಳಿಯುವಾಗ ದೊಡ್ಡ ದೊಡ್ಡ ಬಂಡೆಗಲ್ಲು ಅಡ್ಡಬಂದು ನೀರು ಹನಿ ಹನಿ ಆಗಿ ಸಿಡಿಯುತ್ತದೆ. ಮುತ್ತಿನ ಹಾರ ಹರಿದುಹೋಗಿ ಮುತ್ತು ಚೆಲ್ಲಾಪಿಲ್ಲಿ ಆದಂತೆ ಕಾಣುತ್ತದೆ ಅದು ನವಿಲುಗಳು ಕೇಕೆ ಹಾಕುವ ಗುಹೆಗಳಲ್ಲಿ ಮುತ್ತು ಚೆಲ್ಲಿದಂತೆ ಇರುತ್ತದೆ. ಸುರತಸಮಯದಲ್ಲಿ ಅಪ್ಸರೆಯರ ಕಂಠದಿಂದ ಉದುರಿದ ಮುತ್ತಿನ ಹಾರಗಳ ಹಾಗೆ ಮಳೆನೀರಿನ ಧಾರೆ ಎಲ್ಲೆಡೆಗಳಲ್ಲೂ ಬೀಳುತ್ತ ಇದೆ. ಹಕ್ಕಿಗಳು ಗೂಡಿಗೆ

ಹೋಗುತ್ತಿವೆ. ತಾವರೆಹೂ ಬಾಡಿ ಮುದುರಿಕೊಳ್ಳುತ್ತ ಇದೆ. ಜಾಜಿಯ ಹೂ ಅರಳುತ್ತ ಇವೆ. ಇದನ್ನು ನೋಡಿ ಸೂರ್ಯ ಮುಳುಗುತ್ತ ಇದಾನೆ ಎಂದುಕೊಳ್ಳಬೇಕು.

"ಲಕ್ಷ್ಮಣ, ರಾಜರ ದಂಡಯಾತ್ರೆ ನಿಂತಿದೆ. ಯುದ್ಧಕ್ಕೆ ಹೊರಟ ದಂಡು ಕೂಡ ಹಿಂತಿರುಗಿ ಊರಿಗೆ ಬರುತ್ತಿದೆ. ರಾಜರ ಪರಸ್ಪರ ವಿರೋಧ ಶಾಂತ ಆಗಿದೆ. ಮಾರ್ಗಗಳೇ ಸರಿ ಆಗಿ ಇಲ್ಲ. ಸಾಮವೇದಿ ಬ್ರಾಹ್ಮಣರಿಗೆ ಅಧ್ಯಯನಕ್ಕೆ ಆರಂಭಕಾಲ ಬಂತು. ಭಾದ್ರಪದ ಮಾಸ ಬಂತಲ್ಲ. ಕೋಸಲಾಧಿಪತಿ ಭರತ ಅಗತ್ಯ ಸಾಮಗ್ರಿಯನ್ನು ಜೊತೆಮಾಡಿಕೊಂಡು ಮನೆಯ ಕೆಲಸ ಎಲ್ಲವನ್ನೂ ತೀರಿಸಿ ಆಷಾಢಮಾಸದಿಂದ ವ್ರತ ಹಿಡಿಯುತ್ತಾನೆ. ಎಲ್ಲಿಗೆ ಆದರೂ ಹೋಗಿ ನಾನು ಹಿಂದಿರುಗಿ ಬಂದಾಗ ಅಯೋಧ್ಯೆಯ ಪೌರರು ನನ್ನನ್ನು ನೋಡಿ ಆನಂದದಿಂದ ಮಾಡಿದ ಕೋಲಾಹಲಧ್ವನಿಯಂತೆ ಇದೆ ಸರಯೂ ನದಿಯ ಪ್ರವಾಹದ ವೇಗದ ಧ್ವನಿ.

"ತಮ್ಮ, ಸುಗ್ರೀವನಿಗೆ ಶತ್ರುಬಾಧೆ ಹೋಯಿತು. ಹೆಂಡತಿ ಲಭಿಸಿದಳು. ರಾಜ್ಯ ಸಿಕ್ಕಿತು. ಈ ಮಳೆಗಾಲದಲ್ಲಿ ಸಮಸ್ತ ಭೋಗಗಳನ್ನೂ ಅನುಭವಿಸುತ್ತ ಸುಖದಿಂದ ಕಾಲಕಳೆಯುತ್ತ ಇದಾನೆ. ಲಕ್ಷ್ಮಣ, ನನಗೆ ಎಲ್ಲಿ ಆ ಭಾಗ್ಯ? ನನಗೆ ರಾಜ್ಯ ಇಲ್ಲ, ಹೆಂಡತಿ ಇಲ್ಲ. ಪ್ರವಾಹದ ಹೊಡೆತಕ್ಕೆ ಕುಸಿದುಬಿದ್ದ ನದಿಯ ದಡದ ಹಾಗೆ ಈ ಕಾಡಿನಲ್ಲಿ ಕಷ್ಟಪಡುತ್ತ ಇದೇನೆ. ನನ್ನದು ಮಿತಿ ಮೀರಿದ ದುಃಖ. ಈ ಮಳೆಗಾಲ ಬಲು ದೀರ್ಘ. ಒಂದೊಂದು ಗಳಿಗೆಯನ್ನು ಕಳೆಯುವುದೂ ಕಷ್ಟ. ರಾವಣಾಸುರ ಬಹು ದೊಡ್ಡ ಶತ್ರು. ಈ ಮೂರನ್ನೂ ಹೇಗೆ ದಾಟಬೇಕೋ ತಿಳಿಯದು. ದಾರಿಗಳು ಮಳೆಯಿಂದ ಕೆಟ್ಟುಹೋಗಿ ಇದು ದಂಡಯಾತ್ರೆಗೆ ಕಾಲ ಅಲ್ಲ. ಆದ್ದರಿಂದಲೇ ರಾವಣನನ್ನು ಕೊಂದು ಸೀತೆಯನ್ನು ತರೋಣ ಎಂದು ಸುಗ್ರೀವ ನನಗೆ ಹೇಳಿದಾಗ ನಾನು ಒಪ್ಪಲಿಲ್ಲ.

"ಸುಗ್ರೀವನೂ ಇಷ್ಟು ದಿನ ಪಡಬಾರದ ಕಷ್ಟ ಪಟ್ಟಿದಾನೆ. ಮೊನ್ನೆ ಬಹುಕಾಲದಮೇಲೆ ಹೆಂಡತಿಯನ್ನು ಪಡೆದ. ನಮ್ಮ ಕಾರ್ಯ ಮಹತ್ತರ. ಸ್ವಲ್ಪ ಪ್ರಯತ್ನದಿಂದ ಸ್ವಲ್ಪ ಕಾಲದಲ್ಲಿ ಆಗುವಂಥದು ಅಲ್ಲ. ಆದ್ದರಿಂದ ಶರತ್ಕಾಲ ಬಂದಮೇಲೆ ನಡೆಯಲಿ ಪ್ರಯತ್ನ ಎಂದೆ. ಮಳೆಗಾಲ ಮುಗಿಯುವವರೆಗೂ ಸುಖವನ್ನು ಅನುಭವಿಸು ಎಂದೆ. ಶರತ್ಕಾಲ ಬಂದಕೂಡಲೆ ಸುಗ್ರೀವ ತಾನೇ

ಬರುತ್ತಾನೆ. ನಾನು ಮಾಡಿದ ಉಪಕಾರಕ್ಕೆ ಪ್ರತಿ ಉಪಕಾರ ಮಾಡುತ್ತಾನೆ. ಖಂಡಿತ. ಉಪಕಾರವನ್ನು ಮರೆಯ. ಅದಕ್ಕಾಗಿ ನಾನು ಸಮಯ ಕಾಯುತ್ತ ಇದೇನೆ.

"ವತ್ಸ, ಶರತ್ಕಾಲ ಬರಲಿ. ನದಿಗಳ ನೀರು ತಿಳಿ ಆಗಲಿ. ಸುಗ್ರೀವನ ಮನಸ್ಸು ಪ್ರಸನ್ನ ಆಗಲಿ. ಅಲ್ಲಿಯವರೆಗೆ ಕಾಯಬೇಕು. ಉಪಕಾರಿಗೆ ಪ್ರತಿ ಉಪಕಾರ ಮಾಡುತ್ತಾನೆ ವೀರಪುರುಷ. ಕೃತಘ್ನ ಮಾಡಿಸಿಕೊಂಡ ಉಪಕಾರವನ್ನು ಮರೆತು ಸಜ್ಜನರ ಮನಸ್ಸನ್ನು ನೋಯಿಸುತ್ತಾನೆ."

ರಾಮ ಹೇಳಿದ ಎಲ್ಲವನ್ನೂ ಕೇಳಿದ ಲಕ್ಷ್ಮಣ. ಮುಂದೆ ನಡೆಸಬೇಕಾದುದನ್ನು ಮನಸಿನಲ್ಲಿಯೆ ಗುಣಾಕಾರ ಹಾಕಿದ. ಕೈಜೋಡಿಸಿ ತನ್ನ ಅಭಿಪ್ರಾಯವನ್ನು ತಿಳಿಸಿದ. "ಅಣ್ಣ, ಮಾನವೇಂದ್ರ, ಆಡಿದ ಮಾತಿಗೆ ತಪ್ಪುವವನು ಅಲ್ಲ ಸುಗ್ರೀವ. ಬೇಗನೆ ನಿನ್ನ ಕೋರಿಕೆಗಳನ್ನು ನಡೆಸಿಕೊಡುತ್ತಾನೆ. ನೀನು ಮಾತ್ರ ಧೈರ್ಯ ಕುಂದಬೇಡ. ನಿನ್ನ ಶತ್ರು ರಾವಣನನ್ನು ಸಂಹರಿಸುವೆಯಂತೆ. ಈ ಮಳೆಗಾಲ ಕಳೆಯುವವರೆಗೂ ಸಹಿಸಿಕೊ. ಶರತ್ಕಾಲ ಬರಲಿ" ಎಂದ.

೨೯

ಮಳೆಗಾಲ ಕಳೆಯಿತು. ಮಿಂಚು ಮೋಡ ತಗ್ಗಿದವು ಮುಗಿಲಿನಲ್ಲಿ. ಆಕಾಶ ನಿರ್ಮಲ ಆಯಿತು. ಸಾರಸಪಕ್ಷಿಗಳು ಕೂಗಲು ಮೊದಲುಮಾಡಿದವು. ಬೆಳುದಿಂಗಳಿನಲ್ಲಿ ಮುಗಿಲು ಮನೋಹರ ಆಯಿತು.

ಸುಗ್ರೀವನ ಬಯಕೆ ಎಲ್ಲವೂ ಈಡೇರಿತು. ಸಕಲ ಸುಖಭೋಗವೂ ಲಭಿಸಿತು. ಆದರೆ ಧರ್ಮಾರ್ಥಸಾಧನೆಗೆ ಗಮನ ಕೊಡಲಿಲ್ಲ. ಕಾಮುಕತನದ ದಾರಿಹಿಡಿದ. ಸ್ತ್ರೀಸುಖದಲ್ಲಿ ಮುಳುಗಿದ. ಕೈಹಿಡಿದ ರುಮೆ, ಬಹುಕಾಲದಿಂದ ತಾನು ಬಯಸಿದ್ದ ತಾರೆ. ಹಗಲೂ ರಾತ್ರಿಯೂ ಕ್ರೀಡೆ. ವೈಮರೆತ. ನಂದನವನದಲ್ಲಿ ಅಪ್ಸರೆಯರ ಸಂಗಡ ದೇವೇಂದ್ರ ಕ್ರೀಡಿಸುವಂತೆ ಕಿಷ್ಕಿಂಧೆಯಲ್ಲಿ ಸದಾ ವಾನರಾಂಗನೆಯರ ಸಂಗಡ ಸುಗ್ರೀವನ ವಿಹಾರ. ರಾಜ್ಯಭಾರವನ್ನು ಮಂತ್ರಿಗಳಿಗೆ ನಿಶ್ಚಿಂತೆಯಿಂದ ಒಪ್ಪಿಸಿದ. ಕಾಮಕೇಳಿಯಲ್ಲಿ ಮುಳುಗಿಹೋದ.

ಇದನ್ನು ಎಲ್ಲವನ್ನೂ ಹನುಮಂತ ನೋಡಿದ. ಯಾವ ಸಮಯದಲ್ಲಿ ಯಾವ ಕೆಲಸ ಮಾಡಬೇಕೋ ಅವನಿಗೆ ಗೊತ್ತು. ಕಾಲೋಚಿತ ಧರ್ಮವನ್ನು ಬಲ್ಲ. ಕಾರ್ಯಾಕಾರ್ಯಗಳ ತತ್ವವನ್ನು ಅರಿತವನು. ನುಡಿಜಾಣ. ಮುಂದೆ ಏನು ಮಾಡಬೇಕೋ ನಿಶ್ಚಯಿಸಿಕೊಂಡ. ಸುಗ್ರೀವ ತಾನು ಹೇಳುವ ಸ್ನೇಹದ ಮಾತನ್ನು ನಡೆಸುವಂತೆ ಅವನನ್ನು ಒಲಿಸಿಕೊಂಡ. ಸುಗ್ರೀವನಿಗೆ ಹಿತಕರ, ಯುಕ್ತಿಯುಕ್ತ, ಧರ್ಮಾರ್ಥನೀತಿಪೂರ್ಣ ಆದ ಮಾತನ್ನು ಇಂಪಾಗಿ ಹೇಳಿದ.

"ಸುಗ್ರೀವ, ರಾಜ್ಯ ಬಂತು. ಕೀರ್ತಿ ಬಂತು. ಕುಲಕ್ರಮಾಗತ ರಾಜ್ಯಶ್ರೀ ಯನ್ನು ಹೆಚ್ಚಿಸಿದೆ. ಆದರೂ ಒಂದು ಮುಖ್ಯಕಾರ್ಯ ಉಳಿದಿದೆ. ಮಿತ್ರಕಾರ್ಯ. ಅದನ್ನು ಈಗ ಮಾಡಬೇಕು. ಕಾಲಧರ್ಮವನ್ನು ಅರಿತು ಗೆಳೆಯರ ಮನಸ್ಸಿಗೆ ಹಿತ ಆಗುವಂತೆ ನಡೆಯುವವನ ರಾಜ್ಯ ವೃದ್ಧಿ ಆಗುತ್ತದೆ. ಕೀರ್ತಿಪ್ರತಾಪಗಳು ಹೆಚ್ಚುತ್ತವೆ.

"ವಾನರೇಂದ್ರ, ಬೊಕ್ಕಸ ದಂಡು ಗೆಳೆಯರು ಮೂರನ್ನೂ ಸಮ ಆಗಿ ನೋಡಿಕೊಳ್ಳಬೇಕು. ನಡತೆಯಲ್ಲಿ ಕುಂದು ಇರಲೇ ಬಾರದು. ಅಂಥವನ ರಾಜ್ಯಕ್ಕೇ ಅಭಿವೃದ್ಧಿ. ನೀನು ಸದಾಚಾರಸಂಪನ್ನ, ಸನ್ಮಾರ್ಗಪ್ರವೃತ್ತ. ನಿನ್ನ ಗೆಳೆಯರ ಕೆಲಸಗಳನ್ನು ಮೊದಲು ಮಾಡಿ ಅವರನ್ನು ಸಂತೋಷಪಡಿಸಬೇಕು. ಉಳಿದ ಕೆಲಸಗಳನ್ನು ಬಿಟ್ಟು ಗೆಳೆಯರ ಕೆಲಸಗಳನ್ನು ಪ್ರೀತಿ ಉತ್ಸಾಹಗಳಿಂದ ಮಾಡಬೇಕು. ಹಾಗೆ ಮಾಡದೆ ಅಸಡ್ಡೆ ಮಾಡುವವನು ಮಾಡಿದುದು ಎಲ್ಲವೂ ವ್ಯರ್ಥ. ಎಂಥ ಮಹತ್ಕಾರ್ಯವನ್ನು ಮಾಡಿದರೂ ಅಷ್ಟೇ.

"ವೀರ, ಅರಿಂದಮ, ನಿನ್ನ ಗೆಳೆಯ ರಾಮನ ಕಾರ್ಯವನ್ನು ಮೊದಲು ಮಾಡಬೇಕು. ಸೀತಾದೇವಿಯನ್ನು ಹುಡುಕಲು ಪ್ರಯತ್ನ ಮಾಡಬೇಕು. ಆಗಲೇ ಕಾಲ ಮೀರಿ ಹೋಗುತ್ತ ಇದೆ ಈಗ. ವಾನರೇಶ್ವರ, ರಾಮ ಮಹಾಪ್ರಾಜ್ಞ, ಕಾಲಜ್ಞ. ತನ್ನ ಹೆಂಡತಿ ಸೀತಾದೇವಿಯನ್ನು ಪಡೆಯಲು ಅವನಿಗೆ ಬಹಳ ಆತುರ. ಆದರೂ ಗೆಳೆಯನ ಮನಸ್ಸನ್ನು ಅರಿತು ನಡೆಯಬೇಕು ಎಂಬವನು. ಆದ್ದರಿಂದ ಕಾಲ ಮೀರಿತು ಎಂದು ನಿನ್ನನ್ನು ಆತ ಆಕ್ಷೇಪಿಸಲಾರ. ರಾಮ ಉತ್ತಮವಂಶಪ್ರಸೂತ. ಆ ವಂಶಕ್ಕೇ ರಾಮನಿಂದ ಕೀರ್ತಿ. ಎಣೆ ಇಲ್ಲದ ಮಹಿಮೆ ಅವನದು. ನಮಗೋ ಆತ ಪರಮ ಆಪ್ತ.

“ದೊರೆಯೆ, ನೀನೂ ಅಸಾಧಾರಣ ಗುಣವಂತ. ರಾಮಕಾರ್ಯವನ್ನು ಈಗ ನಡೆಸುವುದು ನಿನ್ನ ಕೆಲಸ. ಆತ ಮೊದಲೇ ನಿನ್ನ ಕೆಲಸವನ್ನು ಮಾಡಿಕೊಟ್ಟ. ಈಗ ಕಪಿಸೇನೆ ಕರೆಯಿಸಿ ಸೀತಾದೇವಿಯನ್ನು ಹುಡುಕಲು ಕಳಿಸು. ರಾಮ ಬಂದು ನಿನ್ನನ್ನು ಕೇಳಬಹುದು. ಅದಕ್ಕೆ ಮೊದಲೇ ಈ ಕೆಲಸ ಮಾಡಿದರೆ ನಮಗೆ ಕಾಲಮೀರಿದ ದೋಷ ಬಾರದು. ಆತ ಬಂದು ನಮ್ಮನ್ನು ಪ್ರೇರಿಸಿದ ಮೇಲೆ ನಾವು ಈ ಕೆಲಸಮಾಡಿದರೂ ಕಾಲಮೀರಿದ ದೋಷ ನಮಗೆ ತಪ್ಪದು.

“ವಾನರೇಂದ್ರ, ಏನೂ ಉಪಕಾರ ಮಾಡದೆ ಇದ್ದವರಿಗೂ ಉಪಕಾರ ಮಾಡುವವನು ನೀನು. ನಿನಗೆ ರಾಜ್ಯ ಐಶ್ವರ್ಯ ಕೊಡಿಸಿ ಮಹೋಪಕಾರ ಮಾಡಿದ ರಾಮನ ಕೆಲಸವನ್ನು ಮಾಡು ಎಂದು ನಾನು ಹೇಳಬೇಕೆ ನಿನಗೆ? ಸಮಸ್ತ ವಾನರಭಲ್ಲೂಕಸಮೂಹಗಳಿಗೆ ನಾಥ ನೀನು. ಮಹಾಪರಾಕ್ರಮಿ, ಸಮರ್ಥ. ಇಷ್ಟು ಇದ್ದರೂ ರಾಮಕಾರ್ಯ ಮಾಡಲು ಸೀತಾದೇವಿಯನ್ನು ಹುಡುಕಲು ವಾನರ ಸೇನೆಯನ್ನು ಕಳಿಸಲು ತಡ ಏಕೆ? ರಾಮ ಮಹಾ ಪರಾಕ್ರಮಿ. ಕೋದಂಡ ಹಿಡಿದರೆ ಎಂಥ ದೇವಾಸುರಪನ್ನಗರನ್ನೂ ಗೆಲ್ಲಬಲ್ಲ ಸಮರ್ಥ. ಆದರೆ ನಿನ್ನ ಶಪಥವನ್ನು ನಡೆಸೀಯೋ ಇಲ್ಲವೋ ನಿರೀಕ್ಷಿಸುತ್ತ ಇದ್ದಾನೆ. ನಿನ್ನ ಗೆಳೆತನ ಮಾಡಿದ ಕೂಡಲೆ ನಿನ್ನನ್ನು ಸಂತೋಷಪಡಿಸಬೇಕು ಎಂದು ತನ್ನ ಜೀವದ ಹಂಗುತೊರೆದು ನಿನ್ನ ಕೆಲಸ ಮಾಡಿದ. ಈಗ ಭೂಮಿ ಆಕಾಶಗಳಲ್ಲಿ ಎಲ್ಲಿ ಇದ್ದರೂ ಸೀತಾದೇವಿಯನ್ನು ಹುಡುಕಬೇಡವೆ?

“ಸುಗ್ರೀವ, ದೇವಾಸುರಗಂಧರ್ವಮರುದ್ಗಣಗಳಿಗೇ ಅಂಜುವವನು ಅಲ್ಲ ರಾಮ. ರಾಕ್ಷಸರಿಗೆ ಅಂಜುತ್ತಾನೆಯೆ? ಅಂಥ ಅಪಾರ ಶಕ್ತಿವಂತ ನಿನ್ನ ಗೆಳೆತನ ಮಾಡಿ ನಿನಗೆ ಉಪಕಾರ ಮಾಡಿದ. ಈಗ ನಿನ್ನ ಸರದಿ. ಎಲ್ಲ ರೀತಿಗಳಲ್ಲೂ ನೀನು ಆತನನ್ನು ಸಂತೋಷಪಡಿಸಬೇಕು. ರಾಜ, ನಿನ್ನ ಅಪ್ಪಣೆ ಆದರೆ ಸಾಕು. ಪಾತಾಳದಲ್ಲಿ ಇರಲಿ, ಸಮುದ್ರದಲ್ಲಿ ಇರಲಿ, ಭೂಮಿಯಲ್ಲಿ ಆಗಲಿ. ಆಕಾಶದಲ್ಲಿ ಆಗಲಿ. ಹುಡುಕಲು ಹಿಂಜರಿಯುವವರು ಯಾರು? ಯಾರು ಯಾರು ಯಾವ ಯಾವ ಕೆಲಸ ಮಾಡಬೇಕೋ ಅಪ್ಪಣೆ ಮಾಡು.”

ಹನುಮಂತನ ಮಾತು ಸಮಯೋಚಿತ. ಅದನ್ನು ಕೇಳಿ ವೀರ ಸುಗ್ರೀವನಿಗೆ ರಾಮಕಾರ್ಯದ ಕಡೆ ಗಮನ ಹರಿಯಿತು. ತನಗೆ ಇಷ್ಟನೂ ಕಾರ್ಯಶೀಲನೂ ಆದ ವಾನರಸೇನಾಪತಿ ನೀಲನನ್ನು ಕರೆಯಿಸಿ ಕಪಿಸೇನೆ ಎಲ್ಲವನ್ನೂ ಕರೆಸಲು

ಹೇಳಿದ. "ವಾನರೋತ್ತಮ ನೀಲ, ಈಗಲೇ ಎಲ್ಲ ಕಡೆಗಳಿಂದಲೂ ಕಪಿಸೇನೆಯನ್ನು ಇಲ್ಲಿಗೆ ಕರೆಸು. ಸ್ವಲ್ಪವೂ ತಡಮಾಡದೆ ಯೂಥಪಾಲಕರ ಸಮೇತ ಬರಬೇಕು. ಉತ್ಸಾಹಶಾಲಿಗಳೂ ಶೀಘ್ರಗಾಮಿಗಳೂ ಆದ ಕೆಲವು ನಮ್ಮ ಸೇನಾನಾಯಕರನ್ನೂ ವಾನರ ವೀರರನ್ನೂ ಬರಮಾಡಲು ನನ್ನ ಅಪ್ಪಣೆ ಹೊರಡಿಸು. ಇದು ಎಲ್ಲವನ್ನೂ ನೀನೇ ಸ್ವಯಂ ವಿಚಾರಿಸಿಕೊ. ಹದಿನೈದು ದಿನ ಗಡುವು. ಹದಿನಾರನೆ ದಿನ ಯಾರು ಇಲ್ಲಿಗೆ ಬಂದು ಸೇರರೋ ಅವರಿಗೆ ಮರಣದಂಡನೆಯೇ. ಇದರಲ್ಲಿ ಸಂದೇಹಕ್ಕೆ ಎಡೆ ಇಲ್ಲ. ಇದು ರಾಮಕಾರ್ಯ. ಬೇರೆ ಯೋಚನೆಯೇ ಇಲ್ಲ. ನನ್ನ ಅಪ್ಪಣೆ ಇದು. ಇದಕ್ಕೆ ಬದಲು ಇಲ್ಲ. ಅಂಗದನನ್ನೂ ಕರೆದೊಯ್. ನನ್ನ ಈ ಅಪ್ಪಣೆಯನ್ನು ಸಮಸ್ತ ವಾನರರಿಗೂ ಜಾಂಬವಾದಿ ವೃದ್ಧರಿಗೂ ತಿಳಿಸುವ ವ್ಯವಸ್ಥೆ ಮಾಡು" ಎಂದು ಅಪ್ಪಣೆಮಾಡಿದ.

ಹೀಗೆ ಏರ್ಪಾಟು ಮಾಡಿ ವೀರ್ಯವಂತ ವಾನರೇಶ್ವರ ಸುಗ್ರೀವ ತನ್ನ ಅಂತಃಪುರಕ್ಕೆ ಹೋದ.

ನಾಲ್ಕನೆ ಖಂಡ

ಸೀತಾನ್ವೇಷಣ

ಸುಗ್ರೀವ ಅಂತಃಪುರದಲ್ಲಿ ಸೇರಿಕೊಂಡ. ಮಳೆಗಾಲ ಮುಗಿಯಿತು. ಮುಗಿಲು ತಿಳಿ ಆಯಿತು.

ಮಳೆಗಾಲದಲ್ಲಿ ಯಾವಾಗಲೂ ಸೀತಾವಿರಹದ ಬಾಧೆಯನ್ನನುಭವಿಸಿದ ರಾಮ. ಈಗ ಬೆಳ್ಳನೆ ಆಕಾಶವನ್ನೂ ಶುಭ್ರ ಚಂದ್ರಮಂಡಲವನ್ನೂ ಬೆಳ್ಳಿಯ ಬೆಳುದಿಂಗಳ ಶರದ್ ರಾತ್ರಿಯನ್ನೂ ನೋಡಿದ. ಮಳೆಗಾಲಕ್ಕಿಂತ ಹೆಚ್ಚು ಆಯಿತು ವ್ಯಥೆ. ತಾನು ಹೆಂಡತಿಯನ್ನು ಅಗಲಿ ದುಃಖಿಸುತ್ತ ಇದ್ದಾನೆ. ಸುಗ್ರೀವನೋ ಕಾಮಪರವಶ ಆಗಿದ್ದಾನೆ. ಅವನಿಗೆ ಹೇಳಿದ ಗಡುವೂ ಮೀರಿ ಹೋಯಿತು. ರಾಮನಿಗೆ ಆತುರ ಹೆಚ್ಚು ಆಯಿತು. ಸಂಕಟವನ್ನು ಸೈರಿಸಲು ಆಗಲಿಲ್ಲ. ಮೂರ್ಛೆಹೋದ.

ಒಂದೇ ಗಳಿಗೆ. ಮತ್ತೆ ಎಚ್ಚರಗೊಂಡ. ಸೀತೆಯನ್ನು ಕುರಿತು ಚಿಂತಿಸಿದ. ಯಾವಾಗಲೂ ತನ್ನ ಮನಸ್ಸಿನಲ್ಲೇ ಇದ್ದಾಳೆ ಸೀತೆ. ಆದರೂ—.

ಬಂಗಾರದಿಂದ ಇತರ ಧಾತುಗಳಿಂದ ಹೊಳೆಯುವ ಶಿಖರ ಒಂದರ ಮೇಲೆ ಕುಳಿತ. ನಿರ್ಮಲ ಶರದಾಕಾಶವನ್ನು ಅಲ್ಲಿಂದ ನೋಡಿದ. ಮೋಡ ಇಲ್ಲ ಮಿಂಚು ಇಲ್ಲ. ಶುಭ್ರಾಕಾಶ. ಸಾರಸ ಪಕ್ಷಿಗಳ ಇಂಪು ಆದ ಕಲಕಲ ಧ್ವನಿ. ಮನಸ್ಸು ಮತ್ತೆ ಸೀತೆಯ ಕಡೆ ಹರಿಯಿತು. ಆ ಚಿಂತೆಯಿಂದ ದುಃಖ ಮಿತಿಮೀರಿತು. ದೀನತೆಯಿಂದ ವಿಲಪಿಸಿದ.

" ಸೀತೆಯ ಧ್ವನಿಯೂ ಈ ಸಾರಸಪಕ್ಷಿಗಳ ಹಾಗೇ. ಸಾರಸಪಕ್ಷಿಗಳ ಇಂಪಾದ ಧ್ವನಿಯನ್ನು ಕೇಳಿ ಎಷ್ಟು ಆನಂದಿಸುತ್ತ ಇದ್ದಳೋ ನಲ್ಲೆ ಆಶ್ರಮ ದಲ್ಲಿ. ಈಗ ಎಲ್ಲಿ ಇದ್ದಾಳೋ. ಹೇಗೆ ಇದ್ದಾಳೋ! ಬಂಗಾರದಂತೆ ಹೊಳೆ ಯುವ ಹೊನ್ನೆ ಹೂಗಳನ್ನು ಈ ಶರತ್ಕಾಲದಲ್ಲಿ ನೋಡಿ ನನ್ನ ಜೊತೆಯಲ್ಲಿ ಎಷ್ಟು ಹಿಗ್ಗುತ್ತ ಇದ್ದಳು ನನ್ನ ಮನದನ್ನೆ! ಈಗ ಅದೇ ಹೂಗಳನ್ನು ನೋಡಿ ನನಗಾಗಿ ಸುತ್ತಲೂ ಎಷ್ಟು ಹುಡುಕುತ್ತಾಳೋ. ನನ್ನನ್ನು ಕಾಣದೆ ಎಷ್ಟು ದುಃಖಿಸುತ್ತಾಳೋ.

" ಕಲಹಂಸಗಳ ಕಲಕಲ ನಿನಾದದಿಂದ ಎಚ್ಚರಗೊಳ್ಳುತ್ತ ಇದ್ದಳು ಮೃದುಮಧುರಭಾಷಿಣಿ ಮನೋಹರಾಂಗಿ ಸೀತೆ. ಆ ಸರ್ವಾಂಗಸುಂದರಿ ಈಗ ಹೇಗೆ ಎಚ್ಚರಗೊಳ್ಳುತ್ತಾಳೋ. ಚಕ್ರವಾಕ ಪಕ್ಷಿಗಳ ಇಂಪು ಧ್ವನಿಯನ್ನು

ಕೇಳಿದರೆ ಸಾಕು. ಆ ಪುಂಡರೀಕಾಕ್ಷಿ ನನ್ನ ಬಳಿಗೆ ಓಡಿಬರುತ್ತ ಇದ್ದಳು ತಾಳಲಾರದೆ. ಈಗ ನನ್ನನ್ನು ಅಗಲಿ ಹೇಗೆ ಬದುಕಿರುತ್ತಾಳೋ ಚಕ್ರವಾಕದ ಧ್ವನಿ ಕೇಳಿ.

"ಜಿಗರೆಗಣ್ಣಿನ ಪ್ರಿಯತಮೆಯನ್ನು ಅಗಲಿದ ನನಗೆ ಇಲ್ಲಿಯ ಕೊಳ ಬಾವಿ ನದಿ ಅಡವಿ ತೋಟ ಸ್ವಲ್ಪವೂ ಸಂತೋಷಕರ ಆಗಿ ಇಲ್ಲ. ಸೀತೆ ಕೋಮಲಾಂಗಿ. ನನ್ನನ್ನು ಅಗಲಿ ಇದ್ದಾಳೆ. ಇಂಥ ಸಮಯದಲ್ಲಿ ಅವಳನ್ನು ಪೀಡಿಸದೆ ಬಿಡುತ್ತಾನೆಯೆ ಮನ್ಮಥ. ಇಷ್ಟು ಶರತ್ಕಾಲದ ಪರಿಕರಗಳನ್ನು ಇಟ್ಟುಕೊಂಡು? ಎಂದಿಗೂ ಬಿಡಲಾರ. ಬಹಳ ಬಾಧಿಸುತ್ತಾನೆ" ಮಳೆ ನೀರನ್ನು ಬಯಸಿ ಚಾತಕ ಪಕ್ಷಿ ಕೂಗುವಂತೆ ಸೀತೆಗಾಗಿ ಪುರುಷಶ್ರೇಷ್ಠ ರಾಮ ಬಹಳ ತಳಮಳಿಸಿದ.

ಬೆಟ್ಟದ ತಪ್ಪಲಿನ ಮೂಲೆಮೂಲೆಯನ್ನೂ ಹಣ್ಣುಹಂಪಲುಗಳಿಗಾಗಿ ಸುತ್ತಲು ಹೋದ ಲಕ್ಷ್ಮಣ ಹಿಂದಿರುಗಿ ಬಂದ. ಯಾರೂ ಇಲ್ಲದ ಪ್ರದೇಶದಲ್ಲಿ ಏಕಾಕಿ ಆಗಿ ಕುಳಿತು ಸಹಿಸಲಾರದ ಸಂಕಟದಿಂದ ಮೈಮರೆತು ಕೊರಗುವ ರಾಮನನ್ನು ನೋಡಿದ. ಪರಿಶುದ್ಧಹೃದಯ ಲಕ್ಷ್ಮಣನಿಗೆ ಅಣ್ಣನ ದೀನತೆ ಯನ್ನು ಕಂಡು ಬಹಳ ಸಂಕಟ ಆಯಿತು.

"ಪೂಜ್ಯ, ಇದು ಏನು? ಚೆನ್ನಾಯಿತಲ್ಲ. ನೀನು ಹೀಗೆ ಕಾಮಪರವಶ ಆಗುವುದೇ? ನಿನ್ನ ಸಹಜ ಪೌರುಷವನ್ನು ಕಳೆದುಕೊಳ್ಳುವುದೇ? ಏನು ಪ್ರಯೋಜನ? ನೀನು ಮಹಾಧೀರ. ಈಗ ಅಧೀರ ಆದರೆ ಹೇಗೆ? ಚಿತ್ತ ಸ್ಥೈರ್ಯ ಪ್ರಯತ್ನಪೂರ್ವಕ ಪಡೆಯಬೇಕಾದ ಗುಣ. ಅಡಿಗಡಿಗೆ ಧೈರ್ಯ ಕುಂದಿ ದರೆ ಹೇಗೆ? ಮನಸ್ಸು ಪ್ರಸನ್ನ ಆಗಲಿ. ಮುಂದೆ ಮಾಡಬೇಕಾದ ಪ್ರಯತ್ನ ಗಳನ್ನು ಆಲೋಚಿಸು. ಧೈರ್ಯ ಹಿಡಿ. ಕಾರ್ಯಸಿದ್ಧಿಗೆ ಅಗತ್ಯ ಆದ ದೇವತಾ ಪ್ರಾರ್ಥನಾದಿ ಕರ್ಮಗಳಲ್ಲಿ ಮನಸ್ಸು ಇಡು. ನಾವು ಈಗ ಏನು ಮಾಡ ಬೇಕೋ ನೋಡು. ಕಾಲ ಹೇಗೆ ಇದೆ, ಸಹಾಯ ಸಾಮರ್ಥ್ಯ ಎಷ್ಟು, ಯೋಚಿಸು.

"ಮಾನವವಂಶಕ್ಕೆ ನೀನು ನಾಥ. ವೀರಾಧಿವೀರ ನೀನು. ನಿನ್ನಂಥವನು ವೈದೇಹಿಗೆ ನಾಥ ಆದಾಗ ಆಕೆ ಪರರಿಗೆ ಸುಲಭಸಾಧ್ಯಳೆ? ಬೆಂಕಿಯ ಉರಿ ಯನ್ನು ಮುಟ್ಟಿ ಸುಟ್ಟುಕೊಳ್ಳುವವರು ಉಂಟೆ?"

ಲಕ್ಷ್ಮಣನ ಸ್ವಭಾವವೇ ಹಾಗೆ. ಇಂದಿಗೂ ಎಂದೆಂದಿಗೂ ಹಿತ ಅವನ ಮಾತು. ನೀತಿಯುಕ್ತ, ಧರ್ಮಸಮ್ಮತ. ಕಾಲೋಚಿತ. ಸಮಾಧಾನಕರ. ರಾಮ ಅದನ್ನು ಕೇಳಿದ. "ತಮ್ಮ, ನೀನು ಹೇಳಿದ್ದು ಸರಿ. ಧೈರ್ಯದಿಂದ ಕಾರ್ಯಸಾಧನೆ ಮಾಡಬೇಕು. ನಿಸ್ಸಂಶಯ. ಸಾಹಸ ಮಾಡಲು ತಕ್ಕ ಉತ್ಸಾಹವೂ ಬೇಕು. ನಾವು ಬಯಸಿದ ಕೆಲಸ ಅಸಾಧ್ಯ. ಅದನ್ನು ಕೈಗೂಡಿಸಿ ಕೊಳ್ಳಲು ಏನು ಮಾಡಬೇಕೋ ಆಲೋಚಿಸಬೇಡವೆ?

ಮಾತು ಆಡು ಆಡುತ್ತಲೇ ರಾಮ ಕಮಲಾಕ್ಷಿ ಸೀತೆಯನ್ನು ನೆನೆದ. ಅವನ ಮುಖ ಬಾಡಿತು. ಬಾಯಿ ಒಣಗಿತು. "ಲಕ್ಷ್ಮಣ, ಸಾವಿರ ಕಣ್ಣಿನ ದೇವೇಂದ್ರ ಯಥೇಷ್ಟ ಮಳೆ ಸುರಿಸಿ ಸಮಸ್ತ ಭೂಮಿಯನ್ನೂ ತೃಪ್ತಿಪಡಿಸಿದ. ಬೆಳೆ ಬೆಳೆಯುವಂತೆ ಮಾಡಿದ. ತನ್ನ ಕೆಲಸವನ್ನು ಮಾಡಿ ಕೃತಕೃತ್ಯ ಆದ. ಗಂಭೀರ ಧ್ವನಿಯನ್ನು ಮೊಳಗಿಸಿ ಬೆಟ್ಟಗುಡ್ಡಗಳ ಮೇಲೂ ಮಹೋನ್ನತ ವೃಕ್ಷಗಳ ಮೇಲೂ ಮಳೆ ಕರೆಕರೆದು ಬಳಲಿ ಈಗ ವಿಶ್ರಾಂತಿ ಪಡೆಯುತ್ತ ಇವೆ ನೀಲೋತ್ಪಲಗಳಂತೆ ಶ್ಯಾಮವರ್ಣದ ಮೋಡಗಳು. ಎಲ್ಲ ದಿಕ್ಕುಗಳನ್ನೂ ಇದು ವರೆಗೆ ಕಪ್ಪಾಗಿಸಿದ್ದವು. ಆನೆಗೆ ಮದ ಉಡುಗಿದಂತೆ ಅವಕ್ಕೆ ಶಾಂತಿ ಬಂದಿದೆ. ಗಿರಿಮಲ್ಲಿಗೆ ಅರ್ಜುನ ಮುಂತಾದ ಹೂಗಳ ಪರಿಮಳವನ್ನು ಬೀರುತ್ತ ವೇಗದಿಂದ ಬೀಸುತ್ತ ಇದ್ದದ್ದು ಮಳೆಗಾಳಿ ನೀರ ಬಸಿರನ್ನು ಹೊತ್ತು ಈಗ ಶಾಂತ ಆಗಿದೆ. ಮಳೆಮೋಡಗಳ ಗರ್ಜನೆ, ಮದ್ದಾನೆಗಳ ಘೀಂಕಾರ, ಹಿಗ್ಗಿನಿಂದ ಕುಣಿಯುವ ನವಿಲಿನ ಕೇಕೆ, ಬೆಟ್ಟದಿಂದ ಧುಮುಕುವ ಗಿರಿನದಿಗಳ ಘೋಷ, ಎಲ್ಲ ಅಟ್ಟಹಾಸವೂ ಅಡಗಿಹೋಯಿತು. ದೊಡ್ಡ ಮಳೆ ಬಂದು ಈ ಬೆಟ್ಟ ಗಳನ್ನು ಎಲ್ಲಾ ಸ್ವಚ್ಛ ಆಗಿ ತೊಳೆದಿದೆ. ಬೆಟ್ಟದ ತಪ್ಪಲು ಧಾತುಗಳ ಚಿತ್ರವಿಚಿತ್ರ ಬಣ್ಣಗಳನ್ನು ಬಳಿದುಕೊಂಡಂತೆ ಕಾಣುತ್ತದೆ.

"ಲಕ್ಷ್ಮಣ, ಏಳಲೆ ಬಾಳೆಗಿಡದ ರೆಂಬೆಗಳಿಗೂ ಸೂರ್ಯಚಂದ್ರರಿಗೂ ನಕ್ಷತ್ರಗಳಿಗೂ ಮದ್ದಾನೆಗಳಿಗೂ ಶರತ್ಕಾಲ ತನ್ನ ಸಂಪತ್ತನ್ನು ಹಂಚಿದಂತೆ ಇದೆ. ಶರತ್ಕಾಲಲಕ್ಷ್ಮಿ ಶರದೃತುವಿನ ಗುಣದಿಂದ ಉತ್ಕರ್ಷ ಹೊಂದಿದ ನಾನಾ ವಸ್ತುಗಳನ್ನು ಆಶ್ರಯಿಸಿದಾಳೆ. ಸೂರ್ಯಕಿರಣಗಳ ಸ್ಪರ್ಶದಿಂದ ಅರಳಿದ ಬಣ್ಣಬಣ್ಣದ ತಾವರೆ ಹೂಗಳ ಕೊಳದಲ್ಲಿ ಅದರ ಕಾಂತಿ ಹೆಚ್ಚು. ಅಡವಿಯಲ್ಲಿ ಏಳಲೆ ಬಾಳೆಗಿಡಗಳು ತುಂಬಾ ಹೂ ಬಿಟ್ಟವೆ. ಆ ಹೂಗಳ

ಪರಿಮಳ ಗಾಳಿಯಲ್ಲಿ ತೇಲಿಬರುತ್ತ ಇದೆ. ಅದರ ಮಕರಂದಕ್ಕಾಗಿ ಮುತ್ತಿಕೊಂಡ ದುಂಬಿಗಳು ಹಾಡುತ್ತಿವೆ. ಆ ಗಾಳಿ ಕುಡಿದು ಮದ ಏರಿ ಮದ್ದಾನೆ ಮೆರೆಯುತ್ತ ಇವೆ. ಚಕ್ರವಾಕ ದಂಪತಿಗಳ ಸಂಗಡ ಸೇರಿ ಹಂಸದಂಪತಿಗಳು ಕಮಲದ ಧೂಳಿಯನ್ನು ಬಳಿದುಕೊಂಡು ತಮ್ಮ ದೊಡ್ಡ ದೊಡ್ಡ ರೆಕ್ಕೆಗಳಿಗೆ, ದೊಡ್ಡ ನದಿಗಳ ಮರಳುದಿಣ್ಣೆಗಳ ಮೇಲೆ ಆನಂದದಿಂದ ವಿಹರಿಸುತ್ತ ಇವೆ.

"ತಮ್ಮ, ಮದ ಏರಿ ಹೆಚ್ಚಿ ತಿರುಗುವ ಮದ್ದಾನೆಗಳಲ್ಲಿಯೂ ಗರ್ವದಿಂದ ಗುಟರು ಹಾಕುವ ಕೊಬ್ಬಿದ ಗೂಳಿಗಳಲ್ಲಿಯೂ ಸ್ವಚ್ಛ ಜಲದ ನದಿಗಳಲ್ಲಿಯೂ ಶರತ್ಕಾಲಲಕ್ಷ್ಮಿಯ ಐಶ್ವರ್ಯ ಕಾಣಬರುತ್ತ ಇದೆ. ಆಕಾಶದಲ್ಲಿ ಮೋಡಗಳು ಇಲ್ಲ. ನವಿಲುಗಳು ಮೋಡ ಇಲ್ಲದ ಆಕಾಶವನ್ನು ನೋಡಿ ತಮ್ಮ ಗರಿಯ ಒಡವೆಯನ್ನು ತೊರೆದು ತಮ್ಮ ನಲ್ಲೆಯರಲ್ಲಿ ಆಸಕ್ತಿ ನೀಗಿ ಕಳೆಗುಂದಿ ಸಂತೋಷ ಕೆಟ್ಟು ಕೇಕೆ ಹಾಕದೆ ಏನೋ ಧ್ಯಾನಮಾಡುವಂತೆ ಇವೆ. ಹೊನ್ನೆಮರಗಳು ಹೂ ಬಿಟ್ಟು ಬಲು ಸೊಂಪು ಆಗಿ ಕಾಣುತ್ತ ಇವೆ. ಹೂಗಳ ಭಾರಕ್ಕೆ ಬಗ್ಗಿದ ಕೊಂಬೆಗಳು ಹೊನ್ನಿನ ಕಾಂತಿಯಿಂದ ಹೊಳೆಯುತ್ತ ಅಡವಿಯ ನಡುವೆ ದೀಪಗಳನ್ನು ಬೆಳಗಿಸಿದಂತೆ ಇವೆ. ಹೊನ್ನೇ ಹೂಗಳ ಸುವಾಸನೆ ಬಲು ಮನೋಹರ. ಏಳೆಲೆ ಬಾಳೆಗಿಡಗಳ ಹೂಗಳನ್ನು ಮೂಸಿ ನೋಡಿ ಮದಿಸಿವೆ ಆನೆಗಳು. ಆನೆಗಳ ಗಂಡಸ್ಥಲದಿಂದ ಮದಜಲ ಸುರಿಯುತ್ತ ಇದೆ. ಅದರಿಂದ ಅವುಗಳ ವಿಷಯಾಸಕ್ತಿ ಹೆಚ್ಚಿ ಹೆಣ್ಣು ಆನೆಗಳ ಜೊತೆಯಲ್ಲಿ ತಾವರೆಕೊಳಗಳಲ್ಲೂ ಅಡವಿಯಲ್ಲೂ ವಿಹಾರಮಾಡಲು ಬಯಸಿ ಮೆಲ್ಲಮೆಲ್ಲನೆ ನಡೆಯುತ್ತ ಇವೆ.

"ಮೋಡಗಳು ಇಲ್ಲದೆ ಮುಗಿಲು ತೊಳೆದ ಕತ್ತಿಯ ಹಾಗೆ ಥಳಥಳಿಸುತ್ತ ಇದೆ. ಹೊಳೆನೀರು ತಿಳಿ ಆಗಿದೆ. ಕನ್ನೈದಿಲೆಹೂಗಳ ಪರಿಮಳವನ್ನು ಹೊತ್ತು ತರುತ್ತ ಇದೆ ತಂಗಾಳಿ. ಕತ್ತಲೆ ಅಡಗಿ ದಿಕ್ಕುಗಳು ಎಲ್ಲವೂ ಹೊಳೆಯುತ್ತ ಇವೆ. ಬಿಸಿಲು ಚೆನ್ನಾಗಿ ಕಾಯುತ್ತ ಇದೆ. ನೆಲದ ಕೆಸರು ಎಲ್ಲವೂ ಒಣಗಿ ಸ್ವಲ್ಪ ಸ್ವಲ್ಪ ಧೂಳು ಏಳುತ್ತ ಇದೆ. ಪರಸ್ಪರ ವೈರ ಅಸೂಯೆ ಇರುವ ರಾಜರಿಗೆ ಹಗೆ ತೀರಿಸಿಕೊಳ್ಳಲು ಇದು ತಕ್ಕ ಸಮಯ. ಶರತ್ಕಾಲ ಆದ್ದರಿಂದ ಚೆನ್ನಾಗಿ ಮೇದು ಕಳೆಗೊಂಡು ದುಂಡಗೆ ಆದ ಗೂಳಿಗಳನ್ನು ನೋಡು. ಸಂತೋಷಾತಿಶಯದಿಂದ ಕೊಬ್ಬಿ ಮಣ್ಣನ್ನು ಚಿಮ್ಮಿ ಧೂಳನ್ನು ಎರಚಿಕೊಳ್ಳುತ್ತ ಹೋರಾಟಕ್ಕೆ ಕಾಲು

ಕೆರೆಯುತ್ತ ಹಸುಗಳ ಮಂದೆಯ ನಡುವೆ ನುಗ್ಗಿ ಗುಟರು ಹಾಕುತ್ತ ಇವೆ. ಗಂಡಾನೆ ಕಾಮಪೀಡಿತ ಆಗಿ ಮೆಲ್ಲನೆ ನಡೆಯುತ್ತ ಇದೆ. ಹೆಣ್ಣು ಆನೆಗಳು ಮದನತಾಪದಿಂದ ಆ ಸಲಗವನ್ನು ಹಿಂಡು ಹಿಂಡು ಆಗಿ ಹೇಗೆ ಹಿಂಬಾಲಿಸುತ್ತ ಇವೆಯೋ ನೋಡು.

"ಶರತ್ಕಾಲದ ಮಹಿಮೆ. ಹಂಸಗಳು ಕೊಬ್ಬಿ ನವಿಲುಗಳನ್ನು ಬೆದರಿಸುತ್ತ ಇವೆ. ನವಿಲು ಮೊದಲಿನ ಹಾಗೆ ಗರಿ ಕೆದರಲಾರದು ಈಗ. ಹಂಸಗಳು ಬೆದರಿಸಿ ಕೂಗಿದರೂ ನವಿಲುಗಳು ಸಿಟ್ಟು ಆಗದೆ ದೈನ್ಯದಿಂದ ಮುಂದೆ ಸಾಗಿವೆ. ಮದಜಲ ಸುರಿಯುವ ಮದ್ದಾನೆಗಳು ತಾವರೆಕೊಳಗಳಲ್ಲಿ ಇಳಿದು ತಮ್ಮ ಘೀಂಕಾರದಿಂದ ಅಲ್ಲಿರುವ ನೀರುಕೋಳಿಗಳನ್ನೂ ಚಕ್ರವಾಕಗಳನ್ನೂ ಹೆದರಿಸಿ ತಾವರೆಹೂಗಳನ್ನು ಕಿತ್ತು ಒಗೆದು ನೀರನ್ನು ಕಲಕಿ ಕುಡಿಯುತ್ತ ಇವೆ. ಹೊಳೆ ನೀರಿನಲ್ಲಿ ಈಗ ಜೊಂಡು ಇಲ್ಲ. ತಿಳಿನೀರನ್ನು ಕುಡಿಯಲು ಹಸುಗಳ ಮಂದೆ ಮಂದೆಯೇ ನೀರಿಗೆ ಬರುತ್ತದೆ. ಮರಳುದಿಣ್ಣೆಗಳು ಕಾಣುತ್ತ ಇವೆ. ಸಾರಸ ಪಕ್ಷಿಗಳು ಕೂಗುತ್ತ ಇವೆ. ಸಂತೋಷದಿಂದ ಹಂಸಗಳು ಈಸಾಡುತ್ತ ಇವೆ. ಮಳೆಯ ರಪರಪ ಸದ್ದು, ನದಿಗಳ ನೆರೆಯ ಭೋರ್ ಎಂಬ ಸದ್ದು, ವೇಗದಿಂದ ಬೀಸುವ ಗಾಳಿಯ ರೊಂಯ್ ಸದ್ದು, ಹಿಗ್ಗುಗೊಂಡ ನವಿಲಿನ ಕೇಕೆಯ ಸದ್ದು, ಕಪ್ಪೆಗಳ ವಟವಟ ಸದ್ದು, ಈಗ ಪೂರ್ತಿ ಅಡಗಿಹೋಗಿದೆ. ಮಳೆಗಾಲದಲ್ಲಿ ಹುತ್ತಗಳಲ್ಲಿಯೇ ಅಡಗಿಕೊಂಡು ಆಹಾರ ಇಲ್ಲದೆ ಸವೆದುಹೋದ ಭಯಂಕರ ವಿಷಸರ್ಪಗಳು ಈಗ ಹೊರಬಿದ್ದು ತಮ್ಮ ಬಣ್ಣಬಣ್ಣಗಳನ್ನು ತೋರುತ್ತ ಇವೆ.

"ಲಕ್ಷ್ಮಣ, ಇದನ್ನು ನೋಡು, ಈ ವಿಚಿತ್ರವನ್ನು. ರಾಗದಿಂದ ಕೆಂಪು ಏರಿದ ಈ ಸಂಜೆವೆಣ್ಣು ತನ್ನ ನಲ್ಲ ಚಂದ್ರನ ಕಿರಣಕರಸ್ಪರ್ಶದಿಂದ ಆನಂದ ಪರವಶ ಆಗಿದಾಳೆ. ತನ್ನ ನಕ್ಷತ್ರನಯನಗಳನ್ನು ಅರಳಿಸಿ ತಾನೇ ಅಂಬರವನ್ನು ಬಿಚ್ಚಿಹಾಕುತ್ತ ಇದಾಳೆ. ಅಂದದ ಚಂದ್ರಬಿಂಬವೇ ಮುಖ, ಮಿರುಮಿರುಗುವ ಕಿರುತಾರೆಗಳೇ ಅರಳಿದ ಕಣ್ಣು, ಬೆಳ್ಳನೆ ಬೆಳುದಿಂಗಳೇ ಉಟ್ಟ ಬಟ್ಟೆ. ಬಿಳೀ ಸೀರೆ ಉಟ್ಟ ಚೆಲುವೆ ಈ ಶರದ್ರಾತ್ರಿ. ಚೆನ್ನಾಗಿ ಮಾಗಿದ ಭತ್ತದ ಕಾಳನ್ನು ತಿಂದು ಸಾರಸಪಕ್ಷಿಗಳು ಹಿಗ್ಗಿನಿಂದ ಮೇಲಕ್ಕೆ ಹಾರುತ್ತಿದ್ದರೆ ಹೂಮಾಲೆಗಳು ಮುಗಿಲಿನಲ್ಲಿ ಗಾಳಿಗೆ ಹಾರಾಡುವಂತೆ ಕಾಣುತ್ತ ಇದೆ. ಅನೇಕ ಕುಮುದಪುಷ್ಪಗಳ ವಿಶಾಲ ಸರೋವರದಲ್ಲಿ ಒಂಟಿ ಆಗಿ ಈ ಹಂಸ ಮಲಗಿದೆ. ರಾತ್ರಿ ನೋಡ

ಇಲ್ಲದೆ ಹೊಳೆಹೊಳೆವ ಚಂದ್ರಮಂಡಲದ ಆಕಾಶ ಇದ್ದಹಾಗೆ ಇದೆ. ಎಲ್ಲೆಲ್ಲೂ ಸುತ್ತುವ ಹಂಸಗಳೇ ಡಾಬು, ಅರಳಿದ ಕೆಂದಾವರೆ ಕನ್ನೈದಿಲೆಹೂಗಳ ಹೂ ಮಾಲೆ, ಒಳ್ಳೆಯ ಒಡವೆ ತೊಟ್ಟ ಉತ್ತಮಾಂಗನೆಯಂತೆ ಇವೆ ಈ ಇಳಿಯುವ ಬಾವಿಗಳು. ಬೆಳಗಿನ ಗಾಳಿಯಿಂದ ಬಿದಿರಿನಲ್ಲಿ ಹೊರಡುವ ಶಬ್ದವೂ ಬೆಳಗ್ಗೆ ಮೊಸರು ಕಡೆಯುವ ಸದ್ದೂ ಗೂಳಿಗಳ ಗುಟರಿನ ಸದ್ದೂ ಸೇರಿ ಕೇಳಿಸುತ್ತಿದೆ.

ನದೀತೀರಗಳಲ್ಲಿ ಹೊಸದು ಆಗಿ ಹೂ ಬಿಟ್ಟು ಬೆಳಗಿನ ತಂಗಾಳಿಗೆ ಅಲುಗಾಡುವ ನೊದೆಹುಲ್ಲು ಬಿಳೀ ಸೀರೆ ಉಟ್ಟ ಹೆಂಗಸು ಈ ನದಿ ಎನ್ನುವಂತೆ ಮಾಡಿದೆ. ಅಡವಿಯಲ್ಲಿ ಅಡ್ಡಿ ಇಲ್ಲದೆ ತಿರುಗುತ್ತ ಮಕರಂದಪಾನದಿಂದ ಮದ ಏರಿ ತಮ್ಮ ನಲ್ಲೆಯರ ಜೊತೆಯಲ್ಲಿ ಪದ್ಮಪರಾಗವನ್ನೂ ಮತ್ತೀಗಿಡದ ಧೂಳಿ ಯನ್ನೂ ಬಳಿದುಕೊಂಡು ಬೆಳ್ಳಗೆ ಆದ ಗಂಡುದುಂಬಿಗಳು ಗಾಳಿಯನ್ನು ಹಿಂಬಾಲಿಸುತ್ತ ಇವೆ. ಹೊಳೆನೀರು ತಿಳಿ ಆಗಿದೆ. ಕನ್ನೈದಿಲೆ ಅರಳಿದೆ. ಭತ್ತದ ಪಯಿರು ಮಾಗಿ ಇದೆ. ಕ್ರೌಂಚಪಕ್ಷಿಗಳು ಇಂಪಾಗಿ ಕೂಗುತ್ತಿವೆ. ಗಾಳಿ ಮಂದ ಆಗಿದೆ. ಚಂದ್ರನ ಪ್ರಕಾಶ ಸ್ವಚ್ಛ ಆಗಿದೆ. ಥಳಥಳಿಸುವ ಮೀನುಗಳ ಒಡ್ಯಾಣವನ್ನು ಧರಿಸಿದ ನದಿಗಳು ರಾತ್ರಿ ತಮ್ಮ ನಲ್ಲನ ಸಂಗಡ ರತಿಕೇಳಿ ಆಡಿ ಆಯಾಸದಿಂದ ಬೆಳಗ್ಗೆ ಮೆಲ್ಲಮೆಲ್ಲಗೆ ನಡೆಯುವ ಹೆಂಗಸಿನಂತೆ ಮಂದ ಆಗಿ ಹರಿಯುತ್ತ ಇವೆ. ಚಕ್ರವಾಕಪಕ್ಷಿಗಳು, ಪಾಚಿ, ನೊದೆಹುಲ್ಲಿನ ದುಕೂಲಗಳಿಂದ ಗೋರೋಚನದ ತಿಲಕ ಇಟ್ಟು ಮಕರಿಕಾಪತ್ರಗಳ ಸಿಂಗಾರ ಮಾಡಿಕೊಂಡ ಹೆಂಗಸಿನ ಮುಖದ ಹಾಗೆ ಇದೆ ನದೀಮುಖ.

"ಕಾಡಿನಲ್ಲಿ ಗೋರಂಟಿ ಹೂ ಹಾಲೇ ಹೂ ಚೆನ್ನಾಗಿ ಅರಳಿ ಇವೆ. ಅವುಗಳಲ್ಲಿ ದುಂಬಿಗಳು ಝೇಂಕಾರ ಮಾಡುತ್ತ ಹಾರಾಡುತ್ತ ಇವೆ. ವಿರಹಿ ಗಳನ್ನು ಭಯಪಡಿಸುತ್ತ ಕೈಯಲ್ಲಿ ಬಿಲ್ಲುಬಾಣ ಹಿಡಿದು ಉದ್ದಂಡ ಆಗಿ ಮನ್ಮಥ ತಿರುಗುತ್ತ ಇದಾನೆ. ಚೆನ್ನಾಗಿ ಮಳೆ ಸುರಿದು ಕೆರೆಕಟ್ಟೆ ತುಂಬಿಸಿ ಪಯಿರು ಪಚ್ಚೆ ಬೆಳೆಸಿ ಪ್ರಜೆಗಳನ್ನು ಸಂತಸಗೊಳಿಸಿ ಮಳೆ ಮೋಡಗಳು ಮುಗಿಲನ್ನು ಬಿಟ್ಟು ಮರೆ ಆಗಿ ಹೋಗಿವೆ. ತಮ್ಮ, ಕೆರೆ ತೊರೆ ಕೊಳ ಎಲ್ಲೆಲ್ಲೂ ತಿಳಿನೀರು ತುಂಬಿದೆ. ಕ್ರೌಂಚಪಕ್ಷಿಗಳು ಹಾಡುತ್ತ ಇವೆ. ಚಕ್ರವಾಕಗಳ ಗುಂಪು ಕೂಡಿ ಇದೆ. ಬೆಟ್ಟದ ತಪ್ಪಲಿನಲ್ಲಿ ಕೆಂಪು ಮತ್ತೀಗಿಡ ಏಳೆಲೆ ಬಾಳೆಗಿಡ ಕಂಚವಾಳ ಗಿಡ ದಾಸವಾಳ ಗಿಡ ಹೂಬಿಟ್ಟು ಸೊಂಪು ಸುರಿಯುತ್ತವೆ. ಹೂಬಳ್ಳಿಗಳಲ್ಲಿ

ಸಮೃದ್ಧಿ ಆಗಿ ಹೂ ಅರಳಿವೆ. ನದಿಗಳ ಮರಳುದಿಣ್ಣೆಗಳಲ್ಲಿ ಹಂಸ ಸಾರಸ ಚಕ್ರವಾಕ ಕ್ರೌಂಚಗಳು ವಿಹರಿಸುತ್ತ ಇವೆ.

" ಲಕ್ಷ್ಮಣ, ಪರಸ್ಪರ ವೈರದಿಂದ ಒಬ್ಬರನ್ನು ಒಬ್ಬರು ಗೆಲ್ಲಲು ಯುದ್ಧ ಮಾಡಬಯಸುವ ರಾಜರಿಗೆ ದಂಡಯಾತ್ರಾಸಮಯ ಇದು. ಪ್ರಪ್ರಥಮ ಪ್ರಯಾಣ ಈಗಲೇ. ಆದರೂ ಸುಗ್ರೀವನ ಸುಳಿವೇ ಇಲ್ಲ. ಏನು ಪ್ರಯತ್ನ ಮಾಡುತ್ತ ಇದಾನೋ ತಿಳಿಯಲಿಲ್ಲ. ಸೀತೆಯನ್ನು ಕಾಣದೆ ಈ ಮಳೆಗಾಲದ ನಾಲ್ಕು ತಿಂಗಳು ನನ್ನ ಪಾಲಿಗೆ ನೂರು ವರ್ಷ ಆಯಿತು. ಚಕ್ರವಾಕಿ ತನ್ನ ನಲ್ಲ ಚಕ್ರವಾಕನನ್ನು ಎಡೆಬಿಡದೆ ಹಿಂಬಾಲಿಸುತ್ತದೆ. ಸೀತೆಯೂ ಹಾಗೇ ನನ್ನನ್ನು ಅಗಲಿ ಅಯೋಧ್ಯೆಯಲ್ಲಿ ಇರಲಾರದೆ ನನ್ನ ಸಂಗಡ ಬಂದಳು ಈ ದಂಡಕಾರಣ್ಯಕ್ಕೆ. ಉದ್ಯಾನವನಕ್ಕೆ ಬರುವ ಹಾಗೆ ಬಂದಳು.

" ತಮ್ಮ, ರಾಜ್ಯಭ್ರಷ್ಟ ದೇಶಭ್ರಷ್ಟ ಆದೆ. ವನವಾಸಿ ಆದೆ. ಹೆಂಡತಿಯನ್ನು ಕಳೆದುಕೊಂಡೆ. ದುಃಖಾರ್ತ ನಾನು. ಇಷ್ಟಾದರೂ ಸುಗ್ರೀವನಿಗೆ ನನ್ನ ಮೇಲೆ ದಯೆ ಇಲ್ಲ. ಪರಂತಪ, ಈ ಶ್ರೀರಾಮ ಅನಾಥ ಆಗಿ ಇದಾನೆ. ರಾಜ್ಯಭ್ರಷ್ಟ, ರಾವಣಾಸುರತಿರಸ್ಕೃತ, ಮನೆಮಠ ಹೆಂಡತಿ ಎಲ್ಲವನ್ನೂ ಕಳೆದುಕೊಂಡ ದೀನ, ಬಹುದೂರ ದೇಶಕ್ಕೆ ಬಂದವ ನಾನು. ಇದರಿಂದಲೇ ನನ್ನನ್ನು ಕಂಡರೆ ಅಲಕ್ಷ್ಯವೆ ಸುಗ್ರೀವನಿಗೆ? ಇದೂ ಅಲ್ಲದೆ ಆತನನ್ನು ಶರಣುಹೋದೆವಲ್ಲ ನಾವು. ಇದರಿಂದ ಆ ದುರಾತ್ಮ ಸುಗ್ರೀವ ನನಗೆ ಅವಮಾನಮಾಡುತ್ತ ಇದಾನೆಯೆ? ನಾನು ಅವನಿಗೆ ಉಪಕಾರ ಮಾಡಿದಾಗ ಏನು ಹೇಳಿದ ಸುಗ್ರೀವ? ಮಳೆಗಾಲ ಮುಗಿದ ಕೂಡಲೇ ಸೀತೆಯನ್ನು ಹುಡುಕುವ ಪ್ರಯತ್ನ ಮಾಡುತ್ತೇನೆಂದು ಮಾತುಕೊಡಲಿಲ್ಲವೆ? ತನ್ನ ಕೆಲಸ ಆಯಿತು. ಈಗ ಎಲ್ಲವೂ ಮರೆಯಿತು.

" ಲಕ್ಷ್ಮಣ, ಈಗಲೇ ನೀನು ಕಿಷ್ಕಿಂಧೆಗೆ ಹೋಗು. ಗ್ರಾಮ್ಯಸುಖದಲ್ಲಿ ಮುಳುಗಿದ ಆ ಮೂರ್ಖ ವಾನರೇಶ್ವರನಿಗೆ ಹೇಳು ನಾನು ಹೇಳಿದೆ ಎಂತ. ' ಮೊದಲು ಉಪಕಾರ ಮಾಡಿ ಪ್ರತ್ಯುಪಕಾರ ಕೋರುವವರಿಗೆ ನಿಮ್ಮ ಕೆಲಸ ಮಾಡಿಕೊಡುತ್ತೇನೆ ಎಂದು ಮಾತುಕೊಟ್ಟು ಆಮೇಲೆ ಆಶಾಭಂಗ ಮಾಡುವವನಿಗಿಂತ ಪುರುಷಾಧಮ ಲೋಕದಲ್ಲಿ ಇಲ್ಲ. ಒಳ್ಳೆಯದೋ ಕೆಟ್ಟದ್ದೋ ಆಡಿದ ಮಾತಿಗೆ ತಪ್ಪದೆ ನಡೆಯುವವನೇ ವೀರ. ಅವನೇ ಪುರುಷೋತ್ತಮ.

ಪರರಿಂದ ಉಪಕಾರ ಪಡೆದು ಅವರಿಗೆ ಪ್ರತ್ಯುಪಕಾರ ಮಾಡದವನು ಕೃತಘ್ನ. ಅವನು ಸತ್ತಾಗ ಅವನ ಕಳೇಬರವನ್ನು ನಾಯಿ ನರಿ ಕೂಡ ಮುಟ್ಟವು.'

"ತಮ್ಮ, ಹೆಚ್ಚು ಹೇಳಿ ಏನು ಪ್ರಯೋಜನ? ಇಷ್ಟು ಹೇಳು. ಚಿನ್ನದ ಕಟ್ಟನಿಂದ ಮಿಂಚಿನಂತೆ ಜಾಜ್ವಲ್ಯಮಾನ ಆದ ನನ್ನ ಬಿಲ್ಲನ್ನು ಆಕರ್ಣಾಂತ ಆಗಿ ಹೇಗೆ ಎಳೆಯುತ್ತೇನೋ ರಣರಂಗದಲ್ಲಿ ನೋಡಬೇಕು ಎಂಬ ಆಸೆ ಇರಬೇಕು ಅವನಿಗೆ. ಯುದ್ಧಕ್ಕೆ ನಿಂತು ಕೋಪದಿಂದ ನನ್ನ ಬಿಲ್ಲಿಗೆ ಹೆದೆ ಏರಿಸಿದಾಗ ಆಗುವ ಸಿಡಿಲಿನಂಥ ಟಂಕಾರ ಶಬ್ದವನ್ನು ಕೇಳಬೇಕು ಎಂಬ ಆಸೆಯೋ ಏನೋ. ನನ್ನ ಪರಾಕ್ರಮ ಅವನಿಗೆ ಗೊತ್ತು. ನೀನು ನನ್ನ ನೆರವಿಗೆ ಇದೀಯೆ ಎಂಬುದೂ ಗೊತ್ತು. ಇಷ್ಟು ಆದರೂ ಅವನಿಗೆ ಸ್ವಲ್ಪವೂ ಲಕ್ಷ್ಯ ಇಲ್ಲ.

"ನಾನು ಏಕೆ ಅವನ ಸ್ನೇಹ ಮಾಡಿದೆ, ವಾಲಿಯನ್ನು ಏಕೆ ಕೊಂದೆ ಎಂಬುದನ್ನೇ ಅವನು ಮರೆತಂತೆ ಇದೆ. ಸೀತಾನ್ವೇಷಣಕ್ಕಾಗಿ ಅವನ ಸಂಗಡ ಒಪ್ಪಂದ ಆಯಿತು. ಅವನ ಕೆಲಸ ತೀರಿತು. ಎಲ್ಲವನ್ನೂ ಮರೆತ. ಮಳೆಗಾಲ ಮುಗಿಯುತ್ತಲೇ ಬರುತ್ತೇನೆಂದು ಮಾತುಕೊಟ್ಟು ಹೋದ. ಈಗ ಕಾಮೋಪ ಭೋಗದಲ್ಲಿ ಮುಳುಗಿದಾನೆ. ಸ್ತ್ರೀಲೋಲ ಆಗಿದಾನೆ. ಮಳೆಗಾಲದ ನಾಲ್ಕೂ ತಿಂಗಳು ಕಳೆಯಿತು ಎಂದು ಅರಿಯ. ಮಂತ್ರಿಗಳೂ ಪರಿವಾರವೂ ಅವನೂ ಕಂಠದವರೆಗೆ ಮದ್ಯಪಾನಮಾಡಿ ಮೈಮರೆತು ಇದಾರೆ. ದುಃಖದಿಂದ ದೀನರು ಆದ ನಮ್ಮಲ್ಲಿ ಅವನಿಗೆ ಮರುಕ ಇಲ್ಲ.

"ಲಕ್ಷ್ಮಣ, ನೀನು ಮಹಾಪರಾಕ್ರಮಶಾಲಿ. ಅಂಜಿಕೆಯನ್ನೆ ಅರಿಯೆ. ಈಗಲೇ ಸುಗ್ರೀವನ ಬಳಿಗೆ ಹೋಗು. ನನ್ನ ಕೋಪದ ರೀತಿಯನ್ನು ಅವನಿಗೆ ತಿಳಿಸು. ಅವನಿಗೆ ಹೇಳು: 'ಸುಗ್ರೀವ, ವಾಲಿ ಹೋದ ದಾರಿ ಇನ್ನೂ ಅಳಿದು ಇಲ್ಲ. ಹಾಗೇ ಇದೆ. ಆಡಿದ ಮಾತನ್ನು ನಡೆಸು. ವಾಲಿಯ ದಾರಿಯಲ್ಲಿ ನೀನು ಹೋಗಬೇಡ. ಆಗ ಕೊಂದದ್ದು ವಾಲಿ ಒಬ್ಬನನ್ನೇ. ಆಡಿದ ಮಾತಿಗೆ ತಪ್ಪಿದರೆ ಈಗ ನೀನೂ ಮಕ್ಕಳೂ ಬಳಗವೂ ಗೆಳೆಯರೂ ಎಲ್ಲರೂ ಸಾಯುತ್ತೀರಿ.'

"ತಮ್ಮ, ನಮ್ಮ ಕಾರ್ಯಸ್ಥಿತಿ ಈಗ ಹೀಗೆ ಇದೆ. ಇದಕ್ಕೆ ತಕ್ಕಂತೆ ಏನು ಹೇಳಬೇಕೋ ಹೇಳು. ಚೆನ್ನಾಗಿ ವಿವರಿಸಿ ಹೇಳು. ಕಾಲ ಮೀರುತ್ತ ಇದೆ. ಬೇಗ ಹೋಗು. ಅವನಿಗೆ ಹೇಳು: 'ಸುಗ್ರೀವ, ಮಾತಿಗೆ ತಪ್ಪಬೇಡ. ಕೊಟ್ಟ ಭಾಷೆಯನ್ನು ನಡೆಸು. ಶಾಶ್ವತಧರ್ಮವನ್ನು ಕಾಪಾಡಿಕೊ. ಸತ್ಯವನ್ನು

ಬಿಡಬೇಡ. ಸತ್ಯಭ್ರಷ್ಟ ಆಗಿ ರಾಮಬಾಣಕ್ಕೆ ಗುರಿ ಆಗಿ ಯಮಲೋಕಕ್ಕೆ ಹೋಗಿ ವಾಲಿಯನ್ನು ನೋಡಬೇಡ.' "

ಮೇಲೆ ಮೇಲೆ ಉಕ್ಕಿಬರುವ ಕೋಪದಿಂದ ದೈನ್ಯದಿಂದ ದುಃಖಿಸುವ ರಾಮನನ್ನು ನೋಡಿ ಉಗ್ರತೇಜದ ಲಕ್ಷ್ಮಣನಿಗೂ ಸುಗ್ರೀವನ ವಿಷಯದಲ್ಲಿ ಬಹಳ ಕೋಪ ಬಂತು.

೨

ಒಂದು ಕಡೆ ಸೀತೆ ಇಲ್ಲದ ಸಂಕಟ, ಇನ್ನೊಂದು ಕಡೆ ಶರತ್ಕಾಲದ ಕಾಮ ಬಾಧೆ, ಮತ್ತೊಂದು ಕಡೆ ಮಾತಿಗೆ ತಪ್ಪಿದ ಗೆಳೆಯನ ಮೇಲೆ ಕಡುಕೋಪ. ರಾಮನ ಈ ದುಃಖವನ್ನು ನೋಡಿ ಲಕ್ಷ್ಮಣ ಹೇಳಿದ: " ಅಣ್ಣ, ಸುಗ್ರೀವನಿಗೆ ಸದಾಚಾರ ಇದ್ದಂತೆ ಇಲ್ಲ. ಅಗ್ನಿಸಾಕ್ಷಿ ಆಗಿ ನಮ್ಮ ಸಂಗಡ ಸ್ನೇಹಮಾಡಿ ಕೊಂಡ. ಅದರಿಂದ ಆದ ಫಲವನ್ನು ಮರೆತ. ಇನ್ನುಮುಂದೆ ವಾನರರಾಜ್ಯ ಅವನ ಕೈಯಲ್ಲಿ ಇರದು. ಸುಗ್ರೀವ ಬುದ್ಧಿಹೀನ, ವಿಷಯಾಸಕ್ತ. ಗ್ರಾಮ್ಯ ಸುಖದಲ್ಲಿ ಮುಳುಗಿಹೋಗಿದಾನೆ. ಇಲ್ಲದೆ ಇದ್ದರೆ ನೀನು ಮಾಡಿದ ಮಹದುಪ ಕಾರಕ್ಕೆ ಪ್ರತ್ಯುಪಕಾರ ಮಾಡಬೇಕು ಎನಿಸದೆ ಇದ್ದೀತೆ? ಇಂಥ ಮತಿಗೇಡಿಗೆ ಏಕೆ ರಾಜ್ಯ? ವಾಲಿ ಹೋದ ಕಡೆಗೇ ಅವನೂ ಹೋಗಲಿ. ನನಗೆ ಬಹಳ ಸಿಟ್ಟುಬಂದಿದೆ. ಅವನನ್ನು ಕೊಂದುಬರುತ್ತೇನೆ. ತಡೆಯಲಾರೆ. ಸತ್ಯಕ್ಕೆ ತಪ್ಪಿ ನಡೆದವನು ಅವನು. ಕೊಂದುಬಿಡುತ್ತೇನೆ. ಅವನು ಸತ್ತರೆ ಸೀತಾನ್ವೇಷಣ ಕಾರ್ಯ ನಿಲ್ಲದು. ವಾಲಿಯ ಮಗ ಅಂಗದ ಇಲ್ಲವೆ? ಅವನೂ ವಾನರವೀರರೂ ಸೀತೆಯನ್ನು ಹುಡುಕುತ್ತಾರೆ."

ಕೈಗೆ ಬಿಲ್ಲನ್ನು ತೆಗೆದುಕೊಂಡು ಪ್ರಚಂಡ ಕೋಪದಿಂದ ಕಿಷ್ಕಿಂಧೆಗೆ ಹೊರಟ ಲಕ್ಷ್ಮಣ. ಶ್ರೀರಾಮ ನೋಡಿದ. ಲಕ್ಷ್ಮಣನನ್ನು ತಡೆದು ನಿಲ್ಲಿಸಿದ. ಅನುನಯದಿಂದ ಅವನಿಗೆ ಹೇಳಿದ: " ಲಕ್ಷ್ಮಣ, ಮಿತ್ರವಧೆ ಪಾಪಕಾರ್ಯ. ಇಂಥ ಪಾಪಕಾರ್ಯ ಮಾಡಿ ಅಪಕೀರ್ತಿಯ ಪಾಲು ಆಗಬೇಕೆ ನಿನ್ನಂಥ ಗುಣವಂತ? ಪಾಪಮಾಡದಂತೆ ಕೋಪವನ್ನು ತಡೆಯಬೇಕು. ಅಂಥ ವಿವೇಕಶಾಲಿಯನ್ನೆ ಲೋಕ ಪುರುಷೋತ್ತಮ ಎಂದೆನ್ನುತ್ತದೆ. ನಿನ್ನದು ಸಾಧುವೃತ್ತಿ. ನೀನು

ಬುದ್ಧಿವಂತ. ಪಾಪವನ್ನು ಎಣಿಸಬಾರದು. ನಿನಗೆ ಸರಿ ಅಲ್ಲ. ಸುಗ್ರೀವನಿಗೂ ನಮಗೂ ಗೆಳೆತನ. ಇದನ್ನು ಮರೆಯಬೇಡ. ಇದುವರೆಗೆ ಅವನ ವಿಷಯದಲ್ಲಿ ಹೇಗೆ ನಡೆದುಕೊಂಡೆವೋ ಮುಂದೆಯೂ ಹಾಗೇ ನಡೆಯೋಣ. ಸುಗ್ರೀವ ತಡ ಮಾಡಿದ ನಿಜ. ಇದಕ್ಕಾಗಿ ಕಠಿಣಮಾತೂ ಸಲ್ಲದು. ಒಳ್ಳೆಯ ಮಾತಿನಲ್ಲೇ ಹೀಗೆ ಮಾಡಬಹುದೆ ಎಂದು ಕೇಳು. ಸಾಮೋಪಾಯವೇ ಸರಿ."

ಶತ್ರುಸಂಹಾರಕ ಲಕ್ಷ್ಮಣ ಹಾಗೆಯೆ ಆಗಲಿ ಎಂದು ಅಣ್ಣನ ಅಪ್ಪಣೆ ಯಂತೆ ಕಿಷ್ಕಿಂಧೆಗೆ ಹೊರಟ. ಅಣ್ಣನಿಗೆ ಹಿತವನ್ನು ಮಾಡುವುದೇ ಅವನನ್ನು ಸಂತೋಷಪಡಿಸುವುದೇ ತನ್ನ ಕೆಲಸ ಎಂದು ತಿಳಿದವನು ಲಕ್ಷ್ಮಣ. ರಾಮನ ಮಾತಿನಂತೆಯೆ ಕಿಷ್ಕಿಂಧೆಗೆ ಹೊರಟರೂ ಅವನ ಸಿಟ್ಟು ಇಳಿದು ಇರಲಿಲ್ಲ. ಅವನ ಬಿಲ್ಲು ದೇವೇಂದ್ರನ ವಜ್ರಾಯುಧದಂಥದು. ಪರ್ವತ ಶಿಖರದಷ್ಟು ದೊಡ್ಡದು. ಅದನ್ನು ಹಿಡಿದು ಹೊರಟಾಗ ಪ್ರಳಯಾಂತಕನಂತೆ ಮಂದರ ಪರ್ವತದಂತೆ ಇದ್ದ.

ಅಣ್ಣನ ಮಾತಿಗೆ ಚಾಚೂ ತಪ್ಪುವವನು ಅಲ್ಲ ಲಕ್ಷ್ಮಣ. ಬುದ್ಧಿಯಲ್ಲಿ ಬೃಹಸ್ಪತಿ. ಸುಗ್ರೀವನಿಗೆ ಏನು ಹೇಳಬೇಕೋ, ಅದಕ್ಕೆ ಅವನು ಏನು ಹೇಳ ಬಹುದೋ, ತಾನು ಮತ್ತೆ ಏನು ಹೇಳಬೇಕೋ ಎಲ್ಲವನ್ನೂ ಮನಸಿನಲ್ಲೇ ನಿರ್ಧರಿಸಿಕೊಂಡ. ಕಾಮ ಕ್ರೋಧದಿಂದ ಸಿಟ್ಟುಗೊಂಡ. ರಾಮನ ಕೋಪ ಲಕ್ಷ್ಮಣನನ್ನು ರೇಗಿಸಿ ಬಿಟ್ಟಿತ್ತು. ಇದಿರಿಗೆ ಸಿಕ್ಕ ಸಾಲೆ ತಾಳೆ ಅಶ್ವಕರ್ಣ ಗಿಡಗಳನ್ನು ಕೆಳಕ್ಕೆ ಉರುಳಿಸಿದ. ಬೆಟ್ಟದ ಶಿಖರಗಳನ್ನು ಕೆಡವಿದ. ಕಾಲಿನಿಂದ ತುಳಿದೇ ಕಲ್ಲುಬಂಡೆಗಳನ್ನು ಪುಡಿಪುಡಿ ಮಾಡಿದ. ಬೇಗ ಬೇಗ ನಡೆಯುವ ಆನೆಯಂತೆ ಕಾರ್ಯಾತುರದಿಂದ ದೂರದೂರ ಒಂದೊಂದು ಹೆಜ್ಜೆ ಇಟ್ಟು ನಡೆದ. ದಟ್ಟ ಆದ ಪರ್ವತಗಳ ನಡುವೆ ದುರ್ಗಮ ಆಗಿ, ಲೆಕ್ಕ ಇಲ್ಲದ ವಾನರಸೇನೆ ಕಾವಲು ಕಾಯುವ ಕಿಷ್ಕಿಂಧಾ ನಗರವನ್ನು ನೋಡಿದ.

ಲಕ್ಷ್ಮಣನ ಕೋಪ ಇನ್ನೂ ಹೆಚ್ಚಿತು. ಆತನ ತುಟಿಗಳು ಅದುರಿದವು. ಕಿಷ್ಕಿಂಧೆಯ ಹೊರಗಡೆ ಅನೇಕ ವಾನರರು ಸಂಚರಿಸುತ್ತ ಇದ್ದರು. ಆನೆಯ ಹಾಗೆ ಕೊಬ್ಬಿದ ಭಯಂಕರದೇಹಿಗಳು. ಲಕ್ಷ್ಮಣನನ್ನು ನೋಡಿ ಯಾರೋ ಶತ್ರು ಬರುತ್ತ ಇದಾನೆ ಎಂದುಕೊಂಡು ವಾನರರು ಎಲ್ಲರೂ ಗುಂಪುಕೂಡಿದರು. ಅಲ್ಲಿ ಇದ್ದ ದೊಡ್ಡ ಮರಗಳನ್ನು ಕೆಲವರು ಕಿತ್ತುಕೊಂಡರು. ಲಕ್ಷ್ಮಣನನ್ನು

ಹೊಡೆದು ಓಡಿಸಬೇಕು ಎಂದು ಕೆಲವರು ಬೆಟ್ಟದ ಶಿಖರಗಳನ್ನೇ ಕಿತ್ತು ತೆಗೆದು ಕೊಂಡರು. ಹೀಗೆ ಹೋರಾಟಕ್ಕೆ ಸಿದ್ಧರು ಆಗಿ ನಿಂತ ವಾನರರನ್ನು ನೋಡಿ ಲಕ್ಷ್ಮಣನ ಸಿಟ್ಟು ಇಮ್ಮಡಿಸಿತು. ಸಾಕ್ಷಾತ್ ಅಗ್ನಿಯಂತೆ ಜ್ವಲಿಸುತ್ತ ಇದ್ದ, ಪ್ರಳಯಕಾಲದ ಮೃತ್ಯುವಿನ ಹಾಗೆ ಬಂದ ಲಕ್ಷ್ಮಣನನ್ನು ನೋಡಿ ಆ ವಾನರರ ದರ್ಪ ಅಡಗಿಯೆ ಹೋಯಿತು. ಅವರ ಮೈ ಗಡಗಡ ನಡುಗಿತು. ದಿಕ್ಕಾಪಾಲು ಆಗಿ ಓಡಿಹೋದರು.

ಕೆಲವರು ವಾನರರು ಸುಗ್ರೀವನ ಅರಮನೆಗೆ ಬಂದರು. ಲಕ್ಷ್ಮಣ ಸಿಟ್ಟುಗೊಂಡು ಕಿಷ್ಕಿಂಧೆಗೆ ಬರುತ್ತ ಇದ್ದಾನೆ ಎಂದು ತಿಳಿಸಿದರು. ಸುಗ್ರೀವ ಕಾಮಮೋಹಿತ ಆಗಿ ಏಕಾಂತದಲ್ಲಿ ತಾರೆಯ ಸಂಗಡ ಕ್ರೀಡಿಸುತ್ತ ಇದ್ದ ಆಗ. ಇವರ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ.

ಸಮಾಚಾರವನ್ನು ಪೂರ್ತಿ ತಿಳಿದು ಬರಲು ಮಂತ್ರಿಗಳು ವಾನರರನ್ನು ಕಳಿಸಿದರು. ಒಬ್ಬೊಬ್ಬರೂ ಬೆಟ್ಟದ ಹಾಗೆ. ಆನೆಯಂಥವರು. ಮೋಡಗಳಿಗೆ ಸಮ. ಭಯಂಕರ ಆಕಾರರು. ಹಲ್ಲು ಉಗುರುಗಳೇ ಸಾಕು ಅವರಿಗೆ. ಅವೇ ಆಯುಧ. ಕೊಬ್ಬಿದ ಹೆಬ್ಬುಲಿಯಂತೆ ಭಯಂಕರಮುಖರು. ಕೆಲವರಿಗೆ ಹತ್ತು ಆನೆಗಳ ಬಲ. ಕೆಲವರಿಗೆ ಸಾವಿರ ಆನೆಗಳ ಬಲ. ಮಹಾಬಲಾಢ್ಯರು. ಕೈಯಲ್ಲಿ ಮರಗಳನ್ನು ಹಿಡಿದು ಬಂದರು ಆ ಕಪಿವೀರರು.

ಮೊದಲೇ ಲಕ್ಷ್ಮಣನಿಗೆ ಕೋಪ. ಇವರನ್ನು ನೋಡಿ ಮತ್ತೂ ರೇಗಿ ಹೋಯಿತು. ಕೋಟೆಯ ಬಾಗಿಲಿನ ಬಳಿ ಅದರ ಅಗಳಿಯ ಕೆಳಗೆ ನಿಂತರು ಕಪಿವೀರರು. ಲಕ್ಷ್ಮಣ ಮಹಾಪರಾಕ್ರಮಶಾಲಿ, ಬುದ್ಧಿವಂತ. ಸುಗ್ರೀವನ ಅಸಡ್ಡೆಯನ್ನೂ ಅಣ್ಣನ ದುಃಖವನ್ನೂ ನೆನೆದ. ಕೋಪ ಹೆಚ್ಚಿಹೋಯಿತು. ದೀರ್ಘ ಆಗಿ ನಿಟ್ಟುಸಿರು ಬಿಟ್ಟ. ಕೋಪದಿಂದ ಕಣ್ಣು ಬೆಂಕಿ ಆಯಿತು. ಹೊಗೆ ಆಡುತ್ತ ಬುಸುಗುಟ್ಟುವ ಕಾಲಾಗ್ನಿಯ ಹಾಗೆ ಕಂಡ. ಅವನ ಬಾಣದ ತುದಿಯೇ ನಾಲಗೆ, ಬಿಲ್ಲೇ ಹೆಡೆ, ವೀರ್ಯವೇ ವಿಷ ಆದ ಐದು ಹೆಡೆಗಳ ವಿಷಸರ್ಪದಂತೆ, ಉರಿಯುವ ಪ್ರಳಯಾಗ್ನಿಯಂತೆ ಕಂಡ. ರೋಷಗೊಂಡ ಆದಿಶೇಷನ ಹಾಗೆ ಇದ್ದ.

ಹೀಗೆ ರೋಷದಿಂದ ಕೆಂಪು ಅಡರಿದ ಕಣ್ಣಿನ ಲಕ್ಷ್ಮಣನನ್ನು ನೋಡಿ ಅಂಗದನಿಗೆ ಅಂಜಿಕೆ ಆಯಿತು. ದುಃಖದಿಂದ ಲಕ್ಷ್ಮಣನ ಬಳಿಗೆ ಬಂದ.

"ಮಗು ಅಂಗದ, ಹೋಗು, ಸುಗ್ರೀವನಿಗೆ ನಾನು ಬಂದಿದೇನೆ ಇಲ್ಲಿ ಎಂದು ಹೇಳು. 'ಹೋಗು, ಶತ್ರುಮರ್ದನ ಲಕ್ಷ್ಮಣ ಶ್ರೀರಾಮನ ತಮ್ಮ, ಬಂದಿದಾನೆ ಎಂದು ಹೇಳು. ಅಣ್ಣನ ದುಃಖವನ್ನು ನೋಡಲಾರದೆ ಇಲ್ಲಿಗೆ ಬಂದು ನಿಂತು ಇದಾನೆ. ಅವನು ಹೇಳುವುದನ್ನು ಕೇಳಲು ಇಷ್ಟ ಇದ್ದರೆ ಈಗಲೇ ಬಾ.' ನೀನು ಹೀಗೆ ಹೇಳಿ ಹಿಂದಿರುಗಿ ಇಲ್ಲಿಗೆ ಬಾ" ಎಂದು ಲಕ್ಷ್ಮಣ ಅಂಗದನಿಗೆ ಹೇಳಿದ.

ಅಂಗದನಿಗೆ ಭಯ. ಕಳವಳಗೊಂಡು ತತ್ತರಿಸುತ್ತಹೋದ. ಕಳೆಗುಂದಿ ಹೋಯಿತು ಆತನ ಮುಖ. ಸುಗ್ರೀವನ ಪಾದಕ್ಕೆ ಬಿದ್ದು ಅಲ್ಲಿಯೇ ಇದ್ದ ಚಿಕ್ಕಮ್ಮ ರುಮೆಗೂ ತಾಯಿ ತಾರೆಗೂ ನಮಸ್ಕಾರ ಮಾಡಿದ. ಲಕ್ಷ್ಮಣ ಬಂದ ಸುದ್ದಿಯನ್ನೂ ಅವನು ಹೇಳಿದ ಮಾತನ್ನೂ ತಿಳಿಸಿದ. ಸುಗ್ರೀವನಿಗೆ ನಿದ್ರಾಮದ, ಕಾಮಮದ. ಮೈಮೇಲೆ ಎಚ್ಚರ ಇರಲಿಲ್ಲ. ಮಲಗಿದ್ದ. ಇದು ಯಾವುದೂ ತಿಳಿಯಲಿಲ್ಲ.

ಲಕ್ಷ್ಮಣನ ಸಿಟ್ಟನ್ನು ಇಳಿಸಬೇಕು ಎಂದು ವಾನರವೀರರು ಎಲ್ಲರೂ ಪ್ರಯತ್ನಮಾಡಿದರು. ಲಕ್ಷ್ಮಣನನ್ನು ಕಂಡು ಭಯ, ನಡುಕ. ಕಿಲಕಿಲ ಎಂದು ಕಿರಿಚಿಕೊಂಡರು. ಗುಡುಗಿನ ಹಾಗೆ, ಮಹಾಪೂರದ ಹಾಗೆ ಇತ್ತು ಆ ಧ್ವನಿ.

ಆ ಸಿಂಹನಾದವನ್ನು ಕೇಳಿ ಸುಗ್ರೀವನಿಗೆ ಎಚ್ಚರ ಆಯಿತು. ಮದ್ಯದ ಮದದಿಂದ ಕೆಂಪು ಏರಿತ್ತು ಕಣ್ಣು. ಮೈಮೇಲಿನ ಒಡವೆ ಎಲ್ಲಾ ಚೆದರಿ ಹೋಗಿ ಇದ್ದವು. ಹೂವಿನ ಹಾರಗಳೂ ಚೆಲ್ಲಾಪಿಲ್ಲಿ. ಅಂಗದ ಹೇಳುತ್ತ ಇದ್ದ ಸುದ್ದಿಯನ್ನು ಕೇಳಿ ಪ್ಲಕ್ಷ, ಪ್ರಭಾವ ಎಂಬ ಇಬ್ಬರು ಮಂತ್ರಿಗಳು ಅಂತಃಪುರಕ್ಕೆ ಬಂದಿದ್ದರು. ಅವರಿಬ್ಬರೂ ಕಾಲೋಚಿತ ಮಂತ್ರಾಲೋಚನಾ ಶಕ್ತರು. ಸುಗ್ರೀವನಿಗೆ ಬೇಕಾದವರು.

ದೇವೇಂದ್ರನ ಹಾಗೆ ಉತ್ತಮ ಆಸನದಲ್ಲಿ ಕುಳಿತಿದ್ದ ಸುಗ್ರೀವ. "ಪ್ರಭು, ತಮ್ಮ ಸಂಗಡ ಧರ್ಮ ಅರ್ಥಗಳ ಮಾತನ್ನು ಆಡಲು ಲಕ್ಷ್ಮಣ ಬಂದಿದಾನೆ. ಬಾಗಿಲಲ್ಲಿದಾನೆ" ಎಂದರು. ಸುಗ್ರೀವ ಪ್ರಸನ್ನ ಆದ. ಆಗ ಅವನ ಪಕ್ಕದಲ್ಲಿ ಕೂತರು ಇಬ್ಬರೂ ಮಂತ್ರಿಗಳು. "ರಾಮಲಕ್ಷ್ಮಣರು ಮಹಾತ್ಮರು ಸತ್ಯ ಸಂಧರು. ರಾಜ್ಯ ಆಳಲು ಸಮರ್ಥರು. ನಿನ್ನ ಸಂಗಡ ಸ್ನೇಹಮಾಡಿ ನಿನಗೆ ಈ ರಾಜ್ಯವನ್ನು ಕೊಟ್ಟರು, ದೊರೆಯೆ. ಅವರಲ್ಲಿ ಒಬ್ಬ ಲಕ್ಷ್ಮಣ ಬಿಲ್ಲು

ಹಿಡಿದು ಬಂದು ಬಾಗಿಲಲ್ಲಿ ನಿಂತು ಇದ್ದಾನೆ. ವಾನರವೀರರು ಎಲ್ಲರೂ ಆವನನ್ನು ನೋಡಿ ಬೆದರಿ ಭಯಪಟ್ಟು ಗಡಗಡ ನಡುಗುತ್ತ ಕೂಗಿಕೊಳ್ಳುತ್ತ ಇದ್ದಾರೆ. ಲಕ್ಷ್ಮಣನಿಗೆ ರಾಮನ ಮಾತೇ ಸಾರಥಿ, ಅದರ ಪ್ರಯತ್ನವೇ ರಥ. ರಾಮನ ಅಪ್ಪಣೆಯಂತೆ ಮರ್ಗನು ಆದ ಕಿಷ್ಕಿಂಧಾಪಟ್ಟಣಕ್ಕೆ ಬಂದಿದ್ದಾನೆ.

" ವಾನರಾಧಿಪ, ನಿನ್ನ ಹಿತವನ್ನು ಕೋರುವ ತಾರೆಯ ಮಗ ಅಂಗದನನ್ನು ನಿನ್ನ ಬಳಿಗೆ ಕಳಿಸಿ ತಾನು ಬಾಗಿಲಲ್ಲಿ ನಿಂತಿದ್ದಾನೆ. ಅತುಲಪರಾಕ್ರಮಿ ಲಕ್ಷ್ಮಣ. ಅವನ ಕಣ್ಣಿನಿಂದ ಕೋಪ ಉಕ್ಕಿ ಚೆಲ್ಲುತ್ತ ಇದೆ. ನೋಟದಿಂದಲೇ ವಾನರರನ್ನು ಸುಡುವ ಹಾಗೆ ಇದ್ದಾನೆ. ದೊರೆಯೆ, ನೀನು ಈಗ ನಿನ್ನ ಬಂಧುಗಳ ಸಮೇತ ಲಕ್ಷ್ಮಣನ ಬಳಿಗೆ ಹೋಗಿ ಆವನಿಗೆ ಸಾಷ್ಟಾಂಗ ಮಾಡು. ಅವನ ಕೋಪ ಇಳಿಯಲಿ. ಧರ್ಮಾತ್ಮ ಆ ರಾಮು ಏನು ಹೇಳಿಕಳಿಸಿದ್ದಾನೋ ಅದನ್ನು ಮನಃಪೂರ್ವಕ ಮಾಡು. ಮರ್ಯಾದೆಯನ್ನು ಕಾಪಾಡಿಕೊ. ನೀನು ಮಾಡಿದ ಪ್ರತಿಜ್ಞೆಯಂತೆ ನಡೆ. ರಾಮಲಕ್ಷ್ಮಣರಿಗೆ ಸಂತೋಷ ಆದೀತು."

೩

ಲಕ್ಷ್ಮಣ ಸಿಟ್ಟು ಆಗಿ ಬಂದಿದ್ದಾನೆ ಎಂದು ಅಂಗದನ್ನು ಮಂತ್ರಿಗಳೂ ಹೇಳಿದ ಒಡನೆಯೆ ಸುಗ್ರೀವ ಸಿಂಹಾಸನವನ್ನು ಬಿಟ್ಟು ಎದ್ದು ಬಂದ.

ಮೊದಲು ಮನಸ್ಸಿನಲ್ಲಿ ಸಾಧಕಬಾಧಕಗಳನ್ನು ಆಲೋಚಿಸಿಕೊಂಡ ಆ ಮಂತ್ರಕುಶಲ. ಅವನ ಮಂತ್ರಿಗಳು ಮಂತ್ರಾಲೋಚನಾಪರಿಣತರು. ಅವರಿಗೆ ಹೇಳಿದ: " ಮಂತ್ರಿಶ್ರೇಷ್ಠರೆ, ರಾಮಲಕ್ಷ್ಮಣರ ಬಗ್ಗೆ ನಾನು ಎಂದೂ ತಪ್ಪು ಮಾತು ಆಡಿ ಇಲ್ಲ. ಅವರಿಗೆ ಯಾವ ಕೆಡುಕನ್ನೂ ಮಾಡಿ ಇಲ್ಲ. ಆದರೂ ರಾಮನ ತಮ್ಮ ಲಕ್ಷ್ಮಣನಿಗೆ ನನ್ನ ಮೇಲೆ ಕೋಪ ಏಕೆ? ಅದನ್ನೆ ಆಲೋಚಿಸುತ್ತ ಇದೇನೆ. ಯಾರೋ ದುರಾತ್ಮರು, ವೈರಭಾವದಿಂದ ಯಾವಾಗಲೂ ದೋಷವನ್ನೇ ಹುಡುಕುವವರು ಲಕ್ಷ್ಮಣನಿಗೆ ನನ್ನಮೇಲೆ ಇಲ್ಲದ ಸಲ್ಲದ ದೂರು ಹೇಳಿರಬಹುದು. ನೀವು ಮೊದಲು ಹೋಗಿ. ನಿಮ್ಮ ಬುದ್ಧಿಕೌಶಲ ಎಲ್ಲವನ್ನೂ ಉಪಯೋಗಿಸಿ ಆತನಿಗೆ ಏಕೆ ಸಿಟ್ಟುಬಂದಿದೆಯೋ ತಿಳಿದುಕೊಳ್ಳಿ.

"ರಾಮನ ಭಯವೂ ಇಲ್ಲ, ಲಕ್ಷ್ಮಣನ ಭಯವೂ ಇಲ್ಲ ನನಗೆ. ಅವರು ಗೆಳೆಯರು. ಗೆಳೆಯರಿಗೆ ನಿಷ್ಕಾರಣ ಆಗಿ ಕೋಪ ಬಂದರೆ ಕಳವಳ ಆಗದೆ? ಗೆಳೆಯರನ್ನು ಸಂಪಾದಿಸುವುದು ಸುಲಭ. ಗೆಳೆತನವನ್ನು ಕಾಪಾಡಿಕೊಳ್ಳುವುದು ಮಾತ್ರ ಕಷ್ಟ. ಯಾರ ಮನಸ್ಸೂ ಒಂದೇ ರೀತಿ ಇರದು. ಎಷ್ಟು ಸ್ವಲ್ಪ ತಪ್ಪು ಆದರೂ ಸ್ನೇಹ ಕೆಡುತ್ತದೆ. ರಾಮ ನನಗೆ ಮಾಡಿದ ಉಪಕಾರ ಮಹತ್ತರ. ಅದಕ್ಕೆ ಪ್ರತ್ಯುಪಕಾರ ಮಾಡಲು ನನಗೆ ಸಾಧ್ಯ ಇಲ್ಲವಲ್ಲ ಎಂದು ಕಳವಳ" ಎಂದ.

ಆ ಮಂತ್ರಿಗಳ ನಡುವೆ ವಾನರಪುಂಗವ ಹನುಮಂತ ಇದ್ದ. ಅವನು ಹೇಳಿದ: "ವಾನರೇಶ್ವರ, ನಿನಗೆ ಉಪಕಾರಿ ಆದ ಗುಣಾಢ್ಯ ಮಿತ್ರನನ್ನು ನೀನು ಮರೆಯಲಿಲ್ಲ. ಇದು ಆಶ್ಚರ್ಯ ಅಲ್ಲ. ನಿನ್ನನ್ನು ಸಂತೋಷಪಡಿಸಲು ಎಂದೇ ಲವಲೇಶವೂ ಅಳುಕದೆ ದೇವೇಂದ್ರನಿಗೆ ಸಮಾನ ಪರಾಕ್ರಮಿ ವಾಲಿಯನ್ನು ಕೊಂದ. ರಾಮನಿಗೆ ನಿನ್ನ ಮೇಲೆ ಸಿಟ್ಟು ಬಂದು ಇರಬಹುದು. ಅದು ಮನಃಪೂರ್ವಕ ಅಲ್ಲ. ಪ್ರಣಯಕೋಪ. ಸಂದೇಹ ಇಲ್ಲ. ಆದ್ದರಿಂದಲೇ ಲಕ್ಷ್ಮಣನನ್ನು ಕಳಿಸಿ ಇದಾನೆ. ಲಕ್ಷ್ಮೀವರ್ಧನ ಲಕ್ಷ್ಮಣ.

"ಸುಗ್ರೀವ, ನಿನ್ನದೂ ತಪ್ಪು ಇಲ್ಲದೆ ಇಲ್ಲ. ನಿನಗೆ ಈಗ ಕಾಲದ ಪರಿವೆ ಇಲ್ಲ. ಪ್ರಮಾದ ಇದು. ಈಗ ಯಾವ ಕಾಲ ಗೊತ್ತೆ? ಏಳು ಎಲೆಯ ಬಾಳೆಗಿಡ ಹೂ ಬಿಟ್ಟದೆ. ಇದು ಶರತ್ಕಾಲ. ಎಷ್ಟು ಸೊಬಗು, ಎಷ್ಟು ಸೊಗಸು! ಆಕಾಶದಲ್ಲಿ ಮೋಡ ಇಲ್ಲ. ಗ್ರಹನಕ್ಷತ್ರಗಳು ನಿರ್ಮಲ ಆಗಿ ಹೊಳೆಯುತ್ತ ಇವೆ. ದಿಕ್ಕುಗಳು ಸ್ಪಷ್ಟ ಆಗಿ ತಿಳಿಯುತ್ತವೆ.

"ರಾಜರು ದಂಡಯಾತ್ರೆಗೆ ಹೊರಡುವ ಕಾಲ ಇದು. ಪ್ರಮಾದವಶ ಆಗಿ ನಿನಗೆ ತಿಳಿಯಲಿಲ್ಲ. ಅದಕ್ಕೇ ಲಕ್ಷ್ಮಣ ಸಿಟ್ಟುಮಾಡಿಕೊಂಡು ಬಂದ. ಹೆಂಡತಿಯನ್ನು ಕಳೆದುಕೊಂಡು ದುಃಖಿಸುತ್ತ ಇರುವ ರಾಮ ಹೇಳಿಕಳಿಸಿ ಇದಾನೆ. ಲಕ್ಷ್ಮಣ ಕಠಿನ ವಾಕ್ಯಗಳನ್ನು ಆಡಿರಬಹುದು. ಈಗ ನೀನು ಸೈರಿಸಿಕೊಳ್ಳ ಬೇಕು. ಒಪ್ಪಂದದ ಕಾಲವನ್ನು ಮೀರಿ ಒಂದು ದೊಡ್ಡ ತಪ್ಪು ಮಾಡಿದೀಯೆ. ಆದ್ದರಿಂದ ಲಕ್ಷ್ಮಣ ಸಿಟ್ಟು ಆಗಿ ಇದ್ದರೂ ನೀನು ಕೈಮುಗಿದು ಅವನನ್ನು ಪ್ರಸನ್ನ ಆಗಿ ಮಾಡಿಕೊ. ಬೇರೆ ಯಾವ ಉಪಾಯವೂ ನನಗೆ ತೋರದು.

"ಮಂತ್ರಿಗಳು ರಾಜನಿಗೆ ಹಿತವನ್ನು ಹೇಳಬೇಕು. ನಿರ್ಭಯದಿಂದ ನಾನು ಹೇಳುತ್ತ ಇದೇನೆ. ಆ ರಾಮನೇ ಕೋಪಗೊಂಡು ಬಿಲ್ಲನ್ನು ಎತ್ತಿದನೋ, ದೇವಾಸುರಗಂಧರ್ವಸಹಿತ ಈ ಇಡೀ ಜಗತ್ತೇ ಆತನಿಗೆ ವಶ. ಅಷ್ಟು ಸಮರ್ಥ ಆತ. ಅದಕ್ಕೆ ಸಂದೇಹವೆ? ನಮಗಿಂತ ಬಲಿಷ್ಠರು ಕೋಪಗೊಂಡಾಗ ಅವರನ್ನು ಶಾಂತಗೊಳಿಸಬೇಕೇ ವಿನಾ ಮತ್ತಷ್ಟು ರೇಗಿಸಬಾರದು. ಅದರಲ್ಲೂ ಆತನಿಂದ ನಾವು ಮೊದಲು ಉಪಕಾರ ಪಡೆದು ಇದೇವೆ. ನಾವು ಕೃತಜ್ಞರು ಆಗಿರಬೇಕು. ಆತನಿಗೆ ಕೋಪ ಬರುವಂತೆ ಮಾಡಲೇ ಕೂಡದು.

"ದೊರೆಯೆ, ಅಂಗದನನ್ನೂ ಬಂಧುವರ್ಗದವರನ್ನೂ ಕರೆದುಕೊಂಡು ಹೋಗು. ಆತನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡು. ಗಂಡನಿಗೆ ಹೆಂಡತಿ ವಶ ಆಗುವಂತೆ ಆತನಿಗೆ ನೀನು ವಶ ಆಗು. ನಿನ್ನ ಪ್ರತಿಜ್ಞೆಯನ್ನು ನಡೆಸು. ರಾಮನ ಅಪ್ಪಣೆಯನ್ನು ಆಗಲಿ ಲಕ್ಷ್ಮಣನ ಅಪ್ಪಣೆಯನ್ನು ಆಗಲಿ ಮನಸಿನಲ್ಲಿ ಆದರೂ ಮೀರಬೇಡ. ಅದು ಯುಕ್ತ ಅಲ್ಲ. ದೇವೇಂದ್ರಸಮಾನ ತೇಜಸ್ಸಿನ ಅವರ ಶಸ್ತ್ರಬಲವನ್ನೂ ಅವರ ದೇಹಬಲವನ್ನೂ ನೀನು ಬಲ್ಲೆ."

೪

ಒಳಗೆ ಹೋದ ಅಂಗದ ಹಿಂದಿರುಗಿ ಬಂದು ಲಕ್ಷ್ಮಣನನ್ನು ಒಳಕ್ಕೆ ಕರೆದ. ಇಬ್ಬರೂ ಒಳಹೊಕ್ಕರು. ಕಿಷ್ಕಿಂಧಾನಗರ ಒಂದು ಭಯಂಕರ ಗುಹೆ. ನಗರದ ಹೊರಬಾಗಿಲಿನಲ್ಲಿ ಕಾವಲು ಕಾಯುವ ಮಹಾಕಾಯರೂ ಮಹಾಬಲಾಢ್ಯರೂ ಆದ ವಾನರರು ಲಕ್ಷ್ಮಣನನ್ನು ಕಂಡಕೂಡಲೇ ಭಯಭಕ್ತಿಗಳಿಂದ ಕೈಜೋಡಿಸಿ ನಿಂತರು. ಲಕ್ಷ್ಮಣನಿಗೋ ಸಿಟ್ಟು. ನಿಟ್ಟುಸಿರು ಬಿಡುತ್ತ ಇದ್ದ. ಅವನನ್ನು ನೋಡಿ ಎಲ್ಲರಿಗೂ ಗಾಬರಿ. ಯಾರೂ ಮುಂದೆ ಬರಲಿಲ್ಲ. ಹತ್ತಿರ ಹಾಯಲಿಲ್ಲ.

ಲಕ್ಷ್ಮಣ ಕಿಷ್ಕಿಂಧೆಯ ಒಳಕ್ಕೆ ಹೋದ. ಊರು ಕೇವಲ ರತ್ನಮಯ. ಎತ್ತ ತಿರುಗಿದರೂ ಪುಷ್ಪಭರಿತ ಉದ್ಯಾನವನಗಳೇ. ಎಲ್ಲಿ ನೋಡಿದರೂ ರತ್ನರಾಶಿಯನ್ನು ಚೆಲ್ಲಾಡಿದಂತೆ ಇತ್ತು. ಪ್ರದೇಶ ದೇವಯೋಗ್ಯ. ಅಲ್ಲಲ್ಲಿ ಉಪ್ಪರಿಗೆ, ಅಲ್ಲಲ್ಲಿ ದೇವಾಲಯ. ಬಗೆಬಗೆಯ ಅಂಗಡಿ. ಎಂಥ ಹಣ್ಣು ಬೇಕು

ಎಂದರೆ ಅಂಥ ಹಣ್ಣಿನ ಗಿಡ ಅಲ್ಲಿ. ಹಣ್ಣು ಹೂಗಳು ಸಮೃದ್ಧಿ ಗಿಡಗಳಲ್ಲಿ. ನೋಟ ಬಲು ಸೊಗಸು.

ಅಲ್ಲಿದ್ದ ವಾನರರು ದೇವತೆಗಳ, ಗಂಧರ್ವರ ಮಕ್ಕಳು. ಕಾಮರೂಪಿಗಳು. ದಿವ್ಯಮಾಲ್ಯಾಂಬರಧರರು. ಪ್ರಿಯದರ್ಶನರು. ರಾಜಬೀದಿಗಳಲ್ಲಿ ಘಮಘಮ ಸುವಾಸನೆ. ಅಗರು ಚಂದನ ಪದ್ಮಗಳ ಸುಗಂಧ. ಬಗೆಬಗೆಯ ಮದ್ಯಗಳ ವಾಸನೆ. ಗಿರಿನದಿಗಳು ಹರಿಯುತ್ತ ಇವೆ ಊರಿನಲ್ಲಿ. ಅದರಲ್ಲಿ ತಿಳಿನೀರು.

ರಾಜಬೀದಿಯಲ್ಲಿ ನಡೆದ ಲಕ್ಷ್ಮಣ. ಅಲ್ಲಿ ವಾನರವೀರರ ಮನೆಗಳು ಕಂಡುಬಂದವು. ಮೊದಲು ಕಂಡದ್ದು ಅಂಗದನ ಅರಮನೆ. ಮುಂದೆ ಮೈಂದ ದ್ವಿವಿದ ಗವಯ ಗವಾಕ್ಷ ಗಜ ಶರಭ ವಿದ್ಯುನ್ಮಾಲಿ ಸಂಪಾತಿ ಸೂರ್ಯಾಕ್ಷ ಹನುಮಂತ ವೀರಬಾಹು ಸುಬಾಹು ನಲ ನೀಲ ಕುಮುದ ಸುಷೇಣ ತಾರ ಜಾಂಬವಂತ ದಧಿಮುಖ ಸುಪಾಟಲ ಸುನೇತ್ರರ ಮನೆಗಳು. ಇನ್ನೂ ಇತರ ವೀರರ ಮನೆಗಳು. ದೃಢ ಆಗಿ ಕಟ್ಟಿದ ಮನೆಗಳು. ದೊಡ್ಡದೊಡ್ಡವು. ಒಂದೊಂದೂ ಒಂದೊಂದು ಬಿಳೀ ಮೋಡ. ಮನೆಮನೆಗೂ ಹೂವಿನ ಹಾರದ ಸಿಂಗಾರ. ಮನೆಮನೆಯೂ ಧನಧಾನ್ಯಸಮೃದ್ಧ. ಹೆಂಗಸರೋ ರತ್ನದಂಥವರು.

ಇವನ್ನು ದಾಟಬಂದರೆ ಸುಗ್ರೀವನ ಅರಮನೆ. ದೇವೇಂದ್ರನ ಮನೆಯ ಹಾಗೆ ಮನೋಹರ. ಸುತ್ತಲೂ ಬೆಳ್ಳಗೆ ಪ್ರಾಕಾರ. ಒಳಗೆ ಹೋಗಲು ಯಾರಿಗೂ ಸಾಧ್ಯ ಅಲ್ಲ. ಅದರ ಉಪ್ಪರಿಗೆಗಳ ಶಿಖರಗಳು ಕೈಲಾಸಶಿಖರದ ಹಾಗೆ ಬೆಳ್ಳಗೆ ಹೊಳೆಯುತ್ತ ಇದ್ದವು. ಅರಮನೆಯ ಬಯಲಿನಲ್ಲಿ ಸಮಸ್ತ ಪುಷ್ಪಫಲವೃಕ್ಷಗಳು ಕಂಗೊಳಿಸುತ್ತ ಇವೆ. ಇವೇ ಅಲ್ಲದೆ ದೇವೇಂದ್ರನೇ ಅನುಗ್ರಹಿಸಿಕೊಟ್ಟ ದಿವ್ಯವೃಕ್ಷಗಳು ಬೇರೆ. ಆ ಗಿಡಗಳು ಗುಂಪು ಆಗಿ ನೀಲ ಮೇಘದ ಹಾಗೆ ಕಾಣುತ್ತ ಇದ್ದವು ದಿವ್ಯಫಲ ದಿವ್ಯಪುಷ್ಪ. ತಂಪು ನೆರಳು.

ಅರಮನೆಯ ಬಾಗಿಲು ಬಲು ಅಂದ. ಚಿನ್ನದ ಬಾಗಿಲು. ಬಿಳಿ ಹೂವಿನ ತೋರಣ. ಮಹಾಬಲಾಢ್ಯರು ಶಸ್ತ್ರಪಾಣಿಗಳು ಆದ ವಾನರವೀರರ ಕಾವಲು.

ಮೋಡಗಳ ಒಳಗೆ ಸೂರ್ಯ ನುಗ್ಗಿಹೋಗುವ ಹಾಗೆ ಲಕ್ಷ್ಮಣ ಯಾವ ತಡೆಯೂ ಇಲ್ಲದೆ ಸುಗ್ರೀವನ ಅರಮನೆಯನ್ನು ಹೊಕ್ಕ. ಅರಮನೆಗೆ ಏಳು ತೊಟ್ಟಿ. ಏಳರಲ್ಲೂ ನಾನಾ ಜನಸಮೂಹ. ಏಳನ್ನೂ ದಾಟಿಹೋದ ಲಕ್ಷ್ಮಣ. ಅಲ್ಲಿ ಸುರಕ್ಷಿತ ಆಗಿ ಇತ್ತು ಸುಗ್ರೀವನ ಅಂತಃಪುರ. ಅಲ್ಲಿಗೂ ಹೋದ.

ಅಂತಃಪುರ ವಿಶಾಲ ಆದದ್ದು. ಚಿನ್ನದ ಮಂಚ ಬೆಳ್ಳಿಯ ಮಂಚಗಳು ಬಗೆಬಗೆಯ ಉತ್ತಮ ಆಸನಗಳು ಅಲ್ಲಿ ಇದ್ದವು. ಅಮೂಲ್ಯ ಹಾಸಿಗೆಗಳನ್ನು ಹಾಸಿ ಇತ್ತು. ಇಂಪು ಆದ ವೀಣಾನಾದ ಕೇಳಿಸಿತು. ಅದರ ಜೊತೆಗೆ ಶ್ರುತಿ ಕೂಡಿಸಿ ತಾಳಕ್ಕೆ ಸರಿ ಆಗಿ ಪದ ಅಕ್ಷರ ತಪ್ಪದಂತೆ ಸ್ಫುಟ ಆಗಿ ಹಾಡುತ್ತ ಇದ್ದರು. ಮನೋಹರ ಆಗಿತ್ತು ಸಂಗೀತ. ಬಗೆಬಗೆಯ ಉಡುಪುತೊಡುಪು ತೊಟ್ಟ ಹರೆಯದ ಚೆಲುವೆಯರು ಅನೇಕರು ಲಕ್ಷ್ಮಣನ ಕಣ್ಣಿಗೆ ಬಿದ್ದರು ಅಲ್ಲಿ. ಆ ಯುವತಿಯರು ತಲೆಯಲ್ಲಿ ಹೂಮುಡಿದು ಚಿತ್ರವಿಚಿತ್ರ ಪುಷ್ಪಮಾಲೆಗಳನ್ನು ಧರಿಸಿದ್ದರು. ಮೈಮೇಲೆ ಒಳ್ಳೆಯ ಒಡವೆ. ಎಲ್ಲರೂ ಸತ್ಕುಲದಲ್ಲಿ ಹುಟ್ಟಿದವರು. ಹೂ ಹಣ್ಣುಗಳನ್ನು ಆರಿಸುತ್ತ ಇದ್ದರು. ಸಂತೋಷ ತೃಪ್ತಿ ಅವರ ಮುಖದಲ್ಲಿ ಕಾಣುತ್ತ ಇತ್ತು. ಸೇವಕರೂ ಅಷ್ಟೇ ನಿತ್ಯತೃಪ್ತರು. ತಮ್ಮ ಕೆಲಸದಲ್ಲಿ ಬಹಳ ಜಾಗರೂಕರು. ಉತ್ತಮ ವಸ್ತ್ರ ಆಭರಣಭೂಷಿತರು.

ವಾನರಸ್ತ್ರೀಯರ ಸುರತಸಂಭ್ರಮದ ಕಾಲಂದಿಗೆ ಸದ್ದು ನಡುಗೆಜ್ಜೆಯ ಸದ್ದು ಕೇಳಿಸಿತು ಲಕ್ಷ್ಮಣನಿಗೆ. ಬಲು ನಾಚಿಕೆ ಆಯಿತು. ಈ ಸದ್ದನ್ನು ಕೇಳಿ ಲಕ್ಷ್ಮಣನಿಗೆ ರೇಗಿಹೋಯಿತು. ಹತ್ತು ದಿಕ್ಕುಗಳೂ ಮಾರ್ದನಿಗೊಡುವಂತೆ ತನ್ನ ಬಿಲ್ಲನ್ನು ಎಳೆದು ಟಂಕಾರಮಾಡಿದ. ರಾಮನ ಕಾರ್ಯದಲ್ಲಿ ಸುಗ್ರೀವನಿಗೆ ಇಷ್ಟು ಅಸಡ್ಡೆಯೆ? ಲಕ್ಷ್ಮಣನಿಗೆ ಪೂರಾ ಸಿಟ್ಟು. ಆದರೂ ಅಂತಃಪುರದ ಒಳಕ್ಕೆ ತಟ್ಟನೆ ಹೋಗಲಿಲ್ಲ. ತನ್ನ ಚಾರಿತ್ರ್ಯವನ್ನು ಕಾಪಾಡಿಕೊಳ್ಳಬೇಕಲ್ಲ. ಯಾರೂ ಇಲ್ಲದ ಒಂದು ಮೂಲೆಯಲ್ಲಿ ನಿಂತುಕೊಂಡ.

ಆ ಟಂಕಾರ ಶಬ್ದ ಸುಗ್ರೀವನಿಗೆ ಕೇಳಿಸಿತು. ಬೆಚ್ಚಿಬಿದ್ದ. ಲಕ್ಷ್ಮಣ ಬಂದ ಎಂಬುದು ಅರ್ಥ ಆಯಿತು. ಸಿಂಹಾಸನದಿಂದ ಧಿಗ್ಗನೆ ಎದ್ದ. ಭ್ರಾತೃವತ್ಸಲ ಲಕ್ಷ್ಮಣ ತನ್ನನ್ನು ಹುಡುಕಿಕೊಂಡು ಬಂದ ಮಾತನ್ನು ಅಂಗದ ಹೇಳಿದ್ದ. ಅದು ನೆನಪಿಗೆ ಬಂತು. ಭಯ ಆಯಿತು ಸುಗ್ರೀವನಿಗೆ. ಮುಖ ಬಾಡಿತು. ಮುಂದೆ ಏನು ಗತಿ ಎಂದು ತತ್ತರಿಸಿ ಕಳವಳಗೊಂಡ. ಪ್ರಿಯದರ್ಶನೆ ತಾರೆ ಪಕ್ಕದಲ್ಲಿಯೆ ಇದ್ದಳು. ಅವಳಿಗೆ ಹೇಳಿದ: “ಸುಭ್ರೂ, ರಾಮನ ತಮ್ಮ ಲಕ್ಷ್ಮಣನ ಸ್ವಭಾವ ಮೆತ್ತನೆ ಸ್ವಭಾವ. ಅಂಥವನು ಇಷ್ಟು ರೋಷಗೊಂಡು ಬಂದು ಇದಾನಲ್ಲ ಲಕ್ಷ್ಮಣ, ಏಕೆ? ಏನು ಕಾರಣ ಇದ್ದೀತು? ಕಾರಣ ಇಲ್ಲದೆ ರೇಗುವವನು ಅಲ್ಲ. ಏನು ಕಾರಣ ಎಂದು ನಿನಗೆ ಎನಿಸುತ್ತದೆ, ತಾರೆ? ನಾವು ಏನು ತಪ್ಪು

ಮಾಡಿದೇವೆ ಆ ಅಣ್ಣತಮ್ಮಂದಿರ ವಿಷಯದಲ್ಲಿ? ನಿನಗೆ ಅಂಥದು ಯಾವುದು ಆದರೂ ನೆನಪು ಇದೆಯೆ? ಚೆನ್ನಾಗಿ ಆಲೋಚಿಸಿ ಹೇಳು. ಅಥವಾ ನೀನೇ ಲಕ್ಷ್ಮಣನ ಬಳಿಗೆ ಹೋಗಿ ಆತನನ್ನು ಮೊದಲು ಮಾತಾಡಿಸು. ಸವಿನುಡಿಯಿಂದ ಆತನನ್ನು ಸಮಾಧಾನಪಡಿಸು. ಇದೇ ಸರಿ. ನಿನ್ನನ್ನು ನೋಡಿ ಲಕ್ಷ್ಮಣ ಪ್ರಸನ್ನ ಆಗುತ್ತಾನೆ. ದೊಡ್ಡವರು ಹೆಂಗಸರ ವಿಷಯದಲ್ಲಿ ತೀವ್ರತೆಯಿಂದ ನಡೆಯರು. ನಿನ್ನ ಮಾತಿನಿಂದ ಆತನ ಕೋಪ ಅಡಗುತ್ತದೆ. ಪ್ರಸನ್ನ ಆಗುತ್ತಾನೆ. ಆಗ ಆ ಕಮಲಪತ್ರಾಕ್ಷನನ್ನು ಅರಿಂದಮನನ್ನು ನಾನು ಹೋಗಿ ನೋಡುತ್ತೇನೆ" ಎಂದ.

ತಾರೆಗೂ ಈ ಉಪಾಯ ಸರಿ ಎನಿಸಿತು. ತತ್‌ಕ್ಷಣವೇ ಹೊರಟಳು. ತಪ್ಪುಹೆಜ್ಜೆ ಇಡುತ್ತಾಳೆ. ಮದ್ಯಪಾನದಿಂದ ಕಣ್ಣಾಲೆ ಸುತ್ತುತ್ತಿದೆ. ಒಡ್ಯಾಣ ಜಾರಿದೆ. ಎದೆಕಟ್ಟು ಸರಿದು ಇದೆ. ಮೈ ಬಗ್ಗಿದೆ. ಹೀಗೆಯೇ ತಾರೆ ಲಕ್ಷ್ಮಣನ ಬಳಿಗೆ ಬಂದಳು. ಹತ್ತಿರ ಬಂದು ನಿಂತಳು. ಪರಸ್ತ್ರೀ. ಅವಳನ್ನು ಕಣ್ಣು ಎತ್ತಿ ನೋಡಬಾರದು. ಕಂಡೂ ಕಾಣದಂತೆ ತಲೆ ಬಗ್ಗಿಸಿಕೊಂಡು ನಿಂತ ಲಕ್ಷ್ಮಣ. ಆತನ ಕೋಪ ಎಲ್ಲಾ ತಣ್ಣಗೆ ಆಯಿತು. ರೌದ್ರಾವೇಶ ಅಡಗಿತು. ಪಾನಮದದಿಂದ ಲಜ್ಜೆಯನ್ನು ಮರೆತಳು ತಾರೆ. ತನ್ನನ್ನು ಕಂಡು ಲಕ್ಷ್ಮಣನ ಕೋಪ ಇಳಿದುದನ್ನು ಕಂಡಳು. ಧೈರ್ಯದಿಂದಲೂ ಸಲಿಗೆಯಿಂದಲೂ ಅರ್ಥ ಪೂರ್ಣ ಆಗಿ, "ರಾಜಕುಮಾರ, ನಿನಗೆ ಕೋಪ ಏಕೆ? ನಿನ್ನ ಮಾತನ್ನು ಯಾರು ಮೀರಿದರು? ಒಣಗಿದ ಮರಗಳ ಕಾಡಿನಲ್ಲಿ ಉರಿಯುತ್ತ ಇರುವ ಕಾಳ್ಗಿಚ್ಚಿನಲ್ಲಿ ಬೀಳಲು ಹೋದವನು ಯಾರು?" ಎಂದು ಲಕ್ಷ್ಮಣನನ್ನು ಕೇಳಿದಳು ತಾರೆ.

ತಾರೆ ಸ್ನೇಹದಿಂದ ಸಲಿಗೆಯಿಂದ ನಿಷ್ಕಪಟ ಆಗಿ ಮಾತು ಆಡಿದಳು. ಆ ಸಮಾಧಾನದ ಮಾತನ್ನು ಕೇಳಿ ಲಕ್ಷ್ಮಣ ಹೇಳಿದ: "ತಾರೆ, ನಿನಗೆ ಕೇವಲ ಪತಿಯ ಹಿತ ಒಂದೇ ಕಾಣುತ್ತದೆ. ಧರ್ಮ ಅರ್ಥಗಳ ಗೊಡವೆಯನ್ನು ಬಿಟ್ಟೇ ಬಿಟ್ಟು ಕೇವಲ ಕಾಮವ್ಯಾಪಾರದಲ್ಲಿ ಮುಳುಗಿ ಇದಾನೆ ನಿನ್ನ ನಲ್ಲ. ರಾಜ ಕಾರ್ಯವನ್ನು ಗಮನಿಸುವುದೂ ಇಲ್ಲ. ದುಃಖದಲ್ಲಿ ಇರುವ ನಮ್ಮ ಯೋಚನೆ ಅಂತೂ ಇಲ್ಲವೇ ಇಲ್ಲ. ಯಾವಾಗಲೂ ಮದ್ಯಪಾನ ಮದ್ಯಪಾನ. ಮಂತ್ರಿಗಳೂ ಅದೇ ಕೆಲಸ.

"ತಾರೆ, ನಾಲ್ಕು ತಿಂಗಳು ಗಡುವು ಬೇಕು. ಆಮೇಲೆ ಪ್ರಯತ್ನ ಮಾಡೋಣ ಎಂದು ನಮಗೆ ಮಾತುಕೊಟ್ಟ ಸುಗ್ರೀವ. ಆ ಗಡುವು ಕಳೆಯಿತು. ಮದ್ಯಪಾನದಲ್ಲೇ ಮುಗಿದು ಹೋಯಿತು ನಾಲ್ಕು ತಿಂಗಳು. ಮುಗಿಯಿತು ಎಂಬುದು ಕೂಡ ಅವನಿಗೆ ಗೊತ್ತು ಇಲ್ಲ. ಧರ್ಮ ಅರ್ಥಗಳನ್ನು ಸಾಧಿಸಬೇಕು ಎನ್ನುವವರಿಗೆ ಮದ್ಯಪಾನ ಸರಿ ಅಲ್ಲ. ಇದರಿಂದ ಧರ್ಮ ಅರ್ಥ ಕಾಮ ಎಲ್ಲವೂ ನಾಶ ಆಗುತ್ತವೆ.

"ಉಪಕಾರಿಗೆ ಪ್ರತ್ಯುಪಕಾರ ಮಾಡದುದು ದೊಡ್ಡ ಧರ್ಮಲೋಪ. ಅದರಿಂದ ವಿಶೇಷ ಧರ್ಮಹಾನಿ ಆಗುತ್ತದೆ. ಪ್ರತಿ ಉಪಕಾರ ಮಾಡದೆ ಹೋದರೆ ಗುಣವಂತ ಗೆಳೆಯನನ್ನು ಕಳೆದುಕೊಳ್ಳುತ್ತೇವೆ. ಇದರಿಂದ ಅರ್ಥ ಲೋಪ. ಅರ್ಥಕಾಮಗಳಿಗೆ ಕಾರಣ ಆದ ಸತ್ಯಧರ್ಮಪರಾಯಣ ಸ್ನೇಹಿತ ನನ್ನು ಕಳೆದುಕೊಂಡರೆ ಒಳ್ಳೆಯದು ಆಗದು. ತಾರೆ, ಸುಗ್ರೀವ ಈಗ ಅಂಥ ಗೆಳೆತನವನ್ನು ಕಳೆದುಕೊಳ್ಳುತ್ತಿದಾನೆ. ಇದರಿಂದ ಅರ್ಥಕಾಮಗಳಿಗೆ ಲೋಪ, ಧರ್ಮಕ್ಕೂ ಲೋಪ.

"ತಾರೆ, ನೀನು ಕಾರ್ಯಸ್ವರೂಪವನ್ನು ಬಲ್ಲೆ. ಚೆನ್ನಾಗಿ. ಸುಗ್ರೀವ ಹೀಗೆ ಮಿತ್ರತ್ಯಾಗಮಾಡುತ್ತ ಇದ್ದರೆ ನಾವು ಏನು ಮಾಡಬೇಕು? ಹೇಳು" ಎಂದ ಲಕ್ಷ್ಮಣ.

ಧರ್ಮ ಅರ್ಥಗಳನ್ನು ವಿವರಿಸಿ ಮೃದುಮಧುರ ಆಗಿ ಹೇಳಿದ ಲಕ್ಷ್ಮಣ. ರಾಮಕಾರ್ಯ ಏನೋ ಲಕ್ಷ್ಮಣ ಏಕೆ ಬಂದನೋ ತಾರೆಗೆ ಅರ್ಥ ಆಯಿತು. ಲಕ್ಷ್ಮಣನಿಗೆ ನಂಬಿಕೆ ಹುಟ್ಟುವ ಹಾಗೆ ಮತ್ತೆ ಹೇಳಿದಳು: "ರಾಜಕುಮಾರ, ಇದು ಕೋಪಕ್ಕೆ ಸಮಯ ಅಲ್ಲ. ಸುಗ್ರೀವ ಕಾಮಕೇಳಿಯಲ್ಲಿ ಮುಳುಗಿರುವುದು ನಿಜ. ಆದರೂ ನೀನು ಅವನ ಮೇಲೆ ಸಿಟ್ಟು ಆಗಬಾರದು. ಸುಗ್ರೀವ ನಮಗೆ ಸ್ವಜನ, ಹಿತವ. ಸ್ವಜನರ ಮೇಲೆ ಅತಿ ಕೋಪ ಸಲ್ಲದು. ಸುಗ್ರೀವ ನಿಮ್ಮ ಕಾರ್ಯವನ್ನು ಸಾಧಿಸಲು ಆಸಕ್ತ. ಸ್ವಲ್ಪ ಮೈಮರೆತ. ಪ್ರಮಾದ ಆಯಿತು. ಮನ್ನಿಸು. ಪ್ರಬಲರು ಹೆಚ್ಚು ಗುಣವಂತರು ದುರ್ಬಲರ ಮೇಲೆ ಸಿಟ್ಟಾಗುವುದು ಏನು ಪ್ರಯೋಜನ? ನೀನು ತಪೋನಿಧಿ ಸಹನಶೀಲ ಕಾರ್ಯಪರ. ನೀನು ಹೀಗೆ ಕೋಪಿಸಿಕೊಳ್ಳಬಹುದೆ?

"ಲಕ್ಷ್ಮಣ, ಶ್ರೀರಾಮನ ಕೋಪ ನನಗೆ ಅರ್ಥ ಆಗುತ್ತದೆ. ಯುದ್ಧ ಪ್ರಯತ್ನಕ್ಕೆ ಕಾಲ ಮೀರುತ್ತ ಇದೆ. ಸುಗ್ರೀವ ಹೇಳಿದ ಗಡುವು ಮುಗಿಯಿತು. ನಾನು ಬಲ್ಲೆ. ಸುಗ್ರೀವನಿಗೆ ನೀವು ಮಾಡಿದ ಮಹೋಪಕಾರವೂ ಗೊತ್ತು. ಅದಕ್ಕೆ ಪ್ರತಿ ಉಪಕಾರವನ್ನು ಸುಗ್ರೀವ ಹೇಗೆ ಮಾಡಬೇಕೋ ಅದೂ ಗೊತ್ತು. ನರಶ್ರೇಷ್ಠ, ಮನ್ಮಥನ ದಾಳಿಯನ್ನು ತಡೆಯಲಾರೆವು ಎಂಬುದೂ ಗೊತ್ತು. ಈಗ ಸುಗ್ರೀವ ಕಾಮಪಾಶಕ್ಕೆ ಸಿಕ್ಕಿ ಯಾರಲ್ಲಿ ಸದಾ ಆಸಕ್ತ ಆಗಿ ಇದಾನೋ ಅದನ್ನೂ ಬಲ್ಲೆ. ಸುಗ್ರೀವನ ಔದಾಸೀನ್ಯವನ್ನೂ ಬಲ್ಲೆ. ಲಕ್ಷ್ಮಣ, ನಿನ್ನ ಸಿಟ್ಟನ್ನು ನೋಡಿದರೆ ನಿನಗೆ ಕಾಮತಂತ್ರ ಗೊತ್ತು ಇಲ್ಲ ಎಂಬುದು ತಿಳಿಯುತ್ತದೆ. ಕಾಮಕೇಳಿಯಲ್ಲಿ ಮುಳುಗಿದವನಿಗೆ ದೇಶಕಾಲಧರ್ಮಗಳ ಗೊಡವೆ ಇರದು. ಅವನಿಗೆ ಅದು ಬೇಡ.

"ಪರವೀರಹಂತ ಲಕ್ಷ್ಮಣ, ಸುಗ್ರೀವ ಕಾಮಲೋಲ ಆಗಿ ನನ್ನ ಬಳಿ ಇದಾನೆ. ಕಾಮಾಸಕ್ತಿಯಿಂದ ಅವನಿಗೆ ಈಗ ನಾಚಿಕೆಯೂ ಇಲ್ಲ. ಸುಗ್ರೀವ ನಿನಗೆ ಒಡಹುಟ್ಟಿದವನ ಹಾಗೆ. ಅವನನ್ನು ಮನ್ನಿಸಬೇಕು. ಧರ್ಮಪರಾಯಣರೂ ತಪೋನಿಷ್ಠರೂ ಆದ ಮಹರ್ಷಿಗಳೇ ಕಾಮಪರವಶರು ಆಗಿಹೋದರು. ಅಂಥದರಲ್ಲಿ ಸ್ವಭಾವತಃ ಕಪಿ, ಚಪಲಚಿತ್ತ ಆದ ಸುಗ್ರೀವ ಕಾಮಚಾಪಲ್ಯಕ್ಕೆ ಒಳಗೆ ಆದದ್ದು ಏನು ಆಶ್ಚರ್ಯ?"

ಅಪ್ರಮೇಯ ಆದ ಲಕ್ಷ್ಮಣನಿಗೆ ಬಹಳ ಅರ್ಥವಂತ ಆಗಿ ಹೇಳಿದಳು ತಾರೆ. ಅದೇ ಸಲಿಗೆಯಿಂದ ತನ್ನ ನಲ್ಲನ ಹಿತವನ್ನು ಕೋರಿ ಮತ್ತೆ ಹೇಳಿದಳು: "ನರೋತ್ತಮ, ಕಾಮಪರವಶ ಆಗಿ ಇದ್ದರೂ ಸುಗ್ರೀವ ನಿಮ್ಮ ಸಾಧನೆಗೆ ಏನು ಮಾಡಬೇಕೋ ಆ ಪ್ರಯತ್ನಗಳನ್ನು ಮಾಡಿದಾನೆ. ವಾನರಸೇನೆಗಳು ಎಲ್ಲವೂ ಇಲ್ಲಿಗೆ ಬರಬೇಕು ಎಂದು ಮೊದಲೇ ಅಪ್ಪಣೆ ಮಾಡಿದಾನೆ. ಬೆಟ್ಟಗುಡ್ಡಗಳ ತಮ್ಮ ನಿವಾಸವನ್ನು ಬಿಟ್ಟು ಅನೇಕರು ಬಲಾಢ್ಯರು ಕಾಮರೂಪಿಗಳು ಕಪಿವೀರರು ಬರುತ್ತಿದಾರೆ ಇಲ್ಲಿಗೆ. ಹಲವು ಕೋಟಿ ಆಗಬಹುದು ಲೆಕ್ಕ.

"ಮಹಾಪರಾಕ್ರಮಿ, ಕೋಪವನ್ನು ಬಿಡು. ಅಂತಃಪುರಕ್ಕೆ ಬಾ. ಪರಸ್ತ್ರೀಯರು ಇದಾರೆ, ಒಳಗೆ ಹೋಗಬಾರದು ಎಂದು ಸಂಕೋಚದಿಂದ ಹೊರಗೇ ನಿಂತು ಇದೀಯೆ. ನಿನ್ನ ನಡತೆಯನ್ನು ಕಾಪಾಡಿಕೊಂಡೆ. ಸಾಕು. ಗೆಳೆಯರ

ಹೆಂಡಿರನ್ನು ನೋಡುವುದು ದೋಷ ಅಲ್ಲ. ಒಳಗೆ ಬಾ. ಸುಗ್ರೀವನನ್ನು ನೋಡಿ ಮಾತು ಆಡು."

ತಾರೆ ಒಳಗೆ ಬಾ ಎಂದಳು. ತನಗೂ ರಾಮಕಾರ್ಯದ ಆತುರ. ಆ ಮಹಾಭುಜಬಲ ಅರಿಂದಮ ಲಕ್ಷ್ಮಣ ಸುಗ್ರೀವನ ಅಂತಃಪುರದ ಒಳಕ್ಕೆ ಹೋದ. ದಿವ್ಯವಸ್ತ್ರಗಳನ್ನು ಧರಿಸಿ ದಿವ್ಯಮಾಲಿಕೆಗಳನ್ನು ಧರಿಸಿ ಸೂರ್ಯನಂತೆ ಹೊಳೆಯುತ್ತ ಕುಳಿತು ಇದ್ದ ಸಿಂಹಾಸನದಲ್ಲಿ ಸುಗ್ರೀವ. ಜಯಿಸಲು ಅಶಕ್ಯ ಆದ ದೇವೇಂದ್ರನ ಹಾಗೆ ಹೊಳೆಯುವ ವಿಚಿತ್ರ ದೇಹಕಾಂತಿಯ ಆ ಸುಗ್ರೀವನ ಸುತ್ತಲೂ ಅನೇಕರು ಸ್ತ್ರೀಯರು. ಮಹಾವೈಭವದಿಂದ ಭೋಗಾಸಕ್ತ ಆಗಿ ಕುಳಿತಿದ್ದ ಸುಗ್ರೀವ.

ಇದನ್ನು ನೋಡಿ ಲಕ್ಷ್ಮಣನಿಗೆ ತಡೆಯಲಿಲ್ಲ. ಬಹಳ ಸಿಟ್ಟು ಬಂತು. ಕಣ್ಣು ಕೆಂಡ ಆದವು. ಕಾಲಯಮನ ಹಾಗೆ ಕಾಣಿಸಿದ.

ನೆರೆದು ಇದ್ದ ಹೆಂಗಸರ ನಡುವೆ ರುಮೆಯನ್ನು ಮುದ್ದು ಇಡುತ್ತ ಗಟ್ಟಿ ಆಗಿ ಅಪ್ಪಿಕೊಂಡು ಬಂಗಾರದ ಆಸನದಲ್ಲಿ ಕುಳಿತಿದ್ದ ಸುಗ್ರೀವ. ಆನಂದದಲ್ಲಿ ಮುಳುಗಿದ್ದ.

ಮಹಾವೀರ ಲಕ್ಷ್ಮಣ ಸಿಟ್ಟು ಆಗಿ ಬಂದು ನಿಂತದ್ದು ಅವನಿಗೆ ಕಾಣಿಸಿತು.

೫೩

ಯಾವ ತಡೆಯೂ ಇಲ್ಲದೆ ಅಂತಃಪುರಕ್ಕೆ ಬಂದು ನಿಂತ ಕ್ರೋಧಮೂರ್ತಿ ಲಕ್ಷ್ಮಣನನ್ನು ಕಂಡ ಸುಗ್ರೀವ. ಅಣ್ಣನ ದುಃಖದಿಂದ ಆ ಅಪ್ರತಿಹತ ಪರಾಕ್ರಮಿ ಪುರುಷಪುಂಗವ ಬಹಳ ಕೋಪಗೊಂಡು ಬಿಸಿಬಿಸಿ ನಿಟ್ಟುಸಿರು ಬಿಡುತ್ತ ಇದ್ದ. ಧಗಧಗ ಉರಿಯುವ ಬೆಂಕಿಯ ಹಾಗೆ ಇದ್ದ. ಅವನನ್ನು ನೋಡಿ ಧಿಗ್ಗನೆ ಎದ್ದ ಸುಗ್ರೀವ. ಇಂದ್ರಧ್ವಜದ ಹಾಗೆ ಸ್ತಬ್ಧ ಆಗಿ ನಿಂತುಬಿಟ್ಟ. ಚಂದ್ರ ಹುಟ್ಟಿದ ಕೂಡಲೆ ಅವನ ಹಿಂದೆಯೆ ಬರುವ ನಕ್ಷತ್ರಗಳಂತೆ ರುಮೆ ಮುಂತಾದ ಹೆಂಗಸರು ಎಲ್ಲರೂ ಧಿಗ್ಗನೆ ಎದ್ದರು.

ಸುಗ್ರೀವನ ಕಣ್ಣು ಪಾನಮದದಿಂದ ಕೆಂಪು ಏರಿತ್ತು. ಕೈಜೋಡಿಸಿ ಕೊಂಡು ಲಕ್ಷ್ಮಣನ ಕಡೆಯೇ ನೋಡುತ್ತ ಕಲ್ಪವೃಕ್ಷದ ಹಾಗೆ ನಿಂತ.

ನಕ್ಷತ್ರಗಳ ನಡುವೆ ಚಂದ್ರನ ಹಾಗೆ ವಾನರಾಂಗನೆಯರ ನಡುವೆ ರುಮೆಯ ಸಂಗಡ ಬಂದು ನಿಂತ. ಲಕ್ಷ್ಮಣನಿಗೆ ಸಿಟ್ಟೋ ಸಿಟ್ಟು. "ಸುಗ್ರೀವ, ಬಲವಂತ ಕುಲೀನ ದಯಾಳು ಜಿತೇಂದ್ರಿಯ ಕೃತಜ್ಞ ಸತ್ಯಸಂಧ ಆದ ರಾಜನಿಗೇ ಈ ಲೋಕದಲ್ಲಿ ಗೌರವ. ಅಧರ್ಮನಿರತ ಆಗಿ, ಮೊದಲು ತಾನು ಮಾಡಿಸಿಕೊಂಡ ಉಪಕಾರವನ್ನು ಗೆಳೆಯರಿಗೆ ಮಾತುಕೊಟ್ಟು ತಪ್ಪಿದವನು ಮಹಾಪಾಪಿ.

"ಒಂದು ಕುದುರೆಗೋಸ್ಕರ ಸುಳ್ಳು ಹೇಳಿದವನು ನೂರು ಕುದುರೆ ಕೊಂದ ಪಾಪಕ್ಕೆ ಹೋಗುತ್ತಾನೆ. ಒಂದು ಹಸುವಿನ ಬಗ್ಗೆ ಸುಳ್ಳು ಆಡಿದರೆ ಸಾವಿರ ಗೋಹತ್ಯೆ ಮಾಡಿದ ದೋಷ. ಮನುಷ್ಯನ ವಿಷಯದಲ್ಲಿ ಸುಳ್ಳು ಆಡಿದರೆ ಅವನಿಗೆ ಸ್ವಜನಹತ್ಯಾದೋಷ, ಆತ್ಮಹತ್ಯಾದೋಷ.

"ವಾನರೇಶ್ವರ, ಗೆಳೆಯರಿಂದ ಮೊದಲು ತನ್ನ ಕೆಲಸವನ್ನು ಮಾಡಿಸಿ ಕೊಂಡು ಆ ಗೆಳೆಯರ ಕೆಲಸವನ್ನು ಮಾಡಿಕೊಡುತ್ತೇನೆ ಎಂದು ಮಾತುಕೊಟ್ಟು ಆಮೇಲೆ ಆ ಕೆಲಸವನ್ನು ಮಾಡದೆ ಹೋದರೆ ಅವನನ್ನು ಕೃತಘ್ನ ಎನ್ನುತ್ತಾರೆ. ಯಾರು ಆದರೂ ಕೃತಘ್ನನನ್ನು ಕೊಲ್ಲಬಹುದು. ಅದು ದೋಷ ಅಲ್ಲ. ಹಿಂದೆ ಸ್ವಾಯಂಭುವನು ಒಬ್ಬ ಕೃತಘ್ನನನ್ನು ನೋಡಿ ಒಂದು ಶ್ಲೋಕ ಹೇಳಿದಾನೆ. ಆ ಶ್ಲೋಕ ಸರ್ವರಿಗೂ ಸಮ್ಮಾನ್ಯ. 'ಬ್ರಹ್ಮಹತ್ಯೆ ಮಾಡಿದವನಿಗೆ, ಮದ್ಯಪಾನ ಮಾಡಿದವನಿಗೆ, ಕಳ್ಳತನ ಮಾಡಿದವನಿಗೆ, ವ್ರತಭಂಗ ಮಾಡಿಕೊಂಡವನಿಗೆ ಬೇರೆ ಬೇರೆ ಪ್ರಾಯಶ್ಚಿತ್ತಗಳನ್ನು ಹೇಳಿದೆ ಶಾಸ್ತ್ರದಲ್ಲಿ. ಆದರೆ ಕೃತಘ್ನನಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ.'

"ವಾನರ, ನೀನು ಮಿಥ್ಯಾವಾದಿ. ಅನಾರ್ಯ. ಕೃತಘ್ನ. ಮೊದಲು ರಾಮನಿಂದ ಉಪಕಾರ ಮಾಡಿಸಿಕೊಂಡೆ. ಆಗ ಮಾಡುತ್ತೇನೆ ಎಂದು ಒಪ್ಪಿ ಕೊಂಡಂತೆ ನೀನು ರಾಮನ ಕೆಲಸ ಮಾಡಲಿಲ್ಲ. ನಿನ್ನ ಕೆಲಸ ಆದಮೇಲೆ ರಾಮನ ಕೆಲಸ ಮಾಡಬೇಕು ಎನಿಸಿದ್ದರೆ ಸೀತಾದೇವಿಯನ್ನು ಹುಡುಕಲು ಇದುವರೆಗೇ ಪ್ರಯತ್ನಮಾಡುತ್ತ ಇದ್ದೆ. ತುಚ್ಛವಿಷಯಸುಖದಲ್ಲಿ ಮುಳುಗಿದೆ. ಆಡಿದ ಮಾತಿಗೆ ತಪ್ಪಿದೆ. ಕಪ್ಪೆಯ ಹಾಗೆ ಕೂಗುವ ಹಾವು ನೀನು ಎಂಬುದು ರಾಮನಿಗೆ ತಿಳಿಯಲಿಲ್ಲ. ಮೋಸಹೋದ. ನೀನು ಪಾಪಿ ದುರಾತ್ಮ ಎಂಬುದನ್ನು ಅರಿಯದೆ ಆ ಮಹಾನುಭಾವ ಆ ಕರುಣಾಶಾಲಿ ಧರ್ಮರಥ, ರಾಮ ನಿನಗೆ ಈ ವಾನರರಾಜ್ಯವನ್ನು ಕೊಡಿಸಿದ.

"ಎಂಥ ಕೆಲಸವನ್ನೇ ಆಗಲಿ ಲೀಲಾಮಾತ್ರದಿಂದ ಆಯಾಸ ಇಲ್ಲದೆ ಮಾಡಬಲ್ಲ ಸಮರ್ಥ ಶ್ರೀರಾಮ. ಅವನ ಕೆಲಸವನ್ನು ಮಾಡಲು ಈಗಲಾದರೂ ನೀನು ಸಿದ್ಧ ಆಗದೆ ಇದ್ದರೆ ನನ್ನ ಹರಿತ ಆದ ಬಾಣಗಳು ನಿನ್ನನ್ನು ಕೊಲ್ಲುತ್ತವೆ. ವಾಲಿಯ ಬಳಿಗೆ ಕಳಿಸುತ್ತವೆ. ನಿಮ್ಮ ಅಣ್ಣ ವಾಲಿ ಹೋದ ದಾರಿ ಇನ್ನೂ ಮುಚ್ಚಿಲ್ಲ. ತೆರೆದೇ ಇದೆ. ಮಾತಿಗೆ ತಪ್ಪಿ ಅವನ ದಾರಿ ಹಿಡಿಯಬೇಡ.

"ಸುಗ್ರೀವ, ಇಕ್ಷ್ವಾಕುಕುಲತಿಲಕ ಶ್ರೀರಾಮನ ಬಿಲ್ಲಿನಿಂದ ಹೊರಡುವ ಸಿಡಿಲಿನಂಥ ಬಾಣಗಳ ರುಚಿ ನಿನಗೆ ಗೊತ್ತು ಇಲ್ಲ. ಅದರಿಂದಲೇ ರಾಮ-ಕಾರ್ಯದ ಆಲೋಚನೆ ಇಲ್ಲದೆ ಗ್ರಾಮ್ಯಸುಖದಲ್ಲಿ ಮುಳುಗಿ ಇದೀಯೆ" ಎಂದ ಲಕ್ಷ್ಮಣ.

೬

ಬೆಂಕಿಯಂತೆ ಉರಿಯುತ್ತ ಇತ್ತು ಲಕ್ಷ್ಮಣನ ತೇಜಸ್ಸು. ಕೋಪದಿಂದ ಅವನು ಆಡಿದ ಮಾತನ್ನು ಕೇಳಿ ಪೂರ್ಣಚಂದ್ರಮುಖಿ ತಾರೆ ಹೇಳಿದಳು: "ಲಕ್ಷ್ಮಣ, ನೀನು ಇಂಥ ಮಾತುಗಳನ್ನು ಆಡಬಾರದು. ಇಷ್ಟು ಕಠಿನ ಆದ ಮಾತನ್ನು ವಾನರೇಶ್ವರ ಸುಗ್ರೀವನಿಗೆ ನೀನು ಹೇಳಬಾರದು. ಈ ಕಪೀಶ್ವರ ಕೃತಘ್ನನೂ ಅಲ್ಲ. ವಂಚಕನೂ ಅಲ್ಲ. ಕ್ರೂರಿ ಮೊದಲೇ ಅಲ್ಲ. ಎಂದೂ ಸುಳ್ಳನ್ನು ಆಡುವವನು ಅಲ್ಲ. ಕಪಟಿ ಅಂತೂ ಅಲ್ಲ. ಬೇರೆ ಯಾರೂ ಮಾಡಲಾರದ ಉಪಕಾರವನ್ನು ರಾಮ ಸುಗ್ರೀವನಿಗೆ ಮಾಡಿದ. ಅದನ್ನು ವಾನರರಾಜ ಮರೆತು ಇಲ್ಲ. ಶಾಶ್ವತ ಕಪಿರಾಜ್ಯವೂ ನಾನೂ ರುಮೆಯೂ ದೊರೆತದ್ದು ರಾಮನ ಅನುಗ್ರಹದಿಂದಲೇ. ವಿಷಯಸುಖದಲ್ಲಿ ಆಸಕ್ತ ಆಗಿ ಇದನ್ನು ಮರೆತ ಸುಗ್ರೀವ ಎಂಬ ಶಂಕೆ ಬೇಡ.

"ಹಿಂದೆ ಬಹುಕಾಲ ಪಡಬಾರದ ಕಷ್ಟ ಎಲ್ಲವನ್ನೂ ಪಟ್ಟು ಇದಾನೆ ಸುಗ್ರೀವ. ಎಲ್ಲಿ ಮಲಗಿದನೋ ಎಲ್ಲಿ ಇದ್ದನೋ ಕಲ್ಲುಬಂಡೆಗಳ ಮೇಲೆ. ಈಗ ಸ್ವಲ್ಪ ಸುಖವನ್ನು ಕಂಡು ಇದಾನೆ. ಇಷ್ಟು ದಿನ ಕಾಣದ ಸುಖದಲ್ಲಿ ಮೈಮರೆಯುವುದು ಸಹಜ. ಹಿಂದೆ ವಿಶ್ವಾಮಿತ್ರ ಮೇನಕೆಯಲ್ಲಿ ಮೋಹಗೊಂಡಾಗ ಅವನಿಗೆ ಕಾಲ ತಿಳಿಯಿತೆ? ಹತ್ತು ವರ್ಷ ಆದರೂ ಒಂದೇ ದಿನ ಎಂದು

ಕೊಳ್ಳಲಿಲ್ಲವೆ? ಕಾಲಜ್ಞದಲ್ಲಿ ಶ್ರೇಷ್ಠ ವಿಶ್ವಾಮಿತ್ರಮಹರ್ಷಿ. ಅಂಥವನಿಗೇ ಕಾಮಪರವಶತೆಯಲ್ಲಿ ಕಾಲ ತಿಳಿಯಲಿಲ್ಲ. ಸಾಮಾನ್ಯ ಆದ ಸುಗ್ರೀವನದು ಒಂದು ಲೆಕ್ಕವೆ? ಅದರಲ್ಲೂ ಸುಗ್ರೀವ ವಾನರ.

"ಲಕ್ಷ್ಮಣ, ಸುಗ್ರೀವ ಬಹಳ ಕಾಲದಿಂದ ಒಂಟಿ ಆಗಿ ಕಷ್ಟಪರಂಪರೆಗೆ ಸಿಕ್ಕಿ ನರಳಿದ. ಇದುವರೆಗೂ ಕಾಮೋಪಭೋಗವನ್ನು ಅರಿಯ. ಇದು ದೇಹ-ಕರ್ಮ. ಅದನ್ನು ಅನುಭವಿಸುತ್ತ ಇದಾನೆ. ನೀನು ಮನ್ನಿಸಬೇಕು.

"ಸುಗ್ರೀವನ ನಿಜ ಅಭಿಪ್ರಾಯ ಏನೋ ನೀನು ತಿಳಿದುಕೊಳ್ಳಲಿಲ್ಲ. ಹಿಂದೆಮುಂದೆ ನೋಡಲಿಲ್ಲ. ತಟ್ಟನೆ ಕೋಪಗೊಂಡೆಯಲ್ಲ ಪಾಮರನಂತೆ. ನೀನು ಪುರುಷಶ್ರೇಷ್ಠ, ಸತ್ವಗುಣಸಂಪನ್ನ, ಕಾರ್ಯಸಾಧಕ. ನಿನಗೆ ಈ ಸಿಟ್ಟು ಸರಿ ಅಲ್ಲ. ಅಯ್ಯ, ನಿನಗೆ ಎಲ್ಲ ಧರ್ಮಗಳೂ ಗೊತ್ತು. ಸುಗ್ರೀವನ ಪರ ನಿನ್ನನ್ನು ಬೇಡುತ್ತೇನೆ: ಕ್ಷಮಿಸು, ಮನ್ನಿಸು. ರೋಷದ ಉದ್ವೇಗದಿಂದ ನಿನ್ನ ಮನಸ್ಸು ಗೊಂದಲಗೊಂಡು ಇದೆ. ಬಿಡು ಸಿಟ್ಟು. ಶಾಂತ ಆಗು. ಪ್ರಸನ್ನ ಆಗು. ಕೆಲವೇ ದಿನದಲ್ಲಿ ಈ ಸುಗ್ರೀವ ರಾಮಕಾರ್ಯಕ್ಕೆ ಹೊರಟುಬಿಡುತ್ತಾನೆ. ರಾಜ್ಯಕೋಶ ಧನಧಾನ್ಯಗಳನ್ನೂ ನನ್ನನ್ನೂ ರುಮೆಯನ್ನೂ ಬಿಟ್ಟುಬರುತ್ತಾನೆ. ಯುದ್ಧದಲ್ಲಿ ರಾವಣಾಸುರನನ್ನು ಕೊಲ್ಲುತ್ತಾನೆ. ರೋಹಿಣೀದೇವಿ ಚಂದ್ರನ ಸಂಗಡ ಕೂಡುವಂತೆ ಸೀತಾದೇವಿಯನ್ನು ರಾಮನ ಜೊತೆಗೆ ಕೂಡಿಸುತ್ತಾನೆ.

"ಲಕ್ಷ್ಮಣ, ರಾವಣನ ಲಂಕಾಪಟ್ಟಣದಲ್ಲಿ ಶತಕೋಟಿ ಸಾವಿರ ಮಂದಿ ರಾಕ್ಷಸರು ಇದಾರೆ. ಇವರು ಅಲ್ಲದೆ ಮೂರು ಲಕ್ಷ ಅರವತ್ತು ಸಾವಿರ ರಾಕ್ಷಸರು ಇದಾರೆ. ಇನ್ನೂ ಲಕ್ಷಾಂತರ ಮಂದಿ ಇದಾರೆ. ಎಲ್ಲರೂ ಕಾಮರೂಪಿಗಳು. ಇದಿರಿಸಲು ಸಾಧ್ಯ ಆಲ್ಲದವರು. ಮೊದಲು ಇವರನ್ನು ಎಲ್ಲರನ್ನೂ ಕೊಂದರೆ ಆಮೇಲೆ ಆ ರಾವಣನನ್ನು, ಸೀತೆಯನ್ನು ಕದ್ದ ರಾಕ್ಷಸನನ್ನು, ಕೊಲ್ಲಲು ಸಾಧ್ಯ. ಸುಗ್ರೀವ ಒಬ್ಬನೇ ಏನು ಮಾಡಿಯಾನು? ಅವನಿಗೆ ದಂಡು ಬೇಕು, ಸಹಾಯ ಬೇಕು. ಸಾಲದ್ದಕ್ಕೆ ಆ ರಾವಣಾಸುರ ಕ್ರೂರಕರ್ಮಿ. ರಾವಣಾಸುರನ ಪೂರ್ವೋತ್ತರ ಎಲ್ಲವೂ ವಾಲಿಗೆ ಗೊತ್ತು. ಆತ ನನಗೆ ಹೇಳಿದ್ದ. ನಾನು ಸ್ವಯಂ ಕಂಡವಳು ಅಲ್ಲ. ನಿಮಗೆ ಸಹಾಯ ಮಾಡಬೇಕೆಂದೇ ವಾನರಯೂಥಗಳನ್ನು ವಾನರವೀರರನ್ನು ಕರೆತರಲು ವಾನರಶ್ರೇಷ್ಠರನ್ನು ಕೆಲವರನ್ನು ಆಗಲೇ ಅಟ್ಟಿದ ಸುಗ್ರೀವ. ಅವರು ಎಲ್ಲರೂ ಪರಮಪರಾಕ್ರಮಶಾಲಿಗಳು. ಬಲಾಢ್ಯರು. ಈಗ

ಬಂದಾರು ಆಗ ಬಂದಾರು ಎಂದು ಇದಿರುನೋಡುತ್ತ ಇದಾನೆ. ಆ ನಿರೀಕ್ಷಣೆ ಅವನನ್ನು ಹೊರಗೆ ಬಾರದಂತೆ ತಡೆದು ಇದೆ.

"ಸೌಮಿತ್ರಿ, ರಾಮಕಾರ್ಯಕ್ಕೋಸುಗ ಬರಬೇಕು ಎಂದು ಮೊದಲೇ ಸುಗ್ರೀವ ವಾನರರಿಗೆ ಎಲ್ಲರಿಗೂ ಹೇಳಿಕಳಿಸಿದ. ಅವರೆಲ್ಲರೂ ಇಂದು ಇಲ್ಲಿಗೆ ಬಂದು ಸೇರಬೇಕು. ಇವತ್ತೇ ಬರಬೇಕು ಆ ಮಹಾಬಲಿಷ್ಠರು. ಕೋಟಿಗಟ್ಟಲೆ ಕರಡಿಗಳೂ ನೂರಾರು ಸಿಂಗಳೀಕಗಳೂ ಕೋಟಿಕೋಟಿ ವಾನರರೂ ಇಲ್ಲಿಗೆ ಬರುತ್ತಾರೆ. ಅವರು ಎಲ್ಲರೂ ನಿನ್ನ ಸೇವೆ ಮಾಡುವವರೇ.

"ಲಕ್ಷ್ಮಣ, ನೀನು ಕಾಕುತ್ಸ್ಥವಂಶದವನು. ಶತ್ರುಸಂಹಾರಕ. ಕೋಪವನ್ನು ಬಿಡು. ಕೋಪದಿಂದ ನಿನ್ನ ಕಣ್ಣು ರಕ್ತದಂತೆ ಕೆಂಪು ಆಗಿವೆ. ಅದನ್ನು ನೋಡಿ ಸುಗ್ರೀವನ ಹೆಂಡಿರು ಎಲ್ಲರೂ ಕಳವಳಗೊಂಡು ಇದಾರೆ. ವಾಲಿಗೆ ಆದ ಗತಿಯೆ ಸುಗ್ರೀವನಿಗೂ ಆಗುತ್ತದೆಯೇನೋ ಎಂದು ಅವರಿಗೆ ಅಂಜಿಕೆ. ಸಿಟ್ಟನ್ನು ಬಿಟ್ಟು ಶಾಂತ ಆಗು" ಎಂದಳು.

೭

ವಿನಯದಿಂದ ಧರ್ಮಯುಕ್ತ ಆಗಿ ತಾರೆ ಹೇಳಿದಳು. ಲಕ್ಷ್ಮಣನದು ಮೂಲತಃ ಮೆತ್ತನೆ ಸ್ವಭಾವ. ಅವಳು ಹೇಳಿದ್ದನ್ನು ಕೇಳಿದ. ಅವಳ ಮಾತಿಗೆ ಒಪ್ಪಿದ. ಪ್ರಸನ್ನ ಆದ.

ಅಷ್ಟು ಹೊತ್ತೂ ಬೆದರಿ ಬೆಂಡು ಆಗಿ ನಿಂತಿದ್ದ ಸುಗ್ರೀವನಿಗೆ ಲಕ್ಷ್ಮಣನ ಪ್ರಸನ್ನತೆಯನ್ನು ನೋಡಿ ಧೈರ್ಯಬಂತು. ಒದ್ದೆಬಟ್ಟೆಯನ್ನು ಕಳಚಿಹಾಕುವಂತೆ ತನ್ನ ಭಯವನ್ನು ಕಿತ್ತು ಎಸೆದ. ಕೊರಳಲ್ಲಿ ಇದ್ದ ಬಗೆಬಗೆಯ ಬಣ್ಣದ ಭೋಗಪ್ರದ ಹೂವಿನ ಸರವನ್ನು ಕಿತ್ತು ಒಗೆದ ಸುಗ್ರೀವ. ತನ್ನ ಕಾಮಕೇಳಿಯನ್ನು ಮುಗಿಸಿದೆ ಎಂದು ಸೂಚಿಸಿದ. ಅವನ ಮತ್ತು ಎಲ್ಲವೂ ಇಳಿದುಹೋಯಿತು.

ಮಹೋಗ್ರಪರಾಕ್ರಮಿ ಲಕ್ಷ್ಮಣನನ್ನು ವಿನಯದ ಮಾತಿನಿಂದ ಸಂತೋಷಪಡಿಸಿದ ವಾನರೇಶ್ವರ. "ಲಕ್ಷ್ಮಣ, ಬಹುಕಾಲ ಕಳೆದುಕೊಂಡು ಇದ್ದ ಭಾಗ್ಯ ಕೀರ್ತಿ ಶಾಶ್ವತ ರಾಜ್ಯ ಎಲ್ಲವೂ ನನಗೆ ದೊರೆತದ್ದು ಶ್ರೀರಾಮನ ಅನುಗ್ರಹದಿಂದಲೇ. ನಾ ಬಲ್ಲೆ.

"ಶತ್ರುಮರ್ದನ, ನಿನಗೆ ಹೇಳಬೇಕೆ ನಾನು? ರಾಮನಿಗೆ ಪ್ರತಿ ಉಪಕಾರ ಮಾಡುವ ಸಾಮರ್ಥ್ಯ ಯಾರಿಗೆ ಇದೆ ಈ ಲೋಕದಲ್ಲಿ? ತನ್ನ ಸಾಹಸದಿಂದಲೇ ಜಗದ್ವಿಖ್ಯಾತ ಆ ಪುರುಷೋತ್ತಮ. ಆ ಧರ್ಮಾತ್ಮನ ತೇಜಸ್ಸಿಗೆ ಕೈಗೂಡದ ಕೆಲಸವೂ ಇದೆಯೆ? ಅಂಥ ಮಹಾತ್ಮನಿಗೆ ನನ್ನ ಸಹಾಯವೆ? ಬರೀ ನಿಮಿತ್ತ. ಒಂದೇ ಬಾಣದಿಂದ ಸಪ್ತಸಾಲವೃಕ್ಷಗಳನ್ನೂ ಗುಡ್ಡವನ್ನೂ ಭೂಮಿಯನ್ನೂ ಸೀಳಿದವನು ರಾಮ. ಆ ವೀರಾಗ್ರಣಿ ತನ್ನ ಪ್ರಭಾವದಿಂದಲೇ ರಾವಣಾಸುರನನ್ನು ಕೊಂದು ಸೀತಾದೇವಿಯನ್ನು ತಂದುಕೊಳ್ಳುತ್ತಾನೆ. ಲಕ್ಷ್ಮಣ, ರಾಮ ಬಿಲ್ಲನ್ನು ಎತ್ತಿ ಒಂದು ಸಲ ಟಂಕಾರ ಮಾಡಿದರೆ ಸಾಕು. ಆ ಮಹಾಧ್ವನಿಗೆ ಮಹಾಪರ್ವತಗಳೂ ಪೃಥ್ವಿಯೂ ನಡುಗಿ ಹೋಗುತ್ತವೆ. ಯಾರ ಸಹಾಯದಿಂದ ಏನು ಆಗಬೇಕು ಅಂಥ ರಾಮನಿಗೆ? ಪುರುಷಶ್ರೇಷ್ಠ, ಪರಿವಾರಸಮೇತ ರಾವಣಾಸುರನನ್ನು ಕೊಲ್ಲಲು ಶ್ರೀರಾಮ ಮುಂದೆ ಹೊರಟರೆ ನಾನು ಹಿಂದೆ ಹಿಂದೆ ಬರುತ್ತೇನೆ.

"ಲಕ್ಷ್ಮಣ, ನಾನು ಎಷ್ಟರವನು? ಕೇವಲ ಭೃತ್ಯ. ಎಲ್ಲ ಕೆಲಸ ಮಾಡುವವನೂ ರಾಮನೇ. ವಿಶ್ವಾಸದಿಂದಲೋ ಸಲಿಗೆಯಿಂದಲೋ ನಾನು ಕಾಲವನ್ನು ಮೀರಿದೆ. ತಡ ಆಯಿತು. ಭೃತ್ಯ ನನ್ನನ್ನು ಮನ್ನಿಸಬೇಕು. ತಪ್ಪುಮಾಡದವರು ಯಾರು ಪ್ರಪಂಚದಲ್ಲಿ?" ಎಂದ ಸುಗ್ರೀವ.

ಸುಗ್ರೀವ ಪೂಜ್ಯ. ನಯದಿಂದ ಅವನು ಹೇಳಿದ್ದನ್ನು ಕೇಳಿ ಲಕ್ಷ್ಮಣನಿಗೆ ಸಂತೋಷ ಆಯಿತು. ಪ್ರೇಮದಿಂದ ಸುಗ್ರೀವನಿಗೆ ಹೇಳಿದ: "ಸುಗ್ರೀವ, ವಾನರೋತ್ತಮ ಆದ ನೀನು ವಿನಯವಂತ. ಆದ್ದರಿಂದ ನಮ್ಮ ಅಣ್ಣ ರಾಮನಿಗೆ ಎಲ್ಲ ಬಗೆಯಲ್ಲೂ ಆಸರೆ. ಸುಗ್ರೀವ, ನಿನ್ನ ಪ್ರಭಾವ ನಿನ್ನ ಸದಾಚಾರಸಂಪನ್ನತೆ ಉತ್ತಮೋತ್ತಮ ಆದ ಈ ವಾನರರಾಜ್ಯಕ್ಕೆ ನೀನೇ ತಕ್ಕ ಅರಸ ಎಂದು ಹೇಳುತ್ತವೆ. ನಿನ್ನ ಸಹಾಯದಿಂದ ಮಹಾಪರಾಕ್ರಮಶಾಲಿ ಶ್ರೀರಾಮ ಬೇಗ ಯುದ್ಧ ಮಾಡಿ ಶತ್ರುಸಂಹಾರ ಮಾಡುತ್ತಾನೆ. ಸಂಶಯ ಇಲ್ಲ. ಧರ್ಮವನ್ನು ಅರಿತು ಇದೀಯೆ ನೀನು. ಮಾಡಿದ ಉಪಕಾರವನ್ನು ನೆನಪಿಟ್ಟಿದೀಯೆ. ರಣರಂಗದಿಂದ ಹಿಂತಿರುಗುವವನು ಅಲ್ಲ. ನೀನು ಆಡಿದ ಮಾತು ನಿನಗೆ ತಕ್ಕದ್ದು.

"ವಾನರೇಶ್ವರ, ನಿಗ್ರಹ ಅನುಗ್ರಹ ಎರಡಕ್ಕೂ ಸಮರ್ಥರು ಆದರೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವವರು ಲೋಕದಲ್ಲಿ ನೀವು ಇಬ್ಬರೇ: ನಮ್ಮ

ಅಣ್ಣ, ನೀನು. ಬೇರೆ ಯಾರೂ ಇಲ್ಲ. ಪರಾಕ್ರಮದಲ್ಲೂ ಬಲದಲ್ಲೂ ನಮ್ಮ ಅಣ್ಣನಿಗೆ ಸಮ ನೀನು. ನಿನ್ನ ಸಹಾಯ ನಮಗೆ ದೊರೆತದ್ದು ದೈವಾನುಗ್ರಹ. ನಮ್ಮ ಅಣ್ಣ ರಾಮನ ದುಃಖವನ್ನು ನೋಡಲಾರದೆ ಹೊರಟುಬಂದೆ. ನಿನ್ನನ್ನು ಬಹಳ ನಿಂದಿಸಿದೆ. ಕಟುವಾಕ್ಯಗಳನ್ನು ಆಡಿದೆ. ಮನಸಿನಲ್ಲಿಟ್ಟುಕೊಳ್ಳಬೇಡ. ಬಾ. ನನ್ನ ಜೊತೆಗೆ ಹೊರಟು ಬಾ, ವೀರ. ಹೆಂಡತಿಯನ್ನು ಕಳೆದುಕೊಂಡು ಕೊರಗುತ್ತ ಇರುವ ನಿನ್ನ ಗೆಳೆಯ ರಾಮನನ್ನು ಸಂತಯಿಸು ಬಾ. ರಾಮ ದುಃಖದಿಂದ ಸವೆದು ಇದಾನೆ. ಬಾ, ಹೋಗೋಣ."

೮

ಸುಗ್ರೀವನ ಪಕ್ಕದಲ್ಲಿ ಹನುಮಂತ ನಿಂತಿದ್ದ. "ಸಚಿವಶ್ರೇಷ್ಠ, ಮಹೇಂದ್ರ ಹಿಮವಂತ ವಿಂಧ್ಯ ಕೈಲಾಸ ಮಂದರಪರ್ವತಗಳಲ್ಲೂ ಉದಯಾಚಲದಿಂದ ಅಸ್ತಾಚಲದವರೆಗಿನ ಎಲ್ಲ ಪರ್ವತಗಳಲ್ಲೂ ಇರುವ ವಾನರರನ್ನೂ ಕರೆಯಿಸು. ಬಾಲಸೂರ್ಯನ ಬಣ್ಣದಿಂದ ಹೊಳೆಯುವ ಸಮುದ್ರತೀರದ ಬೆಟ್ಟಗಳಿಂದ ಅಂಜನ ಪರ್ವತದಿಂದ ಕರೆಯಿಸು. ಕಾಡಿಗೆಯಂತೆ ಕಪ್ಪು ಮೋಡಗಳಂತೆ ಕಪ್ಪು ಮೈ ಬಣ್ಣದ ಆನೆಗಳಂಥ ವಾನರರು ಅವರು. ಮೇರುಪರ್ವತದ ಪಕ್ಕದಲ್ಲಿ ಮಣಿ ಶಿಲೆಯ ಗುಹೆಗಳಲ್ಲಿ ಹೊಂಬಣ್ಣದ ಮೈಯ ವಾನರರು. ಧೂಮ್ರಗಿರಿಯಲ್ಲಿ ಸಂಜೆಯ ಕೆಂಬಣ್ಣದಂತೆ ಹೊಳೆಯುವ ಉದಯಪರ್ವತದಲ್ಲಿ ಪದ್ಮತಾಳವನದಲ್ಲಿ ಇದಾರೆ ವಾನರರು. ಮೈರೇಯ ಮದ್ಯವನ್ನು ಕುಡಿದು ಮತ್ತರು ಆದ ಮಹಾ ವೇಗಶಾಲಿಗಳು ಬಾಲಸೂರ್ಯನ ಕೆಂಬಣ್ಣದ ವಾನರರು ಮಹಾರುಣ ಪರ್ವತದಲ್ಲಿ ಇದಾರೆ. ಹೂಗಂಪಿನಿಂದ ಗಮಗಮಿಸುವ ರಮಣೀಯ ತಾಪಸಾಶ್ರಮಗಳಲ್ಲಿ ಕೆಲವರು ಇದಾರೆ. ಈ ಪೃಥ್ವಿಯಲ್ಲಿ ಬೇರೆಬೇರೆ ಕಡೆಗಳಲ್ಲೂ ಕೆಲವರು ಇದಾರೆ. ಎಲ್ಲರನ್ನೂ ಈಗಲೇ ಕರೆಸು.

"ಹನುಮಂತ, ಅವರನ್ನು ಬೇಗ ಕರೆಯಿಸಬೇಕು. ಸಾಮ ದಾನ ಮುಂತಾದ ಉಪಾಯಗಳಿಂದ ಅವರನ್ನು ಕರೆತರಲು ಸಮರ್ಥರನ್ನು ಕೂಡಲೇ ಕಳಿಸು. ಇದು ನನ್ನ ಅಪ್ಪಣೆ. ವೇಗಶಾಲಿ ದೂತರನ್ನು ನಾನು ಮೊದಲೇ ಕಳಿಸಿ ಇದೇನೆ. ಕೆಲವರು ಕಾಮಸುಖದಲ್ಲಿ ಮುಳುಗಿ ಸೋಮಾರಿಗಳು ಆಗಿರುತ್ತಾರೆ.

ಅವರನ್ನೂ ಹಿಡಿದು ತರಿಸಬೇಕು. ಇದು ನನ್ನ ಅಪ್ಪಣೆ. ಇನ್ನು ಹತ್ತು ದಿನ ಗಡುವು. ಆ ವೇಳೆಗೆ ಬಾರದವರಿಗೆ ರಾಜಶಾಸನವನ್ನು ಮೀರಿದ ದುರ್ಬುದ್ಧಿಗಳಿಗೆ ಮರಣದಂಡನೆ ಎಂದು ತಿಳಿಸು. ಲಕ್ಷಲಕ್ಷ ವಾನರರು ಹೋಗಬೇಕು ಈಗಲೇ ಕಿಷ್ಕಿಂಧೆಗೆ ಕಪಿವೀರರನ್ನು ಕರೆತರಲು. ಮೇಘಗಳ ಹಾಗೆ ಪರ್ವತಗಳ ಹಾಗೆ ಭಯಂಕರರು ಆದ ಕಪಿಶ್ರೇಷ್ಠರು ಈಗಲೇ ಹೊರಡಲಿ. ಅವರ ಗುಂಪು ಆಕಾಶ ವನ್ನೇ ಮುಚ್ಚಿಬಿಡಲಿ. ಎಲ್ಲಾ ವಾನರರಿಗೂ ರಾಜಾಜ್ಞೆಯನ್ನು ತಿಳಿಸಿ ಎಲ್ಲರನ್ನೂ ಕರೆತರಲಿ" ಎಂದು ಹೇಳಿದ.

ಪರಾಕ್ರಮಶಾಲಿ ವಾನರರನ್ನು ಕರೆಯಿಸಿದ ಹನುಮಂತ. ಹತ್ತೂ ದಿಕ್ಕು ಗಳಿಗೂ ಅವರನ್ನು ಕಳಿಸಿದ. ಸುಗ್ರೀವಾಜ್ಞೆಯನ್ನು ಶಿರಸಾವಹಿಸಿ ಅವರು ಎಲ್ಲರೂ ಆಕಾಶಮಾರ್ಗದಲ್ಲಿ ಹೊರಟರು. ಸಮುದ್ರದ್ವೀಪಗಳಲ್ಲೂ ಪರ್ವತ ಗಳಲ್ಲೂ ವನಗಳಲ್ಲೂ ಸರೋವರತಟಗಳಲ್ಲೂ ವಾಸ ಆಗಿದ್ದ ಎಲ್ಲಾ ವಾನರರಿಗೂ ಸುಗ್ರೀವಾಜ್ಞೆಯನ್ನೂ ರಾಮಕಾರ್ಯಾತುರವನ್ನೂ ತಿಳಿಸಿದರು. ಕಿಷ್ಕಿಂಧೆಗೆ ಬನ್ನಿ ಎಂದು ಹುರಿದುಂಬಿಸಿದರು. ಸುಗ್ರೀವನ ಅಪ್ಪಣೆ ಎಂದರೆ ಯಮನ ಅಪ್ಪಣೆ. ತಪ್ಪುಮಾಡಿದವರನ್ನು ದಂಡಿಸುವುದರಲ್ಲಿ ಪ್ರಳಯಕಾಲದ ಮೃತ್ಯು ಇದ್ದಹಾಗೆ ಸುಗ್ರೀವ. ಅವರಿಗೆ ಗೊತ್ತು. ಹೆದರಿದರು. ಕೂಡಲೇ ಎಲ್ಲರೂ ಕಿಷ್ಕಿಂಧೆಗೆ ಹೊರಟರು.

ಕಾಡಿಗೆ ಕಪ್ಪಿನಂಥ ಮೈಯ ಮಹಾವೇಗಶಾಲಿಗಳು ಮೂರು ಕೋಟಿ ಅಂಜನ ಪರ್ವತದಿಂದ ಬಂದರು. ಪುಟ ಇಟ್ಟ ಬಂಗಾರದ ಮೈಬಣ್ಣದ ಹತ್ತು ಕೋಟಿ ವಾನರವೀರರು ಅಸ್ತಗಿರಿಯಿಂದ, ಸಿಂಹಕೇಶರ ವರ್ಣದ ಸಾವಿರ ಕೋಟಿ ವಾನರರು ಕೈಲಾಸಪರ್ವತದಿಂದ, ಫಲಮೂಲಗಳನ್ನು ತಿಂದು ಬದುಕುವ ಒಂದು ಲಕ್ಷಕೋಟಿ ವಾನರರು ಹಿಮವತ್ಪರ್ವತದಿಂದ ಬಂದರು. ಅಂಗಾರಕನ ಹಾಗೆ ಹೊಳೆಯುವ ಭಯಂಕರ ಪರಾಕ್ರಮಿಗಳು ಸಾಹಸಿಗಳು ಆದ ಒಂದು ಸಾವಿರ ಕೋಟಿ ವಾನರರು ವಿಂಧ್ಯಪರ್ವತದಿಂದ ಶೀಘ್ರ ಆಗಿ ಹೊರಟರು. ಹಾಲ್ಗಡಲ ತೀರದಲ್ಲಿ ಹೊಂಗೆಯ ತೋಪುಗಳಲ್ಲಿ ತೆಂಗಿನಕಾಯೇ ಆಹಾರ ಆಗಿ ವಾಸ ಮಾಡುವ ವಾನರರು ಲೆಕ್ಕ ಇಲ್ಲದಷ್ಟು. ಅಡವಿಗಳಲ್ಲೂ ಗುಹೆಗಳಲ್ಲೂ ನದೀ ಸರೋವರತೀರಗಳಲ್ಲೂ ಇರುವವರಿಗೆ ಅಂತೂ ಲೆಕ್ಕವೇ ಇಲ್ಲ. ಎಲ್ಲರೂ ಹೊರಟರು ಕಿಷ್ಕಿಂಧೆಗೆ. ಸೂರ್ಯನನ್ನೇ ನುಂಗುವಂತೆ ಇತ್ತು ಈ ವಾನರಸೇನೆ.

ವಾನರರನ್ನು ಕರೆತರಲು ಈ ಮೊದಲೇ ಕೆಲವರು ಕಪಿಶ್ರೇಷ್ಠರು ಹೋಗಿದ್ದರಲ್ಲ. ಅವರು ಹಿಮವತ್‌ಪರ್ವತಕ್ಕೆ ಬಂದರು. ಅಲ್ಲಿ ಸುಪ್ರಸಿದ್ಧ ಮಹಾವೃಕ್ಷ ಒಂದು ಇತ್ತು. ದೇವತೆಗಳು ಎಲ್ಲರಿಗೂ ಸಂತೋಷ ಆಗುವಂತೆ ಒಂದು ಮಾಹೇಶ್ವರಯಾಗ ನಡೆದಿತ್ತು ಹಿಂದೆ ಆ ರಮಣೀಯ ಪ್ರದೇಶದಲ್ಲಿ. ಯಜ್ಞ ಮಾಡುವಾಗ ಅಲ್ಲಲ್ಲಿ ಚೆಲ್ಲಿದ ಹೋಮದ್ರವ್ಯಗಳಿಂದ ಅಲ್ಲಿನ ಫಲ ಕಂದಮೂಲಗಳು ಅಮೃತದಂತೆ ರುಚಿಕರ ಆದವು. ಒಂದುಸಲ ಆ ಫಲವನ್ನೋ ಗಡ್ಡೆಯನ್ನೋ ಬೇರನ್ನೋ ತಿಂದರೆ ಮುಂದೆ ಒಂದು ತಿಂಗಳು ಬಾಯಾರಿಕೆ ಹಸಿವು ಆಗುತ್ತ ಇರಲಿಲ್ಲ. ವಾನರರು ಫಲಾಹಾರಿಗಳು. ಅಲ್ಲಿ ಆ ಫಲಮೂಲಗಳನ್ನು ನೋಡಿ ತೃಪ್ತಿ ಆಗುವಂತೆ ತಿಂದರು. ತಮ್ಮ ರಾಜ ಸುಗ್ರೀವನಿಗೆ ಕಾಣಿಕೆಯಾಗಿ ಕೊಟ್ಟು ಸಂತೋಷಪಡಿಸಲು ಆ ಫಲಮೂಲಗಳನ್ನೂ ಅಲ್ಲಿನ ದಿವ್ಯೌಷಧಿಗಳನ್ನೂ ಸುವಾಸನೆಯ ಹೂಗಳನ್ನೂ ತೆಗೆದುಕೊಂಡು ಮುಂದಕ್ಕೆ ಹೊರಟರು.

ಆ ವಾನರಯೂಥಪತಿಗಳು ಸುಗ್ರೀವನ ಅಪ್ಪಣೆಯನ್ನು ಸಮಸ್ತ ದಿಕ್ಕುಗಳ ವಾನರರಿಗೂ ತಿಳಿಸಿ ಎಲ್ಲರಿಗೂ ಕೂಡಲೆ ಕಿಷ್ಕಿಂಧೆಗೆ ಹೊರಡಲು ಹೇಳಿ ಹಿಂದಿರುಗಿ ಬಂದರು. ಬಂದವರೇ ದೊರೆ ಸುಗ್ರೀವನನ್ನು ನೋಡಿ, ತಂದ ಕಾಣಿಕೆಗಳನ್ನು ಒಪ್ಪಿಸಿದರು. "ದೊರೆಯೆ, ಸಮಸ್ತ ಪರ್ವತಗಳನ್ನೂ ಸಮುದ್ರಗಳನ್ನೂ ಮಹಾರಣ್ಯಗಳನ್ನೂ ಸುತ್ತಿಬಂದೆವು. ಎಲ್ಲರಿಗೂ ರಾಜಾಜ್ಞೆಯನ್ನು ತಿಳಿಸಿದೆವು. ಅಪ್ಪಣೆಯಂತೆ ಎಲ್ಲರೂ ಬರುತ್ತಿದ್ದಾರೆ" ಎಂದು ಬಿನ್ನಯಿಸಿದರು.

ಸುಗ್ರೀವನಿಗೆ ಸಂತೋಷ ಆಯಿತು. ಅವರು ಕೊಟ್ಟ ಕಾಣಿಕೆಗಳನ್ನು ಪ್ರೀತಿಯಿಂದ ತೆಗೆದುಕೊಂಡ. ಅವರನ್ನು ಗೌರವಿಸಿದ.

೯

ವಾನರರು ಕೊಟ್ಟ ಕಾಣಿಕೆಗಳನ್ನು ತಗೆದುಕೊಂಡು ಅವರಿಗೆ ಪ್ರಿಯವಚನಗಳನ್ನು ಹೇಳಿ ಮನ್ನಿಸಿ ಕಳಿಸಿದ. ಹೇಳಿದ ಕೆಲಸವನ್ನು ಮಾಡಿಕೊಂಡು ಬಂದದ್ದು ಅವನಿಗೆ ಸಮಾಧಾನ ಆಯಿತು. ರಾಮನೂ ತಾನೂ ಕೃತಾರ್ಥರು ಎಂದುಕೊಂಡ. ರಾಮಕಾರ್ಯಕ್ಕೆ ಜಯ ಎಂದುಕೊಂಡ.

ಲಕ್ಷ್ಮಣನಿಗೆ ಸಂತೋಷ ಆಯಿತು. ವಾನರೋತ್ತಮ ಭೀಮಪರಾಕ್ರಮಿ ಸುಗ್ರೀವನಿಗೆ ಪ್ರೀತಿಯಿಂದ ಹೇಳಿದ. "ಸುಗ್ರೀವ, ನಿನಗೆ ಇಷ್ಟ ಇದ್ದರೆ ನನ್ನ ಜೊತೆಯಲ್ಲಿ ಈಗಲೇ ರಾಮನ ಬಳಿಗೆ ಬಾ." "ಹಾಗೆಯೇ. ಇಬ್ಬರೂ ಹೋಗೋಣ. ನಿನ್ನ ಅಪ್ಪಣೆಯಂತೆಯೇ" ಎಂದ ಸುಗ್ರೀವ.

ತಾರೆಯನ್ನೂ ಇತರ ಅಂತಃಪುರಸ್ತ್ರೀಯರನ್ನೂ ಒಳಗೆ ಕಳಿಸಿದ. ಅಲ್ಲಿ ಇದ್ದ ಸೇವಕರನ್ನು ಕೂಗಿದ. ಕೂಡಲೇ ಅವರು ಬಂದು ಕೈಮುಗಿದು ನಿಂತರು. ಸೂರ್ಯನ ಹಾಗೆ ಹೊಳೆಯುವ ಸುಗ್ರೀವ ಕೂಡಲೇ ಒಂದು ಪಲ್ಲಕ್ಕಿಯನ್ನು ತರಲು ಆ ಸೇವಕರಿಗೆ ಅಪ್ಪಣೆ ಮಾಡಿದ. ಒಡನೆಯೇ ಒಂದು ಒಳ್ಳೆಯ ಪಲ್ಲಕ್ಕಿಯನ್ನು ತಂದರು ಅವರು. ಆ ಪಲ್ಲಕ್ಕಿಯನ್ನು ಏರಲು ಲಕ್ಷ್ಮಣನಿಗೆ ಹೇಳಿದ ಸುಗ್ರೀವ. ಲಕ್ಷ್ಮಣ ಪಲ್ಲಕ್ಕಿಯನ್ನು ಹತ್ತಿದ ತರುವಾಯ ಸುಗ್ರೀವನೂ ಹತ್ತಿದ. ಬಂಗಾರದ ಪಲ್ಲಕ್ಕಿ. ಸೂರ್ಯಕಾಂತಿಯಂತೆ ಹೊಳೆಯುತ್ತ ಇತ್ತು. ಮಹಾಕಾಯರು ಆದ ವಾನರರು ಕೆಲವರು ಬಂದರು ಅದನ್ನು ಹೊರಲು. ಬೆಳ್ಗೊಡೆಯನ್ನು ಹಿಡಿದರು ಸುಗ್ರೀವನಿಗೆ. ಬಿಳೀ ಚಾಮರ ಬೀಸಿದರು. ಶಂಖಧ್ವನಿ ಭೇರೀಧ್ವನಿ ಮೊಳಗಿತು. ಸಮಸ್ತ ರಾಜಮರ್ಯಾದೆಗಳ ಸಮೇತ ಪಲ್ಲಕ್ಕಿ ಹೊರಟಿತು. ಶಸ್ತ್ರಪಾಣಿಗಳು ಕೆಲವರು ವಾನರರ ಪಲ್ಲಕ್ಕಿಯ ಹಿಂದೆ ನಡೆದರು.

ರಾಮ ಇದ್ದ ಪ್ರಸ್ರವಣ ಪರ್ವತದ ಮೇಲಕ್ಕೆ ಬಂತು ಪಲ್ಲಕ್ಕಿ. ಅಲ್ಲಿ ಸುಗ್ರೀವನೂ ಲಕ್ಷ್ಮಣನೂ ಪಲ್ಲಕ್ಕಿಯಿಂದ ಕೆಳಗೆ ಇಳಿದರು. ರಾಮನ ಬಳಿಗೆ ಬಂದು ಸುಗ್ರೀವ ಕೈಜೋಡಿಸಿ ನಿಂತುಕೊಂಡ. ಅವನ ಹಿಂದೆ ಇದ್ದ ವಾನರ ವೀರರೂ ಹಾಗೆಯೇ ಮಾಡಿದರು. ಕೈಜೋಡಿಸಿಕೊಂಡು ಅವರು ಎಲ್ಲರೂ ನಿಂತು ಇದ್ದರೆ ತಾವರೆ ಮೊಗ್ಗುಗಳಿಂದ ತುಂಬಿದ ದೊಡ್ಡ ಕೆರೆಯ ಹಾಗೆ ಕಾಣುತ್ತ ಇತ್ತು. ಆ ವಾನರಸೇನೆಯನ್ನೂ ಸುಗ್ರೀವನನ್ನೂ ನೋಡಿ ರಾಮನಿಗೆ ಸಂತೋಷ ಆಯಿತು. ಸುಗ್ರೀವ ಮುಂದೆ ಬಂದು ರಾಮನಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ಪ್ರೇಮಾತಿಶಯದಿಂದ ಅವನನ್ನು ಹಿಡಿದು ಎತ್ತಿ ಬಿಗಿದು ಅಪ್ಪಿಕೊಂಡ ರಾಮ.

ಗೆಳೆಯನನ್ನು ಕೂಡಲು ಹೇಳಿದ ರಾಮ. ಸುಗ್ರೀವ ನೆಲದ ಮೇಲೆ ಕುಳಿತ. "ವಾನರೋತ್ತಮ, ಧರ್ಮ ಅರ್ಥ ಕಾಮಗಳನ್ನು ಕಾಲೋಚಿತ ಆಗಿ

ವಿಭಾಗಿಸಿಕೊಂಡು ಸೇವಿಸುವವನೇ ದೊರೆ. ಧರ್ಮ ಅರ್ಥಗಳನ್ನು ಬಿಟ್ಟು ಬರೀ ಕಾಮವನ್ನು ಮಾತ್ರವೇ ಸೇವಿಸುವವನು ಮರದ ಕೊಂಬೆಯ ಮೇಲೆ ಮಲಗಿ ನಿದ್ರಿಸಿದವನ ಹಾಗೆ. ಕೆಳಗೆ ಬಿದ್ದಮೇಲೆಯೇ ಅವನಿಗೆ ಎಚ್ಚರಿಕೆ. ಅಧೋಗತಿಗೆ ಇಳಿದಮೇಲೆಯೆ ಅವನಿಗೆ ಎಚ್ಚರಿಕೆ. ಶತ್ರುಸಂಹಾರ ಮಿತ್ರ-ಉಪಚಾರಗಳನ್ನು ನಡೆಸುತ್ತ ಕಾಲೋಚಿತ ಆಗಿ ಧರ್ಮಾರ್ಥಕಾಮಸೇವನೆ ಮಾಡುವುದೇ ರಾಜಧರ್ಮನಿರ್ವಹಣ. ಸುಗ್ರೀವ, ನೀನು ಶತ್ರುಸಂಹಾರಕ. ಯುದ್ಧಪ್ರಯತ್ನಕ್ಕೆ ಇದು ತಕ್ಕ ಸಮಯ. ಶರತ್ಕಾಲ ಬಂದು ಇದೆ. ಮುಂದೆ ಏನು ಮಾಡಬೇಕೋ ನಿನ್ನ ಮಂತ್ರಿಗಳ ಸಂಗಡ ಆಲೋಚಿಸು" ಎಂದ ರಾಮ.

"ಮಹಾಭುಜ ರಾಮ, ಬಹುಕಾಲದಿಂದ ಭಾಗ್ಯ ಕೀರ್ತಿ ರಾಜ್ಯ ಎಲ್ಲವೂ ನನ್ನ ಪಾಲಿಗೆ ಇಲ್ಲದೆ ಇತ್ತು. ಇದು ಎಲ್ಲವೂ ನನಗೆ ಈಗ ಲಭಿಸಿದ್ದು ನಿನ್ನ ಅನುಗ್ರಹದಿಂದ, ಲಕ್ಷ್ಮಣನ ಅನುಗ್ರಹದಿಂದ. ಉಪಕಾರಿಗೆ ಪ್ರತ್ಯುಪಕಾರ ಮಾಡದೆ ಇದ್ದೇನೆಯೆ ನಾನು? ಹಾಗೆ ಮಾಡದವನು ನರಾಧಮ.

"ರಾಮ, ನೂರಾರುಮಂದಿ ವಾನರವೀರರು ಭೂಮಂಡಲವನ್ನು ಎಲ್ಲಾ ಸುತ್ತಿಕೊಂಡು ಎಲ್ಲ ವಾನರರನ್ನೂ ಕರೆದು ಬಂದಿದಾರೆ. ದೊಡ್ಡ ದೊಡ್ಡ ಕಾಡುಗಳಲ್ಲೂ ಚಿಕ್ಕ ಅರಣ್ಯಗಳಲ್ಲೂ ಅಲ್ಲೂ ಇಲ್ಲೂ ಇರುವ ಶೂರ ಭಲ್ಲೂಕವೀರರನ್ನೂ ಗೋಲಾಂಗೂಲ ವೀರರನ್ನೂ ಕರೆದು ಬಂದಿದಾರೆ. ಎಲ್ಲವೂ ನಿನ್ನ ಕೆಲಸಕ್ಕಾಗಿ. ಇವರು ಎಲ್ಲರೂ ದೇವಗಂಧರ್ವಾಂಶಸಂಜಾತರು. ಕಾಮರೂಪಿಗಳು. ದಂಡಿಗೆ ದಂಡನ್ನೇ ಕಟ್ಟಿಕೊಂಡು ಬರುತ್ತ ಇದಾರೆ.

"ಪರಂತಪ, ನಿನ್ನ ಅಪ್ಪಣೆಯಂತೆ ವಾನರವೀರರು ಕೆಲವರು ನೂರು ನೂರು ಮಂದಿ ವಾನರರ ಸಮೇತ ಬರುತ್ತ ಇದಾರೆ. ಕೆಲವರು ಹತ್ತುಸಾವಿರ, ಕೆಲವರು ಲಕ್ಷ, ಕೆಲವರು ಕೋಟಿ. ಹೀಗೆ ಬರುತ್ತ ಇದಾರೆ. ವಾನರ ದಳಪತಿಗಳು ಕೆಲವರ ದಂಡು ಅರ್ಬುದ. ಕೆಲವರದು ಅರ್ಬುದಶತ. ಕೆಲವರು ಖರ್ವಸಂಖ್ಯೆಯ ಸಮೇತ ಬರುತ್ತ ಇದಾರೆ. ಕೆಲವರದು ಖರ್ವಶತ. ಕೆಲವರದು ಮಧ್ಯಸಂಖ್ಯೆ, ಕೆಲವರದು ಅಂತ, ಕೆಲವರದು ಸಮುದ್ರ, ಎಲ್ಲರೂ ಬರುತ್ತ ಇದಾರೆ. ಎಲ್ಲರೂ ಪರಾಕ್ರಮದಲ್ಲಿ ದೇವೇಂದ್ರನಿಗೆ ಸಮ. ಧೈರ್ಯದಲ್ಲಿ ಮೇರುಮಂದರಪರ್ವತಗಳ ಹಾಗೆ. ವಿಂಧ್ಯಮೇರುಪರ್ವತವಾಸಿಗಳೂ ಬರುತ್ತ ಇದಾರೆ. ರಾವಣಾಸುರನನ್ನು ಬಂಧುಬಳಗದ ಸಮೇತ ಕೊಂದು ಸೀತಾದೇವಿ

ಯನ್ನು ತರಬಲ್ಲವರು ಅವರು. ಸಮರ್ಥರು. ಇಂಥ ಮಹಾವೀರರು ಎಲ್ಲರೂ ನಿನ್ನ ಸೇವೆಗೋಸುಗವೇ ಬರುತ್ತ ಇದ್ದಾರೆ" ಎಂದ ಸುಗ್ರೀವ.

ತಾನು ಹೇಳಿದಂತೆ ಆ ವಾನರವೀರ ಸುಗ್ರೀವ ತನ್ನ ಕೆಲಸಕ್ಕೆ ಮಾಡಿದ ಪ್ರಯತ್ನಗಳಿಂದ ರಾಮನಿಗೆ ಸಂತೋಷ ಆಯಿತು. ಅದರಿಂದ ನಿಲೋತ್ಪಲದಂಥ ಅವನ ಕಣ್ಣು ಅರಳಿದವು.

೧೦

ಕೈಮುಗಿದು ನಿಂತು ಇದ್ದ ಸುಗ್ರೀವ. ಧಾರ್ಮಿಕಶಿರೋಮಣಿ ರಾಮ ಅವನನ್ನು ಬರಸೆಳೆದು ಬಿಗಿದು ಅಪ್ಪಿದ. "ಗೆಳೆಯ, ದೇವೇಂದ್ರ ಮಳೆಗರೆಯುತ್ತಾನೆ. ಸೂರ್ಯ ಲೋಕಕ್ಕೆ ಕತ್ತಲೆ ನೀಗಿ ಬೆಳಕು ಕೊಡುತ್ತಾನೆ. ಚಂದ್ರ ತಂಪು ಬೆಳುದಿಂಗಳನ್ನು ಕೊಡುತ್ತಾನೆ. ಇದು ಯಾವುದೂ ಆಶ್ಚರ್ಯ ಅಲ್ಲ. ಇದು ಅವರ ಸಹಜಧರ್ಮ. ನಿನ್ನಂಥವನು ಗೆಳೆಯರಿಗೆ ಉಪಕಾರಕ್ಕೆ ಬದಲು ಉಪಕಾರ ಮಾಡುವುದೂ ಅಚ್ಚರಿ ಅಲ್ಲ. ಸುಗ್ರೀವ, ನೀನು ಪ್ರಿಯವಾದಿ. ನಿನ್ನ ಸಹಾಯ ಇದ್ದರೆ ಎಂಥ ಶತ್ರುವನ್ನೆ ಆಗಲಿ ನಾನು ಗೆಲ್ಲುವುದು ಸುಲಭ. ನೀನು ಸಹೃದಯ. ನನಗೆ ಪರಮ ಆಪ್ತಮಿತ್ರ ನೀನೇ.

"ಸುಗ್ರೀವ, ಹಿಂದೆ ಅನುಹ್ಲಾದ ಇಂದ್ರನಿಗೆ ಮೋಸಮಾಡಿ ಶಚೀದೇವಿಯನ್ನು ಕದ್ದ. ಈಗ ರಾಕ್ಷಸಾಧಮ ರಾವಣ ತನ್ನ ನಾಶಕ್ಕಾಗಿ ಮಾರೀಚನ ಸಹಾಯದಿಂದ ಸೀತೆಯನ್ನು ಕದ್ದ. ಹಿಂದೆ ಯುದ್ಧ ಮಾಡಿ ದೇವೇಂದ್ರ ಅನುಹ್ಲಾದನನ್ನು ಶಚೀದೇವಿಯ ತಂದೆ ಪುಲೋಮನನ್ನು ಕೊಂದ. ನಾನೂ ಬೇಗನೆ ರಾವಣನನ್ನು ಕೊಲ್ಲುತ್ತೇನೆ."

ರಾಮ ಹೀಗೆ ಹೇಳುತ್ತ ಇರುವಾಗಲೇ ದೊಡ್ಡದು ಆಗಿ ಧೂಳಿ ಎದ್ದಿತು. ಸೂರ್ಯನ ಬೆಳಕೇ ಕಾಣದಂತೆ ಮುಗಿಲಿನಲ್ಲಿ ಹರಡಿಕೊಂಡಿತು. ಆ ಧೂಳಿಯಲ್ಲಿ ದಿಕ್ಕುಗಳೇ ಕಾಣಲಿಲ್ಲ. ಮಹಾ ಅರಣ್ಯಗಳು ಮಹಾಪರ್ವತಗಳು ಎಲ್ಲವೂ ಗಡಗಡ ನಡುಗಿದವು. ಪೃಥ್ವಿಯೇ ನಡುಗಿಹೋಯಿತು.

ಪರ್ವತಾಕಾರರೂ ಮಹಾಬಲಾಢ್ಯರೂ ತೀಕ್ಷ್ಣ ಆದ ಕೋರೆಹಲ್ಲುಗಳವರೂ ವಾನರವೀರರು ಲೆಕ್ಕಸಿಗದಷ್ಟು ಜನ ಸ್ವಲ್ಪ ಹೊತ್ತಿನಲ್ಲೇ ಅಲ್ಲಿಗೆ ಬಂದು ಸೇರಿದರು. ಎವೆ ಇಕ್ಕುವಷ್ಟರಲ್ಲಿ ಬಂದರು ಕೋಟ್ಯಂತರ ವಾನರವೀರರು.

ಬಲಿಷ್ಠರು, ಕಾಮರೂಪಿಗಳು. ಮಹಾಮೇಘಗಳ ಹಾಗೆ ಗರ್ಜಿಸುತ್ತ ಬಂದರು. ಕೆಲವರು ನದೀತೀರಗಳಿಂದ ಬಂದರು. ಕೆಲವರು ಸಮುದ್ರದ ತೀರದಿಂದ. ಕೆಲವರು ಪರ್ವತಗಳಿಂದ.

ಮೇರುಪರ್ವತಪ್ರಾಂತದಿಂದ ಹತ್ತುಸಾವಿರಕೋಟಿ ವಾನರರು ಬಂದರು ಯೂಥಪತಿ ಮಹಾಪರಾಕ್ರಮಿ ಶತಬಲಿಯ ಹಿಂದೆ. ಬಾಲಸೂರ್ಯನ ಬಣ್ಣದವರು, ಚಂದ್ರನ ಬಣ್ಣದವರು, ತಾವರೆ ಎಸಳಿನ ಬಣ್ಣದವರು. ತಾರೆಯ ತಂದೆ ಸುಷೇಣ ಸಾವಿರಕೋಟಿ ವಾನರರ ಸಮೇತ ಬಂದ. ಬಂಗಾರದ ಬೆಟ್ಟದ ಮೈಬಣ್ಣ ಅವನದು. ಸುಗ್ರೀವನ ಮಾವ, ರುಮೆಯ ತಂದೆ ತಾರ. ಆ ವಾನರ ಯೂಥಪತಿಯ ಹಿಂದೆ ಸಾವಿರಕೋಟಿ. ಆಮೇಲೆ ಹನುಮಂತನ ತಂದೆ ಕೇಸರಿ ಬಂದ. ಕಮಲಕೇಸರದಂತೆ ದೇಹಕಾಂತಿ. ಬಾಲಸೂರ್ಯನಂಥ ಮುಖ. ಅವನ ಹಿಂದೆ ಒಂದು ಅಕ್ಷೋಹಿಣೀ ಸೇನೆ. ಎರಡುಸಾವಿರಕೋಟಿ ಗೋಲಾಂಗೂಲಗಳೊಡನೆ ಬಂದ ಅವರ ನಾಯಕ ಗವಾಕ್ಷ. ಇನ್ನೆರಡುಸಾವಿರಕೋಟಿ ಶತ್ರುಮರ್ದನ ಧೂಮ್ರನದು. ಅದು ಭಲ್ಲೂಕಸೇನೆ. ಪರ್ವತಾಕಾರರು ಭಯಂಕರ ಸ್ವರೂಪರು ಆದ ಮೂರುಕೋಟಿ ವಾನರವೀರರ ಸಂಗಡ ಬಂದ ವೀರ ಪನಸ. ಕಾಡಿಗೆಗಪ್ಪುಬಣ್ಣದ ವೀರನ ಹಿಂದೆ ಹತ್ತುಕೋಟಿ ದಂಡು ಬಂತು. ಬಂಗಾರದ ಬೆಟ್ಟದಂತೆ ಹೊಳೆಯುವ ಮಹಾವೀರ್ಯವಂತ ಗವಯನದು ಐದು ಕೋಟಿಯ ದಂಡು. ಸಾವಿರಕೋಟಿ ಸೇನೆ ಮಹಾಬಲಿಷ್ಠ ದಧಿಮುಖನದು. ಎಲ್ಲರೂ ಸುಗ್ರೀವನ ಮುಂದೆ ಬಂದು ನಿಂತರು.

ಅಶ್ವಿನೀದೇವತೆಗಳ ಮಕ್ಕಳು ಬಲಶಾಲಿಗಳು ವಾನರಯೂಥಪತಿಗಳು ಮೈಂದದ್ವಿವಿದರು. ಅವರದು ಸಾವಿರಕೋಟಿ ಸೇನೆ. ಮಹಾತೇಜಸ್ವಿ ಗಜನದು ಮೂರುಕೋಟಿ ದಂಡು. ಭಲ್ಲೂಕರಾಜ ಮಹಾತೇಜೋವಂತ ಜಾಂಬವಂತ ಬಂದ ಹತ್ತುಕೋಟಿ ಭಲ್ಲೂಕವೀರರ ಸಂಗಡ. ಪರಾಕ್ರಮಶಾಲಿ ರುಮಣ್ವಂತನದು ನೂರುಕೋಟಿ ವಾನರಸೇನೆ. ಹತ್ತು ಲಕ್ಷಕೋಟಿ ವಾನರವೀರರು ಬಂದರು ಯೂಥಪತಿ ಗಂಧಮಾದನನ ಹಿಂದೆ. ಎಲ್ಲರೂ ಸುಗ್ರೀವನ ಇದಿರಿಗೆ ಬಂದು ನಿಂತರು.

ಪರಾಕ್ರಮದಲ್ಲಿ ತಂದೆ ವಾಲಿಗೆ ಸಮ ಆದ ಯುವರಾಜ ಅಂಗದ ಬಂದ. ಅವನ ಹಿಂದೆ ಒಂದುಸಾವಿರ ಪದ್ಮಗಳ ದಂಡು, ನೂರು ಶಂಖಗಳ ಯೂಥಪತಿ

ಗಳು. ನಕ್ಷತ್ರಸಮ ಕಾಂತಿಯ ಮಹಾವೀರ ತಾರ ಬಂದ ಐದು ಕೋಟಿ ವಾನರಸೇನೆಯೊಂದಿಗೆ. ಹನ್ನೊಂದುಕೋಟಿ ವಾನರಸೇನೆಯ ಇಂದ್ರಜಾನು, ಹತ್ತುಸಾವಿರದ ದಂಡಿನ ಉದಯಸೂರ್ಯಕಾಂತಿಯ ರಂಭ, ಎರಡುಕೋಟಿ ವಾನರಸೇನೆಯ ಯೂಥಪತಿ ದುರ್ಮುಖ.

ಘೋರ ಪರಾಕ್ರಮಿಗಳು ಕೈಲಾಸಶಿಖರದಂಥವರು ಆದ ಸಾವಿರಕೋಟಿ ವಾನರಸೇನೆ ಹನುಮಂತನದು. ಮಹಾಪರಾಕ್ರಮಿ ನಲನ ದಂಡು ನೂರು ಕೋಟಿ. ಸುಗ್ರೀವನ ಅಚ್ಚುಮೆಚ್ಚಿನ ದಧಿಮುಖ ಹತ್ತುಕೋಟಿ ವಾನರರ ಸಮೇತ ಬಂದ. ವಾನರವೀರ ಶರಭ ಬಂದ. ಕುಮುದ ಬಂದ. ವಹ್ನಿರಂಹರು ಬಂದರು. ವೀರ ಬಂದ. ಇನ್ನೂ ಅನೇಕ ಕಾಮರೂಪಿ ವಾನರರು ಬಂದರು. ದೇವಯೋನಿಯಿಂದ ಭೂಲೋಕದಲ್ಲಿ ಹುಟ್ಟಿದ ವಾನರರೂ ಸಾಮಾನ್ಯ ವಾನರರೂ ಎಲ್ಲರೂ ಬಂದು ಸೇರಿದರು. ಕಾಡು ಗುಡ್ಡ ನೆಲ ಎಲ್ಲವೂ ತುಂಬಿ ಹೋಯಿತು.

ಎಲ್ಲರಿಗೂ ಬಹಳ ಹುರುಪು. ನೆಗೆದರು. ಹಾರಿದರು. ಸಂತೋಷದಿಂದ ಗರ್ಜಿಸಿದರು. ಸೂರ್ಯನ ಸುತ್ತ ಮೋಡಗಳು ಕವಿಯುವಂತೆ ಎಲ್ಲರೂ ಸುಗ್ರೀವನ ಸುತ್ತಲೂ ನಿಂತರು. ಮುಂದೆ ಬಂದು ತಮ್ಮ ಹೆಸರು ಹೇಳಿ ಮೋರೆ ಎತ್ತಿ ತೋರಿಸಿ ವಾನರೇಶ್ವರ ಸುಗ್ರೀವನಿಗೆ ಮಣಿದರು. ಹಲವು ಬಗೆಯಲ್ಲಿ ಸಿಂಹ-ನಾದ ಮಾಡಿದರು. ತಮ್ಮ ಬರವನ್ನು ಬಿನ್ನಯಿಸಿದರು.

ಸುಗ್ರೀವನ ಬಳಿಗೆ ಹೋಗಿ ವಿನಯ ವಿಧೇಯತೆಗಳಿಂದ ಕೈಜೋಡಿಸಿ ಕೊಂಡು ತಮ್ಮ ತಮ್ಮ ಯೋಗ್ಯತೆಯ ಪ್ರಕಾರ ಸಾಲುಗಟ್ಟಿ ನಿಂತರು. ಆಗ ಧರ್ಮಜ್ಞ ಸುಗ್ರೀವ ರಾಮನಿಗೆ ಕೈಮುಗಿದು ಆ ವಾನರಸೈನ್ಯ ಎಲ್ಲವನ್ನೂ ಅವನಿಗೆ ಒಪ್ಪಿಸಿದ. ಅವರಿಗೆ ಹೇಳಿದ: "ದಳಪತಿಗಳೆ, ನಿಮ್ಮನಿಮ್ಮ ದಂಡನ್ನು ಗಿರಿನದಿಗಳ ಬಳಿಯಲ್ಲೂ ಕಾಡುಗಳಲ್ಲೂ ಅವರವರ ಅನುಕೂಲಕ್ಕೆ ತಕ್ಕಂತೆ ಬೀಡು ಬಿಡಿ."

ಅವರ ದಂಡು ಎಷ್ಟು ಇದೆಯೋ ತಿಳಿಯಬಯಸಿದ ಸುಗ್ರೀವ.

೧೧

ಸುಗ್ರೀವನ ಸಾಧನಸಂಪತ್ತಿ ಒಟ್ಟುಗೂಡಿತು. ಕೃತಕೃತ್ಯ ಆದ. ಶತ್ರು ಸಂಹಾರಕ ನರಶಾರ್ದೂಲ ರಾಮನಿಗೆ ಹೇಳಿದ: "ಪ್ರಭು, ನನ್ನ ರಾಜ್ಯದಲ್ಲೂ ಎಲ್ಲಾ ದೇಶಗಳಲ್ಲೂ ಇರುವ ಮಹಾಬಲಿಷ್ಠರು ಕಾಮರೂಪಿಗಳು ಮದ್ದಾನೆಗಳಂಥವರು ವಾನರರು ಎಲ್ಲರೂ ಬಂದರು. ಈ ವಾನರರು ಎಲ್ಲರೂ ಬಹು ಭಯಂಕರರು. ದೈತ್ಯದಾನವರಿಗೆ ಸಾಟಿ. ಈ ವಾನರದಳಪತಿಗಳ ಹಿಂದೆ ಬಂದಿರುವ ವಾನರರು ಮಹಾಭುಜಬಲಪರಾಕ್ರಮಶಾಲಿಗಳು, ವೇಗವಂತರು. ಕೀರ್ತಿ ತರುವ ಅನೇಕ ಸಾಹಸಕೃತ್ಯಗಳನ್ನು ಮಾಡಿದಾರೆ. ಪರಾಕ್ರಮದಲ್ಲಿ ಸುಪ್ರಸಿದ್ಧರು. ಅತಿ ಸಮರ್ಥರು. ಯುದ್ಧದಲ್ಲಿ ಬಳಲರು. ಉದ್ಯೋಗ ನಿಪುಣರು. ಎಲ್ಲರೂ ನಿನ್ನ ಕಿಂಕರರು. ಭೂಮಾರ್ಗದಲ್ಲೂ ಸಂಚರಿಸಬಲ್ಲರು. ಜಲಮಾರ್ಗದಲ್ಲೂ ಸಂಚರಿಸಬಲ್ಲರು. ಬೇರೆ ಬೇರೆ ಪರ್ವತಗಳಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಇವರ ವಾಸ.

"ಅರಿಂದಮ, ಇವರು ಎಲ್ಲರೂ ಸ್ವಾಮಿಹಿತಪರಾಯಣರು. ನಿನ್ನ ಇಷ್ಟದಂತೆ ಯಾವ ಕೆಲಸವನ್ನು ಆದರೂ ಮಾಡಲು ಇವರು ಸಿದ್ಧರು. ಭಯಂಕರ ವೇಗಶಾಲಿಗಳು ಆದ ಸಾವಿರಾರು ಮಂದಿ ವಾನರವೀರರ ದಂಡಿನ ಸಮೇತ ಬಂದು ಇದಾರೆ ಈ ದಳಪತಿಗಳು. ಈಗ ಏನು ಮಾಡಬೇಕೋ ಮುಂದೆ ಅದನ್ನು ನೀನು ಅಪ್ಪಣೆ ಕೊಡು. ಈ ದಂಡು ಎಲ್ಲವೂ ನಿನ್ನದು. ನಿನ್ನ ಇಷ್ಟಾನುಸಾರ ಅಪ್ಪಣೆ ಮಾಡು. ತಪ್ಪದೆ ನಡೆಸುತ್ತಾರೆ. ಇವರು ಈಗ ಏನು ಮಾಡಬೇಕೋ ನನಗೆ ತಿಳಿದರೂ ನೀನೇ ಇವರಿಗೆ ಅಪ್ಪಣೆ ಕೊಡು."

ಶ್ರೀರಾಮ ಅವನನ್ನು ಎರಡೂ ಕೈಗಳಿಂದ ಬರಸೆಳೆದು ಬಿಗಿದು ಅಪ್ಪಿದ. "ಸುಗ್ರೀವ, ನೀನು ಅರಿಯದುದು ಏನು ಇದೆ? ಮೊದಲು ತಿಳಿದುಕೊಳ್ಳ ಬೇಕಾದುದು ಸೀತೆ ಬದುಕಿ ಇದಾಳೋ ಇಲ್ಲವೋ ಎಂಬುದು. ರಾವಣಾಸುರ ಎಲ್ಲಿಯವನೋ ಅವನ ದೇಶ ಯಾವುದೋ ತಿಳಿದುಕೊಳ್ಳಬೇಕು. ಸೀತೆಯ ವಿಷಯ ರಾವಣನ ಸ್ಥಳ ಎರಡೂ ತಿಳಿದಮೇಲೆ ಆಗ ಏನು ಮಾಡಬೇಕೋ ಇಬ್ಬರೂ ಆಲೋಚಿಸೋಣ.

"ಸುಗ್ರೀವ, ಈ ವಾನರರಿಗೆ ಅಪ್ಪಣೆ ಕೊಡಲು ನಾನೂ ಸಮರ್ಥ ಅಲ್ಲ, ಲಕ್ಷ್ಮಣನೂ ಅಲ್ಲ. ನೀನು ವಾನರರಿಗೆ ಪ್ರಭು. ಅವರಿಗೆ ಅಪ್ಪಣೆ ಮಾಡಲು

ನೀನೇ ಸಮರ್ಥ. ನನ್ನ ಕೆಲಸಕ್ಕೆ ಏನು ಮಾಡಬೇಕೋ ನಿನಗೆ ಚೆನ್ನಾಗಿ ಗೊತ್ತು. ನೀನು ನನಗೆ ಪರಮ ಮಿತ್ರರಲ್ಲಿ ಎರಡನೆಯವನು. ಮೊದಲನೆ ಯವನು ಲಕ್ಷ್ಮಣ. ಪರಾಕ್ರಮದಲ್ಲಿ ನಿನಗೆ ಎಣೆ ಯಾರು? ಕಾಲ ಅಕಾಲ, ಕಾರ್ಯ ಅಕಾರ್ಯ ಎಲ್ಲದರ ಸ್ವರೂಪವನ್ನೂ ನೀನು ಬಲ್ಲೆ. ಸದಾ ನನ್ನ ಹಿತವನ್ನೆ ಕೋರುತ್ತೀಯೆ. ನೀನು ಮಹಾಪ್ರಾಜ್ಞ. ನೀನೇ ಇವರಿಗೆ ಅಪ್ಪಣೆ ಕೊಡು" ಎಂದ.

ರಾಮಲಕ್ಷ್ಮಣರ ಮುಂದೆಯೇ ಸುಗ್ರೀವ ಪೃಥಾಂಗ ಮಹಾಕಾಯ ಮೇಘಗಂಭೀರ ಘೋರ ಆದ ವಿನತನನ್ನು ಕರೆದ. "ವಾನರಶ್ರೇಷ್ಠ, ದೇಶ ಕಾಲೋಚಿತ ನೀತಿಯನ್ನು ಬಲ್ಲ ಲಕ್ಷ ಮಂದಿ ಚಂದ್ರಸೂರ್ಯಾಂಶದ ವಾನರರನ್ನು ಕರೆದುಕೊಂಡು ಮೂಡಲ ದಿಕ್ಕಿಗೆ ಹೋಗು. ಆ ದಿಕ್ಕಿನಲ್ಲಿ ಲೆಕ್ಕ ಇಲ್ಲದಷ್ಟು ಗುಡ್ಡ ಬೆಟ್ಟ ಕಾಡುನದಿ ಇವೆ. ಅಲ್ಲಿ ಎಲ್ಲೆಲ್ಲೂ ಸೀತಾದೇವಿಯನ್ನೂ ರಾವಣ ನನ್ನೂ ಹುಡುಕಬೇಕು.

"ರಮ್ಯ ಆದ ಭಾಗೀರಥಿ ಸರಯೂ ಕೌಶಿಕೀ ಕಾಳಿಂದೀ ಯಮುನಾ ಇತ್ಯಾದಿ ನದಿ ಇವೆ ಈ ದಿಕ್ಕಿನಲ್ಲಿ. ಯಮುನೆಯ ಪರ್ವತ ಯಾಮುನ ಇದೆ. ಸರಸ್ವತಿ ಸಿಂಧು, ಸ್ವಚ್ಛ ಜಲದ ಶೋಣಾನದಿ ಇವೆ. ಕಾಲಮಹೀ ಮಹೀಪ್ರದೇಶ ಇವೆ. ಬ್ರಹ್ಮಮೂಲ ವಿದೇಹ ಮಾಳವ ಕಾಶೀ ಕೋಸಲ ದೇಶ ಇವೆ. ದೊಡ್ಡ ದೊಡ್ಡ ಗ್ರಾಮಗಳ ಮಗಧ ಇದೆ. ಪುಂಡ್ರ ಅಂಗ ವಂಗ ದೇಶ ಇವೆ. ಕೋಶ ಕಾರ ಅರಸರ ಪಟ್ಟಣಗಳೂ ಬೆಳ್ಳಿಯ ಗಣಿ ಇರುವ ಪ್ರದೇಶವೂ ಇವೆ. ಅಲ್ಲಿ ಎಲ್ಲಾ ಹುಡುಕಬೇಕು ದಶರಥ ಮಹಾರಾಜನ ಸೊಸೆ ಶ್ರೀರಾಮನ ಹೆಂಡತಿ ಸೀತಾದೇವಿಯನ್ನು.

"ವಿನತ, ಮೂಡಣ ಪಟ್ಟಣಗಳಲ್ಲಿ ವಿಶಾಲ ಮಂದರಪರ್ವತಶಿಖರದಲ್ಲಿ ಕಡಲಿನಲ್ಲಿ ಇರುವ ಪರ್ವತಗಳಲ್ಲಿ ಹುಡುಕಬೇಕು. ಅಲ್ಲಿ ಇರುವ ಮನುಷ್ಯರು ಭಯಂಕರಸ್ವರೂಪರು. ಅವರಲ್ಲಿ ಕೆಲವರಿಗೆ ಕಿವಿಗಳೇ ಇಲ್ಲ. ಕೆಲವರಿಗೆ ತುಟಿಯೇ ಕಿವಿ. ಕೆಲವರಿಗೆ ಭಯಂಕರ ಆದ ಉಕ್ಕಿನ ಮೂತಿ. ಕೆಲವರಿಗೆ ಒಂಟಿ ಕಾಲು. ಆದರೂ ವೇಗ ಹೆಚ್ಚು. ಕೆಲವರು ನರಮಾಂಸಭಕ್ಷಕರು. ಕೆಲವರಿಗೆ ಸಾವೇ ತಿಳಿಯದು. ಅಲ್ಲಲ್ಲಿ ದ್ವೀಪಗಳಲ್ಲಿ ಕೆಲವರು ಕಿರಾತರು ಇದಾರೆ. ಅವರ ಮೈ ಹೊಂಬಣ್ಣ. ನೋಡಲು ಚೆಲುವರು. ಆದರೆ ಕಿವಿಗಳಲ್ಲಿ ಜುಟ್ಟು. ಹಸಿ

ಮೀನನ್ನೆ ತಿನ್ನುತ್ತಾರೆ. ನೀರಿನಲ್ಲೇ ಓಡಾಡುತ್ತಾರೆ. ಅರ್ಧ ದೇಹ ಮನುಷ್ಯರ ಹಾಗೆ, ಅರ್ಧ ಹುಲಿಯ ಹಾಗೆ. ಬಹಳ ಭಯಂಕರ ರೂಪ. ಆ ಪ್ರದೇಶಗಳಲ್ಲಿ ಎಲ್ಲೆಲ್ಲೂ ಹುಡುಕಬೇಕು.

"ವಾನರೋತ್ತಮ, ಬೆಟ್ಟವನ್ನು ಏರಿ ಕೆಲವು ದ್ವೀಪಗಳಿಗೆ ಹೋಗಬೇಕು. ತೆಪ್ಪಗಳ ಮೇಲೆ ಕುಳಿತು ಕೆಲವು ಕಡೆಗೆ ಹೋಗಬೇಕು. ಅಲ್ಲಲ್ಲಿಗೆ ಆಯಾ ದಾರಿಯಿಂದ ಹೋಗಬೇಕು. ಯವದ್ವೀಪಕ್ಕೆ ಹೋಗಿ. ಅಲ್ಲಿ ರತ್ನದ ಗಣಿ ಇವೆ. ಏಳು ಖಂಡಗಳ ದ್ವೀಪ ಅದು. ಬಂಗಾರದ ಗಣಿಗಳ ಸುವರ್ಣರೂಪ್ಯಕ ದ್ವೀಪವೂ ಅಲ್ಲೇ ಇದೆ. ಅದನ್ನು ದಾಟಿದರೆ ಶಿಶಿರಪರ್ವತ. ಅದರ ಶಿಖರ ಮುಗಿಲನ್ನು ಮುಟ್ಟುತ್ತದೆ. ಆ ಪರ್ವತದ ದುರ್ಗಗಳಲ್ಲಿ ಕಮರಿಗಳಲ್ಲಿ ಎಚ್ಚರಿಕೆ ಯಿಂದ ಸೀತಾದೇವಿಯನ್ನು ಹುಡುಕಬೇಕು. ಆ ಪರ್ವತ ದೇವದಾನವರ ನಿವಾಸ.

"ಮುಂದೆ ಹೋದರೆ ಲವಣ ಸಮುದ್ರತೀರದಲ್ಲಿ ಶೋಣ ನದಿ ಇದೆ. ಆ ನದಿಯ ನೀರು ಕೆನ್ನೀರಿನಂತೆ ಕೆಂಪು. ಬಹಳ ವೇಗ ಅದರದು. ಅಗಾಧ ನದಿ. ಸಿದ್ಧರು ಚಾರಣರು ಇರುತ್ತಾರೆ ಅದರ ತೀರದಲ್ಲಿ. ಅಲ್ಲಿ ಇರುವ ಕಾಡು ಚಿತ್ರವಿಚಿತ್ರ. ಅಲ್ಲಿ ಎಲ್ಲಿ ಆದರೂ ರಾವಣ ಇರಬಹುದು, ಸೀತೆ ಇರಬಹುದು. ಹುಡುಕಿ ನೋಡಿ. ಅಲ್ಲಿಯ ಉದ್ಯಾನವನಗಳು ಬಲು ರಮ್ಯ. ಅಲ್ಲಿ ಪರ್ವತ ಗಳಲ್ಲಿ ಮನಸೆಳೆವ ನದಿಗಳು ಹುಟ್ಟುತ್ತವೆ. ಅಲ್ಲಿ ನೋಡಿ.

ಅಲ್ಲಿಂದ ಮುಂದೆ ಸಮುದ್ರದಲ್ಲಿ ಮಹಾಭಯಂಕರ ದ್ವೀಪಗಳು ಇವೆ. ಸಮುದ್ರದಲ್ಲಿ ಬಹಳ ಬಿರುಗಾಳಿ. ಅಲ್ಲಕಲ್ಲೋಲ ಆಗಿ ಅಲೆ ಏಳುತ್ತವೆ. ಕಡಲಿನ ಸದ್ದು ಬಹಳ. ಅಲ್ಲಿ ಇರುವವರು ಅಸುರರು. ಮಹಾಕಾಯರು. ಆಹಾರ ಸಾಲದು. ಮನುಷ್ಯರ ನೆರಳನ್ನು ಹಿಡಿದು ಅದರ ಮೂಲಕ ಮನುಷ್ಯ ರನ್ನೇ ಹಿಡಿದು ತಿನ್ನುತ್ತಾರೆ. ಬ್ರಹ್ಮನ ವರ ಅದು ಅವರಿಗೆ. ಅವರ ಕೈಗೆ ಸಿಕ್ಕದ ಹಾಗೆ ಉಪಾಯದಿಂದ ಸಮುದ್ರವನ್ನು ದಾಟಬೇಕು ನೀವು. ಮಹಾ ಘೋಷದ ಆ ಸಮುದ್ರದಲ್ಲಿ ಮಹೋರಗಗಳು ಇವೆ.

"ಅದನ್ನು ದಾಟಿದರೆ ರಕ್ತಜಲದ ಗಭೀರಸಮುದ್ರ ಲೋಹಿತ ಸಿಗುತ್ತದೆ. ಅದರಲ್ಲಿ ಶಾಲ್ಮಲೀ ದ್ವೀಪ. ಅಲ್ಲಿ ಒಂದು ದೊಡ್ಡ ಬೂರುಗದ ಮರ ಇದೆ. ಅಲ್ಲಿ ಕೈಲಾಸದ ಹಾಗೆ ಶುಭ್ರ ಆದ ವಿಶ್ವಕರ್ಮನಿರ್ಮಿತ ನವರತ್ನವಿಭೂಷಿತ ಭವನ

ಒಂದು ಇದೆ. ಅದು ಗರುತ್ಮಂತನ ಭವನ. ಆ ದ್ವೀಪದ ಪರ್ವತಶಿಖರಗಳಲ್ಲಿ ಮಂದೇಹರು ಇದ್ದಾರೆ. ಭಯಂಕರಾಕಾರದ ರಾಕ್ಷಸರು. ದಿನವೂ ಬೆಳಗ್ಗೆ ಸೂರ್ಯನನ್ನು ಅಡ್ಡಗಟ್ಟುತ್ತಾರೆ. ಎಲ್ಲರನ್ನೂ ಪೀಡಿಸುತ್ತಾರೆ. ಬ್ರಾಹ್ಮಣಶ್ರೇಷ್ಠರು ಜಪಿಸುವ ಗಾಯತ್ರೀಮಂತ್ರದ ಪ್ರಭಾವದಿಂದ ಸಮುದ್ರದಲ್ಲಿ ಬೀಳುತ್ತಾರೆ. ಸೂರ್ಯಕಿರಣಗಳ ತಾಪದಿಂದ ಮತ್ತೆ ಮೇಲೆ ಎದ್ದು ಅದೇ ಪರ್ವತಶಿಖರಗಳನ್ನು ಹತ್ತುತ್ತಾರೆ.

"ನೀವು ಮಹಾಪರಾಕ್ರಮಿಗಳು. ನೀವು ಅವುಗಳನ್ನು ದಾಟುತ್ತೀರಿ. ಮುಂದೆ ಕ್ಷೀರಸಮುದ್ರ. ಅದರ ಅಲೆಗಳು ಮುತ್ತಿನ ಸರಗಳ ಹಾಗೆ, ಸಮುದ್ರ ಬಿಳಿಯ ಮೋಡದ ಹಾಗೆ ಕಾಣುತ್ತವೆ. ಅದರ ನಡುವೆ ಋಷಭ ಪರ್ವತ. ಬೆಳ್ಳನೆ ಆ ಪರ್ವತದಲ್ಲಿ ದಿವ್ಯಗಂಧವನ್ನು ಬೀರುವ ಹೂಗಳ ರಜತವೃಕ್ಷಗಳು ಹೇರಳ. ಸುದರ್ಶನ ಸರೋವರ ಇದೆ ಅಲ್ಲಿ. ಅದರಲ್ಲಿ ಚಿನ್ನದ ಕೇಸರಗಳ ಬೆಳ್ಳಿಯ ಕಮಲಗಳು, ರಾಜಹಂಸಗಳು. ಅಲ್ಲಿಗೆ ದೇವತೆಗಳು ಚಾರಣರು ಯಕ್ಷರು ಕಿನ್ನರರು ಅಪ್ಸರೆಯರ ಜೊತೆಯಲ್ಲಿ ಕ್ರೀಡಿಸಲು ಬರುತ್ತಾರೆ.

"ವಾನರೋತ್ತಮರೆ, ಅದನ್ನು ದಾಟಿದಮೇಲೆ ಸರ್ವಭೂತಭಯಾವಹ ಆದ ಶುದ್ಧಜಲದ ಸಮುದ್ರ ಇದೆ. ಎಲ್ಲ ಸಮುದ್ರಗಳಿಗೂ ಶ್ರೇಷ್ಠ ಇದು. ಸಂಕರ್ಷಣದೇವನ ಮುಖದಿಂದ ಹುಟ್ಟಿದ ಹಯಮುಖರೂಪದ ತೇಜಸ್ಸು ಆ ನೀರಿನಲ್ಲಿ ಅಡಗಿ ಇದೆ. ಈ ತೇಜಸ್ಸು ಪ್ರಳಯಸಮಯದಲ್ಲಿ ಸಚರಾಚರ ಸಮಸ್ತವನ್ನೂ ಬಹುಬೇಗ ಸುಟ್ಟುಹಾಕುತ್ತದೆ. ಆ ಸಮುದ್ರದ ಜಲಚರಗಳು ಪರಾಕ್ರಮಶಾಲಿಗಳೇ ಆದರೂ ಆ ಬಡಬಾಮುಖವನ್ನು ನೋಡಿ ಭಯಪಟ್ಟು ಅದರ ಬೇಗೆಯನ್ನು ಸಹಿಸಲಾರದೆ ಚೀರುತ್ತವೆ. ಸದಾ ಆ ಧ್ವನಿ ಕಿವಿಗೆ ಬೀಳುತ್ತದೆ. ಸಿಹಿ ನೀರಿನ ಈ ಸಮುದ್ರಕ್ಕೆ ಉತ್ತರದಲ್ಲಿ ಮೂರು ಗಾವುದ ದೂರದಲ್ಲಿ ದೊಡ್ಡದು ಒಂದು ಬಂಗಾರದ ಬೆಟ್ಟ—ಜಾತರೂಪ ಶಿಲೆ ಇದೆ.

"ಆ ಸುವರ್ಣಾಚಲದ ಶಿಖರದ ಮೇಲೆ ಒಂದು ಮಹಾಸರ್ಪ ಕುಳಿತು ಇದೆ. ಚಂದ್ರನ ಹಾಗೆ ಬೆಳ್ಳಗೆ ಕಾಣುವ ಅದು ಸರ್ಪರಾಜ ಅನಂತ. ಸಮಸ್ತ ಜೀವಗಳು ಅದಕ್ಕೆ ನಮಸ್ಕಾರ ಮಾಡುತ್ತವೆ. ಕಮಲದ ಕಣ್ಣು. ಸಾವಿರ ಹೆಡೆ, ನೀಲಿವಸ್ತ್ರ. ಆ ಮಹಾಶೇಷನಿಗೆ ಬಂಗಾರದ ತಾಳೆಯ ಮರವೇ ಧ್ವಜ. ಅದಕ್ಕೆ ಒಂದು ಜಗಲಿ. ಧ್ವಜಕ್ಕೆ ಮೂರು ಶಿಖರ. ಪೂರ್ವ ದಿಕ್ಕಿನ ಎಲ್ಲೆ ಎಂದು

ತ್ರಿಮೂರ್ತಿಗಳು ಅದನ್ನು ಅಲ್ಲಿ ಸ್ಥಾಪಿಸಿದರು. ಅದರಿಂದ ಆಚೆಗೆ ದೇದೀಪ್ಯಮಾನ ಆದ ಸುವರ್ಣಮಯ ಉದಯಪರ್ವತ. ಅದರ ಶಿಖರ ನೂರು ಗಾವುದ ಅಗಲ. ಮುಗಿಲನ್ನು ಮುಟ್ಟಿದೆ ಆ ಶಿಖರ. ಅದರಲ್ಲಿ ಸಾಲ ತಾಳೆ ಹೊಂಗೆ ಕರ್ಣಿಕಾರ ಮುಂತಾದ ಹೂಗಿಡ ಹೇರಳ ಆಗಿ ಹೂಬಿಟ್ಟವೆ. ಬಂಗಾರದ ಬಣ್ಣದಿಂದ ಹೊಳೆಯುತ್ತ ಇವೆ. ಒಂದು ಯೋಜನ ಅಗಲ ಹತ್ತು ಯೋಜನ ಎತ್ತರ ಆದ ಸುವರ್ಣಮಯ ಸೌಮನಸ ಶಿಖರ ಇದೆ ಅಲ್ಲಿ. ಹಿಂದೆ ವಿಷ್ಣು ತ್ರಿವಿಕ್ರಮಾವತಾರ ಎತ್ತಿದಾಗ ಮೊದಲ ಹೆಜ್ಜೆಯನ್ನು ಆ ಸೌಮನಸ ಶಿಖರದ ಮೇಲೆ ಇಟ್ಟ. ಎರಡನೆ ಹೆಜ್ಜೆಯನ್ನು ಮೇರುಪರ್ವತದ ಮೇಲೆ ಇಟ್ಟ.

"ವಾನರರೆ, ಜಂಬೂ ದ್ವೀಪದ ಉತ್ತರದಲ್ಲಿ ಸುತ್ತಿ ಈ ಸೌಮನಸ ಶೃಂಗದ ಮೇಲಕ್ಕೆ ಬಂದಾಗ ನಮಗೆ ಎಲ್ಲರಿಗೂ ಸೂರ್ಯದರ್ಶನ ಚೆನ್ನಾಗಿ ಆಗುತ್ತದೆ. ಆ ಶಿಖರದಲ್ಲಿ ಮಹಾತಪಸ್ವಿಗಳು ವೈಖಾನಸರು ವಾಲಖಿಲ್ಯರು ಇದಾರೆ ತಪಸ್ಸುಮಾಡುತ್ತ. ಅವರ ತೇಜಸ್ಸು ಸೂರ್ಯನಿಗೆ ಸಮ. ಅದರ ಪಕ್ಕದಲ್ಲಿ ಇರುವ ದ್ವೀಪ ಸುದರ್ಶನ ದ್ವೀಪ. ಸಮಸ್ತ ಪ್ರಾಣಿಕೋಟಿಯ ಕಣ್ಣಿಗೆ ಬೆಳಕನ್ನು ಕೊಡುವ ಸೂರ್ಯನ ಸನ್ನಿಧಿ ಅದು.

"ಉದಯಾಚಲದ ಶಿಖರಗಳಲ್ಲಿ ಅಡವಿಗಳಲ್ಲಿ ಗವಿಗಳಲ್ಲಿ ಗಿರಿನದಿಗಳ ಪಕ್ಕದಲ್ಲಿ ಅಲ್ಲಿ ಎಲ್ಲೆಡೆಯಲ್ಲೂ ರಾವಣಾಸುರನನ್ನೂ ಸೀತಾದೇವಿಯನ್ನೂ ಹುಡುಕಿರಿ. ವಾನರಶ್ರೇಷ್ಠರೆ, ಸುವರ್ಣಮಯ ಉದಯಾಚಲದ ಕಾಂತಿ ಸೂರ್ಯಕಾಂತಿ ಎರಡೂ ಒಂದು ಆಗಿ ಬೆಳಗಿನ ಮುಚ್ಚಂಜೆ ಕೆಂಪಗೆ ಕಾಣುತ್ತದೆ. ಇದರಿಂದಲೇ ಸೃಷ್ಟಿಮಾಡುವಾಗ ಬ್ರಹ್ಮದೇವ ಇದನ್ನು ಭೂಮಿಗೂ ಇತರ ಲೋಕಗಳಿಗೂ ಮೊದಲ ಬಾಗಿಲು ಎಂದು ನಿರ್ಣಯಿಸಿದ. ಇದೇ ಸೂರ್ಯೋದಯ ಸ್ಥಾನ ಎಂದು ತೀರ್ಮಾನಿಸಿದ. ಅದರಿಂದ ಇದು ಪೂರ್ವ ದಿಕ್ಕು, ಮೂಡಣ ದಿಕ್ಕು.

"ಅಲ್ಲಿಂದ ಆಚೆಗೆ ಹೋಗಲಾರಿರಿ. ಅದು ದೇವತೆಗಳ ಆವಾಸ. ಅಲ್ಲಿ ಸೂರ್ಯಚಂದ್ರರ ಬೆಳಕು ಇಲ್ಲ. ಬರೀ ಕಗ್ಗತ್ತಲೆ. ಯಾವುದೂ ಕಾಣದು ಅಲ್ಲಿ. ನಾನು ಹೇಳಿದ ಸ್ಥಳಗಳೇ ಅಲ್ಲದೆ ಬೇರೆ ಪ್ರದೇಶಗಳಲ್ಲೂ ಹುಡುಕಿ. ಅಲ್ಲಿಂದ ಮುಂದೆ ಸೂರ್ಯದರ್ಶನ ಇಲ್ಲದ ಕಡೆಗೆ ಹೋಗಲಾರಿರಿ. ಉದಯಾಚಲದವರೆಗೂ ಹೋಗಿ ಹುಡುಕಿ ಬರಬೇಕು. ಒಂದು ತಿಂಗಳು ಗಡುವು

ನಿಮಗೆ. ಅದರ ಮೇಲೆ ಅಲ್ಲಿ ನೀವು ಇರಕೂಡದು. ತಿಂಗಳು ಆದಮೇಲೆ ಬಂದವರಿಗೆ ಮರಣದಂಡನೆ. ಹೋದದ್ದಕ್ಕೆ ಸೀತೆಯನ್ನು ಹುಡುಕಿಕೊಂಡು ಬರಬೇಕು. ಪೂರ್ವದಿಕ್ಕು ದೇವೇಂದ್ರನಿಗೆ ಇಷ್ಟ. ಅಲ್ಲಿ ಬಗೆಬಗೆಯ ವನ ಇವೆ. ಅಲ್ಲಿ ಹುಡುಕಿ ರಾವಣನ ನಲ್ಲೆಯ ಜಾಡನ್ನು ಕಂಡುಹಿಡಿದಿರೋ ನಿಮಗೆ ಸರ್ವ ಸುಖವೂ."

೧೨

ಇನ್ನು ದಕ್ಷಿಣ ದಿಕ್ಕು. ವಾನರವೀರರ ಬಲಗಳ ತಾರತಮ್ಯ ಎಲ್ಲವೂ ಸುಗ್ರೀವನಿಗೆ ಚೆನ್ನಾಗಿ ಗೊತ್ತು. ಅಗ್ನಿಪುತ್ರ ನೀಲ, ಬ್ರಹ್ಮಪುತ್ರ ಜಾಂಬವಂತ, ವಾಯುಪುತ್ರ ಹನುಮಂತ, ಸುಹೋತ್ರ, ಶರಾರಿ, ಶರಗುಲ್ಮ, ಗಜ, ಗವಯ, ಗವಾಕ್ಷ, ಸುಷೇಣ, ವೃಷಭ, ಮೈಂದ, ದ್ವಿವಿದ, ವಿಜಯ, ಗಂಧಮಾದನ, ಉಲ್ಕಾಮುಖ, ಅನಂಗ ಮುಂತಾದ ಯೂಥಪತಿಗಳನ್ನು ದಕ್ಷಿಣ ದಿಕ್ಕಿಗೆ ಕಳಿಸಿದ. ವೇಗಪರಾಕ್ರಮಗಳಿಗೆ ಹೆಸರು ಆದ ಅಂಗದನನ್ನೂ ಕಳಿಸಿದ ಅವರ ಜೊತೆಗೆ. ಅಂಗದನೇ ಅವರಿಗೆ ದಳಪತಿ. ಅವರಿಗೆ ತಿಳಿಯದ ಕೆಲವು ದೇಶಗಳ ವಿವರಗಳನ್ನು ತಿಳಿಸಿದ ಸುಗ್ರೀವ.

"ವಾನರದಳಪತಿಗಳೇ, ವಿಂಧ್ಯಪರ್ವತ ಇದೆಯಲ್ಲ. ಅದಕ್ಕೆ ಸಾವಿರ ಶಿಖರ. ಅಲ್ಲಿ ನಾನಾ ಬಗೆಯ ಗಿಡಬಳ್ಳಿ. ನರ್ಮದಾ ನದಿ ಇದೆ. ಬಹಳ ದುರ್ಗಮ. ಮಹಾಸರ್ಪಗಳಿಗೆ ನೆಲೆ. ಮುಂದೆ ಗೋದಾವರಿ ನದಿ. ಬಲು ಮನೋಹರ. ಕೃಷ್ಣಾನದಿಯೂ ಅಷ್ಟೇ. ಪೂಜ್ಯನದಿ ವರದಾನದಿಯಲ್ಲೂ ಮಹೋರಗಗಳೇ. ಮುಂದೆ ಮೇಖಲೆ ಉತ್ಕಲೆಗಳು.

"ಅಲ್ಲಿಂದ ಮುಂದೆ ದಶಾರ್ಣದೇಶದ ಪಟ್ಟಣಗಳಲ್ಲೂ ಅಶ್ವವಂತಿ ಅವಂತಿ ಗಳಲ್ಲೂ ವಿದರ್ಭ ಋಷಿಕ ಮಾಹಿಷಿಕ ವಂಗ ಕಳಿಂಗ ಕೌಶಿಕ ದೇಶಗಳಲ್ಲೂ ಚೆನ್ನಾಗಿ ಹುಡುಕಬೇಕು. ದಂಡಕಾರಣ್ಯ ಇದೆ ಮುಂದೆ. ಅಲ್ಲಿಯ ಪರ್ವತ ಗುಹೆ ನದಿ ಎಲ್ಲ ಎಡೆಗಳಲ್ಲೂ ಹುಡುಕಿ. ಮುಂದೆ ಆಂಧ್ರ ದೇಶ. ಪುಂಡ್ರ ದೇಶ ಚೋಳ ಪಾಂಡ್ಯ ಕೇರಳ ದೇಶಗಳು. ಅಲ್ಲಿಯೇ ಸಹ್ಯಾದ್ರಿ ಇದೆ. ಗೈರಿಕಾದಿ ಧಾತುಗಳಿಂದ ಥಗಥಗಿಸುತ್ತ ಇದೆ ಆ ಪರ್ವತ. ಅದರ ಶಿಖರಗಳು ಚಿತ್ರವಿಚಿತ್ರ.

ಅಲ್ಲಿಯ ಗಿಡಗಳೂ ಚಿತ್ರವಿಚಿತ್ರ ಹೂ ಬಿಡುತ್ತವೆ. ಅಲ್ಲಿ ಗಂಧದ ಮರಗಳು ಹೆಚ್ಚು. ಅಲ್ಲಿ ಎಲ್ಲಾ ಹುಡುಕಿ.

" ಅದನ್ನು ದಾಟಿದರೆ ಕಾವೇರೀ ನದಿ. ಸರ್ವಮಂಗಳಕರ ನದಿ. ನೀರು ಬಲು ತಿಳಿ. ಆ ನದೀತೀರದಲ್ಲಿ ಯಾವಾಗಲೂ ಅಪ್ಸರೆಯರ ವಿಹಾರ ನಡೆದು ಇರುತ್ತದೆ. ಅಲ್ಲಿಂದ ಮುಂದೆ ಮಲಯಪರ್ವತ. ಮಲಯಪರ್ವತದ ಶಿಖರದಲ್ಲಿ ಅಗಸ್ತ್ಯ ಮಹರ್ಷಿಗಳು ಇದಾರೆ. ಮಹಾತೇಜೋವಂತರು. ಸೂರ್ಯನಿಗೆ ಸಮಾನರು. ತಪೋನಿಧಿಗಳು. ಆ ಮಹಾತ್ಮರ ಅನುಗ್ರಹವನ್ನು ಗಳಿಸಬೇಕು ನೀವು. ಆಮೇಲೆ ತಾಮ್ರಪರ್ಣಿ ನದಿ ಸಿಗುತ್ತದೆ. ಅದರಲ್ಲಿ ದೊಡ್ಡ ದೊಡ್ಡ ಮೊಸಳೆ ಇವೆ. ಹರೆಯದ ಹೆಣ್ಣು ಒಬ್ಬಳು ಮೈಗೆ ಚಂದನ ಬಳಿದುಕೊಂಡು ಉಬ್ಬಿದ ಎದೆಯಿಂದ ಗಂಡನ ಬಳಿಗೆ ಹೋಗುವಂತೆ ಆ ನದಿ ಕಡಲಿನ ಕಡೆ ಹರಿಯುತ್ತದೆ. ಅಲ್ಲಿ ಇರುವ ಗಂಧದ ಕಾಡು, ನಡುನಡುವೆ ಎತ್ತರ ಆಗಿ ಇರುವ ದ್ವೀಪಗಳು ಹಾಗೆ ಕಾಣಿಸುತ್ತವೆ.

" ಮುಂದೆ ಹೋದರೆ ಪಾಂಡ್ಯನಗರದ್ವಾರ. ಅದರ ಬಾಗಿಲು ಬಂಗಾರದ್ದು. ಅದಕ್ಕೆ ಮುತ್ತುರತ್ನಗಳ ಅಲಂಕಾರ. ಶ್ರೇಷ್ಠ ಪಟ್ಟಣ. ಅಲ್ಲಿ ನೋಡಿ. ಮುಂದೆ ಸಮುದ್ರತೀರಕ್ಕೆ ಹೋಗಿ. ಅಲ್ಲಿ ಮಹೇಂದ್ರಪರ್ವತ ಇದೆ. ಅಗಸ್ತ್ಯಮಹರ್ಷಿ ಅಲ್ಲಿ ಇಟ್ಟದ್ದು. ಅದರ ಮೇಲೆ ಇರುವ ತರುಲತೆಗಳು ವಿಚಿತ್ರ. ಅಲ್ಲಿ ಎಲ್ಲ ಬಗೆಯ ಫಲಪುಷ್ಪಗಳೂ ಸಮೃದ್ಧಿ. ಸುವರ್ಣಮಯ ಪರ್ವತ. ಅಲ್ಲಿ ದೇವ ಋಷಿಗಳೂ ಸಿದ್ಧಚಾರಣಯಕ್ಷಗಂಧರ್ವರೂ ಅಪ್ಸರೆಯರೂ ವಿಹರಿಸುತ್ತಾರೆ. ಮನಸೆಳೆವ ನೋಟ ಆ ಪ್ರದೇಶದ್ದು. ಪರ್ವದಿನಗಳಲ್ಲಿ ಎಲ್ಲಾ ದೇವೇಂದ್ರ ಬರುತ್ತಾನೆ ಅಲ್ಲಿ ಸ್ನಾನಮಾಡಲಿಕ್ಕೆ.

" ದಕ್ಷಿಣಸಮುದ್ರದಲ್ಲಿ ಶತಯೋಜನ ವಿಸ್ತೀರ್ಣದ ದ್ವೀಪ ಒಂದು ಇದೆ. ಮನುಷ್ಯರಿಗೆ ಸಾಧ್ಯವಿಲ್ಲ ಅಲ್ಲಿಗೆ ಹೋಗಲು. ಅಲ್ಲಿ ಸೀತಾದೇವಿಯನ್ನು ಚೆನ್ನಾಗಿ ಹುಡುಕಬೇಕು. ಅಲ್ಲಿಯೇ ದುರ್ಮಾರ್ಗಿ ರಾವಣಾಸುರ ಇರುವುದು. ಉಳಿದ ಕಡೆಗಳಿಗಿಂತ ಹೆಚ್ಚು ಹುಡುಕಬೇಕು ಅಲ್ಲಿ. ಆ ದ್ವೀಪಕ್ಕೆ ಉತ್ತರದಲ್ಲಿ ಸಮುದ್ರ ಮಧ್ಯೆ ಅಂಗಾರಕೆ ಎಂಬ ರಾಕ್ಷಸಿ ಇದಾಳೆ. ನೀರಿನಲ್ಲಿ ನೆರಳು ಬಿದ್ದರೆ ಸಾಕು ಅದನ್ನು ಹಿಡಿದು ಪ್ರಾಣಿಗಳನ್ನು ಸೆಳೆದು ತಿನ್ನುತ್ತಾಳೆ.

"ವಾನರವೀರರೆ, ಆ ದ್ವೀಪವನ್ನು ಪೂರ್ತಿ ಶೋಧಿಸಿ. ನಿಮಗೆ ಸಂಶಯ ಬಂದ ಕಡೆಯಲ್ಲಿ ಎಲ್ಲಾ ಹುಡುಕಿ. ಸಂಶಯ ತೀರುವವರೆಗೂ ಹುಡುಕಿ. ಆಮೇಲೆ ಆ ದ್ವೀಪವನ್ನು ದಾಟಿ ನೂರು ಗಾವುದ ದೂರ ಹೋದರೆ ಸಂಪದ್ಯುಕ್ತ ಪುಷ್ಪಿತಕ ಪರ್ವತ. ಅಲ್ಲಿ ಸಿದ್ಧರು ಚಾರಣರು ಇರುತ್ತಾರೆ. ಆ ಪರ್ವತ ಒಂದು ಕಡೆ ಸೂರ್ಯನಂತೆ ಕೆಂಪಗೆ, ಇನ್ನೊಂದು ಕಡೆ ಚಂದ್ರನಂತೆ ಬೆಳ್ಳಗೆ ಇದೆ. ಸುತ್ತಲೂ ಸಮುದ್ರಜಲ, ಮುಗಿಲು ಮುಟ್ಟುವ ಶಿಖರಗಳು. ಅದರಲ್ಲಿ ಒಂದು ಬಂಗಾರದ್ದು. ಆ ಶಿಖರದ ಮೇಲಕ್ಕೆ ಬರುತ್ತಾನೆ ಸೂರ್ಯ ದಕ್ಷಿಣಾಯನದಲ್ಲಿ. ಮತ್ತೊಂದು ಬೆಳ್ಳಿಯ ಶಿಖರ. ಅದರ ಮೇಲಕ್ಕೆ ಚಂದ್ರ ಬರುತ್ತಾನೆ. ಆ ಪರ್ವತ ಕೃತಘ್ನರಿಗೆ ನಾಸ್ತಿಕರಿಗೆ ಕ್ರೂರರಿಗೆ ಕಣ್ಣಿಗೆ ಕಾಣಬಾರದು. ಆ ಪರ್ವತಕ್ಕೆ ಪ್ರಣಾಮ ಮಾಡಿ ಅಲ್ಲಿ ಸೀತಾದೇವಿಯನ್ನು ಹುಡುಕಿ.

"ಕಪಿವೀರರೆ, ಅದರ ತರುವಾಯ ಸುಪ್ರಸಿದ್ಧ ಸೂರ್ಯವಂತ ಪರ್ವತ. ಪುಷ್ಪಿತಕ ಪರ್ವತಕ್ಕೆ ಅದು ಹದಿನಾಲ್ಕು ಗಾವುದ ದೂರ. ಅಲ್ಲಿಗೆ ಹೋಗುವುದು ಬಹಳ ಕಷ್ಟ. ಆದರೆ ನೀವು ನಿರ್ಭಯರು. ಅಲ್ಲಿಗೆ ಹೋಗಿ ಅದನ್ನು ದಾಟ ಬಲ್ಲಿರಿ. ದಾಟಿದರೆ ವೈದ್ಯುತ ಪರ್ವತ. ಅಲ್ಲಿ ಯಾವ ಹಣ್ಣಿನ ಗಿಡವನ್ನು ಬಯಸಿದರೂ ಇವೆ. ಸದಾಕಾಲವೂ ರಮಣೀಯ ಅದು. ರುಚಿ ರುಚಿ ಆದ ಕಂದಮೂಲಗಳೂ ಇವೆ ಅಲ್ಲಿ. ಬೇಕಾದಷ್ಟು ಜೇನು ಇದೆ. ತೃಪ್ತಿ ಆಗುವಂತೆ ಹಣ್ಣು ತಿಂದು ಜೇನು ಕುಡಿಯಬಹುದು. ಅಲ್ಲಿಂದ ಮುಂದೆ ಕುಂಜರ ಪರ್ವತ.

"ಕುಂಜರ ಪರ್ವತ ಕಣ್ಣಿಗೆ ಸೊಂಪು, ಮನಸಿಗೆ ಪೆಂಪು. ಅಲ್ಲೇ ಅಗಸ್ತ್ಯ ಮಹರ್ಷಿಯ ಭವನ, ವಿಶ್ವಕರ್ಮ ಕಟ್ಟಿಕೊಟ್ಟದ್ದು, ಇರುವುದು. ಒಂದು ಗಾವುದ ಅಗಲ, ಹತ್ತು ಗಾವುದ ಉದ್ದ. ಬಹಳ ಎತ್ತರ. ಬಂಗಾರದಿಂದ ವಿವಿಧ ರತ್ನಗಳಿಂದ ಕಟ್ಟಿದ ಭವನ.

"ಸರ್ಪಗಳಿಗೆ ನೆಲೆ ಆದ ಭೋಗವತೀ ಪಟ್ಟಣ ಹತ್ತಿರದಲ್ಲೇ ಇದೆ. ವಿಶಾಲ ಆದ ತೊಟ್ಟಿಗಳು ನಾಲ್ಕು ಕಡೆ ಇವೆ ಆ ಪಟ್ಟಣದಲ್ಲಿ. ಯಾರೂ ಒಳಗೆ ಹೋಗುವಂತೆಯೆ ಇಲ್ಲ. ತೀಕ್ಷ್ಣದಂಷ್ಟ್ರಗಳ ಮಹಾವಿಷಸರ್ಪಗಳು ಕಾವಲು ಕಾಯುತ್ತ ಇವೆ. ಸರ್ಪರಾಜ ವಾಸುಕಿಗೆ ಅಲ್ಲಿಯೇ ವಾಸ. ಮಹಾಪ್ರಾಜ್ಞ ಅವನು. ಅಲ್ಲಿ ಚೆನ್ನಾಗಿ ಹುಡುಕಬೇಕು ನೀವು.

“ ಅಲ್ಲಿಂದಾಚೆಗೆ ನಾನಾರತ್ನಮಯ ಋಷಭ ಪರ್ವತ. ವೃಷಭಾಕಾರದ್ದು ಅದು. ಅಲ್ಲಿ ಹೇರಳ ಆಗಿ ಗಂಧದ ಮರ. ಕೆಲವು ಗೋರೋಚನದ ಬಣ್ಣ, ಕೆಲವು ತಾವರೆ ಎಸಳಿನ ಬಣ್ಣ, ಕೆಲವು ಎಲೆಹಸಿರು ಬಣ್ಣ, ಕೆಲವು ಕೆಂಡದ ಕೆಂಪು ಬಣ್ಣ. ಆ ಗಂಧದ ಕಾಡನ್ನು ಕಣ್ಣಿಂದ ನೋಡಬೇಕೇ ವಿನಾ ಮುಟ್ಟ ಮೂಸಬಾರದು. ರೋಹಿತಗಂಧರ್ವರು ಅದಕ್ಕೆ ಕಾವಲು. ಆ ಬೆಟ್ಟದ ಮೇಲೆ ಸೂರ್ಯಸಮಾನಕಾಂತಿಯ ಗಂಧರ್ವ ರಾಜರು ಐವರು ಇದಾರೆ—ಶೈಲೂಷ ಗ್ರಾಮಣಿ ಶಿಗ್ರು ಶ್ವಭ್ರ ಭಭ್ರು. ಪುಣ್ಯಕರ್ಮ ಮಾಡಿದ ಸೂರ್ಯನಂಥ ಕಾಂತಿಯವರೂ ಚಂದ್ರನಂಥ ತೇಜೋವಂತರೂ ಅಗ್ನಿಸಮ ಕಾಂತಿವಂತರೂ ಅಲ್ಲಿ ಇದಾರೆ. ಪ್ರಳಯಕಾಲದಲ್ಲಿ ಈ ಪೃಥ್ವಿ ನಾಶ ಆದಾಗ ಸ್ವರ್ಗಾದಿ ಸಿದ್ಧಿಪಡೆದ ಮಹಾಪುರುಷರು ಅಲ್ಲಿ ಇರುತ್ತಾರೆ.

“ ಆ ಬೆಟ್ಟದ ಆಚೆಗೆ ಪಿತೃಲೋಕ. ಅಲ್ಲಿಗೆ ಹೋಗಬೇಡಿ. ಬಹಳ ದಾರುಣ ಅದು. ಯಮನ ರಾಜಧಾನಿ ಅದೇ. ಯಾವಾಗಲೂ ಕಗ್ಗತ್ತಲೆ ಕವಿದು ಇರುತ್ತದೆ ಅಲ್ಲಿ. ನೀವು ಮಹಾವೀರರೇ. ಆದರೂ ಇಲ್ಲಿಯವರೆಗೇ ನಿಮ್ಮ ಸಂಚಾರ. ಎಷ್ಟೇ ಅದ್ಭುತಶಕ್ತಿ ಇದ್ದರೂ ಮುಂದೆ ಹೋಗಲಾರಿರಿ. ವಾನರ ದಳಪತಿಗಳೆ, ನಾನು ಹೇಳಿದ ಪ್ರದೇಶಗಳಲ್ಲಿ ಎಲ್ಲಾ ಹುಡುಕಿ. ನಾನು ಹೇಳದ ಪ್ರದೇಶಗಳಲ್ಲೂ ಹುಡುಕಿ. ಅಲ್ಲಿ ಸೀತಾದೇವಿಯ ಸಮಾಚಾರವನ್ನು ತಿಳಿದು ಕೊಂಡು ಬರಬೇಕು. ಒಂದು ತಿಂಗಳ ಒಳಗೆ ಬರಬೇಕು.

“ ಒಂದು ತಿಂಗಳ ಒಳಗೆ ಯಾರು ಬಂದು ‘ ಸೀತೆಯನ್ನು ಕಂಡೆ ’ ಎಂಬ ಎರಡೇ ಮಾತನ್ನು ನನ್ನ ಕಿವಿಗೆ ಹಾಕುತ್ತಾರೋ ಅವರಿಗೆ ನನಗೆ ಸರಿಸಮ ಆದ ಭೋಗಭಾಗ್ಯ. ಅವನಿಗಿಂತ ಹೆಚ್ಚು ಪ್ರಿಯ ಇಲ್ಲ ನನಗೆ. ನನ್ನ ಪ್ರಾಣಕ್ಕಿಂತಲೂ ಹೆಚ್ಚು. ಎಷ್ಟೇ ತಪ್ಪುಮಾಡಿದ್ದರೂ ನನಗೆ ಅವನು ಬಂಧು.

“ ವಾನರವೀರರೆ, ನಿಮ್ಮ ಪರಾಕ್ರಮಕ್ಕೆ ಎಣೆ ಇಲ್ಲ. ಶೂರರು, ಧೀರರು. ಸಮಸ್ತ ಸದ್ಗುಣ ಪ್ರಖ್ಯಾತ ಸದ್ವಂಶಸಂಜಾತರು. ಸೀತಾದೇವಿ ಇರುವ ಸ್ಥಳವನ್ನು ತಿಳಿದುಬರಲು ಸರ್ವಪ್ರಯತ್ನಗಳನ್ನೂ ಮಾಡಬೇಕು. ಇದು ರಾಮಕಾರ್ಯ.”

೧೩

ಕಾರ್ಮೋಡಕ್ಕೆ ಸಮಾನ ಕಾಂತಿಯ ಸುಷೇಣನನ್ನು ಕರೆದ ಸುಗ್ರೀವ. ಸುಷೇಣ ತಾರೆಯ ತಂದೆ. ವಿನಯದಿಂದ ಅವನಿಗೆ ನಮಸ್ಕಾರ ಮಾಡಿದ. ಮರೀಚ ಮಹರ್ಷಿಯ ಮಗ ಮಾರೀಚ ಮಹಾಕಪಿಯನ್ನೂ ಬಲಾಢ್ಯರು ಆದ ಅವನ ತಮ್ಮಂದಿರನ್ನೂ ಎಲ್ಲರನ್ನೂ ಪಶ್ಚಿಮ ದಿಕ್ಕಿಗೆ ಹೋಗಲು ಹೇಳಿದ.

ಮರೀಚಮಹರ್ಷಿಯ ಹಿರಿಯ ಮಗ ಮಾರೀಚ ಬಹಳ ತೇಜೋಶಾಲಿ. ಪರಾಕ್ರಮದಲ್ಲಿ ಬುದ್ಧಿಯಲ್ಲಿ ದೇವೇಂದ್ರನಿಗೆ ಸಾಟಿ. ಗರುಡನಿಗೆ ಸಮಾನ ವೇಗದಲ್ಲಿ. ಅವನ ತಮ್ಮಂದಿರೂ ಬಲಾಢ್ಯರು ಕಾಂತಿವಂತರು. ಅವರಿಗೆ ಸುಗ್ರೀವ ಹೇಳಿದ: "ವಾನರೋತ್ತಮರೆ, ಎರಡು ಲಕ್ಷ ವಾನರಸೇನೆಯನ್ನು ತೆಗೆದುಕೊಂಡು ನೀವು ಪಶ್ಚಿಮಕ್ಕೆ ಹೊರಡಿ. ಬಾಹ್ಲಿಕ ಸೌರಾಷ್ಟ್ರ ಶೂರದೇಶಗಳನ್ನೂ ಇತರ ರಮಣೀಯ ಸಮೃದ್ಧ ದೇಶಗಳನ್ನೂ ನೋಡಿ. ಜನಪದಗಳಲ್ಲೂ ಪಟ್ಟಣಗಳಲ್ಲೂ ನೋಡಿ. ಪುನ್ನಾಗವನಗಳಲ್ಲಿ ನೋಡಿ. ಪಗಡೆಮರ ಕೇದಗೆ ಗಿಡ ಮುಂತಾದ ವನಗಳಲ್ಲಿ ನೋಡಿ. ತಾಳೆಯ ಗಿಡದ ಕಾಡು ಬಹಳ ಇವೆ. ಪಶ್ಚಿಮ ದಿಕ್ಕಿಗೆ ಹರಿಯುವ ನದಿ ಇವೆ. ತಪಸ್ವಿಗಳ ವಾಸಸ್ಥಾನ ಆದ ಅರಣ್ಯ ಇವೆ. ಮುಂದೆ ಮರಳುಕಾಡು ಇದೆ. ಎತ್ತರದ ಗಿರಿಶಿಖರ ಇವೆ. ಆ ಬೆಟ್ಟಗಳ ನಡುವೆ ಹೋಗುವ ದಾರಿ ಬಹಳ ದುರ್ಗಮ.

"ಇಲ್ಲಿ ಎಲ್ಲ ಕಡೆಯಲ್ಲೂ ಹುಡುಕಿ ಮುಂದೆ ಸಮುದ್ರತೀರಕ್ಕೆ ಹೋಗಬೇಕು. ಗಂಭೀರ ಸಮುದ್ರ ಅದು. ಅದರಲ್ಲಿ ತಿಮಿಂಗಿಲಗಳೂ ಮೊಸಳೆಗಳೂ ಮಹಾಮತ್ಸ್ಯಗಳೂ ತುಂಬಿ ಇವೆ. ಭಯಂಕರ ಸಮುದ್ರ. ಅಕ್ಷೋಭ್ಯ. ಅದರ ದಡದಲ್ಲಿ ತಾಳೆ ಕೇದಗೆಯ ವನ, ತೆಂಗಿನ ತೋಟ, ಹೊಂಗೆಯ ತೋಪು ವಿಶೇಷ. ಅಲ್ಲಿ ಎಲ್ಲಾ ತಿರುಗಾಡಿ ಹುಡುಕಿ. ಅಲ್ಲೇ ಇರುವ ಬೆಟ್ಟಗಳಲ್ಲಿ ಕಾಡುಗಳಲ್ಲಿ ರಾವಣ ಇದಾನೊ ಏನೋ ಹುಡುಕಬೇಕು.

"ಪಶ್ಚಿಮಸಮುದ್ರತೀರದಲ್ಲಿ ಮುರಚೀ ಪಟ್ಟಣ, ಜಲೇಪುರ, ಅವಂತೀ ಪಟ್ಟಣ, ಅಂಗಲೋಪನಗರ ಇವೆ. ಅಲ್ಲೇ ಇದೆ ಅಲಕ್ಷಿತ ಮಹಾರಣ್ಯ. ಎಲ್ಲ ಕಡೆಯಲ್ಲೂ ಹುಡುಕಬೇಕು. ಸಿಂಧೂಸಾಗರ ಸಂಗಮದಲ್ಲಿ ನೂರು ಶಿಖರಗಳ ಹೇಮಗಿರಿ ಇದೆ. ಮಹೋನ್ನತ ವೃಕ್ಷಗಳು ಅನೇಕ ಇವೆ ಆ ಪರ್ವತದಲ್ಲಿ.

ಆ ಪರ್ವತದ ತಪ್ಪಲಿನಲ್ಲಿ ಸಿಂಹ ಪಕ್ಷಿಗಳು ಇವೆ. ತಿಮಿತಿಮಿಂಗಿಲಗಳನ್ನೂ ಮೀನುಗಳನ್ನೂ ನೀರಾನೆಗಳನ್ನೂ ಎತ್ತಿಕೊಂಡುಹೋಗಿ ತಮ್ಮ ಗೂಡುಗಳಲ್ಲಿ ಇಟ್ಟುಕೊಳ್ಳುತ್ತವೆ. ಹೇಮಗಿರಿಯ ಶಿಖರಗಳಲ್ಲಿ ಹೊಟ್ಟೆತುಂಬಾ ತಿಂದು ಮದಿಸಿದ ಆನೆಗಳು ಇವೆ. ಗುಡುಗಿನಂತೆ ಗರ್ಜನೆ ಮಾಡುತ್ತವೆ ಅವು. ಆಕಾಶವನ್ನು ಮುಟ್ಟುವ ಮಹೋನ್ನತ ವೃಕ್ಷಗಳು ಅಲ್ಲಿಯವು. ಬಣ್ಣಬಣ್ಣ. ಬಂಗಾರದ ಕಾಂತಿ. ನೀವು ಕಾಮರೂಪಿಗಳು. ಮೇಲಕ್ಕೆ ಹೋಗಿ ಚೆನ್ನಾಗಿ ಹುಡುಕಿ ನೋಡಿ.

“ ಸುವರ್ಣಮಯ ಪರ್ವತ ಪಾರಿಯಾತ್ರ ಇದೆ ಪಶ್ಚಿಮ ಸಮುದ್ರದಲ್ಲಿ. ಅದರ ಶಿಖರಗಳ ಕಾಂತಿ ಕಣ್ಣುಕುಕ್ಕುತ್ತದೆ. ನೂರು ಗಾವುದದ ವಿಸ್ತೀರ್ಣ ಆ ಪರ್ವತದ್ದು. ಅದರ ಶಿಖರದಲ್ಲಿ ಮಹಾಬಲಾಢ್ಯರು, ಬೆಂಕಿಯ ಹಾಗೇ ತೇಜೋವಂತರು, ಭಯಂಕರಸ್ವರೂಪರು, ಕಾಮರೂಪಿಗಳು, ಮಹಾವೇಗಶಾಲಿಗಳು ಆದ ಇಪ್ಪತ್ತುನಾಲ್ಕುಕೋಟಿ ಗಂಧರ್ವರು ಇದಾರೆ. ನೀವು ಸಾಟಿ ಇಲ್ಲದ ಪರಾಕ್ರಮಿಗಳೇ. ಆದರೂ ಅವರ ಬಳಿಗೆ ಹೋಗಬೇಡಿ. ಅಲ್ಲಿ ಬಗೆಬಗೆಯ ಹಣ್ಣುಹಂಪಲು ಗಡ್ಡೆಗೆಣಸು ಇವೆ. ಅವನ್ನು ಮುಟ್ಟಬೇಡಿ. ಅಲ್ಲಿನ ಗಂಧರ್ವರು ಅದಕ್ಕೆ ಕಾವಲು. ಅವರು ಮಹಾಶೂರರು, ಧೀರರು. ಅವರನ್ನು ಇದಿರಿಸಲು ಯಾರಿಗೂ ಸಾಧ್ಯ ಅಲ್ಲ. ಅಲ್ಲಿ ನೀವು ಎಷ್ಟು ಕಪಿಚೇಷ್ಟೆ ಮಾಡಿದರೂ ಭಯ ಇಲ್ಲ. ಹಣ್ಣುಹಂಪಲು ಗಡ್ಡೆಗೆಣಸನ್ನು ಮುಟ್ಟಿದರೆ ಬಂತು. ಇದನ್ನು ನೆನಪಿನಲ್ಲಿ ಇಟ್ಟು, ಪಾರಿಯಾತ್ರ ಪರ್ವತದಲ್ಲಿ ಎಲ್ಲೆಲ್ಲೂ ಹುಡುಕಿ.

“ ಸ್ವಲ್ಪ ಮುಂದೆ ಹೋದರೆ ವಜ್ರಗಿರಿ. ವೈಡೂರ್ಯದಂತೆ ಅದರ ಹೊಳಪು. ವಜ್ರದ ಗಣಿ ಆ ಬೆಟ್ಟ. ಬಗೆಬಗೆಯ ತರುಲತಾಗುಲ್ಮ ಇವೆ ಅಲ್ಲಿ. ನೂರು ಯೋಜನ ಉದ್ದ ಅದು. ಅದರ ತುಂಬಾ ಗುಹೆಗಳು ಇವೆ. ಅಲ್ಲಿ ಎಲ್ಲೆಲ್ಲೂ ಹುಡುಕಿ.

“ ಅದು ಲವಣಸಮುದ್ರ. ಅದರ ನಾಲ್ಕನೆ ಭಾಗದಲ್ಲಿ ಚಕ್ರವಂತ ಪರ್ವತ ಇದೆ. ಸಾವಿರ ಅಲಗಿನ ಚಕ್ರಾಯುಧವನ್ನು ವಿಶ್ವಕರ್ಮ ನಿರ್ಮಿಸಿದ್ದು ಈ ಪರ್ವತದಲ್ಲಿಯೇ. ಮಹಾವಿಷ್ಣು ಪುರುಷೋತ್ತಮರೂಪದಿಂದ ಹಯಗ್ರೀವ ರಾಕ್ಷಸನನ್ನು ಕೊಂದು ಚಕ್ರಾಯುಧವನ್ನು ಪಡೆದದ್ದು ಇಲ್ಲೇ. ಪಂಚಜನ ರಾಕ್ಷಸನನ್ನು ಕೊಂದು ಪಾಂಚಜನ್ಯ ಶಂಖವನ್ನು ಪಡೆದದ್ದು ಇಲ್ಲೇ. ಆ

ಬೆಟ್ಟದ ತಪ್ಪಲು ಚಿತ್ರವಿಚಿತ್ರ. ಗುಹೆಗಳೂ ದೊಡ್ಡವು ಇವೆ. ಅಲ್ಲಿ ತಿರುಗಾಡಿ ಹುಡುಕಬೇಕು.

"ಮುಂದೆ ಅರವತ್ತು ಗಾವುದ ದೂರದಲ್ಲಿ ಕನಕಶೃಂಗಗಳ ತೇಜೋವಂತ ಪರ್ವತ, ವರಾಹ. ಅಲ್ಲಿ ಸಮುದ್ರ ಬಹಳ ಆಳ. ಆ ಪರ್ವತದ ಮೇಲೆ ಇದೆ ಸ್ವರ್ಣಮಯ ಪ್ರಾಗ್ಜ್ಯೋತಿಷಪುರ. ಅಲ್ಲಿ ನರಕಾಸುರ ಇದಾನೆ. ಬಲು ದುರಾತ್ಮ. ಆ ತಪ್ಪಲುಗಳಲ್ಲಿ ಗುಹೆಗಳಲ್ಲಿ ಹುಡುಕಿ.

"ಮುಂದೆ ಸಿಗುವುದು ಮೇಘದಂತ ಪರ್ವತ. ಅದರ ಕಲ್ಲು ಬಂಗಾರ. ಅಲ್ಲಿ ಹರಿಯುವ ಗಿರಿನದಿಗಳ ಬಣ್ಣ ಬಂಗಾರ. ಎಲ್ಲೆಲ್ಲೂ ಬಂಗಾರವೇ. ಅದರ ಸುತ್ತಲೂ ಕಾಡಾನೆ ಕಾಡುಹಂದಿ ಸಿಂಹ ಹುಲಿ ಸದಾ ಗರ್ಜಿಸುತ್ತವೆ. ತಮ್ಮ ಗರ್ಜನೆ ಕೇಳಿ ತಮಗೇ ಮದ ಏರಿ ಮತ್ತೆ ಗರ್ಜಿಸುತ್ತವೆ. ಆ ಪರ್ವತದಲ್ಲೇ ದೇವತೆಗಳು ಪಾಕಶಾಸನ ಹರಿಹಯ ದೇವೇಂದ್ರನಿಗೆ ರಾಜ್ಯಾಭಿಷೇಕ ಮಾಡಿದ್ದು. ಇಲ್ಲೇ.

"ಮಹೇಂದ್ರಪಾಲಿತ ಮೇಘದಂತ ಪರ್ವತದಿಂದ ಮುಂದಕ್ಕೆ ಹೋದರೆ ಬಾಲಸೂರ್ಯಕಾಂತಿಯಿಂದ ಜಾಜ್ವಲ್ಯಮಾನ ಆದ ಹೂತ ಸುವರ್ಣವೃಕ್ಷಗಳ ಪರ್ವತಶ್ರೇಣಿ ಒಂದು ಕಾಣುತ್ತದೆ. ಅರವತ್ತುಸಾವಿರ ಸುವರ್ಣಶೃಂಗಗಳು ಇವೆ ಅದರಲ್ಲಿ. ಆ ಬೆಟ್ಟಗಳ ನಡುವೆ ಸೌವರ್ಣ ಮೇರುಪರ್ವತ. ಹಿಂದೆ ಸೂರ್ಯ ಪ್ರಸನ್ನ ಆಗಿ ವರ ಕೊಟ್ಟ ಆ ಪರ್ವತಕ್ಕೆ. 'ನಿನ್ನ ತರುಲತಾ ಗುಲ್ಮಗಳು ಎಲ್ಲವೂ ಇತರ ವಸ್ತುಗಳೂ ಬಂಗಾರದಂತೆ ಬೆಳಗಲಿ. ಹಗಲೂ ಇರುಳೂ ಹಾಗೆ ಬೆಳಗಲಿ. ಇಲ್ಲಿ ವಾಸಮಾಡುವ ದೇವದಾನವಗಂಧರ್ವರು ಕೆಂಪಗೆ ಸುವರ್ಣಕಾಂತಿಯಿಂದ ಶೋಭಿಸಲಿ.' ವಾನರರೆ, ವಿಶ್ವೇದೇವತೆಗಳೂ ಮರುತ್ತುಗಳೂ ವಸುಗಳೂ ಇತರ ದೇವತೆಗಳೂ ದಿನವೂ ಸಂಜೆಗೆ ಇಲ್ಲಿಗೆ ಬಂದು ಸೂರ್ಯೋಪಸ್ಥಾನ ಮಾಡುತ್ತಾರೆ. ಅವರ ಪೂಜೆಯನ್ನು ಅಂಗೀಕರಿಸಿ ಅಸ್ತಗಿರಿಗೆ ಹೋಗಿ ಅದೃಶ್ಯ ಆಗುತ್ತಾನೆ. ಅಲ್ಲಿಗೆ ಅಲ್ಲಿಗೆ ಹತ್ತು ಸಾವಿರ ಗಾವುದ. ಒಂದೇ ಗಳಿಗೆಯಲ್ಲಿ ಇಷ್ಟು ದೂರ ಹೋಗುತ್ತಾನೆ ಸೂರ್ಯ.

"ಮೇರುಶೃಂಗದಲ್ಲಿ ಸೂರ್ಯನಂತೆ ಜಾಜ್ವಲ್ಯಮಾನ ಭವನ ಒಂದನ್ನು ಕಟ್ಟಿದಾನೆ ವಿಶ್ವಕರ್ಮ. ಅದರಲ್ಲಿ ಅನೇಕ ಉಪ್ಪರಿಗೆ. ಚಿತ್ರವಿಚಿತ್ರ ವೃಕ್ಷರಾಜಿ,

ನಾನಾವಿಧ ಪಕ್ಷಿಸಮೂಹ ಅಲ್ಲಿ. ಆ ಭವನ ಮಹಾರಮಣೀಯ. ಪಾಶಹಸ್ತ ವರುಣ ಅಲ್ಲಿ ಇದ್ದಾನೆ.

“ ಸಾವರ್ಣಿ ಮೇರುಪರ್ವತಕ್ಕೂ ಅಸ್ತಾಚಲಕ್ಕೂ ನಡುವೆ ಚಿತ್ರವರ್ಣದ ವೇದಿಕೆ ಇದೆ ಒಂದು. ಅದರ ನಡುವೆ ಹತ್ತು ಶಿಖರಗಳ ತಾಳೆಯ ಮರ. ಸುವರ್ಣಮಯ ಮರ. ಧರ್ಮಜ್ಞ, ತಪಸ್ಸಿನಿಂದ ಲೋಕಪೂಜ್ಯ, ಬ್ರಹ್ಮದೇವನಿಗೆ ಸಮಾನ ಆದ ಮೇರು ಸಾವರ್ಣಿ ಮಹರ್ಷಿ ಇರುವುದು ಅಲ್ಲೇ. ಸೂರ್ಯನ ಹಾಗೆ ಬೆಳಗುವ ಆ ಸಾವರ್ಣಿ ಮಹರ್ಷಿಗೆ ಸಾಷ್ಟಾಂಗ ನಮಸ್ಕಾರ ಮಾಡಿ. ಸೀತಾದೇವಿಯ ಸಮಾಚಾರವನ್ನು ಕೇಳಿ ಅವರಿಂದ ತಿಳಿದುಕೊಳ್ಳಿ. ಅಲ್ಲಿಯ ಹೊಳೆ ಕೊಳ ಎಲ್ಲವನ್ನೂ ಸುತ್ತಿನೋಡಿ. ಉದಯಪರ್ವತಕ್ಕೂ ಅಸ್ತಾಚಲಕ್ಕೂ ನಡುವೆ ಇರುವ ಈ ಎಲ್ಲ ಪ್ರದೇಶಗಳಿಗೂ ಬೆಳಕನ್ನು ನೀಡಿ ಸೂರ್ಯ ಅಸ್ತಾಚಲ ವನ್ನು ಸೇರುತ್ತಾನೆ.

“ ವಾನರೋತ್ತಮರೆ, ಇಲ್ಲಿಯವರೆಗೆ ನೀವು ಹೋಗಬಹುದು. ಮುಂದೆ ಸೂರ್ಯನ ಬೆಳಕು ಇಲ್ಲವೇ ಇಲ್ಲ. ಬರೀ ಕತ್ತಲೆ. ದಿಕ್ಕು ಗಡಿ ಯಾವುದೂ ತಿಳಿಯದು. ಏನು ಇದೆಯೋ ಅತ್ತ ಕಡೆಗೆ! ಅಸ್ತಾಚಲದವರೆಗೆ ಹೋಗಿ ಸೀತಾದೇವಿಯನ್ನು ಹುಡುಕಿ ಬನ್ನಿ. ಒಂದು ತಿಂಗಳು ಅವಧಿ. ತಿಂಗಳ ಒಳಗೆ ಹಿಂದಕ್ಕೆ ಬರಲಿಲ್ಲವೋ ಆಮೇಲೆ ಬಂದವರಿಗೆ ಮರಣದಂಡನೆ.

“ ಮಹಾಬಾಹು ಪೂಜ್ಯ ಸುಷೇಣ ನಿಮ್ಮ ಸಂಗಡ ಬರುತ್ತಾನೆ. ಆತ ಹೇಳಿದ ಹಾಗೆ ನೀವು ಕೇಳಬೇಕು. ಈ ಮಹಾಪರಾಕ್ರಮಿಯ ಹಿಂದೆ ಹೋಗಿ. ನೀವೂ ಪರಾಕ್ರಮಿಗಳೇ. ಆತನ ಅಪ್ಪಣೆಯಂತೆ ನಡೆದು ಸೀತಾನ್ವೇಷಣ ಮಾಡಿ ಬನ್ನಿ. ಆಕೆಯನ್ನು ಕಂಡು ಬಂದರೆ ರಾಮನಿಗೆ ನಾವು ಪ್ರತಿ ಉಪಕಾರ ಮಾಡಿದಂತೆ ಆಗುತ್ತದೆ. ನಾವು ಕೃತಾರ್ಥರು ಆಗುತ್ತೇವೆ.

“ ನಾನು ಹೇಳಿದುದು ಮಾತ್ರ ಅಲ್ಲ. ಈ ಕೆಲಸಕ್ಕೆ ಇನ್ನೂ ಏನು ಏನು ಮಾಡಬೇಕೋ ಎಲ್ಲವನ್ನೂ ಮಾಡಿ. ದೇಶಕಾಲ ಕಾರ್ಯಾಕಾರ್ಯ ಯೋಚನೆ ಮಾಡಿ ಕಾರ್ಯಸಾಧನೆ ಮಾಡಿ ” ಎಂದು ಹೇಳಿದ ಸುಗ್ರೀವ.

ಸುಷೇಣ ಇತರ ವಾನರವೀರರು ಸುಗ್ರೀವನಿಂದ ಬೀಳುಕೊಂಡು ಪಶ್ಚಿಮ ದಿಕ್ಕಿಗೆ ಹೊರಟರು.

೧೪

ಆಮೇಲೆ ಶತವಲಿಯನ್ನು ಕರೆದ ಸುಗ್ರೀವ. ಶ್ರೀರಾಮನಿಗೆ ಹಿತಕರ ತನಗೆ ಶ್ರೇಯಸ್ಕರ ಆಗಿ ಮಾತು ಆಡಿದ. "ವಾನರೋತ್ತಮ, ನಿನ್ನಹಾಗೆ ಭುಜಬಲ ಪರಾಕ್ರಮಶಾಲಿಗಳು ಆದ ಲಕ್ಷ ವಾನರರನ್ನು ಕರೆದುಕೊ. ನಿನ್ನ ಮಂತ್ರಿಗಳು ಯಮಪುತ್ರರನ್ನು ಕರೆದುಕೊ. ಉತ್ತರ ದಿಕ್ಕಿಗೆ ಹಿಮವತ್ ಪರ್ವತಶ್ರೇಣಿಗಳ ವರೆಗೂ ಹೋಗು. ರಾಮಪತ್ನಿ ಸೀತಾದೇವಿಯನ್ನು ಹುಡುಕಿಕೊಂಡು ಬಾ. ಕೆಲಸ ಎಂಥದೋ ಬಲ್ಲಿರಿ ನೀವು. ಈ ಕೆಲಸ ರಾಮನಿಗೆ ಸಂತೋಷ ಆಗುವಂತೆ ಮಾಡಿದರೆ ನಾವು ಎಲ್ಲರೂ ಋಣಮುಕ್ತರು ಆಗುತ್ತೇವೆ. ಕೃತಾರ್ಥರು ಆಗುತ್ತೇವೆ. ಮಹಾನುಭಾವ ಶ್ರೀರಾಮ. ಮೊದಲೇ ನಮಗೆ ಉಪಕಾರ ಮಾಡಿದಾನೆ. ಈತನಿಗೆ ನಾವು ಪ್ರತಿ ಉಪಕಾರ ಮಾಡಿದರೇನೇ ನಮ್ಮ ಜನ್ಮ ಸಾಫಲ್ಯ. ಯಾವ ಉಪಕಾರವನ್ನೂ ಮಾಡದೆ ಇದ್ದರೂ ಕಾರ್ಯಾರ್ಥಿ ಆಗಿ ಯಾರಾದರೂ ಬಂದು ಬೇಡಿದರೆ, ಅವರ ಕೆಲಸವನ್ನು ಮಾಡಿಕೊಟ್ಟರೇನೇ ನಮ್ಮ ಜನ್ಮ ಸಾರ್ಥಕ. ಮೊದಲೇ ನಮಗೆ ಉಪಕಾರ ಮಾಡಿದವರ ಕೆಲಸ ವನ್ನು ಮಾಡಿದರೆ ನಾವು ಎಷ್ಟು ಕೃತಾರ್ಥರೋ ಹೇಳಬೇಕೆ?

"ವಾನರವೀರರೆ, ಪರಪುರಂಜಯ ಈ ಪುರುಷೋತ್ತಮ ರಾಮ ಸಮಸ್ತ ಪ್ರಾಣಿಕೋಟಿಗೂ ಪೂಜ್ಯ. ನಮ್ಮ ಮೇಲೆ ಅಂತು ವಿಶೇಷ ಪ್ರೇಮ ಈತನಿಗೆ. ಆದ್ದರಿಂದ ಈತನ ಕೆಲಸವನ್ನು ನಾವು ಮಾಡಲೇಬೇಕು. ಅತಿ ಅಗತ್ಯ.

"ನೀವು ಉತ್ತರ ದಿಕ್ಕಿಗೆ ಹೊರಡಿ. ಅಲ್ಲಿಯ ವನದುರ್ಗ ನದಿ ಗುಡ್ಡ ಬೆಟ್ಟಗಳಲ್ಲಿ ಹುಡುಕಿ. ಬುದ್ಧಿಬಲವನ್ನೂ ಪರಾಕ್ರಮವನ್ನೂ ಉಪಯೋಗಿಸಿ. ಮ್ಲೇಚ್ಛ ಪುಳಿಂದ ಶೂರಸೇನ ಪ್ರಸ್ಥಲ ಇಂದ್ರಪ್ರಸ್ಥ ಮದ್ರ ಕಾಂಭೋಜ ಯವನ ಶಕದೇಶಗಳಲ್ಲಿ ಹುಡುಕಿ. ಭರತದೇಶಗಳಲ್ಲಿ ಹುಡುಕಿ. ದಕ್ಷಿಣ ಕುರುದೇಶದಲ್ಲಿ ನೋಡಿ. ಆರಟ್ಟಕ ಬಾಹ್ಲೀಕ ಋಷಿಕ ಪೌರವ ಟಂಕಣ ಚೀನ ಪರಮಚೀನ ವಿಹಾರದಂಡ ದೇಶದಲ್ಲಿ ಹುಡುಕಿ. ಹಿಮಾಲಯ ಪ್ರಾಂತಗಳಲ್ಲಿ ನೋಡಿ. ಅಲ್ಲಿಯ ಗಿರಿ ನದೀ ವನಗಳಲ್ಲಿ ಹುಡುಕಿ. ಅಲ್ಲಿ ಲೋಧ್ರಕ ಪದ್ಮಕ ದೇವದಾರು ವನಗಳು ಇವೆ. ಅಲ್ಲಿ ಸೀತಾದೇವಿ ಇದಾಳೋ ಏನೋ ನೋಡಿ. ರಾವಣನನ್ನು ಅಲ್ಲಿ ಹುಡುಕಿ.

" ಆಚೆ ಇರುವುದು ಸೋಮಾಶ್ರಮ. ದೇವಗಂಧರ್ವರ ನಿವಾಸ. ಅಲ್ಲಿಂದ ದೊಡ್ಡ ತಪ್ಪಲುಪ್ರದೇಶದ ಕಾಳಪರ್ವತ. ಅದರ ಗುಹೆಗಳು ಬಹು ವಿಶಾಲ. ಕಂದರಗಳೂ ಹೆಚ್ಚು. ಯಾವುದನ್ನೂ ಬಿಡದೆ ಹುಡುಕಿ. ಮಹಾಭಾಗ್ಯವತಿ ಸೀತಾದೇವಿಯನ್ನು ಹುಡುಕಬೇಕು. ಆ ಬೆಟ್ಟದಲ್ಲಿ ಬಂಗಾರ ಇದೆ.

" ಅಲ್ಲಿಂದ ಮುಂದೆ ಸುದರ್ಶನ ಪರ್ವತ. ಅದರ ತರುವಾಯ ದೇವಸಖ ಪರ್ವತ. ಅಲ್ಲಿ ಬಗೆಬಗೆಯ ಗಿಡ, ಬಗೆಬಗೆಯ ಹಕ್ಕಿ ಇವೆ. ಅಲ್ಲಿಯ ಅರಣ್ಯ, ಗಿರಿನದಿಗಳಲ್ಲಿ ಹುಡುಕಿ. ಅಲ್ಲಿಂದ ಮುಂದೆ ನೂರು ಗಾವುದ ಶೂನ್ಯಪ್ರದೇಶ. ಅಲ್ಲಿ ಗುಡ್ಡ ಬೆಟ್ಟ ನದಿ ಗಿಡ ಯಾವುದೂ ಇಲ್ಲ. ಯಾವ ಪ್ರಾಣಿಯೂ ಇಲ್ಲ. ಮೇಲೆ ಮುಗಿಲು, ಕೆಳಗೆ ನೆಲ. ಆ ಪ್ರದೇಶ ನಡುಕ ಹುಟ್ಟಿಸುತ್ತದೆ. ಬರೀ ಮರಳುಗಾಡು. ಅದನ್ನು ಬೇಗ ದಾಟಿ ಹೋಗಬೇಕು.

" ಮುಂದೆ ಬೆಳ್ಳಗೆ ಹೊಳೆಯುವ ಕೈಲಾಸ ಪರ್ವತ. ಕಣ್ಣಿಗೆ ಬಹಳ ಆಹ್ಲಾದಕರ ಅದು. ಅಲ್ಲಿ ಬಿಳಿಯ ಮೋಡಗಳಂತೆ ಬೆಳಗುವ ಒಂದು ಸುವರ್ಣ ಖಚಿತ ಭವನ ಇದೆ. ಕುಬೇರನದು. ವಿಶ್ವಕರ್ಮ ನಿರ್ಮಿಸಿದ್ದು. ಅಲ್ಲಿ ಒಂದು ದೊಡ್ಡ ಸರೋವರ ಇದೆ. ಅದರ ತುಂಬಾ ತಾವರೆ ಕನ್ನೈದಿಲೆ ಹೂಗಳು. ಸರೋವರದಲ್ಲಿ ಹಂಸಪಕ್ಷಿಗಳು ಕಾರಂಡವ ಪಕ್ಷಿಗಳು ವಿಹರಿಸುತ್ತವೆ. ಅಪ್ಸರರು ಗುಂಪು ಗುಂಪು ಆಗಿ ಅಲ್ಲಿ ತಿರುಗಾಡುತ್ತಾರೆ. ವಿಶ್ರವಸ್ಸಿನ ಮಗ ಯಕ್ಷರ ದೊರೆ ಕುಬೇರನ ನಿವಾಸ ಅದು. ಸಮಸ್ತ ಪ್ರಾಣಿಕೋಟಿಯೂ ಕುಬೇರನಿಗೆ ನಮಸ್ಕರಿಸುತ್ತದೆ. ಚಂದ್ರಕಾಂತಿಯಿಂದ ಬೆಳಗುವ ಆ ಪರ್ವತಶಿಖರಗಳಲ್ಲೂ ಅಲ್ಲಿಯ ಗುಹೆಗಳಲ್ಲೂ ಹುಡುಕಬೇಕು.

" ಆಚೆಗೆ ಕ್ರೌಂಚಪರ್ವತ. ಅದರಲ್ಲಿ ಒಂದು ದೊಡ್ಡ ಬಿಲ ಇದೆ. ಬಹಳ ಎಚ್ಚರಿಕೆಯಿಂದ ಮೈಮರೆವು ಇಲ್ಲದೆ ಹೋಗಬೇಕು ಆ ಬಿಲದ ಒಳಕ್ಕೆ. ಬಹಳ ಕಷ್ಟ. ಸಮಸ್ತ ದೇವತೆಗಳೂ ಪೂಜಿಸುವ ಮಹಾಮಹಿಮರು ಆದ ಕೆಲವರು ಮಹರ್ಷಿಗಳು ಸೂರ್ಯನಂತೆ ಬೆಳಗುತ್ತ ಇದ್ದಾರೆ ಅಲ್ಲಿ. ದೇವತಾಸ್ವರೂಪದವರು ಅವರು. ನೀವು ಆ ಕ್ರೌಂಚಪರ್ವತದ ಗುಹೆಗಳಲ್ಲೂ ತಪ್ಪಲುಗಳಲ್ಲೂ ಶಿಖರ ಗಳಲ್ಲೂ ಕಣಿವೆಗಳಲ್ಲೂ ಮಧ್ಯ ಪ್ರದೇಶದಲ್ಲೂ ತಿರುಗಾಡಿ ನೋಡಬೇಕು. ಆಮೇಲೆ ಗಿಡಮರಗಳೇ ಇಲ್ಲದ ಕಾಮಪರ್ವತ, ಎಲ್ಲ ಹಕ್ಕಿಗಳಿಗೂ ನೆಲೆ ಆದ ಮಾನಸಪರ್ವತವನ್ನೂ ಚೆನ್ನಾಗಿ ಸುತ್ತಿ ನೋಡಬೇಕು.

“ಆ ಮಾನಸಪರ್ವತಕ್ಕೆ ಸಾಮಾನ್ಯಪ್ರಾಣಿಗಳು ಇರಲಿ, ದೇವದಾನವರು ಕೂಡ ಹೋಗಲಾರರು. ಅದರ ತಪ್ಪಲಿನಲ್ಲಿ ಹಳ್ಳತಿಟ್ಟುಗಳಲ್ಲಿ ಹುಡುಕುವ ಸಾಹಸ ಮಾಡಬೇಕು. ಅದರ ತರುವಾಯ ಮೈನಾಕಪರ್ವತ. ಅಲ್ಲಿ ಮಯನ ಮನೆ. ಆ ಪರ್ವತದಲ್ಲಿ ಕುದುರೆಮುಖದ ಕಿಂಪುರುಷ ಸ್ತ್ರೀಯರು ವಾಸ ಇದಾರೆ. ಅದರ ತಪ್ಪಲು ಗುಹೆ ಕಂದರಗಳಲ್ಲಿ ಹುಡುಕಿ ನೋಡಿ.

“ಮುಂದೆ ಹೋದರೆ ಸಿದ್ಧಾಶ್ರಮ. ಅಲ್ಲಿ ವೈಖಾನಸರೂ ವಾಲಖಿಲ್ಯರೂ ತಪಸ್ಸುಮಾಡುತ್ತ ಇದಾರೆ. ತಪಸ್ಸಿದ್ಧಿಯಿಂದ ಅವರಿಗೆ ಅಷ್ಟೈಶ್ವರ್ಯ ಲಭಿಸಿದೆ. ಪರಿಶುದ್ಧರು ಅವರು. ಅವರಿಗೆ ನಮಸ್ಕಾರವನ್ನು ಮಾಡಿ ಸೀತಾದೇವಿಯ ಸಮಾಚಾರವನ್ನು ಕೇಳಿ ತಿಳಿದುಕೊಳ್ಳಿ. ಆಶ್ರಮದ ಹತ್ತಿರ ವೈಖಾನಸ ಸರೋವರ ಇದೆ. ಅದರಲ್ಲಿ ಸುವರ್ಣಕಮಲ ಇವೆ. ರಾಜಹಂಸಗಳು ಅಲ್ಲಿ ವಿಹರಿಸುತ್ತವೆ. ಉದಯಸೂರ್ಯನಂತೆ ಹೊಳೆಯುತ್ತದೆ ಆ ಸರೋವರ. ಕುಬೇರನ ಪಟ್ಟದ ಆನೆ ಸಾರ್ವಭೌಮ ದಿನವೂ ಹೆಣ್ಣು ಆನೆಗಳ ಜೊತೆಯಲ್ಲಿ ಅಲ್ಲಿಗೆ ಬರುತ್ತದೆ ವಿಹರಿಸಲು.

“ಅಲ್ಲಿಂದ ಆಚೆಗೆ ಸೂರ್ಯಚಂದ್ರರ ಸುಳಿವು ಇಲ್ಲ. ನಕ್ಷತ್ರಗಳು ಕಾಣಲಾರವು. ಮೇಘಸಂಚಾರ ಇಲ್ಲ. ಸದ್ದು ಸಪ್ಪಳ ಇಲ್ಲದೆ ಎಲ್ಲಾ ನಿಶ್ಶಬ್ದ. ಸೂರ್ಯಚಂದ್ರರ ಸಂಚಾರ ಇಲ್ಲದೆ ಇದ್ದರೂ ಅಲ್ಲಿ ಇರುವ ಸ್ವಯಂಪ್ರಕಾಶರೂ ದೇವಸಮಾನರೂ ಆದ ಮಹಾಯೋಗಿಗಳ ದೇಹಕಾಂತಿಯೇ ಅಲ್ಲಿ ಬೆಳಕನ್ನು ಬೀರುತ್ತದೆ.

“ಅತ್ತಕಡೆ ಇರುವುದು ಶೈಲೋದೆ. ಆ ನದಿಯ ಎರಡೂ ದಡಗಳಲ್ಲಿ ಬಿದಿರುಮೆಳೆ ಇದೆ. ದಟ್ಟ, ಎತ್ತರ ಆ ಮೆಳೆಗಳು. ಮೇಲೆ ಒಂದಕ್ಕೆ ಒಂದು ಜಡೆ ಹಾಕಿಕೊಂಡು ಸೇತುವೆ ಆಗಿದೆ. ಅಲ್ಲಿರುವ ತಪಸ್ವಿಗಳು ಆ ಸೇತುವೆಯ ಮೇಲೆಯೇ ಆ ಕಡೆಯಿಂದ ಈ ಕಡೆಗೆ ಬರುತ್ತಾರೆ. ಅತ್ತಣ ದಡವೇ ಪುಣ್ಯಾತ್ಮರ ನಿವಾಸ ಉತ್ತರಕುರು. ಅಲ್ಲಿ ಸಾವಿರಾರು ನದಿ ಹರಿಯುತ್ತವೆ. ಸುವರ್ಣದ ಕಮಲ, ನೀಲ ವೈಡೂರ್ಯ ಬಣ್ಣದ ತಾವರೆಬಳ್ಳಿ, ಸಮೃದ್ಧ ಜಲ ಬಲು ರಮ್ಯ. ಬಾಲಸೂರ್ಯಕಾಂತಿಯಿಂದ ಹೊಳೆಯುವ ಕೊಳಗಳು ಇವೆ. ಅದರಲ್ಲಿ ಕೆನ್ನೈದಿಲೆ ಹೂಗಳು. ಸುತ್ತಲೂ ನೀಲಮಣಿಯಂಥ ಎಲೆಗಳು. ಚಿನ್ನದ ಕೇಸರಗಳ ಚಿತ್ರವಿಚಿತ್ರ ನೀಲೋತ್ಪಲಗಳು. ನದೀತೀರದಲ್ಲಿ ಮರಳುದಿಣ್ಣೆಗಳ ತುಂಬಾ

ಬೆಲೆಬಾಳುವ ಮುತ್ತುರತ್ನ. ಬಂಗಾರದ ಪುಡಿ ಜೇರೆ. ಮುತ್ತುರತ್ನಗಳ ದಿಣ್ಣೆ ಇದ್ದ ಹಾಗೆ ಕಾಣುತ್ತದೆ. ನದಿಗಳ ನಡುವೆ ಬೆಂಕಿಯಂತೆ ಹೊಳೆಯುವ ಬಂಗಾರದ ಬೆಟ್ಟಗಳು ರತ್ನಖಚಿತ ಆಗಿ ವಿಚಿತ್ರ ವರ್ಣದಿಂದ ಶೋಭಿಸುವ ಪರ್ವತಗಳು ಇವೆ. ಅಲ್ಲಿಯ ಗಿಡಮರಗಳಲ್ಲಿ ಹೂ ಹಣ್ಣು ಬಿಡುವ ಕಾಲ ಎಂಬುದು ಇಲ್ಲ. ಸದಾಕಾಲವೂ ಹೂವೇ, ಹಣ್ಣೇ. ಆ ಗಿಡಗಳ ತುಂಬ ಹಕ್ಕಿಗಳು. ಬಗೆಬಗೆ. ಅಲ್ಲಿ ಬೀಸುವ ಗಾಳಿ ಎಷ್ಟು ಸುವಾಸನೆ. ಇನ್ನೂ ಬೇರೆ ಗಿಡ ಇವೆ ಅಲ್ಲಿ. ಬಯಸಿದ್ದನ್ನು ಕೊಡುವಂಥವು. ಬಟ್ಟೆ ಕೇಳಿದರೆ ಬಟ್ಟೆ ಕೊಡುತ್ತವೆ. ಗಂಡಸರಿಗೂ ಹೆಂಗಸರಿಗೂ ಅವರವರಿಗೆ ತಕ್ಕ ಮುತ್ತಿನ ಒಡವೆ ವೈಡೂರ್ಯದ ತೊಡವು ಕೊಡುತ್ತವೆ. ಚಿತ್ರತರ ಸುವರ್ಣಾಸ್ತರಣಗಳನ್ನು ಕೊಡುತ್ತವೆ ಕೆಲವು ಗಿಡ. ಮನೋಹರ ಹೂಮಾಲೆಗಳನ್ನೂ ಅತ್ಯುತ್ತಮ ಪಾನೀಯಗಳನ್ನೂ ಕೊಡುವವು ಕೆಲವು. ಕೆಲವು ಭಕ್ಷ್ಯಭೋಜ್ಯಗಳನ್ನು ಕೊಡುತ್ತವೆ. ಗುಣವತಿಯರೂ ರೂಪಯೌವನಸಂಪನ್ನೆಯರೂ ಆದ ಗಂಧರ್ವ ಚೆಲುವೆಯರನ್ನು ಕೊಡುತ್ತವೆ ಕೆಲವು.

"ಗಂಧರ್ವರೂ ಕಿನ್ನರಕಿಂಪುರುಷರೂ ನಾಗವಿದ್ಯಾಧರರೂ ತಮ್ಮ ತಮ್ಮ ನಲ್ಲೆಯರ ಜೊತೆಯಲ್ಲಿ ವಿಹರಿಸುತ್ತ ಸೂರ್ಯನಂತೆ ಬೆಳಗುತ್ತಾರೆ. ಎಲ್ಲರೂ ಪುಣ್ಯಕರ್ಮ ಮಾಡಿದವರೇ ಅಲ್ಲಿ ಇರುವವರು. ವಿವಿಧ ಕ್ರೀಡಾಸಕ್ತರು. ಕಾಮ ಅರ್ಥಸಹಿತರು. ಹಗಲೂ ಇರುಳೂ ಗೀತವಾದ್ಯಧ್ವನಿ, ಅಟ್ಟಹಾಸದ ನಗೆಯ ಧ್ವನಿ ಕೇಳಿಸುತ್ತ ಮನಸೆಳೆಯುತ್ತದೆ. ಅಲ್ಲಿ ಸಂತೋಷ ಇಲ್ಲದವರೇ ಇಲ್ಲ. ನಲ್ಲೆ ಇಲ್ಲದ ಒಂಟಿಗ ಯಾರೂ ಇಲ್ಲ. ಆ ಸುಖ ಆ ಉಲ್ಲಾಸ ಎಲ್ಲಾ ದಿನದಿನಕ್ಕೆ ಹೆಚ್ಚುತ್ತವೆ.

"ಅದನ್ನು ದಾಟಿದರೆ ಸಿಗುವುದು ಉತ್ತರಸಮುದ್ರ. ಅದರ ನಡುವೆ ಸೋಮಗಿರಿ. ಅದು ಎಲ್ಲರಿಗೂ ಕಾಣದು. ವಿಷ್ಣುಲೋಕ ಬ್ರಹ್ಮಲೋಕ ಇಂದ್ರಲೋಕಗಳವರಿಗೆ ಮಾತ್ರ ಕಾಣುತ್ತದೆ. ಅಲ್ಲಿ ಸೂರ್ಯನ ಬೆಳಕು ಇಲ್ಲ. ಆ ಪರ್ವತದ ಕಾಂತಿಯೆ ಅಷ್ಟು ಬೆಳಕನ್ನು ಬೀರುತ್ತದೆ. ಅಲ್ಲೇ ವಿಶ್ವಾತ್ಮ ವಿಷ್ಣು, ಏಕಾದಶಾತ್ಮಕ ಶಂಭು, ದೇವೇಶ ಬ್ರಹ್ಮ ಇರುವುದು. ಅವರ ಸೇವೆ ಮಾಡುತ್ತ ಅನೇಕರು ಬ್ರಹ್ಮಋಷಿಗಳು ಇದ್ದಾರೆ. ಉತ್ತರಕುರುವೆ ನಿಮಗೆ ಗಡಿ. ಅಲ್ಲಿಂದಾಚೆ ಯಾರೂ ಹೋಗಲಾರರು. ವಿಶೇಷ ಶಕ್ತಿವಂತರು ದೇವದಾನವರೂ ಹೋಗಲಾರರು.

“ಆ ಗಿರಿಯನ್ನು ನೋಡಿ ಹಿಂತಿರುಗಿ ಬಿಡಿ. ಅದರ ಆಚೆಗೆ ಏನು ಇದೆಯೋ ಯಾರಿಗೂ ತಿಳಿಯದು. ಅಲ್ಲಿ ನಗರ ಗ್ರಾಮವಿಭಾಗಗಳು ಗಡಿಗಳು ಇಲ್ಲ.”

“ನಾನು ಹೇಳಿದ ಸ್ಥಳಗಳಲ್ಲಿ ಎಲ್ಲಾ ಚೆನ್ನಾಗಿ ಹುಡುಕಬೇಕು. ನಾನು ಹೇಳದೆ ಬಿಟ್ಟ ಸ್ಥಳಗಳಲ್ಲೂ ಹುಡುಕಿ. ನಿಮ್ಮ ತೇಜಸ್ಸು ವೇಗ ಬೆಂಕಿಗೂ ಗಾಳಿಗೂ ಸಮಾನ. ವಾನರರೆ, ನಿಮ್ಮ ಶಕ್ತಿಮೀರಿ ಸಾಹಸ ಮಾಡಬೇಕು. ಸೀತಾದೇವಿಯನ್ನು ಕಂಡು ಬಂದರೆ ರಾಮಪ್ರಭುವಿಗೆ ಸಂತೋಷ ಆಗುತ್ತದೆ. ಆತನಿಗಿಂತಲೂ ಹೆಚ್ಚು ಸಂತೋಷ ನನಗೆ ಆಗುತ್ತದೆ.

“ಕೆಲಸಮಾಡಿಕೊಂಡು ಬಂದಿರೋ, ನಿಮಗೂ ನಿಮ್ಮ ಬಂಧುಗಳಿಗೂ ಪೂಜೆ ಸನ್ಮಾನ ಸಲ್ಲಿಸುತ್ತೇನೆ. ನಿಮಗೆ ಶತ್ರುಭಯ ಇಲ್ಲದಂತೆ ಮಾಡುತ್ತೇನೆ. ನೀವು ಬಯಸಿದಂತೆ ಸುಖದಿಂದ ನಿಮ್ಮ ನಲ್ಲೆಯರ ಒಡನೆ ಇಡೀ ಭೂಮಂಡಲವನ್ನೇ ಸುತ್ತುತ್ತ ಇರಬಹುದು.”

೧೫

ನಾಲ್ಕು ದಿಕ್ಕಿಗೆ ಅಸಂಖ್ಯ ವಾನರರನ್ನು ಕಳಿಸಿದ ಸುಗ್ರೀವ. ಆದರೆ ಸೀತೆಯನ್ನು ಹುಡುಕುವ ಕೆಲಸ ಆಗಬೇಕು ಎಂದರೆ ಹನುಮಂತನಿಗೇ ಸಾಧ್ಯ ಎಂಬ ನಂಬಿಕೆ ಸುಗ್ರೀವನಿಗೆ. ಅವನಿಗೇ ಹೊರಿಸಬೇಕು ಈ ಭಾರ ಎಂದುಕೊಂಡ. ಹನುಮಂತ ಮಹಾಪರಾಕ್ರಮಿ, ವಾಯುಸೂನು. ಅವನಿಗೆ ಹೇಳಿದ:

“ವಾಯುಪುತ್ರ, ನೆಲದಲ್ಲಿ ಮುಗಿಲಿನಲ್ಲಿ ಆಕಾಶದಲ್ಲಿ ಸ್ವರ್ಗದಲ್ಲಿ ನೀರಿನಲ್ಲಿ ನೀನು ಹೋಗಬಲ್ಲೆ. ನಿನ್ನನ್ನು ತಡೆಯಬಲ್ಲವರು ಯಾರೂ ಇಲ್ಲ. ದೈತ್ಯಲೋಕ ಗಂಧರ್ವಲೋಕ ನಾಗಲೋಕ ನರಲೋಕ ಸುರಲೋಕ ಮುಂತಾದ ಎಲ್ಲ ಲೋಕಗಳೂ ನಿನಗೆ ಗುರುತು. ವೇಗದಲ್ಲಿ ಲಾಘವದಲ್ಲಿ ನೀನು ನಿಮ್ಮ ತಂದೆ ವಾಯುದೇವನಿಗೆ ಸಮ. ತೇಜದಲ್ಲೂ ಅಷ್ಟೇ. ಪರಾಕ್ರಮದಲ್ಲಿ ನಿನ್ನನ್ನು ಮೀರಿಸಿದ ಪ್ರಾಣಿ ಈ ಭೂಮಿಯಲ್ಲಿ ಇಲ್ಲ. ಆದ್ದರಿಂದ ಸೀತಾಲಾಭದ ಸರ್ವ ಪ್ರಯತ್ನವೂ ನಿನಗೇ ಸೇರಿದ್ದು.

"ಹನುಮಂತ, ನಿನಗೆ ತಿಳಿಯದ ನೀತಿ ಇಲ್ಲ. ಬುದ್ಧಿಶಕ್ತಿ ದೇಹಶಕ್ತಿ ಪರಾಕ್ರಮ ದೇಶಕಾಲಾನುಸರಣ ನ್ಯಾಯ ನೀತಿ ಎಲ್ಲವೂ ಇರುವುದು ನಿನ್ನಲ್ಲಿ ಒಬ್ಬನಲ್ಲಿಯೇ. ಆದ್ದರಿಂದ ಸೀತಾನ್ವೇಷಣಕಾರ್ಯವನ್ನು ಸಫಲಗೊಳಿಸಬಲ್ಲವನು ನೀನೇ."

ಕಾರ್ಯಸಾಧನೆಯ ಸಮಸ್ತ ಸಾಮರ್ಥ್ಯವೂ ಇದೆ ಹನುಮಂತನಿಗೆ ಎಂದು ನಂಬಿ ಸುಗ್ರೀವ ಅವನಿಗೆ ಹೇಳಿದುದನ್ನು ರಾಮನೂ ಕೇಳಿದ. ಮನಸಿನ ಒಳಗೇ ಆಲೋಚಿಸಿಕೊಂಡ. ಎಲ್ಲ ರೀತಿಗಳಲ್ಲೂ ಕಾರ್ಯಸಾಧನಸಮರ್ಥ ಇವನೇ ಎಂದು ಸುಗ್ರೀವ ನಿರ್ಧರಿಸಿದಾನೆ. ಸುಗ್ರೀವನಿಗೆ ಗೊತ್ತು ಇವನ ಸಾಮರ್ಥ್ಯ. ಈಗಾಗಲೇ ಎಷ್ಟೋ ಮಹಾಕಾರ್ಯಗಳನ್ನು ಸಾಧಿಸಿದ್ದರಿಂದಲೇ ಇವನಲ್ಲಿ ಎಲ್ಲರಿಗೂ ಇಷ್ಟು ನಂಬಿಕೆ. ಸುಗ್ರೀವನಿಗೂ ಇವನಿಂದ ಈ ಕೆಲಸ ಆಗುತ್ತದೆ ಎಂಬ ನಂಬಿಕೆ ಇದೆ. ತಾನು ದೊರೆ ಆದರೂ ಇವನಿಗೆ ಇಷ್ಟು ಗೌರವ ತೋರಿಸಲು ಇದೇ ಕಾರಣ. ಈ ಕಾರ್ಯಸಿದ್ಧಿಗೆ ಇವನೇ ತಕ್ಕವನು ಎಂದು ನಿರ್ಧರಿಸಿಕೊಂಡ.

ಹನುಮಂತ ಮಹಾತೇಜೋಶಾಲಿ, ಬುದ್ಧಿವಂತ, ಕಾರ್ಯಸಾಧನಸಮರ್ಥ ಎನಿಸಿತು ರಾಮನಿಗೆ. ಅವನನ್ನು ನೋಡಿ ತಾನು ಕೃತಾರ್ಥ ಆದಂತೆ ತಿಳಿದ. ಸಂತೋಷ ಉಕ್ಕಿ ತುಳುಕಿತು. ಆ ಪರಂತಪ ಹನುಮಂತನನ್ನು ಕರೆದ. ತನ್ನ ಕೈಯಲ್ಲಿ ಇದ್ದ ಉಂಗುರವನ್ನು ತೆಗೆದ. ಅದರಲ್ಲಿ ರಾಮನ ಹೆಸರು ಇತ್ತು. ಸಂತೋಷದಿಂದ ಆ ಉಂಗುರವನ್ನು ಹನುಮಂತನ ಕೈಗೆ ಕೊಟ್ಟು ಹೇಳಿದ: "ಹನುಮಂತ, ಜನಕನಂದಿನಿಗೆ ಈ ಉಂಗುರವನ್ನು ತೋರಿಸು. ಇದನ್ನು ತೋರಿಸಿದರೆ ನೀನೋ ಯಾರೋ ಏನೋ ಎಂಬ ಸಂಶಯ ಭಯ ಇರದು. ನನ್ನ ಕಡೆಯವನೇ ನೀನು ಎಂಬ ನಂಬಿಕೆ ಹುಟ್ಟುತ್ತದೆ ಆಕೆಗೆ. ವೀರವರ, ನಿನ್ನ ಮಹೋತ್ಸಾಹ ನಿನ್ನ ಬಲ ನಿನ್ನ ಪರಾಕ್ರಮ ಸುಗ್ರೀವ ಇದುವರೆಗೆ ನಿನಗೆ ಹೇಳಿದ ಮಾತು ಎಲ್ಲವನ್ನೂ ನೋಡಿದರೆ ನಿನ್ನಿಂದ ನನ್ನ ಕೆಲಸ ಆಗುತ್ತದೆ ಎನಿಸುತ್ತದೆ" ಎಂದ.

ಶ್ರೀರಾಮ ಕೊಟ್ಟ ಆ ಉಂಗುರವನ್ನು ಹನುಮಂತ ತೆಗೆದುಕೊಂಡು ವಿನಯದಿಂದ ತನ್ನ ತಲೆಯ ಮೇಲೆ ಇಟ್ಟುಕೊಂಡ. ರಾಮನ ಪಾದಗಳಿಗೆ ಪ್ರಣಾಮ ಮಾಡಿ ಪಯಣ ಆದ. ವಾಯುಸುತ ಹನುಮಂತ ಹೊರಟನೋ

ಇಲ್ಲವೋ ವಾನರಸೇನೆ ಎಲ್ಲವೂ ಅವನ ಹಿಂದೆ ಹೊರಟಿತು. ಮೋಡ ಇಲ್ಲದ ಆಕಾಶದಲ್ಲಿ ಚುಕ್ಕೆಗಳ ನಡುವೆ ಚಂದ್ರಮನಂತೆ ಹೊಳೆಯುತ್ತಿದ್ದ ಹನುಮಂತ ಆ ವಾನರಸೇನೆಯ ನಡುವೆ.

ಶ್ರೀರಾಮ ಹನುಮಂತನನ್ನು ಕರೆದು ಹೇಳಿದ: "ಹನುಮಂತ, ನೀನು ಮಹಾಬಲಾಢ್ಯ. ಸಿಂಹಪರಾಕ್ರಮಿ. ನಿನ್ನ ಬಲವನ್ನೇ ನಂಬಿಕೊಂಡು ಇದೇನೆ ನಾನು. ಸೀತೆಯನ್ನು ಹುಡುಕಿಬರಲು ಏನು ಪ್ರಯತ್ನಮಾಡಬೇಕೋ ಸಮಸ್ತ ವನ್ನೂ ಮಾಡು."

೧೬

ನಿಷ್ಪಕ್ಷಪಾತ ಆಗಿ ಎಲ್ಲರಿಗೂ ಒಂದೇ ಅಪ್ಪಣೆ ಮಾಡಬೇಕು ಎಂದು ಸುಗ್ರೀವ ವಾನರರ ದಂಡು ಎಲ್ಲವನ್ನೂ ಒಟ್ಟು ಆಗಿ ಕರೆಸಿದ. "ವಾನರವೀರರೆ, ನಿಮ್ಮಲ್ಲಿ ಯಾರುಯಾರಿಗೆ ಯಾವಯಾವ ದಿಕ್ಕಿನಲ್ಲಿ ಹೇಗೆ ಹೇಗೆ ಹುಡುಕಬೇಕು ಎಂದು ಹೇಳಿದೇನೋ ಹಾಗೆ ಹಾಗೆ ಅದೇ ಕ್ರಮದಲ್ಲಿ ಕೆಲಸ ಸಾಗಬೇಕು."

ಸುಗ್ರೀವ ಚಂಡಶಾಸನ. ಅವನದು ಉಗ್ರ ಆಜ್ಞೆ. ವಾನರವೀರರು ಎಲ್ಲರೂ ಅದನ್ನು ಕೇಳಿ ಹೊರಟರು. ಮಿಡತೆಯ ದಂಡಿನಂತೆ ಲೆಕ್ಕ ಇಲ್ಲದ ಈ ಸೇನೆ ಭೂಮಿ ಎಲ್ಲವನ್ನೂ ಆವರಿಸಿತು.

ಶತವಲಿ ಹಿಮವತ್ ಪರ್ವತದ ಉತ್ತರ ದಿಕ್ಕಿಗೆ ಪಯಣ ಆದ. ಮಹಾ ಯೂಥಪತಿ ವಿನತ ಪೂರ್ವ ದಿಕ್ಕಿಗೆ ಹೊರಟ. ಅಂಗದ ತಾರ ಮುಂತಾದ ವಾನರವೀರರ ಸಮೇತ ದಕ್ಷಿಣ ದಿಕ್ಕಿಗೆ ಹೊರಟ ಹನುಮಂತ. ವರುಣಪಾಲಿತ ಪಶ್ಚಿಮ ದಿಕ್ಕಿಗೆ ಹೊರಟ ವಾನರೋತ್ತಮ ಸುಷೇಣ. ಆಗ ಸುಗ್ರೀವನಿಗೆ ಸಮಾಧಾನ ಆಯಿತು.

ಸುಗ್ರೀವನ ಅಪ್ಪಣೆಯಂತೆ ಹೊರಟ ವಾನರರಿಗೆ ಎಲ್ಲರಿಗೂ ಬಹಳ ಹುರುಪು. "ರಾವಣಾಸುರನನ್ನು ನಾವೇ ಕೊಲ್ಲುತ್ತೇವೆ. ಸೀತಾದೇವಿಯನ್ನು ತಂದು ಬಿಡುತ್ತೇವೆ" ಎಂದು ಒಬ್ಬರಿಗಿಂತ ಒಬ್ಬರು ಹೆಮ್ಮೆಯ ಮಾತನ್ನು ಆಡಿದರು. ಒಬ್ಬರಿಗಿಂತ ಹೆಚ್ಚಿನ ವೀರಗರ್ಜನೆ ಇನ್ನೊಬ್ಬರದು. ಗುಂಪಿಗೆ ಗುಂಪೇ ಸಿಂಹನಾದ ಮಾಡಿತು. ಒಂದು ಗುಂಪಿಗಿಂತ ಇನ್ನೊಂದು ಹೆಚ್ಚು ವೇಗದಿಂದ ಓಡಿತು. ಕೋಲಾಹಲವೋ ಕೋಲಾಹಲ.

"ಯುದ್ಧಕ್ಕೆ ನಿಲ್ಲಲಿ ಆ ರಾವಣ. ನಾನು ಒಬ್ಬನೇ ಸಾಕು. ಕೊಂದು ಹಾಕಿ ಬಿಡುತ್ತೇನೆ" ಎಂದ ಒಬ್ಬ. ಇನ್ನೊಬ್ಬನಿಗೆ ಹುರುಪು ಆಯಿತು. "ನೀವು ಯಾರೂ ಬರಬೇಡಿ. ಇಲ್ಲೇ ನಿಂತುಬಿಡಿ. ನಾನು ಒಬ್ಬನೇ ಹೋಗಿ ರಾವಣನನ್ನೂ ಕೊಲ್ಲುತ್ತೇನೆ, ಅವನ ಮುಂದೆ ಸಂಕಟದಿಂದ ನಡುಗುವ ಸೀತಾದೇವಿಯನ್ನೂ ತಂದು ಒಪ್ಪಿಸುತ್ತೇನೆ" ಎಂದ. "ಸೀತಾದೇವಿ ಪಾತಾಳ ಲೋಕದಲ್ಲಿ ಇದ್ದರೂ ತರಬಲ್ಲೆ ನಾನು ಒಬ್ಬನೇ" ಎಂದ ಮತ್ತೆ ಒಬ್ಬ. ಇನ್ನೂ ಒಬ್ಬ ಎದ್ದ. "ಎಂಥ ಗಿಡಮರಗಳನ್ನು ಆದರೂ ಮುರಿದುಹಾಕಿಬಿಡಬಲ್ಲೆ. ಕಿತ್ತು ಎಸೆಯಬಲ್ಲೆ. ಎಂಥ ದೊಡ್ಡ ಬೆಟ್ಟಗಳನ್ನು ಆದರೂ ಉರುಳಿಸಬಲ್ಲೆ ನಾನು. ಭೂಮಿಯನ್ನು ಸೀಳಿಬಿಡುತ್ತೇನೆ. ಸಮುದ್ರವನ್ನು ಬತ್ತಿಸಿಬಿಡುತ್ತೇನೆ. ಒಬ್ಬನೇ ತರಬಲ್ಲೆ ಸೀತಾದೇವಿಯನ್ನು" ಎಂದ.

ಪ್ರತಿ ಒಬ್ಬರೂ ತಮ್ಮ ತಮ್ಮ ಪ್ರತಾಪವನ್ನು ಕೊಚ್ಚಿಕೊಳ್ಳಲು ಮೊದಲು ಇಟ್ಟರು. "ನಾನು ಗಾವುದ ದೂರ ಹಾರಬಲ್ಲೆ" ಎಂದ ಒಬ್ಬ. ಮತ್ತೆ ಒಬ್ಬ "ನಾನು ನೂರು ಯೋಜನ ಹಾರುತ್ತೇನೆ" ಎಂದ. "ನೂರು ಯೋಜನಕ್ಕೂ ದೂರ ಹಾರಬಲ್ಲೆ ನಾನು" ಎಂದು ಇನ್ನು ಒಬ್ಬ. "ನನ್ನನ್ನು ಯಾರೂ ತಡೆಯ ಲಾರರು. ನೆಲದ ಮೇಲೆ ಆಗಲಿ ಬೆಟ್ಟಗಳ ಮೇಲೆ ಆಗಲಿ ಕಡಲಿನಲ್ಲಿ ಆಗಲಿ ಪಾತಾಳದಲ್ಲೇ ಆಗಲಿ ನಿರಾತಂಕ ನನಗೆ" ಎಂದ ಇನ್ನೂ ಒಬ್ಬ.

ವಾನರರು ಬಲಗರ್ವಿತರು. ಸುಗ್ರೀವನ ಕಿವಿಗೆ ಬೀಳುವಂತೆ ಎಲ್ಲರೂ ತಮ್ಮ ಪ್ರತಾಪ ಕೊಚ್ಚಿಕೊಂಡು ಮುಂದೆ ಸಾಗಿದರು.

೧೭

ಎಲ್ಲರೂ ಹೊರಟುಹೋದರು.

ರಾಮ ಸುಗ್ರೀವನನ್ನು ನೋಡಿದ. "ವಾನರೇಶ್ವರ, ಈ ಭೂಮಂಡಲ ಎಲ್ಲವನ್ನೂ ನೀನು ಹೇಗೆ ಬಲ್ಲೆ?" ಎಂದು ಕೇಳಿದ.

ವಿನಯದಿಂದ ಸುಗ್ರೀವ ಕೈಜೋಡಿಸಿಕೊಂಡ. "ಪುರುಷೋತ್ತಮ, ಕೇಳು. ವಿಸ್ತಾರ ಆಗಿ ಹೇಳುತ್ತೇನೆ ನನ್ನ ಕಥೆಯನ್ನು. ನಮ್ಮ ಅಣ್ಣ ವಾಲಿ ದುಂದುಭಿ ರಾಕ್ಷಸನ ಸಂಗಡ ಯುದ್ಧಮಾಡಿದ ಕಥೆಯನ್ನು ಹೇಳಿ ಇದೇನೆ.

ದುಂದುಭಿ ಮಹಿಷಾಕಾರದಿಂದ ಬಂದ. ಮಲಯ ಪರ್ವತದ ಗುಹೆಗೆ ಓಡಿ ಹೋದ ಆ ರಾಕ್ಷಸ ವಾಲಿಯ ಹೊಡೆತವನ್ನು ತಡೆಯಲಾರದೆ. ನನ್ನನ್ನು ಬಾಗಿಲಿನಲ್ಲಿ ಕಾವಲು ನಿಲ್ಲಿಸಿ ವಾಲಿ ಒಳಕ್ಕೆ ಹೋದ. ಒಂದು ವರ್ಷ ಆದರೂ ವಾಲಿ ಹಿಂದಕ್ಕೆ ಬರಲಿಲ್ಲ. ಒಳಗಿನಿಂದ ರಕ್ತದ ಪ್ರವಾಹ ಬಂತು. ನೆತ್ತರಿನಿಂದ ತುಂಬಿತು ಬಿಲ. ಅಣ್ಣ ಹತ ಆದ ಎಂಬ ಸಂಕಟದಿಂದ ನಾನು ಬಿಲದ ಬಾಗಿಲಿಗೆ ಬೆಟ್ಟದಂಥ ಬಂಡೆ ಒಂದನ್ನು ಅಡ್ಡ ಇಟ್ಟೆ. ದುಂದುಭಿ ಬರದೆ ಇರಲಿ ಎಂದು. ವಿಷ ಕುಡಿದ ಹಾಗೆ ಆಯಿತು ನನ್ನ ಸ್ಥಿತಿ.

"ಕಿಷ್ಕಂಧೆಗೆ ಹಿಂದಕ್ಕೆ ಬಂದೆ. ದೊಡ್ಡ ವಾನರರಾಜ್ಯ, ತಾರೆ ರುಮೆ, ಹಾಯಿ ಆಗಿ ಇದ್ದುಬಿಟ್ಟೆ.

"ಕೆಲವು ದಿನಗಳ ತರುವಾಯ ಆ ರಾಕ್ಷಸನನ್ನು ಕೊಂದು ವಾಲಿ ಹಿಂದಕ್ಕೆ ಬಂದ. ನನಗೆ ಒಂದು ಕಡೆ ಭಯ, ಒಂದು ಕಡೆ ಆಶ್ಚರ್ಯ. ಆದರೆ ವಿನಯದಿಂದ ಕೂಡಲೇ ವಾನರರಾಜ್ಯವನ್ನು ಅಣ್ಣನಿಗೆ ಒಪ್ಪಿಸಿದೆ. ವಾಲಿ ದುಷ್ಟ. ನನ್ನ ಮೇಲೆ ಸಿಟ್ಟುಮಾಡಿಕೊಂಡು ನನ್ನನ್ನು ಕೊಲ್ಲಲು ನೋಡಿದ. ನನಗೆ ಇದು ತಿಳಿಯಿತು. ನನ್ನ ಮಂತ್ರಿಗಳ ಸಮೇತ ನಾನು ಓಡಿಹೋದೆ. ವಾಲಿ ನನ್ನನ್ನು ಬೆನ್ನಟ್ಟ ಬಂದ. ವಾಲಿಯ ಭಯಕ್ಕೆ ನಾನು ಸಮಸ್ತ ಭೂಮಿಯನ್ನೂ ಒಂದು ಗೋವಿನ ಹೆಜ್ಜೆಯಂತೆ ದಾಟುತ್ತ ಕೊಳ್ಳಿಯ ಚಕ್ರದಂತೆ ತಿರುಗಾಡಿದೆ. ಆಗ ಎಷ್ಟು ನಗರಗಳನ್ನು ನೋಡಿದೆನೋ ಕಾಡುಗಳನ್ನು ಸುತ್ತಿದೆನೋ. ನನ್ನ ಹಿಂದೆಯೇ ಬೆನ್ನಟ್ಟಿ ವಾಲಿಯೂ ಬಂದ.

"ಪೂರ್ವ ದಿಕ್ಕಿಗೆ ಓಡಿಹೋದೆ, ಪ್ರಭು. ಅಲ್ಲಿಯ ನಾನಾ ಅರಣ್ಯಗಳನ್ನೂ ಪರ್ವತಗಳನ್ನೂ ನೋಡಿದೆ. ಮನಸೆಳೆವ ನದೀಸರೋವರಗಳನ್ನೂ ನೋಡಿದೆ. ದ್ವೀಪಗಳನ್ನೂ ದಾಟಿದೆ. ಉದಯಪರ್ವತದವರೆಗೂ ಹೋದೆ. ಧಾತುಗಳಿಂದ ಜಗಜಗಿಸುತ್ತ ಇದ್ದ ಆ ಪರ್ವತವನ್ನೂ ನೋಡಿದೆ. ಅಲ್ಲಿಂದ ಮುಂದೆ ಅಪ್ಸರೆಯರ ಠಾವು ಆದ ಹಾಲ್ಗಡಲನ್ನು ನೋಡಿದೆ.

"ಅಲ್ಲಿಗೂ ಬಂದ ವಾಲಿ. ಅಲ್ಲಿಂದ ಅವನಿಗೆ ತಿಳಿಯದಂತೆ ದಕ್ಷಿಣಕ್ಕೆ ಓಡಿದೆ. ವಿಂಧ್ಯ ಪರ್ವತಕ್ಕೆ ಬಂದೆ. ನಾನು ಹಾಗೆ ತಪ್ಪಿಸಿ ಬಂದೆ ಎಂದು ಅವನಿಗೆ ಪೂರಾ ಸಿಟ್ಟುಬಂತು. ಅಲ್ಲಿಗೂ ಬಂದ. ಅಲ್ಲಿಯ ಚಂದನವನಕ್ಕೆ ಹೋದೆ. ಅಲ್ಲಿಗೂ ಬಂದ ವಾಲಿ. ಪಶ್ಚಿಮ ದಿಕ್ಕಿಗೆ ತಿರುಗಿದೆ. ಅಲ್ಲಿ ಅನೇಕ

ದೇಶಗಳನ್ನು ನೋಡಿ ಅಸ್ತಾಚಲಕ್ಕೆ ಬಂದೆ. ಅಲ್ಲಿಗೂ ಬಂದ ವಾಲಿ. ಅಲ್ಲಿಂದ ಉತ್ತರ ದಿಕ್ಕಿಗೆ ಓಡಿ ಹಿಮವತ್‌ಪರ್ವತ, ಮೇರುಪರ್ವತ, ಉತ್ತರ ಸಮುದ್ರ ವನ್ನು ಕಂಡೆ. ಅಲ್ಲಿಗೂ ಬಂದ ವಾಲಿ ನನ್ನನ್ನು ಕೊಲ್ಲಲು.

"ಎಲ್ಲಿಗೆ ಹೋದರೂ ಬಿಡದೆ ಬರುತ್ತ ಇದ್ದ ವಾಲಿ. ನನಗೆ ಆಸರೆಯೇ ಇಲ್ಲದೆ ಹೋಯಿತು. ಆಗ ನನ್ನ ಕಷ್ಟವನ್ನು ನೋಡಿ ಹನುಮಂತ ಹೇಳಿದ: 'ದೊರೆಯೆ, ತನ್ನ ಆಶ್ರಮದಲ್ಲಿ ಕಾಲು ಇಡಕೂಡದು ಎಂದು ಹಿಂದೆ ಮತಂಗ ಮಹರ್ಷಿ ವಾಲಿಗೆ ಶಾಪ ಕೊಟ್ಟದ್ದು ನೆನಪು ಬರುತ್ತ ಇದೆ. ಅಲ್ಲಿಗೆ ಬಂದರೆ ಅವನ ತಲೆ ಸಾವಿರ ಹೋಳು ಆಗುತ್ತದೆ. ನಾವು ಮತಂಗ ಆಶ್ರಮಕ್ಕೆ ಹೋದರೆ ನಮಗೆ ಭಯ ಇಲ್ಲ."

"ರಾಮಪ್ರಭು, ಒಡನೆಯೆ ಋಷ್ಯಮೂಕಕ್ಕೆ ಓಡಿಬಂದೆವು. ಮತಂಗ ಮಹರ್ಷಿಯ ಶಾಪದ ಭಯ. ವಾಲಿ ಇಲ್ಲಿಗೆ ಬರಲಿಲ್ಲ. ನಾನು ಹೀಗೆ ಇಡೀ ಭೂಮಂಡಲವನ್ನು ಸುತ್ತಿ ಕಣ್ಣಾರೆ ನೋಡಿದೇನೆ. ನಿನ್ನ ದರ್ಶನ ಆಗುವ ವರೆಗೂ ಋಷ್ಯಮೂಕ ಪರ್ವತದ ಗುಹೆಯಲ್ಲಿ ಇದ್ದೆ" ಎಂದ.

೧೮

ವಾನರಸೇನೆ ಎಲ್ಲ ತಮ್ಮ ತಮ್ಮ ದಿಕ್ಕುಗಳಿಗೆ ಪ್ರಯಾಣ ಮಾಡಿತು, ಸುಗ್ರೀವನ ಮಾತಿನಂತೆಯೇ. ಅಲ್ಲಿಯ ಕೊಳಗಳಲ್ಲಿ ಹೊಳೆಗಳಲ್ಲಿ ಗಿಡಬಳ್ಳಿ ಗಳಲ್ಲಿ ಎಲೆಮನೆಗಳಲ್ಲಿ ಗುಡ್ಡಬೆಟ್ಟಗಳಲ್ಲಿ ಹುಡುಕಿದರು. ಹಳ್ಳಿಗಳಲ್ಲೂ ಪಟ್ಟಣ ಗಳಲ್ಲೂ ಹುಡುಕಿದರು. ಎಲ್ಲಿಯೂ ಸೀತಾದೇವಿ ಕಾಣಲಿಲ್ಲ.

ಸೀತಾದೇವಿಯನ್ನು ಹುಡುಕಲೇಬೇಕು ಎಂದು ಎಲ್ಲರೂ ಹಗಲು ಎಲ್ಲಾ ಹುಡುಕಿ ಹುಡುಕಿ ರಾತ್ರಿ ಒಂದು ಕಡೆ ಬಂದು ಸೇರುತ್ತ ಇದ್ದರು. ಹಗಲು ಅಂತರಿಕ್ಷದಲ್ಲಿ ಓಡಾಟ. ರಾತ್ರಿ ಹಣ್ಣುಹಂಪಲಿನ ಗಿಡಗಳ ಮೇಲೆ ನಿದ್ದೆ. ಆ ಗಿಡಗಳ ಹಣ್ಣುಹಂಪಲೇ ಅವರ ಆಹಾರ. ಆ ಗಿಡಗಳಲ್ಲಿ ಬಿಟ್ಟ ಹಣ್ಣುಕಾಯಿ ಸಾರ್ಥಕ ಆದವು. ಎಷ್ಟು ಹುಡುಕಿದರೂ ಸೀತಾದೇವಿ ಆಗಲಿ ಆಕೆಯನ್ನು ಕದ್ದು ಒಯ್ದ ರಾವಣ ಆಗಲಿ ಕಾಣಲಿಲ್ಲ. ಸುಗ್ರೀವ ಕೊಟ್ಟು ಇದ್ದ ಗಡುವೂ ಮುಗಿಯುತ್ತ ಬಂತು. ಬಹಳ ನಿರಾಶರು ಆಗಿ ವಾನರರು ಮರಳಿ ಬಂದರು.

ಪ್ರಸ್ರವಣ ಪರ್ವತಕ್ಕೆ ಬಂದರು. ರಾಮ ಸುಗ್ರೀವ ಇಬ್ಬರೂ ಅಲ್ಲೇ ಇದ್ದರು. ಪೂರ್ವದಿಕ್ಕಿನ ಪ್ರದೇಶವನ್ನು ಚೆನ್ನಾಗಿ ಪೂರಾ ಹುಡುಕಿ ನಿರಾಶ ಆಗಿ ಬಂದ ವಿನತ. ಶತವಲಿ ಉತ್ತರ ದಿಕ್ಕನ್ನು ಹುಡುಕಿ ಹುಡುಕಿ ನಿಷ್ಫಲ ಆಗಿ ಬಂದ. ಪಶ್ಚಿಮ ದಿಕ್ಕಿಗೆ ಹೋದ ಸುಷೇಣನದೂ ಅದೇ ಗತಿ. ಎಲ್ಲರೂ ಮರಳಿ ಬಂದರು.

ಸುಗ್ರೀವನಿಗೆ ಎಲ್ಲರೂ ಬಿನ್ನಯಿಸಿದರು. "ದೊರೆಯೆ, ಎಲ್ಲಾ ಗುಡ್ಡ ಬೆಟ್ಟಗಳಲ್ಲೂ ಹುಡುಕಿದೆವು. ದುರ್ಗಮ ಅರಣ್ಯ ನದೀತೀರ ಸಮುದ್ರತೀರ ಗ್ರಾಮ ನಗರ ಎಲ್ಲ ಕಡೆಗಳಲ್ಲೂ ಹುಡುಕಿದೆವು. ಲತಾಗೃಹ ಗುಹೆ ಹಳ್ಳ ತಿಟ್ಟು ಯಾವುದನ್ನೂ ಬಿಡದೆ ಹುಡುಕಿದೆವು. ದೊಡ್ಡ ದೊಡ್ಡ ಪ್ರಾಣಿಗಳನ್ನು ಕೊಂದೆವು. ಎಲ್ಲಿಯೂ ನಮಗೆ ಸೀತಾದೇವಿ ಕಾಣಬರಲಿಲ್ಲ.

"ವಾನರೇಂದ್ರ, ಮಹಾ ಬಲಿಷ್ಠ ವಂಶದಲ್ಲಿ ಹುಟ್ಟಿದ ವಾಯುಪುತ್ರ ಹನುಮಂತ ರಾವಣಾಸುರ ಸೀತಾದೇವಿಯನ್ನು ಎತ್ತಿಕೊಂಡು ಹೋದ ದಿಕ್ಕಿಗೇ ಹೋಗಿ ಇದಾನೆ. ಹನುಮಂತ ಮಹಾನುಭಾವ. ಧೈರ್ಯಶಾಲಿ. ಆತ ಖಂಡಿತ ಆಗಿಯೂ ಸೀತಾದೇವಿಯನ್ನು ನೋಡಿಯೇ ಬರುತ್ತಾನೆ."

ಎಲ್ಲರೂ ಅದನ್ನೇ ಹೇಳಿದರು.

೧೯

ಸುಗ್ರೀವನ ಅಪ್ಪಣೆಯಂತೆ ಅಂಗದ ತಾರರ ಸಂಗಡ ದಕ್ಷಿಣ ದಿಕ್ಕಿಗೆ ಹೊರಟ ಹನುಮಂತ. ಆ ಪ್ರದೇಶಗಳಲ್ಲಿ ಹುಡುಕುತ್ತ ಹುಡುಕುತ್ತ ಬಹು ದೂರ ಹೊರಟುಹೋದ ಹನುಮಂತ. ವಿಂಧ್ಯಪರ್ವತದ ಗುಹೆಗಳಲ್ಲಿ ಕಾಡುಗಳಲ್ಲಿ ಶಿಖರಗಳಲ್ಲಿ ಹುಡುಕಿದರು. ಒಳಹೊಗಲು ಸಾಧ್ಯ ಇಲ್ಲದಂಥ ನದೀತೀರ ಸರೋವರತೀರಗಳಲ್ಲೂ ಗುಂಡುತೋಪು ಸಾಲುತೋಪು ಮಹಾವೃಕ್ಷಗಳ ವಿಂಧ್ಯಾಟವಿಯಲ್ಲೂ ಹುಡುಕಿದರು.

ಎಷ್ಟು ಹುಡುಕಿದರೂ ಎಲ್ಲಿ ಹುಡುಕಿದರೂ ಸೀತಾದೇವಿ ಕಾಣಲಿಲ್ಲ. ಹುಡುಕುವಾಗ ದೊರೆತ ಕಂದಮೂಲಫಲಗಳನ್ನು ತಿನ್ನುತ್ತ ಅಲ್ಲಲ್ಲಿ ತಂಗಿ ದಣಿವು ಆರಿಸಿಕೊಳ್ಳುತ್ತ ಮುಂದೆ ಸಾಗಿದರು.

ಆ ಪ್ರದೇಶ ಬಹಳ ದುರ್ಗಮ. ದೊಡ್ಡ ದೊಡ್ಡ ಕಾಡು. ಭಯಂಕರ ಗುಹೆಗಳು. ಅಲ್ಲಿ ಹುಡುಕುವುದು ಬಲುಕಷ್ಟ. ಜನರೇ ಇಲ್ಲ ಅಲ್ಲಿ. ನೋಡಿದರೆ ಮೈ ನಡುಗಿಸುವ ಸ್ಥಳ. ಅಲ್ಲಿ ಎಲ್ಲಾ ಹುಡುಕಿ ಮುಂದೆ ಹೋದರೆ ಒಂದು ನಿರ್ಜಲ ನಿರ್ಜನ ದೇಶ. ಆಕಾಶದಂತೆ ಬರೀ ಶೂನ್ಯ. ಕಷ್ಟಪಟ್ಟು ಅಲ್ಲಿ ಹುಡುಕಿ ಮುಂದೆ ಸಾಗಿದರು.

ಮುಂದೆ ಬಂದ ದೇಶ ಇನ್ನೂ ಭಯಂಕರ. ಅಲ್ಲಿ ಗಿಡಮರಗಳು ದೊಡ್ಡವು. ಹೂ ಇಲ್ಲ ಹಣ್ಣು ಇಲ್ಲ. ಎಲೆಗಳೂ ಇಲ್ಲ. ದೊಡ್ಡ ದೊಡ್ಡ ನದಿ ಇವೆ, ಕೊಳ ಇವೆ. ನೀರೇ ಇಲ್ಲ. ಒಂದು ಹನಿಯೂ ಇಲ್ಲ. ಕೊಳಗಳಲ್ಲಿ ತಾವರೆ ಹೂ ಅರಳಿ ಸುಗಂಧ ಬೀರುತ್ತ ಇವೆ. ಕಣ್ಣಿಗೆ ಚೆಲುವು ಆಗಿ ಇವೆ. ಆದರೆ ದುಂಬಿಗಳೇ ಇಲ್ಲ. ಎಮ್ಮೆ ಜಿಂಕೆ ಆನೆ ಯಾವುದೂ ಕಾಣಬರಲಿಲ್ಲ. ಹುಲಿಗಳೂ ಇಲ್ಲ. ಹಕ್ಕಿಗಳೇ ಇಲ್ಲ. ಯಾವ ವನಪ್ರಾಣಿಯೂ ಇಲ್ಲ. ಹಿಂದೆ ಇದ್ದವು ಎನಿಸುತ್ತದೆ. ಗಿಡಬಳ್ಳಿ ಪೊದೆ ಓಷಧಿ ಯಾವುದೂ ಇಲ್ಲ.

ಹಿಂದೆ ಕಂಡುಮಹರ್ಷಿ ಅಲ್ಲಿದ್ದ. ಆತ ಮಹಾತ್ಮ, ಸತ್ಯಸಂಧ, ಮಹಾ ನಿಯಮನಿಷ್ಠ. ತಪೋಬಲದಿಂದ ಯಾರಿಗೂ ಮಣಿಯದ ಶಕ್ತಿವಂತ ಆಗಿದ್ದ. ಆದರೆ ಬಲು ಕೋಪಿಷ್ಠ. ಅವನ ಮಗ ಹದಿನಾರು ವರ್ಷದವನು ಒಬ್ಬ ಅಲ್ಲಿ ಸತ್ತ. ಆ ಋಷಿಗೆ ಆ ವನದ ಮೇಲೆ ಸಿಟ್ಟು ಬಂತು. ತನ್ನ ಮಗನ ಮರಣಕಾಲಕ್ಕೆ ಅಲ್ಲಿ ಇದ್ದ ಜನ ಓಷಧಿ ಯಾವುದೂ ಕೆಲಸಕ್ಕೆ ಬರಲಿಲ್ಲ. ಆ ದೇಶ ಯಾರಿಗೂ ಕೆಲಸಕ್ಕೆ ಬಾರದಂತೆ ಶಾಪ ಕೊಟ್ಟ. ಅಲ್ಲಿ ಯಾರೂ ವಾಸಮಾಡುವ ಹಾಗೆ ಇಲ್ಲ. ಮೃಗಪಕ್ಷಿಗಳು ಕೂಡ.

ವಾನರರು ಅದನ್ನೂ ಬಿಡಲಿಲ್ಲ. ಅಲ್ಲಿಯ ಕಾಡು ಕಂದರ ಗುಡ್ಡ ಬೆಟ್ಟ ನದೀಮೂಲ ಎಲ್ಲೆಲ್ಲೂ ಹುಡುಕಿದರು. ಸೀತಾದೇವಿ ಕಾಣಬರಲಿಲ್ಲ. ಆಕೆಯನ್ನು ಕದ್ದ ರಾವಣನ ಸುಳಿವೂ ಸಿಗಲಿಲ್ಲ.

ಅಲ್ಲಿಂದ ಮುಂದೆ ಗಿಡಬಳ್ಳಿ ಪೊದೆಗಳ ಒಂದು ಪ್ರದೇಶವನ್ನು ಹೊಕ್ಕರು. ಅಲ್ಲಿ ಒಂದು ಪೊದೆಮರೆಯಲ್ಲಿ ಒಬ್ಬ ರಾಕ್ಷಸ ಇದ್ದ. ಬಲು ಕ್ರೂರಿ. ಭಯಂಕರ ರೂಪದವನು. ದೇವತೆಗಳು ಅವನಿಗೆ ಲಕ್ಷ್ಯ ಇಲ್ಲ. ದೊಡ್ಡ ಬೆಟ್ಟದ ಹಾಗೆ ಇದ್ದ. ಅವನನ್ನು ನೋಡಿದ ಕೂಡಲೆ ವಾನರವೀರರು ಎಲ್ಲರೂ ದಟ್ಟಿ ಬಿಗಿದು ಯುದ್ಧಕ್ಕೆ ಸಿದ್ಧರು ಆದರು. ಪರ್ವತಾಕಾರರು ಆದ ಈ ವಾನರವೀರರನ್ನು

ನೋಡಿ ಆ ರಾಕ್ಷಸ ಮುಷ್ಟಿ ಹಿಡಿದು "ನೀವು ಸತ್ತಿರಿ" ಎಂದು ಓಡಿಬಂದ. ಕೋಪದಿಂದ ಮೇಲೆಬೀಳಲು ಬರುವ ರಾಕ್ಷಸನನ್ನು ರಾವಣ ಎಂದುಕೊಂಡ ಅಂಗದ. ಅಂಗೈಯಿಂದ ಅವನನ್ನು ಚೆನ್ನಾಗಿ ಚಚ್ಚಿದ. ಒಂದೇ ಏಟಿಗೇ ಆ ರಾಕ್ಷಸ ರಕ್ತ ಕಾರಿ ನೆಲಕ್ಕೆ ಉರುಳಿದ.

ವಾನರರು ಗೆದ್ದರು. ಅವನೇ ರಾವಣ ಎಂಬ ಭ್ರಾಂತಿ. ಬಹಳ ಹುರುಪಿನಿಂದ ಗುಹೆಗಳಲ್ಲಿ ಆ ಕಾಡಿನಲ್ಲಿ ಎಲ್ಲಾ ಮತ್ತೆ ಮತ್ತೆ ಹುಡುಕಿದರು. ಸೀತಾದೇವಿ ಕಾಣಬಹುದು ಎಂದು. ಎಲ್ಲಿಯೂ ಕಾಣಲಿಲ್ಲ.

ಮುಂದೆ ಮತ್ತೂ ಒಂದು ಭಯಂಕರ ಗಿರಿ ಗುಹೆಯಲ್ಲಿ ಹುಡುಕಿದರು. ಸೀತೆ ಸಿಗಲಿಲ್ಲ. ಅವರಿಗೆ ಆಶಾಭಂಗ ಆಯಿತು. ಖಿನ್ನರು ಆದರು ಏಕಾಂತ ಸ್ಥಳದಲ್ಲಿ ಒಂದು ಮರದ ಕೆಳಗೆ ಕುಳಿತರು.

೨೦

ಅಂಗದ ಮಹಾಪ್ರಾಜ್ಞ. ಅಲ್ಲಲ್ಲಿ ಸುತ್ತಿದ. ದಣಿವನ್ನು ಆರಿಸಿಕೊಂಡು ಬಂದ. "ವಾನರರೆ, ಇದುವರೆಗೆ ಎಷ್ಟೋ ವನಪರ್ವತ ನದಿದುರ್ಗ ಗಿರಿನದಿ ಗುಹೆಗಹ್ವರ ಕಂದರಗಳನ್ನು ಹುಡುಕಿದೆವು. ಎಲ್ಲೂ ಸೀತಾದೇವಿ ಕಾಣಲಿಲ್ಲ. ಆಕೆಯನ್ನು ಕದ್ದು ಒಯ್ದವನೂ ಸಿಗಲಿಲ್ಲ. ನಮ್ಮ ಅವಧಿಯಲ್ಲಿ ಬಹುಭಾಗ ಕಳೆದುಹೋಯಿತು. ನಮ್ಮ ಪ್ರಭು ಸುಗ್ರೀವ ಉಗ್ರಶಾಸನ. ಆದ್ದರಿಂದ ಮತ್ತೆ ಹುಡುಕೋಣ. ಬಳಲಿ ಇದೇವೆ. ಆದರೂ ಧೈರ್ಯ ಕೆಡಬಾರದು. ಸೋಮಾರಿಗಳು ಆಗಬಾರದು. ನಿದ್ದೆಗೆ ಇದು ಸಮಯ ಅಲ್ಲ. ಎಲ್ಲರೂ ಒಟ್ಟು ಆಗಿ ಮತ್ತೆ ಪ್ರಯತ್ನಿಸೋಣ. ಮಾಡುತ್ತ ಮಾಡುತ್ತ ಕೆಲಸ ಕೈಗೂಡುತ್ತದೆ. ಉತ್ಸಾಹ ಸಾಹಸ ಧೈರ್ಯ ಮೂರೂ ಕಾರ್ಯಸಿದ್ಧಿಗೆ ಕಾರಣ ಎನ್ನುತ್ತಾರೆ ಹಿರಿಯರು. ಕೊರಗಬೇಡಿ. ಬೇಸರಪಡಬೇಡಿ. ಬಿಡದೆ ಮಾಡಿದರೆ ಕೆಲಸ ಆಗುತ್ತದೆ. ಬೇಸರ ಸಾಕು. ಜಡತೆ ಸಾಕು. ಏಳಿ.

"ವೀರರೆ, ನಮ್ಮ ದೊರೆ ಸುಗ್ರೀವನಿಗೆ ಬಲು ಸಿಟ್ಟು. ಅವನ ದಂಡನೆಯೂ ಬಲು ಕ್ರೂರ. ರಾಜನ ಅಪ್ಪಣೆಗೆ ಸದಾ ಅಂಜಬೇಕು ನಾವು. ರಾಮನೂ ಮಹಾಪ್ರಭಾವಶಾಲಿ. ಆತನಿಗೂ ಅಂಜಿ ನಡೆಯಬೇಕು. ನಿಮ್ಮ ಹಿತವನ್ನು

ಕೋರಿಯೆ ಇದು ಎಲ್ಲವನ್ನೂ ಹೇಳುತ್ತಿದೇನೆ. ನಾನು ಹೇಳಿದುದು ನಿಮಗೆ ಸಮ್ಮತ ಆದರೆ ಅದರಂತೆ ಮಾಡಿ. ಇಲ್ಲದೆ ಇದ್ದರೆ ನಮಗೆ ಎಲ್ಲರಿಗೂ ಹಿತ ಆಗುವ ಬೇರೆ ದಾರಿ ಯಾವುದು ಆದರೂ ಇದ್ದರೆ ಹೇಳಿ."

ಅಂಗದನ ಮಾತು ಗಂಧಮಾದನನಿಗೆ ರುಚಿಸಿತು. ಬಾಯಾರಿಕೆ ಬಳಲಿಕೆಗಳಿಂದ ಸೋತುಹೋದ ಆ ವಾನರವೀರ ಆಡಿದ ಮಾತು ಅಸ್ಪಷ್ಟ ಆಗಿತ್ತು. "ವಾನರವೀರರೆ, ಅಂಗದ ಕುಮಾರನ ಮಾತು ಸರಿ. ಅವನ ಮಾತಿನಂತೆ ನಡೆದರೆ ನಮಗೆಲ್ಲರಿಗೂ ಹಿತ ಆಗುತ್ತದೆ. ಅನುಕೂಲವೂ ಉಂಟು. ಹಾಗೆಯೆ ಮಾಡಿ. ಬೇರೆ ದಾರಿ ಇಲ್ಲ ನಮಗೆ. ಮತ್ತೆ ಬೆಟ್ಟಗುಡ್ಡ ಗವಿಬಿಲ ಕಾಡುಕೋಡು ನದಿಕೊಳಗಳಲ್ಲಿ ಹುಡುಕೋಣ ನಡೆಯಿರಿ" ಎಂದ.

ಮಹಾಬಲಾಢ್ಯರು ವಾನರರು ಎಲ್ಲರೂ ಎದ್ದರು. ವಿಂಧ್ಯಾಟವಿಗಳಲ್ಲಿ ಮತ್ತೆ ಹುಡುಕಿದರು. ಶರತ್ಕಾಲಮೇಘದ ಹಾಗೆ ಬೆಳ್ಳಗೆ ಹೊಳೆಯುವ ರಜತ ಪರ್ವತ ಕಂಡಿತು. ಅದರ ಶಿಖರಗಳನ್ನೂ ಏರಿ ನೋಡಿದರು. ಗುಹೆಗಳನ್ನು ಹೊಕ್ಕು ನೋಡಿದರು. ಅಲ್ಲಿಯ ಕೋದ್ರವೃಕ್ಷಗಳ ವನ ಏಳಿಲೆಯ ಬಾಳೆಯ ತೋಟಗಳಲ್ಲಿ ಹುಡುಕಿದರು. ಆವರೆಗೇ ಬಲು ಬಳಲಿದರೂ ಲೆಕ್ಕಿಸಲಿಲ್ಲ. ಎಷ್ಟು ಹುಡುಕಿದರೂ ಸೀತಾದೇವಿ ಅವರಿಗೆ ಕಾಣಲಿಲ್ಲ. ಗವಿಗಳಲ್ಲಿ ಹುಡುಕಿದರು, ಬೆಟ್ಟದಲ್ಲಿ ಎಲ್ಲೆಲ್ಲೂ ಹುಡುಕಿದರು. ವ್ಯರ್ಥ.

ಬೆಟ್ಟದಿಂದ ಕೆಳಗೆ ಇಳಿದರು. ಬಹಳ ಬಳಲಿಕೆ. ಅಲ್ಲೇ ಒಂದು ಮರದ ಕೆಳಗೆ ಎಲ್ಲರೂ ಬಂದು ಕೂತರು. ಒಂದು ಗಳಿಗೆ. ದಣಿವು ಸ್ವಲ್ಪ ಆರಿದ ಕೂಡಲೆ ಮತ್ತೆ ದಕ್ಷಿಣಕ್ಕೆ ಪಯಣ ಮಾಡಿದರು.

೨೧

ಹನುಮಂತ ತಾರ ಅಂಗದರು ಹುಲಿಸಿಂಹಗಳ ಬೀಡು ಆದ ವಿಂಧ್ಯದ ಕಗ್ಗಾಡನ್ನು ಹೊಕ್ಕರು. ಅಲ್ಲಿಯ ಗುಹೆಗಳಲ್ಲಿ ನೋಡಿದರು. ನದೀತೀರಗಳಲ್ಲಿ ಹುಡುಕಿದರು. ಬಂಡೆಗಲ್ಲುಗಳನ್ನು ಕದಲಿಸಿದರು. ಆ ಬೆಟ್ಟದ ನೈಋತ್ಯದ ಮೂಲೆಯ ಒಂದು ಶಿಖರಕ್ಕೆ ಬಂದರು. ಅಲ್ಲಿ ಬರೀ ಕಗ್ಗಾಡು. ಅನೇಕ ಗುಹೆ.

ಇಲ್ಲಿಗೆ ಬರುವ ವೇಳೆಗೆ ಸುಗ್ರೀವ ಹೇಳಿದ ಒಂದು ತಿಂಗಳ ಅವಧಿ ಮುಗಿದು ಹೋಯಿತು.

ಹನುಮಂತ ಇನ್ನೂ ಸುತ್ತುತ್ತಲೇ ಇದ್ದ. ಅವನ ಜತೆಗೆ ಅಂಗದ. ತಾರ ಗಜ ಗವಾಕ್ಷ ಗವಯ ಶರಭ ಗಂಧಮಾದನ ಮೈಂದ ದ್ವಿವಿದ ಸುಷೇಣ ಜಾಂಬವಂತ ನಳ ಮೊದಲಾದವರೂ ಕೂಡಿಕೊಂಡರು. ಆ ಸಾಲು ಬೆಟ್ಟಗಳನ್ನೇ ಹುಡುಕಿದರು. ಅಲ್ಲಿ ಒಂದು ಬಿಲ. ಆ ಬಿಲವನ್ನು ಪ್ರವೇಶಿಸಲು ಯಾರಿಗೂ ಸಾಧ್ಯ ಅಲ್ಲ. ದಾನವ ಮಯನ ಬಿಲ ಆದು. ಋಕ್ಷ ಬಿಲ.

ಆ ಬಿಲದ ಬಾಯಿಯ ಬಳಿಗೆ ಬರುವ ಹೊತ್ತಿಗೆ ವಾನರರಿಗೆ ಬಹಳ ಹಸಿವು ಬಾಯಾರಿಕೆ. ಬಳಲಿ ಬೆಂಡು ಆಗಿದ್ದರು. ನೀರು ಸಿಕ್ಕರೆ ಸಾಕು ಎನಿಸಿತ್ತು. ಅಲ್ಲಿ ನೀರು ಸಿಕ್ಕೀತು ಎಂದು ನೋಡಿದರೆ ಆ ಬಿಲದ ತುಂಬಾ ಗಿಡಬಳ್ಳಿ ಒತ್ತಿ ಬೆಳೆದು ಇವೆ. ಬಿಲದ ಒಳಗಿನಿಂದ ಕ್ರೌಂಚಗಳೂ ಸಾರಸ ಪಕ್ಷಿಗಳೂ ಹಂಸಗಳೂ ಹೊರಕ್ಕೆ ಬರುತ್ತಾ ಇವೆ. ನೀರಿನಲ್ಲಿ ನೆನೆದು ಕಮಲದ ಧೂಳಿಯನ್ನು ಬಳಿದುಕೊಂಡು ಚಕ್ರವಾಕಗಳ ಗರಿಗಳು ಕೆಂಪು ಆಗಿದ್ದವು. ಅವೂ ಬಂದವು. ಬಿಲದಿಂದ ಗಮಗಮ ಸುವಾಸನೆ ಬರುತ್ತ ಇತ್ತು. ವಾನರರಿಗೆ ಅಚ್ಚರಿಯೋ ಅಚ್ಚರಿ.

ಒಳಗೆ ನೋಡಿದರೆ ನಾನಾವಿಧದ ವನ್ಯಮೃಗಗಳು. ರಾಕ್ಷಸೇಂದ್ರನ ನಿವಾಸದ ಹಾಗೇ ಇದೆ. ನೋಡಲು ಭಯಂಕರ. ಅಲ್ಲಿ ನೀರು ಇರಬೇಕು ಎನಿಸಿತು ಎಲ್ಲರಿಗೂ. ಆದರೆ ಒಳಗೆ ಹೋಗಲು ದಾರಿಯೆ ಇಲ್ಲ. ಎಂಥ ದುರ್ಗಮ ಸ್ಥಳಗಳಲ್ಲೂ ಓಡಾಡಿ ಪರಿಚಯ ಇತ್ತು ಹನುಮಂತನಿಗೆ. ಅಲ್ಲಿ ಇದ್ದ ವಾನರರಿಗೆ ಹೇಳಿದ ಹನುಮಂತ: "ವಾನರಶ್ರೇಷ್ಠರೆ, ಜಡೆ ಹೆಣೆದ ಹಾಗೆ ಬೆಳೆದ ಬೆಟ್ಟಗಳ ಈ ದಿಕ್ಕನ್ನು ಪೂರಾ ಹುಡುಹುಡುಕಿ ಎಲ್ಲರೂ ಬಳಲಿ ಬೆಂಡು ಆಗಿದೇವೆ. ಆ ಸೀತಾದೇವಿ ಎಲ್ಲಿಯೂ ಕಾಣಲಿಲ್ಲ. ಹಸಿವು ಪೀಡಿಸುತ್ತ ಇದೆ. ಬಾಯಾರಿಕೆ ಸಹಿಸಲು ಸಾಧ್ಯ ಇಲ್ಲ. ನೀರು ಕುಡಿಯಲೇ ಬೇಕು. ಹಂಸಗಳೂ ಕ್ರೌಂಚ ಸಾರಸ ಚಕ್ರವಾಕಗಳೂ ನೀರಿನಲ್ಲಿ ನೆನೆನೆನೆದು ಹೊರಕ್ಕೆ ಬರುತ್ತ ಇವೆ. ಈ ಬಿಲದ ಬಾಯಿಯಲ್ಲಿ ಗಿಡಬಳ್ಳಿ ಎಲ್ಲವೂ ಹಚ್ಚಗೆ ಇವೆ. ಇಲ್ಲಿ ನೀರು ತುಂಬಿದ ಬಾವಿಯೋ ಮಡುವೋ ಇರಲೇಬೇಕು ಖಂಡಿತ" ಎಂದ.

ಎಲ್ಲರಿಗೂ ಒಳಕ್ಕೆ ಹೋಗಲು ಉತ್ಸಾಹ. ಒಳಗೆ ಹೋದಂತೆ ಕತ್ತಲೆ. ಮೈನಡುಗಿಸುವಂಥ ಗಾಢಾಂಧಕಾರ. ಇದಿರಿಗೆ ಬರುತ್ತ ಇವೆ ಹುಲಿ ಸಿಂಹ ಗಳಂಥ ಕ್ರೂರಮೃಗಗಳು. ಮಹಾಧೈರ್ಯದಿಂದ ವಾನರರು ಮುಂಬರಿದರು. ಕಣ್ಣೇ ಕಾಣಲಿಲ್ಲ. ಅವರ ವೀರ್ಯ ಪರಾಕ್ರಮ ನಿಷ್ಪ್ರಯೋಜನ ಆಯಿತು. ಕಾಲಿಗೆ ತೊಡರು ಆಗಿ ಗಿಡಬಳ್ಳಿ ಬೇರೆ. ದಾರಿ ತಪ್ಪಿ ಹೋದೀತು, ಕತ್ತಲೆಯಲ್ಲಿ ದಿಕ್ಕಾಪಾಲು ಆದೇವು ಎಂದು ಒಬ್ಬರನ್ನು ಒಬ್ಬರು ಬಿಗಿ ಆಗಿ ಹಿಡಿದುಕೊಂಡು ನಡೆದರು. ಹಾಗೇ ಒಂದು ಗಾವುದ ದೂರ ನಡೆದರು. ಬಾಯಾರಿಕೆ ಹೆಚ್ಚಿತು. ಎಚ್ಚರ ತಪ್ಪಿದಂತೆ ಆಯಿತು. ಆದರೂ ಧೈರ್ಯದಿಂದ ಮುಂದೆ ಸಾಗಿದರು. ಆಹಾರವೇ ಇಲ್ಲದೆ ಬಾಡಿ ಸವೆದು ಹೋಗಿದ್ದರು. ಮೋರೆ ಎಲ್ಲವೂ ಬಾಡಿ ಹೋಯಿತು. ಪ್ರಾಣದ ಆಸೆ ಬಿಟ್ಟರು.

ಅಷ್ಟರಲ್ಲಿ ಬೆಳಕು ಕಾಣಿಸಿತು. ವಾನರರಿಗೆ ಹುರುಪು ಬಂತು ಬೆಳಕನ್ನು ನೋಡಿ. ಆ ಬೆಳಕಿನಲ್ಲಿ ಕಂಡ ಪ್ರದೇಶ ಬಲು ಮನೋಹರ. ಬೆಂಕಿಯ ಹಾಗೆ ಧಗಧಗಿಸುವ ಸುವರ್ಣಮಯ ವೃಕ್ಷಗಳು ಅಲ್ಲಿ. ಮತ್ತಿ ತಾಳೆ ಹೊನೆ ಸುರಹೊನ್ನೆ ಅಸುಗೆ ಸಂಪಗೆ ಗಿಡಗಳು. ಹೂ ಬಿಟ್ಟು ಬಂಗಾರದ ಕಾಂತಿಯಿಂದ ಹೊಳೆಯುತ್ತ ಇದ್ದವು. ಎಲ್ಲ ಗಿಡಗಳಲ್ಲೂ ಚಿನ್ನದ ಹೂಗೊಂಚಲು, ಬಂಗಾರದ ಬಣ್ಣದ ಚಿಗುರು. ಮೇಲಕ್ಕೆ ಹಬ್ಬಿದ ಬಳ್ಳಿ ಎಲ್ಲವೂ ಬಂಗಾರದ ಒಡವೆ ತೊಟ್ಟಂತೆ ಇತ್ತು. ಒಂದೊಂದು ಮರಕ್ಕೂ ಒಂದು ಜಗಲಿ. ಅದರಲ್ಲಿ ವೈಡೂರ್ಯಗಳ ಸಿಂಗಾರ. ಪ್ರತಿ ಮರಕ್ಕೂ ಬಾಲಸೂರ್ಯಪ್ರಭೆ. ಅಲ್ಲಿ ಸರೋವರಗಳು. ಆ ತಾವರೆಕೆರೆಗಳ ನೀರು ನೀಲವೈಡೂರ್ಯ ಬಣ್ಣದ್ದು. ಅನೇಕ ನೀರುಹಕ್ಕಿ ಆಡುತ್ತ ಇವೆ. ಬಾಲಸೂರ್ಯನಂತೆ ಹೊಳೆದ ಸ್ವರ್ಣಮಯ ಕಮಲಗಳು. ಅಲ್ಲಿ ಇದ್ದ ಆಮೆ ಮೀನು ಕೂಡ ಬಂಗಾರದ ಬಣ್ಣದವೇ. ನೀರು ತಿಳಿ ಎಂದರೆ ತಿಳಿ.

ಚಿನ್ನದ ವಿಮಾನಗೃಹ ಬೆಳ್ಳಿಯ ವಿಮಾನಗೃಹ ಇದ್ದವು ಅಲ್ಲಿ. ಅವಕ್ಕೆ ಚಿನ್ನದ ಕಿಟಕಿಗಳು. ಮುತ್ತಿನ ಹಾರಗಳನ್ನು ತೂಗುಬಿಟ್ಟು ಇದ್ದರು. ನೆಲಗಟ್ಟು ಚಿನ್ನ ಬೆಳ್ಳಿಯದು. ವೈಡೂರ್ಯಖಚಿತ. ಹವಳದಂತೆ ಹೊಳೆಯುವ ಸಾಲು ಸಾಲು ಹೂ ಹಣ್ಣಿನ ಗಿಡಮರಗಳು ಅಲ್ಲಿ. ಅವುಗಳ ಮಕರಂದ ಬಲು ಸುವಾಸನೆಯದು. ಆ ದುಂಬಿಗಳೂ ಸುವರ್ಣಮಯ.

ರತ್ನಖಚಿತ ಸ್ವರ್ಣಶಯ್ಯೆಗಳು, ಆಸನಗಳು. ಅಮೂಲ್ಯ ವಾಹನಗಳು. ಎತ್ತ ನೋಡಿದರೂ ಚಿನ್ನ ಬೆಳ್ಳಿ ಕಂಚಿನ ಪಾತ್ರೆಗಳ ರಾಶಿ. ಅಗರು ಚಂದನ ಮುಂತಾದ ಸುಗಂಧದ್ರವ್ಯ, ರುಚಿ ಆದ ಪರಿಶುದ್ಧ ಆದ ಫಲಮೂಲ, ರಸ ತುಂಬಿದ ಜೇನು, ಸೊಗಸು ಆದ ವಸ್ತ್ರಭೂಷಣಗಳು, ರತ್ನಕಂಬಳಿಗಳು ಚಿತ್ರ ವಿಚಿತ್ರ ಅಜಿನಗಳು ಬೇಕಾದಷ್ಟು. ಬೆಂಕಿಯಂತೆ ಬೆಳಗುವ ಚಿನ್ನದ ಗಟ್ಟಿ ರಾಶಿ ರಾಶಿ.

ವಾನರವೀರರು ಸೀತಾದೇವಿಯನ್ನು ಅಲ್ಲಿ ಹುಡುಕಿದರು. ಅಲ್ಲಿ ಒಬ್ಬ ಮುದುಕಿ ಇದ್ದಳು. ನಾರುಸೀರೆ ಉಟ್ಟು ಕೃಷ್ಣಾಜಿನ ಹೊದ್ದು ನಿಯತ ಆಹಾರಳು ಆಗಿ ತಪಸ್ಸುಮಾಡುವ ಹೆಂಗಸು. ದಿವ್ಯತೇಜಸ್ಸಿನಿಂದ ಬೆಳಗುತ್ತ ಇದ್ದಳು. ಅವಳನ್ನು ನೋಡಿ ವಾನರರಿಗೆ ಅಂಜಿಕೆ ಆಯಿತು. ಅಚ್ಚರಿಯೂ ಆಯಿತು. ಎಲ್ಲರೂ ದಂಗುಬಡೆದು ನಿಂತರು.

ಹನುಮಂತ ಧೈರ್ಯಮಾಡಿದ. ಕೈಮುಗಿದು ವಿನಯದಿಂದ ಕೇಳಿದ: "ನೀನು ಯಾರು? ಯಾರದು ಈ ಬಿಲ? ಈ ರತ್ನಾದಿವಸ್ತ್ರಗಳೂ ಮನೆಯೂ ಯಾರದು?"

೨೨

ಕೃಷ್ಣಾಜಿನಧಾರಿಣಿ ಆ ಧರ್ಮಚಾರಿಣಿ. ಆ ತಾಪಸಿಗೆ ಮತ್ತೆ ಹೇಳಿದ ಹನುಮಂತ. "ತಾಯೆ, ನಮಗೆ ಹಸಿವು ಬಾಯಾರಿಕೆ. ತಡೆಯಲಾರೆವು. ಪ್ರಾಣ ಹೋಗುತ್ತ ಇದೆ. ಇಷ್ಟು ಕತ್ತಲೆ ಇದ್ದರೂ ಈ ಬಿಲದ ಒಳಕ್ಕೆ ಬರುವ ಸಾಹಸ ಮಾಡಿದೆವು. ಇಲ್ಲಿ ಕುಡಿಯಲು ನೀರು, ತಿನ್ನಲು ಹಣ್ಣುಹಂಪಲು ಸಿಗಬಹುದು ಎಂದು ಇಲ್ಲಿಗೆ ಬಂದೆವು. ಇಲ್ಲಿ ಇರುವ ಅದ್ಭುತ ಪದಾರ್ಥಗಳನ್ನು ನೋಡಿ ನಮಗೆ ಬುದ್ಧಿಯೇ ಓಡುತ್ತ ಇಲ್ಲ. ಗೊಂದಲದಲ್ಲಿ ಬಿದ್ದು ಇದೇವೆ. ಇತ್ತ ಭಯ, ಅತ್ತ ಆಶ್ಚರ್ಯ. ಏನೂ ತೋರುತ್ತ ಇಲ್ಲ ನಮಗೆ.

"ಮಹಾನುಭಾವಳೆ, ಬಾಲಸೂರ್ಯನಂತೆ ನಿಗಿನಿಗಿ ಬೆಳಗುವ ಈ ಸುವರ್ಣ ವೃಕ್ಷಗಳು, ರುಚಿ ಆಗಿ ಶುಚಿ ಆಗಿ ಇರುವ ಈ ಫಲಮೂಲಗಳು, ರತ್ನದ ಜಾಲಂದ್ರ ಚಿನ್ನದ ಕಿಟಕಿ ಇರುವ ಈ ಬೆಳ್ಳಿಯ ಮನೆಗಳು ಯಾರವು? ನಮಗೆ

ಅಂತೂ ಆಶ್ಚರ್ಯ. ಈ ಬಂಗಾರದ ಗಿಡಗಳು ಸುಗಂಧ ಬೀರುವ ಹೂಬಿಡುತ್ತ ಇವೆ. ಯಾವ ಮಹಾತ್ಮನ ಪ್ರಭಾವ ಇದು? ಸ್ವಚ್ಛ ನೀರಿನಲ್ಲಿ ಈ ಚಿನ್ನದ ಕಮಲಗಳು ಅರಳುತ್ತವೆಯಲ್ಲ. ಯಾರ ಮಹಿಮೆ? ಈ ಬಂಗಾರದ ಮೀನುಗಳೂ ಆಮೆಗಳೂ ನೀರಿನಲ್ಲಿ ಓಡಾಡುತ್ತ ಇವೆಯಲ್ಲ. ಯಾರ ಪ್ರಭಾವ ಇದು? ಇದು ಎಲ್ಲವೂ ನಿನ್ನ ತಪಶ್ಶಕ್ತಿಯ ಪ್ರಭಾವವೋ ಅಥವಾ ಬೇರೆ ಯಾರದು ಆದರೂ ತಪೋಬಲವೋ? ನಮಗೆ ಏನೂ ತಿಳಿಯದು. ಎಲ್ಲವನ್ನೂ ನೀನೇ ತಿಳಿಸಬೇಕು" ಎಂದ.

ಸರ್ವಪ್ರಾಣಿಹಿತದಲ್ಲಿ ನಿರತಳು ಆ ಧರ್ಮಚಾರಿಣಿ ತಾಪಸಿ. ಆದ್ದರಿಂದ ಹನುಮಂತನಿಗೆ ಹೇಳಿದಳು: "ವಾನರೋತ್ತಮ, ಮಹಾತೇಜಸ್ವಿ ಮಹಾ ಮಾಯಾವಿ ಆದ ದಾನವ ಒಬ್ಬ ಇದ್ದ ಮಯ ಎಂಬವನು. ಅವನ ವಿಚಿತ್ರ ಶಕ್ತಿಯ ಫಲ ಈ ಬಂಗಾರದ ತೋಟ. ಇದು ಎಲ್ಲವೂ ಅವನ ನಿರ್ಮಾಣ. ಈ ಬಂಗಾರದ ಮನೆ ಕಟ್ಟಿದ ಆ ಮಯನೇ ದಾನವರಿಗೆ ವಿಶ್ವಕರ್ಮ ಆದ.

"ಮಹಾ ಅರಣ್ಯದಲ್ಲಿ ಸಾವಿರಾರು ವರ್ಷ ತಪಸ್ಸುಮಾಡಿದ ಮಯ, ಬ್ರಹ್ಮನನ್ನು ಮೆಚ್ಚಿಸಿ ಶುಕ್ರಾಚಾರ್ಯರಚಿತ ಶಿಲ್ಪಶಾಸ್ತ್ರ ಎಲ್ಲವೂ ತನಗೆ ಅಧೀನ ಆಗಬೇಕು ಎಂದು ವರವನ್ನು ಪಡೆದ. ಕೋರಿದ್ದನ್ನು ಎಲ್ಲವನ್ನೂ ನಿರ್ಮಿಸಿ ಕೊಳ್ಳಬಲ್ಲ ಸಮರ್ಥ ಆದ ಮಯ. ತನ್ನ ಮಾಯಾಬಲದಿಂದ ಈ ಬಂಗಾರದ ವನವನ್ನು ನಿರ್ಮಿಸಿದ. ಹೇಮಾ ಎಂಬ ಅಪ್ಸರಸೆಯಲ್ಲಿ ಅನುರಕ್ತ ಆಗಿ ಇಲ್ಲಿಯೇ ಕೆಲವು ಕಾಲ ಇದ್ದ. ಮಯ ದಾನವ. ಹೇಮಾ ಅಪ್ಸರಸೆ. ದೇವೇಂದ್ರನಿಗೆ ಸಿಟ್ಟು ಬಂತು. ವಜ್ರಾಯುಧದಿಂದ ಹೊಡೆದು ಅವನನ್ನು ಕೊಂದ.

"ಸರ್ವೋತ್ತಮ ವನ ಇದು, ಈ ಭೋಗಗಳೂ ಶಾಶ್ವತ. ಈ ದಿವ್ಯಗೃಹ. ಎಲ್ಲವನ್ನೂ ಹೇಮಾಗೆ ಕೊಟ್ಟ ದೇವೇಂದ್ರ. ಹೇಮಾ ನೃತ್ಯಗೀತವಿಶಾರದೆ. ನನಗೆ ಪ್ರಿಯಸಖಿ. ನನ್ನ ಹೆಸರು ಸ್ವಯಂಪ್ರಭೆ. ನಾನು ಮೇರುಸಾವರ್ಣಿಯ ಮಗಳು. ಇಲ್ಲಿ ಇರುವ ಎಲ್ಲವನ್ನೂ ಹೇಮಾ ನನಗೆ ಕೊಟ್ಟಳು ಕಾಪಾಡಲಿಕ್ಕೆ. ಯಾರೂ ನನ್ನನ್ನು ಸೋಲಿಸದಂತೆ ವರವನ್ನೂ ಕೊಟ್ಟಳು ಹೇಮಾ. ಯಾವ ಭಯವೂ ಇಲ್ಲದೆ ನಾನು ಇದನ್ನು ಕಾಯುತ್ತ ಇದೇನೆ.

"ವಾನರ, ನೀವು ಯಾರು? ಏಕೆ ಬಂದಿರಿ ಇಲ್ಲಿಗೆ? ಕಾಡುಗಳನ್ನು ಎಲ್ಲಾ ಸುತ್ತಲು ಏನು ಕಾರಣ? ಯಾರೂ ಪ್ರವೇಶಿಸಲು ಸಾಧ್ಯ ಇಲ್ಲದ ಈ

ಬಿಲವನ್ನು ಹೇಗೆ ಕಂಡುಕೊಂಡಿರಿ? ಮೊದಲು ನಿಮಗೆ ಬೇಕಾದ ಫಲಮೂಲಗಳನ್ನು ತಿನ್ನಿ. ತಿಳಿನೀರು ಕುಡಿಯಿರಿ. ನಿಮ್ಮ ಆಯಾಸವನ್ನು ಕಳೆಯಿರಿ. ಆಮೇಲೆ ನಿಮ್ಮ ಸಮಾಚಾರವನ್ನು ಹೇಳಿ" ಎಂದಳು.

೨೩

"ವಾನರರೆ, ಹಣ್ಣುಹಂಪಲು ತಿಂದು ನಿಮ್ಮ ಬಳಲಿಕೆ ತೀರಿದ್ದರೆ ನಿಮ್ಮ ಸಮಾಚಾರ ಹೇಳಿ. ಕೇಳಬಹುದು ಆಗಿದ್ದರೆ ಹೇಳಿ." ಆ ಧರ್ಮಚಾರಿಣಿ ಸ್ವಯಂಪ್ರಭೆ ಕೇಳಿದಳು.

ನಿಷ್ಕಪಟಿ ಹನುಮಂತ. ಇದ್ದುದನ್ನು ಇದ್ದಂತೆ ತಿಳಿಸಿದ. "ತಪಸ್ವಿನಿ, ಸಮಸ್ತ ಲೋಕಕ್ಕೂ ದೊರೆ, ದೇವೇಂದ್ರ ವರುಣರಿಗೆ ಸಮಾನ ಶ್ರೀರಾಮ ಇದ್ದಾನೆ. ದಶರಥರಾಜನ ಮಗ. ತಮ್ಮ ಲಕ್ಷ್ಮಣ, ಹೆಂಡತಿ ಸೀತೆ ಇಬ್ಬರನ್ನೂ ಕರೆದುಕೊಂಡು ರಾಮ ಅಡವಿಗೆ ಬಂದ. ಮೂವರೂ ಜನಸ್ಥಾನದಲ್ಲಿ ಇದ್ದರು. ಅಣ್ಣತಮ್ಮ ಇಬ್ಬರೂ ಪರ್ಣಶಾಲೆಯಲ್ಲಿ ಇಲ್ಲದಾಗ ರಾವಣಾಸುರ ರಾಮನ ಹೆಂಡತಿ ಸೀತೆಯನ್ನು ಕದ್ದು ಎತ್ತಿಕೊಂಡು ಹೋದ. ರಾಮನ ಗೆಳೆಯ ವಾನರರಾಜ ಸುಗ್ರೀವ. ನಮ್ಮ ದೊರೆ ಆ ರಾಮಪತ್ನಿ ಸೀತಾದೇವಿಯನ್ನು ಹುಡುಕಿ ಎಂದು ನಮ್ಮನ್ನು ಕಳಿಸಿದ. ಅಗಸ್ತ್ಯಸಂಚಾರಯೋಗ್ಯ ಯಮಧರ್ಮಪರಿಪಾಲಿತ ಆದ ದಕ್ಷಿಣ ದಿಕ್ಕಿಗೆ ಹೋಗಿ ಎಂದ.

"ಕಾಮರೂಪಿ ಆದ ರಾವಣನನ್ನೂ ಸೀತಾದೇವಿಯನ್ನೂ ಹುಡುಕಿಕೊಂಡು ಬನ್ನಿ ಎಂದು ನಮಗೆ ಕಟ್ಟಪ್ಪಣೆ. ಅಂಗದನ ಹಿಂದೆ ನಾವು ಎಲ್ಲರೂ ಬಂದೆವು. ಈ ದಿಕ್ಕಿನ ಸಮಸ್ತ ಪ್ರದೇಶಗಳನ್ನೂ ಹುಡುಕಿದೆವು. ಹುಡುಕಿ ಹುಡುಕಿ ಬೇಸತ್ತೆವು. ಬಳಲಿದೆವು. ಎಲ್ಲರಿಗೂ ಹಸಿವು. ತಡೆಯಲಾರದ ಬಾಯಾರಿಕೆ. ಮುಖಗಳು ಎಲ್ಲವೂ ಬಣ್ಣಗೆಟ್ಟವು. ಏನು ಮಾಡಬೇಕೋ ಮುಂದೆ ತಿಳಿಯಲಿಲ್ಲ. ದುಃಖದಲ್ಲಿ ಮುಳುಗಿ ಒಂದು ಮರದ ಕೆಳಗೆ ಕುಳಿತೆವು.

"ಸುತ್ತಲೂ ಕಣ್ಣು ಇಟ್ಟು ನೋಡುವಾಗ ನಮಗೆ ಬಿಲ ಕಾಣಿಸಿತು. ಬಾಗಿಲಲ್ಲಿ ದಟ್ಟ ಆಗಿ ಗಿಡಬಳ್ಳಿ ಬೆಳೆದು ಬಿಲ ಮುಚ್ಚಿಹೋಗಿತ್ತು. ನೀರಿನಲ್ಲಿ ತೊಯ್ದು ಗರಿಗಳನ್ನು ಒದರುತ್ತ ಗರಿಗಳಿಂದ ನೀರು ಸೋರಿಸುತ್ತ ಹಂಸಕಾರಂಡವ

ಮುಂತಾದ ಹಕ್ಕಿಗಳು ಬಿಲದ್ವಾರದಿಂದ ಹೊರಗೆ ಬರುತ್ತ ಇದ್ದವು. ಬಿಲದಲ್ಲಿ ನೀರು ಇರಬಹುದು. ಹೋಗಿ ನೋಡೋಣ ಎಂದು ನಾನೇ ಎಲ್ಲಾ ವಾನರರಿಗೂ ಹೇಳಿದೆ. ಎಲ್ಲರಿಗೂ ಹಾಗೇ ಎನಿಸಿತು. ಇದಲ್ಲದೆ ನಮಗೆ ಸ್ವಾಮಿಕಾರ್ಯದ ಆತುರ ಬೇರೆ. ಎಲ್ಲರೂ ಹೋಗಿ ನೋಡಬೇಕು ಎಂದು ಒಪ್ಪಿದೆವು.

"ಬಿಲದಲ್ಲಿ ಕಗ್ಗತ್ತಲೆ. ಒಬ್ಬರ ಕೈಯನ್ನು ಒಬ್ಬರು ಹಿಡಿದುಕೊಂಡು ಬಿಲವನ್ನು ಹೊಕ್ಕೆವು. ನಾವು ಇಲ್ಲಿಗೆ ಬಂದದ್ದಕ್ಕೆ ಇದು ಕಾರಣ. ಹಸಿವಿನಿಂದ ಸಾಯಲು ಸಿದ್ಧ ಆಗಿದ್ದ ನಮಗೆ ನೀನು ಪ್ರಾಣದಾನ ಮಾಡಿದೆ. ನೀನು ಕೊಟ್ಟ ಫಲಮೂಲಗಳನ್ನು ತಿಂದು ತೃಪ್ತಿ ಆಯಿತು. ನಿನ್ನ ಈ ಆತಿಥ್ಯಕ್ಕೆ ಉಪಕಾರಕ್ಕೆ ಏನು ಪ್ರತ್ಯುಪಕಾರ ಮಾಡಬೇಕೋ ತಿಳಿಸಬೇಕು" ಎಂದ.

"ವಾನರರೆ, ನಿಮ್ಮ ವಿಷಯವನ್ನು ಕೇಳಿ ಬಹಳ ಸಂತೋಷ ಆಯಿತು. ನನಗೆ ಯಾವ ಪ್ರತ್ಯುಪಕಾರವೂ ಬೇಡ. ನನ್ನ ಧರ್ಮ ಅದು. ನಾನು ಮಾಡಿದೆ. ನನಗೆ ಯಾವುದೂ ಬೇಡ" ಎಂದಳು ಆ ಸರ್ವಜ್ಞೆ ಸ್ವಯಂಪ್ರಭೆ.

೨೪

ತಪಸ್ವಿನಿ ಸ್ವಯಂಪ್ರಭೆಯ ಮಾತು ಧರ್ಮಯುಕ್ತ. ದೋಷರಹಿತಳು ಆದ ಆಕೆಗೆ ಮತ್ತೆ ಹನುಮಂತ ಹೇಳಿದ: "ಧರ್ಮಪರಾಯಣೆ, ನಾವು ಎಲ್ಲರೂ ಈಗ ನಿನ್ನನ್ನು ಮರೆಹೊಕ್ಕು ಇದೇವೆ. ಮಹಾತ್ಮ ಸುಗ್ರೀವ ನಮಗೆ ಕೊಟ್ಟಿದ್ದ ಅವಧಿ ಮೀರಿಹೋಯಿತು. ಈ ಬಿಲಕ್ಕೆ ಬರುವಾಗಲೇ ಅವಧಿ ಮುಗಿಯಿತು. ಈಗ ಬಿಲದಿಂದ ಹೊರಗೆ ಹೋಗಲೂ ನಮಗೆ ದಾರಿ ಗೊತ್ತಿಲ್ಲ. ನೀನು ಧರ್ಮಿಷ್ಠೆ. ಈ ಬಿಲದಿಂದ ಹೊರಕ್ಕೆ ಕಳಿಸಿ ನಮ್ಮನ್ನು ಉದ್ಧರಿಸು.

"ನಮ್ಮ ದೊರೆ ಕೊಟ್ಟ ಗಡುವು ಮೀರಿತು. ಅಪ್ಪಣೆ ಮೀರಿದವರಿಗೆ ಮರಣದಂಡನೆ ವಿಧಿಸುತ್ತಾನೆ. ಆತ ಕ್ರೂರಶಾಸನ. ನಮ್ಮ ಆಯುಸ್ಸು ತೀರಿದ ಹಾಗೇ. ನಮ್ಮ ಕೆಲಸವೋ ಅಗಾಧ. ಮಹತ್ಕಾರ್ಯ. ಇಲ್ಲಿ ಇದ್ದರೆ ಏನೂ ಮಾಡಲಾರೆವು" ಎಂದ.

"ವಾನರರೆ, ಈ ಬಿಲವನ್ನು ಒಮ್ಮೆ ಹೊಕ್ಕವರು ಪ್ರಾಣಸಹಿತ ಹೊರಕ್ಕೆ ಹೋಗುವುದೇ ಇಲ್ಲ. ಆದರೆ ಇಷ್ಟು ದಿನ ತಪಸ್ಸುಮಾಡಿ ನಾನು ಗಳಿಸಿದ

ಪುಣ್ಯ ಇದೆ. ಅದರ ಪ್ರಭಾವದಿಂದ ನಿಮ್ಮನ್ನು ಹೊರಗೆ ಕಳಿಸುತ್ತೇನೆ. ಆದರೆ ನೀವು ಎಲ್ಲರೂ ಕಣ್ಣು ಮುಚ್ಚಿಕೊಳ್ಳಬೇಕು. ಕಣ್ಣು ತೆರೆದಿರೋ ಹೊರಕ್ಕೆ ಹೋಗಲಾರಿರಿ" ಎಂದಳು ಆ ಸ್ವಯಂಪ್ರಭೆ.

ವಾನರರಿಗೆ ಬಿಲದಿಂದ ಬಯಲಿಗೆ ಬರಬೇಕು ಎಂಬ ಆಸೆ. ಸಂತೋಷದಿಂದ ಕಣ್ಣನ್ನು ಮುಚ್ಚಿಕೊಂಡರು. ಎರಡೂ ಕೈಗಳಿಂದ ಗಟ್ಟಿ ಆಗಿ ಮುಚ್ಚಿಕೊಂಡರು. ಒಂದೇ ಗಳಿಗೆಯಲ್ಲಿ ಸ್ವಯಂಪ್ರಭೆ ಅವರನ್ನು ಹೊರಕ್ಕೆ ತಂದು ಬಿಟ್ಟಳು.

"ಬಗೆಬಗೆಯ ಗಿಡಬಳ್ಳಿ ಇರುವ ವಿಂಧ್ಯಪರ್ವತದ ದಕ್ಷಿಣದ ಕೊನೆ ಇದು. ಇದೇ ಪ್ರಸ್ರವಣ ಪರ್ವತ. ಇದೇ ಮಹೋದಧಿ ಸಮುದ್ರ. ನಿಮಗೆ ಶುಭ ಆಗಲಿ. ನಾನು ಹೋಗುತ್ತೇನೆ" ಎಂದು ಹೇಳಿ ಸ್ವಯಂಪ್ರಭೆ ಮಹದೈಶ್ವರ್ಯ ಯುಕ್ತ ಬಿಲದೊಳಕ್ಕೆ ಹೋದಳು.

ಇದಿರಿಗೆ ಅಪಾರ ಸಮುದ್ರ. ಭಯಂಕರ ತರಂಗಗಳು. ಘೋರಗರ್ಜನೆ. ವರುಣಾಲಯ ಅದು.

ಮಯನ ಮಾಯಾಶಕ್ತಿಯ ಫಲ ಆದ ಆ ಬಿಲದಲ್ಲಿ ಇದ್ದಾಗಲೇ ಒಂದು ತಿಂಗಳ ಅವಧಿ ಮುಗಿಯಿತು. ಏನು ಮಾಡಬೇಕೋ ಯೋಚಿಸಲು ಎಲ್ಲರೂ ಒಂದು ಕಡೆ ಸೇರಿದರು. ವಿಂಧ್ಯಪರ್ವತದ ತಪ್ಪಲು. ಗಿಡಗಳು ಸಮೃದ್ಧ ಆಗಿ ಹೂ ಬಿಟ್ಟು ಇದ್ದವು. ಗಿಡಮರಗಳಿಗೆ ಹೆಣೆದುಕೊಂಡು ಬೆಳೆದು ಹೂವಿನ ಭಾರಕ್ಕೆ ಬಗ್ಗಿ ಇದ್ದವು ಬಳ್ಳಿಗಳು ಎಲ್ಲಾ. ಹಣ್ಣಿನ ಭಾರಕ್ಕೆ ಜಗ್ಗಿ ಇದ್ದವು ಮಾವಿನ ಗಿಡ. ನೋಡಿ ವಾನರರಿಗೆ ಭಯ ಆಯಿತು. ಸಂಶಯ ಹುಟ್ಟಿತು. ವಸಂತಋತು ಬರುತ್ತ ಇದೆ ಎಂದು ತಿಳಿಯಿತು. ಗಡುವು ಎಂದೋ ತೀರಿ ಹೋಯಿತಲ್ಲ ಎಂದು ದುಃಖ ಆಯಿತು. ಭಯದಿಂದ ತತ್ತರಿಸಿದರು. ಅಲ್ಲೇ ಕುಸಿದುಬಿದ್ದರು.

ಸಿಂಹದಂತೆ ವೃಷಭದಂತೆ ಉಬ್ಬಿದ ಹೆಗಲು, ದುಂಡು ಉದ್ದ ಆದ ಭುಜ ಇರುವ ಯುವರಾಜ ಅಂಗದ ಶಿಷ್ಟರು ವಯೋವೃದ್ಧರು ಆದ ವಾನರರನ್ನು ಸವಿನುಡಿಗಳಿಂದ ಕರೆದ. ಅವರನ್ನು ಯಥಾಯೋಗ್ಯ ಆಗಿ ಗೌರವಿಸಿದ. ಆಮೇಲೆ ಹೇಳಿದ: "ವಾನರಶ್ರೇಷ್ಠರೆ, ವಾನರೇಂದ್ರ ಸುಗ್ರೀವನ ಅಪ್ಪಣೆಯಂತೆ ನಾವು ಎಲ್ಲರೂ ಹೊರಟುಬಂದೆವು. ನಾವು ಋಕ್ಷಬಿಲದಲ್ಲಿ ಇದ್ದಾಗಲೇ ಆತ

ಕೊಟ್ಟ ಅವಧಿ ಮುಗಿದುಹೋಯಿತು. ನಿಮಗೂ ಗೊತ್ತು ಅದು. ಆಶ್ವಯುಜ ಮಾಸದಲ್ಲಿ ನಮ್ಮನ್ನು ಕಳಿಸಿದ್ದು. ಒಂದು ತಿಂಗಳ ಅವಧಿ ಎಂದೋ ಮುಗಿದು ಹೋಯಿತು. ಈಗ ಏನು ಮಾಡಬೇಕು ನಾವು? ಆಲೋಚಿಸಿ ಹೇಳಿ.

" ವಾನರೋತ್ತಮರೆ, ನೀವು ಎಲ್ಲರೂ ಸ್ವಾಮಿಹಿತಾಸಕ್ತರು. ನೀತಿ-ಮಾರ್ಗವಿಶಾರದರು. ಸುಗ್ರೀವನ ನಂಬುಗೆಗೆ ಪಾತ್ರರು. ಸಮಸ್ತ ಕಾರ್ಯಗಳಲ್ಲೂ ನುರಿತವರು. ಕಾರ್ಯಸಾಧನೆಯ ಸಾಮರ್ಥ್ಯದಲ್ಲಿ ನಿಮ್ಮನ್ನು ಮೀರಿದವರು ಯಾರೂ ಇಲ್ಲ. ಸಮಸ್ತ ದಿಕ್ಕುಗಳಲ್ಲೂ ನಿಮ್ಮ ಪೌರುಷ ಪ್ರಖ್ಯಾತ ಆಗಿದೆ. ಸುಗ್ರೀವನ ಅಪ್ಪಣೆಯಂತೆ ನನ್ನನ್ನು ಮುಂದೆ ಇಟ್ಟುಕೊಂಡು ಬಂದಿರಿ. ನಾವು ಬಂದ ಕೆಲಸವೂ ಆಗಲಿಲ್ಲ. ಗಡುವೂ ಮೀರಿಹೋಯಿತು. ನಮಗೆ ಸಾವಿನ ಹೊರತು ಬೇರೆ ದಾರಿ ಇಲ್ಲ. ಸುಗ್ರೀವಾಜ್ಞೆಯನ್ನು ಮೀರಿ ಸುಖದಿಂದ ಇರಬಲ್ಲವನು ಯಾರು? ಸುಗ್ರೀವನೇ ಸ್ವಯಂ ಗಡುವು ಇಟ್ಟ. ಅದರಿಂದ ನಮಗೆ ಪ್ರಾಯೋಪವೇಶವೇ ಸರಿ.

" ವೀರರೆ, ಸುಗ್ರೀವನದು ಕ್ರೂರ ಸ್ವಭಾವ. ಆತ ನಮ್ಮ ಪ್ರಭು. ರಾಮಕಾರ್ಯದಲ್ಲಿ ಆಸಕ್ತ. ಈಗ ನಾವು ತಪ್ಪು ಮಾಡಿದವರು. ಹಿಂದಕ್ಕೆ ಹೋದರೆ ನಮ್ಮನ್ನು ಕ್ಷಮಿಸುವುದಿಲ್ಲ. ಖಂಡಿತ. ಎಲ್ಲರನ್ನೂ ದಂಡಿಸುತ್ತಾನೆ. ಒಬ್ಬರನ್ನೂ ಬಿಡುವುದು ಇಲ್ಲ. ಗಡುವು ಮೀರಿದರೂ ಸೀತೆಯ ಸುದ್ದಿಯನ್ನು ಆದರೂ ತಿಳಿದುಕೊಂಡು ಹೋದರೆ ಮನ್ನಿಸಿದರೂ ಮನ್ನಿಸಬಹುದು. ಈಗ ಎರಡೂ ಇಲ್ಲ. ಎರಡರಲ್ಲೂ ನಮ್ಮದು ತಪ್ಪು. ನಮಗೆ ಮರಣದಂಡನೆ ತಪ್ಪದು. ಆದ್ದರಿಂದ ನಮಗೆ ಪ್ರಾಯೋಪವೇಶವೇ ಸರಿ. ಮಡದಿಮಕ್ಕಳು ಮನೆಮಠ ಆಸ್ತಿಪಾಸ್ತಿ ಎಲ್ಲವನ್ನೂ ಮರೆತು ಇಲ್ಲಿ ಸಾಯುವುದೇ ಲೇಸು. ಹಿಂದಕ್ಕೆ ಹೋದರೂ ನಮ್ಮನ್ನು ಬದುಕಗೊಡ ಸುಗ್ರೀವ. ನಮ್ಮನ್ನು ಚಿತ್ರಹಿಂಸೆಗೆ ಗುರಿಮಾಡಿ ಕೊಲ್ಲಿಸುತ್ತಾನೆ. ಅದಕ್ಕಿಂತ ಇಲ್ಲಿ ಪ್ರಾಣ ಬಿಡುವುದೇ ಲೇಸು.

" ನನ್ನನ್ನು ಯುವರಾಜ ಆಗಿ ಮಾಡಿದ ಸುಗ್ರೀವ. ನನ್ನನ್ನು ಕೊಲ್ಲಲಾರ ಎಂದು ತಿಳಿಯಬೇಡಿ. ಸುಗ್ರೀವ ಅಲ್ಲ ನನಗೆ ಯುವರಾಜ ಪಟ್ಟ ಕಟ್ಟಿದ್ದು. ಶ್ರೀರಾಮ ಕಟ್ಟಿಸಿದ. ಅಲ್ಲದೆ ಸುಗ್ರೀವನಿಗೆ ನನ್ನ ಮೇಲೆ ಮೊದಲಿನಿಂದಲೂ ವೈರ. ನಾನು ವಾಲಿಯ ಮಗ ಅಲ್ಲವೆ? ಈಗ ಇದು ಒಂದು ತಪ್ಪು ಸಿಕ್ಕಿತು. ನನ್ನನ್ನು ಕೊಲ್ಲದೆ ಬಿಟ್ಟಾನೆಯೆ ಸುಗ್ರೀವ? ಮೊದಲೇ ನನ್ನ ಸರದಿ. ಅಲ್ಲಿ

ಹೋಗಿ ನಾನು ಸತ್ತರೆ ಗೆಳೆಯರಿಗೆ ಎಲ್ಲರಿಗೂ ಪರಮ ಸಂಕಟ. ಅವರನ್ನು ದುಃಖಕ್ಕೆ ಗುರಿಮಾಡಿ ನನಗೆ ಬಂದ ಪ್ರಯೋಜನ ಏನು? ಇದು ಸಮುದ್ರ ತೀರ. ಪುಣ್ಯಸ್ಥಳ. ನಾನು ಇಲ್ಲಿ ಪ್ರಾಯೋಪವೇಶ ಮಾಡುತ್ತೇನೆ" ಎಂದ.

ಅಂಗದಕುಮಾರನ ಮಾತನ್ನು ಎಲ್ಲರೂ ಕೇಳಿದರು. ವಾನರವೃದ್ಧರಿಗೆ ಕನಿಕರ ಹುಟ್ಟಿತು. ಅವನ ಮಾತನ್ನು ಒಪ್ಪಿದರು. "ನೀನು ಹೇಳಿದುದು ನಿಜ. ಸುಗ್ರೀವನದು ಕ್ರೂರಸ್ವಭಾವ. ರಾಮನೋ ಸೀತಾದರ್ಶನಾಸಕ್ತ. ಸೀತಾದೇವಿಯನ್ನು ಕಾಣದೆ ನಾವು ಹಿಂದಿರುಗಿ ಹೋದರೆ ನಮ್ಮನ್ನು ತಪ್ಪದೆ ದಂಡಿಸುತ್ತಾನೆ. ರಾಮನನ್ನು ಸಂತೋಷಪಡಿಸಲು ನಮ್ಮನ್ನು ಕೊಲ್ಲಿಸುತ್ತಾನೆ. ಸಂದೇಹ ಇಲ್ಲ. ತಪ್ಪುಮಾಡಿದವರು ಪ್ರಭುವಿನ ಕಣ್ಣಿಗೆ ಬೀಳಲೇ ಬಾರದು. ಹಿಂದಕ್ಕೆ ಹೋಗುವುದು ಆದರೆ ಸೀತಾದೇವಿಯ ಸುದ್ದಿಯನ್ನು ತಿಳಿದುಕೊಂಡೇ ಹೋಗಬೇಕು. ಇಲ್ಲದೆ ಇದ್ದರೆ ಇಲ್ಲೇ ಎಲ್ಲರೂ ಮಡಿದು ಯಮಾಲಯಕ್ಕೆ ಹೋಗಬೇಕು" ಎಂದರು.

ಭಯದಿಂದ ತತ್ತರಿಸುವ ವಾನರರು ಹೇಳಿದ ಈ ಮಾತನ್ನು ಕೇಳಿದ ತಾರ. "ಏಕೆ ದುಃಖಿಸುತ್ತೀರಿ? ನಾವು ಎಲ್ಲರೂ ಒಪ್ಪಿದರೆ ಮಯನ ಮಾಯಾಬಿಲಕ್ಕೆ ಹೋಗಿಬಿಡೋಣ. ಅಲ್ಲಿಗೆ ಯಾರೂ ಬರುವಂತೆ ಇಲ್ಲ. ಅಲ್ಲಿ ಬೇಕಾದಷ್ಟು ಹಣ್ಣುಹಂಪಲು ತಿನಿಸು ಇವೆ. ತಿಳಿನೀರು ಇದೆ. ಎಲ್ಲವೂ ಸಮೃದ್ಧಿ. ಅಲ್ಲಿ ಹಾಯಿ ಆಗಿ ಇರಬಹುದು ನಾವು. ಸುಗ್ರೀವನಿಗೆ ಆಗಲಿ ರಾಮನಿಗೆ ಆಗಲಿ ಕಡೆಗೆ ದೇವೇಂದ್ರನಿಗೆ ಆಗಲಿ ನಾವು ಅಂಜಬೇಕಾಗಿಲ್ಲ" ಎಂದ.

ಅಂಗದನ ಮಾತಿಗೂ ಮನ್ನಣೆ ಕೊಟ್ಟು ಹೇಳಿದ ತಾರನ ಮಾತನ್ನು ಕೇಳಿ ಎಲ್ಲರಿಗೂ ಸಂತೋಷ ಆಯಿತು. "ಹೇಗೆ ಮಾಡಿದರೆ ಎಲ್ಲರಿಗೂ ಹಿಂಸೆ ತಪ್ಪುತ್ತದೆಯೋ ಹಾಗೆ ಮಾಡಿ. ಕೂಡಲೇ ಮಾಡಿ" ಎಂದರು.

೨೫

ಚಂದ್ರಕಾಂತಿಯ ತಾರ ಹೇಳಿದ ಮಾತನ್ನು ಕೇಳಿದ ಹನುಮಂತ. ವಾನರರಾಜ್ಯ ಹೀಗೆ ಆದರೆ ಅಂಗದನ ಪಾಲು ಆಗುತ್ತದೆ ಎಂದುಕೊಂಡ.

ಅಂಗದ ಮಹಾಪ್ರಾಜ್ಞ. ಅವನಿಗೆ (ಗ್ರಹಣ ಧಾರಣ ಸ್ಮರಣ ಪ್ರತಿಪಾದನ ಊಹಾಪೋಹ ಅರ್ಥವಿಜ್ಞಾನ ತತ್ತ್ವಜ್ಞಾನ) ಅಷ್ಟಗುಣಗಳ ಬುದ್ಧಿ ಇದೆ. ನಾಲ್ಕು ಬಗೆಯ ಬಲ ಇದೆ. ಹದಿನಾಲ್ಕು ಗುಣಗಳೂ ಇವೆ. ಶುಕ್ಲಪಕ್ಷದ ಚಂದ್ರನ ಹಾಗೆ ದಿನದಿನಕ್ಕೂ ಅಂಗದನ ತೇಜ ಬಲಪರಾಕ್ರಮಗಳು ಹೆಚ್ಚುತ್ತ ಇವೆ. ಬುದ್ಧಿಯಲ್ಲಿ ಬೃಹಸ್ಪತಿಗೆ, ಪರಾಕ್ರಮದಲ್ಲಿ ತನ್ನ ತಂದೆ ವಾಲಿಗೆ ಸಮ. ಶುಕ್ರನ ಮಾತಿಗೆ ಕಿವಿಗೊಡುವ ದೇವೇಂದ್ರನ ಹಾಗೆ ತಾರನ ಮಾತನ್ನು ಕಿವಿ ಕೊಟ್ಟು ಕೇಳಿದ ಅಂಗದ. ಸ್ವಾಮಿಕಾರ್ಯದಲ್ಲಿ ಬಳಲಿದ ಸರ್ವಶಾಸ್ತ್ರವಿಶಾರದ ಅಂಗದನಲ್ಲಿ ಸುಗ್ರೀವನ ಮೇಲಣ ವೈರಬುದ್ಧಿಯನ್ನು ಬೆಳೆಯಗೊಡಬಾರದು, ಚಿವುಟಿಹಾಕಬೇಕು ಎನಿಸಿತು ಹನುಮಂತನಿಗೆ.

ನಾಲ್ಕು ಉಪಾಯಗಳಲ್ಲಿ ಮೂರನೆಯದು ಭೇದೋಪಾಯ. ಅದನ್ನು ಪ್ರಯೋಗಿಸಿದ ನುಡಿಜಾಣ ಹನುಮಂತ. ಅಂಗದನ ಅಭಿಪ್ರಾಯವನ್ನು ವಾನರರು ಒಪ್ಪದ ಹಾಗೆ ಮಾಡಿದ. ವಾನರರಲ್ಲಿ ಭಿನ್ನಾಭಿಪ್ರಾಯ ಮೂಡಿದ ಮೇಲೆ ದಂಡೋಪಾಯವನ್ನೂ ಅವಲಂಬಿಸಿದ. ಕೋಪಗೊಂಡ ಹಾಗೆ ಹೇಳಿದ ಅಂಗದನನ್ನು ಬೆದರಿಸಿ. " ಅಂಗದ, ಯುದ್ಧದಲ್ಲಿ ನೀನು ನಿಮ್ಮ ತಂದೆಗಿಂತಲೂ ಸಮರ್ಥ. ಸರಿಯೆ. ನಿಮ್ಮ ತಂದೆಯ ಹಾಗೆ ನೀನೂ ರಾಜ್ಯಭಾರ ಮಾಡ ಬಲ್ಲೆ. ಆದರೆ ಏನು ಪ್ರಯೋಜನ ? ಕಪಿಗಳು ಸ್ಥಿರಮತಿಗಳು ಅಲ್ಲ. ನೀನು ಹೇಳಿದಮಾತ್ರಕ್ಕೆ ಮಡದಿಮಕ್ಕಳನ್ನು ತೊರೆದು ಇಲ್ಲಿ ನಿಲ್ಲರು. ಇದಿರಿಗೇ ಹೇಳುತ್ತೇನೆ ಇರುವ ವಿಷಯ.

" ಈ ಜಾಂಬವಂತ, ಈ ನೀಲ, ಈ ಸುಹೋತ್ರ ನಿನ್ನನ್ನು ಅನುಸರಿಸಿ ಕೊಂಡು ಇರುವವರು ಅಲ್ಲ. ನಾನೂ ನಿನ್ನ ಆಜ್ಞಾನುವರ್ತಿ ಆಗಲಾರೆ. ಸಾಮ ದಾನ ಭೇದ ದಂಡ ಯಾವ ಉಪಾಯದಿಂದಲೂ ನಮ್ಮಲ್ಲಿ ಯಾರನ್ನೂ ಸುಗ್ರೀವನಿಂದ ಬೇರೆ ಮಾಡಿ ನಿನ್ನ ಕಡೆಗೆ ಎಳೆದುಕೊಳ್ಳಲಾರೆ. ಬಲಿಷ್ಠ ದುರ್ಬಲನ ವಿರೋಧಮಾಡಿದರೂ ಮಾಡಬಹುದು. ದುರ್ಬಲ ಬಲಾಢ್ಯನನ್ನು ವಿರೋಧಿಸುವುದು ಶ್ರೇಯಸ್ಕರ ಎಂದು ಯಾರೂ ಹೇಳರು. ಆತ್ಮಸಂರಕ್ಷಣೆ ಮಾಡಿಕೊಳ್ಳಬೇಕು ಬಲಹೀನ. ಹಗೆತನ ಮಾಡಿ ಏನು ಮಾಡಬಲ್ಲ ?

" ಅಂಗದಕುಮಾರ, ನನಗೆ ಬಲ ಇಲ್ಲದೆ ಇದ್ದರೂ ಈ ಬಿಲವೇ ಬಲ; ಇದು ಅಭೇದ್ಯ ಎಂದುಕೊಂಡೆಯೋ ಏನೋ. ಹಾಗೇನೂ ತಿಳಿಯಬೇಡ.

ಲಕ್ಷ್ಮಣನ ಬಾಣಗಳಿಗೆ ಈ ಬಿಲವನ್ನು ಭೇದಿಸುವುದು ಒಂದು ಮಹಾಕಾರ್ಯವೆ? ಇಂದ್ರ ಮಯನ ಮೇಲಣ ಕೋಪದಿಂದ ವಜ್ರಾಯುಧವನ್ನು ಎಸೆದು ಸ್ವಲ್ಪ ಗಾಸಿ ಮಾಡಿದ ಈ ಬಿಲಕ್ಕೆ. ಈಗ ಲಕ್ಷ್ಮಣನ ಬಾಣಗಳಿಗೆ ತರಗೆಲೆಯ ಹಾಗೆ ಸೀಳಿಹೋಗುತ್ತದೆ ಇದು. ಬೆಟ್ಟಗಳನ್ನೇ ಸೀಳುವ ವಜ್ರಾಯುಧದಂಥ ಸಿಡಿಲಿನಂಥ ಬಾಣ ಇವೆ ಲಕ್ಷ್ಮಣನಲ್ಲಿ.

"ಶತ್ರುಸೂದನ, ಸುಗ್ರೀವನನ್ನು ವಿರೋಧಿಸಿ ಈ ಬಿಲದಲ್ಲಿ ಇರಬೇಕು ಎನ್ನುತ್ತೀಯಾ ನೀನು? ಈ ವಾನರರು ಎಲ್ಲರೂ ನಿನ್ನನ್ನು ತೊರೆಯುತ್ತಾರೆ. ನಿನ್ನ ಹಿಂದೆ ಬಂದಾಗಿನಿಂದ ಮಡದಿಮಕ್ಕಳನ್ನು ನೆನೆದು ಚಿಂತಿಸುತ್ತ ಇದಾರೆ ಇವರು. ಆಹಾರ ಇಲ್ಲ, ನೀರು ಇಲ್ಲ. ಹಸಿವುಬಾಯಾರಿಕೆಗಳಿಂದ ಕಂಗೆಟ್ಟು ಇದಾರೆ. ಮಲಗಲು ಹಾಸಿಗೆ ಇಲ್ಲ. ಬಹಳ ಬಳಲಿ ಇದಾರೆ. ಎಲ್ಲರೂ ನಿನ್ನನ್ನು ಬಿಟ್ಟು ಹೋಗುತ್ತಾರೆ. ಆಮೇಲೆ ನಿನ್ನ ಪಾಡು ಏನು? ಮಿತ್ರರು ಇಲ್ಲದೆ ಬಾಂಧವರು ಇಲ್ಲದೆ ಒಂಟಿ ಆಗುತ್ತೀಯೆ. ಕಷ್ಟಕ್ಕೆ ದುಃಖಕ್ಕೆ ಸಿಗುತ್ತೀಯೆ. ಗಾಳಿಗೆ ಹೊಡೆದುಕೊಂಡು ಹೋಗುವ ಹುಲ್ಲುಕಡ್ಡಿಗಿಂತಲೂ ಕಡೆ ಆಗುತ್ತೀಯೆ. ರಾಜಾಜ್ಞೆಯನ್ನು ಮೀರಿದೆ ಎಂದು ಲಕ್ಷ್ಮಣನ ಬಾಣಗಳು ಬರುತ್ತವೆ ನಿನ್ನನ್ನು ಕೊಲ್ಲಲು. ಇದಿರಿಸಲು ಸಾಧ್ಯ ಇಲ್ಲದ ಬಾಣ ಅವು. ಮಹಾವೇಗವಂತ ಮಹಾಘೋರ. ನಮ್ಮ ಜೊತೆಗೆ ಬಂದರೆ ನೀನು, ವಿನೀತ ಆಗಿ ನಡೆದರೆ, ಸುಗ್ರೀವ ನಿನ್ನನ್ನು ಏನೂ ಮಾಡಲಾರ. ನಿನ್ನ ಯೌವರಾಜ್ಯ ಇರುತ್ತದೆ ನಿನಗೆ. ಮುಂದೆ ಕುಲಕ್ರಮದಂತೆ ರಾಜನೂ ಆಗಬಹುದು.

"ಅಂಗದ, ನಿನ್ನ ಚಿಕ್ಕಪ್ಪ ಸುಗ್ರೀವ ಧರ್ಮಾತ್ಮ. ಯಾವಾಗಲೂ ಪರರನ್ನು ಸಂತೋಷಪಡಿಸುವವನು. ದೃಢವ್ರತ. ಪರಿಶುದ್ಧ ಸ್ವಭಾವದವನು. ಪ್ರತಿಜ್ಞೆಗೆ ತಪ್ಪುವವನು ಅಲ್ಲ. ನಿನ್ನನ್ನು ಏಕೆ ಕೊಲ್ಲುತ್ತಾನೆ? ನಿಮ್ಮ ತಾಯಿತಾರೆಯಲ್ಲಿ ಅವನಿಗೆ ಅಸಾಧಾರಣ ಪ್ರೀತಿ. ಅವಳನ್ನು ಸಂತೋಷ ಪಡಿಸುವುದು ಅವನ ಆಸೆ. ಅವಳಿಗೋಸ್ಕರವೇ ಅವನ ಬದುಕು. ಅವನ ಸಮಸ್ತ ಪ್ರಾಣಗಳೂ ಅವಳ ಅಧೀನ. ನೀನು ಅವಳ ಮಗ. ಅವನಿಗೆ ಬೇರೆ ಮಕ್ಕಳು ಇಲ್ಲ.

"ಆದ್ದರಿಂದ ನೀನು ಅಲ್ಲಿಗೆ ಹೋಗಬೇಕಾದ್ದೇ ಸರಿ."

೨೬

ಹನುಮಂತನ ಮಾತಿನಲ್ಲಿ ವಿನಯ ಇತ್ತು, ಧರ್ಮ ಇತ್ತು, ರಾಜಗೌರವ ಇತ್ತು. ಅದನ್ನು ಅಂಗದ ಕೇಳಿದ.

"ಹನುಮಂತ, ಸುಗ್ರೀವ ಸ್ಥಿರಚಿತ್ತ ಅಲ್ಲ. ಆತ್ಮಶುಚಿ ಮನಶ್ಶುಚಿ ಇಲ್ಲ ಅವನಿಗೆ. ಕ್ರೂರ. ಋಜುಸ್ವಭಾವ ಇಲ್ಲ. ಪರಾಕ್ರಮಹೀನ. ಧೈರ್ಯ ಇಲ್ಲ. ಕೃತಜ್ಞತೆ ಇಲ್ಲ. ಹಿರಿಯ ಅಣ್ಣ ಬದುಕಿ ಇದ್ದಾಗಲೇ ಆತನ ಮಡದಿಯನ್ನು, ತನಗೆ ತಾಯಿ ಆಗಬೇಕಾದವಳನ್ನು ಕೈಹಿಡಿದ. ಬಿಲದ ಬಾಯಲ್ಲಿ ಕಾವಲು ಇರು ಎಂದು ಹೇಳಿ ಅಣ್ಣ ಯುದ್ಧಕ್ಕೆ ಹೋದರೆ ಬಿಲದ ಬಾಯಿಗೆ ಬಂಡೆ ಮುಚ್ಚಿ ಬಂದವನು ಸುಗ್ರೀವ. ಅವನಿಗೆ ಧರ್ಮ ಏನು ಗೊತ್ತು ?

"ಅಗ್ನಿಸಾಕ್ಷಿ ಆಗಿ ರಾಮನ ಗೆಳೆತನ ಮಾಡಿದ. ರಾಮನಿಂದ ಉಪಕಾರ ಪಡೆದ. ತಾನು ಆತನಿಗೆ ಕೊಟ್ಟ ಮಾತನ್ನೂ ಮರೆತು ಕಿಷ್ಕಿಂಧೆಯಲ್ಲಿ ವಿಷಯ ಲೋಲ ಆಗಿ ನಿಂತ. ಇಂಥವನು ಯಾರ ಉಪಕಾರವನ್ನು ನೆನೆದಾನು? ಈಗ ಸೀತಾದೇವಿಯನ್ನು ಹುಡುಕಲು ನಮ್ಮನ್ನು ಕಳಿಸಿದ್ದು ಅಧರ್ಮಕ್ಕೆ ಅಂಜಿ ಅಲ್ಲ. ಲಕ್ಷ್ಮಣನಿಗೆ ಹೆದರಿ. ಅವನಿಗೆ ಏನು ಧರ್ಮ?

"ಸುಗ್ರೀವ ಪಾಪಬುದ್ಧಿಯವನು. ಕೃತಘ್ನ. ಅವಿವೇಕಿ. ಚಪಲಚಿತ್ತ. ಸತ್ಕುಲಪ್ರಸೂತನಿಗೆ ಯಾರಿಗೆ ತಾನೆ ಅವನಲ್ಲಿ ನಂಬಿಕೆ ಇದ್ದೀತು? ಗುಣವಂತ ಆಗಲಿ ಗುಣಹೀನ ಆಗಲಿ ತನಗೆ ಹುಟ್ಟುವ ಮಗನಿಗೇ ಪಟ್ಟಕಟ್ಟಿಯಾನು. ನಾನು ಅವನ ವೈರಿಯ ಮಗ. ನನ್ನನ್ನು ಬದುಕಗೊಡುವುದೇ ಇಲ್ಲ.

"ನಾನು ಅಪರಾಧಿ. ನನ್ನ ಮಂತ್ರಾಲೋಚನೆಯೂ ಭಂಗ ಆಯಿತು. ದುರ್ಬಲ ಅನಾಥ ಶಕ್ತಿಹೀನ ಆಗಿ ನಾನು ಕಿಷ್ಕಿಂಧೆಗೆ ಹೇಗೆ ಹೋಗಲಿ? ಅಲ್ಲಿ ಬದುಕಬಲ್ಲೆನೆ? ಸುಗ್ರೀವ ಶಠ ಕ್ರೂರಿ ದಯಾಹೀನ. ಘಾತುಕ. ರಾಜ್ಯದ ಆಸೆಯಿಂದ ನನ್ನನ್ನು ಗುಟ್ಟು ಆಗಿ ಸಾಯಿಸುತ್ತಾನೆ. ಖಂಡಿತ. ಸುಗ್ರೀವನ ಸೆರೆಮನೆಯಲ್ಲಿ ಸಾಯುವುದಕ್ಕಿಂತ ಪ್ರಾಯೋಪವೇಶವೇ ಲೇಸು. ವಾನರರೆ, ನನಗೆ ಅಪ್ಪಣೆ ಕೊಡಿ.

"ವೀರರೆ, ನೀವು ಎಲ್ಲರೂ ಮನೆಗೆ ಹೋಗಿ. ನಾನು ಖಂಡಿತ ಹಿಂದೆ ತಿರುಗಿ ಬರುವವನಲ್ಲ. ಇದು ಶಪಥ. ನೀವು ಕಿಷ್ಕಿಂಧೆಗೆ ಹೋಗಿ ಮಹಾ

ಬಲಿಷ್ಠರು ಆದ ರಾಮಲಕ್ಷ್ಮಣರಿಗೆ ನನ್ನ ನಮಸ್ಕಾರಗಳನ್ನು ಹೇಳಿ. ನನಗೆ ಸಾವೇ ಶ್ರೇಯಸ್ಕರ. ಇಲ್ಲಿಯೇ ಪ್ರಾಣ ಬಿಡುತ್ತೇನೆ. ನನ್ನ ಚಿಕ್ಕಪ್ಪ ಸುಗ್ರೀವನಿಗೂ ನನ್ನ ನಮಸ್ಕಾರ ತಿಳಿಸಿ. ಆತನ ಯೋಗಕ್ಷೇಮವನ್ನು ವಿಚಾರಿಸಿದೆ ಎಂದು ಹೇಳಿ. ಚಿಕ್ಕಮ್ಮ ರುಮೆಗೂ ಹೇಳಿ. ಆಕೆಯ ಆರೋಗ್ಯ ಯೋಗಕ್ಷೇಮಗಳನ್ನು ವಿಚಾರಿಸಿ. ವಾನರವೀರರೆ, ನಮ್ಮ ತಾಯಿಯನ್ನು ಸಮಾಧಾನಗೊಳಿಸಿ. ಆಕೆಯ ಸ್ವಭಾವ ಬಲು ಮೆತ್ತನೆಯದು. ಬಹಳ ಕನಿಕರ ಆಕೆಗೆ. ನಾನು ಆಕೆಗೆ ಮುದ್ದು ಮಗ. ನನ್ನ ಸಾವಿನ ಸುದ್ದಿ ಕೇಳಿ ಆಕೆ ಖಂಡಿತ ಸಾಯುತ್ತಾಳೆ."

ಹೀಗೆ ಹೇಳಿ ಅಂಗದ ಅಲ್ಲಿ ಇದ್ದ ವಾನರವೃದ್ಧರೆಲ್ಲರಿಗೂ ನಮಸ್ಕಾರ ಮಾಡಿದ. ಬಹಳ ದುಃಖ ಆಯಿತು. ಗಳಗಳ ಅತ್ತ. ಅಳುತ್ತಲೇ ನೆಲದ ಮೇಲೆ ಹಾಸಿದ ದರ್ಭೆಗಳ ಮೇಲೆ ಮಲಗಿದ.

ವಾನರರು ಎಲ್ಲರಿಗೂ ಬಹಳ ಸಂಕಟ ಆಯಿತು. ಎಲ್ಲರೂ ಕಣ್ಣೀರು ಸುರಿಸುತ್ತ ಅತ್ತರು. ಸುಗ್ರೀವನನ್ನು ಬೈದರು. ವಾಲಿಯನ್ನು ಹೊಗಳಿದರು. ಎಲ್ಲರೂ ಅಂಗದನನ್ನು ಸುತ್ತುವರಿದರು. ಅಂಗದನ ಜೊತೆಯಲ್ಲಿ ತಾವೂ ಪ್ರಾಯೋಪವೇಶ ಮಾಡಿ ಪ್ರಾಣ ಬಿಡಲು ನಿರ್ಧರಿಸಿದರು. ಆಚಮನ ಮಾಡಿ ಬಂದು ಸಮುದ್ರದ ಉತ್ತರತೀರದಲ್ಲಿ ದಕ್ಷಿಣದ ಕಡೆ ಕೊನೆ ಮಾಡಿ ದರ್ಭೆ ಹಾಸಿ ಪೂರ್ವದ ಕಡೆ ಮುಖ ಮಾಡಿ ಕುಳಿತು ಪ್ರಾಯೋಪವೇಶ ಮಾಡಿದರು.

ರಾಮ ವನವಾಸಕ್ಕೆ ಬಂದ. ದಶರಥ ಮಹಾರಾಜ ಸತ್ತುಹೋದ. ಜನಸ್ಥಾನಕ್ಕೆ ಬಂದ ರಾಮ ಅಲ್ಲಿ ಖರದೂಷಣಾದಿಗಳನ್ನು ಕೊಂದ. ರಾವಣ ಸೀತೆಯನ್ನು ಕದ್ದು ಓಡಿಹೋದ. ಜಟಾಯುವನ್ನು ರಾವಣ ಕೊಂದ. ರಾಮ ವಾಲಿಯನ್ನು ಕೊಂದ. ಸುಗ್ರೀವ ಕಾಲವನ್ನು ಮೀರಿದುದಕ್ಕೆ ರಾಮನಿಗೆ ಕೋಪ ಬಂತು. ಸುಗ್ರೀವ ದಿಕ್ಕುದಿಕ್ಕಿಗೂ ಸೀತಾನ್ವೇಷಣಕ್ಕೆ ವಾನರ ಸೈನ್ಯವನ್ನು ಕಳಿಸಿದ. ಈಗ ತಾವು ಪ್ರಾಯೋಪವೇಶ ಮಾಡಬೇಕಾಯಿತು. ಒಬ್ಬರಿಗೆ ಒಬ್ಬರು ನಡೆದ ಕತೆಯನ್ನು ಎಲ್ಲಾ ಹೇಳಿಕೊಂಡರು.

ಅವರ ಮಾತಿನ ಗದ್ದಲ, ಅವರ ಕೂಗು ಕೇಕೆ ಕಲಕಲಧ್ವನಿ ಮೇಘ ಗರ್ಜನೆಯ ಹಾಗೆ ಆ ಬೆಟ್ಟದಲ್ಲಿ ಗುಹೆಗಳಲ್ಲಿ ಪ್ರತಿಧ್ವನಿಸಿತು.

೨೭

ಆ ಬೆಟ್ಟದ ಗುಹೆಗಳಲ್ಲಿ ಸಂಪಾತಿ ಇದ್ದ. ಸಂಪಾತಿ ಗೃಧ್ರರಾಜ. ಜಟಾಯುವಿನ ಹಿರಿಯ ಅಣ್ಣ. ಬಲಪರಾಕ್ರಮಗಳಿಗೆ ಸಂಪಾತಿ ಬಹಳ ಹೆಸರುವಾಸಿ. ಬಹಳ ಹಳೆಯ ಕಾಲದ ಮುದುಕ. ವಾನರವೀರರ ಈ ಗದ್ದಲ ಅವನಿಗೆ ಕೇಳಿಸಿತು. ಹೊರಕ್ಕೆ ಬಂದು ನೋಡಿದ. ದೊಡ್ಡ ಗುಂಪು. ಬಲು ಸಂತೋಷ ಆಯಿತು ಸಂಪಾತಿಗೆ. "ಆಹಾ, ದೈವಕ್ಕೆ ಸಮಸ್ತ ಪ್ರಾಣಿಗಳ ಯೋಗಕ್ಷೇಮವೂ ಬೇಕು. ಬಹುಕಾಲದಿಂದ ನನಗೆ ಆಹಾರ ಇಲ್ಲ. ಬಹಳ ಹಸಿವು. ಈ ಭಕ್ಷ್ಯ ದೈವವಶದಿಂದ ಈಗ ಸಿಕ್ಕಿತು ನನಗೆ. ನನ್ನ ಪ್ರಯತ್ನ ಇಲ್ಲದೆಯೇ ಸಿಕ್ಕಿತು ಇದು. ಈ ವಾನರರು ಸತ್ತ ಕೂಡಲೇ ಸಾಲು ಆಗಿ ಒಬ್ಬೊಬ್ಬರನ್ನೇ ತಿನ್ನುತ್ತೇನೆ" ಎಂದ ಹಿಗ್ಗಿನಿಂದ.

ಅಂಗದನಿಗೆ ದಿಗಿಲು ಆಯಿತು. "ಹನುಮಂತ, ನಮ್ಮನ್ನು ಕೊಲ್ಲಲು ಯಮನೇ ಗೃಧ್ರರೂಪದಿಂದ ಬಂದ ಹಾಗೆಯೇ ಇದೆ. ರಾಮನ ಕೆಲಸವೂ ಆಗಲಿಲ್ಲ. ಸುಗ್ರೀವನ ಅಪ್ಪಣೆಯನ್ನೂ ಮೀರಿದೆವು. ಇದು ಏನೋ ಬಂತು ಈ ವಿಪತ್ತು ಹಠಾತ್ತು ಆಗಿ. ಸೀತಾದೇವಿಗೆ ಒಳ್ಳೆಯದನ್ನು ಮಾಡಲು ಹೋಗಿ ಜಟಾಯುವಿಗೆ ಆದ ಗತಿ ಗೊತ್ತು ಅಲ್ಲ ನಿಮಗೆ. ಜಟಾಯುವಿನ ಹಾಗೇ ಎಲ್ಲ ತಿರ್ಯಗ್ಜಂತುಗಳೂ ರಾಮನನ್ನು ಸಂತೋಷಪಡಿಸಲು ಪ್ರಾಣ ತೊರೆದಿವೆ. ನಮಗೂ ಅದೇ ಗತಿ.

"ಸ್ನೇಹಕ್ಕೋ ಕಾರುಣ್ಯಕ್ಕೋ ಕಟ್ಟುಬಿದ್ದು ಎಲ್ಲ ಪ್ರಾಣಿಗಳೂ ರಾಮನಿಗೆ ಉಪಕಾರ ಮಾಡುತ್ತ ಇವೆ. ಧರ್ಮಾತ್ಮ ಜಟಾಯು ರಾಮನಿಗೆ ಉಪಕಾರ ಮಾಡಬೇಕು ಎಂದೇ ಸಾಹಸ ಮಾಡಿದ. ತನ್ನ ಪ್ರಾಣಗಳನ್ನೇ ಬಿಟ್ಟ. ಪ್ರಾಣ ತೊರೆದು ಜಟಾಯು ರಾಮನನ್ನೇ ಸಂತೋಷಪಡಿಸಿದ. ನಾವೂ ರಾಮನ ಕೆಲಸಕ್ಕೋಸ್ಕರವೇ ಕಾಡುಗಳನ್ನು ಎಲ್ಲವನ್ನೂ ಸುತ್ತಿದೆವು. ಸೋತು ಬಳಲಿದೆವು. ಸುತ್ತಿ ಸುತ್ತಿ ಸಾಕು ಆಯಿತು. ಸೀತಾದೇವಿ ಕಾಣಲಿಲ್ಲ. ಈಗ ನಮಗೆ ಜೀವದ ಆಸೆ ಇಲ್ಲ.

"ಆ ಗೃಧ್ರರಾಜ ಜಟಾಯು ಎಂಥ ಭಾಗ್ಯಶಾಲಿ! ನಮ್ಮ ಹಾಗೆ ಅವನಿಗೆ ಸುಗ್ರೀವನ ಭಯ ಇರಲಿಲ್ಲ. ರಾವಣಾಸುರನ ಸಂಗಡ ಯುದ್ಧ

ಮಾಡಿ ಸತ್ತ. ರಾಮನ ಕೈಯಿಂದ ಸಂಸ್ಕಾರಪಡೆದ. ಪರಮಪದಕ್ಕೆ ಹೋದ. ಸೀತಾರಾಮಲಕ್ಷ್ಮಣರು ವನವಾಸಕ್ಕೆ ಬಂದರು. ದಶರಥ ಮಹಾರಾಜ ತೀರಿ ಹೋದ. ಸೀತಾದೇವಿಯನ್ನು ರಾವಣ ಕದ್ದುಕೊಂಡು ಹೋದ. ಜಟಾಯು ಅವನ ಕೈಯಲ್ಲಿ ಸತ್ತ. ಇದು ಎಲ್ಲದರಿಂದ ವಾನರರಿಗೆ ಬಂತು ಈ ದುರವಸ್ಥೆ.

"ರಾಮಬಾಣದಿಂದ ವಾಲಿ ಸತ್ತ. ಜನಸ್ಥಾನದ ರಾಕ್ಷಸರು ಎಲ್ಲರೂ ರಾಮನ ಕೈಯಲ್ಲಿ ಮಡಿದರು. ಎಲ್ಲಕ್ಕೂ ದಶರಥಮಹಾರಾಜ ಕೈಕೇಯಿಗೆ ಕೊಟ್ಟ ವರವೇ ಕಾರಣ" ಎಂದು ಸಂಕಟದಿಂದ ಹೇಳಿದ ಅಂಗದ.

ಸಂಪಾತಿ ಇದನ್ನು ಕೇಳಿದ. ಗೃಧ್ರರಾಜ ಮಹಾಬುದ್ಧಿಶಾಲಿ. ಅವನ ಮನಸ್ಸು ಚಲಿಸಿತು. ನೆಲದ ಮೇಲೆ ಮಲಗಿ ಇದ್ದ ವಾನರರನ್ನು ನೋಡಿದ. ಅವರನ್ನು ಮಾತಾಡಿಸಲು ಮುಂದೆ ಬಂದ.

೨೮

ಸಂಪಾತಿಯ ಕೊಕ್ಕು ಚೂಪು. ಗಂಭೀರ ಮಹಾಧ್ವನಿ. "ಯಾರು ಅದು ನನಗೆ ಪ್ರಾಣಕ್ಕಿಂತಲೂ ಹೆಚ್ಚು ಆದ ಜಟಾಯು ಸತ್ತ ಎನ್ನುವವರು? ನನ್ನ ಮನಸ್ಸು ಗಾಸಿಗೊಂಬ ಮಾತು ಅದು. ಜನಸ್ಥಾನದಲ್ಲಿ ಜಟಾಯುವಿಗೂ ರಾವಣನಿಗೂ ಯುದ್ಧ ಆಯಿತು ಎಂದೆ. ಏಕೆ ಆಯಿತು? ಬಹುಕಾಲದಮೇಲೆ ನನ್ನ ಪ್ರಿಯ ತಮ್ಮನ ಹೆಸರನ್ನು ಕೇಳಿದೆ. ವಾನರರೆ, ಈ ದುರ್ಗಮ ಗಿರಿಯಿಂದ ನನ್ನನ್ನು ದಯೆಮಾಡಿ ಕೆಳಗೆ ಇಳಿಸಿ. ನನ್ನ ತಮ್ಮನ ಸಾವಿನ ಸುದ್ದಿಯನ್ನು ಕೇಳುತ್ತೇನೆ.

"ನನ್ನ ತಮ್ಮ ಜಟಾಯು ಬಹಳ ಗುಣವಂತ, ಮಹಾಪರಾಕ್ರಮಶಾಲಿ. ಅವನ ಸುದ್ದಿ ಹೇಳಿ. ನನ್ನ ರೆಕ್ಕೆ ಸುಟ್ಟುಹೋಗಿವೆ. ಸೂರ್ಯನ ಜಳಕ್ಕೆ ಸುಟ್ಟು ಹೋದವು. ನಾನು ಇಳಿದು ಬರಲಾರೆ."

ಸಂಪಾತಿಯ ಮಾತಿನಲ್ಲಿ ವಾನರರಿಗೆ ನಂಬಿಕೆ ಹುಟ್ಟಲಿಲ್ಲ. ಮೊದಲು ಅವನು ಆಡಿದ ಮಾತು ಅವನು ಕ್ರೂರಕರ್ಮಿ ಎನಿಸುವ ಹಾಗೆ ಮಾಡಿತ್ತು. ತಮ್ಮನ್ನು ತಿಂದುಹಾಕಲು ಈ ಉಪಾಯ ಎಂದುಕೊಂಡರು. ಹಾಗೆಯೇ ಆಲೋಚನೆ ಮಾಡಿದರು. "ಹೇಗೂ ಸಾಯಲು ಹೊರಟು ಪ್ರಾಯೋಪವೇಶ

ಮಾಡಿದವರು ನಾವು. ಈ ಗೃಧ್ರರಾಜ ನಮ್ಮನ್ನು ತಿಂದುಹಾಕಿದರೆ ನಿರಾಯಾಸ ಮರಣ ನಮಗೆ. ನಮ್ಮ ಕೆಲಸವೂ ಆಯಿತು" ಎಂದುಕೊಂಡರು. ಪಕ್ಷಿಯನ್ನು ಶಿಖರದಿಂದ ಕೆಳಗೆ ಇಳಿಸಿದರು.

ಆಗ ಅಂಗದ ಹೇಳಿದ: "ಸಂಪಾತಿ, ಮಹಾಪರಾಕ್ರಮಿ ಧರ್ಮಾತ್ಮ ಋಕ್ಷರಜಸ್ಸು ವಾನರರಾಜ ಆಗಿ ಇದ್ದ. ಆತನಿಗೆ ವಾಲಿ ಸುಗ್ರೀವ ಇಬ್ಬರು ಮಕ್ಕಳು. ನಾನು ವಾಲಿಯ ಮಗ. ವಾಲಿ ಪರಾಕ್ರಮದಲ್ಲಿ ಲೋಕಕ್ಕೇ ಹೆಸರು ಆದ. ಈ ಭೂಮಂಡಲಕ್ಕೆ ಒಡೆಯ, ಮಹಾತೇಜಸ್ವಿ, ಇಕ್ಷ್ವಾಕು ವಂಶೋದ್ಭವ ದಶರಥಪುತ್ರ ರಾಮ ತಂದೆಯ ಅಪ್ಪಣೆಯಂತೆ ದಂಡಕಾರಣ್ಯಕ್ಕೆ ಬಂದ. ಅವನ ಜೊತೆಯಲ್ಲಿ ಅವನ ತಮ್ಮ ಲಕ್ಷ್ಮಣ, ಅವನ ಹೆಂಡತಿ ಸೀತೆ ಇಬ್ಬರೂ ಬಂದರು ಕಾಡಿಗೆ. ಜನಸ್ಥಾನದಲ್ಲಿ ಇದ್ದರು. ಅಣ್ಣತಮ್ಮ ಇಬ್ಬರೂ ಇಲ್ಲದ ಸಮಯವನ್ನು ನೋಡಿ ರಾವಣಾಸುರ ಬಲಾತ್ಕಾರದಿಂದ ಸೀತೆಯನ್ನು ಕದ್ದು ಒಯ್ದ.

"ಜನಸ್ಥಾನದಲ್ಲೇ ಇದ್ದ ಜಟಾಯು. ರಾಮನ ತಂದೆ ದಶರಥನ ಗೆಳೆಯ. ರಾವಣಾಸುರ ಬಲಾತ್ಕಾರದಿಂದ ಸೀತಾದೇವಿಯನ್ನು ಆಕಾಶಮಾರ್ಗದಲ್ಲಿ ಎತ್ತಿಕೊಂಡು ಹೋಗುತ್ತ ಇದ್ದುದನ್ನು ನೋಡಿದ. ಕೂಡಲೇ ರಾವಣನನ್ನು ಅಡ್ಡಗಟ್ಟಿದ. ಅವನ ರಥವನ್ನು ಮುರಿದ. ಆದರೆ ಜಟಾಯು ಬಹಳ ಮುದುಕ. ಯುದ್ಧದಲ್ಲಿ ದಣಿದ. ರಾವಣಾಸುರ ಅವನನ್ನು ಕೊಂದುಹಾಕಿದ. ಅವನ ಕೈಯಲ್ಲಿ ಸತ್ತದ್ದಕ್ಕೆ ಇದೇ ಕಾರಣ. ಆದರೆ ರಾಮನೇ ಜಟಾಯುವಿಗೆ ದಹನ ಸಂಸ್ಕಾರ ಮಾಡಿದ. ಅದರಿಂದ ಆತನಿಗೆ ಸದ್ಗತಿ ಆಯಿತು.

ಆಮೇಲೆ ರಾಮನಿಗೂ ನನ್ನ ಚಿಕ್ಕಪ್ಪ ಸುಗ್ರೀವನಿಗೂ ಸಖ್ಯ ಆಯಿತು. ರಾಮ ನನ್ನ ತಂದೆಯನ್ನು ಕೊಂದ. ಸುಗ್ರೀವನಿಗೂ ಅವನ ಅಣ್ಣನಿಗೂ ಮೊದಲಿನಿಂದ ವಿರೋಧ. ತನ್ನ ಮಂತ್ರಿಗಳ ಸಂಗಡ ಬೇರೆ ಆಗಿಯೇ ಇರುತ್ತ ಇದ್ದ. ವಾಲಿಯನ್ನು ಕೊಂದಮೇಲೆ ರಾಮ ಸುಗ್ರೀವನಿಗೆ ರಾಜ್ಯಾಭಿಷೇಕ ಮಾಡಿದ. ರಾಮನಿಂದ ವಾನರರಾಜ ಆದ ಸುಗ್ರೀವ ಸೀತಾದೇವಿಯನ್ನು ಹುಡುಕಲು ನಮ್ಮನ್ನು ಎಲ್ಲರನ್ನೂ ಕಳಿಸಿದ. ಎಲ್ಲಾ ಅಡವಿಗಳಲ್ಲೂ ನಾವು ಹುಡುಕಿದೆವು. ರಾತ್ರಿಯ ಹೊತ್ತು ಸೂರ್ಯನ ಬೆಳಕು ಕಾಣಬಾರದು. ಹಾಗೇ ಸೀತಾದೇವಿಯೂ ನಮಗೆ ಕಾಣಲಿಲ್ಲ. ದಂಡಕಾರಣ್ಯವನ್ನೆಲ್ಲಾ ಹುಡುಕಿದೆವು.

ಹುಡುಕುತ್ತ ಹುಡುಕುತ್ತ ದಾರಿ ತಿಳಿಯದೆ ಒಂದು ಬಿಲವನ್ನು ಹೊಕ್ಕೆವು. ಅದು ಮಯಮಾಯಾನಿರ್ಮಿತ. ಅಷ್ಟರಲ್ಲಿ ಸುಗ್ರೀವ ನಮಗೆ ಕೊಟ್ಟ ಗಡುವು ತೀರಿತು. ಅರಸನ ಅಪ್ಪಣೆಯನ್ನು ಮೀರಿದೆವು. ಆತನ ಬಳಿಗೆ ಹಿಂದಿರುಗಿ ಹೋಗಲು ನಮಗೆ ಭಯ. ಆದ್ದರಿಂದ ಇಲ್ಲಿ ಪ್ರಾಯೋಪವೇಶ ಮಾಡಿದೆವು. ಹಿಂದಕ್ಕೆ ಹೋದರೂ ರಾಮನಿಗೋ ಲಕ್ಷ್ಮಣನಿಗೋ ಸುಗ್ರೀವನಿಗೋ ಯಾರಿಗೆ ಸಿಟ್ಟುಬಂದರೂ ನಮಗೆ ಉಳಿಗಾಲ ಇಲ್ಲ."

೨೯

ವಾನರರಿಗೆ ಪ್ರಾಣದ ಆಸೆ ಇರಲಿಲ್ಲ. ಕನಿಕರ ಬರುವಂತೆ ಇತ್ತು ಅವರ ಕಥೆ. ಸಂಪಾತಿಗೂ ಅದನ್ನು ಕೇಳಿ ಕಣ್ಣಿನಲ್ಲಿ ನೀರು ಬಂತು. ತನ್ನ ದೊಡ್ಡ ಧ್ವನಿಯಿಂದ ಹೇಳಿದ: "ವಾನರರೆ, ಬಹಳ ಬಲಾಢ್ಯ ಆದ ರಾವಣನ ಸಂಗಡ ಯುದ್ಧಮಾಡಿ ಸತ್ತ ಜಟಾಯು ಎಂದಿರಲ್ಲ. ಆ ಜಟಾಯು ನನ್ನ ತಮ್ಮ. ಏನು ಮಾಡಲಿ ಹಾಳುಮುಪ್ಪು ಬಂದಿದೆ. ನೀವು ಹೇಳಿದ್ದನ್ನು ಕೇಳಿ ಸುಮ್ಮನೆ ಸೈರಿಸಿಕೊಳ್ಳಬೇಕಾಗಿದೆ. ಸೇಡು ತೀರಿಸಿಕೊಳ್ಳಲಾರೆ. ನನಗೆ ರೆಕ್ಕೆಗಳೂ ಇಲ್ಲ.

"ಹಿಂದೆ ವೃತ್ರಾಸುರನ ವಧೆ ಆಯಿತಲ್ಲ. ಆಗ ನಾವು ಅಣ್ಣತಮ್ಮ ಇಬ್ಬರೂ ವೇಗದ ಪೋಟಾಪೋಟಿಮಾಡಿದೆವು. ಒಬ್ಬರನ್ನು ಒಬ್ಬರು ಗೆಲ್ಲಬೇಕು ಎಂಬ ಹುಮ್ಮಸ್ಸು. ಇಬ್ಬರೂ ಸೂರ್ಯಮಂಡಲದ ಕಡೆ ಹಾರಿದೆವು. ಮಂಡಲ ಆಕಾರದಲ್ಲಿ ಸುತ್ತುತ್ತ ಸುತ್ತುತ್ತ ಆಕಾಶಮಾರ್ಗದಲ್ಲಿ ಬಹಳ ದೂರ ಹೋದೆವು. ಮಟಮಟ ಮಧ್ಯಾಹ್ನ. ಬಿಸಿಲು ಬಹಳ ಹೆಚ್ಚು ಆಯಿತು. ಆ ತಾಪಕ್ಕೆ ತಾಳಲಾರದೆ ನನ್ನ ತಮ್ಮ ಸೊರಗಿದ. ಬೆಂದು ಬಾಡುತ್ತ ಇದ್ದ ತಮ್ಮನನ್ನು ನೋಡಿ ನನಗೆ ಸಹಿಸಲು ಆಗಲಿಲ್ಲ. ಮರುಕ ಹುಟ್ಟಿತು. ಮೇಲೆ ಹಾರಿ ಸೂರ್ಯನಿಗೆ ಅಡ್ಡ ಆಗಿ ನನ್ನ ಗರಿಗೆದರಿದೆ. ನನ್ನ ರೆಕ್ಕೆ ಸುಟ್ಟುಹೋದವು. ಈ ವಿಂಧ್ಯಪರ್ವತದಲ್ಲಿ ಬಿದ್ದೆ. ಅಂದಿನಿಂದ ಇಲ್ಲೇ ಇದೇನೆ. ನನ್ನ ತಮ್ಮ ಜಟಾಯುವಿನ ಸುದ್ದಿ ತಿಳಿಯಲೇ ಇಲ್ಲ. ಈಗ ನೀವು ಹೇಳಿದಿರಿ."

ಮಹಾಬುದ್ಧಿಶಾಲಿ ಅಂಗದ. "ಓಹೋ, ಜಟಾಯುವಿನ ಅಣ್ಣನೋ ನೀನು? ಹಾಗೆ ಇದ್ದರೆ ಆ ರಾವಣಾಸುರನ ಸ್ಥಳ ನಿನಗೆ ಗೊತ್ತು ಇರಬೇಕು.

ಮುಂದೆ ಬರುವುದನ್ನು ಅರಿಯದ ಆ ಪಾಪಾತ್ಮ ರಾವಣ ಹತ್ತಿರದಲ್ಲಿದಾನೆಯೋ ದೂರದಲ್ಲಿ ಇದಾನೆಯೋ ಹೇಳು" ಎಂದು ಕೇಳಿದ.

ಆಗ ಸಂಪಾತಿ ಹೇಳಿದ್ದು ಎಲ್ಲ ವಾನರರಿಗೂ ಸಂತೋಷಕರ ಆಯಿತು. ಅವನ ಗೌರವಕ್ಕೆ ತಕ್ಕಹಾಗೆಯೂ ಇತ್ತು. ಹೇಳಿದ: "ವಾನರರೆ, ನಾನು ಹದ್ದು. ನನ್ನ ರೆಕ್ಕೆಗಳೂ ಸುಟ್ಟುಹೋಗಿವೆ. ವೀರ್ಯ ಎಲ್ಲಾ ಉಡುಗಿತು. ಏನೂ ಮಾಡಲಾರೆ ನಾನು. ರಾಮನಿಗೆ ವಾಕ್ಸಹಾಯ ಮಾಡಬಲ್ಲೆ. ನನಗೆ ಎಲ್ಲ ವಾರುಣಲೋಕಗಳೂ ಗೊತ್ತು. ತ್ರಿವಿಕ್ರಮಾವತಾರದಲ್ಲಿ ಮಹಾವಿಷ್ಣು ಹೆಜ್ಜೆ ಇಟ್ಟ ಊರ್ಧ್ವಲೋಕಗಳೂ ಗೊತ್ತು. ದೇವಾಸುರರ ಯುದ್ಧಗಳನ್ನು ನೋಡಿದೇನೆ. ಅಮೃತಮಥನವನ್ನೂ ಬಲ್ಲೆ.

"ನೀವು ಬಂದಿರುವುದು ರಾಮಕಾರ್ಯಕ್ಕೆ. ನಿಮಗಿಂತ ಮೊದಲೇ ನಾನು ಅದನ್ನು ಮಾಡಬೇಕು. ಆದರೆ ನನಗೆ ಮುಪ್ಪು ಬಂತು. ರೆಕ್ಕೆ ಇಲ್ಲ. ಅವಯವ ಗಳು ಬಿಗಿತಪ್ಪಿದವು. ಪರಾಕ್ರಮ ಕುಂದಿಹೋಗಿದೆ. ಏನು ಮಾಡಲಿ? ಕೆಲವು ದಿನಗಳ ಕೆಳಗೆ ಆ ದುರಾತ್ಮ ರಾವಣ ಒಬ್ಬ ಯುವತಿಯನ್ನು ಅಂತರಿಕ್ಷಮಾರ್ಗ ದಲ್ಲಿ ಎತ್ತಿಕೊಂಡು ಹೋಗುತ್ತಿದ್ದ. ನೋಡಿದೆ. ಆಕೆ ಚೆಲುವೆ. ಸರ್ವಾಭರಣ ಭೂಷಿತೆ. 'ರಾಮಾ, ರಾಮಾ' ಎಂದು ಒಮ್ಮೆ, 'ಲಕ್ಷ್ಮಣಾ, ಲಕ್ಷ್ಮಣಾ' ಎಂದು ಒಮ್ಮೆ, ಆಕೆ ಕೂಗುತ್ತ ಅಳುತ್ತ ಇದ್ದಳು. ತನ್ನ ಮೈಮೇಲಿನ ಒಡವೆ ಗಳನ್ನು ಕಿತ್ತೆಸೆಯುತ್ತ ರಾವಣನ ಕೈಯಿಂದ ಬಿಡಿಸಿಕೊಳ್ಳಲು ಕೈಕಾಲು ಒದರುತ್ತ ಇದ್ದಳು ಆಕೆ. ಆ ರಾಕ್ಷಸನ ಕಪ್ಪು ಮೈಯ ಮೇಲೆ ಆಕೆಯ ರೇಶಿಮೆಸೀರೆ ಹಾರುವಾಗ ಬೆಟ್ಟದ ತುದಿಯ ಮೇಲೆ ಸೂರ್ಯನ ಕಾಂತಿ ಬಿದ್ದಂತೆ ಮೋಡಗಳ ನಡುವೆ ಕೋಲ್ಮಿಂಚು ಹೊಳೆದಂತೆ ಕಾಣುತ್ತ ಇತ್ತು. ಆಕೆ ರಾಮನ ಹೆಸರನ್ನು ಕೂಗುತ್ತಿದ್ದಳು. ಸೀತಾದೇವಿಯೇ ಇರಬೇಕು.

"ಆ ರಾವಣನ ಸುದ್ದಿ ಹೇಳುತ್ತೇನೆ, ಕೇಳಿ. ಸಾಕ್ಷಾತ್ ವಿಶ್ರವಸ್ಸಿನ ಮಗ ಅವನು. ಕುಬೇರನ ತಮ್ಮ. ಅವನ ವಾಸ ಲಂಕಾಪಟ್ಟಣದಲ್ಲಿ. ಈ ಸಮುದ್ರತೀರಕ್ಕೆ ನೂರು ಗಾವುದ ದೂರದಲ್ಲಿ ಒಂದು ದ್ವೀಪ ಇದೆ. ಅದರ ನಡುವೆಯೇ ಲಂಕಾಪಟ್ಟಣ. ಸೊಗಸು ಆದ ಊರು. ವಿಶ್ವಕರ್ಮ ನಿರ್ಮಿಸಿದ್ದು. ಅದಕ್ಕೆ ಸ್ವರ್ಣಮಯ ಬಾಗಿಲು. ಚಿನ್ನದ ಜಗಲಿಗಳು. ಸೂರ್ಯನಂತೆ ಥಳಥಳಿಸುವ ಮಹಾ ಪ್ರಾಕಾರ. ಅಲ್ಲಿ ಇದಾಳೆ ಸೀತಾದೇವಿ. ಮೊದಲು

ತಾನು ಉಟ್ಟುಕೊಂಡಿದ್ದ ಅದೇ ರೇಶಿಮೆ ಸೀರೆ. ಬಹಳ ಸಂಕಟದಲ್ಲಿ ಇದ್ದಾಳೆ. ದುರುಳ ರಾವಣನ ಅಂತಃಪುರದ ಘೋರ ರಾಕ್ಷಸಿಯರ ಕಾವಲು. ಅಲ್ಲಿಗೆ ಹೋದರೆ ನೀವು ಜಾನಕಿಯನ್ನು ನೋಡಬಹುದು. ಆದರೆ ಇಲ್ಲಿಂದ ನೂರು ಗಾವುದ ದೂರ ಇದೆ ಲಂಕಾಪಟ್ಟಣ. ಕಡಲ ನಡುವೆ.

"ವಾನರರೆ, ನೀವು ಬೇಗ ಅಲ್ಲಿಗೆ ಹೋಗಿ. ಅಲ್ಲಿ ಸೀತಾದೇವಿಯನ್ನು ನೋಡಿ ಬರುತ್ತೀರಿ. ಖಂಡಿತ. ನನ್ನ ದಿವ್ಯಜ್ಞಾನ ನನಗೆ ಹೇಳುತ್ತ ಇದೆ. ನೀವು ಹಿಂದಿರುಗಿ ಬರುತ್ತೀರಿ. ದಿವ್ಯದೃಷ್ಟಿ ಇದೆ ನನಗೆ. ಇಲ್ಲಿಂದಲೇ ರಾವಣನನ್ನೂ ಸೀತೆಯನ್ನೂ ನಾನು ನೋಡಬಲ್ಲೆ. ಆಕಾಶಮಾರ್ಗದಲ್ಲಿ ಏಳನೆಯ ದಾರಿಯಲ್ಲಿ ಸಂಚರಿಸುವ ಗರುಡನ ಕುಲದವನು ನಾನು.

"ಆಕಾಶದಲ್ಲಿ ಏಳು ದಾರಿ ಇವೆ. ಮೊದಲನೆ ದಾರಿ ಗುಬ್ಬಿ ಗುಬ್ಬಚ್ಚಿಗಳದು. ಕಾಳು ತಿನ್ನುವ ಹಕ್ಕಿಗಳದು. ಇದು ಭೂಮಿಗೆ ಬಹಳ ಹತ್ತಿರ. ಮರದ ಮೇಲಿನ ಹಣ್ಣುಹಂಪಲು ತಿಂದು ಬದುಕುವ ಹಕ್ಕಿಗಳೂ ಕಾಗೆಗಳೂ ಎರಡನೆ ದಾರಿಯಲ್ಲಿ ಹಾರುತ್ತವೆ. ಮೂರನೆ ದಾರಿ ಕ್ರೌಂಚಗಳದು, ನೀರು-ಕಾಗೆಗಳದು, ಗೊರವಂಕಗಳದು. ಆ ಬಗೆಯ ಹಕ್ಕಿಗಳದು. ಗಿಡಗಗಳದು ನಾಲ್ಕನೆಯ ದಾರಿ. ಇವೆಲ್ಲಕ್ಕಿಂತ ಎತ್ತರದ ಐದನೆ ದಾರಿ ಹದ್ದುಗಳದು. ಬಲದಲ್ಲಿ ವೀರ್ಯದಲ್ಲಿ ಮಿಗಿಲು. ರೂಪ ಯೌವನಗಳಲ್ಲಿ ಅತಿಶಯ ಆದ ಹಂಸಗಳು ಆರನೆ ದಾರಿಯಲ್ಲಿ ಹೋಗುತ್ತವೆ. ಎಲ್ಲಕ್ಕಿಂತ ಮೇಲೆ ಏಳನೆ ದಾರಿ. ಅದರಲ್ಲಿ ವಿನತೆಯ ಮಕ್ಕಳು ಗರುಡ, ಅರುಣ ಸಂಚರಿಸುತ್ತಾರೆ. ನಾನು ಅರುಣನ ಸಂತತಿ. ಆದರಿಂದಲೇ ನನಗೆ ಈ ದಿವ್ಯದೃಷ್ಟಿ.

"ಆಹಾರಬಲ ಸ್ವಾಭಾವಿಕ ಬಲಗಳಿಂದ ನಮ್ಮ ದೃಷ್ಟಿ ನೂರು ಗಾವುದ ದೂರದವರೆಗೂ ಹರಡುತ್ತದೆ. ಕೋಳಿಗೆ ತನ್ನ ಕಾಲ ಕೆಳಗಿನದು ಮಾತ್ರ ಕಾಣುತ್ತದೆ. ನಮಗೆ ಬಹುದೂರದ ಪದಾರ್ಥಗಳೂ ಕಾಣುತ್ತವೆ. ಅವನ್ನು ತಂದು ಇಟ್ಟುಕೊಳ್ಳುತ್ತೇವೆ. ಕೋಳಿಗಳಿಗೆ ಕಾಲಿನಲ್ಲಿ ಜೀವ. ನಮಗೆ ಕಣ್ಣಿನಲ್ಲಿ.

"ವಾನರರೆ, ರಾವಣ ಮಾಡಿದ್ದು ಬಹಳ ತಪ್ಪು. ನೀವು ಅವನನ್ನು ಕಂಡುಬಂದರೆ ರಾಮ ಅವನನ್ನು ಕೊಲ್ಲುತ್ತಾನೆ. ಆಗ ನನ್ನ ಹಗೆ ತೀರುತ್ತದೆ. ಈಗ ಈ ಕಡಲನ್ನು ದಾಟಲು ಒಂದು ಉಪಾಯವನ್ನು ಯೋಚಿಸಿ ನೀವು.

ಲಂಕೆಗೆ ಹೋದರೆ ನಿಮ್ಮ ಇಷ್ಟಸಿದ್ಧಿ ಆಗುತ್ತದೆ. ಕಿಷ್ಕಿಂಧೆಗೂ ಸುಖದಿಂದ ಹಿಂದಿರುಗುತ್ತೀರಿ.

" ವಾನರಶ್ರೇಷ್ಠರೆ, ನನ್ನನ್ನು ಸಮುದ್ರತೀರಕ್ಕೆ ಒಯ್ಯಿರಿ. ಸ್ವರ್ಗವನ್ನು ಸೇರಿದ ನನ್ನ ತಮ್ಮ ಜಟಾಯುವಿಗೆ ಜಲತರ್ಪಣವನ್ನು ಮಾಡಬೇಕು."

ವಾನರರಿಗೆ ಬಲು ಹಿಗ್ಗು. ಸಂಪಾತಿಯನ್ನು ಕಡಲ ತಡಿಗೆ ಎತ್ತಿಕೊಂಡು ಹೋದರು. ಅಲ್ಲಿ ಅವನು ಜಲತರ್ಪಣ ಮಾಡಿದಮೇಲೆ ಮತ್ತೆ ಮೊದಲಿನ ಸ್ಥಳಕ್ಕೆ ಕರೆತಂದರು. ಸೀತಾದೇವಿಯ ಸುದ್ದಿ ತಿಳಿಯಿತಲ್ಲ ಎಂದು ಅವರಿಗೆ ಹಿಗ್ಗೋ ಹಿಗ್ಗು.

೩೦

ವಾನರರಿಗೆ ಅಮೃತ ಕುಡಿದ ಹಾಗೆ ಆಯಿತು ಸಂಪಾತಿಯ ಮಾತು ಕೇಳಿ. ಮೈನಿಮಿರು ಆಯಿತು. ವಾನರವೃದ್ಧ ಜಾಂಬವಂತ ತಟ್ಟನೆ ಮೇಲೆ ಎದ್ದ. " ಸಂಪಾತಿ, ಸೀತಾದೇವಿ ಎಲ್ಲಿ ಇದ್ದಾಳೆ ? ಆಕೆಯನ್ನು ಎತ್ತಿಕೊಂಡು ಹೋದವನು ಯಾರು ? ಯಾರು ನೋಡಿದರು ? ನಿನಗೆ ಯಾರು ಹೇಳಿದರು ? ವಿಶದ ಆಗಿ ಹೇಳು. ನೀನೇ ಈಗ ನಮಗೆ ದಿಕ್ಕು. ವಜ್ರಸಮಾನ ಆದ ರಾಮಲಕ್ಷ್ಮಣರ ಬಾಣಗಳ ವೇಗವನ್ನೂ ಅವರ ಪರಾಕ್ರಮವನ್ನೂ ತಿಳಿಯದೆ ಇಂಥ ಹೀನ ಕಾರ್ಯವನ್ನು ಮಾಡಿದವನು ಯಾರು ?" ಎಂದು ಕೇಳಿದ.

ಸೀತಾದೇವಿಯ ವೃತ್ತಾಂತವನ್ನು ತಿಳಿಯಲು ವಾನರರಿಗೆ ಬಹಳ ಸಂತೋಷ, ಬಲು ಉತ್ಸಾಹ. ಸಂಪಾತಿಗೆ ಅದನ್ನು ನೋಡಿ ಹರ್ಷ ಆಯಿತು. ಹೇಳಿದ : " ವಾನರರೆ, ಅನೇಕ ಗಾವುದಗಳ ವಿಸ್ತಾರದ್ದು ಈ ಪರ್ವತ. ಈ ದುರ್ಗಮ ಪ್ರದೇಶದಲ್ಲಿ ಬಿದ್ದೆ ನಾನು. ಬಹುಕಾಲದಿಂದ ಇಲ್ಲೇ ಇದ್ದೇನೆ. ನನ್ನ ವೀರ್ಯ ಕುಂದಿತು. ಮುಪ್ಪು ಅಡರಿತು. ನನ್ನ ದುರವಸ್ಥೆಯನ್ನು ನೋಡಿ ನನ್ನ ಮಗ ಸುಪಾರ್ಶ್ವ ದಿನವೂ ಹೊತ್ತಿಗೆ ಸರಿ ಆಗಿ ನನಗೆ ಆಹಾರವನ್ನು ತಂದುಕೊಟ್ಟು ಕಾಪಾಡುತ್ತ ಇದ್ದ.

" ವಾನರರೆ, ಗಂಧರ್ವರಿಗೆ ಕಾಮ ಹೆಚ್ಚು. ಹಾವುಗಳಿಗೆ ಕೋಪ ಹೆಚ್ಚು. ಮೃಗಗಳಿಗೆ ಭಯ ಹೆಚ್ಚು. ಪಕ್ಷಿಗಳಿಗೆ ನಮಗೋ ಹಸಿವು ಹೆಚ್ಚು. ಹಸಿವಿನಿಂದ

ಆಹಾರಕ್ಕಾಗಿ ಇದಿರು ನೋಡುತ್ತ ಇದ್ದೆ. ಹೊತ್ತು ಮುಳುಗಿತು. ನನ್ನ ಮಗ ಬರಿ ಕೈಯಲ್ಲೇ ಬಂದ. ಮೊದಲೇ ಹಸಿವಿನ ಸಂಕಟ, ನೀರಡಿಕೆಯ ಬಾಧೆ. ಅದರಲ್ಲಿ ಮುಪ್ಪಿನ ಸಿಟ್ಟು. ಅವನನ್ನು ಗದರಿಸಿದೆ. ನನ್ನ ಮಗನಿಗೆ ಬಹಳ ಪಿತೃಭಕ್ತಿ. ಅವನ ಮನ ಮರುಗಿತು. ನನ್ನ ಕ್ಷಮೆಯನ್ನು ಬೇಡಿದ. 'ತಂದೆ, ಎಂದಿನಂತೆ ಕಾಲಕ್ಕೆ ಸರಿ ಆಗಿ ನಿನಗೆ ಆಹಾರ ತರೋಣ ಎಂದು ಮಹೇಂದ್ರಪರ್ವತಕ್ಕೆ ಹೋಗಿ ಅಲ್ಲಿ ಬಾಗಿಲಿಗೆ ಅಡ್ಡ ಕುಳಿತೆ. ಸಮುದ್ರದಲ್ಲಿ ತಿರುಗುವ ಸಾವಿರಾರು ಜಂತುಗಳಲ್ಲಿ ಕೆಲವನ್ನು ಹಿಡಿಯೋಣ ಎಂದು ತಲೆ ಬಗ್ಗಿಸಿ ಕೂತೆ.

"'ಆಗ ಕಾಡಿಗೆಕಪ್ಪು ವೈಯ ಒಬ್ಬ ಗಂಡಸು ಒಬ್ಬ ಹೆಂಗಸನ್ನು ಎತ್ತಿಕೊಂಡು ಹೋಗುತ್ತ ಇದ್ದ. ಆಕೆಯ ದೇಹಕಾಂತಿ ಬಾಲಸೂರ್ಯನಿಗೆ ಸಮ. ಆಹಾರಕ್ಕೇ ಹೊಂಚಿ ಕೂತು ಇದ್ದೆ. ಒಳ್ಳೆಯ ಆಹಾರವೇ ಸಿಕ್ಕಿತು ಎಂದುಕೊಂಡೆ. ದಾರಿಗೆ ಅಡ್ಡನಿಂತು ಇದ್ದೆನಲ್ಲ. ಆ ಮನುಷ್ಯ ನನ್ನನ್ನು ಬೇಡಿಕೊಂಡ ಬಹಳ ವಿನಯದಿಂದ. ದಯೆಯಿಟ್ಟು ದಾರಿ ಬಿಡು ಎಂದು ಕೇಳಿಕೊಂಡ. ವಿನಯದಿಂದ ಬೇಡಿದರೆ ಎಂಥ ನೀಚರಿಗೂ ಕನಿಕರ ಹುಟ್ಟುತ್ತದೆ. ನಾನು ಅವನಿಗೆ ದಾರಿ ಬಿಟ್ಟುಕೊಟ್ಟದ್ದು ಏನು ಅಚ್ಚರಿ? ಆ ರಾಕ್ಷಸ ಕೂಡಲೇ ಆಕಾಶವನ್ನೇ ಸೀಳುವಂತೆ ಅತ್ಯಂತ ವೇಗದಿಂದ ಓಡಿದ.

"'ಗಗನಸಂಚಾರಿಗಳಾದ ಗಂಧರ್ವಚಾರಣಾದಿಗಳೂ ಕೆಲವರು ಮಹರ್ಷಿಗಳೂ ಬಂದು ನನ್ನನ್ನು ಗೌರವಿಸಿದರು. 'ಮಗು, ನೀನು ಬದುಕಿದುದು ನಿನ್ನ ಅದೃಷ್ಟ. ದೈವವೇ ನಿನ್ನನ್ನು ಕಾಪಾಡಿತು. ಅವನ ಮನಸ್ಸು ಎಲ್ಲವೂ ಆ ಹೆಂಗಸಿನ ಮೇಲೇ ಇತ್ತು. ಅದರಿಂದ ನಿನ್ನ ಕಡೆ ಲಕ್ಷ್ಯ ಹರಿಯಲಿಲ್ಲ ಅವನದು. ಹೇಗೋ ಅಂತು ಒಳ್ಳೆಯದೇ ಆಯಿತು' ಎಂದರು. 'ಅವನೇ ರಾಕ್ಷಸರಾಜ ರಾವಣ. ರಾಮಲಕ್ಷ್ಮಣರನ್ನು ಕೂಗುತ್ತ ಅಳುತ್ತ ಇದ್ದಳಲ್ಲ. ಆಕೆಯ ತಲೆಗೂದಲು ಬಿಚ್ಚಿ ಇತ್ತು. ಉಟ್ಟ ಬಟ್ಟೆ ಜಾರುತ್ತ ಇತ್ತು. ಒಡವೆಗಳನ್ನು ತೆಗೆದು ಎಸೆಯುತ್ತ ಇದ್ದಳಲ್ಲ. ಆಕೆಯೆ ಜನಕರಾಜಪುತ್ರಿ ಸೀತೆ, ರಾಮನ ಪತ್ನಿ. ಈ ರಾಕ್ಷಸ ಆಕೆಯನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋಗುತ್ತ ಇದಾನೆ. ಆಕೆ ಬಿಡಿಸಿಕೊಳ್ಳಲು ಹೆಣಗುತ್ತ ಇದಾಳೆ' ಎಂದೂ ಹೇಳಿದರು. ಇದರಿಂದ ನನಗೆ ತಡ ಆಯಿತು' ಎಂದ ಸುಪಾರ್ಶ್ವ.

"ಎಲ್ಲವನ್ನೂ ಕೇಳಿದೆ. ರಾಮನಿಗೋಸ್ಕರ ಪರಾಕ್ರಮ ಮಾಡಬೇಕು ಎಂಬ ಬುದ್ಧಿ ಹುಟ್ಟಲಿಲ್ಲ ನನಗೆ. ನನಗೆ ರೆಕ್ಕೆಗಳೇ ಸಮಸ್ತ ಬಲ. ಅದೇ ಇಲ್ಲದ ನಾನು ಏನು ಕೊಡಬಲ್ಲೆ? ಆದರೆ ಕಾಲೋಚಿತ ಆದ ಬುದ್ಧಿಬಲ ವಾಗ್ಬಲ ಎರಡೂ ಇವೆ ನನಗೆ. ಅದರಿಂದ ನಿಮಗೆ ಸಹಾಯ ಮಾಡುತ್ತೇನೆ. ನಾನು ಹೇಳುವುದನ್ನು ಕೇಳಿ. ಆಮೇಲೆ ನಿಮ್ಮ ಪರಾಕ್ರಮದಿಂದ ಕೆಲಸವನ್ನು ಸಾಧಿಸಿ. ರಾಮನ ಕೆಲಸ ಬೇರೆ ನನ್ನದು ಬೇರೆ ಅಲ್ಲ. ಸಂದೇಹ ಇಲ್ಲ. ನೀವು ಬುದ್ಧಿವಂತರು. ಪರಾಕ್ರಮಶಾಲಿಗಳು. ನಿಮ್ಮ ಧೈರ್ಯ ಸಾಹಸ ದೊಡ್ಡದು. ದೇವತೆಗಳೂ ನಿಮ್ಮನ್ನು ಇದಿರಿಸಲಾರರು. ಅದರಿಂದಲೇ ಸುಗ್ರೀವ ನಿಮ್ಮನ್ನು ಕಳಿಸಿದ.

"ಕಂಕಪತ್ರಗಳನ್ನು ಕಟ್ಟಿದ ರಾಮಲಕ್ಷ್ಮಣರ ಬಾಣಗಳು ಮೂರು ಲೋಕಗಳನ್ನೂ ರಕ್ಷಿಸಬಲ್ಲವು. ಶಿಕ್ಷಿಸಲೂ ಬಲ್ಲವು. ರಾವಣಾಸುರ ಬಲಶಾಲಿ ಆಗಿರಬಹುದು. ಸಮರ್ಥ, ತೇಜಸ್ವಿ ಆಗಿರಬಹುದು. ಎಷ್ಟೇ ಸಮರ್ಥ ಆದರೂ ನಿಮ್ಮನ್ನು ಮೀರಿದವನು ಅಲ್ಲ. ನೀವು ಮಹಾಸಮರ್ಥರು. ನಿಮಗೆ ಅಸಾಧ್ಯ ಆದುದು ಯಾವುದೂ ಇಲ್ಲ. ಈಗಲೇ ಬಹಳ ಕಾಲ ಕಳೆದು ಇದೆ. ಇನ್ನು ತಡ ಮಾಡಬೇಡಿ. ಬುದ್ಧಿವಂತರು ನೀವು. ಮಾಡಬೇಕು ಎಂದಾಗ ಮಾಡಿಬಿಡ ಬೇಕು. ತಡ ಮಾಡಬಾರದು. ಮುಂದಿನ ಕೆಲಸವನ್ನು ನೋಡಿ" ಎಂದ ಸಂಪಾತಿ.

೩೧

ಜಟಾಯುವಿಗೆ ಜಲತರ್ಪಣ ಮಾಡಿ ಸ್ನಾನ ಮಾಡಿ ಬಂದು ಕುಳಿತ ಸಂಪಾತಿ. ವಾನರರು ಅವನ ಸುತ್ತಲೂ ನೆರೆದರು. ಅಂಗದನನ್ನೂ ವಾನರ ಸಮೂಹವನ್ನೂ ನೋಡಿದ ಸಂಪಾತಿ. ಹಿಂದೆ ನಿಶಾಕರಮಹರ್ಷಿ ತನಗೆ ಹೇಳಿದ್ದ ಮಾತು ನೆನಪು ಆಯಿತು. ವಾನರದರ್ಶನದಿಂದ ನಿನಗೆ ಶಾಪವಿಮೋಚನೆ ಎಂದು ಹೇಳಿದ್ದ ಆ ಮಹರ್ಷಿ. ಸಂತೋಷ ಆಯಿತು ಆ ನೆನಪಿನಿಂದ "ವಾನರೋತ್ತಮರೆ, ನಿಶ್ಶಬ್ದ ಆಗಿ ಕೇಳಿ ನಾನು ಹೇಳುವುದನ್ನು. ಏಕಾಗ್ರಚಿತ್ತದಿಂದ ಕೇಳಿ. ಸೀತಾದೇವಿಯ ವೃತ್ತಾಂತ ನನಗೆ ಹೇಗೆ ತಿಳಿಯಿತೋ ಹೇಳುತ್ತೇನೆ.

“ಪೂರ್ವದಲ್ಲಿ ಸೂರ್ಯನ ಜಳಕ್ಕೆ ಮೈ ಸುಟ್ಟು ಈ ವಿಂಧ್ಯಪರ್ವತದಲ್ಲಿ ಬಿದ್ದೆನಲ್ಲ. ಆರು ದಿನ ಮೈಮೇಲೆ ಎಚ್ಚರಿಕೆಯೇ ಇರಲಿಲ್ಲ. ಇಲ್ಲೇ ಬಿದ್ದು ಇದ್ದೆ. ಏಳನೆ ದಿನ ಪ್ರಜ್ಞೆ ಬಂತು. ಆದರೆ ಪರಾಧೀನ, ದೀನ. ಸುತ್ತಲೂ ನೋಡಿದೆ. ನಾನು ಎಲ್ಲಿ ಇದೇನೋ ನನಗೆ ತಿಳಿಯಲಿಲ್ಲ. ಸಮುದ್ರ ಕಂಡಿತು. ಸಮುದ್ರತೀರದ ಬೆಟ್ಟಗಳೂ ನದಿಗಳೂ ಸರೋವರಗಳೂ ಅಡವಿಗಳೂ ಕಂಡವು. ಇದು ದಕ್ಷಿಣ ಸಮುದ್ರ. ಇದು ವಿಂಧ್ಯಪರ್ವತ ಎಂದು ಗುರುತು ಹತ್ತಿತು. ನಾನಾ ಪಕ್ಷಿಸಮೂಹ ಇಲ್ಲಿ ಸಂತೋಷದಿಂದ ಇವೆ. ಗುಹೆಗಳು ಇವೆ. ಶಿಖರ ಗಳು ಇವೆ ಎಂಬುದು ನೆನಪು ಆಯಿತು.

“ಬಹಳ ಪವಿತ್ರ, ದೇವತೆಗಳಿಗೂ ಪೂಜ್ಯ ಆದ ಆಶ್ರಮ ಒಂದು ಇತ್ತು. ಅದರಲ್ಲಿ ಉಗ್ರತಪಸ್ವಿ ನಿಶಾಕರ ಮಹರ್ಷಿ ಇದ್ದ. ಈಗ ಆ ಮಹರ್ಷಿ ಇಲ್ಲ. ಈಗ ನಾನು ಒಬ್ಬನೇ. ಆಗ ಆ ಮಹರ್ಷಿಯನ್ನು ನೋಡಬೇಕು ಎಂದು ವಿಂಧ್ಯ ಪರ್ವತದ ಶಿಖರದಿಂದ ಈ ಹಳ್ಳತಿಟ್ಟುಗಳನ್ನು ಇಳಿದು ಬಹಳ ಕಷ್ಟಪಟ್ಟು ಬಂದೆ. ಚೂಪು ಕೊನೆಯ ದರ್ಭೆಯ ಹುಲ್ಲು ಆಶ್ರಮದ ತುಂಬಾ. ಅಂತೂ ಆಶ್ರಮಕ್ಕೆ ಬಂದೆ. ಮೊದಲೇ ನಾನೂ ಜಟಾಯುವೂ ಆಗಾಗ ಆತನ ಸಂದರ್ಶನ ಮಾಡುತ್ತ ಇದ್ದೆವು.

“ಆ ಮಹಾನುಭಾವನ ಆಶ್ರಮದಲ್ಲಿ ಹೂ ಬಿಡದ ಗಿಡ ಹಣ್ಣು ಬಿಡದ ಮರ ಒಂದೂ ಇರಲಿಲ್ಲ. ಆಶ್ರಮದ ಗಾಳಿಯಲ್ಲಿ ಗಮಗಮಿಸುವ ನರುಗಂಪು. ಆಶ್ರಮಕ್ಕೆ ಬಂದವನು ಅಲ್ಲಿ ಒಂದು ಮರದ ಕೆಳಗೆ ಕುಳಿತೆ ಮಹರ್ಷಿಯ ಬರವನ್ನು ಇದಿರುನೋಡುತ್ತ.

“ಮಹರ್ಷಿ ಸ್ನಾನಮಾಡಿ ಬಂದ. ಉತ್ತರಾಭಿಮುಖ ಆಗಿ ಬಂದ. ಆತನ ತೇಜಸ್ಸು ಜಾಜ್ವಲ್ಯಮಾನ ಆಗಿತ್ತು. ಕರಡಿ ಹುಲಿ ಸಿಂಹ ಚಮರೀ ಮೃಗ ಆನೆ ಬಗೆಬಗೆಯ ಹಾವು ಎಲ್ಲವೂ ಆತನನ್ನು ಹಿಂಬಾಲಿಸಿ ಬಂದು ಸೇವೆ ಮಾಡುತ್ತ ಇದ್ದವು. ದೊರೆ ಅಂತಃಪುರವನ್ನು ಹೊಕ್ಕ ಕೂಡಲೇ ಮಂತ್ರಿಗಳೂ ಪರಿವಾರವೂ ಹಿಂದಿರುಗುವಂತೆ ಆ ಮಹರ್ಷಿ ಆಶ್ರಮದ ಒಳಕ್ಕೆ ಹೋದ ಒಡನೆಯೇ ಆ ಪ್ರಾಣಿಗಳು ಎಲ್ಲವೂ ಹಿಂದಿರುಗಿ ಹೋದವು.

“ನನ್ನನ್ನು ನೋಡಿದ ಮಹರ್ಷಿ. ಮಾತು ಆಡಿಸಲಿಲ್ಲ. ಆಶ್ರಮದ ಒಳಕ್ಕೆ ಹೋದ. ಸ್ವಲ್ಪ ಹೊತ್ತಿನಲ್ಲೇ ತಿರುಗಿ ಬಂದು ಏನು ಕೆಲಸಕ್ಕೆ ಬಂದೆ

ಎಂದು ಕೇಳಿದ. ಆಮೇಲೆ ಹೇಳಿದ: "ಸೌಮ್ಯ, ನೀನು ಯಾರೋ ಗುರುತು ಆಗಲಿಲ್ಲ. ನಿನ್ನ ಮೈಯ ತುಪ್ಪಳ ಎಲ್ಲಾ ಉದುರಿದೆ. ನಿನ್ನ ಮೈ ಎಲ್ಲಾ ಗಾಯ. ನಿನ್ನ ರೆಕ್ಕೆ ಬೆಂದು ಹೋಗಿದೆ. ಹಿಂದೆ ಎರಡು ಗೃಧ್ರಗಳನ್ನು ನೋಡಿದ್ದೆ. ಆಗಾಗ ಬರುತ್ತ ಇದ್ದರು ಇಲ್ಲಿಗೆ. ಅವರ ವೇಗ ವಾಯುವೇಗ. ಗೃಧ್ರರಾಜರು ಇಬ್ಬರೂ ಒಡಹುಟ್ಟುಗಳು. ಇಬ್ಬರೂ ಕಾಮರೂಪಿಗಳು. ಅವರಲ್ಲಿ ಹಿರಿಯ ಸಂಪಾತಿ ಅಲ್ಲವೆ ನೀನು? ನಿನ್ನ ತಮ್ಮ ಜಟಾಯು ಎಲ್ಲಿ? ನೀವು ಇಬ್ಬರೂ ಮನುಷ್ಯರೂಪ ತಳೆದುಬಂದು ನನಗೆ ನಮಸ್ಕಾರ ಮಾಡುತ್ತ ಇದ್ದಿರಿ. ಅಲ್ಲವೆ? ಈಗ ನಿನಗೆ ಏನು ಆಗಿದೆ, ಸಂಪಾತಿ? ವ್ಯಾಧಿಯೆ? ನಿನ್ನ ರೆಕ್ಕೆಗಳು ಏಕೆ ಬಿದ್ದವು? ಯಾರು ಕತ್ತರಿಸಿದರು? ಏನು ಆಯಿತು? ಹೇಳು" ಎಂದ.

೩೨

"ನಮ್ಮ ಸಾಹಸಕಾರ್ಯವನ್ನು ಆ ಮಹರ್ಷಿಗೆ ತಿಳಿಸಿದೆ. ಸೂರ್ಯ ಮಂಡಲಕ್ಕೆ ಹೋದವರು ಉಂಟೆ? ಬಲು ಭಯಂಕರ ಸಾಹಸ. ಎಲ್ಲವನ್ನೂ ತಿಳಿಸಿದೆ. 'ಮಹಾನುಭಾವ, ನನ್ನ ಮೈ ಎಲ್ಲಾ ಸುಟ್ಟು ಗಾಯ ಆಗಿದೆ. ಸರ್ವೇಂದ್ರಿಯಗಳೂ ಗಾಸಿಗೊಂಡು ಇವೆ. ಬಹಳ ಬಳಲಿದೆ. ನಾಚಿಕೆ ಬೇರೆ. ನಿನಗೆ ಉತ್ತರ ಹೇಳಲೂ ಶಕ್ತಿ ಇಲ್ಲ. ಸ್ವಲ್ಪದರಲ್ಲಿ ಹೇಳುತ್ತೇನೆ.

"ನನಗೂ ಜಟಾಯುವಿಗೂ ಕೊಬ್ಬು. ಇಬ್ಬರಲ್ಲಿ ಯಾರು ಹೆಚ್ಚು ವೇಗಶಾಲಿಗಳೋ ನೋಡೋಣ ಎಂದು ಸ್ಪರ್ಧೆ ಮಾಡಿದೆವು. ಇಬ್ಬರೂ ಆಕಾಶಕ್ಕೆ ಹಾರಿದೆವು. ಕೈಲಾಸಪರ್ವತಕ್ಕೆ ಹೋದೆವು. ಸೂರ್ಯ ಅಸ್ತಗಿರಿಯನ್ನು ಸೇರುವ ಪರ್ಯಂತ ಹಾರುತ್ತೇವೆ. ಅವನನ್ನು ಹಿಂಬಾಲಿಸುತ್ತೇವೆ ಎಂದು ಅಲ್ಲಿ ಋಷಿಗಳ ಮುಂದೆ ಹೇಳಿದೆವು. ಪಣ ತೊಟ್ಟೆವು. ಒಂದೇ ಸಲ ಇಬ್ಬರೂ ಆಕಾಶಕ್ಕೆ ಹಾರಿದೆವು. ಕೆಳಗೆ ಭೂಮಿಯ ಮೇಲೆ ಪಟ್ಟಣಗಳು ಎಲ್ಲಾ ಬೇರೆ ಬೇರೆ ಚಿಕ್ಕ ಬಂಡಿಗಾಲಿಗಳಂತೆ ಕಂಡವು. ಒಂದು ಕಡೆ ವಾದ್ಯ ಘೋಷ ಕೇಳಿಸಿತು. ಒಂದು ಕಡೆ ವೇದಘೋಷ. ಒಂದು ಕಡೆ ಕೆಂಪು ಬಟ್ಟೆ ಉಟ್ಟ ಹೆಂಗಸರು ಕೆಲವರು ಹಾಡುತ್ತ ಇದ್ದರು. ನೋಡುನೋಡುತ್ತ ಆಕಾಶ ಮಾರ್ಗದಲ್ಲಿ ಮೇಲೆ ಹಾರಿ ಸೂರ್ಯಪಥಕ್ಕೆ ಹೋದೆವು.

“ಭೂಮಿಯ ಮಹಾರಣ್ಯಗಳು ಎಲ್ಲವೂ ಚಿಕ್ಕಚಿಕ್ಕ ಹುಲ್ಲುಬಯಲುಗಳ ಹಾಗೆ ಕಂಡವು. ದೊಡ್ಡ ದೊಡ್ಡ ಬೆಟ್ಟಗಳು ಎಲ್ಲವೂ ನೆಲದ ಮೇಲೆ ಹಾಸಿದ ಕಲ್ಲುಗಳಂತೆ ಇದ್ದವು. ಹಗ್ಗದಂತೆ ಕಾಣಿಸಿದವು ದೊಡ್ಡ ದೊಡ್ಡ ನದಿಗಳು. ಕೊಳದಲ್ಲಿ ನಿಂತ ಆನೆಗಳ ಹಾಗೆ ಇದ್ದವು ಹಿಮವತ್ ಪರ್ವತ ವಿಂಧ್ಯ ಮೇರು ಪರ್ವತಗಳು. ಇಬ್ಬರಿಗೂ ನಮಗೆ ಬೆವರು ಕಿತ್ತುಕೊಂಡು ಬಹಳ ಭಯ ಆಯಿತು. ದಿಕ್ಕು ತೋಚಲಿಲ್ಲ. ಕಣ್ಣಿಗೆ ಕತ್ತಲೆ ಕವಿಯಿತು. ಮನಸಿನಲ್ಲಿ ಕಳವಳ. ಯಾವುದು ಆಗ್ನೇಯ, ಯಾವುದು ದಕ್ಷಿಣ, ಯಾವುದು ಪಶ್ಚಿಮ ಎಂಬುದು ತಿಳಿಯಲಿಲ್ಲ. ಪ್ರಳಯಾಗ್ನಿಯಿಂದ ಲೋಕ ಎಲ್ಲವೂ ಸುಡುತ್ತ ಇರುವಂತೆ ಕಾಣಿಸಿತು. ಏನೂ ಕಾಣಲಿಲ್ಲ ಕಣ್ಣಿಗೆ. ಆದರೂ ಎದೆಗೆಡದೆ ಬಹಳ ಕಷ್ಟಪಟ್ಟು ಕಣ್ಣು ತೆರೆದೆ. ಇದಿರಿಗೇ ಸೂರ್ಯಬಿಂಬ. ಭೂಮಿಯಷ್ಟೇ ಗಾತ್ರ ಆಗಿ ಕಂಡ ಸೂರ್ಯ. ನನ್ನ ತಮ್ಮ ಜಟಾಯು ಬಿಸಿಲಿಗೆ ಬೆಂದು ನನಗೆ ಹೇಳದೆಯೆ ಕೆಳಕ್ಕೆ ಇಳಿಯುತ್ತ ಇದ್ದುದನ್ನು ನೋಡಿದೆ. ಸೂರ್ಯಕಿರಣಗಳ ಶಾಖಕ್ಕೆ ಅವನು ಬೆಂದುಹೋಗದಂತೆ ನನ್ನ ರೆಕ್ಕೆಗಳಿಂದ ಅವನನ್ನು ಮುಚ್ಚಿದೆ. ಬೆಂದುಹೋಗದೆ ಉಳಿದುಕೊಂಡ ಅವನು.

“ಆದರೆ ಆಕಾಶದಿಂದ ಇಳಿಯುವಾಗ ನಾನು ಎಚ್ಚರಿಕೆಯಿಂದ ಇಳಿಯಲಿಲ್ಲ. ಪ್ರಮಾದ ಆಯಿತು. ನಡುವೆ ಬೆಂಕಿ ತಗಲಿ ನನ್ನ ರೆಕ್ಕೆ ಎರಡೂ ಬೆಂದುಹೋದವು. ಮೈಮೇಲೆ ಎಚ್ಚರ ಇಲ್ಲದೆ ಈ ವಿಂಧ್ಯಪರ್ವತದ ಮೇಲೆ ನಾನು ಬಿದ್ದೆ. ಗಾಳಿ ಇಲ್ಲಿಗೆ ಹೊಡೆದು ತಂದಿತು. ಜಟಾಯು ಜನಸ್ಥಾನದಲ್ಲಿ ಬಿದ್ದನೋ ಏನೋ! ಮಹರ್ಷಿ, ರೆಕ್ಕೆ ಹೋದವು. ತಮ್ಮ ಹೋದ. ರಾಜ್ಯವೂ ಹೋಯಿತು. ಪರಾಕ್ರಮ ಉಡುಗಿಹೋಯಿತು. ಇನ್ನು ಬದುಕಿ ಏನು ಪ್ರಯೋಜನ? ಎಲ್ಲ ರೀತಿಗಳಿಂದಲೂ ಪ್ರಾಣಬಿಡುವುದೇ ಸರ್ವೋತ್ತಮ ಎನಿಸುತ್ತದೆ. ಈ ಬೆಟ್ಟದ ಶಿಖರದಿಂದ ಬಿದ್ದು ಸಾಯುತ್ತೇನೆ” ಎಂದೆ.

೩೩

“ನಿಶಾಕರ ಮಹರ್ಷಿಗೆ ಹೇಳಿಕೊಂಡು ಅತ್ತೆ. ನನ್ನ ಗೋಳನ್ನು ಕೇಳಿ ಆ ಮುನಿ ಒಂದು ಗಳಿಗೆ ಧ್ಯಾನಿಸಿದ. ಆಮೇಲೆ ನನಗೆ ಹೇಳಿದ: ‘ಸಂಪಾತಿ,

ನಿನಗೆ ಮತ್ತೆ ರೆಕ್ಕೆ ಬರುತ್ತವೆ. ಗರಿಗಳೂ ಬರುತ್ತವೆ. ಹೊಸ ಪ್ರಾಣ ಹೊಸ ಕಣ್ಣು ಬರುತ್ತವೆ. ಮತ್ತೆ ಪರಾಕ್ರಮಶಾಲಿ ಬಲಶಾಲಿ ಆಗುತ್ತೀಯೆ. ನಿನ್ನಿಂದ ಒಂದು ಮಹತ್ಕಾರ್ಯ ಆಗಬೇಕು. ಇದುವರೆಗೇ ಕೇಳಿದ್ದೆ. ಈಗ ತಪೋಬಲದಿಂದ ತಿಳಿದೆ. ಹಿರಿಯರಿಂದಲೂ ಕೇಳಿದೇನೆ.

"'ಇಕ್ಷ್ವಾಕುವಂಶದ ದಶರಥಮಹಾರಾಜನಿಗೆ ರಾಮ ಎಂಬ ಮಹಾ ತೇಜೋಶಾಲಿ ಮಗ ಹುಟ್ಟುತ್ತಾನೆ. ಅವನು ಸತ್ಯಪರಾಕ್ರಮಿ. ತಂದೆಯ ಅಪ್ಪಣೆಯಂತೆ ಅರಣ್ಯವಾಸಕ್ಕೆ ಬರುತ್ತಾನೆ ರಾಮ. ಅವನ ಹೆಂಡತಿ ಸೀತೆ, ಅವನ ತಮ್ಮ ಲಕ್ಷ್ಮಣ ಇಬ್ಬರೂ ಜೊತೆಗೆ ಬರುತ್ತಾರೆ. ದೇವದಾನವರಿಗೂ ದುರ್ಜಯ ಆದ ರಾವಣ ರಾಮನ ಹೆಂಡತಿಯನ್ನು ಅವರು ಜನಸ್ಥಾನದಲ್ಲಿ ಇದ್ದಾಗ ಕದ್ದು ಒಯ್ಯುತ್ತಾನೆ. ಅವನು ರಾಕ್ಷಸರಾಜ. ಸೀತೆ ಮಹಾಪೂಜ್ಯೆ, ಯಶಸ್ವಿನಿ. ಆಕೆಯನ್ನು ಸೆರೆಮನೆಯಲ್ಲಿಟ್ಟು ಭಕ್ಷ್ಯಭೋಜ್ಯಗಳಿಂದ ಭೋಗ ಸಾಮಗ್ರಿಗಳಿಂದ ಒಲಿಸಿಕೊಳ್ಳಲು ಯತ್ನಿಸುತ್ತಾನೆ. ಸೀತೆ ಮಹಾಪತಿವ್ರತೆ. ಗಂಡನ ಅಗಲಿಕೆಯ ದುಃಖದಲ್ಲಿ ಮುಳುಗಿ ಆಕೆ ಯಾವುದನ್ನೂ ಮುಟ್ಟಳು. ಕಣ್ಣು ಎತ್ತಿ ನೋಡಳು. ದೇವೇಂದ್ರನಿಗೆ ಇದು ಗೊತ್ತು ಆಗುತ್ತದೆ. ಆಕೆಗೆ ದಿವ್ಯಾನ್ನವನ್ನು ಕಳಿಸುತ್ತಾನೆ. ದೇವತೆಗಳಿಗೂ ದುರ್ಲಭ ಆದ ಆ ಅಮೃತ ಸಮಾನ ಪರಮಾನ್ನ ದೇವೇಂದ್ರ ಕಳಿಸಿದ್ದು ಎಂಬುದು ಸೀತೆಗೆ ತಿಳಿಯುತ್ತದೆ. ನನ್ನ ಪತಿ, ಪ್ರಭು ಆದ ಶ್ರೀರಾಮನಿಗೂ ಆತನ ತಮ್ಮ ಲಕ್ಷ್ಮಣನಿಗೂ ಈ ತುತ್ತು ಸೇರಲಿ. ಅವರು ಬದುಕಿ ಇದ್ದರೂ ಸ್ವರ್ಗಸ್ಥರು ಆಗಿ ಇದ್ದರೂ ಅವರಿಗೆ ಸೇರಲಿ ಎಂದು ಮೊದಲನೆ ತುತ್ತನ್ನು ಭೂಮಿಯ ಮೇಲೆ ಇಡುತ್ತಾಳೆ.

"'ಪಕ್ಷಿರಾಜ, ಆ ಪತಿಪರಾಯಣೆ ಸೀತಾದೇವಿಯನ್ನು ಹುಡುಕಲು ವಾನರರು ಬರುತ್ತಾರೆ. ಇಲ್ಲಿಗೆ ಬಂದಾಗ ನೀನು ಸೀತಾವೃತ್ತಾಂತವನ್ನು ತಿಳಿಸು. ಅದಕ್ಕೆ ನೀನು ಇಲ್ಲಿಯೇ ಇರಬೇಕು. ಅಲ್ಲದೆ ಈ ದುರವಸ್ಥೆಯಲ್ಲಿ ನೀನು ಎಲ್ಲಿಗೆ ತಾನೆ ಹೋಗಬಲ್ಲೆ ? ದೇಶಕಾಲಗಳನ್ನು ಇದಿರು ನೋಡುತ್ತ ಇಲ್ಲೇ ಇರು. ನಿನಗೆ ಮತ್ತೆ ರೆಕ್ಕೆ ಬರುತ್ತವೆ. ಈಗಲೇ ಮತ್ತೆ ನಿನಗೆ ರೆಕ್ಕೆ ಬರುವಂತೆ ಮಾಡಬಲ್ಲೆ. ನನಗೆ ಇಷ್ಟ ಇಲ್ಲ. ಇಲ್ಲೇ ಇದ್ದರೆ ಮುಂದೆ ನಿನ್ನಿಂದ ಸಮಸ್ತ ಲೋಕಗಳಿಗೂ ಕ್ಷೇಮ ಆಗುತ್ತದೆ. ಆ ರಾಮಲಕ್ಷ್ಮಣರ ಕೆಲಸವನ್ನು ಮಾಡಬೇಕು ನೀನು. ನಿನಗೋಸ್ಕರ ಮಾತ್ರ ಅಲ್ಲ. ಎಲ್ಲ ಬ್ರಾಹ್ಮಣರಿ

ಗೋಸ್ಕರ ದೇವತೆಗಳಿಗೋಸ್ಕರ ಋಷಿಗಳಿಗೋಸ್ಕರ ನೀನು ಆ ಕೆಲಸವನ್ನು ಮಾಡಬೇಕು. ನನಗೂ ಆ ಅಣ್ಣತಮ್ಮಂದಿರನ್ನು ನೋಡುವ ಆಸೆಯೆ. ಆದರೆ ಅಷ್ಟು ದೀರ್ಘಕಾಲ ಈ ಪ್ರಾಣಗಳನ್ನು ಇಟ್ಟುಕೊಳ್ಳಲು ಇಷ್ಟ ಇಲ್ಲ. ಈ ದೇಹವನ್ನು ಬಿಡುತ್ತೇನೆ ಬೇಗ' ಎಂದು ಸಮಸ್ತ ತತ್ತ್ವಾರ್ಥಗಳನ್ನೂ ಬಲ್ಲ ಆ ಮಹರ್ಷಿ ನನಗೆ ಹೇಳಿದ.

೩೪

"ವಾನರರೆ, ಆ ನಿಶಾಕರಮುನಿ ಇನ್ನೂ ಅನೇಕ ಬಗೆಯಲ್ಲಿ ನನಗೆ ಸಮಾಧಾನ ಹೇಳಿ ಹೊರಟುಹೋದ. ಮೆಲ್ಲನೆ ತೆವಳುತ್ತ ನಾನು ಗುಹೆಯಿಂದ ಹೊರಗೆ ಬಂದು ಈ ಶಿಖರವನ್ನು ಅಡರಿದೆ. ಅಂದಿನಿಂದ ನಿಮ್ಮ ದಾರಿ ಕಾಯುತ್ತ ಇದೇನೆ. ಆ ಮಹರ್ಷಿ ಸ್ವರ್ಗಕ್ಕೆ ಹೋದಮೇಲೆ ನನಗೆ ವಿಶೇಷ ಮನೋವ್ಯಥೆ. ಅಪಾರ ಸಂಶಯ. ಚಿಂತಿಸಿ ಚಿಂತಿಸಿ ಕೊರಗಿದೆ. ಸಾಯುವ ಯೋಚನೆ ಮಾಡಿದೆ. ಆದರೆ ನಿಶಾಕರ ಮಹರ್ಷಿ ಹೇಳಿದ ಮಾತು ನೆನಪಿಗೆ ಬರುತ್ತದೆ. ಸಮಾಧಾನ ಮಾಡಿಕೊಳ್ಳುತ್ತೇನೆ. ಸಾವಿನ ಪ್ರಯತ್ನವನ್ನು ಬಿಡುತ್ತೇನೆ. ನಾನು ಬದುಕಿ ಇರಬೇಕು ಎಂದು ಮಹರ್ಷಿ ಹೇಳಿದ್ದರಲ್ಲ. ಕತ್ತಲೆಯನ್ನು ಬೆಂಕಿ ಓಡಿಸುವಂತೆ ಆ ಮಾತು ನನ್ನ ದುಃಖವನ್ನು ನೀಗಿಸುತ್ತ ಇದೆ.

"ದುರಾತ್ಮ ರಾವಣನ ಪರಾಕ್ರಮ ಎಂಥದೋ ನನಗೆ ಗೊತ್ತು. ಆದರೂ ರಾವಣಾಸುರನನ್ನು ಕೊಂದು ಸೀತೆಯನ್ನು ಏಕೆ ಬಿಡಿಸಲಿಲ್ಲ ಎಂದು ನನ್ನ ಮಗನನ್ನು ಗದರಿಸಿದೆ ನಾನು. ಸೀತೆಯ ಗೋಳಾಟವನ್ನು ಕೇಳಿಯೂ ರಾಮ ಲಕ್ಷ್ಮಣರನ್ನು ಅಗಲಿ ಇದಾಳೆ ಆಕೆ ಎಂದು ತಿಳಿದೂ ದಶರಥನಿಗೂ ನನಗೂ ಇರುವ ಸ್ನೇಹಕ್ಕೆ ತಕ್ಕಂತೆ ನನಗೆ ಪ್ರಿಯ ಆದುದನ್ನು ಮಾಡಲಿಲ್ಲ ನನ್ನ ಮಗ."

ಸಂಪಾತಿ ಹೀಗೆ ಹೇಳುತ್ತಾ ಇರುವಾಗಲೇ ಅವನಿಗೆ ರೆಕ್ಕೆ ಚಿಗುರಿದವು. ಕೆಂಪುಕೂದಲುಸಮೇತ ಗರಿಗಳು ಕಾಣಿಸಿಕೊಂಡುದನ್ನು ಸಂಪಾತಿ ನೋಡಿದ. ತನ್ನ ಮೈಯನ್ನು ನೋಡಿ ಸಂತೋಷಗೊಂಡ. "ವಾನರೋತ್ತಮರೆ, ಸೂರ್ಯ ಕಿರಣಗಳಿಂದ ಬೆಂದುಹೋದ ನನ್ನ ರೆಕ್ಕೆ ಆ ನಿಶಾಕರ ಮಹರ್ಷಿಯ ಅಸಮಾನ

ಮಹಿಮೆಯಿಂದ ಮತ್ತೆ ಮೊಳೆತು ಇವೆ. ಮೊದಲಿನ ಭುಜಬಲ ಪರಾಕ್ರಮ ಮತ್ತೆ ಬಂದಿದೆ. ನೀವು ಪ್ರಯತ್ನ ಮಾಡಿ. ಖಂಡಿತ ಸೀತಾದೇವಿಯನ್ನು ನೋಡುತ್ತೀರಿ. ನಿಮ್ಮ ಕೆಲಸ ಆಗುತ್ತದೆ. ನನಗೆ ರೆಕ್ಕೆ ಬಂದದ್ದೇ ಅದರ ಕುರುಹು."

ತನಗೆ ಎಷ್ಟು ಬಂತು ರೆಕ್ಕೆಗಳ ಬಲ ಎಂಬುದನ್ನು ಪರೀಕ್ಷಿಸುವ ಆತುರ ಸಂಪಾತಿಗೆ. ಅಂತರಿಕ್ಷಕ್ಕೆ ಹಾರಿದ. ಹಾರುವಾಗ ಮತ್ತೆ ಹೇಳಿದ: "ಪ್ರಯತ್ನ ಮಾಡಿ. ನಿಮ್ಮ ಕೆಲಸ ಆಗುತ್ತದೆ. ಸಂದೇಹ ಇಲ್ಲ."

ವಾನರರಿಗೆ ಸಂತೋಷ ಆಶ್ಚರ್ಯ. ಅವನ ಮಾತಿನಿಂದ ಸಂತೋಷ. ಅವನಿಗೆ ರೆಕ್ಕೆ ಹುಟ್ಟಿದ್ದಕ್ಕಾಗಿ ಆಶ್ಚರ್ಯ. ತಮ್ಮ ಕೆಲಸ ಕೈಗೂಡುತ್ತದೆ ಎಂಬ ನಂಬಿಕೆ ಹುಟ್ಟಿತು. ವಾಯುವೇಗದ ಆ ವಾನರರಿಗೆ ಮತ್ತೆ ಹುರುಪು ಬಂತು. ತಮ್ಮ ಪರಾಕ್ರಮದಿಂದ ಸೀತೆಯನ್ನು ಹುಡುಕಲು ಹೊರಟರು. ಅಭಿಜಿನ್ ಮುಹೂರ್ತ ಬರಲಿ ಎಂದು ಕಾದು ಅದು ಬಂದ ಕೂಡಲೆ ದಕ್ಷಿಣಕ್ಕೆ ಹೊರಟರು.

೩೫

ಸಂಪಾತಿಯಿಂದ ಸೀತಾದೇವಿ ಇರುವ ಸ್ಥಳ ತಿಳಿಯಿತು. ವಾನರರಿಗೆ ಸಂತೋಷ ಆಯಿತು. ಹಾರಾಡಿದರು. ಸಿಂಹನಾದ ಮಾಡಿದರು. ಸೀತಾದೇವಿ ಇರುವ ಸ್ಥಳಕ್ಕೆ ಹೋಗಬೇಕು ಎಂಬ ಹುರುಪಿನಿಂದ ಎಲ್ಲರೂ ಸಮುದ್ರತೀರಕ್ಕೆ ಬಂದರು. ಎಲ್ಲರೂ ಮಹಾಪರಾಕ್ರಮಿಗಳು. ದಕ್ಷಿಣ ಸಮುದ್ರದ ಉತ್ತರ ತೀರದಲ್ಲಿ ಬೀಡು ಬಿಟ್ಟರು. ಸಮಸ್ತ ಪ್ರಪಂಚಕ್ಕೂ ಕನ್ನಡಿಯಂಥ ಮಹಾ ಸಮುದ್ರ ಅದು.

ಆ ಸಮುದ್ರದಲ್ಲಿ ಒಂದು ಕಡೆ ಮಹೋನ್ನತ ತರಂಗಮಾಲೆ. ಬೆಟ್ಟದಷ್ಟು ಎತ್ತರ. ಇನ್ನೊಂದು ಕಡೆ ನೀರು ಪರಮಶಾಂತ. ನಿದ್ದೆಮಾಡುವ ಹಾಗೆ. ಇನ್ನೂ ಒಂದು ಕಡೆ ಅಲೆ ಏಳುತ್ತ ಬೀಳುತ್ತ ಕಡಲು ಆಟ ಆಡುವ ಹಾಗಿತ್ತು. ಮಹಾದೇಹದ ವಿಕಾರರೂಪದ ಜಲಜಂತುಗಳು ಕೆಲವು ಅಗಲ ಆಗಿ ಬಾಯಿ ತೆರೆದುಕೊಂಡು ನೀರಿನಲ್ಲಿ ಆಟ ಆಡುತ್ತ ಇದ್ದವು. ಪಾತಾಳಲೋಕದ ದಾನವೇಂದ್ರರೂ ನಾಗರೂ ಆಡುತ್ತ ಇದ್ದ ಆಟವೋ ಏನೋ ಅದು.

ಆ ಸಮುದ್ರಕ್ಕೆ ತುದಿ ಇಲ್ಲ, ಮೊದಲು ಇಲ್ಲ. ಆಕಾಶವಂತೆ ಅಪಾರ. ಇಂಥ ಮಹಾಸಮುದ್ರವನ್ನು ದಾಟಬೇಕಲ್ಲ. ವಾನರೋತ್ತಮರಿಗೆ ದಿಗ್ಭ್ರಾಂತಿ ಆಯಿತು. ಮುಂದೆ ಏನು ಎಂಬ ಚಿಂತೆ ಹುಟ್ಟಿತು. ಒಂದು ಕಡೆ ಭಯ, ಒಂದು ಕಡೆ ದುಃಖ ವಾನರಸೈನ್ಯಕ್ಕೆ.

ಅಂಗದ ನೋಡಿದ. ಅವನಿಗೆ ಕಾಲೋಚಿತ ಬುದ್ಧಿ. ವಾನರರನ್ನು ಸಮಾಧಾನಪಡಿಸುತ್ತ ಹೇಳಿದ: "ವಾನರವೀರರೆ, ಭಯಪಡಬೇಡಿ. ಚಿಂತಿಸಬೇಡಿ. ಚಿಂತೆಯೇ ಎಲ್ಲ ದೋಷಕ್ಕೂ ಬೀಜ. ಸಿಟ್ಟುಗೊಂಡ ಹಾವು ಎಳೆಯ ಮಗುವನ್ನು ಕಚ್ಚಿ ಕೊಲ್ಲುವಂತೆ ಚಿಂತೆ ಮನುಷ್ಯರನ್ನು ಕೊಲ್ಲತ್ತದೆ. ಪರಾಕ್ರಮ ಮಾಡಬೇಕು ಎಂಬಾಗ ವಿಷಾದ ತಲೆಹಾಕಿತೋ ಮನುಷ್ಯರನ್ನು ಪಾತಾಳಕ್ಕೆ ತುಳಿಯುತ್ತದೆ. ಧೈರ್ಯಗುಂದಿದರೆ ಪುರುಷಾರ್ಥಸಿದ್ಧಿ ಎಲ್ಲಿ ಬಂತು?"

ರಾತ್ರಿ ಕಳೆಯಿತು. ಬೆಳಗು ಆದಮೇಲೆ ವಾನರವೃದ್ಧರ ಹತ್ತಿರ ಸಮುದ್ರಲಂಘನದ ವಿಷಯವನ್ನು ಚರ್ಚಿಸಿದ. ವಾನರರ ದಂಡು ಎಲ್ಲವೂ ಅವನ ಸುತ್ತ ಸೇರಿತು. ದೇವೇಂದ್ರನನ್ನು ಬಳಸಿನಿಂತ ದೇವಸೇನೆಯ ಹಾಗೆ ಅಂಗದನನ್ನು ಬಳಸಿನಿಂತಿತು. ಆ ದೊಡ್ಡ ದಂಡನ್ನು ಅಂಕೆಯಲ್ಲಿ ಇಡಬಲ್ಲ ಸಮರ್ಥರು ಇಬ್ಬರೇ! ವಾಲಿಯ ಮಗ ಅಂಗದ, ವಾಯುಪುತ್ರ ಹನುಮಂತ.

ಆಗ ಆ ತೇಜಸ್ವಿ ಅಂಗದ ವಾನರವೃದ್ಧರನ್ನೂ ವಾನರಸೇನೆಯನ್ನೂ ಸಮಾಧಾನಗೊಳಿಸಿ ಹೇಳಿದ: "ವಾನರೋತ್ತಮರೆ, ಈಗ ಈ ಸಮುದ್ರವನ್ನು ದಾಟಬೇಕು. ಲಂಕೆಗೆ ಹೋಗಬೇಕು. ನಮ್ಮಲ್ಲಿ ಯಾರು ಆದರೂ ಒಬ್ಬರು ಈ ಸಾಹಸಮಾಡಿದರೆ ನಮ್ಮ ಕಾರ್ಯಸಿದ್ಧಿ ಆಗುತ್ತದೆ. ನಾವು ಮತ್ತೆ ಕಿಷ್ಕಿಂಧೆಗೆ ಹೋಗಿ ನಮ್ಮ ಗೂಡುಗಳನ್ನು ಸೇರುತ್ತೇವೆ. ಮಡದಿಮಕ್ಕಳ ಮುಖವನ್ನು ನೋಡುತ್ತೇವೆ. ಸುಗ್ರೀವನ ಪ್ರತಿಜ್ಞೆ ಸಫಲ ಆಗಿ ಅವನು ಸತ್ಯಸಂಧ ಎನಿಸುತ್ತಾನೆ. ಈ ನೂರು ಯೋಜನದ ಸಮುದ್ರವನ್ನು ಜಿಗಿದು ದಾಟಿದರೆ ಒಬ್ಬರು, ನಮಗೆ ಯಾರಿಗೂ ಸುಗ್ರೀವನ ಭಯವೇ ಇಲ್ಲ. ಯಾರ ಅನುಗ್ರಹದಿಂದ ನಾವು ಸುಗ್ರೀವನ ಬಳಿಗೆ ರಾಮಲಕ್ಷ್ಮಣರ ಬಳಿಗೆ ಹೋಗಬಲ್ಲೆವೋ ಅಂಥ ಮಹಾನುಭಾವ ಮುಂದೆ ಬರಬೇಕು. ಯಾರು ಈ ಸಮುದ್ರವನ್ನು ದಾಟಬಲ್ಲರೋ ಅವರು ಮುಂದೆ ಬಂದು ಅಭಯದಕ್ಷಿಣೆ ಕೊಡಿ" ಎಂದ.

ಅಂಗದನ ಮಾತಿಗೆ ಯಾರೂ ಬದಲು ಹೇಳಲಿಲ್ಲ. ತುಟಿಪಿಟಿಕ್ ಎನ್ನಲಿಲ್ಲ. ಎಲ್ಲರೂ ಸ್ತಬ್ಧ, ನಿಶ್ಶಬ್ದ. ಮತ್ತೆ ಕೇಳಿದ ಅಂಗದಕುಮಾರ. "ವಾನರಶ್ರೇಷ್ಠರೆ, ನೀವು ಎಲ್ಲರೂ ಮಹಾಬಲಿಷ್ಠರು. ದೃಢಪರಾಕ್ರಮಿಗಳು. ಉತ್ತಮೋತ್ತಮ ವಂಶಗಳಲ್ಲಿ ಹುಟ್ಟಿದವರು. ಲೋಕಪೂಜ್ಯರು. ಈಗೇಕೆ ಸುಮ್ಮನೆ ಕೂತಿರಿ? ಇದುವರೆಗೆ ಯಾವ ಅಡ್ಡಿಯೂ ಇಲ್ಲದೆ ಎಲ್ಲಿಗೆ ಎಂದರೆ ಅಲ್ಲಿಗೆ ಹೋಗಿಬರುತ್ತ ಇದೀರಿ. ಸುಮ್ಮನೆ ಇರುವುದು ನಿಮಗೆ ತರ ಅಲ್ಲ. ಯಾರು ಯಾರು ಎಷ್ಟು ಎಷ್ಟು ದೂರ ಹಾರಬಲ್ಲಿರೋ ಹೇಳಿ."

೩೬

ಹತ್ತು ಯೋಜನ ಹಾರಬಲ್ಲೆ ಎಂದ ಗಜ. ಗವಾಕ್ಷ ಇಪ್ಪತ್ತು ಎಂದ. ಮೂವತ್ತು ಗಾವುದ ದೂರ ಹಾರುತ್ತೇನೆ ಎಂದ ಗವಯ. ನಲವತ್ತು ಗಾವುದ ಹಾರುವ ಸಾಮರ್ಥ್ಯ ತನ್ನದು ಎಂದ ಶರಭ. ಐವತ್ತು ಯೋಜನ ದೂರ ಹಾರಬಲ್ಲೆ, ಸ್ವಲ್ಪವೂ ಸಂಶಯ ಇಲ್ಲ ಎಂದ ಗಂಧಮಾದನ. ಮೈಂದ ಇನ್ನೂ ಹತ್ತು ಗಾವುದ ಹೆಚ್ಚು ಹೇಳಿದ. ದ್ವಿವಿದ ತೇಜೋವಂತ. ಎಪ್ಪತ್ತು ಗಾವುದ ಹಾರುತ್ತೇನೆ ಎಂದ. ವಾನರಶ್ರೇಷ್ಠ ಸುಷೇಣ ತಾನು ಎಂಬತ್ತು ಗಾವುದ ಹಾರಬಲ್ಲೆ ಎಂದ. ಎಲ್ಲರೂ ತಮ್ಮ ತಮ್ಮ ಸಾಮರ್ಥ್ಯವನ್ನು ಹೇಳಿಕೊಂಡರು.

ಮುದುಕ ಜಾಂಬವಂತ ಎಲ್ಲರನ್ನೂ ತಡೆದ. ತಾನು ಹೇಳಿದ. "ವಾನರ ಶ್ರೇಷ್ಠರೆ, ಪೂರ್ವದಲ್ಲಿ ನನಗೂ ಶಕ್ತಿ ಇತ್ತು. ಎಷ್ಟು ದೂರ ಆದರೂ ಹಾರುತ್ತ ಇದ್ದೆ. ಈಗ ವಯಸ್ಸು ಆಯಿತು. ಮುದುಕ ಆದೆ. ಅಷ್ಟು ದೂರ ಹಾರಲಾರೆ. ಆದರೂ ಸುಗ್ರೀವಪ್ರಭುವೂ ರಾಮನೂ ನಮ್ಮನ್ನು ನಂಬಿ ಕಳಿಸಿ ಇದಾರೆ. ಅವರ ಕೆಲಸವನ್ನು ಅಸಡ್ಡೆ ಮಾಡಕೂಡದು. ಕಾಲಭೇದದಿಂದ ನನಗೆ ಹಿಂದಿನ ಶಕ್ತಿ ಇಲ್ಲ. ಆದರೂ ತೊಂಬತ್ತು ಗಾವುದ ಹಾರಬಲ್ಲೆ. ಸಂದೇಹ ಇಲ್ಲ.

"ನನ್ನ ಪರಾಕ್ರಮ ಗಮನಶಕ್ತಿ ಇಷ್ಟೇ ಎಂದು ತಿಳಿಯಬೇಡಿ. ನಡು ಹರೆಯದಲ್ಲಿ ನನ್ನನ್ನು ಮೀರಿಸಿದವರು ಯಾರೂ ಇರಲಿಲ್ಲ. ಮಹಾವಿಷ್ಣು ಬಲಿಚಕ್ರವರ್ತಿಯನ್ನು ಮೂರು ಅಡಿ ನೆಲ ಕೇಳಿ ತ್ರಿವಿಕ್ರಮಾವತಾರ ಮಾಡಿದ. ಮೂರು ಲೋಕವನ್ನೂ ಮೀರಿದ ಅವನ ಬ್ರಹ್ಮಾಂಡ ಆಕಾರವನ್ನು ಪ್ರದಕ್ಷಿಣೆ

ಮಾಡಿ ಬಂದೆ ನಾನು. ಈಗ ಮುದುಕ ಆದೆ. ತೊಂಬತ್ತು ಯೋಜನ ಹಾರಿ ಏನು ಪ್ರಯೋಜನ? ಲಂಕೆ ನೂರು ಯೋಜನ ದೂರ ಇದೆ."

ಜಾಂಬವಂತನ ಅಪ್ಪಣೆ ಪಡೆದು ಅಂಗದ ಗಂಭೀರ ಆಗಿ ಹೇಳಿದ: "ವಾನರವೀರರೆ, ನೂರು ಯೋಜನ ಹಾರಬಲ್ಲೆ ನಾನು. ಹಿಂದಿರುಗಿ ಬರಲು ನನಗೆ ಶಕ್ತಿ ಇದೆಯೋ ಇಲ್ಲವೋ ಹೇಳಲಾರೆ" ಎಂದ. ವಾಕ್ಚತುರ ಜಾಂಬವಂತ ಹೇಳಿದ: "ಯುವರಾಜ, ಈ ವಾನರಭಲ್ಲೂಕವೀರರಲ್ಲಿ ನೀನು ಶ್ರೇಷ್ಠನೇ. ನೂರು ಯೋಜನ ಅಲ್ಲ, ಸಾವಿರ ಯೋಜನಗಳನ್ನೂ ಹಾರಬಲ್ಲೆ. ಹಿಂದಿರುಗಿ ಬರಲೂ ಬಲ್ಲೆ ನೀನು. ಸಂದೇಹ ಇಲ್ಲ. ಆದರೆ ಸೇವಕರು ನಾವು ಇರುವಾಗ ಅರಸ ನೀನು ಹೋಗುವುದು ಸರಿ ಅಲ್ಲ. ಇದು ಶಾಸ್ತ್ರಸಮ್ಮತ ಅಲ್ಲ. ನೀನು ಅರಸ. ನಮ್ಮಲ್ಲಿ ಯಾರನ್ನು ಆದರೂ ನೀನು ನಿಯಮಿಸಬಹುದು. ನೀನು ನಿಯಾಮಕ. ನಾವು ಅಲ್ಲ. ಸೈನಿಕರು ತಮ್ಮ ಸ್ವಾಮಿಯನ್ನು ಕಾಪಾಡಿಕೊಳ್ಳ ಬೇಕು. ಹೆಂಡತಿಯನ್ನು ಕಾಪಾಡುವ ಹಾಗೆ ನಾವು ನಿನ್ನನ್ನು ಕಾಪಾಡಬೇಕು. ಈ ಕೆಲಸಕ್ಕೆ ನೀನು ತಾಯಿಬೇರು. ಬೇರನ್ನು ಕಾಪಾಡಿದರೆ ಹೂ ಹಣ್ಣು. ಅರಿಂದಮ, ನೀನು ಬುದ್ಧಿವಂತ. ಪರಾಕ್ರಮಶಾಲಿ. ನೀನು ಯುವರಾಜ, ರಾಜಪುತ್ರ. ನಿನ್ನ ಆಶ್ರಯದಲ್ಲಿ ನಾವು ಈ ಕೆಲಸವನ್ನು ಸಾಧಿಸಬೇಕು. ನೀನೇ ಇಲ್ಲದೆ ಹೋದರೆ ನಮಗೆ ಏನು ಸಾಮರ್ಥ್ಯ?"

ಅಂಗದ ಹೇಳಿದ: "ಜಾಂಬವಂತ, ನಾನೂ ಹೋಗದೆ ಬೇರೆ ಯಾರೂ ಹೋಗದೆ ಇದ್ದರೆ ನಮಗೆ ಪ್ರಾಯೋಪವೇಶವೇ ಗತಿ. ಸುಗ್ರೀವನ ಅಪ್ಪಣೆ ಯನ್ನು ನೆರವೇರಿಸದೆ ಕಿಷ್ಕಿಂಧೆಗೆ ಹೋದರೆ ನಮ್ಮ ಪ್ರಾಣಗಳು ಉಳಿಯವು. ಅವನ ಅನುಗ್ರಹ ಆಗ್ರಹ ಎರಡೂ ಅತಿ. ಆದ್ದರಿಂದ ಏನು ಮಾಡಬೇಕೋ ಆಲೋಚಿಸಿ ಹೇಳು ನೀನೇ. ನಿನಗೆ ತಿಳಿಯದುದು ಇಲ್ಲ. ಕೆಲಸ ಕೆಡದಂತೆ ಒಂದು ಉಪಾಯವನ್ನು ಹೇಳು."

ಮಹಾವೀರ ಜಾಂಬವಂತ ಹೇಳಿದ—"ಅಂಗದ, ನಿನ್ನ ಪ್ರಯತ್ನಕ್ಕೆ ಚ್ಯುತಿ ಇಲ್ಲ. ಈ ಕೆಲಸವನ್ನು ಸಾಧಿಸಬಲ್ಲ ಮಹಾವೀರನನ್ನು ಹುರಿದುಂಬಿಸು ತ್ತೇನೆ."

ಭುಜಬಲಪರಾಕ್ರಮಗಳಿಗೆ ಸುಪ್ರಸಿದ್ಧ. ಲಂಘನಶಕ್ತಿಯಲ್ಲಿ ಮೇಟಿ ಕಪಿಶ್ರೇಷ್ಠ ಹನುಮಂತ. ಒಂದು ಮೂಲೆಯಲ್ಲಿ ಏಕಾಂತದಲ್ಲಿ ಕುಳಿತು ಇದ್ದ.

ಅವನನ್ನು ತತ್‌ಕ್ಷಣ ಹುರಿದುಂಬಿಸಬೇಕು ಸಮುದ್ರವನ್ನು ಹಾರಲಿಕ್ಕೆ ಎಂದು ಜಾಂಬವಂತನ ಪ್ರಯತ್ನ.

೩೭

ಹನುಮಂತ ಇದ್ದಲ್ಲಿಗೆ ಹೋದ ಜಾಂಬವಂತ. " ಹನುಮಂತ, ವಾನರ ವೀರರಲ್ಲಿ ಮಹಾವೀರ ನೀನು. ಸರ್ವಶಾಸ್ತ್ರಪಂಡಿತ. ನೀನು ಹೀಗೆ ಏಕಾಂತ ಸ್ಥಳದಲ್ಲಿ ಕೂತರೆ ಹೇಗೆ? ಮಾತೇ ಆಡದೆ ಇದೀಯಲ್ಲ. ನಿನ್ನ ಬಲಪರಾಕ್ರಮ ಸುಗ್ರೀವನಿಗೆ ಸಾಟಿ. ರಾಮಲಕ್ಷ್ಮಣರಿಗೆ ಸಮಾನ ತೇಜೋವಂತ ನೀನು. ಅರಿಷ್ಟನೇಮಿಗೂ ವಿನತೆಗೂ ಮಗ ಆದ ಗರುಡ ಪಕ್ಷಿರಾಜ ಎನಿಸಿಕೊಂಡ. ಮಹಾಕೀರ್ತಿವಂತ ಮಹಾವೇಗಶಾಲಿ ಗರುಡ ಸಮುದ್ರದಿಂದ ಸರ್ಪಗಳನ್ನು ಹಿಡಿದು ಎತ್ತಿದುದನ್ನು ನೋಡಿದೇನೆ. ಅವನ ರೆಕ್ಕೆಗಳಿಗೆ ಇರುವ ಬಲ ನಿನ್ನ ತೋಳುಗಳಿಗೆ ಇದೆ. ವೇಗದಲ್ಲಿ ಪರಾಕ್ರಮದಲ್ಲಿ ಅವನಿಗಿಂತ ಸ್ವಲ್ಪವೂ ಕಡಮೆ ಅಲ್ಲ ನೀನು.

" ಕಪೀಶ್ವರ, ನಿನ್ನ ಬಲ ನಿನ್ನ ತೇಜ ನಿನ್ನ ಬುದ್ಧಿ ಪರಾಕ್ರಮ ಬೇರೆ ಯಾರಿಗೆ ಇದೆ ಪ್ರಾಣಿಕೋಟಿಯಲ್ಲಿ? ನಿನ್ನನ್ನು ಮೀರಿಸಿದವರು ಯಾರೂ ಇಲ್ಲ. ಆದರೆ ನಿನ್ನನ್ನು ನೀನೇ ತಿಳಿದೇ ಇಲ್ಲ.

" ಮೂರುಲೋಕಗಳಲ್ಲೂ ಅತ್ಯಂತ ಚೆಲುವೆ ಎನಿಸಿಕೊಂಡ ಅಪ್ಸರಾಂಗನೆ ಪುಂಜಿಕಸ್ಥಲೆ. ಅವಳು ದೇವಕನ್ನಿಕೆ. ಶಾಪದ ಫಲ ಆಗಿ ಈ ಭೂಮಿಯಲ್ಲಿ ಕುಂಜರ ಎಂಬ ವಾನರನ ಮಗಳು ಆಗಿ ಹುಟ್ಟಿದಳು. ಆಕೆಯ ಹೆಸರು ಅಂಜನಾದೇವಿ. ಆಕೆ ಕಾಮರೂಪಿಣಿ. ಕೇಸರಿ ಎಂಬ ವಾನರಶ್ರೇಷ್ಠನ ಹೆಂಡತಿ ಆದಳು. ಅಂಜನಾದೇವಿ ವಾನರಿ ಆದರೂ ಬಹಳ ಚೆಲುವೆ. ಇಷ್ಟ ಬಂದ ರೂಪವನ್ನು ಧರಿಸುತ್ತ ಇದ್ದಳು. ಒಂದು ಸಲ ಮನುಷ್ಯರೂಪವನ್ನು ಧರಿಸಿದಳು. ಸೊಗಸು ಆದ ರೂಪ. ಒಳ್ಳೆಯ ಹರೆಯ. ಮೈಮೇಲೆ ವಿವಿಧ ಆಭರಣ, ಬಣ್ಣಬಣ್ಣದ ಹೂಮಾಲೆಗಳು. ಶ್ರೇಷ್ಠ ಪೀತಾಂಬರ ಉಟ್ಟು ಮಳೆಗಾಲದ ಮೇಘರಾಶಿಗೆ ಸಮ ಆದ ಪರ್ವತಶಿಖರದಲ್ಲಿ ವಿಹರಿಸುತ್ತ ಇದ್ದಳು. ವಿಲಾಸದಿಂದ ಆಕೆ ಓಡಾಡುತ್ತ ಇದ್ದಾಗ ಆಕೆಯ ಆ ರಕ್ತಪೀತ ವಸ್ತ್ರವನ್ನು ವಾಯುದೇವ ಮೆಲ್ಲನೆ ಮೇಲಕ್ಕೆ ಹಾರಿಸಿದ.

" ಒಂದಕ್ಕೆ ಒಂದು ಕೂಡಿಕೊಂಡ ಆಕೆಯ ದುಂಡು ತೊಡೆಗಳನ್ನೂ ಉಬ್ಬಿದ ಕುಚಗಳನ್ನೂ ಅಂದದ ಮುಖವನ್ನೂ ನೋಡಿದ ವಾಯು. ಆಕೆಯ ನಿತಂಬಗಳು ವಿಸ್ತಾರ. ನಡುವು ತೀರ ಸಣ್ಣ. ಅಂಜನಾದೇವಿ ಸರ್ವಾಂಗ ಸುಂದರಿ. ಆಕೆಯ ದೇಹದ ಸೊಬಗನ್ನು ನೋಡಿ ವಾಯುವಿಗೆ ಕಾಮೋದ್ರೇಕ ಆಯಿತು. ಆಕೆಯ ಮೇಲೆ ಮನಸ್ಸು ಆಯಿತೋ ಇಲ್ಲವೋ ವೈಮರೆತ. ಮರುಳು ಆದ. ತನ್ನ ಉದ್ದನೆ ತೋಳುಗಳಿಂದ ದೋಷ ಎಳ್ಳಷ್ಟೂ ಇಲ್ಲದ ಆಕೆಯನ್ನು ಅಪ್ಪಿದ.

" ಅಂಜನಾದೇವಿ ಕುಂದು ಇಲ್ಲದವಳು. ಗಾಬರಿ ಆಯಿತು ಆಕೆಗೆ. ' ಏಕಪತ್ನೀವ್ರತ ನನ್ನದು. ನನ್ನ ಪಾತಿವ್ರತ್ಯವನ್ನು ಹಾಳುಮಾಡಬಯಸಿದವರು ಯಾರು? ' ಎಂದು ಸಿಟ್ಟು ಆದಳು. ' ಸುಭಗೆ, ಸುಶ್ರೋಣಿ, ಹೆದರಬೇಡ. ನನ್ನ ಮನಸ್ಸು ನಿನ್ನನ್ನು ಬಯಸಿತು. ಅಷ್ಟೇ. ನಿನ್ನ ಪಾತಿವ್ರತ್ಯಕ್ಕೆ ನಾನು ಭಂಗತರುವುದು ಇಲ್ಲ. ಸುಮ್ಮನೆ ಅಪ್ಪಿಕೊಂಡೆ. ನಿನಗೆ ಅಸಮಾನ ಬುದ್ಧಿವಂತ ಪರಾಕ್ರಮಶಾಲಿ ಮಗ ಹುಟ್ಟುತ್ತಾನೆ. ಮಹಾತೇಜಸ್ವಿ ಮಹಾಬಲಾಢ್ಯ ಆಗಿ ಹಾರುವುದರಲ್ಲಿ ನೆಗೆಯುವುದರಲ್ಲಿ ಹೆಸರು ಆಗುತ್ತಾನೆ. ಎಷ್ಟೇ ದೂರ ಆದರೂ ಸರಿಯೆ. ನನಗೆ ಸಮ ಆಗುತ್ತಾನೆ ' ಎಂದು ಸಮಾಧಾನ ಹೇಳಿದ ವಾಯುದೇವ.

" ಅಂಜನಾದೇವಿಗೆ ಸಂತೋಷ ಆಯಿತು. ಒಂದು ಗಿರಿಗುಹೆಯಲ್ಲಿ ನಿನ್ನನ್ನು ಹೆತ್ತಳು ಆಕೆ. ಆಗತಾನೆ ಸೂರ್ಯ ಮೂಡುತ್ತ ಇದ್ದ. ಹುಟ್ಟುತ್ತಲೇ ಆ ಬಿಂಬವನ್ನು ನೋಡಿದೆ ನೀನು. ಅಡವಿಯಲ್ಲಿ ಬಿಟ್ಟ ಯಾವುದೋ ಹಣ್ಣು ಎಂದುಕೊಂಡೆ. ಅದನ್ನು ಹಿಡಿಯಬೇಕು ಎಂಬ ಭ್ರಾಂತಿ. ಆಕಾಶಕ್ಕೆ ನೆಗೆದೆ. ನೂರಾರು ಯೋಜನ ದೂರ ಹೋದೆ. ಸೂರ್ಯನ ಬೇಗೆ ನಿನ್ನನ್ನು ಏನೂ ಮಾಡಲಿಲ್ಲ. ನೀನು ಬಾಡಲಿಲ್ಲ. ಬಳಲಲಿಲ್ಲ.

" ದೇವೇಂದ್ರ ಇದನ್ನು ನೋಡಿದ. ಅವನಿಗೆ ಲೋಕದ ಚಿಂತೆ. ಸಿಟ್ಟು ಬಂತು. ನಿನ್ನ ಮೇಲೆ ವಜ್ರಾಯುಧವನ್ನು ಬೀಸಿದ. ಆ ಏಟು ತಗಲಿ ನೀನು ಒಂದು ಬೆಟ್ಟದ ಮೇಲೆ ಬಿದ್ದೆ. ನಿನ್ನ ಎಡ ಕೆನ್ನೆ ಅಲ್ಲಿ ಒಂದು ಬಂಡೆಗೆ ತಗಲಿ ಊದಿಕೊಂಡಿತು. ಹನುವಿಗೆ ಏಟು ಬಿತ್ತು. ಆದರಿಂದ ನಿನಗೆ ಹನುಮಂತ ಎಂದು ಹೆಸರು ಆಯಿತು.

"ದೇವೇಂದ್ರ ನಿನ್ನನ್ನು ಹೊಡೆದನಲ್ಲ. ನಿಮ್ಮ ತಂದೆ ಆದ ವಾಯು ನೋಡಿದ. ಬಹಳ ಸಿಟ್ಟು ಬಂತು ಅವನಿಗೆ. ಬೀಸುವುದನ್ನೇ ನಿಲ್ಲಿಸಿದ. ಮೂರು ಲೋಕಗಳಲ್ಲೂ ಗಂಧವನ್ನು ಹೊತ್ತು ತಂದು ಗಿಡಮರಗಳನ್ನು ಅಲುಗಾಡಿಸಿ ಬೀಸುವ ವಾಯು ಸ್ತಬ್ಧ ಆದ. ಮೂರು ಲೋಕಗಳಲ್ಲೂ ಕ್ಷೋಭೆ. ದೇವತೆಗಳಿಗೆ ದಿಗ್ಭ್ರಾಂತಿ. ವಾಯುದೇವನನ್ನು ಸಮಾಧಾನ ಪಡಿಸಲು ಬಂದರು ದೇವತೆಗಳು. ಯಾವ ಶಸ್ತ್ರದಿಂದಲೂ ನಿನಗೆ ಸಾವು ಬಾರದಂತೆ ವರವನ್ನು ಕೊಟ್ಟ ಬ್ರಹ್ಮದೇವ. ತನ್ನ ವಜ್ರಾಯುಧದ ಏಟಿಗೂ ನಿನಗೆ ನೋವು ಆಗದುದನ್ನು ನೋಡಿ ದೇವೇಂದ್ರನಿಗೆ ಬಹಳ ಸಂತೋಷ ಆಯಿತು. ನಿನಗೆ ಸ್ವಚ್ಛಂದಮರಣವನ್ನು ಅನುಗ್ರಹಿಸಿದ.

"ಹನುಮಂತ, ನೀನು ವಾಯುದೇವನ ಔರಸಪುತ್ರ. ಕೇಸರಿ ನಿನ್ನ ತಂದೆ. ಅವನ ಹೆಂಡತಿ ಅಂಜನಾದೇವಿ ನಿನ್ನ ತಾಯಿ. ತೇಜಸ್ಸು ಪರಾಕ್ರಮ ಗಳಲ್ಲಿ ನೀನು ತಂದೆಗೆ ಸಮ. ಹಾರುವುದರಲ್ಲಿ ವಾಯುವೇ ನೀನು. ಎಲ್ಲಿಗೆ ಆದರೂ ಹಾರಬಲ್ಲೆ. ಎರಡನೆ ಪಕ್ಷಿರಾಜ ಗರುಡ ನೀನು. ನಮಗೆ ಈಗ ಪ್ರಾಣಗಳು ದಕ್ಕುವುದೇ ಕಷ್ಟ. ನೀನೇ ಈಗ ನಮಗೆ ಪ್ರಾಣದಾನ ಮಾಡಿ ಕಾಪಾಡಬೇಕು. ಹಿಂದೆ ಮಹಾವಿಷ್ಣು ತ್ರಿವಿಕ್ರಮಾವತಾರ ಮಾಡಿದಾಗ ಕಾಡು ಬೆಟ್ಟಗಳ ಈ ಭೂಮಂಡಲವನ್ನು ಮೂರೇಳು ಸಲ ಸುತ್ತಿಬಂದೆ ನಾನು. ಅಮೃತ ಮಥನಸಮಯದಲ್ಲಿ ಸಮಸ್ತ ಗಿಡಮೂಲಿಕೆಗಳನ್ನೂ ತಂದು ಹಾಲುಗಡಲಿನಲ್ಲಿ ಹಾಕಲು ದೇವತೆಗಳು ನನಗೆ ಅಪ್ಪಣೆ ಮಾಡಿದರು. ಅವನ್ನು ತಂದುಹಾಕಿದ್ದ ರಿಂದಲೇ ಅಮೃತ ಹುಟ್ಟಿದ್ದು. ಆಗ ನನಗೆ ಅಪರಿಮಿತ ಬಲ. ಮುದುಕ ಆದೆ ಈಗ. ಪರಾಕ್ರಮ ಕುಗ್ಗಿಹೋಯಿತು.

"ಈಗ ಸಮಸ್ತ ಶಕ್ತಿಯೂ ಇರುವವನು ನೀನು ಒಬ್ಬನೇ. ನಿನ್ನ ಪರಾಕ್ರಮ ಈಗ ವಿಜೃಂಭಿಸಬೇಕು. ಸಮುದ್ರವನ್ನು ದಾಟಲು ನೀನು ಒಬ್ಬನೇ ಸಮರ್ಥ. ಬೇರೆ ಯಾರಿಗೂ ಸಾಧ್ಯ ಇಲ್ಲ. ನಿನ್ನ ಲಂಘನ ಸಾಮರ್ಥ್ಯ ಯಾವ ಪ್ರಾಣಿಗೂ ಇಲ್ಲ. ಈ ವಾನರಸೇನೆ ಎಲ್ಲವೂ ನಿನ್ನ ಪರಾಕ್ರಮವನ್ನು ನೋಡಲು ಕಾದು ಇದೆ. ಎಲ್ಲರೂ ದುಃಖಿತರು ಆಗಿ ಇರುವುದನ್ನು ನೋಡು. ಅಯ್ಯಾ, ಉದಾಸೀನ ಮಾಡಬೇಡ. ನಿನ್ನ ವೇಗಕ್ಕೆ ಯಾರು ಸಾಟಿ? ತ್ರಿವಿಕ್ರಮನ ಹಾಗೆ ಮೂರೇ ಹೆಜ್ಜೆಯಲ್ಲಿ ಸಮುದ್ರವನ್ನು ದಾಟು."

ಜಾಂಬವಂತನ ಮಾತು ಕೇಳಿ ಹನುಮಂತನಿಗೆ ಸಂತೋಷ ಆಯಿತು. ಅವನ ಪ್ರಚೋದನೆಯಿಂದ ಸುಪ್ರಸಿದ್ಧ ವೇಗದ ಹನುಮಂತ ಸಮುದ್ರವನ್ನು ದಾಟಲು ಸಿದ್ಧ ಆದ. ಇಡೀ ವಾನರಸೈನ್ಯ ಹಿಗ್ಗುವಂತೆ ತನ್ನ ಮೈಯನ್ನು ಅದ್ಭುತ ಆಗಿ ಬೆಳೆಸಿದ.

೩೮

ನೂರು ಯೋಜನ ಹಾರಬೇಕು ಎಂದು ತನ್ನ ಆಕಾರವನ್ನು ಬೆಳೆಸಿದ ಆಂಜನೇಯ. ವಾನರರ ಚಿಂತೆ ಕಳೆಯಿತು. ಸಂತೋಷ ಹೆಚ್ಚಿ ಎಲ್ಲರೂ ಸಿಂಹನಾದ ಮಾಡಿದರು. ಮಹಾಬಲಾಢ್ಯ ಆದ ಹನುಮಂತನನ್ನು ಎಲ್ಲರೂ ಹೊಗಳಿದರು. ತ್ರಿವಿಕ್ರಮಾವತಾರದಲ್ಲಿ ಮಹಾವಿಷ್ಣು ಬೆಳೆದ ಹಾಗೆ ಬೆಳೆದ ಹನುಮಂತ. ಸುತ್ತಲೂ ನಿಂತು ಅವನನ್ನು ನೋಡಿದರು ವಾನರರು. ಆಗ ತ್ರಿವಿಕ್ರಮನ ಸುತ್ತ ಸ್ತಬ್ಧರು ಆಗಿ ಜನ ನಿಂತಹಾಗೆ ನಿಂತರು. ಆಶ್ಚರ್ಯದಿಂದ ಹನುಮಂತನನ್ನು ಹೊಗಳಿದರು. ಅವರು ಹೊಗಳಿದಷ್ಟೂ ಹನುಮಂತನಿಗೆ ಹುರುಪು. ಅಷ್ಟು ಹಿಗ್ಗು. ಅಷ್ಟೂ ಬೆಳೆದ. ಪರ್ವತಗುಹೆಯಲ್ಲಿ ವಿಜೃಂಭಿಸುವ ಸಿಂಹದ ಹಾಗೆ ವಿಜೃಂಭಿಸಿದ. ಅವನ ತೇಜಸ್ಸೂ ಅವನ ಆಕಾರವೂ ಅಪರಿಮಿತ ಆಗಿ ಬೆಳೆಯಿತು. ಆ ಮಹಾತ್ಮನ ಮುಖ ಕೆಂಪು ಏರಿ ಹೊಗೆ ಇಲ್ಲದ ಬೆಂಕಿಯ ಹಾಗೆ, ಕೆಂಪಗೆ ಕಾದ ಬಾಣಲಿಯಂತೆ ಕಾಣಿಸಿತು. ಅಷ್ಟು ದೇದೀಪ್ಯಮಾನ!

ವಾನರರ ನಡುವೆ ಬಂದು ನಿಂತ ಹನುಮಂತ. ಅವನ ಮೈಕೂದಲು ನಿಗರಿ ನೆಟ್ಟಗೆ ನಿಂತು ಇದ್ದವು. ವಾನರವೃದ್ಧರು ಎಲ್ಲರಿಗೂ ನಮಸ್ಕಾರ ಮಾಡಿದ. " ವೀರರೆ, ಅಗ್ನಿಯ ಗೆಳೆಯ ವಾಯುದೇವ. ಅವನ ಪರಾಕ್ರಮ ಅಸಮಾನ. ಅವನ ಗಮನಶಕ್ತಿಗೆ ಎಣೆ ಇಲ್ಲ. ಅವನ ಶಕ್ತಿಯೋ ಅಸದೃಶ. ಆಕಾಶದಲ್ಲಿ ಸಂಚಾರಮಾಡುತ್ತಾನೆ. ಆ ಮಹಾವೇಗಶಾಲಿಯ ಮಗ ನಾನು. ಹಾರುವುದರಲ್ಲಿ ನನಗೆ ಯಾರು ಸಾಟಿ? ಮುಗಿಲನ್ನು ಮುಟ್ಟುವ ಎತ್ತರದ ಮೇರುಪರ್ವತದಂಥ ವಿಸ್ತಾರ ಆದ ಪರ್ವತವನ್ನೂ ಎಲ್ಲಿಯೂ ನಡುವೆ ನಿಲ್ಲದೆ ಸಾವಿರ ಸಲ ಸುತ್ತಿ ಬರುತ್ತೇನೆ. ಈ ಮಹಾಸಮುದ್ರದ ನೀರು ಎಲ್ಲವನ್ನೂ ನನ್ನ ತೋಳ್ ಬಲದಿಂದ ಮೇಲಕ್ಕೆ ಎರಚಿ, ಗುಡ್ಡಬೆಟ್ಟ ಹೊಳೆಕೊಳಗಳಿಂದ

ತುಂಬಿದ ಈ ಭೂಮಂಡಲವೇ ಆ ಸಮುದ್ರದಲ್ಲಿ ತೇಲುವಂತೆ ಮಾಡಬಲ್ಲೆ. ನನ್ನ ತೊಡೆಗಳ ಮೊಳಕಾಲುಗಳ ವೇಗಕ್ಕೆ ಸಮುದ್ರದ ನೀರು ಉಕ್ಕಿ ತುಳುಕಿ ಚೆಲ್ಲುತ್ತದೆ. ಆಗ ಸಮುದ್ರದಲ್ಲಿ ಇರುವ ತಿಮಿತಿಮಿಂಗಿಲಾದಿ ಸಮಸ್ತ ಪ್ರಾಣಿಗಳೂ ಆಕಾಶದಲ್ಲಿ ಕಾಣುತ್ತವೆ. ಆಹಾರಕ್ಕೆ ಸರ್ಪಗಳನ್ನು ಹಿಡಿಯಬೇಕು ಎಂದು ಆಕಾಶದಲ್ಲಿ ಹೊರಟು ತಿರುಗುವ ಗರುಡನ ಸುತ್ತಲೂ ಸುತ್ತಿ ಬರಬಲ್ಲೆ ನಾನು. ಅವನ ಒಂದು ಸುತ್ತಿಗೆ ನನ್ನದು ಸಾವಿರ ಸುತ್ತು.

" ಸೂರ್ಯ ಉದಯಾಚಲದಿಂದ ಹೊರಡುವಾಗ ಅವನ ಜೊತೆಯಲ್ಲೇ ಹೊರಟು ಅವನಿಗಿಂತ ಮುಂಚೆಯೇ ಅಸ್ತಾಚಲಕ್ಕೆ ಹೋಗಬಲ್ಲೆ. ಅಲ್ಲಿಂದ ಹಿಂದಿರುಗಿ ಸೂರ್ಯ ಇನ್ನೂ ಆಕಾಶಮಧ್ಯದಲ್ಲಿ ಪ್ರಕಾಶಿಸುತ್ತ ಇರುವಾಗಲೇ ಬಂದು ಅವನನ್ನು ಇದಿರುಗೊಳ್ಳಬಲ್ಲೆ. ಆಗಲೂ ನೆಲವನ್ನು ಸೋಕದೆ ಮತ್ತೆ ಆ ಸೂರ್ಯನಿಗೆ ಇದಿರು ಆಗಿ ಹೋಗಬಲ್ಲೆ. ಆಕಾಶದಲ್ಲಿ ಸಂಚರಿಸುವ ಪ್ರಾಣಿ ಯಾವುದೂ ನನ್ನಷ್ಟು ವೇಗ ಆಗಿ ಹೋಗಲಾರದು. ಗ್ರಹನಕ್ಷತ್ರಗಳೂ ಕೂಡ ಹೋಗಲಾರವು.

" ವಾನರರೆ, ನನ್ನ ವೇಗಕ್ಕೆ ಸಮುದ್ರ ಬತ್ತಿಹೋಗುತ್ತದೆ. ಭೂಮಿ ಸೀಳಿಹೋಗುತ್ತದೆ. ಪರ್ವತಗಳು ಪುಡಿಪುಡಿ. ನಾನು ಹಾರಿದಾಗ ನನ್ನ ತೊಡೆಗಳ ವೇಗಕ್ಕೆ ಸಮುದ್ರವೇ ನನ್ನನ್ನು ಹಿಂಬಾಲಿಸಿ ಬರುತ್ತದೆ. ಈಗ ನಾನು ಹಾರುತ್ತೇನಲ್ಲ ಸಮುದ್ರವನ್ನು ದಾಟಲು. ಈ ಕಾಡಿನ ಗಿಡಬಳ್ಳಿ ಹೂ ಎಲ್ಲವೂ ನನ್ನ ಹಿಂದೆ ಬರುತ್ತವೆ. ನನ್ನ ಹಿಂದೆ ಮುಂದೆ ಬರುವ ಈ ಹೂಗಳ ದೆಸೆಯಿಂದ ನಾನು ಹೋಗುವ ದಾರಿ ಛಾಯಾಪಥದ ಹಾಗೆ ಕಾಣುತ್ತದೆ.

" ವಾನರರೆ, ಇಲ್ಲಿಂದ ನಾನು ಆಕಾಶಕ್ಕೆ ನೆಗೆಯುತ್ತೇನೆ. ಮೇಲೆ ಹಾರಿ ಹೋಗುತ್ತೇನೆ ಆಕಾಶವೀಥಿಯಲ್ಲಿ. ದಕ್ಷಿಣತೀರದಲ್ಲಿ ಕೆಳಕ್ಕೆ ಇಳಿಯುತ್ತೇನೆ. ಸಮಸ್ತ ಪ್ರಾಣಿಗಳೂ ಇದನ್ನು ಪರಮಾಶ್ಚರ್ಯದಿಂದ ನೋಡುತ್ತವೆ. ಮಹಾ ಮೇಘದಂತೆ ಆಕಾಶ ಎಲ್ಲವನ್ನೂ ವ್ಯಾಪಿಸಿದಾಗ ನಾನು, ಇಡೀ ಆಕಾಶವನ್ನೇ ನುಂಗುವಂತೆ ಕಾಣುತ್ತದೆ ನಿಮಗೆ. ಸಾವಧಾನಚಿತ್ತ ಆಗಿ ನಾನು ಹಾರುವಾಗ ಮೋಡಗಳು ಎಲ್ಲವೂ ಚೆದರಿಹೋಗುತ್ತವೆ. ಬೆಟ್ಟಗುಡ್ಡ ಎಲ್ಲವೂ ನಡುಗುತ್ತವೆ. ನೆಟ್ಟಮನಸಿನಿಂದ ನಾನು ಹಾರುತ್ತ ಇದ್ದರೆ ಸಮುದ್ರ ಕ್ಷೋಭೆಗೊಳ್ಳುತ್ತದೆ.

"ನನ್ನ ಹಾಗೆ ಹಾರಿಹೋಗುವ ಶಕ್ತಿ ಒಬ್ಬ ವಾಯುದೇವನಿಗೆ ಇದೆ, ಒಬ್ಬ ಗರುಡನಿಗೆ ಇದೆ. ಬೇರೆ ಯಾರಿಗೂ ಇಲ್ಲ. ನಾನು ಆಕಾಶದಲ್ಲಿ ಹಾರುತ್ತ ಇದ್ದರೆ ಬೇರೆ ಯಾರೂ ನನ್ನನ್ನು ಹಿಂಬಾಲಿಸಲಾರರು. ಅವರು ಇಬ್ಬರೇ. ರೆಪ್ಪೆ ಮುಚ್ಚುವಷ್ಟರಲ್ಲೇ ನಿರಾಧಾರ ಆದ ಈ ಆಕಾಶಕ್ಕೆ ಹಾರಬಲ್ಲೆ ನಾನು ಮೋಡಗಳಲ್ಲಿ ತಟ್ಟನೆ ಮಿಂಚು ಕಾಣಿಸುವಂತೆ. ಸಮುದ್ರಲಂಘನ ಮಾಡುವಾಗ ನನ್ನನ್ನು ನೋಡಿ. ತ್ರಿವಿಕ್ರಮಾವತಾರಕಾಲದಲ್ಲಿ ಮಹಾವಿಷ್ಣುವಿನ ರೂಪ ಇದ್ದಹಾಗೆ ಇರುತ್ತದೆ ನನ್ನ ರೂಪ.

"ವಾನರರೆ, ನೀವು ಇನ್ನು ಚಿಂತೆಯನ್ನು ಬಿಡಿ. ಸಂತೋಷದಿಂದ ಇರಿ. ಖಂಡಿತ ಆಗಿಯೂ ನಾನು ಸೀತಾದೇವಿಯನ್ನು ನೋಡಿಬರುತ್ತೇನೆ. ಈ ಕೆಲಸ ತಪ್ಪದೆ ಆಗುತ್ತದೆ ಎಂದು ನನ್ನ ಬುದ್ಧಿಗೆ ದೃಢ ಆಗಿ ತೋಚುತ್ತ ಇದೆ. ನನ್ನ ಮೈಯಲ್ಲಿ ಶುಭಶಕುನಗಳು ಕಾಣುತ್ತ ಇವೆ. ಮನಸಿಗೆ ನಂಬಿಕೆ ಆಗಿದೆ. ನೀವು ಸಂತೋಷದಿಂದ ಇರಿ. ಸಾವಿರ ಯೋಜನ ಆದರೂ ಹಾರಬಲ್ಲೆ ನಾನು ಎನಿಸುತ್ತ ಇದೆ. ವಜ್ರಹಸ್ತ ದೇವೇಂದ್ರನನ್ನೂ ಸ್ವಯಂಭೂ ಬ್ರಹ್ಮನನ್ನೂ ನನ್ನ ಪರಾಕ್ರಮದಿಂದ ಸೋಲಿಸಬಲ್ಲೆ. ಅವರ ಕೈಯಿಂದ ಅಮೃತವನ್ನು ಕಿತ್ತುಕೊಂಡು ತರಬಲ್ಲೆ. ಆ ಲಂಕಾಪಟ್ಟಣವನ್ನೇ ಕಿತ್ತು ತರಬೇಕು ಎನಿಸುತ್ತಿದೆ ನನಗೆ" ಎಂದು ಗರ್ಜಿಸಿದ ಹನುಮಂತ.

ಅಪಾರ ತೇಜೋವಂತ ಹನುಮಂತನನ್ನು ನೋಡಿ ವಾನರರಿಗೆ ಪರಮ ಸಂತೋಷ ಆಯಿತು. ಆಶ್ಚರ್ಯವೂ ಆಯಿತು. ವಾನರರ ಭಯವನ್ನು ಕಳೆಯುವಂತೆ ಹನುಮಂತ ಆಡಿದ ಮಾತು ಎಲ್ಲವನ್ನೂ ಕೇಳಿ ಜಾಂಬವಂತನಿಗೆ ಬಲು ಸಂತೋಷ ಆಯಿತು. "ಮಹಾವೀರ, ನೀನು ವಾಯುದೇವನ ಪುತ್ರ, ಕೇಸರಿಯ ಮಗ. ಸಮಸ್ತ ವಾನರಬಂಧುಗಳ ದುಃಖವನ್ನೂ ನೀಗಿಸಿದೆ ನೀನು. ನಮ್ಮನ್ನು ಎಲ್ಲರನ್ನೂ ಬದುಕಿಸಿದೆ. ವಾನರರು ಎಲ್ಲರೂ ನಿನಗೆ ಮಂಗಳವನ್ನು ಕೋರುತ್ತಾರೆ. ನಿನ್ನ ಕೆಲಸ ಜಯ ಆಗಲಿ ಎಂದು ಮಂಗಳಾಶಾಸನವನ್ನು ಮಾಡುತ್ತಾರೆ. ಅದಕ್ಕಾಗಿ ಇಲ್ಲಿ ಶ್ರೇಯಃಪ್ರಾರ್ಥನೆ ಮಾಡುತ್ತ ಇರುತ್ತಾರೆ. ಮಹರ್ಷಿಗಳ ಪ್ರಸಾದ, ಗುರುಹಿರಿಯರ ಅನುಗ್ರಹ, ಅಲ್ಲದೆ ವಾನರವೃದ್ಧರ ಆಶೀರ್ವಾದ ಎಲ್ಲದರ ಬಲ ಇದೆ ನಿನಗೆ. ತಪ್ಪದೆ ಸಮುದ್ರವನ್ನು ದಾಟುತ್ತೀಯೆ ನೀನು. ಮಹಾನುಭಾವ, ನೀನು ತಿರುಗಿ ಬರುವವರೆಗೂ ನಾವು ಎಲ್ಲರೂ ಒಂದೇ

ಕಾಲಿನಲ್ಲಿ ನಿಂತು ನಿನ್ನನ್ನೇ ಇದಿರುನೋಡುತ್ತೇವೆ. ನಮ್ಮ ಪ್ರಾಣಗಳು ಎಲ್ಲಾ ಈಗ ನಿನ್ನ ಕೈಯಲ್ಲಿ. ಹೋಗಿ ಬಾ" ಎಂದ.

ವಾನರರಿಗೆ ಎಲ್ಲರಿಗೂ ಹನುಮಂತ ಹೇಳಿದ: "ನಾನು ಹಾರುವಾಗ ಈ ಭೂಮಿ ನನ್ನ ವೇಗವನ್ನು ತಡೆಯಲಾರದು. ಈ ಮಹೇಂದ್ರಪರ್ವತದಲ್ಲಿ ಎತ್ತರದ ಬಂಡೆ ಇವೆ. ಇದರ ಶಿಖರಗಳೂ ಉನ್ನತ. ನನ್ನ ವೇಗವನ್ನು ಇದು ತಡೆಯಬಲ್ಲದು. ವಿವಿಧ ವೃಕ್ಷಗಳು ಇವೆ ಇದರಲ್ಲಿ. ಗೈರಿಕಾದಿ ಧಾತುಗಳೂ ಇವೆ. ಈ ಪರ್ವತದ ಮೇಲಕ್ಕೆ ಹೋಗುತ್ತೇನೆ. ನೂರು ಯೋಜನ ದೂರ ಹೋಗಬೇಕು. ಹಾರುವಾಗ ನನ್ನ ಕಾಲಿನ ತುಳಿತವನ್ನು ಈ ಪರ್ವತಶಿಖರಗಳು ತಡೆದಾವು."

ವಾಯುಸಮ ವೇಗಶಾಲಿ ಶತ್ರುಮರ್ದನ ಆಂಜನೇಯ ಮಹೇಂದ್ರ ಪರ್ವತದ ಮೇಲಕ್ಕೆ ಹೋದ. ಅಲ್ಲಿ ವಿವಿಧ ವೃಕ್ಷನಿಚಯ. ವಿಶಾಲ ಆದ ಹಸಿರು ಹುಲ್ಲಿನ ಮೈದಾನಗಳು. ಅದರಲ್ಲಿ ಮನಬಂದಂತೆ ತಿರುಗಾಡುವ ಹುಲ್ಲೆಗಳು. ಗಿಡಬಳ್ಳಿ ಎಲ್ಲಾ ಹೂ ಹಣ್ಣು ಬಿಟ್ಟು ತುಂಬಿ ಇವೆ. ಹುಲಿ ಸಿಂಹಗಳು ನಿರ್ಭಯದಿಂದ ತಿರುಗುತ್ತ ಇವೆ. ಲೆಕ್ಕ ಇಲ್ಲದಷ್ಟು ಮದ್ದಾನೆ. ಹಣ್ಣುಹಂಪಲನ್ನು ಸವಿದು ಮದ ಏರಿದ ಹಕ್ಕಿಗಳ ಧ್ವನಿ ಸುತ್ತಲೂ ಕೇಳುತ್ತದೆ. ತಿಳಿನೀರಿನ ಝರಿಗಳು ಹರಿದುಬರುತ್ತ ಇವೆ. ಮಹೇಂದ್ರಸಮಾನ ವೀರ್ಯದ ಹನುಮಂತ ಆ ಮಹೇಂದ್ರಪರ್ವತವನ್ನು ಆಡುತ್ತಆಡುತ್ತ ಅಡರಿಹೋದ.

ಹನುಮಂತನ ಕಾಲಿನ ತುಳಿತಕ್ಕೆ ಅಷ್ಟು ದೊಡ್ಡ ಆ ಪರ್ವತವೂ ನಲುಗಿ ಹೋಯಿತು. ಸಿಂಹದ ಕಾಲಿನ ಏಟಿಗೆ ಮದಗಜ ಜಗ್ಗುವಂತೆ ಜಗ್ಗಿ ಹೋಯಿತು. ಆ ಕಾಲ್ತುಳಿತಕ್ಕೆ ದೊಡ್ಡ ದೊಡ್ಡ ಬಂಡೆಗಳು ಎಲ್ಲಾ ಅದಿರಿ ಸಡಲಿದವು. ಬೆಟ್ಟದ ಒಳಗಿನ ಜಲ ಜಿನುಗಿ ಗಿರಿನದಿಗಳು ಆಗಿ ಹರಿಯಿತು. ಜಿಂಕೆ ಆನೆ ಬೆದರಿ ಓಡಿಹೋದವು. ಹೆಮ್ಮರಗಳು ಕೂಡ ನಡುಗಿದವು. ಮಧುಪಾನಮತ್ತರು ಆಗಿ ವಿಹರಿಸುತ್ತ ಇದ್ದ ನಾಗದಂಪತಿಗಳೂ ಗಂಧರ್ವ ಮಿಥುನಗಳೂ ವಿದ್ಯಾಧರಸಮೂಹಗಳೂ ಬೆದರಿ ಆಕಾಶಕ್ಕೆ ಹಾರಿಹೋದವು. ಹಕ್ಕಿಗಳು ಗುಂಪುಗುಂಪು ಆಗಿ ಹಾರಿಹೋದವು. ಹಾವುಗಳು ಬಿಲದ ಒಳಗಡೆಯೇ ಅವಿತುಕೊಂಡವು. ಇಡೀ ಪರ್ವತವೇ ಆಂಜನೇಯನ ಕಾಲ್ತುಳಿತಕ್ಕೆ ಸಡಲಿಹೋಯಿತು. ಆ ಬಿರುಕುಗಳಿಂದ ಮಹಾಸರ್ಪಗಳು ಅರ್ಧಮರ್ಧ

ಹೊರಗೆ ಬಂದು ಬುಸುಗುಟ್ಟುತ್ತ ಹೆಡೆ ಎತ್ತಿ ನಿಂತು ಇದ್ದರೆ ಆ ಪರ್ವತಶಿಖರದ ಮೇಲೆ ಬಾವುಟಗಳನ್ನು ಕಟ್ಟಿದಂತೆ ಇತ್ತು.

ಅಲ್ಲಿ ಇದ್ದ ಮಹರ್ಷಿಗಳು ಎಲ್ಲರಿಗೂ ಭಯ ಆಯಿತು. ತಮ್ಮ ಆಶ್ರಮಗಳನ್ನು ತೊರೆದು ಹೊರಟುಹೋದರು. ಜೊತೆಯಲ್ಲಿ ಬಂದವರು ಎಲ್ಲರೂ ಮಹಾರಣ್ಯದಲ್ಲಿ ಬಿಟ್ಟುಹೋದ ಏಕಾಕಿ ಪಯಣಿಗನ ಹಾಗೆ ಇತ್ತು ಮಹೇಂದ್ರ ಪರ್ವತ. ಮಹಾವೇಗಶಾಲಿ ಪರಂತಪ ಹನುಮಂತ ಸಮುದ್ರಲಂಘನದಲ್ಲೇ ನೆಟ್ಟಮನಸಿನಿಂದ ಆಗಲೇ ಮನಸಿನಲ್ಲಿ ಲಂಕೆಗೆ ಹೋದ.

ಐದನೆ ಖಂಡ

ಸೀತಾ ಸಂದರ್ಶನ

ರಾವಣ ಸೀತೆಯನ್ನು ಕದ್ದು ಒಯ್ದು ಇದಾನೆ. ಆಕೆಯನ್ನು ಅವನು ಬಚ್ಚಿಟ್ಟಿರುವ ಸ್ಥಳವನ್ನು ಹುಡುಕಬೇಕು. ಅದಕ್ಕೆ ಸಮುದ್ರವನ್ನು ದಾಟಬೇಕು. ಸಮುದ್ರವನ್ನು ದಾಟಲು ನಿನಗೆ ಸಾಮರ್ಥ್ಯ ಇದೆ ಎಂದು ಹೇಳಿ ಜಾಂಬವಂತ ಹುರಿದುಂಬಿಸಿದ್ದ ಶತ್ರುಮರ್ದನ ಹನುಮಂತನನ್ನು. ಈ ಕೆಲಸ ಇತರರಿಗೆ ಸಾಧ್ಯ ಅಲ್ಲ. ಹನುಮಂತ ತಾನು ಒಬ್ಬನೇ ಈ ಕೆಲಸವನ್ನು ಮಾಡಲು ನಿಶ್ಚಯಿಸಿದ.

ಮಹೇಂದ್ರ ಪರ್ವತದ ಮೇಲೆ ನಿಂತು ಎದೆ ಚಾಚಿ ತಲೆ ಎತ್ತಿ ಮಹಾ ವೃಷಭದಂತೆ ಕಂಡ. ಸುತ್ತಲೂ ದಿಟ್ಟಿಸಿ ನೋಡಿದ. ಮಹಾಬಲಾಢ್ಯ ಧೀರ ಆದ ಹನುಮಂತ ಸಾಗರದ ನೀರಿನಂತೆ, ನಿರ್ಮಲ ವೈಡೂರ್ಯಮಣಿಯಂತೆ ಹಸಿರು ಆದ ಹುಲ್ಲಿನ ನೆಲದಲ್ಲಿ ತಿರುಗಾಡಿದ. ಅಲ್ಲಿ ಇದ್ದ ಹಕ್ಕಿಗಳನ್ನು ಹೆದರಿಸಿ ಓಡಿಸಿದ. ಎತ್ತರ ಆಗಿ ಬೆಳೆದು ಇದ್ದ ಅಡ್ಡಮರಗಳನ್ನು ಎದೆಯಿಂದ ನೂಕಿ ಉರುಳಿಸಿದ. ಮದಿಸಿದ ಸಿಂಹದಂತೆ ಇದಿರಿಗೆ ಬಂದ ಮೃಗಗಳನ್ನು ಕೊಂದ.

ನೀಲಿ ಕೆಂಪು ಹಳದಿ ಹಸಿರು ಬಿಳುಪು ಕಪ್ಪು ಮೊದಲು ಆದ ನಾನಾ ವರ್ಣಗಳಿಂದ ಸಿಂಗರಿಸಿದ ಹಾಗೆ ಇದೆ ಆ ಮಹೇಂದ್ರಪರ್ವತ. ಬಗೆಬಗೆಯ ಧಾತುಗಳು ಇವೆ. ಯಕ್ಷರು ಕಿನ್ನರರು ಗಂಧರ್ವರು ಕಾಮರೂಪಿಗಳು. ಅವರೂ ದೇವತೆಗಳಿಗೆ ಸಮಾನರಾದ ಪನ್ನಗರೂ ಸರ್ಪಾಲಂಕಾರಭೂಷಿತರು ಆಗಿ ಅಲ್ಲಿ ವಿಹರಿಸುತ್ತಾರೆ. ಸ್ಥಳ ಬಲು ಸೊಂಪು. ಕಾಡಾನೆ ಮದ್ದಾನೆಗಳಿಗೆ ಮನೆ ಅದು. ಮಹೇಂದ್ರಪರ್ವತದ ಮೇಲೆ ಹನುಮಂತ ನಿಂತು ಇದ್ದರೆ ಅವನೂ ಒಂದು ಮಹಾಗಜದಂತೆ ಕಾಣುತ್ತ ಇದ್ದ.

ಸಮುದ್ರವನ್ನು ಹಾರಿಹೋಗಬೇಕು. ಸೂರ್ಯನಿಗೆ ಇಂದ್ರನಿಗೆ ವಾಯು ದೇವನಿಗೆ ಬ್ರಹ್ಮದೇವನಿಗೆ ಪಂಚಭೂತಗಳಿಗೆ ಕೈಮುಗಿದ ಹನುಮಂತ. ಮೂಡಲ ಕಡೆ ತಿರುಗಿದ. ತನ್ನ ತಂದೆ ವಾಯುದೇವನಿಗೆ ಮತ್ತೆ ಕೈಮುಗಿದ. ದಕ್ಷಿಣದ ಕಡೆಗೆ ಹಾರಬೇಕು. ನೂರು ಯೋಜನ ಇದೆ ಸಮುದ್ರ. ಅದಕ್ಕೆ ತಕ್ಕಹಾಗೆ ತನ್ನ ಮೈಯನ್ನು ಬೆಳೆಸಿದ. ಪರ್ವಕಾಲದಲ್ಲಿ ಸಮುದ್ರ ಉಬ್ಬುವಂತೆ

ರಾಮಾಭ್ಯುದಯದ ಸಲುವಾಗಿ ಹನುಮಂತನ ಮೈ ಬೆಳೆಯುತ್ತ ಇತ್ತು. ಕಪಿ ವೀರರು ಎಲ್ಲರೂ ನೋಡುತ್ತ ಇದ್ದರು.

ಅತಿ ಅದ್ಭುತ ಆಗಿ ಮೈಯನ್ನು ಬೆಳಸಿಕೊಂಡ ಹನುಮಂತ ಮೊದಲು ಮಹೇಂದ್ರಪರ್ವತವನ್ನೇ ತನ್ನ ತೋಳುಗಳಿಂದಲೂ ಕಾಲುಗಳಿಂದಲೂ ಔಕಿದ. ಅಚಲ ಆದ ಪರ್ವತ ಒಂದು ಗಳಿಗೆ ಅಲುಗಾಡಿಹೋಯಿತು. ಬೆಟ್ಟದ ಮೇಲಿನ ಗಿಡಗಳಲ್ಲಿ ಇದ್ದ ಹೂಗಳು ಎಲ್ಲಾ ಕೆಳಕ್ಕೆ ಉದುರಿದವು. ಉದುರಿ ಬಿದ್ದ ಹೂಗಳು ಪರ್ವತ ಎಲ್ಲವನ್ನೂ ಮುಚ್ಚಿ, ಹೂ ಬೆಟ್ಟ ಇದು ಎನಿಸುವಂತೆ ಮಾಡಿದವು. ಮಹಾವೀರ್ಯವಂತ ಹನುಮಂತ. ಅವನ ತುಳಿತಕ್ಕೆ ಮಹೇಂದ್ರ ಪರ್ವತದಿಂದ ನೀರಿನ ಝುರಿ ಹೊರಟವು, ಮದಗಜದಿಂದ ಮದಜಲ ಸುರಿಯು ವಂತೆ. ಆ ಅಲುಗಾಟದಿಂದ ಪರ್ವತ ಬಿರುಕುಬಿಟ್ಟಿತು. ಚಿನ್ನ ಬೆಳ್ಳಿ ಕಬ್ಬಿಣದ ಧಾತುಗಳು ಕಾಣಿಸಿಕೊಂಡು ಬೆಳಗಿದವು. ಬೆಂಕಿ ಧಗಧಗನೆ ಉರಿಯುವಾಗ ಅದರ ನಡುವಿನ ಉರಿಯಿಂದ ಹೊಗೆ ಹೊರಡುವಂತೆ ಮಹೇಂದ್ರ ಪರ್ವತದ ಶಿಖರದಿಂದ ಮಣಿಶಿಲೆಯ ಕಪ್ಪು ಬಂಡೆಗಳು ಹೊರಬಂದವು.

ಬಲಾಢ್ಯ ಹನುಮಂತ ಬೆಟ್ಟವನ್ನು ಅಲುಗಾಡಿಸಿದಾಗ ಅದರ ಗುಹೆಗಳಲ್ಲಿ ಇದ್ದ ಪ್ರಾಣಿಗಳು ಎಲ್ಲವೂ ಗಟ್ಟಿ ಆಗಿ ಭಯಂಕರ ಆಗಿ ಕೂಗಿಕೊಂಡವು. ಆ ಧ್ವನಿ ಹತ್ತಿರದ ಕಾಡುಗಳಲ್ಲಿ ಮಾರ್ದೊಳಗಿ ಸಮಸ್ತ ಭೂಮಂಡಲವನ್ನೂ ದಿಗ್ದಿಗಂತಗಳವರೆಗೂ ಹರಡಿತು. ಆ ಬೆಟ್ಟದ ಮೇಲೆ ಇದ್ದ ಮಹಾವಿಷಸರ್ಪಗಳು ತಮ್ಮ ಹೆಡೆ ಬಿಚ್ಚಿ ಕ್ರೂರ ವಿಷವನ್ನು ಕಾರುತ್ತ ತಮ್ಮ ಕೋರೆಹಲ್ಲುಗಳಿಂದ ಹತ್ತಿರದ ಬಂಡೆಗಲ್ಲುಗಳನ್ನು ಕೋಪದಿಂದ ಕಡಿದವು. ಆ ಕಡಿತಕ್ಕೆ ಆ ಬಂಡೆ ಗಲ್ಲುಗಳು ವಿಷದ ಬೆಂಕಿಯಿಂದ ಸುಟ್ಟು ಉರಿದು ಸಾವಿರಾರು ತುಂಡು ಆಗಿ ಸಿಡಿದುಬಿದ್ದವು. ವಿಷದ ಬೆಂಕಿಯನ್ನು ಪರಿಹರಿಸಬಲ್ಲ ಮೂಲಿಕೆಗಳು ಎಷ್ಟೋ ಆ ಬೆಟ್ಟದಲ್ಲಿ ಬೆಳೆದು ಇದ್ದವು. ಆದರೆ ಈ ವಿಷದ ಬೆಂಕಿಯನ್ನು ಅಡಗಿಸಲು ಅವಕ್ಕೆ ಸಾಧ್ಯ ಆಗಲಿಲ್ಲ.

ಆ ಬೆಟ್ಟದಲ್ಲಿ ಅನೇಕರು ತಪಸ್ವಿಗಳು ಇದ್ದರು. ಪಂಚಭೂತಗಳ ಸಮೇತ ಬೆಟ್ಟ ಒಡೆದುಹೋದೀತು ಎಂದು ಬೆದರಿದರು. ಮೈಗೆ ರಕ್ತಚಂದನ ಬಳಿದು ಕೊಂಡು ಕತ್ತಿನಲ್ಲಿ ಕೆಂಪು ಹೂಮಾಲೆಗಳನ್ನು ಧರಿಸಿ ಮದ್ಯಪಾನದ ಮದದಿಂದ ಕೆಂಪು ಏರಿದ ಕಣ್ಣುಗಳಿಂದ ಸಂತೋಷದಿಂದ ತಮ್ಮ ನಲ್ಲೆಯರ ಜತೆಯಲ್ಲಿ

ತಿರುಗಾಡುತ್ತ ಇದ್ದರು ಅಲ್ಲಿನ ವಿದ್ಯಾಧರರು. ಬೆಟ್ಟ ಅದುರುವುದನ್ನು ಕಂಡು ಎಲ್ಲರಿಗೂ ಭಯ ಆಯಿತು. ಕೈಯಲ್ಲಿ ಇದ್ದ ಚಿನ್ನದ ಪಾನಪಾತ್ರೆಗಳನ್ನೂ ಅಮೂಲ್ಯ ಭೋಜನಪಾತ್ರೆಗಳನ್ನೂ ಬಂಗಾರದ ತಂಬಿಗೆಗಳನ್ನೂ ಅಲ್ಲಿಯೇ ಬಿಟ್ಟರು. ರುಚಿರುಚಿ ಆದ ಭಕ್ಷ್ಯಲೇಹ್ಯಗಳನ್ನೂ ಬಗೆಬಗೆಯ ಮಾಂಸವನ್ನೂ ಸಂಗ್ರಹಿಸಿ ಇಟ್ಟುಕೊಂಡು ಇದ್ದರು. ಅವನ್ನು ಎಲ್ಲಾ ಅಲ್ಲಿಯೇ ಬಿಟ್ಟರು. ಎತ್ತಿನ ಚರ್ಮದಿಂದ ಮಾಡಿದ ಗುರಾಣಿಗಳು ಚಿನ್ನದ ಹಿಡಿಯ ಕತ್ತಿಗಳು ಇದ್ದವು. ಅವನ್ನೂ ಅಲ್ಲೇ ಬಿಟ್ಟು ಆಕಾಶಕ್ಕೆ ಹಾರಿದರು. ಸೊಗಸು ಆದ ಕೊರಳ ಹಾರ ಕೈಬಳೆ ಕಾಲುಬಳೆ ಕಾಲಂದುಗೆಗಳನ್ನು ಧರಿಸಿ ಸಿಂಗಾರ ಆಗಿ ನಲಿಯುತ್ತ ಇದ್ದ ದೇವತಾಸ್ತ್ರೀಯರು ಎಲ್ಲರೂ ಬೆಟ್ಟ ನಡುಗಿದುದನ್ನು ಕಂಡು ಬೆದರಿ ತಮ್ಮ ತಮ್ಮ ನಲ್ಲರ ಜೊತೆಯಲ್ಲಿ ಮುಗಿಲಿಗೆ ಹಾರಿದರು. ಹರ್ಷದಿಂದ ಅಲ್ಲಿ ನಿಂತು ಬೆಟ್ಟ ಅಲುಗಾಡುವುದನ್ನು ಆಶ್ಚರ್ಯದಿಂದ ನೋಡುತ್ತ ಇದ್ದರು.

ಮಹೇಂದ್ರಪರ್ವತದ ಆತ್ಮಧ್ಯಾನಪರಾಯಣ ಮಹರ್ಷಿಗಳು ಅಂತರಿಕ್ಷದಲ್ಲಿ ಇದ್ದ ವಿದ್ಯಾಧರರಿಗೆ ಚಾರಣರಿಗೆ ಹೇಳಿದರು: "ಬೆಟ್ಟದ ಹಾಗೆ ಕಾಣುವ ಈತ ಆಂಜನೇಯ, ವಾಯುದೇವನ ಮಗ, ಮೊಸಳೆಗಳ ಮನೆ ಆದ ಈ ಸಮುದ್ರವನ್ನು ಬಲು ವೇಗದಿಂದ ದಾಟಿಹೋಗಬೇಕು ಎಂದು ಸಂಕಲ್ಪಿಸಿ ಇದಾನೆ. ರಾಮಾಭ್ಯುದಯಕ್ಕೆ ಎಂದು ವಾನರರ ಹಿತಕ್ಕೆ ಎಂದು ಈ ಸಾಹಸ ಕಾರ್ಯವನ್ನು ಕೈಗೊಂಡು ಇದಾನೆ. ಹನುಮಂತ ಅಲ್ಲದೆ ಬೇರೆ ಯಾರೂ ಈ ಸಾಹಸವನ್ನು ಮಾಡಲಾರರು. ಸಮುದ್ರವನ್ನು ದಾಟಿ ದಕ್ಷಿಣ ತೀರಕ್ಕೆ ಹೋಗಲು ಬಯಸಿ ನಿಂತು ಇದಾನೆ." ವಿದ್ಯಾಧರರು ಈ ಮಾತನ್ನು ಕೇಳಿ ಬೆಟ್ಟದ ಮೇಲೆ ನಿಂತು ಇದ್ದ ಪರ್ವತಾಕಾರದ ಹನುಮಂತನನ್ನು ಎವೆ ಇಕ್ಕದೆ ನೋಡುತ್ತ ಇದ್ದರು.

ಆಗ ಹನುಮಂತ ಮೈ ಮುರಿದ. ಮಹಾಮೇಘದಂತೆ ಸಿಂಹನಾದ ಮಾಡಿದ. ಅವನ ಮೈಕೂದಲು ನಿಗರಿನಿಂತಿತು. ಕೂದಲು ಬೆಳೆದು ದುಂಡಗೆ ಸುತ್ತಿಕೊಂಡು ಇದ್ದ ತನ್ನ ಬಾಲವನ್ನು ಬಿಚ್ಚಿ ಒದರಿದ. ಪಕ್ಷಿರಾಜ ಗರುಡ ಹಾವನ್ನು ಕೊಡಹುವಂತೆ ಕೊಡವಿದ. ಗರುಡ ಹಾವನ್ನು ಎತ್ತಿಕೊಂಡು ಹೋಗುತ್ತ ಇದಾನೆ ಏನೋ ಆಕಾಶದಲ್ಲಿ ಎಂಬಹಾಗೆ ಕಾಣಿಸಿತು ಹನುಮಂತನ ಬಾಲ.

ಇನ್ನು ಸಮುದ್ರವನ್ನು ಹಾರಬೇಕು. ದೊಡ್ಡ ಕಬ್ಬಿಣದ ಅಗಳಿಗಳ ಹಾಗೆ ಇದ್ದ ತನ್ನ ಮಹಾಬಾಹುಗಳು ಎರಡನ್ನೂ ಮುಂದಕ್ಕೆ ಚಾಚಿದ ಹನುಮಂತ. ಉಸಿರು ಬಿಗಿಹಿಡಿದ. ಸೊಂಟವನ್ನು ಸಣ್ಣದು ಆಗಿಸಿದ. ಕಾಲು ಮುದುರಿ ಕೊಂಡ. ಹೆಗಲನ್ನೂ ಕತ್ತನ್ನೂ ಬಾಗಿಸಿ ಕುಗ್ಗಿಸಿದ. ತನ್ನ ಒಳಗೆ ಇದ್ದ ಸರ್ವಶಕ್ತಿಯನ್ನೂ ಸಾಮರ್ಥ್ಯವನ್ನೂ ವೀರ್ಯತೇಜಸ್ಸುಗಳನ್ನೂ ತಕ್ಕಂತೆ ಬೆಳೆಸಿ ಕೊಂಡ. ಮಹೋತ್ಸಾಹದಿಂದ ಕಣ್ಣು ಕಾಣದಷ್ಟು ದೂರವೂ ದಾರಿಯನ್ನು ದಿಟ್ಟಿಸಿ ನೋಡಿದ. ಉಸಿರನ್ನು ಬಿಗಿಹಿಡಿದು ಕಿವಿಗಳನ್ನು ಸ್ತಂಭಿಸಿ ಕಾಲನ್ನು ಗಟ್ಟಿ ಆಗಿ ನೆಲದ ಮೇಲೆ ಊರಿ ನಿಂತ.

ಅಂತರಿಕ್ಷಕ್ಕೆ ಹಾರಿದ ಹನುಮಂತ. ಹಾರುವ ಮೊದಲು ಸುತ್ತಲೂ ಇದ್ದ ವಾನರರಿಗೆ ಹೇಳಿದ : " ರಾಮಬಾಣಕ್ಕೆ ವಾಯುವೇಗ. ನಾನೂ ವಾಯು ವೇಗದಿಂದ ರಾವಣಾಸುರನ ಲಂಕಾಪಟ್ಟಣಕ್ಕೆ ಹೋಗುತ್ತೇನೆ. ಲಂಕೆಯಲ್ಲಿ ಸೀತಾದೇವಿ ಕಾಣಬಾರದೆ ಇದ್ದರೆ ಅಲ್ಲಿಂದ ದೇವಲೋಕಕ್ಕೆ ಅಷ್ಟೇ ವೇಗ ದಿಂದ ಹಾರಿಹೋಗುತ್ತೇನೆ. ಅಲ್ಲಿಯೂ ಸೀತಾದೇವಿ ಕಾಣದೆ ಇದ್ದರೆ ಮತ್ತೆ ಲಂಕಾಪಟ್ಟಣಕ್ಕೆ ಹಿಂದಿರುಗುತ್ತೇನೆ. ರಾಕ್ಷಸರಾಜ ರಾವಣನನ್ನು ಹಿಂಗಟ್ಟು ಮುಂಗಟ್ಟು ಕಟ್ಟಿ ಇಲ್ಲಿಗೆ ಎಳೆದು ತರುತ್ತೇನೆ. ನೀವು ಚಿಂತಿಸಬೇಡಿ. ಹೇಗೆ ಆದರೂ ಮಾಡಿ ಈ ಕಾರ್ಯವನ್ನು ಸಾಧಿಸುತ್ತೇನೆ. ಸೀತಾದೇವಿಯನ್ನು ಕರೆದು ಕೊಂಡೇ ಬರುತ್ತೇನೆ. ಖಂಡಿತ. ಇಲ್ಲದೆ ಹೋದರೆ ರಾವಣಾಸುರನ ಸಮೇತ ಲಂಕಾಪಟ್ಟಣವನ್ನೇ ಕಿತ್ತು ತರುತ್ತೇನೆ."

ವಾನರರಿಗೆ ಹೀಗೆ ಹೇಳಿ ಸ್ವಲ್ಪವೂ ಅಳುಕದೆ ಅಂಜದೆ ಆ ಮಹಾವೀರ ಹನುಮಂತ ತಟಕ್ಕನೆ ಆಕಾಶಕ್ಕೆ ಹಾರಿದ. ಗರುಡನ ಹಾಗೆ ತನಗೂ ರೆಕ್ಕೆ ಇವೆ ಎಂದುಕೊಂಡ.

ಹನುಮಂತ ಹಾರಿದ ವೇಗದಿಂದ ಆ ಬೆಟ್ಟದ ಮೇಲಿದ್ದ ಗಿಡಮರಗಳು ಎಲ್ಲವೂ ಬುಡಸಹಿತ ಕಿತ್ತುಬಂದವು. ಗಿಡಗಳೂ ಕೊಂಬೆರೆಂಬೆಗಳೂ ಮೇಲಕ್ಕೆ ಎಗರಿ ಗಾಳಿಯಲ್ಲಿ ಅವನ ಹಿಂದೆಯೆ ಬಂದವು ದೂರ ದೇಶದ ಪ್ರಯಾಣಕ್ಕೆ ಹೊರಟವನನ್ನು ಬೀಳುಕೊಟ್ಟು ಕಳಿಸಲು ಬಂದ ನಂಟರು ಇಷ್ಟರ ಹಾಗೆ. ಮರದ ಕೊಂಬೆಗಳಲ್ಲಿ ಇದ್ದ ಹೂಗಳೂ ಕಾಡುಕೊಕ್ಕರೆಗಳೂ ಒಂದು ಗಳಿಗೆ

ಹಿಂದೆ ಬಂದವು. ದೊರೆಯನ್ನು ಹಿಂಬಾಲಿಸುವ ದಂಡಿನ ಹಾಗೆ ಹನುಮಂತನ ಹಿಂದೆ ಬಂದವು. ತುಂಬಾ ಹೂ ಬಿಟ್ಟ ಅನೇಕ ಮರಗಳು ಗಾಳಿಯಲ್ಲಿ ಹಾರಿ ಬರುತ್ತ ಇದ್ದರೆ ಅವುಗಳ ನಡುವೆ ಹನುಮಂತನ ಪರ್ವತಾಕಾರ ಅತ್ಯದ್ಭುತ ಆಗಿ ಇತ್ತು.

ದೇವೇಂದ್ರನಿಗೆ ಅಂಜಿ ಬೆಟ್ಟಗುಡ್ಡಗಳು ಸಮುದ್ರದಲ್ಲಿ ಬಿದ್ದು ಮುಳುಗಿ ಹೋದವಂತೆ ಹಿಂದೆ. ಹಾಗೆಯೇ ಭಾರ ಆದ ಮರಗಳು ನಟ್ಟನಡುವೆ ತಟ್ಟನೆ ಬಿದ್ದು ಮುಳುಗಿಕೊಂಡವು. ಮೇಘದಂತೆ ಮಹಾಕಾಯ ಹನುಮಂತ. ಅವನ ಮೈತುಂಬಾ ಬಗೆಬಗೆಯ ಬಣ್ಣದ ಹೂಗಳು ಕೆಂದಳಿರು ಮೊಗ್ಗುಗಳೂ ಕವಿದು ಕೊಂಡವು. ರಾತ್ರಿಯ ಹೊತ್ತು ಮಿಂಚುಹುಳಗಳಿಂದ ಹೊಳೆಯುವ ಬೆಟ್ಟದ ಹಾಗೆ ಇತ್ತು ಅವನ ಮೈ. ಹನುಮಂತನ ವೇಗದ ಗಾಳಿಗೆ ಹಾರಿಬಂದ ಮರಗಿಡಗಳಲ್ಲಿ ಕೆಲವು ತಮ್ಮ ಹೂಗಳನ್ನು ಉದುರಿಸಿ ನೀರಿನಲ್ಲಿ ಬಿದ್ದವು. ಊರಿಗೆ ಹೋಗುವ ಬಂಧುವನ್ನು ಹಳ್ಳ ಅಡ್ಡಿ ಬರುವವರೆಗೂ ದಾರಿ ಕಳಿಸಿ ಹಿಂದಿರುಗುವ ನಂಟರ ಹಾಗೆ ಸಮುದ್ರದಲ್ಲಿ ಬಿದ್ದು ಕಾಣದೆ ಹೋದವು. ಹಗುರ ಆದ ಕೆಲವು ಗಿಡ ಆ ಕಪಿಕುಂಜರನ ಹಿಂದೆ ಇನ್ನೂ ಸ್ವಲ್ಪ ದೂರ ಹೋದವು. ಗಿಡಗಳಿಗಿಂತ ಹೂಗಳು ಹಗುರ. ಬಣ್ಣದ ಹೂಗಳು ಇನ್ನೂ ಸ್ವಲ್ಪ ದೂರ ಅವನ ಹಿಂದೆಯೇ ಗಾಳಿಯಲ್ಲಿ ತೇಲಿಹೋದವು. ಆ ಹೂಗಳು ಎಲ್ಲಾ ಸಮುದ್ರದಲ್ಲಿ ಬಿದ್ದಾಗ ನಕ್ಷತ್ರಸಮೂಹದಿಂದ ಮೆರೆಯುವ ಆಕಾಶದ ಹಾಗೆ ಇತ್ತು ಸಮುದ್ರ.

ಕೆಲವು ಹೂ ಕೆಳಕ್ಕೆ ಬೀಳಲಿಲ್ಲ. ಹನುಮಂತನ ಮೈಮೇಲೇ ಕುಳಿತವು. ಆ ಹೂಗಳ ಬಣ್ಣದಿಂದ ಮುಗಿಲಿನಲ್ಲಿ ಮಿಂಚಿನ ಗೊಂಚಲಿನಿಂದ ಕೂಡಿ ಒಂದು ಮಹಾಮೇಘ ಹೋಗುತ್ತಿದೆ ಎಂಬ ಹಾಗೆ ಇತ್ತು. ಹಾರಿ ಹೋಗುವಾಗ ಮುಂದಕ್ಕೆ ಚಾಚಿ ಇದ್ದ ಹನುಮಂತನ ಎರಡು ನೀಳ ತೋಳೂ ಪರ್ವತಾಗ್ರ ದಲ್ಲಿ ತಲೆ ಎತ್ತಿ ಆಡುವ ಐದು ಹೆಡೆಯ ಹಾವುಗಳ ಜೋಡಿಯಂತೆ ಕಾಣುತ್ತ ಇದ್ದವು. ಆಕಾಶದಲ್ಲಿ ಹಾರಿಹೋಗುತ್ತ ಇದ್ದ ಹನುಮಂತ ಕೆಳಗಡೆ ನೀರಿನ ಹತ್ತಿರ ಇದ್ದಾಗ ಸಮುದ್ರದ ನೀರನ್ನು ಹೀರಿಬಿಡುವಂತೆ ಕಾಣುತ್ತಿತ್ತು. ಮೇಲೆ ಹಾರಿದಾಗ ಮುಗಿಲನ್ನೇ ನುಂಗುವಂತೆ ಕಾಣುತ್ತ ಇತ್ತು. ಹನುಮಂತನ ಕಣ್ಣು ಗುಂಡು, ಪಿಂಗಳ ವರ್ಣ. ಸೂರ್ಯಚಂದ್ರರು ಇಬ್ಬರೂ ಏಕಕಾಲದಲ್ಲಿ

ಮೂಡಿಬಂದ ಹಾಗೆ ಇದ್ದವು. ಮುಗಿಲಿನಲ್ಲಿ ತೇಲುತ್ತ ಇದ್ದ ಅವನ ಕಣ್ಣಿನ ಕಾಂತಿ ಪರ್ವತದ ಎರಡೂ ಕಡೆ ಉರಿಸಿದ ಬೆಂಕಿಯ ಹಾಗೆ ಇತ್ತು. ಕೆಂಪು ಮೂಗು, ಕೆಂಪು ಏರಿದ ಮುಖ, ಸಂಜೆಗೆಂಪು ಕವಿದ ಸೂರ್ಯಮಂಡಲದಂತೆ ಕಾಣಿಸಿತು.

ಹನುಮಂತ ಮೇಲಕ್ಕೆ ಹಾರಿದಾಗ ಬಾಲವನ್ನು ಮೇಲಕ್ಕೆ ಎತ್ತಿದ. ಮೇಲೆ ಎತ್ತಿ ಹಿಡಿದ ಇಂದ್ರಧ್ವಜದಂತೆ ಇತ್ತು ಅದು. ಆ ಬಾಲವನ್ನು ಆಗಾಗ ಗುಂಡಗೆ ತನ್ನ ಸುತ್ತಲೂ ಸುತ್ತಿಕೊಳ್ಳುತ್ತ ಇದ್ದ ಹನುಮಂತ. ಸುತ್ತಲೂ ಪರಿವೇಷ, ಮಧ್ಯೆ ಸೂರ್ಯ — ಹೀಗೆ ಹೊಳೆದ ಹನುಮಂತ ಆಗ. ಬಾಲದ ಬುಡದಲ್ಲಿ ಇದ್ದ ಕೆಂಬಣ್ಣ ಬೆಟ್ಟದಿಂದ ಅಗೆದು ತೆಗೆದ ಗೈರಿಕ ಧಾತುವಿನ ಹಾಗೆ ಕಂಡಿತು. ಆ ವಾನರಸಿಂಹ ಹನುಮಂತ ಮಹಾವೇಗದಿಂದ ಹಾರಿಹೋಗುತ್ತ ಇದ್ದರೆ ಅವನ ಕಂಕುಳ ಸಂದಿಯಲ್ಲಿ ನುಗ್ಗಿಬಂದ ಗಾಳಿ ಮೇಘದಂತೆ ಮೊಳಗಿತು. ಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿಗೆ ಹಾರುತ್ತ ಇದ್ದ ಹನುಮಂತ, ಮುಗಿಲಿನಲ್ಲಿ ಉತ್ತರದಿಂದ ದಕ್ಷಿಣ ದಿಕ್ಕಿಗೆ ಪಯಣ ಮಾಡುವ ಉಲ್ಕೆಯಂತೆ (ಬಾಲಚುಕ್ಕೆಯಂತೆ) ಇದ್ದ.

ಸೂರ್ಯನ ಹಾಗೆ ಆಕಾಶದಲ್ಲಿ ಪಯಣ ಮಾಡುವ ಮಹಾಕಾಯ ಹನುಮಂತ ಬಾಲವನ್ನು ಆಡಿಸುತ್ತ ಇದ್ದರೆ ನಡುಕಟ್ಟನ್ನು ಕಟ್ಟಿದ ಆನೆಯ ಹಾಗೆ ಕಂಡ. ಮೇಲೆ ಹಾರುವ ಅವನ ದೇಹ, ಕೆಳಗೆ ನೀರಿನಲ್ಲಿ ಬಿದ್ದ ಅವನ ನೆರಳು ಎರಡೂ ಒಂದು ಆಗಿ ಮುಂದೆ ಸಾಗುತ್ತ ಗಾಳಿಯಿಂದ ನಡೆಯುವ ಹಡಗಿನ ಹಾಗೆ ಕಾಣಿಸಿದ. ಹನುಮಂತ ಯಾವ ಕಡೆಗೆ ತಿರುಗಿದರೆ ಆ ಕಡೆ ಅವನ ತೊಡೆಗಳ ವೇಗಕ್ಕೆ ಸಮುದ್ರದ ನೀರು ಉಕ್ಕಿ ತುಳುಕಿ ಸುಳಿ ತಿರುಗಿ ನೊರೆ ಕಾರಿ ಪ್ರವಾಹ ಮೊರೆದು ಹುಚ್ಚು ಹಿಡಿದಂತೆ ಕಾಣುತ್ತ ಇತ್ತು. ಅವನ ವೇಗಕ್ಕೆ ಸಮುದ್ರದಲ್ಲಿ ಅಲೆಗಳು ಎದ್ದವು ದೊಡ್ಡ ಗುಡ್ಡದ ಹಾಗೆ. ಆ ಅಲೆಗಳು ಅವನ ಎದೆಗೆ ತಗಲಿ ಅಡಗಿಹೋದವು. ಹನುಮಂತನ ವೇಗಕ್ಕೆ ಎದ್ದ ಗಾಳಿಯೂ ಮೇಘಗಳ ಗಾಳಿಯೂ ಒಂದು ಆಗಿ ಕಲೆತವು. ಆ ಭಯಂಕರ ಧ್ವನಿಗೆ ಸಮುದ್ರ ನಡುಗಿಹೋಯಿತು. ಆ ಕಪಿಶ್ರೇಷ್ಠ ಸಮುದ್ರದಲ್ಲಿ ಅಲೆಗಳನ್ನು ಎಬ್ಬಿಸಿ ಅಡಗಿಸುತ್ತ ಹೋದರೆ ಭೂಮಿ ಆಕಾಶ ಎರಡನ್ನೂ ಸೀಳಿ ಹಾಕುವಂತೆ ಕಾಣುತ್ತ ಇದ್ದ. ಮೆಲ್ಲನೆ ತೇಲುತ್ತ ಹೋದರೆ ಮೇರುಮಂದರ

ಪರ್ವತಗಳ ಹಾಗೆ ಮೇಲೆ ಏಳುತ್ತ ಇದ್ದ ಅಲೆಗಳನ್ನು ಅವನು ಕ್ರಮ ಆಗಿ ಲೆಕ್ಕಹಾಕುತ್ತಿದ್ದಂತೆ ಇತ್ತು.

ಅವನ ವೇಗಕ್ಕೆ ಮೇಘಮಂಡಲದವರೆಗೂ ಚಿಮ್ಮಿದ ಸಮುದ್ರಜಲ ಆಕಾಶದಲ್ಲಿ ಶರನ್ಮೇಘದ ಹಾಗೆ ಬೆಳಗಿತು. ಹೀಗೆ ಒಂದೇ ಸಮನೆ ನೀರು ಚಿಮ್ಮಿ ಮೈಮೇಲಿನ ಬಟ್ಟೆ ಎಲ್ಲಾ ಕಳಚಿ ಬಿದ್ದರೆ ಅವಯವಗಳು ಎಲ್ಲಾ ಸ್ಪಷ್ಟ ಆಗಿ ಕಾಣುವಂತೆ ಸಮುದ್ರದ ಒಳಗಿನ ಮೀನು ಮೊಸಳೆ ತಿಮಿಂಗಿಲ ಮುಂತಾದ ಪ್ರಾಣಿಗಳು ಕಾಣಬಂದವು. ಆಕಾಶದಲ್ಲಿ ಹನುಮಂತ ಹಾರಿ ಹೋಗುತ್ತ ಇದ್ದರೆ ಗರುಡನೇ ಹೋಗುತ್ತ ಇದಾನೇನೋ ಎಂದು ಹಾವುಗಳು ಹೆದರಿದವು. ಹತ್ತು ಯೋಜನ ಅಗಲ ಮೂವತ್ತು ಯೋಜನ ಉದ್ದ ಬಿದ್ದು ಹನುಮಂತನ ನೆರಳು ಅತ್ಯಾಶ್ಚರ್ಯಕರ ಆಗಿ ಇತ್ತು. ಆದರಿಂದ ಸಮುದ್ರದ ನೀರಿಗೇ ಒಂದು ಕಾಂತಿ. ಹನುಮಂತನ ಹಿಂದೆಯೇ ಅವನ ನೆರಳೂ ಸಹ ಹೋಗುತ್ತ ಆಕಾಶದಲ್ಲಿ ತೇಲುವ ದಟ್ಟ ಆದ ಮೇಘಮಾಲೆಯ ಹಾಗೆ ಇತ್ತು. ಆ ಮಹಾತೇಜೋವಂತ ಮಹಾಕಾಯ ವಾನರಶ್ರೇಷ್ಠ ಆಧಾರವೇ ಇಲ್ಲದ ಆಕಾಶದಲ್ಲಿ ಯಾವುದೋ ರೆಕ್ಕೆಯ ಬೆಟ್ಟ ಹಾರಿಹೋಗುವಂತೆ ಹೋಗುತ್ತ ಇದ್ದ. ಆ ಬಲಶಾಲಿ ಕಪಿವರ ಮೇಲೆ ಹೋಗುವಾಗ ಸಮುದ್ರದ ನೀರು ಪಕ್ಕಕ್ಕೆ ಸರಿದು ಕೆಳಗಡೆ ದೊಡ್ಡ ದೋಣಿಯ ಹಾಗೆ ಆಗುತ್ತಿತ್ತು. ಗರುಡನ ಹಾಗೆ ಮುಗಿಲಿನಲ್ಲಿ ಹಾರಿದ ಹನುಮಂತ. ವಾಯುದೇವನ ಹಾಗೆ ಮೋಡಗಳನ್ನು ಸೆಳೆದು ಕೊಂಡು ಹೋದ. ಅವನ ಹಿಂದೆ ಬರುತ್ತ ಇದ್ದ ಮೋಡಗಳು ಬಗೆಬಗೆಯ ಬಣ್ಣದವು. ಬಿಳುಪು ಕೆಂಪು ಕಪ್ಪು ಹಳದಿ ಬಣ್ಣಗಳ ಮೋಡಗಳಿಂದ ಆಕಾಶ ಅಂದ ಆಗಿ ಕಂಡಿತು. ವೇಗದಿಂದ ಹನುಮಂತ ಹೋಗುವಾಗ ಕೆಲವು ಸಲ ಮೋಡ ಅವನಿಗೆ ಮರೆ ಆದವು. ಮತ್ತೆ ತೆರೆದವು. ಚಂದ್ರ ಮೋಡಗಳ ಹಿಂದೆ ಅವಿತುಕೊಳ್ಳುತ್ತ ಹೊರಗೆ ಬರುತ್ತ ಕಣ್ಣುಮುಚ್ಚಾಲೆ ಆಡುತ್ತ ಇದಾನೆ ಎನಿಸಿತು.

ದೇವತೆಗಳೂ ದಾನವರೂ ಗಂಧರ್ವರೂ ಹನುಮಂತನ ಮೇಲೆ ಹೂಮಳೆ ಕರೆದರು. ಅವನಿಗೆ ದಣಿವು ಆದೀತು ಎಂದು ಸೂರ್ಯ ಸುಡಲಿಲ್ಲ. ಲಂಕಾ ಪಟ್ಟಣಕ್ಕೆ ರಾಮಕಾರ್ಯಕ್ಕೆ ಹೋಗುತ್ತ ಇದಾನೆ ಹನುಮಂತ. ಗಾಳಿಯೂ ಹಿತ ಆಗಿ ಬೀಸಿತು. ಮಹರ್ಷಿಗಳು ಅವನನ್ನು ಸ್ತುತಿಸಿದರು. ದೇವಗಂಧರ್ವರು

ಕೊಂಡಾಡಿದರು. ಎಳ್ಳಷ್ಟೂ ಬಳಲದೆ ಇಷ್ಟು ಸಾಹಸ ಮಾಡಿದ ಹನುಮಂತನನ್ನು ನಾಗರೂ ಯಕ್ಷರಾಕ್ಷಸ ದೇವಪನ್ನಗ ಕಿನ್ನರಕಿಂಪುರುಷರೂ ಹೊಗಳಿ ಹಾಡಿದರು.

ಸಮುದ್ರರಾಜನಿಗೆ ಇಕ್ಷ್ವಾಕುವಂಶದವರಲ್ಲಿ ಬಹಳ ಗೌರವ. ರಾಮ ಕಾರ್ಯಕ್ಕೆ ಹಾರುತ್ತ ಇದಾನೆ ಹನುಮಂತ ಎಂಬುದು ತಿಳಿದು ತಾನೂ ನೆರವು ಆಗಲು ಯೋಚಿಸಿದ. ಇಕ್ಷ್ವಾಕುಕುಲದ ಸಗರ ಎಂಬ ಚಕ್ರವರ್ತಿಯೇ ತನ್ನ ಅಭಿವೃದ್ಧಿಗೆ ಕಾರಣ. ರಾಮ ಇಕ್ಷ್ವಾಕುವಂಶದವನು. ಅವನ ಕೆಲಸಕ್ಕೆ ಆಗಿಯೇ ಈ ಹನುಮಂತ ಕಷ್ಟಪಡುತ್ತ ಇದಾನೆ. ತಾನು ಏನು ಆದರೂ ಉಪಾಯ ಮಾಡಿ ಹನುಮಂತನಿಗೆ ದಣಿವು ಬಳಲಿಕೆ ಆಗದಂತೆ ಮಾಡಬೇಕು. ಈಗ ತಾನು ಸುಮ್ಮನೆ ಇದ್ದುಬಿಟ್ಟರೆ ಲೋಕದಲ್ಲಿ ಎಲ್ಲರ ಬಾಯಿಗೂ ಬಿದ್ದು ಅಪನಂಬಿಕೆಯ ಪಾಲು ಆಗಬೇಕು. ಹನುಮಂತ ದಣಿವು ತೀರಿಸಿಕೊಳ್ಳುವಂತೆ ಏನು ಆದರೂ ಏರ್ಪಾಟುಮಾಡಬೇಕು ಎಂದುಕೊಂಡ ಸಮುದ್ರರಾಜ.

ಸಮುದ್ರದಲ್ಲಿ ಮುಳುಗಿ ಅವಿತುಕೊಂಡು ಇತ್ತು ಹಿರಣ್ಯನಾಭ ಮೈನಾಕ ಪರ್ವತ. ಅದನ್ನು ಕರೆದು " ಪರ್ವತರಾಜ, ಪಾತಾಳದ ರಾಕ್ಷಸರು ಮೇಲೆ ಎದ್ದು ಬಾರದಂತೆ ಪಾತಾಳ ಲೋಕದ ಬಾಗಿಲಿಗೆ ಅಡ್ಡ ಬಂಡೆ ಆಗಿ ಇಟ್ಟ ನಿನ್ನನ್ನು ದೇವೇಂದ್ರ. ಪರಾಕ್ರಮಶಾಲಿಗಳು ರಾಕ್ಷಸರು. ಮೇಲಕ್ಕೆ ಬರಲು ಅವರು ಮಾಡಿದ ಪ್ರಯತ್ನ ಎಲ್ಲವೂ ವ್ಯರ್ಥ. ನೀನು ದೊಡ್ಡದು ಆಗಿ ಬೆಳೆದು ಬಾಗಿಲಿಗೆ ಅಡ್ಡನಿಂತೆ. ಅಡ್ಡಡ್ಡ ಕೆಳಕ್ಕೆ ಮೇಲಕ್ಕೆ ಹೇಗೆ ಬೇಕಾದರೂ ಬೆಳೆಯಬಲ್ಲೆ ನೀನು. ಇಷ್ಟು ಮಹಿಮೆ ನಿನ್ನದು. ಎಂದೇ ನಿನಗೆ ಈಗ ಹೇಳುತ್ತ ಇದೇನೆ. ಮೇಲಕ್ಕೆ ಏಳು, ಗಿರಿಸತ್ತಮ. ರಾಮಕಾರ್ಯಾರ್ಥ ಕಪಿಶ್ರೇಷ್ಠ ಹನುಮಂತ ಆಕಾಶಮಾರ್ಗದಲ್ಲಿ ಹಾರಿಬರುತ್ತ ಇದಾನೆ. ಅವನು ಕೈಕೊಂಡ ಕೆಲಸ ಅತ್ಯದ್ಭುತ, ಪರಮಸಾಹಸ. ಇಕ್ಷ್ವಾಕುವಂಶದವರು ನನಗೆ ಬಹಳ ಪೂಜ್ಯರು. ರಾಮನೂ ಆ ವಂಶದವನೇ. ನಾನು ಆತನಿಗೆ ನೆರವು ಆಗಬೇಕು. ನೀನು ನನ್ನಲ್ಲಿ ಆಸರೆಪಡೆದು ಇದೀಯೆ. ರಾಮ ನಿನಗೆ ಇನ್ನೂ ಹೆಚ್ಚು ಪೂಜ್ಯ. ನೀನು ಅವನ ಕೆಲಸಕ್ಕೆ ಸಹಾಯ ಮಾಡಬೇಕು. ಇದು ನನ್ನ ಕೆಲಸ, ನಿನ್ನ ಕೆಲಸ.

" ಯಾವ ಕೆಲಸವನ್ನೇ ಆಗಲಿ ಸಕಾಲದಲ್ಲಿ ಮಾಡಬೇಕು. ಮಾಡದೆ ಹೋದರೆ ಸತ್‌ಪುರುಷರಿಗೆ ಕೋಪ ಬರುತ್ತದೆ. ಈಗ ನೀನು ನೀರನ್ನು ಬಿಟ್ಟು

ಮೇಲಕ್ಕೆ ಏಳು. ಹನುಮಂತ ಸ್ವಲ್ಪ ಹೊತ್ತು ನಿಲ್ಲಲಿ. ವಿಶ್ರಮಿಸಿಕೊಳ್ಳಲಿ. ಈ ಹನುಮಂತ ಬಹಳ ಶ್ರೇಷ್ಠ ವ್ಯಕ್ತಿ. ನಮಗೆ ಅತಿಥಿ. ಹೀಗೆ ಪರಮಪೂಜ್ಯ ನಮಗೆ. ಇದುವರೆಗೆ ದೇವಗಂಧರ್ವರು ನಿನ್ನ ಚಿನ್ನದ ಶಿಖರಗಳ ಮೇಲೆ ವಿಹರಿಸಿದಾರೆ. ಈಗ ಹನುಮಂತ ನಿನ್ನ ಮೇಲೆ ನಿಂತು ದಣಿವನ್ನು ಆರಿಸಿ ಕೊಳ್ಳಲಿ. ಆಮೇಲೆ ಉಳಿದ ದಾರಿಯನ್ನು ಹಾಯಿ ಆಗಿ ದಾಟಲಿ.

"ಮೈನಾಕ! ಕಕುತ್ಸ್ಥವಂಶದ ಶ್ರೀರಾಮ ಪರಮದಯಾಳು, ಸತ್ಯ ಸಂಧ. ಅವನ ಹೆಂಡತಿ ಸೀತೆ ಬಹಳ ಕಷ್ಟಕ್ಕೆ ಸಿಕ್ಕಿ ಇದಾಳೆ. ಗಂಡನನ್ನು ಬಂಧುಗಳನ್ನು ಅಗಲಿ ಪರದೇಶವಾಸ ಮಾಡುತ್ತ ಇದಾಳೆ. ಸೀತಾರಾಮರನ್ನು ಸೇರಿಸಲು ಹನುಮಂತ ಈ ಸಾಹಸ ಮಾಡುತ್ತ ಇದಾನೆ. ಇದು ಎಲ್ಲವನ್ನೂ ಗಮನಿಸಿ ನೀನು ಮೇಲಕ್ಕೆ ಎದ್ದು ಬಾ" ಎಂದ.

ಮೈನಾಕ ಪರ್ವತ ಮೇಲಕ್ಕೆ ಎದ್ದಿತು. ಹೊಳೆಹೊಳೆವ ಕಿರಣಗಳಿಂದ ಮೇಘಮಂಡಲವನ್ನು ಸೀಳಿಕೊಂಡು ಬರುವ ಸೂರ್ಯನ ಹಾಗೆ ಸಮುದ್ರಜಲ ವನ್ನು ಭೇದಿಸಿಕೊಂಡು ಮರುಗಳಿಗೆಯಲ್ಲೇ ಎದ್ದಿತು ಮೈನಾಕ. ಮೈನಾಕದ ಬಂಗಾರದ ಶಿಖರಗಳು ಮುಗಿಲನ್ನು ಮುಟ್ಟಿದವು. ಸೂರ್ಯಬಿಂಬಕ್ಕೆ ಸಮ ಅದರ ಕಾಂತಿ. ಆ ಕಾಂತಿಯಿಂದ ಕಪ್ಪಗೆ ಕಾಣುವ ಮುಗಿಲೂ ಹೊಂಬಣ್ಣದಿಂದ ಥಳಥಳ ಬೆಳಗಿತು. ಆಕಾಶದಲ್ಲಿ ನೂರು ಮಂದಿ ಸೂರ್ಯರು ಒಟ್ಟಿಗೇ ಮೂಡಿದರೋ ಏನೋ ಎಂಬ ಹಾಗೆ ಇತ್ತು ಆ ಪ್ರಕಾಶ.

ಏಕಾಏಕಿ ಮೇಲಕ್ಕೆ ಎದ್ದುನಿಂತ ಮೈನಾಕಪರ್ವತವನ್ನು ಹನುಮಂತ ನೋಡಿದ. ಏನೋ ಅಡ್ಡಬಂತು ಎಂದುಕೊಂಡ. ಗಾಳಿ ಮೋಡಗಳನ್ನು ಅಪ್ಪಳಿಸುವಂತೆ ತನ್ನ ಎದೆಯಿಂದ ಆ ಪರ್ವತವನ್ನು ಗುದ್ದಿ ಕೆಡವಿದ. ಅಷ್ಟು ವೇಗದಿಂದ ಹನುಮಂತ ಬಂದು ತನ್ನನ್ನು ಕೆಡವಿದುದಕ್ಕೆ ಪರ್ವತರಾಜನಿಗೆ ಪರಮಾನಂದ. ಮನುಷ್ಯರೂಪವನ್ನು ಧರಿಸಿ ತನ್ನ ಶಿಖರದ ಮೇಲೆ ನಿಂತು ಆಕಾಶದಲ್ಲಿದ್ದ ವೀರೋತ್ತಮ ಆಂಜನೇಯನನ್ನು ಬೇಡಿಕೊಂಡ: "ಯಾರಿಗೂ ಸಾಧ್ಯ ಅಲ್ಲದ ಕೆಲಸಕ್ಕೆ ಕೈಹಾಕಿದೀಯೆ, ವಾನರೋತ್ತಮ. ನನ್ನ ಶಿಖರಗಳ ಮೇಲೆ ಸ್ವಲ್ಪ ನಿಂತು ದಣಿವನ್ನು ಆರಿಸಿಕೊ. ಆಮೇಲೆ ಸುಖಪ್ರಯಾಣ ಮಾಡಬಹುದು.

"ಆಂಜನೇಯ, ಈ ಸಮುದ್ರ ಅಭಿವೃದ್ಧಿಗೆ ಬಂದುದೇ ಶ್ರೀರಾಮನ ವಂಶದವರಿಂದ. ನೀನೂ ಆ ರಾಮಕಾರ್ಯಕ್ಕೇ ಹೊರಟಿದೀಯೆ. ಆದ್ದರಿಂದ ನಿನ್ನನ್ನು ಸತ್ಕರಿಸಬೇಕೆಂದು ಸಮುದ್ರರಾಜನ ಬಯಕೆ. ಉಪಕಾರಿಗೆ ಪ್ರತಿ ಉಪಕಾರ ಎಂಬುದು ಸನಾತನಧರ್ಮ. ರಾಮನ ದೂತ ನೀನು. ನಿನಗೆ ಆತಿಥ್ಯಮಾಡಿದರೆ ಹಿಂದೆ ರಾಮನ ಪೂರ್ವಜರು ತನಗೆ ಮಾಡಿದ ಉಪಕಾರಕ್ಕೆ ಪ್ರತಿ ಆಯಿತು ಎಂದು ಅವನ ಯೋಚನೆ. ಮೈನಾಕ, ಈ ಕಪಿಶ್ರೇಷ್ಠ ನೂರು ಯೋಜನಗಳನ್ನು ದಾಟಬೇಕು. ಮಧ್ಯೆ ನಿನ್ನ ಬಯಲುಗಳಲ್ಲಿ ಸ್ವಲ್ಪ ವಿಶ್ರಮಿಸಿ ಕೊಂಡರೆ ಉಳಿದ ದಾರಿಯನ್ನು ಸುಲಭ ಆಗಿ ದಾಟಬಲ್ಲ. ನೀನು ಮೇಲೆ ಏಳು ಎಂದು ಸಮುದ್ರರಾಜ ನನ್ನನ್ನು ಹುರಿದುಂಬಿಸಿದ. ನೀನು ನನ್ನ ಮೇಲೆ ದಣಿವು ಆರಿಸಿಕೊ. ರುಚಿ ಆದ ಕಂದಮೂಲಫಲಗಳು ಇವೆ ಇಲ್ಲಿ. ಅವನ್ನು ಸವಿದು ಮುಂದೆ ಹೋಗು.

"ವಾನರೇಂದ್ರ ಹನುಮಂತ, ನನಗೂ ನಿನಗೂ ಬಹಳ ಸಂಬಂಧ ಇದೆ. ಅಲ್ಲದೆ ನೀನು ಈಗ ಅತಿಥಿ. ನೀನು ರಾಮದೂತ. ನಾವು ಆತಿಥ್ಯ ನೀಡುತ್ತ ಇದೇವೆ. ಈ ಸಂಬಂಧ ಮೂರು ಲೋಕಗಳಲ್ಲಿಯೂ ಪ್ರಸಿದ್ಧ. ಸಜ್ಜನರು ಒಪ್ಪಿದ ಸಂಬಂಧ ಇದು. ವಾಯುಪುತ್ರ, ವೇಗದಲ್ಲಿ ಆಗಲಿ ಲಂಘನದಲ್ಲಿ ಆಗಲಿ ನಿನ್ನನ್ನು ಮೀರಿಸಿದವರು ಯಾರೂ ಇಲ್ಲ. ಅತಿಥಿ ಪ್ರಾಕೃತನೆ ಆದರೂ ಪೂಜಾರ್ಹ ಧರ್ಮಜ್ಞರಿಗೆ. ಧರ್ಮಜಿಜ್ಞಾಸುಗಳಿಗೂ. ಅದರಲ್ಲಿ ನಿನ್ನಂಥ ಮಹಾತ್ಮ ಪೂಜಾರ್ಹ ಅಲ್ಲದೆ ಮತ್ತೇನು? ನೀನು ದೇವತೆಗಳಲ್ಲಿ ಶ್ರೇಷ್ಠ ಆದ ವಾಯುದೇವನ ಮಗ. ನಿನ್ನ ವೇಗ ತಂದೆಯ ವೇಗಕ್ಕೆ ಸಮ. ನೀನು ಧರ್ಮಜ್ಞ. ನಿನ್ನನ್ನು ಸತ್ಕರಿಸಿದರೆ ನಿನ್ನ ತಂದೆಯನ್ನು ಪೂಜಿಸಿದ ಹಾಗೇ. ಆದ್ದರಿಂದಲೂ ನೀನು ನನಗೆ ಪೂಜಾರ್ಹ.

"ಕಪಿಕುಂಜರ, ಹನುಮಂತ, ನಿಮ್ಮ ತಂದೆ ನನಗೆ ಏಕೆ ಪೂಜನೀಯ, ಗೊತ್ತೆ? ಹಿಂದೆ ಕೃತಯುಗದಲ್ಲಿ ಪರ್ವತಗಳಿಗೂ ಪಕ್ಷಿಗಳಿಗೆ ಇದ್ದ ಹಾಗೆ ರೆಕ್ಕೆಗಳು ಇದ್ದವು. ರೆಕ್ಕೆಗಳ ಬಲದಿಂದ ದಿಕ್ಕುದಿಕ್ಕಿಗೂ ಗರುಡನ ಹಾಗೆ ವಾಯುವಿನ ಹಾಗೆ ಹಾರಿ ಹೋಗುತ್ತ ಇದ್ದವು. ಬೆಟ್ಟಗಳು ಹಾರುವಾಗ ತಮ್ಮ ಮೇಲೆ ಎಲ್ಲಿ ಬೀಳುತ್ತವೆಯೋ ಎಂದು ದೇವತೆಗಳು ಋಷಿಗಳು ಮೊದಲು ಆದವರು ಹೆದರಿದರು. ಇದನ್ನು ಕಂಡು ಸಹಸ್ರಾಕ್ಷ ಶತಕ್ರತು ದೇವೇಂದ್ರನಿಗೆ

ಸಿಟ್ಟುಬಂತು. ವಜ್ರಾಯುಧ ಹಿಡಿದು ಪರ್ವತಗಳ ರೆಕ್ಕೆಗಳನ್ನು ಕಂಡ ಕಂಡ ಕಡೆಯಲ್ಲಿ ಕಡಿದುಹಾಕಿದ. ನನ್ನನ್ನು ಬೆನ್ನಟ್ಟಬಂದ ದೇವೇಂದ್ರ. ಆಗ ನಿಮ್ಮ ತಂದೆ ನನಗೆ ಮಾಡಿದ ಸಹಾಯ ಅಷ್ಟು ಇಷ್ಟು ಅಲ್ಲ. ಒಂದೇ ಸಲ ನನ್ನನ್ನು ಎತ್ತಿ ಎಸೆದ. ಆಗ ನಾನು ಈ ಲವಣಸಮುದ್ರದಲ್ಲಿ ಧೊಪ್ ಎಂದು ಬಿದ್ದೆ. ನನ್ನ ರೆಕ್ಕೆ ಉಳಿದುಕೊಂಡವು. ಹಾಗೆ ಕಾಪಾಡಿದ ವಾಯುದೇವ ನನಗೆ ಪರಮಪೂಜ್ಯ. ಅದರಿಂದ ನೀನೂ ಪೂಜ್ಯ. ನಮ್ಮ ಈ ಸಂಬಂಧ ದೊಡ್ಡದು.

" ಮಹಾಕಪಿ, ನನ್ನ ಸತ್ಕಾರವನ್ನು ಪ್ರೀತಿಯಿಂದ ಅಂಗೀಕರಿಸು. ನನಗೂ ಈ ಸಮುದ್ರರಾಜನಿಗೂ ಸಂತೋಷ ಆಗುತ್ತದೆ. ಇಲ್ಲಿ ತಂಗು. ಆಯಾಸ ಪರಿಹಾರ ಮಾಡಿಕೊ. ನಮ್ಮ ಸತ್ಕಾರವನ್ನು ಮನ್ನಿಸು. ನಿನ್ನ ದರ್ಶನದಿಂದ ನಮಗೆ ಅತಿ ಆನಂದ ಆಗಿದೆ" ಎಂದ.

ಹನುಮಂತ ಇದನ್ನು ಎಲ್ಲಾ ಕೇಳಿ ಹೇಳಿದ: "ಮೈನಾಕ, ನಾನು ಕಾರ್ಯಾರ್ಥಿ ಆಗಿ ಹೋಗುತ್ತ ಇದೇನೆ. ಬೇಗ ಹೋಗಬೇಕು ನಾನು. ಸಮುದ್ರ ಮಧ್ಯದಲ್ಲಿ ನಾನು ನಿಲ್ಲಬಾರದು. ಆಗಲೇ ಹೊತ್ತು ಮೀರುತ್ತ ಇದೆ. ನಡುವೆ ನಿಲ್ಲದೆ ರಾಮಬಾಣದ ಹಾಗೆ ಹೋಗುತ್ತೇನೆ ಎಂದು ವಾನರರ ಇದಿರಿಗೆ ಶಪಥ ಮಾಡಿದೇನೆ. ನಿನ್ನ ಮಾತೇ ನನಗೆ ಆತಿಥ್ಯ. ಕೋಪಿಸಬೇಡ. ನೀನು ಸತ್ಕಾರ ಮಾಡಿದ ಹಾಗೇ." ವೀರ್ಯವಂತ ಹನುಮಂತ ಹೀಗೆ ಸಮಾಧಾನ ಹೇಳಿ ಮೈನಾಕನನ್ನು ಸವರಿದ. ಮೈನಾಕನೂ ಸಮುದ್ರರಾಜನೂ ವಾಯುಸುತ ಹನುಮಂತನನ್ನು ಆದರಿಸಿ ರಾಮಕಾರ್ಯ ನೆರವೇರಲಿ ಎಂದು ಹರಸಿದರು. ಅವರು ಇಬ್ಬರನ್ನೂ ಅಲ್ಲೇ ಬಿಟ್ಟು ಅಂತರಿಕ್ಷಕ್ಕೆ ನೆಗೆದು ವಾಯುಮಾರ್ಗದಲ್ಲಿ ಹೊರಟ ಹನುಮಂತ.

ಎರಡನೆ ಸಲವೂ ಹೀಗೆ ಅಸಾಧ್ಯ ಸಾಹಸಮಾಡಿದುದಕ್ಕೆ ದೇವತೆಗಳೂ ಸಿದ್ಧರೂ ಮಹರ್ಷಿಗಳೂ ಹನುಮಂತನನ್ನು ಪ್ರಶಂಸಿಸಿದರು. ಮೈನಾಕ ಮಾಡಿದ ಕೆಲಸವನ್ನು ನೋಡಿ ದೇವತೆಗಳು ಎಲ್ಲರೂ ಸಂತಸಗೊಂಡರು. ದೇವೇಂದ್ರನೂ ಸಂತಸಗೊಂಡ. ದೇವೇಂದ್ರ ಮುಂದೆ ಬಂದು ಹಿರಣ್ಯನಾಭ ನನ್ನು ಗದ್ಗದಕಂಠದಿಂದ ಕೊಂಡಾಡಿದ. "ಪರ್ವತೋತ್ತಮ, ನೀನು ಮಾಡಿದ ಕೆಲಸದಿಂದ ಬಹಳ ಸಂತೋಷ ಆಯಿತು ನನಗೆ. ನಿನಗೆ ಅಭಯ ನೀಡುತ್ತೇನೆ. ಇನ್ನು ನೀನು ಇಷ್ಟಬಂದ ಹಾಗೆ ನಿರ್ಭಯದಿಂದ ಸುಖ ಆಗಿ ಇರು. ನನಗೆ

ನಿನ್ನಲ್ಲಿ ಇದ್ದ ವೈರ ಹೋಯಿತು. ನೂರು ಯೋಜನಗಳ ಸಮುದ್ರವನ್ನು ದಾಟುತ್ತ ಇದ್ದ ವೀರ ಹನುಮಂತನಿಗೆ ಸಹಾಯ ಮಾಡಲು ಬಂದೆ. ಬಹಳ ಸ್ತುತ್ಯ. ರಾಮದೂತನನ್ನು ನೀನು ಸತ್ಕರಿಸಿದೆ. ನನಗೆ ಬಹಳ ಸಂತೋಷ" ಎಂದ.

ದೇವೇಂದ್ರ ಅಭಯ ಕೊಟ್ಟುದರಿಂದ ಮೈನಾಕಪರ್ವತ ನಿರ್ಭಯದಿಂದ ಸುಖ ಆಗಿ ಇತ್ತು. ಆಂಜನೇಯನೂ ಒಂದು ಗಳಿಗೆಯಲ್ಲಿ ಆ ಪ್ರದೇಶವನ್ನು ದಾಟಿಹೋದ.

ಆಮೇಲೆ ದೇವತೆಗಳೂ ಗಂಧರ್ವರೂ ಸಿದ್ಧರೂ ಮಹರ್ಷಿಗಳೂ ಸೇರಿ ಸೂರ್ಯನಂತೆ ಹೊಳೆವ ನಾಗಮಾತೆ ಸುರಸೆಯನ್ನು ಕರೆದರು. "ಸುರಸೆ, ವಾಯುಸುತ ಹನುಮಂತ ಸಮುದ್ರದ ಮೇಲೆ ಹಾರಿ ಹೋಗುತ್ತ ಇದಾನೆ. ನೀನು ಪರ್ವತಾಕಾರವನ್ನು ತಾಳಿ ಭಯಂಕರ ರಾಕ್ಷಸಿಯಂತೆ ಅವನ ದಾರಿಗೆ ಅಡ್ಡ ಆಗಿ ನಿಲ್ಲು. ಪಿಂಗಳ ಬಣ್ಣದ ಕಣ್ಣುಗಳಿಂದ ಭಯಂಕರ ಕೋರೆದಾಡೆ ಗಳನ್ನು ತೋರಿಸುತ್ತ ಆಕಾಶದಷ್ಟು ಅಗಲ ಮಾಡಿ ಬಾಯನ್ನು ಇದಿರಿಗೆ ನಿಲ್ಲು. ಒಂದು ಗಳಿಗೆ ಅವನಿಗೆ ಅಡ್ಡ ನಿಂತರೆ ಸಾಕು. ನಿನ್ನನ್ನು ಗೆಲ್ಲುತ್ತಾನೋ ಸೋಲುತ್ತಾನೋ ನೋಡಬೇಕು. ಅವನ ಪರಾಕ್ರಮ ನಮಗೆ ಗೊತ್ತು. ಆದರೂ ಪರೀಕ್ಷಿಸಬೇಕು" ಎಂದರು.

ದೇವತೆಗಳು ಇಷ್ಟು ಹೇಳಿದರಲ್ಲ ಎಂದು ಸುರಸೆ ಉಬ್ಬಿದಳು. ಸಮುದ್ರದ ನಡುವೆ ಅತಿವಿಕಾರ ಅತಿಭಯಂಕರ ಆದ ರಾಕ್ಷಸರೂಪವನ್ನು ತಳೆದುನಿಂತಳು. ಹನುಮಂತನ ದಾರಿಯನ್ನು ಅಡ್ಡಗಟ್ಟಿದಳು. "ವಾನರಶ್ರೇಷ್ಠ, ದೇವತೆಗಳು ತೋರಿಸಿದಾರೆ, ನೀನು ನನಗೆ ಆಹಾರ. ನಿನ್ನನ್ನು ತಿನ್ನುತ್ತೇನೆ. ಬಾಯಿ ತೆರೆದು ಇದೇನೆ. ಒಳಗೆ ಬಾ" ಎಂದಳು.

ನಾಗಮಾತೆ ಹೇಳಿದ ಮಾತಿನಿಂದ ಹನುಮಂತನ ಮುಖದಲ್ಲಿ ಉಲ್ಲಾಸ ಅರಳಿತು. "ಸುರಸೆ, ದಶರಥಪುತ್ರ ರಾಮ, ತಮ್ಮ ಲಕ್ಷ್ಮಣ ಹೆಂಡತಿ ಸೀತೆಯರ ಒಡನೆ ದಂಡಕಾರಣ್ಯಕ್ಕೆ ಬಂದ. ಅಲ್ಲಿ ರಾಕ್ಷಸರಿಗೂ ಅವನಿಗೂ ಬದ್ಧವೈರ ಬೆಳೆಯಿತು. ಕಾರ್ಯಾತುರದಿಂದ ರಾಮ ಹೊರಗೆ ಹೋದಾಗ ಆತನ ಹೆಂಡತಿ ತೇಜಸ್ವಿನಿ ಆದ ಸೀತೆಯನ್ನು ರಾವಣಾಸುರ ಕದ್ದುಕೊಂಡು ಹೋದ. ರಾಮನ ಅಪ್ಪಣೆಯಂತೆ ನಾನು ಈಗ ಸೀತಾದೇವಿಯ ಬಳಿಗೆ ಹೋಗುತ್ತ ಇದೇನೆ.

ನಾನು ರಾಮದೂತ. ತಾಯಿ, ನೀನು ವಾಸಮಾಡುತ್ತ ಇರುವುದು ರಾಮನ ದೇಶವೇ. ನೀನೂ ಕೈಯಲ್ಲಿ ಆದ ನೆರವನ್ನು ನೀಡಬೇಕು. ನಿನಗೆ ಇದು ಧರ್ಮ. ಅಲ್ಲ ಎಂದರೆ ನಾನು ಜಾನಕಿಯನ್ನು ಕಂಡು, ಎಂಥ ಕೆಲಸವನ್ನು ಆದರೂ ಲೀಲಾಜಾಲ ಆಗಿ ಮಾಡುವ ರಾಮನಿಗೆ ತಿಳಿಸಿ, ಆಮೇಲೆ ಬಂದು ನಿನ್ನ ಬಾಯಿಯ ಒಳಗೆ ಹೊಗುತ್ತೇನೆ. ಖಂಡಿತ. ಇದು ಶಪಥ" ಎಂದ.

ಕಾಮರೂಪಿಣಿ ಸುರಸೆ ಅದಕ್ಕೆ ಒಪ್ಪಲಿಲ್ಲ. "ನನ್ನ ಬಳಿಗೆ ಬಂದವರು ಯಾರೂ ನನ್ನನ್ನು ಮೀರಿ ಹೋಗಲಾಗದು. ಅದು ಬ್ರಹ್ಮದೇವ ಕೊಟ್ಟ ವರ. ನನ್ನ ಬಾಯಲ್ಲಿ ಬೀಳಬೇಕು ನೀನು" ಎಂದಳು.

ಹನುಮಂತನಿಗೆ ಕೋಪ. "ಸುರಸೆ, ಬಾಯಿ ತೆರೆ. ನನ್ನನ್ನು ನುಂಗು" ಎಂದ. ಹತ್ತು ಗಾವುದದ ಉದ್ದ ಅಗಲ ಮೈಯನ್ನು ಬೆಳೆಸಿದ ಹನುಮಂತ. ಸುರಸೆ ತನ್ನ ಬಾಯನ್ನು ಇಪ್ಪತ್ತು ಗಾವುದಗಳಷ್ಟು ಅಗಲ ತೆರೆದಳು. ಅದನ್ನು ನೋಡಿ ಹನುಮಂತ ಮೂವತ್ತು ಗಾವುದ ಬೆಳೆದ. ಅವಳ ಬಾಯಿ ನಲವತ್ತು ಗಾವುದ ಆಯಿತು. ಹನುಮಂತ ಐವತ್ತು ಗಾವುದ ಆದ. ಸುರಸೆಯ ಬಾಯಿ ಅರವತ್ತು ಗಾವುದ ಆಯಿತು. ಮಾರುತಿ ಎಪ್ಪತ್ತು ಗಾವುದ ಬೆಳೆಸಿದ ಮೈ. ಸುರಸೆಯ ಬಾಯಿ ಎಂಬತ್ತು ಗಾವುದ ಆಯಿತು. ಹನುಮಂತ ತೊಂಬತ್ತು ಗಾವುದ ಬೆಳೆದ. ಸುರಸೆ ನೂರು ಗಾವುದದ ಅಗಲ ಬಾಯಿ ತೆರೆದಳು. ನರಕದ ಹಾಗೆ ಘೋರ ಆದ ಅವಳ ನಾಲಗೆಯನ್ನು ನೋಡಿದ ಹನುಮಂತ. ಇದು ಸರಿ ಅಲ್ಲ, ಸೂಕ್ಷ್ಮರೂಪ ತಳೆಯಬೇಕು ಎಂದುಕೊಂಡ ಬುದ್ಧಿಮಂತ ಮಾರುತಿ. ಒಂದೇ ಒಂದು ಹೆಬ್ಬೆರಳಿನ ಗಾತ್ರ ಮಾಡಿಕೊಂಡ ಮೈಯನ್ನು. ಸುರಸೆಯ ಬಾಯಿಯ ಒಳಗೆ ಹೊಕ್ಕು ಅವಳು ಬಾಯಿ ಮುಚ್ಚುವುದರ ಒಳಗೇ ಹೊರಕ್ಕೆ ನೆಗೆದ. ಅಂತರಿಕ್ಷಕ್ಕೆ ಹಾರಿ "ದಾಕ್ಷಾಯಿಣಿ, ಸುರಸೆ, ನಿನ್ನ ಇಷ್ಟದಂತೆ ನಿನ್ನ ಬಾಯಿಯ ಒಳಗೆ ಹೊಕ್ಕು ಬಂದೆ. ನಿನಗೆ ಬ್ರಹ್ಮದೇವ ಕೊಟ್ಟ ವರ ಸಫಲ ಆಯಿತು. ನಾನು ಶ್ರೀರಾಮಪತ್ನಿ ಸೀತೆಯನ್ನು ಹುಡುಕಲು ಹೋಗುತ್ತೇನೆ. ನಿನಗೆ ನಮಸ್ಕಾರ" ಎಂದ.

ಸುರಸೆಗೆ ತುಂಬಾ ಸಂತೋಷ ಆಯಿತು. ನಿಜರೂಪವನ್ನು ತಳೆದಳು. "ವಾನರೋತ್ತಮ, ನಿನ್ನ ಕಾರ್ಯಸಿದ್ಧಿಯಾಗಲಿ. ಹೋಗಿ ಬಾ. ರಾಮನನ್ನೂ ಸೀತೆಯನ್ನೂ ಕಲೆಸು" ಎಂದಳು.

ಮೂರನೆ ಸಲವೂ ಅಸಾಧ್ಯ ಕಾರ್ಯವನ್ನು ಮಾಡಿದ ಹನುಮಂತನನ್ನು ಸಮಸ್ತ ಜೀವಿಗಳೂ ಭಲೆ ಎಂದು ಕೊಂಡಾಡಿದವು. ಸಾಗರವನ್ನು ದಾಟಲು ಯಾರಿಗೆ ಸಾಧ್ಯ? ಹನುಮಂತ ಗರುಡನಿಗೆ ಸಮ ಆಗಿ ಆಕಾಶಮಾರ್ಗದಿಂದಲೇ ದಾಟುತ್ತ ಇದ್ದ. ಆಕಾಶದಲ್ಲಿ ಮಳೆಮೋಡಗಳಿಂದ ಸುರಿಯುವ ಮಳೆಯ ಧಾರೆ. ಯಾವಾಗಲೂ ಪಕ್ಷಿಗಳ ಸಂಚಾರ ಆಕಾಶದಲ್ಲೇ. ಗಾನವಿದ್ಯೆಯ ಆಚಾರ್ಯ ತುಂಬುರನಾರದರು ನೃತ್ಯವಿಶಾರದರು ಆದ ವಿದ್ಯಾಧರರು ಓಡಾಡುವ ಮಾರ್ಗ ಅದು. ಆಕಾಶದಲ್ಲೇ ಕಾಮನಬಿಲ್ಲು ಮೂಡುವುದು. ಸಿಂಹ ಆನೆ ಹುಲಿ ಪನ್ನಗಗಳು ವಾಹನ ಆದ ದೇವತೆಗಳ ದಾರಿ ಆಕಾಶ. ವಿಮಾನಮಾರ್ಗ. ವಜ್ರಾಯುಧದ ಏಟಿಗೆ ಸಿಡಿಲಿನ ಹೊಡೆತಕ್ಕೆ ಹುಟ್ಟುವ ಬೆಂಕಿಗೆ ಆಕಾಶವೇ ನೆಲೆ. ಪುಣ್ಯಕಾರ್ಯಗಳಿಂದ ಸ್ವರ್ಗ ಪಡೆದ ಮಹಾತ್ಮರ ವಾಸಸ್ಥಾನ ಅದು. ಹವಿರ್ಭಾಗಗಳನ್ನು ದೇವತೆಗಳಿಗೆ ತಲಪಿಸಲು ಯಜ್ಞಪುರುಷನು ಹೊತ್ತು ಕೊಂಡು ಹೋಗುವ ದಾರಿ ಅದು. ಅಶ್ವಿನಿ ಮುಂತಾದ ನಕ್ಷತ್ರಗಳಿಗೂ ಸೂರ್ಯಚಂದ್ರರಿಗೂ ಇತರ ಗ್ರಹಗಳಿಗೂ ಆಶ್ರಯ ಅದೇ. ಆಕಾಶವೇ ಮಹರ್ಷಿಗಳಿಗೆ ಯಕ್ಷಗಂಧರ್ವನಾಗರಿಗೆ ಸಂಚಾರಸ್ಥಲ. ಆಕಾಶ ವಿವಿಕ್ತ, ನಿರ್ಮಲ, ಸರ್ವವ್ಯಾಪಕ. ಗಂಧರ್ವರಾಜ ವಿಶ್ವಾವಸುವಿನ ನಿವಾಸ ಅಲ್ಲೇ. ದೇವೇಂದ್ರನ ದಿಗ್ಗಜ ಐರಾವತದ ತಿರುಗಾಟ ಆಕಾಶದಲ್ಲೇ. ಜೀವಲೋಕಕ್ಕೆ ಬ್ರಹ್ಮದೇವ ನಿರ್ಮಿಸಿದ ವಿಸ್ತಾರ ಆದ ಮೇಲುಕಟ್ಟು ಅದು. ವೀರ ವಿದ್ಯಾಧರ ವಿಹಾರಭೂಮಿ. ಇಂಥ ಆಕಾಶಮಾರ್ಗದಲ್ಲಿ ರೆಕ್ಕೆಗಳ ಬೆಟ್ಟದಹಾಗೆ ಗರುಡನಿಗೆ ಸಮ ಆದ ವೇಗದಿಂದ ನಿರಾಲಂಬ ಆದ ಆಂಜನೇಯ ಹಾರಿಹೋಗುತ್ತ ಇದ್ದ.

ಸಿಂಹಿಕೆ ಎಂಬವಳು ಒಬ್ಬ ರಾಕ್ಷಸಿ. ಕಾಮರೂಪಿಣಿ. ಹನುಮಂತನನ್ನು ನೋಡಿ ತಾನೂ ದೇಹವನ್ನು ದೊಡ್ಡದು ಆಗಿ ಬೆಳೆಸಿಕೊಂಡು ಹನುಮಂತನ ನೆರಳನ್ನು ಹಿಡಿದುಕೊಂಡಳು. 'ಬಹುಕಾಲ ಹಸಿದು ಇದ್ದೆ. ಈಗ ಒಳ್ಳೇ ಆಹಾರ ಸಿಕ್ಕಿತು. ದೊಡ್ಡ ಜಂತು. ಚೆನ್ನಾಗಿ ತಿನ್ನುತ್ತೇನೆ' ಎಂದುಕೊಂಡಳು. ಅವಳು ನೆರಳನ್ನು ಹಿಡಿದ ಕೂಡಲೇ ಹನುಮಂತನ ನಡೆ ನಿಂತಿತು. ಇದಿರು ಗಾಳಿಗೆ ತಲ್ಲಣಗೊಳ್ಳುವ ದೋಣಿಯಂತೆ ಹಠಾತ್ತು ಆಗಿ ತನ್ನ ಪರಾಕ್ರಮ ಎಲ್ಲವೂ ಉಡುಗಿಹೋದಂತೆ ಎನಿಸಿತು ಹನುಮಂತನಿಗೆ. ಮೇಲೆ ಕೆಳಗೆ ಪಕ್ಕ ಎಲ್ಲ ಕಡೆಯಲ್ಲೂ ನೋಡಿದ. ಸಮುದ್ರದಲ್ಲಿ ಮೇಲೆ ಎದ್ದು ನಿಂತ ದೊಡ್ಡ

ಭೂತ ಒಂದು ಕಾಣಿಸಿತು. ಅದರ ಮೋರೆ ಪೂರಾ ವಿಕಾರ. ನೆರಳನ್ನು ಹಿಡಿದು ತಿನ್ನುವ ಮಹಾವೀರ್ಯದ ಅದ್ಭುತ ಆಕಾರದ ಭೂತ ಒಂದು ಇದೆ ಸಮುದ್ರದಲ್ಲಿ ಎಂದು ಸುಗ್ರೀವ ಹೇಳಿದ್ದುದು ನೆನಪಿಗೆ ಬಂತು. ಅದೇ ಸರಿ ಎಂದುಕೊಂಡ. ಇವಳೇ ಸಿಂಹಿಕೆ ಎಂದು ನಿಶ್ಚಯಿಸಿದ.

ಬುದ್ಧಿಶಾಲಿ ಹನುಮಂತ. ಮಳೆಗಾಲದ ಮೇಘದಂತೆ ಮೈಯನ್ನು ದೊಡ್ಡದು ಆಗಿ ಬೆಳೆಸಿದ. ಇದನ್ನು ನೋಡಿ ಪಾತಾಳದ ಹಾಗೆ ಬಾಯಿ ತೆರೆದು ಮೋಡಗಳ ಗುಡುಗಿನಂತೆ ಅಬ್ಬರಿಸುತ್ತ ಹನುಮಂತನ ಮೇಲೆಬೀಳಲು ಓಡಿಬಂದಳು. ಅವನನ್ನು ನುಂಗುವಷ್ಟು ಅಗಲ ಅವಳ ಬಾಯಿ. ಹನುಮಂತ ನೋಡಿದ. ಅವಳ ಜೀವಸ್ಥಾನವನ್ನು ಕಂಡುಕೊಂಡ. ವಜ್ರದೇಹಿ ಹನುಮಂತ ತನ್ನ ಮೈಯನ್ನು ಸಣ್ಣದು ಆಗಿ ಮಾಡಿಕೊಂಡು ಆ ರಾಕ್ಷಸಿಯ ತೆರೆದ ಬಾಯಲ್ಲಿ ಬಿದ್ದ, ರಾಹುವಿನ ಬಾಯಿಗೆ ಸಿಕ್ಕ ಪೂರ್ಣಚಂದ್ರನ ಹಾಗೆ. ಮೊನಚು ಆದ ಉಗುರುಗಳಿಂದ ರಾಕ್ಷಸಿಯ ಜೀವಸ್ಥಾನವನ್ನು ಸೀಳಿ ಮನೋವೇಗದಿಂದ ಮೇಲಕ್ಕೆ ಹಾರಿದ ಹನುಮಂತ. ಎದೆ ಸೀಳಿಹೋಗಿ ಸಿಂಹಿಕೆ ಸತ್ತು ಸಮುದ್ರ ದಲ್ಲಿ ಬಿದ್ದಳು.

ಮಹಾಮತಿವಂತ ಹನುಮಂತ ಧೈರ್ಯಸಾಮರ್ಥ್ಯಗಳಿಂದ ಸೂಕ್ಷ್ಮ ದೃಷ್ಟಿಯ ಬಲದಿಂದ ಸಿಂಹಿಕೆಯನ್ನು ಕೊಂದ. ಮತ್ತೆ ತನ್ನ ದೇಹವನ್ನು ಬೆಳೆಸಿದ. ಆಕಾಶಮಾರ್ಗದಲ್ಲಿ ಓಡಾಡುವ ಸಮಸ್ತ ಭೂತಗಳೂ ಸಿಂಹಿಕೆ ಯನ್ನು ಕೊಲ್ಲಲಿಕ್ಕೇ ಬ್ರಹ್ಮ ಹುಟ್ಟಿಸಿದಾನೆ ಇವನನ್ನು ಎಂದುಕೊಂಡವು. "ವಾನರೋತ್ತಮ, ನೀನು ಮಾಡಿದ ಕೆಲಸ ಅತಿ ಭಯಂಕರ. ಮಹಾರಾಕ್ಷಸಿ ಒಬ್ಬಳನ್ನು ಕೊಂದೆ. ನಿನ್ನ ಕೆಲಸವನ್ನು ಸಾಧಿಸು. ನಿನಗೆ ಮಂಗಳ ಆಗಲಿ. ನಿನಗೆ ಇರುವ ಧೈರ್ಯ, ಸೂಕ್ಷ್ಮದೃಷ್ಟಿ, ಬುದ್ಧಿಶಕ್ತಿ, ಕಾರ್ಯಸಾಧನಾಸಾಮರ್ಥ್ಯ ಇರುವವರಿಗೆ ಯಾವಾಗಲೂ ಜಯವೇ" ಎಂದು ಕೊಂಡಾಡಿದವು.

ಈ ಗೌರವದ ನುಡಿಗಳನ್ನು ಕೇಳಿ ಪೂಜ್ಯ ಹನುಮಂತ ತನ್ನ ಕೆಲಸದ ಮೇಲೆ ತಾನು ಹೊರಟ ಗರುಡನ ಹಾಗೆ. ನೂರು ಯೋಜನದ ಆ ಸಮುದ್ರದ ಅತ್ತಕಡೆಯ ತೀರ ಹತ್ತಿರ ಬಂತು. ಕಣ್ಣು ಇಟ್ಟು ನೋಡಿದ ಹನುಮಂತ. ತೀರದಲ್ಲಿ ಅಡವಿಗಳ ಸಾಲು. ಬಗೆಬಗೆಯ ಗಿಡಮರಗಳಿಂದ ಒಪ್ಪುವ ಲಂಕಾ ದ್ವೀಪವನ್ನೂ ಅಲ್ಲಿ ಮಲಯಪರ್ವತದ ಮೇಲಿನ ತೋಟಗಳನ್ನೂ ಮೇಲಿನಿಂದಲೇ

ನೋಡಿದ. ಆ ಧೈರ್ಯಶಾಲಿ ಆ ಬುದ್ಧಿವಂತನಿಗೆ ಮುಂದೆ ಸಮುದ್ರತೀರವೂ ತೀರದ ಒದ್ದೆ ನೆಲವೂ ಅಲ್ಲಿ ಬೆಳೆದ ಮರಗಳೂ ಸಮುದ್ರದ ಒಳಕ್ಕೆ ಬಂದು ಬೀಳುತ್ತಿದ್ದ ಸಮುದ್ರರಾಜನ ಪತ್ನಿಯರು ಆದ ನದಿಗಳ ಮುಖಗಳೂ ಕಂಡವು.

ಹನುಮಂತ ಜಾಣ. ಯೋಚಿಸಿದ. 'ಮಹೋನ್ನತ ಆಕಾರದಿಂದ ಆಕಾಶದಲ್ಲಿ ಬರುತ್ತ ಇದೇನೆ. ಮಹಾವೇಗ ಬೇರೆ. ಇದನ್ನು ರಾಕ್ಷಸರು ನೋಡಿ ಕುತೂಹಲಪಟ್ಟಾರು.' ಕೂಡಲೇ ತನ್ನ ದೇಹವನ್ನು ಕಿರಿದು ಆಗಿ ಮಾಡಿಕೊಂಡ. ಅಜ್ಞಾನವನ್ನು ನೀಗಿದ ಆತ್ಮಜ್ಞಾನಿಯ ಹಾಗೆ ಮೊದಲಿನ ರೂಪವನ್ನು ತಳೆದ. ಬಲಿಯ ಕೊಬ್ಬನ್ನು ಅಡಗಿಸಲು ಮೂರು ಹೆಜ್ಜೆ ಹಾಕಲಿಕ್ಕೆ ತ್ರಿವಿಕ್ರಮಾವತಾರವನ್ನು ತಳೆದ ಮಹಾವಿಷ್ಣು ವಾಮನ ಆದಂತೆ ಹನುಮಂತ ತನ್ನ ಬೃಹದಾಕಾರವನ್ನು ಕುಗ್ಗಿಸಿದ. ಕಾಲಕ್ಕೆ ತಕ್ಕ ರೂಪವನ್ನು ಧರಿಸಿ ಇತರರಿಗೆ ಅಶಕ್ತ ಆದ ಕೆಲಸಗಳನ್ನು ಮಾಡಿ ಈಗ ತನ್ನ ನಿಜ ರೂಪದಿಂದ ಸಮುದ್ರತೀರದಲ್ಲಿ ಇಳಿದ ಹನುಮಂತ.

ಮುಂದೆ ತಾನು ಮಾಡಬೇಕಾದ ಕೆಲಸವನ್ನು ಆಲೋಚಿಸಿದ. ಮಹಾ ಪರ್ವತಶಿಖರದಷ್ಟು ದೃಢಧೈರ್ಯ ಅವನದು. ಲಂಬಪರ್ವತಶಿಖರಕ್ಕೆ ನೆಗೆದ. ಅಲ್ಲಿ ಕೇದಗೆಯ ಬನಗಳು, ತಾಳೆ ತೆಂಗು ಮುಂತಾದ ಮರಗಳು ಸಮೃದ್ಧಿ. ಅದರ ಶಿಖರಗಳೂ ವಿಚಿತ್ರ. ಅಲ್ಲಿ ಇದ್ದ ಮೃಗಗಳನ್ನೂ ಪಕ್ಷಿಗಳನ್ನೂ ಬೆದರಿಸಿದ. ಅಲ್ಲಿಂದ ತ್ರಿಕೂಟಪರ್ವತದ ಮೇಲೆ ಇದ್ದ ಲಂಕಾಪಟ್ಟಣವನ್ನು ನೋಡಿದ. ಲಂಕಾಪಟ್ಟಣದ ಸೊಬಗು ದೇವೇಂದ್ರನ ಅಮರಾವತಿಗೆ ಸಮ ಎಂದುಕೊಂಡ.

೨

ಯಾರೂ ದಾಟಲಾರದ ಆ ಮಹಾಸಮುದ್ರವನ್ನು ದಾಟಿದ ಹನುಮಂತ. ತ್ರಿಕೂಟಪರ್ವತದ ಮೇಲಿನ ಲಂಕಾಪಟ್ಟಣವನ್ನು ನೋಡಿದ. ಮನಸ್ಸು ಸ್ವಸ್ಥ ಆಯಿತು. ಅಲ್ಲಿ ಇದ್ದ ಗಿಡಗಳು ಅವನ ಮೈಮೇಲೆ ಹೂಮಳೆ ಕರೆದವು. ಹೂವಿನ ಅಭಿಷೇಕ ಆದಂತೆ ಇತ್ತು ಅವನ ಮೈ. ಒಂದೇ ನೆಗೆತಕ್ಕೆ ನೂರು ಗಾವುದ ಸಮುದ್ರವನ್ನು ದಾಟಿಬಂದರೂ ಸ್ವಲ್ಪವೂ ಬಳಲಲಿಲ್ಲ. ಒಂದು

ಸಿಟ್ಟುಸಿರನ್ನೂ ಬಿಡಲಿಲ್ಲ. ಇಂಥ ನೂರು ಗಾವುದ ಹಲವನ್ನು ದಾಟಬಲ್ಲೆ ನಾನು. ಇದು ಯಾವ ಲೆಕ್ಕ ಎಂದುಕೊಂಡ.

ವೀರರೊಳಗೆ ವೀರ. ವಾನರರಲ್ಲಿ ಉತ್ತಮ. ಅವರು ಎಲ್ಲರಲ್ಲೂ ಒಬ್ಬ ಹನುಮಂತನೇ ಎಲ್ಲರಿಗೂ ಅಸಾಧ್ಯ ಆದ ಸಮುದ್ರವನ್ನು ದಾಟಿ ಲಂಕೆಗೆ ಬಂದ. ಅಲ್ಲಿನ ಹಸಿರು ಹುಲ್ಲುನೆಲದಲ್ಲಿ ನಿಂತ. ಆ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನೂ ಬೆಟ್ಟಗುಡ್ಡಗಳನ್ನೂ ನೋಡುತ್ತ ಗಮಗಮಿಸುವ ಕಂಪುಬೀರುವ ತೋಟಗಳ ನಡುವೆ ನಡೆದ. ದಟ್ಟ ಆಗಿ ಮರಗಳು ಬೆಳೆದ ಬೆಟ್ಟದ ಶಿಖರಗಳನ್ನೂ ಎಲೆಗೆ ಒಂದು ಹೂ ಅರಳಿದ ತೋಟಗಳನ್ನೂ ದಾಟಿ ಲಂಬಪರ್ವತದ ಮೇಲೆ ಹೋಗಿ ನಿಂತ. ಸುತ್ತಲೂ ನೋಡಿದ. ಲಂಕಾಪಟ್ಟಣ ಕಂಡಿತು. ಅದರ ಸುತ್ತಲೂ ಉದ್ಯಾನವನ. ದೇವದಾರು ಕರ್ಣಿಕಾರ ಮರಗಳು ಇದ್ದವು. ಖರ್ಜೂರ ನಿಂಬೆ ಗಿರಿಮಲ್ಲಿಗೆ ತಾಳೆ ಹಿಪ್ಪಲಿಯ ಗಿಡಗಳು ಚೆನ್ನಾಗಿ ಹೂತು ಇದ್ದವು. ಕೇದಗೆ ಕಡವು ಬಾಳೆ ಬಂದುಗೆ ಕಣಿಗಿಲೆ ಸಾಲುಸಾಲು ಆಗಿ ಇದ್ದವು. ಹೂಗಳ ಭಾರಕ್ಕೆ ಕೆಲವು ಗಿಡ ಬಾಗಿದ್ದವು. ಕೆಲವು ಮೊಗ್ಗು ಒಡೆದು ಇದ್ದವು. ಹಕ್ಕಿಗಳು ಗುಂಪುಕಟ್ಟಿ ಗಿಡಗಳಲ್ಲಿ ಕುಳಿತು ಇವೆ. ಗಾಳಿಗೆ ತೂಗಾಡುತ್ತಿವೆ ಕೊಂಬೆಗಳು. ಕಲ್ಲು ಕಟ್ಟಿದ ಬಾವಿಗಳೂ ಬಗೆಬಗೆಯ ಕೊಳಗಳೂ ಇದ್ದವು. ಅವುಗಳಲ್ಲಿ ತಾವರೆ ಕನ್ನೈದಿಲೆ ಸಮೃದ್ಧಿ ಆಗಿ ಅರಳಿ ಇವೆ. ಹಂಸಕಾರಂಡವ ಪಕ್ಷಿಗಳು ಆಟ ಆಡುತ್ತ ಇವೆ. ಮನೋಹರ ಕ್ರೀಡಾಸ್ಥಾನಗಳೂ ರಮಣೀಯ ಉದ್ಯಾನಗಳೂ ಇವೆ.

ಲಂಕಾಪಟ್ಟಣ ಸುತ್ತಲೂ ಕಂದಕ. ಆದರೆ ತಾವರೆಹೂ ಕನ್ನೈದಿಲೆಹೂ ತುಂಬಾ ಇವೆ. ಪಟ್ಟಣದ ಪ್ರಾಕಾರ ಬಂಗಾರದಂತೆ ಹೊಳೆಯುತ್ತ ಇತ್ತು. ಸೀತಾದೇವಿಯನ್ನು ಕದ್ದುತಂದ ರಾವಣನಿಗೆ ರಾಮನ ದಂಡಯಾತ್ರೆಯ ಭಯ. ಸುತ್ತಲೂ ರಾಕ್ಷಸರ ಕಾವಲು ಇಟ್ಟು ಇದ್ದ. ಬಿಲ್ಲುಬಾಣ ಹಿಡಿದ ಮಹಾ ಭಯಂಕರರು ಅವರು. ಲಂಕಾಪಟ್ಟಣದ ಮನೆಗಳು ಶರತ್ಕಾಲದ ಮೋಡಗಳಂತೆ ಬಿಳುಪು. ಆಕಾಶದಲ್ಲಿ ಗ್ರಹಗಳ ಹಾಗೆ ಇವೆ. ಬೀದಿಯ ಎರಡೂ ಕಡೆ ಬೆಳ್ಳಗೆ ಹೊಳೆಯುವ ಎತ್ತರದ ಮನೆಗಳು. ಆ ಮನೆಗಳಿಗೆ ಹೊರ ಬಾಗಿಲು ಚಿನ್ನದ್ದು. ಆ ಬಾಗಿಲುಗಳ ಮೇಲೆ ಸೊಗಸು ಆದ ಕೆತ್ತನೆಯ ಕೆಲಸ. ಮನೆಗಳ ಮೇಲೆ ನೂರಾರು ಅಟ್ಟಣೆಗಳು, ಬಾವುಟಗಳು. ಮಂಗಳಕರ ಆದ

ಶುಭ್ರ ಭವನಗಳಿಂದ ತ್ರಿಕೂಟಾಚಲದ ಮೇಲೆ ಹೊಳೆಯುವ ಲಂಕಾಪಟ್ಟಣ ಸ್ವರ್ಗಲೋಕದ ಅಮರಾವತಿಯ ಹಾಗೆ, ಅಂತರಿಕ್ಷದಲ್ಲಿ ಕಟ್ಟಿದ ಪಟ್ಟಣದ ಹಾಗೆ ಕಾಣುತ್ತಿತ್ತು. ರಾವಣಾಸುರನಿಂದ ಪಾಲಿತ, ಮಯನಿರ್ಮಿತ ಆದ ಆ ಪಟ್ಟಣ ಆಕಾಶದಲ್ಲಿ ತೇಲುತ್ತಿದ್ದ ಹಾಗೆ ಇತ್ತು.

ಆ ಪಟ್ಟಣಕ್ಕೆ ಕೋಟೆಯ ಜಗಲಿಗಳೇ ಜಘನಗಳು, ಕಂದಕದ ನೀರೇ ಉಟ್ಟ ಸೀರೆ, ಕೋಟೆಯ ಮೇಲೆ ಏರಿಸಿದ ಶತಘ್ನಿಗಳೂ ಶೂಲಗಳೂ ತಲೆ ಗೂದಲು ತುರುಬು, ಕೋಟೆಯ ಬುರುಜುಗಳು ಕಿವಿಯ ಓಲೆ—ಹೀಗೆ ಲಂಕಾ ಪಟ್ಟಣ ಒಬ್ಬ ಚೆಲುವೆಯ ಹಾಗೆ ಕಂಡಿತು. ಮುಗಿಲನ್ನು ಮುಟ್ಟುವ ಕೈಲಾಸ ಪರ್ವತದ ಶಿಖರದ ಹಾಗೆ ಎತ್ತರ ಆದ ಉಪ್ಪರಿಗೆಮನೆಗಳಿಂದ ಆಕಾಶಕ್ಕೆ ಹಾರಿ ಹೋಗುವಂತೆ ಇತ್ತು ಪಟ್ಟಣ. ನಾಗರ ಭೋಗವತೀ ಪಟ್ಟಣದ ಹಾಗೆ. ಅದರ ಸೊಗಸು ಅದರ ವಿಸ್ತಾರ ಹೀಗೆ ಎಂದು ಊಹಿಸುವಂತೆ ಇರಲಿಲ್ಲ. ವಿಶ್ವಕರ್ಮ ಸಂಕಲ್ಪಬಲದಿಂದ ಕಟ್ಟಿದ ಊರು ಅದು.

ಹಿಂದೆ ಕುಬೇರನ ಊರು ಅದು. ಈಗ ರಾವಣಾಸುರನ ಕೈಯಲ್ಲಿ. ಭಾರಿ ಕೋರೆಹಲ್ಲಿನ ರಾಕ್ಷಸರು ಶೂಲ ಪಟ್ಟಸಗಳನ್ನು ಹಿಡಿದು ಕಾವಲು ಕಾಯುತ್ತ ಇದಾರೆ. ಗವಿಯನ್ನು ವಿಷದ ಹಾವುಗಳು ಕಾಯುವಂತೆ. ಈ ಸರ್ಪ ಕಾವಲು, ಪಟ್ಟಣವನ್ನು ಸುತ್ತುವರಿದ ಅಗಾಧಸಮುದ್ರ. ಇದರ ನಡುವೆ ಈ ಮಹಾಭಯಂಕರ ಶತ್ರು ರಾವಣಾಸುರ. ಹೇಗೆ ಮಾಡಬೇಕು? ಆಂಜನೇಯನಿಗೆ ಚಿಂತೆ ಆಯಿತು.

‘ನಮ್ಮ ವಾನರರು ಎಲ್ಲರೂ ಸಮುದ್ರವನ್ನು ದಾಟುವುದು ಹೇಗೆ? ದಾಟಬಂದರೂ ಪ್ರಯೋಜನ ಇಲ್ಲ. ಈ ಊರನ್ನು ಯುದ್ಧಮಾಡಿ ಗೆಲ್ಲಲು ಸಾಧ್ಯ ಇಲ್ಲ. ದೇವತೆಗಳಿಗೂ ಅಳವು ಅಲ್ಲ. ಬರಲು ದಾರಿ ಇಲ್ಲ ಇಲ್ಲಿಗೆ. ಹೇಗೋ ಬಂದರೂ ಆ ಮಹಾಬಾಹು ರಾಮ ಏನು ಮಾಡಬಲ್ಲ? ಈ ರಾಕ್ಷಸರೋ ಅತಿಮೂರ್ಖರು. ಸಾಮೋಪಾಯಕ್ಕೆ ಮಣಿಯರು. ದಾನಕ್ಕೆ ಆಸೆಪಡುವ ಹಾಗೆ ಇಲ್ಲ ಇವರ ಸ್ಥಿತಿ. ಭೇದೋಪಾಯ ಮಾಡಲು ಇಲ್ಲಿ ಸಂದೇ ಇಲ್ಲ. ಯುದ್ಧಮಾಡೋಣ ಎಂದರೆ ಮಹಾಬಲಿಷ್ಠರು. ಅದಕ್ಕೂ ಅಂಜರು. ಇಲ್ಲಿಗೆ ಬರಬಲ್ಲ ವಾನರರು ಆದರೂ ಎಷ್ಟು ಮಂದಿ? ವಾಲಿಯ ಮಗ ಅಂಗದ,

ವಾನರರ ಅಧಿಪತಿ ಸುಗ್ರೀವ, ನೀಲ, ನಾನು—ನಾಲ್ವರೇ. ಉಳಿದು ಬರಲಾರರು.

'ಇದು ಎಲ್ಲಾ ಇರಲಿ. ಮೊದಲು ಸೀತಾದೇವಿ ಬದುಕಿ ಇದಾಳೋ ಇಲ್ಲವೋ ನೋಡಬೇಡವೆ? ಒಂದುವೇಳೆ ಆಕೆ ಬದುಕಿ ಇದ್ದರೆ ಮೊದಲು ಆಕೆಯನ್ನು ಕಾಣಬೇಕು. ಆಮೇಲೆ ಉಳಿದ ವಿಚಾರ." ಅಲ್ಲಿ ನಿಂತೇ ಹನುಮಂತ ಆಲೋಚಿಸಿದ. ಹನುಮಂತ ಶ್ರೀರಾಮನ ಅಭ್ಯುದಯ ಬಯಸಿ ಮತ್ತೆ ಯೋಚಿಸಿದ ಆ ಲಂಬಪರ್ವತದಲ್ಲಿ ನಿಂತೇ.

'ಕಾವಲುಗಾರರು ಎಲ್ಲರೂ ಕ್ರೂರ ರಾಕ್ಷಸರು. ಬಲಾಢ್ಯರು. ಮಹಾ ಪರಾಕ್ರಮಿಗಳು. ವೀರ್ಯವಂತರು. ಇವರನ್ನು ವಂಚಿಸಿಯೇ ನಾನು ಒಳಗೆ ಹೋಗಬೇಕು. ಈ ರೂಪದಿಂದ ಸಾಧ್ಯ ಅಲ್ಲ. ಕತ್ತಲೆ ಆದಮೇಲೆ ಊರಿನ ಒಳಗೆ ಹೋಗಿ ಸೀತಾದೇವಿ ಎಲ್ಲಿದಾಳೋ ಹುಡುಕಬೇಕು. ಕಂಡೂ ಕಾಣದ ರೂಪದಿಂದ ಪ್ರವೇಶಿಸಬೇಕು. ಇಲ್ಲದೆ ಇದ್ದರೆ ಈ ಮಹತ್ಕಾರ್ಯವನ್ನು ಸಾಧಿಸಲು ಆಗುವುದು ಇಲ್ಲ. ರಾತ್ರಿಯ ಹೊತ್ತೇ ಇದಕ್ಕೆ ಸರಿ" ಎಂದು ನಿಶ್ಚಯಿಸಿಕೊಂಡ. ಲಂಕಾಪಟ್ಟಣ ದೇವದಾನವರಿಗೂ ಪ್ರವೇಶಿಸಲು ಅಸಾಧ್ಯ. ಇದನ್ನು ತಿಳಿದು ಹನುಮಂತ ಬಾರಿಬಾರಿಗೂ ನಿಟ್ಟುಸಿರು ಬಿಟ್ಟ. ಏನು ಮಾಡಬೇಕು ಮುಂದೆ? ರಾವಣಾಸುರ ಬಹಳ ದುಷ್ಟ. ಅವನ ಕಣ್ಣಿಗೆ ಬೀಳದೆಯೆ ಸೀತಾದೇವಿಯನ್ನು ಹುಡುಕಬೇಕು. ಯಾರೂ ಇಲ್ಲದಾಗ ಸೀತಾದೇವಿ ಒಬ್ಬಳೇ ಇದ್ದಾಗ ಹೋಗಿ ನೋಡಿ ಬರಬೇಕು. ಹೇಗೆ ಸಾಧ್ಯ? ರಾಮನ ಕೆಲಸ ಕೆಡಬಾರದು. ಕೆಡದಂತೆ ಕೆಲಸ ಮಾಡಬೇಕು. ದೂತ ಅವಿವೇಕಿ ಆದರೆ ಕೈಗೂಡಿಬರುವ ಕೆಲಸವೂ ಕೆಡುತ್ತದೆ. ಸೂರ್ಯ ಹುಟ್ಟಿದರೆ ಕತ್ತಲೆ ಮಾಯ ಆಗುವಂತೆ. ಕಾರ್ಯ ಅಕಾರ್ಯವನ್ನು ನಿಶ್ಚಯಮಾಡಿ ಹೇಳಿದರೂ ತಾವೇ ಪಂಡಿತರು ಎಂದುಕೊಳ್ಳುವ ದೂತರು ಕೆಲಸವನ್ನು ಕೆಡಿಸುತ್ತಾರೆ. ಹೇಗೆ ಮಾಡಿದರೆ ರಾಮಕಾರ್ಯ ಕೆಡದೋ, ನಾನು ಈ ಅಪಾರಸಮುದ್ರವನ್ನು ಹಾರಿಬಂದದ್ದು ವ್ಯರ್ಥ ಆಗದೋ, ನನಗೆ ಅವಿವೇಕಿ ಎಂಬ ಕೆಟ್ಟ ಹೆಸರು ಬಾರದೋ, ಈ ಕೆಲಸ ಕೈಗೂಡೀತೋ ಹಾಗೆ ಮಾಡಬೇಕು ನಾನು. ನಾನು ರಾಕ್ಷಸರ ಕಣ್ಣಿಗೆ ಬಿದ್ದೆನೋ ರಾವಣಾಸುರನನ್ನು ಕೊಲ್ಲಬೇಕು ಎಂಬ ರಾಮನ ಕೆಲಸ ಎಲ್ಲವೂ ಕೆಡುತ್ತದೆ. ರಾಕ್ಷಸರೂಪವನ್ನು ಧರಿಸಿದರೆ ಅವನ ಕೈಗೆ ಸಿಗದೆ ತಪ್ಪದು. ಅವರಿಗೆ ತಿಳಿಯದಂತೆ ನಾನು ಕೆಲಸ

ಮಾಡಬೇಕು. ಯಾವ ರೂಪದಿಂದ ಹೋದರೂ ಕಷ್ಟ. ಗಾಳಿಯೂ ಕೂಡ ಈ ರಾಕ್ಷಸರಿಗೆ ತಿಳಿಯದಂತೆ ಈ ಪಟ್ಟಣವನ್ನು ಪ್ರವೇಶಿಸುವುದು ಕಷ್ಟ. ಈ ಬಲಿಷ್ಠ ರಾಕ್ಷಸರಿಗೆ ತಿಳಿಯದುದೇ ಇಲ್ಲ ಎಂದು ಕಾಣುತ್ತದೆ. ನನ್ನ ನಿಜರೂಪ ದಿಂದ ನಾನು ಊರಿನ ಒಳಗೆ ಹೋದರೆ ನನಗೆ ನಾಶನವೇ ಗತಿ. ಆದ್ದರಿಂದ ರಾಮಕಾರ್ಯಸಾಧನೆಗೋಸುಗ ನಾನು ಸಣ್ಣ ರೂಪವನ್ನು ಧರಿಸಬೇಕು. ಕತ್ತಲೆ ಆದಮೇಲೇ ಊರನ್ನು ಪ್ರವೇಶ ಮಾಡಬೇಕು. ಯಾರಿಗೂ ಪ್ರವೇಶಿಸಲು ಸಾಧ್ಯ ಅಲ್ಲದ ಈ ಪಟ್ಟಣವನ್ನು ಪ್ರವೇಶಿಸಲು ರಾತ್ರಿಯ ಹೊತ್ತೇ ಸರಿ. ಎಲ್ಲಾ ಮನೆಗಳಲ್ಲೂ ಹುಡುಕಿ ಸೀತಾದೇವಿಯನ್ನು ಕಾಣಲು ಅದೇ ಸರಿ' ಎಂದು ಯೋಚಿಸಿದ ಕಪಿವರ ಹನುಮಂತ.

ಸೀತಾದೇವಿಯನ್ನು ನೋಡಲು ಆತುರ. ಆದರೆ ಹೊತ್ತು ಮುಳುಗಿ ಕತ್ತಲೆ ಆಗುವವರೆಗೂ ಕಾಯಬೇಕು.

ಸಂಜೆ ಆಯಿತು. ಕತ್ತಲೆ ಆಯಿತು. ಹನುಮಂತ ತನ್ನ ಮೈಯನ್ನು ಕಿರಿದು ಮಾಡಿದ. ಕೇವಲ ಒಂದು ಬೆಕ್ಕಿನ ಗಾತ್ರದವನು ಆದ. ಅತ್ಯಾಶ್ಚರ್ಯಕರ ಆ ರೂಪ. ಕತ್ತಲೆ ಕವಿಯುತ್ತಲೇ ಆ ಮಹಾಪರಾಕ್ರಮಶಾಲಿ ಲಂಬಪರ್ವತದ ಶಿಖರದಿಂದ ನೆಗೆದ. ರಮಣೀಯ ಲಂಕಾಪಟ್ಟಣಕ್ಕೆ ಬಂದ.

ವಿಸ್ತಾರ ಆದ ರಾಜಮಾರ್ಗಗಳು. ಏಳು ಎಂಟು ಅಂತಸ್ತಿನ ಉಪ್ಪರಿಗೆ ಮನೆಗಳ ಸಾಲು. ಮನೆಯ ಕಂಬಗಳು ಬೆಳ್ಳಿ ಬಂಗಾರದವು. ಚಿನ್ನದ ಗವಾಕ್ಷಗಳು. ನೆಲಗಟ್ಟು ಸ್ಫಟಿಕಮಯ, ಸುವರ್ಣಮಯ. ವೈಡೂರ್ಯಗಳನ್ನು ಸೇರಿಸಿ ಮಾಡಿದ ಕೆತ್ತನೆ ಕೆಲಸ. ಮುತ್ತಿನ ಕುಚ್ಚುಗಳ ಅಲಂಕಾರ. ಚಿತ್ರ ವಿಚಿತ್ರ ಆದ ಚಿನ್ನದ ತೋರಣ. ಬಂಗಾರದ ಬಾಗಿಲು. ಇಂಥ ಮನೆಗಳು. ಆ ಥಳಥಳ ಕಾಂತಿ, ಆ ಅತಿಶಯ ಶೋಭೆ. ಎಷ್ಟು ಅಂದ ಲಂಕಾಪಟ್ಟಣ. ಗಂಧರ್ವನಗರದ ಹಾಗೆ.

ಈ ಪಟ್ಟಣವನ್ನು ಹೇಗೆ ಪ್ರವೇಶಿಸಬೇಕೋ ಹನುಮಂತನಿಗೆ ಸ್ವಲ್ಪ ಕಕ್ಕಾಬಿಕ್ಕಿ ಆಯಿತು. ಆದರೆ ಸೀತಾದೇವಿಯನ್ನು ಕಂಡೇನು ಎಂಬ ಆಸೆಯೂ ಇತ್ತು.

ಆಗ ಹನುಮಂತನಿಗೆ ಸಹಾಯ ಮಾಡಲು ಬಂದಂತೆ ಚಂದ್ರ ಹುಟ್ಟಿ ಬಂದ. ತನ್ನ ಸಾವಿರಾರು ಕಿರಣಗಳ ಶುಭ್ರಕಾಂತಿಯನ್ನು ಬೀರುತ್ತ ನಕ್ಷತ್ರಗಳ

ಗುಂಪಿನ ನಡುವೆ ಹೊಳೆಯುತ್ತ ಬಂದ. ಚಂದ್ರನ ಬೆಳುದಿಂಗಳು ಎಲ್ಲೆಲ್ಲೂ ಹರಡಿತು. ಹಾಲಿನಂತೆ ತಾವರೆಯ ದಂಟಿನಂತೆ ಸ್ವಚ್ಛ ಬಿಳಿಯ ಬಣ್ಣ, ಶಂಖದ ಕಾಂತಿ. ಮುಗಿಲಿನ ಕೊಳದಲ್ಲಿ ಈಸುತ್ತ ಆಟ ಆಡುತ್ತ ಇದ್ದ ಹಂಸದ ಹಾಗೆ ಕಂಡ ಚಂದ್ರ.

೩

ಆಕಾಶದಲ್ಲಿ ತೂಗಾಡುವ ಮೋಡದ ಹಾಗೆ ಇತ್ತು ಲಂಬಪರ್ವತದ ಶಿಖರ. ಅಲ್ಲಿಂದ ಲಂಕಾಪಟ್ಟಣಕ್ಕೆ ಆ ರಾತ್ರಿಯೇ ಹೊರಟ ಮಹಾವೀರ್ಯವಂತ ಬುದ್ಧಿವಂತ ಆದ ಹನುಮಂತ. ರಾವಣಪಾಲಿತ ಆದ ಆ ಪಟ್ಟಣದ ರಮ್ಯ ಉದ್ಯಾನಗಳನ್ನೂ ಸ್ವಚ್ಛ ಜಲದ ಸರೋವರಗಳನ್ನೂ ನೋಡುತ್ತ ಪ್ರಾಕಾರದ ಬಳಿಗೆ ಬಂದ.

ಎಲ್ಲಿ ನೋಡಿದರೂ ಶರತ್ಕಾಲದ ಮೇಘಗಳ ಹಾಗೆ ಬೆಳ್ಳಗೆ ಕಂಗೊಳಿಸುವ ಉಪ್ಪರಿಗೆ ಮನೆಗಳು. ಸದಾ ಜನರ ಕೋಲಾಹಲ. ಸಮುದ್ರಘೋಷದ ಹಾಗೆ ಅವರ ಕಲಕಲಧ್ವನಿ. ಸಮುದ್ರದ ತಂಗಾಳಿ ಎಲ್ಲೆಲ್ಲೂ ಬೀಸುತ್ತ ಇದೆ. ಮನೆಗಳಿಗೆ ಸುಣ್ಣ ಬಳಿದು ಬೆಳ್ಳಗೆ ಮೋಡಗಳ ಹಾಗೆ ಇವೆ. ಊರುಬಾಗಿಲಿಗೆ ಮದಗಜಗಳನ್ನು ಕಟ್ಟಿ ಇದಾರೆ. ಗಾಳಿಗೆ ಕಿರುಗಂಟೆಗಳು ಸದ್ದು ಮಾಡುತ್ತ ಇವೆ; ಬಾವುಟ ಹಾರಾಡುತ್ತ ಇವೆ. ಪೌಳಿಗೋಡೆ ಚಿನ್ನದ ಕಾಂತಿಯಿಂದ ಧಗಧಗಿಸುತ್ತಿದೆ. ಪಾತಾಳಲೋಕದ ಭೋಗವತೀ ನಗರದಂತೆ ಸ್ವರ್ಗಲೋಕದ ಅಮರಾವತಿಯಂತೆ ಹೊಳೆಯುತ್ತ ಇದೆ ಪಟ್ಟಣ. ಹನುಮಂತ ಸುತ್ತಲೂ ನೋಡಿದ. ಬಹಳ ಆಶ್ಚರ್ಯ ಆಯಿತು. ಅಲ್ಲಲ್ಲಿ ಬಂಗಾರದ ಜಗಲಿಗಳು. ಅವಕ್ಕೆ ವೈಡೂರ್ಯಗಳ ಕೆತ್ತನೆ. ನೆಲಗಟ್ಟು ಸ್ಫಟಿಕ ಶಿಲೆಯದು. ವಜ್ರ ವೈಡೂರ್ಯ ಮುತ್ತುರತ್ನಗಳ ಅಲಂಕಾರ ಅದಕ್ಕೆ. ಮೇಲಿನ ಛಾವಣಿ ಎಲ್ಲವೂ ಬೆಳ್ಳಿಯದು. ಅದರಲ್ಲಿ ಚಿತ್ರದ ಕೆಲಸ. ಈ ಜಗಲಿಗಳಿಗೆ ವೈಡೂರ್ಯದ ಮೆಟ್ಟಿಲು. ಮೆಟ್ಟಿಲ ಮುಂದೆ ಸ್ಫಟಿಕದ ಮರಳಿನ ಅಂಗಳ. ಮನೆಗಳು ಎಲ್ಲವೂ ಚಚ್ಚೌಕ. ಅಂದದ ತೊಟ್ಟಿಯ ಮನೆಗಳು. ಆಕಾಶಕ್ಕೇ ಹಾರಿಹೋಗುತ್ತ ಇವೆಯೋ ಎನ್ನುವಂಥ ಮಹೋನ್ನತ ರಾಜಭವನಗಳು ನಡುನಡುವೆ. ಅಲ್ಲಿ ಕ್ರೌಂಚಪಕ್ಷಿಗಳ ಕೂಗು, ನವಿಲುಗಳ ಕೇಕಾರವ, ರಾಜಹಂಸಗಳ ಕಲಕಲಧ್ವನಿ ಕೇಳಿಸುತ್ತ

ಇದೆ. ಒಂದು ಕಡೆಯಲ್ಲಿ ಮಂಗಳವಾದ್ಯ. ಇನ್ನೊಂದು ಕಡೆ ಹೆಂಗಸರ ಒಡವೆಗಳ ಸದ್ದು. ಇಂದ್ರನಗರಿಯೇ ಬಂದು ಇದೆಯೋ ಏನೋ ಅಲ್ಲಿಗೆ ಎನ್ನುವ ಹಾಗೆ ಇತ್ತು.

ಮಹಾವೀರ ಹನುಮಂತ ಲಂಕಾಪಟ್ಟಣದ ಸೊಬಗನ್ನು ನೋಡಿದ. ರಾಕ್ಷಸರಾಜನ ಆ ಪಟ್ಟಣ ಸರ್ವಸೌಭಾಗ್ಯಯುಕ್ತ, ಸರ್ವೋತ್ತಮ. ಅಲ್ಲಿ ಇದ್ದ ಆಯುಧಪಾಣಿ ಕಾವಲುಗಾರರನ್ನು ನೋಡಿದ. ಬಹಳ ಸಂತೋಷ ಆಯಿತು. 'ಎಂಥ ಬಲಶಾಲಿಗಳು ಆದರೂ ಈ ಪಟ್ಟಣಕ್ಕೆ ನುಗ್ಗಿಬರಲಾರರು. ವಾನರ ಪ್ರಮುಖರು ಕುಮುದ ಅಂಗದ ಸುಷೇಣ ಮೈಂದ ದ್ವಿವಿದ ಈ ಪಟ್ಟಣವನ್ನು ಗೆಲ್ಲಬಲ್ಲರು. ಸೂರ್ಯಪುತ್ರ ಸುಗ್ರೀವ ಕುಶಪರ್ವ ಋಕ್ಷಕೇತು ನಾಲರೂ ಗೆಲ್ಲಬಲ್ಲರು. ನಾನೂ ಸುಲಭ ಆಗಿ ಜಯಿಸಬಲ್ಲೆ. ಉಳಿದವರಿಗೆ ಅಸಾಧ್ಯ' ಎಂದು ಯೋಚಿಸಿದ. ರಾಮಲಕ್ಷ್ಮಣರ ಪರಾಕ್ರಮವನ್ನು ನೆನೆದ. ಅವರ ಸಾಮರ್ಥ್ಯವನ್ನು ನೆನೆದು ಹಿಗ್ಗಿ ಹೀರೇಕಾಯಿ ಆದ.

ಮತ್ತೆ ಆ ಪಟ್ಟಣವನ್ನು ಕಣ್ಣು ಇಟ್ಟು ನೋಡಿದ. ಪಟ್ಟಣ ಒಬ್ಬ ಸುಂದರ ಸ್ತ್ರೀಯ ಹಾಗೆ ಕಂಡಿತು. ರತ್ನರಾಶಿಗಳೇ ಆ ಹೆಂಗಸಿನ ಸೀರೆ. ಗೋಶಾಲೆಗಳೇ ಕಿವಿಯ ಓಲೆ. ಯಂತ್ರಶಾಲೆಗಳೇ ಅವಳ ಸ್ತನಗಳು. ಹೀಗೆ ಸರ್ವಾಭರಣಭೂಷಿತೆ ಸೀಮಂತಿನಿಯ ಹಾಗೆ ಇತ್ತು ಲಂಕೆ. ದೊಡ್ಡ ದೊಡ್ಡ ಮನೆಗಳಲ್ಲಿ ಪ್ರಕಾಶಮಾನ ಆಗಿ ಬೆಳಗುತ್ತ ಇದ್ದ ಶುಭ್ರದೀಪಕಾಂತಿ ಅಲ್ಲಿ ಕತ್ತಲೆಯೆ ಕವಿಯದಂತೆ ಮಾಡಿತ್ತು.

ಊರಿನ ಒಳಗೆ ಹೋಗುತ್ತ ಇದ್ದ ಹನುಮಂತನನ್ನು ಲಂಕಾಧಿದೇವತೆ ನೋಡಿದಳು. ವಿಕಾರ ಆದ ಭಯಂಕರಮುಖದಿಂದ ಗಟ್ಟಿ ಆಗಿ ಅಬ್ಬರಿಸುತ್ತ ಹನುಮಂತನನ್ನು ಅಡ್ಡಗಟ್ಟಿದಳು. "ಯಾರೋ ನೀನು? ಕಾಡಿನ ಕಪಿ. ನಿನಗೆ ಇಲ್ಲಿ ಏನು ಕೆಲಸ? ಏಕೆ ಬಂದೆಯೋ ಇಲ್ಲಿಗೆ ನಿಜ ಆಗಿ ಹೇಳು. ಈಗಲೇ ನಿನ್ನನ್ನು ಕೊಂದುಬಿಡುತ್ತೇನೆ. ರಾವಣಾಸುರನ ದಂಡು ಲಂಕೆಯನ್ನು ಸುತ್ತಲೂ ಕಾಯುತ್ತ ಇದೆ. ಲಂಕೆಯನ್ನು ಹೊಗಲು ನಿನಗೆ ಎಂದಿಗೂ ಸಾಧ್ಯ ಇಲ್ಲ. ಹೇಳು, ಏಕೆ ಬಂದೆ ನೀನು?" ಎಂದು ಕೂಗಿದಳು.

ತನ್ನ ಇದಿರಿಗೆ ನಿಂತು ಹೀಗೆ ಅಬ್ಬರಿಸುತ್ತ ಇದ್ದ ಲಂಕಿಣಿಯನ್ನು ನೋಡಿದ ಆಂಜನೇಯ. "ನೀನು ಕೇಳಿದುದನ್ನು ಎಲ್ಲಾ ಯಥಾರ್ಥ ಆಗಿ

ತಿಳಿಸುತ್ತೇನೆ. ಆದರೆ ಮೊದಲು ನೀನು ಯಾರೋ ಹೇಳು. ನಿನ್ನ ಮೋರೆ ವಿಕಾರ ಆಗಿ ಇದೆ. ನಿನ್ನ ಕಣ್ಣು ಮತ್ತೂ ವಿಕಾರ. ನಿನ್ನ ಭಯಂಕರ ರೂಪದಿಂದ ಈ ಬಾಗಿಲಲ್ಲಿ ಏಕೆ ನಿಂತು ಇದೀಯೆ? ನನ್ನನ್ನು ಏಕೆ ತಡೆದೆ? ಹೀಗೆ ಏಕೆ ಹೆದರಿಸುತ್ತೀಯೆ?" ಎಂದು ಕೇಳಿದ.

ಲಂಕಿಣಿ ಕಾಮರೂಪಿಣಿ. ಅವಳಿಗೆ ಸಿಟ್ಟು ಬಂತು. ಬಹಳ ಗಡುಸು ಆಗಿ ಹೇಳಿದಳು. "ಏ ಕಪಿ, ಮಹಾಪರಾಕ್ರಮಶಾಲಿ ರಾವಣಾಸುರ ಇಲ್ಲಿನ ದೊರೆ. ಆತನ ಅಪ್ಪಣೆಯಂತೆ ನಾನು ಈ ಪಟ್ಟಣವನ್ನು ಕಾಯುತ್ತ ಇದೇನೆ. ನನ್ನನ್ನು ಇದಿರಿಸುವವರು ಯಾರೂ ಇಲ್ಲ. ನನ್ನನ್ನು ತಿರಸ್ಕರಿಸಿ ನೀನು ಈ ಪಟ್ಟಣವನ್ನು ಪ್ರವೇಶಿಸುತ್ತೀಯಾ? ಸಾಧ್ಯ ಇಲ್ಲ. ಈಗಲೇ ನನ್ನ ಕೈಯಲ್ಲಿ ಪ್ರಾಣ ಬಿಟ್ಟು ದೀರ್ಘನಿದ್ರೆ ಹೋಗುತ್ತೀಯೆ. ನಾನು ಯಾರು ಎಂದು ತಿಳಿದೆ, ಕೋತಿ? ನಾನು ಲಂಕಾಧಿದೇವತೆ. ಇಷ್ಟು ನನ್ನ ಸಮಾಚಾರ. ನಿನ್ನದು ಏನು ಹೇಳು" ಎಂದಳು.

ಹನುಮಂತ ಸ್ವಲ್ಪವೂ ಭಯಪಡಲಿಲ್ಲ. ಯುದ್ಧಕ್ಕೆ ಸಿದ್ಧ ಆದ. ಬೆಟ್ಟದ ಹಾಗೆ ಅವಳ ಮುಂದೆ ಅಚಲ ಆಗಿ ನಿಂತ. ಬುದ್ಧಿಯಲ್ಲಿ ಪರಾಕ್ರಮದಲ್ಲಿ ಹನುಮಂತನಿಗೆ ಸಮಾನರು ಇಲ್ಲ. "ಲಂಕಿಣಿ, ಲಂಕಾಪಟ್ಟಣವನ್ನು ನೋಡಿ ಹೋಗೋಣ ಎಂದು ಬಂದೆ ನಾನು. ಉಪ್ಪರಿಗೆ ಮನೆಗಳು, ಕೋಟೆ, ಕೋಟೆಯ ಬಾಗಿಲು, ಬುರುಜು ಬಹಳ ಸೊಗಸು ಆಗಿ ಇವೆ. ಇಲ್ಲಿ ಇರುವ ತೋಟಗಳನ್ನೂ ಹೂದೋಟಗಳನ್ನೂ ನೋಡಿ ಹೋಗುತ್ತೇನೆ" ಎಂದ.

ಲಂಕಿಣಿ ಇನ್ನೂ ಗಡುಸು ಆಗಿ ಹೇಳಿದಳು: "ವಾನರ, ನಿನಗೆ ಬುದ್ಧಿ ಕೆಟ್ಟು ಇದೆ. ನಾನು ಇಲ್ಲಿ ಇರುವಾಗ ನನ್ನನ್ನು ಗೆಲ್ಲದೆ ರಾವಣರಕ್ಷಿತ ಆದ ಈ ಪಟ್ಟಣದ ಒಳಕ್ಕೆ ನೀನು ಹೋಗಲು ಸಾಧ್ಯ ಇಲ್ಲ."

ಹನುಮಂತ ಮೃದು ಆಗಿಯೇ ಮತ್ತೆ ಹೇಳಿದ: "ಭದ್ರೆ, ಒಂದು ಸಲ ಪಟ್ಟಣವನ್ನು ಸುತ್ತಾಡಿ ನೋಡಿ ಬರುತ್ತೇನೆ. ಆಮೇಲೆ ಬಂದ ದಾರಿ ಹಿಡಿದು ಹೋಗುತ್ತೇನೆ."

ಏನು ಎಂದು ಭಯಂಕರ ಆಗಿ ಕೂಗಿದಳು ಲಂಕಿಣಿ. ಕುಪಿತಳು ಆಗಿ ಮುಂದೆ ಬಂದಳು. ಕೈಚಾಚಿ ಹನುಮಂತನನ್ನು ಫಟಾರ್ ಎಂದು ಹೊಡೆದಳು. ಗಟ್ಟಿ ಆಗಿಯೆ ಬಿತ್ತು ಏಟು.

ಹನುಮಂತನಿಗೆ ಸಿಟ್ಟು ಬಂತು. ಎಡಗೈಯ ಬೆರಳನ್ನು ಸೇರಿಸಿ ಮುಷ್ಟಿ ಹಿಡಿದ. ಗಟ್ಟಿ ಆಗಿ ಗರ್ಜಿಸಿದ. ಮುಷ್ಟಿಯಿಂದ ಲಂಕಿಣಿಯನ್ನು ಹೊಡೆದ. ಹೆಂಗಸನ್ನು ಕೊಲ್ಲಬಾರದು ಎಂದು ಸಿಟ್ಟನ್ನು ತಗ್ಗಿಸಿದ. ಆದರೆ ಆ ಏಟಿಗೇ ಲಂಕಿಣಿ ತಡೆದುಕೊಳ್ಳಲಿಲ್ಲ. ಅವಳಿಗೆ ಜಂಘಾಬಲ ತಪ್ಪಿತು. ತನ್ನ ವಿಕಾರದ ಬಾಯಿಂದ ರಕ್ತ ಸುರಿಸುತ್ತ ಕೆಳಗೆ ಬಿದ್ದಳು. ಹನುಮಂತ ತೇಜೋವಂತ, ಮಹಾಪ್ರಾಜ್ಞ. ಹೆಂಗಸು ಎಂದು ಕನಿಕರಿಸಿದ. ಕೊಲ್ಲಲಿಲ್ಲ.

ಅಷ್ಟಕ್ಕೇ ಲಂಕಿಣಿಯ ಕೊಬ್ಬು ಅಡಗಿತು. ಹನುಮಂತನನ್ನು ವಿನಯದಿಂದ ಬೇಡಿಕೊಂಡಳು. ಗದ್ಗದಕಂಠದಿಂದ "ಮಹಾಬಾಹು, ವಾನರೋತ್ತಮ, ಪ್ರಸನ್ನ ಆಗು. ನನ್ನನ್ನು ಕಾಪಾಡು. ಹೆಂಗಸನ್ನು ಕೊಲ್ಲಬಾರದು ಎಂಬ ನಿಯಮಕ್ಕೆ ತಪ್ಪಿನಡೆಯರು ಬಲಿಷ್ಠರು, ಧೀರರು. ನೀನು ನನ್ನನ್ನು ಕಾಪಾಡು. ನಾನು ಲಂಕಾಧಿದೇವತೆ. ಯಾರೂ ನನ್ನನ್ನು ಜಯಿಸಲಾರರು. ನೀನು ಅತುಲ ಬಲಶಾಲಿ, ಮಹಾಪರಾಕ್ರಮಿ. ನನ್ನನ್ನು ಗೆದ್ದೆ. ಈಗ ನಿನಗೆ ಒಂದು ಸಂಗತಿ ಹೇಳುತ್ತೇನೆ.

"ವಾನರಶ್ರೇಷ್ಠ, ಹಿಂದೆ ಬ್ರಹ್ಮದೇವ ನನಗೆ ಒಂದು ವರ ಕೊಟ್ಟ. ಲಂಕಾಧಿದೇವತೆ, ಒಬ್ಬ ವಾನರ ಬಂದು ನಿನ್ನನ್ನು ಗೆಲ್ಲುತ್ತಾನೆ. ಆಗ ನಿನ್ನ ರಾಕ್ಷಸರಿಗೆ ವಿನಾಶ ಖಂಡಿತ ಎಂದು ಬ್ರಹ್ಮದೇವ ಹೇಳಿದ. ಕಪಿಕುಂಜರ, ನೀನು ಇಲ್ಲಿಗೆ ಬಂದೆ. ನನಗೆ ದರ್ಶನ ಕೊಟ್ಟೆ. ನನ್ನನ್ನು ಗೆದ್ದೆ. ಬ್ರಹ್ಮದೇವ ಹೇಳಿದ ಕಾಲ ಒದಗಿಬಂತು. ಬ್ರಹ್ಮನ ಬಾಯಿಂದ ಬಂದ ಮಾತು ಎಂದಿಗೂ ಸುಳ್ಳು ಆಗದು. ರಾಕ್ಷಸರು ಇನ್ನು ನಾಶ ಆಗುತ್ತಾರೆ. ಸೀತಾದೇವಿಯನ್ನು ಕದ್ದು ತಂದು ದುಷ್ಟ ರಾವಣ ತಾನೂ ನಾಶ ಆಗುತ್ತಾನೆ, ಸಮಸ್ತ ರಾಕ್ಷಸರಿಗೂ ವಿನಾಶಕಾಲವನ್ನು ತಂದು ಇದ್ದಾನೆ.

"ಕಪಿಶ್ರೇಷ್ಠ, ಇನ್ನು ನೀನು ಈ ಪಟ್ಟಣದ ಒಳಕ್ಕೆ ಹೋಗು. ಏನು ಏನು ನೋಡಬೇಕೋ ನೋಡು. ಏನು ಏನು ಮಾಡಬೇಕೋ ಮಾಡು. ಸ್ವೇಚ್ಛೆ ಆಗಿ ಎಲ್ಲವನ್ನೂ ಮಾಡು. ಬ್ರಹ್ಮದೇವನ ಶಾಪ ಇದೆ ರಾವಣನ ಈ ಲಂಕಾಪಟ್ಟಣಕ್ಕೆ. ಅದು ತಪ್ಪದು. ಹೋಗು, ನಿನಗೆ ಶುಭ ಆಗಲಿ. ಯಾವ ಅಡ್ಡಿಯೂ ಇಲ್ಲದೆ ಜನಕನಂದಿನಿಯನ್ನು ಹುಡುಕು" ಎಂದಳು.

೪

ಕಾಮರೂಪಿಣಿ ಲಂಕೆಯನ್ನು ಸೋಲಿಸಿದ ಹನುಮಂತ. ಆಮೇಲೆ ಲಂಕಾಪಟ್ಟಣವನ್ನು ಪ್ರವೇಶಿಸಿದ. ಮಹಾದ್ವಾರದಿಂದ ಒಳಗೆ ಹೋಗಲಿಲ್ಲ. ಗೋಡೆಯನ್ನು ಹಾರಿ ಒಳಕ್ಕೆ ಇಳಿದ. ಸುಗ್ರೀವರಾಜನಿಗೆ ಹಿತ ಆಗಲಿ ಎಂದು ಶತ್ರುವನ್ನು ಮೆಟ್ಟುವ ರೀತಿಯಲ್ಲಿ ತನ್ನ ಎಡಗಾಲನ್ನು ಮೊದಲು ಊರಿದ.

ಆ ರಾತ್ರಿಯೇ ಲಂಕೆಯನ್ನು ಪ್ರವೇಶಿಸಿ ಧೀರ ಹನುಮಂತ ರಾಜಮಾರ್ಗದಲ್ಲಿ ನಡೆದ. ಎಲ್ಲಿ ನೋಡಿದರೂ ನೃತ್ಯಗೀತಧ್ವನಿ. ಎಲ್ಲಿ ಹೋದರೂ ರಾಕ್ಷಸರ ಸಂತೋಷದ ಅಟ್ಟಹಾಸಧ್ವನಿ. ಮನೆಗಳು ಎಲ್ಲವೂ ವಜ್ರಖಚಿತ. ಐರಾವತದ ಹಾಗೆ ಬೆಳ್ಳಗೆ ಹೊಳೆಯುತ್ತ ಇವೆ. ಮುಗಿಲಿನಲ್ಲಿ ಬಿಳಿಯ ಮೋಡಗಳಂತೆ ವಿಧವಿಧ ಆಕಾರಗಳ ಮನೆಗಳು. ಕೆಲವು ಪದ್ಮಗೃಹ, ಕೆಲವು ಸ್ವಸ್ತಿಕಗೃಹ, ಕೆಲವು ವರ್ಧಮಾನ ಮಾದರಿಯವು. ರಾಜಭವನಗಳೆಲ್ಲವೂ ಸೊಬಗು ಸುರಿಯುತ್ತ ಇದ್ದವು. ಪಟ್ಟಣ ಬಹಳ ರಮಣೀಯ.

ಚಿತ್ರವಿಚಿತ್ರ ಬಣ್ಣಗಳ ಹೂವಿನ ಸರಗಳನ್ನು ಹಾಕಿ ಸಿಂಗರಿಸಿ ಇದ್ದರು ಎಲ್ಲಾ ಮನೆಗಳನ್ನೂ. ಪರವಾ ಇಲ್ಲ, ಇಲ್ಲಿ ಸೀತಾದೇವಿಯನ್ನು ನೋಡಬಹುದು ಎಂದುಕೊಂಡ ಹನುಮಂತ. ಸಂತೋಷ ಆಯಿತು. ಬೇರೆ ಬೇರೆ ಬಗೆಯ ಬಣ್ಣದ ಬೇರೆ ಬೇರೆ ಬಗೆಯ ಆಕಾರದ ಮನೆಗಳು. ಆ ಮನೆಗಳಲ್ಲಿ ಮಧುಪಾನಮತ್ತರು ಆದ ಯುವತಿಯರು ಅಪ್ಸರಸ್ತ್ರೀಯರನ್ನು ಅನುಸರಿಸಿ ಹಾಡುತ್ತ ಇದ್ದರು. ಮಂದ್ರ ಮಧ್ಯಮ ತಾರ ಸ್ವರಗಳಲ್ಲಿ ಆ ಹಾಡು ಬಲು ಇಂಪು ಆಗಿತ್ತು. ಆ ಮನೆಗಳಲ್ಲಿ ಹೆಂಗಸರು ಉಪ್ಪರಿಗೆಗಳನ್ನು ಹತ್ತುವಾಗ ಇಳಿಯುವಾಗ ಆಗುವ ಕಾಲಿನ ಅಂದುಗೆಗಳ ಸದ್ದು, ಹೆಜ್ಜೆಯ ಸದ್ದು, ಒಡ್ಯಾಣದ ಕಿರುಗೆಜ್ಜೆಗಳ ಸದ್ದು ಕೇಳಿಬರುತ್ತ ಇತ್ತು. ಸಂಭ್ರಮದಿಂದ ಅವರು ಹೊಡೆಯುತ್ತ ಇದ್ದ ಚಪ್ಪಾಳೆಯ ಸದ್ದು, ಅವರ ಕೈಬಳೆಗಳ ಸದ್ದು ಕೇಳಿಸಿತು. ವೀರ ರಾಕ್ಷಸರು ಉತ್ಸಾಹದಿಂದ ತೋಳು ತೊಡೆ ತಟ್ಟಿಕೊಂಡು ಮಾಡುವ ಸಿಂಹನಾದವೂ ಕೇಳಿಸಿತು.

ರಾಜಮಾರ್ಗದಲ್ಲಿ ಹನುಮಂತ ಮುಂದೆ ಸಾಗಿದ. ಅಲ್ಲಲ್ಲಿ ವೇದ ಅಧ್ಯಯನಸಂಪನ್ನರು ಇದ್ದರು. ಕೆಲವರು ಮಂತ್ರಜಪ ಮಾಡುತ್ತ ಇದ್ದರು. ಉಚ್ಚಸ್ವರದಿಂದ ಪರಾಕು ಹೇಳುತ್ತ ರಾವಣನನ್ನು ಸ್ತೋತ್ರ ಮಾಡುತ್ತಿದ್ದರು

ಕೆಲವರು. ಮುಂದೆ ಹೋದರೆ ರಾಕ್ಷಸಸೇನೆಯ ದರ್ಶನ ಆಯಿತು. ದಂಡಿನ ನಡುವೆ ಕಾವಲು ಇದ್ದರು ರಾಕ್ಷಸಭಟರು. ಕೆಲವರು ಭಟರ ಕೈಯಲ್ಲಿ ಕೂಟ ಮುದ್ಗರ ಮುಸಲ ಆಯುಧ. ಕೆಲವರ ಕೈಯಲ್ಲಿ ಕತ್ತಿ. ಕೆಲವರು ಶತಘ್ನಿ ಶೂರರು. ಕೆಲವರ ಕೈಯಲ್ಲಿ ಪರಿಘ. ನೂರು ಮುಳ್ಳುಗಳ ಒನಕೆ ಕೆಲವರ ಕೈಯಲ್ಲಿ. ಕೆಲವರ ಕೈಯಲ್ಲಿ ಶೂಲಾಯುಧ. ಬಗೆಬಗೆಯ ಆಯುಧ ಭಟರ ಕೈಗಳಲ್ಲಿ. ಶಕ್ತಿ ಆಯುಧ ಕೆಲವರ ಕೈಯಲ್ಲಿ. ಪಟ್ಟಸ ವಜ್ರ ಬಲೆ ಹಗ್ಗ ಕೆಲವರ ಕೈಯಲ್ಲಿ. ಕೆಲವರ ಮೈಮೇಲೆ ಬಣ್ಣಬಣ್ಣದ ಚಿತ್ರವಿಚಿತ್ರ ಕವಚ ಗಳು. ಕೆಲವರು ಧ್ವಜದಂಡಗಳನ್ನು ಹೊತ್ತು ನಿಂತು ಇದ್ದರು. ಕೆಲವರು ಬಾವುಟ ಹಿಡಿದು ಇದ್ದರು.

ಇನ್ನೂ ಮುಂದೆ ಸಾಗಿದ ಹನುಮಂತ. ಅಲ್ಲಿ ಕೆಲವರು ಯಜ್ಞದೀಕ್ಷೆ ಯಲ್ಲಿ ಇದ್ದ ಸೋಮಯಾಜಿಗಳನ್ನು ನೋಡಿದ. ಕೆಲವರು ಜಟಾಧಾರಿಗಳು. ಕೆಲವರಿಗೆ ಮುಂಡೆ ಬೋಳಿಸಿ ಇತ್ತು. ಎತ್ತಿನ ತೊಗಲನ್ನು ಹೊದ್ದವರು ಕೆಲವರು. ಅಮಂಗಳ ಪರಿಹಾರಕ್ಕೆ ದರ್ಭೆ ಹಿಡಿದು ಮಂತ್ರಿಸುತ್ತ ಇದ್ದರು ಕೆಲವರು. ಶತ್ರುಗಳನ್ನು ಕೊಲ್ಲಲು ಕೆಲವರು ಅಗ್ನಿಕುಂಡಗಳಲ್ಲಿ ಹೋಮ ಮಾಡುತ್ತ ಇದ್ದರು. ಅಲ್ಲಲ್ಲಿ ವಕ್ರಮುಖರೂ ವಕ್ರಶರೀರಿಗಳೂ ಇದ್ದರು. ಕೆಲವರು ಒಕ್ಕಣ್ಣರು, ಕೆಲವರು ಒಕ್ಕಿವಿಗಳು. ಕೆಲವರದು ಜೋಲುಹೊಟ್ಟೆ. ಜೋಲುಮೊಲೆ ಕೆಲವರಿಗೆ. ಕೆಲವರು ತುಂಬಾ ಗಿಡ್ಡ. ಕೆಲವರು ಕ್ರೂರಿಗಳು. ಬಹಳ ಎತ್ತರ ಇಲ್ಲದವರು, ಬಲು ಗಿಡ್ಡ ಅಲ್ಲದವರು, ಬಹಳ ದಪ್ಪ ಅಲ್ಲದವರು ಕೆಲವರು. ಕೆಲವರು ಬಹಳ ಕಪ್ಪೂ ಅಲ್ಲ, ಬಹಳ ಬಿಳುಪೂ ಅಲ್ಲ, ನಡುವಿನ ಬಣ್ಣದವರು. ಗೂನು ಬಹಳ ಇಲ್ಲದವರು ಕೆಲವರು. ಸುರೂಪಿಗಳು ವಿರೂಪಿಗಳು ಕುರೂಪಿಗಳು ತೇಜಸ್ವಿಗಳು ಎಲ್ಲ ತರದ ಜನರೂ ಇದ್ದರು. ಮೈಗೆ ಗಂಧಾದಿ ಪರಿಮಳಗಳನ್ನು ಬಳಿದುಕೊಂಡು ಹೂಮಾಲೆಗಳನ್ನೂ ಬಗೆಬಗೆಯ ಒಡವೆ ಗಳನ್ನೂ ಧರಿಸಿ ಸಿಂಗರಿಸಿಕೊಂಡು ಕೆಲವರು ವಿಹರಿಸುತ್ತಿದ್ದರು

ರಾವಣನ ಅಂತಃಪುರಕ್ಕೆ ಬಂದ ಹನುಮಂತ. ಪಟ್ಟಣದ ನಡುವೆ ಆ ಅರಮನೆ. ಒಂದು ಬೆಟ್ಟದ ಶಿಖರದಲ್ಲಿ ಕಟ್ಟಿದ್ದು. ಸುತ್ತಲೂ ದೊಡ್ಡದಾದ ಪ್ರಾಕಾರ. ಅದಕ್ಕೆ ಅಂಟಿಕೊಂಡು ದೊಡ್ಡ ಕಂದಕ. ಕಂದಕದ ತುಂಬಾ ಬಿಳಿದಾವರೆ. ಪ್ರಾಕಾರದ ಹೆಬ್ಬಾಗಿಲು ಬಂಗಾರದ್ದು. ಅರಮನೆಯ ಮುಂದೆ

ಒಂದು ಲಕ್ಷದ ದಂಡು, ಮಹಾಬಲಿಷ್ಠರದು, ಎಚ್ಚರಿಕೆಯಿಂದ ಕಾವಲು ಕಾಯುತ್ತ ಇದೆ. ರಥಗಳೂ ವಾಹನಗಳೂ ವಿಮಾನಗಳೂ ತುಂಬಿ ಇವೆ ಅಲ್ಲಿ. ಶುಭಲಕ್ಷಣಗಳ ಕುದುರೆಗಳೂ ಆನೆಗಳೂ ಕಿಕ್ಕಿರಿದು ತುಂಬಿ ಇವೆ. ಬಿಳೀ ಮೋಡಗಳ ಸಾಲಿನ ಹಾಗೆ ನಾಲ್ಕು ದಂತಗಳ ಬಿಳೀ ಆನೆಗಳು ತಿರುಗುತ್ತ ಇವೆ. ಕೊಬ್ಬಿದ ಮೃಗಗಳೂ ಮದಿಸಿದ ಹಕ್ಕಿಗಳೂ ಅಂದವನ್ನು ಹೆಚ್ಚಿಸುತ್ತಿವೆ. ಮಹಾಪರಾಕ್ರಮಶಾಲಿಗಳು ಸಾವಿರಾರು ಮಂದಿ ರಾಕ್ಷಸಭಟರು ಅರಮನೆಯನ್ನು ಕಾಯುತ್ತ ಇದಾರೆ ಒಳಗಡೆ.

ಅರಮನೆಯ ಆವರಣದಲ್ಲಿ ಕುದುರೆಗಳ ಕೆನೆತ ಕೇಳಿಬರುತ್ತ ಇದೆ. ಅಂತಃಪುರದಿಂದ ಹೆಂಗಸರ ಒಡವೆಗಳ ಸದ್ದು ಕೇಳುತ್ತ ಇದೆ. ಇಂಪು ಆದ ಗಾನಧ್ವನಿ ಬೇರೆ. ಅರಮನೆಯ ಗೋಡೆ ಬಂಗಾರದ್ದು. ಅಂದದ ಬಾಗಿಲುಗಳು. ಗೋಡೆಗಳ ಮೇಲೆ ಮುತ್ತುರತ್ನಗಳ ಅಲಂಕಾರ. ಎಲ್ಲಿ ನೋಡಿದರೂ ಅಗರುಚಂದನ ಬಳಿದು ಗಮಗಮಿಸುತ್ತ ಇದೆ. ಶ್ರೀಗಂಧದ ಧೂಪ ಸುವಾಸನೆ ಬೀರುತ್ತ ಇದೆ.

ಇಂಥದು ರಾವಣನ ಅಂತಃಪುರ. ಸದ್ದುಮಾಡದೆ ಗುಟ್ಟಾಗಿ ಹನುಮಂತ ಅದನ್ನು ಪ್ರವೇಶಿಸಿದ.

೫

ರಾಕ್ಷಸರಾಜ ರಾವಣನ ಮನೆಯನ್ನು ಹೊಕ್ಕ ಹನುಮಂತ. ಅರ್ಧರಾತ್ರಿ ಆಗ. ಚಂದ್ರ ಮುಗಿಲಿನ ನಡುವೆ ಬಂದು ಇದ್ದ. ಬೆಳದಿಂಗಳು ಎಲ್ಲೆಲ್ಲೂ ಬಿದ್ದಿತ್ತು. ಸುತ್ತಲೂ ನಕ್ಷತ್ರಮಂಡಲ. ಮಧ್ಯೆ ತೇಜೋವಿಶಿಷ್ಟ ಚಂದ್ರ. ಗೋಶಾಲೆಯ ನಡುವೆ ಕೊಬ್ಬಿದ ಗೂಳಿಯ ಹಾಗೆ ಇದ್ದ.

ಲೋಕದಲ್ಲಿ ಎಲ್ಲ ಜನರ ದುಃಖವನ್ನೂ ನೀಗಿಸಿದ ತಣ್ಣಗಿರ ಚಂದ್ರ. ಕಡಲನ್ನು ಉಕ್ಕಿಸಿದ. ಸಮಸ್ತ ಪ್ರಾಣಿಕೋಟಿಗೂ ಉತ್ಸಾಹ ನೀಡಿದ. ಭೂಲೋಕದಲ್ಲಿ ಮಂದರಪರ್ವತಕ್ಕೆ ಇರುವ ಕಾಂತಿ, ಸಂಜೆಯ ಹೊತ್ತು ಸಮುದ್ರದ ಮೇಲೆ ಕಾಣುವ ಕಾಂತಿ, ತಾವರೆಕೊಳಗಳಲ್ಲಿ ಇರುವ ಕಮಲದ ಹೂಗಳಲ್ಲಿ ಇರುವ ಕಾಂತಿ, ಮುಗಿಲ ನಡುವೆ ಬೆಳಗುವ ಚಂದ್ರನಿಗೆ ಇತ್ತು.

ಬೆಳ್ಳಿಯ ಪಂಜರದಲ್ಲಿ ರಾರಾಜಿಸುವ ರಾಜಹಂಸದ ಹಾಗೆ ಇದ್ದ ಆಕಾಶದ ನಡುವೆ ಆಗ ಚಂದ್ರ. ಮಂದರಪರ್ವತದ ಕಂದರದಲ್ಲಿ ಸಿಂಹ ನಿಂತ ಹಾಗೆ, ಮದಗಜದ ಮೇಲೆ ಕುಳಿತ ಮಹಾವೀರನ ಹಾಗೆ ಇದ್ದ. ಚೂಪು ಕೊಂಬಿನ ಮಹಾವೃಷಭದಂತೆ ಕಂಡ. ಎತ್ತರದ ಶಿಖರಗಳ ಧವಳಗಿರಿಯ ಹಾಗೆ, ಚಿನ್ನದ ಕಟ್ಟು ಹಾಕಿದ ಬಿಳಿಯ ದಂತಗಳ ಮದ್ದಾನೆಯ ಹಾಗೆ ಹದಿನಾರೂ ಕಳೆಗಳಿಂದ ಬೆಳಗುತ್ತ ಇದ್ದ ಚಂದ್ರ.

ಇಬ್ಬನಿಯ ಕಾಲವೂ ಅಲ್ಲ. ಮಂಜು ಮುಸುಕುವ ದಿನಗಳೂ ಅಲ್ಲ. ಸೂರ್ಯಕಾಂತಿಯನ್ನು ಸಂಗ್ರಹಿಸಿ ಬೆಳಗುತ್ತ ಉಳಿದ ಗ್ರಹಗಳು ಯಾವುದೂ ಕಾಣದಂತೆ ಮಾಡಿದ ಚಂದ್ರ. ತನ್ನಲ್ಲಿ ಕಳಂಕ ಇಲ್ಲದೆ ಕಾಂತಿಲಕ್ಷ್ಮಿಗೆ ಆಸರೆ ಕೊಟ್ಟು ಬೆಳಗಿದ.

ಎತ್ತಲೂ ಮರೆ ಇಲ್ಲದ ಪರ್ವತಶಿಖರದ ಶಿಲೆಯನ್ನು ಏರಿನಿಂತ ಹಾಗೆ, ಮತ್ತ ಮದೇಭ ರಣರಂಗಕ್ಕೆ ಬಂದು ನಿಂತಹಾಗೆ, ರಾಜಾಧಿರಾಜ ಸಿಂಹಾಸನ ಏರಿದ ಹಾಗೆ ಚಂದ್ರ ಗಗನಮಧ್ಯಕ್ಕೆ ಬಂದು ಉಲ್ಲಾಸದಿಂದ ಬೆಳಗುತ್ತ ಇದ್ದ. ಚಂದ್ರ ಹುಟ್ಟಿದ, ಕತ್ತಲೆ ಹೋಯಿತು. ಲಂಕಾನಗರದ ರಾಕ್ಷಸರಿಗೆ ಮಾಂಸ ಭಕ್ಷಣಕ್ಕೆ ಹುರುಪು ಆಯಿತು. ಕಾಮಿನೀಕಾಮುಕರ ಮನಸಿನ ಕೋಪ ತಾಪಗಳು ಎಲ್ಲಾ ಅಡಗಿಹೋದವು. ಅವರ ಮನಸ್ಸು ತಿಳಿ ಆಗಿ ಅನ್ಯೋನ್ಯ ಆಸಕ್ತರು ಆದರು ಅವರು. ಸಮಸ್ತ ಜಗತ್ತೇ ಸ್ವರ್ಗಭೋಗದಲ್ಲಿ ಮುಳುಗಿತು.

ಕಿವಿಗೆ ಇಂಪು ಆದ ವೀಣೆ ಮುಂತಾದ ವಾದ್ಯಗಳನ್ನು ಬಾರಿಸುವ ಧ್ವನಿ ಕೇಳಿಸಿತು. ಹೆಂಗಸರು ತಮ್ಮ ತಮ್ಮ ಗಂಡಂದಿರನ್ನು ಕೂಡಿ ಸುಖನಿದ್ರೆ ಮಾಡುತ್ತ ಇದಾರೆ. ರಾತ್ರಿಂಚರ ರಾಕ್ಷಸರು ಅತಿಭಯಂಕರ ಅತ್ಯದ್ಭುತ ಕ್ರೂರ ಕೃತ್ಯಗಳಲ್ಲಿ ತೊಡಗಿದರು.

ಮದ್ಯಪಾನದಿಂದ ಮದ ಏರಿ ಮೈಮರೆತು ಇದ್ದರು ಜನ ಅನೇಕ ಮನೆ ಗಳಲ್ಲಿ. ಗಜರಥತುರಗಗಳಿಂದ ಭದ್ರಾಸನಗಳಿಂದ ತುಂಬಿದ ಐಶ್ವರ್ಯಸಮೃದ್ಧ ಮನೆಗಳು ಅವು. ಬುದ್ಧಿಶಾಲಿ ಹನುಮಂತ ಅದನ್ನು ಎಲ್ಲಾ ನೋಡುತ್ತ ಸಾಗಿದ. ಅಲ್ಲಿ ಇದ್ದ ರಾಕ್ಷಸವೀರರು ಒಬ್ಬರನ್ನು ಒಬ್ಬರು ಪರಿಹಾಸ ಮಾಡಿ ನಗುತ್ತ ಇದ್ದರು. ಕಾಮಾಸಕ್ತರು ಆಗಿ ಒಬ್ಬರನ್ನು ಒಬ್ಬರು ಅಪ್ಪಿಕೊಳ್ಳುತ್ತ ಇದ್ದರು. ಒಬ್ಬರ ಮೇಲೆ ಒಬ್ಬರು ತೋಳು ಹಾಕುತ್ತ ಇದ್ದರು. ಮತ್ತು

ಏರಿ ಮನಬಂದಹಾಗೆ ಮಾತು ಆಡುತ್ತ ಇದ್ದರು. ಒಬ್ಬರನ್ನು ಒಬ್ಬರು ಅಣಕಿಸುತ್ತ ಬಯ್ಯುತ್ತ ಇದ್ದರು. ಕೆಲವರು ಆಕಳಿಸುತ್ತ ಮೈಮುರಿಯುತ್ತ ಇದ್ದರು. ತಮ್ಮ ತಮ್ಮ ನಲ್ಲೆಯರ ಮೈಮೇಲೆ ಒರಗಿ ಹೆಗಲ ಮೇಲೆ ಕೈಹಾಕಿ ಕೊಂಡು ಇರುವವರು ಕೆಲವರು. ಕೆಲವರು ನಾನಾ ರೂಪಗಳನ್ನು ಧರಿಸಿ ಇದಾರೆ. ಕೆಲವರು ಬಿಲ್ಲಿಗೆ ಹೆದೆ ಏರಿಸುತ್ತ ಇದಾರೆ.

ಕೆಲವರು ಹೆಂಗಸರು ಗಂಧಪರಿಮಳಗಳನ್ನು ಬಳಿದುಕೊಳ್ಳುತ್ತ ಇದಾರೆ. ಕೆಲವರು ಹಾಯಿ ಆಗಿ ನಿದ್ದೆಮಾಡುತ್ತ ಇದಾರೆ. ಸುಂದರ ಮುಖಿಯರು ಕೆಲವರು ನಗುತ್ತ ಇದ್ದರು. ಕೆಲವರು ಕೋಪಗೊಂಡು ನಿಟ್ಟುಸಿರು ಬಿಡುತ್ತ ಇದ್ದರು. ಕೆಲವರು ಸವಿನುಡಿ ಆಡುತ್ತ ಇದ್ದರು.

ಮಹಾಗಜಗಳ ಘೀಂಕಾರ, ಮಡುವಿನಲ್ಲಿ ಬುಸುಗುಟ್ಟುವ ಸರ್ಪಗಳ ಹಾಗೆ ವೀರಪುರುಷರು ಬಿಡುವ ನಿಟ್ಟುಸಿರು, ಬುದ್ಧಿವಂತರು ಆಡುವ ಮನೋಹರ ಆದ ಸವಿನುಡಿ, ಆಸ್ತಿಕರೂ ಆಚಾರಪರರೂ ಆದ ಸತ್ಪುರುಷರ ಸಲ್ಲಾಪ, ಎಲ್ಲವನ್ನೂ ಗಮನಿಸಿದ ಹನುಮಂತ. ನಾನಾಗುಣಗಳವರು ಇದ್ದರು. ಅವರವರ ಗುಣಕ್ಕೆ ತಕ್ಕ ವ್ಯವಹಾರ. ಸದ್ಗುಣಿಗಳೂ ಸುರೂಪಿಗಳೂ ಇದ್ದ ಹಾಗೇ ವಕ್ರಗುಣಿಗಳೂ ವಿರೂಪಿಗಳೂ ಇದ್ದರು.

ವಸ್ತ್ರಾಭರಣಗಳಿಂದ ಸಿಂಗರಿಸಿಕೊಂಡು ಪರಿಶುದ್ಧಸ್ವಭಾವದಿಂದ ತಮ್ಮ ಗಂಡಂದಿರಲ್ಲೇ ಮನಸು ಇಟ್ಟು ಓರೆನೋಟದಿಂದ ಕುಡಿಗಣ್ಣಿನ ನೋಟದಿಂದ ಶೃಂಗಾರಚೇಷ್ಟೆಗಳಿಂದ ತಮ್ಮ ತಮ್ಮ ನಲ್ಲರನ್ನು ಆಕರ್ಷಿಸುತ್ತ ಮದ್ಯಪಾನಕ್ಕೆ ಅವರನ್ನು ಹುರಿದುಂಬಿಸುತ್ತ ಚುಕ್ಕೆಗಳಂತೆ ಚೆಲುವೆಯರಾದ ರಾಕ್ಷಸಸ್ತ್ರೀಯರು ಅಲ್ಲಿ ಕಾಣಬಂದರು ಹನುಮಂತನಿಗೆ. ಅತಿಶಯ ಸೌಂದರ್ಯದ ಯುವತಿಯರು ಕೆಲವರು ಆ ಅರ್ಧರಾತ್ರಿಯಲ್ಲಿ ತಮ್ಮ ನಲ್ಲರು ಅಪ್ಪಿಕೊಂಡರೆ ನಾಚುತ್ತ ಸಂತೋಷದಲ್ಲಿ ಮುಳುಗಿ ತೇಲುತ್ತ ಹೂಗಳ ಹಿಂದೆ ಅಡಗಿ ಕುಳಿತ ಹೆಣ್ಣು ಹಕ್ಕಿಗಳಂತೆ ಕಾಣುತ್ತ ಇದ್ದರು. ಉಪ್ಪರಿಗೆಗಳಲ್ಲಿ ತಮ್ಮ ನಲ್ಲರ ಮಡಿಲಲ್ಲಿ ವಿನೋದವಿಲಾಸಗಳಿಂದ ಕೆಲವರು ಹೆಂಗಸರು ಕುಳಿತು ಇದ್ದರು. ಶಾಸ್ತ್ರೋಕ್ತ ಆಗಿ ಮದುವೆಮಾಡಿಕೊಂಡು ಪವಿತ್ರತಾಧರ್ಮವನ್ನು ಮೀರದೆ ಗಂಡನಷ್ಟೇ ಮನ್ಮಥಾವೇಶದಿಂದ ಅವರನ್ನು ಸಂತೋಷಪಡಿಸುತ್ತ ಇದ್ದರು ಕೆಲವರು. ರತಿಸಮಯದಲ್ಲಿ ವಸ್ತ್ರಹೀನರಾಗಿ ಅಪರಂಜಿ ಬಂಗಾರದ ಎಳೆಯ ಮೈಬಣ್ಣದಿಂದ

ಥಳಥಳಿಸುವ ಹೆಂಗಸರು ಕೆಲವರು. ಮೈ ಹೊಂಬಣ್ಣ ಆದರೂ ಬಂಗಾರದ ಬೊಂಬೆಯ ಹಾಗೆ ಮಟ್ಟಸ ಆದರೂ ಗಂಡನನ್ನು ಅಗಲಿದ ದುಃಖದಿಂದ ಬಾಡಿ ಬಿಳುಪು ಏರಿ ಚಂದ್ರನಂತೆ ಬೆಳ್ಳಗೆ ಆಗಿ ಇದ್ದರು ಕೆಲವರು ಹೆಂಗಸರು. ತಮ್ಮ ಮನಸ್ಸು ಒಪ್ಪಿದ ಪ್ರಿಯರನ್ನು ಹುಡುಕಿಕೊಂಡು ಹೋಗಿ ಅವರನ್ನು ಕೂಡಿ ಸಂತೋಷಪಡುತ್ತ ಇದ್ದ ಅಭಿಸಾರಿಕೆಯರು ಕೆಲವರು. ತಮ್ಮ ತಮ್ಮ ಮನೆಗಳಲ್ಲಿ ತಮ್ಮ ತಮ್ಮ ಗಂಡಂದಿರನ್ನು ಕೂಡಿ ಸಂತೋಷದಿಂದ ಕ್ರೀಡಿಸುವ ಪತಿವ್ರತೆಯರು ಕೆಲವರು.

ಎಲ್ಲರನ್ನೂ ನೋಡಿದ ಹನುಮಂತ. ಈ ರಾಕ್ಷಸಸ್ತ್ರೀಸಮೂಹದಲ್ಲಿ ಮನುಷ್ಯಸ್ತ್ರೀ ಎಲ್ಲಿದಾಳೋ ಎಂದು ಹುಡುಕಲು ಬೆಳದಿಂಗಳಲ್ಲಿ ಬೆಳಗುವ ಅವರ ಮುಖಗಳನ್ನು ನೋಡಿದ ಹನುಮಂತ. ಕಮಾನಿನ ಹಾಗೆ ಬಾಗಿದ ಅವರ ಸೊಗಸು ಆದ ಕಣ್ಣೆವೆಗಳನ್ನು ಪರೀಕ್ಷಿಸಿದ. ರಾಮ ಹೇಳಿದ್ದ ಸೀತೆಯ ಆಭರಣ ಗುರುತು. ಅಂಥವು ಕಂಡಾವೆಂದು ಎಲ್ಲರ ಮೈಮೇಲಿನ ಒಡವೆಗಳನ್ನೂ ಪರೀಕ್ಷಿಸಿ ನೋಡಿದ. ಎಷ್ಟು ಹುಡುಕಿದರೂ ಮಹಾಸೌಂದರ್ಯವತಿ, ಸತ್ಕುಲ ಪ್ರಸೂತೆ, ಅರಳಿದ ಬಳ್ಳಿ, ಅಯೋನಿಜೆ ಸೀತಾದೇವಿ ಕಾಣಬರಲಿಲ್ಲ.

ಉತ್ತಮ ಪತಿವ್ರತೆ. ಶ್ರೀರಾಮನನ್ನು ಕಾಣಲು ಆತುರ. ನಿರಂತರವೂ ಅವನ ಧ್ಯಾನವೇ ಧ್ಯಾನ. ಗಂಡನನ್ನು ಅಗಲಿದೆನಲ್ಲ ಎಂದು ಯಾವಾಗಲೂ ಕಂಬನಿ. ಹಿಂದಿನ ಒಡವೆತೊಡವು ಯಾವುದೂ ಇಲ್ಲ. ಕಂಬನಿಯೇ ಒಡವೆ ಈಗ. ಅಂದದ ಕಣ್ಣೆವೆ. ಮಧುರ ಕಂಠ. ಸವಿನುಡಿ. ಕಾಡಿನಲ್ಲಿ ಕುಣಿಯುವ ಮಯೂರಿಯ ಹಾಗೆ. ಅಸ್ಪಷ್ಟ ಚಂದ್ರರೇಖೆ. ಮಾಸಿದ ಚಿನ್ನದ ಎಳೆ. ಬಾಣದ ಗಾಯ. ಚೆದುರಿದ ಮೋಡ. ಇಂಥವಳು ಸೀತೆ. ಮನುಜೇಶ್ವರ ಸತ್ಯಸಂಧ ಶ್ರೀರಾಮನ ಹೆಂಡತಿ.

ಎಷ್ಟು ಹುಡುಕಿದರೂ ಹನುಮಂತನಿಗೆ ಸೀತೆ ಕಾಣಲಿಲ್ಲ.

೬

ಸಂದರ್ಭಕ್ಕೆ ತಕ್ಕಂತೆ ರೂಪವನ್ನು ಬದಲಾಯಿಸಿಕೊಂಡ ಹನುಮಂತ. ಎಲ್ಲೆಲ್ಲೂ ಹುಡುಕಿದ. ವಿಮಾನಗೃಹಗಳಲ್ಲಿ ಹುಡುಕಿದ. ಊರು ಎಲ್ಲಾ

ಹುಡುಕಿದ. ಜನಕನಂದಿನಿ ಸೀತೆ ಕಾಣಬರಲಿಲ್ಲ. ಮತ್ತೆ ಒಂದು ಸಲ ಎಲ್ಲೆಲ್ಲೂ ಹುಡುಕಿದ. ಎಲ್ಲಿಯೂ ಕಾಣಲಿಲ್ಲ ಸೀತೆ.

ಸೂರ್ಯಕಾಂತಿಯಿಂದ ಥಳಥಳಿಸುವ ಬಂಗಾರದ ಪ್ರಾಕಾರಗಳ ಅರಮನೆ ಕಂಡಿತು. ಅಲ್ಲಿಗೆ ಹೋದ ಹನುಮಂತ. ಕ್ರೂರಸಿಂಹಗಳ ಗೊಂಡಾರಣ್ಯದ ಹಾಗೆ ಭಯಂಕರ ರಾಕ್ಷಸಭಟರ ಕಾವಲಿನಲ್ಲಿ ಸುರಕ್ಷಿತ ಆಗಿ ಇತ್ತು ಅರಮನೆ. ಆಶ್ಚರ್ಯ ಆಂಜನೇಯನಿಗೆ. ಹನುಮಂತ ಸುತ್ತಲೂ ತಿರುಗಾಡಿ ನೋಡಿದ. ಆ ಅರಮನೆಗೆ ಬೆಳ್ಳಿಯ ಬಾಗಿಲು. ಅದಕ್ಕೆ ಚಿನ್ನದ ತೋರಣ ಮುಂತಾದ ಅಲಂಕಾರ. ಒಳಗಿನ ತೊಟ್ಟಿಗಳು ವಿಶಾಲ. ವಿಚಿತ್ರ ಬಣ್ಣಗಳ ಅಲಂಕಾರ ಅಲ್ಲಿ. ತೋಟಗಳ ಬಾಗಿಲುಗಳು ಬಹಳ ಮನೋಹರ. ಆನೆಗಳ ಮೇಲೆ ಕುಳಿತ ಶೂರರು, ಅನಾಯಾಸ ಆಗಿ ಯಾವ ಕೆಲಸ ಆದರೂ ಮಾಡಬಲ್ಲ ಯೋಧವೀರರು ಅಲ್ಲಿ ಕಾವಲು ಕಾಯುತ್ತ ಇದ್ದಾರೆ. ಸಿಂಹ ವ್ಯಾಘ್ರ ಚರ್ಮದ ಕವಚಗಳಿಂದ ಬೆಳ್ಳಿಬಂಗಾರ ದಂತಗಳಿಂದ ಮಾಡಿದ ಬೊಂಬೆಗಳಿಂದ ಅಲಂಕಾರಗೊಂಡು ಮಹಾಘೋಷ ಮಾಡುತ್ತ ಹೋಗುವ ರಥಗಳು, ಎಲ್ಲಿಗೆ ಬೇಕು ಎಂದರೂ ಅಲ್ಲಿಗೆ ರಥಗಳನ್ನು ಎಳೆದುಕೊಂಡು ಹೋಗಬಲ್ಲ ಕುದುರೆಗಳು ಅಲ್ಲಿ ಲೆಕ್ಕ ಇಲ್ಲದಷ್ಟು ಇದ್ದವು.

ಮಹಾರಥರ ನಿವಾಸ ಅದು. ದಿವ್ಯ ಯಾನಗಳು ಉತ್ತಮೋತ್ತಮ ರಥಗಳು ಇವೆ ಅಲ್ಲಿ. ಉತ್ತಮ ಮಣಿಪೀಠಗಳು, ರತ್ನಖಚಿತ ಪಾತ್ರೆಗಳು, ಇವೆ. ಕಣ್ಣಿಗೆ ಆನಂದ ಕೊಡುವ ಚೆಲುವು ಆದ ಉತ್ತಮ ಪಶುಗಳು, ಬಗೆಬಗೆಯ ಹಕ್ಕಿಗಳು ಲೆಕ್ಕ ಇಲ್ಲದಷ್ಟು ತಿರುಗುತ್ತ ಇವೆ. ವಿನಯವಂತರು ಆದ ರಾಕ್ಷಸ ಭಟರು ಅದಕ್ಕೆ ಕಾವಲು. ಅಂದಗಾತಿಯರೂ ಉಲ್ಲಾಸವತಿಯರೂ ಕೆಲವರು ನೆರೆದು ಇದ್ದಾರೆ. ಅವರ ವಿಲಾಸವಿಭ್ರಮಗಳು ಆಕರ್ಷಕ. ಅವರ ಮೈಮೇಲಿನ ಒಡವೆಗಳ ಸದ್ದು ಸಮುದ್ರಘೋಷದಂತೆ ಇತ್ತು. ರಾಜಚಿಹ್ನೆಗಳು ಆದ ಛತ್ರ ಚಾಮರ ಮುಂತಾದವು ಎಲ್ಲಾ ಇವೆ ಅಲ್ಲಿ. ಅಗರುಚಂದನಾದಿ ಪರಿಮಳದ್ರವ್ಯದ ಧೂಪ ಧೂಮ ಗಮಗಮಿಸುತ್ತ ಇದೆ. ಭೇರಿ ಮೃದಂಗ ವೀಣಾ ಶಂಖ ಆದಿ ಮಂಗಳವಾದ್ಯಗಳು ಮೊಳಗುತ್ತ ಇವೆ. ಎಲ್ಲ ಗಂಧಪುಷ್ಪಗಳ ಅಲಂಕಾರ. ರಾಕ್ಷಸವೀರರಿಗೆ ಅದು ನಿವಾಸಸ್ಥಾನ. ಆ ಮಹಾವೀರರು ಎಲ್ಲರೂ ಅಲ್ಲಿ ಇದ್ದುದರಿಂದ ಸಿಂಹಗಳಿಂದ ತುಂಬಿದ ಅರಣ್ಯದ ಹಾಗೆ ಇತ್ತು ಅರಮನೆ.

ರಾವಣ ಆಹಿತಾಗ್ನಿ. ಪರ್ವಕಾಲಗಳಲ್ಲಿ ಆತ ವಿಶೇಷ ಹೋಮಗಳನ್ನು ಮಾಡುತ್ತ ಇದ್ದ. ಹೋಮಾಗ್ನಿ ಯಾವಾಗಲೂ ಉರಿಯುತ್ತ ಇರುತ್ತದೆ. ಯಾವಾಗಲೂ ಗಂಧಪುಷ್ಪಾದಿಗಳ ಪೂಜೆ ನಡೆಯುತ್ತದೆ. ಯಾವಾಗಲೂ ಗದ್ದಲ. ಸಮುದ್ರದ ಘೋಷದಂತೆ. ಸಮುದ್ರದ ಹಾಗೇ ಆ ಅರಮನೆಯೂ ಗಂಭೀರ. ಅದರ ಹಾಗೇ ರತ್ನಮಯ. ಸದಾ ರಾಕ್ಷಸಭಟರ ಕಾವಲು. ರಾಕ್ಷಸೇಂದ್ರನ ಅರಮನೆ ಲಂಕಾಪಟ್ಟಣಕ್ಕೇ ಒಂದು ಆಭರಣ.

ಇಲ್ಲೇ ಎಲ್ಲೋ ಇರಬೇಕು ಸೀತೆ ಎಂದು ಅದರ ಸುತ್ತಲೂ ಹುಡುಕಿದ ಹನುಮಂತ. ಪ್ರತಿ ಒಂದು ಮನೆಯ ಒಳಕ್ಕೂ ನುಗ್ಗಿದ. ಅಲ್ಲಿ ಇದ್ದ ಉಪ್ಪರಿಗೆ ಉದ್ಯಾನವನ ಯಾವುದನ್ನೂ ಬಿಡಲಿಲ್ಲ. ಮೊದಲು ಮಹಾ ಪರಾಕ್ರಮಶಾಲಿ ಪ್ರಹಸ್ತನ ಮನೆಯಲ್ಲಿ ಹುಡುಕಿದ. ಅಲ್ಲಿಂದ ಮಹಾಪಾರ್ಶ್ವನ ಮನೆಗೆ ಹೋದ. ಅಲ್ಲಿಂದ ಮೇಘದಂತೆ ಕಾಣುವ ಕುಂಭಕರ್ಣನ ಮನೆಗೆ. ಆಮೇಲೆ ವಿಭೀಷಣನ ಮನೆಗೆ. ಅಲ್ಲಿಂದ ಮಹೋದರನ ಮನೆಗೆ. ಮುಂದೆ ವಿರೂಪಾಕ್ಷ ವಿದ್ಯುಜ್ಜಿಹ್ವ ವಿದ್ಯುನ್ಮಾಲಿ ವಜ್ರದಂಷ್ಟ್ರ ಶುಕ ಸಾರಣ ಇಂದ್ರಜಿತ್ತು ಜಂಬುಮಾಲಿ ಸುಮಾಲಿ ರಶ್ಮಿಕೇತು ಸೂರ್ಯಶತ್ರು ವಜ್ರಕಾಯ ಧೂಮ್ರಾಕ್ಷ ಸಂಪಾತಿಗಳ ಮನೆಗಳಲ್ಲಿ ಹುಡುಕಿದ. ವಿದ್ಯುದ್ರೂಪ ಘನ ವಿಘನ ಶುಕನಾಸ ವಕ್ರ ಶಠ ವಿಕಟ ಹ್ರಸ್ವಕರ್ಣ ದಂಷ್ಟ್ರ ರೋಮಶ ಯುದ್ಧೋನ್ಮತ್ತ ಮತ್ತ ಧ್ವಜ ಗ್ರೀವ ಇಂದ್ರಜಿಹ್ವ ಹಸ್ತಿಮುಖ ಕರಾಳ ಪಿಶಾಚ ಶೋಣಿತಾಕ್ಷ ಮುಂತಾದ ರಾಕ್ಷಸಪ್ರಮುಖರ ಮನೆಗಳಲ್ಲಿ ಎಲ್ಲಾ ಹುಡುಕಿದ. ಆ ಮನೆಗಳ ಐಶ್ವರ್ಯ ವನ್ನೂ ಸಮೃದ್ಧಿಯನ್ನೂ ಹನುಮಂತ ಗಮನಿಸಿದ.

ರಾಕ್ಷಸರ ಮನೆಗಳಲ್ಲಿ ಎಲ್ಲಾ ಹುಡುಕಿ ಆಯಿತು. ಎಲ್ಲಿಯೂ ಸೀತಾದೇವಿ ಕಾಣಲಿಲ್ಲ. ಕಡೆಗೆ ರಾಕ್ಷಸೇಂದ್ರ ರಾವಣನ ಅರಮನೆಗೆ ಬಂದ. ಅಲ್ಲಿ ಕಾವಲು ಇದ್ದ ವಿಕೃತನೇತ್ರಿಯರು ವಿಕಾರಸ್ವರೂಪಿಗಳು ಆದ ರಾಕ್ಷಸಸ್ತ್ರೀಯರನೇಕರು ಮಲಗಿ ಇದ್ದರು. ಅವರ ಕೈಯಲ್ಲಿ ಶೂಲ ಮುದ್ಗರ ಶಕ್ತಿ ತೋಮರ ಮೊದಲಾದ ಆಯುಧ. ಬಗೆಬಗೆಯ ಆಯುಧ ಹಿಡಿದ ರಾಕ್ಷಸರ ದಂಡಿನ ಕಾವಲು ಬೇರೆ. ಕೆಂಬಣ್ಣದ್ದು ಬಿಳಿಯ ಬಣ್ಣದ್ದು ವೇಗಶಾಲಿ ಜಾತಿಕುದುರೆಗಳು. ನೋಡಲು ಅಂದ ಆದ ಮದ್ದಾನೆಗಳೂ ಅನೇಕ. ಆ ಆನೆಗಳು ಕುಲೀನ. ಶತ್ರುಗಜಗಳನ್ನು ಧ್ವಂಸಮಾಡುವ ಶಿಕ್ಷಣ ಕೊಟ್ಟಿದಾರೆ ಅವಕ್ಕೆ. ಯುದ್ಧಕ್ಕೆ ಬಂದರೆ ಅವು

ದೇವೇಂದ್ರನ ಐರಾವತಕ್ಕೆ ಸಮಾನ. ಇದಿರು ದಂಡು ಅವುಗಳ ಮುಂದೆ ನಿಲ್ಲದು. ಮೋಡದಿಂದ ಮಳೆಹನಿ ಸುರಿಯುವ ಹಾಗೆ ದೊಡ್ಡ ದೊಡ್ಡ ಬೆಟ್ಟಗಳಿಂದ ಗಿರಿ ನದಿಗಳು ಜಿನುಗುವ ಹಾಗೆ ಆ ಮಹಾಕಾಯ ಮದ್ದಾನೆಗಳು ಮದಜಲವನ್ನು ಸುರಿಸುತ್ತ ಇವೆ. ಅವುಗಳ ಘೀಂಕಾರ ಮೋಡಗಳ ಗುಡುಗಿನ ಹಾಗೆ ಇದೆ. ಯುದ್ಧದಲ್ಲಿ ಅವನ್ನು ಇದಿರಿಸುವುದು ಸಾಧ್ಯ ಅಲ್ಲ.

ಬಂಗಾರದ ಕವಚಗಳನ್ನು ತೊಟ್ಟು ಸೂರ್ಯನ ಹಾಗೆ ಹೊಳೆಯುವ ಸಾವಿರಾರು ಮಂದಿ ಕಾಲಾಳುಗಳು ಅಲ್ಲಿದ್ದರು. ಬಗೆಬಗೆಯ ಪಲ್ಲಕ್ಕಿ ಇದ್ದವು. ಚಿತ್ರವಿಚಿತ್ರ ಲತಾಗೃಹಗಳು, ಬಗೆಬಗೆಯ ಚಿತ್ರಗಳ ಚಿತ್ರಶಾಲೆಗಳು, ವಿಲಾಸ ಭವನಗಳು, ಕ್ರೀಡಾರ್ಥ ಆಗಿ ಮರದಿಂದ ಮಾಡಿದ ಕೃತ್ರಿಮ ಪರ್ವತಗಳು, ರತಿಗೃಹಗಳು, ಹಗಲುಹೊತ್ತು ವಿಹರಿಸಲು ಕಟ್ಟಿದ ಭವನಗಳು ಅಲ್ಲಿ ಕಂಗೊಳಿ ಸುತ್ತ ಇದ್ದವು. ಮುಂದೆ ಮಂದರ ಪರ್ವತದ ಹಾಗೆ ಇದ್ದ ಇನ್ನೊಂದು ಅರಮನೆ. ಅಲ್ಲಿ ನವಿಲುಗಳ ಕ್ರೀಡೆಗಾಗಿ ಮಾಡಿದ ಜಾಲಂದ್ರದ ಮನೆಗಳು, ಬೇರೆ ಬೇರೆ ಹಕ್ಕಿಗಳು ವಾಸಮಾಡಲು ಗೂಡುಗಳು. ಅದರ ಸುತ್ತಲೂ ಧ್ವಜಾಲಂಕಾರ. ಒಳಗೆ ನವರತ್ನಾಲಂಕಾರ. ಬಹಳ ಮನೋಹರ. ಧೈರ್ಯದಿಂದ ದೃಢನಿಷ್ಠೆಯಿಂದ ರಾವಣಾಸುರ ಮಾಡಿದ ತಪಸ್ಸಿನ ಫಲವೋ ಏನೋ, ಪರಶಿವನ ಕೈಲಾಸದ ಹಾಗೆ ಸೊಬಗಿನಿಂದ ಮೆರೆಯುವ ಅರಮನೆ ಅದು. ರಾವಣನ ತೇಜಸ್ಸು, ವಿವಿಧ ರತ್ನಕಾಂತಿ. ಆ ಭವನ ಸಹಸ್ರಕಿರಣಗಳ ಸೂರ್ಯನ ಹಾಗೆ ಹೊಳೆಯುತ್ತಿತ್ತು.

ಒಳಗಡೆ ಚಿನ್ನದ ಹಂಸತೂಲಿಕಾತಲ್ಪಗಳು, ಚಿನ್ನದ ಸುಖಾಸನಗಳು, ಚಿನ್ನದ ಪಾತ್ರೆಗಳು. ರತ್ನಖಚಿತ ಪಾತ್ರೆಗಳ ತುಂಬಾ ಮಧು ಮದ್ಯ. ರಾಕ್ಷಸ ಚಕ್ರವರ್ತಿಯ ಆ ಅರಮನೆ ಕುಬೇರನ ಅರಮನೆಯ ಹಾಗೆ. ಬಲು ರಮ್ಯ. ಬಹಳ ವಿಶಾಲ. ಚೆಲುವೆಯರ ಕಲಕಲ ಧ್ವನಿ, ಅವರ ಕಾಂಚೀನೂಪುರಗಳ ಸದ್ದು, ತಾಳ ಮೃದಂಗಾದಿ ಶಬ್ದ ಅಲ್ಲಿ ಕೇಳಿಬಂದವು. ಅನೇಕ ಪ್ರಾಸಾದಗಳು, ವಿಶಾಲ ಆದ ತೋಟ್ಟಗಳು. ನೂರಾರು ಮಂದಿ ಉತ್ತಮಾಂಗನೆಯರು ಅದರಲ್ಲಿ.

ಈ ಮನೋಹರ ಮಹಾಭವನವನ್ನು ಹನುಮಂತ ಪ್ರವೇಶಿಸಿದ.

೭

ಅರಮನೆಯ ಸುತ್ತ ಇದ್ದ ಮನೆಗಳ ಗುಂಪು ಬಹಳ ಮನೋಹರ. ವೈಡೂರ್ಯಮಣಿಖಚಿತ ಬಂಗಾರದ ಜಾಲಂಧ್ರಗಳು. ಒಳಗಡೆ ಹಾರಾಡುತ್ತ ಆಡುವ ಹಕ್ಕಿಗಳ ಗುಂಪು. ಮಳೆಗಾಲದ ಮೋಡದ ಸಾಲಿನ ಹಾಗೆ, ಆ ಮೋಡಗಳಲ್ಲಿ ತಟ್ಟನೆ ಮಿಂಚುವ ಕೋಲ್ಮಿಂಚಿನ ಹಾಗೆ, ಮಳೆಗೆ ಬಾಯಿ ಬಿಟ್ಟುಕೊಂಡು ಮಳೆಮೋಡದ ಕಡೆಗೆ ಹಾರುವ ಚಾತಕಪಕ್ಷಿಗಳ ಹಾಗೆ.

ಆ ಮನೆಗಳೆಲ್ಲ ಬಗೆಬಗೆಯವು. ಆಯುಧಶಾಲೆಗಳು, ಮನೋಹರ ಆದ ಚಂದ್ರಶಾಲೆಗಳು, ತೊಟ್ಟಿಯ ಮನೆಗಳು. ಆಯುಧಶಾಲೆಗಳಲ್ಲಿ ಶಂಖ ಕತ್ತಿ ಬಿಲ್ಲು ತುಂಬಿ ಇದ್ದವು. ಚಂದ್ರಶಾಲೆಗಳು ಇದ್ದದ್ದು ಉಪ್ಪರಿಗೆಗಳ ಮೇಲೆ. ಉನ್ನತ, ವಿಶಾಲ. ಎಲ್ಲವೂ ರತ್ನಖಚಿತ. ದೋಷ ಎಂಬುದು ಸ್ವಲ್ಪವೂ ಇಲ್ಲ ಆ ಭವನಗಳಲ್ಲಿ. ದೇವಶಿಲ್ಪಿ ವಿಶ್ವಕರ್ಮ ನಿರ್ಮಿಸಿದ್ದು ಎಲ್ಲವೂ. ಸಮಸ್ತ ಸುಗುಣಸಂಪತ್ತಿಸಂಪನ್ನ ಅವು. ದೇವದಾನವರು ಎಲ್ಲರೂ ಮೆಚ್ಚಿಕೊಂಡ ಮನೆಗಳು ಅವು. ಮಯನೇ ತನಗೆ ಆಗಿಯೇ ಕಟ್ಟಿಕೊಂಡನೋ ಏನೋ ಎಂಬ ಹಾಗೆ ಇರುವಂಥ ಮನೆಗಳು. ಎಲ್ಲವನ್ನೂ ರಾವಣ ತನ್ನ ಸ್ವಂತ ಪರಾಕ್ರಮ ದಿಂದ ಗಳಿಸಿದ್ದ.

ಮಹಾನುಭಾವ ಹನುಮಂತ ಈ ಮನೆಗಳು ಎಲ್ಲವನ್ನೂ ನೋಡಿದ. ಆ ಮನೆಗಳ ನಡುವೆ ಮಹೋನ್ನತ ಆಗಿ ಮೇಘದಂತೆ ಬೆಳಗುವ ಸುವರ್ಣಮಯ ಸುಂದರ ಅಸಮಾನಶೋಭಾನ್ವಿತ ಪುಷ್ಪಕವಿಮಾನವನ್ನು ಕಂಡ.

ದೈವಯೋಗದಿಂದ ಸ್ವರ್ಗವೇ ಜಾರಿಬಿತ್ತೆ ಭೂಮಿಗೆ! ಎಷ್ಟು ದಿವ್ಯಕಾಂತಿ ಈ ಅರಮನೆಯದು. ನವರತ್ನಖಚಿತ, ನಾನಾ ತರುಲತಾದಿಗಳಿಂದ ಕುಸುಮಿತ. ದೊಡ್ಡದು ಒಂದು ಬೆಟ್ಟಕ್ಕೆ ಹೂವಿನ ಹಚ್ಚಡ ಹೊದಿಸಿದ ಹಾಗೆ ಇತ್ತು. ಅಲ್ಲಿ ಇದ್ದ ಚೆಲುವೆಯರು ಓಡಾಡುತ್ತ ಇದ್ದರೆ ಮೋಡದಲ್ಲಿ ಮಿಂಚಿನ ಬಳ್ಳಿ ಮಿಂಚಿ ದಂತೆ ಆಗುತ್ತ ಇತ್ತು. ಸರ್ವಲೋಕಪೂಜ್ಯ ಆದ ವಿಮಾನವನ್ನು ಆಕಾಶದಲ್ಲಿ ಹೊತ್ತುಕೊಂಡು ಹಾರುತ್ತ ಇವೆ ರಾಜಹಂಸಗಳು; ಯಾವುದೋ ಪರ್ವತಶಿಖರ ಇದು, ಈ ನವರತ್ನಗಳೇ ಗೈರಿಕಾದಿಧಾತುಗಳು; ನವಗ್ರಹ ಚಂದ್ರಸೂರ್ಯರು ಬೆಳಗುವ ಆಕಾಶ; ಅನೇಕ ಬಣ್ಣಗಳಿಂದ ಹೊಳೆವ ಮೇಘಜಾಲ ಇದು;

ಹೀಗೆ ಕಾಣುತ್ತ ಇತ್ತು ಆ ವಿಮಾನರತ್ನ. ಅದರ ಸೊಬಗಿಗೆ ಎಣೆ ಇಲ್ಲ. ಅದಕ್ಕೆ ಸಾಟಿ ಮತ್ತೊಂದು ಇಲ್ಲ.

ಅಲ್ಲಿ ಮಾಡಿದ ಕೆತ್ತನೆಯ ಕೆಲಸ ಮನಸೆಳೆವಂಥದು. ಇಡೀ ಭೂಮಿಯ ಚಿತ್ರ ಅಲ್ಲಿ ಚಿತ್ರಿತ ಆಗಿತ್ತು. ಭೂಮಿಯ ತುಂಬಾ ಬೆಟ್ಟಗುಡ್ಡಗಳ ಸಾಲು. ಆ ಬೆಟ್ಟಗಳ ತುಂಬ ದಟ್ಟ ಆಗಿ ಬೆಳೆದ ಬಗೆಬಗೆಯ ಗಿಡಮರಗಳ ಗುಂಪು. ಆ ಗಿಡಮರಗಳಲ್ಲಿ ಸಮೃದ್ಧಿ ಆಗಿ ಹೂ. ಹೂಗಳಲ್ಲಿ ಎಸಳು ಕೂಡ ಕಾಣುತ್ತ ಇದ್ದವು. ಎಸಳಿನ ನಡುವೆ ಕೇಸರ. ಅಷ್ಟು ಸೂಕ್ಷ್ಮ ಕುಸುರಿ ಕೆಲಸ. ಸರೋವರಗಳನ್ನೂ ಅದರಲ್ಲಿ ಅರಳಿದ ತಾವರೆಹೂಗಳನ್ನೂ ಹೂಗಳ ಒಳಗಿನ ಕಿಂಜಲ್ಕಗಳನ್ನೂ ಚಿತ್ರಿಸಿ ಇದ್ದರು. ಬೆಳ್ಳಗೆ ಹೊಳೆಯುವ ದಿವ್ಯಭವನಗಳ ಚಿತ್ರಗಳೂ ಮನೋಹರ ಉದ್ಯಾನವನಗಳ ಚಿತ್ರಗಳೂ ಕಂಗೊಳಿಸುತ್ತ ಇದ್ದವು. ಆ ಪುಷ್ಪಕವಿಮಾನದ್ದು ನವರತ್ನಕಾಂತಿ. ಎಷ್ಟು ಜನಕ್ಕೆ ಆದರೂ ಅದರಲ್ಲಿ ಸ್ಥಳ ಇತ್ತು. ಅಷ್ಟು ವಿಶಾಲ.

ಒಳಗಡೆ ವೈಡೂರ್ಯಮಣಿಗಳಿಂದ ಮಾಡಿದ ಪಕ್ಷಿಗಳು, ಹವಳಗಳಿಂದ ಬೆಳ್ಳಿಯಿಂದ ಮಾಡಿದ ಪಕ್ಷಿಗಳು. ವಿಚಿತ್ರ ರತ್ನಗಳಿಂದ ಮಾಡಿದ ಹಾವುಗಳು, ಅಂದದ ಜಾತ್ಯಶ್ವಗಳ ಪ್ರತಿಮೆಗಳು. ಅಲ್ಲಿ ಇದ್ದ ಪಕ್ಷಿಗಳ ಪ್ರತಿಮೆಗಳು ಮನ್ಮಥನ ಸಹಾಯಕ್ಕೆ ಬಂದ ಹಕ್ಕಿಗಳ ಹಾಗೆ ಇದ್ದವು. ಸೊಗಸು ಆದ ಮುಖಭಾವ. ಚಿನ್ನ ಹವಳಗಳ ರೆಕ್ಕೆ. ರೆಕ್ಕೆ ಸ್ವಲ್ಪ ಬಗ್ಗಿವೆ ವಿಲಾಸಪೂರ್ಣ ಆಗಿ. ಆಕಾಶಕ್ಕೆ ಹಾರುವ ಹಾಗೆ ಇದ್ದವು. ತಾವರೆಕೊಳಗಳಲ್ಲಿ ಕ್ರೀಡಿಸುತ್ತ ತಾವರೆ ನೈದಿಲೆ ಹೂಗಳನ್ನು ಸೊಂಡಿಲುಗಳಿಂದ ಎತ್ತಿಹಿಡಿದು ಇವೆ ಚಿತ್ರಗಳಲ್ಲಿನ ಮದ್ದಾನೆಗಳು. ಆ ಕಡೆ ಈ ಕಡೆ ನಿಂತು ಈ ಮದ್ದಾನೆಗಳು ಕಮಲದ ಹೂಗಳನ್ನು ಚೆಲ್ಲುತ್ತ ಇವೆ ನಡುವೆ ಕುಳಿತ ಲಕ್ಷ್ಮೀದೇವಿಯ ಮೇಲೆ. ಆ ಆನೆಗಳ ಮೈಗೆ ಎಲ್ಲಾ ಕಮಲದ ಧೂಳಿ ಮೆತ್ತಿಕೊಂಡಿದೆ.

ಹನುಮಂತ ಈ ಅರಮನೆಯನ್ನು ಕಂಡ. ದೊಡ್ಡ ಪರ್ವತಕ್ಕೆ ಸಮ ಆಗಿ ರಮಣೀಯ ಮಂಗಳಕರ ಆಗಿತ್ತು ಅದು. ವಸಂತಕಾಲದಲ್ಲಿ ಮನಸೆಳೆವಂತೆ ಹೂ ಬಿಟ್ಟು ಗಮಗಮ ಪರಿಮಳ ಬೀರುವ ಗಿಡಮರಗಳಿಂದ ಕೂಡಿ ದೊಡ್ಡ ಪರ್ವತಗುಹೆಗಳ ಹಾಗೆ ಇದ್ದವು ಆ ಮನೆಗಳು. ಆಂಜನೇಯನಿಗೆ ಬಲು ಆಶ್ಚರ್ಯ ಆ ಮನೆಗಳನ್ನು ಮತ್ತೆ ನೋಡಿ.

ಲಂಕಾಪಟ್ಟಣವನ್ನು ಎಲ್ಲಾ ತಿರುಗಾಡಿದ ಹನುಮಂತ. ಎಲ್ಲಾ ಮನೆಗಳಲ್ಲೂ ಹುಡುಕಿದ. ಪತಿಪರಾಯಣೆ ಆದ ರಾಮನಲ್ಲೇ ನೆಟ್ಟ ಮನಸಿನ ಸೀತಾದೇವಿ ಎಲ್ಲಿಯೂ ಕಾಣಲಿಲ್ಲ. ಹನುಮಂತನಿಗೆ ಬಹಳ ದುಃಖ ಆಯಿತು. ಎಷ್ಟೋ ಪರಿ ಆಗಿ ಯೋಚಿಸಿದ. ಹನುಮಂತನಿಗೆ ಬಹಳ ಧೈರ್ಯ. ಎಷ್ಟೇ ದೂರ ಆದರೂ ನೋಡಬಲ್ಲ ದೃಷ್ಟಿಸಾಮರ್ಥ್ಯ. ಎಳ್ಳಷ್ಟು ನೀತಿ ಕೆಡದ ದಾರ್ಢ್ಯ.

ಆದರೂ ಸೀತಾದೇವಿಯನ್ನು ಕಾಣದೆ ಮಹತ್ತರ ಚಿಂತೆ ಆಯಿತು ಆಂಜನೇಯನಿಗೆ.

೮

ಅರಮನೆಯ ನಡುವೆ ನವರತ್ನಖಚಿತ, ಚಿನ್ನದ ಕೆತ್ತನೆಕೆಲಸದ ದೊಡ್ಡ ಪುಷ್ಪಕವಿಮಾನವನ್ನು ನೋಡಿದ ಹನುಮಂತ. ಅದರ ನಿರ್ಮಾಣವೈಚಿತ್ರ್ಯ ಸಾಟಿ ಇಲ್ಲದ್ದು. ಅದರ ರೂಪ ಆಕಾರ ಅಸಮಾನ. ಇಂಥ ಭಾಗವನ್ನು ತಿದ್ದಬೇಕು ಎನ್ನುವ ಹಾಗೇ ಇಲ್ಲ. ಬಹಳ ಪ್ರಯತ್ನಪಟ್ಟು ನಿರ್ಮಿಸಿದ್ದ ವಿಶ್ವಕರ್ಮ. ಅವನು ನಿರ್ಮಿಸಿದ ವಿಮಾನಗಳಲ್ಲಿ ಎಲ್ಲಕ್ಕಿಂತ ಇದೇ ಬಲು ಸೊಗಸು. ಅದರ ಅಂದ ಅವನಿಗೇ ಮೆಚ್ಚಿಕೆ ಆಯಿತು. ಭಲೆ ಎಂದು ತನ್ನನ್ನೇ ಕೊಂಡಾಡಿದ್ದ.

ಅದರ ಭಾಗ ಯಾವುದೂ ಮೊದಲು ಪರೀಕ್ಷಿಸದೆ ಪ್ರಯತ್ನಪೂರ್ವಕ ಜೋಡಿಸದೆ ಮಾಡಿದ್ದು ಅಲ್ಲ. ರತ್ನಖಚಿತ ಅಲ್ಲದ ಭಾಗ ಒಂದೂ ಇಲ್ಲ ಅದರಲ್ಲಿ. ಬೆಲೆಬಾಳದ ರತ್ನ ಒಂದೂ ಇಲ್ಲ. ಅದರ ಒಳಗಿನ ವಿಶೇಷಗಳು ದೇವಗೃಹಗಳಲ್ಲೂ ಇಲ್ಲ. ನೋಡಲು ಅತಿಶಯ ಆಗಿ ಕಾಣದ ವಸ್ತು ಒಂದೂ ಇಲ್ಲ. ಯಾವುದನ್ನು ನೋಡಿದರೂ ಪರಮಾಶ್ಚರ್ಯ, ಆನಂದ. ಆ ವಿಮಾನ ಸಾಮಾನ್ಯ ವಿಮಾನ ಅಲ್ಲ. ರಾವಣನ ಮಹಾತಪಶ್ಶಕ್ತಿ ಅಸಾಧ್ಯ ಪರಾಕ್ರಮ ಇವುಗಳ ಫಲ ಅದು.

ಗೋಪುರ ಮುಂತಾದ ನಾನಾ ಸನ್ನಿವೇಶಗಳಿಂದ ಕಂಗೊಳಿಸುತ್ತ ಇತ್ತು ವಿಮಾನ. ಎಲ್ಲ ಭಾಗಗಳಲ್ಲೂ ಸಮಾನ ವೈಚಿತ್ರ್ಯ, ಸಮಾನ ವೈಶಿಷ್ಟ್ಯ.

ಎತ್ತ ತಿರುಗಿ ನೋಡಿದರೂ ಅದ್ಭುತ. ದಿವ್ಯ ವಿಮಾನ. ಅದರಲ್ಲಿ ಕುಳಿತು ಎಲ್ಲಿಗೆ ಹೋಗಬೇಕು ಎಂದರೆ ಅಲ್ಲಿಗೆ ಒಂದು ಕ್ಷಣದಲ್ಲಿ ಹೋಗುತ್ತ ಇತ್ತು. ಯಜಮಾನನ ಮನಸ್ಸನ್ನು ಗ್ರಹಿಸಿ ಅದಕ್ಕೆ ತಕ್ಕಂತೆ ವಾಯುವೇಗದಿಂದ ಮನೋವೇಗದಿಂದ ಹೋಗುತ್ತ ಇತ್ತು. ಯಾರಿಗೂ ಅದನ್ನು ಇದಿರಿಸುವುದು ಸಾಧ್ಯ ಇರಲಿಲ್ಲ. ಮಹಾಮಹಿಮರು ಪುಣ್ಯವಂತರು ಭಾಗ್ಯಸಂಪನ್ನ ಕೀರ್ತಿ ಶಾಲಿಗಳು ಸದಾಸಂತೋಷಿಗಳು ಆದ ದೇವೇಂದ್ರ ಮುಂತಾದ ದೇವತೆಗಳ ನಿವಾಸದ ಹಾಗೆ ಸ್ವರ್ಗದ ಹಾಗೆ ಇತ್ತು ಆ ವಿಮಾನ. ಅದರ ಶಿಲ್ಪಚಾತುರ್ಯ ಸರ್ವೋತ್ತಮ. ಅದಕ್ಕೆ ಉಪಯೋಗಿಸಿದ ವಸ್ತುಗಳು ಎಲ್ಲವೂ ಅನರ್ಘ. ಅದರಲ್ಲಿ ಅನೇಕ ಶಿಖರ. ಬಗೆಬಗೆಯ ಅವಾಂತರ ಶಿಖರಗಳು. ಮಹಾ ಪರ್ವತದಂತೆ ಒಪ್ಪಿ ಕಂಗೊಳಿಸುತ್ತಿತ್ತು. ಅದರ ಕಾಂತಿ ಶರಚ್ಚಂದ್ರನ ಹಾಗೆ. ಶುಭ್ರ, ಸ್ವಚ್ಛ.

ದೊಡ್ಡ ಮೈ, ದೊಡ್ಡ ಮೋರೆ, ದುಂಡಗೆ ಬಾಗಿದ ವಿಶಾಲನೇತ್ರ, ಕಿವಿ ಗಳಲ್ಲಿ ಕರ್ಣಕುಂಡಲ. ಇಂಥ ರಾಕ್ಷಸವಿಗ್ರಹಗಳೂ ಆಕಾಶದಲ್ಲಿ ತಿರುಗಾಡುವ ವೇಗಶಾಲಿ ಭೂತಗಣಗಳ ಪ್ರತಿಮೆಗಳೂ ಸಾವಿರಾರು ಆ ವಿಮಾನವನ್ನು ಹೊರುತ್ತ ಇವೆ. ವಸಂತಕಾಲದ ಹೂಗೊಂಚಲುಗಳ ಹಾಗೆ ವಸಂತಋತು ವನ್ನು ಮೀರಿಸಿ ರಮಣೀಯ ಆದದ್ದು ಆ ಪುಷ್ಪಕವಿಮಾನ.

ಹನುಮಂತ ಅದನ್ನು ನೋಡಿದ.

೯

ರಾಜಭವನದ ನಡುವೆ ಅತ್ಯುನ್ನತ ಸೌಧ ಒಂದು ಕಾಣಿಸಿತು. ಅರ್ಧ ಯೋಜನ ಅಗಲ, ಒಂದು ಯೋಜನ ಉದ್ದ. ಹಲವು ಅಂತಸ್ತು. ವಿಶಾಲಾಕ್ಷಿ ಸೀತಾದೇವಿ ಅಲ್ಲಿ ಇರಬಹುದು ಎಂದು ಸುತ್ತಲಿನ ಮನೆಗಳಲ್ಲಿ ಎಲ್ಲಾ ಮತ್ತೆ ಹುಡುಕಿದ. ಕಡೆಗೆ ಮತ್ತೆ ಆ ನಡುವಿನ ಸೌಧಕ್ಕೇ ಬಂದ.

ಅದೇ ರಾಕ್ಷಸರಾಜ ರಾವಣನ ಮನೆ. ಅದರ ಸುತ್ತಲೂ ಮದ್ದಾನೆಗಳ ಕಾವಲು. ಕೆಲವು ಎರಡು ಮೂರು ಕೊಂಬಿನ ಸಾಮಾನ್ಯ ಗಜಗಳು. ಕೆಲವು ನಾಲ್ಕು ಕೊಂಬಿನ ಆನೆ. ಕಾವಲು ಕಾಯುತ್ತ ಸುತ್ತಲೂ ಸುತ್ತುತ್ತ ಇವೆ.

ಅನೇಕ ಮಂದಿ ರಾಕ್ಷಸಭಟರೂ ಕಾವಲುಕಾಯುತ್ತ ಇದ್ದಾರೆ. ಅವರ ಕೈಯಲ್ಲಿ ಬಗೆಬಗೆಯ ಆಯುಧ. ಮನೆ ಬಲು ವಿಸ್ತಾರ. ಇಷ್ಟು ಆನೆ ಇಷ್ಟು ಕಾವಲುಗಾರರು ಇದ್ದರೂ ಜನಸಮ್ಮರ್ದ ಇದ್ದಂತೆ ಇರಲಿಲ್ಲ.

ರಾವಣಾಸುರನ ಪತ್ನಿಯರೆಲ್ಲರೂ ಇರುವುದು ಅಲ್ಲೇ. ದಿಗ್ವಿಜಯಕ್ಕೆ ಹೋದಾಗ ರಾವಣಾಸುರ ತನ್ನ ಪರಾಕ್ರಮದಿಂದ ಎತ್ತಿಕೊಂಡು ಬಂದ ಕೆಲವು ರಾಜಕುಮಾರಿಯರಿಗೂ ಅದೇ ನಿವಾಸ. ಮೊಸಳೆ ತಿಮಿಂಗಿಲ ಬಗೆಬಗೆಯ ಮೀನು ನೀರುಹಾವು ತುಂಬಿದ ಸಮುದ್ರದ ಹಾಗೆ ಇತ್ತು ಆ ಮಹಾಸೌಧ. ಈ ಹೆಂಗಸರು ಎಲ್ಲರೂ ಅತ್ತ ಇತ್ತ ತಿರುಗಾಡುತ್ತ ಇದ್ದರೆ ಸಮುದ್ರ ಗಾಳಿಗೆ ಅಲೆ ಆಡುತ್ತ ಇದೆಯೋ ಏನೋ ಎನಿಸುತ್ತಿತ್ತು.

ಎಲ್ಲಿ ನೋಡಿದರೂ ಆ ರಾಜಭವನದಲ್ಲಿ ಮಹಾವೈಭವ. ಕುಬೇರನ ಐಶ್ವರ್ಯ ದೇವೇಂದ್ರನ ವೈಭವ ಎರಡೂ ಸೇರಿದರೆ ಹೇಗೋ ಹಾಗೆ. ಯಮನ ಐಶ್ವರ್ಯ ವರುಣನ ಸಂಪತ್ತುಗಳಿಗಿಂತ ಹೆಚ್ಚು ರಾವಣನ ಅರಮನೆಯಲ್ಲಿಯೂ ಇತರ ರಾಕ್ಷಸರ ಮನೆಗಳಲ್ಲಿಯೂ.

ನಡುವೆ ಇದ್ದ ಆ ಸೌಧದ ಮೇಲೆ ಮತ್ತೊಂದು ವಿಮಾನ ಇತ್ತು. ಉತ್ತಮ ಭವನದ ಹಾಗೆ ಇತ್ತು ಆ ವಿಮಾನ. ಅದೇ ಪುಷ್ಪಕ. ಅದು ನವರತ್ನಖಚಿತ, ಸರ್ವಸಂಪನ್ನ. ನೋಡಲು ಬಲು ಅಂದ. ಹಿಂದೆ ಬ್ರಹ್ಮದೇವನಿಗೆ ಎಂದು ಮಾಡಿದ್ದು ಅದು. ಸ್ವಯಂ ವಿಶ್ವಕರ್ಮನೇ ಮಾಡಿದ್ದು. ಅನೇಕ ವರ್ಷಕಾಲ ಮಹತ್ತರ ತಪಸ್ಸುಮಾಡಿ ಬ್ರಹ್ಮದೇವನನ್ನು ಮೆಚ್ಚಿಸಿ ಅದನ್ನು ಪಡೆದ ಕುಬೇರ. ರಾವಣಾಸುರ ಕುಬೇರನನ್ನು ಜಯಿಸಿ ಆ ವಿಮಾನವನ್ನು ತಂದ.

ಹನುಮಂತ ಆ ವಿಮಾನಸೌಧವನ್ನು ಏರಿದ. ಅಲ್ಲಿ ಅಂದದ ಚಿನ್ನ ಬೆಳ್ಳಿಯ ಕಂಬಗಳ ದೇದೀಪ್ಯಮಾನ ಕಾಂತಿ. ತೋಳದ ಚಿತ್ರ ಇತರ ಮೃಗಗಳ ಚಿತ್ರ ಆ ಕಂಬಗಳ ಮೇಲೆ ಕೆತ್ತಿದೆ. ವಿಮಾನದಲ್ಲಿ ಅಂತಸ್ತು ಅಂತಸ್ತು ಆಗಿ ಸೊಗಸು ಆದ ಚಂದ್ರಶಾಲೆಗಳು ಇವೆ. ಮೇರು ಮಂದರ ಪರ್ವತಗಳ ಹಾಗೆ ಮುಗಿಲನ್ನು ಮುಟ್ಟುತ್ತ ಇದೆ ಆ ಪುಷ್ಪಕ ವಿಮಾನ. ಒಂದೊಂದು ಚಂದ್ರಶಾಲೆ ಒಂದೊಂದು ಉಪ್ಪರಿಗೆಯಲ್ಲಿ. ಒಂದೊಂದರಲ್ಲೂ ಮನೋಹರ ಆದ ದಿವ್ಯ ವೇದಿಕೆಗಳು. ಒಂದೊಂದಕ್ಕೂ ಬಂಗಾರದ ಸ್ಫಟಿಕದ ಮೆಟ್ಟಲಿನ ಸಾಲು. ಬಾಲಸೂರ್ಯನಂತೆ ಜ್ವಲಿಸುವ ಅಗ್ನಿಯ ಹಾಗೆ ನಿಗಿನಿಗಿ ಹೊಳೆಯುತ್ತ ಇದೆ.

ಸ್ವಸ್ತಿಕ ಮುಂತಾದ ಆಕಾರಗಳಲ್ಲಿ ಅಲಂಕಾರಕ್ಕೆ ಮಾಡಿದ ಚಿನ್ನದ ಬೆಳಕಿಂಡಿಗಳು ಗಾಳಿ ಬರಲು ಮಾಡಿದ ಚಿಕ್ಕ ಚಿಕ್ಕ ವಾತಾಯನಗಳು ಗೋಡೆಗಳಲ್ಲಿವೆ. ನೆಲಗಟ್ಟು ಹವಳದ್ದು. ನಡುನಡುವೆ ಬೆಲೆಬಾಳುವ ವಿವಿಧ ಮಣಿಮಾಣಿಕ್ಯಗಳನ್ನೂ ಗುಂಡುಮುತ್ತನ್ನೂ ಅಡಕಮಾಡಿದಾರೆ. ಇಂದ್ರನೀಲ ಮಹಾನೀಲ ಮಣಿಗಳನ್ನೂ ಜೋಡಿಸಿದಾರೆ. ಗೋಡೆಗಳಿಗೆ ಬಂಗಾರದ ನೀರನ್ನು ಗಮಗಮಿಸುವ ರಕ್ತಚಂದನ ಬೆರೆಸಿ ಬಳಿದು ಇದಾರೆ. ಅದರಿಂದ ದಿವ್ಯಪರಿಮಳ ಬೀರುತ್ತ ಉದಯಸೂರ್ಯನ ಹಾಗೆ ಹೊಳೆಯುತ್ತ ಇದೆ ವಿಮಾನ. ಚಂದ್ರಶಾಲೆಗಳು ಎಲ್ಲವೂ ವಿವಿಧಾಕಾರಗಳಿಂದ ವಿವಿಧ ಅಲಂಕಾರಗಳಿಂದ ಶೋಭಿಸುತ್ತ ಇವೆ. ಆ ದಿವ್ಯ ಗೃಹವನ್ನು ಏರಿದ ಮಾರುತಿ.

ಮೇಲೆ ವಿವಿಧ ಭಕ್ಷ್ಯ ನಾನಾಬಗೆಯ ಮೃಷ್ಟಾನ್ನ ಬಗೆಬಗೆಯ ಮದ್ಯ ಸುವಾಸನೆ ಬೀರುತ್ತ ಇವೆ. ಗಾಳಿ ಆ ಪರಿಮಳವನ್ನು ಹೊತ್ತು ತರುತ್ತಿದೆ. ಹನುಮಂತ ಆ ಸುಗಂಧವನ್ನು ಮೂಸಿದ. ಬಳಗದವರು ಮನೆಗೆ ಬಂದಾಗ ಇದಿರುಗೊಂಡು ಮನೆಯನ್ನು ತೋರಿಸುವ ಬಂಧುವಿನ ಹಾಗೆ ಆ ಸುಗಂಧಭರಿತ ಮಂದಮಾರುತ ಆ ಮಹಾಸತ್ವಶಾಲಿ ಹನುಮಂತನನ್ನು ಇತ್ತ ಬಾ, ಇತ್ತ ಬಾ ಎಂದು ರಾವಣಾಸುರ ಇರುವ ಸ್ಥಳಕ್ಕೆ ಕರೆದು ಒಯ್ಯುತ್ತ ಇತ್ತು.

ಆ ಸುಗಂಧದ ಹಿಂದೆಯೇ ಹೋದ ಹನುಮಂತ. ರಾವಣನ ಮನಸೆಳೆದ ಸುಂದರ ಸ್ತ್ರೀಯ ಹಾಗೆ ಇದ್ದ ಆ ಮಂಗಳಕರ ವಿಶಾಲ ಭವನಕ್ಕೆ ಹೋದ ಹನುಮಂತ. ಅಲ್ಲೋ ರತ್ನದ ಸೋಪಾನ. ಚಿನ್ನದ ಕಿಟಕಿ. ಸ್ಫಟಿಕದ ನೆಲಗಟ್ಟು. ನಡುನಡುವೆ ಕೆತ್ತನೆ ಮಾಡಿದ ದಂತದ ಹಲಗೆ. ಸುತ್ತಲೂ ಮುತ್ತು ಹವಳ ಚಿನ್ನಬೆಳ್ಳಿ ಕಂಬಗಳು. ನಡುನಡುವೆ ಮಣಿಮಯ ಸ್ತಂಭಗಳು. ಕಂಬಗಳಲ್ಲಿ ಸ್ವಲ್ಪವೂ ಕೊಂಕುಡೊಂಕು ಇಲ್ಲ. ಎಲ್ಲವೂ ನೇರ, ಪ್ರಮಾಣಬದ್ಧ. ಎಲ್ಲವೂ ಎತ್ತರ. ಆ ಕಂಬಗಳಿಗೆ ಮೇಲುಗಡೆ ರೆಕ್ಕೆಯ ಬೋದಿಗೆ. ಆ ರೆಕ್ಕೆಗಳನ್ನು ಕೆದರಿದಂತೆ ಕಡೆದದ್ದು ಇಡೀ ಭವನವನ್ನೇ ಅವು ಗರಿಗೆದರಿ ಆಕಾಶಕ್ಕೆ ಒಯ್ಯುತ್ತ ಇವೆಯೋ ಎಂಬ ಹಾಗೆ ಇತ್ತು.

ನೆಲದ ಮೇಲೆ ದಿವ್ಯ ರತ್ನಗಂಬಳಿ. ಬಹಳ ದೊಡ್ಡದು. ಭೂಮಿಯ ಮೇಲೆ ಇರುವ ಸಮಸ್ತ ಸಮುದ್ರ ಅರಣ್ಯ ಪರ್ವತಗಳನ್ನೂ ಆ ಕಂಬಳಿಯಲ್ಲಿ ಚಿತ್ರಿಸಿದಾರೆ. ನಾನಾ ದೇಶ ನಾನಾ ನಗರ ಅಲ್ಲಿಯ ಮನೆಗಳು ಎಲ್ಲವೂ ಇವೆ

ಚಿತ್ರದಲ್ಲಿ. ಇನ್ನೂ ಸರ್ವೋತ್ತಮ ಚಿತ್ರವಿಚಿತ್ರ ಕಂಬಳಿಗಳೂ ಇವೆ. ಪಕ್ಷಿಗಳ ಮಧುರಗಾನ ಕೇಳಿಸುತ್ತ ಇದೆ. ದಿವ್ಯ ಪರಿಮಳ ಗಮಗಮಿಸುತ್ತ ಇದೆ. ಅಗರುಧೂಪ ಹೊಗೆಯಾಡುತ್ತ ಇದೆ. ಅದರಿಂದ ಹಂಸದಂತೆ ಬೆಳ್ಳಗೆ ನಿರ್ಮಲ ಆದ ಆ ಭವನ ಸ್ವಲ್ಪ ಹೊಗೆಬಣ್ಣದಿಂದ ಕಾಣುತ್ತ ಇದೆ. ಅಲ್ಲಲ್ಲಿ ಹೂ ಚೆಲ್ಲಿದೆ. ಅದು ಹಲವು ಬಣ್ಣಗಳಿಂದ ಬೇಡಿದುದನ್ನು ಕೊಡುವ ಕಾಮಧೇನುವಿನ ಹಾಗೆ ಕಾಣುತ್ತ ಇದೆ. ಆ ಭವನದ ನೋಟವೇ ಮನಸಿಗೆ ಉಲ್ಲಾಸಕರ. ಆ ನೋಟ ಎಲ್ಲ ವ್ಯಥೆಯನ್ನೂ ನೀಗಿಸುತ್ತದೆ. ಅದರ ಕಾಂತಿಯಿಂದ ನೋಡುವವರ ಮೈಬಣ್ಣ ಕಟ್ಟುತ್ತದೆ.

ಸಮಸ್ತ ಭಾಗ್ಯದ ತವರು ಅದು. ದಿವ್ಯ ಸಂಪತ್ತಿನ ಸ್ಥಾನ. ಶಬ್ದ ಸ್ಪರ್ಶ ರೂಪ ರಸ ಗಂಧ ಎಂಬ ಐದು ವಿಷಯಗಳಿಂದ ಮಗುವಿನ ಕಿವಿ ಚರ್ಮ ಕಣ್ಣು ನಾಲಿಗೆ ಮೂಗು ಐದು ಇಂದ್ರಿಯಗಳನ್ನೂ ತಾಯಿ ತೃಪ್ತಿಪಡಿಸುವಂತೆ ಅದು ಆ ಕಪಿವೀರನ ಪಂಚೇಂದ್ರಿಯಗಳನ್ನೂ ತೃಪ್ತಿಪಡಿಸಿತು. ಹನುಮಂತ ಅದನ್ನು ನೋಡಿ ಆಶ್ಚರ್ಯಗೊಂಡ. 'ಇದೇನು ಸ್ವರ್ಗವೋ ದೇವಲೋಕವೋ ಇಂದ್ರನ ಅಮರಾವತಿಯೋ ತಪಸ್ಸಿದ್ಧಿರೂಪ ಆದ ಬ್ರಹ್ಮಲೋಕವೋ' ಎಂದು ಯೋಚಿಸಿದ.

ಬಂಗಾರದ ದೀಪಸ್ತಂಭಗಳಲ್ಲಿ ನಿಶ್ಚಲ ಆಗಿ ದೀಪ ಉರಿಯುತ್ತ ಇದೆ. ನಿಶ್ಚಲ ಧ್ಯಾನದಲ್ಲಿ ಮುಳುಗಿದವರ ಹಾಗೆ. ಜೂಜಿನಲ್ಲಿ ಧೂರ್ತರಿಗೆ ಸೋತ ಜೂಜುಗಾರರ ಹಾಗೆ ಅಲುಗಾಡದೆ ನಿಂತು ಇದೆ. ಆ ದೀಪಗಳ ಪ್ರಕಾಶ, ರಾವಣಾಸುರನ ದೇಹಕಾಂತಿ, ಅವನ ಆಭರಣಗಳ ಹೊಳಪು ಎಲ್ಲವೂ ಸೇರಿ ಒಂದು ಆಗಿ ಆ ದಿವ್ಯಭವನ ಧಗಧಗ ಉರಿಯುವ ಹಾಗೆ ಕಂಡಿತು.

ಹಲವು ಬಣ್ಣಬಣ್ಣದ ಸೀರೆ ಉಟ್ಟು ಬಣ್ಣಬಣ್ಣದ ಹೂಮಾಲೆಗಳನ್ನು ಧರಿಸಿ ಬಗೆಬಗೆಯ ತೊಡವು ತೊಟ್ಟು ಹಲವು ಬಗೆಯ ವೇಷದ ಹೆಂಗಸರು ಅನೇಕರು ಆ ರತ್ನಕಂಬಳಿಗಳ ಮೇಲೆ ಮಲಗಿ ನಿದ್ರಿಸುತ್ತಿದಾರೆ. ರಾತ್ರಿ ಬಹಳ ಹೊತ್ತಿನವರೆಗೆ ಹಲವಾರು ಬಗೆಯಲ್ಲಿ ಕ್ರೀಡಿಸಿದರು. ಮದ್ಯಪಾನ ಮಾಡಿದರು. ಪಾನಮದ, ನಿದ್ರಾಮದ. ಕ್ರೀಡಾಯಾಸ ಬೇರೆ. ಮೈಮರೆತು ಮಲಗಿದಾರೆ. ಸ್ವಲ್ಪವೂ ಸದ್ದು ಇಲ್ಲ. ನಿಶ್ಶಬ್ದ. ಕಣ್ಣು ಮುಚ್ಚಿ ಹಲ್ಲು ಕಾಣದಂತೆ ತುಟಿ ಬಿಗಿದುಕೊಂಡು ಮಲಗಿದಾರೆ. ಕಮಲವನದ ಹಂಸಗಳ ಹಾಗೆ ತುಂಬಿಗಳ

ಹಾಗೆ. ಎಲ್ಲರೂ ಚೆಲುವೆಯರು. ಅವರ ಮುಖಗಳಿಂದ ಕಮಲದ ಗಂಧ ಬರುತ್ತಿದೆ. ಬೆಳಗು ಆದೊಡನೆ ಅರಳಿ ಸಂಜೆ ಆದ ಒಡನೆ ಮುಚ್ಚಿಕೊಳ್ಳುವ ತಾವರೆಹೂಗಳ ಹಾಗೆ ಇದ್ದವು ಅವರ ಮುಖ.

ಆ ಹೆಂಗಸರ ಮುಖದ ಪದ್ಮಗಂಧಕ್ಕೆ ಆಸೆಪಟ್ಟು ಅವರ ಮುಖಕಮಲಗಳನ್ನು ಮುತ್ತಿ ಇದ್ದವು ಮಧುಮತ್ತ ಭ್ರಮರಗಳು. ಆ ದುಂಬಿಗಳ ಭ್ರಾಂತಿಯನ್ನು ನೋಡಿ ಹನುಮಂತ ಬೆರಗು ಆದ. ನಿರ್ಮಲ ನಕ್ಷತ್ರಗಳಿಂದ ತುಂಬಿ ಹೊಳೆಯುವ ಶರತ್ಕಾಲದ ಆಕಾಶದಂತೆ ಶೋಭಿಸಿತು ಆ ಸ್ತ್ರೀರತ್ನಗಳಿಂದ ರಾವಣನ ಆ ಕ್ರೀಡಾಸದನ. ಆ ಹೆಂಗಸರು ಎಲ್ಲರ ನಡುವೆ ಮಲಗಿದ್ದ ರಾಕ್ಷಸೇಂದ್ರ ರಾವಣ. ನಕ್ಷತ್ರಗಳ ನಡುವೆ ಹೊಳೆಯುವ ಚಂದ್ರನ ಹಾಗೆ ಕಾಣುತ್ತ ಇದ್ದ. ಅವರು ಹೆಂಗಸರು ಮನುಷ್ಯರು ಅಲ್ಲ, ಇನ್ನೂ ಪುಣ್ಯ ಇರುವಾಗಲೇ ಗಗನದಿಂದ ಜಾರಿಬಿದ್ದ ಸ್ತ್ರೀರೂಪದ ನಕ್ಷತ್ರಗಳು ಇರಬೇಕು ಎಂದು ಎನಿಸಿತು ಹನುಮಂತನಿಗೆ. ನಕ್ಷತ್ರಗಳ ಪ್ರಸ್ಫುಟ ಅಸಮಾನ ಕಾಂತಿ, ಅವುಗಳ ಲಾವಣ್ಯ ನೈರ್ಮಲ್ಯ ಅಲ್ಲಿ ಮಲಗಿ ಇದ್ದ ಹೆಂಗಸರಲ್ಲಿ ಕಂಡುಬಂದವು.

ಆ ಹೆಂಗಸರು ಎಲ್ಲರೂ ಮಧುಪಾನಮಾಡಿದ್ದರು. ರತಿಕ್ರೀಡೆ ಆಡಿದ್ದರು. ಆ ಮದನೋದ್ಯೋಗದಲ್ಲಿ ಅವರು ಧರಿಸಿದ ದೊಡ್ಡ ಹೂಮಾಲೆಗಳೂ ತೊಟ್ಟ ಒಡವೆಗಳೂ ಅಸ್ತವ್ಯಸ್ತ ಆಗಿ ನೆಲೆತಪ್ಪಿದ್ದವು. ಈಗಲೋ ಗಾಢನಿದ್ರೆ. ಕೆಲವರ ಮುಖದ ತಿಲಕ ಬೆವರಿಗೆ ಕರಗಿಹೋಗಿತ್ತು. ಕೆಲವರ ಕಾಲಂದುಗೆ ಕಾಲ್ಬಳೆ ಜಾರಿಬಿದ್ದವು. ಕಂಠಹಾರ ಕೆಲವರದು ಪಕ್ಕಕ್ಕೆ ಸರಿದು ಬಿದ್ದಿತ್ತು. ಕೆಲವರ ಮುತ್ತಿನ ಸರ ತೊಡರಿಕೊಂಡಿತ್ತು. ಕೆಲವರು ಉಟ್ಟ ಸೀರೆ ಜಾರಿಹೋಗಿತ್ತು. ಕೆಲವರ ಒಡ್ಯಾಣ ಬಿಚ್ಚಿಹೋಗಿತ್ತು. ಭಾರ ಹೊತ್ತು ತಂದ ಹೆಣ್ಣುಕುದುರೆ ಮರಿ ದೂರ ಪ್ರಯಾಣದ ಬಳಲಿಕೆಯನ್ನು ಕಳೆದುಕೊಳ್ಳಲು ನೆಲದ ಮೇಲೆ ಹೊರಳಾಡುವಂತೆ ಹೊರಳಾಡುತ್ತ ಇದ್ದರು ಅವರು. ಮದ್ದಾನೆಯ ತುಳಿತಕ್ಕೆ ನಲುಗಿಹೋದ ಹೂಬಳ್ಳಿಯ ಹಾಗೆ ಇದ್ದರು ಕೆಲವರು ಲಲನೆಯರು ಕಿವಿಯಲ್ಲಿ ರತ್ನದ ಕುಂಡಲಗಳನ್ನು ಧರಿಸಿ ಕತ್ತಿನ ಹಾರಗಳನ್ನು ನಲುಗಿಸಿಕೊಂಡು.

ಆ ಉತ್ತಮಾಂಗನೆಯರು ಕೆಲವರು ಧರಿಸಿದ ಮುತ್ತಿನ ಸರಗಳು ಚಂದ್ರ ಕಿರಣಗಳಂತೆ ಹೊಳೆಯುತ್ತ ಅವರ ಮೊಲೆಗಳ ನಡುವೆ ಮಲಗಿ ನಿದ್ರಿಸುವ ಹಂಸಗಳಂತೆ ಕಂಡವು. ಕೆಲವರು ವೈಡೂರ್ಯ ಆಭರಣ ಇಟ್ಟುಕೊಂಡಿದ್ದರು.

ಅವು ಕಲಹಂಸಗಳ ಹಾಗೆ ಇದ್ದವು. ಕೆಲವರ ಚಿನ್ನದ ಎದೆಗಟ್ಟು ಚಕ್ರವಾಕ ಪಕ್ಷಿಗಳ ಹಾಗೆ. ಅವರ ನಿತಂಬಗಳು ದೊಡ್ಡವು. ಮರಳುದಿಣ್ಣೆಗಳ ಹಾಗೆ ಇದ್ದವು. ಅವರ ಒಡ್ಯಾಣದ ಕಿರುಗೆಜ್ಜೆಗಳು ತಾವರೆಯ ಮೊಗ್ಗಿನ ಹಾಗೆ. ಅರಳಿದ ಕಮಲದ ಹಾಗೆ ಅವರ ಚಿನ್ನದ ಒಡವೆ. ಅವರ ಶೃಂಗಾರಚೇಷ್ಟೆ ಮೊಸಳೆಯಂತೆ. ಅವರಿಗೆ ಕೀರ್ತಿಕಾರಣ ಆದ ಅವರ ದೇಹಕಾಂತಿ ದಡಗಳ ಹಾಗೆ. ಮಲಗಿದ್ದ ಆ ಹೆಂಗಸರು ನದಿಗಳಂತೆ ಕಂಗೊಳಿಸಿದರು.

ಆ ಲಲನೆಯರು ಕೆಲವರು ತಮ್ಮ ಒಡವೆಗಳನ್ನು ತೆಗೆದು ಇಟ್ಟಿದ್ದರು. ಆದರೂ ಅವರ ಕುಸುಮಕೋಮಲ ಅವಯವಗಳ ಮೇಲೂ ಅವರ ಮೊಲೆಯ ತುದಿಗಳ ಮೇಲೂ ಆ ಒಡವೆಗಳ ಒತ್ತಿನಿಂದ ಬಿದ್ದ ಗೆರೆಗಳೇ ಒಡವೆಗಳಂತೆ ಕಾಣುತ್ತ ಇದ್ದವು. ಅವರು ಬಿಡುತ್ತ ಇದ್ದ ಉಸಿರಿಗೆ ಅವರ ಸೀರೆಯ ಸೆರಗು ಅವರ ಮುಖವನ್ನು ಮುಚ್ಚುತ್ತ ತೆರೆಯುತ್ತ ಆಡುವಾಗ ಗಾಳಿಗೆ ಹಾರಾಡುವ ಪತಾಕೆಗಳಂತೆ ಆ ಚೆಲುವೆಯರ ಮುಖದ ಮೇಲೆ ಮನೋಹರ ಆಗಿ ಹಾರಾಡುತ್ತ ಇದ್ದವು. ಆ ಉಸಿರಿನ ಗಾಳಿಗೆ ಕೆಲವರ ಕಿವಿಯ ಕುಂಡಲಗಳು ಮೆಲ್ಲನೆ ಅಲುಗಾಡುತ್ತ ಇದ್ದವು.

ಅವರ ಉಸಿರು ಸಹಜ ಆಗಿಯೇ ಸುವಾಸನೆ ಬೀರುತ್ತ ಇತ್ತು. ಸಕ್ಕರೆ ಕಲೆಸಿದ ಮದ್ಯಪಾನ ಮಾಡಿದ್ದರಲ್ಲ. ಆದರ ವಾಸನೆಯೂ ಸೇರಿ ಅವರು ಬಿಡುವ ಉಸಿರು ಬಹಳ ಸುವಾಸನೆ ಆಗಿತ್ತು. ಆ ಗಾಳಿ ರಾವಣಾಸುರನನ್ನು ಆನಂದ ಪಡಿಸುವ ಹಾಗೆ ಇತ್ತು. ಮದ್ಯಮದ. ಮೈಮರೆತು ನಿದ್ದೆಮಾಡುತ್ತ ಇದಾರೆ. ನಿದ್ದೆಯಲ್ಲೆ ಪಕ್ಕದಲ್ಲಿ ಮಲಗಿದ್ದ ಸವತಿಯ ಮುಖವನ್ನು ತಮ್ಮ ನಲ್ಲ ರಾವಣನ ಮುಖ ಎಂದು ತಿಳಿದು ಮೂಸುತ್ತ ಇದಾರೆ ಕೆಲವರು. ತಮ್ಮನ್ನು ಮೂಸುವವರು ತಮ್ಮ ಸವತಿಯರೆಂದು ಅವರಿಗೂ ತಿಳಿಯದು. ಮದ್ಯದ ಮಂಕು. ತಮ್ಮ ನಲ್ಲ ರಾವಣನೇ ಮೂಸುತ್ತ ಇದಾನೆ ಎಂದು ಭ್ರಾಂತಿಯಿಂದ ತಾವೂ ಸಂತೋಷದಿಂದ ತಿರುಗಿ ಮೂಸುತ್ತ ಇದಾರೆ, ಮುತ್ತು ಇಡುತ್ತ ಇದಾರೆ.

ಕೆಲವರು ಥಳಥಳ ಹೊಳೆಯುವ ಕಂಕಣಕೇಯೂರಗಳಿಂದ ಸಿಂಗರಿಸಿ ಕೊಂಡ ತಮ್ಮ ತೋಳನ್ನು ತಲೆಗಿಂಬು ಆಗಿ ಮಾಡಿಕೊಂಡಿದಾರೆ. ಕೆಲವರಿಗೆ ಉಟ್ಟ ಬಟ್ಟೆಯೆ ತಲೆಗಿಂಬು ಆಗಿದೆ. ಒಬ್ಬಳು ಪಕ್ಕದಲ್ಲಿ ಮಲಗಿದ ಮತ್ತೊಬ್ಬಳ ಎದೆಯ ಮೇಲೆ ತಲೆ ಇಟ್ಟುಕೊಂಡಿದಾಳೆ. ಒಬ್ಬಳ ಭುಜದ ಮೇಲೆ ಒಬ್ಬಳು.

ಸಾಲಿಗೆ ಸಾಲೇ ಹೀಗೆ. ಒಬ್ಬರು ಇನ್ನೊಬ್ಬರ ತೊಡೆಯ ಮೇಲೆ ಬೆನ್ನಿನ ಮೇಲೆ ಸೊಂಟದ ಮೇಲೆ ಪೃಷ್ಠದ ಮೇಲೆ ತಲೆ ಇಟ್ಟು ಮಲಗಿದಾರೆ. ಒಬ್ಬರ ಮೇಲೆ ಒಬ್ಬರು ಕೈಕಾಲು ಬೀಸಿ ಮಲಗಿಕೊಂಡು ಇದಾರೆ.

ಒಬ್ಬರ ಮೇಲೆ ಒಬ್ಬರು ಕೈ ಹಾಕಿಕೊಂಡು ಸಾಲು ಆಗಿ ಮಲಗಿದ ಆ ಹೆಂಗಸರ ಭುಜಪಙ್ತ್ತಿ ಒಂದು ದೊಡ್ಡ ಹೂವಿನ ಸರದ ಹಾಗೆ ಇತ್ತು. ಆ ಹೂಮಾಲೆಗೆ ಮುತ್ತಿದ ದುಂಬಿಗಳ ಗುಂಪಿನ ಹಾಗೆ ಅವರ ಕಪ್ಪುಕೂದಲಿನ ತಲೆಗಳು. ಅವರ ಉಸಿರಾಟದಿಂದ ಅವರ ಕತ್ತುಗಳಲ್ಲಿ ಇದ್ದ ಹೂಮಾಲೆಗಳು ಒಂದರಲ್ಲಿ ಒಂದು ತೊಡರಿಕೊಂಡು ಇವೆ. ಒಬ್ಬರನ್ನು ಒಬ್ಬರು ಅಪ್ಪಿಕೊಂಡು ಮಲಗಿದ್ದುದರಿಂದ ಒಬ್ಬರ ಮುಂಗುರುಳಿನಲ್ಲಿ ಇನ್ನೊಬ್ಬರ ಮುಂಗುರುಳು ಸೇರಿ ಹೋಗಿದೆ. ವೈಶಾಖ ಮಾಸದಲ್ಲಿ ಹೂಬಳ್ಳಿಗಳು ಎಲ್ಲಾ ಅರಳಿ ಹೂ ತುಂಬಿ ಒಂದಕ್ಕೆ ಒಂದು ಹೆಣೆದುಕೊಂಡು ಒಂದರಲ್ಲಿ ಒಂದು ಬೆರೆತು ಗಿಡಗಳ ಮೇಲೆ ಹರಡಿಕೊಂಡು ಕಲೆತುಹೋದ ಲತಾಕುಂಜದಂತೆ ಕಂಡಿತು ಆ ದೃಶ್ಯ.

ರಾವಣಾಸುರನ ಆ ಕಾಂತಾಕದಂಬದಲ್ಲಿ ಆ ಹೆಂಗಸರು ಇಟ್ಟ ಒಡವೆ, ಉಟ್ಟ ಸೀರೆ, ಮುಡಿದ ಹೂಮಾಲೆ, ಅವರವರ ಮೈ, ಇಂಥವರದೇ ಎಂದು ಬಿಡಿಸಿ ಹೇಳುವುದು ಸಾಧ್ಯವೇ ಇರಲಿಲ್ಲ. ಎಲ್ಲರೂ ಒಂದೇ ಹೂವಿನ ಸರದ ಹಾಗೆ ಮಲಗಿ ಇದಾರೆ. ಸುಖನಿದ್ರೆ ಮಾಡುತ್ತ ಇದ್ದ ರಾವಣ. ಇದೇ ಸಮಯ ರಾವಣನ ಈ ಸುಂದರ ಸ್ತ್ರೀಯರನ್ನು ನೋಡಲಿಕ್ಕೆ ಎಂದು ಅಲ್ಲಿ ಚಿನ್ನದ ದೀಪ ಸ್ತಂಭಗಳಲ್ಲಿ ಅಲುಗಾಡದೆ ನಿಶ್ಚಲ ಆಗಿ ಉರಿಯುತ್ತ ಇದ್ದವು.

ರಾವಣನ ಆ ಕ್ರೀಡಾಭವನದಲ್ಲಿ ಹಾಗೆ ಮಲಗಿ ಇದ್ದ ಚೆಲುವೆಯರು ಎಲ್ಲರೂ ರಾವಣನನ್ನು ಕಾಮಿಸಿ ತಾವೇ ಬಂದ ದೇವದಾನವಗಂಧರ್ವ ಯಕ್ಷ ರಾಕ್ಷಸಕನ್ಯೆಯರು. ಒಬ್ಬಳನ್ನು ಆದರೂ ರಾವಣ ಮೋಹಿಸಿ ಬಲಾತ್ಕಾರದಿಂದ ಎತ್ತಿಕೊಂಡು ಬಂದು ಇರಲಿಲ್ಲ. ಅವರನ್ನು ಎತ್ತಿಕೊಂಡು ಬಂದರೆ ಅವರ ಕಡೆಯವರು ಯುದ್ಧಕ್ಕೆ ಬರಲಿ ಎಂದು ಯುದ್ಧಾಪೇಕ್ಷೆಯಿಂದ ಕೆಲವರನ್ನು ಎತ್ತಿಕೊಂಡುಬಂದಿದ್ದ. ಕೆಲವರು ಕಾಮಮೋಹಿತೆಯರು, ರಾವಣನನ್ನು ಒಲಿದು ಬಂದಿದ್ದರು. ಅಲ್ಲಿ ಇದ್ದ ಯಾವ ಹೆಂಗಸನ್ನೂ ಅವನು ಬಲಾತ್ಕರಿಸಿದವನು ಅಲ್ಲ. ಆ ಹೆಂಗಸರೂ ಹಾಗೇ. ರಾವಣನನ್ನು ಬಿಟ್ಟು ಬೇರೆ ಯಾರನ್ನೂ ಎಂದೆಂದಿಗೂ ಬಯಸಿದವರು ಅಲ್ಲ. ಅವನ ಚೆಲುವಿಗೆ ಮರುಳು ಆದವರೇ

ಎಲ್ಲರೂ. ಯಾರೂ ಅದಕ್ಕೆ ಮೊದಲು ಬೇರೆ ಯಾರನ್ನೂ ಮದುವೆ ಆದವರು ಅಲ್ಲ. ಯಾರೂ ಕಡಮೆ ಕುಲದವರು ಅಲ್ಲ. ಎಲ್ಲರೂ ಸತ್ಕುಲಪ್ರಸೂತೆಯರು. ರೂಪಹೀನೆ ಸತ್ಯಹೀನೆ ಅಸಮರ್ಥೆ ಉಪಚಾರಹೀನೆ ಆದವಳು ಒಬ್ಬಳೂ ಇಲ್ಲ. ರಾವಣನಿಗೆ ಮೋಹಪಾತ್ರಳು ಅಲ್ಲದವಳೂ ಯಾರೂ ಇಲ್ಲ.

ಸೀತಾದೇವಿ ಒಬ್ಬಳೇ ರಾವಣನನ್ನು ಮೋಹಿಸದವಳು. ಪರಮಪತಿವ್ರತೆ ಆಕೆ. ರಾವಣ ಬಲಾತ್ಕಾರದಿಂದ ತಂದದ್ದೂ ಆಕೆ ಒಬ್ಬಳನ್ನೇ. ' ಈ ಎಲ್ಲ ಹೆಂಗಸರು ರಾಕ್ಷಸರಾಜನ ಬಳಿ ಸುಖದಿಂದ ಇರುವಂತೆಯೇ ಶ್ರೀರಾಮಪತ್ನಿ ಸೀತಾದೇವಿಯೂ ರಾಮನ ಬಳಿ ಇದ್ದಿದ್ದರೆ! ಈ ರಾವಣ ಹೀಗೆ ಏಕೆ ಆಕೆಯನ್ನು ಕದ್ದು ತಂದನೋ. ಎಂಥ ಅಕೃತ್ಯ ಮಾಡಿದ ಈ ಮಹಾಪರಾಕ್ರಮಿ. ಏನು ಗತಿಯೋ ಇವನಿಗೆ!' ಎಂದುಕೊಂಡ ಆಂಜನೇಯ.

೧೦

ಅಲ್ಲಿ ಹನುಮಂತನಿಗೆ ಕಂಡುಬಂದದ್ದು ರಾವಣಾಸುರನ ಶಯನವೇದಿಕೆ. ಅತ್ಯುತ್ತಮ ಸ್ಫಟಿಕಮಣಿಗಳ ಥಳಥಳ ಹೊಳಪು, ನವರತ್ನಗಳ ನಿಗಿನಿಗಿ ಕಾಂತಿ. ಸ್ವರ್ಗಸಮಾನ ಆ ಶಯನವೇದಿಕೆ. ಸುತಲೂ ದಂತದ ಕೆತ್ತನೆಯ ಅಂಚು. ಚಿನ್ನದ ಕುಸುರಿ. ಆಸನಗಳು ಬಂಗಾರದ್ದು. ದಂತದ ಕೆತ್ತನೆ ವೈಡೂರ್ಯ ಮಣಿಗಳ ಅಲಂಕಾರ ಅವಕ್ಕೆ. ಅವುಗಳ ಮೇಲೆ ಅಮೂಲ್ಯ ಆದ ಹಾಸಿಗೆಗಳು. ಆಸನಗಳು ವಿವಿಧ ಆಕಾರದವು. ಸರ್ವೋತ್ತಮ ಸೌಭಾಗ್ಯದಿಂದ ತುಳುಕುತ್ತ ಇತ್ತು ಆ ವೇದಿಕೆ.

ನಟ್ಟನಡುವೆ ರಾವಣನ ಮಂಚ. ಆ ಚಿನ್ನದ ಮಂಚಕ್ಕೆ ಮುತ್ತಿನ ಕುಚ್ಚು. ಸುತ್ತಲೂ ಅಶೋಕಪುಷ್ಪಹಾರಗಳು ನೇತಾಡುತ್ತ ಇವೆ. ಸೂರ್ಯನ ಹಾಗೆ ಹೊಳೆಯುತ್ತ ಇದೆ ಆ ಮಂಚ. ನಾಲ್ಕೂ ಕಡೆಯೂ ಕೀಲುಬೊಂಬೆಗಳು ನಿಂತು ಚಾಮರ ಬೀಸುತ್ತ ಇವೆ. ಮಂಚದ ತಲೆಯ ಕಡೆ ಬೆಳ್ಳಗೆ ಚಂದ್ರಬಿಂಬದ ಹಾಗೆ ಹೊಳೆಯುವ ಶ್ವೇತಚ್ಛತ್ರ. ಅದಕ್ಕೆ ಬಿಳಿಯ ಮುತ್ತಿನ ಗೊಂಡೆಗಳು. ವಿವಿಧ ಸುಗಂಧಗಳ ಪರಿಮಳ ಹರಡಿದೆ ಅಲ್ಲಿ. ಶ್ರೇಷ್ಠ ಅಗರುಧೂಪದ ಹೊಗೆ ಅಲ್ಲಿ ತುಂಬಿದೆ. ಸೊಗಸು ಆದ ದೊಡ್ಡ ಹಾಸು ಒಂದನ್ನು ಹಾಸಿದಾರೆ. ಅದರ

ಮೇಲೆ ಕುರಿತೊಗಲನ್ನು ಹಾಸಿದೆ. ಸುತ್ತಲೂ ಹೂವಿನ ಕುಚ್ಚು ತೂಗಾಡುತ್ತ ಗಮಗಮ ವಾಸನೆ ಬೀರುತ್ತ ಇವೆ.

ಅಲ್ಲಿ ಮಲಗಿದಾನೆ ರಾವಣೇಶ್ವರ. ಮಹಾಬಾಹು, ಸಮಸ್ತ ರಾಕ್ಷಸ ಕುಲರಕ್ಷಕ. ಕಾರ್ಮುಗಿಲು ಇಲ್ಲಿ ಮಲಗಿ ಇದೆ ಎಂಬ ಹಾಗೆ. ಕಿವಿಯಲ್ಲಿ ಥಗಥಗಿಸುವ ಕರ್ಣಕುಂಡಲಗಳು. ರಕ್ತದಂತೆ ಕೆಂಪು ಕಣ್ಣು. ಉಟ್ಟದ್ದು ಚಿನ್ನದ ಸರಿಗೆಯ ಪಂಚೆ. ಗಮಗಮಿಸುವ ರಕ್ತಚಂದನದ ಲೇಪನ ಮೈಗೆ. ಸಂಜೆಗೆಂಪಿನಿಂದ ಮಿಂಚುವ ನೀಲಮೇಘದಂತೆ ಕಂಡ ರಾವಣಾಸುರ ಹನುಮಂತ ನಿಗೆ. ದಿವ್ಯಾಭರಣಭೂಷಿತ. ಬಹಳ ಚೆಲುವ. ಕಾಮರೂಪ. ರಾತ್ರಿ ಎಲ್ಲಾ ನಾನಾ ಕ್ರೀಡೆ ಆಡಿ ಬಳಲಿ ನಿದ್ದೆಮಾಡುತ್ತ ಇದಾನೆ. ಗಿಡಬಳ್ಳಿ ಪೊದರುಗಳ ಮಹಾರಣ್ಯಸಮೇತ ಮಂದರಪರ್ವತ ನಿದ್ದೆಹೋದಹಾಗೆ.

ಮದ್ದಾನೆಯಂತೆ ಬುಸುಗುಟ್ಟುತ್ತ ಮಲಗಿದ್ದ ಆ ಮಹಾಪರಾಕ್ರಮಶಾಲಿ ರಾವಣ. ಅವನ ಮಂಚದ ಬಳಿಗೆ ಹೋದ ಹನುಮಂತ. ಆ ರಾಕ್ಷಸನನ್ನು ನೋಡಿ ಬೆದರಿ ಸ್ವಲ್ಪ ಹಿಂದೆ ಸರಿದ. ಪಿಶಾಚಿಯನ್ನು ಕಂಡರೆ ಹಿಂಜರಿಯುವ ಹಾಗೆ. ಹಿಂದೆ ಸರಿದು ಮೆಟ್ಟಲನ್ನು ಏರಿದ. ಮೆಟ್ಟಲ ಮಧ್ಯೆ ಇರುವ ತಿರುವಿನ ಜಗಲಿಯ ಮೇಲೆ ಕುಳಿತ. ಅಲ್ಲಿಂದಲೇ ನೋಡಿದ ನಿದ್ದೆ ಮಾಡುತ್ತ ಇದ್ದ ರಾವಣನನ್ನು.

ಮದಗಜ ಒಂದು ಮಲಗಿದ ಗಿರಿನದಿಯ ಹಾಗೆ ಇತ್ತು ಅವನು ಮಲಗಿದ ಹಾಸಿಗೆ. ಮದಗಜ ಮಲಗಿದ ಮಡುವಿಗೆ ಬೇರೆ ಆನೆ ಸುಳಿಯದು. ಚಿನ್ನದ ತೋಳ್ಬಳೆಗಳನ್ನು ತೊಟ್ಟ ಅವನ ಎರಡೂ ತೋಳು ಇಂದ್ರಧ್ವಜದ ಹಾಗೆ ಚಾಚಿಕೊಂಡು ಇದ್ದವು. ಐರಾವತದ ಕೊಂಬಿನ ತಿವಿತದ ಗಾಯದ ಗುರುತು, ಇಂದ್ರ ವಜ್ರಾಯುಧದಿಂದ ಹೊಡೆದಾಗ ಆದ ಗಾಯದ ಗುರುತು, ಮಹಾವಿಷ್ಣು ವಿನ ಚಕ್ರಾಯುಧದ ಗುರುತಿನ ಮಚ್ಚೆ ಸ್ಪಷ್ಟ ಕಾಣುತ್ತಿದ್ದವು. ಮಾಂಸಖಂಡ ತುಂಬಿ ಆ ತೋಳುಗಳು ದಪ್ಪ ಆಗಿ ಬಲಿತರೂ ದೇಹದ ಪ್ರಮಾಣಕ್ಕೆ ಅನುಗುಣ. ಹೆಬ್ಬೆರಳು ಚೆನ್ನಾಗಿ ಬಲಿತು ಅವಕ್ಕೆ ತಕ್ಕ ಎಸಳು ಆದ ಬೆರಳು ಇವೆ. ಅವಕ್ಕೆ ಶುಭಲಕ್ಷಣ ಇರುವ ಉಗುರು. ಒಂದರಿಂದ ಒಂದಕ್ಕೆ ಅಂದ ಹೆಚ್ಚು. ಆ ಬೆರಳಿಗೆ ಥಗಥಗ ಹೊಳೆಯುವ ಉಂಗುರಗಳು. ಆ ಬೆಳ್ಳನೆ ಹಾಸಿಗೆಯ ಮೇಲೆ ಕಬ್ಬಿಣದ ಅಗಳಿಗಳ ಹಾಗೆ ಗಡುಸು, ಆನೆಯ ಸೊಂಡಿಲಿನ ಹಾಗೆ ದುಂಡು,

ಐದು ಹೆಡೆಯ ಮಹಾಸರ್ಪದ ಹಾಗೆ ಉದ್ದ ಆದ ಎರಡೂ ತೋಳು. ಮೊಲದ ನೆತ್ತರಿನ ಹಾಗೆ ಅಚ್ಚಕೆಂಪುಬಣ್ಣದ ಗಂಧ ಬಳಿದ ಆ ತೋಳುಗಳು ತಂಪನ್ನೂ ಕಂಪನ್ನೂ ಬೀರುತ್ತ ಇವೆ. ಉತ್ತಮಾಂಗನೆಯರ ಗಾಢಾಲಿಂಗನದಿಂದ ಆ ತೋಳಿನ ಪರಿಮಳ ಇಮ್ಮಡಿಸಿದೆ. ಇವೇ ತೋಳೇ ಇದುವರೆಗೆ ಯಕ್ಷಗಂಧರ್ವ ಪನ್ನಗ ದೇವದಾನವರನ್ನು ಗೋಳಾಡಿಸಿದಂಥವು. ಕೋಪದಿಂದ ಕನಲಿದ ಕೃಷ್ಣಸರ್ಪ ಮಂದರಪರ್ವತದ ಮೇಲೆ ಮಲಗಿದ ಹಾಗೆ ಆ ಸುಖತಲ್ಪದಲ್ಲಿ ನೀಡಿದ ರಾವಣನ ತೋಳು ಕಾಣಬಂದವು. ಎರಡು ಶಿಖರಗಳ ಮಂದರಗಿರಿಯ ಹಾಗೆ ಇದ್ದ ರಾವಣ ಆ ಎರಡೂ ತೋಳನ್ನು ಹಾಗೆ ನೀಡಿ ಮಲಗಿದ್ದಾಗ.

ಅವನ ಮೂಗಿನಿಂದ ಹೊರಡುತ್ತಿದ್ದ ನಿಃಶ್ವಾಸದ ಜೊತೆಯಲ್ಲಿ ಅವನ ಬಾಯಿಂದ ಹೊರಟ ಸಿಹಿಮಾವು ಸುರಹೊನ್ನೆ ಬಕುಳಹೂಗಳ ಪರಿಮಳ, ಮೃಷ್ಟಾನ್ನದ ಗಂಧ, ದ್ರಾಕ್ಷಾರಸದ ಸುವಾಸನೆ ಆ ಮನೆಯಲ್ಲಿ ಎಲ್ಲೆಲ್ಲೂ ಹರಡಿ ಇತ್ತು. ರತ್ನಖಚಿತ ಸುವರ್ಣ ಕಿರೀಟ ಅವನ ತಲೆಯಿಂದ ಸರಿದು ಇತ್ತು. ದೇದೀಪ್ಯಮಾನ ಕರ್ಣಕುಂಡಲಗಳ ಕಾಂತಿಗೆ ಅವನ ಮುಖ ಬೆಳಗುತ್ತ ಇತ್ತು. ಅವನ ವಕ್ಷಸ್ಥಲ ವಿಶಾಲ. ಅದರ ಮೇಲೆ ರಕ್ತಚಂದನದ ಲೇಪನ. ಕಂಠದಲ್ಲಿ ಪ್ರಕಾಶಮಾನ ಹಾರ. ಎಲ್ಲವೂ ಅವನ ರಾಜತೇಜಕ್ಕೆ ಕಳೆಕಟ್ಟುತ್ತ ಇದ್ದವು. ಅವನ ಸೊಂಟದಲ್ಲಿ ಬಿಳಿಯ ರೇಶಿಮೆಯ ವಸ್ತ್ರ. ಮೈಮೇಲೆ ಹಳದಿ ಬಣ್ಣದ ಪೀತಾಂಬರ. ಕಣ್ಣು ಕೆಂಗಣ್ಣು. ಉದ್ದಿನ ಹಾಗೆ ಕಪ್ಪು ಮೈ. ಅವನು ನಿಟ್ಟುಸಿರು ಬಿಟ್ಟರೆ ಮಹಾಸರ್ಪ ಬುಸುಗುಟ್ಟುವಂತೆ ಇತ್ತು. ಗಂಗಾನದಿಯ ನೀರಿನಲ್ಲಿ ಮಲಗಿದ ಮದ್ದಾನೆಯ ಹಾಗೆ ಮಲಗಿ ನಿದ್ದೆಮಾಡುತ್ತ ಇದ್ದಾನೆ. ಶಯನವೇದಿಕೆಯ ನಾಲ್ಕೂ ಕಡೆಗಳಲ್ಲೂ ಚಿನ್ನದ ಕಂಬಗಳಲ್ಲಿ ಉರಿಯುವ ದೀಪಗಳ ದೇದೀಪ್ಯಮಾನ ಕಾಂತಿ. ಆ ಕಾಂತಿಯ ಬೆಳಕಿನಲ್ಲಿ ಅವನ ಮೈಮೇಲಿನ ಆಭರಣಗಳು ತಳುಕ್ ಎಂದು ಮಿಂಚುತ್ತ ಇವೆ. ಆ ಮಿಂಚಿನ ಬೆಳಕಿನಲ್ಲಿ ಕಾಣುವ ನೀಲಮೇಘ ಅವನು.

ಸುಖನಿದ್ರೆಯಲ್ಲಿ ಇದ್ದ ರಾವಣ. ಅವನ ಕಾಲದೆಸೆಯಲ್ಲಿ ಸಾಲು ಆಗಿ ಮಲಗಿದ್ದಾರೆ ಅವನ ಪ್ರಿಯ ಪತ್ನಿಯರು. ಅವರ ಮುಖ ಒಬ್ಬೊಬ್ಬರದೂ ಒಂದು ಚಂದ್ರಬಿಂಬ. ಅವರ ಕಿವಿಯ ಕುಂಡಲಗಳು ಬಲು ಅಂದ. ಅವರು ಧರಿಸಿದ ಹೂಮಾಲೆ ಬಾಡಿಲ್ಲ. ಅವರನ್ನು ನೋಡಿದ ಆಂಜನೇಯ. ನೃತ್ತ

ಗೀತವಾದ್ಯಕುಶಲೆಯರು ಎಲ್ಲರೂ. ಆ ಹೆಂಗಸರ ಉತ್ತಮ ಆಭರಣಗಳು ಎಲ್ಲವೂ ಥಗಥಗಿಸುತ್ತ ಇವೆ. ಎಲ್ಲರೂ ರೂಪವತಿಯರು. ಎಲ್ಲರಿಗೂ ಕಿವಿಯಲ್ಲಿ ವಜ್ರವೈಡೂರ್ಯಖಚಿತ ಚಿನ್ನದ ಓಲೆ, ಕೈಯಲ್ಲಿ ರತ್ನಖಚಿತ ಬಳೆ. ತಲೆದಿಂಬಿಗೆ ತೋಳನ್ನು ಇಟ್ಟು ಅವರು ಮಲಗಿದ್ದರೆ ಕಿವಿಯ ಓಲೆ ಕೈಯ ಬಳೆ ಎರಡರ ಕಾಂತಿಯೂ ಸೇರಿ ಅವರ ಮುಖವನ್ನು ಬೆಳಗಿಸುತ್ತ ಇವೆ. ನಕ್ಷತ್ರಗಳಂತೆ ಮಿರುಗುವ ಓಲೆ, ಚಂದ್ರನಂತೆ ಹೊಳೆಯುವ ಮುಖ ಅವರದು. ನಕ್ಷತ್ರಸಮೇತ ಹೊಳೆಯುವ ಚಂದ್ರನ ಮುಗಿಲಿನಂತೆ ಇತ್ತು ಆ ಭವನ. ಯೌವನಮದದ ಕ್ರೀಡೆಯಿಂದ ಬಳಲಿ ಆ ಚೆಲುವೆಯರು ಮೈಮರೆತು ಮಲಗಿ ಇದ್ದುದನ್ನು ಹನುಮಂತ ನೋಡಿದ.

ಅದರಲ್ಲಿ ಒಬ್ಬಳಿಗೆ ನೃತ್ಯದಲ್ಲಿ ವಿಶೇಷ ಪರಿಚಯ. ಆಕೆ ಎಚ್ಚರದಲ್ಲಿ ಹೇಗೋ ನಿದ್ದೆಯಲ್ಲೂ ಹಾಗೇ ತನ್ನ ಕೋಮಲ ಅವಯವಗಳನ್ನು ನಾಟ್ಯ ಶಾಸ್ತ್ರದ ಪ್ರಕಾರ ಕುಣಿಸುತ್ತ ಇದಾಳೆ. ನದೀಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವ ತಾವರೆಬಳ್ಳಿ ನಡುವೆ ಸಿಕ್ಕ ತೆಪ್ಪಕ್ಕೆ ಸುತ್ತಿಕೊಂಡಂತೆ ಒಬ್ಬಳು ವೀಣೆಯನ್ನು ಅಪ್ಪಿಕೊಂಡು ಮಲಗಿದಾಳೆ. ಹಸುಗೂಸನ್ನು ಕಂಕುಳಲ್ಲಿ ಎತ್ತಿ ಕೊಂಡಂತೆ ಮದ್ದಲೆಯನ್ನು ಪಕ್ಕದಲ್ಲಿಟ್ಟುಕೊಂಡು ಮಲಗಿದಾಳೆ ಇನ್ನೊಬ್ಬಳು. ಬಹುಕಾಲದಮೇಲೆ ಬಂದ ನಲ್ಲನನ್ನು ಗಟ್ಟಿ ಆಗಿ ಅಪ್ಪಿಕೊಂಡವಳ ಹಾಗೆ ತಮಟೆಯನ್ನು ಅಪ್ಪಿಕೊಂಡು ಮಲಗಿದವಳು ಒಬ್ಬಳು. ಏಕಾಂತದಲ್ಲಿ ಪ್ರಿಯ ನನ್ನು ಅಪ್ಪಿಕೊಂಡ ಕಾಮಮೋಹಿತೆಯ ಹಾಗೆ ಕೊಳಲನ್ನು ಕಟ್ಟಿಕೊಂಡು ಮಲಗಿದಾಳೆ ಮತ್ತೊಬ್ಬಳು. ವೀಣೆಯನ್ನು ನುಡಿಸುತ್ತ ನರ್ತಿಸುತ್ತ ಗಂಡನನ್ನು ಅಪ್ಪಿಕೊಂಡವಳ ಹಾಗೆ ಏಳು ತಂತಿಯ ಆ ವೀಣೆಯನ್ನೆ ಹಿಡಿದುಕೊಂಡು ಮಲಗಿದ ಭಾಮಿನಿ ಒಬ್ಬಳು. ಬಲಿತು ಮನೋಹರ ಆದ ತನ್ನ ಹೊಂಬಣ್ಣದ ಮೃದುದೇಹದಿಂದ ಮದ್ದಲೆಯನ್ನು ಅಪ್ಪಿ ಮೈಮರೆತ ಮದಿರೇಕ್ಷಣೆ ಒಬ್ಬಳು. ತನ್ನ ಪಕ್ಕದಲ್ಲಿ ಸೊಂಟದ ಬಳಿ ಪಣವವನ್ನಿಟ್ಟುಕೊಂಡು ಮಲಗಿದ ತಳೋದರಿ ಒಬ್ಬಳು. ಒಂದು ಕಡೆ ತರುಣ ಪತಿ ಇನ್ನೊಂದು ಕಡೆ ಎಳೆಗೂಸು ಇಬ್ಬರನ್ನೂ ಮಲಗಿಸಿ ತಟ್ಟುವ ಹೆಂಗಸಿನಹಾಗೆ ಎರಡು ಕೈಯಲ್ಲೂ ಎರಡು ಡಿಂಡಿಮಗಳನ್ನು ಹಿಡಿದುಕೊಂಡು ಮಲಗಿದ ಲಲನೆ ಒಬ್ಬಳು. ಪಾನದ ಮದ ಏರಿ ಮೈಮೇಲೆ ಎಚ್ಚರ ಇಲ್ಲದೆ ತುತೂರಿ ಊದುತ್ತ ಹಾಗೆಯೇ ಅದನ್ನು ಎದೆಗೆ ಅವಚಿಕೊಂಡು

ಮಲಗಿದ ಕಮಲಾಕ್ಷಿ ಮತ್ತೊಬ್ಬಳು. ಮತ್ತೊಬ್ಬಳು ಗಂಧದ ಕಲಶವನ್ನು ಪಕ್ಕದಲ್ಲಿಟ್ಟುಕೊಂಡು ಮಲಗಿ ಅದನ್ನು ಹೊರಳಿಸಿಕೊಂಡು ಇದಾಳೆ. ಅವಳು ಉಟ್ಟ ಬಟ್ಟೆ ಒದ್ದೆ ಆಗಿದೆ. ವಸಂತಋತುವಿನಲ್ಲಿ ಹೂವಿನ ಸರವನ್ನು ಬಾಡದ ಹಾಗೆ ನೀರನ್ನು ಚಿಮುಕಿಸಿ ಇಡುತ್ತಾರಲ್ಲ. ಹಾಗೆ ಇದಾಳೆ ಅವಳು. ಚಿನ್ನದ ಕಲಶಗಳನ್ನು ಹಿಡಿದುಕೊಂಡು ಮಲಗಿದೇನೆ ಎಂದು ಒಬ್ಬ ತರುಣಿ ತನ್ನ ಮೊಲೆಗಳನ್ನೇ ಎರಡೂ ಕೈಗಳಿಂದ ಹಿಡಿದುಕೊಂಡು ಮಲಗಿ ನಿದ್ದೆಮಾಡುತ್ತ ಇದಾಳೆ. ಪೂರ್ಣಚಂದ್ರಸಮಾನ ಮುಖದ ಒಬ್ಬ ಕಮಲಪತ್ರಾಕ್ಷಿ ಹರೆಯದ ಮದದಿಂದ ಪಕ್ಕದಲ್ಲಿ ಮಲಗಿದ ಇನ್ನೊಬ್ಬ ತರುಣಿಯನ್ನು ಅಪ್ಪಿಕೊಂಡಿದಾಳೆ. ಹಲವು ಬಗೆಯ ವಾದ್ಯಗಳನ್ನು ಎದೆಗೆ ಒರಗಿಸಿಕೊಂಡು ಮಲಗಿದಾರೆ ಕೆಲವರು, ಕಾಮುಕರನ್ನು ಅಪ್ಪಿದ ಕಾಮಿನಿಯರ ಹಾಗೆ. ಎಲ್ಲರೂ ಮೈಮೇಲೆ ಎಚ್ಚರ ಇಲ್ಲದೆ ನಿದ್ದೆಹೋಗುತ್ತಿದಾರೆ.

ಈ ಹೆಂಗಸರ ನಡುವೆ ಅಲ್ಲದೆ ಬೇರೆ ಆಗಿ ಅಂದದ ಹಂಸತೂಲಿಕಾತಲ್ಪದಲ್ಲಿ ಒಬ್ಬ ಹೆಂಗಸು ಮಲಗಿದಾಳೆ. ಬಲು ಚೆಲುವೆ. ಮಹಾಲಾವಣ್ಯವತಿ. ಹನುಮಂತ ಅವಳನ್ನು ನೋಡಿದ.

ಮಂಡೋದರಿ ಅವಳು. ರಾವಣನ ಪ್ರಿಯಪತ್ನಿ. ಅವನ ಅಂತಃಪುರದ ಅಧಿದೇವತೆ. ಅವಳ ಮೈಬಣ್ಣ ಚಿನ್ನದ ಬಣ್ಣ. ಆ ದೇಹಕಾಂತಿಗೆ ಜೊತೆ ಅವಳ ಮುತ್ತುಮಣಿಗಳ ಒಡವೆ. ಆ ವಿಮಾನಸೌಧಕ್ಕೆ ಇದರಿಂದ ಹೆಚ್ಚು ಕಳೆ ಬಂದಿತ್ತು. ಅವಳ ಸರ್ವಾಂಗಸೌಂದರ್ಯ ಸರ್ವಾಲಂಕಾರಗಳನ್ನು ನೋಡಿ ಅವಳ ಯೌವನಗಾಂಭೀರ್ಯಗಳನ್ನು ನೋಡಿ ಅವಳೇ ಸೀತೆ ಇರಬೇಕು ಎಂದುಕೊಂಡ ಹನುಮಂತ.

ಅವನಿಗೆ ಮಹದಾನಂದ. ಮೈ ನಿಮಿರು ಆಯಿತು. ಆ ಹರ್ಷದ ಭರದಲ್ಲಿ ಚಪ್ಪಾಳೆ ತಟ್ಟಿದ. ಬಾಲ ಎತ್ತಿ ಅದನ್ನು ಮುತ್ತಿಟ್ಟುಕೊಂಡ. ಹಿಗ್ಗಿ ಹಾಡಿದ. ಕುಣಿದ. ಕಂಬ ಏರಿದ. ಕೆಳಕ್ಕೆ ಧುಮುಕಿದ. ನಿಂತಲ್ಲಿ ನಿಲ್ಲದೆ ತಿರುಗಾಡಿದ. ಸಂತೋಷಪರವಶತೆ. ಕಪಿಚೇಷ್ಟೆ.

೧೧

ಅಲ್ಲಿ ಮಲಗಿದ ಆಕೆಯೇ ಸೀತೆ ಎಂದುಕೊಂಡ ಹನುಮಂತ. ಆ ಭ್ರಾಂತಿ ಬಹಳ ಹೊತ್ತು ಉಳಿಯಲಿಲ್ಲ. ತಾನೇ ಆಲೋಚಿಸಿದ. "ಛಿ, ಎಲ್ಲಿ ಆದರೂ ಉಂಟೆ? ರಾಮನನ್ನು ಅಗಲಿದ ಸೀತಾದೇವಿ ವಿರಹದುಃಖದಲ್ಲಿ ಮುಳುಗಿ ಇರುತ್ತಾಳೆ. ಹೀಗೆ ನಿದ್ದೆ ಮಾಡಳು ಆಕೆ. ಊಟ ಮಾಡಳು. ಸಿಂಗರಿಸಿ ಕೊಳ್ಳಳು. ಮದ್ಯಪಾನ ಮಾಡಳು. ಶ್ರೀರಾಮನೇ ಪತಿ. ಅವನನ್ನು ಬಿಟ್ಟು ಬೇರೆ ಯಾರನ್ನೂ ದೇವೇಂದ್ರನನ್ನು ಕೂಡ ಹತ್ತಿರ ಸೇರಿಸಳು. ರಾಮನಿಗೆ ಸಮಾನ ಆದವನು ದೇವತೆಗಳಲ್ಲಿಯೂ ಇಲ್ಲ. ಇಲ್ಲಿ ಮಲಗಿದವಳು ಜಾನಕಿ ಅಲ್ಲ. ಖಂಡಿತ ಬೇರೆ ಯಾರೋ." ದೃಢ ಆಗಿ ನಿಶ್ಚಯಿಸಿದ ಮಾರುತಿ.

ಅಂತಃಪುರವನ್ನು ಬಿಟ್ಟು ಪಾನಶಾಲೆಗೆ ಬಂದ ಹನುಮಂತ. ಅಲ್ಲಿ ಮಲಗಿ ಇದ್ದ ಹೆಂಗಸರು ಎಲ್ಲರೂ ರಾತ್ರಿ ರತಿಕ್ರೀಡೆಯಿಂದ ಬಳಲಿದವರು. ಕೆಲವರು ಹಾಡಿ ಹಾಡಿ ದಣಿದವರು. ಕೆಲವರು ನಾಟ್ಯ ಆಡಿ ಆಡಿ ಸೋತವರು. ಎಲ್ಲರೂ ಮೂಗಿನವರೆಗೆ ಕುಡಿದು ಮೈಮರೆತು ಬಿದ್ದವರೇ. ತಮ್ಮ ಕೈಯಲ್ಲಿ ಇದ್ದ ಮದ್ದಲೆ ಮೃದಂಗ ಮುಂತಾದ ವಾದ್ಯಗಳನ್ನು ಅಪ್ಪಿಕೊಂಡು ಮಲಗಿದವರು ಕೆಲವರು. ತಾವು ಕುಳಿತ ಪೀಠಗಳ ಮೇಲೆ ತಲೆ ಇಟ್ಟುಕೊಂಡು ಮಲಗಿದವರು ಕೆಲವರು ಮಾತ್ರ ಒಳ್ಳೆಯ ಹಾಸಿಗೆಗಳಲ್ಲಿ ಮಲಗಿದ್ದರು. ಅಲ್ಲಿ ಎಲ್ಲಿಯೂ ಸೀತೆ ಕಾಣಲಿಲ್ಲ.

ಮತ್ತೆ ರಾವಣನ ಕ್ರೀಡಾಭವನಕ್ಕೆ ಬಂದ ಹನುಮಂತ. ಅಲ್ಲಿ ಮಲಗಿದ್ದ ಎಲ್ಲರೂ ಸರ್ವಾಭರಣಭೂಷಿತರು. ಪ್ರತಿ ಒಬ್ಬರೂ ರಾವಣನ ರೂಪಲಾವಣ್ಯ ಸಂಪತ್ತಿಯನ್ನು ಹೇಳಿ ಹೇಳಿ ಹಿಗ್ಗುವವರು. ಸಂಗೀತವನ್ನು ಅರ್ಥಸಹಿತ ವಿವರಿಸಬಲ್ಲವರು. ಕಾಲದೇಶಗಳನ್ನು ಅರಿತು ಕಾಲೋಚಿತ ಆಗಿ ಮಾತಾಡು ವವರು. ಅವರ ಜೊತೆಗೆ ರಮಿಸಿ ಅವರ ನಡುವೆ ಸುಖನಿದ್ರೆ ಮಾಡುತ್ತಿದ್ದ ರಾವಣ. ದೊಡ್ಡ ಗೋಶಾಲೆಯಲ್ಲಿ ಹಸುಗಳ ನಡುವೆ ಗಂಭೀರ ಆಗಿ ಮಲಗಿದ ಗೂಳಿಯ ಹಾಗೆ, ಹೆಣ್ಣು ಆನೆಗಳ ನಡುವೆ ನಿದ್ರಿಸುವ ಸಲಗದ ಹಾಗೆ ಇದ್ದ.

ಎಲ್ಲಿ ಹುಡುಕಿದರೂ ಸೀತೆ ಕಾಣಲಿಲ್ಲ.

ಮತ್ತೆ ಪಾನಶಾಲೆಗೆ ಬಂದ. ಅಲ್ಲಿ ಬೇಕು ಬೇಕು ಆದ ತಿನಿಸು. ಅಲ್ಲಿ ಜಿಂಕೆಯ ಮಾಂಸ ಎಮ್ಮೆಯ ಮಾಂಸ ಹಂದಿಯ ಮಾಂಸ ಬೇರೆ ಬೇರೆ ಸಾಲು

ಆಗಿ ಇಟ್ಟಿತ್ತು. ಅಗಲ ಆದ ಚಿನ್ನದ ತಟ್ಟೆಗಳಲ್ಲಿ ಅರೆತಿಂದು ಉಳಿದ ನವಿಲಿನ ಮಾಂಸ ಕೋಳಿಯ ಮಾಂಸ ಇತ್ತು. ಮೊಸರಿನಲ್ಲಿ ನೆನೆಯಿಸಿ ಉಪ್ಪು ಚೆಲ್ಲಿದ ಕಾಡುಹಂದಿಯ ಮಾಂಸ ಮುಳ್ಳುಹಂದಿಯ ಮಾಂಸದ ಉಪ್ಪೇರಿಗಳು ಒಂದು ಕಡೆ. ಚೆನ್ನಾಗಿ ಬೇಯಿಸಿದ ಕೊಕ್ಕರೆಮಾಂಸ, ಅರ್ಧ ತಿಂದುಬಿಟ್ಟ ಚಕೋರ ಪಕ್ಷಿಯ ಮಾಂಸ, ಎಮ್ಮೆಯ ಮಾಂಸ, ಬಗೆಬಗೆಯ ಮೀನು ಇದ್ದವು. ಅಲ್ಲದೆ ಬಗೆಬಗೆಯ ಭೋಜನಪದಾರ್ಥ ಅಲ್ಲಿ. ಬಗೆಬಗೆಯ ಚಟ್ನಿ, ಉಪ್ಪು ಹುಳಿ ಚೆನ್ನಾಗಿ ಸೇರಿಸಿ ಒಗ್ಗರಣೆ ಹಾಕಿ ಮಾಡಿದ ಷಡ್ರಸಾನ್ನ ರಾಗಷಾಡಬಗಳೂ ಕಾಣಬಂದವು. ಸಕ್ಕರೆ ಜೇನು ದ್ರಾಕ್ಷಿ ದಾಳಿಂಬೆ ರಸಗಳಿಂದ ಮಾಡಿದ ಪಾನೀಯಗಳೂ ಇದ್ದವು.

ಬಗೆಬಗೆಯ ಮಾಂಸಗಳನ್ನು ಬೇರೆ ಬೇರೆ ರೀತಿಯಲ್ಲಿ ಪಕ್ವ ಮಾಡಿ ಇಟ್ಟಿದ್ದರು ಚತುರರು ಆದ ಅಡಿಗೆಯವರು. ಮುಂದೆ ಬಗೆಬಗೆಯ ಮದ್ಯವಿಶೇಷ ಗಳ ಚಿನ್ನದ ಪಾತ್ರೆಗಳ ಸಾಲೇ ಇತ್ತು. ಸಮುದ್ರಮಂಥನದ ಕಾಲದಲ್ಲಿ ಹಾಲು ಕಡಲಿನಲ್ಲಿ ಹುಟ್ಟಿದ ನಿರ್ಮಲ ಅಕೃತ್ರಿಮ ದೇವಯೋಗ್ಯ ಮದ್ಯ, ಸಕ್ಕರೆಯಿಂದ ಇಪ್ಪೇಹೂವಿನರಸದಿಂದ ತೆಗೆದ ಮದ್ಯ, ಜೇನಿನಿಂದ ಮಾಡಿದ ಮದ್ಯ, ನಾರಿಕೇಳ ದಿಂದ ಖರ್ಜೂರದಿಂದ ತೆಗೆದ ಮದ್ಯ. ಎಲ್ಲಕ್ಕೂ ಪರಿಮಳಚೂರ್ಣವನ್ನು ಬೆರೆಸಿ ಇತ್ತು. ಬೆಳ್ಳಿಯದು ಚಿನ್ನದ್ದು ಮಣಿಮಯ ಆದದ್ದು ಎಲ್ಲ ಬಗೆಯ ಬಟ್ಟಲೂ ಬೆಳ್ಳಿಬಂಗಾರದ ತಂಬಿಗೆಗಳೂ ಇದ್ದವು ಅಲ್ಲಿ.

ಬಂಗಾರದ ಪಾತ್ರೆಗಳಲ್ಲಿ ಪಾನೀಯವನ್ನೂ ಮದ್ಯವನ್ನೂ ತುಂಬಿ ಇಟ್ಟಿದ್ದರು. ಮಣಿಮಯ ಪಾತ್ರೆಗಳೂ ಇದ್ದವು. ಅರ್ಧ ಕುಡಿದು ಬಿಟ್ಟ ಮದ್ಯದ ಪಾತ್ರೆ ಕೆಲವು. ಏನೂ ಉಳಿಯದಂತೆ ಕುಡಿದು ಉರುಳಿಸಿದ ಮದ್ಯಪಾತ್ರೆ ಕೆಲವು. ಒಂದು ತೊಟ್ಟೂ ಕುಡಿಯದೆ ಕುಡಿಯಲು ತುಂಬಿ ಇಟ್ಟ ಮದ್ಯಪಾತ್ರೆ ಕೆಲವು. ಒಂದು ಕಡೆ ಬಗೆಬಗೆಯ ಭಕ್ಷ್ಯದ ಸಾಲು. ಇನ್ನೊಂದು ಕಡೆ ಬೇರೆ ಬೇರೆ ಆಗಿ ತೆಗೆದು ಇಟ್ಟ ಮದ್ಯ. ತಿಂದು ಉಳಿದ ಅನ್ನ ಮತ್ತೆ ಒಂದು ಕಡೆ. ಒಂದು ಕಡೆ ಒಡೆದುಹೋದ ಮಗಿ ಗಡಿಗೆಗಳು ಕಾಣುತ್ತ ಇವೆ. ನೀರಿನ ಗಡಿಗೆ ಗಳು ಉರುಳಾಡುತ್ತ ಇವೆ. ಇನ್ನೊಂದು ಕಡೆ ಹಣ್ಣು ಉದುರಿಬಿದ್ದಿವೆ. ಹೂವಿನ ಸರಗಳನ್ನು ಕಿತ್ತು ಎಸೆದು ಇದಾರೆ. ಹೆಂಗಸರ ಕೊರಳ ಮುತ್ತಿನ ಹಾರ ಕಳಚಿಬಿದ್ದಿವೆ. ಕಾಲಂದುಗೆ ಕೈಬಳೆಗಳೂ ಅಲ್ಲಿ ಬಿದ್ದಿವೆ. ಎಲ್ಲೆಲ್ಲೂ ಹೂ ಚೆಲ್ಲಿ ಇದೆ. ಎಲ್ಲವೂ ಆ ಪಾನಶಾಲೆಯ ಕಳೆಯನ್ನು ಹೆಚ್ಚಿಸಿವೆ.

ರತ್ನಮಯ ಮಂಚಗಳು ಥಗಥಗಿಸುತ್ತ ಇವೆ ಅಲ್ಲಿ. ಕೆಲವರು ಹೆಂಗಸರು ಒಬ್ಬರನ್ನು ಒಬ್ಬರು ಅಪ್ಪಿಕೊಂಡು ಮಲಗಿದಾರೆ. ನಿದ್ದೆಯಲ್ಲಿ ಮೈಮರೆತು ಪಕ್ಕದಲ್ಲಿದ್ದವರ ಸೀರೆಯನ್ನು ಸೆಳೆದುಕೊಂಡು ತಮ್ಮದು ಎಂದು ತಮ್ಮ ಮೈಗೆ ಅದನ್ನು ಸುತ್ತಿಕೊಂಡವರು ಕೆಲವರು. ಒಬ್ಬರ ಸೀರೆಯನ್ನು ಇನ್ನೊಬ್ಬರು ತಲೆದಿಂಬು ಆಗಿ ಇಟ್ಟುಕೊಂಡು ಇದಾರೆ. ಅವರು ಉಟ್ಟ ಸೀರೆ ಧರಿಸಿದ ಹೂಮಾಲೆ ಮಂದಮಾರುತ ಬೀಸಿದರೆ ಹೇಗೋ ಹಾಗೆ ಅವರು ಬಿಟ್ಟ ಉಸಿರಿನ ಗಾಳಿಗೆ ಮೆಲ್ಲಗೆ ಹಾರುತ್ತ ಇವೆ.

ಸಿಹಿ ಮದ್ಯ, ಬಗೆಬಗೆಯ ಹೂವಿನ ಸರ, ತಂಪಾದ ಗಂಧ, ಮನೋಹರ ದಿವ್ಯಧೂಪ, ಇವು ಎಲ್ಲದರ ಪರಿಮಳವನ್ನೂ ಹೊತ್ತುತರುತ್ತ ಇದ್ದಿತು ಮೆಲ್ಲಗೆ ಬೀಸುವ ತಂಗಾಳಿ. ಆ ಕ್ರೀಡಾಭವನದಲ್ಲಿ ಎಲ್ಲೆಲ್ಲೂ ತುಂಬಿದೆ ಆ ಸುವಾಸನೆ.

ಅಲ್ಲಿ ಮಲಗಿದ್ದ ಹೆಂಗಸರಲ್ಲಿ ಕೆಲವರು ಶ್ಯಾಮಲವರ್ಣದವರು. ಕೆಲವರು ಬೆಳ್ಳಗೆ ಇರುವವರು. ಕೆಲವರ ಮೈಬಣ್ಣ ಕಪ್ಪು. ಕೆಲವರದು ಹೊಂಬಣ್ಣ. ಗಾಢರತಿಯಿಂದ ಬಳಲಿ ಮೈಮರೆತು ಮಲಗಿದ ಆ ಹೆಂಗಸರು ರಾತ್ರಿಹೊತ್ತು ಮುದುಡಿಕೊಂಡು ಮಲಗಿದ ತಾವರೆಗಳ ಬಳ್ಳಿಯ ಹಾಗೆ ಕಾಣುತ್ತ ಇದ್ದರು.

ಯಾವ ಮೂಲೆಯನ್ನೂ ಬಿಡದಂತೆ ಮತ್ತೆ ಮತ್ತೆ ಆ ಅಂತಃಪುರವನ್ನು ಎಲ್ಲಾ ಹುಡುಕಿದ ಹನುಮಂತ. ಎಲ್ಲರನ್ನೂ ಪರೀಕ್ಷಿಸಿ ನೋಡಿದ. ಯಾರನ್ನೂ ಬಿಡಲಿಲ್ಲ. ಎಷ್ಟು ಹುಡುಕಿದರೂ ಸೀತಾದೇವಿ ಅವನಿಗೆ ಕಾಣಲಿಲ್ಲ. ಹೀಗೆ ಅಂತಃಪುರದಲ್ಲಿ ಮಲಗಿ ನಿದ್ರಿಸುವ ಈ ಹೆಂಗಸರನ್ನು ತಾನು ನೋಡಿದುದು ಸರಿಯೆ ಎಂಬ ಸಂಶಯ ಬಂತು ಹನುಮಂತನಿಗೆ. ಅವರು ಪರಸ್ತ್ರೀಯರು. ಮಲಗಿದಾಗ ಅವರನ್ನು ತಾನು ನೋಡಿದುದು ಧರ್ಮಲೋಪ ಎನಿಸಿತು. ಯೋಚಿಸಿದ. ನೋಡಬೇಕು ಎಂಬ ಆಸೆಯಿಂದ ನೋಡಿದರೆ ಪಾಪ. ಸೀತಾ ದೇವಿಯನ್ನು ಹುಡುಕುವ ಸಂದರ್ಭದಲ್ಲಿ ಅವರೇ ಕಣ್ಣಿಗೆ ಬಿದ್ದರು. ತನಗೆ ಕಾಮದೃಷ್ಟಿ ಇರಲಿಲ್ಲ.

ಹನುಮಂತನ ಮನಸ್ಸು ವಿಕಾರಹೊಂದುವಂಥದಲ್ಲ. ಬಹಳ ಉದಾರ. ಮನಸ್ಸನ್ನು ಗಟ್ಟಿಮಾಡಿಕೊಂಡ. 'ಇಲ್ಲಿಗೆ ಪರಪುರುಷರು ಯಾರೂ ಬರಲಾರ ರೆಂದು ದೃಢ ಆಗಿ ನಂಬಿ ರಾವಣನ ಹೆಂಗಸರೆಲ್ಲರೂ ಹೀಗೆ ಮೈಮರೆತು ಮಲಗಿ ಇದಾರೆ. ಎಲ್ಲರನ್ನೂ ಚೆನ್ನಾಗಿ ನೋಡಿದೆ. ಆದರೂ ನನ್ನ ಮನಸಿನಲ್ಲಿ ಸ್ವಲ್ಪವೂ

ವಿಕಾರ ಹುಟ್ಟಲಿಲ್ಲ. ಶುಭ ಅಶುಭ ಯಾವ ಕೆಲಸದಲ್ಲೂ ಇಂದ್ರಿಯಗಳು ತೊಡಗಲು ಮನಸ್ಸೇ ಕಾರಣ. ಮನಸಿನಂತೆ ನಡೆಯುತ್ತವೆ ಇಂದ್ರಿಯಗಳು. ನನ್ನ ಮನಸ್ಸು ಸ್ಥಿರ ಆಗಿ ಇದೆ. ಸ್ವಲ್ಪವೂ ಚಲಿಸಲಿಲ್ಲ. ನನ್ನ ಕಣ್ಣಿನಲ್ಲಿ ಸ್ವಲ್ಪವೂ ದೋಷ ಇಲ್ಲ. ಇಷ್ಟೇ ಅಲ್ಲ. ಹೆಂಗಸರ ಗುಂಪನ್ನು ಬಿಟ್ಟು ಬೇರೆ ಎಲ್ಲಿ ಹುಡುಕಲಿ ಸೀತಾದೇವಿಯನ್ನು? ಗಂಡಸರ ನಡುವೆ ಹುಡುಕಲೆ? ಆಯಾ ಜಾತಿಯ ಜಂತುವನ್ನು ಆಯಾ ಜಾತಿಯ ಜಂತುಗಳ ನಡುವೆಯೇ ಹುಡುಕ ಬೇಕು. ಹೆಂಗಸನ್ನು ಹೆಂಗಸರ ಗುಂಪಿನಲ್ಲಿಯೇ ಹುಡುಕಬೇಕು. ಮೃಗಗಳ ಮಧ್ಯೆ ಹುಡುಕಿದರೆ ಏನು ಫಲ? ಪರಿಶುದ್ಧ ಹೃದಯದಿಂದ ನಾನು ರಾವಣನ ಅಂತಃಪುರದಲ್ಲಿ ಹುಡುಕಿದೆ. ಇಲ್ಲಿ ದೇವಕನ್ಯೆಯರನ್ನು ಕಂಡೆ. ನಾಗಕನ್ಯೆಯರು ಗಂಧರ್ವಕನ್ಯೆಯರು ಕಾಣಬಂದರು. ಸೀತಾದೇವಿ ಮಾತ್ರ ಎಲ್ಲಿಯೂ ಕಾಣಿಸ ಲಿಲ್ಲವಲ್ಲ' ಎಂದುಕೊಂಡ.

ಮತ್ತೆ ಒಂದು ಸಲ ಅಂತಃಪುರದಲ್ಲಿ ಎಲ್ಲೆಲ್ಲೂ ಹುಡುಕಿದ ಆಂಜನೇಯ.

೧೨

ಸೀತಾದೇವಿಯನ್ನು ನೋಡುವ ಉತ್ಸಾಹದಿಂದ ಆ ರಾವಣಾಸುರನ ಭವನದ ಮಧ್ಯೆ ಇದ್ದ ಲತಾಗೃಹಗಳಲ್ಲಿಯೂ ಚಿತ್ರಶಾಲೆಗಳಲ್ಲಿಯೂ ಚಂದ್ರಶಾಲೆ ಗಳಲ್ಲಿಯೂ ಹುಡುಕಿದ. ಎಲ್ಲಿಯೂ ರಾಮನ ನಲ್ಲೆ ಸೊಬಗಿನ ಸೋನೆ ಆದ ಸೀತಾದೇವಿ ಮಾತ್ರ ಕಾಣಬರಲಿಲ್ಲ. ಹನುಮಂತನ ಮನಸಿನಲ್ಲಿ ಹಲವು ಬಗೆಯ ಆಲೋಚನೆ ಹುಟ್ಟಿದವು. 'ಸೀತಾದೇವಿ ಸತ್ತೇಹೋಗಿರಬೇಕು. ಆಕೆ ಪಾತಿವ್ರತ್ಯಧರ್ಮವನ್ನೂ ಸದಾಚಾರವನ್ನೂ ಎಂದಿಗೂ ತಪ್ಪುವವಳು ಅಲ್ಲ. ರಾವಣ ದುರುಳ, ನೀಚ. ಎಂಥ ನೀಚ ಕೆಲಸಕ್ಕೂ ಹೇಸುವವನು ಅಲ್ಲ. ಅವನ ಮಾತಿನಂತೆ ಆಕೆ ನಡೆಯದೆ ಇರಲು ಈ ದುಷ್ಟ ಆಕೆಯನ್ನು ಕೊಂದು ಇರಬೇಕು. ಅಥವಾ ಇವನ ಈ ಘೋರ ಆಕಾರದ ವಿಕೃತವೇಷದ ರಾಕ್ಷಸ ಹೆಂಗಸರನ್ನು ನೋಡಿ ಇವರ ಭಯಂಕರ ಮುಖವನ್ನೂ ಕಣ್ಣನ್ನೂ ನೋಡಿ ಬೆದರಿ ಪ್ರಾಣ ತೊರೆದು ಇರಬೇಕು' ಎಂದು ಆಲೋಚಿಸಿದ,

'ನನಗೆ ಸೀತಾದೇವಿ ಕಾಣಲಿಲ್ಲವಲ್ಲ. ನನ್ನ ಪರಾಕ್ರಮ ಎಲ್ಲಾ ವ್ಯರ್ಥ. ಗೆಳೆಯರು ಆದ ವಾನರಯೂಥಪತಿಗಳ ಜೊತೆಯಲ್ಲಿ ಬಹಳ ಕಾಲ ಕಳೆದೆ.

ದೊರೆ ಸುಗ್ರೀವ ಕೊಟ್ಟ ಗಡುವಿನ ಕಾಲ ಎಂದೋ ಆಗಿಹೋಯಿತು. ಬಂದ ಕೆಲಸ ಆಗಲಿಲ್ಲ. ಈಗ ಸುಗ್ರೀವನ ಬಳಿಗೆ ಹೋಗುವುದು ಹೇಗೆ? ಸುಗ್ರೀವ ಚಂಡಶಾಸನ. ಆತನ ದಂಡನೆ ಬಲು ಕ್ರೂರ. ರಾವಣನ ಅಂತಃಪುರ ಎಲ್ಲವನ್ನೂ ಹುಡುಕಿದೆ. ಅವನ ಹೆಂಗಸರು ಎಲ್ಲರನ್ನೂ ನೋಡಿದೆ. ಆ ಪತಿವ್ರತೆ ಸೀತೆ ಮಾತ್ರ ಎಲ್ಲಿಯೂ ಕಾಣಲಿಲ್ಲ.

'ಈಗ ಹಿಂದಕ್ಕೆ ಮಹೇಂದ್ರಪರ್ವತಕ್ಕೆ ಹೋದರೆ ನಾನು, ವಾನರರು ಬಂದು ಮುತ್ತಿಕೊಳ್ಳುತ್ತಾರಲ್ಲ. ಅವರಿಗೆ ಏನು ಹೇಳಲಿ? 'ನೀನು ಬಹಳ ಪರಾಕ್ರಮಶಾಲಿ. ಲಂಕಾಪಟ್ಟಣಕ್ಕೆ ಹೋದೆಯಲ್ಲ. ಏನು ಮಾಡಿಕೊಂಡು ಬಂದೆ' ಎಂದು ಕೇಳಿದರೆ ಏನು ಹೇಳಲಿ ಅವರಿಗೆ? ಸೀತೆಯನ್ನು ನೋಡಿದರೆ ಅಲ್ಲವೆ ಏನು ಆದರೂ ಹೇಳಲು. ಒಂದುವೇಳೆ ಅಲ್ಲಿಗೆ ಹೋಗದೆ ಇಲ್ಲೇ ನಿಂತೆ. ಏನು ಪ್ರಯೋಜನ? ಅವರು ಅಂತೂ ಅಲ್ಲಿ ಪ್ರಾಯೋಪವೇಶ ಮಾಡಿ ಸಾಯುತ್ತಾರೆ. ಆಗಲೇ ಸಿದ್ಧ ಆಗಿದ್ದರು. ಈಗ ಅವರಿಗೆ ಬೇರೆ ಏನು ಇದೆ ದಾರಿ?

'ಸೀತೆಯನ್ನು ಕಾಣದೆ ಹಾಗೇ ಹೋದೆ. ಮುದುಕ ಜಾಂಬವಂತ ಯುವರಾಜ ಅಂಗದ ಇಬ್ಬರಿಗೂ ಏನು ಹೇಳಲಿ? ವಾನರವೀರರು ಏನು ಅಂದಾರು? ಹೀಗಳೆಯದೆ ಇರುತ್ತಾರೆಯೆ?

'ಛಿ, ಹೀಗೆ ಧೈರ್ಯಗೆಡಬಹುದೆ ನಾನು? ಉತ್ಸಾಹವನ್ನು ತೊರೆದರೆ ಏನು ಪ್ರಯೋಜನ? ಉತ್ಸಾಹವೇ ಸಕಲ ಸಂಪತ್ತಿಗೂ ಮೂಲ. ಸಮಸ್ತ ಸುಖಕ್ಕೂ ಉತ್ಸಾಹವೇ ಕಾರಣ. ಅದರಿಂದಲೇ ಕೆಲಸ ಆಗಬೇಕಾದರೆ. ಯಾವ ಕೆಲಸವನ್ನು ಆದರೂ ಉತ್ಸಾಹದಿಂದ ಸಾಧಿಸಬಹುದು. ಉತ್ಸಾಹ ಇಲ್ಲದೆ ಯಾವ ಕೆಲಸವೂ ನಡೆಯದು. ನಾನು ಈಗ ಧೈರ್ಯ ಕೆಡಬಾರದು. ಉತ್ಸಾಹವನ್ನು ಬಿಡಬಾರದು. ಮತ್ತೆ ಹುಡುಕಬೇಕು ಸೀತಾದೇವಿಯನ್ನು. ಇನ್ನೂ ಹುಡುಕ ಬೇಕು. ಈಗ ಹುಡುಕಿದ ಸ್ಥಳಗಳಲ್ಲಿ ಮತ್ತೆ ಹುಡುಕಿ ಪ್ರಯೋಜನ ಇಲ್ಲ. ಇದುವರೆಗೆ ಹುಡುಕದೆ ಇದ್ದ ಸ್ಥಳಗಳಲ್ಲಿ ಹುಡುಕಿ ನೋಡುತ್ತೇನೆ.'

ಹನುಮಂತ ಮತ್ತೆ ಹುಡುಕಲು ಮೊದಲುಮಾಡಿದ. ನೆಲಮಾಳಿಗೆ, ಚೌಕದಲ್ಲಿ ಕಟ್ಟಿದ ಮಂಟಪ, ಊರಿನ ಹೊರಗಡೆ ಇರುವ ವಿಹಾರಗೃಹ, ಉದ್ಯಾನವನ ಎಲ್ಲೆಲ್ಲೂ ಹುಡುಕಿದ. ಎತ್ತರದ ಮನೆ ಆದರೆ ಮೇಲಕ್ಕೆ ನೆಗೆದ.

ಕೆಳಗಡೆಗೆ ಧುಮುಕಿದ. ನಿಲ್ಲಬೇಕಾದಲ್ಲಿ ನಿಂತ. ಬಾಗಿಲು ಮುಚ್ಚಿ ಇದ್ದರೆ ತೆರೆದ. ಕೆಲವು ಕಡೆ ಬಾಗಿಲನ್ನು ಕಿತ್ತು ಎಸೆದ. ಮೇಲೆ ಏರಿದ. ಕೆಳಗೆ ಇಳಿದ. ಎಲ್ಲಾ ಪ್ರದೇಶಗಳನ್ನೂ ಹುಡುಕಿದ. ರಾವಣನ ರಾಜಧಾನಿಯಲ್ಲಿ ಹನುಮಂತ ಹುಡುಕದ ಸ್ಥಳವೇ ಉಳಿಯಲಿಲ್ಲ. ಒಂದು ಗೇಣು ಸ್ಥಳವನ್ನೂ ಬಿಡದೆ ಹುಡುಕಿದ.

ಬೀದಿಬೀದಿಗಳಲ್ಲೂ ಹುಡುಕಿದ. ಜಗಲಿ ಮಂಟಪ ಇಳಿಯುವ ಬಾವಿ ಕೊಳ ಎಲ್ಲವನ್ನೂ ಹುಡುಕಿದ. ಬಗೆಬಗೆಯ ಆಕಾರದ ಬಗೆಬಗೆಯ ವಕ್ರರೂಪದ ರಾಕ್ಷಸಿಯರು ಅನೇಕರು ಕಂಡರು. ಸೀತಾದೇವಿ ಎಲ್ಲಿಯೂ ಕಾಣಲಿಲ್ಲ. ಅಲ್ಲಲ್ಲಿ ಅನುಪಮ ಸುಂದರಿಯರು ವಿದ್ಯಾಧರಾಂಗನೆಯರು ಕಂಡುಬಂದರು. ರಘು-ಕುಲೋತ್ತಮನ ಪ್ರಿಯಪತ್ನಿ ಸೀತೆ ಮಾತ್ರ ಕಾಣಲಿಲ್ಲ. ಚಂದ್ರಮುಖಿಯರು ನಾಗಕನ್ಯೆಯರು ಕೆಲವರು ಕಂಡುಬಂದರು. ಸಣ್ಣ ನಡುವಿನ ಸೀತಾದೇವಿ ಕಾಣಲಿಲ್ಲ. ಇವರು ರಾವಣನನ್ನು ಒಲಿದುಬಂದವರು. ಬಲಾತ್ಕಾರದಿಂದ ಎತ್ತಿಕೊಂಡುಬಂದ ವನಿತೆಯರೂ, ಗರುಡಗಂಧರ್ವ ಯಕ್ಷಕಿನ್ನರ ಮುಂತಾದವರು ಕಂಡರು. ಎಷ್ಟೋ ಮಂದಿಯನ್ನು ನೋಡಿದ ಹನುಮಂತ. ಸೀತಾದೇವಿಯನ್ನು ನೋಡಲಿಲ್ಲ.

ಬಹಳ ಕೊರಗಿದ ಹನುಮಂತ. ವಾನರವೀರರು ಇದುವರೆಗೆ ಮಾಡಿದ ಸರ್ವಪ್ರಯತ್ನವೂ ತಾನು ಸಮುದ್ರವನ್ನು ನೆಗೆದುಬಂದದ್ದೂ ಎಲ್ಲವೂ ವ್ಯರ್ಥ ಆಯಿತು. ಆಂಜನೇಯನಿಗೆ ಬಲು ದುಃಖ. ಕೊನೆ ಇಲ್ಲದ ಕಳವಳ.

ಪುಷ್ಪಕವಿಮಾನಗೃಹದಿಂದ ಕೆಳಗೆ ಇಳಿದ. ಏನೂ ತೋರಲಿಲ್ಲ. ಚಿಂತೆ ಹರಿಯಲಿಲ್ಲ. ಯೋಚಿಸಿಯೇ ಯೋಚಿಸಿದ.

೧೩

ಮೋಡಗಳಲ್ಲಿ ಮಿಂಚು ಮಿರುಗುವ ಹಾಗೆ ವೇಗದಿಂದ ಲಂಕಾಪಟ್ಟಣದ ಗೋಡೆಗಳ ಮೇಲೆ ಹಾರಿ ನೆಗೆದು ಎಲ್ಲಾ ಸ್ಥಳಗಳಲ್ಲಿಯೂ ಹುಡುಕಿದ. ಜಾನಕಿ ಕಾಣಲಿಲ್ಲ. 'ರಾಮನಿಗೆ ಪ್ರಿಯವನ್ನು ಕೋರಿದೆ. ಲಂಕೆ ಎಲ್ಲವನ್ನೂ ಹಲವು ಬಾರಿ ಜಾಲಾಡಿಸಿದೆ. ಸರ್ವಾಂಗಸುಂದರಿ ಸೀತೆ ಸಿಗಲಿಲ್ಲ. ಮಡುವು

ಕೆರೆ ಕೊಳ ಬಾವಿ ಹಳ್ಳ ಕಾಲುವೆ ಹೊಳೆ ತೊರೆ ಕಾಡು ಬೆಟ್ಟ ಎಲ್ಲವನ್ನೂ ಸುತ್ತಿಬಂದೆ. ಎಷ್ಟು ಹುಡುಕಿದರೂ ಜನಕನಂದಿನಿ ಸೀತೆ ಕಾಣಲಿಲ್ಲ. ಗೃಧ್ರ-ರಾಜ ಸಂಪಾತಿ ರಾವಣಾಸುರನ ಮನೆಯಲ್ಲಿ ಇದ್ದಾಳೆ ಸೀತಾದೇವಿ ಎಂದು ಹೇಳಿದ. ಆದರೆ ಆಕೆ ಇಲ್ಲಿ ಕಾಣಿಸಲಿಲ್ಲ.

'ಸೀತೆ ಹುಟ್ಟಿದ್ದು ಪರಮಪವಿತ್ರ ವಿದೇಹ ದೇಶದಲ್ಲಿ. ಆಕೆ ಹುಟ್ಟಿ ಬೆಳೆದ ಮಿಥಿಲಾಪಟ್ಟಣ ಸತ್ಪುರುಷರ ನಿತ್ಯನಿವಾಸ. ಕರ್ಮನಿಷ್ಠ ಜನಕ ಮಹಾರಾಜ ಆಕೆಯ ತಂದೆ. ಇಂಥ ಸೀತಾದೇವಿ ಸಹಾಯಹೀನೆ ಆಗಿ ದುಷ್ಟಚರಿತ ರಾವಣನಿಗೆ ವಶ ಆಗಿ ಇರಬಹುದೆ? ರಾವಣಾಸುರ ಆಕೆಯನ್ನು ಎತ್ತಿಕೊಂಡು ಬರುವಾಗ, ಹಿಂದಿನಿಂದ ರಾಮಬಾಣಗಳು ಬಂದಾವು ಎಂದು ಬೆದರಿ ನಡುಗುತ್ತ ಓಡೋಡಿ ಬರುವಾಗ, ಸಮುದ್ರದಲ್ಲಿ ಜಾರಿ ಬಿದ್ದಳೋ ಸೀತಾದೇವಿ? ಸಿದ್ಧರು ಸಂಚರಿಸುವ ಆಕಾಶಮಾರ್ಗದಲ್ಲಿ ಆಕೆಯನ್ನು ಆ ರಾಕ್ಷಸ ಎತ್ತಿಕೊಂಡು ಬರುವಾಗ ಕೆಳಗೆ ಅಪಾರ ಜಲಧಿಯನ್ನು ನೋಡಿ ಆಕೆ ಎದೆ ಒಡೆದು ಸತ್ತಳೆ? ಅಥವಾ ಆಕೆ ಕೆಳಗೆ ಬೀಳದ ಹಾಗೆ ಅವನು ಬಿಗಿ ಆಗಿ ಒತ್ತಿ ಹಿಡಿದರೆ ಆ ಹಿಡಿತವನ್ನು ಸಹಿಸಲಾರದೆ ಆ ಕೋಮಲಾಂಗಿ ಪ್ರಾಣಬಿಟ್ಟಳೆ? ಆ ದುರುಳ ಆಕಾಶದಲ್ಲಿ ಹಾರಿಬರುವಾಗ ಬಿಡಿಸಿಕೊಳ್ಳಲು ಹೆಣಗಿ ಸಮುದ್ರದಲ್ಲಿ ಬಿದ್ದಳೋ? ಅಥವಾ ತನ್ನ ದಾರಿಗೆ ಬರಲಿಲ್ಲ ಎಂದು ಆ ಕ್ಷುದ್ರ ದಿಕ್ಕು ಇಲ್ಲದ ಆಕೆಯನ್ನು ತಿಂದೇಹಾಕಿದನೋ? ಇಲ್ಲದೆ ಇದ್ದರೆ ರಾವಣನ ದುಷ್ಟಪತ್ನಿಯರು ಆ ನಿರ್ದೋಷಿಯನ್ನು ತಿಂದುಹಾಕಿದರೆ? ಕಮಲಪತ್ರಾಕ್ಷಿ ಪೂರ್ಣಚಂದ್ರ ಮುಖಿ ಆದ ಸೀತಾದೇವಿ ಶ್ರೀರಾಮನನ್ನೇ ಧ್ಯಾನಿಸುತ್ತ ಆ ಚಿಂತೆಯಿಂದ ದೀನಳು ಆಗಿ ಪ್ರಾಣಬಿಟ್ಟಳೆ? ರಾಮಾ, ಲಕ್ಷ್ಮಣ, ಅಯೋಧ್ಯೆ ಎಂದು ಅತ್ತು ಅತ್ತು ಸಂಕಟಪಟ್ಟು ಕೊರಗಿ ಪ್ರಾಣ ತೊರೆದಳೆ?

'ಈಗಲೂ ಪಂಜರದ ಗಿಣಿಯ ಹಾಗೆ ರಾವಣನ ಅಂತಃಪುರದಲ್ಲಿ ಎಲ್ಲೋ ಗುಟ್ಟು ಆಗಿ ಬಂಧನದಲ್ಲಿ ಇದ್ದಾಳೆಯೋ ಏನೋ! ಅದೇ ಸರಿ. ಜನಕಮಹಾರಾಜನ ಮಗಳು, ಶ್ರೀರಾಮನ ಹೆಂಡತಿ ಸೀತೆ. ಸಾಮಾನ್ಯಳು ಅಲ್ಲ. ಎಂದೆಂದಿಗೂ ರಾವಣನಿಗೆ ವಶ ಆಗಳು. ಖಂಡಿತ. ಆದರೆ ಈಗ ಏನು ಮಾಡಲಿ? ರಾವಣ ಬಚ್ಚಿಟ್ಟ, ಆಕಾಶಮಾರ್ಗದಲ್ಲಿ ಬರುವಾಗ ಸಮುದ್ರದಲ್ಲಿ ಬಿದ್ದಳು, ರಾಮನನ್ನು ಅಗಲಿ ಇರಲಾರದೆ ತಾನೇ ಸತ್ತಳು, ಏನೇ ಹೇಳಿದರೂ

ಕಷ್ಟ. ತಿಳಿಸಿದರೂ ಕಷ್ಟ ರಾಮನಿಗೆ. ತಿಳಿಸದೆ ಇದ್ದರೂ ತಪ್ಪು. ತಿಳಿಸಿದರೆ ರಾಮ ಸಾಯುತ್ತಾನೆ. ತಿಳಿಸದೆ ಇದ್ದರೆ ಮೋಸಮಾಡಿದ ಹಾಗೆ. ಹೀಗೂ ಕಷ್ಟ, ಹಾಗೂ ಕಷ್ಟ. ಒಳ್ಳೆಯ ಧರ್ಮಸಂಕಟ ಆಯಿತೆ? ಈಗ ನಾನು ಏನು ಮಾಡಬೇಕು?' ಎಂದು ಕೊರಗಿದ ಹನುಮಂತ.

ಮತ್ತೆ ಆಲೋಚಿಸಿದ.

'ಸೀತೆಯನ್ನು ನೋಡದೆ ಹೀಗೆಯೆ ಕಿಷ್ಕಿಂಧಾಪಟ್ಟಣಕ್ಕೆ ಹೋದರೆ ಏನು ಸಾಧಿಸಿದ ಹಾಗೆ ಆಯಿತು? ಯಾವ ಪುರುಷಾರ್ಥಸಾಧನೆ ಆಯಿತು? ಸಮುದ್ರವನ್ನು ನೆಗೆದು ದಾಟಬಂದದ್ದು ನಿಷ್ಫಲ. ಈ ಲಂಕಾಪಟ್ಟಣವನ್ನು ಪ್ರವೇಶಿಸಿದ್ದೂ ರಾವಣಾಂತಃಪುರದಲ್ಲಿ ಮನೆಮನೆಯಲ್ಲಿ ಹುಡುಕಿದ್ದೂ ವ್ಯರ್ಥ. ಹೀಗೆಯೇ ಹೋದರೆ ಸುಗ್ರೀವ ಏನು ಹೇಳಬೇಕು! ವಾನರರು ಏನು ಹೇಳಬಹುದು! ಸೀತಾದೇವಿ ಕಾಣಲಿಲ್ಲ ಎಂದು ಹೇಳಲೆ ರಾಮನಿಗೆ? ಕರ್ಣ-ಕಠೋರ ಕ್ರೂರ ಅಸಹ್ಯ ದಾರುಣ ಈ ಮಾತು. ಇದನ್ನು ಕೇಳಿ ರಾಮನ ಸರ್ವೇಂದ್ರಿಯಗಳೂ ಸುಡವೆ? ರಾಮ ಬದುಕುತ್ತಾನೆಯೆ ಇದನ್ನು ಕೇಳಿ!

'ರಾಮ ಸಾಯಲು ನಿರ್ಧರಿಸಿದರೆ, ಅಣ್ಣ ಎಂದರೆ ಅಪಾರ ಸ್ನೇಹ ಇರುವ ಲಕ್ಷ್ಮಣ ಮಾತ್ರ ಬದುಕುತ್ತಾನೆಯೆ? ಅವನೂ ಪ್ರಾಣಬಿಡುತ್ತಾನೆ. ರಾಮಲಕ್ಷ್ಮಣರ ಸಾವಿನ ಸುದ್ದಿ ತಿಳಿದ ಕೂಡಲೆ ಭರತ ಬದುಕುವುದು ಇಲ್ಲ. ಭರತ ಸತ್ತರೆ ಶತ್ರುಘ್ನ ಸಾಯುತ್ತಾನೆ. ಮಕ್ಕಳು ನಾಲ್ವರೂ ಸತ್ತರು ಎಂಬ ಸುದ್ದಿ ಕಿವಿಗೆ ಬಿದ್ದರೆ ಅವರ ತಾಯಿಯರು ಕೌಸಲ್ಯೆ ಸುಮಿತ್ರೆ ಕೈಕೇಯಿಯರು ಪ್ರಾಣಬಿಡುತ್ತಾರೆ. ಸಂದೇಹ ಇಲ್ಲ.

'ಇದನ್ನು ನೋಡಿ ಸುಗ್ರೀವನೂ ಬದುಕಲಾರ. ಸುಗ್ರೀವ ಸತ್ಯಸಂಧ. ರಾಮನಿಂದ ಉಪಕಾರಪಡೆದ. ಪ್ರತಿ ಉಪಕಾರಮಾಡಲು ಇಲ್ಲದೆಹೋಯಿತಲ್ಲ ಎಂದು ಕೊರಗಿ ಸಾಯುತ್ತಾನೆ. ಗಂಡ ಸತ್ತಮೇಲೆ ಸುಗ್ರೀವನ ಹೆಂಡತಿ ರುಮೆಯೂ ಸಾಯುತ್ತಾಳೆ. ವಾಲಿ ಸತ್ತ ದುಃಖದಿಂದಲೇ ತಾರೆ ಕೊರಗಿ ಸೊರಗಿದಾಳೆ. ಈಗ ಸುಗ್ರೀವನೂ ಹೋದರೆ ಅವಳೂ ಪ್ರಾಣಬಿಡುತ್ತಾಳೆ. ತಂದೆತಾಯಿ ಹೋಗಿ ಸುಗ್ರೀವನೂ ಹೋಗಿ ಅಂಗದ ಬದುಕುತ್ತಾನೆಯೆ?

'ವಾನರನಾಯಕರ ಪಾಡನ್ನು ಏನು ಹೇಳಬೇಕು? ತಮ್ಮ ಕೈಗಳಿಂದ ಮುಷ್ಟಿಯಿಂದ ತಲೆ ಚಚ್ಚಿಕೊಳ್ಳುತ್ತಾರೆ. ಕೋರಿದುದನ್ನು ಕೊಟ್ಟು ಎಲ್ಲರನ್ನೂ

ಮನ್ನಿಸಿ, ವಾನರರನ್ನು ತಮ್ಮನ್ನು ಪ್ರೀತಿಯಿಂದ ಕಾಪಾಡಿದ ದೊರೆ ಸುಗ್ರೀವನೇ ಹೋದಮೇಲೆ ವಾನರರು ಬದುಕಿ ಇರುತ್ತಾರೆಯೆ ? ಕಾಡಿನಲ್ಲೋ ಬೆಟ್ಟದಲ್ಲೋ ಎಲ್ಲರೂ ಒಟ್ಟು ಕಲೆತು ವಾನರರು ಇಷ್ಟು ದಿನ ಕ್ರೀಡಿಸುತ್ತ ಇದ್ದರಲ್ಲ. ಸುಗ್ರೀವನ ಸಾವಿನ ಸುದ್ದಿ ತಿಳಿದಮೇಲೆ ಇನ್ನು ಸಾಧ್ಯ ಇಲ್ಲ. ಮನೆಗಳಲ್ಲೂ ವಿಹಾರ ಸಾಧ್ಯ ಇಲ್ಲ. ಬೆಟ್ಟದ ಮೇಲಿನಿಂದ ಧುಮುಕಿ ಪ್ರಾಣಬಿಡುತ್ತಾರೆ. ಇಲ್ಲದೆ ಹೋದರೆ ವಿಷ ಕುಡಿಯುತ್ತಾರೆ. ಬೆಂಕಿಯಲ್ಲಿ ಬೀಳುತ್ತಾರೆ. ನೇಣು ಹಾಕಿಕೊಳ್ಳುತ್ತಾರೆ. ಆಯುಧಗಳಿಂದ ತಿವಿದುಕೊಳ್ಳುತ್ತಾರೆ. ಉಪವಾಸ ಮಾಡುತ್ತಾರೆ. ಅಂತೂ ಸಾಯುತ್ತಾರೆ. ಹೆಂಡತಿಮಕ್ಕಳು ಸಹಿತ ಎಲ್ಲರೂ ಪ್ರಾಣಬಿಡುತ್ತಾರೆ.

'ಈಗ ನಾನು ಕಿಷ್ಕಿಂಥೆಗೆ ಹೀಗೆಯೆ ಹೋದರೆ ಇಕ್ಷ್ವಾಕುಕುಲ ನಾಶ ಆಗುತ್ತದೆ. ವಾನರವಂಶಕ್ಕೆ ಹಾನಿ. ಎಷ್ಟು ಅನರ್ಥ! ನಾನು ಕಿಷ್ಕಿಂಥೆಗೆ ಹೋಗುವುದಿಲ್ಲ. ಸೀತಾದೇವಿಯನ್ನು ಕಾಣದೆ ಸುಗ್ರೀವನನ್ನು ನೋಡಲಾರೆ. ನಾನು ಇಲ್ಲಿಯೆ ಇದ್ದರೆ ಸೀತೆಯನ್ನು ಹುಡುಕಿಕೊಂಡು ಬರುತ್ತಾನೆ ಹನುಮಂತ ಎಂದು ನಂಬಿಕೊಂಡು ಆ ಧರ್ಮಾತ್ಮರು ರಾಮಲಕ್ಷ್ಮಣರು ಬದುಕಿರುತ್ತಾರೆ. ನಮ್ಮ ವಾನರರೂ ಪ್ರಾಣದಿಂದ ಇರುತ್ತಾರೆ. ಇಲ್ಲಿಯೇ ಇದ್ದುಬಿಡುತ್ತೇನೆ ಸೀತಾದೇವಿ ಕಾಣದೆ ಹೋದರೆ. ಎಲ್ಲಿಯೋ ಒಂದು ಮರದ ಕೆಳಗೆ ಕುಳಿತು ಕೊಳ್ಳುತ್ತೇನೆ ವಾನಪ್ರಸ್ಥ ಆಗಿ. ಕೈಗೆ ಸಿಕ್ಕಿದ್ದನ್ನು ಬಾಯಿಗೆ ಎಟುಕಿದ್ದನ್ನು ತಿಂದು ಕಾಲಹಾಕುತ್ತೇನೆ. ಇಲ್ಲದೆಹೋದರೆ ಕಂದಮೂಲಫಲಗಳು ಸಮೃದ್ಧಿ ಆಗಿ ನೀರು ವಿಶೇಷ ಆಗಿ ಇರುವ ಸಮುದ್ರತೀರಪ್ರದೇಶ ಒಂದನ್ನು ಹುಡುಕು ತ್ತೇನೆ. ಅಲ್ಲಿ ಚಿತೆ ಮಾಡಿ ಧಗಧಗ ಉರಿಯುವ ಬೆಂಕಿಯಲ್ಲಿ ಬೀಳುತ್ತೇನೆ. ಅಥವಾ ಉಪವಾಸವ್ರತ ಹಿಡಿದು ಪ್ರಾಣಗಳನ್ನು ಬಿಡುತ್ತೇನೆ. ಆಗ ನನ್ನ ದೇಹವನ್ನು ಕಾಗೆಗಳೂ ನಾಯಿಗಳೂ ತಿನ್ನುತ್ತವೆ. ಇಂಥ ಸಾವು ಉತ್ತಮ ಎಂದು ಮಹರ್ಷಿಗಳು ಹೇಳಿದಾರೆ. ಸರಿ, ಸೀತಾದೇವಿ ಕಾಣದೆ ಇದ್ದರೆ ಸಮುದ್ರದಲ್ಲಿ ಮುಳುಗಿ ಸಾಯುತ್ತೇನೆ.

'ನಾನು ಇಲ್ಲಿಗೆ ಬಂದಾಗ ಬಹಳ ಮಂಗಳಕರ ಆಗಿತ್ತು ಈ ರಾತ್ರಿ. ಬೆಳುದಿಂಗಳು ರಮಣೀಯ ಆಗಿದೆ. ಲಂಕಾದೇವತೆಯೇ ಅಡ್ಡಬಂದರೂ ಒಂದು ಕ್ಷಣದಲ್ಲಿ ಗೆದ್ದೆ. ಈ ರಾತ್ರಿ ನನಗೆ ಶುಭಕೀರ್ತಿ ಕೊಡಬೇಕು. ಹಾಗಲ್ಲದೆ

ವ್ಯರ್ಥ ಆದರೂ ನಾನು ಹಿಂದಿರುಗುವುದು ಇಲ್ಲ. ನಿಯಮಬದ್ಧ ಆಗಿ ತಪಸ್ಸು ಮಾಡುತ್ತ ಇದ್ದುಬಿಡುತ್ತೇನೆ ಒಂದು ಮರದ ಕೆಳಗೆ. ಸೀತೆಯನ್ನು ಕಾಣದೆ ಹೋಗಿ ಅಂಗದಾದಿಗಳನ್ನು ನೋಡಲಾರೆ. ಸೀತೆ ಸಿಗಲಿಲ್ಲ ಎಂದು ಅವರಿಗೆ ಹೇಳಿದರೆ ಅವರು ಪ್ರಾಣಬಿಡುವುದು ಖಂಡಿತ. ಸತ್ತರೆ ಏನು ಪ್ರಯೋಜನ? ಬದುಕಿ ಇದ್ದರೆ ಎಂದಾದರೂ ಒಮ್ಮೆ ಒಳ್ಳೆಯದು ಆದೀತು. ಆತ್ಮಹತ್ಯೆಯಲ್ಲಿ ಬಹಳ ದೋಷ ಇವೆ. ಬದುಕಿ ಇದ್ದರೆ ಶುಭ ಆಗುತ್ತದೆ.' ಹನುಮಂತನ ಆಲೋಚನೆ ಹೀಗೆ ಹರಿಯಿತು. ದುಃಖಸಾಗರದಲ್ಲಿ ಮುಳುಗಿಹೋದ. ದಡ ಕಾಣಲಿಲ್ಲ. ಮತ್ತೆ ಆಲೋಚಿಸಿದ:

'ಸೀತಾದೇವಿ ಕಾಣಿಸಲಿ ಕಾಣಿಸದೆ ಹೋಗಲಿ ಈ ದಶಕಂಠನನ್ನು ಹಿಡಿದು ಕೊಲ್ಲುತ್ತೇನೆ. ಅವನು ಮಾಡಿದ ದುಷ್ಕೃತ್ಯಕ್ಕೆ ತಕ್ಕ ಶಾಸ್ತಿ ಆಗಲೇಬೇಕು. ಅಥವಾ ಈ ರಾಕ್ಷಸಾಧಮನನ್ನು ಹಿಂಗಟ್ಟು ಮುಂಗಟ್ಟು ಕಟ್ಟಿಕೊಂಡು ಸಮುದ್ರದ ಮೇಲೆ ಎತ್ತಿಕೊಂಡು ಹೋಗುತ್ತೇನೆ. ಯಾಗದಲ್ಲಿ ಅಗ್ನಿಗೆ ಪಶುವನ್ನು ಬಲಿ ಕೊಡುವ ಹಾಗೆ ಶ್ರೀರಾಮನಿಗೆ ಇವನನ್ನು ಒಪ್ಪಿಸುತ್ತೇನೆ.'

ಹೀಗೆ ಯೋಚಿಸಿದರೂ ಸೀತೆಯನ್ನು ಕಾಣದ ದುಃಖ ಇದ್ದೇ ಇತ್ತು. ಇಷ್ಟರಲ್ಲಿ ಬೇರೆ ಯೋಚನೆ ಹೊಳೆಯಿತು. 'ರಾಮನ ಹೆಂಡತಿ ಸೀತಾದೇವಿ ಕಾಣುವವರೆಗೂ ಈ ಲಂಕಾಪಟ್ಟಣವನ್ನು ತಿರುತಿರುಗಿ ಸುತ್ತಿ ಹುಡುಕುತ್ತೇನೆ. ಸಂಪಾತಿಯ ಮಾತನ್ನು ನಂಬಿ ನಾನು ಶ್ರೀರಾಮನನ್ನೇ ಇಲ್ಲಿಗೆ ಕರೆತಂದು ಬಿಟ್ಟಿದ್ದರೆ? ಹೆಂಡತಿಯನ್ನು ಕಾಣದೆ ರಾಮನಿಗೆ ಸಿಟ್ಟು ಬರುತ್ತ ಇತ್ತು. ಆ ಸಿಟ್ಟಿನಲ್ಲಿ ತನ್ನ ಬಾಣಗಳಿಂದ ವಾನರರು ಎಲ್ಲರನ್ನೂ ಸುಟ್ಟುಬಿಡುತ್ತ ಇದ್ದ. ನಾನು ಮಾಡಿದ್ದೇ ಸರಿ ಆಯಿತು. ನನ್ನಿಂದ ಯಾರು ಏಕೆ ಸಾಯಬೇಕು? ಅವರು ಬದುಕಲಿ. ನಾನು ನಿಯತ ಆಹಾರಿ ಆಗಿ ಇಲ್ಲಿಯೇ ಇದ್ದುಬಿಡುತ್ತೇನೆ.

'ಇದಿರಿಗೆ ಕಾಣುತ್ತ ಇದೆಯಲ್ಲ ಉನ್ನತ ವೃಕ್ಷರಾಜಿ. ಇದೇ ಅಶೋಕ ವನ. ಈ ರಮಣೀಯ ಪ್ರದೇಶದಲ್ಲಿ ನಾನು ಇದುವರೆಗೆ ಹುಡುಕಲಿಲ್ಲ. ಈಗ ನಾನು ಇಲ್ಲಿ ಹುಡುಕುತ್ತೇನೆ. ಅಷ್ಟವಸುಗಳು ಏಕಾದಶರುದ್ರರು ದ್ವಾದಶ ಆದಿತ್ಯರು ಅಶ್ವಿನೀದೇವತೆಗಳು ಸಪ್ತಮರುತ್ತುಗಳು ಎಲ್ಲರಿಗೂ ನಮಸ್ಕರಿಸುತ್ತೇನೆ. ಈ ರಾಕ್ಷಸರು ಎಲ್ಲರಿಗೂ ದುಃಖ ತರುತ್ತೇನೆ. ಇವರನ್ನು ಎಲ್ಲರನ್ನೂ ಗೆಲ್ಲುತ್ತೇನೆ. ತಪಸ್ಸಿಗೆ ಫಲ ಸಿದ್ಧಿ. ಇಕ್ಷ್ವಾಕುಕುಲವರ್ಧಿನಿ ಸೀತೆ ರಾಮನಿಗೆ.

ಒಪ್ಪಿಸುತ್ತೇನೆ ನಾನು.' ಹನುಮಂತ ಮಹಾಪರಾಕ್ರಮಶಾಲಿ. ಒಂದು ಗಳಿಗೆ ಆಲೋಚಿಸಿದ. ಧೈರ್ಯ ಬಂತು. ಅವನ ವ್ಯಾಕುಲ ಕಡಿಮೆ ಆಯಿತು. ಥಿಗ್ಗನೆ ಎದ್ದ.

'ರಾಮಲಕ್ಷ್ಮಣರಿಗೆ ನಮಸ್ಕಾರ. ಜನಕಪುತ್ರಿ ಸೀತೆಗೆ ನಮಸ್ಕಾರ. ರುದ್ರನಿಗೆ ಯಮನಿಗೆ ಅಗ್ನಿಗೆ. ಇಂದ್ರನಿಗೆ ನಮಸ್ಕಾರ. ವಾಯುದೇವನಿಗೆ ನಮಸ್ಕಾರ. ಸೂರ್ಯಚಂದ್ರರಿಗೆ ಮರುದ್ಗಣಗಳಿಗೆ ನಮಸ್ಕಾರ.' ಎಲ್ಲರಿಗೂ ನಮಸ್ಕಾರ ಮಾಡಿದ. ತನ್ನ ಪ್ರಭು ಸುಗ್ರೀವನಿಗೆ ನಮಸ್ಕಾರ ಮಾಡಿದ. ಹತ್ತು ದಿಕ್ಕನ್ನೂ ನೋಡಿದ. ಅಶೋಕವನದ ಕಡೆ ಹೊರಟ.

ಅಶೋಕವನದಲ್ಲಿ ತಾನು ಏನು ಏನು ಮಾಡಬೇಕೋ ಆಲೋಚಿಸಿದ ಹನುಮಂತ. 'ಈ ಅಶೋಕವನದಲ್ಲಿ ಅನೇಕರು ರಾಕ್ಷಸರು ಇರುತ್ತಾರೆ. ಇಲ್ಲಿ ವಿಧವಿಧದ ಅನೇಕ ಗಿಡಮರ ಇವೆ. ಆ ಗಿಡಗಳನ್ನು ಚೆನ್ನಾಗಿ ಬೆಳೆಸಿ ಕಾಪಾಡಿ ಇರುತ್ತಾರೆ. ಬಹಳ ಎಚ್ಚರದಿಂದ ಕಾವಲು ಕಾಯುತ್ತ ಇರಬೇಕು ಕಾವಲುಗಾರರು. ಈ ವನದಲ್ಲಿ ಬಿರುಸು ಆಗಿ ಬೀಸುವುದಿಲ್ಲ ವಾಯು. ರಾವಣಾಸುರನ ಭಯ. ಇಲ್ಲಿ ಸೀತೆಯನ್ನು ಹುಡುಕಬೇಕು. ರಾಮಕಾರ್ಯ ಸಾಧನೆ ಆಗಬೇಕು. ರಾವಣನ ಕಣ್ಣಿಗೆ ರಾಕ್ಷಸರ ಕಣ್ಣಿಗೆ ನಾನು ಬೀಳಬಾರದು. ನಾನು ಈ ಸೂಕ್ಷ್ಮರೂಪವನ್ನು ತಾಳಿದ್ದು ಸರಿ. ದೇವತೆಗಳೂ ಮಹರ್ಷಿಗಳೂ ನನ್ನ ಕೆಲಸ ಕೈಗೂಡುವಂತೆ ಅನುಗ್ರಹಿಸಲಿ. ಸ್ವಯಂಭೂ ಬ್ರಹ್ಮದೇವ, ನಮ್ಮ ತಂದೆ ವಾಯುದೇವ, ವಜ್ರಹಸ್ತ ದೇವೇಂದ್ರ, ಪಾಶಹಸ್ತ ವರುಣ, ಮಹಾತ್ಮರು ಅಶ್ವಿನೀದೇವತೆಗಳು, ಸಪ್ತಮರುತ್ತುಗಳು ಸೂರ್ಯಚಂದ್ರರು, ಸಮಸ್ತ ದೇವತೆಗಳು, ಪರಮೇಶ್ವರ ನನಗೆ ಕಾರ್ಯಸಿದ್ಧಿಯನ್ನು ಕರುಣಿಸಲಿ. ಕಣ್ಣಿಗೆ ಕಾಣುವ ದೇವತೆಗಳೂ ಕಾಣದ ದೇವತೆಗಳೂ ಎಲ್ಲರೂ ಅನುಗ್ರಹಿಸಲಿ.

ಎತ್ತರ ಆದ ಮೂಗು, ಬೆಳ್ಳನೆ ಹಲ್ಲಿನ ಸಾಲು, ನಿರ್ದುಷ್ಟ ಶುಭ್ರ ಮಂದಹಾಸ, ಕಮಲಪತ್ರದಂಥ ವಿಶಾಲ ಆದ ಕಣ್ಣು, ಚಂದ್ರನ ಹಾಗೆ ಹೊಳೆಯುವ ಕಾಂತಿವಂತ ಮುಖ. ಪೂಜ್ಯೆ ಸೀತಾದೇವಿಯನ್ನು ಯಾವಾಗ ನೋಡುತ್ತೇನೋ ನಾನು! ನೀಚ ಪಾಪಿ ಕ್ರೂರಕರ್ಮಿ, ಘೋರವೇಷದ ಆ ರಾವಣಾಸುರ ಬಲವಂತದಿಂದ ಎತ್ತಿಕೊಂಡು ಕದ್ದು ತಂದ ಆ ಅಬಲೆ

ಆ ದೀನೆ ಆ ಚಿರತಪಸ್ವಿನಿ ಸೀತಾದೇವಿಯನ್ನು ಯಾವಾಗ ಕಾಣುತ್ತೇನೋ, ಹೇಗೆ ಕಾಣುತ್ತೇನೋ!' ಎಂದುಕೊಂಡ ಹನುಮಂತ.

೧೪

ಮಹಾತೇಜಸ್ವಿ ಮಾರುತಿ ಒಂದು ಗಳಿಗೆ ಹೀಗೆ ಯೋಚಿಸಿದ. ಅಶೋಕ ವನಕ್ಕೆ ಹೋಗಬೇಕು ಎಂದು ನಿರ್ಧರಿಸಿದ. ರಾವಣನ ಅರಮನೆಯ ಗೋಡೆ ಯಿಂದ ವನದ ಪ್ರಾಕಾರಕ್ಕೆ ಹಾರಿದ.

ವಸಂತಕಾಲದ ಪ್ರಾರಂಭದ ಹಾಗೆ ಗಿಡಮರಗಳು ಎಲ್ಲಾ ಹೂಬಿಟ್ಟು ಇದ್ದವು. ಸಾಲ ಅಶೋಕ ಚಂಪಕ ಉದ್ದಾಲಕ ನಾಗ ಚೂತ ಮರ್ಕಟಕ ಮುಂತಾದ ಗಿಡ ಎಲ್ಲವೂ ಅರಳಿ ಇದ್ದವು. ಅದನ್ನು ನೋಡಿ ಹನುಮಂತನಿಗೆ ಸಂತೋಷ. ಮಾವಿನ ತೋಪುಗಳು, ಸಾವಿರಾರು ಗಿಡಬಳ್ಳಿ. ಎಲ್ಲಾ ದಟ್ಟ ಆಗಿ ಬೆಳೆದು ಇದ್ದವು. ಅವುಗಳ ನಡುವೆ ಜಿಗಿದ ಮಾರುತಿ. ಹೆದೆಯಿಂದ ಹಾರಿದ ಬಾಣದಂತೆ ನೆಟ್ಟಗೆ ಹಾರಿಬಂದ.

ಅಶೋಕವನದಲ್ಲಿ ಚಿತ್ರವಿಚಿತ್ರ ವೃಕ್ಷಗಳು. ಸಾಲುಗಟ್ಟಿ ಬೆಳೆದಿವೆ. ಎಲ್ಲಾ ಬಂಗಾರದ ಹಾಗೆ ಬೆಳ್ಳಿಯ ಹಾಗೆ ಕಾಣುವ ಗಿಡಗಳೇ. ಕಿವಿಗೆ ಇಂಪು ಆಗಿ ಕೇಳಿಸುತ್ತ ಇದೆ ಪಕ್ಷಿಗಳ ಹಾಡು. ಬಣ್ಣಬಣ್ಣದ ಹಕ್ಕಿ ಬಣ್ಣಬಣ್ಣದ ಮೃಗಸಮೂಹ. ಅಶೋಕವನ ದೊಡ್ಡದು. ಅದರ ಒಳಗಡೆ ಕೆಲವು ಚಿಕ್ಕ ಚಿಕ್ಕ ತೋಪು. ಉದಯಕಾಲದ ಸೂರ್ಯನ ಹಾಗೆ ಹೊಳೆಯುತ್ತ ಇದೆ ವನ. ಸುತ್ತಲೂ ಹೂಹಣ್ಣುಗಳಿಂದ ತುಂಬಿದ ಗಿಡಮರ. ಮದ ಏರಿದ ಕೋಗಿಲೆಗಳು ದುಂಬಿಗಳು ಯಾವಾಗಲೂ ಇರುತ್ತವೆ ಅಲ್ಲಿ. ಅಲ್ಲಿ ಇದ್ದ ಜನರಿಗೆ ಮೃಗಪಕ್ಷಿ ಗಳಿಗೆ ಬಹಳ ಹರ್ಷ. ನವಿಲುಗಳ ಕೇಕೆ, ಹಕ್ಕಿಗಳ ಕಲಕಲಧ್ವನಿ ಸರ್ವದಾ ಸದಾ ಇರುತ್ತದೆ.

ದೋಷರಹಿತಳು ಉತ್ತಮಳು ಆದ ಸೀತಾದೇವಿಯನ್ನು ಆ ವನದಲ್ಲಿ ಹುಡುಕತೊಡಗಿದ ಹನುಮಂತ. ಒಂದು ಗಿಡದಿಂದ ಇನ್ನೊಂದಕ್ಕೆ ಹಾರಿದ. ಗಿಡಗಳು ಅಲುಗಾಡಿ ಆ ಗಿಡಗಳಲ್ಲಿ ಸುಖ ಆಗಿ ನಿದ್ದೆಮಾಡುತ್ತ ಇದ್ದ ಪಕ್ಷಿಗಳು ಎಲ್ಲವೂ ಗಾಬರಿಗೊಂಡು ಎಚ್ಚರಗೊಂಡವು. ಪಟಪಟ ರೆಕ್ಕೆಗಳನ್ನು ಬಡಿಯುತ್ತ ಮೇಲೆ ಹಾರಿಹೋದವು. ಗಿಡದಿಂದ ಪಕ್ಷಿಗಳು ಹಾರಿಹೋಗುವಾಗ ರೆಕ್ಕೆಗಳ

ಹೊಡೆತಕ್ಕೆ ಆ ಗಿಡಗಳಿಂದ ಬಣ್ಣಬಣ್ಣದ ಹೂಗಳು ಕೆಳಕ್ಕೆ ಉದುರಿದವು. ಆ ಹೂ ಎಲ್ಲಾ ಬಂದು ಹನುಮಂತನ ಮೇಲೆ ಬಿದ್ದವು. ಹೂವಿನ ಬೆಟ್ಟದ ಹಾಗೆ ಕಂಡ ಆಗ ಹನುಮಂತ. ಅಲ್ಲಿ ಹೊಕ್ಕು ಇಲ್ಲಿ ನುಗ್ಗಿ ಎಲ್ಲೆಲ್ಲೂ ಸುತ್ತುತ್ತ ಇದ್ದ ಹನುಮಂತನನ್ನು ನೋಡಿ ಇವನೇ ವಸಂತ ಇರಬೇಕು ಎನಿಸಿತು ಎಲ್ಲ ಪ್ರಾಣಿಗಳಿಗೂ.

ಬಣ್ಣಬಣ್ಣದ ಹೂಗಳು ಉದುರಿಬಿದ್ದುದರಿಂದ ಸರ್ವಾಲಂಕಾರಗಳಿಂದ ಸಿಂಗರಿಸಿಕೊಂಡ ಚೆಲುವೆಯಂತೆ ಕಾಣುತ್ತ ಇತ್ತು ಭೂಮಿ. ಮಹಾಬಲಾಢ್ಯ ಹನುಮಂತ ಗಿಡಗಳನ್ನು ಹಿಡಿದು ಅಲ್ಲಾಡಿಸಿದ. ಅವುಗಳಲ್ಲಿ ಇದ್ದ ಎಲೆ ಹೂ ಹಣ್ಣು ಯಾವುದೂ ಗಿಡದಲ್ಲಿ ಉಳಿಯಲಿಲ್ಲ. ಎಲ್ಲಾ ಉದುರಿ ಬಿದ್ದವು. ಎಲ್ಲವೂ ಮೋಟುಮರ ಆದವು. ಜೂಜಿನಲ್ಲಿ ತಮ್ಮ ಬಟ್ಟೆಬರೆ ಒಡವೆ ಎಲ್ಲವನ್ನೂ ಸೋತುನಿಂತ ಜೂಜುಗಾರರ ಹಾಗೆ. ಒಣಗಿದ ಗಿಡಗಳ ಹಾಗೆ ಆದವು. ಬಿರುಗಾಳಿಗೆ ಸಿಕ್ಕ ಗಿಡಗಳ ಹಾಗೆ ಎಲ್ಲವೂ ಉದುರಿ ಕೆಳಗೆ ಬಿದ್ದು ಹಕ್ಕಿಗಳು ಎಲ್ಲವೂ ಹಾರಿಹೋಗಿ ಮರಗಳು ಬೋಳು ಆದವು. ಒಂದೊಂದು ಮರಕ್ಕೂ ಬಾಲವನ್ನು ಸುತ್ತಿದ. ಒಂದೊಂದನ್ನೂ ಕಾಲಿನಿಂದ ಒದೆದ. ಕೈಹಾಕಿ ಅಲುಗಾಡಿಸಿದ. ಗಿಡಗಳು ಎಲ್ಲಾ ಮುರಿದುಬಿದ್ದವು. ಹನುಮಂತ ಮುಟ್ಟಿದ ಮರ ಕೆಲಸಕ್ಕೆ ಬಾರದಂತೆ ಆಯಿತು. ರತಿಕ್ರೀಡೆಯ ಸಂಭ್ರಮದಲ್ಲಿ ತಲೆಕೂದಲು ಕೆದರಿ ಕುಂಕುಮ ಕರಗಿ ತುಟಿ ಬಾಡಿ ಕಂದಿ, ಹಲ್ಲಿನ ಗುರುತು ಉಗುರಿನ ಗುರುತು ಮೂಡಿ, ಬಳಲಿದ ತರುಣಿಯಂತೆ ಇತ್ತು ಅಶೋಕವನ ಆಗ. ಮಳೆಗಾಲದಲ್ಲಿ ಬೀಸುವ ಬಿರುಗಾಳಿ ವಿಂಧ್ಯಪರ್ವತದ ಮೇಲಿನ ಮೋಡಗಳ ಗುಂಪನ್ನು ಚದರಿಸಿದ ಹಾಗೆ ಅಶೋಕವನದ ಬಳ್ಳಿಗಳನ್ನು ಎಲ್ಲಾ ಕಿತ್ತು ಎಸೆದು ತುಳಿದಾಡಿದ ಮಾರುತಿ.

ಅಲ್ಲಿ ಚಿನ್ನ ಬೆಳ್ಳಿಯ ನೆಲಗಟ್ಟು ಇತ್ತು. ಅದಕ್ಕೆ ನವರತ್ನಗಳನ್ನು ಜೋಡಿಸಿ ಇದ್ದರು. ಹಲವು ಬಗೆಯ ಆಕಾರದ ಇಳಿಯುವ ಬಾವಿ ಇದ್ದವು. ಆ ಬಾವಿಗಳಿಗೆ ಮಣಿಮಯ ಸೋಪಾನಗಳು. ನೀರು ಪೂರಾ ತಿಳಿ. ತಳದ ಮರಳು ಮುತ್ತಿನ ಹಾಗೆ ಹವಳದ ಹಾಗೆ ಕಾಣುತ್ತ ಇತ್ತು. ಸ್ಫಟಿಕದ ನೆಲಗಟ್ಟು. ಆ ಬಾವಿಗಳ ದಡದಲ್ಲಿ ಕಾಂಚನವೃಕ್ಷಗಳು ಬಾವಿಗಳಲ್ಲಿ ತಾವರೆ ನೈದಿಲೆ ಅರಳಿವೆ. ಪಟ್ಟ ಆಗಿ ಹಬ್ಬಿವೆ.

ಬಾವಿಗಳ ಹತ್ತಿರ ಗಿರಿನದಿ ಹರಿಯುತ್ತವೆ. ನೀರು ಅಮೃತಸಮಾನ. ನದಿಗಳ ಎರಡೂ ದಡಗಳಲ್ಲೂ ಮನೋಹರ ಆದ ಗಿಡಗಳು. ಅವಕ್ಕೆ ಹಬ್ಬಿದ ನೂರಾರು ಹೂಬಳ್ಳಿ. ಬಗೆಬಗೆಯ ಪೊದೆಗಳು ಬೆಳೆದಿವೆ. ನಡುನಡುವೆ ಹೂ ಅರಳಿ ಶೋಭಿಸುವ ಕಣಿಗಿಲೆ ಗಿಡಗಳು. ಬಣ್ಣಬಣ್ಣದ ಹೂಗಳು ಎಲ್ಲಾ ಅಲ್ಲಿ ಉದುರಿ ಬಿದ್ದಿವೆ. ಚಕ್ರವಾಕ ಪಕ್ಷಿಗಳ ನೀರುಕೋಳಿಗಳ ಹಂಸಸಾರಸಗಳ ಕಲಕಲ ಧ್ವನಿ ಸದಾ ಕೇಳಿಸುತ್ತದೆ.

ಅದನ್ನು ದಾಟಿಬಂದ ಹನುಮಂತ. ಅಲ್ಲಿ ಒಂದು ಎತ್ತರ ಆದ ಕೃತಕ ಪರ್ವತ ಒಂದು ಕಂಡಿತು. ಮಹಾಮೇಘದ ಹಾಗೆ ಇದೆ. ಅದರ ಶಿಖರಗಳು ಅತಿ ಉನ್ನತ. ಅದರಲ್ಲಿ ವಿಧವಿಧ ದಿವ್ಯಕೂಟಗಳು. ಅಲ್ಲಲ್ಲಿ ಕಲ್ಲಿನ ಮಂಟಪ ಗಳು ಇವೆ. ಮಂಟಪಗಳ ಸುತ್ತಲೂ ಬಗೆಬಗೆಯ ಗಿಡಗಳು, ತೋಪುಗಳು.

ಆ ಬೆಟ್ಟದಿಂದ ಒಂದು ಹೊಳೆ ವೇಗದಿಂದ ಇಳಿದು ಬರುತ್ತ ಇದೆ. ಸಿಟ್ಟುಮಾಡಿಕೊಂಡು ನಲ್ಲನ ತೊಡೆಯನ್ನು ಬಿಟ್ಟು ಎದ್ದು ಓಡಿಹೋಗುವ ನಲ್ಲೆಯಂತೆ ಓಡುತ್ತ ಇದೆ ಆ ಹೊಳೆ. ಸಿಟ್ಟುಗೊಂಡು ಓಡಿಹೋಗುವ ತರುಣಿ ಯನ್ನು ಪ್ರಿಯ ಬಂಧುಗಳು ಎರಡೂ ಕೈಗಳಿಂದ ಅಡ್ಡಗಟ್ಟಿದ ಹಾಗೆ ಹೊಳೆಯ ಎರಡೂ ದಡಗಳಲ್ಲಿ ಬೆಳೆದ ಗಿಡಮರ ಹಣ್ಣುಹೂಗಳ ಭಾರಕ್ಕೆ ಬಗ್ಗಿ ಅದರ ಕೊಂಬೆಗಳು ನೀರನ್ನು ಮುಟ್ಟಿವೆ. ಸ್ವಲ್ಪ ದೂರ ಹರಿದು ಮುಂದಕ್ಕೆ ಹೋಗ ಲಾರದೆ ಆ ಹೊಳೆ ಹಿಂದಿರುಗಿತ್ತು. ಬಂಧುಗಳ ಮಾತನ್ನು ಕೇಳಿ ಮತ್ತೆ ನಲ್ಲನ ಬಳಿಗೆ ಬರುವ ಅನುಕೂಲಕಾಮಿನಿಯ ಹಾಗೆ.

ಆ ಬೆಟ್ಟದ ಬಳಿ ಕೆಲವು ಸರೋವರಗಳು. ಎಲ್ಲದರಲ್ಲೂ ತುಂಬಾ ತಾವರೆ. ಎಲ್ಲದರಲ್ಲೂ ತಿಳಿನೀರು. ಅಲ್ಲಿ ಒಂದು ಕೃತಕ ಸರೋವರ. ಅದರ ಸೋಪಾನ ರತ್ನಖಚಿತ. ಅದರ ನೀರು ಶೀತಲ. ಅದರ ಮರಳು ಮುತ್ತಿನ ಹಾಗೆ. ಅದರ ಸುತ್ತಲೂ ಚಿತ್ರವಿಚಿತ್ರ ವನಗಳು. ಅಲ್ಲಿ ನಾನಾಬಗೆಯ ಮೃಗಗಳ ಗುಂಪು. ಆ ವನಗಳಲ್ಲಿ ಮಹೋನ್ನತ ಸೌಧಗಳು. ಆ ವನಕ್ಕೆ ಅವು ಒಂದು ಅಲಂಕಾರ. ವಿಶ್ವಕರ್ಮನೇ ನಿರ್ಮಿಸಿದ್ದ ಅವನ್ನು. ಅಲ್ಲಿ ಇರುವ ಗಿಡಮರಬಳ್ಳಿ ಎಲ್ಲವೂ ಸಮೃದ್ಧಿ ಆಗಿ ಹೂಬಿಟ್ಟಿವೆ. ಒಳ್ಳೇ ಕಳೆಗೊಂಡು ಬೆಳಗುತ್ತ ಇದೆ ಆ ವನ. ಅಲ್ಲಿ ಕುಳಿತರೆ ಮಳೆ ಬಿಸಿಲು ತಗಲದ ಹಾಗೆ ಮೇಲೆ ಛತ್ರಿಯ ಹಾಗೆ ಛಾವಣಿ. ಅಲ್ಲಿ ವಿಸ್ತಾರ ಆದ ಜಗಲಿ. ಅದಕ್ಕೆ ಬಂಗಾರದ ಮೆಟ್ಟಿಲು.

ಅಲ್ಲಿ ಒಂದು ಶಿಂಶುಪಾವೃಕ್ಷ. ಅದರ ತುಂಬಾ ಎಲೆ. ಅದಕ್ಕೆ ಸುತ್ತಿಕೊಂಡ ಬಳ್ಳಿಗಳು ಲೆಕ್ಕ ಇಲ್ಲದಷ್ಟು. ಸುತ್ತಲೂ ಆ ಗಿಡಕ್ಕೆ ಚಿನ್ನದ ಜಗಲಿ. ನೋಡಲು ಗಿಡ ಶೋಭಾಯಮಾನ. ಮರದ ಸುತ್ತಲೂ ಚಿತ್ರವಿಚಿತ್ರ ತೊಟ್ಟಿಗಳೂ ಮಡುಗಳೂ ಇದ್ದವು. ಅಲ್ಲಿ ಗಿಡಗಳಿಗೆಲ್ಲಾ ಬೆಂಕಿಯ ಹಾಗೆ ಪ್ರಕಾಶ. ಮೇರುಪರ್ವತದ ಕಾಂತಿಯಿಂದ ಸೂರ್ಯನೂ ಬಂಗಾರದ ಹೊಳಪಿನಿಂದ ಬೆಳಗುತ್ತಾನೆ. ಆ ಗಿಡಗಳ ಕಾಂತಿಯಿಂದ ತಾನೂ ಸ್ವರ್ಣದೇಹಿ ಆದೆ ಎಂದುಕೊಂಡ ಹನುಮಂತ.

ಆ ಶಿಂಶುಪಾವೃಕ್ಷದ ಸುತ್ತ ಈ ಕಾಂಚನವೃಕ್ಷಗಳು. ಅವಕ್ಕೆ ಕಿರುಗಂಟೆಗಳನ್ನು ಕಟ್ಟಿದಾರೆ. ಗಾಳಿ ಬೀಸಿದಾಗ ಆ ಗಂಟೆಗಳು ಇಂಪು ಆಗಿ ಧ್ವನಿಮಾಡುತ್ತವೆ. ಎಲ್ಲವನ್ನೂ ನೋಡಿ ಹನುಮಂತ ಆಶ್ಚರ್ಯಪಟ್ಟ.

ಆ ವೃಕ್ಷದ ರೆಂಬೆ ಕೊಂಬೆ ಎಲ್ಲವೂ ಚಿಗುರಿ ಇದೆ. ಹೂ ಬಿಟ್ಟಿದೆ. ನೋಡಲು ಬಲು ಸೊಂಪು ಆ ಶಿಂಶುಪಾವೃಕ್ಷ. ಮರವನ್ನು ಏರಿದ ಹನುಮಂತ. ಒಂದು ಕೊಂಬೆಯ ಮೇಲೆ ಕುಳಿತ. 'ಈ ಮರದ ಮೇಲೆ ಹತ್ತಿ ಕುಳಿತು ಸೀತಾದೇವಿ ಎಲ್ಲಿ ಇದಾಳೋ ಹುಡುಕುತ್ತೇನೆ. ರಾಮುನನ್ನು ಕಾಣದೆ ದುಃಖದಿಂದ ಬೆಂದ ಆಕೆ ಅತ್ತ ಇತ್ತ ತಿರುಗಾಡುತ್ತ ಇಲ್ಲಿಗೆ ಬರಬಹುದು' ಎಂದುಕೊಂಡ.

'ದುರುಳರಾವಣನ ಈ ಅಶೋಕವನ ರಮಣೀಯ ಆಗಿ ಇದೆ. ಸಂಪಿಗೆ ಗಿಡ ಶ್ರೀಗಂಧದ ಗಿಡ ಪಗಡೆ ಮರ ಇವು ಬಲು ಶೋಭಾಯಮಾನ ಆಗಿ ಇವೆ. ಈ ತಾವರೆಕೊಳ ಎಷ್ಟು ಮನೋಹರ! ಪಕ್ಷಿಗಳ ಗುಂಪು ಎಷ್ಟು ಇಲ್ಲಿ! ಶ್ರೀರಾಮನ ಪ್ರಿಯಪತ್ನಿ ಮಹಾಪತಿವ್ರತೆ ಸೀತೆ ವನಸಂಚಾರಕುಶಲೆ. ತಪ್ಪದೆ ಇಲ್ಲಿಗೆ ಬರುತ್ತಾಳೆ. ರಾಮನ ಅಗಲಿಕೆಯಿಂದ ಸೊರಗಿಹೋದ ಹರಿಣಾಕ್ಷಿ ಪರಮಪೂಜ್ಯೆ ಸೀತಾದೇವಿ ಈ ವನಕ್ಕೆ ಬಂದೇ ಬರುತ್ತಾಳೆ. ಆಕೆಗೆ ವನವಾಸ ತುಂಬಾ ಇಷ್ಟ. ವನವಾಸದ ಬಳಲಿಕೆಯೂ ಇದೆ. ವನ್ಯಪ್ರಾಣಿಗಳು ಎಂದರೆ ಆಕೆಗೆ ಬಲು ಸಡಗರ. ದಂಡಕಾರಣ್ಯದಲ್ಲಿ ಆಕೆಗೆ ವನ್ಯಪ್ರಾಣಿಗಳು ಎಂದರೆ ಪ್ರಾಣ. ಅಲ್ಲದೆ ಆ ಯೌವನಮಧ್ಯಸ್ಥಳು ಸಂಧ್ಯೋಪಾಸನೆಯಲ್ಲಿ ಆಸಕ್ತಳು. ಸಂಧ್ಯಾವಂದನೆಗೆ ಈ ಹೊಳೆಯ ಬಳಿಗೆ ಬರಬಹುದು. ಶ್ರೀರಾಮನ ಪ್ರಿಯೆ ಆದ ಆಕೆಗೆ ಅನುಗುಣ ಆಗಿ ಇದೆ ಈ ಅಶೋಕವನ. ಚಂದ್ರಮುಖಿ ಆದ

ಸೀತಾದೇವಿ ಬದುಕಿ ಇರುವುದೇ ಆದರೆ ಪುಣ್ಯಜಲದ ಈ ಹೊಳೆಯ ಬಳಿಗೆ ಬಂದೇ ತೀರುತ್ತಾಳೆ' ಎಂದುಕೊಂಡ.

ಮನಸ್ಸಿನಲ್ಲಿ ಹೀಗೆ ಯೋಚಿಸುತ್ತ ಆಂಜನೇಯ ಆ ಶಿಂಶುಪಾವೃಕ್ಷದ ಮೇಲೆ ಮರೆಯಾಗಿ ಕುಳಿತು ಸೀತಾದೇವಿ ಯಾವಾಗ ಬರುತ್ತಾಳೋ ಎಂದು ನಿರೀಕ್ಷಿಸುತ್ತ ಇದ್ದ.

೧೫

ಅಲ್ಲಿ ಕುಳಿತು ಸುತ್ತಲೂ ನೋಡುತ್ತ ಆ ವನ ಎಲ್ಲವನ್ನೂ ಕಣ್ಣು ಇಟ್ಟು ನೋಡಿದ.

ಒಂದು ಕಡೆ ಕಲ್ಪಲತೆಗಳು, ಇನ್ನೊಂದು ಕಡೆ ಹಲವು ಬಗೆಯ ಮರಗಳು. ಅಶೋಕವನಕ್ಕೆ ಕಳೆಕೊಡುತ್ತ ಇವೆ ಇವು. ಎಲ್ಲೆಲ್ಲೂ ದಿವ್ಯ ಸುಗಂಧಮಯ ಪುಷ್ಪರಸ ಸುರಿಯುತ್ತಿದೆ. ಎಲ್ಲಿ ನೋಡಿದರೂ ನಾನಾ ಬಗೆಯ ಮೃಗಪಕ್ಷಿಗಳು ಉಲ್ಲಾಸದಿಂದ ತಿರುಗಾಡುತ್ತಿವೆ. ಅನೇಕ ಉಪ್ಪರಿಗೆ ಮನೆಗಳೂ ಗೋಪುರದ ಮನೆಗಳೂ ಇವೆ. ಕೋಗಿಲೆಗಳ ಇಂಚರ. ಕೊಳಗಳಲ್ಲಿ ಬಂಗಾರದಂಥ ತಾವರೆ ಕನ್ನೈದಿಲೆಹೂ. ಅಲ್ಲಲ್ಲಿ ನೆಲಮಾಳಿಗೆಗಳು. ಚಿತ್ರವಿಚಿತ್ರ ದಿವ್ಯಾಸನಗಳು, ರತ್ನಕಂಬಳಿಗಳು. ಕಾಲ ಅಕಾಲ ಎನ್ನದೆ ಎಲ್ಲ ಕಾಲಗಳಲ್ಲೂ ಹಣ್ಣು ಬಿಡುವ ಗಿಡಮರ. ಅಶೋಕವನ ನಂದನವನಕ್ಕೆ ಸಾಟಿ.

ಅಶೋಕವೃಕ್ಷಗಳು ಸಾವಿರಾರು ಹೂಬಿಟ್ಟವೆ. ಆ ಹೂಗಳ ಕಾಂತಿಗೆ ಅಶೋಕವನ ಸೂರ್ಯೋದಯದ ಕಾಂತಿಯಿಂದ ಬೆಳಗುತ್ತ ಇದೆ. ಇಡೀ ವನವೇ ಧಗಧಗ ಉರಿಯುವ ಹಾಗೆ. ಪಕ್ಷಿಗಳು ಪದೇ ಪದೇ ಬಂದು ಕುಳಿತು ಆ ಗಿಡಗಳ ಎಲೆಗಳು ಎಲ್ಲಾ ಉದುರಿಹೋದವೋ ಏನೋ! ಅಶೋಕವೃಕ್ಷಗಳಲ್ಲಿ ಬರೀ ಹೂವೇ ಹೂ. ಹೂವಿನ ಭಾರಕ್ಕೆ ಬಾಗಿ ನೆಲವನ್ನು ಸೋಕುತ್ತ ಇವೆ. ಅವನ್ನು ನೋಡಿದರೆ ಸಾಕು ಮನಸಿನ ದುಗುಡ ಎಲ್ಲವೂ ಕಳೆಯುತ್ತದೆ. ಅಲ್ಲಲ್ಲಿ ಸಂಪಿಗೆ ಸುರಹೊನ್ನೆ ಏಳೆಲೆಬಾಳೆ ಮುತ್ತುಗದ ಗಿಡ ಸೊಂಪು ಆಗಿ ಬೆಳೆದಿವೆ. ಕೆಲವು ಅಶೋಕವೃಕ್ಷ ಬಂಗಾರದ ಹಾಗೆ, ಕೆಲವು ಬೆಂಕಿಯ ಉರಿವ ನಾಲಗೆಯ ಹಾಗೆ, ಕೆಲವು ಕಪ್ಪು ಕಾಡಿಗೆಯ ಹಾಗೆ ಹೊಳೆದವು.

ದೇವೇಂದ್ರನ ನಂದನವನಕ್ಕಿಂತ ಕುಬೇರನ ಚೈತ್ರರಥೋದ್ಯಾನಕ್ಕಿಂತ ಹೆಚ್ಚು ಸೊಬಗು ಈ ಅಶೋಕವನದ್ದು. ಬಲು ರಮಣೀಯ. ಅದರ ಚೆಲುವನ್ನು ಕಣ್ಣಾರೆ ನೋಡಬೇಕೇ ವಿನಾ ಊಹಿಸಲೂ ಸಾಧ್ಯ ಅಲ್ಲ. ಎಷ್ಟು ಸೊಂಪು, ಎಂಥ ತಂಪು! ಆಕಾಶದ ಹಾಗೇ ಮನೋಹರ. ಅಲ್ಲಿ ನಕ್ಷತ್ರ, ಇಲ್ಲಿ ಹೂ. ಐದನೆ ಸಮುದ್ರ ಇದ್ದ ಹಾಗೆ ಇದೆ. ಸಮುದ್ರದಲ್ಲಿ ರತ್ನಗಳು, ಇಲ್ಲಿ ಹೂಗಳು. ಗಂಧಮಾದನಪರ್ವತದ ಹಾಗೆ ಇದೆ ಈ ವನ. ಸರ್ವಋತುಗಳಲ್ಲೂ ಅರಳುವ ಹೂ. ಸುಗಂಧಪರಿಮಳ ಬೀರುವ ವೃಕ್ಷಸಮೂಹ. ಮರಗಳ ಮೇಲೆ ಸಂತೋಷದಿಂದ ಕಲಕಲಧ್ವನಿಮಾಡುವ ಪಕ್ಷಿಗಣ. ಮರಗಳ ಕೆಳಗೆ ಹರ್ಷದಿಂದ ಸದ್ದುಮಾಡುವ ಮೃಗಸಮೂಹ. ದಿವ್ಯಗಂಧವನ್ನು ಹೊತ್ತು ತರುವ ಮಲಯ ಮಾರುತ. ಅಶೋಕವನ ಬಲು ರಮಣೀಯ.

ಆ ಶಿಂಶುಪಾವೃಕ್ಷದ ಹತ್ತಿರವೇ ಒಂದು ಮಹೋನ್ನತ ವಿಶಾಲ ಚೈತ್ಯ ಆಲಯ ಕಾಣಿಸಿತು. ಕೈಲಾಸಪರ್ವತದ ಹಾಗೆ ಬೆಳ್ಳಗೆ ಇದೆ. ಅದರಲ್ಲಿ ಸಾವಿರ ಕಂಬ. ಆಲಯದ ಮುಂದೆ ಹವಳದ ಮೆಟ್ಟಲು, ಚಿನ್ನದ ಜಗಲಿ. ಕಣ್ಣು ಕೋರೈಸುತ್ತದೆ ಅದರ ಕಾಂತಿಗೆ. ಮುಗಿಲನ್ನೆ ಮುಟ್ಟುವಷ್ಟು ಎತ್ತರ ಅದು.

ಅಲ್ಲಿ ಒಬ್ಬ ಸರ್ವಾಂಗಸುಂದರಿ. ಆಕೆಯ ಬಟ್ಟೆ ಎಲ್ಲಾ ಮಾಸಿದ್ದು. ಉಪವಾಸ ಮಾಡಿ ಮಾಡಿ ಸೊರಗಿಹೋದ ಮೈ. ಪದೇ ಪದೇ ನಿಟ್ಟುಸಿರು ಬಿಡುತ್ತ ಇದಾಳೆ. ಆಕೆಯ ಸುತ್ತಲೂ ರಾಕ್ಷಸಸ್ತ್ರೀಯರು. ಸೊರಗಿ ಸೀರಕಲು ಆದ ಸ್ಥಿತಿಯಲ್ಲಿ ಆಕೆಯ ಗುರುತೇ ಸಿಗದ ಹಾಗೆ ಇದೆ. ಆದರೂ ಶುಕ್ಲಪಕ್ಷದ ಬಿದಿಗೆಚಂದ್ರನಂತೆ ಹೊಳಪು ಇದೆ. ಆಕೆಯ ಮೈಮೇಲೆ ಮಾಸಿದ ಪೀತಾಂಬರ ಒಂದೇ. ಹೊಗೆ ಮುತ್ತಿದ ಬೆಂಕಿಯ ಉರಿಯಂತೆ ಕಾಣುತ್ತ ಇದಾಳೆ. ದುಃಖದಿಂದ ಯಾವ ಒಡವೆಯನ್ನೂ ಧರಿಸದೆ ಕಮಲದ ಬಳ್ಳಿ ಇದೆ ಕೆಸರಿನಲ್ಲಿ, ಹೂ ಮಾತ್ರ ಇಲ್ಲ ಎಂಬಹಾಗೆ ಇದಾಳೆ. ನಾಚಿಕೆ ದುಃಖ ಆಕೆಯನ್ನು ಕುದಿಸಿ ಬೇಯಿಸಿ ಇವೆ. ಸದಾ ಕಂಬನಿಯ ಧಾರೆ. ಯಾವಾಗಲೂ ದುಃಖ, ಚಿಂತೆ, ತನ್ನ ಹಿತವರನ್ನು ಪ್ರಿಯ ಜನರನ್ನು ಕಾಣದೆ ಸೊರಗಿಹೋಗುತ್ತ ಇದಾಳೆ. ಅಂಗಾರಕ ಗ್ರಹ ರೋಹಿಣಿಗೆ ವಕ್ರಿಸಿದ ಹಾಗೆ. ಯಾವಾಗಲೂ ರಾಕ್ಷಸ ಸ್ತ್ರೀಯರು ಸುತ್ತುಗಟ್ಟಿ ಇರುವುದರಿಂದ ಗುಂಪಿನಿಂದ ತಪ್ಪಿಸಿಕೊಂಡು ಒಂಟಿ ಆಗಿ ನಾಯಿಗಳ ಕೈಗೆ ಸಿಕ್ಕ ಹರಿಣಿಯ ಹಾಗೆ ಇದಾಳೆ.

ಕಾಳಸರ್ಪದ ಹಾಗೆ ಹೊಳೆಯುತ್ತ ಜಘನಗಳವರೆಗೆ ಬಿದ್ದಿದ್ದ ಆಕೆಯ ಜಡೆಯನ್ನು ನೋಡಿದರೆ ಶರತ್ಕಾಲದಲ್ಲಿ ಕಪ್ಪನೆ ಗಿಡಮರಗಳ ಸಾಲಿನಿಂದ ಶೋಭಿಸುವ ಭೂಮಿಯ ಹಾಗೆ ಇದ್ದಾಳೆ ಆಕೆ. ಯಾವಾಗಲೂ ಸುಖದಿಂದ ಇರಬೇಕಾದ ಜೀವ ಅಪಾರ ದುಃಖದಿಂದ ಬೆಂದು ಹೋಗುತ್ತ ಇದ್ದಾಳೆ. ದುಃಖದಿಂದ ಕಂಗೆಟ್ಟು ಮಲಿನಳು ಆಗಿ ಸೊರಗಿಹೋದ ಆಕೆಯನ್ನು ನೋಡಿ ಮಾರುತಿಗೆ ಈಕೆಯೇ ಸೀತೆ ಎನಿಸಿತು. ಕಾಮರೂಪಿ ರಾವಣ ಕದ್ದು ಒಯ್ಯುವಾಗ ತಾವು ನೋಡಿದ್ದ ಸುಂದರ ಸ್ತ್ರೀಯೇ ಈಕೆ ಎನಿಸಿತು, ಹನುಮಂತನಿಗೆ.

ಹುಣ್ಣಿಮೆಯ ಚಂದ್ರಮುಖ. ಸೊಗಸು ಆದ ಕಣ್ಣು ಹುಬ್ಬು. ಅಂದದ ದುಂಡನೆ ಸ್ತನಗಳು. ಸುತ್ತಲೂ ಕತ್ತಲೆಯನ್ನು ಕರಗಿಸುವ ದಿವ್ಯದೇಹಕಾಂತಿ. ಕಪ್ಪು ಕೂದಲು. ತೊಂಡೆಹಣ್ಣಿನಂತೆ ಕೆಂದುಟಿ. ತಾವರೆ ಎಸಳಿನಂಥ ವಿಶಾಲ ನೇತ್ರ. ಒಳ್ಳೆಯ ನಡು. ಮನ್ಮಥನ ಪತ್ನಿ ರತಿಯ ಹಾಗೆ ಸರ್ವಾಂಗಸುಂದರಿ. ಲೋಕ ಎಲ್ಲಕ್ಕೂ ಸಂತೋಷ ನೀಡುವ ಹುಣ್ಣಿಮೆ ಚಂದ್ರನ ಕಾಂತಿ, ಕಠಿನ ವ್ರತನಿಯಮಪಾಲನೆಮಾಡುವ ತಾಪಸಾಂಗನೆ ಆಕೆ. ಬರೀ ನೆಲದಲ್ಲಿ ಕುಳಿತು ಇದ್ದಾಳೆ.

ಸಂದಿಗ್ಧಾರ್ಥ ಕೊಡುವ ಸ್ಮೃತಿವಾಕ್ಯ, ಹೊಗೆಯಲ್ಲಿ ಮುಚ್ಚಿಹೋದ ಬೆಂಕಿಯ ಉರಿ, ನಂಬಿಕೆ ಇಲ್ಲದ ಶ್ರದ್ಧೆ, ಕ್ಷೀಣಿಸಿಹೋದ ಸಂಪತ್ತು, ಭಗ್ನ ಆದ ಆಸೆ, ವಿಘ್ನ ಬಂದ ಕಾರ್ಯಸಿದ್ಧಿ, ಗೊಂದಲಗೆಟ್ಟ ಬುದ್ಧಿ, ಇಲ್ಲದ ಸಲ್ಲದ ಅಪನಿಂದೆಯ ಪಾಲು ಆದ ಕೀರ್ತಿ ಆಕೆ. ರಾಮನ ಅಗಲಿಕೆಯಿಂದ ನಿರಂತರವೂ ಕೊರಗುತ್ತ ಇದ್ದಾಳೆ. ರಾವಣ ಕದ್ದುತಂದದ್ದರಿಂದ ಮರುಗುತ್ತ ಇದ್ದಾಳೆ. ಅಸಹಾಯಳು ಆಗಿ ಬೆದರಿದ ಜಿಂಕೆಯ ಮರಿಯ ಹಾಗೆ ದಿಕ್ಕುದಿಕ್ಕೂ ನೋಡುತ್ತಾಳೆ. ಕಣ್ಣಿನಿಂದ ಧಾರೆ ಆಗಿ ನೀರು ಸುರಿಯುತ್ತ ಇದೆ. ಮುಖದಲ್ಲಿ ಸ್ವಲ್ಪವೂ ಸಂತೋಷದ ಕುರುಹು ಇಲ್ಲ. ನಿಟ್ಟುಸಿರು ಬಿಡುತ್ತಾಳೆ ನಿರಂತರವೂ. ಸರ್ವಾಲಂಕಾರಯೋಗ್ಯಳೇ ಆದರೂ ಮಲಿನಾಂಗಿ ಆಗಿ ಯಾವ ಅಲಂಕಾರವನ್ನೂ ಮಾಡಿಕೊಂಡಿಲ್ಲ. ಮಳೆಯ ಮೋಡಗಳ ಹಿಂದೆ ಮರೆ ಆದ ಚಂದ್ರಬಿಂಬದ ಹಾಗೆ ಇದ್ದಾಳೆ.

ಹನುಮಂತನಿಗೆ ಸಂದೇಹ—ಈಕೆ ಸೀತಾದೇವಿ ಹೌದೋ ಅಲ್ಲವೋ? ಅಭ್ಯಾಸ ಇಲ್ಲದೆ ಬಿಗಿತಪ್ಪಿದ ವಿದ್ಯೆಯ ಹಾಗೆ ಇದ್ದಾಳೆ. ಸಂಸ್ಕಾರ ಇಲ್ಲದ

ಮಾತು ಬೇರೆ ಅರ್ಥವನ್ನು ಕೊಡುವಂತೆ ಅಲಂಕಾರ ಇಲ್ಲದ ಸೀತೆಯ ರೂಪ ಗುರುತು ಹಿಡಿಯಲು ಬಹಳ ಕಷ್ಟತರ ಆಯಿತು. ಅನಿಂದಿತೆ ರಾಜಕುಮಾರಿ ವಿಶಾಲನಯನೆ ಆದ ಆಕೆಯನ್ನು ಸೀತಾದೇವಿಯೇ ಎಂದು ನಿಶ್ಚಯಿಸಲು ಚೆನ್ನಾಗಿ ಪರಿಶೀಲಿಸಿದ, ಕಾರಣಗಳನ್ನು ಜೋಡಿಸಿಕೊಂಡ. ತಾನು ಕಿಷ್ಕಿಂಧೆ ಯಿಂದ ಹೊರಟಾಗ ರಾಮ ಹೇಳಿದ್ದ—ಸೀತೆಯ ಮೈಮೇಲೆ ಇಂಥ ಇಂಥ ಒಡವೆ ಇವೆ ಎಂದು. ಆ ಒಡವೆಗಳು ಎಲ್ಲವೂ ಆಕೆ ಕುಳಿತು ಇದ್ದ ಗಿಡದ ಕೊಂಬೆಗಳಿಗೆ ತಗಲಿಸಿ ಇದಾರೆ. ಆಕೆಯೇ ತೆಗೆದು ಇಟ್ಟಿರಬೇಕು. ಅಂದ ಆದ ಕಿವಿಯೋಲೆ, ಹೊನ್ನುಹೂ, ರತ್ನಹವಳಗಳಿಂದ ಮಾಡಿದ ಥಳಥಳ ಹೊಳೆಯುವ ಕೈಬಳೆ, ಎಲ್ಲವೂ ಇದ್ದವು ಅಲ್ಲಿ. ಬಹುಕಾಲದಿಂದ ಮೈಮೇಲೆಯೆ ಇದ್ದು ಮೆರುಗು ಹೋಗಿ ಕಪ್ಪು ಆಗಿವೆ ಆ ಒಡವೆ. ಆ ಒಡವೆಗಳನ್ನು ಇಟ್ಟು ಇಟ್ಟು ಆಕೆಯ ಮೈಮೇಲೆ ಗುರುತು ಬಿದ್ದಿತ್ತು. ರಾಮ ಹೇಳಿದ ಒಡವೆಗಳೇ ಇವು ಎಂದು ಗಟ್ಟಿಮಾಡಿಕೊಂಡ ಹನುಮಂತ. ಆಕೆ ಋಷ್ಯಮೂಕಪರ್ವತದ ಮೇಲೆ ಎಸೆದು ಉಳಿದ ಒಡವೆ ಇವು, ಸಂದೇಹ ಇಲ್ಲ ಎಂದು ನಿರ್ಧರಿಸಿದ. ಹಳದಿ ಬಣ್ಣದ ಜರತಾರಿ ಸೀರೆಯ ಸೆರಗಿನಲ್ಲಿ ಗಂಟು ಕಟ್ಟಿ ಎಸೆದುದನ್ನು ವಾನರರು ಎಲ್ಲರೂ ನೋಡಿದರು. ಆ ಬಟ್ಟೆ ಈಗ ಆಕೆ ಉಟ್ಟ ಸೀರೆ ಒಂದೇ ಬಣ್ಣದ್ದು. ಬಹಳ ಕಾಲ ಒಂದೇ ಸೀರೆ ಉಟ್ಟು ಅದು ಮಾಸಿಹೋಗಿದೆ.

'ರಾಮನ ಮಡದಿ ಸೀತಾದೇವಿಯೇ ಸರಿ ಆಕೆ. ಕಣ್ಣಿಗೆ ಮರೆ ರಾಮ. ಆದರೂ ಸದಾ ಅವನದೇ ಧ್ಯಾನ. ರಾಮನೂ ಹೀಗೆಯೆ ಸದಾ ಕೊರಗುತ್ತ ಇದಾನೆ. ತನ್ನನ್ನು ನಂಬಿಬಂದ ಹೆಂಗಸನ್ನು ಕಾಪಾಡಲಿಲ್ಲ ಎಂಬ ಪಶ್ಚಾತ್ತಾಪ ದಿಂದ, ರಾಕ್ಷಸನ ಕೈಗೆ ಸಿಕ್ಕಿಬಿದ್ದು ಗೋಳಾಡುತ್ತಾಳಲ್ಲ ಹೆಂಗಸು ಕೈಲಾಗದವಳು ಎಂಬ ಕಾರುಣ್ಯದಿಂದ, ಕೈಹಿಡಿದ ಹೆಂಡತಿ ಎಂಬ ಅಭಿಮಾನದಿಂದ, ತನ್ನ ಪ್ರಾಣಕ್ಕಿಂತ ಹೆಚ್ಚಿನವಳು ಎಂಬ ಮೋಹದಿಂದ ರಾಮ ಸದಾ ಯಾರಿಗಾಗಿ ಕೊರಗುತ್ತ ಇದಾನೋ ಆ ಸೀತೆಯೇ ಸರಿ. ಈಕೆಯ ಅಂಗಪ್ರತ್ಯಂಗಸೌಷ್ಠವ ದೇಹಕಾಂತಿಯೂ ರಾಮನ ಅಂಗಸೌಷ್ಠವ ದೇಹಕಾಂತಿಯೂ ಒಂದೇ ರೀತಿ. ಈಕೆಯ ರೂಪಲಾವಣ್ಯವೆ ರಾಮನದೂ. ಈಕೆ ರಾಮನ ಮಡದಿಯೆ. ಈಕೆಯ ಮನಸ್ಸು ರಾಮನಲ್ಲಿ, ರಾಮನ ಮನಸ್ಸು ಈಕೆಯಲ್ಲಿ ನೆಲೆಗೊಂಡು ಇದೆ. ಆದ್ದರಿಂದಲೇ ಇಬ್ಬರೂ ಜೀವ ಹಿಡಿದು ಇದಾರೆ.

‘ ಇಂಥ ಸಕಲಸದ್ಗುಣಸಂಪನ್ನೆ ಸೀತಾದೇವಿಯನ್ನು ಅಗಲಿ ಇನ್ನೂ ರಾಮ ದೇಹಧಾರಿ ಆಗಿದಾನಲ್ಲ ಇಷ್ಟು ದುಃಖ ಇದ್ದರೂ. ಆಶ್ಚರ್ಯವೇ ಸರಿ. ಬೇರೆ ಯಾರಿಗೆ ಸಾಧ್ಯ ಇದು? ರಾಮನ ಈ ಕೆಲಸ ಬಹಳ ದುಷ್ಕರ.’

ಹನುಮಂತನಿಗೆ ಸೀತಾದೇವಿಯನ್ನು ನೋಡಿ ಹಿಗ್ಗೋ ಹಿಗ್ಗು. ಪ್ರಭು ಆದ ರಾಮನನ್ನು ಕೊಂಡಾಡಿದ.

೧೬

ಸೀತೆ ರಾಮ ಇಬ್ಬರೂ ಪ್ರಶಂಸನೀಯರು. ಅವರನ್ನು ಕೊಂಡಾಡುತ್ತ ಹನುಮಂತ ಚಿಂತಾಮಗ್ನ ಆದ. ಆಲೋಚನೆಯಲ್ಲಿ ಬಿದ್ದ. ಒಂದು ಗಳಿಗೆ. ಸೀತಾದೇವಿಯನ್ನು ನೋಡಿದ. ಕಣ್ಣುತುಂಬಾ ನೀರು ತುಂಬಿಕೊಂಡಿತು. ‘ ಅಯ್ಯೋ, ಹಿರಿಯರಿಗೆ ವಿಧೇಯ ಲಕ್ಷ್ಮಣನಿಗೆ ಪೂಜ್ಯೆ, ಶ್ರೀರಾಮನ ನಲ್ಲೆ. ಇಂಥವಳು ಹೀಗೆ ದುಃಖ ಅನುಭವಿಸಬೇಕೆ? ಏನು ಇದು ಕಾಲವೈಪರೀತ್ಯ! ಯಾರು ಮೀರಬಲ್ಲರು ಕಾಲಗತಿ? ರಾಮಲಕ್ಷ್ಮಣರ ಪರಾಕ್ರಮ ಎಂಥದೋ ಈಕೆಗೆ ಗೊತ್ತು. ಅದರಿಂದಲೇ ಮಳೆಗಾಲದ ಗಂಗಾನದಿ ಮೇರೆ ಮೀರದ ಹಾಗೆ ಬಹಳ ಗೊಂದಲಗೆಟ್ಟು ಬಹಳ ದುಃಖಿಸುತ್ತ ಇಲ್ಲ.

‘ ಶೀಲ ಸದಾಚಾರ ವಯಸ್ಸು ಕುಲೋನ್ನತಿ ಶುಭಲಕ್ಷಣ ಎಲ್ಲದರಲ್ಲೂ ಸೀತಾರಾಮರು ಒಬ್ಬರಿಗೆ ಒಬ್ಬರು ಸರಿಸಮಾನ. ಈಕೆಗೆ ತಕ್ಕ ಗಂಡ ರಾಮ. ರಾಮನಿಗೆ ತಕ್ಕ ಹೆಂಡತಿ ಸೀತೆ........ ಈ ವಿಶಾಲಾಕ್ಷಿಗೋಸ್ಕರವೇ ರಾಮ ವಾಲಿಯನ್ನು ಕೊಂದದ್ದು. ರಾವಣನಿಗೆ ಸಮಾನ ವೀರ್ಯವಂತ ಕಬಂಧನನ್ನು ಕೊಂದದ್ದೂ ಈಕೆಗೋಸ್ಕರವೇ. ದೇವೇಂದ್ರ ಶಂಬರಾಸುರನನ್ನು ಕೊಂದನಲ್ಲ. ಹಾಗೆ ವಿರಾಧನನ್ನು ಕೊಂದದ್ದೂ ಈಕೆಯ ದೆಸೆಯಿಂದಲೇ. ಭಯಂಕರ ಪರಾಕ್ರಮಿ ವಿರಾಧ. ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ಕ್ರೂರ ಕರ್ಮಿ ರಾಕ್ಷಸರು ಇದ್ದರು. ಅವರನ್ನು ಎಲ್ಲರನ್ನೂ ಬೆಂಕಿಯ ಹಾಗೆ ಉರಿಯುವ ತನ್ನ ಬಾಣಗಳಿಂದ ರಾಮ ಕೊಂದುಹಾಕಿದ್ದು ಈಕೆಯ ನಿಮಿತ್ತದಿಂದಲೇ. ಈಕೆಗೋಸ್ಕರವೇ ಮಹಾಪರಾಕ್ರಮಶಾಲಿಗಳು ಆದ ಖರದೂಷಣತ್ರಿಶಿರರು ರಾಮಬಾಣಹತರು ಆದದ್ದು.

‘ಇದುವರೆಗೆ ವಾಲಿಗೆ ಅಧೀನ ಆಗಿ ಯಾರೂ ಗೆಲ್ಲಲು ಸಾಧ್ಯ ಇಲ್ಲದ ವಾನರರಾಜ್ಯವನ್ನೂ ಲೋಕಪ್ರಸಿದ್ಧ ಆದ ಅವರ ಐಶ್ವರ್ಯವನ್ನೂ ಸುಗ್ರೀವ ಪಡೆದದ್ದು ಈಕೆಯ ದೆಸೆಯಿಂದಲೇ. ಸಮಸ್ತ ನದನದಿಗಳೂ ಬಂದು ಸೇರುವ ಈ ಮಹಾಸಾಗರವನ್ನು ನಾನು ದಾಟಿದ್ದೂ ಲಂಕಾಪಟ್ಟಣಕ್ಕೆ ಬಂದದ್ದೂ ಈಕೆಗೋಸ್ಕರವೇ. ಇಷ್ಟೇ ಅಲ್ಲ. ಈ ಸೀತಾದೇವಿಗೋಸ್ಕರ ಚತುಸ್ಸಾಗರ ಪರ್ಯಂತದ ಭೂಮಿಯನ್ನೂ–ಅಷ್ಟೇ ಅಲ್ಲ, ಹದಿನಾಲ್ಕು ಲೋಕಗಳನ್ನೂ–ತಲೆಕೆಳಗೆ ಮಾಡಿದರೂ ಶ್ರೀರಾಮ, ಅದು ಸರಿ ಎಂದೇ ಎನಿಸುತ್ತದೆ.

‘ಯಾವುದು ಹೆಚ್ಚು? ತ್ರೈಲೋಕ್ಯಾಧಿಪತ್ಯವೋ ಇಲ್ಲವೆ ಜನಕರಾಜ-ಪುತ್ರಿಯೋ? ಈ ಮೂರು ಲೋಕಗಳ ಒಡೆತನವೂ ಸೀತಾದೇವಿಯ ಒಂದೇ ಕಳೆಗೂ ಸಮ ಅಲ್ಲ. ಧರ್ಮಶೀಲ ಮಹಾತ್ಮ ಆದ ಜನಕಮಹಾರಾಜ ನೆಲವನ್ನು ಉಳುವಾಗ ಭೂಮಿಯನ್ನು ಸೀಳಿಕೊಂಡು ಹುಟ್ಟಿದವಳು ಈಕೆ. ಪರಿಶುದ್ಧಪದ್ಮಪರಾಗಸಮ ಆದ ಆ ಯಾಗಕ್ಷೇತ್ರದ ಧೂಳು ಮುಚ್ಚಿ ಇತ್ತು ಈ ಪತಿವ್ರತೆಯನ್ನು. ಯುದ್ಧದಲ್ಲಿ ಎಂದೂ ಹಿಂಜರಿಯದ ಪರಮಪರಾಕ್ರಮಿ ಪುಣ್ಯಶೀಲ ದಶರಥರಾಯನ ಹಿರಿಯ ಸೊಸೆ ಈಕೆ. ಧರ್ಮಜ್ಞ, ಕೃತಜ್ಞ ಆತ್ಮಜ್ಞ ಆದ ಶ್ರೀರಾಮನ ಪ್ರಾಣಪ್ರಿಯೆ. ಈಗ ಈಕೆ ಇರುವುದು ರಾಕ್ಷಸ ಸ್ತ್ರೀಯರ ವಶದಲ್ಲಿ.

‘ಗಂಡನ ಮೇಲೆ ಇರುವ ಪ್ರೀತಿಯಿಂದ ಈಕೆ ಸಮಸ್ತ ರಾಜಭೋಗ ಗಳನ್ನೂ ತ್ಯಜಿಸಿ ಇದಾಳೆ. ವನವಾಸದ ಕಷ್ಟಗಳನ್ನು ಲೆಕ್ಕಿಸದೆ ನಿರ್ಜನ ಘೋರಾರಣ್ಯಕ್ಕೆ ಬಂದಳಲ್ಲ. ಅಲ್ಲಿ ಸಿಕ್ಕ ಗಡ್ಡೆಗೆಣಸು ಹಣ್ಣುಗಳಿಂದಲೇ ತೃಪ್ತಿ. ಸದಾ ಪತಿಶುಶ್ರೂಷೆ. ಅದು ಒಂದೇ ಕೆಲಸ. ಅರಮನೆಯಲ್ಲಿ ಇದ್ದಷ್ಟೇ ಸಂತೋಷ ಅಡವಿಯಲ್ಲೂ. ಹೊಂಬಣ್ಣದ ಮೈ, ಸದಾ ಮುಗುಳು ನಗೆಯ ಮುಖ, ಜೇನಿನಂಥ ಮಾತು. ಇಂಥ ಹೆಣ್ಣು ಯಾವ ಕಷ್ಟಕ್ಕೂ ಸಿಗಬಾರದು. ಆದರೆ ಪಡಬಾರದ ಯಾತನೆ, ಸೈರಿಸಲಾರದ ಕಷ್ಟ ಈಕೆಯ ಪಾಲಿಗೆ ಬಂದಿದೆ. ಎಲ್ಲವನ್ನೂ ಸೈರಿಸಿಕೊಳ್ಳುತ್ತ ಇದಾಳಲ್ಲ.

‘ಬಾಯಾರಿದವನಿಗೆ ಅರವಟ್ಟಿಗೆಯ ದರ್ಶನ ಅಗತ್ಯ. ಸದಾಚಾರ ಸಂಪನ್ನೆ ಸೀತಾದೇವಿಯ ದರ್ಶನ ರಾಮನಿಗೆ ಅಗತ್ಯ. ರಾಜ್ಯ ಕಳೆದುಕೊಂಡ ವನು ಮತ್ತೆ ರಾಜ್ಯವನ್ನು ಗಳಿಸಬೇಕು. ರಾಮ ಮತ್ತೆ ಈಕೆಯನ್ನು ಪಡೆಯ

ಬೇಕು. ಪಡೆದರೆ ಅವನ ಸಂತೋಷಕ್ಕೆ ಎಣೆ ಇಲ್ಲ. ಬಯಸಬಹುದಾದ ಎಲ್ಲ ಭೋಗಗಳನ್ನೂ ಬಿಟ್ಟು ಬಂಧುಜನರನ್ನು ತೊರೆದು ದುಃಖದಲ್ಲಿ ಮುಳುಗಿ ಇದ್ದಾಳೆ. ಆದರೂ ರಾಮ ಬರುತ್ತಾನೆ ಎಂಬ ಆಸೆಯಿಂದ ಪ್ರಾಣ ಹಿಡಿದು ಇದ್ದಾಳೆ. ಮುಂದೆ ನಿಂತಿದ್ದಾರೆ ರಾಕ್ಷಸಸ್ತ್ರೀಯರು. ಹಣ್ಣಿನ ಮರ ಹೂವಿನ ಗಿಡ ಇವೆ ಮುಂದೆ. ಯಾವುದೂ ಈಕೆಯ ಕಣ್ಣಿಗೆ ಬೀಳುವುದು ಇಲ್ಲ. ಕೇವಲ ರಾಮಧ್ಯಾನ. ಏಕಾಗ್ರಚಿತ್ತದಿಂದ ಅವನನ್ನೇ ಧ್ಯಾನಿಸುತ್ತ ಇದ್ದಾಳೆ.

'ಲೋಕದಲ್ಲಿ ಪತಿಯೇ ಪರಮಭೂಷಣ ಹೆಂಗಸರಿಗೆ. ಉಳಿದ ಒಡವೆ ಒಡವೆಯೇ ಅಲ್ಲ. ಆ ಪರಮಭೂಷಣ ಇಲ್ಲದೆ ಈಕೆ ಕಳೆಗುಂದಿದ್ದಾಳೆ. ಇಂಥ ಪ್ರಾಣಕಾಂತೆಯನ್ನು ಅಗಲಿಯೂ ರಾಮ ಪ್ರಾಣಬಿಡದೆ ಇದ್ದಾನಲ್ಲ ದುಃಖಿಸುತ್ತ. ಎಂಥ ದುಷ್ಕರ ಕಾರ್ಯ! ಈ ನೀಲಕುಂತಳೆಗೆ ನೀರಜಾಕ್ಷಿಗೆ ಒದಗಿರುವ ದುಃಖವನ್ನು ನೋಡಿ ನನ್ನಂಥವನ ಮನಸಿಗೂ ವ್ಯಥೆ ಆಗುತ್ತ ಇದೆಯಲ್ಲ. ದಯಾಸಾಗರ ಸೀತಾಪ್ರಿಯ ಆದ ರಾಮನಿಗೆ ಎಷ್ಟು ಸಂಕಟವೊ!

'ಈ ಕಮಲದಳಾಯತಾಕ್ಷಿ ರಾಮಲಕ್ಷ್ಮಣರ ರಕ್ಷಣೆಯಲ್ಲಿ ಇದ್ದವಳು. ಸ್ಥೈರಣೆಯಲ್ಲಿ ಭೂದೇವಿಗೆ ಸಮಾನ. ಇಂಥವಳು ಈಗ ಈ ಮರದ ಕೆಳಗೆ ವಿಕೃತ ಕಣ್ಣಿನ ವಕ್ರ ರಾಕ್ಷಸ ಹೆಂಗಸರ ಕಾವಲಿನಲ್ಲಿ ಇರಬೇಕೆ? ಮಂಜು ಮುಸುಕಿದ ತಾವರೆಬಳ್ಳಿ ಈಕೆ. ದುಃಖಪರಂಪರೆಯಿಂದ ಕಳೆಕುಂದಿ ಇದ್ದಾಳೆ. ನಲ್ಲನನ್ನು ಅಗಲಿದ ಚಕ್ರವಾಕಿ. ಅತಿದೀನಳು ಆಗಿದ್ದಾಳೆ. ಮೊದಲೇ ದುರವಸ್ಥೆ. ಹೂವಿನ ಭಾರಕ್ಕೆ ನೆಲಕ್ಕೆ ಬಾಗಿದ ರೆಂಬೆಗಳ ಈ ಅಶೋಕವೃಕ್ಷಗಳಿಂದ ಮತ್ತೂ ಹೆಚ್ಚು ದುಃಖೋದ್ರೇಕ. ಸಾಲದುದಕ್ಕೆ ಈ ವಸಂತಕಾಲ, ಇದರಲ್ಲಿ ತಂಪು ಕಿರಣಗಳ ಚಂದ್ರೋದಯ. ಬಾಧೆ ಮತ್ತೂ ಹೆಚ್ಚು.'

ಹನುಮಂತನ ಮನಸಿನಲ್ಲಿ ಆಲೋಚನಾತರಂಗ ಏಳುತ್ತ ಇದ್ದವು. ಈಕೆಯೇ ಸೀತಾದೇವಿ ಎಂದು ನಿರ್ಧರಿಸಿಕೊಂಡು ಆ ಶಿಂಶುಪಾವೃಕ್ಷದ ಮೇಲೇ ಕುಳಿತು ಇದ್ದ.

೧೭

ಕಪ್ಪು ನೀರಿನಲ್ಲಿ ರಾಜಹಂಸ ಈಸಿಬರುವ ಹಾಗೆ ಬಿಳೀ ನೈದಿಲೆಯಂತೆ ಶುಭ್ರನಿರ್ಮಲ ಆದ ಚಂದ್ರ ನೀಲಾಕಾಶದ ತುದಿಗೆ ಸೇರಿದ. ನಿರ್ಮಲಕಾಂತಿಯ

ಆ ತರ್ಣ್ಕದಿರ ತನ್ನ ತಂಪು ಕಿರಣಗಳಿಂದ ಹನುಮಂತನ ನೆರವಿಗೆ ಬಂದ. ಅತ್ತ ಪೂರ್ಣಚಂದ್ರಬಿಂಬಾನನೆ ಸೀತಾದೇವಿ ದುಃಖದ ಭಾರಕ್ಕೆ ಕುಗ್ಗಿ ಹೋಗುತ್ತ ಇದ್ದಳು. ಭಾರ ಹೆಚ್ಚು ಆಗಿ ಕಡಲಿನಲ್ಲಿ ಮುಳುಗುವ ಹಡಗಿನಂತೆ.

ಆಕೆಯ ಸುತ್ತಲೂ ಘೋರಾಕೃತಿಯ ರಾಕ್ಷಸಿಯರು. ಒಬ್ಬಳಿಗೆ ಒಂದೇ ಕಣ್ಣು. ಒಂದೇ ಕಿವಿ ಒಬ್ಬಳಿಗೆ. ಕಿವಿ ಮುಚ್ಚಿಕೊಂಡು ಹೋದವಳು ಒಬ್ಬಳು. ಕಿವಿಯೇ ಇಲ್ಲ ಒಬ್ಬಳಿಗೆ. ಒಬ್ಬಳ ಕಿವಿ ಗೂಟದ ಹಾಗೆ ಇದೆ. ತಲೆಯ ಮೇಲೆ ಮೂಗು ಒಬ್ಬಳಿಗೆ. ಒಬ್ಬಳ ತಲೆ ಒಂದು ಗುಡ್ಡ. ಕೋಲಿನ ಹಾಗೆ ಸಣ್ಣದು ಆಗಿ ಉದ್ದ ಆದ ಕೊರಳು ಒಬ್ಬಳದು. ಒಬ್ಬಳ ಕೂದಲು ಮೊಟಕು. ಇನ್ನೊಬ್ಬಳಿಗೆ ಕೂದಲೇ ಇಲ್ಲ. ಮತ್ತೊಬ್ಬಳ ಕೂದಲು ಕಂಬಳಿಯ ಹಾಗೆ. ಒಬ್ಬಳ ಕಿವಿ ಹಣೆಯಲ್ಲಿ ಜೋಲಾಡುತ್ತಿದೆ. ಜೋಲುಮುಖ ಒಬ್ಬಳದು. ಜೋಲುಹೊಟ್ಟೆ ಇನ್ನೊಬ್ಬಳದು. ಜೋಲುಮೊಲೆ ಒಬ್ಬಳಿಗೆ. ಜೋಲುತುಟಿ ಇನ್ನೊಬ್ಬಳದು. ಮತ್ತೊಬ್ಬಳ ತುಟಿ ಗಡ್ಡದವರೆಗೂ ಜೋತುಬಿದ್ದಿದೆ. ಒಬ್ಬಳ ಮೊಣಕಾಲು ಜೋಲಾಡುತ್ತ ಇವೆ. ಕೆಲವರು ಬಹಳ ಗಿಡ್ಡ. ಕೆಲವರು ಬಹಳ ಎತ್ತರ. ಒಬ್ಬಳದು ಗೂನುಬೆನ್ನು. ಇನ್ನೊಬ್ಬಳು ವಿಕಾರರೂಪಿ. ಒಬ್ಬಳು ಕರಾಳ ಸ್ವರೂಪಿ. ಒಬ್ಬಳಿಗೆ ಮುಖ ಚಪ್ಪಟೆ. ಒಬ್ಬಳ ಕಣ್ಣು ಪಿಂಗಳ. ವಕ್ರರೂಪ ಒಬ್ಬಳದು. ಒಬ್ಬಳ ಬಣ್ಣ ಕಪ್ಪು. ಇನ್ನೊಬ್ಬಳದು ಪಿಂಗಳ.

ಅಂತೂ ಒಂದು ಅಲ್ಲ ಒಂದು ವಿಕಾರ. ಎಲ್ಲರೂ ಜಗಳಗಂಟಿಯರು. ಯಾವಾಗಲೂ ಮುಖದ ಮೇಲೆ ಕೋಪ. ಕೆಲವರ ಕೈಯಲ್ಲಿ ಶೂಲ ತೋಮರ ಕೂಟ ಮುದ್ಗರ ಆಯುಧಗಳು. ಕೆಲವರಿಗೆ ಹಂದಿಯ ಮುಖ. ಕೆಲವರಿಗೆ ಹುಲಿಯ ಮುಖ. ಜಿಂಕೆ, ಆಡು, ನರಿ, ಎಮ್ಮೆಯ ಮುಖ ಕೆಲವರಿಗೆ. ಕೆಲವರಿಗೆ ಹೊಟ್ಟೆಯಲ್ಲೇ ತಲೆ. ಕೆಲವರಿಗೆ ಒಂದೇ ಕೈ, ಒಂದೇ ಕಾಲು. ಕುದುರೆ ಕಾಲಿನವರು ಕೆಲವರು. ಆನೆಯ ಕಾಲಿನವರು ಕೆಲವರು. ಕತ್ತೆ ಕಿವಿ ಕೆಲವರಿಗೆ. ಕುದುರೆಯ ಕಿವಿ ಕೆಲವರಿಗೆ. ಕೆಲವರಿಗೆ ದನದ ಕಿವಿ. ಆನೆ ಕಿವಿ ಕೋತಿ ಕಿವಿಯವರು ಕೆಲವರು. ಕೆಲವರಿಗೆ ಬಹಳ ದೊಡ್ಡ ಮೂಗು. ಕೆಲವರಿಗೆ ಮೂಗೇ ಇಲ್ಲ. ಕೆಲವರಿಗೆ ಅಡ್ಡಮೂಗು. ಆನೆಯ ಸೊಂಡಿಲಿನಂಥ ಮೂಗಿನವರು ಕೆಲವರು.

ಕೆಲವರಿಗೆ ಆನೆಯ ಹೆಜ್ಜೆ. ಕೆಲವರ ಹೆಜ್ಜೆ ಬಲು ದೊಡ್ಡದು. ಕೆಲವರದು

ದನದ ಗೊರಸಿನ ಹಾಗೆ. ಕೆಲವರ ಕಾಲಿನಲ್ಲಿ ಜುಟ್ಟು. ಕೆಲವರದು ಭಾರಿ ತಲೆ. ಕೆಲವರ ಕೊರಳು ಭಾರಿ. ಕೆಲವರ ಹೊಟ್ಟೆ ದೊಡ್ಡದು. ಕೆಲವರಿಗೆ ದೊಡ್ಡ ಮೊಲೆ. ಕೆಲವರ ಬಾಯಿ ದೊಡ್ಡದು. ಉದ್ದ ನಾಲಗೆ ಉದ್ದನೆ ಉಗುರು ಕೆಲವರದು. ಎಲ್ಲರೂ ಭಯಂಕರ ಆಕಾರರು. ಕೆಂಪು ಕೂದಲಿನವರು. ಯಾವಾಗಲೂ ಮದ್ಯಪಾನಮಾಡುತ್ತ ಮಾಂಸ ತಿನ್ನುತ್ತಿರುವುದೇ ಈ ರಾಕ್ಷಸಿಯರ ಕೆಲಸ. ಮೈಗೆ ಎಲ್ಲಾ ರಕ್ತಮಾಂಸ ಬಳಿದುಕೊಂಡು ನೋಡುವವರಿಗೆ ನಡುಕ ಹುಟ್ಟಿಸುವವರು ಕೆಲವರು. ಈ ಭಯಂಕರ ರಾಕ್ಷಸಿಯರು ಎಲ್ಲರೂ ಸೀತಾದೇವಿಯನ್ನು ಸುತ್ತುಗಟ್ಟಿ ನಿಂತು ಇದಾರೆ. ಎಲ್ಲರನ್ನೂ ನೋಡಿದ ಹನುಮಂತ.

ಆ ಮರದ ಕೆಳಗೆ ಕುಳಿತಿದಾಳೆ ನಿರ್ದೋಷಿ ರಾಜಪುತ್ರಿ ಸೀತಾದೇವಿ. ಸಂಕಟದಲ್ಲಿ ಬೇಯುತ್ತ ಇದಾಳೆ. ಮುಖದಲ್ಲಿ ಕಳೆ ಇಲ್ಲ. ತಲೆಕೂದಲು ಮಾಸಿದೆ. ಪುಣ್ಯ ಮುಗಿದಮೇಲೆ ಭೂಮಿಗೆ ಬಿದ್ದ ನಕ್ಷತ್ರ ಸೀತೆ. ಲೋಕ ವಿಖ್ಯಾತ ಪತಿವ್ರತೆ. ಪತಿ ಹತ್ತಿರ ಇಲ್ಲ ಎಂದು ಒಡವೆಗಳನ್ನು ಎಲ್ಲವನ್ನೂ ತೊರೆದಿದಾಳೆ. ಪತಿಭಕ್ತಿ ಒಂದೇ ಒಡವೆ ಈಗ ಆಕೆಗೆ. ಬಂಧುಬಳಗವನ್ನು ತೊರೆದು ಗಂಡನನ್ನು ಅಗಲಿ ರಾಕ್ಷಸರ ಕೈಗೆ ಸೆರೆಸಿಕ್ಕಿದಾಳೆ. ಗುಂಪನ್ನು ಬಿಟ್ಟು ಬಂದು ಸಿಂಹದ ಕೈಗೆ ಸಿಕ್ಕಿಬಿದ್ದ ಹೆಣ್ಣಾನೆ. ಮಳೆಗಾಲ ಮುಗಿದಮೇಲೆ ಶರನ್ಮೇಘಗಳ ನಡುವೆ ಕಾಣುವ ಚಂದ್ರರೇಖೆಯ ಹಾಗೆ ಆಕೆಯ ದೇಹಕಾಂತಿ ಸ್ಪಷ್ಟಾಸ್ಪಷ್ಟ. ಬಹುಕಾಲದಿಂದ ಮೈಗೆ ಅಭ್ಯಂಜನಾದಿ ಸಂಸ್ಕಾರಗಳು ಇಲ್ಲದೆ ಮೂಲೆಯಲ್ಲಿ ಬಿದ್ದು ತುಕ್ಕುಹಿಡಿದ ವೀಣೆಯ ತಂತಿಯ ಹಾಗೆ ಇದಾಳೆ.

ಇಂಥ ಸೀತೆಯನ್ನು ಹನುಮಂತ ನೋಡಿದ್ದು.

ಯಾವಾಗಲೂ ಪತಿದೇವ ರಾಮನ ಪಕ್ಕದಲ್ಲಿ ಇರಬೇಕಾದವಳು. ಈಗ ರಾಕ್ಷಸಿಯರ ನಡುವೆ ತತ್ತರಿಸುತ್ತ ಇದಾಳೆ. ಕ್ರೂರ ಗ್ರಹಗಳ ನಡುವೆ ಸಿಕ್ಕ ರೋಹಿಣಿ, ಮೈಮೇಲೆ ಒಡವೆಯೇ ಇಲ್ಲ. ಹೂ ಇಲ್ಲದ ಬಳ್ಳಿ, ಬಲು ದೀನೆ ಆಗಿದಾಳೆ. ಉಟ್ಟ ಸೀರೆ ಮುದುರಿಹೋಗಿದೆ. ಮಾಸಿದೆ. ಮುಖ ಬಾಡಿದೆ. ಮೈ ಕೊಳೆ. ಕೆಸರಿನ ಒಳಗಿನ ಕಮಲದ ಹಾಗೆ ಇದಾಳೆ. ಸೀತಾದೇವಿ ಕಮಲ ಲೋಚನೆ, ಹರಿಣಾಕ್ಷಿ. ಹೆಣ್ಣು ಜಿಂಕೆಯಂತೆ ಬೆದರಿ ಅತ್ತ ಇತ್ತ ದಿಕ್ಕು ದಿಕ್ಕು ನೋಡುತ್ತಾಳೆ. ಆಕೆ ಬಿಸಿ ಉಸಿರು ಬಿಟ್ಟರೆ ಅಶೋಕವನದ ಚಿಗುರೆಲೆ ಎಲ್ಲವೂ

ಸುಟ್ಟುಹೋಗುವಂತೆ ಇದೆ. ದುಃಖಪರಂಪರೆಯೆ ಮೈತಾಳಿದಂತೆ ಕಾಣುತ್ತದೆ ಆಕೆಯನ್ನು ನೋಡಿದರೆ. ದುಃಖದ ಅಲೆಗಳು ಉಕ್ಕಿ ಏರಿಬಂದಂತೆ ಇದೆ. ಆದರೂ ಕೈಹಿಡಿದ ರಾಮನ ಶಕ್ತಿಸಾಮರ್ಥ್ಯಗಳನ್ನು ನೆನೆನೆನೆದು ಧೈರ್ಯಗೊಳ್ಳುತ್ತ ಇದ್ದಳು. ಮುಖ ಕಳೆ ಏರುತ್ತ ಇತ್ತು.

ಸೀತಾದೇವಿಗೆ ಬೇರೆ ರಕ್ಷಣೆ ಯಾವುದೂ ಇಲ್ಲ. ಆಕೆಯ ಶೀಲವೇ ಆಕೆಯ ರಕ್ಷಣೆ. ಹನುಮಂತ ನೋಡಿದ. ಯಾವ ಒಡವೆಯೂ ಇಲ್ಲದೆ ಇದ್ದರೂ ಆಕೆ ಸಹಜಸುಂದರಿ. ಆಕೆಯನ್ನು ನೋಡಿ ಹನುಮಂತನಿಗೆ ಆದ ಆನಂದ ಅಷ್ಟು ಇಷ್ಟು ಇಲ್ಲ. ಸಂತೋಷದಿಂದ ಆನಂದಬಾಷ್ಪಗಳನ್ನು ಸುರಿಸಿದ. ರಾಮನನ್ನು ನೆನೆದ. ಮನಸಿನಲ್ಲಿಯೆ ರಾಮನಿಗೆ ನಮಸ್ಕಾರ ಮಾಡಿದ. ಲಕ್ಷ್ಮಣನಿಗೂ ನಮಸ್ಕಾರ ಮಾಡಿದ. ರಾಕ್ಷಸಸ್ತ್ರೀಯರಿಗೆ ಕಾಣಿಸಿಕೊಳ್ಳಬಾರದು ಎಂದು ಆ ಮರದ ಹಿಂದೆಯೇ ಅವಿತುಕೊಂಡ.

೧೮

ಆ ವೇಳೆಗೆ ರಾತ್ರಿ ಬಹಳ ಹೊತ್ತು ಆಯಿತು. ಬೆಳಗು ಆಗುವ ಹೊತ್ತು ಬಂತು. ಸಾಂಗವೇದಾಧ್ಯಾಯಿಗಳೂ ಅನೇಕ ಯಜ್ಞಮಾಡಿದವರೂ ಆದ ಬ್ರಹ್ಮರಾಕ್ಷಸರು ವೇದಘೋಷ ಮಾಡುತ್ತ ಇದ್ದರು.

ಇಂಪು ಆಗಿ ಮಂಗಳತೂರ್ಯಧ್ವನಿಯೂ ಕೇಳಿಸಿತು. ಮಹಾಬಲಿಷ್ಠ ಮಹಾಬಾಹು ರಾವಣನನ್ನು ಎಚ್ಚರಗೊಳಿಸಿತು ಮಂಗಳವಾದ್ಯಧ್ವನಿ. ನಿದ್ದೆಯಲ್ಲಿ ಅವನ ಬಟ್ಟೆ ಅವನ ಆಭರಣ ಸರಿದುಹೋಗಿದ್ದವು. ಹಾಗೆಯೆ ಎದ್ದು ಕುಳಿತ. ಎದ್ದಕೂಡಲೇ ಸೀತೆಯ ನೆನಪು. ನೆನಪು ಆಯಿತೋ ಇಲ್ಲವೋ ಮನ್ಮಥವಿಕಾರ ಪ್ರಾರಂಭ. ಮೊದಲೇ ಮದೋನ್ಮತ್ತ. ಈಗಂತೂ ಕಾಮದ ಆತುರತೆಯನ್ನು ತಡೆದುಕೊಳ್ಳುವುದು ಸಾಧ್ಯ ಆಗಲಿಲ್ಲ. ಕೂಡಲೇ ಎದ್ದ. ಸಮಸ್ತ ಆಭರಣಗಳನ್ನೂ ಧರಿಸಿದ. ಎಣೆ ಇಲ್ಲದ ಕಾಂತಿಯಿಂದ ಶೋಭಿಸುತ್ತ ಆಗಲೇ ಅಶೋಕವನಕ್ಕೆ ಹೊರಟ.

ಆ ವನದಲ್ಲಿ ಹೂ ಹಣ್ಣು ತುಂಬಿದ ಬಗೆಬಗೆಯ ಗಿಡಮರ. ಎಲ್ಲೆಲ್ಲಿ ನೋಡಿದರೂ ಶೋಭಾಯಮಾನ ಆದ ತಾವರೆಕೊಳ. ಚಿಗುರು ಮಿಡಿ ಹೀಚು

ಗಳನ್ನು ಸವಿದು ಮದ ಏರಿದ ಪಕ್ಷಿಸಮೂಹ ಕಲಕಲನಾದ ಮಾಡುತ್ತ ಇವೆ. ಆ ಪಕ್ಷಿಗಳೋ ಬಗೆಬಗೆಯ ಬಣ್ಣದವು. ಎಲ್ಲಾ ಅತಿ ಅದ್ಭುತ, ಕಣ್ಣಿಗೆ ಹಬ್ಬ. ಚಿನ್ನ ಮುತ್ತುರತ್ನದ ತೋರಣಗಳು ಎಲ್ಲೆಲ್ಲೂ. ಸಮಸ್ತಜಾತಿಯ ಮೃಗಗಳೂ ಇವೆ ವನದಲ್ಲಿ. ನೆಲದ ಮೇಲೆ ಯಥೇಷ್ಟ ಆಗಿ ಉದುರಿವೆ ಬಗೆಬಗೆಯ ಹಣ್ಣು. ಬಣ್ಣಬಣ್ಣದ ಹೂ. ದಟ್ಟ ಆಗಿ ಬೆಳೆದ ಮರಗಳ ಕೊಂಬೆಗಳು ಒಂದಕ್ಕೆ ಒಂದು ಸೇರಿಕೊಂಡಿವೆ.

ದೇವೇಂದ್ರನನ್ನು ದೇವಾಂಗನೆಯರೂ ಗಂಧರ್ವಕನ್ಯೆಯರೂ ಹಿಂಬಾಲಿಸು ವಂತೆ ರಾವಣನ ಹಿಂದೆ ನೂರು ಮಂದಿ ಹೆಂಗಸರು. ಕೆಲವರು ಬಂಗಾರದ ದೀವಟಿಗೆಗಳನ್ನು ಹಿಡಿದು ಮುಂದೆ ನಡೆಯುತ್ತ ಇದ್ದರು. ಕೆಲವರು ಪಕ್ಕದಲ್ಲಿ ನಿಂತು ಚಾಮರ ಬೀಸುತ್ತ ಇದ್ದರು. ಕೆಲವರು ಬೀಸಣಿಗೆಯಿಂದ ಗಾಳಿಹಾಕುತ್ತ ಇದ್ದರು. ಕೆಲವರು ಚಿನ್ನದ ಕಲಶಗಳಲ್ಲಿ ನೀರು ತುಂಬಿಕೊಂಡು ಪೂರ್ಣ ಕುಂಭದ ಸಂಗಡ ಮುಂದೆ ನಡೆದರು. ಕತ್ತಿಗಳನ್ನು ಹಿಡಿದು ಕೆಲವರು. ಆಸನಗಳನ್ನು ಹೊತ್ತು ಕೆಲವರು. ಒಬ್ಬಳು ರತ್ನದ ಪಾತ್ರೆಯಲ್ಲಿ ಮದ್ಯವನ್ನು ಬಲಗೈಯಲ್ಲಿ ಹಿಡಿದು ತರುತ್ತ ಇದ್ದಳು. ರಾಜಹಂಸದ ಹಾಗೆ ಪೂರ್ಣಚಂದ್ರನ ಹಾಗೆ ಶುಭ್ರ ಆಗಿ ಹೊಳೆಯುವ ಚಿನ್ನದ ದಂಡದ ಶ್ವೇತಚ್ಛತ್ರವನ್ನು ಹಿಡಿದು ಮತ್ತೊಬ್ಬಳು ಬಂದಳು. ಆ ಹೆಂಗಸರಿಗೆ ಇನ್ನೂ ನಿದ್ದೆ ತೀರಿ ಇಲ್ಲ, ಮತ್ತು ಇಳಿದು ಇಲ್ಲ. ಕಣ್ಣಾಲಿ ಸುತ್ತುತ್ತ ಇವೆ. ಕಾಳಮೇಘದ ಹಿಂದೆ ಬರುವ ಮಿಂಚಿನಂತೆ ಥಳಥಳ ಹೊಳೆಯುತ್ತ ರಾವಣನ ಹಿಂದೆ ಬರುತ್ತ ಇದ್ದರು.

ರಾತ್ರಿ ಬಹಳ ದಣಿದು ನಿದ್ದೆಹೋದವರು ಅವರು. ಚೆನ್ನಾಗಿ ಹೊರಳಾಡಿ ಅವರ ಕತ್ತಿನ ಹಾರಗಳೂ ಕೈಯ ಬಳೆಗಳೂ ಜಾರಿವೆ. ಅವರು ಮೈಗೆ ಬಳಿದುಕೊಂಡಿದ್ದ ಗಂಧಪರಿಮಳ ಎಲ್ಲವೂ ಉದುರಿಹೋಗಿತ್ತು. ಕೂದಲು ಕೆದರಿತ್ತು. ಮುಖದಲ್ಲಿ ಪೂರಾ ಬೆವರು. ಕಣ್ಣು ಕೆಂಪು ಅಡರಿವೆ. ಮುಖದ ಬೆವರಿಗೆ ಅವರು ಮುಡಿದ ಹೂವಿನ ಸರ ಎಲ್ಲವೂ ಬಾಡಿ ಜೋಲಾಡುತ್ತ ಇವೆ. ತಮ್ಮ ಪರಮಪ್ರಿಯ ರಾವಣಾಸುರನಲ್ಲಿ ಅವರಿಗೆ ಗೌರವ, ಮೋಹ ಕೂಡ. ಅವನನ್ನು ಬಿಟ್ಟು ಇರಲಾರದೆ ಹಿಂಬಾಲಿಸಿ ಬಂದರು.

ರಾವಣನಿಗೆ ಕಾಮಾತುರತೆ. ಅವನ ಮನಸ್ಸು ಎಲ್ಲಾ ಸೀತೆಯ ಮೇಲೇ. ಅದರಿಂದ ಅವನ ಬುದ್ಧಿ ಮಂದ ಆಯಿತು. ನಡೆಯೂ ಮಂದ. ಅವನ ಹಿಂದೆ

ಮುಂದೆ ಬರುತ್ತ ಇದ್ದ ಈ ಉತ್ತಮ ಸ್ತ್ರೀಯರ ಒಡ್ಯಾಣಗಳ ಗಲ್‌ಗಲ್ ಸದ್ದೂ ಕಾಲಂದುಗೆಗಳ ಡಣ್‌ಡಣ್ ಸದ್ದೂ ಹನುಮಂತನಿಗೆ ಕೇಳಿಸಿತು. ಆ ಸದ್ದು ಬಂದ ದಿಕ್ಕನ್ನೇ ನೋಡುತ್ತ ಇದ್ದ ಹನುಮಂತ. ಯಾರಿಗೂ ಸಾಧ್ಯ ಅಲ್ಲದ ಸಾಹಸಮಾಡಬಲ್ಲ ಎಣೆ ಇಲ್ಲದ ಮಹಾಪರಾಕ್ರಮಶಾಲಿ ರಾವಣಾಸುರ ಅಶೋಕವನದ ಬಾಗಿಲಲ್ಲಿ ಬರುತ್ತ ಇದ್ದ.

ಗಂಧದ ಎಣ್ಣೆಯಿಂದ ನೆನೆಸಿ ಉರಿಸುತ್ತ ಇದ್ದ ದೀವಟಿಗೆಗಳನ್ನು ಹಿಡಿದು ಕೆಲವರು ಹೆಂಗಸರು ಅವನ ಮುಂದೆ ಬರುತ್ತ ಇದಾರೆ. ಆ ದೀವಟಿಗೆಗಳ ಸುವಾಸನೆ ವನದಲ್ಲಿ ಎಲ್ಲಾ ಹರಡಿಕೊಂಡಿದೆ. ಆ ದೀವಟಿಗೆಗಳ ಬೆಳಕಿನಲ್ಲಿ ಎಲ್ಲವೂ ಸ್ಪಷ್ಟ ಆಗಿ ಕಾಣಿಸುತ್ತ ಇತ್ತು ಹನುಮಂತನಿಗೆ. ವೀರ್ಯದ ಕೊಬ್ಬು, ಮದ್ಯಪಾನದ ಮದ ರಾವಣನಿಗೆ. ಮೈಮೇಲೆ ಪರಿವೆ ಇಲ್ಲ. ಕಣ್ಣು ಕೆಂಪು ಆಗಿವೆ. ಕಾಮದ ಆತುರತೆ. ಹೂವಿನ ಬಿಲ್ಲನ್ನು ತೆಗೆದು ಇಟ್ಟು ಬಂದ ಮನ್ಮಥನ ಹಾಗೆ ಠೀವಿಯಿಂದ ಬರುತ್ತ ಇದಾನೆ. ಕಡೆದ ಹಾಲಿನ ನೊರೆಯ ಹಾಗೆ ಬೆಳ್ಳಗೆ ಹೊಳೆಯುತ್ತ ಭುಜಕೀರ್ತಿಗಳಲ್ಲಿ ಸಿಕ್ಕಿಕೊಂಡು ಜಾರುತ್ತ ಇದೆ ಅವನ ಹೆಗಲಿನ ಮೇಲೆ ಒಂದು ಶುಭ್ರ ಉತ್ತರೀಯ. ಠೀವಿಯಿಂದ ಅದನ್ನು ಎತ್ತಿ ಸವರಿಸಿಕೊಳ್ಳುತ್ತ ಇದಾನೆ. ರಾವಣ ದೂರದಲ್ಲಿ ಬರುತ್ತ ಇದ್ದರೂ ಸಮೀಪದಲ್ಲೇ ಇರುವ ಹಾಗೆ ಕಾಣಿಸುವಂತೆ ಮಾಡುತ್ತ ಇದೆ ಅವನ ತೇಜಸ್ಸು. ಹನುಮಂತ ತಾನು ಇದ್ದ ಕೊಂಬೆಯ ಮೇಲೇ ಯಾರಿಗೂ ಕಾಣದ ಹಾಗೆ ಎಲೆಗಳ ಮರೆಯಲ್ಲಿ ಅಡಗಿಕೊಂಡ.

ರಾವಣನ ಹಿಂದೆ ಬಂದ ಆ ಹೆಂಗಸರು ಎಲ್ಲರೂ ರೂಪಯೌವನಸಂಪನ್ನೆಯರು. ಅಷ್ಟು ಮಂದಿ ಚೆಲುವೆಯರ ನಡುವೆ ನಕ್ಷತ್ರಗಳ ಮಧ್ಯೆ ಚಂದ್ರನಂತೆ ಹಲವು ಬಗೆಯ ಆಭರಣ ಧರಿಸಿ ನೆಟ್ಟನೆ ಕಿವಿಗಳ ಆ ಮಹಾಪರಾಕ್ರಮಶಾಲಿ ಮದೋನ್ಮತ್ತನಂತೆ ಬರುವುದನ್ನು ಕಂಡು ಅವನೇ ರಾಕ್ಷಸರಾಜ ರಾವಣ, ವಿಶ್ರವಸ್ಸಿನ ಮಗ ಎಂದು ನಿಶ್ಚಯಿಸಿದ ಹನುಮಂತ. ಆ ರಾಕ್ಷಸ ಮುಂದೆ ಏನು ಮಾಡುತ್ತಾನೋ ನೋಡಬೇಕು ಎಂದು ಹನುಮಂತ ತಾನು ಇದ್ದ ಕೊಂಬೆಯಿಂದ ಕೆಳಗೆ ಇನ್ನೊಂದು ಕೊಂಬೆಗೆ ಇಳಿದ. ಮಾರುತಿ ಅಸಮಾನ ತೇಜೋವಂತನೇ. ಆದರೂ ರಾವಣನ ತೇಜಸ್ಸಿನ ಮುಂದೆ ತಾನು ಸಪ್ಪೆ. ಮರದ ಎಲೆಗಳ ಹಿಂದೆ ಅವಿತುಕೊಂಡ.

ಕಪ್ಪು ಕೂದಲಿನ ಅಂದದ ನಿತಂಬಗಳ ಒಂದಕ್ಕೆ ಒಂದು ತಗಲುವ ಕುಚಗಳ ಕನ್ನೈದಿಲೆಕಣ್ಣಿನ ಕುಡಿನೋಟದ ಸೀತೆಯನ್ನು ನೋಡಲು ಆಕೆಯ ಹತ್ತಿರ ಬಂದ ರಾವಣ.

೧೯

ಮರದ ಕೆಳಗೆ ಕುಳಿತು ಇದ್ದ ಸೀತೆ ರಾವಣನನ್ನು ನೋಡಿದಳು. ಉತ್ತಮೋತ್ತಮ ಆಭರಣಗಳನ್ನು ಧರಿಸಿ ಬರುವ ರೂಪಯೌವನಸಂಪನ್ನ ರಾವಣನನ್ನು ನೋಡಿದಳು. ಗಡಗಡ ನಡುಗಿದಳು ಬಿರುಗಾಳಿಗೆ ಸಿಕ್ಕ ಬಾಳೆ ಗಿಡದ ಹಾಗೆ. ತನ್ನ ಕೈಗಳಿಂದ ಎದೆಯನ್ನು ಮುಚ್ಚಿಕೊಂಡಳು. ಹೊಟ್ಟೆಗೆ ಅಡ್ಡ ಆಗಿ ತೊಡೆಗಳನ್ನು ಮುಂದೆ ಮಾಡಿದಳು. ಅಳುತ್ತ ಕುಳಿತಳು. ಕಂಬನಿ ಧಾರೆ ಆಗಿ ಹರಿಯಿತು. ಭಾರವನ್ನು ತಡೆಯಲಾರದೆ ಸಮುದ್ರಮಧ್ಯದಲ್ಲಿ ಹಡಗು ಮುಳುಗುವಂತೆ ದುಃಖಭಾರಕ್ಕೆ ಕುಗ್ಗಿಹೋಗಿದಾಳೆ ಸೀತೆ. ಸುತ್ತಲೂ ರಾಕ್ಷಸಸ್ತ್ರೀಯರ ಕಾವಲು.

ದಶಕಂಠ ರಾವಣ ಸೀತೆಯನ್ನು ನೋಡಿದ. ಬರೀ ನೆಲದಲ್ಲಿ ಕುಳಿತು ಇದಾಳೆ. ನೆಲದ ಮೇಲೆ ಬಿದ್ದ ಮುರಿದು ಕೆಡವಿದ ಕೊಂಬೆಯ ಹಾಗೆ. ಆಕೆ ಯನ್ನು ನೋಡಿದರೆ ಏನೋ ತೀಕ್ಷ್ಣವ್ರತ ಹಿಡಿದಂತೆ ಇದೆ. ಧೂಳು ಮಣ್ಣು ಮುಚ್ಚಿದ ಆಕೆಯ ಮೈ ಬಣ್ಣಬಣ್ಣ ಆಗಿ ಕಾಣುತ್ತ ಇದೆ. ಒಡವೆ ಯಾವುದೂ ಇಲ್ಲದುದರಿಂದ ಕೆಸರು ಮುಚ್ಚಿದ ತಾವರೆಯಂತೆ ಇದಾಳೆ. ಆದರಿಂದ ಆಕೆಯ ದೇಹಕಾಂತಿ ಬೆಳಗಿಯೂ ಬೆಳಗದಂತೆ ಇದೆ. ರಾಜಸಿಂಹ ರಾಮನದೇ ಧ್ಯಾನ ಯಾವಾಗಲೂ. ಆಕೆಯ ಮನಸ್ಸೇ ರಥ. ಸಂಕಲ್ಪವೇ ಕುದುರೆ. ರಾಮನ ಬಳಿಗೆ ಹೋಗಲು ತಾನು ರಥ ಏರಿ ಕುಳಿತಿದಾಳೆ. ದುಃಖದಿಂದ ಕಂದಿ ಕುಂದಿ ಹೋಗುತ್ತಿದಾಳೆ. ಬಡವು ಆಗುತ್ತ ಇದಾಳೆ. ಪಾಪ, ಅನಾಥೆ, ಏಕಾಕಿ. ಅಳುತ್ತಲೇ ಇದಾಳೆ. ದುಃಖಕ್ಕೆ ಕೊನೆಯೇ ಇಲ್ಲ. ರಾಮನನ್ನು ಒಬ್ಬನನ್ನೇ ನಂಬಿದಾಳೆ. ಅದೇ ಆಕೆಯ ವ್ರತ.

ಮಣಿಮಂತ್ರಗಳ ಪ್ರಭಾವಕ್ಕೆ ಕಟ್ಟುಬಿದ್ದು ಸಿಂಬಿ ಸುತ್ತಿಕೊಂಡ ಹಾವಿನ ಹಾಗೆ ಇದಾಳೆ. ಧೂಮಕೇತುವಿನ ಪೀಡೆಗೆ ಸಿಕ್ಕ ರೋಹಿಣಿಯ ಹಾಗೆ. ಆಕೆ

ಹುಟ್ಟಿದ್ದು ಸರ್ವೋತ್ತಮ ವಂಶದಲ್ಲಿ. ಸದಾಚಾರ ಸತ್‌ಶೀಲ ಸತ್ಸ್ವಭಾವಗಳಿಗೆ ಹೆಸರು ಆದ ವಂಶ. ಆಕೆ ಬಂದದ್ದು ಇನ್ನೊಂದು ಪವಿತ್ರ ವಂಶಕ್ಕೆ. ಈಗ ಇರುವುದು ದುಷ್ಕುಲದಲ್ಲಿ ಹುಟ್ಟಿದವಳ ಹಾಗೆ ಬಹಳ ದೈನ್ಯದಲ್ಲಿ. ಅಭ್ಯಾಸ ಇಲ್ಲದೆ ಶಿಥಿಲ ಆದ ವಿದ್ಯೆ, ಶ್ರದ್ಧಾಭಕ್ತಿ ಇಲ್ಲದ ಪೂಜೆ, ಮಾನಗೆಟ್ಟ ಆಸ್ತಿಕ್ಯ ಬುದ್ಧಿ, ತಗ್ಗಿಹೋದ ಆದಾಯ, ನಡೆಸದ ಅಪ್ಪಣೆ, ಪ್ರಳಯಕಾಲದಲ್ಲಿ ಧಗಧಗ ಉರಿಯುವ ದಿಕ್ಕು, ಕದ್ದುತಂದ ಪೂಜಾದ್ರವ್ಯ, ಕಿತ್ತು ಎಸೆದ ತಾವರೆಬಳ್ಳಿ ಜಾನಕಿ. ಮಿಥ್ಯಾಪವಾದದಿಂದ ನಶಿಸಿದ ಕೀರ್ತಿಯ ಹಾಗೆ. ಶೂರರು ಇಲ್ಲದ ದಂಡು, ಬತ್ತಿಹೋದ ನದಿ, ಅಪವಿತ್ರ ಆದ ಯಜ್ಞವೇದಿಕೆ, ಕತ್ತಲೆ ಮುಚ್ಚಿದ ಬೆಳಕು, ಆರಿಹೋದ ಬೆಂಕಿ, ಗ್ರಹಣ ಹಿಡಿದ ಹುಣ್ಣಿಮೆರಾತ್ರಿ ಆಕೆ. ಕೊಬ್ಬಿದ ಕಾಡಾನೆ ಒಳನುಗ್ಗಿ ಸೊಂಡಿಲಿನಿಂದ ಕಲಕಿ ಕಿತ್ತು ಎಸೆದ ತಾವರೆಬಳ್ಳಿಯ ಹಾಗೆ, ಅದರಿಂದ ಹಂಸಕಾರಂಡವಾದಿ ಪಕ್ಷಿಗಳು ಎಲ್ಲಾ ಬೆದರಿ ಹಾರಿಹೋದ ಮೇಲೆ ಹಾಳುಬಿದ್ದ ತಾವರೆಕೊಳದ ಹಾಗೆ, ಕೃಷ್ಣಪಕ್ಷದ ರಾತ್ರಿಯ ಹಾಗೆ ಇದ್ದಾಳೆ ಸೀತೆ. ಕಳೆಯೇ ಇಲ್ಲ.

ಸೀತೆ ಸುಕುಮಾರಿ. ಸುಂದರಾಂಗಿ. ರತ್ನಗೃಹದಲ್ಲಿ ಇರಬೇಕಾದವಳು. ಅಂಥವಳು ಆಗಲೇ ಕಿತ್ತು ಕುದಿಯುವ ನೀರಿನಲ್ಲಿ ಒಗೆದ ತಾವರೆಬಳ್ಳಿಯ ಹಾಗೆ ಕಳೆಗುಂದಿ ಇದ್ದಾಳೆ. ಹಿಂಡನ್ನು ಅಗಲಿ ಬಂದು ಬೇಟೆಗಾರರ ಕೈಗೆ ಸಿಕ್ಕಿ ಕಂಬಕ್ಕೆ ಕಟ್ಟಿಸಿಕೊಂಡು ಸಲಗವನ್ನು ಕಾಣದೆ ನಿಟ್ಟುಸಿರು ಬಿಡುವ ಹೆಣ್ಣು ಆನೆಯ ಹಾಗೆ ಇದ್ದಾಳೆ. ಮೈಗೆ ಯಾವ ಸಂಸ್ಕಾರವೂ ಇಲ್ಲ. ಕೂದಲು ಎಲ್ಲಾ ಒಂದೇ ಜಡೆ ಆಗಿದೆ. ಶರತ್ಕಾಲದಲ್ಲಿ ಕಪ್ಪು ಆದ ಮರಗಳ ಸಾಲಿನಿಂದ ಶೋಭಿಸುವ ಭೂಮಿಯ ಹಾಗೆ ಕಾಣುತ್ತ ಇದ್ದಾಳೆ. ಉಪವಾಸ ದುಃಖ ಚಿಂತೆಗಳಿಂದ ಬಹಳ ಸವೆದುಹೋಗಿದೆ ಮೈ. ತೇಜಸ್ಸು ಇಲ್ಲ. ಬದುಕಲು ಬರೀ ನೀರು ಕುಡಿದು ಪ್ರಾಣ ಹಿಡಿದಿದ್ದಾಳೆ. ರಾಮನ ಕೈಯಲ್ಲಿ ರಾವಣನಿಗೆ ಪರಾಭವ ಆಗಬೇಕು ಎಂದು ಕೈಜೋಡಿಸಿ ದೇವತೆಗಳನ್ನು ಪ್ರಾರ್ಥಿಸುತ್ತ ಇದ್ದಾಳೆ. ಬೆಳ್ಳನೆ ಕಣ್ಣು, ಕೆಂಪು ತುಟಿ, ಅಂದದ ಹುಬ್ಬು. ರಾಮನನ್ನೇ ಕಾಯುತ್ತ ಇದ್ದಾಳೆ ಆ ನಿರ್ದೋಷಿ ಮಹಾಪತಿವ್ರತೆ ಸೀತೆ.

೨೦

ಸ್ವಲ್ಪವೂ ಹರ್ಷವೇ ಇಲ್ಲ. ದುಃಖದಿಂದ ಕೊರಗಿ ಕೊರಗಿ ಸೊರಗಿದ ಪತಿವ್ರತೆ. ತಪಸ್ವಿನಿಯ ಹಾಗೆ ಇದ್ದಾಳೆ. ಆಕೆಗೆ ತನ್ನ ಅಭಿಪ್ರಾಯವನ್ನು ತಿಳಿಸಬೇಕಲ್ಲ. ಸವಿಮಾತಿನಿಂದ ಹೇಳಿದ ರಾವಣ:

"ಸುಂದರಾಂಗಿ, ನನ್ನನ್ನು ನೋಡಿ ಹೀಗೆ ಏಕೆ ಹೆದರುತ್ತೀಯೆ? ನಿನ್ನ ಮೈ ನನಗೆ ಕಾಣಬಾರದು ಎಂದು ಮುಚ್ಚಿಕೊಂಡೆ. ಏಕೆ ಈ ಸಂಕೋಚ? ವಿಶಾಲಾಕ್ಷಿ, ನಾನು ನಿನ್ನನ್ನು ಬಯಸಿದೆ. ನಲ್ಲೆ, ಸರ್ವಾಂಗಗುಣಸಂಪನ್ನೆ, ನನ್ನನ್ನು ಅನುಗ್ರಹಿಸು. ಲೋಕಸುಂದರಿ ನೀನು. ಇಲ್ಲಿ ಯಾರೂ ಇಲ್ಲವಲ್ಲ ನೀನು ಭಯಪಡಬೇಕಾದವರು. ಮನುಷ್ಯರೂ ಇಲ್ಲ, ಕಾಮರೂಪಿಗಳು ಆದ ರಾಕ್ಷಸರೂ ಇಲ್ಲ. ನನ್ನನ್ನು ನೋಡಿ ಭಯಪಡುತ್ತೀಯಾ? ಬೇಡ, ಭಯ ಪಡಬೇಡ. ನಾನು ನಿನ್ನನ್ನು ಬಯಸಿಬಂದವನು.

"ಭೀರು, ಪರಸ್ತ್ರೀಗಮನ ಮತ್ತು ಪರಸ್ತ್ರೀಯರನ್ನು ಬಲಾತ್ಕಾರದಿಂದ ಅಪಹರಿಸುವುದು ರಾಕ್ಷಸರಿಗೆ ಕುಲಧರ್ಮ. ಖಂಡಿತ. ನಾನು ತಪ್ಪಿ ನಡೆದಿಲ್ಲ ವಲ್ಲ. ಆದರೂ ನೀನೇ ಬಯಸದ ಹೊರತು ನಾನು ನಿನ್ನನ್ನು ಮುಟ್ಟುವುದೂ ಇಲ್ಲ. ಮನ್ಮಥ ನನ್ನನ್ನು ಎಷ್ಟೇ ಪೀಡಿಸಿದರೂ ಸರಿಯೆ. ನನ್ನನ್ನು ನಂಬು, ಪ್ರಿಯೆ. ನನ್ನನ್ನು ನಿಜ ಆಗಿಯೂ ಪ್ರೇಮಿಸು. ನನಗೆ ಒಲಿ. ಭಯಪಡ ಬೇಡ. ಹೀಗೆ ದುಃಖದಿಂದ ಕೊರಗಬೇಡ. ನೀನು ಕೋಮಲಾಂಗಿ. ಹೀಗೆ ತಲೆ ಬಾಚಿಕೊಳ್ಳದೆ ಜಡೆ ಬಿಟ್ಟು ನೆಲದ ಮೇಲೆ ಮಲಗಿ ಕೊಳಕು ಬಟ್ಟೆ ಉಟ್ಟು ನಿಷ್ಕಾರಣ ಆಗಿ ನಿರಶನ ಮಾಡುವುದೂ ಏನೋ ಚಿಂತಿಸುತ್ತ ಕೊರಗುವುದೂ ಸರಿ ಅಲ್ಲ.

"ಮೈಥಿಲಿ, ನೀನು ನನ್ನನ್ನು ಸೇರು. ಇಲ್ಲಿ ಬಗೆಬಗೆಯ ಹೂಮಾಲೆ ಇವೆ. ಧರಿಸು. ಅಗರುಚಂದನ ಇವೆ. ತೊಡೆದುಕೊ. ಉತ್ತಮ ವಸ್ತ್ರ ಇವೆ. ದಿವ್ಯಾಭರಣ ಇವೆ. ಬಗೆಬಗೆಯ ಸುಪ್ಪತ್ತಿಗೆ ಇವೆ. ಎಲ್ಲವನ್ನೂ ಅನುಭವಿಸು. ಸರ್ವಶ್ರೇಷ್ಠ ಪಾನೀಯ ಇವೆ. ಮನೋಹರ ನರ್ತನ ನೋಡು. ಇಂಪು ಆದ ಹಾಡನ್ನು ಕೇಳು. ಸೀತೆ, ನೀನು ಹೆಂಗಸರಲ್ಲಿ ರತ್ನ. ಹೀಗೆ ಇರಬಾರದು ನೀನು. ದಿವ್ಯಾಭರಣಗಳಿಂದ ದೇಹವನ್ನು ಅಲಂಕರಿಸಿಕೊ. ಸುಂದರಾಂಗಿ,

ನನ್ನಲ್ಲಿ ಬಂದು ಸೇರಿದಮೇಲೆಯೂ ಹೀಗೆ ಇರಬಹುದೇ ನೀನು? ಈಗ ಮನೋಹರ ಆಗಿ ತಲೆದೋರಿದೆ ನಿನ್ನ ಯೌವನ. ಎಲ್ಲವೂ ವ್ಯರ್ಥ ಆಗಿ ಕಳೆದುಹೋಗುತ್ತ ಇದೆಯಲ್ಲ. ಹರಿದುಹೋದ ನೀರು ಹಿಂದಕ್ಕೆ ಬರುತ್ತದೆಯೆ? ಯೌವನವೂ ಹಾಗೇ. ಮತ್ತೆ ಬಾರದು.

"ಸುಂದರಿ, ಎಲ್ಲವನ್ನೂ ಸೃಷ್ಟಿಸುವ ಬ್ರಹ್ಮ ನಿನ್ನನ್ನು ಸೃಷ್ಟಿಸಿದಮೇಲೆ ನಿನ್ನಂಥ ಇನ್ನೊಬ್ಬಳನ್ನು ಸೃಷ್ಟಿಮಾಡಲಾರದೆ ಸೋತುಹೋದನೇನೋ? ಶುಭದರ್ಶಿನಿ, ರೂಪದಲ್ಲಿ ನಿನ್ನನ್ನು ಹೋಲುವವಳು ಈ ಲೋಕದಲ್ಲಿ ಯಾರೂ ಇಲ್ಲ. ಅಂಥ ಸರ್ವೋತ್ತಮ ರೂಪಯೌವನ ನಿನ್ನದು. ನಿನ್ನನ್ನು ನೋಡಿದರೆ ಸಾಕ್ಷಾತ್ ಬ್ರಹ್ಮದೇವನೇ ಮೋಹಿಸುತ್ತಾನೆ. ಬೇರೆ ಯಾವ ಗಂಡಸು ತನ್ನ ಮನಸ್ಸನ್ನು ನಿಗ್ರಹಿಸಬಲ್ಲ?

"ಚಂದ್ರಮುಖಿ, ನಿನ್ನ ಸರ್ವಾಂಗವೂ ಚೆಂದ. ಯಾವ ಅವಯವವನ್ನು ನೋಡಿದರೂ ಕಣ್ಣು ಅಲ್ಲಿಯೇ ನೆಟ್ಟುಹೋಗುತ್ತಿದೆಯಲ್ಲ. ಬೇರೆ ಒಂದನ್ನು ನೋಡಲು ಬಿಡದು. ಮೈಥಿಲಿ, ನೀನು ನನ್ನ ಕೈಹಿಡಿ. ನನ್ನ ಹೆಂಡತಿ ಆಗು. ಬಿಡು ನಿನ್ನ ಅವಿವೇಕ. ಬರೀ ವ್ಯರ್ಥ. ನಿನ್ನ ಶ್ರೇಯಸ್ಸಿಗೇ ಹೇಳುತ್ತೇನೆ. ಬೇರೆ ಬೇರೆ ಕಡೆಗಳಿಂದ ಎಷ್ಟೋ ಮಂದಿ ಉತ್ತಮೋತ್ತಮ ಸ್ತ್ರೀಯರನ್ನು ಎತ್ತಿಕೊಂಡು ಬಂದೆ. ಅವರಿಗೆ ಎಲ್ಲರಿಗೂ ಒಡತಿ ಆಗು. ನನ್ನ ಪಟ್ಟಮಹಿಷಿ ಆಗು.

"ಭೀರು, ಸಮಸ್ತ ಲೋಕಗಳನ್ನೂ ಗೆದ್ದು ಅಲ್ಲಿ ರತ್ನಪ್ರಾಯ ಆದ ಉತ್ತಮ ವಸ್ತುಗಳನ್ನು ತಂದು ಇಟ್ಟಿದೇನೆ. ಅದೆಲ್ಲವೂ ನಿನ್ನದೇ. ನನ್ನ ರಾಜ್ಯವೂ ನಿನ್ನದೇ. ನಾನೂ ನಿನ್ನವನೇ.

"ವಿಲಾಸವತಿ, ನಿನಗೆ ತೃಪ್ತಿ ಆಗುವಂತಿದ್ದರೆ ನಾನಾ ನಗರಗ್ರಾಮಗಳ ಈ ಭೂಮಂಡಲವನ್ನೇ ಗೆದ್ದು ನಿನ್ನ ತಂದೆ ಜನಕರಾಯನಿಗೆ ಕೊಡುತ್ತೇನೆ. ಇದುವರೆಗೆ ಈ ಲೋಕದಲ್ಲಿ ನನ್ನನ್ನು ಇದಿರಿಸಿ ನಿಂತ ವೀರ ಯಾರೂ ಇಲ್ಲ. ಯುದ್ಧದಲ್ಲಿ ಇದಿರು ಇಲ್ಲದ ಸಾಮರ್ಥ್ಯ ನನ್ನದು. ದೇವಾಸುರರನ್ನು ಎಷ್ಟು ಸಲ ಗೆದ್ದೆ! ಧ್ವಜಪತಾಕೆ ರಥಗಳನ್ನು ಮುರಿದುಕೊಂಡು ನನ್ನ ಮುಂದೆ ನಿಲ್ಲಲಾರದೆ ಎಷ್ಟು ಸಲ ಪಲಾಯನ ಮಾಡಿದರು!

"ಸೀತೆ, ನಿನಗೆ ಇಷ್ಟಬಂದ ಆಭರಣಗಳನ್ನು ಇಟ್ಟುಕೊ. ಚೆನ್ನಾಗಿ ಅಲಂಕರಿಸಿಕೊ. ನಿನ್ನ ರೂಪ ಸ್ವಭಾವ ಸುಂದರ. ದಿವ್ಯಾಭರಣಗಳಿಂದ ಅಲಂಕರಿಸಿದರೆ ಇನ್ನೂ ಸೊಗಸು ಬೀರುತ್ತದೆ. ನಾನು ನೋಡಬೇಕು.

"ವರಾನನೆ, ಸ್ವಲ್ಪವೂ ಸಂಕೋಚಪಡಬೇಡ. ನನ್ನಲ್ಲಿ ಸಲಿಗೆ ತೋರು. ಚೆನ್ನಾಗಿ ಸಿಂಗರಿಸಿಕೊ. ಈ ಸಮಸ್ತ ಭೋಗಗಳನ್ನೂ ಯಥೇಚ್ಛ ಆಗಿ ಅನುಭವಿಸು. ಮನಬಂದಹಾಗೆ ಕುಡಿ. ವಿಹರಿಸು. ನಿನ್ನ ಮನಸಿಗೆ ಬಂದವರಿಗೆ ಬೇಕಾದ ಹಾಗೆ ಭೂಮಿಯನ್ನು ಕೊಡು. ಧನವನ್ನು ಕೊಡು. ನನ್ನನ್ನು ನಂಬು. ನನ್ನನ್ನು ಪ್ರೀತಿಸು. ಯಾವ ಹೆದರಿಕೆಯೂ ಇಲ್ಲದೆ ಧೈರ್ಯದಿಂದ ಬೇಕಾದ ಹಾಗೆ ನನಗೆ ಅಪ್ಪಣೆ ಮಾಡು. ನಿನ್ನ ಬಂಧುಗಳೂ ಬೇಕಾದ ಸುಖವನ್ನು ಅನುಭವಿಸಲಿ.

"ಭದ್ರೇ, ನನ್ನ ಪದವಿಯನ್ನು ನೋಡು. ನನ್ನ ಮಹಾಭಾಗ್ಯವನ್ನೂ ಕೀರ್ತಿಯನ್ನೂ ನೋಡು. ಬಟ್ಟೆಗೂ ಗತಿ ಇಲ್ಲದೆ ನಾರುಮಡಿಯನ್ನು ಉಟ್ಟ ರಾಮನಿಂದ ಏನು ಆಗಬೇಕು ನಿನಗೆ? ಅವನ ವೀರ್ಯ ತಗ್ಗಿತು. ಭಾಗ್ಯ ಹೋಯಿತು. ಕಾಡಿನಲ್ಲಿ ಅಲೆಯುತ್ತಾನೆ. ವ್ರತದ ನೆವದಿಂದ ನೆಲದ ಮೇಲೆ ಮಲಗುತ್ತಾನೆ. ಈಗಿನ ಈ ದುರವಸ್ಥೆಯಲ್ಲಿ ಅವನು ಬದುಕಿ ಇದಾನೋ ಇಲ್ಲವೋ! ಸಂದೇಹ. ವೈದೇಹಿ, ಅವನ ಚಿಂತೆ ಬಿಡು. ನೀಲಮೇಘಗಳು ಮುಚ್ಚಿಕೊಂಡರೆ ಬೆಳುದಿಂಗಳು ಕಾಣಿಸುತ್ತದೆಯೆ? ರಾಮ ನಿನ್ನನ್ನು ಮತ್ತೆ ನೋಡಲಾರ. ನನ್ನಲ್ಲಿ ಇದೀಯೆ ನೀನು. ಅವನಿಗೆ ಕಾಣಿಸುವ ಹಾಗೆ ಇಲ್ಲ. ಹಿರಣ್ಯಕಶಿಪುವೇ ದೇವೇಂದ್ರನ ಕೈಗೆ ಸಿಕ್ಕ ಸ್ವರ್ಗವನ್ನು ಕಸಿದುಕೊಳ್ಳಲಾರದೆ ಹೋದ. ನನ್ನ ಕೈಗೆ ಸಿಕ್ಕ ನಿನ್ನನ್ನು ರಾಮ ಬಂದು ಬಿಡಿಸಿಕೊಂಡು ಹೋಗುತ್ತಾನೆಯೆ? ಎಂದಿಗೂ ಇಲ್ಲ.

"ವಿಲಾಸಿನಿ, ನಿನ್ನ ಮುಗುಳುನಗೆಯ ಚೆಂದವೋ, ನಿನ್ನ ದಂತಪಙ್ಕ್ತಿಯ ಅಂದವೋ, ನಿನ್ನ ಕಣ್ಣಿನ ಸೊಗಸೋ! ಗರುಡ ಹಾವನ್ನು ಎಳೆಯುವ ಹಾಗೆ ಒಂದೊಂದೂ ನನ್ನ ಮನಸ್ಸನ್ನು ಕಿತ್ತು ಎಳೆಯುತ್ತ ಇದೆ. ಸೀತೆ, ಹೀಗೆ ಮಾಸಿದ ಹರಕು ಸೀರೆ ಉಟ್ಟು ಯಾವ ಆಭರಣವನ್ನೂ ಧರಿಸದೆ ಸೊರಗಿ ಹೋದರೂ ನೀನು ಪರಮ ಸುಂದರಿ. ನಿನ್ನನ್ನು ನೋಡಿದ ಮೇಲೆ ನನ್ನ ಹೆಂಡತಿಯರಲ್ಲಿ ನನಗೆ ಆಸಕ್ತಿ ತಪ್ಪಿತು. ಜಾನಕಿ, ನನ್ನ ಅಂತಃಪುರದಲ್ಲಿ

ಇರುವ ಹೆಂಗಸರು ಬಹಳ ಉತ್ತಮ ಸ್ತ್ರೀಯರು. ಸುಂದರಿಯರು. ಮೂರು ಲೋಕಗಳಲ್ಲೂ ಮೇಲು ಆದವರು. ಅಪ್ಸರೆಯರು ಲಕ್ಷ್ಮಿಗೆ ಸೇವೆಮಾಡುವಂತೆ ನಿನಗೆ ಅವರು ಸೇವೆಮಾಡುತ್ತಾರೆ. ನೀಲಕುಂತಳೆ, ನೀನು ಅವರ ಒಡತಿ ಆಗು.

"ಸುಶ್ರೋಣಿ, ಕುಬೇರನ ಸಮಸ್ತ ಐಶ್ವರ್ಯವನ್ನೂ ರತ್ನರಾಶಿಯನ್ನೂ ತಂದಿದೇನೆ. ಅದು ಎಲ್ಲವೂ ನನಗೇ. ನನ್ನನ್ನು ಕೂಡಿದೆಯೋ ಹದಿನಾಲ್ಕೂ ಲೋಕಗಳು ನಿನಗೆ ಅಧೀನ. ಎಲ್ಲವನ್ನೂ ಹಾಯಿ ಆಗಿ ಅನುಭವಿಸು. ದೇವಿ, ಆ ರಾಮ ನನಗೆ ಯಾವುದರಲ್ಲಿ ಸಮ? ತಪಸ್ಸೆ, ಬಲವೆ, ಪರಾಕ್ರಮವೆ, ಕೀರ್ತಿಯೆ, ತೇಜಸ್ಸೆ, ಐಶ್ವರ್ಯವೆ? ಯಾವುದರಲ್ಲೂ ನನಗೆ ಸಮಾನ ಅಲ್ಲ. ಮೋಹನಾಂಗಿ, ಕುಡಿ, ವಿಹರಿಸು, ಕ್ರೀಡಿಸು, ಸಮಸ್ತ ಭೋಗಗಳನ್ನೂ ಅನುಭವಿಸು. ನನ್ನ ಸಮಸ್ತ ಸಂಪತ್ತೂ ಭೂಮಿಯೂ ನಿನ್ನದು. ನನ್ನನ್ನು ಕೂಡು. ಸಂತೋಷದಿಂದ ರಮಿಸು. ನಿನ್ನ ಬಂಧುಗಳೂ ಸಂತೋಷಪಡಲಿ.

"ಭೀರು, ಇಲ್ಲಿ ಹೂಗಳು ಬಿಟ್ಟು ಇರುವ ಗಿಡಗಳನ್ನು ನೋಡು. ಈ ಹೂಗಳನ್ನು ಮುತ್ತಿ ಸದಾ ಗುಂಯ್‌ಗುಟ್ಟುವ ದುಂಬಿಗಳನ್ನು ನೋಡು. ಸಮುದ್ರತೀರದ ಈ ಉದ್ಯಾನವನಗಳನ್ನು ನೋಡು. ಈ ಚಿನ್ನದ ಸರವನ್ನು ಧರಿಸು. ರಮಣೀಯ ಆದ ಈ ಉದ್ಯಾನವನಗಳಲ್ಲಿ ನನ್ನೊಡನೆ ವಿಹರಿಸು."

೨೧

ಘೋರರೂಪಿ ರಾಕ್ಷಸ ರಾವಣ ಹೇಳಿದುದನ್ನು ಸೀತಾದೇವಿ ಕೇಳಿದಳು. ದುಃಖ ಉಕ್ಕಿಬಂತು. ಧಾರೆಧಾರೆ ಕಣ್ಣೀರು. ಗಡಗಡ ನಡುಗಿತು ಮೈ. ಮಹಾಪತಿವ್ರತೆ. ತನ್ನ ಗಂಡನನ್ನು ಧ್ಯಾನಿಸಿದಳು. ನೀಚ ರಾವಣನಿಗೆ ಉತ್ತರ ಹೇಳಬೇಕು. ಅವನ ಸಂಗಡ ಮುಖಕೊಟ್ಟು ಮಾತು ಆಡುವುದೂ ಅಸಹ್ಯ. ನಡುವೆ ಒಂದು ಹುಲ್ಲುಕಡ್ಡಿಯನ್ನು ಇಟ್ಟುಕೊಂಡಳು. ಅದರ ಸಂಗಡ ಮಾತು ಆಡುವಂತೆ ಅವನಿಗೆ ಉತ್ತರ ಹೇಳಿದಳು. ಸ್ವರ ಬಲು ದೀನ. ಮುಖದಲ್ಲಿ ಯಾವ ವಿಕಾರವೂ ಇಲ್ಲ. ಹೇಳಿದಳು:

"ರಾವಣ, ನನ್ನ ಆಸೆಯನ್ನು ಬಿಡು. ನನ್ನ ಮೇಲಿನ ಮನಸ್ಸನ್ನು ತಿರುಗಿಸಿಕೊ. ನಿನ್ನ ಸ್ವಂತ ಹೆಂಡತಿಯರಲ್ಲಿ ಮನಸು ಇಡು. ಪಾಪಿಷ್ಠ ಸ್ವರ್ಗವನ್ನು ಬಯಸುವುದೂ ನೀನು ನನ್ನನ್ನು ಬಯಸುವುದೂ ಒಂದೇ. ಸರಿ

ಅಲ್ಲ ಈ ಕೋರಿಕೆ. ಪವಿತ್ರವಂಶದಲ್ಲಿ ಹುಟ್ಟಿದವಳು ನಾನು. ಮತ್ತೊಂದು ಪರಿಶುದ್ಧ ವಂಶಕ್ಕೆ ಸೇರಿದೆ. ನನಗೆ ಒಬ್ಬನೇ ಗಂಡ. ನಾನು ಪತಿವ್ರತೆ. ಇಂಥ ಅಕಾರ್ಯವನ್ನು, ಜಗತ್ತು ನಿಂದಿಸುವ ಈ ಕೆಲಸವನ್ನು ನಾನು ಮಾಡಿಯೇನೆ? ಎಂದಿಗೂ ಇಲ್ಲ."

ಸೀತೆ ಮುಖ ತಿರುವಿದಳು ರಾವಣನಿಗೆ ಕಾಣದಂತೆ. ಮತ್ತೆ ಹೇಳಿದಳು: "ರಾಕ್ಷಸ, ನಾನು ಪರಸತಿ. ಪತಿವ್ರತೆ. ನಿನಗೆ ಹೆಂಡತಿ ಆಗಲು ತಕ್ಕವಳು ಅಲ್ಲ. ಧರ್ಮವನ್ನು ಕಾಪಾಡಿಕೊ. ಸತ್ಪುರುಷರ ದಾರಿ ಹಿಡಿ. ನಿನ್ನ ಹೆಂಡತಿಯ ಹಾಗೇ ಪರರ ಹೆಂಡತಿ. ನಿನ್ನ ಹೆಂಡತಿಯನ್ನು ಪರಪುರುಷರ ಪಾಲು ಆಗದಂತೆ ನೀನು ಕಾಪಾಡಿಕೊಳ್ಳುತ್ತೀಯಲ್ಲ. ಹಾಗೇ ಇತರರೂ ಮಾಡುತ್ತಾರೆ. ನಿನ್ನ ಹಾಗೇ ಅವರೂ. ನಿನ್ನ ಹೆಂಡತಿಯರಲ್ಲಿ ನೀನು ರಮಿಸು. ಸ್ವಂತ ಹೆಂಡತಿಯಲ್ಲಿ ತೃಪ್ತಿಹೊಂದದ ಚಪಲಚಿತ್ತನಿಗೆ ಇಂದ್ರಿಯನಿಗ್ರಹ ಇಲ್ಲದ ಧೂರ್ತನಿಗೆ ಪರ ಸ್ತ್ರೀಯರಿಂದ ಪರಾಭವ ತಪ್ಪಿದ್ದು ಅಲ್ಲ. ಪರಸತಿಯರ ಬಯಕೆಯ ಪಾಪ ಸಾಮಾನ್ಯ ಅಲ್ಲ. ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಹಾಳುಮಾಡುತ್ತದೆ.

"ರಾವಣ, ಇಷ್ಟು ದೊಡ್ಡ ಲಂಕಾಪಟ್ಟಣದಲ್ಲಿ ನಿನಗೆ ಬುದ್ಧಿ ಹೇಳುವ ಹಿರಿಯರು ಯಾರೂ ಇಲ್ಲವೆ? ಅವರ ಮಾತಿನಂತೆ ನೀನು ನಡೆಯುವುದು ಇಲ್ಲವೋ? ನಿನಗೆ ಹಿತವನ್ನೆ ಹೇಳುತ್ತಾರೆ ಅವರು. ನೀನು ಕೇಳಬೇಕಲ್ಲ. ನಿನ್ನ ಬುದ್ಧಿ ಕೆಟ್ಟು ಇದೆ. ನಿನ್ನ ವಿಪರೀತಬುದ್ಧಿಯ ಫಲ, ರಾಕ್ಷಸರು ಎಲ್ಲರೂ ನಾಶ ಆಗುತ್ತಾರೆ. ರಾಕ್ಷಸರಲ್ಲಿ ನಿನಗೆ ಇರುವ ಪ್ರೇಮ ನಿಜ ಅಲ್ಲ. ನಿನ್ನಂತೆ ಬುದ್ಧಿ ಕೆಟ್ಟು, ನ್ಯಾಯ ತಪ್ಪಿ ನಡೆದರೆ ಯಾವ ರಾಷ್ಟ್ರ ಯಾವ ಪಟ್ಟಣ ಉಳಿದೀತು? ನಾಶ ಆಗಿಹೋಗುತ್ತದೆ. ನಾನಾ ರತ್ನರಾಶಿಯಿಂದ ಮಹದೈಶ್ವರ್ಯದಿಂದ ತುಂಬಿ ತುಳುಕುತ್ತ ಇದೆ ಈ ಲಂಕಾಪಟ್ಟಣ. ನಿನ್ನ ಒಬ್ಬನ ದೋಷದಿಂದ ಈ ನಗರ ಈ ರಾಜ್ಯ ಎಲ್ಲವೂ ನಾಶ ಆಗುತ್ತದೆ. ಆ ಕಾಲ ದೂರ ಇಲ್ಲ. ದೂರದೃಷ್ಟಿ ಇಲ್ಲದೆ ಪಾಪಕಾರ್ಯಮಾಡಿದವನು ನಾಶ ಆಗುವಾಗ ಸಮಸ್ತಪ್ರಾಣಿಕೋಟಿಯೂ ನೋಡಿ ಸಂತೋಷಪಡುತ್ತದೆ. ಎಷ್ಟೋ ಜನರನ್ನು ನೀನು ಕಾಡಿದೆ, ಪೀಡಿಸಿದೆ. ನೀನು ನಾಶ ಆದರೆ ಅವರಿಗೆ ಎಲ್ಲರಿಗೂ ಸಂತೋಷ.

"ಐಶ್ವರ್ಯ ಅಂತಃಪುರದ ಅಧಿಕಾರಗಳ ಆಸೆ ತೋರಿಸುತ್ತೀಯಲ್ಲ ನನಗೆ. ಸಾಧ್ಯ ಇಲ್ಲ. ಸೂರ್ಯನಿಗೆ ಬೆಳಕು ಹೇಗೋ ಹಾಗೆ ನಾನು ಶ್ರೀರಾಮನಿಗೆ

ನಿತ್ಯಾನಪಾಯಿನಿ. ಯಾವಾಗಲೂ ರಾಮನ ಬಲಭುಜವನ್ನು ತಲೆದಿಂಬು ಆಗಿ ಮಾಡಿಕೊಂಡವಳು. ಈಗ ಬೇರೆ ಒಬ್ಬ ಅಧಮನ ಭುಜದ ಮೇಲೆ ಮಲಗಲೆ? ವ್ರತಸ್ನಾತ ಧೀಮಂತ ಆತ್ಮವೇತ್ತ ಆದ ಸದ್ಬ್ರಾಹ್ಮಣನಿಗೆ ಒಲಿಯುತ್ತದೆ ವೇದವಿದ್ಯೆ. ಲೋಕನಾಥ ರಘುನಾಥನನ್ನೇ ಒಲಿದು ಆತನ ಭಾರ್ಯೆ ಆದೆ ನಾನು.

"ರಾಕ್ಷಸ, ಗಂಡು ಆನೆಯನ್ನು ಅಗಲಿ ಬಂದು ಸವೆದುಹೋಗುವ ಹೆಣ್ಣು ಆನೆಯನ್ನು ಗಂಡಿನ ಒಡನೆ ಮತ್ತೆ ಸೇರಿಸುವ ಹಾಗೆ ದುಃಖದಲ್ಲಿ ಮುಳುಗಿದ ನನ್ನನ್ನು ಶ್ರೀರಾಮಪ್ರಭುವಿನ ಜೊತೆಗೆ ಸೇರಿಸು. ರಾವಣಾಸುರ, ಸುಖದಿಂದ ಲಂಕೆಯಲ್ಲಿ ಇರಬೇಕು ಎಂಬ ಆಸೆ ಇಲ್ಲವೆ ನಿನಗೆ? ಕೊಲೆ ಆಗಬಾರದು ಎಂಬ ಕೋರಿಕೆ ಇಲ್ಲವೆ? ಇದ್ದರೆ ಆ ಪುರುಷೋತ್ತಮ ಶ್ರೀರಾಮನ ಸ್ನೇಹವನ್ನು ಸಂಪಾದಿಸು. ಆತ ಧರ್ಮಜ್ಞ. ಶರಣಾಗತವತ್ಸಲ. ಲೋಕಕ್ಕೇ ಗೊತ್ತು ಇದು. ಬದುಕುವ ಬಯಕೆ ಇದ್ದರೆ ಆತನ ಗೆಳೆತನ ಮಾಡು. ಶುದ್ಧಮನಸಿನಿಂದ ನನ್ನನ್ನು ಆತನಿಗೆ ಒಪ್ಪಿಸು. ನಿನಗೆ ಶುಭ ಆಗುತ್ತದೆ.

"ನಾನು ಹೇಳಿದ ಮಾತನ್ನು ಕೇಳಲಿಲ್ಲವೋ, ಬೇರೆ ದಾರಿ ಹಿಡಿದೆಯೋ ನಿನಗೆ ಸಾವು ತಪ್ಪದು. ದೇವೇಂದ್ರನ ವಜ್ರಾಯುಧ ನಿನ್ನ ಮೇಲೆ ಬೀಳದೆ ಇರಬಹುದು. ಯಮನೂ ನಿನ್ನನ್ನು ಎಳೆದುಕೊಂಡು ಹೋಗದೆ ಇರಬಹುದು. ಲೋಕನಾಥ ರಾಮನಿಗೆ ಸಿಟ್ಟುಬಂದರೆ ನೀನು ತಪ್ಪಿಸಿಕೊಳ್ಳಲಾರೆ. ನಿನ್ನನ್ನು ಏನು ಮಾಡಿದರೂ ಬಿಡ. ಇಂದ್ರನ ವಜ್ರಾಯುಧದ ಧ್ವನಿಯ ಹಾಗೆ ರಾಮನ ಧನುಷ್ಟಂಕಾರ. ಅದನ್ನು ಬೇಗನೆ ಕೇಳುತ್ತೀಯೆ ನೀನು. ಸೊಗಸು ಆದ ಗೆಣ್ಣುಗಳ ತೀಕ್ಷ್ಣತರ ಬಾಣಗಳು, ರಾಮಲಕ್ಷ್ಮಣರ ನಾಮಾಂಕಿತದವು. ಉರಿಯನ್ನು ಕುಕ್ಕುವ ಹಾವಿನಂತೆ ಲಂಕೆಯಲ್ಲಿ ಬೀಳುತ್ತವೆ ಬೇಗನೆ. ಗರಿಕಟ್ಟಿದ ಆ ಬಾಣಗಳು ಈ ಪಟ್ಟಣದ ತುಂಬಾ ತುಂಬಿ ರಾಕ್ಷಸರು ಎಲ್ಲರನ್ನೂ ಕೊಲ್ಲುತ್ತವೆ. ಹಾವುಗಳನ್ನು ಗರುಡ ಸೀಳುವಂತೆ ರಾಕ್ಷಸರನ್ನು ಸೀಳುತ್ತಾನೆ ರಾಮ. ಮೂರೇ ಅಡಿ ಇಟ್ಟು ವಿಷ್ಣು ರಾಕ್ಷಸರ ಕೈಯಿಂದ ರಾಜ್ಯಲಕ್ಷ್ಮಿಯನ್ನು ವಶಪಡಿಸಿಕೊಂಡ. ನನ್ನ ಪತಿಯೂ ಬೇಗನೆ ನಿನ್ನನ್ನು ನಾಶಮಾಡಿ ನನ್ನನ್ನು ಬಿಡಿಸಿಕೊಂಡು ಹೋಗುತ್ತಾನೆ.

"ರಾವಣ, ಜನಸ್ಥಾನದ ರಾಕ್ಷಸರು ಎಲ್ಲರನ್ನೂ ನನ್ನ ನಲ್ಲ ಕಡಿದುಹಾಕಿದುದನ್ನು ಕೇಳಿ, ಭಯಪಟ್ಟು ರಾಮನಿಗೆ ಇದಿರು ನಿಲ್ಲಲಾರದೆ ಹೋದೆ.

ಪುರುಷೋತ್ತಮರು ಅಣ್ಣತಮ್ಮಂದಿರು ರಾಮಲಕ್ಷ್ಮಣರು ಇಬ್ಬರೂ ಇಲ್ಲದ ಸಮಯದಲ್ಲಿ ಆಶ್ರಮಕ್ಕೆ ಬಂದು ನನ್ನನ್ನು ಕದ್ದು ತಂದೆ. ಆ ರಾಮಲಕ್ಷ್ಮಣರ ವಾಸನೆ ಆದರೂ ನಿನಗೆ ತಗಲಿದ್ದರೆ ಹೆಬ್ಬುಲಿಯ ವಾಸನೆಯನ್ನು ಹಿಡಿದ ನಾಯಿಯಂತೆ ಓಡಿಹೋಗುತ್ತ ಇದ್ದೆ. ಅವರಿಗೂ ನಿನಗೂ ಯುದ್ಧ ನಡೆದು ಇದ್ದರೆ ಒಂದು ನಿಮಿಷವೂ ನಿಲ್ಲುತ್ತ ಇರಲಿಲ್ಲ. ಎಂದೋ ಸಾಯುತ್ತ ಇದ್ದೆ. ಒಂದು ಕೈಯ ವೃತ್ರ, ಎರಡು ಕೈಯ ಇಂದ್ರ. ನೀನು ಒಬ್ಬ, ಅವರು ಇಬ್ಬರು. ಖಂಡಿತ ಸಾಯುತ್ತ ಇದ್ದೆ.

"ರಾವಣ, ನಿನಗೆ ಕೇಡುಗಾಲ ಬಂದಿದೆ. ಬೇಸಗೆಯ ಸೂರ್ಯ ನೀರನ್ನು ಹೀರುವಂತೆ ರಾಮಲಕ್ಷ್ಮಣರು ನಿನ್ನ ಪ್ರಾಣವನ್ನು ಹೀರುತ್ತಾರೆ. ಕೈಲಾಸಕ್ಕೆ ಹೋಗು, ವರುಣಲೋಕಕ್ಕೆ ಹೋಗು, ಮೇಲಿನ ಲೋಕಕ್ಕೆ ಹೋಗು, ಕೆಳಗಿನ ಲೋಕಕ್ಕೆ ಹೋಗು. ಎಲ್ಲಿಗೆ ಹೋದರೂ ನೀನು ತಪ್ಪಿಸಿಕೊಳ್ಳಲಾರೆ. ಮರ ದೊಡ್ಡದು ಆದರೂ ಸಿಡಿಲು ಬಡಿದಮೇಲೆ ಉಳಿದೀತೆ? ರಾಮನ ಬಾಣಕ್ಕೆ ಸಿಕ್ಕಮೇಲೆ ನಿನಗೆ ಉಳಿಗಾಲವೆ?"

೨೨

ರಾಕ್ಷಸೇಂದ್ರ ರಾವಣ ಸ್ವಲ್ಪ ಕಠಿನ ಆಗಿಯೆ ಮಾತಾಡಿದ. "ಸೀತೆ, ಗಂಡಸು ಹೆಂಗಸನ್ನು ಎಷ್ಟು ಎಷ್ಟು ಅಂಗಲಾಚಿದರೆ ಅಷ್ಟು ಅಷ್ಟು ಹಗುರ ಆಗುತ್ತಾನೆ. ಎಷ್ಟು ಎಷ್ಟು ಒಳ್ಳೆಯ ಮಾತು ಆಡುತ್ತಾನೋ ಅಷ್ಟು ಅಷ್ಟು ನಾಚಿಕೆ ಕೆಡಬೇಕಾಗುತ್ತದೆ. ನನ್ನ ಕಾಮವೇ ನನಗೆ ಅಂಕುಶ. ಕಾಮ ಬಹಳ ಕೆಟ್ಟದ್ದು. ಯಾರನ್ನು ಕಾಮಿಸುತ್ತೇವೋ ಅವರ ಮೇಲೆ ಕನಿಕರ ಸ್ನೇಹ ಹೆಚ್ಚು ಆಗುತ್ತದೆ. ಇದು ಲೋಕಸ್ವಭಾವ. ಅವರು ಎಷ್ಟೇ ತಪ್ಪುಮಾಡಿದರೂ ಅವರನ್ನು ಶಿಕ್ಷಿಸುವ ಮನಸ್ಸು ಆಗದು. ಮಿತಿಮೀರಿದ ಕುದುರೆಗಳನ್ನು ಸಾರಥಿ ಬಿಗಿ ಹಿಡಿಯುವಂತೆ ನಾನೂ ನನ್ನ ಕೋಪವನ್ನು ತಡೆದೆ. ನಿನ್ನ ಮೇಲಣ ಬಯಕೆ ಕಡಿವಾಣ ಎಳೆಯುತ್ತ ಇದೆ. ಕಪಟವೇಷಧಾರಿ ಆ ರಾಮ. ಕಾಡಿನಲ್ಲಿ ತಿರುಗುತ್ತ ಇದಾನೆ. ಅವನ ಮೇಲಣ ಮೋಹದಿಂದ ನನ್ನನ್ನು ತಿರಸ್ಕರಿಸು ತ್ತೀಯಾ? ನಿನ್ನ ಮಾತುಮಾತಿಗೂ ನಿನ್ನನ್ನು ಚಿತ್ರವಧೆ ಮಾಡಬೇಕು. ಆದರೆ ಏನು ಮಾಡಲಿ?

“ ವೈದೇಹಿ, ನಾನು ಕೊಟ್ಟ ಗಡುವಿನಲ್ಲಿ ನಿನಗೆ ಉಳಿದು ಇರುವುದು ಎರಡೇ ತಿಂಗಳು. ಎರಡು ತಿಂಗಳ ಗಡುವು ಮುಗಿದ ಕೂಡಲೇ ನೀನು ನನ್ನ ಹಾಸಿಗೆಗೆ ಬರಲೇಬೇಕು. ಆಗಲೂ ನೀನು ನನ್ನನ್ನು ಬಯಸದೆ ಕೈಹಿಡಿಯದೆ ಹೋದರೆ ಬೆಳಗಿನ ಊಟಕ್ಕೆ ಅಡಿಗೆಯ ಮನೆಗೆ ಕಳಿಸುತ್ತೇನೆ. ಅಲ್ಲಿ ನಿನ್ನನ್ನು ಸೀಳಿಹಾಕುತ್ತಾರೆ.”

ರಾವಣ ಸೀತೆಯನ್ನು ಬೆದರಿಸಿದ. ಅದನ್ನು ಕೇಳಿ ಅವನ ಜೊತೆಯಲ್ಲಿ ಬಂದಿದ್ದ ದೇವಗಂಧರ್ವಕನ್ಯೆಯರು ಎಲ್ಲರೂ ದುಃಖದಿಂದ ಕಂಬನಿ ಕರೆದರು. ಭಯದಿಂದ ಕಳವಳಗೊಂಡರು. ಕೆಲವರು ಕಣ್ಸನ್ನೆಯಿಂದ ಕೆಲವರು ಮುಖ ಸಂಜ್ಞೆಯಿಂದ ತುಟಿ ಸನ್ನೆಯಿಂದ ಕೆಲವರು ರಾವಣನಿಗೆ ತಿಳಿಯದ ಹಾಗೆ ಸೀತೆಯನ್ನು ಸಮಾಧಾನಪಡಿಸಿದರು.

ಸೀತೆಗೆ ಇವರ ಬೆಂಬಲ. ತನ್ನ ಪಾತಿವ್ರತ್ಯದ ಬಲ. ಧೈರ್ಯಮಾಡಿದಳು. ರಾವಣನಿಗೆ ಹೇಳಿದಳು : “ ರಾಕ್ಷಸ, ನಿನಗೆ ಹಿತವನ್ನು ಬಯಸುವವನು ಈ ಲಂಕಾಪಟ್ಟಣದಲ್ಲಿ ಯಾರೂ ಇಲ್ಲದ ಹಾಗೇ ಇದೆ. ಇಂಥ ಹೀನಕಾರ್ಯವನ್ನು ಮಾಡುತ್ತ ಇದ್ದರೂ ನಿನ್ನನ್ನು ತಡೆಯುವವರೇ ಇಲ್ಲವೆ ? ಇಂದ್ರನಿಗೆ ಶಚಿಯ ಹಾಗೆ ನಾನು ಧರ್ಮಾತ್ಮ ರಾಮನ ಧರ್ಮಪತ್ನಿ. ಈ ಮೂರು ಲೋಕಗಳಲ್ಲಿ ನಿನ್ನ ಹೊರತು ಬೇರೆ ಯಾರೂ ನನ್ನನ್ನು ಬಯಸಲಿಲ್ಲ. ಮಹಾಭುಜಬಲ ಪರಾಕ್ರಮಶಾಲಿ ರಾಮನ ಹೆಂಡತಿ ನಾನು. ನನ್ನ ಇದಿರಿಗೆ ಇಂಥ ಪಾಪದ ಮಾತನ್ನು ಆಡಿದೆಯಲ್ಲ. ಎಲ್ಲಿಗೆ ಹೋದರೆ ತಾನೆ ತಪ್ಪೀತು ನಿನಗೆ ಇದರ ಫಲ ?

“ ಮದ್ದಾನೆಯ ಸಂಗಡ ಮೊಲ ಹೋರಾಟಕ್ಕೆ ನಿಂತರೆ ಫಲ ತಿಳಿದೇ ಇದೆ. ಆ ಮಹಾತೇಜೋವಂತ ರಾಮನನ್ನು ನೀನು ಇದಿರಿಸಿದರೆ ಅದೇ ಫಲ. ರಾಮನ ಕಣ್ಣಿಗೆ ಬೀಳದಂತೆ ನನ್ನನ್ನು ಕದ್ದು ತಂದೆ. ನಾಚಿಕೆ ಆದರೂ ಇಲ್ಲವೆ ನಿನಗೆ? ಇದುವರೆಗೂ ನೀನು ರಾಮನ ಕಣ್ಣಿಗೆ ಬೀಳಲಿಲ್ಲ. ರಾಕ್ಷಸಾಧಮಾ, ಆತನ ಕಣ್ಣಿಗೆ ಬಿದ್ದರೆ ಗೊತ್ತಾಗುತ್ತದೆ ಆತನ ಪರಾಕ್ರಮ. ಪಿಂಗಳವರ್ಣದ ನಿನ್ನ ಕಣ್ಣು ನನ್ನನ್ನು ದುರದುರ ನೋಡುತ್ತ ಇವೆ. ಅವು ಕೆಳಗೆ ಉದುರಿ ಬೀಳಬಾರದೆ ! ದುರುಳ, ನಾನು ಧರ್ಮಾತ್ಮ ರಾಮನ ಹೆಂಡತಿ. ದಶರಥರಾಜನ ಸೊಸೆ. ನೀನು ಆಡಿದ ಅಧರ್ಮದ ಮಾತಿಗೆ ನಿನ್ನ ನಾಲಗೆ ಸೀಳಿಹೋಗಬಾರದೆ !

ರಾಕ್ಷಸ, ನಿನ್ನನ್ನು ಈಗಲೇ ಸುಟ್ಟು ಬೂದಿಮಾಡಬಲ್ಲೆ. ಆದರೆ ರಾಮನ ಅಪ್ಪಣೆ ಇಲ್ಲ. ನನ್ನ ತಪಃಫಲ ವ್ಯರ್ಥ ಆಗಲೂ ಬಾರದು.

"ಮಹಾಧೀರ ಶ್ರೀರಾಮನಿಂದ ನನ್ನನ್ನು ತಪ್ಪಿಸಲು ನಿನಗೆ ಸಾಧ್ಯ ಅಲ್ಲ. ಇಲ್ಲಿಗೆ ನನ್ನನ್ನು ತಂದದ್ದು ನಿನ್ನ ಸಾವಿಗೇ ಕಾರಣ. ಅಷ್ಟೇ. ನೀಚ, ಕುಬೇರನ ತಮ್ಮ, ಮಹಾಪರಾಕ್ರಮಿ ಎಂದು ನನ್ನ ಮುಂದೆ ಜಂಬ ಕೊಚ್ಚುತ್ತೀಯಲ್ಲ. ಇದು ನಿಜ ಆದರೆ ಮೋಸದಿಂದ ಆ ಮಹಾನುಭಾವನನ್ನು ದೂರ ಕಳಿಸಿ ನನ್ನನ್ನು ಕದ್ದುತಂದೆಯಲ್ಲ. ಏಕೆ?" ಎಂದಳು ಸೀತೆ.

ಕ್ರೂರದೃಷ್ಟಿಯಿಂದ ಆಕೆಯನ್ನು ದುರದುರ ನೋಡಿದ. ಕಾಲಮೇಘ ದಂಥ ಬಣ್ಣ ರಾವಣನದು. ಭುಜಗಳು ದೊಡ್ಡವು. ಚೆನ್ನಾಗಿ ಬಲಿತ ಕತ್ತು. ಶಕ್ತಿಯಲ್ಲಿ ಸಿಂಹದಂಥವನು. ನಡೆದರೆ ಸಿಂಹದ ನಡಿಗೆ. ಮುಖದಲ್ಲೋ ರಾಜಕಳೆ. ಕಣ್ಣು ಕೆಂಡ. ನಾಲಗೆ ಉರಿನಾಲಗೆ. ಎತ್ತರ ಆದ ವ್ಯಕ್ತಿ. ಅವನು ನಡೆದರೆ ತಲೆಯ ಮೇಲಿನ ಕಿರೀಟ ಅಲುಗಾಡುತ್ತ ಶೋಭಿಸುತ್ತದೆ. ಮೈಗೆ ಹಲವು ಬಣ್ಣದ ಗಂಧ ಬಳಿದಿದೆ. ಬಣ್ಣ ಬಣ್ಣದ ಹೂಮಾಲೆ ಹಾಕಿಕೊಂಡು ಇದ್ದಾನೆ. ಉಟ್ಟದ್ದು ಕೆಂಪು ರೇಶಿಮೆಯ ವಸ್ತ್ರ. ಇಟ್ಟದ್ದು ಕೆಂಪಗೆ ಹೊಳೆವ ತೋಳ್ಬಳೆ. ಅಮೃತಮಥನಕ್ಕೆ ಮಂದರಪರ್ವತಕ್ಕೆ ಸುತ್ತಿದ ಹಾವಿನಂತೆ ಕಾಣುವ ಕಪ್ಪು ಉಡಿದಾರ. ತೋಳು ನೀಡಿ ನಿಂತರೆ ಮಂದರಪರ್ವತದ ಶಿಖರಗಳ ಹಾಗೆ. ಅವನ ಕರ್ಣಕುಂಡಲಗಳು ಧಗಧಗ ಹೊಳೆಯುತ್ತ ಇದ್ದರೆ ಕೆಂಪು ಹೂ ಕೆಂಪು ಚಿಗುರು ಬಿಟ್ಟ ಅಶೋಕವೃಕ್ಷಗಳು ಆ ಪರ್ವತದಲ್ಲಿ ಚಿಗುರಿದ ಹಾಗೆ. ಕಲ್ಪವೃಕ್ಷದಂತೆ, ಮೂರ್ತೀಭವಿಸಿದ ವಸಂತನಂತೆ ಸಿಂಗರಿಸಿಕೊಂಡು ಇದ್ದರೂ ಮಸಣದ ಮಂಟಪದ ಹಾಗೆ ಭೀಕರ ಆಗಿ ಕಾಣುತ್ತ ಇದ್ದ.

ಸಿಟ್ಟಿನಿಂದ ಕೆಂಡ ಆದ ಕಣ್ಣುಗಳಿಂದ ವೈದೇಹಿಯನ್ನು ನೋಡಿದ ರಾವಣ. ಹಾವಿನಂತೆ ಬುಸುಗುಟ್ಟಿದ. "ಸೀತೆ, ಆ ರಾಮ ದರಿದ್ರ, ದುರ್ಮಾರ್ಗಿ. ಅವನನ್ನು ಅನುಸರಿಸುವುದೇ ನಿನಗೆ ವ್ರತವೋ? ತನ್ನ ತೇಜಸ್ಸಿನಿಂದ ಸೂರ್ಯ ಸಂಧ್ಯಾಕಾಲವನ್ನು ಅಳಿಯಿಸುವಂತೆ ನಿನ್ನನ್ನು ಈಗ ಧ್ವಂಸಮಾಡಿಬಿಡುತ್ತೇನೆ."

ಅಲ್ಲಿ ಕಾವಲು ಇದ್ದ ರಾಕ್ಷಸಿಯರ ಕಡೆ ತಿರುಗಿದ ರಾವಣ. ಆ ರಾಕ್ಷಸ ಸ್ತ್ರೀಯರು ಎಲ್ಲರೂ ಭಯಂಕರ ರೂಪದವರು. ಒಬ್ಬಳು ಒಕ್ಕಣ್ಣೆ. ಒಕ್ಕಿವಿ ಒಬ್ಬಳು. ಆಕಳ ಕಿವಿಯವಳು, ಆನೆಯ ಕಿವಿಯವಳು; ತಲೆಯ ಮೇಲೆ ಕಿವಿ,

ಜೋಲು ಕಿವಿಯುವಳು. ಕಿವಿಹರಕಿ ಒಬ್ಬಳು. ಆನೆಯ ಕಾಲು ಕುದುರೆಕಾಲು ಗೊರಸುಕಾಲು ಇದ್ದವರು. ಒಬ್ಬಳಿಗೆ ಕಾಲಿನಲ್ಲಿ ಜುಟ್ಟು. ಒಂಟಿಗಾಲು ಒಬ್ಬಳದು. ಕಾಲೇ ಇಲ್ಲ ಒಬ್ಬಳಿಗೆ. ದಪ್ಪ ತಲೆ, ದಪ್ಪ ಕತ್ತು, ಗುಡ್ಡದಂಥ ಮೊಲೆ, ಬಾನೆಹೊಟ್ಟೆ, ಗವಿಯಂಥ ಬಾಯಿ, ಅಗಲ ಕಣ್ಣು, ಉದ್ದ ನಾಲಗೆ, ನಾಲಗೆಯೇ ಇಲ್ಲ, ಮೂಗೇ ಇಲ್ಲ, ಹಂದಿಮುಖ, ಹಸುವಿನ ಮುಖ, ಸಿಂಹ ಮುಖ–ಹೀಗೆ ವಿಕಾರ ಭಯಂಕರರೂಪ ಒಬ್ಬೊಬ್ಬರದೂ. ಈ ರಾಕ್ಷಸಿಯರನ್ನು ಎಲ್ಲರನ್ನೂ ಕರೆದ ರಾವಣ.

"ರಾಕ್ಷಸ ಸ್ತ್ರೀಯರೆ, ನೀವು ಎಲ್ಲರೂ ಸೇರಿ ಏನು ಆದರೂ ಮಾಡಿ ಈ ಸೀತೆ ಬೇಗ ನನ್ನ ವಶ ಆಗುವಂತೆ ಮಾಡಬೇಕು. ನಯ ಭಯ ದಾನ, ದಂಡ, ಯಾವ ಉಪಾಯ ಆದರೂ ಸರಿ. ಅಂತೂ ಇವಳು ನನ್ನ ಕೈಸೇರಬೇಕು." ಹೀಗೆ ಅವರಿಗೆ ಅಪ್ಪಣೆ ಮಾಡಿದ.

ಅವನ ಕಾಮವೂ ಕೋಪವೂ ಉಕ್ಕಿ ತುಳುಕಿತು. ಮೈಮೇಲೆ ಎಚ್ಚರ ತಪ್ಪಿ ಸೀತೆಯ ಕಡೆ ನುಗ್ಗಿದ.

ಧ್ಯಾನಮಾಲಿನಿ ರಾವಣನ ಭಾರ್ಯೆಯರಲ್ಲಿ ಒಬ್ಬಳು. ತಟ್ಟನೆ ಮುಂದೆ ಬಂದು ರಾವಣನನ್ನು ತಡೆದು ಬಿಗಿದು ಅಪ್ಪಿದಳು. "ಮಹಾರಾಜ, ಇವಳು ಮನುಷ್ಯಸ್ತ್ರೀ. ನಿನಗೆ ಏನು ಸುಖ ಕೊಟ್ಟಾಳು? ಇಷ್ಟು ಕೋಪ ಬೇಡ. ಬಿಡು. ನನ್ನೊಡನೆ ಕ್ರೀಡಿಸು ಬಾ. ಯಥೇಷ್ಟ ಆಗಿ ಭೋಗಿಸು. ಈ ಸೀತೆ ಕಂದಿ ಕುಂದಿ ಬಣ್ಣಗೆಟ್ಟು ಇದಾಳೆ. ಅಳುತ್ತಾ ಇದಾಳೆ. ಹೀಗೆ ಅಳುವವಳ ಸಂಗಡ ಏನು ತಾನೆ ಅನುಭವಿಸುತ್ತೀಯೆ? ಮಹಾಪ್ರಭು, ನಿನ್ನಂಥ ರಾಜಾಧಿರಾಜ ಭುಜ ಬಲದಿಂದ ಗಳಿಸಿದ ಸರ್ವೋತ್ತಮ ಭೋಗಗಳನ್ನು ಅನುಭವಿಸಲು ಇವಳ ಹಣೆಯಲ್ಲಿ ಬರೆದೇ ಇಲ್ಲ ಬ್ರಹ್ಮ. ಬಯಕೆ ಇಲ್ಲದವಳನ್ನು ಭೋಗಿಸಿದರೆ ಬರೀ ಆಯಾಸ. ಬೇರೆ ಏನು ಸುಖ ಇದೆ? ತಾನೆತಾನಾಗಿ ಬಯಸಿಬಂದವಳನ್ನು ಭೋಗಿಸಿದರೆ ಸುಖ. ಅದರ ಸಂತೋಷವೇ ಸಂತೋಷ. ಈ ಮನುಷ್ಯಸ್ತ್ರೀಯ ಮೋಹವನ್ನು ಬಿಡು. ಬಯಸಿಬಂದ ನನ್ನನ್ನು ಭೋಗಿಸು" ಎಂದಳು.

ರಾವಣನ ಕೋಪ ಆರಿತು. ತಣ್ಣಗೆ ಆದ. ಅವಳ ಮಾತಿನಿಂದ ಮೇಘ ಸಮಾನ ಆದ ಆ ಮಹಾಪರಾಕ್ರಮಿ ರಾವಣನಿಗೆ ಹರ್ಷ ಆಯಿತು. ನಸುನಗುತ್ತ ಹಿಂದಿರುಗಿದ. ಅವನು ನಡೆದರೆ ಭೂಮಿ ನಡುಗಿತು. ಸೂರ್ಯನ ಹಾಗೆ ಹೊಳೆ

ಯುವ ತನ್ನ ಅರಮನೆಗೆ ಹಿಂದಿರುಗಿದ. ಅವನ ಜೊತೆಯಲ್ಲಿಯೆ ದೇವಗಂಧರ್ವ ಕನ್ಯೆಯರೂ ನಾಗಕನ್ಯೆಯರೂ ಅರಮನೆಗೆ ಬಂದರು.

ಪಾತಿವ್ರತ್ಯಧರ್ಮನಿರತೆ, ದೃಢಚಿತ್ತೆ ಸೀತೆಯನ್ನು ಗಡಗಡ ನಡುಗುವಂತೆ ಬೆದರಿಸಿ ಅರಮನೆಗೆ ಹಿಂದಿರುಗಿ ಬಂದ ರಾವಣ. ಆದರೆ ಅವನ ಮನಸ್ಸು ಎಲ್ಲವೂ ಅಲ್ಲಿಯೇ ಇತ್ತು. ಸೀತೆಯ ಮೋಹ ಅವನನ್ನು ಬಿಡಲಿಲ್ಲ.

೨೩

ಸೀತೆಯನ್ನು ಬೆದರಿಸಿದ. ರಾಕ್ಷಸ ಸ್ತ್ರೀಯರಿಗೆ ಅಪ್ಪಣೆ ಮಾಡಿದ ರಾವಣ. ಅವನು ಹೊರಟುಹೋದಮೇಲೆ ಆ ಭಯಂಕರ ಆಕಾರದ ರಾಕ್ಷಸ ಸ್ತ್ರೀಯರು ಎಲ್ಲರೂ ಸೀತೆಯ ಬಳಿಗೆ ಓಡಿಬಂದರು. ಪ್ರತಿಯೊಬ್ಬರೂ ಸಿಟ್ಟು ಮಾಡಿಕೊಂಡರು. ಬಹಳ ಕಠಿನ ಆಗಿ ಹೇಳಿದರು. “ಏ ಸೀತೆ, ರಾವಣಾಸುರ ಎಂದರೆ ಸಾಮಾನ್ಯ ಅಲ್ಲ. ಪುಲಸ್ತ್ಯಬ್ರಹ್ಮನ ವಂಶದಲ್ಲಿ ಹುಟ್ಟಿದವನು. ಮಹಾಪರಾಕ್ರಮಶಾಲಿ. ಮಹಾನುಭಾವ. ಅಂಥ ದಶಕಂಠನಿಗೆ ಹೆಂಡತಿ ಆಗುವುದು ಎಂದರೆ ನಿನಗೆ ಇಷ್ಟ ಇಲ್ಲವೆ? ಏಕೆ?”

ಕಣ್ಣು ಕೆಂಪಗೆ ಮಾಡಿಕೊಂಡು ಹೇಳಿದಳು ಏಕಜಟೆ. “ನಮ್ಮ ಪ್ರಭು ರಾವಣ ಯಾರು ಗೊತ್ತೆ? ಪ್ರಜಾಪತಿಗಳು ಆರು ಮಂದಿ. ನಾಲ್ಕನೆಯವನು ಪುಲಸ್ತ್ಯ. ಆತ ಬ್ರಹ್ಮಮಾನಸಪುತ್ರ. ಮಹಾಪ್ರಭಾವಶಾಲಿ. ಬ್ರಹ್ಮನಿಗೆ ಸಮಾನ ಅವನ ತೇಜಸ್ಸು. ಮಹರ್ಷಿ. ಆತನ ಮಗ ರಾವಣ. ರಾವಣ ಶತ್ರು-ರಾವಣ. ನಮ್ಮ ಚಕ್ರವರ್ತಿ. ಇಂಥವನಿಗೆ ಹೆಂಡತಿ ಆಗಲು ಒಲ್ಲೆಯಾ? ಹಟ ಮಾಡಬೇಡ. ನಿನ್ನ ಹಿತಕ್ಕೇ ಹೇಳುತ್ತೇನೆ. ಒಪ್ಪಿಕೋ.”

ಇನ್ನೊಬ್ಬಳು ಬೆಕ್ಕಿನ ಕಣ್ಣಿನ ರಾಕ್ಷಸಿ. ಹರಿಜಟೆ. ಕಣ್ಣು ತಿರುಗಿಸುತ್ತ ಕೋಪದಿಂದ ಹೇಳಿದಳು: “ಮೂವತ್ತುಮೂರು ಕೋಟಿ ದೇವತೆಗಳನ್ನೂ ದೇವೇಂದ್ರನನ್ನೂ ಸೋಲಿಸಿದ ವೀರ ರಾವಣ. ರಾಕ್ಷಸೇಂದ್ರ. ಅವನಿಗೆ ಹೆಂಡತಿ ಆಗಲು ಒಲ್ಲೆಯಾ? ಚೆನ್ನಾಯಿತು.”

ಸಿಟ್ಟಿನಿಂದ ವೈಮರೆತಳು ಪ್ರಘಸೆ. ಗದರಿಸಿದಳು. “ನಮ್ಮ ರಾವಣ ಸಾಮಾನ್ಯನೆ? ಯುದ್ಧದಲ್ಲಿ ಹಿಂದಿರುಗಿದವನೇ ಅಲ್ಲ. ಮಹಾ ಪರಾಕ್ರಮಿ.

ಶೂರ. ಹುಚ್ಚಿ, ಅವನಿಗೆ ಹೆಂಡಿರು ಇಲ್ಲ ಎಂದು ನಿನ್ನನ್ನು ಅಂಗಲಾಚುತ್ತಾನೆಯೆ? ಸಾವಿರಾರು ಮಂದಿ ಇದಾರೆ ಹೆಂಡಿರು. ಎಲ್ಲರಿಗಿಂತ ಹೆಚ್ಚು ಪ್ರೀತಿ ಪಾತ್ರಳು ಮಂಡೋದರಿ. ಪಟ್ಟಮಹಿಷಿ. ಅವಳನ್ನೂ ಕಡೆಗಣಿಸಿ ನಿನ್ನನ್ನು ಬಯಸಿ ಇದಾನೆ. ಅವನ ಅಂತಃಪುರದಲ್ಲಿ ಸಾವಿರಾರು ಮಂದಿ ಸ್ತ್ರೀರತ್ನಗಳು ಇದ್ದರೂ ನಿನ್ನನ್ನೇ ಬಯಸಿದಾನೆ. ಗೊತ್ತೆ?"

ವಿಕಟೆ ಬಂದಳು. "ಏ ಸೀತೆ, ದೇವದಾನವಗಂಧರ್ವರು ಯುದ್ಧ ಮಾಡಲಾರದೆ ಓಡಿಹೋದರು ರಾವಣನ ಏಟನ್ನು ತಡೆಯಲಾರದೆ. ಒಂದು ಅಲ್ಲ, ಹಲವು ಸಲ. ಅಂಥ ಬಲಾಢ್ಯ ಆತ ತಾನೇ ಒಲಿದು ಬಂದ ನಿನ್ನ ಪಕ್ಕದಲ್ಲಿ ನಿಲ್ಲಲು. ತಿಳಿಗೇಡಿ, ಸಮಸ್ತ ಸಂಪತ್ಸಮೃದ್ಧ, ಮಹಾನುಭಾವ, ಮಹಾಪರಾಕ್ರಮಿ, ರಾಕ್ಷಸರು ಎಲ್ಲರಿಗೂ ಪ್ರಭು. ಇಂಥವನ ಹೆಂಡತಿ ಆಗಲು ಇಷ್ಟ ಇಲ್ಲವೆ ನಿನಗೆ? ಏಕೆ?"

ಆಮೇಲೆ ದುರ್ಮುಖಿಯ ಸರತಿ. "ಸೂರ್ಯ ಬೆದರಿ ಬಿಸಿಲು ತಗ್ಗಿಸಿಕೊಂಡು ಇದಾನೆ. ರಾವಣನಿಗೆ ಹೆದರಿ ಗಾಳಿ ಬಿರುಸು ಆಗಿ ಬೀಸದು. ಇಂಥ ರಾವಣೇಶ್ವರನ ಭಾರ್ಯೆ ಆಗಲು ಒಪ್ಪದೆ ಇರುವೆಯಲ್ಲ. ಸುಭ್ರೂ, ರಾವಣನಿಗೆ ಹೆದರಿ ಗಿಡಬಳ್ಳಿ ಹೂಮಳೆ ಕರೆಯುತ್ತ ಇವೆ. ಆತ ಕೋರಿದರೆ ಮಳೆ ಸುರಿಯುತ್ತದೆ ನೋಡ. ಈ ರಾಕ್ಷಸೇಶ್ವರ ರಾಜಾಧಿರಾಜ. ಅವನ ಹೆಂಡತಿ ಆಗಲು ಮನಸ್ಸು ಒಪ್ಪಲಿಲ್ಲವೆ? ಸುಂದರಾಂಗಿ, ಇದ್ದದ್ದನ್ನು ಇದ್ದಂತೆ ಹೇಳಿದೇನೆ. ನಾನು ಹೇಳಿದ ಹಾಗೆ ಕೇಳು. ಇಲ್ಲದೆ ಇದ್ದರೆ ನಿನ್ನ ಜೀವ ಉಳಿಯುವುದು ಕಷ್ಟ."

೨೪

ಆ ವಿಕಾರಮುಖದ ಘೋರಸ್ವರೂಪದ ರಾಕ್ಷಸಿಯರ ನಿರ್ಬಂಧ ಮಿತಿ ಮೀರಿತು. ಎಲ್ಲರೂ ಸೀತಾದೇವಿಯ ಸುತ್ತಲೂ ಗುಂಪು ಕೂಡಿದರು. "ಸೀತೆ, ರಾವಣಾಸುರನ ಅಂತಃಪುರ ಸಮಸ್ತ ಪ್ರಾಣಿಗಳಿಗೂ ರಮ್ಯ. ಅತ್ಯುತ್ತಮ ಶಯ್ಯೆಗಳು ಇವೆ. ಅಲ್ಲಿ ಇರುವುದು ನಿನಗೆ ಏಕೆ ಬೇಡ? ಹುಚ್ಚಿ, ನೀನು ಮಾನವಾಂಗನೆಯೇ ನಿಜ. ಮನುಷ್ಯಳು ಆದಮಾತ್ರಕ್ಕೆ ಮನುಷ್ಯನ ಹೆಂಡತಿ

ಆಗುವುದೇ ಒಂದು ದೊಡ್ಡದೆ? ಉಂಟೆ? ರಾಮನ ಮೇಲೆ ಮನಸ್ಸು ಬೇಡ. ಹಿಂತಿರುಗಿಸಿಕೋ. ಇನ್ನು ನೀನು ರಾಮನ ಮುಖವನ್ನು ನೋಡಲಾರೆ. ಅವರ ಆಸೆ ಬಿಡು. ರಾವಣಾಸುರ ಮೂರು ಲೋಕದ ಐಶ್ವರ್ಯಕ್ಕೂ ಒಡೆಯ. ರಾಕ್ಷಸರ ಪ್ರಭು. ಅವನನ್ನು ಬಂದು ಕೈಹಿಡಿದು ಮನಬಂದಂತೆ ಸುಖಿಸ ಬಾರದೆ?

"ಮಂಗಳಾಂಗಿ, ಕುಂದು ಕಾಣದ ಚೆಲುವು ನಿನ್ನದು. ಮನುಷ್ಯ ಜಾತಿಯಲ್ಲಿ ಹುಟ್ಟಿ ನೀನು ಮನುಷ್ಯನನ್ನೇ ಬಯಸುತ್ತ ಇದೀಯೆ. ನೀನು ಬಯಸುವ ಆ ಮನುಷ್ಯ, ಆ ರಾಮ, ರಾಜ್ಯಭ್ರಷ್ಟ, ಭಗ್ನಾಶ, ದೀನ, ದರಿದ್ರ. ಇಂಥ ಮರುಳು ಏಕೆ ನಿನಗೆ?" ಎಂದರು.

ಜಾನಕಿ ಅವರ ಮಾತನ್ನು ಕೇಳಿದಳು. ಆ ಕಮಲಾಕ್ಷಿಯ ಕಣ್ಣು ತುಂಬಾ ನೀರು ತುಂಬಿತು. ರಾಕ್ಷಸ ಸ್ತ್ರೀಯರಿಗೆ ಹೇಳಿದಳು: "ಅಸಹ್ಯ ಲೋಕವಿರುದ್ಧ ಆದ ಮಾತನ್ನು ಆಡುತ್ತ ಇದೀರಿ. ಇದು ಮಹಾಪಾಪ ಎನಿಸಲಿಲ್ಲವೆ ನಿಮ್ಮ ಮನಸಿಗೆ? ಮನುಷ್ಯ ಜಾತಿಯಲ್ಲಿ ಹುಟ್ಟಿ ರಾಕ್ಷಸನ ಹೆಂಡತಿ ಆಗುವುದು ಸರಿ ಅಲ್ಲ. ನೀವು ಎಲ್ಲರೂ ಸೇರಿ ನನ್ನನ್ನು ತಿಂದು ಹಾಕಿದರೂ ಚಿಂತೆ ಇಲ್ಲ. ನಿಮ್ಮ ಮಾತಿನಂತೆ ನಡೆಯಲಾರೆ. ಭಾಗ್ಯ ಹೀನನೋ ರಾಜ್ಯಭ್ರಷ್ಟನೋ ನನ್ನ ಕೈಹಿಡಿದ ಗಂಡನೇ ನನಗೆ ಶ್ರೇಷ್ಠ. ಸುವರ್ಚಲಾದೇವಿಗೆ ಸೂರ್ಯನಲ್ಲಿ ದೃಢಾನುರಾಗ. ನನಗೂ ರಾಮನಲ್ಲಿ ಹಾಗೆಯೇ.

"ಶಚೀದೇವಿ ದೇವೇಂದ್ರನನ್ನು ಅನುಸರಿಸಿ ಹೋಗಲಿಲ್ಲವೆ? ವಸಿಷ್ಠನನ್ನು ಅರುಂಧತಿ, ಚಂದ್ರನನ್ನು ರೋಹಿಣಿ, ಅಗಸ್ತ್ಯನನ್ನು ಲೋಪಾಮುದ್ರೆ, ಚ್ಯವನ ಋಷಿಯನ್ನು ಸುಕನ್ಯೆ ಅನುಸರಿಸಲಿಲ್ಲವೆ? ಸಾವಿತ್ರೀದೇವಿ ಸತ್ಯವಂತನನ್ನು ಶ್ರೀಮತಿ ಕಪಿಲ ಋಷಿಯನ್ನು ಮದಯಂತಿ ಸೌದಾಸನನ್ನು ಕೇಶಿನಿ ದೇವಿ ಸಗರನನ್ನು ಭೀಮಪುತ್ರಿ ದಮಯಂತಿ ನಳಮಹಾರಾಜನನ್ನು ಹೇಗೆ ಅನುಸರಿಸಿ ನಡೆದರೋ ನಾನೂ ಹಾಗೆಯೇ ಇಕ್ಷ್ವಾಕುಕುಲಶ್ರೇಷ್ಠ ಆದ ರಾಮಪ್ರಭುವನ್ನು ಅನುಸರಿಸುತ್ತೇನೆ" ಎಂದಳು.

ಆ ರಾಕ್ಷಸಿಯರಿಗೆ ಸಿಟ್ಟು ಹೆಚ್ಚಿತು. ಮೈಮರೆತರು. ಅವರೆಲ್ಲರೂ ರಾವಣಾಸುರನ ಕೈಗೊಂಬೆಗಳು. ಮತ್ತೆ ಕಠಿನ ಆಗಿ ಸೀತೆಯನ್ನು ಗದರಿಸಿ

ಬೆದರಿಸಿದರು. ಶಿಂಶುಪಾವೃಕ್ಷದ ಮೇಲೆ ಅಡಗಿ ಕುಳಿತು ಇದ್ದ ಹನುಮಂತ ಸದ್ದು ಮಾಡದೆ ಎಲ್ಲವನ್ನೂ ಕೇಳಿದ. ಆ ರಾಕ್ಷಸಿಯರನ್ನು ನೋಡಿದ. ಸೀತಾದೇವಿ ಹೆದರಿ ಗಡಗಡ ನಡುಗುತ್ತ ಇದ್ದಾಳೆ. ಎಲ್ಲರೂ ಸೀತೆಯನ್ನು ಮುತ್ತಿಕೊಂಡು ಇದ್ದಾರೆ. ಕೆಂಪಗೆ ಜೋಲಾಡುವ ತಮ್ಮ ತುಟಿಗಳನ್ನು ಕಚ್ಚಿಕೊಂಡು ಇದ್ದಾರೆ. ಬಹಳ ಸಿಟ್ಟು. ಕೈಗೆ ಗಂಡುಗೊಡಲಿಗಳನ್ನು ಎತ್ತಿಕೊಂಡರು. "ರಾವಣಾಸುರನ ಹೆಂಡತಿ ಆಗುವ ಭಾಗ್ಯ ಇವಳಿಗೆ ಎಲ್ಲಿಯದು? ಇವಳು ಯೋಗ್ಯಳು ಅಲ್ಲ." ಹೀಗೆ ಅವಳನ್ನು ಬೆದರಿಸಿದರು.

ಜಾನಕಿ ಹೆದರಿದಳು. ಕಂಬನಿಗರೆದಳು. ಕಣ್ಣೀರನ್ನು ಒರೆಸಿಕೊಳ್ಳುತ್ತ ಹನುಮಂತ ಕುಳಿತು ಇದ್ದ ಶಿಂಶುಪಾವೃಕ್ಷದ ಬಳಿಗೆ ಹೋದಳು. ಆಕೆಯ ಹಿಂದೆಯೇ ಆ ರಾಕ್ಷಸಸ್ತ್ರೀಯರೂ. ಸುತ್ತಲೂ ಮುತ್ತಿಕೊಂಡರು ಮತ್ತೆ. ಸೀತೆ ದುಃಖಸಾಗರದಲ್ಲಿ ಮುಳುಗಿಹೋದಳು. ಮಾಸಿದ ಬಟ್ಟೆ ಕಂದಿದ ಮುಖ ಸೊರಗಿಹೋದ ಮೈಯ ಸೀತೆಯನ್ನು ಮತ್ತೆ ಹೆದರಿಸಿದರು.

ವಿಕಾರರೂಪದ ಭಯಂಕರ ಕಣ್ಣಿನ, ಅಟ್ಟೆ ಆದ ಹೊಟ್ಟೆಯ ವಿನತೆ ಬಂದಳು. "ಸೀತೆ, ನಿನ್ನ ಗಂಡನ ಮೇಲಣ ಅಸಾಧಾರಣ ಪ್ರೀತಿಯನ್ನು ತೋರಿಸಿದ್ದು ಆಯಿತಲ್ಲ. ಇನ್ನು ಸಾಕು. ಶೋಭನಾಂಗಿ, ಯಾವುದನ್ನೂ ಅತಿ ಮಾಡಬಾರದು. ದುಃಖದ ಪಾಲು ಆಗುತ್ತೀಯೆ. ಮನುಷ್ಯಜಾತಿಗೆ ತಕ್ಕ ಹಾಗೆ ನಡೆದೆ. ನಿನ್ನ ಪಾತಿವ್ರತ್ಯಕ್ಕೆ ನಾವು ಎಲ್ಲ ಮೆಚ್ಚಿದೇವೆ. ನಿನಗೆ ಒಳ್ಳೆಯದು ಆಗಲಿ. ಒಂದು ಮಾತನ್ನು ಹೇಳುತ್ತೇನೆ, ಕೇಳು. ಹೇಳಿದ ಹಾಗೆ ಮಾಡು. ರಾವಣನನ್ನು ವರಿಸು. ಆತ ರಾಕ್ಷಸರು ಎಲ್ಲರಿಗೂ ಒಡೆಯ. ಮಹಾಪರಾಕ್ರಮಶಾಲಿ. ಬಹಳ ಚೆಲುವ. ದೇವೇಂದ್ರನಿಗೆ ಸಮ. ಮಹಾ ಚತುರ. ಮಹಾದಾನಿ. ಪ್ರಿಯದರ್ಶನ. ರಾಮ ಕೇವಲ ಮನುಷ್ಯ. ದುಃಖದ ಪಾಲು ಆದವನು. ಅವನನ್ನು ಬಿಡು. ರಾವಣನನ್ನು ಹಿಡಿ.

"ವೈದೇಹಿ, ಇನ್ನುಮೇಲೆ ನೀನೇ ಸಮಸ್ತ ಲೋಕಗಳಿಗೂ ಅಧೀಶ್ವರಿ. ದಿವ್ಯಾಭರಣಗಳನ್ನು ಧರಿಸು. ದಿವ್ಯಗಂಧವನ್ನು ತೊಡೆದುಕೊ. ಮಂಗಳಾಂಗಿ, ಅಗ್ನಿಗೆ ಸ್ವಾಹಾದೇವಿ, ದೇವೇಂದ್ರನಿಗೆ ಶಚೀದೇವಿ, ರಾವಣಾಸುರನಿಗೆ ನೀನು. ಆ ರಾಮನ ಆಯುಸು ಮುಗಿಯಿತು. ಅವನಿಂದ ನಿನಗೆ ಏನು ಆಗಬೇಕು?

ನಾವು ಹೇಳಿದ ಮಾತನ್ನು ಕೇಳಲಿಲ್ಲವೋ ಈ ಗಳಿಗೆಯಲ್ಲೇ ನಾವು ನಿನ್ನನ್ನು ತಿಂದುಹಾಕಿಬಿಡುತ್ತೇವೆ" ಎಂದಳು.

ಹೊಟ್ಟೆಯನ್ನೂ ಮೊಲೆಗಳನ್ನೂ ಜೋಲಾಡಿಸುತ್ತ ಬಂದಳು ವಿಕಟೆ. ಮುಷ್ಟಿ ಹಿಡಿದು ಅರ್ಭಟಿಸಿ ಕೂಗುತ್ತ ಹೇಳಿದಳು. "ದುಷ್ಟೆ, ಬಾಯಿಗೆ ಬಂದ ಅಪ್ರಿಯ ವಾಕ್ಯಗಳನ್ನು ಆಡಿದರೂ ನೀನು ಸಹಿಸಿಕೊಂಡು ಇದ್ದೆವು ನಾವು. ದಯೆ ತಾಳ್ಮೆ ತೋರಿದೆವು. ಇನ್ನು ಸಾಧ್ಯ ಇಲ್ಲ. ಕಾಲೋಚಿತ ಆಗಿ ನಿನಗೆ ಹಿತ ಆಗಲಿ ಎಂದು ನಾವು ಎಷ್ಟು ಹೇಳಿದರೂ ನೀನು ಕೇಳಲು ಒಲ್ಲೆ. ಹುಚ್ಚಿ, ಇಲ್ಲಿಂದ ನಿನಗೆ ಬಿಡುಗಡೆ ಇಲ್ಲ. ಇದು ರಾವಣಾಂತಃಪುರ. ನಮ್ಮ ಸರ್ಪ-ಕಾವಲು. ಮಹಾಸಾಗರವನ್ನು ದಾಟಿ ಈ ಪಟ್ಟಣಕ್ಕೆ ಯಾರೂ ಬರಲಾರರು. ಸಾಕ್ಷಾತ್ ದೇವೇಂದ್ರನೇ ಬಂದರೂ ನಿನ್ನನ್ನು ಬಿಡಿಸಲಾರ. ಮೈಥಿಲಿ, ನಿನಗೆ ಒಳ್ಳೆಯದನ್ನು ಕೋರಿ ಹೇಳುತ್ತೇನೆ ಕೇಳು. ಹೀಗೆ ಕಣ್ಣೀರು ಸುರಿಸಿ ಸುರಿಸಿ ಏನು ಪ್ರಯೋಜನ? ಕೆಲಸಕ್ಕೆ ಬಾರದ ಈ ದುಃಖವನ್ನು ಬಿಡು. ವರಿಸು ರಾವಣನನ್ನು. ಸಂತೋಷದಿಂದ ಇರು. ಮನಸಿಗೆ ಬಂದಂತೆ ರಾವಣನ ಸಂಗಡ ಕ್ರೀಡಿಸು.

"ಭೀರು, ಹೆಂಗಸರಿಗೆ ಯೌವನ ಸ್ಥಿರ ಅಲ್ಲ. ನಿನಗೆ ತಿಳಿಯದೆ? ನಿನ್ನ ಯೌವನ ಕಳೆಯುವ ಮೊದಲೇ ಸಮಸ್ತ ಸುಖಗಳನ್ನೂ ಅನುಭವಿಸಿಬಿಡು. ಮದಿರಾಕ್ಷಿ, ಮನೋಹರ ಈ ತೋಟಗಳು. ಬಲುರಮ್ಯ ಈ ಪರ್ವತಪ್ರದೇಶಗಳು. ರಾಕ್ಷಸೇಂದ್ರನನ್ನು ಕೂಡಿ ಸಂತೋಷದಿಂದ ವಿಹರಿಸು. ಚೆಲುವೆ, ಏಳು ಸಾವಿರ ಮಂದಿ ಹೆಂಗಸರು ನೀನು ಹೇಳಿದಂತೆ ಕೇಳುತ್ತಾರೆ. ನಿನ್ನ ಸೇವೆಮಾಡುತ್ತಾರೆ. ಸಮಸ್ತ ರಾಕ್ಷಸಲೋಕದ ಪ್ರಭು ರಾವಣ. ಆತನನ್ನು ಒಪ್ಪಿಕೋ.

"ನಾನು ಹೇಳಿದಂತೆ ಮಾಡದೆ ಹೋದರೆ ನಿನ್ನ ಗುಂಡಿಗೆಯನ್ನು ಕಿತ್ತು ತಿನ್ನುತ್ತೇನೆ."

ಕೋಪದಿಂದ ಶೂಲ ಒಂದನ್ನು ತಿರುಗಿಸುತ್ತ ಬಂದಳು ಮತ್ತೊಬ್ಬ ರಾಕ್ಷಸಿ ಚಂಡೋದರಿ. "ರಾಕ್ಷಸಿಯರೆ, ಜಿಂಕೆಯಂತೆ ಚಂಚಲ ಆದ ಕಣ್ಣು, ಭಯದಿಂದ ನಡುಗುತ್ತ ಇದ್ದ ಇವಳ ಮೊಲೆ, ಇವಳನ್ನು ರಾವಣಾಸುರ ಎತ್ತಿಕೊಂಡು ಬಂದಾಗಲೇ ನೋಡಿದೆ ನಾನು. ಇವಳ ಹೃದಯವನ್ನೂ ಅದಕ್ಕೆ

ಆಧಾರ ಆದ ತಾವರೆಮೊಗ್ಗಿನಂಥ ಮಾಂಸಖಂಡಗಳನ್ನೂ ಇವಳ ಪ್ಲೀಹವನ್ನೂ ನರಗಳನ್ನೂ ಮೆದುಳನ್ನೂ ಆಗಲೇ ತಿನ್ನಬೇಕು ಎಂದುಕೊಂಡೆ" ಎಂದಳು.

ಆಗ ಪ್ರಘಸೆ ಮಾತಾಡಿದಳು: "ಇವಳ ಮನಸ್ಸು ಬಹಳ ಕಠಿನ. ಈಗಲೇ ಕತ್ತು ಹಿಸುಕಿಬಿಡುತ್ತೇನೆ. ಏಕೆ ತಡ? ಈ ಮನುಷ್ಯಸ್ತ್ರೀ ಸತ್ತಳು ಎಂದು ದೊರೆಗೆ ತಿಳಿಸಿಬಿಡೋಣ. ನೀವೇ ತಿಂದುಬಿಡಿ ಎನ್ನುತ್ತಾನೆ."

ಅಜಾಮುಖಿ ಒಬ್ಬ ರಾಕ್ಷಸಿ. "ಈ ಸೀತೆಯನ್ನು ಕೊಂದು ಸಮ ಆಗಿ ಹಂಚಿಕೊಳ್ಳೋಣ. ಆಮೇಲೆ ನಮ್ಮಲ್ಲಿ ಜಗಳ ಬರಬಾರದು. ಈ ಮಾಂಸಕ್ಕೆ ನಂಜಿಕೊಳ್ಳಲು ಬಗೆಬಗೆಯ ಲೇಹ್ಯಪೇಯಗಳನ್ನು ತನ್ನಿ" ಎಂದಳು.

ಅವಳು ಹೇಳಿದ್ದೇ ಸರಿ ಎಂದು ಶೂರ್ಪಣಖಿ ಹೇಳಿದಳು. "ಮದ್ಯವನ್ನು ತನ್ನಿ. ಎಲ್ಲ ದುಃಖವೂ ದಿಗಿಲೂ ಹೋಗಿ ಉತ್ಸಾಹ ಹುಟ್ಟಿಸುತ್ತದೆ. ಮನುಷ್ಯ ಮಾಂಸವನ್ನು ತಿಂದು ಲಂಕಾನಗರದ ಪಶ್ಚಿಮದ್ವಾರದ ನಿಕುಂಭಿಲಾದೇವತೆಯ ಪ್ರೀತ್ಯರ್ಥ ನರ್ತನಮಾಡೋಣ."

ಘೋರ ರಾಕ್ಷಸಿಯರು ಬೆದರಿಸಿದ್ದೂ ಬೆದರಿಸಿದ್ದೇ. ಸೀತೆ ದೇವಕನ್ಯೆ. ಆಕೆಯ ಧೈರ್ಯ ಉಡುಗಿತು. ಅಂಜಿದಳು. ಅತ್ತಳು.

೨೫

ಜಾನಕಿ ಗದ್ಗದಕಂಠೆ ಆದಳು. ಭಯದಿಂದ ನಡುಗಿದಳು. ಕ್ರೂರ ಸ್ವಭಾವದ ರಾಕ್ಷಸಿಯರ ಮಾತು ಅಷ್ಟು ಕಠಿನ. "ರಾಕ್ಷಸಸ್ತ್ರೀಯರೆ, ಮನುಷ್ಯಸ್ತ್ರೀ ರಾಕ್ಷಸನ ಹೆಂಡತಿ ಆಗುವುದು ತರ ಅಲ್ಲ. ನಿಮ್ಮ ಮಾತನ್ನು ಕೇಳಲಾರೆ. ಎಲ್ಲರೂ ಸೇರಿ ನನ್ನನ್ನು ತಿಂದರೆ ತಿನ್ನಿ" ಎಂದಳು ಸೀತೆ.

ರಾವಣಾಸುರ ಹೆದರಿಸಿದ. ರಾಕ್ಷಸಸ್ತ್ರೀಯರು ಸುತ್ತಲೂ ಮುತ್ತಿಕೊಂಡು ಬೆದರಿಸಿದರು. ಮನಸಿಗೆ ತುಂಬಾ ಸಂಕಟ ಆಯಿತು ಸೀತೆಗೆ. ದೇವಕನ್ಯೆಗೆ ಸಮಾನ ಆದ ಆಕೆಗೆ ಬಹಳ ವ್ಯಥೆ ಆಯಿತು. ತನ್ನ ಹಿಂಡನ್ನು ಅಗಲಿ ಬಂದು ಕಾಡಿನಲ್ಲಿ ತೋಳದ ಕೈಗೆ ಸಿಕ್ಕ ಜಿಂಕೆಯ ಹಾಗೆ ಆಯಿತು ಆಕೆಯ ಸ್ಥಿತಿ. ತೋಳಗಳ ಗುಂಪೇ ಮುತ್ತಿಕೊಂಡ ಹಾಗೆ. ಆಕೆಯ ಮನಸ್ಸು ತಲ್ಲಣಿಸಿತು. ಮೈ ಮುದುಡಿಕೊಂಡಳು. ಅಂಜಿಕೆ. ಗಡಗಡ ನಡುಗಿದಳು. ಹನುಮಂತ

ಕುಳಿತು ಇದ್ದ ಶಿಂಶುಪಾವೃಕ್ಷಕ್ಕೆ ಹೆಣೆದುಕೊಂಡು ಇದ್ದ ಅಶೋಕವೃಕ್ಷದ ಕೊಂಬೆಯನ್ನು ಹಿಡಿದುಕೊಂಡು ನಿಂತಳು. ತನ್ನ ಪತಿ ರಾಮನನ್ನು ನೆನೆದಳು. ಮನಸಿಗೆ ನೆಮ್ಮದಿ ಇಲ್ಲ. ಕಣ್ಣೀರಿಗೆ ಬಿಡುವು ಇಲ್ಲ. ಕಂಬನಿ ಧಾರೆಧಾರೆ ಆಗಿ ಹರಿದು ಆಕೆಯ ಎದೆಯನ್ನು ತೋಯಿಸಿದೆ. ಈ ದುಃಖಕ್ಕೆ ಕೊನೆಯೆ ಇಲ್ಲವೆ?

ಮುಖ ಬಣ್ಣಗೆಟ್ಟಿತು. ರಾಕ್ಷಸಸ್ತ್ರೀಯರ ಬೆದರಿಕೆಗೆ ಸೀತೆ ಬಹಳ ಅಂಜಿದಳು. ಗಡಗಡ ನಡುಗಿದಳು. ಬಿರುಗಾಳಿಗೆ ಬಾಳೆಯ ಗಿಡ ಉರುಳಿ ಬೀಳುವಂತೆ ನೆಲದ ಮೇಲೆ ಬಿದ್ದಳು. ಆಕೆಯ ಜಡೆ ಬಹಳ ಉದ್ದ, ಬಹಳ ಅಗಲ. ಹೊರಳಾಡುವಾಗ ಮೆಲ್ಲನೆ ಸರಿಯುವ ಹಾವಿನ ಹಾಗೆ ಕಾಣಿಸಿತು ಜಡೆ. ನಿಟ್ಟುಸಿರು ಬಿಡುತ್ತಾಳೆ. ಕಂಬನಿಗರೆಯುತ್ತಾಳೆ. ಗಳಗಳ ಅಳುತ್ತಾಳೆ. ದುಃಖ, ಸಂಕಟ, ಭಯ, ಅಗಲಿಕೆಯ ವ್ಯಥೆ. ಒಮ್ಮೆ ರಾಮಾ ಎಂದು ಕೂಗುತ್ತಾಳೆ. ಲಕ್ಷ್ಮಣಾ ಎನ್ನುತ್ತಾಳೆ ಒಮ್ಮೆ. ಕೌಸಲ್ಯೇ ಸುಮಿತ್ರೇ ಎಂದು ಮೊರೆ ಇಡುತ್ತಾಳೆ ಮತ್ತೊಮ್ಮೆ.

"ಹಿರಿಯರು ಹೇಳುವ ಮಾತು ನಿಜ. ಗಂಡಸೋ ಹೆಂಗಸೋ ಕಾಲ ಒದಗಿಬಾರದೆ ಯಾರಿಗೂ ಸಾವು ಇಲ್ಲ. ನನಗೆ ಕಾಲ ಬರಲಿಲ್ಲ. ಈ ರಾಕ್ಷಸಿಯರ ಬಾಧೆ. ರಾಮನ ಅಗಲಿಕೆಯ ಸಂಕಟ. ಆದರೂ ಇನ್ನೂ ಬದುಕಿ ಇದೇನಲ್ಲ. ನಾನು ಪಾಪಿ, ಅಲ್ಪಪುಣ್ಯೆ. ಸಮುದ್ರಮಧ್ಯದಲ್ಲಿ ಬಿರುಗಾಳಿಯು ಹೊಡೆತಕ್ಕೆ ಭಾರ ಹೆಚ್ಚು ಆದ ಹಡಗು ಮುಳುಗಿಹೋಗದೆ? ಈ ರಾಕ್ಷಸಹೆಂಗಸರ ನಡುವೆ ನಾನು ಅನಾಥೆ. ಏನು ಮಾಡಲಿ? ನಾಶ ಆಗುತ್ತ ಇದೇನೆ. ನನ್ನ ಗಂಡ ಶ್ರೀರಾಮನನ್ನು ಅಗಲಿ ಪ್ರವಾಹದ ವೇಗಕ್ಕೆ ಕುಸಿದುಬೀಳುವ ನದಿಯ ದಡಗಳ ಹಾಗೆ ಕುಸಿದು ಸವೆದುಹೋಗುತ್ತ ಇದೇನೆ.

"ಪ್ರಾಣನಾಥ ರಾಮ, ನಿನ್ನ ಕಮಲದ ಕಣ್ಣು, ಸಿಂಹದ ನಡಿಗೆ, ಸವಿನುಡಿ, ಸದ್ಗುಣಸಂಪತ್ತಿ, ಕೃತಜ್ಞಸ್ವಭಾವ! ನಿನ್ನನ್ನು ನೋಡುವ ಭಾಗ್ಯ ಇಲ್ಲವೆ ನನಗೆ? ರಾಮಪ್ರಭು, ಪುಣ್ಯಶಾಲಿಗಳಿಗೆ ಆ ಭಾಗ್ಯ. ತೀಕ್ಷ್ಣ ವಿಷವನ್ನು ಕುಡಿದವರು ಬದುಕುತ್ತಾರೆಯೆ? ಆತ್ಮವೇತ್ತ ಶ್ರೀರಾಮನನ್ನು ಅಗಲಿ ನಾನು ಬದುಕಲಾರೆ. ಏನು ಪಾಪ ಮಾಡಿದೇನೋ ಹಿಂದಿನ ಜನ್ಮದಲ್ಲಿ. ಎಂಥ ಪಾಪ ಮಾಡಿದೆನೋ. ಈಗ ಈ ಘೋರ ಭಯಂಕರ ದುಃಖ ಬಂದು ಇದೆ

ನನಗೆ. ಇಂಥ ಮಹಾದುಃಖದ ಭಾರವನ್ನು ತಡೆಯಲಾರೆ. ಪ್ರಾಣಬಿಡುವುದೇ ಸರಿ. ಬದುಕಿ ಇದ್ದು ಏನು ಪ್ರಯೋಜನ? ರಾಮನನ್ನು ಸೇರಲಾರೆ ನಾನು.

"ಸಾಯಲೂ ಸ್ವಾತಂತ್ರ್ಯ ಇಲ್ಲವಲ್ಲ ನನಗೆ. ಸುತ್ತಲೂ ಈ ರಾಕ್ಷಸ ಸ್ತ್ರೀಯರು ಕಣ್ಣಲ್ಲಿ ಕಣ್ಣಿಟ್ಟು ಕಾವಲು ಕಾಯುತ್ತ ಇದಾರೆ. ಇಷ್ಟಬಂದಾಗ ಸಾಯಲಿಕ್ಕೂ ಸಾಧ್ಯ ಇಲ್ಲದ ಈ ಬದುಕಿನಿಂದ ಏನು ಪ್ರಯೋಜನ? ಇಂಥ ಪರಾಧೀನ ಬಾಳು ಸುಡಲಿ. ಛೀಛೀ, ಎಂಥ ಮನುಷ್ಯಜನ್ಮ ಇದು!"

೨೬

ಸೀತೆ ಸುಕುಮಾರಿ. ಬುದ್ಧಿಗೆಟ್ಟ ಹುಚ್ಚಿ, ಮೈಮರೆತವಳು ಆಗಿ ತಲೆ ತಗ್ಗಿಸಿಕೊಂಡು ಧಾರೆಧಾರೆ ಕಣ್ಣೀರು ಸುರಿಸುತ್ತ ಅಳುತ್ತಾಳೆ. ದಣಿವು ಆರಿಸಿ ಕೊಳ್ಳಲು ನೆಲದ ಮೇಲೆ ಹೊರಳುವ ಹೆಣ್ಣುಕುದುರೆಯಂತೆ ಹೊರಳಾಡುತ್ತ ಇದಾಳೆ. "ಏನೋ ಪ್ರಮಾದದಿಂದ ನನ್ನ ಪ್ರಭು ಹಿಂದಿರುಗಿ ಬರಲಿಲ್ಲ. ಆತ ಇಲ್ಲದಾಗ ಈ ಕಾಮರೂಪಿ ರಾಕ್ಷಸ ನನ್ನನ್ನು ಬಲವಂತದಿಂದ ಎತ್ತಿಕೊಂಡು ಬಂದ. ಇಲ್ಲಿ ಈಗ ಈ ರಾಕ್ಷಸಿಯರ ನಡುವೆ ಸಿಕ್ಕಿಬಿದ್ದೆ. ಈ ಕ್ರೂರೆಯರು ಭಯಂಕರ ರೀತಿಯಲ್ಲಿ ನನ್ನನ್ನು ಬೆದರಿಸುತ್ತ ಇದಾರೆ. ಇದನ್ನು ಸಹಿಸಲಾರೆ. ಮನೋವಲ್ಲಭ ರಾಮನನ್ನು ಅಗಲಿ ಈ ರಾಕ್ಷಸಿಯರ ನಡುವೆ ಈ ದುಃಖ ನನಗೆ ಏಕೆ? ಮಹಾರಥ ರಾಮನನ್ನು ಅಗಲಿ ನನಗೆ ವಸ್ತ್ರ ಏಕೆ? ಒಡವೆ ಏಕೆ? ಐಶ್ವರ್ಯ ಏಕೆ? ನನ್ನ ಹೃದಯ ಇನ್ನೂ ಸೀಳಿಹೋಗಲಿಲ್ಲವಲ್ಲ. ಕಲ್ಲೋ ಏನೋ ಇದು. ಇದಕ್ಕೆ ಮುಪ್ಪು ಮುಳಿವು ಇಲ್ಲವೇನೋ!

"ಪ್ರಾಣನಾಥ ರಾಮನನ್ನು ಅಗಲಿ ನಾನು ಒಂದು ಗಳಿಗೆಯೂ ಬದುಕ ಬಾರದು. ಎಂಥ ಪಾಪಿ ನಾನು! ಎಂಥ ಅಸತಿ, ಅನಾರ್ಯೆ! ಚತುಸ್ಸಮುದ್ರ ಪರ್ಯಂತ ಇರುವ ಸಮಸ್ತ ಭೂಮಂಡಲಕ್ಕೂ ನಾಥ ನನ್ನ ನಲ್ಲ. ಸದಾ ಪ್ರಿಯಂವದ. ಆತನನ್ನು ಅಗಲಿ ಬದುಕೆ ನನಗೆ? ಸುಖ ಏಕೆ ನನಗೆ? ಯಾವ ಆಸಕ್ತಿ ಏಕೆ?

"ರಾಕ್ಷಸಸ್ತ್ರೀಯರೆ, ನಾನು ಅಂತೂ ಈ ದೇಹವನ್ನು ಬಿಟ್ಟುಹೋಗು ತ್ತೇನೆ. ಇದನ್ನು ಕತ್ತರಿಸಿಕೊಳ್ಳಿ. ತಿನ್ನಾದರೂ ತಿನ್ನಿ. ನಲ್ಲನನ್ನು ಅಗಲಿದ

ದುಃಖವನ್ನು ಇನ್ನು ನಾನು ತಡೆಯಲಾರೆ. ಆ ದುಷ್ಟ ರಾಕ್ಷಸ ರಾವಣನನ್ನು ನನ್ನ ಎಡಗಾಲಿನಿಂದಲೂ ಮುಟ್ಟುವುದೇ ಇಲ್ಲ ನಾನು. ಇನ್ನು ಆ ನೀಚನನ್ನು ಕಾಮಿಸುವುದು ಏನು ಬಂತು? ಅವನ ದುಷ್ಟಸ್ವಭಾವಕ್ಕೆ ತಕ್ಕಂತೆ ನನ್ನನ್ನು ಅವನು ಪ್ರಾರ್ಥಿಸಿದ. ಅದರಿಂದ ಅವನೂ ಅವನ ವಂಶವೂ ನಾಶ ಆಗುತ್ತದೆ. ಅವನಿಗೆ ಗೊತ್ತು ಇಲ್ಲ ಇದು.

"ರಾಕ್ಷಸಸ್ತ್ರೀಯರೆ, ನನ್ನನ್ನು ಸೀಳಿ. ಕತ್ತರಿಸಿ ತುಂಡು ತುಂಡು ಮಾಡಿ. ಉರಿಯುವ ಬೆಂಕಿಯಲ್ಲಿ ಹಾಕಿ. ಏನು ಮಾಡಿದರೂ ನಾನು ರಾವಣನನ್ನು ಸೇರಲಾರೆ. ಸುಮ್ಮನೆ ಏಕೆ ಕೂಗಿಕೊಳ್ಳುತ್ತೀರಿ. ನನ್ನ ಪತಿ ರಾಮಪ್ರಭು ಸಾಮಾನ್ಯ ಅಲ್ಲ. ಆತನದು ಲೋಕಪ್ರಸಿದ್ಧ ಕೀರ್ತಿ. ಎಲ್ಲವನ್ನೂ ಬಲ್ಲ. ಸದಾಚಾರಸಂಪನ್ನ. ದಯಾಮಯ. ನನ್ನ ಮೇಲೆ ಈಗ ದಯೆ ತೋರಿಸಿಲ್ಲ. ನನ್ನ ದೌರ್ಭಾಗ್ಯ.

"ಒಬ್ಬನೇ ನಿಂತು ಜನಸ್ಥಾನದಲ್ಲಿ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನು ಗಳಿಗೆಯಲ್ಲಿ ಕೊಂದುಹಾಕಲಿಲ್ಲವೆ? ಆ ಪ್ರಭು ಈಗ ಕಾಪಾಡಲು ಸಾಧ್ಯ ಇಲ್ಲವೆ ನನ್ನನ್ನು? ಈ ರಾವಣ ನನ್ನನ್ನು ನಿರ್ಬಂಧಿಸುತ್ತ ಇದಾನೆ. ಆದರೆ ನನ್ನ ಪತಿದೇವನ ಮುಂದೆ ಇವನು ಅಲ್ಪವೀರ್ಯ. ಯುದ್ಧದಲ್ಲಿ ಇವನನ್ನು ಸಂಹರಿಸಬಲ್ಲ ಸಮರ್ಥ ಆತ. ದಂಡಕಾರಣ್ಯದಲ್ಲಿ ವಿರಾಧನನ್ನು ಕೊಲ್ಲಲಿಲ್ಲವೆ? ಆ ಮಹಾಪ್ರಭುವಿಗೆ ನನ್ನನ್ನು ಕಾಪಾಡುವುದು ದೊಡ್ಡದೆ? ಲಂಕಾಪಟ್ಟಣದ ಸುತ್ತಲೂ ಸಮುದ್ರ ಇದೆ. ಇಲ್ಲಿಗೆ ಬರಲು ಯಾರಿಗೂ ಸಾಧ್ಯ ಇಲ್ಲ ಎಂದು ಕೊಳ್ಳುತ್ತೀರಾ? ಆ ಪ್ರಭುವಿನ ಬಾಣಗಳಿಗೆ ಅಡ್ಡ ಯಾವುದೂ ಇಲ್ಲ.

"ತನ್ನ ನೆಚ್ಚಿನ ಮಡದಿಯನ್ನು ರಾವಣಾಸುರ ಕದ್ದುಕೊಂಡು ಬಂದರೆ ಆ ದೃಢಪರಾಕ್ರಮಿ ಶ್ರೀರಾಮ ಕಾಪಾಡದೆ ಇರುವುದು ಏಕೆ? ಏನು ಕಾರಣವೋ ತಿಳಿಯದಲ್ಲ. ನಾನು ಇಲ್ಲಿ ಇರುವುದು ರಾಮನಿಗೆ ತಿಳಿಯದೋ ಏನೋ. ತಿಳಿದು ಇದ್ದರೆ ನನಗೆ ಆದ ಈ ಅವಮಾನವನ್ನು ಕಿಂಚಿತ್ತೂ ಸೈರಿಸುತ್ತ ಇರಲಿಲ್ಲ. ರಾವಣ ನನ್ನನ್ನು ಕದ್ದುತಂದ ಎಂದು ಹೇಳಲು ಗೃಧ್ರರಾಜ ಜಟಾಯು ಆದರೂ ಇದಾನೆಯೆ? ಇಲ್ಲ. ಹಣ್ಣುಹಣ್ಣು ಮುದುಕ. ಆದರೂ ರಾವಣನ ಸಂಗಡ ದ್ವಂದ್ವಯುದ್ಧಕ್ಕೆ ನಿಂತ. ಎಂಥ ದೊಡ್ಡ ಕೆಲಸ. ಆತನದು ಎಂಥ ದೊಡ್ಡ ಜೀವ! ನನ್ನ ದುರದೃಷ್ಟ. ಆತ ಸಾಯಬೇಕೆ ಯುದ್ಧದಲ್ಲಿ?

"ನಾನು ಈ ಲಂಕಾಪಟ್ಟಣದಲ್ಲಿ ಇದೇನೆ ಎಂದು ರಾಮಪ್ರಭುವಿಗೆ ತಿಳಿದರೆ ಸಾಕು. ಕೋಪಗೊಂಡು ಈ ಲೋಕದಲ್ಲಿ ರಾಕ್ಷಸರ ಹೆಸರೇ ಇಲ್ಲದಂತೆ ಆಗುತ್ತ ಇತ್ತು. ಮಹಾಸಮುದ್ರ ಬತ್ತುತ್ತ ಇತ್ತು. ಈ ಲಂಕಾಪಟ್ಟಣ ನಿರ್ಮೂಲ ಆಗುತ್ತ ಇತ್ತು. ನಿಸ್ಸಂದೇಹ. ರಾಕ್ಷಸಸ್ತ್ರೀಯರು ಎಲ್ಲರೂ ವಿಧವೆಯರು ಆಗಿ ಮನೆಮನೆಯಲ್ಲೂ ಗೋಳಾಡುತ್ತ ಇದ್ದರು. ಈಗ ನಾನು ಗೋಳಾಡುವಂತೆ. ಲಂಕೆಯನ್ನು ರಾಮಲಕ್ಷ್ಮಣರು ಪ್ರವೇಶಿಸಿದರೆ ನಗರದ ಮೂಲೆಮೂಲೆಯನ್ನೂ ಹುಡುಕಿ ರಾಕ್ಷಸರು ಎಲ್ಲಿ ಸಿಕ್ಕರೆ ಅಲ್ಲೇ ಕೊಂದು ಬಿಡುತ್ತ ಇದ್ದರು. ಆ ಅಣ್ಣತಮ್ಮಂದಿರ ಕಣ್ಣಿಗೆ ಬಿದ್ದ ಶತ್ರು ಯಾರೂ ಒಂದು ಗಳಿಗೆಯೂ ಬದುಕಲಾರ. ಲಂಕಾಪಟ್ಟಣದ ಬೀದಿಬೀದಿಯಲ್ಲೂ ಹೆಣಗಳ ಹೊಗೆ ತುಂಬಿಕೊಳ್ಳುತ್ತದೆ ಬೇಗನೆ. ಎಲ್ಲೆಲ್ಲೂ ರಣಹದ್ದುಗಳೇ ಓಡಾಡುತ್ತವೆ. ಊರು ಮಸಣ ಆಗುತ್ತದೆ. ಬಹಳ ಕಾಲ ಇಲ್ಲ. ಬಲು ಬೇಗ ನನ್ನ ಈ ಕೋರಿಕೆ ನೆರವೇರುತ್ತದೆ. ರಾಕ್ಷಸಿಯರೆ, ನಿಮ್ಮ ದುಷ್ಟತನವೇ ಬರಲು ಇರುವುದರ ಸನ್ನೆ. ರಾಕ್ಷಸರು ಎಲ್ಲರೂ ನಾಶ ಆಗುತ್ತಾರೆ. ಅನೇಕ ಅಪಶಕುನ ಕಾಣುತ್ತ ಇವೆ. ಬೇಗನೆ ಲಂಕೆ ಕಳೆಗುಂದಿ ನಾಶ ಆಗುತ್ತದೆ.

"ಇಷ್ಟು ಅಭೇದ್ಯ ಎನಿಸಿಕೊಂಡು ಇರುವ ಈ ಲಂಕಾನಗರಕ್ಕೆ ಪಾಪಾತ್ಮ ರಾವಣ ಸತ್ತಕೂಡಲೇ ಗಂಡ ಸತ್ತ ಹೆಂಡತಿಯ ಗತಿ ಆಗುತ್ತದೆ. ದೊರೆ ಸತ್ತು ರಾಕ್ಷಸರು ಎಲ್ಲರೂ ಸತ್ತಮೇಲೆ ಮನೆಮನೆಯಲ್ಲೂ ವಿಧವೆಯರು ಆಗುವ ರಾಕ್ಷಸ ಸ್ತ್ರೀಯರ ಜೊತೆಯಲ್ಲಿ ಲಂಕಾಪಟ್ಟಣವೂ ವಿಧವೆ ಆಗುತ್ತದೆ. ಇಲ್ಲಿ ಯಾವ ಶುಭೋತ್ಸವವೂ ನಡೆಯದು. ಮನೆಮನೆಯಲ್ಲೂ ರಾಕ್ಷಸಸ್ತ್ರೀಯರ ಗೋಳಿನ ಸದ್ದೇ ಸದ್ದು.

"ಶೂರಾಗ್ರೇಸರ ಕೆಂಗಣ್ಣ ಆದ ನನ್ನ ನಾಥನಿಗೆ ತಿಳಿಯಲಿ, ರಾವಣಾಸುರ ನನ್ನನ್ನು ಕದ್ದುತಂದು ಇಲ್ಲಿ ಇಟ್ಟಿದಾನೆ ಎಂಬುದು. ಮರುಗಳಿಗೆಯಲ್ಲಿಯೆ ರಾಮಬಾಣಗಳಿಂದ ಈ ಲಂಕಾಪಟ್ಟಣ ಸುಟ್ಟು ಬೂದಿ ಆಗುತ್ತದೆ. ಈ ಪಟ್ಟಣ ಕತ್ತಲೆಯಲ್ಲಿ ಮುಳುಗಿಹೋಗುತ್ತದೆ. ರಾಕ್ಷಸಶ್ರೇಷ್ಠರು ಎಲ್ಲರೂ ಕೊಲೆ ಆಗುತ್ತಾರೆ. ಊರು ಕಳೆಗುಂದುತ್ತದೆ.

"ಅಲ್ಲಿಯವರೆಗೆ ನಾನು ಬದುಕಿ ಇರುವ ಹಾಗೆ ಇಲ್ಲ. ಆ ನೀಚ ಆ ಕ್ರೂರ ರಾವಣ ಇಟ್ಟ ಗಡುವು ಹತ್ತಿರ ಬಂತು. ಇರುವುದು ಇನ್ನು ಎರಡೇ

ತಿಂಗಳು. ಈ ರಾಕ್ಷಸರು ಎಂಥ ಪಾಪಕಾರ್ಯವನ್ನು ಆದರೂ ಮಾಡುತ್ತಾರೆ. ಇವರಿಗೆ ಧರ್ಮ ಅಧರ್ಮ ಎಂಬ ವಿಚಕ್ಷಣೆ ಇಲ್ಲ. ಮಾಂಸ ತಿನ್ನುವವರು ಇವರು. ನನಗೆ ಮಹಾ ಅನರ್ಥವೇ ಕಾದು ಇದೆ. ರಾಕ್ಷಸರ ದೊರೆ ತಂಗಳು ಊಟಕ್ಕೆ ನನ್ನನ್ನು ಕೊಲ್ಲಿಸುತ್ತಾನೆ.

"ರಕ್ತಾಂತಲೋಚನಪ್ರಿಯದರ್ಶನ ರಾಮನನ್ನು ಅಗಲಿದ ನಾನು ಇನ್ನು ಏನು ಮಾಡಬಲ್ಲೆ ? ದುಃಖಸಮುದ್ರದಲ್ಲಿ ಮುಳುಗಿದೇನೆ. ಯಾರು ಆದರೂ ಪುಣ್ಯಾತ್ಮರು ನನಗೆ ವಿಷವನ್ನು ತಂದುಕೊಡಬಾರದೆ? ವಿಷ ಕುಡಿದು ಹಾಯಿ ಆಗಿ ಯಮಲೋಕಕ್ಕೆ ಹೋದೇನಲ್ಲ.

"ನಾನು ಇಲ್ಲಿ ಬದುಕಿ ಇದೇನೆ ಎಂಬುದು ಲಕ್ಷ್ಮಣನಿಗೂ ರಾಮನಿಗೂ ತಿಳಿದು ಇರಲಾರದು. ತಿಳಿದು ಇದ್ದರೆ ಸುಮ್ಮನೆ ಇರುತ್ತ ಇದ್ದರೆ? ಈ ಭೂಮಂಡಲವನ್ನೆ ಶೋಧಿಸಿಬಿಡುತ್ತ ಇದ್ದರು ಅಣ್ಣತಮ್ಮಂದಿರು.

"ಅಥವಾ ಆ ಮಹಾಪರಾಕ್ರಮಶಾಲಿ ಶ್ರೀರಾಮ ನನಗೋಸ್ಕರ ದುಃಖ ಪಟ್ಟು ಪಟ್ಟು ದೇಹವನ್ನು ತೊರೆದೇ ಇರಬಹುದೇ? ವಿರಹದುಃಖದಿಂದ ಆತ ಸತ್ತು ಸ್ವರ್ಗವನ್ನು ಸೇರಿರಬೇಕು. ಆ ಪುಂಡರೀಕಾಕ್ಷನ ಲೋಕಾಭಿರಾಮನ ದರ್ಶನ ಪಡೆಯುವ ದೇವತೆಗಳು ಗಂಧರ್ವರು ಸಿದ್ಧರು ಮಹರ್ಷಿಗಳು ಎಷ್ಟು ಭಾಗ್ಯಶಾಲಿಗಳು!

"ಒಂದುವೇಳೆ ಬದುಕಿ ಇದ್ದರೆ ಆ ಧರ್ಮಪರಾಯಣ ರಾಜರ್ಷಿ, ಮಹಾವಿರಕ್ತ, ತಪಸ್ವಿ; ಹೆಂಡತಿಯಿಂದ ಆತನಿಗೆ ಏನು ಆಗಬೇಕು? ನನ್ನ ಮೇಲೆ ಅಸಾಧಾರಣ ಪ್ರೇಮ ಇತ್ತು. ನಿಜ. ಆದರೆ ಈ ಲೋಕದಲ್ಲಿ ಕಣ್ಣು ಇದಿರಿಗೆ ಇದ್ದರೇನೇ ಪ್ರೀತಿ. ಕಣ್ಣುಮರೆ ಆದರೆ ಪ್ರೀತಿ ತಗ್ಗುತ್ತದೆ. ಹಾಗೆ ಅಲ್ಲ. ಹಿಂದಿನ ಪ್ರೀತಿಯನ್ನು ಮರೆಯುವವರು ಕೃತಘ್ನರು. ರಾಮಪ್ರಭು ಅಂಥ ಜೀವ ಅಲ್ಲ. ಪ್ರೀತಿಯನ್ನು ಮರೆಯುವ ಸ್ವಭಾವ ಅಲ್ಲ. ನಾನೋ ಹೆಂಗಸು. ಪ್ರಭುವನ್ನು ಅಗಲಿ ದುಃಖದ ಪಾಲು ಆಗಿ ಸವೆದುಹೋಗುತ್ತ ಇದೇನಲ್ಲ. ಏನು ಪಾಪ ಮಾಡಿದ್ದೆನೋ! ಎಂಥ ಭಾಗ್ಯಹೀನೆ ನಾನು!

"ಮಹಾಶೂರ ಶತ್ರುಮರ್ದನ ದೋಷರಹಿತ ಮಹಾತ್ಮ ಆದ ರಾಮ ನನ್ನು ಅಗಲಿ ಬದುಕುವುದಕ್ಕಿಂತ ಸಾವೇ ಒಳ್ಳೆಯದು. ಆ ಅಣ್ಣತಮ್ಮಂದಿರು ಇಬ್ಬರೂ ಕಂದಮೂಲಗಳನ್ನು ತಿನ್ನುತ್ತ ಶಸ್ತ್ರಾಸ್ತ್ರಗಳನ್ನು ತೊರೆದು ಮುನಿವೃತ್ತಿ

ಯಿಂದ ಕಾಡಿನಲ್ಲಿ ಸುತ್ತುತ್ತ ಇದಾರೋ ಏನೋ! ಅಥವಾ ಈ ಕಪಟಿ ರಾವಣ ಮೋಸಮಾಡಿ ಅವರನ್ನು ಕೊಂದನೋ ಏನೋ! ಏನೂ ತೋರದಲ್ಲ.

"ಎಷ್ಟು ಚಿಂತಿಸಿದರೂ ಅಷ್ಟೇ. ಕಾಲಗತಿ ಹೀಗೆ ಬಂದು ಒದಗಿದೆ. ಸಾವೇ ಸರಿ ನನಗೆ ಎನಿಸುತ್ತದೆ. ಸಾಯಲು ಆಸೆಪಟ್ಟರೂ ಸಾವು ಬಾರದಲ್ಲ. ಇಂಥ ದುಃಖದಲ್ಲೂ ಬರಬಾರದೆ?

"ಪಾಪಮುಕ್ತರೂ ಜಿತೇಂದ್ರಿಯರೂ ಧೈರ್ಯಶಾಲಿಗಳೂ ಸುಖದುಃಖ ಗಳಿಂದ ನಿರ್ಲಿಪ್ತರೂ ಆದವರು ಧನ್ಯರು. ಇದು ಪ್ರಿಯ ಎಂಬವರಿಗೆ ಆ ವಸ್ತು ಇರುವವರೆಗೂ ದುಃಖ ಇಲ್ಲ. ಇರುವವರೆಗೂ ಭಯ ಬಾಧಿಸುತ್ತದೆ. ಪ್ರಿಯ ಅಪ್ರಿಯಗಳನ್ನು ತೊರೆದವರು ಮಹಾತ್ಮರು. ಅಂಥವರಿಗೆ ನಮಸ್ಕಾರ.

"ನನಗೆ ಪರಮಪ್ರಿಯ ಆ ಆತ್ಮವೇತ್ತ ಶ್ರೀರಾಮ. ಆತನನ್ನು ಅಗಲಿ ಈ ಪಾಪಿ ರಾವಣನ ಕೈಗೆ ಸಿಕ್ಕೆನಲ್ಲ. ಇನ್ನು ಬದುಕಲಾರೆ ನಾನು. ಪ್ರಾಣ ಬಿಡುತ್ತೇನೆ."

೨೭

ಸೀತೆಯ ಮಾತನ್ನು ಕೇಳಿ ಆ ಭಯಂಕರ ರಾಕ್ಷಸಿಯರು ಕೋಪದಿಂದ ಮೈಮರೆತರು. ಸೀತೆಯ ಆತ್ಮಹತ್ಯೆಯ ಮಾತನ್ನು ರಾವಣಾಸುರನಿಗೆ ತಿಳಿಸಲು ಆಗಲೇ ಹೊರಟುಹೋದರು. ಉಳಿದವರು ಮತ್ತೆ ಸೀತೆಯನ್ನು ಗದರಿಸಿದರು. "ದುಷ್ಟೆ, ಪಾಪಿಷ್ಠೆ, ಇವೊತ್ತೇ ನಿನ್ನನ್ನು ಸೀಳಿಹಾಕಿ ನಿನ್ನ ಮಾಂಸವನ್ನು ಮನಸಾರೆ ತಿನ್ನುತ್ತೇವೆ" ಎಂದರು.

ತ್ರಿಜಟೆ ಒಬ್ಬ ವೃದ್ಧ ರಾಕ್ಷಸಿ. ಅಲ್ಲಿಯೇ ಮಲಗಿ ಇದ್ದಳು. ಆಗ ಎದ್ದು ಕುಳಿತು ರಾಕ್ಷಸಿಯರನ್ನು ಗದರಿಸಿದಳು. "ದುಷ್ಟ ಹೆಂಗಸರೆ, ನಿಮ್ಮನ್ನೆ ತಿನ್ನಿ. ಜನಕರಾಯನ ಮಗಳು, ದಶರಥಮಹಾರಾಜನ ಸೊಸೆ, ಈ ಸೀತಾದೇವಿಯನ್ನು ತಿನ್ನಬೇಡಿ. ರಾಕ್ಷಸರ ಅಳಿವು, ಈ ಸೀತಾದೇವಿಯ ಗಂಡನ ಏಳಿಗೆ, ಎರಡೂ ಆಗುತ್ತವೆ ಎಂದು ತಿಳಿಸುವ ಕನಸನ್ನು ಕಂಡೆ ನಾನು. ಅತಿ ಭಯಂಕರ ಸ್ವಪ್ನ. ಕೇಳಿದರೆ ಸಾಕು ನನ್ನ ಮೈಯಲ್ಲಿ ರೋಮಾಂಚ."

ತ್ರಿಜಟೆಯ ಮಾತನ್ನು ಕೇಳಿ ರಾಕ್ಷಸಿಯರಿಗೆ ಭಯ. ನಡುನಡುಗುತ್ತ "ಅದು ಎಂಥ ಕನಸು? ಹೇಳು, ಹೇಳು" ಎಂದು ಒತ್ತಾಯಮಾಡಿದರು.

ತ್ರಿಜಟೆ ಹೇಳಿದಳು: "ಸಾವಿರ ಹಂಸಗಳು ಎಳೆಯುತ್ತ ಇದ್ದ ಒಂದು ದಂತದ ಪಲ್ಲಕ್ಕಿ. ಆಕಾಶಮಾರ್ಗದಲ್ಲಿ ಹೊತ್ತು ತಂದವು ಆ ಪಲ್ಲಕ್ಕಿಯನ್ನು. ಬಿಳಿಯ ಪಂಚೆ ಉಟ್ಟು ಬಿಳಿಯ ಹೂಮಾಲೆಯನ್ನು ಧರಿಸಿ ಲಕ್ಷ್ಮಣಸಮೇತ ಆ ಪಲ್ಲಕ್ಕಿಯಲ್ಲಿ ರಾಮ ಕುಳಿತು ಇದಾನೆ. ಆ ಪಲ್ಲಕ್ಕಿ ಲಂಕಾಪಟ್ಟಣದಲ್ಲಿ ಬಂದು ಇಳಿಯಿತು. ಈ ಸೀತಾದೇವಿಯೂ ಬಿಳಿಯ ಸೀರೆ ಉಟ್ಟು ಬಿಳಿಯ ಹೂಮಾಲೆ ಮುಡಿದು ಸಮುದ್ರದ ನಡುವೆ ಶ್ವೇತಪರ್ವತದ ಮೇಲೆ ಕುಳಿತು ಇದಾಳೆ. ಸೂರ್ಯನಲ್ಲಿ ಬೆಳಕು ಸೇರುವಂತೆ ರಾಮನಲ್ಲಿ ಈ ಸೀತೆ ಸೇರಿದಳು. ನಾನು ಕಂಡೆ.

"ಬೆಟ್ಟದಂಥ ಒಂದು ಆನೆ. ನಾಲ್ಕು ಕೊಂಬಿನದು. ಲಕ್ಷ್ಮಣನ ಜೊತೆಯಲ್ಲಿ ಏರಿ ಕುಳಿತ ರಾಮ. ನಾನು ನೋಡಿದೆ. ಬಿಳಿಯ ದುಕೂಲ ಉಟ್ಟು ಬಿಳಿಯ ಹೂಮಾಲೆ ಧರಿಸಿ ದೇದೀಪ್ಯಮಾನ ದೇಹಕಾಂತಿಯಿಂದ ಹೊಳೆಯುತ್ತ ಇದ್ದ ಆ ಪುರುಷಸಿಂಹರು ಸೀತಾದೇವಿಯ ಬಳಿಗೆ ಹೋದರು. ಆಕಾಶಮಾರ್ಗದಲ್ಲಿ ಆ ಆನೆ ಶ್ವೇತಪರ್ವತದ ಬಳಿಗೆ ಬಂದ ಕೂಡಲೇ ಅದರ ಕುಂಭಸ್ಥಳವನ್ನು ಸೀತಾದೇವಿ ಏರಿದಳು. ಮೂವರೂ ಗಜಾರೂಢರು. ತಟ್ಟನೆ ಸೀತಾದೇವಿ ಗಂಡನ ಮಡಿಲಿನಿಂದ ಎದ್ದು ಸೂರ್ಯಚಂದ್ರರನ್ನು ಹಿಡಿದುಕೊಂಡಳು. ನಾನು ಕಂಡೆ.

"ಆ ಆನೆ ಲಂಕಾಪಟ್ಟಣದ ಮೇಲೆ ಬಂತು. ಆಗ ಬಿಳೀ ಎತ್ತು ಎಂಟು ಹೂಡಿದ ರಥದಲ್ಲಿ ಸೀತೆಯ ಸಮೇತ ರಾಮ ಇಲ್ಲಿಗೆ ಬಂದ. ಇಲ್ಲಿಗೆ ಬಂದವನು ಸೂರ್ಯನ ಹಾಗೆ ಬೆಳಗುವ ಪುಷ್ಪಕ ವಿಮಾನವನ್ನು ಏರಿ ಉತ್ತರದಿಕ್ಕಿಗೆ ಹೊರಟು ಹೋದುದನ್ನು ನೋಡಿದೆ. ಪರಾಕ್ರಮದಲ್ಲಿ ವಿಷ್ಣುವಿಗೆ ಸಮ ಆದ ಶ್ರೀರಾಮ ಸೀತಾಲಕ್ಷ್ಮಣಸಮೇತ ಇದ್ದಂತೆ ಕನಸಿನಲ್ಲಿ ನಾನು ಕಂಡೆ.

"ಪಾಪಿಗಳು ಸ್ವರ್ಗವನ್ನು ಪಡೆಯಲಾರರು. ಮಹಾಪರಾಕ್ರಮಶಾಲಿ ರಾಮನನ್ನು ದೇವಾಸುರರಾಗಲಿ ರಾಕ್ಷಸರಾಗಲಿ ಜಯಿಸಲಾರರು.

"ರಾವಣನನ್ನೂ ಕಂಡೆ ಕನಸಿನಲ್ಲಿ. ಮೈಗೆ ಎಲ್ಲಾ ಎಣ್ಣೆ ಬಳಿದುಕೊಂಡು ಇದಾನೆ. ಕತ್ತಿನಲ್ಲಿ ಕೆಂಪು ಹೂವಿನ ಮಾಲೆ. ಮೈಮೇಲೆ ಕೆಂಪು ಬಣ್ಣದ ಪಂಚೆ. ಎಚ್ಚರ ಇಲ್ಲದ ಹಾಗೆ ಮೂಗಿನವರೆಗೂ ಕುಡಿದು ಇದಾನೆ. ಮತ್ತು ಏರಿ

ಪುಷ್ಪಕ ವಿಮಾನದಿಂದ ನೆಲಕ್ಕೆ ಬಿದ್ದ. ಆಗ ಅವನ ತಲೆಯಲ್ಲಿ ಇಲ್ಲ. ಬೋಳುತಲೆ. ಆಗ ಮೈಮೇಲೆ ಕಪ್ಪುಬಟ್ಟೆ. ಒಬ್ಬ ಹೆಂಗಸು ಅ ದರದರ ಎಳೆಯುತ್ತ ಇದಾಳೆ. ರಾವಣ ಮೈಗೆ ರಕ್ತಚಂದನ ಬಳಿದುಕೊಂಡು ಕತ್ತಿನಲ್ಲಿ ಕೆಂಪು ಬಣ್ಣದ ಹೂಗಳ ಸರವನ್ನು ಹಾಕಿಕೊಂಡು ಇದಾನೆ. ಅವನು ಕುಳಿತ ರಥಕ್ಕೆ ಕತ್ತೆಗಳನ್ನು ಹೂಡಿದೆ. ಎಣ್ಣೆ ಕುಡಿಯುತ್ತ ನಗುತ್ತ ಕುಣಿಯುತ್ತ ಹುಚ್ಚುಹಿಡಿದವನಂತೆ ಆಡುತ್ತಾನೆ. ಬಗೆಬಗೆಯ ವಿಕಾರಚೇಷ್ಟೆ ಮಾಡುತ್ತ ಭ್ರಮೆ ಹಿಡಿದು ದಕ್ಷಿಣ ದಿಕ್ಕಿಗೆ ಹೋಗುತ್ತ ಇದಾನೆ. ರಥದಿಂದ ಇಳಿದ. ಒಂದು ಕತ್ತೆಯನ್ನು ಏರಿ ಹೊರಟ. ಹೋಗುತ್ತ ಹೋಗುತ್ತ ತಟ್ಟನೆ ಬೆಚ್ಚಿಬಿದ್ದ ರಾವಣ. ಏನೋ ಭಯ. ಕತ್ತೆಯ ಮೇಲಿನಿಂದ ಕೆಳಕ್ಕೆ ಉರುಳಿ ಬಿದ್ದ ನೆಲದಲ್ಲಿ. ತಲೆಕೆಳಗೆ ಬಿದ್ದ. ಕಕ್ಕಾಬಿಕ್ಕಿ ಆಗಿ ಕೂಡಲೇ ಎದ್ದ. ಕಾಲು ತಡವರಿಸಿತು. ಇತ್ತ ಭಯ ಅತ್ತ ಮದ. ಮೈಮೇಲೆ ಎಚ್ಚರ ಇಲ್ಲ. ಉಟ್ಟು ಇದ್ದ ಬಟ್ಟೆ ಬಿಚ್ಚಿಹೋಯಿತು. ಬಾಯಿಗೆ ಬಂದಹಾಗೆ ಮಾತು ಆಡುತ್ತ ಇದ್ದ. ತೂಗಾಡುತ್ತ ಬಂದು ಒಂದು ಭಯಂಕರ ಗುಂಡಿಯಲ್ಲಿ ಬಿದ್ದ. ಅದರಲ್ಲಿ ಪೂರಾ ಕತ್ತಲೆ. ತುಂಬಾ ಹೇಸಿಗೆ. ನರಕದ ಹಾಗೆ ಇತ್ತು. ಅದರಲ್ಲಿ ಮುಳುಗಿ ಹೋದ. ಕೆಂಪು ಸೀರೆ ಉಟ್ಟು ಮೈಗೆ ಕೆಸರು ಬಳಿದುಕೊಂಡು ಇದ್ದ ಕಪ್ಪು ಹೆಂಗಸು ಒಬ್ಬಳು ಅವನ ಕತ್ತಿಗೆ ಒಂದು ಹಗ್ಗ ಕಟ್ಟಿ ದಕ್ಷಿಣ ದಿಕ್ಕಿಗೆ ಎಳೆದು ಕೊಂಡು ಹೋಗುತ್ತ ಇದಾಳೆ.

"ರಾವಣಾಸುರನ ಮಕ್ಕಳು ಎಲ್ಲರೂ ಮೈಗೆ ಎಣ್ಣೆ ಸವರಿಕೊಂಡು ಇದ್ದರು. ಕುಂಭಕರ್ಣನೂ ಅಷ್ಟೇ. ಕುಂಭಕರ್ಣ ಒಂಟೆಯನ್ನು ಏರಿ ದಕ್ಷಿಣ ದಿಕ್ಕಿಗೆ ಪಯಣ ಆದ. ರಾವಣ ಹಂದಿಯನ್ನು, ಇಂದ್ರಜಿತ್ತು ಮೊಸಳೆಯನ್ನು ಏರಿ ಹೊರಟರು.

"ವಿಭೀಷಣ ಒಬ್ಬ ಬಿಳಿ ಬಟ್ಟೆ ಉಟ್ಟು ಬಿಳಿ ಹೂಗಳ ಮಾಲೆಯನ್ನು ಧರಿಸಿ ಬಿಳಿಯ ಗಂಧವನ್ನು ಬಳಿದುಕೊಂಡು ಬಂದ. ಅವನ ಹಿಂದೆ ಶ್ವೇತ ಛತ್ರ. ಅವನ ಮುಂದೆ ಶಂಖದುಂದುಭಿವಾದ್ಯಗಳ ವೈಭವ. ನೃತ್ತಗೀತಗಳು ನಡೆಯುತ್ತ ಇವೆ. ಸರ್ವಾಲಂಕಾರಗಳಿಂದ ಶೋಭಿಸುತ್ತ ಇದಾನೆ ವಿಭೀಷಣ. ಬೆಟ್ಟದ ಹಾಗೆ ಮಹೋನ್ನತ ಆದ ನಾಲ್ಕು ಕೊಂಬಿನ ಆನೆ ಒಂದು ಮೇಘ ದಂತೆ ಗಂಭೀರಧ್ವನಿ ಮಾಡುತ್ತ ವಿಭೀಷಣನನ್ನು ಮೇಲೆ ಏರಿಸಿಕೊಂಡು

ಆಕಾಶಮಾರ್ಗದಲ್ಲಿ ಹೋಯಿತು. ವಿಭೀಷಣನ ನಾಲ್ವರು ಮಂತ್ರಿಗಳೂ ಜೊತೆಯಲ್ಲಿ ಏರಿದರು.

"ರಾಕ್ಷಸರು ಎಲ್ಲರೂ ಎಣ್ಣೆ ಕುಡಿದು ಕೆಂಪು ಬಟ್ಟೆ ಉಟ್ಟು, ಕೆಂಪು ಹೂಗಳನ್ನು ಧರಿಸಿ ಗುಂಪುಕಟ್ಟಿಕೊಂಡು ಆಡುತ್ತ ಹಾಡುತ್ತ ಬಂದರು. ನಾನಾ ವಾದ್ಯಗಳು ಮೊಳಗುತ್ತ ಇದ್ದವು. ಈ ಲಂಕಾಪಟ್ಟಣ ರಥಗಜತುರಗಾದಿ ಸಮಸ್ತ ಸೈನ್ಯಸಮೇತ ಸಮುದ್ರದಲ್ಲಿ ಮುಳುಗಿಹೋಯಿತು.

"ರಾಮನ ದೂತ ಆಗಿ ಬಿಟ್ಟ ವಾನರ ಬಂದ ಲಂಕಾಪಟ್ಟಣಕ್ಕೆ. ಮಹಾ ಪರಾಕ್ರಮಶಾಲಿ ಆದ ಆ ವಾನರದೂತ ಈ ಲಂಕಾಪಟ್ಟಣವನ್ನು ಸುಟ್ಟು ಹಾಕಿದ. ನಾನು ಕಣ್ಣಾರೆ ಕಂಡೆ. ರಾಕ್ಷಸ ಹೆಂಗಸರೂ ಎಣ್ಣೆ ಕುಡಿದು ನಗುತ್ತ ಕುಣಿಯುತ್ತ ಕೋಲಾಹಲ ಮಾಡಿ ಕೂಗಾಡುತ್ತ ಸುಟ್ಟು ಬೂದಿ ಆದ ಲಂಕಾ ನಗರದಲ್ಲಿ ಓಡಾಡುತ್ತ ಇದ್ದರು. ಕುಂಭಕರ್ಣ ಮೊದಲು ಆದ ರಾಕ್ಷಸ ವೀರರು ಎಲ್ಲರೂ ಕೆಂಪು ಬಟ್ಟೆ ಉಟ್ಟು ಸಗಣಿಯ ಮಡುವಿನಲ್ಲಿ ಮುಳುಗಿ ಹೋದರು.

"ರಾಕ್ಷಸಾಂಗನೆಯರೆ, ನೀವು ಎಲ್ಲರೂ ಇಲ್ಲಿಂದ ತೊಲಗಿ. ಇಲ್ಲೇ ಇದ್ದರೆ ನಾಶ ಆಗುತ್ತೀರಿ. ರಾಮ ಸೀತಾದೇವಿಯನ್ನು ಕರೆದು ಒಯ್ಯುತ್ತಾನೆ. ಖಂಡಿತ. ರಾಮನಿಗೋ ಬಹಳ ಕೋಪ ಬಂದಿದೆ. ಸಮಸ್ತ ರಾಕ್ಷಸರನ್ನೂ ನಿಮ್ಮನ್ನೂ ಕೊಲ್ಲುತ್ತಾನೆ. ಈ ಸೀತಾದೇವಿ ರಾಮನ ಪ್ರಾಣಪ್ರಿಯೆ ಲೋಕ ಪ್ರಸಿದ್ಧೆ. ಗಂಡನನ್ನು ಎಡೆಬಿಡದೆ ಹಿಂಬಾಲಿಸಿ ಕಾಡಿಗೂ ಬಂದ ಮಹಾಪತಿವ್ರತೆ. ಈಕೆಯನ್ನು ನೀವು ಹೀಗೆ ಹೆದರಿಸಿದಿರಿ ಗದರಿಸಿದಿರಿ ಎಂಬುದು ರಾಮನಿಗೆ ತಿಳಿದರೆ ಆತ ಸಹಿಸಲಾರ. ಆದ್ದರಿಂದ ಇನ್ನು ನಿಮ್ಮ ಕ್ರೂರ ವಾಕ್ಯಗಳನ್ನು ನಿಲ್ಲಿಸಿ. ಪ್ರಿಯ ಆಗಿ ಮಾತಾಡಿ. ಸೀತಾದೇವಿಯನ್ನು ಅಂಗಲಾಚಿ ಬೇಡಿ ಕೊಳ್ಳೋಣ ನಾವು. ಈಕೆಯ ಕ್ಷಮೆಯನ್ನು ಬೇಡುವುದೇ ಸರಿ ಆದ ಉಪಾಯ ಎನಿಸುತ್ತದೆ ನನಗೆ. ಸೀತೆ ಈಗ ಅನುಭವಿಸುತ್ತಲಿರುವ ದುಃಖ ಎಲ್ಲವೂ ತೀರುತ್ತದೆ. ಈಕೆಯ ಗಂಡ ಬರುತ್ತಾನೆ. ಈಕೆಗೆ ನಾನಾವಿಧ ಸುಖ ಸಂತೋಷಗಳು ಕಾದು ಇವೆ. ಇದು ನಾನು ಕಂಡ ಸ್ವಪ್ನದ ಫಲ.

"ರಾಕ್ಷಸಿಯರೆ, ಸೀತಾದೇವಿಯನ್ನು ಬೇಡಿಕೊಳ್ಳಿ. ಹೇಗೆ ಕೇಳಬೇಕು, ಕೇಳಿದರೆ ಏನು ತಿಳಿದುಕೊಳ್ಳುತ್ತಾಳೋ ಎಂದು ಚಿಂತಿಸಬೇಡಿ. ರಾಕ್ಷಸರು

ಎಲ್ಲರಿಗೂ ರಾಮನಿಂದ ಮಹತ್ತರ ಭಯವಿದೆ. ಈಕೆಗೆ ಬಹಳ ಕಷ್ಟಕೊಟ್ಟಿದೀರಿ ನೀವು. ಆದರೂ ಚಿಂತೆ ಇಲ್ಲ. ಎಲ್ಲರೂ ಸೀತೆಗೆ ನಮಸ್ಕಾರ ಮಾಡಿ. ಬೇಡಿ ಕೊಳ್ಳಿ. ಆಕೆಯನ್ನು ಒಲಿಸಿಕೊಳ್ಳಿ. ನಿಮಗೆ ಯಾವ ಸಂಕಟವೂ ಬಾರದಂತೆ ಆಕೆ ಕಾಪಾಡಬಲ್ಲಳು. ಆ ಶಕ್ತಿ ಆಕೆಗೆ ಇದೆ. ಆಕೆಯ ಅವಯವಗಳಲ್ಲಿ ಯಾವ ದುರ್ಲಕ್ಷಣವೂ ಇಲ್ಲ. ಆ ವಿಶಾಲನೇತ್ರೆಯಲ್ಲಿ ದುಃಖದ ಲಕ್ಷಣ ಸ್ವಲ್ಪವೂ ಇಲ್ಲ. ದಿವ್ಯಭೋಗದ ಲಕ್ಷಣ ಇವೆ. ಆದರೂ ಈಗ ಸ್ವಲ್ಪ ದುಃಖದಲ್ಲಿ ಇದಾಳೆ.

"ಸೀತಾದೇವಿ ರಾವಣನ ನಾಶವನ್ನೂ ರಾಮನ ಅಭ್ಯುದಯವನ್ನೂ ಕೋರುತ್ತಾಳೆ. ಈಕೆಯ ಕೋರಿಕೆ ಬೇಗನೆ ಈಡೇರುತ್ತದೆ. ಆ ದಿನ ದೂರ ಇಲ್ಲ. ಸೀತೆಗೆ ಇಷ್ಟರಲ್ಲಿಯೇ ಬಹಳ ಶುಭಸಮಾಚಾರ ಒಂದು ಕೇಳಬರುತ್ತದೆ. ನನ್ನ ಕನಸೇ ಅದರ ಸೂಚನೆ. ಕಮಲದಳನಯನೆ ಆದ ಆಕೆಯ ವಿಶಾಲ ನೇತ್ರಗಳಲ್ಲಿ ಎಡಗಣ್ಣು ಆಗಾಗ ಅದಿರುತ್ತ ಇದೆ. ಆಕೆಯ ಎಡಭುಜ ಕಾರಣ ಇಲ್ಲದೆಯೆ ಅದಿರುತ್ತ ಇದೆ. ನೋಡಿ. ಎಡತೋಳಿನಲ್ಲಿ ರೋಮಾಂಚ ಆಗುತ್ತ ಇದೆ. ಆನೆಯ ಸೊಂಡಿಲಿನಂಥ ಎಡತೊಡೆ ಅದಿರುತ್ತ ಇದೆ. ಈ ಶಕುನಗಳಿಂದ ತಿಳಿಯುತ್ತ ಇದೆ. ವೈದೇಹಿಯ ಗಂಡ ರಾಮ ಇಷ್ಟರಲ್ಲೇ ಬಂದು ಆಕೆಯ ಇದಿರಿಗೆ ನಿಲ್ಲುತ್ತಾನೆ.

"ಅದೇ, ಅಲ್ಲಿ ಮರದ ತುದಿಯಲ್ಲಿ ಕುಳಿತ ಶಕುನಪಕ್ಷಿಯೂ ಸಂತೋಷ ದಿಂದ ಸವಿ ಆಗಿ ಸಮಾಧಾನದ ಮಾತನ್ನು ಹೇಳುತ್ತಾ ಇದೆ. ಬಂಧುಗಳು ಬಂದಾಗ ಸ್ವಾಗತ ಮಾಡುವ ಹಾಗೆ ಕಲಕಲಧ್ವನಿ ಮಾಡುತ್ತ ಇದೆ. ಇದು ಎಲ್ಲವನ್ನೂ ನೋಡಿದರೆ ರಾಮ ಬೇಗ ಬರುವುದು ಖಂಡಿತ" ಎಂದಳು ತ್ರಿಜಟೆ.

೨೮

ಕಾಡಿನ ನಡುವೆ ಹೆಣ್ಣು ಆನೆಗೆ ಸಿಂಹ ಇದಿರು ಆದಹಾಗೆ ಆಯಿತು ರಾಕ್ಷಸರಾಜ ರಾವಣ ಹೋಗುವಾಗ ಹೇಳಿದ ಮಾತನ್ನು ಕೇಳಿ ಸೀತೆಗೆ. ಭಯದಿಂದ ನಡುಗಿದಳು. ಮೊದಲೇ ಭೀರು. ಈಗ ಈ ರಾಕ್ಷಸಸ್ತ್ರೀಯರ ಕ್ರೂರವಾಕ್ಯಗಳು, ರಾವಣಾಸುರನ ಬೆದರಿಕೆಯ ಮಾತು ಜೇರೆ. ನಿರ್ಜನ ಆದ

ಕಾಡಿನಲ್ಲಿ ಒಂಟಿ ಆಗಿ ಸಿಕ್ಕಿಬಿದ್ದ ತಬ್ಬಲಿ ಹುಡುಗಿಯ ಹಾಗೆ ಗೊಳೋ ಎಂದು ಅತ್ತಳು.

'ಎಂಥ ನಿರ್ಭಾಗ್ಯೆ ನಾನು. ಈ ಘೋರ ರಾಕ್ಷಸಿಯರು ಇಷ್ಟು ಹೆದರಿಸುತ್ತ ಬೈಯುತ್ತ ಇದ್ದರೂ ಇನ್ನೂ ನನಗೆ ಸಾವು ಬರಲೇ ಇಲ್ಲವಲ್ಲ. ಸಾಯಲೂ ಕಾಲ ಬರಬೇಕು. ಕಾಲ ಬಾರದೆ ಸಾವು ಬಾರದೆಂದು ಹಿರಿಯರು ಹೇಳುವ ಮಾತು ನಿಜ. ನನ್ನ ಹೃದಯ ದುಃಖದಿಂದ ಬೇಯುತ್ತ ಇದೆ. ಸುಖ ಇಲ್ಲದೆಯೆ ಹೋಯಿತು. ವಜ್ರಾಯುಧದ ಏಟಿಗೆ ಪರ್ವತಶಿಖರ ಸಾವಿರ ಹೋಳು ಆಗುವಂತೆ ಈ ದುಃಖದ ಏಟಿಗೆ ನನ್ನ ಎದೆ ಸಾವಿರ ಚೂರು ಆಗಿ ಒಡೆದು ಹೋಗಬೇಕು. ಆದರೆ ನನ್ನ ಎದೆ ಇನ್ನೂ ಗಟ್ಟಿ ಆಗಿಯೇ ಇದೆ. ಅಸಹ್ಯ ರೂಪದ ರಾವಣಾಸುರ ಹೇಗೂ ನನ್ನನ್ನು ಕೊಲ್ಲುತ್ತಾನೆ. ಅದರ ಬದಲು ನಾನೇ ಕೊಂದುಕೊಂಡರೆ ಏನು ತಪ್ಪು? ಏನೂ ತಪ್ಪು ಇಲ್ಲ.

'ಸಾಯಬಾರದು ಎಂದರೆ ರಾವಣಾಸುರನಿಗೆ ವಶ ಆಗಬೇಕು. ದ್ವಿಜ ಅದ್ವಿಜನಿಗೆ ಮಂತ್ರ ಹೇಳುತ್ತಾನೆಯೇ? ಪವಿತ್ರ ಆದ ನನ್ನ ಮನಸ್ಸನ್ನು ರಾವಣನಿಗೆ ಒಪ್ಪಿಸಬೇಕೆ? ಛೀ, ಸಾಧ್ಯವೇ ಇಲ್ಲ. ಇನ್ನು ಎರಡು ತಿಂಗಳು ಗಡುವು ಇಟ್ಟು ಇದಾನೆ ರಾವಣ. ಅಷ್ಟರ ಒಳಗೆ ಲೋಕನಾಥ ಶ್ರೀರಾಮ ಬರಲಿಲ್ಲವೋ, ಗರ್ಭದಲ್ಲಿ ಇರುವ ಶಿಶುವನ್ನು ಶಸ್ತ್ರವೈದ್ಯ ಕತ್ತರಿಸುವಂತೆ ಹರಿತ ಆದ ಕತ್ತಿಗಳಿಂದ ನನ್ನ ಸಮಸ್ತ ಅವಯವಗಳನ್ನೂ ರಾಕ್ಷಸರು ಕತ್ತರಿಸಿ ಹಾಕುತ್ತಾರೆ. ಇದು ಖಂಡಿತ. ಈ ಎರಡು ತಿಂಗಳು ಕಳೆದುಹೋಗುವುದು ಒಂದು ದೊಡ್ಡದೆ? ಹೋಗುತ್ತದೆ. ಆಗ ನನ್ನ ಗತಿ? ರಾಜದ್ರೋಹಮಾಡಿದ ಕಳ್ಳನನ್ನು ನಾಳೆ ಬೆಳಗ್ಗೆ ಶೂಲಕ್ಕೆ ಏರಿಸುತ್ತಾರೆ ಎಂದರೆ ಅವನಿಗೆ ಆಗುವ ಸಂಕಟ ಆಗುತ್ತಿದೆಯಲ್ಲ ನನಗೆ ಈಗ!

'ರಾಮಾ ಲಕ್ಷ್ಮಣಾ ಸುಮಿತ್ರೇ ರಾಮನ ತಾಯಿ ಕೌಸಲ್ಯೇ, ಏನು ನನ್ನ ದುರದೃಷ್ಟ? ಬಿರುಗಾಳಿಗೆ ಸಿಕ್ಕಿ ಸಮುದ್ರಮಧ್ಯದಲ್ಲಿ ಹಡಗು ನಾಶ ಆಗುವಂತೆ ಆಯಿತೆ ನನ್ನ ಸ್ಥಿತಿ? ಎಂಥ ಅನರ್ಥ? ಜಿಂಕೆಯ ರೂಪವನ್ನು ಧರಿಸಿ ಬಂದ ಆ ರಾಕ್ಷಸನ ಕೈಯಲ್ಲಿ ಸಿಕ್ಕಿ ರಾಮಲಕ್ಷ್ಮಣರು ಸತ್ತರೋ ಏನೋ! ಸಿಡಿಲು ಬಡಿದು ಎರಡು ಸಿಂಹಗಳು ಸತ್ತ ಹಾಗೆ. ಮೃತ್ಯುವೇ ಆ ಜಿಂಕೆಯ ರೂಪದಲ್ಲಿ ಬಂದು ಇತ್ತೋ ನನ್ನನ್ನು ಮರುಳು ಮಾಡಲು!

ಸಂದೇಹ ಇಲ್ಲ. ನಾನು ತಿಳಿಗೇಡಿ. ಅದೃಷ್ಟ ಇಲ್ಲದ ಮೂಢೆ. ರಾಮನನ್ನೂ ಲಕ್ಷ್ಮಣನನ್ನೂ ಹೊರಗೆ ಅಟ್ಟಿಬಿಟ್ಟೆ. ಅಯ್ಯೋ, ರಾಮಾ, ಸತ್ಯವ್ರತಾ, ದೀರ್ಘಬಾಹೂ, ಪೂರ್ಣಚಂದ್ರಾನನ, ಸಮಸ್ತಪ್ರಾಣಿಕೋಟಿಗೂ ಹಿತವನ್ನು ಮಾಡುವ ನಿನಗೆ ಎಲ್ಲರಿಗೂ ಸಂತೋಷ ನೀಡುವ ನಿನಗೆ ನಿನ್ನ ಈ ನಲ್ಲೆಯ ಚಿಂತೆ ಬೇಡವೆ? ರಾಕ್ಷಸರ ಕೈಗೆ ಸಿಕ್ಕಿದೇನೆ. ಸಾಯಲು ಸಿದ್ಧಳು ಆಗಿದೇನೆ. ಗೊತ್ತು ಇಲ್ಲವೆ?

' ಪತಿಗಿಂತ ಪರದೈವ ಇಲ್ಲ ಎಂದು ನಂಬಿದೆ. ಪತಿಯ ಸಾಹಚರ್ಯವೇ ಸುಖ ಎಂದು ಕಡುಕು ನೆಲದ ಮೇಲೆ ಮಲಗಿದೆ. ಎಲ್ಲವನ್ನೂ ತೊರೆದೆ. ಮಿತಿಮೀರಿ ಸ್ವೈರಣೆಗೊಂಡೆ. ಇದು ಎಲ್ಲವೂ ವ್ಯರ್ಥ ಆಯಿತಲ್ಲ. ನನ್ನ ಧರ್ಮಪರಾಯಣತೆ ಪಾತಿವ್ರತ್ಯನಿಷ್ಠೆ ಕೃತಘ್ನನಿಗೆ ಮಾಡಿದ ಉಪಕಾರದಂತೆ ನಿರರ್ಥಕ ಆಯಿತೆ?

' ಕಾಂತ, ನಿಮ್ಮ ಅಗಲಿಕೆಯಿಂದ ನಾನು ಸವೆದು ಸೀರಕಲು ಆಗಿದೇನೆ. ನನ್ನ ಮೈಬಣ್ಣ ಕುಂದಿದೆ. ನಿಮ್ಮನ್ನು ಕೂಡುವ ಆಸೆ ನಿರಾಶೆ ಆಯಿತು. ನನ್ನ ಧರ್ಮ, ನನ್ನ ಏಕಪತ್ನೀವ್ರತ ನಿಷ್ಫಲ ಆಯಿತೆ? ಪ್ರಭು, ನಿಮ್ಮ ಪಿತೃವಾಕ್ಯ ಪರಿಪಾಲನೆ ನಿಯಮಬದ್ಧ ಆಗಿ ಮುಗಿಯುತ್ತದೆ. ಕೃತಕೃತ್ಯರು ಆಗುತ್ತೀರಿ. ಕಾಡನ್ನು ಬಿಟ್ಟು ಅಯೋಧ್ಯೆಗೆ ಹೋಗುತ್ತೀರಿ. ಅಲ್ಲಿ ಹಲವರು ವಿಶಾಲ ನಯನೆಯರ ಜೊತೆಯಲ್ಲಿ ನಿರಾತಂಕ ಆಗಿ ಕ್ರೀಡಿಸುತ್ತೀರಿ.

' ಸ್ವಾಮಿ, ನಾನು ಮಂದಭಾಗ್ಯಳು. ನನಗೆ ಮನಸು ಎಲ್ಲಾ ನಿಮ್ಮ ಮೇಲೆಯೇ. ನಿಮ್ಮ ನಿರೀಕ್ಷೆಯೇ ನನಗೆ. ಎಲ್ಲವೂ ವಿಫಲ. ಈಗ ಸಾವಿಗೆ ಸೆರಗು ಒಡ್ಡಬೇಕಾಯಿತು. ನನ್ನ ತಪಸ್ಸು ಎಲ್ಲವೂ ವ್ಯರ್ಥ ಆಯಿತು. ಹೀನ ಭಾಗ್ಯಳ ಈ ಬದುಕು ಸುಡಲಿ. ವಿಷ ಆದರೂ ಕುಡಿಯಬೇಕು. ಶಸ್ತ್ರದಿಂದ ಆದರೂ ಸಾಯಬೇಕು. ಬೇಗ ನೀಗಬೇಕು ಪ್ರಾಣ. ಈ ರಾಕ್ಷಸಪಟ್ಟಣದಲ್ಲಿ ನನಗೆ ವಿಷ ಕೊಡುವವರೂ ಇಲ್ಲ, ಶಸ್ತ್ರ ಕೊಡುವವರೂ ಇಲ್ಲವಲ್ಲ.'

ಸೀತಾದೇವಿ ಹಲವು ಬಗೆಯಲ್ಲಿ ಗೋಳಾಡಿದಳು. ರಾಮನನ್ನೆ ನೆನೆನೆನೆದು ಅತ್ತಳು. ಬಾಯಿ ಒಣಗಿತು. ನಡುಗಿದಳು ಭಯದಿಂದ. ಏನೋ ಆಲೋಚನೆ ಮಾಡುತ್ತ ಹೂಬಿಟ್ಟ ಆ ಅಶೋಕವೃಕ್ಷದ ಬಳಿಗೆ ಹೋದಳು. ಕೊರಗಿ ಕೊರಗಿ ಸಾಯಲು ನಿರ್ಧರಿಸಿದಳು. ಉದ್ದ ಆದ ತನ್ನ ತಲೆಗೂದಲನ್ನು ಕೊರಳಿಗೆ

ಸುತ್ತಿದಳು. ಆ ಮರದ ಕೊಂಬೆಗೆ ನೇಣುಹಾಕಿಕೊಳ್ಳಲು ನಿಶ್ಚಯಿಸಿದಳು. ಆ ಕೊಂಬೆಯನ್ನು ಹಿಡಿದುಕೊಂಡಳು.

ರಾಮನನ್ನೂ ಲಕ್ಷ್ಮಣನನ್ನೂ ಧ್ಯಾನಿಸಿದಳು. ಅಂಥ ವೀರರು ಇದ್ದರೂ ಕಷ್ಟ ತಪ್ಪಲಿಲ್ಲ ತನಗೆ. ತನ್ನ ಪವಿತ್ರ ವಂಶವನ್ನು ನೆನೆದಳು.

ಆಗ ದುಃಖ ಕಳೆಯುವ ಧೈರ್ಯ ಕೊಡುವ ಶುಭಶಕುನಗಳು ಆದವು. ಲೋಕಪ್ರಸಿದ್ಧ ಶಕುನ ಅವು. ಹಿಂದೆ ಯಾವಾಗಲೂ ಅದರಂತೆ ಆಗಿದೆ. ಇದರಿಂದ ಆಗ ಧೈರ್ಯ ಬಂತು.

೨೯

ಸೀತೆಗೆ ಹರ್ಷ ಲವಲೇಶವೂ ಇಲ್ಲ. ಬಲು ದುಃಖ. ಆಗ ಶುಭಶಕುನ ಕಾಣಬಂದವು. ಶ್ರೀಮಂತರನ್ನು ಬಿಡದೆ ಮುತ್ತಿಕೊಳ್ಳುವ ಆಶ್ರಿತರ ಹಾಗೆ. ಕಪ್ಪುಕಣ್ಣಾಲಿ, ಬಿಲ್ಲಿನಂತೆ ಡೊಂಕು ರೆಪ್ಪೆ, ಬೆಳ್ಳನೆ ಕಣ್ಣುಬೊಂಬೆ, ಕೆಂಪು ಕುಡಿಗಣ್ಣು ; ವಿಶಾಲ ಆದ ಕಣ್ಣು ಸೀತೆಯದು. ಆಕೆಯ ಎಡಗಣ್ಣು ಮೀನು ಕದಲಿಸಿದ ಕಮಲದಂತೆ ಅದುರಲು ಆರಂಭಿಸಿತು. ಬಲಿತು ದುಂಡು ಆದ ಆಕೆಯ ಅಂದದ ವಾಮಭುಜ ಉತ್ತಮೋತ್ತಮ ಅಗರು ಗಂಧ ಲೇಪಿತ ಆಗಿ ಶ್ರೀರಾಮನ ಆಲಿಂಗನಸುಖವನ್ನು ಅನುಭವಿಸಿದ ಆ ವಾಮಭುಜ—ಇದ್ದಕ್ಕಿದ್ದಂತೆ ಅದಿರಲು ಆರಂಭಿಸಿತು. ಆನೆಯ ಸೊಂಡಿಲಿನಂತೆ ದಪ್ಪ ದುಂಡು ಅಂದ ಆದ ಆಕೆಯ ತೊಡೆಗಳಲ್ಲಿ ಎಡತೊಡೆ ಅದಿರಿತು. ನಿರ್ಮಲನೇತ್ರೆ, ಗುಂಡಗೆ ಶಿಖರಾಕಾರದ ದಂತಪಂಙ್ಕ್ತಿಯ ಸೀತೆಯ ಹೊಂಬಣ್ಣದ ಸೀರೆ ಸ್ವಲ್ಪ ಸಡಿಲ ಆಯಿತು.

ಇಂಥ ಶಕುನ ಹಿಂದೆ ಎಷ್ಟೋ ಸಲ ಫಲಕಾರಿ ಆಗಿದ್ದವು. ಈ ಶಕುನಗಳಿಂದ ಸೀತೆ ಎಚ್ಚರಗೊಂಡಳು. ಗಾಳಿಗೂ ಬಿಸಿಲಿಗೂ ಒಣಗಿಹೋಗುವ ಪಯಿರು ಮಳೆಹನಿ ಬಿದ್ದರೆ ಚಿಗುರುತ್ತದೆ, ನಲಿಯುತ್ತದೆ. ಸೀತಾದೇವಿಗೂ ಆಸೆ ಚಿಗುರಿತು. ತೊಂಡೆಯ ಹಣ್ಣಿನಂಥ ಕೆಂಪು ತುಟಿ, ಅಂದದ ಕಣ್ಣವೆ, ಸೊಗಸು ಆದ ಮುಂಗುರುಳು, ಡೊಂಕು ಕಣ್‌ರೆಪ್ಪೆ, ಶುಭ್ರದಂತಪಙ್ಕ್ತಿಯ ಸೀತೆಯ ಮುಖ ಗ್ರಹಣಮುಕ್ತ ಆದ ಚಂದ್ರಬಿಂಬದಂತೆ ಕಳೆ ಏರಿತು ಬೇಸರ

ಕಳವಳ ತಗ್ಗಿತು. ಮುಖದಲ್ಲಿ ಉಲ್ಲಾಸ ಮೂಡಿತು. ಮನಸ್ಸು ಅರಳಿತು. ಶುಕ್ಲಪಕ್ಷದ ಚಂದ್ರನ ಹಾಗೆ ಹೊಳೆದಳು.

೩೦

ಹನುಮಂತ ಶಿಂಶುಪಾವೃಕ್ಷದ ಮೇಲೆ ಕುಳಿತೇ ಎಲ್ಲವನ್ನೂ ನೋಡಿದ. ರಾಕ್ಷಸಿಯರು ಬೆದರಿಸಿದರು. ಸೀತಾದೇವಿ ಅಳುತ್ತಲೇ ಇದ್ದಳು. ತ್ರಿಜಟೆ ತನ್ನ ಕನಸಿನ ಮಾತನ್ನು ಹೇಳಿದಳು. ನಂದನವನದಲ್ಲಿ ದೇವತೆ ಇದ್ದಹಾಗೆ ಕಂಡಳು ಸೀತಾದೇವಿ ಅವನಿಗೆ. ಮನಸಿನಲ್ಲಿ ನಾನಾಬಗೆಯ ಆಲೋಚನೆ ಹುಟ್ಟಿದವು.

'ಎಲ್ಲ ದಿಕ್ಕುಗಳಿಗೂ ಹೋಗಿದಾರೆ ಲಕ್ಷಾಂತರ ವಾನರರು ಈಕೆಯನ್ನು ಹುಡುಕಲು. ನನ್ನ ಕಣ್ಣಿಗೆ ಬಿದ್ದಳು ಈಕೆ. ನಾನು ಗುಟ್ಟು ಆಗಿ ಲಂಕಾ ನಗರವನ್ನು ಪ್ರವೇಶಿಸಿದೆ. ಯಾರಿಗೂ ಕಾಣಲಿಲ್ಲ. ಗೂಢಚಾರನಂತೆ ರಾಕ್ಷಸರ ಬಲಾಬಲಗಳನ್ನು ಅರಿತುಕೊಂಡೆ. ನಗರವನ್ನು ಎಲ್ಲಾ ನೋಡಿದೆ. ರಾಕ್ಷಸ ರಾಜ ರಾವಣನ ಶಕ್ತಿಸಾಮರ್ಥ್ಯವನ್ನೂ ತಿಳಿದುಕೊಂಡೆ.

'ಎಣೆ ಇಲ್ಲದ ಮಹಾಪರಾಕ್ರಮಿ, ಸರ್ವಭೂತದಯಾಪರ ಆದ ತನ್ನ ಗಂಡ ಶ್ರೀರಾಮನನ್ನು ನೋಡಲು ಸೀತಾದೇವಿಗೆ ಬಹಳ ಆತುರ. ಈಕೆಯನ್ನು ಸಮಾಧಾನಪಡಿಸಬೇಕು ಈಗ. ಈ ಪೂರ್ಣಚಂದ್ರಮುಖಿ ಇಲ್ಲಿಯ ವರೆಗೆ ಎಂದೂ ದುಃಖಪಟ್ಟವಳು ಅಲ್ಲ. ಈಗಲೇ ಕೊನೆ ಇಲ್ಲದ ದುಃಖ ಬಂದಿದೆ ಈಕೆಗೆ. ಈಗ ಈಕೆಯನ್ನು ಸಮಾಧಾನಪಡಿಸಬೇಕು. ಸಮಾಧಾನಪಡಿಸದೆ ನಾನು ಹಿಂದಕ್ಕೆ ಹೋಗುವುದು ತಪ್ಪು.

'ಒಂದುವೇಳೆ ಈಕೆಯನ್ನು ನೋಡದೆ ಮಾತಾಡಿಸದೆ ನನ್ನ ದಾರಿ ನಾನು ಹಿಡಿದರೆ, ಈ ಕೀರ್ತಿಶಾಲಿ ರಾಜಕುಮಾರಿಗೆ ತನ್ನನ್ನು ಕಾಪಾಡುವವರು ಯಾರೂ ಇಲ್ಲ ಎಂದು ದೃಢ ಆಗುತ್ತದೆ. ಪ್ರಾಣಬಿಡುತ್ತಾಳೆ. ಈಕೆಯ ಸಂಗಡ ಮಾತಾಡಿ ಹೋದರೆ ಅಲ್ಲವೆ ನಾನು ಸೀತಾದರ್ಶನಕ್ಕೆ ಆತುರಗೊಂಡ ಆ ಮಹಾ ಪರಾಕ್ರಮಿ ರಾಮನಿಗೆ ಸಮಾಧಾನ ಹೇಳಲು ಸಾಧ್ಯ? ಸೀತಾದೇವಿಯನ್ನು ಕಂಡು ಮಾತಾಡಲೇಬೇಕು ನಾನು. ಈ ರಾಕ್ಷಸಿಯರ ಇದಿರು ಆಗಿಯೇ

ಮಾತಾಡಿಸಲೆ? ಸರಿ ಅಲ್ಲ. ಹೇಗೆ ಮಾಡಬೇಕು? ಏನೂ ಉಪಾಯ ಹೊಳೆಯದಲ್ಲ. ಒಳ್ಳೆಯ ತೊಡಕು ಇದು. ಇವತ್ತು ಬೆಳಕು ಹರಿಯುವ ಒಳಗೆಯೆ ನಾನು ಈಕೆಯನ್ನು ಮಾತಾಡಿಸಬೇಕು, ಸಮಾಧಾನ ಹೇಳಬೇಕು. ಇಲ್ಲದೆ ಇದ್ದರೆ ಪ್ರಾಣ ಬಿಡುತ್ತಾಳೆ. ಖಂಡಿತ.

'ಸೀತಾದೇವಿಯನ್ನು ಮಾತಾಡಿಸದೆಯೆ ನಾನು ಹಿಂದಿರುಗಿ ಹೋದೆ ಎನ್ನೋಣ. ಸೀತೆ ಏನು ಹೇಳಿಕಳಿಸಿದಾಳೆ? ಎಂದು ಕೇಳಿದರೆ ಏನು ಹೇಳಲಿ? ಆಕೆಯ ಸಂಗಡ ನಾನು ಮಾತಾಡಲಿಲ್ಲ. ಆಕೆ ನನಗೆ ಏನನ್ನೂ ಹೇಳಲಿಲ್ಲ ಎಂದರೆ ರಾಮನಿಗೆ ಸಿಟ್ಟುಬರುತ್ತದೆ. ಆತನ ತೀಕ್ಷ್ಣದೃಷ್ಟಿಗೆ ನಾನು ಸುಟ್ಟು ಹೋದೇನು.

'ಈಕೆಯ ಸಂಗಡ ಮಾತಾಡದೆಯೇ ಹೋದೆ. ಹಿಂದಕ್ಕೆ ಹೋಗಿ ಸುಗ್ರೀವನಿಗೆ ಇದು ಎಲ್ಲವನ್ನೂ ಹೇಳಿ ಹುರಿದುಂಬಿಸಿ ರಾಮಕಾರ್ಯಕ್ಕಾಗಿ ದಂಡನ್ನು ಇಲ್ಲಿಗೆ ತಂದೆ ಎನ್ನೋಣ. ಅಷ್ಟರ ಒಳಗೆಯೆ ಈ ಸೀತಾದೇವಿ ಪ್ರಾಣ ಬಿಡುತ್ತಾಳೆ. ನಾನು ಮಾಡಿದ ಸಮಸ್ತ ಪ್ರಯತ್ನವೂ ವ್ಯರ್ಥ ಆಗುತ್ತದೆ.

'ಇಲ್ಲ. ಈಕೆಯನ್ನು ಮಾತು ಆಡಿಸಿ ಸಮಾಧಾನಪಡಿಸಲೇಬೇಕು. ಇಲ್ಲಿಯೇ ಇರಬೇಕು. ಈ ರಾಕ್ಷಸಿಯರು ಸ್ವಲ್ಪ ಎಚ್ಚರ ತಪ್ಪುವವರೆಗೆ ಕಾಯಬೇಕು. ಆಗ ಕೆಳಗೆ ಇಳಿದು ದುಃಖದಲ್ಲಿ ಕುದಿಯುವ ಸೀತಾದೇವಿಯನ್ನು ಮಾತಾಡಿಸಬೇಕು. ಅದೇ ಸರಿ ಆದ ಸಮಯ. ಸವಿಮಾತು ಆಡಬೇಕು. ಮೆಲ್ಲಮೆಲ್ಲನೆ ಆಡಬೇಕು.

'ಯಾವ ಭಾಷೆಯಲ್ಲಿ ಮಾತಾಡಲಿ? ವಾನರರೂಪದಲ್ಲಿ ಸಂಸ್ಕೃತವನ್ನು ಆಡಿದರೆ ವಾನರ ಈ ಭಾಷೆಯನ್ನು ಆಡಬಹುದೆ ಎಂದು ಸೀತಾದೇವಿ ಸಂಶಯ ಪಡಬಹುದು. ಇದು ಎಲ್ಲವೂ ರಾವಣಮಾಯೆ, ಇವನು ರಾವಣ ಎಂದು ತಿಳಿದಾಳು. ಬೆದರಿಯಾಳು. ಅರ್ಥವಂತ ಆದ ಅಯೋಧ್ಯಾನಗರದ ಭಾಷೆಯನ್ನು ಆಡಿದರೆ ಸರಿ. ಬೇರೆ ಭಾಷೆಯಿಂದ ಈಕೆಯನ್ನು ಸಮಾಧಾನಪಡಿಸಲು ಸಾಧ್ಯ ಇಲ್ಲ.

'ರಾಕ್ಷಸರು ಈಗಾಗಲೇ ಬಹಳ ಹೆದರಿಸಿ ಇದಾರೆ ಈಕೆಯನ್ನು. ನನ್ನ ಈ ರೂಪವನ್ನೂ ನನ್ನ ಮಾತನ್ನೂ ಕೇಳಿದರೆ ಈಕೆ ಇನ್ನೂ ಬೆದರಬಹುದು. ರಾವಣ ಕಾಮರೂಪಿ. ವಿಶಾಲಾಕ್ಷಿ ಸಹೃದಯೆ ಮಹಾಪತಿವ್ರತೆ ಆದ ಸೀತಾ

ದೇವಿಗೆ ಅದು ಗೊತ್ತು. ರಾವಣನೇ ಬಂದ ಎಂದು ಗಟ್ಟಿ ಆಗಿ ಕೂಗಿಕೊಂಡರೆ? ರಾಕ್ಷಸಿಯರು ಎಲ್ಲರೂ ಯಮದೂತಿಯರಂತೆ ನನ್ನ ಮೇಲೆ ಬೀಳಲು ಬರುತ್ತಾರೆ. ವಿಕಾರ ಮುಖದ ಆ ರಾಕ್ಷಸಿಯರು ನನ್ನನ್ನು ಹಿಡಿಯಲು ಹಿಡಿದು ಕೊಲ್ಲಲು ಶಕ್ತಿಮೀರಿ ಯತ್ನಿಸುತ್ತಾರೆ. ಆಗ ನಾನು ಮರದ ಕೊಂಬೆಗಳನ್ನೂ ಬುಡಗಳನ್ನೂ ಕಿತ್ತು ಸುತ್ತಲೂ ಓಡಾಡಿದರೆ ಎಲ್ಲರೂ ಬೆದರುತ್ತಾರೆ.

'ನನ್ನ ಈ ಚಿಕ್ಕ ರೂಪವನ್ನು ಬಿಟ್ಟು ದೊಡ್ಡ ರೂಪವನ್ನು ಧರಿಸಬೇಕು. ಅದನ್ನು ನೋಡಿಯೇ ರಾಕ್ಷಸಿಯರು ದಿಗಿಲುಬಿದ್ದು ರಾವಣನ ಅರಮನೆಯ ಕಾವಲುಗಾರರು ಆದ ರಾಕ್ಷಸಭಟರನ್ನು ಕರೆಯುತ್ತಾರೆ. ಅವರು ಶೂಲಗಳನ್ನೂ ಕತ್ತಿಗಳನ್ನೂ ಶಕ್ತ್ಯಾಯುಧಗಳನ್ನೂ ಬಗೆಬಗೆಯ ಆಯುಧಗಳನ್ನೂ ಹಿಡಿದು ಬರುತ್ತಾರೆ. ಯುದ್ಧಸನ್ನದ್ಧರು ಆಗಿ ಬರುತ್ತಾರೆ. ನಾನು ಅವರ ಸಂಗಡ ಹೋರಾಡುತ್ತೇನೆ. ಅವರನ್ನು ಎಲ್ಲರನ್ನೂ ಕೊಲ್ಲುತ್ತೇನೆ. ಅವರಲ್ಲಿ ಕೆಲವರು ಜಾಗರೂಕರು ಇರಬಹುದು. ಅವರು ನನ್ನನ್ನು ಹಿಡಿದುಕೊಳ್ಳಬಹುದು. ಹಾಗೆ ಅವರು ಹಿಡಿದುಕೊಂಡರೆ ಕೆಲಸ ಕೆಡುತ್ತದೆ. ಸೀತಾದೇವಿಗೆ ರಾಮನ ಸಮಾಚಾರ ತಿಳಿಯುವುದು ಹೇಗೆ? ನಾನು ಈ ಮಹಾಸಮುದ್ರವನ್ನು ದಾಟಿ ಹೋಗುವ ಸಂದರ್ಭವೇ ಇಲ್ಲದೆಹೋಗುತ್ತದೆ. ಅಲ್ಲದೆ, ಈ ರಾಕ್ಷಸರಿಗೆ ಪ್ರಾಣಿಹಿಂಸೆಯಲ್ಲಿ ಆಸೆ ಹೆಚ್ಚು. ನನ್ನ ಮೇಲಿನ ಕೋಪಕ್ಕೆ ಜಾನಕಿಯನ್ನು ಕೊಲ್ಲಬಹುದು ಅವರು. ನನ್ನನ್ನೇ ಕೊಲ್ಲಬಹುದು. ಅಂತೂ ರಾಮಸುಗ್ರೀವರ ಕೆಲಸ ಕೆಡುತ್ತದೆ.

'ಸೀತಾದೇವಿ ಇರುವ ಲಂಕೆ ಸಮುದ್ರಮಧ್ಯದಲ್ಲಿ ಇದೆ. ಎಲ್ಲೂ ದಾರಿ ಇಲ್ಲ. ರಾಕ್ಷಸರ ಕಾವಲು ಬೇರೆ. ರಾಕ್ಷಸರ ಸಂಗಡ ಯುದ್ಧಮಾಡಿ ಸತ್ತರೂ ಸೆರೆ ಸಿಕ್ಕರೂ ರಾಮಕಾರ್ಯವನ್ನು ಸಾಧಿಸುವವರು ಬೇರೆ ಯಾರು? ನಾನು ಇಲ್ಲಿ ಸತ್ತರೆ ಈ ನೂರು ಯೋಜನದ ಸಮುದ್ರವನ್ನು ದಾಟಬರಬಲ್ಲ ವಾನರ ಮತ್ತೊಬ್ಬ ಇಲ್ಲವಲ್ಲ. ರಾಕ್ಷಸರು ಎಷ್ಟೇ ಸಾವಿರಾರು ಮಂದಿ ಆದರೂ ಹೋರಾಡಬಲ್ಲೆ ನಾನು. ಆ ಸಾಮರ್ಥ್ಯ ಇದೆ. ಅವರಿಗೆ ಹೆದರುವವನು ಅಲ್ಲ. ಅವರನ್ನು ಕೊಂದುಹಾಕಬಲ್ಲೆ. ಆದರೆ ಹೋರಾಡಿ ದಣಿದರೆ ಆಮೇಲೆ ಸಮುದ್ರವನ್ನು ದಾಟಿ ಅತ್ತಣ ದಡಕ್ಕೆ ಹೋಗಲಾರೆ.

'ಯುದ್ಧದಲ್ಲಿ ಸೋಲು ಗೆಲವು ಕಟ್ಟಿಟ್ಟದ್ದು ಅಲ್ಲ. ಅನಿಶ್ಚಿತ. ಇಂಥ ಸಂಶಯದ ಕೆಲಸಗಳನ್ನು ಮಾಡುವುದು ನನಗೆ ಇಷ್ಟ ಇಲ್ಲ. ಹಿಂದೆ ಮುಂದೆ

ಯೋಚಿಸದೆ ಪ್ರಾಜ್ಞರು ಯಾರೂ ಸಂದೇಹ ಇರುವ ಕೆಲಸಗಳನ್ನು ಮಾಡರು. ನಾನು ಈಗ ಮಾತಾಡಿಸದೆಹೋದರೆ ಸೀತಾದೇವಿ ಪ್ರಾಣಬಿಡುತ್ತಾಳೆ. ಮಾತು ಆಡಿಸಿದರೆ ಇಷ್ಟು ಅನರ್ಥ. ದೇಶಕಾಲವಿರುದ್ಧ ಆಗಿ ವಿವೇಕ ಇಲ್ಲದೆ ನಡೆದರೆ ದೂತ, ಬೆಳಕು ಹರಿದಾಗ ಕತ್ತಲೆ ಮಾಯ ಆಗುವಂತೆ ಕೈಗೂಡುವ ಕೆಲಸವೂ ಕೆಡುತ್ತದೆ. ಹೀಗೆ ಮಾಡಬೇಕು ಎಂದು ಮೊದಲೇ ನಿಶ್ಚಯಿಸಿದ ಕೆಲಸವೂ ಕೂಡ ವಿವೇಕ ಇಲ್ಲದ ದೂತನ ಕೈಯಲ್ಲಿ ಕೆಡುತ್ತದೆ. ರಾಮಕಾರ್ಯ ಕೆಡಬಾರದು. ನಾನು ಅವಿವೇಕಿ ಎನಿಸಿಕೊಳ್ಳಬಾರದು. ನಾನು ಮಹಾಸಮುದ್ರವನ್ನು ದಾಟಿ ಬಂದದ್ದೂ ವ್ಯರ್ಥ ಆಗಬಾರದು. ಸೀತಾದೇವಿ ನನ್ನನ್ನು ನೋಡಿ ಹೆದರಬಾರದು. ನನ್ನ ಮಾತನ್ನು ಆಕೆ ಕೇಳಬೇಕು. ಏನು ಉಪಾಯ ಇದಕ್ಕೆ ?'

ಹನುಮಂತ ಬಹಳ ಯೋಚಿಸಿದ. ಮನಸಿನಲ್ಲಿ ನಿಶ್ಚಯ ಮಾಡಿಕೊಂಡ. 'ಎಂಥ ಕಷ್ಟದ ಕೆಲಸವನ್ನು ಆದರೂ ಸುಲಭ ಆಗಿ ಮಾಡಬಲ್ಲ ಶ್ರೀರಾಮನನ್ನು ಸೀತಾದೇವಿಯ ಪ್ರಿಯ ಬಂಧುವನ್ನು ಸ್ತುತಿಸುತ್ತೇನೆ. ಈಕೆಯ ಮನಸ್ಸು ಆ ಮಹಾನುಭಾವನಲ್ಲೇ ನೆಟ್ಟು ಇದೆ. ಆದ್ದರಿಂದ ಈಕೆಗೆ ಭಯ ಆಗಲಾರದು. ಇಕ್ಷ್ವಾಕುಕುಲಶ್ರೇಷ್ಠ ಧರ್ಮಜ್ಞ ಶ್ರೀರಾಮ ಈಕೆಗೆ ಹೇಳು ಎಂದು ಹೇಳಿದ ಧರ್ಮಯುಕ್ತ ಶುಭವಚನವನ್ನು ಈಕೆಯ ಕಿವಿಗೆ ಬೀಳುವಂತೆ ಹೇಳುತ್ತೇನೆ. ಕಿವಿಗೆ ಇಂಪು ಆಗಿ ಹೇಳುತ್ತೇನೆ. ನಂಬಿಕೆ ಹುಟ್ಟಿಸುತ್ತೇನೆ.'

ಮನಸಿನಲ್ಲಿ ಹೀಗೆ ನಿಶ್ಚಯಿಸಿಕೊಂಡ. ಮಹಾನುಭಾವ ಹನುಮಂತ ಮರದ ಮೇಲೇ ಕುಳಿತು ಇಂಪು ಆಗಿ ಮಾತಾಡಿದ.

೩೧

"ದಶರಥಮಹಾರಾಜ ರಥಗಜತುರಗಾದಿ ಚತುರಂಗಬಲದ ಒಡೆಯ. ಬಹಳ ಪುಣ್ಯಶೀಲ. ಲೋಕವಿಖ್ಯಾತ. ಆತನ ನಡತೆ ಬಹಳ ಋಜು. ಕಪಟವನ್ನು ಅರಿಯ. ಮಹಾಪರಾಕ್ರಮಶಾಲಿ. ರಾಜರ್ಷಿಗಳಲ್ಲಿ ಶ್ರೇಷ್ಠ ಗುಣದಲ್ಲಿ. ತಪಸ್ಸಿನಲ್ಲಿ ಮಹರ್ಷಿಗಳಿಗೆ ಸಮಾನ. ಬಲದಲ್ಲಿ ದೇವೇಂದ್ರನಿಗೆ ಸಾಟಿ. ದಶರಥಮಹಾರಾಜ ಎಂದೂ ಹಿಂಸೆ ಮಾಡಿದವನು ಅಲ್ಲ. ಉದಾರಿ. ಮಹಾಸಾತ್ವಿಕ. ಇಕ್ಷ್ವಾಕುವಂಶಮುಖ್ಯ. ಆತನ ಸಂಪತ್ತು ಅಪಾರ. ಸಮಸ್ತ

ರಾಜಲಕ್ಷಣಗಳೂ ಇದ್ದವು ಆತನಲ್ಲಿ. ಮಹಾತೇಜಸ್ವಿ. ಎಲ್ಲ ರಾಜರಿಗೂ ಮೇಲ್ಪಂಜ್ತಿ. ಚತುಸ್ಸಮುದ್ರಪರಿವೃತ ಭೂಮಂಡಲಕ್ಕೆ ಎಲ್ಲಾ ಚಕ್ರವರ್ತಿ. ಪ್ರಜೆಗಳಿಗೂ ಸುಖ ಕೊಡುತ್ತ ಇದ್ದ. ತಾನೂ ಸುಖಪಡುತ್ತ ಇದ್ದ.

"ಆತನ ಹಿರಿಯ ಮಗ ರಾಮ. ಒಲವಿನ ಮಗ. ರಾಮನ ಮುಖ ಚಂದ್ರಬಿಂಬ. ಧನುರ್ಧಾರಿಗಳಲ್ಲಿ ರಾಮ ಮೇಟಿ. ಸಮಸ್ತ ಧರ್ಮಸೂಕ್ಷ್ಮಗಳನ್ನೂ ಬಲ್ಲ. ಕ್ಷತ್ರಿಯಧರ್ಮವನ್ನೂ ವರ್ಣಾಶ್ರಮಧರ್ಮವನ್ನೂ ಪಾಲಿಸುವವನು. ತನ್ನ ಬಂಧುಗಳನ್ನೂ ಸಮಸ್ತ ಪ್ರಾಣಿಗಳನ್ನೂ ಕಾಪಾಡುವವನು. ಶತ್ರು-ಭಯಂಕರ ಆದವನು.

"ಸತ್ಯಸಂಧ ವೃದ್ಧ ಆದ ತಂದೆಯ ಮಾತಿನಂತೆ ಹೆಂಡತಿಯನ್ನೂ ತಮ್ಮನನ್ನೂ ಕರೆದುಕೊಂಡು ವನವಾಸಕ್ಕೆ ಬಂದ. ಮಹಾರಣ್ಯದಲ್ಲಿ ಬೇಟೆಗೋಸುಗ ತಿರುಗಾಡುತ್ತ ಇದ್ದ. ಜನಸ್ಥಾನದಲ್ಲಿ ಇದ್ದ ಶೂರರು ಕಾಮರೂಪರು ಆದ ರಾಕ್ಷಸರನ್ನು ಎಲ್ಲರನ್ನೂ ಕೊಂದುಹಾಕಿದ. ಖರ, ದೂಷಣ ಇಬ್ಬರೂ ರಾಕ್ಷಸ ವೀರರು ಸತ್ತರು. ಇದನ್ನು ಕೇಳಿ ಲಂಕಾಧೀಶ ರಾವಣನಿಗೆ ಸಿಟ್ಟುಬಂತು. ಮಾಯಾಮೃಗದ ನೆಪದಿಂದ ರಾಮನಿಗೆ ಮೋಸ ಮಾಡಿ ಆತನ ಹೆಂಡತಿ ಸೀತಾದೇವಿಯನ್ನು ಕದ್ದುತಂದ.

"ರಾಮ ತನ್ನ ಪತಿವ್ರತೆ ಹೆಂಡತಿಯನ್ನು ಹುಡುಕುತ್ತ ಬಂದ. ಅಲ್ಲಲ್ಲಿ ಹುಡುಕಿ ಕಡೆಗೆ ವಾನರರಾಜ ಸುಗ್ರೀವನ ಸ್ನೇಹ ಮಾಡಿದ. ಅರಿಂದಮ ಮಹಾಬಲಾಢ್ಯ ಆದ ರಾಮ ವಾಲಿಯನ್ನು ಕೊಂದು ಸುಗ್ರೀವನಿಗೆ ವಾನರ ರಾಜ್ಯವನ್ನು ಕೊಡಿಸಿದ. ಸುಗ್ರೀವನ ಅಪ್ಪಣೆ, ವಾನರರು ಎಲ್ಲರೂ ಸಾವಿರಾರು ಮಂದಿ ಒಂದೊಂದು ಗುಂಪು ಆಗಿ ಒಂದೊಂದು ದಿಕ್ಕಿಗೆ ಸೀತಾದೇವಿಯನ್ನು ಹುಡುಕಲಿಕ್ಕೆ ಹೊರಟರು.

"ನಾನೂ ಸೀತಾದೇವಿಯನ್ನು ಹುಡುಕಲಿಕ್ಕೇ ಬಂದೆ. ಗೃಧ್ರರಾಜ ಸಂಪಾತಿಯ ಮಾತಿನಂತೆ ನೂರು ಯೋಜನದ ಸಮುದ್ರವನ್ನು ನೆಗೆದು ಬಂದೆ. ಶ್ರೀರಾಮ ಏನು ಹೇಳಿದ್ದನೋ ಅದೇ ರೂಪ, ಅದೇ ಬಣ್ಣ, ಅದೇ ಕಾಂತಿ ಈಕೆಯಲ್ಲಿ. ಈಕೆಯೇ ಸೀತಾದೇವಿ ಇರಬೇಕು" ಎಂದ ಹನುಮಂತ ತನಗೆ ತಾನೇ ಹೇಳಿಕೊಳ್ಳುವಂತೆ.

ಸೀತೆಯ ಕಿವಿಗೆ ಬಿತ್ತು ಈ ಮಾತು. ಆಕೆಗೆ ಪರಮ ಆಶ್ಚರ್ಯ. ಉಂಗುರಕೂದಲಿನ ಆ ಭೀರು ಕೂದಲು ಸುತ್ತಿ ಇದ್ದ ತನ್ನ ಕತ್ತನ್ನು ಎತ್ತಿ ಮರದ ಮೇಲೆ ನೋಡಿದಳು. ದಿಕ್ಕುದಿಕ್ಕುಗಳನ್ನು ನೋಡಿದಳು. ರಾಮನ ಧ್ಯಾನ ಮಾಡುತ್ತ ಇದ್ದಳು ಆ ಪತಿವ್ರತೆ ಅನವರತವೂ. ರಾಮನ ಗುಣ ವರ್ಣನೆಯನ್ನು ಕೇಳಿ ಬಹಳ ಸಂತೋಷ ಆಯಿತು ಆಕೆಗೆ. ಎಲ್ಲಿಂದ ಬಂತು ಈ ಧ್ವನಿ ಎಂದು ಸುತ್ತಲೂ ನೋಡಿದಳು. ಮೇಲೆ ಕೆಳಗೆ ನೋಡಿದಳು. ಶಿಂಶುಪಾವೃಕ್ಷದ ಮೇಲೆ ಕುಳಿತು ಇದ್ದ ಸುಗ್ರೀವನ ಮಂತ್ರಿ ಉದಯಕಾಲದ ರವಿಯಂತೆ ಅಮಿತ ಬುದ್ಧಿಶಾಲಿ ವಾಯುಪುತ್ರ ಹನುಮಂತನನ್ನು ಕಂಡಳು.

೩೨

ಆ ಮರದ ಕೊನೆಯಲ್ಲಿ ರೆಂಬೆಗಳ ಮರೆಯಲ್ಲಿ ಅಡಗಿ ಕುಳಿತು ಇದ್ದ ಹನುಮಂತ. ಬೆಳ್ಳನೆ ವಸ್ತ್ರ ನಡುವಿಗೆ. ಮಿಂಚಿನಬಳ್ಳಿಯ ಹಾಗೆ ಹೊಳೆ ಹೊಳೆವ ಪಿಂಗಳ ವರ್ಣದ ಮೈ. ಅರಳಿದ ಅನೇಕ ಪುಷ್ಪಗಳ ಹಾಗೆ ಹೊಳೆ ಯುವ ದೇಹಕಾಂತಿ. ಪುಟ ಹಾಕಿದ ಬಂಗಾರದಂತೆ ಮಿರುಮಿರುಗುವ ಕಣ್ಣು. ಮುಖದಲ್ಲಿ ವಿನೀತಭಾವ.

ಸೀತೆಗೆ ಹನುಮಂತನನ್ನು ನೋಡಿ ಭಯ-ಆಶ್ಚರ್ಯ. 'ಈ ವಾನರನ ರೂಪ ಭಯಂಕರ ಆಗಿದೆ. ಹತ್ತಿರ ಹೋಗಿ ಕಣ್ಣು ಇಟ್ಟು ನೋಡೋಣ ಎಂದರೆ ಸಾಧ್ಯ ಇಲ್ಲ' ಎಂದುಕೊಂಡಳು. ನಡುಗಿ ಎಚ್ಚರ ತಪ್ಪಿದಳು. ಗಟ್ಟಿ ಆಗಿ ಅಳಲಾರದೆ ಮಂದ ಸ್ವರದಲ್ಲೇ "ರಾಮಾ, ಲಕ್ಷ್ಮಣ" ಎಂದು ಅತ್ತಳು. ಮರದ ಮೇಲೆ ಇದ್ದ ವಾನರನನ್ನು ಮತ್ತೆ ಮತ್ತೆ ನೋಡಿದಳು. ಎಲ್ಲವೂ ಬರೀ ಕನಸು ಎಂದುಕೊಂಡಳು.

ಮತ್ತೆ ಆ ಮರದ ಕಡೆ ನೋಡಿದಳು. ದೊಡ್ಡ ಸೊಟ್ಟ ಮುಖದವನು, ಸುಗ್ರೀವನ ಅಪ್ಪಣೆಯಂತೆ ನಡೆಯುವ ಮಂತ್ರಿ, ಬುದ್ಧಿವಂತರಲ್ಲಿ ಮಹಾಶ್ರೇಷ್ಠ ಆದ ವಾಯುಪುತ್ರ ಆಂಜನೇಯನನ್ನು ನೋಡಿ ಪ್ರಾಣಹೋದವಳಂತೆ ಸೀತಾ ದೇವಿ ಮೂರ್ಛೆಹೋದಳು.

ಬಹಳ ಹೊತ್ತಿನ ಮೇಲೆ ಆ ವಿಶಾಲನೇತ್ರಿ ಎಚ್ಚೆತ್ತಳು. ಆಲೋಚನೆ ಮಾಡಿದಳು. 'ವಿಕಾರರೂಪದ ಕೋತಿಯನ್ನು ಕಂಡೆ ಕನಸಿನಲ್ಲಿ. ಕನಸಿನಲ್ಲಿ

ಕೋತಿಯನ್ನು ನೋಡಿದರೆ ಬಂಧುನಾಶ ಎನ್ನುತ್ತದೆ ಶಾಸ್ತ್ರ. ಏನು ಬರಲಿ ದೆಯೊ! ಲಕ್ಷ್ಮಣಸಮೇತ ರಾಮಪ್ರಭು ಕ್ಷೇಮದಿಂದ ಇರಲಿ. ನನ್ನ ತಂದೆ ಜನಕಮಹಾರಾಜ ಸುಖದಿಂದ ಇರಲಿ.

'ಅಯ್ಯೋ, ಇದು ಎಲ್ಲಿಯ ಕನಸು? ನಿದ್ದೆ ಬಂದರೆ ಅಲ್ಲವೆ ಕನಸು? ರಾಮವಿಯೋಗದ ಪರಿತಾಪ, ರಾಕ್ಷಸಿಯರ ಬಾಧೆಯ ನರಳಿಕೆ. ಇದರಲ್ಲಿ ನನಗೆ ನಿದ್ದೆ ಎಲ್ಲಿಯದು? ಪೂರ್ಣಚಂದ್ರನ ಮುಖದ ಪ್ರಿಯ ಪತಿಯನ್ನು ಅಗಲಿದಮೇಲೆ ಒಂದು ಗಳಿಗೆ ಆದರೂ ನಿದ್ದೆ ಎಲ್ಲಿ ನನಗೆ? ಸುಖ ಎಲ್ಲಿ? ಇದು ಕನಸು ಅಲ್ಲ.

'ಸದಾ ರಾಮಧ್ಯಾನವೇ ನನಗೆ. ಯಾವಾಗಲೂ ರಾಮನಾಮ ಜಪವೇ. ಅದಕ್ಕೆ ಅನುಗುಣ ಆಗಿ ರಾಮಕಥೆಯನ್ನೇ ಕೇಳಿದೆ. ನನ್ನ ಮನಸ್ಸು ರಾಮಮಯ ಆಗಿದೆ. ಸದಾ ಅದೇ ಚಿಂತೆ. ಏನು ಕಂಡರೂ ಏನು ಕೇಳಿ ಬಂದರೂ ಶ್ರೀರಾಮವಿಷಯ ಆಗಿಯೇ ತೋರುತ್ತ ಇದೆ ನನಗೆ. ಯಾರೇ ಇದಿರಿಗೆ ಬಂದು ನಿಂತರೂ ರಾಮಚರಿತೆಯನ್ನು ಹೇಳುವಂತೆ ಎನಿಸುತ್ತದೆ.

'ಇದು ಬರೀ ಭ್ರಾಂತಿ ಇರಬಹುದೆ? ನನ್ನ ಮನೋರಥವೇ ಹೀಗೆ ಕಾಣಿಸುತ್ತ ಇದೆಯೆ? ಬುದ್ಧಿಯಿಂದ ಪರ್ಯಾಲೋಚಿಸಿ ನೋಡಿದರೆ ಹೀಗೆ ಎನ್ನಲು ಸಾಧ್ಯ ಅಲ್ಲ. ಮನೋರಥಕ್ಕೆ ರೂಪ ಎಲ್ಲಿ ಬಂತು? ಪ್ರತ್ಯಕ್ಷ ಆಗಿ ಕಾಣದು ಮನೋರಥ. ಈ ವಾನರ ಪ್ರತ್ಯಕ್ಷ ಸ್ಪಷ್ಟ ಆಗಿ ಕಾಣುತ್ತ ಇದಾನೆ. ನನಗೆ ಏನೋ ಹೇಳುತ್ತ ಇದಾನೆ. ಕಂಠವೂ ಕೇಳಿಸುತ್ತ ಇದೆ. ಇದು ಕನಸು ಅಲ್ಲ. ನಿಜ ಆಗಿ ಈ ವಾನರನೇ ಹೇಳುತ್ತ ಇದಾನೆ ರಾಮಕಥೆ.

'ಈ ವಾನರ ಹೇಳಿದ್ದು ಎಲ್ಲವೂ ಯಥಾರ್ಥ ಆಗಲಿ. ದೇವೇಂದ್ರನಿಗೆ ಬೃಹಸ್ಪತಿಗೆ ಬ್ರಹ್ಮದೇವನಿಗೆ ಅಗ್ನಿದೇವನಿಗೆ ನಮಸ್ಕಾರ.'

೩೩

ಮಹಾವೀರ ಹನುಮಂತ ಮರದಿಂದ ಕೆಳಗೆ ಇಳಿದ. ಅತ್ಯಂತ ವಿನಯ ದಿಂದ ಸೀತಾದೇವಿಗೆ ನಮಸ್ಕರಿಸಿದ. ಕೈಜೋಡಿಸಿ ನಿಂತ. ಅವನ ಮುಖ ಹವಳದಂತೆ ಹೊಳೆಯುತ್ತಿತ್ತು. ಬಹಳ ಸವಿನಯತಿನಿಂದ ಹೇಳಿದ: "ತಾಯಿ,

ಯಾರು ನೀನು? ನಿನ್ನ ಕಣ್ಣು ಕಮಲದ ಹಾಗೆ ಇವೆ. ಮಾಸಿದ ಬಟ್ಟೆ ಉಟ್ಟು ಇದೀಯೆ. ಬಿಳಿದಾವರೆಯ ಹಾಗೆ ಇರುವ ನಿನ್ನ ಕಣ್ಣಿನಿಂದ ನೀರು ಸುರಿಯುವಂತೆ ಏಕೆ ಕಂಬನಿ ಸುರಿಯುತ್ತ ಇದೆ? ಶೋಭನಾಂಗಿ, ನೀನು ಯಾರು? ದೇವತೆಯೆ, ಅಸುರಸ್ತ್ರೀಯೆ, ನಾಗಕನ್ಯೆಯೆ, ಗಂಧರ್ವಾಂಗನೆಯೆ, ರಾಕ್ಷಸಸ್ತ್ರೀಯೆ, ಯಕ್ಷಯುವತಿಯೆ, ಕಿನ್ನರಲಲನೆಯೆ? ಸುಂದರವದನೆ, ರುದ್ರ ಗಣದವಳೆ ನೀನು? ಅಷ್ಟವಸುಗಳು ಸಪ್ತಮರುತ್ತುಗಳು—ಯಾರಿಗೆ ಸೇರಿ ದವಳು? ದೇವತೆಯ ಹಾಗೆ ಕಾಣುತ್ತ ಇದೀಯಲ್ಲ. ಚಂದ್ರನನ್ನು ಅಗಲಿ ಸ್ವರ್ಗದಿಂದ ಕೆಳಗೆ ಬಿದ್ದ ನಕ್ಷತ್ರಶ್ರೇಷ್ಠ ರೋಹಿಣಿಯೆ ನೀನು? ಕಲ್ಯಾಣಿ, ಕೋಪದಿಂದಲೋ ಮೋಹದಿಂದಲೋ ಗಂಡ ವಸಿಷ್ಠಮಹರ್ಷಿಯನ್ನು ರೇಗಿಸಿ ಭೂಮಿಗೆ ಇಳಿದುಬಂದ ಅರುಂಧತಿಯೆ ನೀನು?

"ಸುಮಧ್ಯಮಾ, ನಿನ್ನ ಗಂಡ ಯಾರು? ನಿನ್ನ ತಂದೆ, ಮಗ ಯಾರು? ನಿನ್ನ ಒಡಹುಟ್ಟುಗಳು ಯಾರು? ಯಾರಾದರೂ ಬಂಧುಗಳು ಪರಲೋಕಕ್ಕೆ ಹೋದರೆ? ಅವರನ್ನು ನೆನೆದು ಅಳುತ್ತೀಯಾ? ದೇವಿ, ನೀನು ಅಳುತ್ತ ಇದೀಯೆ. ನಿಟ್ಟುಸಿರು ಬಿಡುತ್ತ ಇದೀಯೆ. ನೆಲವನ್ನು ನೋಡುತ್ತ ಇದೀಯೆ. ರಾಜಲಕ್ಷಣಗಳು ಇವೆ ನಿನಗೆ. ನೀನು ದೇವತೆ ಅಲ್ಲ, ರಾಜಪುತ್ರಿ ಇರಬೇಕು. ನಿನ್ನ ಅವಯವಸೌಷ್ಠವ ಸಾಮುದ್ರಿಕಾಲಕ್ಷಣ ನೋಡಿದರೆ ರಾಜನ ಪಟ್ಟದ ರಾಣಿಯೋ ರಾಜಕುಮಾರಿಯೋ ಇರಬೇಕು ನೀನು ಎನಿಸುತ್ತ ಇದೆ.

"ಭದ್ರೆ, ಜನಸ್ಥಾನದಿಂದ ರಾವಣಾಸುರ ಬಲಾತ್ಕಾರದಿಂದ ಕದ್ದುತಂದ ಸೀತಾದೇವಿಯೆ ನೀನು? ಹಾಗೆ ಇದ್ದರೆ ನಿನಗೆ ಮಂಗಳ ಆಗುತ್ತದೆ. ನಿನ್ನ ಈ ದುಃಖ, ನಿನ್ನ ಮನುಷ್ಯದುರ್ಲಭ ರೂಪ, ನಿನ್ನ ಈ ತಾಪಸವೇಷ ನೋಡಿ ನೀನು ರಾಮಪತ್ನಿಯೇ ಎಂದುಕೊಂಡೆ. ಸಂದೇಹ ಇಲ್ಲ."

ರಾಮಕೀರ್ತನದಿಂದ ಸೀತೆ ಹರ್ಷಗೊಂಡು ಇದ್ದಳು. ಈ ಮಾತು ಕೇಳಿ ಬಹಳ ಹಿಗ್ಗು ಆಯಿತು. ಕೈಮುಗಿದುಕೊಂಡು ಮರದ ಕೆಳಗೆ ನಿಂತಿದ್ದ ಹನುಮಂತನಿಗೆ ಹೇಳಿದಳು: "ಈ ಭೂಮಿಯಲ್ಲಿ ಎಲ್ಲ ರಾಜಶ್ರೇಷ್ಠರಿಗೂ ಮೇಲು ಆದ ಶತ್ರುಕುಲತಾಪನ ಆತ್ಮಜ್ಞ ದಶರಥರಾಯನ ಸೊಸೆ ನಾನು. ವಿದೇಹಾಧಿಪತಿ ಮಹಾಪರಾಕ್ರಮವಂತ ಆದ ಜನಕಮಹಾರಾಜನ ಮಗಳು. ಸೀತೆ ನನ್ನ ಹೆಸರು. ಧೀಮಂತ ರಾಮಪ್ರಭುವಿನ ಜೊತೆಯಲ್ಲಿ ದಶರಥರಾಯನ

ಮನೆಯಲ್ಲಿ ಹನ್ನೆರಡು ವರ್ಷ ಸಮಸ್ತ ಮಾನುಷಭೋಗಗಳನ್ನೂ ಅನುಭವಿಸಿದೆ. ಎಲ್ಲ ಕೋರಿಕೆಗಳೂ ಈಡೇರಿದವು.

" ಹದಿಮೂರನೆ ವರ್ಷ. ಇಕ್ಷ್ವಾಕುಕುಲನಂದನನಿಗೆ, ತನ್ನ ಹಿರಿಯ ಮಗ ಶ್ರೀರಾಮಚಂದ್ರನಿಗೆ ಯೌವರಾಜ್ಯಾಭಿಷೇಕ ಮಾಡಲು ನಿಶ್ಚಯಿಸಿದ ದಶರಥ ಮಹಾರಾಜ. ಕುಲಗುರು ವಸಿಷ್ಠರ ಸಲಹೆಪಡೆದ. ಪಟ್ಟಾಭಿಷೇಕಕ್ಕೆ ಬೇಕು ಬೇಕಾದ ಎಲ್ಲ ಸಂಭಾರಗಳನ್ನೂ ಸಿದ್ಧಪಡಿಸುತ್ತ ಇದ್ದರು. ದಶರಥ ಮಹಾರಾಜನ ಹೆಂಡತಿ ಕೈಕೇಯಿ ' ರಾಮನಿಗೆ ಪಟ್ಟಕಟ್ಟಿದರೆ ನಾನು ಅನ್ನ ತಿನ್ನುವದು ಇಲ್ಲ, ನೀರು ಮುಟ್ಟುವುದು ಇಲ್ಲ, ಪ್ರಾಣ ಬಿಡುತ್ತೇನೆ. ಹಿಂದೆ ಪ್ರೀತಿಯಿಂದ ನನಗೆ ಎರಡು ವರ ಕೊಟ್ಟು ಇದ್ದೆ. ಕೊಟ್ಟ ಮಾತು ಹುಸಿ ಹೋಗಬಾರದು. ಈಗ ರಾಮನನ್ನು ವನವಾಸಕ್ಕೆ ಕಳಿಸು ' ಎಂದು ಕೇಳಿದಳು.

" ದಶರಥಮಹಾರಾಜ ಸತ್ಯವಂತ. ಕೈಕೇಯಿಯ ಕ್ರೂರ ಅಪ್ರಿಯ ವಚನವನ್ನು ಕೇಳಿದ. ಕೈಕೇಯಿಗೆ ತಾನು ಕೊಟ್ಟು ಇದ್ದ ವರದ ಮಾತು ನೆನಪು ಆಯಿತು. ರಾಜ ಮೂರ್ಛೆಹೋದ. ಆ ಸತ್ಯಸಂಧ ಪರಮಧಾರ್ಮಿಕ ವಯೋವೃದ್ಧ ಆದ ರಾಜ ತನ್ನ ಹಿರಿಯ ಮಗನನ್ನು ರಾಜ್ಯಾಧಿಕಾರವನ್ನು ಬಿಡು ಎಂದು ಬೇಡಿಕೊಂಡ. ಶ್ರೀಮಂತ ಶ್ರೀರಾಮನಿಗೆ ಪಟ್ಟಾಭಿಷೇಕಕ್ಕಿಂತಲೂ ಪಿತೃವಾಕ್ಯಪರಿಪಾಲನೆಯೇ ಹೆಚ್ಚು ಆಗಿ ಕಂಡಿತು. ತಂದೆಯ ಮಾತನ್ನು ಮನಸಾರೆ ಒಪ್ಪಿ ರಾಜ್ಯಾಧಿಕಾರವನ್ನು ತ್ಯಜಿಸಿದ ಶ್ರೀರಾಮ. ಆತ ಸತ್ಯಪರಾಕ್ರಮ. ಬೇಡಿದವರಿಗೆ ಬೇಡಿದ್ದನ್ನು ನೀಡುವ ಮಹಾನುಭಾವ. ಕೈನೀಡಿ ಯಾರಿಂದಲೂ ಏನನ್ನೂ ತೆಗೆದುಕೊಂಡವನು ಅಲ್ಲ. ಪ್ರಾಣಾಪಾಯ ಆದರೂ ಚಿಂತೆ ಇಲ್ಲ. ಅಪ್ರಿಯವಚನ ಎಂಬುದು ಆತನ ಬಾಯಿಯಿಂದ ಹೊರಡುವುದೇ ಇಲ್ಲ.

" ಆ ಮಹಾತ್ಮ ತತ್‌ಕ್ಷಣವೇ ರಾಜಯೋಗ್ಯ ವಸ್ತ್ರಗಳನ್ನು ಬಿಚ್ಚಿಹಾಕಿ ನಾರುಬಟ್ಟೆ ಉಟ್ಟ. ವನಪ್ರಯಾಣಕ್ಕೆ ಸಿದ್ಧ ಆದ. ರಾಜ್ಯದ ಬಯಕೆಯನ್ನು ಮನಸಾ ತ್ಯಜಿಸಿದ. ನನ್ನನ್ನು ತಾಯಿ ಕೌಸಲ್ಯಾದೇವಿಗೆ ಒಪ್ಪಿಸಿದ. ನನಗೋ ಆತನ ಜೊತೆಯಲ್ಲಿಯೆ ಇರಬೇಕು, ಆತನ ಸಂಗಡ ಕಾಡಿನಲ್ಲಿ ಅಲೆಯಬೇಕು ಎಂಬ ಆಸೆ. ಆತನಿಗಿಂತ ಮೊದಲೇ ನಾನು ಕಾಡಿಗೆ ಹೊರಟೆ. ಪತಿಯನ್ನು ಬಿಟ್ಟು ಸ್ವರ್ಗದಲ್ಲಿ ಇರು ಎಂದರೂ ನನಗೆ ಇಷ್ಟ ಇಲ್ಲ. ನಾನು ಪತಿವ್ರತೆ.

" ಆತನ ತಮ್ಮ ಲಕ್ಷ್ಮಣ ಮಹಾನುಭಾವ. ಮಿತ್ರನಂದನ ಆ ಸುಮಿತ್ರಾ ನಂದನ. ಅಣ್ಣನ ಸೇವೆಯೇ ಮಹಾಭಾಗ್ಯ. ಅಣ್ಣನನ್ನು ಹಿಂಬಾಲಿಸಬೇಕು ಎಂದು ಅಣ್ಣನಿಗಿಂತ ಮೊದಲೇ ನಾರುಮಡಿ ಉಟ್ಟು ಸಿದ್ಧ ಆದ. ದಶರಥ ಮಹಾರಾಜನ ಅಪ್ಪಣೆಪಡೆದು ಅದನ್ನು ಶಿರದೊಳು ಆಂತು ಕಾಡಿಗೆ ಬಂದೆವು. ಹಿಂದೆ ಎಂದೂ ನೋಡದ ಭಯಂಕರ ಗೊಂಡಾರಣ್ಯ.

" ಅದು ದಂಡಕಾರಣ್ಯ. ಅಲ್ಲಿ ನಾವು ಇದ್ದೆವು. ಮಹಾಪರಾಕ್ರಮಶಾಲಿ ಶ್ರೀರಾಮನ ಪತ್ನಿ ನನ್ನನ್ನು ದುರುಳ ರಕ್ಕಸ ರಾವಣ ಕದ್ದು ತಂದ ಇಲ್ಲಿಗೆ. ಈಗ ಇನ್ನು ಎರಡು ತಿಂಗಳು ಗಡುವು ಕೊಟ್ಟು ಇದಾನೆ ನನಗೆ. ಅಲ್ಲಿಯವರೆಗೇ ನನ್ನ ಬದುಕು. ಆಮೇಲೆ ಪ್ರಾಣಬಿಡಬೇಕಾದ್ದೇ " ಎಂದಳು.

೩೪

ದುಃಖಸಂತಪ್ತಳು ಆದ ಸೀತಾದೇವಿ ಹೇಳುವದನ್ನು ಎಲ್ಲಾ ಹನುಮಂತ ಕೇಳಿದ. ಆಕೆಯ ಮನಸ್ಸಿಗೆ ಸಮಾಧಾನ ಹೇಳಿದ: " ತಾಯಿ, ನಾನು ಶ್ರೀರಾಮನ ಆಜ್ಞಾಧಾರಕ. ಆತನ ಅಪ್ಪಣೆಯಂತೆ ನಿನ್ನನ್ನು ಹುಡುಕಲು ಆತನ ದೂತ ಆಗಿ ಬಂದೆ, ದೇವಿ. ಶ್ರೀರಾಮ ಕುಶಲ. ತನ್ನ ಕ್ಷೇಮವನ್ನು ನಿನಗೆ ತಿಳಿಸಲು ಹೇಳಿದಾನೆ. ಆ ಬ್ರಹ್ಮಾಸ್ತ್ರ ಬಲ್ಲವನು, ಸಮಸ್ತ ವೇದಗಳನ್ನೂ ಬಲ್ಲವನು, ವೇದವೇತ್ತರಲ್ಲಿ ಶ್ರೇಷ್ಠ ಆತ್ಮಜ್ಞಾನಿ ಆದ ಶ್ರೀರಾಮನೇ ನಿನಗೆ ತನ್ನ ಕುಶಲವನ್ನು ಹೇಳಿಕಳಿಸಿದಾನೆ. ನಿನ್ನ ಗಂಡನನ್ನೇ ಸದಾ ಹಿಂಬಾಲಿಸುತ್ತ ಆತನಿಗೆ ಪ್ರಿಯ ಆದ ಮಹಾತೇಜಸ್ವಿ ಲಕ್ಷ್ಮಣನೂ ನಿನ್ನ ಸ್ಥಿತಿಯನ್ನು ಯೋಚಿಸಿ ಯೋಚಿಸಿ ದುಃಖದಿಂದ ತಪಿಸುತ್ತಾನೆ. ಆತನೂ ನಿನಗೆ ನಮಸ್ಕಾರ ಹೇಳಿ ಕಳಿಸಿದಾನೆ."

ಪುರುಷೋತ್ತಮರ ರಾಮಲಕ್ಷ್ಮಣರ ಕುಶಲವಾರ್ತೆಯನ್ನು ಕೇಳಿ ಸೀತಾ ದೇವಿಗೆ ಹರ್ಷದಿಂದ ಮೈ ಎಲ್ಲಾ ರೋಮಾಂಚ ಆಯಿತು. " ಬದುಕಿ ಇದ್ದರೆ ನೂರು ವರ್ಷದಮೇಲೆ ಆದರೂ ಸಂತಸಪಡಬಹುದು ಎನ್ನುತ್ತಾರಲ್ಲ ಹಿರಿಯರು. ಅದು ನಿಜ ಎನಿಸುತ್ತದೆ " ಎಂದಳು. ರಾಮಲಕ್ಷ್ಮಣರ ಕುಶಲವಾರ್ತೆಯನ್ನು ತಂದವನು ಹನುಮಂತ ಎಂದು ಅವನಲ್ಲಿ ವಿಶ್ವಾಸ ತೋರಿದಳು. ಅವನೂ ನಂಬಿಕೆ ತೋರಿದ. ಇಬ್ಬರೂ ಪರಸ್ಪರ ಮಾತಾಡಿಕೊಂಡರು.

ದುಃಖದಿಂದ ಕುಂದಿದ ಸೀತಾದೇವಿ ಹೇಳಿದುದನ್ನು ಕೇಳುತ್ತ ಮೆಲ್ಲಮೆಲ್ಲಗೆ ಆಕೆಯ ಹತ್ತಿರಕ್ಕೇ ಬಂದ ಮಾರುತಿ. ಅವನು ಮುಂದಕ್ಕೆ ಬಂದನೋ ಇಲ್ಲವೋ ಸೀತೆಗೆ ಶಂಕೆ: ಅವನು ರಾವಣನೇ ಇರಬೇಕು. ತಾನು ಹಿಂದೆ ಹಿಂದೆ ಸರಿದಳು. ಬೆದರಿದಳು. 'ಛಿ, ಎಂಥ ಮಾಡಬಾರದ ಕೆಲಸ ಮಾಡಿದೆ ನಾನು. ನಾನು ಮೋಸಹೋದೆ. ಇಷ್ಟು ಸಲಿಗೆಯಿಂದ ಮಾತಾಡಬಾರದಾಗಿತ್ತು. ಇವನು ರಾವಣಾಸುರ. ರೂಪಾಂತರ ಮಾಡಿಕೊಂಡು ಬಂದು ಇದಾನೆ.' ಹೀಗೆ ಎಂದುಕೊಂಡು ದುಃಖದಿಂದ ಬಾಡಿಹೋದಳು. ತಾನು ಒರಗಿಕೊಂಡು ಇದ್ದ ಅಶೋಕವೃಕ್ಷದ ಕೊಂಬೆಯನ್ನು ಕೈಬಿಟ್ಟು ಅಲ್ಲೇ ನೆಲಕ್ಕೆ ಕುಸಿದುಬಿದ್ದಳು. ಬೆದರಿ ದುಃಖಿಸತೊಡಗಿದಳು.

ಇದನ್ನು ಹನುಮಂತ ನೋಡಿದ. ಆಕೆಗೆ ಅಡ್ಡಬಿದ್ದ. ಆದರೂ ಸೀತೆಯ ಅಂಜಿಕೆ ಅಳಿಯಲಿಲ್ಲ. ಅವನ ಕಡೆ ಮುಖ ಎತ್ತಿ ನೋಡಲೇ ಇಲ್ಲ. ಮೇಲಕ್ಕೆ ಏಳಲೇ ಇಲ್ಲ ಹನುಮಂತ. ಹಾಗೇ ಬಿದ್ದು ಇದ್ದ ಹನುಮಂತನನ್ನು ಆ ಪೂರ್ಣ-ಚಂದ್ರಾನನೆ ನೋಡಿದಳು. ನಿಟ್ಟುಸಿರು ಬಿಟ್ಟಳು. "ರಾವಣ, ನೀನು ಈ ಮಾಯಾವೇಷದಿಂದ ಏಕೆ ಬಂದೆ ನನ್ನನ್ನು ಸಂಕಟಪಡಿಸಲು? ನಿನ್ನ ನಿಜ ರೂಪವನ್ನು ಬಿಟ್ಟು ಸಂನ್ಯಾಸಿವೇಷದಿಂದ ಬಂದೆಯಲ್ಲ ಜನಸ್ಥಾನದಲ್ಲಿ. ಬಲ್ಲೆ. ನೀನು ಅದೇ ರಾವಣ. ರಾಕ್ಷಸ, ನಾನು ಉಪವಾಸಮಾಡಿ ಸೊರಗಿ ಸೊಪ್ಪು ಆಗಿದೇನೆ. ಕೊರಗುತ್ತ ಇದೇನೆ. ಸಂಕಟದಿಂದ ಬೇಯುವ ನನ್ನನ್ನು ಪೀಡಿಸುವುದು ನಿನಗೆ ತರ ಅಲ್ಲ. ನಿನಗೆ ಇದರಿಂದ ಒಳಿತು ಆಗದು.

"ವಾನರ, ನನ್ನ ಅನುಮಾನ ಸರಿ ಅಲ್ಲವೋ ಏನೋ! ನಿನ್ನನ್ನು ನೋಡಿದರೆ ನನ್ನ ಮನಸಿಗೆ ಸಂತೋಷ ಆಗುತ್ತ ಇದೆಯಲ್ಲ. ನೀನು ನಿಜ ಆಗಿಯೂ ರಾಮದೂತ ಆದರೆ ನಿನಗೆ ಶುಭ ಆಗಲಿ. ವಾನರೋತ್ತಮ, ರಾಮ ಕಥೆ ಎಂದರೆ ನನಗೆ ಬಹಳ ಇಷ್ಟ. ನನ್ನ ನಲ್ಲನ ಗುಣವರ್ಣನೆ ಮಾಡು. ಕೇಳೋಣ. ಸೌಮ್ಯ, ಪ್ರವಾಹವೇಗ ನದಿಯ ದಡವನ್ನು ಕೊರೆಯುತ್ತದೆ. ನಿನ್ನ ಮಾತೂ ಹಾಗೆಯೆ ನನ್ನ ಮನಸ್ಸನ್ನು ಸೆಳೆಯುತ್ತ ಇದೆ" ಎಂದಳು.

ಅಷ್ಟರಲ್ಲಿಯೆ ಸೀತೆಗೆ ಮತ್ತೆ ಸಂತೋಷ. 'ರಾವಣಾಸುರ ನನ್ನನ್ನು ಕದ್ದುತಂದು ಬಹುಕಾಲ ಆಯಿತು. ಇಷ್ಟು ಕಾಲ ಆದಮೇಲೆ ರಾಮದೂತ ಕಾಣಬೇಕೆ? ನನ್ನ ನಲ್ಲ ಒಂದು ಕಪಿಯನ್ನು ನನ್ನ ಬಳಿಗೆ ಕಳಿಸಿ ರಾಮಕಥೆ

ಯನ್ನು ಕೇಳಿಸಿದ. ಇದು ಕನಸೆ? ಆದರೂ ಎಂಥ ಸುಖಸ್ವಪ್ನ. ಆಶ್ಚರ್ಯಕರ. ಕನಸಿನಲ್ಲೇ ಆದರೂ ಶ್ರೀರಾಮನನ್ನೂ ಮಹಾಪರಾಕ್ರಮಶಾಲಿ ಲಕ್ಷ್ಮಣನನ್ನೂ ನೋಡಿದರೆ ನನ್ನ ವ್ಯಥೆ ಎಷ್ಟೋ ತಗ್ಗೀತಲ್ಲ. ಇಷ್ಟು ಸವೆದುಹೋಗುತ್ತಲೇ ಇರಲಿಲ್ಲ ನಾನು. ಕನಸಿಗೂ ನನ್ನ ಮೇಲೆ ಮತ್ಸರವೇ!

'ಇದು ಕನಸು ಅಲ್ಲ. ಕನಸಿನಲ್ಲಿ ಕೋತಿ ಕಂಡರೆ ಸಂತೋಷ ಇರದು. ಈಗ ನನಗೆ ಸಂತೋಷ ಆಗುತ್ತ ಇದೆಯಲ್ಲ. ಒಂದುವೇಳೆ ನನಗೆ ಮತಿಭ್ರಮಣ ಆಗಿದೆಯೋ? ಪಿತ್ತ ಹೆಚ್ಚಿ ಹೀಗೆ ಆಗಿದೆಯೇ? ಹುಚ್ಚುಹಿಡಿಯಿತೇ ನನಗೆ? ಇದು ಬಿಸಿಲುಕುದುರೆಯೋ? ಒಂದಕ್ಕೆ ಒಂದು ಕಾಣುತ್ತದೆಯೋ?

'ಇಲ್ಲ, ಇದು ಹುಚ್ಚು ಅಲ್ಲ. ಚಿತ್ತವಿಭ್ರಮವೂ ಅಲ್ಲ. ಅಂಥ ಲಕ್ಷಣ ಒಂದೂ ಇಲ್ಲ. ಮೈಮೇಲೆ ಪೂರಾ ಎಚ್ಚರ ಇದೆ. ನನ್ನ ಇದಿರಿಗೆ ಇರುವ ವಾನರನನ್ನು ಸ್ಪಷ್ಟ ಆಗಿ ನೋಡುತ್ತ ಇದೇನೆ' ಎಂದುಕೊಂಡಳು. ನಾನಾ ಬಗೆ ಆಗಿ ಚಿಂತಿಸಿದಳು. ಬಲಾಬಲಗಳನ್ನು ಬಹಳ ಹೊತ್ತು ಆಲೋಚಿಸಿದಳು. ರಾಕ್ಷಸರು ಕಾಮರೂಪಿಗಳು ಎಂಬುದು ಆಕೆಯ ದೃಢ ಅಭಿಪ್ರಾಯ. ಈ ವಾನರ ರಾವಣನೇ ಸರಿ ಎಂದು ನಿರ್ಧರಿಸಿದಳು. ಅವನ ಸಂಗಡ ಮಾತು ಆಡಬಾರದು ಎಂದು ಸುಮ್ಮನೆ ಇದ್ದುಬಿಟ್ಟಳು.

ಆಕೆಯ ಮನೋಭಾವ ಹನುಮಂತನಿಗೆ ಅರ್ಥ ಆಯಿತು. ಆಕೆಗೆ ಸಂತೋಷ ಹುಟ್ಟಿಸಬೇಕು. ಆಕೆಯ ಕಿವಿಗೆ ಇಂಪು ಆಗಿ ರಾಮನ ಗುಣಗಾನ ಮಾಡಿದ: "ಜಾನಕಿ, ಸೂರ್ಯನಂಥ ತೇಜೋಶಾಲಿ ರಾಮ. ಚಂದ್ರನಂತೆ ಪ್ರಪಂಚಕ್ಕೆ ಎಲ್ಲಾ ಆಹ್ಲಾದದಾತ. ಕುಬೇರನಂತೆ ರಾಜಾಧಿರಾಜ. ವಿಷ್ಣುವಿಗೆ ಸಮಾನ ಪರಾಕ್ರಮದಲ್ಲಿ. ಬೃಹಸ್ಪತಿಯ ಹಾಗೆ ಸತ್ಯವಾದಿ. ಮಹಾಕೀರ್ತಿವಂತ. ರೂಪದಲ್ಲಿ ಸಾಕ್ಷಾತ್ ಮನ್ಮಥ. ಸವಿನುಡಿ, ಸೊಬಗು ಸುರಿವ ಆಕಾರ. ವಿಶೇಷ ಕಾಂತಿ. ಬರಬೇಕು ಕೋಪ ಎಂದಾಗ ಮಾತ್ರ ಕೋಪ ಬರುತ್ತದೆ. ಬಂದ ಕೋಪ ಸಾರ್ಥಕ ಆಗಲೇಬೇಕು. ಮಹಾರಥ. ಲೋಕೋತ್ತರ ಗುಣ ಶಾಲಿ. ಆತನ ತೋಳಿನ ಆಸರೆಯಿಂದ ಬದುಕುತ್ತದೆ ಈ ಲೋಕ. ಅಂಥ ಮಹಾತ್ಮನನ್ನು ಮಾಯಾಮೃಗದ ರೂಪದಿಂದ ಮೋಸಗೊಳಿಸಿ, ಆಶ್ರಮದಿಂದ ಹೊರಡಿಸಿ, ಆತ ಇಲ್ಲದ ಸಮಯದಲ್ಲಿ ಆತನ ಮುದ್ದಿನ ಮಡದಿಯನ್ನು ಕದ್ದು ತಂದ ರಾವಣನಿಗೆ ಸಿಗುವ ಫಲ ಬೇಗನೆ ನೋಡುತ್ತೀಯೆ. ಕಣ್ಣಾರೆ ನೋಡು

ತ್ತೀಯೆ. ಆ ಮಹಾಪರಾಕ್ರಮಶಾಲಿ ರಾಮಪ್ರಭುವಿಗೆ ರೋಷ ಹುಟ್ಟಿತೋ, ಉರಿಯುವ ಬೆಂಕಿಯಂಥ ಬಾಣಗಳನ್ನು ಬಿಟ್ಟು ರಾವಣನನ್ನು ಕೊಲ್ಲುತ್ತಾನೆ. ಆ ರಾಮನ ದೂತ ನಾನು. ನಿನ್ನ ಬಳಿಗೇ ಬಂದೆ.

"ಶ್ರೀರಾಮನೂ ನಿನ್ನ ಅಗಲಿಕೆಯಿಂದ ಬಹಳ ದುಃಖಿಸುತ್ತ ಇದಾನೆ. ಕೊರಗಿ ಕೊರಗಿ ಸಂಕಟಪಡುತ್ತಾನೆ. ನಿನ್ನ ಕ್ಷೇಮವನ್ನು ವಿಚಾರಿಸಿಕೊಂಡು ಬರಲು ಹೇಳಿದಾನೆ ನನಗೆ. ಮಹಾಪರಾಕ್ರಮಶಾಲಿ ತೇಜೋವಂತ ಆದ ಲಕ್ಷ್ಮಣನೂ ನಿನ್ನ ಕುಶಲವನ್ನು ಕೇಳಿದಾನೆ. ತನ್ನ ನಮಸ್ಕಾರಗಳನ್ನು ಸಲ್ಲಿಸಿ ಇದಾನೆ. ಶ್ರೀರಾಮನ ಗೆಳೆಯ ಸುಗ್ರೀವನೂ ನಿನ್ನ ಕ್ಷೇಮವನ್ನು ವಿಚಾರಿಸಿಕೊಂಡು ಬರಬೇಕು ಎಂದು ಹೇಳಿದಾನೆ. ರಾಮಲಕ್ಷ್ಮಣಸುಗ್ರೀವರಿಗೆ ಸದಾ ನಿನ್ನ ಯೋಚನೆಯೇ. ರಾಕ್ಷಸಸ್ತ್ರೀಯರ ವಶದಲ್ಲಿ ಇದ್ದರೂ ಭಾಗ್ಯವಶದಿಂದ ಜೀವಿಸುತ್ತ ಇದೀಯೆ. ಬೇಗನೆ ರಾಮಲಕ್ಷ್ಮಣರನ್ನು ನೋಡುತ್ತೀಯೆ. ಅನೇಕ ಕೋಟಿ ವಾನರಸೇನೆಯನ್ನೂ ಅದರ ನಡುವೆ ವಾನರೇಂದ್ರ ಸುಗ್ರೀವನನ್ನೂ ನೋಡುತ್ತೀಯೆ.

"ನಾನು ಸುಗ್ರೀವನ ಮಂತ್ರಿ. ಹನುಮಂತ ನನ್ನ ಹೆಸರು. ನಿನ್ನನ್ನು ನೋಡಲು ನಾನು ಬಂದೆ. ಮಹಾಸಾಗರವನ್ನು ಅದಕ್ಕೆ ಎಂದೇ ದಾಟಿ ಲಂಕಾಪಟ್ಟಣಕ್ಕೆ ಬಂದೆ. ದುರಾತ್ಮ ರಾವಣಾಸುರನ ತಲೆಯ ಮೇಲೆ ನನ್ನ ಕಾಲನ್ನು ಇಟ್ಟು ಮೆಟ್ಟಹೋಗಲು ಬಂದೆ. ದೇವಿ, ನೀನು ಊಹಿಸಿದ ಹಾಗೆ ನಾನು ಮಾಯಾವಿಯೂ ಅಲ್ಲ, ರಾವಣನೂ ಅಲ್ಲ. ಸಂದೇಹಪಡಬೇಡ. ನನ್ನ ಮಾತನ್ನು ನಂಬು" ಎಂದ.

೩೫

ಹನುಮಂತ ಹೇಳಿದ ರಾಮಕಥೆಯನ್ನು ಸೀತೆ ಕೇಳಿದಳು. ಸ್ವಲ್ಪ ಸಮಾಧಾನ ಆಯಿತು. ಬಹಳ ಸವಿ ಆಗಿ ಸೊಗಸು ಆಗಿ ಅವನನ್ನು ಕೇಳಿದಳು: "ವಾನರಪುಂಗವ, ನೀನು ರಾಮಪ್ರಭುವನ್ನು ಎಲ್ಲಿ ಕಂಡೆ? ಲಕ್ಷ್ಮಣನನ್ನು ಹೇಗೆ ಬಲ್ಲೆ? ನರರಿಗೂ ವಾನರರಿಗೂ ಸಂಬಂಧ ಆದದ್ದು ಹೇಗೆ? ಶ್ರೀರಾಮನ ಗುರುತುಗಳನ್ನು ಹೇಳು, ಲಕ್ಷ್ಮಣನ ಗುರುತು ಹೇಳು, ನೋಡೋಣ. ಅದರಿಂದ ನನ್ನ ದುಃಖ ತಗ್ಗಿ ನನ್ನ ಸಂದೇಹವೂ ಕಳೆಯುತ್ತದೆ.

ಹೇಳು, ರಾಮನ ಮೈಕಟ್ಟು ಎಂಥದು? ಲಕ್ಷ್ಮಣ ಹೇಗೆ ಇದ್ದಾನೆ? ಅವರ ಅವಯವಗಳ ಹೊಂದಿಕೆ ಹೇಗೆ ಇದೆ? ಅವರ ಕೈಕಾಲು ಹೇಗೆ ಇವೆ?"

ಹನುಮಂತ ರಾಮನನ್ನು ವರ್ಣಿಸಿದ: "ಕಮಲಪತ್ರಾಕ್ಷಿ, ನನ್ನನ್ನು ರಾಮದೂತ ಎಂದು ತಿಳಿದು ರಾಮಲಕ್ಷ್ಮಣರ ಅವಯವಗಳ ಹೊಂದಿಕೆಯನ್ನು ತಿಳಿಸು ಎನ್ನುತ್ತೀ. ಇದು ನನ್ನ ಭಾಗ್ಯ. ಬಹಳ ಸಂತೋಷ. ರಾಮಲಕ್ಷ್ಮಣರ ಗುರುತುಗಳು ಎಲ್ಲಾ ನಿನಗೆ ತಿಳಿದವೇ. ಹೇಳುತ್ತೇನೆ ಕೇಳು.

"ಜಾನಕಿ, ರಾಮ ಸರ್ವಾಂಗಸುಂದರ. ಕಮಲಪತ್ರದಂತೆ ವಿಶಾಲನೇತ್ರ. ಸಮಸ್ತ ಪ್ರಾಣಿಕೋಟಿಯ ಮನಸ್ಸನ್ನೂ ಸೆಳೆಯುವ ಅಪ್ರತಿಮ ಸೌಂದರ್ಯಶಾಲಿ. ದಯಾದಾಕ್ಷಿಣ್ಯವಂತ. ಸಮಸ್ತ ಕಲ್ಯಾಣಗುಣಗಳಿಗೂ ತವರು. ತಾಯಿ, ತೇಜಸ್ಸಿನಲ್ಲಿ ಸೂರ್ಯನಿಗೆ ಸಮ. ತಾಳ್ಮೆಯಲ್ಲಿ ಭೂಮಿಗೆ ಸಾಟಿ. ಬುದ್ಧಿಯಲ್ಲಿ ಬೃಹಸ್ಪತಿ, ಕೀರ್ತಿಯಲ್ಲಿ ದೇವೇಂದ್ರ. ರಾಮ ಸಮಸ್ತ ಪ್ರಾಣಿಕೋಟಿಯ ರಕ್ಷಕ. ಸ್ವಜನರ ಸಂರಕ್ಷಕ. ಕುಲಧರ್ಮವನ್ನೂ ವರ್ಣಾಶ್ರಮಧರ್ಮವನ್ನೂ ಪಾಲಿಸುವಾತ.

"ದೇವಿ, ಯಾವಾಗಲೂ ಶ್ರೀರಾಮ ಚತುರ್ವರ್ಣಗಳ ರಕ್ಷಕ. ಲೋಕ ಮರ್ಯಾದೆ ಎಲ್ಲವನ್ನೂ ತಾನು ನಡೆಸಿ ಇತರರಿಂದ ನಡೆಯಿಸುತ್ತಾನೆ. ಮಹಾ ಪೂಜ್ಯ, ಮಹಾತೇಜಸ್ವಿ. ಬ್ರಹ್ಮಚರ್ಯವ್ರತದ ಅನುಷ್ಠಾನಕ್ಕೆ ಆತನದೇ ಹೆಸರು. ಸಜ್ಜನರಿಗೆ ಉಪಕಾರ ಮಾಡುವುದೇ ಆತನ ಪ್ರವೃತ್ತಿ. ಸತ್ಕರ್ಮಗಳನ್ನು ಮಾಡುವುದರಲ್ಲೇ ಸದಾ ನಿರತ. ರಾಜವಿದ್ಯಾವಿಶಾರದ. ಬ್ರಾಹ್ಮಣೋಪಾಸಕ. ಸಮಸ್ತ ಸದಸದ್ವಿಚಾರಶಾಸ್ತ್ರಾರ್ಥಪಾರಂಗತ. ವಿನಯಸಂಪನ್ನ. ಶತ್ರುತಾಪನ. ಗುಣಶಾಲಿ. ಎಲ್ಲವನ್ನೂ ಬಲ್ಲವರಿಂದ ಕೇಳಿ ಕಲಿತವನು. ಯಜುರ್ವೇದ ವಿನೀತ. ಧನುರ್ವೇದನಿಷ್ಣಾತ. ವೇದವೇದಾಂಗಗಳನ್ನು ಎಲ್ಲವನ್ನೂ ಬಲ್ಲ ಪಂಡಿತ. ವೇದಗಳನ್ನು ಬಲ್ಲವರು ಆತನನ್ನು ಸದಾ ಆದರಿಸುತ್ತಾರೆ.

"ದೇವಿ, ರಾಮನ ಹೆಗಲು ವಿಶಾಲ. ತೋಳು ನಿಡಿದು. ಶಂಖದಂಥ ಕಂಠ. ಕಳೆಕೂಡಿದ ಸುಂದರ ಮುಖ. ಭುಜಗಳ ಕೀಲು ಮಾಂಸ ತುಂಬಿದ್ದು. ಕಣ್ಣು ಕೆಂಪು ಕುಡಿಯದು. ಜಗತ್ಪ್ರಸಿದ್ಧ. ರಾಮನ ಕಂಠಸ್ವರ ಭೇರಿಯ ಧ್ವನಿಯ ಹಾಗೆ. ದೇಹಕಾಂತಿ ನುಣ್ಣಗೆ ಥಳಥಳಿಸುತ್ತದೆ. ಮಹಾಪರಾಕ್ರಮ ಶಾಲಿ. ಅವನ ಅವಯವಗಳು ಎಲ್ಲವೂ ಸಮ. ಮೈ ಶ್ಯಾಮಲ ಬಣ್ಣ. ಅವನ

ಎದೆ ಮಣಿಕಟ್ಟು ಮುಷ್ಟಿ ಮೂರೂ ಬಲಿಷ್ಠ. ಅವನ ಹುಬ್ಬು ತೋಳು ಅಂಡ ಕೋಶ ಮೂರೂ ದೀರ್ಘ. ಮೊಣಕಾಲು ತಲೆಗೂದಲ ಕೊನೆ ವೃಷಣ ಮೂರೂ ಸಮಪ್ರಮಾಣದವು. ಹೊಟ್ಟೆ ಹೊಕ್ಕುಳು ಎದೆ ಮೂರೂ ಉಬ್ಬಿವೆ. ಅವನ ಕಡೆಗಣ್ಣು ಉಗುರು ಅಂಗೈ ಅಂಗಾಲು ಕೆಂಪು. ಕಾಲಿನ ಗೆರೆ ಕೂದಲು ಲಿಂಗ ಮೂರೂ ನುಣುಪು. ಕಂಠಧ್ವನಿ ಹೊಕ್ಕುಳು ನಡಿಗೆ ಗಂಭೀರ. ಅವನ ಹೊಟ್ಟೆಯ ಮೇಲೆ ಕಂಠದ ಮೇಲೆ ತ್ರಿವಳಿರೇಖೆ. ಅವನ ಕೊರಳು ಲಿಂಗ ಬೆನ್ನು ಮೊಳಕಾಲು ನಾಲ್ಕೂ ಹ್ರಸ್ವ. ತಲೆಯ ಮೇಲೆ ಮೂರು ಸುಳಿ. ಶುಭಸೂಚಕ ಆದವು. ಅಂಗುಷ್ಠಮೂಲದಲ್ಲಿ ನಾಲ್ಕು ವೇದರೇಖೆ. ಹಣೆ ಅಂಗೈ ಅಂಗಾಲು ಗಳಲ್ಲಿ ನಾಲ್ಕು ರೇಖೆ. ಆಯುಸ್ಸೂಚಕ. ನಾಲ್ಕು ಮೊಳದ ಎತ್ತರದ ಮೈ. ಅವನ ತೋಳು ತೊಡೆ ಮೊಣಕಾಲು ಕೆನ್ನೆ ಎಲ್ಲವೂ ಸಮ. ಅವನ ಹದಿನಾಲ್ಕು ದ್ವಂದ್ವಾವಯವಗಳೂ ಸಮಪ್ರಮಾಣ. ನಾಲ್ಕು ಕೋರೆಹಲ್ಲು ಇವೆ. ಅವನ ತುಟಿ ಕೆನ್ನೆ ಮೂಗುಗಳು ದೊಡ್ಡವು. ಕಣ್ಣು ಬಹಳ ಕಾಂತಿವಂತ. ಹಲ್ಲು ಮೈತೊಗಲು ಕಾಲು ಕೂದಲು ಬಹಳ ನಯ. ನಡೆದರೆ ಸಿಂಹ ನಡೆದಂತೆ, ಹುಲಿ ನಡೆದಂತೆ, ಆನೆ ನಡೆದ ಹಾಗೆ, ಎತ್ತು ನಡೆದ ಹಾಗೆ.

"ತಾಯೆ, ಶ್ರೀರಾಮ ಸತ್ಯಧರ್ಮಪರಾಯಣ. ಮಹಾ ಶ್ರೀಮಂತ. ದ್ರವ್ಯಸಂಪಾದನೆಯಲ್ಲೂ ದ್ರವ್ಯದಾನದಲ್ಲೂ ಆಸಕ್ತ. ದೇಶಕಾಲಗಳನ್ನು ಚೆನ್ನಾಗಿ ತಿಳಿದವನು. ಅದರಂತೆ ನಡೆಯುವವನು. ಸಮಸ್ತ ಜನರಿಗೂ ಸಂತೋಷ ಅವನ ಮಾತಿನಿಂದ. ರಾಮನ ತಮ್ಮ ಲಕ್ಷ್ಮಣ ಅಜೇಯ. ಅಣ್ಣನಿಗೆ ಸಮಾನಗುಣಸೌಂದರ್ಯ. ಕೌಸಲ್ಯೆಸುಮಿತ್ರೆ ಇಬ್ಬರಿಗೂ ಮುದ್ದಿನ ಮಗ.

"ಈ ಪುರುಷಸಿಂಹರು ಇಬ್ಬರೂ ನಿನ್ನನ್ನು ಹುಡುಕಲು ಭೂಮಿಯನ್ನು ಎಲ್ಲಾ ಸುತ್ತಿದರು. ಆಗ ನಮಗೂ ಅವರಿಗೂ ಸಮಾಗಮ ಆಯಿತು. ಪ್ರಿಯದರ್ಶನ ಸುಗ್ರೀವನಿಗೂ ಅವರಿಗೂ ಭೇಟಿ ಆಯಿತು. ಸುಗ್ರೀವನನ್ನು ಅವನ ಅಣ್ಣ ವಾಲಿ ಓಡಿಸಿದ್ದ. ರಾಜ್ಯಭ್ರಷ್ಟ ಆಗಿ ಸುಗ್ರೀವ ಋಷ್ಯಮೂಕ ಪರ್ವತದ ಮೇಲೆ ಇದ್ದ. ಅಲ್ಲಿಗೆ ವಾಲಿ ಬರುವ ಹಾಗೆ ಇರಲಿಲ್ಲ. ಅಲ್ಲಿ ಒಂದು ರಮಣೀಯ ವನ. ಅಲ್ಲಿ ಇದ್ದ. ಅವನ ಮಂತ್ರಿಗಳು ನಾವು. ಆತನ ಜೊತೆಯಲ್ಲೇ ಇದ್ದೆವು.

“ರಾಮಲಕ್ಷ್ಮಣರು ಇಬ್ಬರೂ ಆಗ ನಾವು ಇದ್ದ ರಮ್ಯ ಸ್ಥಳಕ್ಕೆ ಬಂದರು. ಇಬ್ಬರ ಕೈಯಲ್ಲೂ ಬಿಲ್ಲುಬಾಣ. ಇಬ್ಬರೂ ಜಟಾವಲ್ಕಲ ಧಾರಿಗಳು. ನರವ್ಯಾಘ್ರಗಳಂಥವರು. ಅವರನ್ನು ನೋಡಿ ಸುಗ್ರೀವ ಭಯ ಪಟ್ಟ. ಪರ್ವತಶಿಖರಕ್ಕೆ ಜಿಗಿದ. ಅಲ್ಲಿಂದ ಆ ಅಣ್ಣತಮ್ಮಂದಿರ ಬಳಿಗೆ ಹೋಗಿ ಅವರ ವಿಚಾರವನ್ನು ತಿಳಿದುಬರಲು ನನ್ನನ್ನು ಕಳಿಸಿದ. ಸರ್ವಲಕ್ಷಣ ಸಂಪನ್ನರು ರೂಪವಂತರು ಆದ ಅವರ ಬಳಿಗೆ ನಾನು ಹೋದೆ. ಕೈಜೋಡಿಸಿ ನಮಸ್ಕರಿಸಿದೆ. ಅವರ ವೃತ್ತಾಂತವನ್ನು ಯಥಾರ್ಥ ಆಗಿ ತಿಳಿದುಕೊಂಡೆ. ಇಬ್ಬರಿಗೂ ಸಂತೋಷ ಆಯಿತು. ಇಬ್ಬರನ್ನೂ ಹೆಗಲಿನ ಮೇಲೆ ಕೂಡಿಸಿ ಕೊಂಡು ಸುಗ್ರೀವನ ಬಳಿಗೆ ಕರೆತಂದೆ. ಮಹಾತ್ಮ ಸುಗ್ರೀವನಿಗೆ ಇದ್ದ ಸಂಗತಿ ಎಲ್ಲವನ್ನೂ ತಿಳಿಸಿದೆ. ಅವರು ಅನ್ಯೋನ್ಯ ಆಗಿ ಮಾತಾಡಿದರು. ಪರಸ್ಪರ ಗೆಳೆತನ ಮಾಡಿದರು. ಒಬ್ಬರ ಕಷ್ಟವನ್ನು ಇನ್ನೊಬ್ಬರಿಗೆ ಹೇಳಿ ಸಂತಯಿಸಿಕೊಂಡರು. ಹೀಗೆ ಆಯಿತು ನರ–ವಾನರರ ಗೆಳೆತನ.

“ಸುಗ್ರೀವನ ಅಣ್ಣ ವಾಲಿ ಬಹಳ ಪರಾಕ್ರಮಶಾಲಿ. ಹೆಂಗಸಿನ ಕಾರಣದಿಂದ ಸುಗ್ರೀವನನ್ನು ಹೊರಗೆ ಅಟ್ಟಿದ. ಅದನ್ನು ಕೇಳಿ ರಾಮ ಅವನನ್ನು ಸಂತಯಿಸಿದ. ವಾಲಿಯನ್ನು ಕೊಂದು ಸುಗ್ರೀವನ ಹೆಂಡತಿಯನ್ನು ಸುಗ್ರೀವನಿಗೆ ಒಪ್ಪಿಸಲು ಶಪಥಮಾಡಿದ. ಆಗ ಲಕ್ಷ್ಮಣ ನಿನ್ನ ಅಗಲಿಕೆ, ಅದರಿಂದ ರಾಮನಿಗೆ ಆದ ದುಃಖ, ಎಲ್ಲವನ್ನೂ ವಾನರೇಂದ್ರ ಸುಗ್ರೀವನಿಗೆ ಹೇಳಿದ. ತನ್ನಂತೆಯೇ ದುಃಖಿ ಆದ ಗೆಳೆಯನ ಭವಣೆಯನ್ನು ಕೇಳಿ ಸುಗ್ರೀವನಿಗೆ ಬಹಳ ದುಃಖ ಆಯಿತು. ರಾಹುಗ್ರಸ್ತ ಸೂರ್ಯನ ಹಾಗೆ ಅವನ ಮುಖ ಕಳೆಗುಂದಿತು. ರಾವಣಾಸುರ ನಿನ್ನನ್ನು ಕದ್ದು ಒಯ್ಯುವಾಗ ನೀನು ಮೈಮೇಲಿನ ಆಭರಣಗಳನ್ನು ಕೆಳಕ್ಕೆ ಬಿಸುಟಿಯಲ್ಲ. ಅದನ್ನು ನೆನಪು ಮಾಡಿ ಕೊಟ್ಟ. ಆ ಒಡವೆಗಳು ಎಲ್ಲವನ್ನೂ ತಂದು ತೋರಿಸಿದರು ವಾನರೋತ್ತಮರು. ತಾಯೆ, ನೀನು ಇರುವ ಸ್ಥಳ ಅವರಿಗೆ ತಿಳಿಯದು. ಅದನ್ನು ತಿಳಿಸಲು ಆಗಲಿಲ್ಲ.

“ನೀನು ಒಡವೆಗಳನ್ನು ಕೆಳಕ್ಕೆ ಬಿಸುಟಾಗ ರಾವಣನಿಗೆ ಗೊತ್ತೆ ಆಗಲಿಲ್ಲ. ನಿನ್ನನ್ನು ಎತ್ತಿಕೊಂಡು ಹೋಗುವ ಸಂಭ್ರಮವೇ ಸಂಭ್ರಮ ಅವನಿಗೆ. ನೆಲದ ಮೇಲೆ ಬಿದ್ದ ಆ ಒಡವೆಗಳನ್ನು ನಾನೇ ಆರಿಸಿ ತೆಗೆದು

ಇಟ್ಟು ಇದ್ದೆ. ಆ ಒಡವೆಗಳನ್ನು ನೋಡಿದ ಕೂಡಲೇ ರಾಮನಿಗೆ ಬಹಳ ದುಃಖ ಆಯಿತು. ನೋಡುನೋಡುತ್ತ ಮೂರ್ಛೆಹೋದ. ಸ್ವಲ್ಪ ಹೊತ್ತಿಗೆ ಎಚ್ಚರ ಬಂತು. ಆ ಒಡವೆಗಳು ಎಲ್ಲವನ್ನೂ ಮಡಿಲಲ್ಲಿ ಇಟ್ಟುಕೊಂಡು ಪದೇ ಪದೇ ಅವನ್ನೇ ನೋಡುತ್ತ ಬಹಳ ಗೋಳಾಡಿದ. ಅಡಿಗಡಿಗೆ ನೋಡುವುದು ಅಳುವುದು ನಡೆಯಿತು. ದೇವಿ, ನಿನ್ನ ಆ ಒಡವೆಗಳನ್ನು ನೋಡಿ ರಾಮನ ಶೋಕಾಗ್ನಿ ಉರಿಯಿತು. ರಾಮ ಮತ್ತೆ ಎಚ್ಚರ ತಪ್ಪಿದ. ಆಗ ಲಕ್ಷ್ಮಣನೂ ಸುಗ್ರೀವನೂ ನಾನೂ ಎಷ್ಟೋ ಸಮಾಧಾನದ ಮಾತು ಹೇಳಿ ಹಿಡಿದು ಎತ್ತಿದೆವು. ಆ ಒಡವೆಗಳನ್ನು ಪದೇ ಪದೇ ನೋಡುತ್ತ ನಮಗೆ ತೋರಿಸುತ್ತ ಎತ್ತಿ ಇಡು ಎಂದು ಅವನ್ನು ಸುಗ್ರೀವನ ಕೈಗೆ ಕೊಟ್ಟ ರಾಮಪ್ರಭು.

"ಪೂಜ್ಯೆ, ನಿನ್ನನ್ನು ಅಗಲಿ ಶ್ರೀರಾಮ ಉರಿಯುವ ಅಗ್ನಿಪರ್ವತದಂತೆ ಬೆಂದುಹೋಗುತ್ತ ಇದಾನೆ. ಸದಾ ನಿನಗಾಗಿ ತಾಪ. ನಿನ್ನನ್ನು ಅಗಲಿದ ಅಂದಿನಿಂದ ಪ್ರಭುವಿಗೆ ನಿದ್ದೆಯೇ ಇಲ್ಲ. ನಿದ್ದೆ ಇಲ್ಲದ್ದು ಒಂದು, ನಿನ್ನ ಅಗಲಿಕೆಯ ದುಃಖ ಒಂದು, ನಿನ್ನ ಚಿಂತೆ ಒಂದು; ಪಂಚಾಗ್ನಿ ಇರುವ ಅಗ್ನಿ ಶಾಲೆಯಂತೆ ಬೆಂದು ಬೇಗುದಿಗೊಂಡು ಇದಾನೆ. ಯಾವಾಗಲೂ ನಿನ್ನದೇ ಚಿಂತೆ. ಭೂಕಂಪದಿಂದ ನಡುನಡುಗುವ ಮಹಾಪರ್ವತದಂತೆ ನಡುಗುತ್ತಾನೆ. ರಮಣೀಯ ಆದ ವನಕ್ಕೆ ಹೋಗಲಿ ನದಿಗಳ ತೊರೆಗಳ ಬಳಿಗೆ ಹೋಗಲಿ ನಿನ್ನನ್ನು ಕಾಣದುದರಿಂದ ಆತನ ಮನಸಿಗೆ ನೆಮ್ಮದಿ ಇಲ್ಲ.

"ಜಾನಕೀದೇವಿ, ಪುರುಷೋತ್ತಮ ಶ್ರೀರಾಮ ರಾಕ್ಷಸರಾಜ ರಾವಣನನ್ನು ಬಂಧುಮಿತ್ರಸಮೇತ ಕೊಲ್ಲುತ್ತಾನೆ. ಬೇಗ ಬರುತ್ತಾನೆ. ನಿನ್ನನ್ನು ಸೇರುತ್ತಾನೆ. ವಾಲಿಯನ್ನು ಕೊಂದು ಸುಗ್ರೀವನಿಗೆ ವಾನರ ರಾಜ್ಯಾಭಿಷೇಕ ಮಾಡುತ್ತೇನೆ ಎಂದು ರಾಮ, ನಿನ್ನನ್ನು ಹುಡುಕಿಸಿಕೊಡುತ್ತೇನೆ ಎಂದು ಸುಗ್ರೀವ, ಇಬ್ಬರೂ ಗೆಳೆತನ ಆದಾಗಲೇ ಶಪಥಮಾಡಿದಾರೆ. ಶ್ರೀರಾಮ ಸುಗ್ರೀವ ಇಬ್ಬರೂ ಕಿಷ್ಕಿಂಧೆಗೆ ಹೋಗಿ, ಯುದ್ಧದಲ್ಲಿ ವಾಲಿಯನ್ನು ರಾಮ ಕೊಂದ. ಸಮಸ್ತ ವಾನರಭಲ್ಲೂಕ ಸಮೂಹಗಳಿಗೆ ಸುಗ್ರೀವನನ್ನು ದೊರೆ ಆಗಿ ಮಾಡಿದ. ಹೀಗೆ ಆಯಿತು ನರ–ವಾನರರ ಸ್ನೇಹ.

"ಸುಗ್ರೀವ ದೊರೆ ಆದಮೇಲೆ ಬಲಾಢ್ಯ ವಾನರರ ನಾಯಕರನ್ನು ಎಲ್ಲರನ್ನೂ ಕರೆಯಿಸಿ ನಿನ್ನನ್ನು ಹುಡುಕಲು ಹತ್ತು ದಿಕ್ಕಿಗೂ ಕಳಿಸಿದ.

ಮಹಾಪರಾಕ್ರಮಶಾಲಿಗಳು ಆದ ವಾನರಯೂಥಪತಿಗಳೂ ಬೆಟ್ಟದಂತೆ ಮಹಾ ದೇಹಿಗಳು ಆದ ವಾನರವೀರರೂ ಸುಗ್ರೀವನ ಅಪ್ಪಣೆಯಂತೆ ಈ ಭೂಮಿಯಲ್ಲಿ ಎಲ್ಲೆಲ್ಲೂ ಹುಡುಕುತ್ತ ಇದಾರೆ. ಮಹಾಬಲಿಷ್ಠ ಶ್ರೀಮಂತ ತೇಜೋವಂತ ವಾಲಿಪುತ್ರ ಅಂಗದ ವಾನರಸೇನೆಯ ಮೂರರಲ್ಲಿ ಒಂದು ಪಾಲನ್ನು ತೆಗೆದು ಕೊಂಡು ನಿನ್ನನ್ನು ಹುಡುಕಲು ಈ ದಕ್ಷಿಣ ದಿಕ್ಕಿಗೆ ಬಂದ. ನಾನೂ ಅಂಗದನ ಹಿಂದೆ ಬಂದೆ. ನನ್ನ ಹೆಸರು ಹನುಮಂತ. ನನ್ನನ್ನು ತಮ್ಮ ದೂತ ಆಗಿ ಕಳಿಸಿದರು ರಾಮಸುಗ್ರೀವರು. ಎಲ್ಲರೂ ವಿಂಧ್ಯಪರ್ವತಕ್ಕೆ ಬಂದು ಅಲ್ಲಿ ದಾರಿ ತಿಳಿಯದೆ ಒಂದು ಬಿಲದಲ್ಲಿ ಸಿಕ್ಕಿಬಿದ್ದೆವು. ಅನೇಕ ದಿನ ಕಳೆದುವು ಅಲ್ಲಿ.

"ಹಿಂದಕ್ಕೆ ಕಿಷ್ಕಿಂಧೆಗೆ ಹೋಗೋಣ ಎಂದರೆ ಸುಗ್ರೀವರಾಜ ನಮಗೆ ಕೊಟ್ಟ ಗಡುವು ಮೀರಿಹೋಯಿತು. ಕಾಡು ಬೆಟ್ಟಗುಡ್ಡ ನದಿಗಳಲ್ಲಿ ಎಲ್ಲೆಲ್ಲೂ ನಿನ್ನನ್ನು ಹುಡುಕಿದೆವು. ಕಂಡ ಕಂಡ ಕಡೆ ಹುಡುಕಿದೆವು. ಪ್ರಯೋಜನ ಆಗಲಿಲ್ಲ. ಗಡುವೂ ಮೀರಿತು. ಹಿಂದಿರುಗಿದರೆ ಅಲ್ಲಿ ಚಿತ್ರವಧೆಯೇ ನಮ್ಮ ಹಣೆಯಬರೆಹ. ಪೂರಾ ದುಃಖದಲ್ಲಿ ಮುಳುಗಿ ದಕ್ಷಿಣ ಸಮುದ್ರ ತೀರದಲ್ಲಿ ಪ್ರಾಯೋಪವೇಶ ಮಾಡಿ ಸಾಯಲು ನಿಶ್ಚಯಿಸಿದೆವು.

"ಎಲ್ಲರೂ ಪ್ರಾಣಬಿಡಲು ಸಿದ್ಧರು ಆಗಿ ನೆಲದ ಮೇಲೆ ಮಲಗಿದೆವು. ಅಂಗದನಿಗೆ ಬಹಳ ದುಃಖ ಆಯಿತು. ಅಂಗದ ನಮ್ಮ ಯುವರಾಜ. ನಮ್ಮ ದಳಕ್ಕೆ ನಾಯಕ. ವಾಲಿಯನ್ನು ರಾಮ ಕೊಂದದ್ದು, ಎಲ್ಲಿ ಹುಡುಕಿದರೂ ನೀನು ಕಾಣದುದು, ನಿನ್ನನ್ನೆತ್ತಿಕೊಂಡು ಹೋಗುವಾಗ ಜಟಾಯು ಅಡ್ಡಗಟ್ಟಿ ಹತ ಆದದ್ದು, ಈಗ ವಾನರರು ಎಲ್ಲರೂ ಪ್ರಾಣ ಬಿಡಲು ನಿಶ್ಚಯಿಸಿದ್ದು— ಎಲ್ಲವನ್ನೂ ನೆನೆಮುಕೊಂಡು ಗಟ್ಟಿ ಆಗಿ ಅಳುತ್ತ ವಾನರವೃದ್ಧರಿಗೆ ಎಲ್ಲವನ್ನೂ ಹೇಳಿದ ಅಂಗದ. ಅಷ್ಟರಲ್ಲಿ ಪರಮಪರಾಕ್ರಮಶಾಲಿ ಸಂಪಾತಿ ಎಂಬ ಪಕ್ಷಿರಾಜ ಅಲ್ಲಿಗೆ ಬಂದ. ನಮ್ಮ ಕಾರ್ಯಸಿದ್ಧಿಯೇ ಇದಿರಿಗೆ ಬಂದ ಹಾಗೆ ಆಯಿತು. ಆ ಸಂಪಾತಿ ಜಟಾಯುವಿನ ಸ್ವಂತ ಅಣ್ಣ. ಅಂಗದ ಹೇಳುತ್ತ ಇದ್ದುದನ್ನು ಕೇಳಿದ. ಅದರಲ್ಲಿ ಜಟಾಯು ಸತ್ತ ಸುದ್ದಿ ಬಂತಲ್ಲ. ಅದನ್ನು ಕೇಳಿ ಸಂಪಾತಿಗೆ ಕೋಪ.

"ಸಿಟ್ಟನಿಂದಲೇ ಬಂದ. 'ಯಾರು ನನ್ನ ತಮ್ಮ ಜಟಾಯುವನ್ನು ಕೊಂದವರು? ಯಾರು ಆ ದುಷ್ಟ? ಎಲ್ಲಿ ಕೊಂದ? ವಿವರವನ್ನು ಹೇಳಿ

ನನಗೆ' ಎಂದ. ನಿನ್ನನ್ನು ಬಿಡಿಸಲು ಜನಸ್ಥಾನದಲ್ಲಿ ಆ ಘೋರ ರಾಕ್ಷಸನನ್ನು ಜಟಾಯು ತರುಬಿದುದನ್ನೂ ಆ ರಾಕ್ಷಸ ಜಟಾಯುವನ್ನು ಕೊಂದದ್ದನ್ನೂ ಅಂಗದ ಹೇಳಿದ. ರಾವಣನ ಕೈಯಿಂದ ತನ್ನ ತಮ್ಮನ ಕೊಲೆ ಆದುದಕ್ಕೆ ಬಹಳ ದುಃಖಿಸಿದ ಸಂಪಾತಿ. ಆಮೇಲೆ ನೀನು ಇಲ್ಲಿ ಇರುವ ಸಂಗತಿಯನ್ನು ನಮಗೆ ಹೇಳಿದ. ನಮಗೆ ಎಲ್ಲರಿಗೂ ಇದನ್ನು ಕೇಳಿ ಬಹಳ ಸಂತೋಷ ಆಯಿತು.

"ಕೂಡಲೇ ಅಲ್ಲಿಂದ ಹೊರಟೆವು. ವಿಂಧ್ಯಪರ್ವತದಿಂದ ನೆಗೆಯುತ್ತ ಬಂದು ಸೇರಿದೆವು ದಕ್ಷಿಣ ಸಮುದ್ರ ತೀರವನ್ನು. ಅಷ್ಟು ಕರ್ಣಾನಂದಕರ ಆ ಸಂಗತಿ. ನಿನ್ನನ್ನು ನೋಡುತ್ತೇವೆ ಎಂಬ ಸಂತೋಷ. ನಮ್ಮ ಮೈ ಎಲ್ಲಾ ಪುಳಕಿತ ಆಯಿತು. ಅಲ್ಲಿಗೆ ಬಂದರೆ ಇದಿರಿಗೆ ಅಪಾರ ಜಲರಾಶಿ. ನೋಡಿ ದಿಗಿಲುಬಿದ್ದೆವು. ಸಮುದ್ರವನ್ನು ದಾಟುವ ಬಗೆ? ಕೊನೆಗೆ ನಾನು ಅವರ ದುಃಖವನ್ನು ನೀಗಿಸಿದೆ. ಆ ಶತಯೋಜನದ ಸಮುದ್ರವನ್ನೂ ಹಾರಿದೆ. ಇಲ್ಲಿಗೆ ಬಂದೆ. ರಾವಣನನ್ನು ನೋಡಿದೆ. ದುಃಖದಲ್ಲಿ ಮುಳುಗಿದ ನಿನ್ನನ್ನೂ ಕಂಡೆ.

"ತಾಯೆ, ಇದ್ದದ್ದನ್ನು ಇದ್ದಂತೆ ಎಲ್ಲವನ್ನೂ ನಿನಗೆ ತಿಳಿಸಿ ಇದೇನೆ. ನಾನು ಬೇರೆ ಅಲ್ಲ. ರಾಮನೇ ಕಳಿಸಿದ ದೂತ. ರಾಮನ ಕೆಲಸಕ್ಕೆ ಬಂದವನು. ನನ್ನ ಸಂಗಡ ಮಾತಾಡು ತಾಯಿ. ನಾನು ಸುಗ್ರೀವನ ಮಂತ್ರಿ, ವಾಯುವಿನ ಮಗ. ಮಾಯಾವಿ ಅಲ್ಲ. ನನ್ನನ್ನು ನಂಬು, ದೇವಿ. ಶಸ್ತ್ರ ಹಿಡಿದವರಲ್ಲಿ ಶ್ರೇಷ್ಠ ಆದ ಶ್ರೀರಾಮ ಕ್ಷೇಮದಿಂದ ಇದಾನೆ. ಸದಾ ಅಣ್ಣನ ಶುಶ್ರೂಷೆ ಮಾಡುವ ಲಕ್ಷ್ಮಣನೂ ಕುಶಲ. ಮಹಾಪರಾಕ್ರಮಶಾಲಿ ಆದ ನಿನ್ನ ಗಂಡನಿಗೆ ಹಿತವನ್ನು ಕೋರಿ ನಾನು ಇಲ್ಲಿಗೆ ಬಂದೆ ಸುಗ್ರೀವನ ಅಪ್ಪಣೆಯಂತೆ. ನಾನು ಒಬ್ಬನೇ ಇಲ್ಲಿಗೆ ಬಂದದ್ದು. ನನಗೆ ಬೇರೆ ಸಹಾಯ ಇಲ್ಲ. ನಾನು ಕಾಮರೂಪ. ನಿನ್ನನ್ನು ನೋಡಿದುದು ನನ್ನ ಭಾಗ್ಯ. ನೀನು ಎಲ್ಲಿ ಇದೀಯೋ ತಿಳಿಯದೆ ತಳಮಳಿಸುತ್ತ ಇರುವ ವಾನರಸಮೂಹಕ್ಕೆ ನಾನು ಕಂಡದ್ದನ್ನು ಎಲ್ಲವನ್ನೂ ತಿಳಿಸುತ್ತೇನೆ ತಿರುಗಿ ಹೋಗಿ. ಅವರ ದುಃಖವನ್ನು ಕಳೆಯುತ್ತೇನೆ.

"ತಾಯೆ, ನನ್ನ ಭಾಗ್ಯ. ನಾನು ಸಮುದ್ರವನ್ನು ಲಂಘಿಸಿದ್ದು ವ್ಯರ್ಥ ಆಗಲಿಲ್ಲ. ನಿನ್ನನ್ನು ಕಂಡ ಕೀರ್ತಿ ನನಗೆ ಸಿಕ್ಕಿತು. ಮಹಾವೀರ್ಯಶಾಲಿ ಶ್ರೀರಾಮಚಂದ್ರ ಬೇಗ ಬರುತ್ತಾನೆ. ಬಂಧುಮಿತ್ರಸಮೇತ ರಾವಣನನ್ನು ಕೊಲ್ಲುತ್ತಾನೆ. ನಿನ್ನನ್ನು ಸೇರುತ್ತಾನೆ.

"ತಾಯಿ, ನನ್ನ ಕಥೆಯನ್ನು ಸ್ವಲ್ಪ ಹೇಳುತ್ತೇನೆ. ಮಾಲ್ಯವಂತ ಪರ್ವತಗಳಲ್ಲಿ ಉತ್ತಮೋತ್ತಮ. ಅಲ್ಲಿ ವಾನರೋತ್ತಮ ಕೇಸರಿ ವಾಸ ಆಗಿದ್ದ. ಆತನೇ ನನ್ನ ತಂದೆ. ಒಮ್ಮೆ ನನ್ನ ತಂದೆ ಗೋಕರ್ಣಪರ್ವತಕ್ಕೆ ಹೊರಟು ಹೋದ. ಅಲ್ಲಿ ದೇವರ್ಷಿಗಳ ಅಪ್ಪಣೆಯಂತೆ ಶಂಬಸಾದನ ಎಂಬ ರಾಕ್ಷಸನನ್ನು ಪವಿತ್ರ ಸಮುದ್ರತೀರದಲ್ಲಿ ಸಂಹರಿಸಿದ. ಕೇಸರಿಯ ಹೆಂಡತಿ ಅಂಜನಾದೇವಿ. ಆಕೆಯ ಗರ್ಭದಲ್ಲಿ ವಾಯುದೇವನ ಪ್ರಸಾದದಿಂದ ನಾನು ಹುಟ್ಟಿದೆ. ಚಿಕ್ಕಂದಿನಲ್ಲಿ ನಾನು ಮಾಡಿದ ಕೆಲಸದಿಂದ ನನಗೆ ಹನುಮಂತ ಎಂದು ಹೆಸರು ಆಯಿತು.

"ವೈದೇಹಿ, ನಿನಗೆ ನನ್ನಲ್ಲಿ ನಂಬಿಕೆ ಹುಟ್ಟಲಿ ಎಂದು ರಾಮನ ಗುಣಗಾನಮಾಡಿದೆ. ಬೇಗನೆ ಬರುತ್ತಾನೆ ರಾಮ ನಿನ್ನನ್ನು ಕರೆದು ಒಯ್ಯಲು."

ಇಷ್ಟು ಎಲ್ಲಾ ಹೇಳಿದಮೇಲೆ ಈ ಹನುಮಂತ ರಾಮದೂತನೇ ಸರಿ ಎಂದು ಸೀತೆ ನಂಬಿದಳು. ಆಕೆಯ ಹರ್ಷಕ್ಕೆ ಪಾರ ಇಲ್ಲ. ಹಿಗ್ಗಿ ಕಂಬನಿ ಸುರಿಸಿದಳು. ಕಮಲದಂತೆ ಅಗಲ, ಕೆಂಪು ಕುಡಿ, ಬಿಳಿಯ ಗುಡ್ಡೆ, ಬಾಗಿದ ಹುಬ್ಬು—ಆಕೆಯ ಕಣ್ಣು ಅರಳಿತು. ರಾಹು ಬಿಟ್ಟ ಚಂದ್ರನ ಹಾಗೆ ಆಯಿತು ಮುಖ. ಹನುಮಂತ ವಾನರ ಎಂದೇ ನಂಬಿದಳು.

"ದೇವಿ, ಎಲ್ಲವನ್ನೂ ತಿಳಿಸಿದೆ. ಇನ್ನು ಆದರೂ ಸಮಾಧಾನಹೊಂದು. ನಾನು ಏನು ಮಾಡಬೇಕು ಈಗ? ಏನು ನಿನ್ನ ಇಷ್ಟ? ತಿಳಿಸಿದರೆ ನಾನು ಹಿಂದಿರುಗುತ್ತೇನೆ. ನನ್ನ ತಂದೆ ಕೇಸರಿ. ಮಹರ್ಷಿಗಳ ಪ್ರೇರಣೆಯಿಂದ ಶಂಬಸಾದನನ್ನು ಕೊಂದ ಎಂದು ಹೇಳಿದೆ. ವಾಯುದೇವನ ಅನುಗ್ರಹದಿಂದ ಕೇಸರಿಯ ಹೆಂಡತಿಗೆ ಹುಟ್ಟಿದವನು ನಾನು. ವಾಯುದೇವನಿಗೆ ಸಮಾನ ಆದ ಪ್ರಭಾವ ನನ್ನದು" ಎಂದ ಹನುಮಂತ.

೩೬

ಸೀತಾದೇವಿ ತನ್ನ ಮಾತನ್ನು ನಂಬಬೇಕಲ್ಲ. ಆ ಮಹಾತೇಜಸ್ವಿ ವಾಯುಪುತ್ರ ವಿನಯದಿಂದ ಮತ್ತೆ ಹೇಳಿದ: "ಮಹಾಭಾಗ್ಯವತಿ, ನಿಜ ಆಗಿಯೂ ನಾನು ವಾನರ. ಮಹಾಧೀಮಂತ ರಾಮನ ದೂತ ಆಗಿ ಬಂದೆ.

ದೇವಿ, ಇಲ್ಲಿ ನೋಡು. ರಾಮನಾಮಾಂಕಿತ ಉಂಗುರ. ನಿನಗೆ ನಂಬುಗೆ ಹುಟ್ಟಲಿ ಎಂದು ಆ ಮಹಾನುಭಾವ ರಾಮ ಈ ಉಂಗುರವನ್ನು ಕೊಟ್ಟ ನನಗೆ, ಗುರುತು ತೋರಿಸಲಿಕ್ಕೆ. ಈಗ ಆದರೂ ಸಮಾಧಾನ ತಾಳು, ತಾಯೆ. ಸಂದೇಹವನ್ನು ಬಿಡು. ನಿನ್ನ ದುಃಖ ಎಲ್ಲಾ ತೀರಿತು. ನಿನಗೆ ಮಂಗಳ ಆಗುತ್ತದೆ." ಆ ಉಂಗುರವನ್ನು ಸೀತಾದೇವಿಗೆ ಕೊಟ್ಟ.

ಸೀತೆ ಆ ಉಂಗುರವನ್ನು ತೆಗೆದುಕೊಂಡಳು. ಪದೇ ಪದೇ ಅದನ್ನು ನೋಡಿದಳು. ಪರಮಸಂತೋಷ. ಗಂಡನೇ ಇದಿರಿಗೆ ಬಂದಷ್ಟು. ಕೆಂಪು ಕುಡಿಗಣ್ಣಿನ ಕಮಲದಳಾಯತನೇತ್ರೆ ಸೀತೆಯ ಕಣ್ಣು ಅರಳಿದವು. ಮನೋ ವಲ್ಲಭ ರಾಮ ಹೇಳಿಕಳಿಸಿದ ಕುಶಲವಾರ್ತೆಯನ್ನು ಕೇಳಿ ಹಿಗ್ಗಿದಳು. ಮೈ ಪುಲಕಗೊಂಡಿತು. ನಾಚಿದಳು. ವಾನರೋತ್ತಮ ಹನುಮಂತನನ್ನು ಮೆಚ್ಚಿ ಕೊಂಡಳು.' ಅವನನ್ನು ಪ್ರಶಂಸಿಸಿದಳು.

"ವಾನರೋತ್ತಮ, ನೀನು ಸಮರ್ಥ. ನೀನು ಪ್ರಾಜ್ಞ. ಈ ಘೋರ ರಾಕ್ಷಸರ ಈ ಲಂಕೆಯನ್ನು ನಿರ್ಭಯದಿಂದ ಪ್ರವೇಶಿಸಿದವನು ನೀನು ಒಬ್ಬನೇ. ನೂರು ಯೋಜನಗಳ ಈ ಭೀಕರ ಸಮುದ್ರವನ್ನು ಒಂದು ಗೋಷ್ಪಾದದ ಹಾಗೆ ದಾಟಿ ಬಂದೆ. ನಿನ್ನ ಪರಾಕ್ರಮ ಪ್ರಶಂಸನೀಯ. ಆಂಜನೇಯ, ನೀನು ರಾವಣಾಸುರನಿಗೆ ಹೆದರಲಿಲ್ಲ ಸ್ವಲ್ಪ ಆದರೂ. ಸಂಭ್ರಮವೂ ಇಲ್ಲ. ನೀನು ಸಾಮಾನ್ಯ ವಾನರ ಅಲ್ಲ. ಆತ್ಮಜ್ಞ ರಾಮಪ್ರಭುವಿನ ದೂತ ಆಗಿ ಬಂದೆ. ಆದ್ದರಿಂದ ನಿನ್ನೊಡನೆ ಮಾತಾಡಿದರೆ ತಪ್ಪು ಇಲ್ಲ. ನಿನ್ನ ಬಲಪರಾಕ್ರಮ ಗಳನ್ನು ಅರಿಯದೆ ಆ ಅಜೇಯ ಧೀಮಂತ ರಾಮಚಂದ್ರ ನಿನ್ನನ್ನು ಕಳಿಸಲಾರ.

"ಆ ಧರ್ಮಾತ್ಮ ಸತ್ಯಸಂಧ ರಾಮನೂ ಸುಮಿತ್ರಾಪುತ್ರ ಲಕ್ಷ್ಮಣನೂ ಕ್ಷೇಮ:ದಿಂದ ಇದ್ದಾರೆ. ನನ್ನ ಭಾಗ್ಯ. ಕಕುತ್ಸ್ಥವಂಶಶಿಖಾಮಣಿ ರಾಮ ಕ್ಷೇಮ:ದಿಂದ ಇದ್ದರೆ ಕೋಪದಿಂದ ಸಮುದ್ರಮೇಖಲೆ ಆದ ಈ ಪೃಥ್ವಿಯನ್ನೆ ಸುಟ್ಟುಬಿಡುತ್ತಾನೆ ಪ್ರಳಯಾಗ್ನಿಯ ಹಾಗೆ. ಏಕೆ ಸುಡದೆ ಇದ್ದಾನೋ? ದೇವತೆಗಳನ್ನೂ ನಿಗ್ರಹಿಸಬಲ್ಲ ಸಮರ್ಥರು ಆ ಅಣ್ಣತಮ್ಮಂದಿರು. ನನ್ನ ದುಃಖಕ್ಕೆ ಇನ್ನೂ ಕೊನೆ ಇಲ್ಲವೇನೋ!

"ವಾನರಪುಂಗವ, ಆ ಪುರುಷೋತ್ತಮ ನನಗೋಸುಗ ನಿರಂತರವೂ ದುಃಖಿಸುತ್ತ ಇಲ್ಲವೆ? ನನ್ನನ್ನು ಕರೆದು ಒಯ್ಯಲು ಪ್ರಯತ್ನ ಮಾಡುತ್ತ

ಇದಾನೆಯೆ ? ನನಗಾಗಿ ನಿರಂತರವೂ ಚಿಂತೆ ಮಾಡುತ್ತ ದುಃಖಿಸುತ್ತ ಮುಂದಿನ ಕೆಲಸಕಾರ್ಯಗಳಲ್ಲಿ ಎಚ್ಚರತಪ್ಪಿ ಇಲ್ಲ ತಾನೆ ? ವೈಮರಿತು ಇಲ್ಲ ತಾನೆ ? ಪುರುಷಪ್ರಯತ್ನ ನಡೆದಿದೆಯೆ ? ಆ ಪರಂತಪ ಗೆಳೆಯರಲ್ಲಿ ಸಾಮ ದಾನಗಳನ್ನೂ ಹಗೆಗಳಲ್ಲಿ ದಾನಭೇದದಂಡೋಪಾಯಗಳನ್ನೂ ಅನುಸರಿಸುತ್ತ ಇದಾನೆ ಅಲ್ಲವೆ ? ಹೊಸ ಹೊಸ ಗೆಳೆಯರನ್ನು ಸಂಪಾದಿಸುತ್ತಾ ಇದಾನೆಯೆ ? ಇತರರಿಗೂ ಬೇಕು ಆಗಿದಾನೆಯೆ ? ಅವನ ಗೆಳೆಯರು ಕೂಡ ಅವನನ್ನು ಪುರಸ್ಕರಿಸುತ್ತಾರೆಯೆ ?

"ದೈವಾನುಗ್ರಹವನ್ನು ಬಯಸಿ ರಾಮಚಂದ್ರ ಇಷ್ಟದೇವತಾಪ್ರಾರ್ಥನೆ ಮಾಡುವುದು ಉಂಟೆ ? ಆತನ ಪುರುಷಪ್ರಯತ್ನಕ್ಕೆ ದೈವಾನುಕೂಲ ಇದೆಯೆ ? ನನ್ನನ್ನು ಅಗಲಿ ಬಹಳ ದಿನ ಆದವು. ಇನ್ನೂ ನನ್ನಲ್ಲಿ ಸ್ನೇಹ ಇದೆಯೆ ಆತನಿಗೆ ? ಈಗಲಾದರೂ ನನ್ನನ್ನು ಈ ದುಃಖದಿಂದ ಪಾರು ಮಾಡುವನೆ ? ರಾಮಪ್ರಭು ಯಾವಾಗಲೂ ಸುಖವನ್ನೆ ಅನುಭವಿಸಬೇಕು. ಅಂಥದರಲ್ಲಿ ಈಗ ದುಃಖಕ್ಕೆ ಸಿಕ್ಕಿದಾನೆ. ಇದರಿಂದ ಸೊರಗಿ ಇಲ್ಲವಷ್ಟೆ ? ಕೌಸಲ್ಯೆ ಸುಮಿತ್ರೆಯರ ಭರತಶತ್ರುಘ್ನರ ಕುಶಲವಾರ್ತೆ ಆಗಾಗ ತಿಳಿಯುತ್ತಿದೆಯೆ ರಾಮನಿಗೆ ? ನನ್ನ ದೆಸೆಯಿಂದ ಬಹಳ ಪರಿತಪಿಸುತ್ತ ಇರಬೇಕು ಶ್ರೀರಾಮ. ನನ್ನಲ್ಲಿಯೇ ನೆಟ್ಟು ಇದೆಯೋ ಮನಸ್ಸು ಅಥವಾ ಅನ್ಯಮನಸ್ಕನೋ ? ನನ್ನನ್ನು ಕಡೆ-ಹಾಯಿಸುತ್ತಾನೆಯೆ ಈ ದುಃಖದಿಂದ ?

"ಭರತಕುಮಾರನಿಗೆ ಅಣ್ಣನಲ್ಲಿ ಬಲು ಪ್ರೀತಿ. ಆತ ನನಗೋಸ್ಕರ ಸಮರ್ಥ ಮಂತ್ರಿಗಳ ಸಮೇತ ಅಕ್ಷೋಹಿಣಿ ಸೇನೆಯನ್ನು ಕಳಿಸಿಕೊಡುತ್ತಾನೆಯೆ ? ಆ ಶ್ರೀಮಂತ ವಾನರೇಂದ್ರ ಸುಗ್ರೀವ ನನಗೋಸ್ಕರ ಇಲ್ಲಿಗೆ ಬರುತ್ತಾನೆಯೆ ಹಲ್ಲು ಉಗುರುಗಳಿಂದ ಹೋರಾಡುವ ಕಪಿವೀರರ ಸಮೇತ ? ಶೂರ, ಸಮಸ್ತ ಶಸ್ತ್ರಾಸ್ತ್ರಕೋವಿದ, ಸುಮಿತ್ರಾನಂದನ ಲಕ್ಷ್ಮಣ ಬರುತ್ತಾನೆಯೇ ರಾಮಪ್ರಭುವಿನ ಜೊತೆಯಲ್ಲಿ ? ಬಂದು ತನ್ನ ಬಾಣಪರಂಪರೆಯಿಂದ ರಾಕ್ಷಸರನ್ನು ನಾಶಮಾಡುತ್ತಾನೆಯೆ ? ಭಯಂಕರ ಆಗಿ ಉರಿದುರಿಯುವ ಬಾಣಗಳಿಂದ ಬಂಧುಮಿತ್ರರ ಸಂಗಡ ರಾವಣಾಸುರ ಸತ್ತು ಬಿದ್ದುದನ್ನು ನಾನು ನೋಡುತ್ತೇನೆಯೆ ಕಣ್ಣಾರೆ ? ಆದಷ್ಟು ಬೇಗ ?

"ಆಂಜನೇಯ, ಬಂಗಾರದ ಹೊಳಪು, ಕಮಲದ ಸುವಾಸನೆ ರಾಮನ ಮುಖದ್ದು. ನನ್ನನ್ನು ಅಗಲಿದ ದುಃಖದಿಂದ ಬಾಡಿಹೋಗಿದೆಯೆ ಆ ಕಮಲ

ಮುಖ? ಬಿಸಿಲಿನ ಬೇಗೆಗೆ ಒಣಗಿಹೋದ ಕೆರೆಯ ಕಂದಿದ ಕಮಲದ ಹಾಗೆ. ಧರ್ಮಪರಿಪಾಲನೆಗಾಗಿ ಕೈಗೆ ಬಂದ ರಾಜ್ಯವನ್ನು ತೊರೆದ ಶ್ರೀರಾಮಚಂದ್ರ. ತಾನೂ ಪಾದಚಾರಿ ಆಗಿ ನನ್ನನ್ನೂ ನಡೆಯಿಸಿ ಕಾಡಿಗೆ ಕರೆತಂದ. ಆಗ ರಾಮಪ್ರಭುವಿಗೆ ವ್ಯಥೆ ಸ್ವಲ್ಪವೂ ಆಗಲಿಲ್ಲ. ಭಯಪಡಲಿಲ್ಲ. ದುಃಖಿಸಲಿಲ್ಲ. ಅಂಥ ಧೀರಪುರುಷನ ಮನೋಧೈರ್ಯ ನನ್ನ ಅಗಲಿಕೆಯಿಂದ ಕುಂದಿಹೋಗಿಲ್ಲ ಅಷ್ಟೆ? ಮಾರುತಿ, ನನ್ನಲ್ಲಿ ಇರುವಷ್ಟು ಪ್ರೀತಿ ಆತನಿಗೆ ತಂದೆಯಲ್ಲಿ ತಾಯಿಯಲ್ಲಿ ಬೇರೆ ಬಂಧುಗಳಲ್ಲಿ ಇಲ್ಲ. ನನ್ನಲ್ಲಿ ಇರುವಷ್ಟು ಸ್ನೇಹ ಬೇರೆ ಯಾರ ಹತ್ತಿರವೂ ಇಲ್ಲ ಆತನಿಗೆ. ನನಗೂ ಅಷ್ಟೇ. ನನ್ನ ಪ್ರಾಣಕಾಂತ ನನ್ನನ್ನು ಕರೆದು ಒಯ್ಯುವ ಸಂಗತಿ ತಿಳಿಯುವವರೆಗೂ ಬದುಕಿ ಇರಬೇಕು ಎಂದು ಕೊಂಡಿದೇನೆ" ಎಂದಳು ಸೀತೆ. ಆ ಮಾತಿನಲ್ಲಿ ಸವಿ ಎಷ್ಟೋ ಗೂಢಾರ್ಥವೂ ಅಷ್ಟೇ. ರಾಮನ ಬಗ್ಗೆ ಕೇಳಬೇಕು ಮಧುರವಚನ ಎಂದು ಆಕೆಗೆ ಕುತೂಹಲ.

ಪ್ರಚಂಡ ಪರಾಕ್ರಮಿ ಆಂಜನೇಯ ಸೀತೆಯ ಮುಂದೆ ಕೈಮುಗಿದು ನಿಂತ. "ಕಮಲನಯನೆ, ನೀನು ಇಲ್ಲಿ ಇರುವುದು ರಾಮನಿಗೆ ತಿಳಿಯದು. ಹಿಂದೆ ದೇವೇಂದ್ರನ ಹೆಂಡತಿ ಶಚೀದೇವಿಯನ್ನು ಅನುಹ್ಲಾದ ರಾಕ್ಷಸ ಕದ್ದು ಒಯ್ದ. ಅಲ್ಲಿ ಇದಾಳೆ ಆಕೆ ಎಂದು ದೇವೇಂದ್ರನಿಗೆ ತಿಳಿಯದು. ಆದ್ದರಿಂದ ಆಕೆಯನ್ನು ಬಹುಕಾಲ ಕರೆದು ಒಯ್ಯಲಿಲ್ಲ. ಶ್ರೀರಾಮನೂ ಹಾಗೆಯೇ. ನೀನು ಇರುವ ಸ್ಥಳ ತಿಳಿಯದೆ ಕರೆದು ಒಯ್ಯಲು ಬರಲಿಲ್ಲ. ನಾನು ಹೋಗಿ ನಿನ್ನ ಸಮಾಚಾರವನ್ನು ಹೇಳಿದ ಕೂಡಲೆ ರಾಮಚಂದ್ರ ಇಲ್ಲಿಗೆ ಬರುತ್ತಾನೆ. ನಿನ್ನನ್ನು ಕರೆದು ಒಯ್ಯುತ್ತಾನೆ. ಕೂಡಲೇ ಅಪಾರ ವಾನರಸೇನೆ ಭಲ್ಲೂಕ ಸೇನೆಯ ಸಮೇತ ಬರುತ್ತಾನೆ ರಾಮಪ್ರಭು. ಅಕ್ಷೋಭ್ಯ ಸಾಗರವನ್ನು ಬಾಣಗಳಿಂದ ಬಂಧಿಸಿಬಿಡುತ್ತಾನೆ. ಲಂಕೆಗೆ ಬರುತ್ತಾನೆ. ರಾಕ್ಷಸರು ಎಲ್ಲರೂ ನಿರ್ಮೂಲ ಆಗಿ ಹೋಗುತ್ತಾರೆ. ಯಾರೇ ಅಡ್ಡ ಬರಲಿ, ಸುರರು ಆಗಲಿ ಅಸುರರು ಆಗಲಿ ಮೃತ್ಯುವೇ ಆಗಲಿ, ಅವರ ಹುಟ್ಟು ಅಡಗಿಹೋಗುತ್ತದೆ.

"ಪೂಜ್ಯೆ, ನಿನ್ನನ್ನು ಕಾಣದೆ ದುಃಖಸಮುದ್ರದಲ್ಲಿ ಮುಳುಗಿ ಹೋಗಿ ಇದಾನೆ ರಾಮಪ್ರಭು. ಸಿಂಹ ಕಾಡುವ ಮದ್ದಾನೆಯ ಹಾಗೆ ಕಿಂಚಿತ್ತೂ ಸುಖ ಕಾಣದೆ ಬಾಧೆಪಡುತ್ತ ಇದಾನೆ. ಬೇಗನೆ ನೀನು ನೋಡುತ್ತೀಯೆ. ಹುಣ್ಣಿಮೆಯ ಚಂದಿರನಂಥ ಶ್ರೀರಾಮನ ಮುಖವನ್ನು. ಚೆಲುವು ಕಣ್ಣು,

ತೊಂಡೆಹಣ್ಣಿನ ತುಟಿ, ಥಳಥಳಿಸುವ ಕರ್ಣಕುಂಡಲಗಳನ್ನು ನೀನು ನೋಡು ತ್ತೀಯೆ. ಮಲಯ ಪರ್ವತದ ಮೇಲೆ, ವಿಂಧ್ಯ ಪರ್ವತದ ಮೇಲೆ, ಮೇರು ಮಂದರ ಪರ್ವತಗಳ ಮೇಲೆ, ದುರ್ದುರ ಪರ್ವತದ ಮೇಲೆ ಸಿಗುವ ಕಂದ ಮೂಲಫಲಗಳ ಆಣೆ; ಬೇಗನೇ ನೋಡುತ್ತೀ ರಾಮನನ್ನು, ಐರಾವತದ ಮೇಲೆ ದೇವೇಂದ್ರನ ಹಾಗೆ ಪ್ರಸ್ರವಣ ಪರ್ವತದ ಮೇಲೆ ಶ್ರೀರಾಮನನ್ನು.

"ದೇವಿ, ನಿನ್ನ ಅಗಲಿಕೆಯ ದುಃಖ, ರಾಮ ಮಾಂಸವನ್ನು ಬಿಟ್ಟು ಇದ್ದಾನೆ. ತಿನ್ನ ಈಗ. ಮದ್ಯಸೇವನೆ ಇಲ್ಲ. ವಾನಪ್ರಸ್ಥನ ಹಾಗೆ ಒಪ್ಪೊತ್ತೀ ಫಲಾಹಾರ. ಅವನ ಮನಸು ಎಲ್ಲಾ ನಿನ್ನ ಮೇಲೇ. ಮೈಮೇಲೆ ಬಂದು ಕೂಡುವ ನೊಣ ಸೊಳ್ಳೆ ಯಾವುದನ್ನೂ ಓಡಿಸುವುದು ಇಲ್ಲ. ಹುಳ ಬರಲಿ ಹಾವು ಬರಲಿ ಓಡಿಸುವುದು ಇಲ್ಲ. ಯಾವಾಗಲೂ ಕಾಮಪರವಶ. ಸದಾ ನಿನ್ನದೇ ಧ್ಯಾನ. ನಿರಂತರವೂ ನಿನಗಾಗಿ ಶೋಕ. ನಿನ್ನ ಹೊರತು ಬೇರೆ ವಿಷಯವೇ ಆತನ ಮನಸಿಗೆ ಅಂಟದು. ನಿನ್ನನ್ನು ಅಗಲಿದ್ದೇ ಅಗಲಿದ್ದು; ನಿದ್ದೆಯೇ ಇಲ್ಲ. ಅಕಸ್ಮಾತ್ ನಿದ್ದೆ ಹೋದ. 'ಸೀತೇ ಸೀತೇ' ಎಂದು ಕನವರಿಸುತ್ತ ಎಚ್ಚರಗೊಳ್ಳುತ್ತಾನೆ. ಸೊಗಸಾದ ಒಂದು ಹಣ್ಣು ನೋಡಿದ, ಒಂದು ಹೂ ನೋಡಿದ, ಸುಂದರ ವಸ್ತು ಯಾವುದನ್ನೇ ನೋಡಲಿ, 'ಹಾ ಪ್ರಿಯೆ' ಎಂದು ನಿನ್ನನ್ನು ನೆನೆನೆನೆದು ನಿಟ್ಟುಸಿರು ಬಿಡುತ್ತಾನೆ. ದೇವಿ, ದೃಢವ್ರತ ಆದ ಆ ಮಹಾನುಭಾವ ಸದಾ ನಿನ್ನನ್ನೇ ನೆನೆಯುತ್ತಾನೆ. ನಿನ್ನನ್ನು ಹೆಸರು ಹಿಡಿದು ಕೂಗುತ್ತ ನಿನ್ನನ್ನು ಮರಳಿ ಪಡೆಯಲು ಯಾವಾಗಲೂ ಪ್ರಯತ್ನ ಮಾಡುತ್ತ ಇದ್ದಾನೆ" ಎಂದು ಹೇಳಿದ ಹನುಮಂತ.

ವೈದೇಹಿ ರಾಮವಾರ್ತೆಯನ್ನು ಕೇಳಿದಳು. ರಾಮನೂ ತನ್ನ ಹಾಗೇ ತನಗೆ ಸಮಾನ ಆಗಿ ದುಃಖಿಸುತ್ತ ಇದ್ದಾನೆ. ಇದನ್ನು ಕೇಳಿ ಆಕೆಯ ದುಃಖ ಸ್ವಲ್ಪ ತಗ್ಗಿತು. ಶರತ್ಕಾಲ ಮೊದಲು ಆದಾಗ ಅಲ್ಪಸ್ವಲ್ಪ ಮೋಡ ಕವಿದಾಗ ಚಂದ್ರ ಮೂಡಿದ ರಾತ್ರಿ ಹೇಗೋ ಹಾಗೆ ಕಂಡಳು ಸೀತೆ.

೩೭

ಪೂರ್ಣಚಂದ್ರಮುಖಿ ಸೀತೆ ಹನುಮಂತ ಆಡಿದ ಮಾತು ಎಲ್ಲವನ್ನೂ ಕೇಳಿದಳು. ಸಾರವಂತ ಧರ್ಮಯುಕ್ತ ಮಾತನ್ನು ಕೇಳಿದಳು. "ಹನುಮಂತ,

ಶ್ರೀರಾಮಚಂದ್ರನಿಗೆ ಯಾವಾಗಲೂ ನನ್ನದೇ ಧ್ಯಾನ ಎಂದೆ. ಆತನಿಗೆ ಈಗ ಯಾವುದೂ ಬೇಡ, ಯಾವಾಗಲೂ ಶೋಕದಲ್ಲಿ ಮುಳುಗಿರುತ್ತಾನೆ ಎಂದೆ. ಒಂದು ಅಮೃತ, ಇನ್ನೊಂದು ವಿಷ. ಎರಡೂ ಬೆರೆತು ಇದೆ ನಿನ್ನ ಮಾತಿನಲ್ಲಿ. ಮಹದೈಶ್ವರ್ಯವೇ ಇರಬಹುದು, ಭಯಂಕರ ದುಃಖವೇ ಇರಬಹುದು! ಎರಡ ರಲ್ಲೂ ಮನುಷ್ಯ ಸ್ವತಂತ್ರ ಅಲ್ಲ. ಹಗ್ಗ ಬಿಗಿದು ಎಳೆಯುತ್ತ ಇರುತ್ತದೆ ದೈವ. ಎಲ್ಲಿಗೋ ಏನೋ! ದೈವವನ್ನು ತಡೆಯುವುದು ಯಾವ ಪ್ರಾಣಿಗೂ ಸಾಧ್ಯ ಅಲ್ಲ. ಖಂಡಿತ. ನಮ್ಮನ್ನೇ ನೋಡು. ನಾನೂ ಶ್ರೀರಾಮಚಂದ್ರನೂ ಲಕ್ಷ್ಮಣನೂ ಹೇಗೆ ಕಷ್ಟಪರಂಪರೆಗೆ ಸಿಕ್ಕಿ ಕೊಚ್ಚಿಕೊಂಡು ಹೋಗಿದ್ದೇವೋ! ಸಮುದ್ರಮಧ್ಯದಲ್ಲಿ ದೋಣಿ ಒಡೆದರೆ ಮನುಷ್ಯ ನೀರಿನಲ್ಲಿ ಬಿದ್ದು ಈಸುತ್ತ ತೇಲುತ್ತ ಬಳಲಿಹೋಗುತ್ತಾನೆ. ಹಾಗೆಯೇ ನನ್ನ ನಲ್ಲ ರಾಘವ ದುಃಖ-ಸಮುದ್ರದಲ್ಲಿ ಮುಳುಗಿ ತೇಲುತ್ತ ಇದ್ದಾನೆ ಈಗ. ಯಾವಾಗ ದಡ ಸೇರು ತ್ತಾನೋ! ಯಾವಾಗ ಬರುತ್ತಾನೋ ಇಲ್ಲಿಗೆ. ಇಲ್ಲಿಗೆ ಬಂದು ದುರುಳ ರಾವಣನನ್ನು ಕೊಂದು ರಾಕ್ಷಸರನ್ನು ಎಲ್ಲರನ್ನೂ ನಾಶಮಾಡಿ ಈ ಲಂಕಾಪಟ್ಟಣ ವನ್ನು ಯಾವಾಗ ಧ್ವಂಸಮಾಡುತ್ತಾನೋ. ಯಾವಾಗ ನೋಡುತ್ತಾನೋ ನನ್ನನ್ನು! ರಾವಣಾಸುರ ನನಗೆ ಒಂದು ವರ್ಷದ ಗಡುವು ಕೊಟ್ಟ. ಆಗಲೇ ಹತ್ತು ತಿಂಗಳು ಕಳೆಯಿತು ಅದರಲ್ಲಿ. ಇರುವುದು ಎರಡೇ ತಿಂಗಳು. ಅಷ್ಟರ ಒಳಗೆಯೇ ಶ್ರೀರಾಮಪ್ರಭು ಇಲ್ಲಿಗೆ ಬರಬೇಕು. ನೀನು ಬೇಗ ಹೋಗು. ಶ್ರೀರಾಮನನ್ನು ಕರೆ ತಾ.

"ವಾನರೋತ್ತಮ, ರಾವಣನ ತಮ್ಮ ಒಬ್ಬ ಇದ್ದಾನೆ, ವಿಭೀಷಣ. ನನ್ನನ್ನು ರಾಮನ ಬಳಿಗೆ ಕಳಿಸು ಎಂದು ಎಷ್ಟೋ ಹೇಳಿದ. ರಾವಣ ಕೇಳಲಿಲ್ಲ. ಆತನಿಗೆ ಇಷ್ಟ ಇಲ್ಲ. ರಾವಣನಿಗೆ ಈಗ ವಿನಾಶಕಾಲ. ಯುದ್ಧಮಾಡಿಸಿ ರಾವಣನನ್ನು ಸೆಳೆದುಕೊಂಡುಹೋಗಲು ಮೃತ್ಯುದೇವತೆ ಕಾದುಕೊಂಡಿದೆ. ವಿಭೀಷಣನ ಹಿರಿಯ ಮಗಳು ಅನಲೆ. ಅವಳ ತಾಯಿ ಅವಳನ್ನು ಇಲ್ಲಿಗೆ ಕಳಿಸಿದಳು ಇದನ್ನು ಎಲ್ಲವನ್ನೂ ನನಗೆ ತಿಳಿಸಲಿಕ್ಕೆ.

"ಹನುಮಂತ, ನನ್ನ ಪತಿ ಬೇಗನೆ ನನ್ನ ಬಳಿಗೆ ಬರುತ್ತಾನೆ. ಸಂಶಯ ಇಲ್ಲ. ಏಕೆಂದರೆ ನನ್ನ ಅಂತರಾತ್ಮ ಪರಿಶುದ್ಧ ಆಗಿದೆ. ಅಲ್ಲದೆ ಶ್ರೀರಾಮನಲ್ಲಿ ಇರುವ ಸದ್ಗುಣ ಅನೇಕ. ಉತ್ಸಾಹ ಇದೆ, ಪೌರುಷ ಇದೆ, ಬಲ ಇದೆ, ದಯೆ

ಕೃತಜ್ಞತೆ ಪರಾಕ್ರಮ ಪ್ರಭಾವ ಇವೆ. ತಮ್ಮನನ್ನೂ ಸಹಾಯಕ್ಕೆ ಕರೆಯಲಿಲ್ಲ. ಒಬ್ಬನೇ ನಿಂತು ಹದಿನಾಲ್ಕುಸಾವಿರದ ರಾಕ್ಷಸಸೇನೆಯನ್ನು ಧ್ವಂಸಮಾಡಿದ ಜನಸ್ಥಾನದಲ್ಲಿ. ಅಂಥವನನ್ನು ಇದಿರಿಸಿದರೆ ಯಾವ ಶತ್ರು ಬದುಕಬಲ್ಲ? ಮಾರುತಿ, ಶ್ರೀರಾಮ ಪುರುಷೋತ್ತಮ. ಎಷ್ಟೇ ದುಃಖ ಬಂದರೂ ಕುಗ್ಗುವುದು ಇಲ್ಲ. ಶಚೀದೇವಿಗೆ ಗೊತ್ತು ದೇವೇಂದ್ರನ ಮಹಿಮೆ. ನನಗೆ ಗೊತ್ತು ಶ್ರೀರಾಮನ ಮಹಿಮೆ. ತನ್ನ ಬಾಣಕಿರಣಗಳಿಂದ ರಾಕ್ಷಸಜಲವನ್ನು ಬತ್ತಿಸಿಬಿಡುತ್ತಾನೆ ರಾಮಸೂರ್ಯ." ರಾಮನನ್ನು ನೆನೆನೆನೆದು ದುಃಖದಿಂದ ಕಂಬನಿ ಸುರಿಸುತ್ತ ಮಾತಾಡಿದಳು ಸೀತೆ.

ಹನುಮಂತ ಹೇಳಿದ: "ತಾಯೆ, ನಾನು ಹೋಗಿ ಸುದ್ದಿ ತಿಳಿಸಿದ ಕೂಡಲೇ ವಾನರಭಲ್ಲೂಕಸೇನೆಯ ಸಮೇತ ಶ್ರೀರಾಮ ಬರುತ್ತಾನೆ. ನಿಧಾನ ಇಲ್ಲ. ಅಷ್ಟರವರೆಗೆ ಕಾಯಬೇಕಾದ್ದೂ ಇಲ್ಲ. ಈಗಲೇ ಈ ಸಂಕಟದಿಂದ ನಿನ್ನನ್ನು ಪಾರುಮಾಡುತ್ತೇನೆ. ನನ್ನ ಹೆಗಲನ್ನು ಏರಿ ಕೂತುಕೋ ನೀನು. ನಿನ್ನನ್ನು ಹೊತ್ತುಕೊಂಡೇ ಸಮುದ್ರವನ್ನು ದಾಟುತ್ತೇನೆ. ನನ್ನ ಶಕ್ತಿಯನ್ನು ಎಷ್ಟು ಎಂದು ಹೇಳಲಿ. ರಾವಣಸಮೇತ ಈ ಲಂಕಾಪಟ್ಟಣವನ್ನೇ ಕಿತ್ತು ಎತ್ತಿ ಹೆಗಲ ಮೇಲೆ ಇಟ್ಟುಕೊಂಡು ಸಮುದ್ರವನ್ನು ದಾಟಬಲ್ಲೆ. ಹವ್ಯವನ್ನು ಅಗ್ನಿ ದೇವೇಂದ್ರನಿಗೆ ಒಯ್ದು ಮುಟ್ಟಿಸುವಂತೆ ನಿನ್ನನ್ನು ಒಯ್ದು ಶ್ರೀರಾಮನಿಗೆ ತಲಪಿಸುತ್ತೇನೆ. ರಾಕ್ಷಸಸಂಹಾರಕ್ಕಾಗಿ ಲಕ್ಷ್ಮಣನ ಸಮೇತ ಪ್ರಯತ್ನಿಸುತ್ತ ಇರುವ ಮಹಾವಿಷ್ಣುಸಮಾನ ಆದ ರಾಮಪ್ರಭುವನ್ನು ನೀನು ಈಗಲೇ ನೋಡಬಹುದು. ಐರಾವತದ ಮೇಲೆ ಕುಳಿತ ದೇವೇಂದ್ರನಂತೆ ಪ್ರಸ್ರವಣ ಪರ್ವತದ ಮೇಲೆ ಕುಳಿತು ನಿನ್ನನ್ನು ನೋಡಲು ತವಕಿಸುತ್ತ ಇರುವ ಆ ಬಲಾಢ್ಯ ರಾಮನನ್ನು ಈಗಲೇ ನೋಡುವೆಯಂತೆ. ನನ್ನ ಹೆಗಲನ್ನು ಹತ್ತು, ತಾಯಿ.

"ಮಂಗಳಸ್ವರೂಪಿಣಿ, ನನ್ನ ಮಾತನ್ನು ಅಸಡ್ಡೆಮಾಡಬೇಡ. ರಾಮನ ಬಳಿಗೆ ನಿನ್ನನ್ನು ಕರೆದು ಒಯ್ಯುತ್ತೇನೆ. ರೋಹಿಣೀದೇವಿ ಚಂದ್ರನನ್ನು ಸೇರುವಂತೆ ರಾಮನನ್ನು ಸೇರುವೆಯಂತೆ ನೀನು. ಆಕಾಶಮಾರ್ಗದಲ್ಲಿ ಸಮುದ್ರವನ್ನು ದಾಟುತ್ತೇನೆ ನಾನು. ತೇಜೋವಂತರು ಆದ ಚಂದ್ರಸೂರ್ಯರ ಸಂಗಡ ನೀನು ಮಾತಾಡುತ್ತ ಇರುವ ಹಾಗೆ ಇರುತ್ತದೆ. ದೇವಿ, ಇಲ್ಲಿಂದ ಅಂತರಿಕ್ಷ ಮಾರ್ಗದಲ್ಲಿ ನಾನು ಹೋಗುವಾಗ ರಾಕ್ಷಸರು ಅಡ್ಡಬರಬಹುದು ನನಗೆ ಎಂಬ

ಸಂದೇಹ ಬೇಡ ನಿನಗೆ. ಯಾರೂ ನನ್ನನ್ನು ಬೆನ್ನಟ್ಟಿ ಬರಲಾರರು. ಹೇಗೆ ಬಂದೆನೋ ಹಾಗೇ ಹೋಗುತ್ತೇನೆ."

ಹನುಮಂತನ ಮಾತಿನಿಂದ ಸೀತೆಗೆ ಮಹಾಸಂತೋಷ, ಜೊತೆಯಲ್ಲೇ ಪರಮ ಆಶ್ಚರ್ಯ. ಮೈ ನಿಮಿರಿತು. "ಹನುಮಂತ, ಅಷ್ಟು ದೂರ ನನ್ನನ್ನು ಎತ್ತಿಕೊಂಡು ಹೋಗುತ್ತೇನೆ ಎನ್ನುತ್ತೀಯಲ್ಲ. ನಿನ್ನ ಮೈ ನೋಡಿದರೆ ಸಣ್ಣದು. ನನ್ನನ್ನು ಹೊತ್ತುಕೊಂಡು ಹೋಗಬಲ್ಲೆಯಾ ನನ್ನ ಪತಿಯ ಬಳಿಗೆ? ಆಲೋಚನೆ ಮಾಡದೆ ಹೀಗೆ ಬಯಸಿದೆಯಲ್ಲ" ಎಂದಳು ಸೀತೆ.

ಸೀತಾದೇವಿಯ ಮಾತು ಪರಿಹಾಸ ಎನಿಸಿತು ಹನುಮಂತನಿಗೆ. 'ಈಕೆಗೆ ನನ್ನ ಪರಾಕ್ರಮ ಗೊತ್ತು ಇಲ್ಲ. ನನ್ನ ಪ್ರಭಾವವೇ ತಿಳಿಯದು. ನನ್ನ ಮಹದಾಕಾರವನ್ನು ತೋರಿಸಿದರೆ ಈಕೆಗೆ ಅರ್ಥ ಆದೀತು.' ಹೀಗೆ ಆಲೋಚಿಸಿ ಆ ಅರಿಮರ್ದನ ಆಂಜನೇಯ ಮರದಿಂದ ಹಾರಿದ. ತನ್ನ ಮೈಯನ್ನು ಬೆಳೆಸಿದ. ಮೇರುಮಂದರಪರ್ವತಗಳಿಗೆ ಸಮ ಆದ ಮೈ. ಉರಿಯುವ ಬೆಂಕಿಯಂಥ ತೇಜಸ್ಸು. ರಕ್ತದಂತೆ ಕೆಂಪು ಮುಖ. ವಜ್ರಾಯುಧದಂಥ ಕೋರೆದಾಡೆ. ವ್ಯಾಘ್ರನಖದಂಥ ಉಗುರು. ಮಹಾಭಯಂಕರ ಆಕಾರ. ಸೀತಾದೇವಿಯ ಮುಂದೆ ನಿಂತ ವಿನಯದಿಂದ ಕೈಜೋಡಿಸಿಕೊಂಡು.

"ತಾಯೆ, ಸೀತಾದೇವಿ, ಈಗಲಾದರೂ ನಂಬಿಕೆ ಆಯಿತೆ? ಗುಡ್ಡ ಬೆಟ್ಟ ಕಾಡುಕೋಟೆ ಬುರುಜುಬಾಗಿಲುಸಮೇತ ಈ ಲಂಕಾ ಪಟ್ಟಣವನ್ನೂ ಇದರ ರಾಜ ರಾವಣನನ್ನೂ ಎತ್ತಿಕೊಂಡು ಹೋಗಬಲ್ಲ ಸಾಮರ್ಥ್ಯ ನನ್ನದು. ದೇವಿ, ಈ ರೂಪವನ್ನು ನೋಡಿ ಬೆದರಬೇಡ. ಧೈರ್ಯ ತಂದುಕೋ. ಅಸಡ್ಡೆ ಮಾಡಬೇಡ. ರಾಮಲಕ್ಷ್ಮಣರ ದುಃಖ ಅಳಿಯಲಿ" ಎಂದ.

ಭಯಂಕರ ಆಕಾರದ ಆ ಮಾರುತಿಯನ್ನು ನೋಡಿದಳು ಕಮಲಾಕ್ಷಿ ಸೀತಾದೇವಿ. "ಮಹಾಕಪಿ, ನಿನ್ನ ಬಲಪರಾಕ್ರಮಗಳನ್ನೂ ನಿನ್ನ ವಾಯು ವೇಗವನ್ನೂ ಅಗ್ನಿಸಮಾನ ತೇಜಸ್ಸನ್ನೂ ನೋಡಿದೆ. ನೀನು ಸಾಮಾನ್ಯ ಅಲ್ಲ. ಸಾಮಾನ್ಯ ಆದರೆ ಈ ಮಹಾಸಮುದ್ರವನ್ನು ದಾಟಿ ಇಲ್ಲಿಗೆ ಬರುತ್ತ ಇದ್ದನೆ? ನನ್ನನ್ನು ಹೊತ್ತುಕೊಂಡು ಹೋಗಬಲ್ಲೆ ನೀನು. ನಿನಗೆ ಆ ಸಾಮರ್ಥ್ಯ ಇದೆ. ನೀನು ಬಂದ ಕೆಲಸ ಆಯಿತು. ಇನ್ನು ರಾಮಕಾರ್ಯಸಿದ್ಧಿ ಬೇಗ ಆಗುವಂತೆ ಮಾಡಲು ಆಲೋಚಿಸು.

"ವಾನರೋತ್ತಮ, ನಾನು ಈಗ ನಿನ್ನ ಜೊತೆಯಲ್ಲಿ ಬರಬಾರದು. ಅದು ತರ ಅಲ್ಲ. ನಿನ್ನದು ವಾಯುವೇಗ. ಸಮುದ್ರದ ಮೇಲೆ ನೀನು ಹಾರಿ ಹೋಗುವಾಗ ನಾನು ಕೆಳಗೆ ನೋಡಿ ಬೆದರಿ ಎಚ್ಚರ ತಪ್ಪಿಯೇನು. ನಿನ್ನ ಹೆಗಲಿನಿಂದ ಜಾರಿ ಬಿದ್ದೇನು. ಜಾರಿ ಕಡಲಿಗೆ ಬಿದ್ದೆನೋ ತಿಮಿತಿಮಿಂಗಿಲಗಳಿಗೆ ಮೊಸಳೆಗಳಿಗೆ ಅನ್ನ ಆಗಬೇಕು. ಶತ್ರುಮರ್ದನ, ನಿನ್ನ ಜೊತೆಯಲ್ಲಿ ನಾನು ಬರಲಾರೆ. ನನ್ನನ್ನು ಹೊತ್ತುಕೊಂಡು ನೀನು ಸುರಕ್ಷಿತ ಆಗಿ ಹೋಗಬಲ್ಲೆಯೋ ಇಲ್ಲವೋ ನನಗೆ ಸಂದೇಹ.

"ನೀನು ನನ್ನನ್ನು ಎತ್ತಿಕೊಂಡು ಹೋದೆ. ಅದು ರಾವಣನಿಗೆ ತಿಳಿದರೆ ಬಿಡುತ್ತಾನೆಯೆ? ಅವನ ಭಯಂಕರ ರಾಕ್ಷಸರು ನಿನ್ನನ್ನು ಹಿಡಿದುಕೊಳ್ಳಲು ಬರುತ್ತಾರೆ. ಶೂಲ ಮುದ್ಗರ ಮುಂತಾದ ಬಗೆಬಗೆಯ ಆಯುಧ ಧರಿಸಿ ಬರುತ್ತಾರೆ. ನೀನೋ ಏಕಾಕಿ, ನಿರಾಯುಧ. ಅವರದು ದೊಡ್ಡ ಗುಂಪು. ಆಯುಧಧಾರಿಗಳು. ನಿನ್ನನ್ನು ನೀನು ಕಾಪಾಡಿಕೊಳ್ಳುವುದೇ ಕಷ್ಟ. ನನ್ನನ್ನು ಬೇರೆ ಕಾಪಾಡಬೇಕಲ್ಲ. ಹೇಗೆ ಸಾಧ್ಯ? ವಾನರೋತ್ತಮ, ಒಂದುವೇಳೆ ನೀನು ಹೋರಾಡಿದೆ; ನನಗೆ ದಿಗಿಲು ಆಗಿ ನಾನು ಜಾರಿಬಿದ್ದರೆ? ರಾಕ್ಷಸರು ಭಯಂಕರರು, ಮಹಾಕಾಯರು, ಬಹಳ ಬಲಾಢ್ಯರು. ಹೇಗೋ ಮಾಡಿ ಸೋಲಿಸುತ್ತಾರೆ. ಹಾಗೆ ಆಗಲಿಲ್ಲ, ನೀನು ಯುದ್ಧ ಮಾಡುತ್ತ ಮೈಮರೆತರೆ ನಾನು ಕೆಳಕ್ಕೆ ಬೀಳುತ್ತೇನೆ.

"ರಾಕ್ಷಸರು ಮಾಯಾವಿಗಳು. ನನ್ನನ್ನು ಆಗ ಎತ್ತಿಕೊಂಡು ಹೋಗಬಹುದು. ಹನುಮಂತ, ಯುದ್ಧದಲ್ಲಿ ಗೆಲುವು ಸೋಲುಗಳು ಅನಿಶ್ಚಿತ. ನೀನು ಗೆಲ್ಲಲಿಲ್ಲ. ನಿನ್ನ ಕೈಯಿಂದ ನನ್ನನ್ನು ಕಸಿದುಕೊಂಡು ಹೋಗಿ ತುಂಡು ತುಂಡು ಆಗಿ ಕತ್ತರಿಸಬಹುದು. ಅಥವಾ ಅದಕ್ಕಿಂತ ಹೆಚ್ಚು ಬಾಧೆ ಕೊಡಬಹುದು ಪ್ರಾಣಾಪಾಯ ಆಗುವಂಥದು. ಆಗ ನೀನು ಇಷ್ಟು ದೂರ ಬಂದದ್ದು, ಮಾಡಿದ ಪ್ರಯತ್ನ ಎಲ್ಲವೂ ವ್ಯರ್ಥ ಆಗುತ್ತದೆ.

"ಮಾರುತಿ, ಈ ರಾಕ್ಷಸರು ಎಲ್ಲರನ್ನೂ ನೀನು ಕೊಲ್ಲಬಲ್ಲೆ. ನೀನು ಸಮರ್ಥ. ನೀನೇ ಈ ರಾಕ್ಷಸರು ಎಲ್ಲರನ್ನೂ ಕೊಂದುಬಿಟ್ಟರೆ ರಾಮನ ಕೀರ್ತಿಗೆ ಕುಂದು ಅಲ್ಲವೆ? ಈ ರಾಕ್ಷಸರು ಒಂದುವೇಳೆ ನೀವು ಯಾರೂ ಕಂಡು ಹಿಡಿಯಲಾರದ ರಹಸ್ಯ ಸ್ಥಳದಲ್ಲಿ ನನ್ನನ್ನು ಕೊಂಡುಹೋಗಿ ಬಚ್ಚಿಟ್ಟರೆ?

ಆಗಲೂ ನಿನ್ನ ಸಮಸ್ತ ಪ್ರಯತ್ನಗಳೂ ವ್ಯರ್ಥ ಆಗುತ್ತವೆ. ಆದ್ದರಿಂದ ನೀನು ಹಿಂದಿರುಗಿ ಹೋಗು. ಶ್ರೀರಾಮನನ್ನು ಕರೆದು ತಾ. ಅದೇ ಸರಿ. ಹನುಮಂತ, ಮಹಾತ್ಮ ರಾಮನ ಪ್ರಾಣ, ಆತನ ತಮ್ಮಂದಿರ ಪ್ರಾಣಗಳು, ಸುಗ್ರೀವನ ಪ್ರಾಣ, ಅವನ ಬಂಧುಗಳ ಪ್ರಾಣ, ಎಲ್ಲವೂ ನನ್ನ ಕ್ಷೇಮವನ್ನು ಅವಲಂಬಿಸಿವೆ. ನನಗೆ ಏನಾದರೂ ಅಪಾಯ ಸಂಭವಿಸಿದರೆ, ನನಗಾಗಿ ದುಃಖಿಸುತ್ತ ಸೊರಗಿರುವ ರಾಮಲಕ್ಷ್ಮಣರು ಬದುಕುವುದು ಇಲ್ಲ. ಸಮಸ್ತ ವಾನರವೀರರೂ ಭಲ್ಲೂಕವೀರರೂ ಪ್ರಾಣಬಿಡುತ್ತಾರೆ.

"ಹನುಮಂತ, ನಾನು ಪತಿಪರಾಯಣೆ. ರಾಮನ ಹೊರತು ಬೇರೆ ಗಂಡಸಿನ ಮೈಯನ್ನು ಸೇರುವುದಿಲ್ಲ. ರಾವಣಾಸುರ ಮುಟ್ಟಲಿಲ್ಲವೆ ಎಂದರೆ ಅವನು ನನ್ನನ್ನು ಬಲವಂತದಿಂದ ಹಿಡಿದುಕೊಂಡ. ಏನು ಮಾಡಲೂ ನನಗೆ ಶಕ್ತಿ ಇರಲಿಲ್ಲ. ನನ್ನ ಕಾಂತನೂ ನನ್ನ ಬಳಿಯಲ್ಲಿ ಇಲ್ಲ. ನನಗೋ ದಿಗಿಲು. ಮೈಮೇಲೆ ಪ್ರಜ್ಞೆಯೆ ಇರಲಿಲ್ಲ. ನಾನು ಏನು ಮಾಡುವ ಹಾಗೆ ಇದ್ದೆ ?

"ಮಾರುತಿ, ರಾಮಚಂದ್ರ ಇಲ್ಲಿಗೆ ಬರಬೇಕು. ಬಂಧುಮಿತ್ರಸಮೇತ ರಾವಣಾಸುರನನ್ನು ಕೊಲ್ಲಬೇಕು. ನನ್ನನ್ನು ಇಲ್ಲಿಂದ ಒಯ್ಯಬೇಕು. ಅದೇ ಆತನ ಗೌರವಕ್ಕೆ ಸರಿ. ಶ್ರೀರಾಮಚಂದ್ರ ಮಹಾಪರಾಕ್ರಮಶಾಲಿ. ಯುದ್ಧದಲ್ಲಿ ಶತ್ರುಗಳ ಹುಟ್ಟು ಅಡಗಿಸುತ್ತಾನೆ. ಅವನ ಪರಾಕ್ರಮವನ್ನು ನಾನು ಕೇಳಿ ಬಲ್ಲೆ. ಪ್ರತ್ಯಕ್ಷ ನೋಡಿ ಬಲ್ಲೆ. ದೇವದಾನವಗರುಡಗಂಧರ್ವನಾಗಯಕ್ಷ ರಾಕ್ಷಸರಲ್ಲಿ ಯಾರೂ ಇದಿರು ಇಲ್ಲ. ಪರಾಕ್ರಮದಲ್ಲಿ ದೇವೇಂದ್ರನಿಗೆ ಸಮ. ಚಿತ್ರವಿಚಿತ್ರ ಗತಿಯ ಬಿಲ್ಲನ್ನು ಹಿಡಿದು ಗಾಳಿಗೆ ಉರಿದೇಳುವ ಬೆಂಕಿಯಂತೆ ಕನಲಿನಿಂತರೆ ಆ ಮಹಾಪ್ರಭು ತಮ್ಮನ ಸಂಗಡ, ಯಾರು ಇದಿರಿಸಿಯಾರು ? ಕಪಿಶ್ರೇಷ್ಠ, ಲಕ್ಷ್ಮಣಸಹಿತ ಯುದ್ಧಕ್ಕೆ ನಿಂತು ಶತ್ರುಗಳನ್ನು ಕೊಲ್ಲುತ್ತ ಮದಿಸಿದ ಆನೆಯಂತೆ ತಿರುಗಾಡುತ್ತ ತನ್ನ ಸೂರ್ಯಕಿರಣಗಳಂಥ ಬಾಣಗಳನ್ನು ಬಿಡುತ್ತ ಪ್ರಳಯಸೂರ್ಯನ ಹಾಗೆ ವಿಜೃಂಭಿಸಿದರೆ ಯಾರು ಬದುಕಬಲ್ಲರು ?

"ಹನುಮಂತ, ಹೋಗು. ರಾಮಲಕ್ಷ್ಮಣರನ್ನೂ ವಾನರಸೇನೆಯನ್ನೂ ಬೇಗನೆ ಕರೆತಾ. ಬಹುಕಾಲದಿಂದ ದುಃಖದಲ್ಲಿ ಬೆಂದು ಸೊರಗಿಹೋದ ನನಗೆ ಸಂತೋಷ ನೀಡು" ಎಂದಳು.

೩೮

ಸೀತಾದೇವಿಯ ಮಾತಿನಿಂದ ಹನುಮಂತನಿಗೆ ಸಂತೋಷ ಆಯಿತು. ಆಕೆಗೆ ಹೇಳಿದ: "ದೇವಿ, ನಿನ್ನ ದೃಷ್ಟಿ ಶುಭಪ್ರದ. ನೀನು ಹೇಳಿದ ಮಾತು ನಿನ್ನ ಸ್ತ್ರೀಸ್ವಭಾವಕ್ಕೂ ಪಾತಿವ್ರತ್ಯಕ್ಕೂ ಅನುರೂಪ. ಎಷ್ಟು ವಿಶಾಲ ಆಗಿ ಉಬ್ಬಿದ್ದರೂ ನನ್ನ ಹೆಗಲು, ಅದನ್ನು ಏರಿ ಕುಳಿತು ಈ ಸಮುದ್ರದ ನೂರು ಯೋಜನಗಳನ್ನು ದಾಟಿ ಹೋಗುವುದು ಯಾವ ಹೆಂಗಸಿಗೂ ಸಾಧ್ಯ ಅಲ್ಲ. ನಿಜ. ಶ್ರೀರಾಮನನ್ನು ಬಿಟ್ಟು ಪರಪುರುಷನನ್ನು ಸೋಕಬಾರದು ಎಂದೆಯಲ್ಲ. ಆ ಮಹಾತ್ಮನ ಮಡದಿಗೆ ತಕ್ಕ ಮಾತು. ಬೇರೆ ಯಾರು ಹೀಗೆ ಹೇಳಬಲ್ಲರು ನಿನ್ನ ಹೊರತು?

"ತಾಯೆ, ರಾವಣಾಸುರನನ್ನು ನೀನು ತೃಣೀಕರಿಸಿ ಮಾತು ಆಡಿದೆ. ರಾಮನ ಅಗಲಿಕೆಯನ್ನು ಸಹಿಸಲಾರದೆ ಉರುಲು ಹಾಕಿಕೊಳ್ಳಲು ಸಿದ್ಧಳು ಆದೆ. ಪ್ರಯತ್ನ ಮಾಡಿದೆ. ಎಲ್ಲವನ್ನೂ ಚಾಚೂ ಬಿಡದೆ ರಾಮನಿಗೆ ತಿಳಿಸುತ್ತೇನೆ. ತಾಯೆ, ನನ್ನನ್ನು ಮನ್ನಿಸು. ನನಗೆ ರಾಮನಲ್ಲಿ ಅತಿಶಯ ಸ್ನೇಹ. ಹೇಗಾದರೂ ಮಾಡಿ ಆತನಿಗೆ ಸಂತೋಷ ನೀಡಬೇಕು ಎಂದು ಆತುರ. ಈ ಲಂಕಾಪಟ್ಟಣಕ್ಕೆ ಹಿಂದೆ ಯಾರೂ ಬರಲಿಲ್ಲ. ಈ ಸಮುದ್ರವನ್ನು ದಾಟಲು ಯಾರಿಗೂ ಸಾಧ್ಯ ಅಲ್ಲ. ನಾನು ದಾಟಿದೆ. ಇಲ್ಲಿಗೆ ಬಂದೆ. ನನ್ನ ಆ ಸಾಮರ್ಥ್ಯವನ್ನು ತೋರಿಸಬೇಕು ನಿನಗೆ ಎನಿಸಿತು. ಆದರಿಂದ ನಿನ್ನನ್ನು ಹೆಗಲ ಮೇಲೆ ಕೂಡಿಸಿಕೊಂಡು ಹೋಗುವ ಮಾತನ್ನು ಆಡಿದೆ. ಕ್ಷಮಿಸು. ರಾಮನಲ್ಲಿ ನನಗೆ ಇರುವ ಅಪಾರ ಭಕ್ತಿ, ಅತಿಶಯ ಸ್ನೇಹ, ನಿನ್ನನ್ನು ಆತನ ಬಳಿಗೆ ಕೂಡಲೇ ಒಯ್ಯಬೇಕು ಎಂಬ ಆತುರ, ಹೀಗೆ ಮಾತಾಡಿಸಿತು.

"ದೇವಿ, ನೀನು ಅನಿಂದಿತೆ. ನನ್ನ ಸಂಗಡ ಬರಲು ಒಪ್ಪಲಿಲ್ಲ. ಚಿಂತೆ ಇಲ್ಲ. ಶ್ರೀರಾಮಚಂದ್ರನಿಗೆ ನನ್ನಲ್ಲಿ ನಂಬಿಕೆ ಹುಟ್ಟುವಂತೆ ಒಂದು ಗುರುತನ್ನು ಕೊಡು, ತಾಯೆ" ಎಂದು ಕೇಳಿದ.

ದೇವಕನ್ನಿಕೆಗೆ ಸಮಾನ ಆದ ಆ ಜಾನಕಿಯ ಕಣ್ಣಿನಿಂದ ಪಳಪಳ ನೀರು ಸುರಿಯಿತು. ಕಂಠ ಗದ್ಗದ ಆಯಿತು. ಮೆಲ್ಲನೆ ಹೇಳಿದಳು: "ಮಾರುತಿ, ಒಳ್ಳೆಯ ಗುರುತು ಒಂದನ್ನು ಹೇಳುತ್ತೇನೆ. ಇದನ್ನು ಹೇಳು. ಚಿತ್ರಕೂಟ

ಪರ್ವತದ ಈಶಾನ್ಯದಲ್ಲಿ ಮಂದಾಕಿನೀತೀರದಲ್ಲಿ ಕಂದಮೂಲಫಲಗಳು ಸಮೃದ್ಧ ಆದ ಸಿದ್ಧಾಶ್ರಮದ ಋಷ್ಯಾಶ್ರಮದಲ್ಲಿ ನಾವು ಇದ್ದೆವು. ಅಲ್ಲಿ ವಿವಿಧ ಸುಗಂಧ ಕುಸುಮಭರಿತ ಆಶ್ರಮೋಪವನಗಳಲ್ಲಿ ನಾವು ವಿಹರಿಸುತ್ತಿದ್ದೆವು. ನೀರಿನಲ್ಲಿ ಆಡಿದೆವು. ಕಡೆಗೆ ಬಳಲಿದ ಶ್ರೀರಾಮ ನನ್ನ ತೊಡೆಯ ಮೇಲೆ ತಲೆ ಇಟ್ಟು ಕೊಂಡು ಮಲಗಿ ನಿದ್ದೆಹೋದ. ಆಗ ಒಂದು ಕಾಗೆ ಬಂದು ನನ್ನ ಎದೆಯನ್ನು ಕುಕ್ಕಿತು. ನಾನು ಒಂದು ಮಣ್ಣು ಹೆಂಟೆಯನ್ನು ಎಸೆದೆ. ಕಾಗೆಯನ್ನು ಹೆದರಿಸಿ ಓಡಿಸಲು ಯತ್ನಿಸಿದೆ. ಏನು ಮಾಡಿದರೂ ಆ ಕಾಗೆ ಹೋಗಲಿಲ್ಲ. ಹೆದರಿಸಿದಾಗ ಅಡಗಿಕೊಳ್ಳುವುದು, ಮತ್ತೆ ಬರುವುದು, ಮತ್ತೆ ನನ್ನ ಎದೆಯನ್ನು ಕುಕ್ಕುವುದು—ಹೀಗೆ ಮಾಡಿತು. ಕಾಗೆಯನ್ನು ಓಡಿಸಲು ನನ್ನ ಒಡ್ಯಾಣವನ್ನು ಸಡಿಲಮಾಡಿಕೊಂಡು ಸಿದ್ಧ ಆಗೋಣ ಎಂದಾಗ ನನ್ನ ಸೀರೆ ಜಾರಿತು. ನನಗೆ ಆ ಕಾಗೆಯ ಮೇಲೆ ಬಹಳ ಕೋಪ ಬಂತು. ಆಗ ನನ್ನ ಪತಿ ಎದ್ದು ನನ್ನನ್ನು ನೋಡಿ ಗೇಲಿ ಮಾಡಿದ. ನಾನು ಎಷ್ಟು ಪ್ರಯತ್ನಿಸಿದರೂ ಆ ಕಾಗೆಯನ್ನು ಅಟ್ಟಲು ಆಗಲಿಲ್ಲ. ರಾಮಚಂದ್ರ ನನ್ನನ್ನು ಹಾಸ್ಯಮಾಡಿದ. ನನಗೋ ಪೂರಾ ಸಿಟ್ಟು ಒಂದು ಕಡೆ, ನಾಚಿಕೆ ಒಂದು ಕಡೆ. ಅತ್ತುಬಿಟ್ಟೆ.

"ಕಾಗೆಯನ್ನು ಓಡಿಸಲು ಯತ್ನಿಸಿ ಬಹಳ ದಣಿವು ಆಗಿತ್ತು. ರಾಮನ ಮಡಿಲಲ್ಲಿ ತಲೆ ಇಟ್ಟುಕೊಂಡು ಮಲಗಿದೆ. ಬಹಳ ಹೊತ್ತು ನಿದ್ದೆ ಮಾಡಿ ಎದ್ದಮೇಲೆ ಮತ್ತೆ ನನ್ನ ಪ್ರಭು ನನ್ನ ತೊಡೆಯ ಮೇಲೆ ತಲೆ ಇಟ್ಟು ಮಲಗಿದ. ಮತ್ತೆ ಬಂತು ಕಾಗೆ. ಮತ್ತೆ ನನ್ನ ಎದೆಯನ್ನು ಕುಕ್ಕಿತು. ಕೊಕ್ಕಿನಿಂದ ಕುಕ್ಕಿ ಉಗುರಿನಿಂದ ಪರಚಿತು. ನನಗೆ ಗಾಯ ಆಗಿ ನೆತ್ತರು ಬಂತು. ಹಾಯಿ ಆಗಿ ತೊಡೆಯ ಮೇಲೆ ನಿದ್ರಿಸುತ್ತ ಇದ್ದ ನಲ್ಲನ ಮೇಲೆ ಆ ಬಿಸಿ ನೆತ್ತರು ಹನಿ ಬಿತ್ತು. ಆತನನ್ನು ಎಚ್ಚರಿಸಬಾರದು ಎಂದು ನಾನು ಹಾಗೇ ಕುಳಿತಿದ್ದೆ. ಆತ ಧಿಗ್ಗನೆ ಎದ್ದ. ನನ್ನ ಎದೆಯ ಗಾಯವನ್ನು ನೋಡಿದ. ಕನಲಿದ. ಕಾಳಸರ್ಪ ಬುಸುಗುಟ್ಟುವಂತೆ ನಿಟ್ಟುಸಿರು ಬಿಟ್ಟ. "ದೇವಿ, ನಿನ್ನ ಎದೆಯಲ್ಲಿ ಗಾಯಮಾಡಿದವನು ಯಾರು? ಕನಲಿದ ಐದು ಹೆಡೆಯ ಕಾಳಸರ್ಪದ ಸಂಗಡ ಯಾರದು ಈ ಸರಸ?" ಎಂದು ಕೇಳಿ ಸುತ್ತಲೂ ನೋಡಿದ. ಚೂಪು ಉಗುರಿನ ಕಾಗೆ ಒಂದು ನನ್ನ ಇದಿರಿಗೆ ಕುಳಿತಿತ್ತು. ಅದರ ಉಗುರು ರಕ್ತದಿಂದ ತೊಯ್ದು ಇತ್ತು.

"ಆ ಮಹಾಬಾಹು ರಾಮ ಆ ಕಾಗೆಯನ್ನು ದುರದುರ ನೋಡಿದ. ಆತನ ಕಣ್ಣಾಲಿಗಳು ಗಿರ್ರೆಂದು ತಿರುಗುತ್ತ ಇದ್ದವು. ಅದನ್ನು ಕೊಲ್ಲಬೇಕು ಎಂದು ಸಂಕಲ್ಪಿಸಿದ. ತಾನು ಕೂತು ಇದ್ದ ದರ್ಭಾಸನದಿಂದ ಒಂದು ದರ್ಭೆಯನ್ನು ಸೆಳೆದುಕೊಂಡ. ಅದನ್ನು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿದ. ಆ ದರ್ಭೆ ಮಂತ್ರದ ಪ್ರಭಾವದಿಂದ ಪ್ರಳಯಾಗ್ನಿಯಂತೆ ಉರಿಯುತ್ತ ಕಾಗೆಗೆ ಇದಿರು ಆಗಿ ಹೋಯಿತು. ಬ್ರಹ್ಮಾಸ್ತ್ರ ಬೆನ್ನಟ್ಟಬರುವುದನ್ನು ನೋಡಿ ಆ ಕಾಗೆ ಆಕಾಶಕ್ಕೆ ಹಾರಿತು. ದರ್ಭೆಯೂ ಮೇಲಕ್ಕೆ ಹಾರಿ ಬೆನ್ನಟ್ಟಿತು. ಕಾಗೆ ನಿಂತಲ್ಲಿ ನಿಲ್ಲದೆ ಚಿತ್ರವಿಚಿತ್ರ ಆಗಿ ಓಡಿತು. ಎಲ್ಲಿ ಹೋದರೂ ದರ್ಭೆ ಬಿಡಲಿಲ್ಲ. ಅದರ ಹಿಂದೆಯೇ. ತನ್ನನ್ನು ಕಾಪಾಡುವವರನ್ನು ಹುಡುಕಿಕೊಂಡು ಆ ಕಾಗೆ ಲೋಕ ಎಲ್ಲವನ್ನೂ ಸುತ್ತಿತು. ಯಾರೂ ಅದರ ರಕ್ಷಣೆಗೆ ಬರಲಿಲ್ಲ.

"ಅದು ಸಾಧಾರಣ ಕಾಗೆ ಅಲ್ಲ. ದೇವೇಂದ್ರನ ಮಗನೇ ಹಕ್ಕಿಯ ರೂಪದಿಂದ ವಿನೋದಾರ್ಥ ಭೂಮಿಗೆ ಬಂದಿದ್ದ ಎಂದರು. ವಾಯುವೇಗ ಅದರದು. ಅದನ್ನು ದೇವತೆಗಳು ಮಹರ್ಷಿಗಳು ಯಾರೂ ಕಾಪಾಡಲಾರದೆ ಹೋದರು. ತಂದೆ ದೇವೇಂದ್ರ ಕೂಡ ಕೈಬಿಟ್ಟ. ಮೂರು ಲೋಕಗಳಲ್ಲೂ ಯಾರೂ ಸಿಗಲಿಲ್ಲ ಕಾಪಾಡುವವರು. ಆಗ ಬೇರೆ ದಾರಿ ಇಲ್ಲದೆ ಮತ್ತೆ ರಾಮನ ಬಳಿಗೇ ಬಂತು ಕಾಗೆ. ರಾಮನನ್ನು ಮರೆಹೊಕ್ಕು ಕ್ಷಮೆ ಬೇಡಿತು. ಕೊಲ್ಲಬೇಕಾದ ಅಪರಾಧ ಅದರದು. ಆದರೆ ಎಲ್ಲೂ ರಕ್ಷಣೆ ಇಲ್ಲದೆ ತನ್ನ ಬಳಿಗೇ ಶರಣುಬಂತಲ್ಲ ಅದು. ಆ ಸರ್ವಲೋಕಶರಣ್ಯನಿಗೆ ದಯೆ ಬಂತು. 'ಕಾಕಾಸುರ, ಇದು ಬ್ರಹ್ಮಾಸ್ತ್ರ. ನಿರರ್ಥಕ ಆಗುವಂತೆ ಇಲ್ಲ. ಇದೂ ನಿರರ್ಥಕ ಆಗದಂತೆ ನೀನೂ ಸಾಯದಂತೆ ಏನು ಮಾಡಬೇಕೋ ನೀನೇ ಹೇಳು' ಎಂದ. 'ಪ್ರಭು, ಬ್ರಹ್ಮಾಸ್ತ್ರಕ್ಕೆ ನನ್ನ ಬಲಗಣ್ಣು ಆಹುತಿ ಆಗಲಿ' ಎಂದ ಕಾಕಾಸುರ. ಅವನ ಬಲಗಣ್ಣನ್ನು ಸುಟ್ಟುಹಾಕಿತು ಆ ಬ್ರಹ್ಮಾಸ್ತ್ರ. ಆ ಕಾಗೆ ತನ್ನ ಪ್ರಾಣ ಉಳಿಸಿಕೊಂಡು ರಾಮನಿಗೂ ಆತನ ತಂದೆ ದಶರಥರಾಯನಿಗೂ ನಮಸ್ಕಾರ ಮಾಡಿ ಹೊರಟುಹೋಯಿತು."

ರಾಮನಿಗೆ ಹೇಳುವಂತೆ ಮಾರುತಿಗೆ ಹೇಳಿದಳು ಸೀತೆ: "'ಪ್ರಭು, ಕಾಗೆಯಂಥ ಕ್ಷುದ್ರಪ್ರಾಣಿಯ ಮೇಲೆ ನನಗಾಗಿ ಬ್ರಹ್ಮಾಸ್ತ್ರ ಬಿಟ್ಟಿರಿ. ನಿಮ್ಮ ಬಳಿಯಿಂದ ನನ್ನನ್ನು ಕದ್ದುತಂದ ದುಷ್ಟರಾವಣನನ್ನು ಕ್ಷಮಿಸಿದೀರಲ್ಲ. ಏಕೆ?

ಪುರುಷೋತ್ತಮ, ನೀವು ದಯಾನಿಧಿ. ನನ್ನಲ್ಲಿ ದಯೆ ತೋರಿ. ನೀವು ನನಗೆ ನಾಥ. ಆದರೂ ಈಗ ನಾನು ಅನಾಥೆ. ದಯೆಯೇ ಪರಮಧರ್ಮ ಎಂದು ನಿಮ್ಮ ಬಾಯಿಂದಲೇ ಕೇಳಿದೇನೆ. ಈಗ ನನಗೇ ದಯೆ ತೋರುತ್ತ ಇಲ್ಲವಲ್ಲ. ಪ್ರಭು, ನೀವು ಮಹಾವೀರ್ಯವಂತರು, ಮಹೋತ್ಸಾಹಿ, ಮಹಾಬಲರು. ನಿಮ್ಮ ಇದಿರಿಗೆ ನಿಲ್ಲಬಲ್ಲವರು ಜಗತ್ತಿನಲ್ಲೇ ಇಲ್ಲ. ಅನಂತಕಲ್ಯಾಣಗುಣಸಂಪನ್ನರು. ಎಂಥ ದುರ್ಭರ ಕಷ್ಟದಲ್ಲೂ ನಿಮ್ಮ ಮನಸ್ಸು ಚಲಿಸದು. ಸಮುದ್ರದ ಹಾಗೆ ಗಂಭೀರ ನೀವು. ಸಮುದ್ರಮೇಖಲೆ ಆದ ಭೂಮಂಡಲಕ್ಕೇ ಒಡೆಯರು ನೀವು. ಪರಾಕ್ರಮದಲ್ಲಿ ದೇವೇಂದ್ರನಿಗೆ ಸಾಟಿ. ಆದರೂ ನನ್ನ ಮೇಲೆ ಏಕೆ ದಯೆ ಇಲ್ಲ ? '

" ಮಾರುತಿ, ನಾನು ಹೇಳಿದೆ ಎಂದು ರಾಮನಿಗೆ ತಿಳಿಸು. ಅಸ್ತ್ರವಿದ್ಯಾವಿದರಲ್ಲಿ ಶ್ರೇಷ್ಠ ರಾಮ. ಸತ್ಯಸಂಧ. ಬಲಾಢ್ಯ. ಆದರೂ ಈ ರಾಕ್ಷಸರ ಮೇಲೆ ಏಕೆ ಬಾಣ ಬಿಡಲಿಲ್ಲವೋ ? ಯುದ್ಧಕ್ಕೆ ನಿಂತರೆ ದೇವದಾನವನಾಗ ಗಂಧರ್ವರು ಯಾರೂ ರಾಮಚಂದ್ರನಿಗೆ ಸಾಟಿ ಅಲ್ಲ. ನನ್ನನ್ನು ಕರೆಯಿಸಿ ಕೊಳ್ಳುವ ಆತುರ ಇಲ್ಲವೆ ಆ ಮಹಾವೀರನಿಗೆ? ಇದ್ದರೆ ಆತನ ತೀಕ್ಷ್ಣ ಆದ ಬಾಣಗಳು ರಾಕ್ಷಸರನ್ನು ಎಲ್ಲರನ್ನೂ ನಾಶಮಾಡುತ್ತ ಇರಲಿಲ್ಲವೆ? ನನ್ನನ್ನು ಆತ ಕರೆದು ಒಯ್ಯುತ್ತ ಇರಲಿಲ್ಲವೆ? ಲಕ್ಷ್ಮಣ ಮಹಾಬಲವಂತ, ಪರಂತಪ. ಅವನು ಆದರೂ ಅಣ್ಣನ ಅಪ್ಪಣೆ ಪಡೆದು ಬಂದು ಏಕೆ ನನ್ನನ್ನು ಕಾಪಾಡಲು ಒಲ್ಲ? ಏಕೆ? ವಾಯು ಅಗ್ನಿಗೆ ಸಮ ಆ ಅಣ್ಣತಮ್ಮಂದಿರು. ಮಹಾ ತೇಜಸ್ವಿಗಳು. ದೇವತೆಗಳಿಗೂ ದುರ್ಜಯರು. ಇಬ್ಬರೂ ಇದ್ದೂ ನನ್ನನ್ನು ಕಾಪಾಡದೆ ಉಪೇಕ್ಷಿಸುತ್ತ ಇದಾರೆ ಏಕೆ? ನನ್ನ ಪಾಪ ಬಹಳ ದೊಡ್ಡದು. ಇಲ್ಲದೆ ಇದ್ದರೆ ಆ ಸರ್ವಸಮರ್ಥರು ಏಕೆ ಹೀಗೆ ಉಪೇಕ್ಷೆಮಾಡುತ್ತ ಇದ್ದರು ? " ಮಾತಿನಲ್ಲಿ ದೈನ್ಯ. ಕಣ್ಣಿನಲ್ಲಿ ನೀರು.

ಹನುಮಂತ ಆಕೆಗೆ ಹೇಳಿದ. " ತಾಯೆ, ಸತ್ಯ ಹೇಳುತ್ತೇನೆ. ಪ್ರಮಾಣ ಮಾಡಿ ಹೇಳುತ್ತೇನೆ. ನಿನ್ನ ದುಃಖದಲ್ಲಿ ಮುಳುಗಿ ಎಲ್ಲಕ್ಕೂ ವಿಮುಖ. ಅಣ್ಣ ದುಃಖಿಸಿದರೆ ಲಕ್ಷ್ಮಣನಿಗೂ ದುಃಖ. ದೇವಿ, ನಾನು ಬಹಳ ಪ್ರಯಾಸಪಟ್ಟು ನಿನ್ನನ್ನು ಕಂಡೆ. ಇದು ದುಃಖದ ಸಮಯ ಅಲ್ಲ. ಸಂತೋಷದ ಸಮಯ. ಇನ್ನು ಸ್ವಲ್ಪವೇ ಕಾಲ. ನಿನ್ನ ದುಃಖ ಎಲ್ಲವೂ ದೂರ ಆಗುತ್ತದೆ. ಪುರುಷ

ಸಿಂಹರು ರಾಮಲಕ್ಷ್ಮಣರು ಇಬ್ಬರಿಗೂ ನಿನ್ನನ್ನು ನೋಡಲು ಆತುರ. ಖಂಡಿತ ಬೇಗನೆ ಬರುತ್ತಾರೆ. ಲಂಕಾಪಟ್ಟಣವನ್ನು ಸುಟ್ಟು ಬೂದಿ ಮಾಡುತ್ತಾರೆ. ವಿಶಾಲನಯನೆ, ಯುದ್ಧದಲ್ಲಿ ಶ್ರೀರಾಮಚಂದ್ರ ರಾವಣನನ್ನು ಕೊಲ್ಲುತ್ತಾನೆ. ಬಂಧುಬಳಗ ಸಮೇತ. ನಿನ್ನನ್ನು ಅಯೋಧ್ಯೆಗೆ ಒಯ್ಯುತ್ತಾನೆ. ಹೇಳು ತಾಯೆ, ಶ್ರೀರಾಮನಿಗೂ ಮಹಾಬಲವಂತ ಆದ ಲಕ್ಷ್ಮಣನಿಗೂ ಮಹಾಪರಾಕ್ರಮಶಾಲಿ ಸುಗ್ರೀವನಿಗೂ ಏನು ಹೇಳಲಿ ? ”

ದುಃಖದಿಂದ ಪರಿತಪಿಸುತ್ತ ಸೀತಾದೇವಿ ಹನುಮಂತನಿಗೆ ಹೇಳಿದಳು : “ ಆಂಜನೇಯ, ನನ್ನ ಸಾಷ್ಟಾಂಗ ನಮಸ್ಕಾರವನ್ನು ತಿಳಿಸು ಆ ಲೋಕನಾಥ ನಿಗೆ ಕೌಸಲ್ಯಾಪುತ್ರನಿಗೆ. ಕುಶಲವನ್ನು ಕೇಳಿದೆ ಎಂದು ಹೇಳು. ಹನುಮಂತ, ಏನು ಹೇಳಲಿ ಲಕ್ಷ್ಮಣನಿಗೆ ! ಸುಮಿತ್ರಾದೇವಿಯ ಆ ಸುಪುತ್ರ ಸಮಸ್ತಭೋಗ ಗಳನ್ನೂ ಬಿಟ್ಟು ಬಂದ. ಎಲ್ಲ ರತ್ನಾಭರಣಗಳನ್ನೂ ದಾಸದಾಸೀಜನರನ್ನೂ ದುರ್ಲಭ ಆದ ಅಪಾರ ಐಶ್ವರ್ಯವನ್ನೂ ತೊರೆದು ಬಂದ. ಎಲ್ಲವನ್ನೂ ತಂದೆ ತಾಯಿಗೆ ಬಿಟ್ಟು ಅಣ್ಣನ ಸಂಗಡ ಅರಣ್ಯಕ್ಕೆ ಬಂದ. ಲಕ್ಷ್ಮಣ ಧರ್ಮಾತ್ಮ. ಅಣ್ಣನಲ್ಲಿ ಅಪರಿಮಿತ ಭಕ್ತಿ. ಸಮಸ್ತ ಸೌಖ್ಯಗಳನ್ನೂ ತೊರೆದು ಬಂದು ಕಾಡಿನಲ್ಲಿ ಅಣ್ಣನ ಸೇವೆಮಾಡುತ್ತ ಇದಾನೆ. ಅಣ್ಣನಿಗೆ ಬೆಂಬಲ. ಅಣ್ಣನನ್ನು ಹಿಂಬಾಲಿಸುತ್ತ ಇದಾನೆ. ಲಕ್ಷ್ಮಣ ಸಹೃದಯ, ಪ್ರಿಯದರ್ಶನ. ಮಹಾ ಬಾಹು. ಸಿಂಹಸ್ಕಂಧ. ನನ್ನನ್ನು ತಾಯಿಯ ಹಾಗೆ ಭಾವಿಸಿದಾನೆ. ದುರುಳ ರಾವಣ ನನ್ನನ್ನು ಕದ್ದತಂದದ್ದು ಅವನಿಗೆ ತಿಳಿಯದು. ಅದರ ಜಾಡು ಸ್ವಲ್ಪ ಆದರೂ ಸಿಕ್ಕಿದ್ದರೆ ಅವನಿಗೆ ನನಗೆ ಈ ದುರವಸ್ಥೆಯೆ ? ಮಹಾಕಾಂತಿಮಂತ, ಮಹಾಸಮರ್ಥ. ಮಿತಭಾಷಿ. ಮಾನವರ ಹಾಗೆ. ಹಿರಿಯರ ಸೇವೆ ಅವನ ಹುಟ್ಟುಗುಣ. ನನ್ನಲ್ಲಿ ಅವನಿಗೆ ಬಹಳ ವಿಶ್ವಾಸ. ಅಣ್ಣ ಏನೇ ಭಾರ ಹೊರಿಸಲು ಹೊರುವವನು. ಲಕ್ಷ್ಮಣ ಜೊತೆಯಲ್ಲಿ ಇದಾನೆ ಎಂದು ಶ್ರೀರಾಮ ನಿಗೆ ದಶರಥರಾಯನ ನೆನಪು ಆಗುತ್ತ ಇಲ್ಲ. ಲಕ್ಷ್ಮಣನ ಕ್ಷೇಮವನ್ನು ನಾನು ಕೇಳಿದೆ ಎಂದು ಹೇಳು. ಅವನು ಬಹಳ ನಿಷ್ಕಪಟಿ. ಮಹಾದಕ್ಷ. ಶ್ರೀರಾಮ ನಿಗೆ ಬಹಳ ಪ್ರೀತಿಪಾತ್ರ.

“ ವಾನರೋತ್ತಮ, ರಾಮಚಂದ್ರ ನನ್ನ ದುಃಖವನ್ನು ಕೊನೆಗಾಣಿಸು ವಂತೆ ಮಾಡುವ ಭಾರ ನಿನ್ನದು. ನನ್ನನ್ನು ಕರೆದು ಒಯ್ಯುವ ಪ್ರಯತ್ನ ಆ

ಮಹಾನುಭಾವನಿಂದ ಆಗಬೇಕು ಎಂದರೆ ನಿನ್ನ ಮೂಲಕವೇ. ನಾನು ಹೇಳುವ ಮಾತನ್ನು ಪ್ರಭುವಿಗೆ ಪದೇ ಪದೇ ಹೇಳು. 'ನಾನು ಬದುಕಿ ಇರುವುದು ಇನ್ನು ಒಂದೇ ತಿಂಗಳು ಮಾತ್ರ. ತಿಂಗಳು ಕಳೆಯಿತೋ ನಾನು ಬದುಕಲಾರೆ. ಇದು ಶಪಥ. ದೇವೇಂದ್ರನ ರಾಜ್ಯಲಕ್ಷ್ಮಿಯನ್ನು ಹಿಂದೆ ಪಾತಾಳಲೋಕದಿಂದ ತರಲಿಲ್ಲವೆ ಮಹಾವಿಷ್ಣು? ಹಾಗೇ ಪಾಪಕರ್ಮಿ ರಾವಣ ಕದ್ದು ತಂದ ನನ್ನನ್ನು ಬಿಡಿಸಬೇಕು.' "

ಸೆರಗಿನಲ್ಲಿ ಗಂಟುಹಾಕಿ ಇಟ್ಟುಕೊಂಡಿದ್ದಳು ಸೀತೆ ತನ್ನ ಚೂಡಾಮಣಿಯನ್ನು. ದಿವ್ಯ ಆಭರಣ. ಅದನ್ನು ತೆಗೆದು ಹನುಮಂತನ ಕೈಗೆ ಕೊಟ್ಟಳು. ಶ್ರೀರಾಮನಿಗೆ ಅದನ್ನು ಕೊಡಲು ಹೇಳಿದಳು. ಹನುಮಂತ ಅದನ್ನು ಇಸುಕೊಂಡ. ಅದರ ತೂಬಿನಲ್ಲಿ ಬೆರಳನ್ನು ತೂರಿಸಿ ಬೆರಳಿಗೆ ಇಟ್ಟುಕೊಂಡ. ಆಕೆಗೆ ಪ್ರದಕ್ಷಿಣೆನಮಸ್ಕಾರಮಾಡಿ ಪಕ್ಕಕ್ಕೆ ಸರಿದು ನಿಂತ. ಆಕೆಯ ದರ್ಶನದಿಂದ ಅವನಿಗೆ ಪರಮಾನಂದ. ದೇಹ ಅಲ್ಲಿ ಇದ್ದರೂ ಅವನ ಮನಸ್ಸು ಎಲ್ಲಾ ರಾಮನ ಹತ್ತಿರ ಇತ್ತು. ಸೀತಾದೇವಿಯ ಆ ಶಿರೋಭೂಷಣವನ್ನು ತೆಗೆದುಕೊಂಡು ಹನುಮಂತನಿಗೆ ಅಪಾರ ಸಂತೋಷ ಆಗ. ಬಿರುಗಾಳಿಯ ಹೊಡೆತಕ್ಕೆ ಅಲುಗಾಡಿ ಗಾಳಿ ನಿಂತಮೇಲೆ ಸ್ವಸ್ಥ ಆದ ಬೆಟ್ಟದ ಹಾಗೆ ನೆಮ್ಮದಿ ಆಯಿತು.

ರಾಮನ ಬಳಿಗೆ ಹಿಂದಿರುಗಿ ಹೊರಟ.

೩೯

ಚೂಡಾಮಣಿಯನ್ನು ಕೊಟ್ಟಳಲ್ಲ ಸೀತೆ. ಆಗ ಹೇಳಿದಳು: "ವಾನರ ಪುಂಗವ, ಇದನ್ನು ಕೊಡು. ಈ ಗುರುತು ಶ್ರೀರಾಮನಿಗೆ ಚೆನ್ನಾಗಿ ತಿಳಿದದ್ದು. ಇದನ್ನು ನೋಡಿದ ಕೂಡಲೇ ನಮ್ಮ ತಾಯಿಯೂ ನಮ್ಮ ಮಾವನವರೂ ರಾಘವನಿಗೆ ನೆನಪಿಗೆ ಬರುತ್ತಾರೆ. ನನ್ನ ನೆನಪೂ ಆಗುತ್ತದೆ. ಈ ಚೂಡಾಮಣಿ ಮದುವೆ ಆಗಿ ನಾನು ಅತ್ತೆಯ ಮನೆಗೆ ಬರುವಾಗ ನಮ್ಮ ತಾಯಿ ಕೊಟ್ಟದ್ದು.

"ಹನುಮಂತ, ಮತ್ತೆ ಹೇಳುತ್ತೇನೆ ನಿನಗೆ. ಮತ್ತೆ ಮತ್ತೆ. ರಾಮನನ್ನು ಪ್ರೋತ್ಸಾಹಿಸಿ ಇಲ್ಲಿಗೆ ಕರೆತರುವುದು ನಿನಗೆ ಸೇರಿದ ಕೆಲಸ. ಈ ಕೆಲಸದಲ್ಲಿ

ಮುಂದೆ ಏನು ಹೆಜ್ಜೆ ಹಾಕಬೇಕೋ ನೀನೇ ಆಲೋಚಿಸಬೇಕು. ಈ ಕೆಲಸದ ಭಾರ ಎಲ್ಲವೂ ನಿನ್ನ ಮೇಲೆಯೇ. ನನ್ನ ದುಃಖವನ್ನು ಕೊನೆಗಾಣಿಸಬೇಕು ನೀನು. ನೀನು ಧೀಮಂತ. ನೀನು ಆಲೋಚಿಸಿ ತಕ್ಕ ಪ್ರಯತ್ನ ಮಾಡಿದರೆ ನನ್ನ ಕಷ್ಟ ಎಲ್ಲವೂ ಕೊನೆಗಾಣುತ್ತದೆ."

"ಹಾಗೆಯೇ ಆಗಲಿ, ತಾಯಿ." ಭಯಂಕರ ಪರಾಕ್ರಮದ ಹನುಮಂತ ಶಪಥ ಮಾಡಿದ. ಸಾಷ್ಟಾಂಗನಮಸ್ಕಾರಮಾಡಿ ಹೊರಡತೊಡಗಿದ. ಕಂಬನಿ ಗರೆಯುತ್ತ ಅವನನ್ನು ನೋಡಿದಳು ಸೀತೆ. ಗದ್ಗದಕಂಠದಿಂದ ಹೇಳಿದಳು: "ಹನುಮಂತ, ರಾಮಲಕ್ಷ್ಮಣರಿಗೂ ಸುಗ್ರೀವನಿಗೂ ಅವನ ಮಂತ್ರಿಗಳಿಗೂ ವಾನರವೃದ್ಧರಿಗೂ ವಾನರಮುಖ್ಯರೆಲ್ಲರಿಗೂ ಅವರ ಕ್ಷೇಮವನ್ನು ನಾನು ವಿಚಾರಿಸಿದೆ ಎಂದು ಹೇಳು. ಶ್ರೀರಾಮಚಂದ್ರ ನನ್ನನ್ನು ಈ ದುಃಖಸಮುದ್ರ ದಿಂದ ಪಾರುಮಾಡುವ ಹಾಗೆ ಮಾಡಬೇಕು ನೀನು. ನಾನು ಬದುಕಿ ಇರುವುದರ ಒಳಗಾಗಿ ನನ್ನ ಪ್ರಭು ಬಂದು ನನ್ನನ್ನು ನೋಡುವಂತೆ ಮಾಡುವ ಹೊಣೆ ನಿನ್ನದು. ನೀನು ಹುರುಪುಕೊಟ್ಟರೆ ಆತನ ಪೌರುಷ ವಿಜೃಂಭಿಸುತ್ತದೆ. ಬಂದು ನನ್ನನ್ನು ಕರೆದು ಒಯ್ಯುವಂತೆ ಮಾಡು. ಹೇಗೆ ಒತ್ತಿ ಹೇಳಿದರೆ ಆ ಕೆಲಸ ಆಗುತ್ತದೆಯೋ ಹಾಗೆ ಮಾಡು."

ಹನುಮಂತ ತಲೆಬಾಗಿದ. ಕೈಜೋಡಿಸಿದ. "ದೇವಿ, ನಾನು ಸಂಗತಿ ತಿಳಿಸಿದ ಕೂಡಲೇ ವಾನರಭಲ್ಲೂಕಸೇನೆಯ ಸಮೇತ ಇಲ್ಲಿಗೆ ಬರುತ್ತಾನೆ ರಾಮ. ಶತ್ರುಗಳನ್ನು ಎಲ್ಲರನ್ನೂ ಧ್ವಂಸಮಾಡುತ್ತಾನೆ. ನಿನ್ನ ದುಃಖವನ್ನು ಕಳೆಯುತ್ತಾನೆ. ರಾಮಬಾಣವನ್ನು ಇದಿರಿಸಬಲ್ಲ ದೇವತೆಗಳೂ ಇಲ್ಲ, ಮನುಷ್ಯರೂ ಇಲ್ಲ, ರಾಕ್ಷಸರೂ ಇಲ್ಲ. ಯುದ್ಧಕ್ಕೆ ನಿಂತರೆ ರಾಮ, ಸೂರ್ಯ ಇಂದ್ರ ಯಮ ಯಾರೂ ಗೆಲ್ಲಲಾರರು. ನಿನಗಾಗಿ ಯುದ್ಧಕ್ಕೆ ನಿಂತಮೇಲೆ ಹೇಳುವ ಕಾರಣವೇ ಇಲ್ಲ. ಚತುಸ್ಸಮುದ್ರಪರ್ಯಂತ ಭೂಮಿಯನ್ನು ಎಲ್ಲಾ ಗೆದ್ದು ನಿನ್ನನ್ನು ಒಯ್ಯುತ್ತಾನೆ" ಎಂದ.

ಹನುಮಂತನ ಮಾತು ಸತ್ಯ, ಸವಿ. ಯುಕ್ತಿಯುಕ್ತ. ರಾಮನಲ್ಲಿ ಅಸಾಧಾರಣ ಪ್ರೀತಿ ಕಾಣುತ್ತದೆ ಅದರಲ್ಲಿ. ಸೀತೆ ಮೆಚ್ಚಿಕೊಂಡಳು. ಪದೇ ಪದೇ ಅವನನ್ನು ನೋಡುತ್ತ ಹೇಳಿದಳು. "ಹನುಮಂತ, ನೀನು ಅರಿಂದಮ. ನಿನಗೆ ಇಷ್ಟ ಆದರೆ ಇಲ್ಲಿ ಯಾವುದೋ ಒಂದು ಕಡೆ ಗುಟ್ಟು ಆಗಿ ಒಂದು ದಿನ ಇದ್ದು

ದಣಿವು ಆರಿಸಿಕೊಳ್ಳಬಹುದು. ಮಾರನೆ ದಿನ ಹೊರಡಬಹುದು. ನೀನು ಹತ್ತಿರ ಇದ್ದರೆ, ಮಾರುತಿ, ಒಂದು ಗಳಿಗೆ ನನ್ನ ದುಃಖವನ್ನು ಮರೆತೇನು. ನೀನು ಇಲ್ಲಿಂದ ಹೊರಟುಹೋದಮೇಲೆ ನನ್ನ ದುಃಖ ಹೆಚ್ಚುತ್ತದೆ. ನೀನು ಮತ್ತೆ ಬರುವವರೆಗೆ ಬದುಕಿರುತ್ತೇನೋ ಇಲ್ಲವೋ. ಆದ್ದರಿಂದ ಬೇಗ ಹಿಂದಕ್ಕೆ ಬಾ.

"ನನಗೆ ಒಂದು ದೊಡ್ಡ ಸಂದೇಹ. ಈ ಮಹಾಸಾಗರವನ್ನು ಹೇಗೆ ದಾಟುತ್ತೀರಿ ನೀವು? ವಾನರಭಲ್ಲೂಕಸೇನೆಗಳೇ ಆಗಲಿ ರಾಮಲಕ್ಷ್ಮಣರೇ ಆಗಲಿ ಹೇಗೆ ದಾಟುತ್ತಾರೆ? ಈ ಸಮುದ್ರವನ್ನು ದಾಟಬಲ್ಲವರು ಮೂವರೇ: ವಾಯುದೇವ, ಗರುತ್ಮಂತ, ನೀನು. ಬೇರೆ ಯಾರಿಗೂ ಸಾಧ್ಯ ಅಲ್ಲ. ಇದನ್ನು ಹೇಗೆ ಸಾಧಿಸುತ್ತೀಯೆ ಹೇಳು. ಕಾರ್ಯಜ್ಞರಲ್ಲಿ ನೀನು ಶ್ರೇಷ್ಠ. ಹೇಳು, ಏನು ಉಪಾಯ? ನೀನು ಒಬ್ಬನೇ ಈ ಕೆಲಸ ಮಾಡಬಲ್ಲೆ. ರಾವಣಾದಿಗಳನ್ನು ಕೊಂದು ನನ್ನನ್ನು ರಾಮನ ಬಳಿಗೆ ಒಯ್ಯಬಲ್ಲೆ. ನಿನಗೆ ಆ ಸಾಮರ್ಥ್ಯ ಇದೆ. ನಿನಗೆ ಕೀರ್ತಿಯೂ ಬರುತ್ತದೆ. ಆದರೆ ರಾಮಚಂದ್ರ ದಂಡಿನ ಸಮೇತ ಇಲ್ಲಿಗೆ ಬಂದು ರಾವಣನನ್ನು ಕೊಂದು ಗೆದ್ದು ನನ್ನನ್ನು ಕರೆದೊಯ್ದರೆ ನನಗೂ ಕೀರ್ತಿ, ಆತನಿಗೂ ಕೀರ್ತಿ. ಆ ಶತ್ರುಸೂದನ ಲಂಕಾಪಟ್ಟಣಕ್ಕೆ ಬಂದು ತನ್ನ ಬಾಣ ಗಳಿಂದ ಇದನ್ನು ಧ್ವಂಸಮಾಡಿ ನನ್ನನ್ನು ಒಯ್ದರೆ ಆ ಕಕುತ್ಸ್ಥವಂಶ ಲಲಾಮನಿಗೆ ಯೋಗ್ಯ. ಆದ್ದರಿಂದ ಆ ರಣಧೀರನ ಪರಾಕ್ರಮ ವಿಜೃಂಭಿಸು ವಂತೆ ಮಾಡು. ನಿನಗೆ ಸೇರಿದ್ದು ಇದು" ಎಂದಳು.

ಸಮಂಜಸ ಅರ್ಥವಂತ ಆದ ಮಾತು ಸೀತೆಯದು. ಹನುಮಂತ ಆಕೆಗೆ ಹೇಳಿದ. "ದೇವಿ, ವಾನರೋತ್ತಮ ಮಹಾಪರಾಕ್ರಮಶಾಲಿ ವಾನರಭಲ್ಲೂಕ ಸೇನೆಗಳ ಅಧಿಪತಿ ಸುಗ್ರೀವ. ಈ ಕೆಲಸವನ್ನು ಹೇಗೆ ಆದರೂ ಸಾಧಿಸಬೇಕು ಎಂಬ ದೃಢನಿಶ್ಚಯ ಅವನದು. ಕೋಟಿ ಕೋಟಿ ದಂಡನ್ನು ಕಟ್ಟಿಕೊಂಡು ರಾಕ್ಷಸಸಂಹಾರಕ್ಕಾಗಿ ಕೂಡಲೇ ಹೊರಟುಬರುತ್ತಾನೆ. ಆ ವಾನರಭಲ್ಲೂಕ ವೀರರು ಮಹಾಪರಾಕ್ರಮಶಾಲಿಗಳು, ಬಲಾಢ್ಯರು, ಧೀರರು. ಮೇಲೆ ಮುಗಿಲಿಗೆ ಹಾರಬಲ್ಲರು. ಕೆಳಗೆ ಪಾತಾಳಕ್ಕೆ ಇಳಿಯಬಲ್ಲರು. ಅಡ್ಡಲಾಗಿ ಎಷ್ಟು ದೂರ ಆದರೂ ಹೋಗಬಲ್ಲರು. ಹತ್ತು ದಿಕ್ಕುಗಳಲ್ಲೂ ಅವರ ಸಂಚಾರಕ್ಕೆ ಅಡ್ಡ ಇಲ್ಲ. ಎಲ್ಲರೂ ಸುಗ್ರೀವನ ಆಜ್ಞಾಧೀನರು. ಸುಗ್ರೀವ ಬಯಸಿದರೆ ಸಾಕು. ಎಂಥ ಕೆಲಸವನ್ನೇ ಆದರೂ ಮಾಡಿಬಿಡುತ್ತಾರೆ. ಎಂಥ ಮಹಾ

ಕಾರ್ಯಕ್ಕೂ ಹಿಂಜರಿಯರು. ಅವರಿಗೆ ಪರಮೋತ್ಸಾಹ. ಸಮಸ್ತ ಸಮುದ್ರ ಪರ್ವತಕಾನನಭರಿತ ಈ ಭೂಮಂಡಲವನ್ನು ಎಲ್ಲಾ ವಾಯುಮಾರ್ಗದಲ್ಲಿ ಆಕಾಶಮಾರ್ಗದಲ್ಲಿ ಅನೇಕ ಸಲ ಸುತ್ತಿಬಂದವರು ಅವರು. ನಾನೇ ಈ ಅಪಾರ ಸಮುದ್ರವನ್ನು ದಾಟಬಂದೆ. ವಾನರವೀರರಲ್ಲಿ ನನಗಿಂತ ಕಡಮೆ ಆದವರು ಇಲ್ಲವೇ ಇಲ್ಲ. ನನಗಿಂತ ಹೆಚ್ಚು ಆದವರೂ ಕೆಲವರು ಇದಾರೆ. ಅವರ ಮಾತನ್ನು ಏನು ಹೇಳುವುದು?

"ಸಂಶಯಪಡಬೇಡ, ತಾಯೆ. ಮಹತ್ಕಾರ್ಯವನ್ನು ಮಾಡಲು ಮೊದಲೆ ಅತ್ಯಂತ ಪ್ರಬಲರನ್ನು ಯಾರೂ ಕಳಿಸುವುದು ಇಲ್ಲ. ಮೊದಲು ಕಳಿಸುವುದು ಸಾಮಾನ್ಯರನ್ನೇ. ಚಿಂತಿಸಬೇಡ. ಒಂದೇ ಒಂದು ಸಲ ನೆಗೆದರೆ ಸಾಕು, ಎಲ್ಲರೂ ಲಂಕಾಪಟ್ಟಣಕ್ಕೆ ಬರುತ್ತಾರೆ. ರಾಮಲಕ್ಷ್ಮಣರು ಈ ಸಾಗರವನ್ನು ದಾಟಲು ನಾನು ಇಲ್ಲವೆ? ನನ್ನ ಬೆನ್ನಿನ ಮೇಲೆ ಕೂಡಿಸಿಕೊಂಡು ಬರುತ್ತೇನೆ. ಮೂಡಿಬರುವ ಸೂರ್ಯಚಂದ್ರರಂತೆ ಬರುತ್ತಾರೆ. ನೀನೇ ನೋಡುವೆ. ಆ ಪುರುಷಶ್ರೇಷ್ಠರು ಇಲ್ಲಿಗೆ ಬಂದಮೇಲೆ ಅವರ ಬಾಣಪರಂಪರೆಗೆ ಲಂಕಾಪಟ್ಟಣ ಧೂಳಿಧೂಳಿ. ಖಂಡಿತ. ರಾವಣಾಸುರನನ್ನು ಬಂಧುಬಳಗದ ಸಮೇತ ನಾಶ ಮಾಡಿ ಶ್ರೀರಾಮಚಂದ್ರ ನಿನ್ನನ್ನು ಅಯೋಧ್ಯೆಗೆ ಒಯ್ಯುತ್ತಾನೆ.

"ದೇವಿ, ಸಮಾಧಾನ ಮಾಡಿಕೊ. ಚಿಂತಿಸಬೇಡ. ನಿನಗೆ ಮಂಗಳ ಆಗುತ್ತದೆ. ಇನ್ನು ದಿನಗಳನ್ನು ಲೆಕ್ಕಹಾಕು. ಪ್ರಜ್ವಲಿಸುವ ಬೆಂಕಿಯ ಹಾಗೆ ಬರುತ್ತಾನೆ ರಾಮ ಇಲ್ಲಿಗೆ. ಬೇಗನೆ ನೋಡುತ್ತೀ ನೀನು."

ಹನುಮಂತ ಹೊರಡಲು ಸಿದ್ಧ ಆದ. ಮತ್ತೆ ಸೀತಾದೇವಿಗೆ ಹೇಳಿದ: "ಶತ್ರುಸಂಹಾರಕ ಶ್ರೀರಾಮ, ಧನುರ್ಧಾರಿ ಲಕ್ಷ್ಮಣ, ಬೇಗನೆ ಬರುತ್ತಾರೆ ಲಂಕೆಗೆ. ಕಣ್ಣಾರೆ ನೋಡುತ್ತೀಯೆ. ಮಹಾಪರಾಕ್ರಮಿಗಳೂ ನಖದಂಷ್ಟ್ರ ಆಯುಧರೂ ಆನೆಗೆ ಸಮರೂ ಪರ್ವತದಂಥವರೂ ಮೇಘದಂಥವರೂ ವಾನರ ಭಲ್ಲೂಕವೀರರ ಗುಂಪುಗಳು ಇಲ್ಲಿಗೆ ಬರುತ್ತವೆ. ಅವರ ಸಿಂಹನಾದ ನಿನಗೆ ಕೇಳಿಸುತ್ತದೆ. ಸಿಂಹಗಳ ಹಾಗೆ ಹುಲಿಗಳ ಹಾಗೆ ಮೇಲೆಬಿದ್ದು ಯುದ್ಧ ಮಾಡುತ್ತಾರೆ.

"ಶ್ರೀರಾಮಚಂದ್ರ ಬರುತ್ತಾನೋ ಇಲ್ಲವೋ ಎಂದು ದುಃಖಿಸಬೇಡ, ತಾಯೆ. ಅನಾಥೆಯ ಹಾಗೆ ಏಕೆ ಅಳುತ್ತೀ? ಸಿಂಹದ ಕೈಗೆ ಸಿಕ್ಕ ಆನೆಯಂತೆ

ನಿನ್ನನ್ನು ಅಗಲಿ ಆತ ತತ್ತಳಿಸುತ್ತ ಇದ್ದಾನೆ. ಶಚೀದೇವಿಗೆ ಇಂದ್ರ ನಾಥ. ನಿನಗೆ ಶ್ರೀರಾಮ ನಾಥ. ಆತನಿಗಿಂತ ಹೆಚ್ಚು ಯಾರು ಲೋಕದಲ್ಲಿ? ಲಕ್ಷ್ಮಣನ ಪರಾಕ್ರಮಕ್ಕೆ ಸಾಟಿ ಯಾರು? ಅವರು ಇಬ್ಬರೂ ಸೇರಿದರೆ ಬೆಂಕಿ ಗಾಳಿ ಸೇರಿದಂತೆ. ಇನ್ನು ಬಹಳ ದಿನ ಈ ರಾಕ್ಷಸನಿವಾಸ ಆದ ಈ ಭಯಂಕರ ಪ್ರದೇಶದಲ್ಲಿ ನೀನು ಇರುವುದು ಇಲ್ಲ. ನಾನು ಅಲ್ಲಿಗೆ ಹೋಗಿ ಸೇರುವುದೇ ತಡ. ನಿನ್ನ ಪತಿ ಶ್ರೀರಾಮ ಬಂದು ಈ ಲಂಕಾಪಟ್ಟಣವನ್ನು ಮುತ್ತುತ್ತಾನೆ. ಸ್ವಲ್ಪ ಕಾಲ ಇನ್ನು. ಪೂಜ್ಯೆ, ಸೈರಿಸಿಕೊ" ಎಂದ.

೪೦

ಸೀತಾದೇವಿ ಹನುಮಂತ ಹೇಳಿದ್ದನ್ನು ಕೇಳಿದಳು. ತನಗೆ ಇಷ್ಟ ಆದ ಮಾತನ್ನು ಹೇಳಿದಳು. "ಹನುಮಂತ, ಬಹಳ ಸಂತೋಷಕೊಡುವ ಮಾತನ್ನು ಹೇಳಿದೆ. ಮೊಳಕೆ ಒಡೆದು ಸ್ವಲ್ಪ ಬೆಳೆದು ಒಣಗಿಹೋಗುತ್ತ ಇರುವ ಪಯಿರಿನ ಮೇಲೆ ಮಳೆ ಸುರಿದರೆ ಮತ್ತೆ ಅದು ಚಿಗುರಿಕೊಳ್ಳುತ್ತದೆ. ಹಾಗೇ ಆಗಿದೆ ನನಗೆ ನಿನ್ನ ಅಮೃತಸಮಾನ ಮಾತನ್ನು ಕೇಳಿ. ಏನೋ ಉಲ್ಲಾಸ, ಏನೋ ಚೇತನ! ನಿನ್ನನ್ನು ನೋಡಿಯೆ ಅರ್ಧಕಾರ್ಯ ಸಿದ್ಧಿ ಆಯಿತು. ದುಃಖದಿಂದ ಸೊರಗಿಹೋಗಿರುವ ನಾನು ಪುರುಷಶ್ರೇಷ್ಠ ಆದ ನನ್ನ ಪತಿಯನ್ನು ಸೇರುವಂತೆ ಮಾಡು, ಹನುಮಂತ. ನನ್ನಲ್ಲಿ ಕೃಪೆ ತೋರು. ಶ್ರೀರಾಮಪ್ರಭು ಕಾಗೆಯ ಮೇಲೆ ಕೋಪಗೊಂಡು ದರ್ಭೆಯನ್ನು ಮಂತ್ರಿಸಿ ಪ್ರಯೋಗಿಸಿ ಅದರ ಕಣ್ಣನ್ನು ಸುಟ್ಟ ಎಂದು ಹೇಳಿದ್ದನ್ನು ರಾಮನಿಗೆ ಹೇಳು, ನನ್ನ ಗುರುತು ಆಗಿ. ಇನ್ನೂ ಒಂದು ಗುರುತನ್ನು ಹೇಳುತ್ತೇನೆ. 'ನಾಥ, ಒಂದು ದಿನ ನನ್ನ ಮುಖದಲ್ಲಿ ತಿಲಕ ಅಳಿಸಿಹೋಗಿತ್ತು. ಆಗ ನೀವು ಅದನ್ನು ನೋಡಿ ವಿನೋದದಿಂದ ಮಣಿಶಿಲೆಯಿಂದ ನನಗೆ ತಿಲಕ ಇಡಲಿಲ್ಲವೆ?

"'ರಾಮ, ಮಹಾವೀರ್ಯಶಾಲಿ, ಮಹೇಂದ್ರವರುಣರಿಗೆ ಸಾಟಿ ನೀವು. ನಾನು ನಿಮ್ಮ ಹೆಂಡತಿ. ಈ ದುಷ್ಟ ರಾವಣಾಸುರ ನನ್ನನ್ನು ಕದ್ದುತಂದು ರಾಕ್ಷಸರ ನಡುವೆ ಇಟ್ಟಿದ್ದಾನಲ್ಲ. ನನ್ನನ್ನು ಕಾಪಾಡಬೇಡವೆ? ಪ್ರಾಣ ಕಾಂತ, ದಿವ್ಯ ಆದ ಈ ಚೂಡಾಮಣಿಯನ್ನು ಬಹಳ ಕಷ್ಟಪಟ್ಟು ಎಚ್ಚರದಿಂದ ಕಾಪಾಡಿದೆ. ಎಂಥ ದುಃಖ ಬಂದರೂ ಈ ಚೂಡಾಮಣಿಯನ್ನು ನೋಡಿದರೆ

ನಿಮ್ಮನ್ನೇ ನೋಡಿದ ಹಾಗೆ ಆಗುತ್ತ ಇತ್ತು. ಏನೋ ಮನಸಿಗೆ ಸಮಾಧಾನ. ಈ ಮಣಿ ಸಮುದ್ರದಲ್ಲಿ ಹುಟ್ಟಿದ್ದು. ಬಹಳ ಕಾಂತಿ ಇದಕ್ಕೆ. ಇದನ್ನೂ ಈಗ ನಿಮ್ಮ ಬಳಿಗೆ ಕಳಿಸುತ್ತ ಇದೇನೆ. ಇನ್ನು ದುಃಖಪಡುತ್ತ ನಾನು ಬದುಕಲಾರೆ. ಈ ಕ್ರೂರ ರಾಕ್ಷಸಿಯರ ಕಟುವಾಕ್ಯಗಳನ್ನು ಇಷ್ಟು ದಿನ ಸಹಿಸಿದೆ. ಬದುಕಿ ಇದ್ದರೆ ನಿಮ್ಮನ್ನು ನೋಡಬಹುದು ಎಂಬ ಆಸೆ. ಇನ್ನು ನಾನು ಬದುಕಿ ಇರುವುದು ಒಂದೇ ತಿಂಗಳು. ತಿಂಗಳು ಕಳೆಯಿತೋ ಒಂದು ಗಳಿಗೆಯೂ ಬದುಕಲಾರೆ.

"'ರಾಕ್ಷಸರಾಜ ರಾವಣ ಬಲು ಭಯಂಕರ. ಅವನ ದೃಷ್ಟಿ ಬಹಳ ಕ್ರೂರ. ನನಗೆ ಸ್ವಲ್ಪವೂ ನೆಮ್ಮದಿ ಇಲ್ಲ. ಇಂಥ ವಿಪತ್ತಿನಲ್ಲಿ ಇದೇನೆ ನಾನು. ಇನ್ನು ಬಾರದೆ ಇದ್ದರೆ ನೀವು, ತಡ ಮಾಡಿದರೆ, ನನ್ನ ಜೀವ ಉಳಿಯದು' ಎಂದು ನಾನು ಹೇಳಿದೆ ಎಂದು ರಾಮಚಂದ್ರನಿಗೆ ಹೇಳು."

ಬಹಳ ದುಃಖದಿಂದ ಕಂಬನಿಗರೆಯುತ್ತ ಕನಿಕರ ಹುಟ್ಟುವಂತೆ ಹೇಳಿದಳು ಸೀತೆ. ಅದನ್ನು ಕೇಳಿ ಹನುಮಂತ ಹೇಳಿದ: "ದೇವಿ, ನಾನು ಸತ್ಯ ಆಗಿಯೂ ಹೇಳುತ್ತೇನೆ, ಪ್ರಮಾಣ ಆಗಿ ಹೇಳುತ್ತೇನೆ. ರಾಮನಿಗೆ ನಿನ್ನ ದುಃಖವೇ ದುಃಖ. ಏನೂ ಕೆಲಸ ಮಾಡುತ್ತ ಇಲ್ಲ. ಅಣ್ಣನ ದುಃಖವನ್ನು ನೋಡಿ ಲಕ್ಷ್ಮಣನೂ ಕೊರಗುತ್ತಾನೆ. ಹೇಗೋ ಪ್ರಯಾಸಪಟ್ಟು ನಾನು ನಿನ್ನ ದರ್ಶನ ಮಾಡಿಕೊಂಡೆ. ಇನ್ನು ನಿನ್ನ ದುಃಖ ಎಲ್ಲವೂ ಮುಗಿಯುತ್ತದೆ.

"ತಾಯೆ, ಬೇಗನೆ ನಿನ್ನ ದುಃಖ ಎಲ್ಲವೂ ತೀರುತ್ತದೆ. ಅರಿಂದಮರು ಆ ಪುರುಷೋತ್ತಮರು ರಾಮಲಕ್ಷ್ಮಣರು ನಿನ್ನನ್ನು ನೋಡಲು ಹಾತೊರೆಯುತ್ತ ಇದಾರೆ. ನಾನು ಹೋಗಿ ಸುದ್ದಿ ತಿಳಿಸಿದ ಕೂಡಲೇ ಇಲ್ಲಿಗೆ ಬರುತ್ತಾರೆ. ಲಂಕೆ ಸುಟ್ಟು ಬೂದಿ ಆಗುತ್ತದೆ. ಬಂಧುಬಳಗದ ಸಹಿತ ರಾವಣಾಸುರ ನಾಶ ಆಗುತ್ತಾನೆ. ವಿಶಾಲನೇತ್ರ, ಆಮೇಲೆ ನಿನ್ನನ್ನು ಅಯೋಧ್ಯೆಗೆ ಒಯ್ಯುತ್ತಾರೆ. ದೇವಿ, ಇನ್ನು ಏನಾದರೂ ಗುರುತು ಇದ್ದರೆ, ರಾಮಪ್ರಭುವನ್ನು ಹೆಚ್ಚು ಸಂತೋಷಪಡಿಸುವಂಥದು, ಅದನ್ನು ಕೊಡು" ಎಂದ.

"ವೀರ, ನನ್ನ ಚೂಡಾಮಣಿ ಸರ್ವಶ್ರೇಷ್ಠ ಗುರುತು. ಅದನ್ನೇ ಕೊಟ್ಟೆ. ಇನ್ನು ಏನು ಕೊಡಲಿ? ಇದನ್ನು ನೋಡಿದರೆ ರಾಮನಿಗೆ ಪೂರ್ಣ ವಿಶ್ವಾಸ ಹುಟ್ಟುತ್ತದೆ" ಎಂದಳು ಸೀತೆ.

ಹನುಮಂತ ಆ ಚೂಡಾಮಣಿಯನ್ನು ತೆಗೆದುಕೊಂಡು ಸೀತಾದೇವಿಗೆ ಸಾಷ್ಟಾಂಗ ಪ್ರಣಾಮ ಮಾಡಿದ. ಪಯಣಕ್ಕೆ ಸಿದ್ಧ ಆದ. ಸಮುದ್ರವನ್ನು ಹಾರಲು ತನ್ನ ಮೈಯನ್ನು ಬೆಳೆಸಿದ. ಸೀತಾದೇವಿ ನೋಡಿದಳು. ಕಂಬನಿ ಕರೆಯುತ್ತ ಗದ್ಗದಕಂಠದಿಂದ ಮತ್ತೆ ಹೇಳಿದಳು : "ಹನುಮಂತ, ಸಿಂಹ-ಪರಾಕ್ರಮಿಗಳು ಆದ ಆ ಅಣ್ಣತಮ್ಮಂದಿರಿಗೂ ಸುಗ್ರೀವನಿಗೂ ಅವನ ಮಂತ್ರಿಗಳಿಗೂ ಎಲ್ಲ ವೀರರಿಗೂ ನನ್ನ ಕುಶಲವನ್ನು ತಿಳಿಸು. ಮಹಾಬಾಹು ಶ್ರೀರಾಮ ನನ್ನನ್ನು ಈ ದುಃಖದಿಂದ ಪಾರುಮಾಡುವಂತೆ ಹುರಿದುಂಬಿಸುವ ಭಾರ ನಿನ್ನದು. ನನ್ನ ಈ ಮಹಾದುಃಖ, ರಾಕ್ಷಸಿಯರ ಬೆದರಿಕೆ, ಎಲ್ಲವನ್ನೂ ಅವರಿಗೆ ತಿಳಿಸು. ಹೋಗು. ದಾರಿಯಲ್ಲಿ ನಿನಗೆ ಅಡಚಣೆ ಏನೂ ಬಾರದಿರಲಿ. ನಿನಗೆ ಶುಭ ಆಗಲಿ, ಹೋಗಿ ಬಾ" ಎಂದಳು.

ತಾನು ಮಾಡಬೇಕಾದ ಕೆಲಸ ಉಳಿದು ಇರುವುದು ಸ್ವಲ್ಪವೇ ಇನ್ನು ಎಂದುಕೊಂಡು ಹನುಮಂತ ಉತ್ತರದ ಕಡೆಗೆ ನೋಡಿದ.

೪೧

ಸೀತಾದೇವಿ ಹನುಮಂತನನ್ನು ಪ್ರಶಂಸಿಸಿದಳು. ತರುವಾಯ ಹನುಮಂತ ಸ್ವಲ್ಪ ದೂರ ಹೋಗಿ ನಿಂತ. ತನ್ನ ಒಳಗೇ ಆಲೋಚಿಸಿದ.

'ನಾನು ಬಂದ ಕಾರ್ಯವೇನೋ ಆದ ಹಾಗೆ. ಎಲ್ಲೋ ಸ್ವಲ್ಪ ಉಳಿದು ಇದೆ. ಸೀತಾದೇವಿಯನ್ನು ನೋಡಬೇಕಾದ್ದು ಇತ್ತು, ನೋಡಿದೆ. ಈ ರಾವಣ ಸಾಮದಾನಭೇದಗಳಿಗೆ ಬಗ್ಗುವವನು ಅಲ್ಲ. ಇವನಿಗೆ ದಂಡೋಪಾಯವೇ ಸರಿ. ಮೂರ್ಖ ಇವನು. ಸಾಮೋಪಾಯದಿಂದ ಪ್ರಯೋಜನ ಇಲ್ಲ. ಇವನಿಗೆ ಮಹದೈಶ್ವರ್ಯ ಇದೆ. ದಾನದಿಂದಲೂ ಕೆಲಸ ಆಗದು. ತಾನು ಬಲಶಾಲಿ ಎಂಬ ಕೊಬ್ಬು ಬಹಳ ಇವನಿಗೆ. ಇಂಥವನಲ್ಲಿ ಭೇದೋಪಾಯವೂ ಫಲಿಸದು. ಪರಾಕ್ರಮದಿಂದ ಮಾತ್ರ ಇವನನ್ನು ಸದೆಬಡಿಯಬೇಕು. ರಾಮಕಾರ್ಯಕ್ಕೆ ಪರಾಕ್ರಮ ಒಂದೇ ಉಪಾಯ. ಬೇರೆ ಇಲ್ಲ.

'ಈಗ ಇಲ್ಲಿಯ ರಾಕ್ಷಸರ ಸಂಗಡ ಕಾದಿ ಕೆಲವರನ್ನು ಆದರೂ ಕೊಂದರೆ ಇವರು ಮೆತ್ತಗೆ ಆಗುತ್ತಾರೆ. ಇವರ ಕೊಬ್ಬು ಅಡಗುತ್ತದೆ. ಬಂದ ಕಾರ್ಯಕ್ಕೆ

ವಿರೋಧ ಆಗದಂತೆ ಇತರ ಕೆಲಸಗಳನ್ನೂ ಮಾಡಬಲ್ಲವನೇ ಸಮರ್ಥ. ಎಂಥ ಅತ್ಯಲ್ಪಕಾರ್ಯ ಆದರೂ ಒಂದೇ ಕಾರಣದಿಂದ ಸಾಧಿಸುವುದು ಕಷ್ಟ. ಕಾರ್ಯ ಸಾಧನೆಗೆ ವಿವಿಧ ಉಪಾಯಗಳು ತಿಳಿದು ಇರಬೇಕು. ರಾವಣಾಸುರನ ಬಲಾಬಲಗಳನ್ನು ನಾನು ತಿಳಿದುಕೊಳ್ಳಬೇಕು. ರಾಕ್ಷಸರಿಗೂ ವಾನರರಿಗೂ ಏನು ತಾರತಮ್ಯ ಯುದ್ಧದಲ್ಲಿ? ಆಮೇಲೆ ಸುಗ್ರೀವನ ಬಳಿಗೆ ಹೋಗಬೇಕು. ಆಗ ಸ್ವಾಮಿಕಾರ್ಯವನ್ನು ನೆರವೇರಿಸಿದ ಹಾಗೆ. ಈಗ ನನಗೂ ರಾಕ್ಷಸರಿಗೂ ಯುದ್ಧ ಆಗದೆ ಈ ವಿಷಯಗಳು ತಿಳಿಯುವುದು ಇಲ್ಲ. ನನ್ನ ಬಲಾಬಲ ರಾಕ್ಷಸರ ಬಲ ತಿಳಿದುಬರಬೇಕಲ್ಲ. ಮಂತ್ರಿವರ್ಗ ಸೇನಾಪತಿವರ್ಗ ಸಮೇತ ರಾವಣನನ್ನು ಯುದ್ಧದಲ್ಲಿ ಇದಿರಿಸಿದರೆ ಅವನ ಬಲಾಬಲ ಅವನ ಮನಸಿನ ರೀತಿ ನನಗೆ ತಿಳಿದುಬರುತ್ತದೆ. ಆಮೇಲೆ ನಾನು ಕಿಷ್ಕಿಂಧೆಗೆ ಹೋಗಬಹುದು. ಏನು ಉಪಾಯ ಇದಕ್ಕೆ ?

‘ಈ ಅಶೋಕವನದಲ್ಲಿ ಬಗೆಬಗೆಯ ಗಿಡಮರಬಳ್ಳಿ ಇವೆ. ಹಲವು ಬಗೆಯ ಹೂಗಿಡ ಇವೆ. ಬಹಳ ರಮಣೀಯ ಇದು. ಕಣ್ಣಿಗೆ ಹಿಗ್ಗು, ಮನಸಿಗೆ ಇಂಪು. ದೇವೇಂದ್ರನ ನಂದನವನದ ಹಾಗಿದೆ. ಇದು ರಾವಣನದು. ಕಾಳ್ಗಿಚ್ಚು ಕಾಡನ್ನು ಸುಡುವಂತೆ ನಾನು ಈ ಅಶೋಕವನವನ್ನು ಧ್ವಂಸ ಮಾಡಿಬಿಡುತ್ತೇನೆ. ಇದನ್ನು ನಾಶಮಾಡಿದರೆ ರಾವಣನಿಗೆ ಸಿಟ್ಟುಬರುತ್ತದೆ. ನನ್ನ ಸಂಗಡ ಯುದ್ಧಮಾಡಲು ಗಜ ತುರಗ ರಥಗಳ ದೊಡ್ಡ ದಂಡನ್ನೇ ಕಳಿಸುತ್ತಾನೆ. ಅವರು ತ್ರಿಶೂಲಗಳನ್ನೂ ಪಟ್ಟಸಗಳನ್ನೂ ಕಬ್ಬಿಣದ ಹಾರೆಗಳನ್ನೂ ಹಿಡಿದು ಬರುತ್ತಾರೆ. ಯುದ್ಧ ಆಗುತ್ತದೆ. ಭಯಂಕರ ರಾಕ್ಷಸ ಸೇನೆಯ ಪ್ರಚಂಡ ಪರಾಕ್ರಮವನ್ನು ಇದಿರಿಸಿ ನಾನೂ ಮಹಾಪರಾಕ್ರಮದಿಂದ ಹೋರಾಡುತ್ತೇನೆ. ರಾವಣಾಸುರ ಕಳಿಸಿದ ಸೇನೆ ಎಲ್ಲವನ್ನೂ ಚೆಂಡು ಆಡಿಕೊಂಡು ವಾನರೇಂದ್ರನ ಬಳಿಗೆ ಹಿಂದಿರುಗುತ್ತೇನೆ.’

ಹನುಮಂತ ಸಿಟ್ಟುಮಾಡಿಕೊಂಡ. ವಾಯುವಿನ ಹಾಗೆ ರೇಗಿ ಅಶೋಕ ವನದ ಮರಗಳನ್ನು ಮುರಿಯಲು ಆರಂಭಿಸಿದ. ಗಿಡಮರಬಳ್ಳಿ ಎಲ್ಲವೂ ಫಳಫಳನೆ ಮುರಿದುಬಿದ್ದವು. ಆ ಮರಗಳಲ್ಲಿ ಇದ್ದ ಮದಿಸಿದ ಹಕ್ಕಿಗಳು ಎಲ್ಲವೂ ಬೆದರಿ ಚೀರತೊಡಗಿದವು. ಮೇಲಕ್ಕೆ ಹಾರಿದವು. ಕ್ರೀಡಾರ್ಥ ಆಗಿ ಕಟ್ಟಿದ್ದ ಗುಡ್ಡಬೆಟ್ಟ ಚೂರುಚೂರು. ಕೆರೆ ಕೊಳ ಕಟ್ಟೆಗಳು ಎಲ್ಲಾ ಒಡೆದು

ಹೋದವು. ಕೊಳದ ಮೆಟ್ಟಲು ಪುಡಿಪುಡಿ. ಬೆದರಿದ ಪಕ್ಷಿಸಮೂಹ, ಒಡೆದ ಕೆರೆಕಟ್ಟೆ, ಸುಕ್ಕಿದ ಕೆಂದಳಿರು, ಮುರಿದುಬಿದ್ದ ಲತಾಗೃಹ, ನೆಲಕ್ಕೆ ಉರುಳಿದ ಮಹಾವೃಕ್ಷಗಳು—ಅಶೋಕವನದ ಸೌಭಾಗ್ಯವೇ ಹೋಯಿತು. ಕಾಳ್ಗಿಚ್ಚಿನಿಂದ ಬೆಂದ ಕಾಡಿನಂತೆ ಎಲ್ಲವೂ ಕಳೆಗೆಟ್ಟುಹೋಯಿತು. ಆಸರೆಯ ಗಿಡಮರ ಮುರಿದುಬಿದ್ದು ಹೂಬಳ್ಳಿ ಎಲ್ಲವೂ ಗಂಡ ಇಲ್ಲದ ಹೆಂಗಸಿನ ಹಾಗೆ ಆದವು. ದಿಕ್ಕೆಟ್ಟು ಓಡುವ ಮಹಾಸರ್ಪಗಳು ಬೆದರಿದ ಕ್ರೂರಮೃಗಗಳು, ಪುಡಿಪುಡಿ ಆದ ಕಲ್ಲಿನ ಮಂಟಪಗಳು. ಅಶೋಕವನ ಬೆಂಗಾಡು ಆಯಿತು. ರಾವಣನ ಅಂತಃಪುರದ ಹೆಂಗಸರಿಗೆ ಭೋಗಭೂಮಿ ಆದ ಆ ಪ್ರಮದಾವನ ವನ್ನು ನಾಶಮಾಡಿದ ಹನುಮಂತ. ಈ ವನಭಂಗದ ನೆಪದಿಂದ ರಾವಣನಿಗೆ ವ್ಯಥೆ ಕೊಟ್ಟು ಬಲಾಢ್ಯರು ಆದ ಅನೇಕ ಮಂದಿ ರಾಕ್ಷಸರ ಒಡನೆ ಯುದ್ಧ ಮಾಡುವ ಅವಕಾಶವನ್ನು ಇದಿರುನೋಡುತ್ತ ಇದ್ದ.